

ಸಮಗ್ರ ಸಾಹಿತ್ಯ

ವಚನ ಸಾಹಿತ್ಯ : ಭಾಗ-೪



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩



[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೨ : ವಚನ ಸಾಹಿತ್ಯ : ಭಾಗ-೪

❖

• ವಚನ

❖

ಪ್ರಧಾನ ಸಂಪಾದಕರು ಮತ್ತು ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 12 : VACHANA SAHITY : BHAGA-4
Edited by : Dr. Veeranna Rajur, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxiv + 836=866

Copies: 1000
Price Rs: 450/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೨–ವಚನ ಸಾಹಿತ್ಯ : ಭಾಗ–೪

ಸಂಪಾದಕರು : ಡಾ. ವೀರಣ್ಣ ರಾಜೂರ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxiv + ೮೩೬=೮೬೬

ಪ್ರತಿಗಳು: ೧೦೦೦
ಬೆಲೆ: ರೂ: ೪೫೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ, ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು

ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ

ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು...

(ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **-ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **-ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ

೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**
೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ
ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**
೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**
೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**
೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ

ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ

ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ

ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ.ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವೀರಣ್ಣ ರಾಜೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ವೀರಣ್ಣ ರಾಜೂರ

'ವಚನ ಸಾಹಿತ್ಯ ಬಹುಭಾಷಾ ಅನುವಾದ ಯೋಜನೆ' ಡಾ. ಎಂ. ಎಂ. ಕಲಬುರ್ಗಿ ಅವರು ರೂಪಿಸಿದ ಮತ್ತೊಂದು ಐತಿಹಾಸಿಕ ಮಹತ್ವದ ಅಪೂರ್ವ ಯೋಜನೆ. ಇದನ್ನು ಬೆಂಗಳೂರಿನ ಬಸವ ಸಮಿತಿಯ ಅಡಿಯಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ೨೦೦೮ರಲ್ಲಿ ಆರಂಭಿಸಲಾಯಿತು.

ಮೊದಲ ಹಂತದಲ್ಲಿ ಭಾರತದ ಎಲ್ಲ ಭಾಷೆಗಳಿಗೆ (೨೪ ಭಾಷೆ), ಎರಡನೆಯ ಹಂತದಲ್ಲಿ ವಿದೇಶೀ ಭಾಷೆಗಳಿಗೆ ಆಯ್ದ ವಚನಗಳನ್ನು ಅನುವಾದಿಸಿ ಜಾಗತಿಕ ಮಟ್ಟದಲ್ಲಿ ವಚನ ಸಾಹಿತ್ಯವನ್ನು ಪ್ರಸಾರಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

ಇದರಂಗವಾಗಿ ಮೊದಲು ಕನ್ನಡ ವಚನ ಪಠ್ಯವನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ೧೭೩ ಜನ ವಚನಕಾರರ ೨೫೦೦ ಆಯ್ದ ವಚನಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ ೧೨೯ ಜನ ಶಿವಶರಣರ, ೩೧ ಜನ ಶಿವಶರಣೆಯರ ಮತ್ತು ೧೩ ಜನ ಅಜ್ಞಾತ ಶರಣರ ವಚನಗಳು ಸಮಾವೇಶಗೊಂಡಿವೆ. ವಚನ ಆಯ್ಕೆಯಲ್ಲಿ ಡಾ. ಎಂ.ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದ 'ಸಮಗ್ರ ವಚನ ಸಾಹಿತ್ಯ ಜನಪ್ರಿಯ ಆವೃತ್ತಿ ಪ್ರಕಟಣ ಯೋಜನೆಯ' ಸಂಪುಟಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಅಲ್ಲಿದ್ದ ಕ್ರಮದಲ್ಲಿಯೇ ೧೪ ಸಂಪುಟಗಳಲ್ಲಿನ ವಚನಗಳನ್ನು ಆಯ್ದು ಇಲ್ಲಿ ಜೋಡಿಸಲಾಗಿದೆ. ಅಂದರೆ ಮೊದಲ ನಾಲ್ಕು ಸಂಪುಟಗಳು ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮರ ವಚನಗಳಿಗೆ ಸಂಬಂಧಿಸಿದರೆ, ಐದನೆಯ ಸಂಪುಟ ಶಿವಶರಣೆಯರ ವಚನಗಳಿಗೆ ಸಂಬಂಧಿಸಿದೆ. ಉಳಿದ ಒಂಬತ್ತು ಸಂಪುಟಗಳು ಸಂಕೀರ್ಣ ವಚನ ಸಂಪುಟಗಳಾಗಿದ್ದು, ಅವುಗಳಲ್ಲಿ ಅಕಾರಾದಿ ಕ್ರಮದಲ್ಲಿ ಶರಣರನ್ನು ಜೋಡಿಸಿ, ಅವರ ಹೆಸರಿನಡಿಯಲ್ಲಿ ವಚನಗಳನ್ನೂ ಅಕಾರಾದಿಯಾಗಿ ಕೊಡಲಾಗಿದೆ.

ಇದುವರೆಗೆ ದೊರೆತ ಸುಮಾರು ೨೨ ಸಾವಿರ ವಚನಗಳಲ್ಲಿ ಉತ್ತಮೋತ್ತಮವೆನಿಸಿದ ೨೫೦೦ ವಚನಗಳನ್ನು ಆಯ್ದು ಸಿದ್ಧಪಡಿಸಿದ ಪ್ರಾತಿನಿಧಿಕ ಪಠ್ಯವಿದು. ಆಯ್ಕೆಯಲ್ಲಿ 'ವಚನಗಳು ವಿಶ್ವಮಾನ್ಯ ತತ್ವಗಳನ್ನೊಳಗೊಂಡಿರಬೇಕು; ಸಾಮಾನ್ಯವಾಗಿ ಗಾತ್ರದಲ್ಲಿ ಚಿಕ್ಕವಾಗಿರಬೇಕು;

ಸಾಹಿತ್ಯಿಕವಾಗಿ ಸುಂದರವಾಗಿರಬೇಕು; ಅಲ್ಲದೆ ಅನುವಾದಕ್ಕೆ ಸುಲಭವಾಗಿರಬೇಕು; ಎನ್ನುವ ನಿಶ್ಚಿತ ಮಾನದಂಡವನ್ನು ಇಟ್ಟುಕೊಳ್ಳಲಾಗಿದೆ.

ಕನ್ನಡ ಪಠ್ಯದ ಈ ಸಂಪುಟಕ್ಕೆ 'ವಚನ' ಎಂಬ ಅನುರೂಪವಾದ-ಅರ್ಥಪೂರ್ಣವಾದ ಹೆಸರನ್ನು ಕೊಡಲಾಗಿದೆ. ಉಳಿದೆಲ್ಲ ಅನುವಾದ ಪಠ್ಯಗಳಿಗೂ ಇದೇ ಹೆಸರು ಮುಂದುವರಿದಿದೆ.

ಈ ಪಠ್ಯದ ಸ್ವರೂಪ ಕುರಿತು ಸಂಪಾದಕರು ಹೀಗೆ ಹೇಳಿದ್ದಾರೆ :

"ಎಲ್ಲ ವಚನಗಳು ಬೆಳಕಿಗೆ ಬಂದ ಇಂದಿನ ಸಂದರ್ಭದಲ್ಲಿ ಲೋಕಮಾನ್ಯ ವಚನಗಳನ್ನು ಆಯ್ದು ಸಂಕಲನವೊಂದನ್ನು ಸಿದ್ಧಪಡಿಸಬೇಕೆಂಬುದೇ ನಮ್ಮ ಮುಖ್ಯ ಆಶಯವಾಗಿದ್ದು, ಇದನ್ನು 'ಮೂಲಪಠ್ಯ'ವೆಂದು ಕರೆದಿದ್ದೇವೆ. ಬಳಿಕ ಹಿಂದಿ, ಇಂಗ್ಲೀಷಗಳೆಂಬ ಸಂಪರ್ಕ ಭಾಷೆಗಳಿಗೆ ಅನುವಾದಿಸಿದುದನ್ನು 'ಸಂಪರ್ಕಪಠ್ಯ'ವೆಂದೂ, ಅವುಗಳನ್ನಾಧರಿಸಿ ಮಿಕ್ಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಭಾಷೆಗಳಿಗೆ ಅನುವಾದಿಸಿದುದನ್ನು 'ಬಹುಭಾಷಾ ಪಠ್ಯ'ವೆಂದೂ ಕರೆದಿದ್ದೇವೆ.

'ವಚನ' ಕನ್ನಡ ಪಠ್ಯ ಸಂಪುಟವನ್ನು ಡಾ. ಎಂ. ಎಂ. ಕಲಬುರ್ಗಿ ಅವರು ಒಬ್ಬರೆ ತುಂಬ ಪರಿಶ್ರಮ, ತಾಳ್ಮೆ ಮತ್ತು ಜಾಣ್ಮೆ ವಹಿಸಿ ಸಿದ್ಧಪಡಿಸಿದ್ದಾರೆ. ವಚನಗಳ ಆಯ್ಕೆಯಲ್ಲಿ ಅಷ್ಟೇ ಎಚ್ಚರ ಹಾಗೂ ವಿಶಾಲದೃಷ್ಟಿಯನ್ನು ಇಟ್ಟುಕೊಂಡಿದ್ದಾರೆ. ಪಠ್ಯಗಳನ್ನು ಹತ್ತಾರು ಬಾರಿ ಕಣ್ಣಲ್ಲಿ ಕಣ್ಣಿಟ್ಟು ಓದಿ, ಅದರ ಅರ್ಥ-ಭಾವ-ಭಾಷೆ-ತತ್ತ್ವ-ಅನುಭಾವ ಎಲ್ಲ ಎಲ್ಲವನ್ನೂ ಗಮನಿಸಿ ಶುದ್ಧರೂಪದಲ್ಲಿ ಕೊಡಲು ಪ್ರಯತ್ನಿಸಿದ್ದಾರೆ. ಹೀಗಾಗಿ ಇದೊಂದು ಪ್ರಬುದ್ಧ, ಪ್ರಮಾಣಭೂತ ಗ್ರಂಥವಾಗಿ ರೂಪುಗೊಳ್ಳಲು ಸಾಧ್ಯವಾಗಿದೆ.

ಈ ಗ್ರಂಥಕ್ಕೆ ಸಂಪಾದಕರು ಬರೆದ ಪ್ರಸ್ತಾವನೆ ತುಂಬ ಮೌಲಿಕವಾಗಿದ್ದು, ಸಮಗ್ರ ಶರಣ ಸಿದ್ಧಾಂತದ ಸಾರವನ್ನೊಳಗೊಂಡಿದೆ. ಇದರಲ್ಲಿ ಯೋಜನೆಯ ವಿನ್ಯಾಸ, ವಚನ ಚಳುವಳಿಯ ಸಂದರ್ಭ, ಶರಣಧರ್ಮದ ಚತುರ್ಮುಖಿ ಸಿದ್ಧಾಂತ(೧. ಅಂಗ-ಲಿಂಗ-ಜಂಗಮಮುಖಿ, ೨. ಲೋಕನೀತಿಮುಖಿ, ೩. ಸಮಸಮಾಜಮುಖಿ, ೪. ಸಮೃದ್ಧ ಸಮಾಜಮುಖಿ) ಮತ್ತು ಪ್ರಸ್ತುತ ಯೋಜನೆ ಎಂಬ ಶೀರ್ಷಿಕೆಗಳ ಅಡಿಯಲ್ಲಿ ಒಟ್ಟು ಯೋಜನೆಯ ಸ್ವರೂಪ, ವಚನಸಾಹಿತ್ಯದ ಸ್ವರೂಪ, ಲಕ್ಷಣ, ಪರಂಪರೆ ಮತ್ತು ವಿಶೇಷತೆಯನ್ನು ಕುರಿತು ತುಂಬ ಪ್ರೌಢವಾಗಿ ವಿವೇಚಿಸಿದ್ದಾರೆ. ವಚನಸಾಹಿತ್ಯದ ವಿಶ್ವಮಾನ್ಯ-ಲೋಕೋತ್ತರ ಮೌಲ್ಯಗಳನ್ನು ಇದು ಸಮರ್ಥವಾಗಿ ಪ್ರತಿಬಿಂಬಿಸುತ್ತದೆ.

ಹಾಗೆಯೇ ಈ ಕೃತಿಗೆ ಜೋಡಿಸಿದ ಅನುಬಂಧಗಳು-ಸಮಗ್ರತೆಯಿಂದ ಕೂಡಿ, ವಚನಗಳ ಅಧ್ಯಯನಕ್ಕೆ ಅಗತ್ಯ ಪೂರಕ ಸಾಮಗ್ರಿಯನ್ನು ಒದಗಿಸುತ್ತವೆ. ಇಲ್ಲಿ ವಚನಕಾರರ ಪರಿಚಯ ಕೋಶ, ವಚನಕಾರರು-ವಚನಾಂಕಿತ, ವಚನಾಂಕಿತ-ವಚನಕಾರರು, ವಚನಗಳ ಅಕಾರಾದಿ(ವಚನಾದಿ-ವಚನಕಾರ-ಅಂಕಿತ ಸಮೇತ), ಅರ್ಥಕೋಶ, ಪಾರಿಭಾಷಿಕ ಕೋಶ ಮತ್ತು ನಾಮಕೋಶಗಳು ಅಳವಟ್ಟಿವೆ.

ಹೀಗೆ ವಿಸ್ತೃತ ಪ್ರಸ್ತಾವನೆ, ಸಮಗ್ರ ಅನುಬಂಧಗಳಿಂದ ಇದು ಒಂದು ಮಾದರಿಯ ಸಂಪಾದನೆಯಾಗಿ ಅನುಕರಣೀಯವೆನಿಸಿದೆ.

ಸಮಗ್ರ ವಚನಸಾಹಿತ್ಯವನ್ನು ಪ್ರತಿನಿಧಿಸುವ 'ಪಠ್ಯ' ಮತ್ತು ಸಮಗ್ರ ವಚನ ಸಿದ್ಧಾಂತಸಾರವೆನಿಸುವ 'ಪ್ರಸ್ತಾವನೆ' ಯಿಂದ ಕೂಡಿದ ಈ ಗ್ರಂಥ ಕೇವಲ ಐದು ವರ್ಷಗಳ ಅವಧಿಯಲ್ಲಿ ಮೂರು ಆವೃತ್ತಿಗಳನ್ನು ಕಂಡು ಹೆಚ್ಚು ಜನಪ್ರಿಯವೆನಿಸಿದೆ. ಮೊದಲ ಆವೃತ್ತಿ ೨೦೧೨ರಲ್ಲಿ, ಎರಡನೆಯದು ೨೦೧೩ರಲ್ಲಿ, ಮೂರನೆಯದು ೨೦೧೭ರಲ್ಲಿ ಪ್ರಕಟವಾಗಿ, ಇದುವರೆಗೆ ಇದರ ಹತ್ತುಸಾವಿರ ಪ್ರತಿಗಳು ಮಾರಾಟವಾಗಿ ಜನಮನವನ್ನು ತಲುಪಿವೆ. ಇದನ್ನಾಧರಿಸಿ ಭಾರತದ ಅಧಿಕೃತ ೨೩ ಭಾಷೆಗಳಲ್ಲಿ ಈಗಾಗಲೇ ಅನುವಾದಗಳು ಪ್ರಕಟಗೊಂಡಿದ್ದು, ಈಗ ವಿದೇಶಿ ಭಾಷೆಗಳಲ್ಲಿ ಅನುವಾದಿಸುವ ಕಾರ್ಯ ನಿರಂತರ ಮುನ್ನಡೆದಿದೆ. ಹೀಗಾಗಿ "ವಚನ ಸಿದ್ಧಾಂತ ವಿಶ್ವತೋಮುಖವಾಗಿ ಹಬ್ಬುವಂತಾಗಬೇಕು" ಎಂಬ ಸಂಪಾದಕರ ಆಶಯ ಬಹುಮಟ್ಟಿಗೆ ಈಡೇರಿದಂತಾಗಿದೆ. ಹಾಗೆಯೇ "ವಚನಗಳ ಆಯ್ಕೆಯಲ್ಲಿ ಇನ್ನೂ ಉತ್ತಮಿಕೆ ಸಾಧ್ಯವಿರುವುದು ಸಹಜ ಎಂಬ ಭಾವದಿಂದ ಈ ಸಂಕಲನವನ್ನು ಸಹೃದಯರಿಗೆ ಲೋಕಾರ್ಪಣೆ ಮಾಡುತ್ತಲಿದ್ದೇನೆ." ಎಂಬ ಅವರ ಅನಿಸಿಕೆಯಂತೆ ಇಲ್ಲಿನ ಕೆಲವು ವಚನಗಳನ್ನು ಕೈಬಿಟ್ಟು ಬೇರೆ ಕೆಲವನ್ನು ಸೇರಿಸಿಕೊಳ್ಳುವ ಅಗತ್ಯವೂ ಇದೆ ಎಂದು ವಿನಮ್ರವಾಗಿ ಹೇಳಬಯಸುತ್ತೇನೆ.

ಈ ಕೃತಿ ಪ್ರಕಟಣೆಗಾಗಿ ಮೂರನೆಯ ಆವೃತ್ತಿಯನ್ನು ಎತ್ತಿಕೊಂಡಿದ್ದೇವೆ. ಅದರಲ್ಲಿ ಕಂಡುಬಂದ ಮುದ್ರಣ ದೋಷಗಳನ್ನು ಸರಿಪಡಿಸಿಕೊಂಡು ಉಳಿದಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲಾಗಿದೆ.

❖❖

೧೯೧೩–೨೦೧೩

ಬಸವಜಯಂತಿ ಶತಮಾನೋತ್ಸವ ಸಂಸ್ಮರಣೆ

ವಚನ

ಸಂಪಾದಕರು

ಎಂ. ಎಂ. ಕಲಬುರ್ಗಿ

ಧಾರವಾಡ

೨೦೧೩

ಬಸವ ಸಮಿತಿ

ಬಸವ ಭವನ, ಬಸವೇಶ್ವರ ವೃತ್ತ

ಬೆಂಗಳೂರು-೧

*

ಮಾಣಿಕ್ಯ ದೀಪ್ತಿ

ಎಂ.ಎಂ. ಕಲಬುರ್ಗಿ
ಧಾರವಾಡ

'ವಚನ'ವೆನ್ನುವುದು ವೇದ ಬೈಬಲ್ ಕುರಾನ್‌ಗಳಂತೆ ಪವಿತ್ರಸಾಹಿತ್ಯವಾಗಿದೆ. ಇಂಥ ಸಾಹಿತ್ಯ ಮೂಲತಃ ಪ್ರವಾದಿಗಳ ದಿವ್ಯವಾಣಿಯಾಗಿರುತ್ತಿದ್ದು, ಮುಂದಿನ ತಲೆಮಾರಿನವರು ಅದಕ್ಕೆ 'ಸಂಕಲನ' ಇಲ್ಲವೆ 'ಶಾಸ್ತ್ರ' ರೂಪಕೊಟ್ಟು, ಧಾರ್ಮಿಕ ಗ್ರಂಥದ ಪಾವಿತ್ರ್ಯವನ್ನು ಕಲ್ಪಿಸುತ್ತಾರೆ. ವೇದ ಕುರಾನ್ ಬೈಬಲ್‌ಗಳಂಥ ಸಂಕಲನಗಳೂ, ಶಂಕರ ರಾಮಾನುಜರ ಭಾಷ್ಯಗಳಂಥ ಶಾಸ್ತ್ರಗಳೂ ಇದಕ್ಕೆ ಉದಾಹರಣೆಯೆನಿಸಿವೆ. ಇದೇ ರೀತಿ ಮುಂದಿನ ತಲೆಮಾರಿನ ಲಿಂಗಾಯತರು ಬಸವಾದಿ ಶರಣರ ವಚನಗಳನ್ನು ಬಳಸಿಕೊಂಡು ಸಕಲಪುರಾತನರ ವಚನ ಕಟ್ಟು ಮೊದಲಾದ ಸಂಕಲನಗಳನ್ನು, ಶೂನ್ಯಸಂಪಾದನೆ - ಏಕೋತ್ತರಶತಸ್ಥಲ ಮೊದಲಾದ ಶಾಸ್ತ್ರಗಳನ್ನು ರಚಿಸಿದರು. ಆದರೆ ಬದುಕನ್ನು ಅಂದಂದಿನ ಅನುಭವಗಳ ಮೂಲಕ ರೂಪಿಸಿಕೊಳ್ಳುತ್ತ ಹೋಗಬೇಕೆಂಬ ಮುಕ್ತಪ್ರಜ್ಞೆಯ ಅವರು, ಇವುಗಳಲ್ಲಿ ಯಾವುದಾದರೂ ಒಂದು ಕೃತಿಗೆ ಧಾರ್ಮಿಕ ಗ್ರಂಥದ ಮುದ್ರೆ ಒತ್ತದೆ, ಹಳೆಯ ವಚನಗಳನ್ನು ಬಳಸಿಕೊಂಡು, ಹೊಸ ಹೊಸ ಸಂಕಲನ ಮತ್ತು ಶಾಸ್ತ್ರಗಳನ್ನು ರಚಿಸುತ್ತ ಬಂದರು. ಈ ದಾರಿಯಲ್ಲಿ ಡಾ। ಫ. ಗು. ಹಳಕಟ್ಟಿಯವರ 'ವಚನಶಾಸ್ತ್ರಸಾರ' ಇತ್ತೀಚಿನ ಮಹತ್ವದ ಶಾಸ್ತ್ರಕೃತಿಯಾಗಿದೆ, ಪ್ರಸ್ತುತ 'ವಚನ' ಪ್ರಾತಿನಿಧಿಕ ಸಂಕಲನಕೃತಿಯಾಗಿದೆ.

ಯೋಜನೆಯ ವಿನ್ಯಾಸ

ಆಧುನಿಕ ಮುದ್ರಣಯುಗದಲ್ಲಿ ವಚನನಿಧಿಯನ್ನು 'ಶಿವಾನುಭವ ಗ್ರಂಥಮಾಲೆ'ಯ ಮೂಲಕ ಮೊದಲು ಬೆಳಕಿಗೆ ತಂದವರು, ಡಾ. ಫ. ಗು. ಹಳಕಟ್ಟಿಯವರು. ಬಳಿಕ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಡಾ. ಆರ್. ಸಿ. ಹಿರೇಮಠರು, ಆಮೇಲೆ ಗದುಗಿನ ಶ್ರೀ ತೋಂಟದಾರ್ಯಮಠದ ಮೂಲಕ ಡಾ. ಎಂ.ಎಂ. ಕಲಬುರ್ಗಿಯವರು ಯೋಜನಾಬದ್ಧವಾಗಿ ಈ ನಿಧಿಯನ್ನು ಬಹುಮಟ್ಟಿಗೆ ಪೂರ್ಣಪ್ರಮಾಣದಲ್ಲಿ ಬೆಳಕಿಗೆ ತಂದರು. ಇದಕ್ಕೆ ಇನ್ನಷ್ಟು ಸೇರಿಸಿ ಹೊರತಂದ ಕರ್ನಾಟಕ ಸರಕಾರದ "ಸಮಗ್ರ ವಚನಸಾಹಿತ್ಯ ಸಂಪುಟ"ಗಳಿಂದಾಗಿ ಎಲ್ಲ ಶರಣರ ಎಲ್ಲ ವಚನಗಳು ಓದುಗರ ಕೈಸೇರಿದವು. ಹೀಗೆ ವಚನಶೋಧಕಾರ್ಯ ತಕ್ಕಮಟ್ಟಿಗೆ ಪೂರ್ಣಗೊಂಡ ಇಂದಿನ ಸಂದರ್ಭದಲ್ಲಿ, ಬೈಬಲ್ ಮೊದಲಾದವುಗಳಂತೆ ಅದನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಬೇಕೆಂಬ ಯೋಜನೆಯನ್ನು

ಬೆಂಗಳೂರಿನ ಬಸವ ಸಮಿತಿ ರೂಪಿಸಿತು. ಈ ಯೋಜನೆಗೆ "ಮೂಲಪಠ್ಯ"ವಾಗುವುದರ ಸಲುವಾಗಿ ಈ ಕೃತಿಯನ್ನು ಸಿದ್ಧಪಡಿಸಲಾಗಿದೆ.

ಎಲ್ಲ ಶರಣರ ಎಲ್ಲ ವಚನಗಳನ್ನು ಅನುವಾದಿಸುವುದು ಸುಲಭವೂ ಅಲ್ಲ, ಸೂಕ್ತವೂ ಅಲ್ಲ. ೧೨ನೆಯ ಶತಮಾನದಿಂದ ೧೮ನೆಯ ಶತಮಾನದ ವರೆಗೆ ಸೃಷ್ಟಿಯಾಗುತ್ತ ಬಂದ ಒಟ್ಟು ೨೧ ಸಾವಿರ ವಚನನಿಧಿಯಿಂದ ವಿಶ್ವಮಾನ್ಯ ವಚನಗಳನ್ನು ಅನುವಾದಕ್ಕೆ ಆಯ್ದುಕೊಳ್ಳುವುದೇ ಸರಿಯಾದ ಕ್ರಮವಾಗಿದೆ. ಹೀಗಾಗಿ ಈ ಕೆಲಸಕ್ಕೆ ಒಂದಿಷ್ಟು ಲಿಂಗಾಯತ ಸಿದ್ಧಾಂತಮುಖಿ ವಚನಗಳೊಂದಿಗೆ ಬಹಳಷ್ಟು ಲೋಕನೀತಿಮುಖಿ, ಸಮಸಮಾಜಮುಖಿ, ಸಮೃದ್ಧಸಮಾಜಮುಖಿ ವಚನಗಳನ್ನು ಆಯ್ದುಕೊಳ್ಳಬೇಕೆಂಬ, ಇವೆಲ್ಲ ಬಹುಮಟ್ಟಿಗೆ ಸಾಹಿತ್ಯಮುಖಿಯಾಗಿರಬೇಕೆಂಬ ಮಾನದಂಡವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಧೋರಣೆಗೆ ಅನುಗುಣವಾಗಿ ಆಯ್ಕೆಗೆ ತೊಡಗುವಲ್ಲಿ ೩೦೦೦ ವಚನಗಳು ನಮ್ಮ ಕೈಗೆ ಬಂದವು. ಇವುಗಳಲ್ಲಿ ಸಾಹಿತ್ಯದೃಷ್ಟಿಯಿಂದ ಸುಂದರವಾಗಿದ್ದರೂ ವಿಷಯದೃಷ್ಟಿಯಿಂದ ಅಸ್ಪಷ್ಟ ಮತ್ತು ಅನುವಾದ ದೃಷ್ಟಿಯಿಂದ ಜಟಿಲವೆನಿಸಿದವುಗಳನ್ನು ಕೈಬಿಡುವಲ್ಲಿ, ಬಹಳಷ್ಟು ವಚನಗಳ ಜೊತೆಗೆ ಕೆಲವು ವಚನಕಾರರೂ ಹೊರಗುಳಿಯಬೇಕಾಯಿತು. ಇದಲ್ಲದೆ, ಉತ್ತರದ ಜೊತೆಗಿದ್ದರೆ ಮಾತ್ರ ಸರಿಯಾದ ಅರ್ಥ ಕೊಡುವ ಪ್ರಶ್ನೆರೂಪದ "ಸಿಡಿಲೊಡನೆ ಕಾದುವಾತಂಗೆ ಕೊಡೆಯೇತಕಯ್ಯಾ?" ಎಂಬಂಥ ಸುಂದರ ವಚನಗಳನ್ನೂ ನಾವು ಕೈಬಿಡಬೇಕಾಯಿತು. ಇಂಥ ನಿಷ್ಠುರ ಮಾನದಂಡ ಕಾರಣವಾಗಿ ೧೮೯ ಜನ ಶರಣರ, ೩೧ ಜನ ಶರಣೆಯರ, ೧೩ ಜನ ಅಜ್ಞಾತ ಶರಣರ- ಹೀಗೆ ಒಟ್ಟು ೧೭೩ ಜನರ ೨೫೦೦ ವಚನಗಳು ಇಲ್ಲಿ ಸಂಗ್ರಹಗೊಂಡಿವೆ.

ಬಳಿಕ ನಮ್ಮನ್ನು ಕಾಡಿದ ಪ್ರಶ್ನೆಯೆಂದರೆ, ಈ ವಚನಗಳ ಸಂಯೋಜನೆ. ಪ್ರಾಚೀನರನ್ನು ಬಿಟ್ಟರೆ ಹಳಕಟ್ಟಿ ಮೊದಲಾದ ಆಧುನಿಕರು ವಚನಗಳನ್ನು ಸಂಗ್ರಹಿಸುವಲ್ಲಿ ಸರಳ ವರ್ಗೀಕರಣವನ್ನು ಅನುಸರಿಸಿದ್ದಾರೆ. ಈ ಆದರ್ಶದಲ್ಲಿ ಮೇಲೆ ಹೇಳಿದ ಸಿದ್ಧಾಂತಮುಖಿ, ಲೋಕನೀತಿಮುಖಿ, ಸಮಸಮಾಜಮುಖಿ, ಸಮೃದ್ಧಸಮಾಜಮುಖಿಯೆಂಬ ತಾತ್ವಿಕ ವರ್ಗೀಕರಣವನ್ನು ಅನುಸರಿಸಬೇಕೆನಿಸಿದರೂ, ಪ್ರಾಚೀನ ಷಟ್‌ಸ್ಥಲ ಕಟ್ಟುಗಳಂತೆ ಇದೂ ಪ್ರಶ್ನಾರ್ಹವೆನಿಸಬಹುದೆಂಬ ಆತಂಕ ನಮ್ಮನ್ನು ಕಾಡಿತು. ಹೀಗಿದ್ದೂ ತಾತ್ತ್ವಿಕ ವರ್ಗೀಕರಣ ಕೈಕೊಂಡಿದ್ದಾದರೆ, ಒಂದೊಂದು ತತ್ವದ ಎಲ್ಲ ವಚನಗಳು ಒಂದೇ ಕಡೆಗೆ ಬಂದು, ಓದುಗರಿಗೆ ಪುನರುಕ್ತಿ ಬೇಸರ ಹುಟ್ಟಿಸಬಹುದೆನಿಸಿತು. ಒಂದು ವೇಳೆ ಪುನರುಕ್ತವಾಗದಂತೆ ತಾತ್ತ್ವಿಕ ವರ್ಗೀಕರಣದ ಸಂಕಲನ ರೂಪಿಸಿದರೆ, ಅಂಥ ಪಠ್ಯಕ್ಕೆ ೩೦೦ರಷ್ಟು ವಚನಗಳು ಸಾಕೆನಿಸುತ್ತದೆ. ಆದುದರಿಂದ ಆಯ್ದುಕೊಂಡ ೨೫೦೦ ವಚನಗಳ ತಾತ್ತ್ವಿಕ ವರ್ಗೀಕರಣವನ್ನೂ ಕೈಬಿಡುವುದು ನಮಗೆ ಅನಿವಾರ್ಯವಾಯಿತು.

ಇನ್ನು, ಎಲ್ಲ ೨೫೦೦ ವಚನಗಳನ್ನು ಅಕಾರಾದಿಯಾಗಿ ಹೊಂದಿಸಲು ಹೊರಟರೆ, ಮುಖ್ಯ ವಚನಕಾರರ ಅರ್ಥಪೂರ್ಣ ವಚನಗಳು ಎಲ್ಲೆಲ್ಲಿಯೋ ಸೇರಿ, ಒಟ್ಟು ಕೃತಿ ಮಹತ್ವ ಕಳೆದುಕೊಳ್ಳಬಹುದೆನಿಸಿತು. ಹೀಗಾಗಿ ಈ ವಿಚಾರವನ್ನೂ ಕೈಬಿಟ್ಟು, ಪ್ರತಿಯೊಬ್ಬ ವಚನಕಾರನ ರಚನೆಗಳನ್ನು ಅಕಾರಾದಿಯಾಗಿ ಜೋಡಿಸುವ ಉಪಕ್ರಮವನ್ನು ಇಲ್ಲಿ ಪಾಲಿಸಿದ್ದೇವೆ. ಮತ್ತು ವಚನಕಾರರ ಅನುಕ್ರಮಕ್ಕಾಗಿ ಸರಕಾರದ ಆವೃತ್ತಿಗಳನ್ನು ಮಾದರಿಯಾಗಿ ಇಟ್ಟುಕೊಂಡಿದ್ದೇವೆ.

ಎಲ್ಲ ವಚನಗಳು ಬೆಳಕಿಗೆ ಬಂದ ಇಂದಿನ ಸಂದರ್ಭದಲ್ಲಿ ಲೋಕಮಾನ್ಯ ವಚನಗಳನ್ನು ಆಯ್ದು, ಸಂಕಲನವೊಂದನ್ನು ಸಿದ್ಧಪಡಿಸಬೇಕೆಂಬುದೇ ನಮ್ಮ ಮುಖ್ಯ ಆಶಯವಾಗಿದ್ದು, ಇದನ್ನು "ಮೂಲಪಠ್ಯ"ವೆಂದು ಕರೆದಿದ್ದೇವೆ. ಬಳಿಕ ಹಿಂದಿ, ಇಂಗ್ಲಿಷ್‌ಗಳೆಂಬ ಸಂಪರ್ಕಭಾಷೆಗಳಿಗೆ ಅನುವಾದಿಸಿದುದನ್ನು "ಸಂಪರ್ಕಪಠ್ಯ"ವೆಂದೂ, ಅವುಗಳನ್ನಾಧರಿಸಿ ಮಿಕ್ಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಭಾಷೆಗಳಿಗೆ ಅನುವಾದಿಸಿದುದನ್ನು "ಬಹುಭಾಷಾಪಠ್ಯ"ವೆಂದೂ ಕರೆದಿದ್ದೇವೆ. ಇನ್ನೂ ಬೇಕಿದ್ದರೆ ಈ ಮೂಲಪಠ್ಯದಿಂದ ವಿದ್ವಾಂಸರು ಬೇರೆ ಬೇರೆ ತಾತ್ತ್ವಿಕ ಪಠ್ಯಗಳನ್ನು ರೂಪಿಸಬಹುದೆಂದೂ ನಾವು ಆಶಿಸುತ್ತೇವೆ.

ವಚನ ಚಳುವಳಿಯ ಸಂದರ್ಭ

ಕರ್ನಾಟಕದಲ್ಲಿ ವಿಪುಲವಾಗಿರುವ, ಎಡಬಲದ ಮಹಾರಾಷ್ಟ್ರ-ಆಂಧ್ರಪ್ರದೇಶಗಳಲ್ಲಿ ದಟ್ಟವಾಗಿ ಹಬ್ಬಿರುವ, ತಮಿಳುನಾಡು- ಕೇರಳಗಳಲ್ಲಿ ವಿರಳವಾಗಿ ಹರಡಿರುವ ಲಿಂಗಾಯತರದು ಇಂದು ದಕ್ಷಿಣಭಾರತದ ಬಹುದೊಡ್ಡ ಸಮಾಜವಾಗಿದೆ. ಇದು ಹುಟ್ಟಿದ್ದು ೧೨ನೆಯ ಶತಮಾನದಲ್ಲಿ; ಇದನ್ನು ಹುಟ್ಟುಹಾಕಿದ್ದು ವರ್ಗಭೇದ - ವರ್ಣಭೇದ-ಲಿಂಗಭೇದ ಅನ್ಯಾಯಕ್ಕೆ ಒಳಗಾಗಿದ್ದ ಶಿವಶರಣ ಚಳುವಳಿ; ಈ ಚಳುವಳಿಯ ಕೇಂದ್ರವ್ಯಕ್ತಿ ಕಲಚುರಿ ಚಕ್ರವರ್ತಿ ಬಿಜ್ಜಳನ ಅರ್ಥಸಚಿವನಾಗಿದ್ದ ಬಸವಣ್ಣ; ಇದು ಜರುಗಿದುದು ರಾಜಧಾನಿ ಪಟ್ಟಣ ಕಲ್ಯಾಣದಲ್ಲಿ; ಇದರ ಕೇಂದ್ರವೇದಿಕೆ ಅಲ್ಲಿಯ ಅನುಭವಮಂಟಪ.

ಪ್ರಾಚೀನಭಾರತದಲ್ಲಿ ಸಮಾಜದ ಸ್ಥಿತಿಗತಿಗಳನ್ನು ನಿರ್ಧರಿಸುತ್ತಿದ್ದುವು, ರಾಜಧರ್ಮ ಮತ್ತು ಧರ್ಮ. ೧೨ನೆಯ ಶತಮಾನದಲ್ಲಿ ಕರ್ನಾಟಕವೆನ್ನುವುದು ಸ್ಥೂಲವಾಗಿ ಮಹಾರಾಷ್ಟ್ರ-ಆಂಧ್ರ ಪ್ರದೇಶಗಳನ್ನೂ ಒಳಗೊಂಡ ಏಕ ರಾಜಕೀಯ ಘಟಕವಾಗಿದ್ದಿತು. ಇಷ್ಟು ವಿಸ್ತಾರ ಭೂಪ್ರದೇಶವು "ಕಲ್ಯಾಣದಂಥ ರಾಜಧಾನಿ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆಯೂ ಇರುವುದಿಲ್ಲ. ವಿಕ್ರಮಾದಿತ್ಯನಂಥ ಚಕ್ರವರ್ತಿ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆಯೂ ಇರುವುದಿಲ್ಲ"ವೆಂಬಂಥ ದರ್ಪದ ಆಳ್ವಿಕೆಗೆ ಒಳಗಾಗಿದ್ದಿತು. ಇದರಿಂದ ಆಕಾರಗೊಂಡ ರಾಜಸತ್ತೆಯ ಸ್ತರಗಳಾದ ಚಕ್ರವರ್ತಿ, ಮಂಡಲೇಶ್ವರ, ಸಾಮಂತ, ಗಾವುಂಡರ ಏಕಪಕ್ಷೀಯ ತೀರ್ಮಾನದಲ್ಲಿ ಪ್ರಜಾವರ್ಗ ಮೂಕ ಅನುಯಾಯಿಯಾಗಿದ್ದಿತು. ಕಲ್ಯಾಣ ಚಾಲುಕ್ಯಸಾಮ್ರಾಜ್ಯವನ್ನು ಅಪಹರಿಸಿದ ಕಲಚುರಿ ಬಿಜ್ಜಳನ ಆಳ್ವಿಕೆಯಿಂದಾಗಿ, ಆ ದರ್ಪದ ಪರಿಸ್ಥಿತಿಗೆ ಅವಿಶ್ವಾಸ - ಮೋಸಗಳ ವಾತಾವರಣವೂ, ಪುರೋಹಿತಶಾಹಿಯ ಧಾರ್ಮಿಕ ಶೋಷಣೆಯೂ ಜೊತೆಗೂಡಿದ್ದವು. ಪ್ರಜೆಗಳು ಈ ರಾಜಕೀಯ-ಧಾರ್ಮಿಕ ಕಲುಷಿತ ವಾತಾವರಣವನ್ನು ತಿಳಿಗೊಳಿಸುವ ಒಬ್ಬ ಯುಗಪುರುಷನ ದಾರಿ ಕಾಯುತ್ತಲಿದ್ದರು. ಇದಕ್ಕೆ ಉತ್ತರವೆಂಬಂತೆ ಅವತರಿಸಿದ ಬಸವಣ್ಣ, ಕಲ್ಯಾಣದಲ್ಲಿ ಬಿಜ್ಜಳನ ಮಂತ್ರಿಯಾಗಿ ನಿಂದು, ರಾಜಸತ್ತೆಯ ಅನ್ಯಾಯಗಳನ್ನು ಪ್ರಶ್ನಿಸಿದ. "ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ದಾಸಿಯಾಗಿಪ್ಪುದು ಲೇಸು", "ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ", "ಏನಯ್ಯಾ ವಿಪ್ರರು ನುಡಿದಂತೆ ನಡೆಯರು" - ಇವೇ ಮೊದಲಾದ ಮಾತುಗಳ ಮೂಲಕ ಜನರಲ್ಲಿ ರಾಜಧರ್ಮ- ಧರ್ಮಗಳ ಸರಿಯಾದ ತಿಳಿವಳಿಕೆ ಮೂಡಿಸಿದ.

***

ಯಾವುದೇ ದೇಶದಲ್ಲಿ ದೇಶೀಯವೆನಿಸುವ ಪಂಥ, ಮಾರ್ಗೀಯವೆನಿಸುವ ಧರ್ಮಗಳು, ಇವುಗಳಿಗೆ ಹೊರತಾಗಿ ಕೆಲವು ಗತಾನುಗತಿಕ ಆಚರಣೆಗಳೂ ಅಸ್ತಿತ್ವದಲ್ಲಿರುತ್ತವೆ. ೧೨ನೆಯ ಶತಮಾನದ ಕರ್ನಾಟಕದಲ್ಲಿ ವ್ಯಾಪಕವಾಗಿ ಹಬ್ಬಿದ್ದ ದೇಶೀಪಂಥವೆಂದರೆ ನಾಥಶೈವ. ರೇವಣಸಿದ್ಧ, ಸಿದ್ಧರಾಮ ಈ ಮೂಲದವರು. ಇದು ಯೋಗಪ್ರಧಾನ ಪಂಥ. "ಶಿವಪಥನರಿವೊಡೆ ಗುರುಪಥ ಮೊದಲು" ಎಂಬ ನಿಲವಿನ "ಗುರುಸಂಪ್ರದಾಯ"ವಿದು. ಇವರು ಎಲ್ಲ ಜಾತಿಯವರಿಗೆ ಗುರುಬೋಧೆ ನೀಡಿ, ವ್ಯಕ್ತಿಗಳನ್ನು ಸದಾಚಾರಿಗಳನ್ನಾಗಿಸುತ್ತಿದ್ದರು. ವೃತ್ತಿನಿಷ್ಠ ಸಮಾಜವ್ಯವಸ್ಥೆಯ ಕಾಲಘಟ್ಟದಲ್ಲಿ ಇವರೊಳಗೆ ಪರಸ್ಪರ ಊಟೋಪಚಾರ ಪರಸ್ಪರ ರಕ್ತಸಂಬಂಧ ಸಹಜಕ್ರಿಯೆಯೆನಿಸಿದ್ದವು. ಆದರೆ ವೃತ್ತಿನಿಷ್ಠ ಸಮಾಜವ್ಯವಸ್ಥೆಯು ಜಾತಿನಿಷ್ಠ ಸಮಾಜವ್ಯವಸ್ಥೆಯಾಗಿ ಮಾರ್ಪಟ್ಟ ಕಾಲಘಟ್ಟದಲ್ಲಿ ಪರಸ್ಪರ ಊಟೋಪಚಾರ ಮಾತ್ರ ಮುಂದುವರಿದು, ಪರಸ್ಪರ ರಕ್ತಸಂಬಂಧ ನಿಷಿದ್ಧವಾಯಿತು. ಕ್ರಮೇಣ ಊಟೋಪಚಾರವೂ ನಿಷಿದ್ಧವಾಗಿ, ಕುಲಹೀನ ಶಿಷ್ಯನಿಗೆ ದೀಕ್ಷೆ ನೀಡಬಹುದಾದರೂ ಅವನ ಮನೆಯಲ್ಲಿ ಉಣ್ಣಲಾಗದೆಂಬಂಥ ವಿಪರ್ಯಾಸಗಳೂ ಬೆಳೆದು ನಿಂತವು. ಈ ನಾಥದೊಂದಿಗೆ ಸೌರ, ಗಾಣಪತ್ಯ, ಭೈರವ ಮೊದಲಾದ ಸಣ್ಣಸಣ್ಣ ಸಂಪ್ರದಾಯಗಳೂ ಅಂದು ಅಸ್ತಿತ್ವದಲ್ಲಿದ್ದವು.

"ಗುರುಸಂಪ್ರದಾಯ"ದ ಈ ದೇಶೀ ಪಂಥಗಳನ್ನು ಬಿಟ್ಟರೆ, "ಆಚಾರ್ಯ ಸಂಪ್ರದಾಯ"ದ ಮಾರ್ಗೀಯ ಧರ್ಮದಲ್ಲಿ ವೈದಿಕ, ಆಗಮಿಕವೆಂಬ ಎರಡು ಬ್ರಾಹ್ಮಣ ಶಾಖೆಗಳು ಬೆಳೆದು ನಿಂತಿದ್ದವು. ೧೨ನೆಯ ಶತಮಾನದ ಹೊತ್ತಿಗೆ ಇಲ್ಲಿಯ ವೈದಿಕದಲ್ಲಿ ಶಂಕರನ ಶೈವ, ರಾಮಾನುಜನ ಶ್ರೀವೈಷ್ಣವವೆಂಬ ಎರಡು ಶಾಖೆಗಳು ಮೂಡಿದ್ದವು. ಆಗಮಿಕದಲ್ಲಿ ನಕುಲೀಶ (ಕಾಳಾಮುಖ), ಪಾಶುಪತ, ಕಾಪಾಲಿಕ (ಮಹಾವ್ರತಿ), ಶ್ರೋತ್ರೀಯ ಶೈವ (ಸಿದ್ಧಾಂತಶೈವ)ವೆಂಬ ನಾಲ್ಕು ಶಾಖೆಗಳು ತೆರೆದುಕೊಂಡಿದ್ದವು. ಈ ಶ್ರೋತ್ರೀಯ ಶೈವದ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ ಶಾಖೆಗಳಲ್ಲಿ (ವೀರಶೈವಶಾಖೆಯು ಬಸವೋತ್ತರ ಕಾಲೀನ ಸೃಷ್ಟಿ) ಶುದ್ಧಶೈವಶಾಖೆಯು ತಮಿಳುನಾಡಿನಲ್ಲಿ ಶೈವ ನಾಯನಾರರ (೬೩ ಪುರಾತನರ) ದೇಶೀ ಪಂಥವನ್ನು ನುಂಗಿ* ಕರ್ನಾಟಕದಲ್ಲಿ ಕಾಲುಚಾಚಿದ್ದಿತು. ಹೀಗೆ ಕಾಲುಚಾಚಿದ್ದ ಆಗಮಿಕ ಶುದ್ಧಶೈವ ಬ್ರಾಹ್ಮಣ ಮೂಲದವನಾಗಿದ್ದಾನೆ, ಬಸವಣ್ಣ. ಬಳಿಕ ಈ ಬಸವಣ್ಣ ಸ್ಥಾಪಿಸಿದ ಲಿಂಗಾಯತದಲ್ಲಿ ಸೇರಿಕೊಂಡ ಶುದ್ಧಶೈವರು ಲಿಂಗಾಯತದ ಛಾಯೆ ಪಡೆದು, ಕ್ರಮೇಣ ತಮ್ಮನ್ನು ವೀರಶೈವರೆಂದು ಕರೆದುಕೊಳ್ಳತ್ತ ಬಂದರು. ಇದರಿಂದಾಗಿ ಬಸವೋತ್ತರ ಯುಗದಲ್ಲಿ ಲಿಂಗಾಯತಕ್ಕೆ ಪರ್ಯಾಯವಾಗಿ ವೀರಶೈವ ಪದವೂ ರೂಢಗೊಂಡಿತು.

ಈ ವೈದಿಕ, ಆಗಮಿಕ ಧರ್ಮಗಳ ಜೊತೆಗೆ ಅಂದು ಜೈನವೆಂಬ ಇನ್ನೊಂದು ಮಾರ್ಗೀಯ ಧರ್ಮವೂ ಸುಸ್ಥಿತಿಯಲ್ಲಿದ್ದಿತು.

ಗಮನಿಸಬೇಕಾದ ಅಂಶವೆಂದರೆ, ಈ ಮೊದಲು 'ವೃತ್ತಿ' ನೆಲೆಯಿಂದ 'ಜಾತಿ'ಯ ನೆಲೆಗೆ ಬಂದು ನಿಂತಿದ್ದ ಸಾಮಾಜಿಕರು ಈಗ ಜಾತಿಯ ನೆಲೆಯಿಂದ 'ಧರ್ಮ'ದ ನೆಲೆಗೆ ಬರಲು ಆಸಕ್ತರಾಗಿದ್ದರು.

---

* ಇದೇ ರೀತಿ ಈ ಶುದ್ಧಶೈವವು ಕರ್ನಾಟಕದಲ್ಲಿ ದೇಶೀಧರ್ಮವಾಗಿರುವ ಬಸವೇಶ್ವರನ ಲಿಂಗಾಯತಧರ್ಮವನ್ನು ನುಂಗಿತು. ತಮಿಳುನಾಡಿನ ಆಳ್ವಾರರ ಇನ್ನೊಂದು ದೇಶೀಧರ್ಮವನ್ನು ಶ್ರೀವೈಷ್ಣವವೂ, ಕನ್ನಡ ನಾಡಿನ ಹರಿದಾಸರ ಇನ್ನೊಂದು ದೇಶೀಧರ್ಮವನ್ನು ಮಾಧ್ವವೂ ನುಂಗಿದವು.

ಇಂಥವರ ಸಲುವಾಗಿ ಅಂದು ವ್ಯಕ್ತಿಯನ್ನು ಒಳಗೆ ಲೀನಮಾಡಿಕೊಳ್ಳುವ "ಮತಾಂತರದೀಕ್ಷೆ", ಹೀಗೆ ಲೀನಮಾಡಿಕೊಳ್ಳದೆ ಹೊರಗೆ ನಿಲ್ಲಿಸಿ ಕೇವಲ ಮಂತ್ರನೀಡಿ ಅನುಯಾಯಿ ಮಾಡಿಕೊಳ್ಳುವ "ಮಂತ್ರದೀಕ್ಷೆ" ಎಂಬ ಎರಡು ದೀಕ್ಷಾಪದ್ಧತಿಗಳು ರೂಢಿಯಲ್ಲಿದ್ದವು. ಈಗ ವೈದಿಕದ ಶೈವ, ಶ್ರೀವೈಷ್ಣವ ಧರ್ಮಗಳು (ಮಾಧ್ವ ಬಸವೋತ್ತರ ಕಾಲೀನ ಸೃಷ್ಟಿ) ಬ್ರಾಹ್ಮಣರಿಗೆ ಮಾತ್ರ ಮತಾಂತರದೀಕ್ಷೆ ನೀಡುತ್ತಿದ್ದವು. ಇವುಗಳಲ್ಲಿ ಶ್ರೀವೈಷ್ಣವವು ಮುಂದುವರಿದು ಅಬ್ರಾಹ್ಮಣರಿಗೆ ಮಂತ್ರದೀಕ್ಷೆಯನ್ನೂ ನೀಡುತ್ತಿತ್ತು. ಈ ಶ್ರೀವೈಷ್ಣವದಂತೆ ಆಗಮಿಕ ಶೈವ, ಜೈನಧರ್ಮಗಳೂ ಅಬ್ರಾಹ್ಮಣರಿಗೆ ಮಂತ್ರದೀಕ್ಷೆ ನೀಡಿ, ಅವರು ಹೊರಗೆ ನಿಂತು ತಮಗೆ ಭಕ್ತಿ ತೋರಿಸುವ ಸವಲತ್ತು ಒದಗಿಸಿದ್ದವು. ಈ ಬಗೆಯ ಮಂತ್ರದೀಕ್ಷೆಯಿಂದಾಗಿ ಒಂದೇ ಮನೆಯಲ್ಲಿ ಕೆಲವರು ಒಂದು ಧರ್ಮಕ್ಕೆ, ಇನ್ನು ಕೆಲವರು ಇನ್ನೊಂದು ಧರ್ಮಕ್ಕೆ ಅನುಯಾಯಿಯಾಗಿ, ಮತ್ತೆ ಕೆಲವರು ಮೂಲಜಾತಿಯವರಾಗಿಯೇ ಉಳಿಯುವಲ್ಲಿ "ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ, ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ"ವೆಂಬಂಥ ವಾತಾವರಣ ಬೆಳೆದು, ಅಲ್ಲಿ ಕೌಟುಂಬಿಕ ನೆಮ್ಮದಿ ಹಾಳಾಗಿದ್ದಿತು.

ಹೀಗೆ ಮಾರ್ಗೀಯ ಧರ್ಮಗಳಲ್ಲಿ ವೈದಿಕ ಶೈವವು ಅಬ್ರಾಹ್ಮಣರಿಗೆ ಯಾವುದೇ ಬಗೆಯ ದೀಕ್ಷೆ ನೀಡದಿರುವಾಗ ಮತ್ತು ಆಗಮಿಕ ಶೈವ, ಜೈನ, ಶ್ರೀವೈಷ್ಣವಧರ್ಮಗಳು ಅವರಿಗೆ ಕೇವಲ ಮಂತ್ರದೀಕ್ಷೆ ನೀಡುತ್ತಲಿರುವಾಗ ಬಸವಣ್ಣ ತಲೆಯೆತ್ತಿ, ಬ್ರಾಹ್ಮಣ ಅಬ್ರಾಹ್ಮಣವೆನ್ನದೆ ಎಲ್ಲರಿಗೂ ಮಂತ್ರದೀಕ್ಷೆ ಏಕೆ? ಮತಾಂತರದೀಕ್ಷೆಯ ಉಪಕ್ರಮವನ್ನೇ ಆರಂಭಿಸಿದನು. ಹೀಗಾಗಿ ದೂರದ ದಕ್ಷಿಣ ಕರ್ನಾಟಕದ ಶ್ರೀವೈಷ್ಣವವನ್ನು ಹೊರತುಪಡಿಸಿ, ಜೈನ ಮತ್ತು ಆಗಮಿಕ ಶೈವಗಳ ಅನುಯಾಯಿಯಾಗಿದ್ದ ಮಂತ್ರದೀಕ್ಷಿತರು ಮತ್ತು ಇದರಿಂದಲೂ ಹೊರಗೆ ಉಳಿದವರು - ಹೀಗೆ ಎಲ್ಲರೂ ಬಸವಣ್ಣನ ಲಿಂಗಾಯತಧರ್ಮದಲ್ಲಿ ಸೇರಿಹೋದರು. ಇದರಿಂದಾಗಿ ಆಗಮಿಕ ಶೈವ, ಜೈನಧರ್ಮಗಳ ಅನುಯಾಯಿಗಳ ಅನುಪಾತ ಕುಸಿದು, ಲಿಂಗಾಯತಧರ್ಮದ ಅನುಯಾಯಿಗಳ ಅನುಪಾತ ಒಮ್ಮೆಲೇ ಏರಿತು.

ಧರ್ಮದ ಸಂದರ್ಭದಲ್ಲಿ ಗಮನಿಸಬೇಕಾದುದು, ದೇವಾಲಯ ಮತ್ತು ಮಠ ವ್ಯವಸ್ಥೆ. ೧೨ನೆಯ ಶತಮಾನದ ಹೊತ್ತಿಗೆ ಇವೆರಡೂ ಶೋಷಣೆಯ ನೆಲೆಗಳಾಗಿ ಬೆಳೆದಿದ್ದವು. ದಾಸೋಹವೆಂಬ ಹೊಸ ವ್ಯವಸ್ಥೆ ಹುಟ್ಟುವ ಅವಶ್ಯಕತೆಯ ಮಟ್ಟಿಗೆ ಇವುಗಳಲ್ಲಿ ದಾನವ್ಯವಸ್ಥೆ ತಲೆಯೆತ್ತಿದ್ದಿತು. ಸಾಲದುದಕ್ಕೆ ಕಂದಾಚಾರಗಳು ಕ್ರೂರವಾಗಿ ಬೆಳೆದಿದ್ದವು. ಈಗ "ದೇಹವೇ ದೇವಾಲಯ", "ಭಕ್ತರ ಮನೆಗಳೇ ಮಠಗಳಯ್ಯಾ" ಎಂದು ಸಾರಿ, ಇವುಗಳ ಸ್ಥಾನದಲ್ಲಿ ಅನುಭವ ಮಂಟಪ ಅಸ್ತಿತ್ವಕ್ಕೆ ತರುವಷ್ಟರ ಮಟ್ಟಿಗೆ ಈ ದೇವಾಲಯ, ಮಠಗಳು ಜನರಿಗೆ ಬೇಡವಾಗಿದ್ದವು.

***

ಮೇಲೆ ಸೂಚಿಸಿದ ಅಬ್ರಾಹ್ಮಣರಂತೆ, ಮಹಿಳೆಯರಿಗೂ ಕುಟುಂಬ, ಸಮಾಜ, ಧರ್ಮಗಳಲ್ಲಿ ಕೊನೆಯ ಸ್ಥಾನ ಮೀಸಲಾಗಿತ್ತು. ಇದರಿಂದಾಗಿ ಸಾಮಾಜಿಕ ಆಧ್ಯಾತ್ಮಿಕ ಎರಡೂ ಸ್ತರಗಳಲ್ಲಿ ಪಾರತಂತ್ರ್ಯವನ್ನು ಅನುಭವಿಸುತ್ತಲಿದ್ದ ಅವಳು "ಒಳಗೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ", "ಸತಿ ಭಕ್ತೆಯಾದರೆ ಹೊಲೆಗಂಜಲಾಗದು" ಎಂಬಂಥ ವಿಚಾರಗಳ ನಿರೀಕ್ಷೆಯಲ್ಲಿ ಕಾಲ ಕಳೆಯುತ್ತಲಿದ್ದಳು.

***

ಅಂದು ಧರ್ಮದಂತೆ ಶಿಕ್ಷಣವೂ ಜಾತಿ, ಲಿಂಗಗಳನ್ನು ಅವಲಂಬಿಸಿದ್ದಿತು. ವೈದಿಕರು ಘಟಿಕಾಸ್ಥಾನಗಳಲ್ಲಿ, ಆಗಮಿಕ ಶೈವರು ಮತ್ತು ಜೈನರು ಮಠಗಳಲ್ಲಿ ತಮ್ಮ ತಮ್ಮ ಜಾತಿಯವರಿಗೆ ಅದರಲ್ಲಿಯೂ ಪುರುಷರಿಗೆ ಮಾತ್ರ ಶಿಕ್ಷಣ ಅಂದರೆ ಧಾರ್ಮಿಕ ಶಿಕ್ಷಣ ನೀಡುತ್ತಲಿದ್ದರು. ಇದರಿಂದಾಗಿ ಮಹಿಳೆಯರೂ ಸೇರಿದಂತೆ ಬಹುಸಂಖ್ಯಾತರು ಅಕ್ಷರಸಂಸ್ಕೃತಿಗೆ ಎರವಾಗಿದ್ದರು.

***

'ವೃತ್ತಿ'ಯು ಆನುವಂಶಿಕತೆಯಿಂದಾಗಿ 'ಜಾತಿ'ಯಾಗುವಲ್ಲಿ ತಲೆದೋರಿದ ಸಾಮಾಜಿಕ ತಾರತಮ್ಯವೂ, ಬಳಿಕ ಜಾತಿಯು 'ಧರ್ಮ'ವಾಗುವಲ್ಲಿ ತಲೆದೋರಿದ ಶ್ರಮ ತಾರತಮ್ಯವೂ ಈ ಹೊತ್ತಿಗೆ ವಿಕಾರರೂಪ ಪಡೆದಿದ್ದವು. ಬ್ರಾಹ್ಮಣ ಕ್ಷತ್ರಿಯವೆಂಬ ದುಡಿಯದ, ವೈಶ್ಯ ಶೂದ್ರವೆಂಬ ದುಡಿಯುವ ವರ್ಗಗಳು ಬೆಳೆದು ಆರ್ಥಿಕ ಸ್ಥಿತಿಯಲ್ಲಿ ಏರುಪೇರು ನಿರ್ಮಾಣವಾಗಿದ್ದಿತು. ಈಗ ಶರಣರು, ತಾರತಮ್ಯರಹಿತ ಶ್ರಮಸಂಸ್ಕೃತಿಯೆಂಬ ಕಾಯಕತತ್ತ್ವವನ್ನು ಸಾರುವಷ್ಟರ ಮಟ್ಟಿಗೆ ಈ ಕ್ಷೇತ್ರ ಉಲ್ಬಣಗೊಂಡಿದ್ದಿತು.

ಅಂದು ವರ್ಣವ್ಯವಸ್ಥೆಯೇ ಸಮಾಜದಲ್ಲಿ ಪ್ರತಿಷ್ಠಿತ ಮತ್ತು ಅಪ್ರತಿಷ್ಠಿತ ವರ್ಗಗಳನ್ನು ನಿರ್ಧರಿಸುವ ಶಕ್ತಿಯಾಗಿದ್ದಿತು. ಇದರಿಂದಾಗಿ ಮೇಲುವರ್ಣದವರು ಯಾವಾಗಲೂ ಮೇಲುವರ್ಗದವರು, ಕೆಳವರ್ಣದವರು ಯಾವಾಗಲೂ ಕೆಳವರ್ಗದವರು. ಒಂದು ವೇಳೆ ಮೇಲು ವರ್ಣದವರು ಕೆಳವರ್ಗದವರಾಗಿದ್ದರೂ ವರ್ಣ ಕಾರಣವಾಗಿ ಅವರು ಮೇಲು ವರ್ಗದವರು - ಎಂಬಂತೆ ವರ್ಣ ಆಧಾರಿತ ಮೂರು ಬಗೆಯ ವರ್ಗವ್ಯವಸ್ಥೆ ಸಮಾಜದಲ್ಲಿ ಹೆಪ್ಪುಗಟ್ಟಿದ್ದಿತು. ಈಗ ಗುಣ ಆಧಾರಿತ ವರ್ಗವ್ಯವಸ್ಥೆ ಅಂದರೆ ಕೆಳವರ್ಣದವರೂ ಮೇಲುವರ್ಗದವರಾಗಬಹುದೆಂಬ ನಾಲ್ಕನೆಯ ವ್ಯವಸ್ಥೆ ಸಮಾಜದಲ್ಲಿ ಉದಯಿಸುವುದು ಅನಿವಾರ್ಯವಾಗಿದ್ದಿತು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬ ಜನನ ಆಧಾರಿತ ಸಮಾಜ ವರ್ಗೀಕರಣಕ್ಕೆ ಬದಲು ಗುಣ ಆಧಾರಿತ ಸಮಾಜ ವರ್ಗೀಕರಣಕ್ಕಾಗಿ ಜನ ಹಾತೊರೆಯುತ್ತಿದ್ದರು.

ಚತುರ್ಮುಖೀ ಸಿದ್ಧಾಂತ

ಈ ಎಲ್ಲ ಆಕಾಂಕ್ಷೆಗಳ ಅನುಷ್ಠಾನಕ್ಕಾಗಿ ಬಸವಣ್ಣನವರ ನೇತೃತ್ವದಲ್ಲಿ ಜಾತ್ಯತೀತ ಜನಸಮುದಾಯವೊಂದು ರಾಜಧಾನಿ ಕಲ್ಯಾಣದಲ್ಲಿ 'ಚತುರ್ಮುಖೀಸಿದ್ಧಾಂತ'ದ ಲಿಂಗಾಯತ ಆಂದೋಲನವನ್ನು ಕೈಗೆತ್ತಿಕೊಂಡಿತು.

ಸಂಸಾರವೆಂಬ ಹೆಣ ಬಿದ್ದಿರೆ,
ತಿನ ಬಂದ ನಾಯಿ ಜಗಳವ ನೋಡಿರೆ.
ನಾಯಿ ಜಗಳವ ನೋಡಿ, ಹೆಣನೆದ್ದು ನಗುತಲಿದೆ;
ಗುಹೇಶ್ವರಲಿಂಗ ಅಲ್ಲಿಲ್ಲ ಕಾಣಿರೇ.

ಅಲ್ಲಮನ ಈ ವಚನ ೧೨ನೆಯ ಶತಮಾನದ ಸಮಾಜ ಮತ್ತು ಅದರ ಸದಸ್ಯರ ದುಸ್ಥಿತಿಯನ್ನು ರೂಪಕಾತ್ಮಕವಾಗಿ ಚಿತ್ರಿಸುತ್ತದೆ. ಲಿಂಗದ ಗೈರುಹಾಜರಿ ಕಾರಣವಾಗಿ ಅಂದು ಸಮಾಜ ಶವವಾಗಿದ್ದಿತು; ಸದಸ್ಯನಾದ ವ್ಯಕ್ತಿ ಅದನ್ನು ಹರಿದು ತಿನ್ನುವ ನಾಯಿಯಾಗಿದ್ದನು. ಅಂದರೆ ಭೌತಿಕ (Materialistic)

ಸ್ಥಿತಿಗೆ ಇಳಿದಿದ್ದ ಸಮಾಜವನ್ನು ವ್ಯಕ್ತಿ ಭೋಗವಸ್ತುವನ್ನಾಗಿ ಮಾಡಿಕೊಂಡಿದ್ದನು. ಈಗ ಎದ್ದುಹೋಗಿದ್ದ ಲಿಂಗತತ್ವವನ್ನು ವ್ಯಕ್ತಿ, ಸಮಾಜಗಳಲ್ಲಿ ಮರುಸ್ಥಾಪಿಸುವುದು ಅಂದರೆ ವ್ಯಕ್ತಿ ಸಮಾಜಗಳನ್ನು ಪದಾರ್ಥಸ್ಥಿತಿಯಿಂದ ಪ್ರಸಾದಸ್ಥಿತಿಗೆ, 'ಲೋಕಾಯತ' ಸ್ಥಿತಿಯಿಂದ 'ಲಿಂಗಾಯತ' ಸ್ಥಿತಿಗೆ ಪರಿವರ್ತಿಸುವುದು ಬಸವನೇತೃತ್ವದ ಚಳುವಳಿಯ ಉದ್ದೇಶವಾಗಿದ್ದಿತು. ಈ ದೃಷ್ಟಿಯಿಂದ ಇವರದು ದೈವಿಕ ಭೌತವಾದ (Spiritual materialism) ಆಗಿದೆ.

ಭಾರತೀಯರದು ಮೂಲತಃ ಸಮಾಜವನ್ನು ಉಪೇಕ್ಷಿಸಿ ವ್ಯಕ್ತಿಯನ್ನು ಮಾತ್ರ ಗಮನಿಸಿದ ತತ್ವಜ್ಞಾನವಾಗಿದೆ. ಶರಣರು ಮಾತ್ರ ಈ ಎರಡನ್ನೂ ಕುರಿತು ಚಿಂತಿಸಿದರು. ಹೀಗಾಗಿ ಇದು ಕೇವಲ ವ್ಯಕ್ತಿಕಲ್ಯಾಣ ಸಿದ್ಧಾಂತವಲ್ಲ, ಸಮಾಜಕಲ್ಯಾಣ ಸಿದ್ಧಾಂತವಾಗಿಯೂ ವಿಸ್ತರಿಸಿಕೊಂಡಿತು. ಆದುದರಿಂದ ಇದನ್ನು "ಸಮಾಜೋಧಾರ್ಮಿಕ ಸಿದ್ಧಾಂತ" ಅಥವಾ "ಸಮಗ್ರ ಜೀವನಸಿದ್ಧಾಂತ"ವೆಂದು ಕರೆಯಬಹುದಾಗಿದೆ. ಈ ಸಮಗ್ರತೆಗೆ ನಾಲ್ಕು ಆಯಾಮಗಳಿರುವುದರಿಂದ ಇದು ಚತುರ್ಮುಖಿ ಸಿದ್ಧಾಂತವೆನಿಸಿದ್ದು, ಅದು ಹೀಗಿದೆ.

೧. ಅಂಗ - ಲಿಂಗ - ಜಂಗಮಮುಖಿ
೨. ಲೋಕನೀತಿಮುಖಿ
೩. ಸಮಸಮಾಜಮುಖಿ
೪. ಸಮೃದ್ಧಸಮಾಜಮುಖಿ

ಭಾರತದ ಧರ್ಮಗಳು ಸಾಮಾನ್ಯವಾಗಿ ಅಂಗ-ಲಿಂಗ (ಆತ್ಮ-ಪರಮಾತ್ಮ) ಸಂಬಂಧತತ್ವ ಮತ್ತು ಸತ್ಯ ಅಹಿಂಸೆ ಇತ್ಯಾದಿಗಳನ್ನೊಳಗೊಂಡ ಲೋಕನೀತಿತತ್ವ - ಹೀಗೆ ಎರಡು ಆಯಾಮಗಳ ಬಗ್ಗೆ ಮಾತನಾಡುತ್ತ ಬಂದಿದ್ದವು. ಬುದ್ಧ ಇದಕ್ಕೆ ಮೂರನೆಯದಾಗಿ ಸಮಸಮಾಜಮುಖಿ ಆಯಾಮವನ್ನು ಜೋಡಿಸಿದ. ವಚನಕಾರರು ಈ ಮೂರನೆಯ ಆಯಾಮವನ್ನು ಇನ್ನೂ ಖಚಿತಪಡಿಸಿ, ನಾಲ್ಕನೆಯದಾದ ಕಾಯಕ-ದಾಸೋಹಗಳ ಸಮೃದ್ಧಸಮಾಜಮುಖಿ ಆಯಾಮವನ್ನು ಜೋಡಿಸಿದರು. ಹೀಗಾಗಿ ಭಾರತದಲ್ಲಿ ಧರ್ಮದ ವರ್ತುಲವನ್ನು ಪೂರ್ಣಗೊಳಿಸಿದ ಪ್ರಥಮಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

೧. ಅಂಗ - ಲಿಂಗ - ಜಂಗಮಮುಖಿ ಸಿದ್ಧಾಂತ :

ಆಸ್ತಿಕ ಧರ್ಮೀಯರು ಈ ಸಿದ್ಧಾಂತವನ್ನು ಅಂಗ-ಲಿಂಗಗಳಿಗೆ ಸೀಮಿತಗೊಳಿಸಿಕೊಂಡು, ಇವೆರಡರ ಸಂಬಂಧವನ್ನು ವಿಭಿನ್ನರೀತಿಗಳಲ್ಲಿ ಅಂದರೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇತ್ಯಾದಿ ರೀತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಇವರಲ್ಲಿ ವೈದಿಕರು ಪರಮಾತ್ಮ - ಆತ್ಮ, ಶೈವರು ಶಿವ-ಜೀವವೆನ್ನುವುದನ್ನು ಲಿಂಗಾಯತರು ಲಿಂಗ-ಅಂಗವೆಂದು ಕರೆದಿದ್ದಾರೆ.

ಆಸ್ತಿಕ ಧರ್ಮಗಳು ಶಿವ-ಜೀವ (ಲಿಂಗ-ಅಂಗ)ಗಳ ಸಂಬಂಧತತ್ವವನ್ನು ಸಾಮಾನ್ಯ (General) ಮತ್ತು ನಿರ್ದಿಷ್ಟ (Particular) ಎಂಬ ಎರಡು ನೆಲೆಗಳಲ್ಲಿ ಪ್ರತಿಪಾದಿಸುತ್ತವೆ. ಲಿಂಗಾಯತವನ್ನು ಗಮನಿಸಿ ಹೇಳುವುದಾದರೆ, ಇಲ್ಲಿ ಲಿಂಗ-ಅಂಗಗಳ ಸಂಬಂಧವನ್ನು ಕುರಿತು ಅಲ್ಲಮನು ಸಾಮಾನ್ಯತತ್ವದ ಮೇಲೆ, ಚೆನ್ನಬಸವಣ್ಣನು (ಲಿಂಗಾಯತದ) ನಿರ್ದಿಷ್ಟತತ್ತ್ವದ ಮೇಲೆ ಹೆಚ್ಚು ಒತ್ತುಕೊಡುತ್ತಾರೆ.

ಲಿಂಗಾಯತ ನಂಬಿದ ನಿರ್ದಿಷ್ಟ ತತ್ವ ಹೀಗಿದೆ: (ಮಹಾ)ಲಿಂಗವೆನ್ನುವದು ಲೋಕವನ್ನು ತುಂಬಿಕೊಂಡಿರುವ ಚೈತನ್ಯವಾಗಿದೆ. ಈ ಚೈತನ್ಯದ ಒಂದು ಅಂಶವೇ ಮಲತ್ರಯದ ಆವರಣದಿಂದಾಗಿ

ಅಂಗ(ವ್ಯಕ್ತಿ)ವೆನಿಸುತ್ತದೆ. ಈಗ ಗುರುವಿನಿಂದ ಇಷ್ಟಲಿಂಗದೊಂದಿಗೆ ಜ್ಞಾನದೀಕ್ಷೆ ಪಡೆದು, ಅಂಗವೇ ಜ್ಞಾನಿ(ಗುರು)ಯೆನಿಸಿಕೊಳ್ಳುತ್ತದೆ. ಮತ್ತು ಈ ಜ್ಞಾನವನ್ನು ಕ್ರಿಯೆಯನ್ನಾಗಿ ಪಲ್ಲಟಗೊಳಿಸಿಕೊಂಡು ಜ್ಞಾನಕ್ರಿಯಾ ಸಮರಸದ ಲಿಂಗವೆನಿಸಿಕೊಳ್ಳುತ್ತದೆ. ಹೀಗೆ ಅಂಗವ್ಯಕ್ತಿತ್ವವನ್ನು ನೀಗಿ ಲಿಂಗವ್ಯಕ್ತಿತ್ವ ರೂಪಿಸಿಕೊಳ್ಳುವುದನ್ನೇ ಲಿಂಗಾಂಗಸಾಮರಸ್ಯ (ಲಿಂಗೈಕ್ಯ)ವೆಂದು ಕರೆಯುತ್ತಾರೆ. ಇದು ಷಟ್ಸ್ಥಲ ಪರಿಕಲ್ಪನೆಯಲ್ಲಿ ನಾಲ್ಕನೆಯದಾದ ಪ್ರಾಣಲಿಂಗಿಸ್ಥಲ ವರೆಗಿನ ತತ್ವವಾಗಿದೆ.

ಈ ಲಿಂಗವ್ಯಕ್ತಿತ್ವವೆನ್ನುವುದು ವ್ಯಕ್ತಿಕೇಂದ್ರಿತ. ಇದನ್ನು ಸಾಮಾಜೀಕರಣ ಗೊಳಿಸಿಕೊಳ್ಳುವುದೇ ಜಂಗಮ ಅಥವಾ ಜಂಗಮಕೇಂದ್ರಿತ ವ್ಯಕ್ತಿತ್ವ. ಇದು ಷಟ್ಸ್ಥಲ ಪರಿಕಲ್ಪನೆಯಲ್ಲಿ ಐದನೆಯದಾದ ಶರಣಸ್ಥಲ, ಈ ಶರಣಸ್ಥಲ ಗಟ್ಟಿಗೊಂಡುದೇ ಐಕ್ಯಸ್ಥಲವಾಗಿದೆ. ಹೀಗೆ ಜಂಗಮನಾದವನೇ ಶರಣ, ಶರಣನಾದವನೇ ಲಿಂಗಾಯತ.

ಭಾರತೀಯ ಎಲ್ಲ ಧರ್ಮಗಳು ಅಂಗವ್ಯಕ್ತಿತ್ವವನ್ನು ಲಿಂಗವ್ಯಕ್ತಿತ್ವಗೊಳಿಸಿಕೊಳ್ಳುವ ಬಗ್ಗೆ ಹೇಳುತ್ತವೆ. ವಚನಧರ್ಮ ಮಾತ್ರ ಮುಂದುವರಿದು ಆ ಲಿಂಗವ್ಯಕ್ತಿತ್ವವನ್ನು ಜಂಗಮವ್ಯಕ್ತಿತ್ವ ಗೊಳಿಸಿಕೊಳ್ಳುವುದನ್ನು ಪ್ರತಿಪಾದಿಸುತ್ತಿದ್ದು, ಇದು ಈ ಧರ್ಮದ ವಿಶಿಷ್ಟ ಕೊಡುಗೆಯಾಗಿದೆ. "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು, ಹೊರಗೆ ಜಂಗಮದ ಮಾಟದಲ್ಲಿ ತನುವಿಡಿದಿರಬೇಕು" ಎಂದು ಷಣ್ಮುಖಸ್ವಾಮಿ ಹೇಳುವುದು ಈ ವಿಚಾರವನ್ನೇ. ಒಟ್ಟಾರೆ, ಗುರುತತ್ವವು ತಿಳಿವಳಿಕೆ, ಲಿಂಗತತ್ವವು ನಡೆವಳಿಕೆ, ಜಂಗಮತತ್ವವು ಜನಬಳಕೆಯೆನಿಸಿದೆ.

ಶಂಕರಾಚಾರ್ಯ ಸಿದ್ಧಾಂತವು ಕಲ್ಪಿತ ಶಿವ-ಜೀವಗಳಲ್ಲಿ ಅದ್ವೈತ (ಅಭೇದ)ವನ್ನು ಹೇಳುತ್ತಲೇ, ವಾಸ್ತವ ಜೀವ-ಜಗತ್ತು(ಸಮಾಜ)ಗಳಲ್ಲಿ ದ್ವೈತ(ಭೇದ)ವನ್ನು ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನೆಂಬ ವರ್ಣಭೇದವನ್ನು ಪ್ರತಿಪಾದಿಸುತ್ತದೆ. ಬಸವ ಸಿದ್ಧಾಂತವು ಕಲ್ಪಿತ ಶಿವ-ಜೀವ(ಲಿಂಗ-ಅಂಗ)ಗಳಂತೆ ವಾಸ್ತವ ಜೀವ-ಜಗತ್ತು(ಲಿಂಗ-ಜಂಗಮ=ಸಮಾಜ)ಗಳಲ್ಲಿಯೂ ಅದ್ವೈತ(ಅಭೇದ)ವನ್ನು ಹೇಳುತ್ತದೆ. ಹೀಗಾಗಿ ಲಿಂಗಾಯತದಲ್ಲಿ ಅಂಗ-ಲಿಂಗ ಸಾಮರಸ್ಯದ ಹಾಗೆ ಲಿಂಗ-ಜಂಗಮಗಳ ಸಾಮರಸ್ಯವನ್ನೂ ಪ್ರತಿಪಾದಿಸಲಾಗಿದೆ. ಅದಕ್ಕಾಗಿಯೇ ವಚನಗಳಲ್ಲಿ ಲಿಂಗೈಕ್ಯದಂತೆ, ಜಂಗಮೈಕ್ಯ ಪದವನ್ನು ಕಾಣುತ್ತೇವೆ. ಒಟ್ಟಾರೆ, ಅಂಗವ್ಯಕ್ತಿತ್ವದ ಶುದ್ಧೀಕರಣವೇ ಲಿಂಗವ್ಯಕ್ತಿತ್ವ, ಲಿಂಗವ್ಯಕ್ತಿತ್ವದ ಸಾಮಾಜೀಕರಣವೇ ಜಂಗಮವ್ಯಕ್ತಿತ್ವ.

ಒಂದರ್ಥದಲ್ಲಿ ಲಿಂಗೈಕ್ಯವೆನ್ನುವುದು ಅಪೂರ್ಣವ್ಯಕ್ತಿತ್ವ; ಮುಂದುವರಿದು ಜಂಗಮೈಕ್ಯವಾಗುವುದೇ ಪೂರ್ಣವ್ಯಕ್ತಿತ್ವ. ಇಂಥ ಪೂರ್ಣವ್ಯಕ್ತಿತ್ವದವನೇ ಲಿಂಗಾಯತ. ಹೀಗಾಗಿ ನಿಜವಾದ ಲಿಂಗಾಯತನಾಗುವುದೆಂದರೆ ಜಂಗಮವಾಗುವುದೆಂದೇ ಅರ್ಥ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಲಿಂಗವಾಗುವುದೆಂದರೆ ವ್ಯಕ್ತಿಯು ಕೇವಲ ನಿಘಂಟುವಿನ ಶಬ್ದ(word)ದಂತೆ ಆಗುವುದು; ಜಂಗಮನಾಗುವುದೆಂದರೆ ವಾಕ್ಯಕ್ಕೆ ಯೋಗ್ಯವಾದ ಶಬ್ದ(Morpheme)ದಂತೆ ಆಗುವುದು. ಇಲ್ಲಿ ವಾಕ್ಯಯೋಗ್ಯ ಶಬ್ದವಾಗುವುದೆಂದರೆ ಸಮಸಮಾಜಯೋಗ್ಯ ಸದಸ್ಯನಾಗುವುದು. ಬಸವಣ್ಣ ಬರುವ ವರೆಗೆ ವ್ಯಕ್ತಿತ್ವ ನಿರ್ಮಾಣವೆನ್ನುವುದು ಕೇವಲ 'ಶಬ್ದ' ಸಿದ್ಧಾಂತದಂತಾಗಿದ್ದಿತು. ಬಸವಣ್ಣ ಅದಕ್ಕೆ 'ವಾಕ್ಯಯೋಗ್ಯಶಬ್ದ' ಸಿದ್ಧಾಂತದ ಸ್ವರೂಪ ನೀಡಿದನು. ಒಟ್ಟಿನಲ್ಲಿ, ಈ ಗುರು ಲಿಂಗ ಜಂಗಮ ತತ್ವಗಳನ್ನು ಬಸವಣ್ಣ ಆವಿಷ್ಕಾರಗೊಳಿಸಿದ್ದು, "ಬಸವ ಮಾಡಿದೊಡಾಯ್ತು ಗುರು ನೆಲೆ, ಬಸವ ಮಾಡಿದೊಡಾಯ್ತು ಲಿಂಗವು, ಬಸವ ಮಾಡಿದೊಡಾಯ್ತು ಜಂಗಮ" ಎಂದು ಪ್ರಭುಲಿಂಗಲೀಲೆ ಇದನ್ನು ಬೆಂಬಲಿಸುತ್ತದೆ.

ಈ ಲಿಂಗವ್ಯಕ್ತಿತ್ವವನ್ನು ಸಾಧಿಸುವುದಕ್ಕೆ ಸನ್ಯಾಸಧರ್ಮವೇ ಸೂಕ್ತವೆಂಬ ದೃಷ್ಟಿಕೋನ ೧೨ನೆಯ ಶತಮಾನದ ಹೊತ್ತಿಗೆ ಬಲವಾಗಿ ಬೆಳೆದಿದ್ದಿತು. ಈಗ "ಇಂದ್ರಿಯ ನಿಗ್ರಹಮಾಡಿದರೆ ಬಂದು ಕಾಡುವವು ದೋಷಂಗಳು" ಎಂಬ ಎಚ್ಚರಿಕೆಯ ಮೂಲಕ ಸಂಸಾರಧರ್ಮದಿಂದಲೂ ಅಂಥ ವ್ಯಕ್ತಿತ್ವ ಸಾಧ್ಯ, ಸೂಕ್ತವೆಂಬ ವಾದವನ್ನು ಮಂಡಿಸಿದುದು ಶರಣರ ಜೀವನಪ್ರೀತಿಯ ದ್ಯೋತಕವಾಗಿದೆ.

೨. ಲೋಕನೀತಿಮುಖಿ ಸಿದ್ಧಾಂತ :

ಮನುಷ್ಯನ ನೈಸರ್ಗಿಕ ಪ್ರವೃತ್ತಿಗಳಾದ ಗುಣ ಮತ್ತು ದೋಷಗಳ ಸಂಚಯವೇ "ಮಾನವಿಕ." ಇಲ್ಲಿಯ ಗುಣವೆನ್ನುವುದು ಲೋಕನೀತಿ (Universal ethics)ಯಾಗಿದ್ದು, ಇದು ಅಹಿಂಸೆ, ಶಾಂತಿ, ಕರುಣೆ ಇತ್ಯಾದಿ ಮಾನವೀಯ ಅಂಶಗಳನ್ನು ಒಳಗೊಂಡಿರುತ್ತದೆ. ಇಡಿಯಾಗಿ ಸಾಧಿಸಲು ಸಾಧ್ಯವಾಗಿರದ ಈ ಮಾನವೀಯ ಅಂಶಗಳು ಒಂದು ಆದರ್ಶವೇ ಸರಿ. ಹೀಗಿದ್ದೂ ಮನುಷ್ಯ ಇವುಗಳತ್ತ ಹೆಜ್ಜೆ ಹಾಕುತ್ತಿರುತ್ತಾನೆ. ಯಾರಿಗೂ ನೋವನ್ನುಂಟುಮಾಡದ ಈ ಆದರ್ಶದ ಅಂದರೆ ಲೋಕನೀತಿಯ ಪ್ರತಿಪಾದನೆ ಎಲ್ಲ ಧರ್ಮಗಳಲ್ಲಿಯೂ ಎಡೆಪಡೆದಿದೆ.

ಈ ನೈತಿಕತೆಯ ಮೊದಲ ಸೂತ್ರ "ಜೀವಿಸು, ಅನ್ಯರೂ ಜೀವಿಸಲು ಅನುಕೂಲಿಸು", ಎರಡನೆಯ ಸೂತ್ರ "ಮಾನವೀಯವಾಗಿ ಜೀವಿಸು, ಅನ್ಯರೂ ಹಾಗೆ ಜೀವಿಸುವಂತೆ ಸಹಕರಿಸು" ಎಂಬುದಾಗಿವೆ. ಇವುಗಳನ್ನೇ ಕ್ರಮವಾಗಿ ಅಹಿಂಸೆ, ಸಹಕಾರವೆಂದು ಕರೆಯುವುದು. ಶರಣರ "ದಯವೇ ಧರ್ಮದ ಮೂಲ", "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು" ಇತ್ಯಾದಿ ವಚನಗಳಲ್ಲಿ ಈ ಮತ್ತು ಇಂಥ ವಿಚಾರಗಳು ಮತ್ತೆ ಮತ್ತೆ ಕಾಣಿಸಿಕೊಂಡಿವೆ.

೩. ಸಮಸಮಾಜಮುಖಿ ಸಿದ್ಧಾಂತ:

ಮೇಲೆ ಹೇಳಿದ "ಮಾನವಿಕ"ದ ಗುಣಾಂಶ(ಲೋಕನೀತಿ)ಗಳ ಪ್ರತಿಪಾದನೆಯಂತೆ, ದೋಷಾಂಶಗಳ ಪ್ರತಿಬಂಧನೆಯೂ ಸುಖೀಸಮಾಜಕ್ಕೆ ತೀರ ಅವಶ್ಯ. ಇವುಗಳನ್ನು ವಿಧಿ-ನಿಷೇಧಗಳೆಂದು ಕರೆಯಲಾಗುತ್ತದೆ. ಪ್ರಾದೇಶಿಕ ಭೇದ ಕಾರಣವಾಗಿ, ಬೇರೆ ಬೇರೆ ವಿಧಿ-ನಿಷೇಧಗಳು ನಿರ್ಮಾಣವಾಗಿ, ಪ್ರತಿಯೊಂದು ಸಮಾಜದಲ್ಲಿ ವಿಭಿನ್ನ ಸಾಮಾಜಿಕ ನೀತಿ (Social Ethics) ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಸಾಮಾಜಿಕ ನೀತಿನಿರ್ಮಾಣ ಸಂದರ್ಭದಲ್ಲಿ ಕೆಲವೊಮ್ಮೆ ತಿಳಿದೋ ತಿಳಿಯದೆಯೋ ವರ್ಣಪದ್ಧತಿ, ಸತಿಪದ್ಧತಿಗಳಂಥ ದೋಷಗಳೂ ಸಾಮಾಜಿಕ ಸಮ್ಮತಿಯ ಸೋಗಿನಲ್ಲಿ ತಲೆಯೆತ್ತಿ, ಅಲಿಖಿತ ಶಾಸನಗಳಂತೆ ಜನರ ಶೋಷಣೆ ನಡೆಸುತ್ತಿರುತ್ತವೆ.

ಭಾರತದಲ್ಲಿ ಮೊದಲಿನಿಂದಲೂ ಸಾಮಾಜಿಕ ಸಮ್ಮತಿಯ ಮುಖವಾಡದಲ್ಲಿ ವರ್ಗಭೇದ, ವರ್ಣಭೇದ, ಲಿಂಗಭೇದ ಮೊದಲಾದ ಭೇದಸಂಸ್ಕೃತಿಗಳನ್ನು ಸೃಷ್ಟಿಸಲಾಗಿದ್ದಿತು. ಇದರಿಂದಾಗಿ ೧೨ನೆಯ ಶತಮಾನದ ಹೊತ್ತಿಗೆ ಬಡವ- ಶ್ರೀಮಂತ, ರಾಜ-ಪ್ರಜೆ, ಪುರೋಹಿತ-ಭಕ್ತವೆಂಬ ವರ್ಗಭೇದ, ಸ್ಪೃಶ್ಯ-ಅಸ್ಪೃಶ್ಯವೆಂಬ ವರ್ಣಭೇದ, ಸ್ತ್ರೀ-ಪುರುಷವೆಂಬ ಲಿಂಗಭೇದ ಸಂಸ್ಕೃತಿಗಳು ದೈತ್ಯಾಕಾರದಲ್ಲಿ ಬೆಳೆದು ನಿಂತು, ಶೋಷಣೆಗೆ ದಾರಿ ಮಾಡಿಕೊಟ್ಟಿದ್ದವು. ಈ ಸಾಮಾಜಿಕ ಭೇದಸಂಸ್ಕೃತಿಯನ್ನು ನಿರಾಕರಿಸಿದುದು, ಅಭೇದಸಂಸ್ಕೃತಿಯನ್ನು ಕಾರ್ಯಗತಗೊಳಿಸಿದುದು ಶರಣರ ಬಹುದೊಡ್ಡ ಸಾಧನೆಯಾಗಿದೆ.

ಮೇಲೆ ಸೂಚಿಸಿದ ಅಂಗ-ಲಿಂಗಸಿದ್ಧಾಂತ, ಲೋಕನೀತಿಸಿದ್ಧಾಂತಗಳನ್ನು ಯಾರೂ ಹೇಳಬಹುದು. ಅವುಗಳಿಂದ ಯಾರಿಗೂ ಸಾಮಾಜಿಕ ತೊಂದರೆಯಿಲ್ಲ. ಆದರೆ ಸಮಾಜವನ್ನು ಶೋಷಿಸುತ್ತಿರುವವರಿಗೆ

ಅಡ್ಡಿಯನ್ನುಂಟು ಮಾಡುವ ಸಮಸಮಾಜಮುಖಿ ಸಿದ್ಧಾಂತವನ್ನು ಸಾರುವುದೆಂದರೆ, ಅಂಥವರ ವಿರೋಧ ಕಟ್ಟಿಕೊಂಡು ಮೈಮೇಲೆ ಅಪಾಯ ಎಳೆದುಕೊಳ್ಳುವುದೇ ಆಗಿದೆ. ಮಲತ್ರಯದಿಂದ ಮುಕ್ತನಾಗಿ ವ್ಯಕ್ತಿ ಮಾತ್ರ ಲಿಂಗವಾಗುವುದಲ್ಲ, ಅವನು ವ್ಯವಹರಿಸುವ ಸಮಾಜವೂ ಭೇದಸಂಸ್ಕೃತಿಯಿಂದ ಮುಕ್ತವಾಗಿ ಲಿಂಗವಾಗಬೇಕೆಂಬ ಈ ಸಿದ್ಧಾಂತ ತುಂಬ ಮುಖ್ಯವಾಗಿರುವುದರಿಂದ, ಇದರ ಪ್ರತಿಪಾದನೆ ವಚನಗಳಲ್ಲಿ ಕಿವಿ ಗಡಚಿಕ್ಕುವ ಹಾಗೆ ಪದೇ ಪದೇ ಕೇಳಿಸುತ್ತದೆ. ಶರಣರು ಈ ಸಾಮಾಜಿಕ ನ್ಯಾಯದ ಹೊಸ ಸಿದ್ಧಾಂತವನ್ನು ಕಟ್ಟುವ, ಸಾಮಾಜಿಕ ಅನ್ಯಾಯದ ಹಳೆಯ ಸಿದ್ಧಾಂತವನ್ನು ಕೆಡಹುವ ಸಲುವಾಗಿ ಸಮಾಜದ ಮಧ್ಯಕ್ಕೇ ಧುಮುಕಿ ಭಾರತದ ಧಾರ್ಮಿಕ ಇತಿಹಾಸದಲ್ಲಿ ಪ್ರಥಮ Activist ಎನಿಸಿದರು. ಬುದ್ಧನದು ಬೋಧಿವೃಕ್ಷದ ಕೆಳಗೆ ಕುಳಿತು ಅಡವಿಯಲ್ಲಿ ಗಳಿಸಿದ ಜ್ಞಾನವನ್ನು ಊರಿಗೆ ಅನ್ವಯಿಸಿದ 'ಜ್ಞಾನದಿಂದ ಕ್ರಿಯೆ' ಧೋರಣೆಯಾದರೆ, ಬಸವಣ್ಣನದು ಊರಿನಲ್ಲಿ ಗಳಿಸಿದ ಜ್ಞಾನವನ್ನು ಊರಿಗೆ ಅನ್ವಯಿಸಿದ 'ಕ್ರಿಯೆಯಿಂದ ಜ್ಞಾನ' ಧೋರಣೆಯಾಗಿದೆ. ಇದೆಲ್ಲದರ ಫಲವಾಗಿ, ಮೇಲೆ ಹೇಳಿದ ಅವರ ದೈವಿಕ ಭೌತವಾದ(Spiritual Materialism)ವು ಜಾತ್ಯತೀತ ದೈವಿಕವಾದ(Secular Spiritualism) ರೂಪದಲ್ಲಿ ಹರಡಿತು.

ಈ ಸಮಸಮಾಜಸಿದ್ಧಾಂತ ಕೇವಲ ನುಡಿಯುವಿಕೆ(Slogan)ಯಾಗಿ ಉಳಿಯದೆ, ನಡೆಯುವಿಕೆಯಾದುದಕ್ಕೆ ಬೇರೆ ಬೇರೆ ವರ್ಗ, ವರ್ಣಗಳ ಶರಣ ಶರಣೆಯರು ಈ ಚಳುವಳಿಯಲ್ಲಿ ದುಡಿದುದು, ಪರಸ್ಪರ ಗೌರವ ತೋರಿಸಿದುದು, ಸಹಭೋಜನ ಜರುಗಿಸಿದುದು, ಅಂತಿಮದಲ್ಲಿ ರಕ್ತಸಂಬಂಧವೇರ್ಪಡಿಸಿದುದು ಸಾಕ್ಷಿಯೆನಿಸಿವೆ. ಕೇವಲ ಲಿಂಗ (ಸೋಹಂ) ಪ್ರಜ್ಞೆಯವರಾಗಿರುವ "ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು" ಎಂಬ ಮಾತನ್ನು ಹುಸಿಗೊಳಿಸಿ, ಸಾಮಾಜಿಕವಾಗಿಯೂ ಸಬಲರಾಗಿ ಬೆಳೆಯಲು ಈ ಸಮಸಮಾಜದ ಜಂಗಮ(ದಾಸೋಹಂ)ಪ್ರಜ್ಞೆ ದಾರಿಮಾಡಿಕೊಟ್ಟಿತು. ಇದಕ್ಕೆ, ಜಾತ್ಯತೀತವಾಗಿ ಎಲ್ಲರ ಕೈಗೂ ಇಳಿದು ಬಂದ ಇಷ್ಟಲಿಂಗವು 'A Social Leveller' ಎಂಬಂತೆ ಪೂರಕ ಕೆಲಸ ಮಾಡಿತಲ್ಲದೆ, ಪ್ರತಿಷ್ಠಿತರ ೩೩ ಕೋಟಿ ದೇವತೆಗಳನ್ನು, ಪರಿಶಿಷ್ಟರ ಕೋಟ್ಯನುಕೋಟಿ ದೇವತೆಗಳನ್ನು ನಿರಾಕರಿಸಿತು. ಕಂಡ ಕಂಡ ದೇವರಿಗೆ ಕೈಮುಗಿಯುವ ಮೂಲಕ ಛಿದ್ರವಾಗಿದ್ದ ದೇವತಾಪ್ರಜ್ಞೆ ಏಕದೇವೋಪಾಸನೆಯಲ್ಲಿ ಕೇಂದ್ರೀಕರಣಗೊಳ್ಳುವಂತೆ ಮಾಡಿತು.

೪. ಸಮೃದ್ಧಸಮಾಜಮುಖಿ ಸಿದ್ಧಾಂತ:

ಸಮಸಮಾಜಮುಖಿಸಿದ್ಧಾಂತವನ್ನು ಬುದ್ಧ ತಕ್ಕಮಟ್ಟಿಗೆ ಹೇಳಿದ್ದನಾದರೂ, ಸಮೃದ್ಧಸಮಾಜಮುಖಿಸಿದ್ಧಾಂತ ಇಡಿಯಾಗಿ ವಚನಕಾರರ ಹೊಸ ಪರಿಕಲ್ಪನೆಯಾಗಿದೆ. ವೃತ್ತಿಪ್ರಧಾನ ಸಮಾಜದ ಕಾಲಘಟ್ಟದಲ್ಲಿ ವೃತ್ತಿಯೇ ಧರ್ಮವೆನಿಸಿ 'ವೃತ್ತಿಧರ್ಮ' (ಕಾಯಕಧರ್ಮ) ಅಸ್ತಿತ್ವದಲ್ಲಿದ್ದಿತು. 'ಯೋಗಃ ಕರ್ಮ ಸುಕೌಶಲಮ್'ಎಂಬ ಆದರ್ಶದಲ್ಲಿ ಯೋಗವೆಂದರೆ ಬೇರೆ ಏನೂ ಅಲ್ಲ, ಕರ್ಮಕೌಶಲ್ಯ (ವೃತ್ತಿಕೌಶಲ್ಯ) ಎಂಬ ಪ್ರಜ್ಞೆ ಅಂದು ಜೀವಂತವಾಗಿದ್ದಿತು. ಈ ವೃತ್ತಿಕೌಶಲ್ಯದೊಂದಿಗೆ ವೃತ್ತಿಪರತೆ(ಮಗ್ನತೆ)ಯೂ ಬೆಳೆದು, ಸಮೃದ್ಧಸಮಾಜಮುಖಿಸಿದ್ಧಾಂತ ಆಚರಣೆಯಲ್ಲಿದ್ದಿತು.

ಕಾಲಕ್ರಮದಲ್ಲಿ ವೃತ್ತಿಪ್ರಧಾನ ಸಮಾಜಕ್ಕೆ ಬದಲು ಬ್ರಾಹ್ಮಣನ ಮಗ ಬ್ರಾಹ್ಮಣ, ಕ್ಷತ್ರಿಯನ ಮಗ ಕ್ಷತ್ರಿಯನೆಂಬ ಜಾತಿಪ್ರಧಾನ ಸಮಾಜ ಅಸ್ತಿತ್ವಕ್ಕೆ ಬರುವಲ್ಲಿ, ಅಜ್ಞಾನಿಯೂ ಬ್ರಾಹ್ಮಣ, ದುರ್ಬಲನೂ ಕ್ಷತ್ರಿಯನೆನಿಸುವ ಮೂಲಕ ವೃತ್ತಿಕೌಶಲ್ಯ ಕ್ಷೀಣವಾಯಿತು. ಈ ಕೌಶಲ್ಯಕ್ಷೀಣತೆ ಸಹಜವಾಗಿಯೇ ಪರಾವಲಂಬಿ ಪ್ರವೃತ್ತಿಗೆ ದಾರಿಮಾಡಿಕೊಡುವಲ್ಲಿ 'ವೃತ್ತಿಪರತೆ'ಯೂ ಕ್ಷೀಣವಾಯಿತು. ಹೀಗೆ ವೃತ್ತಿಕೌಶಲ್ಯ, ವೃತ್ತಿಪರತೆಗಳೆರಡೂ ವಿಮುಖಗೊಂಡು, 'ವೃತ್ತಿಧರ್ಮ'ಕ್ಕೆ ಬದಲು 'ಜಾತಿಧರ್ಮ' ಒಪ್ಪಿತ ವ್ಯವಸ್ಥೆಯಾಗಿದ್ದ ಸಂದರ್ಭದಲ್ಲಿ ಅಂದರೆ ಸಮೃದ್ಧಸಮಾಜಮುಖಿ ಸಿದ್ಧಾಂತವು ಬದುಕಿನಿಂದ ವಿಮುಖವಾಗಿದ್ದ ಸಂದರ್ಭದಲ್ಲಿ ಶರಣರು ತಲೆಯೆತ್ತಿದರು. ಸಮೃದ್ಧಸಮಾಜ ರಚನೆಗೊಳ್ಳುವ ಸಲುವಾಗಿ 'ಜಾತಿಧರ್ಮ'ವನ್ನು ಮತ್ತೆ 'ವೃತ್ತಿಧರ್ಮ' (ಕಾಯಕಧರ್ಮ)ವಾಗಿಸುವುದಕ್ಕಾಗಿ ಕಾಯಕಸಿದ್ಧಾಂತವನ್ನು ರೂಪಿಸಿದರು; ಸಮಾಜದಲ್ಲಿ ಸ್ಥಾಪಿಸಿದರು.

ಶರಣರ ಪ್ರಕಾರ ಈ ಸಿದ್ಧಾಂತದ ಲಕ್ಷಣಗಳು ಹೀಗಿವೆ : ೧. ಕಾಯಕ ಕಡ್ಡಾಯ, ೨.ಕಾಯಕ ದೈವಿಕ, ೩. ಕಾಯಕ ತಾರತಮ್ಯ ರಹಿತ, ೪. ಕಾಯಕ ಐಚ್ಛಿಕ, ೫. ಕಾಯಕ ಅಧಿಕಫಲ ನಿರಪೇಕ್ಷಿತ, ೬. ಕಾಯಕ ದಾಸೋಹಸಹಿತ.

ಕಾಯಕ ಕಡ್ಡಾಯ : ಅನ್ನವೇ ದೇವರು. ಇದು ದೇವರಾಗಬೇಕಾದರೆ ಇದನ್ನು ಗಳಿಸುವ ಮಾಧ್ಯಮವಾದ ಕಾಯಕವೂ ದೇವರಾಗಬೇಕಾಗುತ್ತದೆ. ಇದನ್ನು ಅರ್ಥಮಾಡಿಕೊಂಡ ಶರಣರು ಕಾಯಕವನ್ನು ತಮ್ಮ ಧಾರ್ಮಿಕ ಸಿದ್ಧಾಂತದ ಚೌಕಟ್ಟಿನೊಳಗೆ ಅಳವಡಿಸಿದರು. ಇದಕ್ಕೆ "ಕೃತ್ಯಕಾಯಕವಿಲ್ಲದವರು ಭಕ್ತರಲ್ಲ" (ಕಾಳವ್ವೆ) ಇವೇ ಮೊದಲಾದ ವಚನಗಳು ನಿದರ್ಶನವೆನಿಸಿವೆ.

ಕ್ರಿಯೆಯಿಲ್ಲದ ಭಕ್ತ ಮನುಜ, ಕ್ರಿಯೆಯಿಲ್ಲದ ಮಹೇಶ ರಾಕ್ಷಸ,
ಕ್ರಿಯೆಯಿಲ್ಲದ ಪ್ರಸಾದಿ ಯವನ, ಕ್ರಿಯೆಯಿಲ್ಲದ ಪ್ರಾಣಲಿಂಗಿ ಭವಿ,
ಕ್ರಿಯೆಯಿಲ್ಲದ ಶರಣ ಅಜ್ಞಾನಿ,
ಕ್ರಿಯೆಯಿಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ
ಕೂಡಲ ಚೆನ್ನಸಂಗಮದೇವಾ.

ಎಂದು ಚೆನ್ನಬಸವಣ್ಣ ಹೇಳುವುದೂ ಇದನ್ನೇ. ಸಿದ್ಧರಾಮನು "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು; ಅನುಗೊಂಬನಿತು ಕಾಯಕಂ ನಡೆಯುತಿರಬೇಕು" ಎನ್ನುವ ಮಾತೂ ಇದು ಕಡ್ಡಾಯವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಬಹುಶಃ ಶರಣಧರ್ಮವು ವ್ಯಕ್ತಿಗೆ ದೀಕ್ಷೆನೀಡುವ ಪ್ರಸಂಗದಲ್ಲಿ ಲಿಂಗಕ್ಕೆ ಒಂದು ಹೆಸರನ್ನು (ಮುದ್ರಿಕೆ), ಭಕ್ತನಿಗೆ ಒಂದು ಕಾಯಕವನ್ನು ಕಡ್ಡಾಯವಾಗಿಸಿದೆಯೆಂದು ತೋರುತ್ತದೆ. ಈಗ ಯಾವುದೇ ವ್ಯಕ್ತಿ ಯಾವುದೇ ಕಾಯಕ ಮಾಡಬಹುದೆಂಬ ಐಚ್ಛಿಕತೆಯಿಂದಾಗಿ ಕಾಯಕವು ತಾರತಮ್ಯದ ಕಳಂಕ ಕಳಚಿಕೊಂಡಿದ್ದ ಕಾರಣ, ತಮ್ಮನ್ನು ಕಾಯಕದ ಹೆಸರಿನಿಂದ ಗುರುತಿಸಿಕೊಳ್ಳುವುದು ಶರಣರಿಗೆ ಹೆಮ್ಮೆಯ ವಿಷಯವಾಗಿ ಪರಿಣಮಿಸಿತು. ಹೀಗಾಗಿ ಅವರು ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ ಎಂದು ಅಂಕಿತನಾಮದ ಜೊತೆಗೆ ವೃತ್ತಿನಾಮದಿಂದಲೂ ಗುರುತಿಸಿಕೊಳ್ಳುತ್ತಿದ್ದುದನ್ನು ಇಲ್ಲಿ ನೆನೆಯಬಹುದು. ಇಷ್ಟೇ ಏಕೆ? ಮಡಿವಳ ಕೆಲಸ ಮಾಡುವವನು ಮಡಿವಾಳಯ್ಯ, ಘಟ್ಟಿವಳ (ಗಂಧ ತೇಯುವ) ಕೆಲಸ

ಮಾಡುವವನು ಘಟ್ಟಿವಾಳಯ್ಯನೆಂದು ವೃತ್ತಿನಾಮವೇ ವ್ಯಕ್ತಿನಾಮದ ಸ್ಥಾನಪಡೆದುದನ್ನು ಅವಶ್ಯ ಗಮನಿಸಬೇಕು.

ಕಾಯಕ ದೈವಿಕ: ಲಿಂಗಾಯತದಲ್ಲಿ ಕಾಯಕವೆನ್ನುವುದು ಕೇವಲ ಭೌತಿಕ ಕ್ರಿಯೆಯಲ್ಲ. "ಹೊರಗಣ ಕ್ರೀ ಆತ್ಮನೊಳಗಣ ಜ್ಞಾನ - ಇಂತೀ ಉಭಯವನರಿದು ಕಾಯಕವನೊಡಗೂಡಿ ಮಾಡಬೇಕು; ಹದಿನೆಂಟು ಕಾಯಕ"ಎನ್ನುವ ಕನ್ನಡಿ ಕಾಯಕದ ಅಮ್ಮಿದೇವ ಜ್ಞಾನಕ್ರಿಯೆಗಳ ಸಹಯೋಗದಲ್ಲಿ ಕಾಯಕ ರೂಪಗೊಳ್ಳಬೇಕೆನ್ನುವಲ್ಲಿ, ಅದು ದೈವಿಕವೆಂಬ ಧ್ವನಿ ಕೇಳಿಸುತ್ತದೆ.

ಈ ಧರ್ಮದಲ್ಲಿ ಗುರು ಲಿಂಗ ಜಂಗಮಗಳು ರತ್ನತ್ರಯವೆನಿಸಿವೆ. ಇವುಗಳಲ್ಲಿ ಲಿಂಗಪೂಜೆಯೆನ್ನುವುದು ಅಂಗವ್ಯಕ್ತಿತ್ವವು ಶುದ್ಧೀಕರಣಗೊಂಡು ಲಿಂಗವ್ಯಕ್ತಿತ್ವ ರೂಪಗೊಳ್ಳಲು ನೆರವಾಗುತ್ತದೆ. ಕಾಯಕ ತಲ್ಲೀನತೆಯಿಂದಲೂ ಇಂಥ ಶುದ್ಧೀಕರಣ ಸಾಧ್ಯವಾಗುವುದರಿಂದ, ಈ ಧರ್ಮದಲ್ಲಿ ಲಿಂಗಪೂಜೆ ಮತ್ತು ಕಾಯಕಗಳು ಎರಡೂ ಸಮಾನವೆಂಬ ಅಭಿಪ್ರಾಯವಿದೆ. ಏಕೆ? ಕಾಯಕವು ಹೆಚ್ಚಿನದಾಗಿ ಅನ್ನವನ್ನು ಉತ್ಪಾದಿಸಿಕೊಡುವುದರಿಂದ "ಕಾಯಕದಲ್ಲಿ ನಿರತನಾದರೆ ಲಿಂಗಪೂಜೆಯನ್ನಾದರೂ ಮರೆಯಬೇಕು" ಎನ್ನುತ್ತ ಪೂಜೆಗಿಂತ ಕಾಯಕಕ್ಕೆ ಹೆಚ್ಚಿನ ಮಹತ್ವಕೊಡಲಾಗಿದೆ. ಹೀಗೆ ಲಿಂಗವು (= ಶಿವನು) ಕೈಲಾಸದಲ್ಲಿರುವಂತೆ ಕಾಯಕದಲ್ಲಿಯೂ ಇರುವ ಕಾರಣ, ಶರಣರು "ಕಾಯಕವೇ (ಶಿವನ) ಕೈಲಾಸ" ವೆಂದು ಹೇಳಿದ್ದಾರೆ. ಇಷ್ಟೇ ಏಕೆ, ಕಾಯಕವು ಜಂಗಮದ ದಾಸೋಹಕ್ಕೆ ಮಾಧ್ಯಮವಾಗಬೇಕಾಗಿರುವುದರಿಂದ ಅಂದರೆ ಸಮಾಜವನ್ನು ಪೋಷಿಸಲು ಅಗತ್ಯವಾಗಿರುವುದರಿಂದ "ಕಾಯಕದಲ್ಲಿ ನಿರತನಾದರೆ ಜಂಗಮ ಮುಂದಿದ್ದರೂ ಹಂಗು ಹರಿಯಬೇಕು" ಎನ್ನುವಲ್ಲಿ ಇದರ ಮಹತ್ವವನ್ನು ಮತ್ತೂ ಎತ್ತಿ ಹಿಡಿಯಲಾಗಿದೆ. ಒಟ್ಟಾರೆ, ಈ ಧರ್ಮದಲ್ಲಿ ಲಿಂಗ(= ಪೂರ್ಣವ್ಯಕ್ತಿ), ಲಿಂಗಕ್ಕಿಂತ ಜಂಗಮ(= ಸಾಮಾಜಿಕ ಸದಸ್ಯ), ಜಂಗಮಕ್ಕಿಂತ ಕಾಯಕ ಶ್ರೇಷ್ಠವಾಗಿರುವುದರಿಂದ ಇದು ಕಾಯಕಧರ್ಮವೆನಿಸಿದೆ.

ಕಾಯಕ ತಾರತಮ್ಯರಹಿತ: ಶರಣರು ಉದಯವಾಗುವ ಹೊತ್ತಿಗೆ ಬೌದ್ಧಿಕವೃತ್ತಿ ಶ್ರೇಷ್ಠ, ದೈಹಿಕವೃತ್ತಿ ಕನಿಷ್ಠವೆಂಬ, ಇವುಗಳಲ್ಲಿಯೇ ಮತ್ತೆ ಮೇಲು ಕೀಳುಯೆಂಬ ತಾರತಮ್ಯ ಬೆಳೆದು ನಿಂತು, ಅವು ಮಾನಾಪಮಾನದ ಬಣ್ಣ ಪಡೆದಿದ್ದವು. ಶರಣರು ಈ ಕೃತಕ ತಾರತಮ್ಯವನ್ನು ಅಲ್ಲಗಳೆದು ವೃತ್ತಿಗಳಲ್ಲಿ ಸಮಾನತೆಯನ್ನು ಸಾರಿದರು.

ಕಾಸಿ ಕಮ್ಮಾರನಾದ,
ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ,

ಎಂದು ದೈಹಿಕ ಶ್ರಮವನ್ನು ಹೇಳುತ್ತಲೇ 'ವೇದವನೋದಿ ಹಾರುವನಾದ' ಎನ್ನುತ್ತ, ಬೌದ್ಧಿಕ ಶ್ರಮವನ್ನೂ ಆ ಸಾಲಿನಲ್ಲಿ ನಿಲ್ಲಿಸುತ್ತಾರೆ. ಇವು ಕ್ರಿಯಾವ್ಯತ್ಯಾಸಗಳೇ ಹೊರತು ಶ್ರೇಷ್ಠ ಕನಿಷ್ಠಗಳಲ್ಲವೆಂಬ ಅಭಿಪ್ರಾಯವಿಲ್ಲಿದೆ. ಮುಂದುವರಿದು ಈ ಬಗೆಯ ವೃತ್ತಿ ತಾರತಮ್ಯದಿಂದಾಗಿ ಬೆಳೆದಿದ್ದ ಜಾತಿ ತಾರತಮ್ಯವನ್ನು

ಸೆಟ್ಟಿಯೆಂಬೆನೆ ಸಿರಿಯಾಳನ,
ಮಾದರನೆಂಬೆನೆ ಚೆನ್ನಯ್ಯನ,
ಡೋಹರನೆಂಬೆನೆ ಕಕ್ಕಯ್ಯನ,
ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ.

ಎಂದು ಹೇಳುವ ಮೂಲಕ ನಿರಾಕರಿಸಿದರು. "ದೇವ ಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡಡೆ ನಿಮ್ಮಾಣೆ .... ಭಕ್ತರ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ" ಎಂದು ಹೇಳುವ ಮೂಲಕ, ಕಾಯಕಕ್ಕೆ ಅಂಟಿದ್ದ ಕುಲಭೇದ ತಾರತಮ್ಯವನ್ನು ಅಳಿಸಿ ಹಾಕಿದರು.

ಕಾಯಕ ಐಚ್ಛಿಕ : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮ ವೃತ್ತಿಯನ್ನು ವಂಶಪಾರಂಪರ್ಯವಾಗಿ ಮುಂದುವರಿಸುವ ವ್ಯವಸ್ಥೆಯಿಂದಾಗಿ ಜಾತಿಪದ್ಧತಿ ಗಟ್ಟಿಗೊಳ್ಳುತ್ತಲಿದ್ದಿತು. ಶರಣರು ಈ ವೃತ್ತಿ ಮತ್ತು ಜಾತಿಗಳ ಸಂಬಂಧದ ಕೊಂಡಿಯನ್ನು ತಪ್ಪಿಸಿದರು. ತನ್ನ ಆಸಕ್ತಿ ಅನುಕೂಲತೆಗಳಿಗೆ ತಕ್ಕಂತೆ ಯಾವುದೇ ವ್ಯಕ್ತಿ ಯಾವುದೇ ವೃತ್ತಿ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಮೋಳಿಗೆಯ ಮಾರಯ್ಯ ರಾಜ್ಯಾಡಳಿತದ ಬದಲು ಕಟ್ಟಿಗೆ ಕಾಯಕ ಕೈಕೊಂಡುದು ಇದಕ್ಕೆ ನಿದರ್ಶನವೆನಿಸಿದೆ.

ಕಾಯಕ ಅಧಿಕ ಫಲ ನಿರಪೇಕ್ಷಿತ : ವೈದಿಕಧರ್ಮ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು" ಎಂದು ಹೇಳುತ್ತದೆ. ಕರ್ಮದಲ್ಲಿ ಪ್ರತಿಫಲ ಅಪೇಕ್ಷಿಸಕೂಡದೆಂಬುದು ಸುಂದರವಾಗಿ ಕಾಣಬಹುದು. ಆದರೆ ಆದರ್ಶವೆನಿಸುವ ಇದು ವಾಸ್ತವದಲ್ಲಿ ಕೆಲಸದ ಆಸಕ್ತಿಯನ್ನು ಕಡಿಮೆಮಾಡುತ್ತದೆ. ಹೀಗಾಗಿ ಶರಣರು "ನೇಮದ ಕೂಲಿಯಿಂದಿನ ನಿತ್ಯ ಕಾಯಕದಲ್ಲಿ ಸಂದಿರಬೇಕು" (ನುಲಿಯ ಚಂದಯ್ಯ) ಎನ್ನುತ್ತ ಕಾಯಕಕ್ಕೆ ತಕ್ಕ ಫಲ ಪಡೆಯಬೇಕೆಂಬ ಹೊಸ ನೀತಿಯನ್ನು ಸಾರಿದರು. ಮುಂದುವರಿದು "ಹಾಗದ ಕಾಯಕವ ಮಾಡಿ, ಹಣವಡ್ಡವ ತಾಯೆಂಬಲ್ಲಿ ಸತ್ಯದ ಕಾಯಕವುಂಟೇ? ಭಕ್ತರಲ್ಲಿ ಕಾಯಕಕ್ಕೆ ಕಡಿಮೆ ತಾಯೆಂಬುದು ಅಮರೇಶ್ವರಲಿಂಗದಲ್ಲಿ ಚಿತ್ತಶುದ್ಧ ಕಾಯಕ" ಎನ್ನುತ್ತಾನೆ, ಆಯ್ದಕ್ಕಿ ಮಾರಯ್ಯ. ಇದು ಕಾಯಕದ ಸ್ವರೂಪ- ಪ್ರತಿಫಲದ ಸ್ವರೂಪಗಳನ್ನು ಹೇಳುತ್ತದೆ. ಸಣ್ಣ ಮೌಲ್ಯದ 'ಹಾಗ'ದಷ್ಟು ಕಾಯಕಮಾಡಿ, ದೊಡ್ಡ ಮೌಲ್ಯದ 'ಹಣ'ದಷ್ಟು, ಇದಕ್ಕಿಂತ ದೊಡ್ಡದಾಗಿರುವ 'ಅಡ್ಡ'ದಷ್ಟು ಪ್ರತಿಫಲ ಕೇಳುವುದು ಕಾಯಕವಲ್ಲ.[೧] ಸಾಧ್ಯವಿರುವಷ್ಟು ಕಾಯಕಮಾಡಿ, ಅಗತ್ಯವಿರುವಷ್ಟು ಕೂಲಿ ಬೇಡುವುದು ನಿಜವಾದ ಕಾಯಕವೆಂದು ಇದರ ಅರ್ಥ. ೧೨ನೆಯ ಶತಮಾನದಷ್ಟು ಪೂರ್ವದಲ್ಲಿ ಹೇಳಿದ ಈ ಮಾತು ಜಾಗತಿಕ ಮಹತ್ವದ್ದಾಗಿದೆ. ಈ ಭಾವ ಬಲಿತರೆ "ಭಕ್ತಂಗೆ ಬಡತನವಿಲ್ಲ" (ಲಕ್ಕಮ್ಮ)ವೆಂದೇ ಹೇಳಬೇಕು. ಅಂದರೆ ಲೌಕಿಕವಾಗಿ ಭಕ್ತರು ಬಡವರಲ್ಲ, ಶ್ರೀಮಂತರಂತೂ ಮೊದಲೇ ಅಲ್ಲ. ಆಧ್ಯಾತ್ಮಿಕರಾದ ಅವರು ಸಿರಿತನ, ಬಡತನ ಪ್ರಜ್ಞೆಯಿಂದ ಅತೀತರೆಂದೇ ಹೇಳಬೇಕು.

ಕಾಯಕ ದಾಸೋಹಸಹಿತ : ಕಾಯಕದ ಪರಿಕಲ್ಪನೆಯು ಸಾರ್ಥಕತೆ ಪಡೆಯುವುದು ದಾಸೋಹದಲ್ಲಿ. ದಾಸೋಹದ ತ್ರಿವಿಧ ಆಯಾಮಗಳಲ್ಲಿ ಗುರುವಿಗೆ ತನು ದಾಸೋಹ, ಲಿಂಗಕ್ಕೆ ಮನ ದಾಸೋಹ ಮಾಡಬೇಕಾದ ಭಕ್ತ, ಜಂಗಮಕ್ಕೆ ಧನದಾಸೋಹ ಮಾಡಬೇಕು. ಈ ಧನವು ಮೇಲೆ ಹೇಳಿದಂತೆ

---

೧. ಹಣ, ಹಾಗ, ಅಡ್ಡ ನಾಣ್ಯದ ಹೆಸರುಗಳು.

ಸಾಧ್ಯವಿರುವಷ್ಟು ದುಡಿದು ಅಗತ್ಯವಿರುವಷ್ಟು ಪಡೆದುದಾಗಿರಬೇಕು. ಹೀಗಲ್ಲದೆ "ಕಾಯವ ಬಳಲಿಸದೆ ತನು ಕರಗದೆ ಮನ ನೋಯದೆ ಬೇಡಿ ಕಾಡಿ ಮಾಡುವುದು ದಾಸೋಹವೇ?" ಎಂದು ಹೇಳುವಲ್ಲಿ, ಎಂಥ ಕಾಯಕದ ಪ್ರತಿಫಲ ದಾಸೋಹಕ್ಕೆ ಅರ್ಹವೆಂಬುದನ್ನು ಸ್ಪಷ್ಟಪಡಿಸಲಾಗಿದೆ. ಅಂಗ ವ್ಯಕ್ತಿತ್ವವು ದೈವೀಕರಣಗೊಂಡು ಲಿಂಗವ್ಯಕ್ತಿತ್ವವಾಗುವುದನ್ನು ಮಾತ್ರ ವೈದಿಕವು ಹೇಳಿದರೆ, ಲಿಂಗಾಯತದಲ್ಲಿ ಮುಂದುವರಿದು ಆ ಲಿಂಗವ್ಯಕ್ತಿತ್ವವೇ ಸಾಮಾಜೀಕರಣಗೊಂಡು ಜಂಗಮವ್ಯಕ್ತಿತ್ವವಾಗುವುದರಿಂದ, ಅಂಥ ಜಂಗಮ ದಾಸೋಹದಿಂದಲೂ (ಮಹಾ)ಲಿಂಗತೃಪ್ತಿ ಸಾಧ್ಯವಾಗುತ್ತದೆ. ಅದಕ್ಕಾಗಿಯೇ "ಜಂಗಮಮುಖದಲ್ಲಿ ಲಿಂಗವನರಸಿಕೋ ಎಂದರೆ ದಾಸೋಹವೆಂಬ ಪಸರವನಿಕ್ಕಿದೆ" ಎಂದು ಬಸವಣ್ಣ ಹೇಳುತ್ತಾನೆ.

ಇನ್ನೊಂದು ವಿಷಯ: ಕಾಯಕದಿಂದ ಅಂದು ಗಳಿಸಿದುದನ್ನು ಅಂದೇ ವಿನಿಯೋಗಿಸಬೇಕು. ನಾಳೆ ಬೇಕೆಂಬ ಸಂಗ್ರಹಕ್ಕೆ ಇಲ್ಲಿ ಅವಕಾಶವಿಲ್ಲ. ಒಂದು ವೇಳೆ, ಭಕ್ತನೊಬ್ಬ ನಿರ್ಧನಿಕನಾದರೆ ಬೇರೊಬ್ಬ ಭಕ್ತ ತನ್ನ ಧನವ ವೆಚ್ಚಿಸಿ ದಾಸೋಹವ ಮಾಡಿಸಿ, ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆ ಮಾಡಬೇಕೆಂದು ಚೆನ್ನಬಸವಣ್ಣ ಹೇಳುತ್ತಾನೆ.

ಧನದಲ್ಲಿ ಸಮಾನತೆ ಬಂದರೆ ಸಮಾಜದಲ್ಲಿ ಸಮಾನತೆ ತಾನಾಗಿಯೇ ಸಾಧ್ಯವಾಗುತ್ತದೆ. ಇದನ್ನು ಶರಣರು ಅರ್ಥಮಾಡಿಕೊಂಡ ಕಾರಣ, ಜಂಗಮಕ್ಕೆ 'ಧನದಾಸೋಹ' ಹೇಳುತ್ತಾರೆ. ಇಷ್ಟು ಅವಶ್ಯವಿರುವ ಹಣವನ್ನು ವೈಯಕ್ತಿಕ ದುಡಿಮೆಯಲ್ಲಿ ಗಳಿಸುವುದು, ಸಾಮಾಜಿಕ ಕಲ್ಯಾಣದಲ್ಲಿ ವಿನಿಯೋಗಿಸುವುದು- ಈ ಕಾಯಕಸಿದ್ಧಾಂತದ ಲಕ್ಷಣವಾಗಿದೆ. ಒಟ್ಟಾರೆ, ಶ್ರಮ ನನಗೆ, ಶ್ರಮದ ಫಲ ನಮಗೆ -ಎನ್ನುವುದೇ ಕಾಯಕ ದಾಸೋಹಗಳ ಸೂತ್ರವಾಗಿದೆ.

"ಒಂದು ವೇಳೆ ಬುದ್ಧನು ಭೆಟ್ಟಿಯಾದರೆ, ಧ್ಯಾನಾದಿಗಳಿಗಿಂತ ಕೆಲಸದ ಸಂದೇಶವನ್ನೇ ಹೆಚ್ಚುಕೊಡಬೇಕಾಗಿತ್ತು - ಎಂದು ಅವನನ್ನು ಕೇಳುತ್ತೇನೆ. ಒಂದುವೇಳೆ ಜ್ಞಾನದೇವ ಭೆಟ್ಟಿಯಾದರೂ ಇದನ್ನೇ ಕೇಳುತ್ತೇನೆ" ಎಂಬ ಗಾಂಧೀಜಿ ಮಾತು, ಇವರಿಗಿಂತ ಶರಣರ ಸಾಧನೆ ಮಹತ್ವದ್ದೆಂದು ವಿಶದಪಡಿಸುತ್ತದೆ. ಇದೆಲ್ಲವನ್ನು ನೋಡಿದರೆ ಶರಣರ ಸಿದ್ಧಾಂತ ಕೇವಲ ಗಗನ ಕುಸುಮದಂತೆ ನಿಷ್ಫಲ ನೆಲೆಯಲ್ಲಿ ಉಳಿಯದೆ, ನೆಲದಲ್ಲಿ ಸಫಲವಾಗಿ ಬೆಳೆದುದು ಸ್ಪಷ್ಟವಾಗುತ್ತದೆ.

ಒಟ್ಟಾರೆ, ಲಿಂಗಾಯತವೆನ್ನುವುದು ಪೂರ್ಣಧರ್ಮ, ಪೂರ್ಣದಿಂದ ಪೂರ್ಣದತ್ತ ಸಾಗಿರುವ ಧರ್ಮ. ಪೂರ್ಣಧರ್ಮವೇಕೆಂದರೆ ಕೇವಲ ಆತ್ಮ-ಪರಮಾತ್ಮ ಚಿಂತನೆಗೆ ಸೀಮಿತವಾಗದೆ, ವ್ಯಕ್ತಿ-ಸಮಾಜಗಳ ಚಿಂತನೆಯನ್ನೂ ಇದು ಅಳವಡಿಸಿಕೊಂಡಿದೆ. ಪೂರ್ಣದಿಂದ ಪೂರ್ಣದತ್ತ ಸಾಗುವ ಧರ್ಮವೇಕೆಂದರೆ 'ಧರ್ಮಗ್ರಂಥ'ವೆಂಬ ನಿರ್ದಿಷ್ಟ ಪಠ್ಯಕ್ಕೆ ಬದ್ಧವಾಗದೆ, ವಚನಸಾಹಿತ್ಯವೆಂಬ ಲಿಖಿತ ಪಠ್ಯವನ್ನು ಅವಲಂಬಿಸಿಯೂ ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತ ಸಾಗುವ ಚಲನಶೀಲ ಧರ್ಮವಾಗಿದೆ.

ವಚನಸಾಹಿತ್ಯ

ಹೀಗೆ ಪೂರ್ಣಜೀವನದ ನಾಲ್ಕು ಸಿದ್ಧಾಂತಗಳನ್ನು ಪ್ರತಿಪಾದಿಸುವುದೇ ಮುಖ್ಯ ಉದ್ದೇಶವಾಗಿರುವುದರಿಂದ ವಚನವನ್ನು ಬೈಬಲ್, ಕುರಾನ್‌ಗಳಂತೆ 'ಸಿದ್ಧಾಂತಸಾಹಿತ್ಯ' ಇಲ್ಲವೆ

'ಶಾಸ್ತ್ರಸಾಹಿತ್ಯ'ವೆಂದೇ ಕರೆಯಬಹುದಾಗಿದೆ. ಬಹುಶಃ ಈ ಕಾರಣಕ್ಕಾಗಿಯೇ ಪ್ರಾಚೀನಕಾವ್ಯಗಳು ಕವಿಸ್ತುತಿಪ್ರಸಂಗದಲ್ಲಿ ಇವರ ಹೆಸರನ್ನು ಪ್ರಸ್ತಾಪಿಸಲಿಲ್ಲ. ಹೀಗೆ ಪ್ರಸ್ತಾಪಿಸದಿದ್ದರೂ ವಚನಗಳನ್ನು ಬಿಟ್ಟರೆ ಸಾಹಿತ್ಯವೆನ್ನುವುದು ಯಾವುದು? ಎಂದು ಕೇಳುವಷ್ಟರ ಮಟ್ಟಿಗೆ ಇದು ಸಾಹಿತ್ಯಿಕವಾಗಿದೆ. ವಚನಕಾರರಿಗೆ ಮುಖ್ಯವಾಗಿದ್ದುದು ಸುಂದರ ಸಾಹಿತ್ಯಸೃಷ್ಟಿಯಲ್ಲ, ಸುಂದರ ಸಮಾಜಸೃಷ್ಟಿ. ಇಲ್ಲಿ ಸುಂದರ ಸಮಾಜಸೃಷ್ಟಿಯ ತೀವ್ರತೆ ಕಾರಣವಾಗಿ, ಅವರಿಂದ ಸುಂದರ ಸಾಹಿತ್ಯ ಆಕಾರ ಪಡೆಯಿತು. ಗಮನಿಸಬೇಕಾದ ಅಂಶವೆಂದರೆ, ಧರ್ಮಗ್ರಂಥವೆನಿಸಿದ ಬೈಬಲ್ ಕುರಾನ್‌ಗಳು ಆಯಾ ಭಾಷೆಗಳಲ್ಲಿ ಸಾಹಿತ್ಯದ ಭಾಗವೆಂದು ಪರಿಗಣಿತವಾಗಿಲ್ಲವಾದರೂ ವಚನ ಪ್ರಕಾರ ಮಾತ್ರ ಸಾಹಿತ್ಯದ ಭಾಗವೆಂದು ಪರಿಗಣಿತವಾಗಿದೆ; "ವಚನಯುಗ"ವೆಂಬ ಒಂದು ಘಟ್ಟವೇ ನಮ್ಮ ಸಾಹಿತ್ಯಚರಿತ್ರೆಯಲ್ಲಿ ಸೃಷ್ಟಿಯಾಗಿದೆ.

ಈ ಕಾಲದ ವಚನ ವೊತ್ತವನ್ನು ಆಧ್ಯಾತ್ಮನಿಷ್ಠ, ಸಮಾಜಧರ್ಮನಿಷ್ಠ, ಲಿಂಗಾಯತಧರ್ಮನಿಷ್ಠವೆಂದು ವರ್ಗೀಕರಿಸಬಹುದು. ಆಧ್ಯಾತ್ಮಕ್ಕೆ ಅಲ್ಲಮಪ್ರಭುಗಳ, ಸಮಾಜಧರ್ಮಕ್ಕೆ ಬಸವಣ್ಣನವರ, ಲಿಂಗಾಯತಧರ್ಮಕ್ಕೆ ಚೆನ್ನಬಸವಣ್ಣನವರ ವಚನಗಳು ನಿದರ್ಶನವೆನಿಸಿವೆ. ಈ ಮೂರರಲ್ಲಿ ಚೆನ್ನಬಸವಣ್ಣನವರ ರಚನೆಗಳೇ ಮುಂದಿನ ಮತೀಯ ಲಿಂಗಾಯತರಿಗೆ ಮುಖ್ಯವೆನಿಸಿದ ಕಾರಣ, ಬಸವಣ್ಣನವರ ವಚನಗಳನ್ನು ಒಬ್ಬರು, ಅಲ್ಲಮನ ವಚನಗಳನ್ನು ಇಬ್ಬರು (ಮಹಾಲಿಂಗದೇವ, ಮಗ್ಗೆಯ ಮಾಯಿದೇವ), ಚೆನ್ನಬಸವಣ್ಣನವರ ವಚನಗಳನ್ನು ಆರು ಜನರು ಷಟ್‌ಸ್ಥಲಕ್ರಮದಲ್ಲಿ ಜೋಡಿಸಿದ್ದಾರೆ. ಹೀಗೆ ಹೆಚ್ಚು ಅಭ್ಯಾಸಕ್ಕೆ ಗುರಿಪಡಿಸಿದ ಕಾರಣ, ಚೆನ್ನಬಸವಣ್ಣನವರ ವಚನಗಳಿಗೆ ಮಿಕ್ಕ ಇಬ್ಬರಿಗಿಂತ ಪ್ರಕ್ಷಿಪ್ತತೆ- ಪಾಠಾಂತರಗಳ ದಾಳಿ ಅಧಿಕವಾಗಿದೆಯೆಂದೇ ಹೇಳಬಹುದು. ೧೫ನೆಯ ಶತಮಾನದ ತರುವಾಯ ಈ ವಚನಗಳ ಸಂಕಲನ, ವ್ಯಾಖ್ಯಾನಗಳೊಂದಿಗೆ ಹೊಸ ವಚನಗಳು ಆಗಾಗ ಹುಟ್ಟುತ್ತ ಬಂದಿವೆಯಾದರೂ, ಮೊದಲಿನ ಸಾಹಿತ್ಯಿಕ ಸೊಗಸು ಹಿಂದೆ ಬಿದ್ದು, ಶಾಸ್ತ್ರ ಪ್ರತಿಪಾದನೆ ಮುಖ್ಯಸ್ಥಾನ ಪಡೆಯಿತು.

ವಚನಸಾಹಿತ್ಯದ ಸ್ವರೂಪ :

ನಮ್ಮ ನಾಡಿನಲ್ಲಿ ವಚನಸಾಹಿತ್ಯಕ್ಕೆ ಎಂಟುನೂರು ವರ್ಷಗಳ ನಿರಂತರ ಇತಿಹಾಸವಿದೆ. ಆರಂಭದಲ್ಲಿ 'ಸೂಳ್ನುಡಿ'ಯೆಂದೂ, ಆಮೇಲೆ 'ವಚನ'ವೆಂದೂ, ತರುವಾಯ ಕ್ವಚಿತ್ತಾಗಿ 'ವಚನಾಗಮ'ವೆಂದೂ ಇದನ್ನು ಕರೆಯುತ್ತ ಬಂದಿದ್ದಾರೆ. 'ಸೂಳ್ನುಡಿ' ಶಬ್ದಕ್ಕೆ ಅನುಭಾವಿಗಳ ಸಂವಾದದಲ್ಲಿ ಆಕಾರ ಪಡೆದ ಸಾಹಿತ್ಯವೆಂದು ಅರ್ಥ. 'ವಚನ'ವೆಂಬುದಕ್ಕೆ ಪ್ರತಿಜ್ಞಾವಾಕ್ಯವೆಂಬ ಅಂದರೆ ಆತ್ಮಸಾಕ್ಷಿಯಾಗಿ ಅನುಭಾವಿಗಳು ವ್ಯಕ್ತಪಡಿಸಿದ ನುಡಿಯೆಂಬ ಅರ್ಥವಿರುವಂತಿದೆ. ಸೂಳ್ನುಡಿ ಕಾಲಘಟ್ಟದಲ್ಲಿ 'ಸತ್ಸಂಗ' ಹೆಸರಿನ ಸಣ್ಣ ಸಂಘಟನೆಯ ಸಣ್ಣ ಸೃಷ್ಟಿಯಾಗಿರಬಹುದಾದ ಇದು, ವಚನ ಕಾಲಘಟ್ಟದಲ್ಲಿ 'ಅನುಭವ ಮಂಟಪ'ವೆಂಬ ದೊಡ್ಡ ಸಂಘಟನೆಯ ದೊಡ್ಡ ಸೃಷ್ಟಿಯಾಯಿತು. ಮುಂದೆ ಇದಕ್ಕೆ ಬಳಸಲಾದ 'ವಚನಾಗಮ'ವೆಂಬ ಹೆಸರು, ಇದು ಸಾಂಪ್ರದಾಯಿಕ ಶಾಸ್ತ್ರ(=ಆಗಮ) ಶಿಸ್ತಿಗೆ ಒಳಪಟ್ಟುದನ್ನು ಸೂಚಿಸುವಂತಿದೆ.

ವಚನಸಾಹಿತ್ಯದಲ್ಲಿ "ವಚನ", "ರಚನೆ"ಯೆಂಬ ಎರಡು ಶಬ್ದಪ್ರಯೋಗಗಳು ಕಂಡುಬರುತ್ತವೆ. ಕವಿಯ ನಡೆ ಹೇಗೇ ಇರಲಿ, ನುಡಿ ಸುಂದರವಾಗಿರುವುದು ರಚನೆ. ಸುಂದರ ನಡೆಯುವನ ಸುಂದರ ನುಡಿ ವಚನ. ಇದು ಗದ್ಯವೂ ಇರಬಹುದು, ಪದ್ಯವೂ ಇರಬಹುದು. ಪದ್ಯವೇ ಆಗಿದ್ದರೂ ಸರ್ವಜ್ಞನ

ಬರವಣಿಗೆಯನ್ನು ವಚನವೆಂದು ಕರೆಯುತ್ತ ಬಂದಿರುವುದೂ, ಮುಪ್ಪಿನ ಷಡಕ್ಷರಿ ಮೊದಲಾದವರ ಹಾಡುಗಳನ್ನು ಹಸ್ತಪ್ರತಿಗಳಲ್ಲಿ ಕೆಲವೊಮ್ಮೆ ವಚನವೆಂದು ಕರೆದುದೂ, ಈ ಕಾರಣಕ್ಕಾಗಿ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ನಮ್ಮ ಕವಿಗಳದು ರಚನೆ, ಶರಣರದು ವಚನ. ಹೀಗೆ ಸುಂದರ ನಡೆಯೇ ಸುಂದರ ನುಡಿಯಾಗಿರುವ ಇದರ ಇನ್ನೊಂದು ಲಕ್ಷಣ ಸಾಮಾಜಿಕ ಜವಾಬ್ದಾರಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ. ಇದನ್ನೇ ಬಸವಣ್ಣನವರು "ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ" ಅಂದರೆ ಸಾಮಾಜಿಕ ಜವಾಬ್ದಾರಿಗೆ ಮತ್ತು ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಟ್ಟದಂತೆ ಹಾಡುತ್ತೇನೆ - ಎಂದು ವ್ಯಾಖ್ಯಾನಿಸಿದ್ದಾರೆ. ಕಾವ್ಯಮೀಮಾಂಸೆಯ ಇತಿಹಾಸದಲ್ಲಿಯೇ ಅಪೂರ್ವ ಹೇಳಿಕೆಯಾಗಿರುವ ಇದು, ಜಾಗತಿಕ ಮಹತ್ವದ್ದಾಗಿದೆ.

ಶರಣರು ಕರ್ನಾಟಕ ಕ್ಷಿತಿಜದ ಮೇಲೆ ಹುಟ್ಟಿ ಬರುವ ವರೆಗೆ ನಮ್ಮ ಸಾಹಿತ್ಯಕ್ಕೆ ಕನ್ನಡ ಕಥೆಗಳು ವಸ್ತುವಾಗಿರಲೇ ಇಲ್ಲ. ಪ್ರಾಕೃತ ಕೃತಿಗಳ ಟೀಕೆ-ವ್ಯಾಖ್ಯಾನ (ಶ್ಯಾಮಕುಂದಾಚಾರ್ಯನ ಉಭಯಸಿದ್ಧಾಂತ ಇತ್ಯಾದಿ), ಸಂಸ್ಕೃತ- ಪ್ರಾಕೃತ ಕೃತಿಗಳ ಸೃಜನಶೀಲ ಅನುವಾದ (ಅಸಗನ ಕರ್ಣಾಟ ಕುಮಾರಸಂಭವ ಕಾವ್ಯ, ದುರ್ಗಸಿಂಹನ ಕರ್ಣಾಟ ಪಂಚತಂತ್ರ), ಸಂಸ್ಕೃತ ಕೃತಿಗಳ ಅಪುರಾಣೀಕರಣ (ಪಂಪಭಾರತ) ಮತ್ತು ಮರುಪುರಾಣೀಕರಣ (ಪಂಪರಾಮಾಯಣ) ಇತ್ಯಾದಿ ಉತ್ತರಭಾರತದ ಅನ್ಯ ಜೈನ ಮತ್ತು ವೈದಿಕ ಕಥೆಗಳನ್ನು ಬಳಸಿದ ಸೃಜನಕ್ರಿಯೆ ರೂಢಿಯಲ್ಲಿದ್ದಿತು. ಈಗ "ವಿದ್ಯೆಯೆಂದರೆ ರಾಮಾಯಣ ಮಹಾಭಾರತವಲ್ಲ" ಎನ್ನುತ್ತ ಶರಣರು ಈ ಅನ್ಯಸಂಸ್ಕೃತಿಗೆ ತೋರಿದ ಸ್ವಸಂಸ್ಕೃತಿಯ ಪ್ರತಿಕ್ರಿಯೆ ಎನ್ನುವಂತೆ ವಚನಗಳನ್ನು ಸೃಷ್ಟಿಸಿದರು.

ಮಾಧ್ಯಮಕ್ಕೆ ಸಂಬಂಧಪಟ್ಟಂತೆ, ಸಂಸ್ಕೃತದ ಅತಿಯಾದ ಮಿಶ್ರಣದ ಮೂಲಕ "ಕನ್ನಡ ಮಾತು" ಮತ್ತು ರಾಜಸ್ತುತಿಗೆ ಉಪಕರಣವಾಗುವ ಮೂಲಕ "ಮಾತು" ಮಲಿನವಾಗಿದ್ದವು.

ಕಲ್ಲಿಯ ಹಾಕಿ ನೆಲ್ಲವ ತಳಿದು ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ;
ವಾಗದ್ವೈತವ ಕಲಿತು, ಸಂಸ್ಕೃತದ ಮಾತಿನ ಪಸರವ ಮುಂದಿರಿಸಿಕೊಂಡು,
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ ಅದೇತರ ನುಡಿ?
ಮಾತಿನ ಮರೆ. (ನಗೆಯ ಮಾರಿತಂದೆ)

ಇಂಥ ವಚನಗಳ ಮೂಲಕ ಸಂಸ್ಕೃತ ಮಿಶ್ರಣದಿಂದ ಜಟಿಲವಾಗಿದ್ದ ಕನ್ನಡ ಮಾತಿನ ಮಾಲಿನ್ಯವನ್ನು,

ಖ್ಯಾತಿಗೆ ಜೋತು, ಲಾಭಕ್ಕೆ ಲೋಭಿಸಿ,
ಪೂಜೆಯ ಮಾಜದೆ ರಾಜದ್ವಾರದಲ್ಲಿ ಸುಳಿದು ಬಳಲುವ
ಹಿರಿಯರೆಲ್ಲರೂ ಇತ್ತಿತ್ತಲಲ್ಲದೆ, ಅತ್ತತ್ತಲೆಲ್ಲಿಯದೋ? (ಆದಯ್ಯ)

ಇಂಥ ವಚನಗಳ ಮೂಲಕ ಸಾಮಾನ್ಯರ ಸ್ತುತಿಗೆ ನಿರತವಾಗಿದ್ದ ಮಾತಿನ ಮಾಲಿನ್ಯವನ್ನು ನೀಗಿಸಿದರು. ಅಂಗಪಾತಳಿಯ ಭಾಷೆಯನ್ನು ನಿರಾಕರಿಸಿ 'ಲಿಂಗವಶದಿಂದ ಬಂದ ನುಡಿ' ಬಳಕೆಗೆ ಒತ್ತುಕೊಟ್ಟು ಭವಿಯಾಗಿದ್ದ ಭಾಷೆ-ಸಾಹಿತ್ಯಗಳನ್ನು ಭಕ್ತನನ್ನಾಗಿಸಿದರು; ಪದಾರ್ಥವಾಗಿದ್ದ ಅವುಗಳನ್ನು ಪ್ರಸಾದವನ್ನಾಗಿಸಿದರು.

ನಾವು ಪ್ರಚುರಗೊಳಿಸಿರುವ "ಭಾರತೀಯ ಕಾವ್ಯಮೀಮಾಂಸೆ"ಯೆನ್ನುವುದು ವೈದಿಕ ಮನಸ್ಸಿನ ಸೃಷ್ಟಿ. ಭಾರತದ ಸಂದರ್ಭದಲ್ಲಿ ಆರ್ಯಸಂಸ್ಕೃತಿಗೆ ಪ್ರತಿಯಾಗಿ ಆರ್ಯೇತರ ಸಂಸ್ಕೃತಿಯೊಂದು ಬೆಳೆದುಬಂದಿದೆ.

ಹೀಗಾಗಿ ಆರ್ಯಸಂಸ್ಕೃತಿಯ ವೈದಿಕ ಕಾವ್ಯಮೀಮಾಂಸೆಗೆ ಸಮಾಂತರವಾಗಿ ಆರ್ಯೇತರ ಸಂಸ್ಕೃತಿಯ ಅವೈದಿಕ ಕಾವ್ಯಮೀಮಾಂಸೆಯೂ ಹುಟ್ಟಿಕೊಂಡಿರುವುದು ಸಹಜವೆನಿಸುತ್ತದೆ. ಈ ಅವೈದಿಕ ಕಾವ್ಯಮೀಮಾಂಸೆಯು ಭಾವವನ್ನು ದೇಹಭಾವ-ವಿದೇಹಭಾವವೆಂದೂ, ಭಾಷಿಕ ಅಭಿವ್ಯಕ್ತಿಯನ್ನು ದೇಹವಾಣಿ - ವಿದೇಹವಾಣಿಯೆಂದೂ ಗುರುತಿಸಿದೆ. ಎಂಟು ರಸಗಳನ್ನು ಪ್ರತಿಪಾದಿಸುವುದೇ ದೇಹವಾಣಿ, ಒಂಬತ್ತನೆಯ ಶಾಂತರಸವನ್ನೂ ಒಳಗುಮಾಡಿಕೊಂಡು ಪ್ರತಿಪಾದಿಸುವುದೇ ವಿದೇಹವಾಣಿ ಎಂದು ಕರೆದಿದೆ. ಇದನ್ನೇ ಜೈನರು ಕ್ರಮವಾಗಿ ಲೌಕಿಕ ಸಾಹಿತ್ಯ - ಆಗಮಿಕ ಸಾಹಿತ್ಯವೆಂದು, ವಚನಕಾರರು ಕಾಯಸಾಹಿತ್ಯ-ಆತ್ಮಸಾಹಿತ್ಯವೆಂದು ಕರೆದಿದ್ದಾರೆ. "ಕಾಯಸಾಹಿತ್ಯ ಎಲ್ಲರಿಗೂ ಉಂಟು, ಆತ್ಮಸಾಹಿತ್ಯ ಅಪೂರ್ವ"ವೆನ್ನುವ ಶರಣರು ಕೇವಲ ಕಾಯಸಾಹಿತ್ಯವಾದಿಗಳಲ್ಲ, ಆತ್ಮಸಾಹಿತ್ಯವಾದಿಗಳೂ ಹೌದು. ಹೀಗಾಗಿ ಇಂಥ ಸಾಹಿತ್ಯವಾಗಿರುವ ವಚನಗಳನ್ನು "ಪೂರ್ಣಜೀವನಸಿದ್ಧಾಂತ ಸಾಹಿತ್ಯ"ವೆಂದು ಕರೆಯಬೇಕಾಗುತ್ತದೆ. ಇದನ್ನು ರಚಿಸಿದವರು ಮೂಲತಃ ಜೀವನದ ಬೇರೆ ಬೇರೆ ವೃತ್ತಿ ನೆಲೆಗಳಿಂದ, ಅನುಭವದ ಬೇರೆ ಬೇರೆ ಮೂಲಗಳಿಂದ (ಮೂಲತಃ ಶಂಕರದಾಸಿಮಯ್ಯ ವೈದಿಕ ಬ್ರಾಹ್ಮಣ, ಮನುಮುನಿ ಗುಮ್ಮಟದೇವ ಜೈನ, ಗೋರಕ್ಷ ನಾಥಪಂಥಿ, ಪಂಡಿತಾರಾಧ್ಯ ಶುದ್ಧಶೈವ, ಉಳಿಯುಮೇಶ್ವರ ಚಿಕ್ಕಯ್ಯ ಕಾಳಾಮುಖ, ಚೆನ್ನಯ್ಯ ಮಾದಿಗ ಇತ್ಯಾದಿ) ಬಂದ ಕಾರಣ, ಅವರ ವಚನವಾಣಿಗೆ ಸಂಕೀರ್ಣತೆ, ಸೌಂದರ್ಯಗಳು ಪ್ರಾಪ್ತವಾದವು.

ವಚನ - ಕೇವಲ ಪ್ರಕಾರವಲ್ಲ, ಪರಂಪರೆ :

ವಚನವೆನ್ನುವುದು ಕನ್ನಡ ಸಂದರ್ಭದಲ್ಲಿ ಕೇವಲ ಒಂದು ಸಾಹಿತ್ಯಿಕ ಪ್ರಕಾರವಲ್ಲ, ಒಂದು ಸಾಂಸ್ಕೃತಿಕ ಪರಂಪರೆ. ಸಾಹಿತ್ಯಪ್ರಕಾರ ಕಾಲಮಿತಿಯುಳ್ಳದಾಗಿರುತ್ತದೆ; ಪರಂಪರೆ ಕಾಲಾತೀತವಾಗಿರುತ್ತದೆ. ಪ್ರಕಾರದ ಹಿಂದೆ ಒಂದು ನಿರ್ದಿಷ್ಟ ಧೋರಣೆಯಿದ್ದು, ಪೂರ್ಣಗೊಳ್ಳುತ್ತಲೇ ಅದು ಸ್ಥಗಿತವಾಗುತ್ತದೆ. ಪರಂಪರೆ ಮಾತ್ರ ಎಲ್ಲ ಕಾಲ ಎಲ್ಲ ಧೋರಣೆಗಳಿಗೆ ಮೈ ಒಡ್ಡಿಕೊಳ್ಳುತ್ತ ಚಲಿಸುವ ಲಕ್ಷಣ ಹೊಂದಿರುತ್ತದೆ. ವಚನ ಕೇವಲ ಪ್ರಕಾರವಾಗಿ ಉಳಿಯದೆ ಚಲನಶೀಲ ಪರಂಪರೆಯಾಗಿ ಬೆಳೆಯಲು ಕಾರಣ, ಶರಣರು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಮುಕ್ತಧೋರಣೆಯವರಾಗಿರುವುದು. ಈ ಕಾರಣದಿಂದಾಗಿ, ಸ್ಥಾವರಪ್ರಜ್ಞೆಯ ಕನ್ನಡದ ಬೇರೆ ಸಾಹಿತ್ಯಪ್ರಕಾರಗಳು ಅಂದಂದೇ ಸ್ಥಗಿತವಾದರೂ, ಜಂಗಮಪ್ರಜ್ಞೆಯ ವಚನಪ್ರಕಾರ ಮಾತ್ರ ಮುಂದಿನ ವರ್ಷಗಳಲ್ಲಿ ತೋಂಟದ ಸಿದ್ಧಲಿಂಗ, ಸ್ವತಂತ್ರ ಸಿದ್ಧಲಿಂಗ, ಷಣ್ಮುಖ ಶಿವಯೋಗಿ ಮೊದಲಾದವರಿಂದ ಮುನ್ನಡೆದು, ಈಗಲೂ ಸೃಷ್ಟಿಯಾಗುತ್ತಲಿದೆ.

ಹೀಗೆ ಆಶಯದಲ್ಲಿ ಮುಕ್ತವಾಗಿರುವ ಈ ಸಾಹಿತ್ಯ, ಆಕಾರದಲ್ಲಿ 'ಮುಕ್ತಕ' ರೂಪದ್ದಾಗಿದೆ. ಇಂಥ ಸಾಹಿತ್ಯಕ್ಕೆ ಬಿಡಿಯಾಗಿ ನೋಡಿದರೆ ಮುತ್ತಿನ ಬೆಲೆ, ಸರಗೊಳಿಸಿದರೆ ಮುತ್ತಿನ ಹಾರದ ಬೆಲೆಯಿರುತ್ತದೆ. ಇದನ್ನು ಅರ್ಥಮಾಡಿಕೊಂಡ ತರುವಾಯದವರು ಈ ಬಿಡಿ ರಚನೆಗಳನ್ನು ಬಳಸಿ 'ಸಕಲಪುರಾತನರ ವಚನಗ'ಳಂಥ ಸಂಗ್ರಹಕೃತಿಗಳನ್ನೂ, 'ಏಕೋತ್ತರಶತಸ್ಥಲ'ಗಳಂಥ ಸಂಕಲನಕೃತಿಗಳನ್ನೂ, 'ಶೂನ್ಯಸಂಪಾದನೆ'ಯಂಥ ಸಂಪಾದನಕೃತಿಗಳನ್ನೂ ಸಂಯೋಜಿಸಿದರು. ಹೀಗೆ ವಚನಸಾಹಿತ್ಯ ಬಿಡಿಯಲ್ಲಿ ಸೃಜನ, ಇಡಿಯಲ್ಲಿ ಸಂಯೋಜನ ಎಂಬ ಎರಡು ಪ್ರಕಾರ ಪರಂಪರೆಗಳಲ್ಲಿ ಬೆಳೆದುಬಂದಿದೆ.

ಈ ರೀತಿ ಸೃಜನ, ಸಂಯೋಜನ ರೂಪಗಳಲ್ಲಿ ಮುಂದುವರಿಯುವುದರೊಂದಿಗೆ ಇದು ಕವಿಸಾಹಿತ್ಯಕ್ಕೂ ಪ್ರೇರಣೆ ನೀಡಿದೆ, ಪ್ರಭಾವ ಬೀರಿದೆ. ಹರಿಹರನ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಸಿಂಗಿರಾಜನ ಸಿಂಗಿರಾಜಪುರಾಣ ಮೊದಲಾದ ಕೃತಿಗಳಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ಇದು ಅವತರಿಸಿದೆ. ಸರ್ವಜ್ಞನ ವಚನ, ಮುಪ್ಪಿನ ಷಡಕ್ಷರಿಗಳಂಥವರ ಸ್ವರವಚನಗಳಲ್ಲಿಯೂ ಇದರ ದಟ್ಟ ಪ್ರಭಾವವನ್ನು ಗುರುತಿಸಬಹುದಾಗಿದೆ. ಹಾಗೆ ನೋಡಿದರೆ ಪ್ರಾಚೀನ ಲಿಂಗಾಯತ ವಾಙ್ಮಯವೆನ್ನುವುದು ವಚನ ಚಳುವಳಿಗೆ ಬರೆದ ಸಾಹಿತ್ಯಿಕ ವ್ಯಾಖ್ಯಾನವಾಗಿದೆ.

ಸಾಹಿತ್ಯದಂತೆ ಸಾಹಿತ್ಯೇತರ ಶಾಖೆಗಳೂ ಇದರ ಪ್ರಭಾವದಲ್ಲಿ ಬೆಳೆದಿವೆ. ಧಾರ್ಮಿಕ ಕ್ಷೇತ್ರವನ್ನು ಗಮನಿಸಿ ಹೇಳುವುದಾದರೆ, ಬಿಜ್ಜಳನ ಕಾಲದಲ್ಲಿ ಶರಣ ಚಳುವಳಿಯ ಒಳಗೆ ಸೇರಿದ್ದ ನಕುಲೀಶ, ಪಾಶುಪತ, ಕಾಪಾಲಿಕ, ಶ್ರೋತ್ರೀಯಶೈವಗಳೆಂಬ ಚತುಃಶೈವಗಳು ಪ್ರೌಢದೇವರಾಯನ ಕಾಲದಲ್ಲಿ ತಮ್ಮ ಪುರೋಹಿತಪ್ರಜ್ಞೆಯನ್ನು ಜಾಗ್ರತಗೊಳಿಸಿಕೊಂಡು, ಲಿಂಗಾಯತವನ್ನು ವೀರಶೈವೀಕರಣಗೊಳಿಸತೊಡಗಿದವು. ಇದರಿಂದಾಗಿ ಅಂದು ಕಲ್ಯಾಣದ ಅತೃಪ್ತಿಯ ಪರಿಸರದಲ್ಲಿ 'ಅನುಭಾವಿ'ಗಳು ಹುಟ್ಟಿದ್ದರೆ, ಇಂದು ವಿಜಯನಗರದ ಸಂತೃಪ್ತಿಯ ಪರಿಸರದಲ್ಲಿ 'ಆಚಾರ್ಯ'ರು (ಚತುರಾಚಾರ್ಯ > ಪಂಚಾಚಾರ್ಯ) ಹುಟ್ಟಿದರು. ಅಂದರೆ ಶರಣಸಂಸ್ಕೃತಿಯ ಜಂಗಮರೂಪವೆನಿಸುವ 'ಅನುಭಾವಿ'ಗಳಿಗೆ ಬದಲು ಸ್ಥಾವರರೂಪವೆನಿಸುವ 'ಆಚಾರ್ಯ'ರು ಆಕಾರ ಪಡೆದರು. ಇದರಿಂದ ಭೀತರಾಗಿ ಈ ಮೊದಲು ಶರಣ ಚಳುವಳಿಯ ಒಳಗೆ ಬಂದಿದ್ದ ನಾಥಪಂಥೀಯ ಅವಧೂತರೆಂಬ ಸಾಮಾನ್ಯಜನವರ್ಗ ಹೊರನಡೆದು, 'ಕೊಡೇಕಲ್ಲ ಬಸವಣ್ಣ- ಮಂಟೇಸ್ವಾಮಿ' ಸಂಪ್ರದಾಯವನ್ನು ಹುಟ್ಟಿಸಿಕೊಂಡರು. ಹೀಗೆ ಸ್ಥಿತ್ಯಂತರವಾದರೂ ವಚನಕಾರರ, ವಚನಗಳ ಪ್ರಭಾವದಿಂದ ಪಾರಾಗಲು ಇವೆರಡಕ್ಕೂ (ಆಚಾರ್ಯ ಮತ್ತು ಅವಧೂತ) ಸಾಧ್ಯವಾಗಲಿಲ್ಲ. ಇವುಗಳಲ್ಲಿ ಆಚಾರ್ಯ ಪರಂಪರೆಯವರು ತಮ್ಮ ಧಾರ್ಮಿಕ ಗ್ರಂಥದ ಆವಶ್ಯಕತೆಯನ್ನು ಪೂರೈಸಿಕೊಳ್ಳಲು ವಚನಸಿದ್ಧಾಂತವನ್ನು ಬಳಸಿಕೊಂಡು, 'ಸಿದ್ಧಾಂತ ಶಿಖಾಮಣಿ' ಮೊದಲಾದ ಸಂಸ್ಕೃತ ಶಾಸ್ತ್ರಗ್ರಂಥಗಳನ್ನು ಹುಟ್ಟಿಸಿಕೊಂಡರು. ಇತ್ತ ಕೊಡೇಕಲ್ಲ-ಮಂಟೇಸ್ವಾಮಿ ಇತ್ಯಾದಿ ಅವಧೂತ ಸಂಪ್ರದಾಯದವರು ತಮ್ಮ ವಚನ, ಹಾಡುಗಳಲ್ಲಿ ಶರಣಮೌಲ್ಯ, ಶರಣಸ್ಮರಣೆಗಳಿಗೆ ಆದ್ಯತೆ ನೀಡಿದರು. ಹೀಗೆ ಆಚಾರ್ಯ, ಅವಧೂತವೆಂಬ ಎರಡು ಕವಲುಗಳು ಸಿಡಿದು ನಿಲ್ಲುವಲ್ಲಿ, ಬಸವಾದಿಗಳ ಅನುಭಾವ ಪರಂಪರೆ ಅನಾಥವಾಯಿತು. ಇದರ ರಕ್ಷಣೆ, ಮುಂದುವರಿಕೆಗೆ ತೋಂಟದ ಸಿದ್ಧಲಿಂಗಯತಿಗಳು ಕಟಿಬದ್ಧರಾಗಿ ನಿಂತು, ಕಳೆದು ಹೋಗುವುದರಲ್ಲಿದ್ದ ಅನುಭವ ಮಂಟಪ ಪರಂಪರೆಯನ್ನು ಶೂನ್ಯಸಂಪಾದನೆ ಕೃತಿಯ ಮೂಲಕ ಶಾಬ್ದಿಕ ಅನುಭವ ಮಂಟಪವನ್ನಾಗಿ ಮರುಸೃಷ್ಟಿಸಲು ಶಿಷ್ಯರಿಗೆ ಪ್ರೋತ್ಸಾಹಿಸಿದರು. ಇದೆಲ್ಲವನ್ನು ನೋಡಿದರೆ ನಮ್ಮ ನಾಡಿನಲ್ಲಿ ವಚನಸಂಸ್ಕೃತಿ ಬೇರೆ ಬೇರೆ ರೂಪಗಳಲ್ಲಿ ಜೀವಜಲವಾಗಿ ಪ್ರವಹಿಸುತ್ತ ಬಂದಿದೆಯೆಂದೇ ಹೇಳಬಹುದು.

ಇವುಗಳಿಗಿಂತ ಮುಖ್ಯವಾದುದು, ಈ ಸಾಹಿತ್ಯ ಇತಿಹಾಸದುದ್ದಕ್ಕೂ ಜನರ ಮಧ್ಯದಲ್ಲಿ ಜೀವಂತವಾಗಿದ್ದು, ಪ್ರಭಾವಿಸುತ್ತ ಬಂದುದು. ಶಿವತತ್ತ್ವಚಿಂತಾಮಣಿಯು ವಚನಗಾಯಕ ಹವಳಿಗೆ ಬೊಮ್ಮಣ್ಣನನ್ನು ಹೆಸರಿಸುತ್ತದೆ. ತ್ರಿಭುವನತಾತನೊಂದಿಗೆ ವಾದಕ್ಕೆ ನಿಂತ ಕೆರೆಯ ಪದ್ಮರಸನಿಗೆ ನೆರವಾಗಲು

ಹಂಪಿ ಮೊದಲಾದ ಊರುಗಳಿಂದ ದ್ವಾರಸಮುದ್ರಕ್ಕೆ ನಡೆದ ರಾಘವಾಂಕಾದಿಗಳು ದಾರಿಯಲ್ಲಿ ಶರಣರ ವಚನಗಳನ್ನು ಹಾಡುತ್ತಲಿದ್ದರೆಂದು ಪದ್ಮರಾಜಪುರಾಣ ತಿಳಿಸುತ್ತದೆ. ಕೆಳದಿ ಅರಸು ಬೂದಿಬಸಪ್ಪ ನಾಯಕನು ಹೊಳೆಗೆ ಹಾಕಿದ ಬಸವಣ್ಣನವರ ವಚನಗಳಲ್ಲಿ ನಿಜವಚನಗಳು ಹರಿದು ಹೋಗದೆ ಪ್ರವಾಹವಿರುದ್ಧ ಈಸಿ ಬಂದವೆಂದು ರೂಪಕ ರೀತಿಯಲ್ಲಿ 'ನಿರ್ಣಯಪುರಾಣ' ಹೇಳುತ್ತದೆ. ವಚನಗಳು ಇಂದಿಗೂ ಬಹುಜನ ಸಮಾಜವನ್ನು ಪ್ರಭಾವಿಸುತ್ತಲಿವೆ. ಇದರಿಂದ, ಕಾವ್ಯಕವಿಗಳ ಸಾಹಿತ್ಯಕ್ಕಿಂತ ಸಂತಕವಿಗಳ ಸಾಹಿತ್ಯವೇ ಸಮಾಜವನ್ನು ತಿದ್ದುವಲ್ಲಿ ಮುಖ್ಯಪಾತ್ರವಹಿಸುತ್ತದೆ-ಎಂಬ ವಿದ್ವಾಂಸರ ಅಭಿಪ್ರಾಯ ವಚನಸಾಹಿತ್ಯಕ್ಕೆ ಸಂಪೂರ್ಣ ಅನ್ವಯಿಸುವುದೆಂದು ಹೇಳಬಹುದು.

ಪ್ರಸ್ತುತ ಯೋಜನೆ

ಜಗತ್ತಿನಲ್ಲಿ ಬೈಬಲ್, ಭಾರತದಲ್ಲಿ ಭಗವದ್ಗೀತೆ, ಕರ್ನಾಟಕದಲ್ಲಿ ವಚನ -ಇವು ಬಹುಜನರನ್ನು ಪ್ರಭಾವಿಸಿದ ಸಾಹಿತ್ಯವೆನಿಸಿವೆ. ಹೀಗಿದ್ದೂ ವಚನಗಳು ಬೈಬಲ್, ಭಗವದ್ಗೀತೆಗಳಂತೆ ಅನುವಾದದ ಮೂಲಕ ಬಹುಜನರನ್ನು ತಲುಪಲಿಲ್ಲ. ಆದುದರಿಂದ ಈ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ಅನುವಾದಿಸುವುದು, ಈ ಯೋಜನೆಯ ಉದ್ದೇಶವಾಗಿದೆ. ಈ ದೃಷ್ಟಿಯಿಂದ ಶರಣರ ಮಹತ್ವಪೂರ್ಣ ವಚನಗಳನ್ನು ಆಯ್ದುಕೊಂಡು, ಭಾರತ ಸಂವಿಧಾನ ಮಾನ್ಯಮಾಡಿರುವ ಎಲ್ಲ ೨೪ ಭಾಷೆಗಳಿಗೆ ಅನುವಾದಿಸುವ ಯೋಜನೆಯನ್ನು ಕರ್ನಾಟಕ ಸರಕಾರದ ಉದಾರ ನೆರವಿನಿಂದ ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಮೈಸೂರಿನ ಭಾರತೀಯ ಭಾಷಾಸಂಸ್ಥಾನದಲ್ಲಿ ೨೩-೯-೨೦೦೪ ರಂದು ಸೇರಿದ್ದ ಈ ಯೋಜನೆಯ ಮೊದಲ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಲಾಯಿತು.

೧. ಮೊದಲ ಹಂತವಾಗಿ ಕನ್ನಡ, ಮರಾಠಿ, ತೆಲುಗು, ತಮಿಳು, ಬೆಂಗಾಲಿ, ಪಂಜಾಬಿ, ಹಿಂದಿ, ಸಂಸ್ಕೃತ, ಉರ್ದು ಮತ್ತು ಇಂಗ್ಲಿಷ್ - ಹೀಗೆ ಹತ್ತು ಸಂಪುಟಗಳನ್ನು ಪ್ರಕಟಿಸಬೇಕು.

೨. ವಿಶ್ವಮಾನ್ಯ ತತ್ವಗಳನ್ನೊಳಗೊಂಡ ವಚನಗಳನ್ನು ಆಯ್ದುಕೊಳ್ಳಬೇಕು. ಹೀಗೆ ಆಯ್ದ ವಚನಗಳು ಸಾಮಾನ್ಯವಾಗಿ ಗಾತ್ರದಲ್ಲಿ ಸಣ್ಣವೂ, ಸಾಹಿತ್ಯಿಕವಾಗಿ ಸುಂದರವೂ, ಅನುವಾದಕ್ಕೆ ಸುಲಭವೂ ಆಗಿರಬೇಕು.

೩. ಈ ಯೋಜನೆಗೆ ಒಬ್ಬ ನಿರ್ದೇಶಕನಿರಬೇಕು. ಪ್ರತಿಯೊಂದು ಭಾಷೆಗೆ ಒಬ್ಬ ಪ್ರಧಾನ ಸಂಪಾದಕನೂ, ಅವನ ನೇತೃತ್ವದಲ್ಲಿ ಕೆಲವು ಜನ ಅನುವಾದಕರೂ ಕೆಲಸ ಮಾಡಬೇಕು. ಸಮರ್ಥ ಅನುವಾದಕರನ್ನು ಆಯ್ದುಕೊಳ್ಳುವ, ಅವರಿಗೆ ಕೆಲಸವನ್ನು ವಹಿಸಿ ಕೊಡುವ, ಅವರ ಅನುವಾದವನ್ನು ಪರಿಶೀಲಿಸಿ ಪರಿಷ್ಕರಿಸುವ ನೇರ ಹೊಣೆ ಪ್ರಧಾನ ಸಂಪಾದಕನದು. ಅನುವಾದಕರಿಗೆ ಎದುರಾಗುವ ಸಮಸ್ಯೆಗಳನ್ನು ಪ್ರಧಾನ ಸಂಪಾದಕರೂ, ಪ್ರಧಾನ ಸಂಪಾದಕರಿಗೆ ಎದುರಾಗುವ ಸಮಸ್ಯೆಗಳನ್ನು ನಿರ್ದೇಶಕರೂ ಪರಿಹರಿಸಬೇಕು. ಅವಶ್ಯವಿದ್ದಲ್ಲಿ ಅಂತಿಮ ಅನುವಾದವನ್ನು ಭಾಷಾಲಯ ದೃಷ್ಟಿಯಿಂದ ಆಯಾ ಭಾಷೆಯ ಸೃಜನಶೀಲ ವಿದ್ವಾಂಸರು ಪರಿಷ್ಕರಿಸಬೇಕು. ಈ ಎಲ್ಲ ಕಾರ್ಯದ ಆಡಳಿತಾತ್ಮಕ

ನಿರ್ವಹಣೆಯನ್ನು ಒಬ್ಬ ಸಂಯೋಜಕ ವಹಿಸಿಕೊಳ್ಳಬೇಕು. ಇದು ಈ ಯೋಜನೆಯ ಒಟ್ಟು ಸ್ವರೂಪ. ಈ ನೀತಿ ನಿಯಮಗಳ ಹಿನ್ನೆಲೆಯಲ್ಲಿ ಪ್ರಧಾನ ಸಂಪಾದಕರ ಸಭೆ ಕರೆದು (೫-೧೦-೨೦೦೮) ಅನುವಾದ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ವಚನಗಳ ಅನುವಾದಕಾರ್ಯ ತುಂಬ ಜಟಿಲವಾದುದು. ಇದಕ್ಕೆ ಮೊದಲನೆಯ ಕಾರಣ, ಅಲ್ಲಿ ಒಂದಿಷ್ಟು ಅಶುದ್ಧ ಪಾಠ ಉಳಿದುಕೊಂಡುದು. ಎರಡನೆಯ ಕಾರಣ, ಅವು ಅನುಭಾವಿಕ ಅಭಿವ್ಯಕ್ತಿಗಳಾಗಿರುವುದು. ಈ ಎಚ್ಚರಿಕೆಯಲ್ಲಿ ನಾವು ಪಾಠದೋಷಗಳನ್ನು ಸಾಧ್ಯವಿದ್ದಷ್ಟು ದೂರೀಕರಿಸುವ ಕೆಲಸವನ್ನು ತುಂಬ ಶ್ರದ್ಧೆಯಿಂದ ಮಾಡಿದ್ದು, ಕೆಲವು ಉದಾಹರಣೆಗಳು ಹೀಗಿವೆ :

೧. ಚರಿಸುವ ಚರನಿಗೆ **ಚರ್ಚೆಯೇ** ಭೂಷಣ > ಚರ್ಯೆಯೇ

೨. ಕಾಬವನ **ಕಾಣಿಕೆಯ** ಕೆಡಿಸಿತ್ತು > ಕಾಣ್ಕೆಯ

೩. ಸಮುದ್ರಕ್ಕೆ ಹೋಗಿ **ಸಪ್ಪೆಯ** ಸಲಿಸುವರೆ ? > ಸುಪ್ಪನು (= ಉಪ್ಪನು)

೪. ಅಯ್ಯಾ **ಕರುಣ** ಕಂಬನಿಯ ದೆಸೆಗೆಟ್ಟ ವಾರುಧಿಯೊಳಗೆ > ಅಯ್ಯಾ ಕರುಣಿ,

೫. **ಕರುಣ** ಕಾನನದೊಳಗಾನು ಹೊಲಬುಗೆಟ್ಟೆನಯ್ಯಾ > ಕರಣ

೬. ಗಂಡುಡಿಗೆಯನುಟ್ಟೆನೆಂಬ ಮಾತಿನ ಬಿರಿದ **ನುಂಗಿದೆನು** > ನೆಗಹಿದೆನು

೭. ಆ ಕಾಯವ ನಾಯಿ ತಿಂದಡೇನು, ನೀರ **ಕುಡಿದಡೇನು** > ನೀರುಗೂಡಿದಡೇನು

೮. ಎದ್ದಿದ್ದರೆ **ಚಕೋರನೆಂಬರು** > ಚೋರನೆಂಬರು

೯. ಹರಿವ ನದಿಗೆ **ತನ್ಮಯವೆಲ್ಲ** ಅಡಿ > ತನ್ನ ಮೈಯೆಲ್ಲ ಅಡಿ

೧೦. ರಸಬದ್ಧ **[ಯೋಗ]**ದಂತಿರಬೇಕು > ಲೋಹದಂತಿರಬೇಕು

೧೧. ಕರ್ಕಸದ **ವಿಧಿ,** ರಕ್ಕಸರ ಹೊಳಲು > ವೀಧಿ

ಇತ್ಯಾದಿ ದೋಷಗಳನ್ನು ತಿದ್ದಿಕೊಂಡ ಬಳಿಕ ಸರಿಯಾದ ಅರ್ಥ, ಸಿದ್ಧಾಂತ, ಲೌಕಿಕ ಮತ್ತು ಧಾರ್ಮಿಕ ಆಚರಣೆ, ಪುರಾಣ ಕಥೆ, ದೇಶೀ ಶಬ್ದಾರ್ಥ, ಸರಿಯಾದ ಅನ್ವಯ, ವಚನಕಾರನ ಆಶಯಗಳತ್ತ ಗಮನಕೊಡಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ಸ್ವಲ್ಪ ತಪ್ಪಿದರೆ ಇಡೀ ಅರ್ಥವೇ ಹಾಳಾಗುತ್ತದೆ. ಉದಾ:

ಕನ್ನೆಯ ಸ್ನೇಹದಂತಿದ್ದಿತ್ತು = ಇಲ್ಲಿ (ದೈವತ್ವವು ಪಿಂಡದೊಳಗೆ) ಕನ್ನೆಯ ಗೆಳೆತನ(=ಸ್ನೇಹ)ದಂತೆ ಇದ್ದಿತ್ತು ಎಂಬುದಕ್ಕೆ ಬದಲು, ಕನ್ನೆಯೊಳಗೆ ಗುಪ್ತವಾಗಿರುವ ಕಾಮದಂತೆ ಇದ್ದಿತ್ತು ಎಂದೇ ಅರ್ಥಗ್ರಹಿಸಬೇಕು. ಹರಿವ ಹಾವಿಂಗಂಜೆ = ಚಲಿಸುವ ಹಾವಿಗೂ ಅಂಜಲಾರೆನು - ಎಂದು ಇದಕ್ಕೆ ಅರ್ಥವಲ್ಲ. ಕಚ್ಚುವ ಹಾವಿಗೂ ಅಂಜಲಾರೆನು ಎಂದು ಇದರ ಅರ್ಥ. ಹಳ್ಳಿಯಲ್ಲಿ 'ಕೈಗೆ ಹಾವು ಹರಿಯಲಿ' (=ಕಚ್ಚಲಿ) ಎಂಬ ಬೈಗುಳ ಬಳಕೆಯಲ್ಲಿದೆ.

'ಬಡ ಹಾರುವನೇಸು ಭಕ್ತನಾದರೂ ನೇಣಿನ ಹಂಗು ಬಿಡ'- ಇದನ್ನು ಬಡವನಾದ (poor) ಬ್ರಾಹ್ಮಣನು ಎಂದು ಅನುವಾದಿಸದೆ, ಬಡಪಾಯಿಯಾದ (pitiable) ಬ್ರಾಹ್ಮಣನು ಎಂದು ಅನುವಾದಿಸಬೇಕು.

ವಚನಗಳಲ್ಲಿ ಆಗಾಗ ಲಿಂಗಾಯತ ಪಾರಿಭಾಷಿಕ ಪದಗಳು ಕಾಣಿಸಿಕೊಂಡಿವೆ. ಉದಾ: ಏಕಭಾಜನ. ನಾನು ನನ್ನೊಳಗಿನ ದೈವದೊಂದಿಗೆ ಊಟ ಮಾಡುವುದು ಅಂದರೆ ದೈವೀಭಾವದಿಂದ ಊಟ ಮಾಡುವುದು ಎಂದು ಇದರ ಅರ್ಥ. ಇಂಥ ತಾತ್ವಿಕ ಅರ್ಥ ಗೊತ್ತಿರದಿದ್ದರೆ ಅನುವಾದ ವಿಫಲಗೊಳ್ಳುತ್ತದೆ.

ಲೆಂಕ = ಒಡೆಯನಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವುದಕ್ಕೆ ಬದ್ಧನಾದವನು. ಪ್ರಾಚೀನ ಕಾಲದ ಈ ಲೌಕಿಕ ಆಚರಣೆ ಗೊತ್ತಿಲ್ಲದಿದ್ದರೆ "ಲೆಂಕ ಕಂಡಾ, ಪ್ರಾಣದಾಸೆ ಮತ್ತೇಕಯ್ಯಾ" ಎಂಬುದನ್ನು ಸರಿಯಾಗಿ ಭಾಷಾಂತರಿಸಲು ಸಾಧ್ಯವೇ ಇಲ್ಲ. ದೇವಾಲಯದಲ್ಲಿ ಶಿವಲಿಂಗದ ಎದುರು ದೃಷ್ಟಿ ಪಿಳುಕಿಸದೆ ಕುಳಿತುಕೊಳ್ಳುತ್ತಿದ್ದ ಭಕ್ತರನ್ನು 'ದೃಷ್ಟಿವಾರಿ'ಗಳೆನ್ನುತ್ತಿದ್ದರು. "ಹೊತ್ತಾರೆಯೆದ್ದು ಶಿವಲಿಂಗದೇವನ ದೃಷ್ಟಿವಾರಿ ನೋಡದವನ ಸಂಸಾರವೇನವನ?" ಎಂಬುದನ್ನು ಸರಿಯಾಗಿ ಭಾಷಾಂತರಿಸಲು ಈ ಧಾರ್ಮಿಕ ಆಚರಣೆಯ ತಿಳಿವಳಿಕೆ ಅಗತ್ಯ.

ವಚನಗಳಲ್ಲಿ "ಆಡಿನ ಹಿಕ್ಕಿ ಲಿಂಗವೇ?" ಇತ್ಯಾದಿ ಐತಿಹಾಸಿಕ ಘಟನೆಗಳೂ "ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು" ಇತ್ಯಾದಿ ಪೌರಾಣಿಕ ಘಟನೆಗಳೂ ಬಳಕೆಯಾಗಿವೆ. ಇವುಗಳ ತಿಳಿವಳಿಕೆ ಮಾತ್ರ ಅನುವಾದ ಕಾರ್ಯ ಸಮರ್ಪಕವಾಗಲು ನೆರವಾಗುತ್ತದೆ.

ಕನ್ನಡದಲ್ಲಿ ದೇಶೀಸಾಹಿತ್ಯದ ಬಾಗಿಲು ತೆರೆದ ಶರಣರು ಅದನ್ನು ವಿಪುಲ ಪ್ರಮಾಣದಲ್ಲಿ ಬಳಸಿರುವರು. ಗಿಣ್ಣಿಲು= ಗಿಂಡಿ, ಕೊಟ್ಟಣ= ಧಾನ್ಯ ಕುಟ್ಟುವಿಕೆ, ಕಲ್ಲಿ= ಬಲೆ, ಕಾಣಿಯಾಚಿ=ಪಿತ್ರಾರ್ಜಿತ ಆಸ್ತಿ. ಇಂಥ ಶಬ್ದಗಳ ಅರ್ಥ ಅನುವಾದಕನಿಗೆ ಅಗತ್ಯ. ಇದಲ್ಲದೆ, ಕೂರ್ಮನ ಶಿಶುವಿನ ಸ್ನೇಹ=ಮರಿ ಆಮೆ ತಾಯಿ ಆಮೆಯನ್ನು ನೆನೆದರೆ ಸಾಕು, ಅದರ ಹೊಟ್ಟೆ ತುಂಬುವುದೆಂಬ ಜಾನಪದ ನಂಬಿಕೆ ಇತ್ಯಾದಿಗಳು ಗೊತ್ತಿರಬೇಕು.

ಕೆಲವು ವಚನಗಳು ಸಂದರ್ಭಜನ್ಯ ರಚನೆಗಳಾಗಿರುವುದರಿಂದ ಆ ಸಂದರ್ಭದ ಸ್ಪಷ್ಟನೆ ಮಾತ್ರ ಸರಿಯಾದ ಅನುವಾದಕ್ಕೆ ಹಾದಿ ಮಾಡಿಕೊಡುತ್ತದೆ. ಉದಾ: ಅಲ್ಲಮನ "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ?" ಎಂಬ ವಾಕ್ಯವನ್ನು ಸಾಮಾನ್ಯವಾಗಿ ಪ್ರಶ್ನಾರ್ಥಕವಾಗಿ ಪರಿಭಾವಿಸುತ್ತಾರೆ. ಆದರೆ ಗುಹೆಯಲ್ಲಿಯ ಅಸ್ಥಿಪಂಜರ ರೂಪದ ಅನಿಮಿಷನ ಹಸ್ತದಿಂದ ಲಿಂಗ ಎತ್ತಿಕೊಳ್ಳುತ್ತಲೇ ಅಲ್ಲಮನಲ್ಲಿ ಜ್ಞಾನ ಸಂಚಾರವಾಗುತ್ತದೆ. ಈ ಸಂದರ್ಭದಲ್ಲಿ ಚಕಿತನಾಗಿ ಅವನು ನುಡಿದ ಈ ವಾಕ್ಯವನ್ನು "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ!" ಎಂಬ ಆಶ್ಚರ್ಯನಿಷ್ಠ ಅರ್ಥದಲ್ಲಿಯೇ ಅನುವಾದಿಸಬೇಕು.

ಕೆಲವು ಸಲ "ಮಾತಿನ ಲಯ"ದ ವಾಕ್ಯವನ್ನು "ವಾಚನ ಲಯ"ದಿಂದ ಗ್ರಹಿಸಿದರೆ ಅರ್ಥವ್ಯತ್ಯಾಸವಾಗುತ್ತದೆ. ಉದಾ : 'ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು' ಎಂಬ ವಾಕ್ಯವನ್ನು ವಾಚನ ಲಯದಿಂದ ಗ್ರಹಿಸಿದರೆ (ಹಣವನ್ನು) ನಿಮ್ಮ ಶರಣರಿಗೆ ಮಾತ್ರ ಕಡಬಡ್ಡಿ ಕೊಡಬೇಕು, ಬೇರೆಯವರಿಗೆ ಕಡಬಡ್ಡಿ ಕೊಡಲಾಗದು ಎಂಬ ತಪ್ಪು ಅರ್ಥ ಹೊರಡುತ್ತದೆ. ಆದರೆ ಇದನ್ನು ನಿಮ್ಮ ಶರಣರಿಗಲ್ಲದೆ, ಕಡಬಡ್ಡಿಯ ಕೊಡಲಾಗದು ಎಂದು ಮಧ್ಯದಲ್ಲಿ ತಡೆದು ಮಾತಿನ ಲಯದಲ್ಲಿ ಉಚ್ಚರಿಸಿದರೆ, (ಹಣವನ್ನು) ನಿಮ್ಮ ಶರಣರಿಗೆ ಕೊಡಬಹುದಲ್ಲದೆ, ಕಡಬಡ್ಡಿಗಾಗಿ ಬಳಸಬಾರದು - ಎಂಬ ನಿಜ ಅರ್ಥ ಹೊರಡುತ್ತದೆ.

ಇದೇ ರೀತಿ "ಹೊಲತಿ ಲಿಂಗವ ಪೂಜಿಸಲಾಗದು" ಎಂದು ವಾಚನಲಯದಿಂದ ಓದಿದರೆ ರಜಸ್ವಲೆ ಲಿಂಗವನ್ನು ಪೂಜಿಸಬಾರದು ಎಂಬ ತಪ್ಪು ಅರ್ಥ ವ್ಯಕ್ತವಾಗುತ್ತದೆ, ಇದನ್ನೇ ಮಾತಿನ ಲಯದಿಂದ "ಹೊಲತಿ ಲಿಂಗವ ಪೂಜಿಸಲಾಗದು?" ಎಂದು ಪ್ರಶ್ನಾರ್ಥಕವಾಗಿಸಿದರೆ, ರಜಸ್ವಲೆ ಲಿಂಗವನ್ನು ಪೂಜಿಸಬಹುದು ಎಂಬ ನಿಜ ಅರ್ಥ ಮೂಡಿಬರುತ್ತದೆ.

ಆಡುಮಾತಿನ ಲಯ, ಅವಧಾರಣೆ, ಪುನರುಕ್ತಿ, ಕಾಕು ಇತ್ಯಾದಿಗಳು ವಚನ ರಚನೆಗೆ ಅಭಿವ್ಯಕ್ತಿಯ ಜೀವಂತಿಕೆಯನ್ನು ನೀಡಿವೆ. ಉದಾ : "ಏನಿ ಬಂದಿರಿ? ಹದುಳುವಿದ್ದರೆ?" "ತಾರೌ ಅಗ್ಗವಣಿಯ, ನೀಡೌ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೌ" ಇತ್ಯಾದಿಗಳಲ್ಲಿಯ ಆಡುಮಾತಿನ ರೀತಿ ತುಂಬ ಮನೋಜ್ಞವಾಗಿದೆ. ಇಂಥ ರಚನೆಗಳನ್ನು ಮೂಲ ಲಯದಂತೆಯೇ ಅನುವಾದಿಸಲು ನಾವು ಗಮನ ಹರಿಸಿದ್ದೇವೆ.

ಕೆಲವು ವಚನಗಳ ವಾಕ್ಯರಚನೆ ತುಂಬ ಸಂಕೀರ್ಣವಾಗಿದೆ. ಇಂಥಲ್ಲಿ ವಚನದ ವಾಕ್ಯರಚನೆಗಿಂತ, ವಚನಕಾರನ ಆಶಯಕ್ಕೆ ಅನುಗುಣವಾಗಿ ಅರ್ಥೈಸಬೇಕಾಗುತ್ತದೆ, ಅನುವಾದಿಸಬೇಕಾಗುತ್ತದೆ. ಉದಾ:

"ಹಸ್ತ ಕಡಗ ಕೈಗಧಿಕ ನೋಡಾ
ಕೊಡಲಹುದು, ಕೊಳಲಾಗದು........"

ಕೊಡಬಹುದು ಆದರೆ ಕೊಳಲಾಗದು ಎಂಬುದೇ ಹಸ್ತ ಕಡಗವಾಗಿದ್ದು, ಅದು ಕೈಗೆ ಭೂಷಣ - ಇತ್ಯಾದಿಯಾಗಿ ಅರ್ಥ ಮಾಡಿಕೊಂಡು, ಅನುವಾದಿಸುವುದು ಸೂಕ್ತ. ಇಂಥ ಅನೇಕ ಆಯಾಮಗಳ ಬೆಳಕಿನಲ್ಲಿ ಅನುವಾದಕಾರ್ಯವನ್ನು ಪೂರೈಸಿದ್ದೇವೆ.

ಕೃತಜ್ಞತೆ

"ವಿಶ್ವತೋಮುಖಿ"ಯಾಗಿ ವಚನಸಿದ್ಧಾಂತ ಹಬ್ಬುವುದರ ಸಲುವಾಗಿ, ಈ "ಮೂಲಪಠ್ಯ"ವನ್ನು ಸಿದ್ಧಪಡಿಸುವ ಅವಕಾಶ ಪ್ರಾಪ್ತವಾದುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. ಗದುಗಿನ ಶ್ರೀ ತೋಂಟದಾರ್ಯ ಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಯ ಮೂಲಕ ಸುಮಾರು ೪೦ರಷ್ಟು ಅಪ್ರಕಟಿತ ಪ್ರಾಚೀನ ವಚನ ಸಂಕಲನಗಳನ್ನು, ಕರ್ನಾಟಕ ಸರಕಾರದ ಮೂಲಕ ಎಲ್ಲ ಶರಣರ ಎಲ್ಲ ವಚನಗಳ ೧೪ ಸಂಪುಟಗಳನ್ನು, ವಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಯ ಮೂಲಕ ವಚನಪಿತಾಮಹ ಡಾ.ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯದ ೧೫ ಸಂಪುಟಗಳನ್ನು ಹೊರತಂದುದರ ಮುಂದುವರಿಕೆಯಾಗಿ ಈ ಸಂಕಲನ ನನ್ನಿಂದ ರೂಪಗೊಂಡುದು ಒಂದು ಯೋಗಾಯೋಗ.

ಈ ಸಂಕಲನವನ್ನು ಸಂಯೋಜಿಸುವಲ್ಲಿ ಡಾ. ಫ.ಗು. ಹಳಕಟ್ಟಿಯವರ "ಶಿವಾನುಭವ ಗ್ರಂಥಮಾಲೆ" ಮೊದಲುಗೊಂಡು ಕರ್ನಾಟಕ ಸರಕಾರದ "ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ" ವರೆಗಿನ ಎಲ್ಲ ಸಂಪುಟಗಳ ನೆರವು ಪಡೆದಿದ್ದು, ಈ ಎಲ್ಲ ಪ್ರಕಾಶನ ಸಂಸ್ಥೆಗಳಿಗೆ ಮತ್ತು ಸಂಪಾದಕರಿಗೆ ನಾವು ಋಣಿಯಾಗಿದ್ದೇವೆ.

ಬಸವ ಸಮಿತಿಯನ್ನು ಬಹುಮುಖಿಯಾಗಿ, ಬಹುಭಾಷಿಯಾಗಿ ಬೆಳೆಸುತ್ತಲಿರುವ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ ಅವರ ಹಲವು ಕನಸು - ಕಾರ್ಯಗಳಲ್ಲಿ "ವಚನಸಾಹಿತ್ಯದ ಬಹುಭಾಷಾ ಅನುವಾದ ಯೋಜನೆ" ಒಂದು ಚಾರಿತ್ರಿಕ ದಾಖಲೆ. ಈ ಯೋಜನೆಗಾಗಿ ಸಿದ್ಧಗೊಂಡ ಪ್ರಸ್ತುತ 'ಮೂಲಪಠ್ಯ' ರಚನೆಯ ಸಂದರ್ಭದಲ್ಲಿ ಇವರು ನನ್ನೊಂದಿಗೆ ಮಾನಸಿಕವಾಗಿ ಅಹರ್ನಿಶಿ ದುಡಿದಿದ್ದಾರೆ. ಬೆಂಗಳೂರಿನ ಬೇಲಿಮಠದ ಪೂಜ್ಯ ಶ್ರೀ ಶಿವರುದ್ರಸ್ವಾಮಿಗಳು ಇದರ ಪ್ರಸ್ತಾವನೆ ಸಮಗ್ರವಾಗುವುದರ ಸಲುವಾಗಿ ಆನುಭಾವಿಕ ಮಾರ್ಗದರ್ಶನ ನೀಡಿದ್ದಾರೆ. ಇವರಿಗೆ ಕೃತಜ್ಞನಾಗಿದ್ದೇನೆ.

ಸಿದ್ಧವಾದ ಪ್ರಥಮ ಕರಡುಪ್ರತಿಯನ್ನು ಪರಿಶೀಲಿಸಿ ಸಲಹೆ - ಸೂಚನೆ ನೀಡಿದವರು ಡಾ. ವೀರಣ್ಣ ರಾಜೂರ, ಡಾ. ಜಯಶ್ರೀ ದಂಡೆ, ಪ್ರೊ. ಬಸವರಾಜ ಪುರಾಣಿಕ. ಈ ಕರಡುಪ್ರತಿ ಪರಿಷ್ಕೃತ ಪ್ರತಿಯಾಗುವುದರ ಸಲುವಾಗಿ ನನ್ನೊಂದಿಗೆ ಹಗಲಿರುಳು ದುಡಿದವರು ಡಾ. ಹನುಮಂತ ಮೇಲಿನಮನಿ. ಬೇಸರವಿಲ್ಲದೆ ಬೆರಳಚ್ಚು ಕಾರ್ಯವನ್ನು ಮತ್ತೆ ಮತ್ತೆ ಪೂರೈಸಿದವರು ಧಾರವಾಡದ ಶ್ರೀ ಆರ್. ಕೆ. ಹೆಗಡೆ, ಶ್ರೀಮತಿ ಆಶಾ ಹೆಗಡೆ ಮತ್ತು ಸಿಬ್ಬಂದಿ ವರ್ಗದ ಪ್ರೀತಿ ಮತ್ತು ಉಮೇಶ. ಇವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ. ಬಸವ ಸಮಿತಿಯ ಆಡಳಿತ ಮಂಡಳಿಯ ಮತ್ತು ಪ್ರಕಟಣ ಸಮಿತಿಯ ಸರ್ವಸದಸ್ಯರಿಗೆ ಋಣಿಯಾಗಿದ್ದೇನೆ.

ವಚನಗಳ ಆಯ್ಕೆಯಲ್ಲಿ ಇನ್ನೂ ಉತ್ತಮಿಕೆ ಸಾಧ್ಯವಿರುವುದು ಸಹಜವೆಂಬ ಭಾವದಿಂದ ಈ ಸಂಕಲನವನ್ನು ಸಹೃದಯರಿಗೆ ಲೋಕಾರ್ಪಣೆ ಮಾಡುತ್ತಲಿದ್ದೇನೆ.

❖❖

ದ್ವಿತೀಯ ಆವೃತ್ತಿ

'ವಚನ' ಹೆಸರಿನ ಈ ಕೃತಿ ೨೦೧೨ರ ಅಂತ್ಯದಲ್ಲಿ ಮುದ್ರಣಗೊಂಡು, ೨೦೧೩ ಫೆಬ್ರುವರಿಯಲ್ಲಿ ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಹಮೀದ್ ಅನ್ಸಾರಿ ಅವರ ಅಮೃತಹಸ್ತದಿಂದ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡಿತು. ಸಂತೋಷದ ಸಂಗತಿಯೆಂದರೆ, ಕೇವಲ ಆರು ತಿಂಗಳಲ್ಲಿ ೩೦೦೦ ಪ್ರತಿಗಳು ಮಾರಾಟವಾಗಿ ಇಂದು ದ್ವಿತೀಯ ಆವೃತ್ತಿ ಬೆಳಕಿಗೆ ಬರುತ್ತಲಿದೆ. ಇದಕ್ಕೆ ಕಾರಣ, ಸಮಗ್ರ ವಚನಸಾಹಿತ್ಯವನ್ನು ಪ್ರತಿನಿಧಿಸುವ ಇದರ 'ಪಠ್ಯ' ಮತ್ತು ಸಮಗ್ರ ವಚನಸಿದ್ಧಾಂತದ ಸಾರವೆನಿಸುವ ಇದರ 'ಪ್ರಸ್ತಾವನೆ'ಗಳು.

ಈ ಸಂಪುಟದ ವಚನಗಳ ಆಯ್ಕೆ ಮತ್ತು ಪ್ರಕಟನೆಯಲ್ಲಿ ನಾವು ತುಂಬ ಎಚ್ಚರವಹಿಸಿದ್ದೆವು. ಹೀಗಿದ್ದೂ ಉಳಿದುಕೊಂಡಿದ್ದ ಕೆಲವು ಅಚ್ಚಿನ ದೋಷ, ಅನವಧಾನದೋಷಗಳನ್ನು ಈ ದ್ವಿತೀಯ ಆವೃತ್ತಿಯಲ್ಲಿ ತಿದ್ದಿಕೊಂಡಿದ್ದೇವೆ. ಹಲವು ಕಾರಣಗಳಿಂದಾಗಿ ಸುಮಾರು ೨೦ ವಚನಗಳನ್ನು ಬದಲಿಸಬಹುದಾಗಿದ್ದಿತು. ಹಾಗೆ ಮಾಡಿದಲ್ಲಿ ಅದರ ಮತ್ತು ಈಗಾಗಲೇ ಅನುವಾದವಾಗಿರುವ ೯ ಭಾಷೆಗಳ ವಚನ ಪಠ್ಯದ ಸಂಬಂಧ ತಪ್ಪಿಹೋಗುತ್ತಲಿದ್ದ ಕಾರಣ, ಮೂಲವಚನಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ.

ಈ ಸಂಪುಟದ ಉತ್ತಮಿಕೆಗಾಗಿ ಪ್ರಬುದ್ಧರು ಸೂಚಿಸುವ ಸಲಹೆಗಳನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ. ಮೊದಲ ಆವೃತ್ತಿಯನ್ನು ಮೆಚ್ಚಿಕೊಂಡ ಸಹೃದಯರನ್ನು ಅಭಿನಂದಿಸುತ್ತೇವೆ.

ಧಾರವಾಡ **- ಎಂ. ಎಂ. ಕಲಬುರ್ಗಿ**

❖❖

ತೃತೀಯ ಆವೃತ್ತಿ

'ವಚನ' ಹೆಸರಿನ **'ಬಹುಭಾಷಾ ವಚನ ಅನುವಾದ'** ಯೋಜನೆಯ ಕನ್ನಡ ಸಂಪುಟ ಪ್ರಥಮ ಬಾರಿಗೆ ೨೦೧೨ರಲ್ಲಿ ೫೦೦೦ ಪ್ರತಿಗಳೊಂದಿಗೆ ಮುದ್ರಣಗೊಂಡು ೨೦೧೩ರಲ್ಲಿ ಭಾರತದ ಉಪರಾಷ್ಟ್ರಪತಿಗಳಾದ ಶ್ರೀ ಹಮೀದ್ ಅನ್ಸಾರಿ ಅವರ ಅಮೃತಹಸ್ತದಿಂದ ಲೋಕಾರ್ಪಣೆಗೊಂಡಿತು. ತದನಂತರ, ೨೦೧೩ನೆಯ ಇಸವಿಯಲ್ಲಿ ದ್ವಿತೀಯ ಆವೃತ್ತಿಯಲ್ಲಿ ಮುದ್ರಣಗೊಂಡ ३೦೦೦ ಪ್ರತಿಗಳು ಮಾರಾಟವಾಗಿ ಇಂದು ತೃತೀಯ ಆವೃತ್ತಿ ಮುದ್ರಣವಾಗಿದೆ.

ಈ ಸಂಪುಟದ **'ವಚನ'** ಆಯ್ಕೆ ಮತ್ತು ಪ್ರಕಟಣೆಗೆ ಲಿಂ. ಡಾ. ಎಂ.ಎಂ. ಕಲಬುರ್ಗಿ ಅವರು ಅತ್ಯಂತ ಆಸ್ಥೆ ವಹಿಸಿದುದು ಸ್ಮರಣಾರ್ಹ. ದ್ವಿತೀಯ ಆವೃತ್ತಿಯಲ್ಲಿ ಯಾವ ಬದಲಾವಣೆಗಳನ್ನು ಸಹ ತರದೆ ಜನಪ್ರಿಯಗೊಂಡಿರುವ ಕನ್ನಡದ ಮೂಲ ವಚನಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ.

ಕೊನೆಯದಾಗಿ ಲಿಂ.ಡಾ. ಎಂ.ಎಂ.ಕಲಬುರ್ಗಿ ಅವರು ಮೊದಲೇ ಸೂಚಿಸಿರುವಂತೆ, ಈ ಸಂಪುಟದ ಉತ್ತಮಿಕೆಗಾಗಿ ಪ್ರಬುದ್ಧರು ಸೂಚಿಸುವ ಸಲಹೆಗಳನ್ನು ಗೌರವಾದರಗಳೊಂದಿಗೆ ಸ್ವಾಗತಿಸುತ್ತೇವೆ. ದ್ವಿತೀಯ ಆವೃತ್ತಿಯನ್ನು ಮೆಚ್ಚಿಕೊಂಡು ಜಂಗಮಗೊಳಿಸಿದ್ದಕ್ಕಾಗಿ ಸಹೃದಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

(ಅರವಿಂದ ಜತ್ತಿ)
ಅಧ್ಯಕ್ಷರು

❖❖

*

ಪರಿವಿಡಿ

ಬಸವಯುಗ

೬

ಅ

೯

* ಈ ಪ್ರಶ್ನೆಚಿಹ್ನೆಯು ವಚನಕಾರನ ಹೆಸರು ಅಜ್ಞಾತವೆಂಬುದನ್ನು ಸೂಚಿಸುತ್ತದೆ.

ಬಸವೋತ್ತರಯುಗ

೧೦

೧೧

೧೨

ಅನುಬಂಧ

❖❖

---

* ಇಲ್ಲಿಯ ೧೪ ಪ್ರಕರಣಗಳು ಕರ್ನಾಟಕ ಸರಕಾರ ಪ್ರಕಟಿಸಿದ ೧೪ ವಚನ ಸಂಪುಟಗಳನ್ನು ಸೂಚಿಸುತ್ತವೆ.

*

ಬಸವಯುಗ

*

ಬಸವಣ್ಣ

೧
ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯಾ?
ಲೆಂಕ ಕಂಡಾ, ಪ್ರಾಣದಾಸೆ ಮತ್ತೇಕಯ್ಯಾ?
ಭಕ್ತ ಕಂಡಾ, ತನು ಮನ ಧನದಾಸೆ ಮತ್ತೇಕಯ್ಯಾ?
ನಿಮ್ಮ ಅಂಕೆಗೆ ಝುಂಕೆಗೆ ಶಂಕಿತನಾದಡೆ
ಎನ್ನ ಲೆಂಕತನಕ್ಕೆ ಹಾನಿ, ಕೂಡಲಸಂಗಮದೇವಾ. ॥ ೧ ॥

೨
ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ,
ಕಾದಿ ಗೆಲಿಸಯ್ಯಾ ಎನ್ನನು.
ಕಾದಿ ಗೆಲಿಸಯ್ಯಾ ಕೂಡಲಸಂಗಮದೇವಯ್ಯಾ,
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ. ॥ ೨ ॥

೩
ಅಂಗದ ಮೇಲಣ ಲಿಂಗ ಹಿಂಗಿ ಬಂದ ಸುಖವನಾರಿಗರ್ಪಿಸುವೆ?
ಹಿಂಗಲಾಗದು, ಭಕ್ತಿಪಥಕ್ಕೆ ಸಲ್ಲದಾಗಿ,
ಹಿಂಗಲಾಗದು, ಶರಣಪಥಕ್ಕೆ ಸಲ್ಲದಾಗಿ.
ಕೂಡಲ ಸಂಗಮದೇವರ ಹಿಂಗಿ ನುಂಗಿದುಗುಳು ಕಿಲ್ಬಿಷ. ॥ ೩ ॥

೪
ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಸ್ಥಾವರದೈವಕ್ಕೆರಗಲಾಗದು.
ತನ್ನ ಪುರುಷನ ಬಿಟ್ಟು ಅನ್ಯಪುರುಷನ ಸಂಗ ಸಲ್ಲುವುದೇ?
ಕರಸ್ಥಲದ ದೇವನಿದ್ದಂತೆ

ಧರೆಯ ಮೇಲಣ ಪ್ರತಿಷ್ಠೆಗೆರಗಿದಡೆ
ನರಕದಲ್ಲಿಕ್ಕುವ ಕೂಡಲಸಂಗಮದೇವ. || ೪ ||

೫
ಅಂಗಯ್ಯ ಒಳಗಣ ಲಿಂಗವ ನೋಡುತ್ತ,
ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ?
ನೋಟವೆ ಪ್ರಾಣವಾಗಿ ಎಂದಿಪ್ಪೆನೊ?
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ?
ಎನ್ನ ಅಂಗವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗ ಲಿಂ[ಗಾಯೆ]ನುತ್ತ. || ೫ ||

೬
ಅಂಜಿದಡೆ ಮಾಣದು, ಅಳುಕಿದಡೆ ಮಾಣದು,
ವಜ್ರಪಂಜರದೊಳಗಿದ್ದಡೆ ಮಾಣದು,
ತಪ್ಪದುವೋ ಲಲಾಟಲಿಖಿತ.
ಕಕ್ಕುಲತೆಗೆ ಬಂದಡೆ ಆಗದು ನೋಡಾ.
ಧೃತಿಗೆಟ್ಟು, ಮನ ಧಾತುಗೆಟ್ಟಡೆ[ಯೂ] ಅಪ್ಪುದು ತಪ್ಪದು,
ಕೂಡಲಸಂಗಮದೇವಾ. || ೬ ||

೭
ಅಂದಣವನೇರಿದ ಸೊಣಗನಂತೆ
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು.
ಸುಡು, ಸುಡು, ಮನವಿದು ವಿಷಯಕ್ಕೆ ಹರಿವುದು,
ಮೃಡ ನಿಮ್ಮನನುದಿನ ನೆನೆಯಲೀಯದು.
ಎನ್ನೊಡೆಯ ಕೂಡಲಸಂಗಮದೇವಾ
ನಿಮ್ಮ ಚರಣವ ನೆನೆವಂತೆ ಕರುಣಿಸು,
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ. || ೭ ||

೮
ಅಂದು ಇಂದು ಮತ್ತೊಂದೆನಬೇಡ,
ದಿನವಿಂದೇ 'ಶಿವ ಶರಣೆ'ಂಬವಂಗೆ,
ದಿನವಿಂದೇ 'ಹರ ಶರಣೆ'ಂಬವಂಗೆ,
ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ. || ೮ ||

೯
ಅಡವಿಯಲೊಬ್ಬ ಕಡು ನೀರಡಿಸಿ,
ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ.

ಕುರುಡ ಕಣ್ಣ ಹಡೆದಂತೆ,
ಬಡವ ನಿಧಾನವ ಹಡೆದಂತಾಯಿತ್ತಯ್ಯಾ.
ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ. ‖ ೯ ‖

೧೦

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೇ ಅಂಬೇ' ಎಂದು ಕರೆವುತ್ತಲಿದ್ದೇನೆ,
'ಅಂಬೇ ಅಂಬೇ' ಎಂದು ಒರಲುತ್ತಲಿದ್ದೇನೆ,
ಕೂಡಲಸಂಗಮದೇವ 'ಬಾಳು ಬಾಳೆ'ಂಬನ್ನಕ್ಕ. ‖ ೧೦ ‖

೧೧

ಅಣ್ಣ, ತಮ್ಮ, ಹೆತ್ತಯ್ಯ ಗೋತ್ರವಾದಡೇನು?
ಲಿಂಗಸಾಹಿತ್ಯರಲ್ಲದವರ ಎನ್ನವರೆನ್ನೆನಯ್ಯಾ.
ನಂಟುಭಕ್ತಿ ನಾಯಕನರಕ,
ಕೂಡಲಸಂಗಮದೇವಾ. ‖ ೧೧ ‖

೧೨

ಅತ್ತಲಿತ್ತ ಹೋಗದಂತೆ,
ಹೆಳವನ ಮಾಡಯ್ಯಾ ತಂದೆ.
ಸುತ್ತಿ ಸುಳಿದು ನೋಡದಂತೆ,
ಅಂಧಕನ ಮಾಡಯ್ಯಾ ತಂದೆ.
ಮತ್ತೊಂದ ಕೇಳದಂತೆ,
ಕಿವುಡನ ಮಾಡಯ್ಯಾ ತಂದೆ.
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಸಳದಂತೆ ಇರಿಸು,
ಕೂಡಲಸಂಗಮದೇವಾ. ‖ ೧೨ ‖

೧೩

ಅನಂತಕಾಲ ತರು ಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣದ ಸೇವೆ ಸಾಲದೆ?
ಅನಂತಕಾಲ ಗುರುಚರಣದ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು ಸಾಲದೆ?

ಅನಂತಕಾಲ ಜಂಗಮಕ್ಕೆ ತೃಪ್ತಿಯ ಮಾಡುವುದರಿಂದ
ಒಂದು ನಿಮಿಷ ಕೂಡಲಸಂಗಯ್ಯಾ
ನಿಮ್ಮ ಶರಣರನುಭಾವ ಸಾಲದೆ? ॥ ೧೩ ॥

೧೪
ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ.
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ,
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ,
ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯಾ? ॥ ೧೪ ॥

೧೫
ಅಯ್ಯಾ, ಎಳಗರು ತಾಯನರಸಿ ಬಳಲುವಂತೆ
ನಾ ನಿಮ್ಮನರಸಿ ಬಳಲುತ್ತಿದ್ದೇನೆ.
ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವಾಗಿ ಕಾರುಣ್ಯವ ಮಾಡು.
ಅಯ್ಯಾ, ನೀವೆನ್ನ ಮನಕ್ಕೆ ನೆಲೆವನೆಯಾಗಿ
ಕಾರುಣ್ಯವ ಮಾಡು, ಕಾರುಣ್ಯವ ಮಾಡು.
ನೀನಿನಿತು ಲೇಸನೀಯಯ್ಯಾ,
ಅಂಬೇ ಅಂಬೇ ಕೂಡಲಸಂಗಮದೇವಾ. ॥ ೧೫ ॥

೧೬
ಅರಗಿನ ಪುತ್ಥಳಿಯನುರಿಯ ನಾಲಗೆ ಹೊಯಿದು
ಮಾತಾಡುವ ಸರಸ ಬೇಡ!
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚಲ್ಲವಾಡಿದಡೆ ಹಲ್ಲು ಹೋಹುದು!
ಕೂಡಲಸಂಗನ ಶರಣರೊಡನೆ ಸರಸವಾಡಿದಡೆ
ಅದು ವಿರಸ ಕಾಣಿರಯ್ಯಾ. ॥ ೧೬ ॥

೧೭
ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ?
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?
ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?
ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ. ॥ ೧೭ ॥

೧೮
ಅರಸನ ಕಂಡು ತನ್ನ ಪುರುಷನ ಮರೆದಡೆ
ಮರನನೇರಿ ಕಯ್ಯ ಬಿಟ್ಟಂತಾಯಿತ್ತಯ್ಯಾ.
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ!
ನಮ್ಮ ಕೂಡಲಸಂಗಮದೇವಯ್ಯ
ಜಂಗಮಮುಖಲಿಂಗವಾದ ಕಾರಣ. || ೧೮ ||

೧೯
ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ,
ಭಕ್ತರ ಮನೆಯ ತೊತ್ತಾಗಿಪ್ಪುದು ಕರ ಲೇಸಯ್ಯಾ.
'ತಾರೌ ಅಗ್ಘವಣಿ, ನೀಡೌ ಪತ್ರೆಯ,
ಲಿಂಗಕ್ಕೆ ಬೋನವ ಹಿಡಿಯೌ' ಎಂಬರು.
'ಕೂಡಲಸಂಗನ ಮಹಾಮನೆಯಲ್ಲು
ಒಕ್ಕುದನುಣ್ಣಾ ತೊತ್ತೇ' ಎಂಬರು. || ೧೯ ||

೨೦
ಅರಸು ಮುನಿದಡೆ ನಾಡೊಳಗಿರಬಾರದಯ್ಯಾ,
ಗಂಡ ಮುನಿದಡೆ ಮನೆಯೊಳಗೆ ಇರಬಾರದಯ್ಯಾ.
ಕೂಡಲಸಂಗಮದೇವಾ
ಜಂಗಮ ಮುನಿದಡೆ ನಾನೆಂತು ಬದುಕುವೆ? || ೨೦ ||

೨೧
ಅರಿ[ವ]ನರಿತವ ಕೆಡಿಸಿತ್ತು ಬಡತನವೆಂಬ ರಾಹು,
ಉಳ್ಳವನ ಉಳುವೆಯ ಕೆಡಿಸಿತ್ತು ಮೋಹವೆಂಬ ರಾಹು,
ಕಾಬವನ [ಕಾಣ್ಕೆ]ಯ ಕೆಡಿಸಿತ್ತು ಕಾಮವೆಂಬ ಕತ್ತಲೆ,
ಎನ್ನ ಮನದ ಭಯಕ್ಕಂಜಿ ನಿಮ್ಮ ಮೊರೆಹೊಕ್ಕೆ,
ಕೂಡಲಸಂಗಮದೇವಾ. || ೨೧ ||

೨೨
ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತೆ ಆನಿದ್ದೇನಯ್ಯಾ.
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ, ನಿಮ್ಮ ಒಲವಿಲ್ಲದಂತೆ ಆನಿದ್ದೇನಯ್ಯಾ.
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ,
ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ. || ೨೨ ||

೨೩
ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ,
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ.
ಕೂಡಲಸಂಗನ ಶರಣರಲ್ಲಿ
ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ. || ೨೩ ||

೨೪
ಅರ್ಥಕ್ಕೆ ತಪ್ಪಿದಡೇನು,
ಪ್ರಾಣಕ್ಕೆ ತಪ್ಪಿದಡೇನು,
ಅಭಿಮಾನಕ್ಕೆ ತಪ್ಪಿದಡೇನು?
ಶರಣರು ಶರಣರಲ್ಲಿ ಗುಣವನರಸುವರೆ?
ಕೂಡಲಸಂಗನ ಶರಣರು ನೊಂದು ಸೈರಿಸಬೇಕು. || ೨೪ ||

೨೫
ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕರ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದಲ್ಲಿ ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ. || ೨೫ ||

೨೬
ಅರ್ಥವುಳ್ಳವರೆಲ್ಲ ಅರಸಿಂಗಂಜುವರಯ್ಯಾ,
ಭಕ್ತಿಯುಳ್ಳವರೆಲ್ಲ ಜಂಗಮಕ್ಕಂಜುವರಯ್ಯಾ,
ಸೂಳೆಗೊಲಿದವರೆಲ್ಲ ಸೂಳೆಯೆಂಜಲು ತಿಂಬರಯ್ಯಾ.
ಮಾಂಸವ ಮಚ್ಚಿದವರೆಲ್ಲ ಸೊಣಗನೆಂಜಲ ತಿಂಬರಯ್ಯಾ.
ಕೂಡಲಸಂಗನ ಶರಣರ ಒಕ್ಕುಮಿಕ್ಕುದ
ಲಿಂಗಕ್ಕೆ ಕೊಟ್ಟುಕೊಂಡು ಯೋಗ್ಯವಾದವರ
ನಮ್ಮ ಚಿಕ್ಕ[ಚೆನ್ನ]ಬಸವಣ್ಣ ಬಲ್ಲ. || ೨೬ ||

೨೭
ಅವಳ ವಚನ ಬೆಲ್ಲದಂತೆ,
ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ.
ಕಂಗಳಲೊಬ್ಬನ ಕರೆವಳು, ಮನದಲೊಬ್ಬನ ನೆರೆವಳು.
ಕೂಡಲಸಂಗಮದೇವ ಕೇಳಯ್ಯಾ,
ಮಾನಿಸಗಳ್ಳೆಯ ನಂಬದಿರಯ್ಯಾ. || ೨೭ ||

೨೮
ಅಸುರನೈಶ್ವರ್ಯವನೆಣಿಸುವಡೆ:
ಸೀತೆಗೆ ಸರಿಮಿಗಿಲೆನಿಸುವ ಸತಿಯರೆಂಟು ಕೋಟಿ,
ಮತಿವಂತ ಶಿರಃಪ್ರಧಾನರೆಂಟು ಕೋಟಿ,
ಲೆಕ್ಕವಿಲ್ಲದ ದಳವು, ಲಕ್ಷ ಕುಮಾರರು,
ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು,
ಸುರಪತಿಯರೆಲ್ಲರನಾತ ಸೆರೆಮಾಡಿ ಆಳಿದ.
ಶಿವನೆ, ನೀನು ಕರುಣಿಸಿದಂತಿರದೆ,
ಪರವಧುವಿನ ಬೇಟವವನ ಪ್ರಾಣ ಕೊಂಡಿತ್ತು.
ಇದನರಿದು ಪರವಧುಗಳಿಗೆಳಸುವರ ಕಂಡು
ಗರುಡನ ಕಂಡ ಸರ್ಪ ಧರೆಗಿಳಿವಂತೆ ಅಡಗಿಪ್ಪೆನಯ್ಯಾ,
ಕೂಡಲಸಂಗಮದೇವಾ. || ೨೮ ||

೨೯
ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೊ?
ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು.
ಅಹಂಕಾರರಹಿತವಾದಲ್ಲಿ ಸನ್ನಿಹಿತ ಕಾಣಾ
ಕೂಡಲಸಂಗಮದೇವ. || ೨೯ ||

೩೦
ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ?
ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ?
ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ?
ಕೂಡಲಸಂಗಮದೇವಾ, ಅರಸರಿಯದ ಬಿಟ್ಟಿಯೋ. || ೩೦ ||

೩೧
ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ
ಆ ಕರಿಯಾಗಲರಿವುದೆ?
ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದಡೆ
ವ್ಯಾಳೇಶನಾಗಲರಿವುದೆ?
ನಾನು ಭಕ್ತನಾದಡೇನಯ್ಯಾ,
ನಮ್ಮ ಕೂಡಲಸಂಗಮದೇವನ ಸದ್ಭಕ್ತರ ಹೋಲಲರಿವೆನೆ? || ೩೧ ||

೩೨

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ! ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ! ನಿಮ್ಮ ಧರ್ಮ!
ಅರಸಾಡದಿರಿಂ ಭೋ! ನಿಮ್ಮ ಧರ್ಮ!
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ,
ಕೂಡಲಸಂಗಮದೇವ ಏಕೋಭಾವ. || ೩೨ ||

೩೩

ಆಗಳೂ ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು.
ಹೋಗೆಂದಡೆ ಹೋಗವು,
ನಾಯಿಗಿಂದ ಕರಕಷ್ಟ ಕೆಲವು ದೈವಂಗಳು.
ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವವು ಕೂಡಲಸಂಗಮದೇವಾ? || ೩೩ ||

೩೪

ಆಡಿ ಅಳುಪದಿರಾ, ಲೇಸಮಾಡಿ ಮರುಗದಿರಾ, ಎಲೆ ಮನವೆ.
ಕೂಡಿ ತಪ್ಪದಿರಾ, ಬೇಡಿದವರಿಗಿಲ್ಲೆನ್ನದಿರು ಕಂಡಾ.
ನಾಡ ಮಾತು ಬೇಡ, ಸೆರಗೊಡ್ಡಿ ಬೇಡು
ಕೂಡಲಸಂಗನ ಶರಣರ. || ೩೪ ||

೩೫

ಆಡಿದಡೇನು, ಹಾಡಿದಡೇನು, ಓದಿದಡೇನು,
ತ್ರಿವಿಧದಾಸೋಹವಿಲ್ಲದನ್ನಕ್ಕ?
ಆಡದೆ ನವಿಲು, ಹಾಡದೆ ತಂತಿ, ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ. || ೩೫ ||

೩೬

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ:
ಅದು ಬೇಡದು, ಬೆಸಗೊಳ್ಳದು,
ತಂದೊಮ್ಮೆ ನೀಡಬಹುದು.
ಕಾಡುವ ಬೇಡುವ ಜಂಗಮ ಬಂದಡೆ,
ನೀಡಲುಬಾರದು ಕೂಡಲಸಂಗಮದೇವಾ. || ೩೬ ||

೩೭

ಆಡುವುದಳವಟ್ಟಿತ್ತು, ಹಾಡುವುದಳವಟ್ಟಿತ್ತು,
ಅರ್ಚನೆಯಳವಟ್ಟಿತ್ತು, ಪೂಜನೆಯಳವಟ್ಟಿತ್ತು,

ನಿತ್ಯಲಿಂಗಾರ್ಚನೆ ಮುನ್ನವೆಯಳವಟ್ಟಿತ್ತು.
ಕೂಡಲಸಂಗನ ಶರಣರು ಬಂದಡೆ,
ಏಗುವುದು, ಏ ಬೆಸನೆಂಬುದು ಒಪ್ಪಚ್ಚಿ ಅಳವಡದು. || ೩೭ ||

೩೮
ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ.
ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದಡೆ
ನಿಮಗಾನು ದ್ರೋಹಿಯಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ. || ೩೮ ||

೩೯
ಆದ್ಯರ ವಚನ ಪರುಷ ಕಂಡಣ್ಣಾ:
ಸದಾಶಿವನೆಂಬ ಲಿಂಗ[ವು], ನಂಬುವುದು,
ನಂಬಲೊಡನೆ ನೀ ವಿಜಯಿ ಕಂಡಣ್ಣಾ.
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲಸಂಗನ ಶರಣರ ವಚನ ಬೇವ ಸವಿದಂತೆ. || ೩೯ ||

೪೦
ಆದ್ಯರ ವಚನ ಪರುಷವೆಂಬೆನು,
ಆ ಪರುಷವೆನಗೆಂತು ದೊರೆಕೊಂಬುದಯ್ಯಾ?
ತನು ಮನ ಧನವ ವಿವರಿಸಿ ನುಡಿವೆ
ಸೋಂಕಿಂಗೆ ಸೈರಿಸಲಾರೆ.
ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯ
ಕೂಡಲಸಂಗಮದೇವಾ. || ೪೦ ||

೪೧
ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ?
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ.
ಆನೀ ಬಿಜ್ಜಳಂಗಂಜುವೆನೆ ಅಯ್ಯಾ?
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ. || ೪೧ ||

೪೨

ಆನೆ, ಭಂಡಾರ, ಲಾಯದ ಕುದುರೆಯ
ಬೇಡುವರಿಲ್ಲದೆ ಬಡವಾದೆನಯ್ಯಾ.
ಬೇಡುವುದೇನು ದೇವಾ?
ಮುನ್ನ ಬೇಡಿದೆ ಸಿಂಧುಬಲ್ಲಾಳನ ವಧುವನು,
ಇನ್ನು ಬೇಡಿದಡೆ, ನಿಗಳವನಿಕ್ಕುವೆ[ನೆ?].
ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡ
ಕೂಡಲಸಂಗಮದೇವಾ. || ೪೨ ||

೪೩

ಆನೆಯನೇರಿಕೊಂಡು ಹೋದಿರೇ ನೀವು,
ಕುದುರೆಯನೇರಿಕೊಂಡು ಹೋದಿರೇ ನೀವು,
ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೇ ಅಣ್ಣಾ!
ಸತ್ಯದ ನಿಲವನರಿಯದೆ ಹೋದಿರಲ್ಲಾ,
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ!
ಅಹಂಕಾರವೆಂಬ ಸದಮದ ಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಕೂಡಲಸಂಗಮದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ. || ೪೩ ||

೪೪

ಆನೆಯೂ ಆ ದಾರಿಯಲ್ಲಿ ಹೋಯಿತ್ತೆಂದಡೆ,
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲಿಬಹುದೆ?
ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ
ಹೇಳಾ, ಕೂಡಲಸಂಗಮದೇವಾ? || ೪೪ ||

೪೫

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ.
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ
ಕೂಡಲಸಂಗಮದೇವಾ,
ನೀ ಸಾಕ್ಷಿಯಾಗಿ ಛೀ ಎಂಬೆನು. || ೪೫ ||

೪೬

ಆಯುಷ್ಯ ತೀರಿದಲ್ಲದೆ ಮರಣವಿಲ್ಲ,
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ.

ಅಂಜಲದೇಕೋ ಲೋಕ ವಿಗುರ್ಬಣೆಗೆ?
ಅಂಜಲದೇಕೋ, ಕೂಡಲಸಂಗಮದೇವಾ ನಿಮ್ಮಾಳಾಗಿ. || ೪೬ ||

೪೭

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ:
ಆಯುಷ್ಯ ತೀರಿ ಪ್ರಳಯ ಬಂದಡೆ ಆ ಅರ್ಥವನುಂಬುವರಿಲ್ಲ.
ನೆಲನನಗಿದು ಮಡುಗದಿರಾ, ನೆಲ ನುಂಗಿದಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದಡೆ, ಆ ಮಡದಿಯ ಕೃತಕ ಬೇರೆ:
ನಿನ್ನ ಒಡಲು ಕೆಡೆಯಲು ಮತ್ತೊಬ್ಬನಲ್ಲಿಗೆ ಅಡಕದೆ ಮಾಬಳೆ?
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ,
ಕೂಡಲಸಂಗನ ಶರಣರಿಗೆ ಒಡನೆ ಸವೆಸುವುದು. || ೪೭ ||

೪೮

ಆರಾಧನೆಯ ಮಾಡಿದಡೆ ಅಮೃತದ ಬೆಳಸು,
ವಿರೋಧಿಸಿದಡೆ ವಿಷದ ಬೆಳಸು.
ಇದು ಕಾರಣ, ಜಂಗಮಕ್ಕೆ ಅಂಜಲೇಬೇಕು.
ಸ್ಥಾವರ ಜಂಗಮ ಒಂದೆಂದರಿದಡೆ
ಕೂಡಲಸಂಗಮದೇವ ಶರಣಸನ್ನಿಹಿತ. || ೪೮ ||

೪೯

ಆರಾರ ಮನದಲ್ಲಿ ಏನೇನಿಹುದೆಂದರಿಯೆ.
ಒಳ್ಳಿಹರೆಂದೆನಲಮ್ಮೆ,
ಹೊಲ್ಲಹರೆಂದೆನಲಮ್ಮೆ ಶಿವಭಕ್ತರಾದ ಕಾರಣ.
ಜಂಗಮವೆ ಲಿಂಗ ಕೂಡಲಸಂಗಮದೇವಾ. || ೪೯ ||

೫೦

ಆರಾರ ಸಂಗವೇನೇನ ಮಾಡದಯ್ಯಾ?
ಕೀಡೆ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ
ಬೇವು, ಬೊಬ್ಬುಲಿ, ತರೆಯ ಗಂಧಂಗಳಾಗವೆ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ? || ೫೦ ||

೫೧

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ.
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗನುಳ್ಳನ್ನಕ್ಕ? || ೫೧ ||

೫೨

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ.
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು.
ನಮ್ಮ ಕೂಡಲಸಂಗಮದೇವರ
ಮುಟ್ಟಿ ನೆರೆವ ಸುಖವ ನಾನೇನೆಂಬೆ. || ೫೨ ||

೫೩

ಆಲಿ ನುಂಗಿದ ನೋಟದಂತೆ,
ಬಯಲು ನುಂಗಿದ ಬ್ರಹ್ಮಾಂಡದಂತೆ,
ಮುತ್ತು ನುಂಗಿದ ಉದಕದಂತೆ
ಪುಷ್ಪ ನುಂಗಿದ ಪರಿಮಳದಂತೆ
ಮಹಾನುಭಾವಿಗಳ ಸಂಗಕ್ಕೆನ್ನೊಡಲ ಗುರಿಮಾಡಿದೆನಾಗಿ
ಎನ್ನೊಡಲ ಪರಿಯಾಯ ಕೆಟ್ಟಿತ್ತಯ್ಯಾ,
ಕೂಡಲಸಂಗಮದೇವಾ,
ಪ್ರಭು ಮೊದಲಾದ ಶರಣರ ಸಂಭಾಷಣೆಯಿಂದ. || ೫೩ ||

೫೪

ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು,
ಕುಲವನರಸುವರೆ ಶರಣರಲ್ಲಿ, ಜಾತಿಸಂಕರವಾದ ಬಳಿಕ?
ಶಿವಧರ್ಮಕುಲೇ ಜಾತಃ ಪುನರ್ಜನ್ಮವಿವರ್ಜಿತಃ ।
ಉಮಾ ಮಾತಾ ಪಿತಾ ರುದ್ರ ಈಶ್ವರಂ ಕುಲಮೇವ ಚ ॥
ಎಂದುದಾಗಿ, ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ.
ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನು. || ೫೪ ||

೫೫
ಆವಿಗೆಯಲೊದಗಿದ ಕರ್ಪಿನಂತೆ,
ಅಮೃತದೊಳಗಿರ್ದ ಸರ್ಪನ ತನುವಿನಂತೆ,
ಇರ್ದೆನಯ್ಯಾ, ಹೊರಗೆ ನುಂಪಾಗಿ.
ಸಿಂಹಕ್ಕೊಲಿದ ಮದಕರಿಯಂತೆ
ಆನು ಜಂಗಮಕ್ಕೊಲಿದೆನಯ್ಯಾ, ಕೂಡಲಸಂಗಮದೇವಾ. || ೫೫ ||

೫೬
ಆವನಾದಡೇನು ಶ್ರೀ ಮಹಾದೇವನ ನೆನೆವನ
ಬಾಯ ತಂಬುಲವ ಮೆಲುವೆ, ಬೀಳುಡೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲಸಂಗಮದೇವಾ. || ೫೬ ||

೫೭
ಆವನೇವನಾದಡೇನು ಹೇಮವಿಲ್ಲದಂಗೈಸಬಹುದೆ?
ಕೊಡಲಿಲ್ಲೆಂಬುದರಿಂದ ಸಾಯಲುಬಹುದು, ಸೈರಿಸಬಾರದು.
ಬೇಡುವವರ ನೋಡಿ ನೋಡಿ, ಈಯಲಿಲ್ಲದ ಜೀವನವದೇಕೆ
ಕೂಡಲಸಂಗಮದೇವಾ? || ೫೭ ||

೫೮
ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು,
ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು.
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯವರು?
ಸತಿಪತಿರತಿಸುಖಭೋಗೋಪಭೋಗವ, ವಿಳಾಸವ
ಬಿಟ್ಟನೆ ಸಿಂಧುಬಲ್ಲಾಳನು?
ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳಸಿದಡೆ
ನಿಮ್ಮಾಚಾರಕ್ಕೆ ದೂರ, ಕೂಡಲಸಂಗಮದೇವಾ. || ೫೮ ||

೫೯
ಇತ್ತ ಬಾರಯ್ಯಾ, ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು,
ಮತ್ತೆ ಕೆಲಕ್ಕೆ ಸಾರ್ದು, ಶರಣೆಂದು ಹಸ್ತ ಬಾಯನೆ ಮುಚ್ಚಿ,
ಕಿರಿದಾಗಿ ಭೃತ್ಯಾಚಾರವ ನುಡಿದು,
ವಿನಯ ತದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ,
ಕೂಡಲಸಂಗಮದೇವ ಪ್ರಮಥರ ಮುಂದೆ. || ೫೯ ||

೬೦
ಇನ್ನೇವೆನಿನ್ನೇವೆನಯ್ಯಾ?
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು.
ಎನ್ನ ನಿಂದಲ್ಲಿ ನಿಲ್ಲಲೀಯದು,
ಎನ್ನ ಕುಳಿತಲ್ಲಿ ಕುಳ್ಳಿರಲೀಯದು.
ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ,
ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ,
ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ.
ಕೂಡಲಸಂಗಮದೇವಾ,
ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ,
ಎಂದು ನಿಮ್ಮನೊಡಗೂಡುವೆನಯ್ಯಾ. || ೬೦ ||

೬೧
ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ,
ಒಬ್ಬನೆ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!
ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ. || ೬೧ ||

೬೨
ಇರಿಸಿಕೊಂಡು ಭಕ್ತರಾದರೆಮ್ಮವರು,
ತರಿಸಿಕೊಂಡು ಭಕ್ತರಾದರೆಮ್ಮವರು,
ಕೊರೆಸಿಕೊಂಡು ಭಕ್ತರಾದರೆಮ್ಮವರು,
ಜರಿಸಿಕೊಂಡು ಭಕ್ತರಾದರೆಮ್ಮವರು.
ಕೂಡಲಸಂಗನ ಶರಣರಿಗೆ ಮುಳಿಸ ತಾಳಿ
ಎನ್ನ ಭಕ್ತಿ ಅರೆಯಾಯಿತ್ತು. || ೬೨ ||

೬೩
ಇರುಳೆಂದೇನೋ ಕುರುಡಂಗೆ,
ಹಗಲೆಂದೇನೋ ಕುರುಡಂಗೆ!
ತಾಳವ ಬಾರಿಸಿದಡೇನೋ,
ಪಂಚಮಹಾಶಬುದವ ಬಾರಿಸಿದಡೇನೋ ಕಿವುಡಂಗೆ!
ಕೂಡಲಸಂಗಮದೇವಯ್ಯನ
ಪಥವಿನ್ನಾವುದೆಂದರಿಯದವಂಗೆ! || ೬೩ ||

೬೪
ಇವನಾರವ,
ಇವನಾರವ,

ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ,
ಇವ ನಮ್ಮವ,
ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ. || ೬೪ ||

೬೫
ಉಂಬ ಬಟ್ಟಲು ಬೇರೆ ಕಂಚಲ್ಲ,
ನೋಡುವ ದರ್ಪಣ ಬೇರೆ ಕಂಚಲ್ಲ.
ಭಾಂಡ ಒಂದೆ ಭಾಜನ ಒಂದೆ,
ಬೆಳಗೆ ಕನ್ನಡಿಯೆನಿಸಿತ್ತಯ್ಯಾ.
ಅರಿದಡೆ ಶರಣ, ಮರೆದಡೆ ಮಾನವ,
ಮರೆಯದೆ ಪೂಜಿಸು ಕೂಡಲಸಂಗನ. || ೬೫ ||

೬೬
ಉಂಬಲ್ಲಿ [ಊ]ಡುವಲ್ಲಿ ಕ್ರೀಯಳಿಯಿತ್ತೆಂಬರು,
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು,
ಎಂತಯ್ಯಾ ಅವರ ಭಕ್ತರೆಂತೆಂಬೆ?
ಎಂತಯ್ಯಾ ಅವರ ಯುಕ್ತರೆಂತೆಂಬೆ?
ಕೂಡಲಸಂಗಮದೇವಾ ಕೇಳಯ್ಯಾ,
ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯಾ. || ೬೬ ||

೬೭
ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮ ವಿಶೇಷವೆಂದು,
ಕಂತೆ ಬೊಂತೆಯ ಜಂಗಮ ಬಂದಡೆ ಹೀನವೆಂದು
ಕಂಡೆನಾದಡೆ ಪಂಚಮಹಾಪಾತಕ.
ಇದು ಕಾರಣ, ಅನ್ನ ವಸ್ತ್ರ ಧನ ಮಾಟದಲ್ಲಿ
ಎರಡಾಗಿ ಕಂಡೆನಾದಡೆ ನರಕದಲ್ಲಿಕ್ಕುವ,
ಕೂಡಲಸಂಗಮದೇವ. || ೬೭ ||

೬೮
ಉತ್ತಮಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ.
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯ ಶಿವದಾನವನೆರೆಯ ನೋಡಯ್ಯಾ,

ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ,
ಕೂಡಲಸಂಗಮದೇವಾ, ಶಿವಧೋ ಶಿವಧೋ! || ೬೮ ||

೬೯
ಉತ್ತಮ ಮಧ್ಯಮ ಕನಿಷ್ಠವೆಂದು, ಬಂದ ಜಂಗಮವನೆಂದೆನಾದಡೆ
ನೊಂದೆನಯ್ಯಾ, ಬೆಂದೆನಯ್ಯಾ, ಎನ್ನ ಕಿಚ್ಚು ಎನ್ನ ಸುಟ್ಟಿತ್ತು.
ಸುಖಿಜಂಗಮ, ಸಾಮಾನ್ಯಜಂಗಮ ಉಂಟೆ,
ಕೂಡಲಸಂಗಮದೇವಾ? || ೬೯ ||

೭೦
ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು,
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು,
ನನೆಯೊಳಗಣ ಪರಿಮಳದಂತಿದ್ದಿತ್ತು,
ಕೂಡಲಸಂಗಮದೇವ, ಕನ್ನೆಯ ಸ್ನೇಹದಂತಿದ್ದಿತ್ತು. || ೭೦ ||

೭೧
ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು,
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರ ಕಠಿಣವಾಯಿತ್ತು?
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು,
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು?
ಇದು ಕಾರಣ, ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ.|| ೭೧ ||

೭೨
ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ,
ನಿಮ್ಮ ನೆನೆಯಲು ತೆರಹಿಲ್ಲಯ್ಯಾ.
ಎಂತೋ ಲಿಂಗ ತಂದೆ, ಎಂತಯ್ಯಾ ಎನ್ನ ಪೂರ್ವಲಿಖಿತ?
ಬೆರಣೆಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ,
ನೀ ಕರುಣಿಸು, ಕೂಡಲಸಂಗಮದೇವಾ. || ೭೨ ||

೭೩
ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ?
ಬಯಲ ಮರೀಚಿಜಲಕ್ಕೆ ಕೆಸರುಂಟೆ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ?

ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ. || ೭೩ ||

೭೪
ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದು ಮಾಬುದೆ?
ಕಲ್ಲ ಗುಗ್ಗರಿಯ ಮೆಲಿದಡೆ ಹಲ್ಲು ಹೋಹುದು ಮಾಬುದೆ?
ಶರಣರೊಡನೆ ಸರಸವಾಡಿದಡೆ ನರಕ ತಪ್ಪದು ಕಾಣಾ
ಕೂಡಲಸಂಗಮದೇವಾ. || ೭೪ ||

೭೫
ಉಳ್ಳವರು ಶಿವಾಲಯ ಮಾಡಿಹರು,
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರ ಹೊನ್ನ ಕಲಶವಯ್ಯಾ.
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. || ೭೫ ||

೭೬
ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ? || ೭೬ ||

೭೭
ಊರ ಸೀರೆಗೆ ಅಸಗ ಬಡಿಹಡೆದಂತೆ
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ಮರುಳಾದೆ.
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ,
ಕೂಡಲಸಂಗಮದೇವಾ. || ೭೭ ||

೭೮
ಊರಿಗೆ ಹೊಸಬರು ಬಂದರೆ
ಪುರದೊಳಗಣ ಶ್ವಾನ ನೋಡಿ ಬಗುಳದೆ ಸುಮ್ಮನೆ ಬಿಡುವುದೆ?
ಊರಿಗೆ ಹೊರಗಾದ ಶರಣರು ಊರುಗಳ ಮಧ್ಯದೊಳಿರಲು
ದೂಷಕರು ದೂಷಿಸದಿಪ್ಪರೇ ಅಯ್ಯ?
ದೂಷಕರ ಧೂಮಕೇತುಗಳು ನಿಮ್ಮ ಶರಣರು,
ಕೂಡಲಸಂಗಮದೇವಾ. || ೭೮ ||

೭೯
ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ,
ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು
ಅವರ ಲಿಂಗನೆಂಬೆ, ಸಂಗನೆಂಬೆ,
ಕೂಡಲಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು. || ೭೯ ||

೮೦
ಎಡದ ಕೈಯಲು ಹಾಲ ಬಟ್ಟಲು, ಬಲದ ಕೈಯಲು ಓಜುಗಟ್ಟಿಗೆ,
ಆವಾಗ ಬಂದಾನೆಮ್ಮಯ್ಯ,
ಬಡಿದು ಹಾಲ ಕುಡಿಸುವ ತಂದೆ.
ದಂಡಕ್ಷೀರದ್ವಯಂ ಹಸ್ತೇ ಜಂಗಮೋ ಭಕ್ತಿಮಂದಿರಮ್ ।
ಅತಿಭಕ್ತ್ಯಾ ಲಿಂಗಸಂತುಷ್ಟಿರಪಹಾಸ್ಯಾದ್ಯಮದಂಡನಮ್ ॥
ಎಂದುದಾಗಿ, ಕೂಡಲಸಂಗಮದೇವಯ್ಯ, ತಾನೆ
ಭಕ್ತಿಯ ಪಥವ ತೋರುವ ತಂದೆ. || ೮೦ ||

೮೧
ಎಡದ ಪಾದದಲೊದ್ದಡೆ ಬಲದ ಪಾದವ ಹಿಡಿವೆ,
ಬಲದ ಪಾದದಲೊದ್ದಡೆ ಎಡದ ಪಾದವ ಹಿಡಿವೆ,
ತ್ರಾಹಿ ತ್ರಾಹಿ ತಪ್ಪೆನ್ನದು, ಕ್ಷಮೆ ನಿಮ್ಮದು.
ಕೂಡಲಸಂಗಮದೇವಾ,
ನಿಮ್ಮ ಕರುಣದ ಕಂದ ನಾನು. || ೮೧ ||

೮೨
ಎಂತಕ್ಕೆ ಎಂತಕ್ಕೆ
ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು ಓ!
ಬೆರಣೆಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣು ಓ!
ಮರಳಿ ಭವಕ್ಕೆ ಬಾಹೆ, ಬಾರದಿಹೆ,
ಕರ್ತು ಕೂಡಲಸಂಗಂಗೆ ಶರಣೆನ್ನು ಓ! || ೮೨ ||

೮೩
ಎತ್ತ ನೋಡಿದಡತ್ತ ನಿಮ್ಮ ತೇಜವನೇ ಕಾಬೆನಲ್ಲದೆ
ಮತ್ತೊಂದು ಕಾಣೆ.
ಎನ್ನ ಚಿತ್ತ ನೋವಲ್ಲಿ ನೊಂದಲ್ಲಿ ನೆನೆವಲ್ಲಿ ನೀನೇ ಇಪ್ಪೆಯಾಗಿ,
ಬೆಳಗಿರಲು ಕತ್ತಲೆಯುಂಟೆ
ಕೂಡಲಸಂಗಮದೇವಾ? || ೮೩ ||

೮೪
ಎತ್ತು ತೊತ್ತಾಗಿ, ಭೃತ್ಯನಾಗಿ ಎಂದಿಪ್ಪೆನಯ್ಯಾ;
ನಿಮ್ಮವರ ಮನೆಯಲು ಕೂಡಲಸಂಗಮದೇವಾ,
ಲಿಂಗಜಂಗಮದ ಲೆಂಗಿಯಾಗಿ. || ೮೪ ||

೮೫
ಎತ್ತೆತ್ತ ನೋಡಿದಡತ್ತತ್ತ ನೀನೆ ದೇವಾ,
ಸಕಲವಿಸ್ತಾರದ ರೂಹು ನೀನೆ ದೇವಾ,
'ವಿಶ್ವತಶ್ಚಕ್ಷು' ನೀನೆ ದೇವಾ,
'ವಿಶ್ವತೋ ಮುಖ' ನೀನೆ ದೇವಾ,
'ವಿಶ್ವತೋ ಬಾಹು' ನೀನೆ ದೇವಾ,
'ವಿಶ್ವತಃ ಪಾದ' ನೀನೆ ದೇವಾ, ಕೂಡಲಸಂಗಮದೇವಾ. || ೮೫ ||

೮೬
ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ,
ನಾಲಗೆ ನಲಿನಲಿದೋಲಾಡುವನ್ನಕ್ಕ,
ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯಾ, ಎನಗೆನ್ನ ತಂದೆ.
ಬಿರಿಮುಗುಳಂದದಿ ಎನ್ನ ಹೃದಯ
ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ,
ಕೂಡಲಸಂಗಯ್ಯಾ. || ೮೬ ||

೮೭
ಎನಗೆ ಜನನವಾಯಿತ್ತೆಂಬರು ಎನಗೆ ಜನನವಿಲ್ಲವಯ್ಯಾ,
ಎನಗೆ ಮರಣವಾಯಿತ್ತೆಂಬರು ಎನಗೆ ಮರಣವಿಲ್ಲವಯ್ಯಾ.
ಜನನವಾದಡೆ ನಿಮ್ಮ ಪಾದೋದಕ ಪ್ರಸಾದವ ಕೊಂಬೆ,
ಮರಣವಾದಡೆ ನಿಮ್ಮ ಶ್ರೀಚರಣವನೆಯ್ದುವೆ.
ಬಾವನ್ನದ ವೃಕ್ಷವು ಊರೊಳಗಿದ್ದಡೇನು, ಅಡವಿಯೊಳಗಿದ್ದಡೇನು?
ಪರಿಮಳ ಒಂದೇ, ಕೂಡಲಸಂಗಮದೇವಾ. || ೮೭ ||

೮೮
ಎನಗೆ ನಾನೇ ಹಗೆ ನೋಡಯ್ಯಾ,
ಎನಗೆ ನಾನೇ ಕೆಳೆ ನೋಡಯ್ಯಾ.
ನಿಮ್ಮ ಸದ್ಭಕ್ತರೊಡನೆ ವಿರೋಧಮಾಡಿದಡೆ ಎನ್ನ ಕೊಲುವುದಾಗಿ,
ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ ಎನ್ನ ಕಾಯ್ಬುದಾಗಿ.

ಅನ್ಯ ಹಗೆಯೆಲ್ಲಿ? ಕೆಳೆಯೆಲ್ಲಿ?
ಬಾಗಿದ ತಲೆಯ ಮುಗಿದ ಕೈಯಾಗಿರಿಸು,
ಕೂಡಲಸಂಗಮದೇವಾ. ॥ ೮೮ ॥

೮೯

ಎನಗೆ ನಿಮ್ಮ ನೆನಹಾದಾಗ ಉದಯ,
ಎನಗೆ ನಿಮ್ಮ ಮರಹಾದಾಗ ಅಸ್ತಮಾನ.
ಎನಗೆ ನಿಮ್ಮ ನೆನಹವೆ ಜೀವನ,
ಎನಗೆ ನಿಮ್ಮ ನೆನಹವೆ ಪ್ರಾಣ, ಕಾಣಾ ತಂದೆ.
ಸ್ವಾಮಿ, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ,
ವದನದಲಿ ಷಡಕ್ಷರಿಯ ಬರೆಯಯ್ಯಾ, ಕೂಡಲಸಂಗಮದೇವಾ. ॥ ೮೯ ॥

೯೦

ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು,
ನೆನೆದು ಮೃದುವಾಗಬಲ್ಲುದೆ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ,
ಅದರ ವಿಧಿ ಎನಗಾಯಿತ್ತು, ಕೂಡಲಸಂಗಮದೇವಾ. ॥ ೯೦ ॥

೯೧

ಎನಿಸೆನಿಸೆಂದಡೆ ನಾ ಧೃತಿಗೆಡೆನಯ್ಯಾ.
ಎಲುದೋರಿದಡೆ, ನರ ಹರಿದಡೆ, ಕರುಳು ಕುಪ್ಪಳಿಸಿದಡೆ
ನಾ ಧೃತಿಗೆಡೆನಯ್ಯಾ.
ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದಡೆ
ನಾಲಗೆ ಕೂಡಲಸಂಗಾ ಶರಣೆನ್ನುತ್ತಿದ್ದಿತ್ತಯ್ಯಾ. ॥ ೯೧ ॥

೯೨

ಎನ್ನ ಕಾಯವ ದಂಡಿಗೆಯ ಮಾಡಯ್ಯಾ,
ಎನ್ನ ಶಿರವ ಸೋರೆಯ ಮಾಡಯ್ಯಾ,
ಎನ್ನ ನರವ ತಂತಿಯ ಮಾಡಯ್ಯಾ,
ಎನ್ನ ಬೆರಳ ಕಡ್ಡಿಯ ಮಾಡಯ್ಯಾ,
ಬತ್ತೀಸ ರಾಗವ ಪಾಡಯ್ಯಾ, ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ. ॥ ೯೨ ॥

೯೩
ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ,
ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೆ ದಿಬ್ಯ.
ಕೂಡಲಸಂಗಮದೇವಯ್ಯಾ,
ನಿಮ್ಮ ಪ್ರಮಥರ ಮುಂದೆ ಕಿನ್ನರಿ ಬೊಮ್ಮಣ್ಣ ಸಾಕ್ಷಿ. || ೯೩ ||

೯೪
ಎನ್ನ ನುಡಿ ಎನಗೆ ನಂಜಾಯಿತ್ತು, ಎನ್ನ ಅಲಗೆ ಎನ್ನ ಕೊಂದಿತ್ತು.
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ.
ತರಳತನದಲ್ಲಿ ಕೆಟ್ಟೆನಯ್ಯಾ,
ಭಕ್ತಿಯ ಹೊಲಬನರಿಯದೆ ಮರುಳಾದೆನಯ್ಯಾ.
ಆಳು ಮುನಿದಡೆ ಆಳೇ ಕೆಡುವನು,
ಆಳ್ದ ಮುನಿದಡೆ ಆಳೇ ಕೆಡುವನು.
ನೀವು ಮುನಿದಡೆ ನಾನೇ ಕೆಡುವೆನಯ್ಯಾ,
ಕೂಡಲಸಂಗಮದೇವಾ. || ೯೪ ||

೯೫
ಎನ್ನ ಮನವೆಂಬ ಮರ್ಕಟನು
ತನುವಿಕಾರವೆಂಬ ಅಲ್ಪಸುಖದಾಸೆಗಾಡಿ,
ವೃಥಾ ಭ್ರಮೆಗೊಂಡು, ನಾನಾ ದೆಸೆಗೆ ಲಂಘಿಸಿ,
ಅಳಲಿಸಿ ಬಳಲಿಸುತ್ತಿದೆ ನೋಡಾ!
ಕೂಡಲಸಂಗಮದೇವರೆಂಬ ಕಲ್ಪವೃಕ್ಷಕ್ಕೆ ಲಂಘಿಸಿ
ಅಪರಿಮಿತದ ಸುಖವನ್ನೈದದು, ನೋಡಾ. || ೯೫ ||

೯೬
ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ.
ಎನ್ನ ಹೊಗಳತೆ ಎನ್ನನಿಮ್ಮೈಗೊಂಡಿತ್ತಲ್ಲಾ.
ಅಯ್ಯೋ, ನೊಂದೆನು, ಸೈರಿಸಲಾರೆನು!
ಅಯ್ಯಾ, ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲಾ
ಅಯ್ಯೋ, ನೊಂದೆನು, ಸೈರಿಸಲಾರೆನು.
ಕೂಡಲಸಂಗಮದೇವಾ,
ನೀನೆನಗೆ ಒಳ್ಳಿದನಾದಡೆ
ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ! || ೯೬ ||

೯೭

ಎನ್ನ ಪಾಮ-ಕ್ಷೇಮ ನಿಮ್ಮದಯ್ಯಾ,
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ,
ಎನ್ನ ಮಾನಾಪಮಾನವೂ ನಿಮ್ಮದಯ್ಯಾ,
ಬಳ್ಳಿಗೆ ಕಾಯಿ ದಿಮಿತ್ತೆ ಕೂಡಲಸಂಗಮದೇವಾ. ॥ ೯೭ ॥

೯೮

ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ.
ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು
ನಾನೇನು ಪಾಪವ ಮಾಡಿದೆನೊ.
ಬೆಳೆಯದ ಮುನ್ನವೆ ಕೊಯ್ವರೆ ಹೇಳಯ್ಯಾ.
ಇರಿಯದ ವೀರ, ಇಲ್ಲದ ಸೊಬಗು!
ಎಲ್ಲಾ ಒಡೆಯರೂ ಏರಿಸಿ ನುಡಿವರು,
ಎನಗಿದು ವಿಧಿಯೆ, ಕೂಡಲಸಂಗಮದೇವಾ. ॥ ೯೮ ॥

೯೯

ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ.
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಸಂಗಮದೇವಾ, ಎನಗಿದೇ ದಿಬ್ಯ. ॥ ೯೯ ॥

೧೦೦

ಎಂಬತ್ತನಾಲ್ಕು ಲಕ್ಷ ಮುಖದೊಳಗೊಂದೆ ಮುಖವಾಗಿ
ಕಾಡಿ ನೋಡೆನ್ನನು, ಬೇಡಿ ನೋಡೆನ್ನನು.
ಬೇಡದಿದ್ದಡೆ, ಅಯ್ಯಾ, ನಿಮಗೆ ಪ್ರಮಥರಾಣೆ.
ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು,
ಕೂಡಲಸಂಗಮದೇವಾ. ॥ ೧೦೦ ॥

೧೦೧

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ,
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ,
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ,
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ. ॥ ೧೦೧ ॥

೧೦೨
ಎರೆದಡೆ ನನೆಯದು, ಮರೆದಡೆ ಬಾಡದು,
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ:
ಕೂಡಲಸಂಗಮದೇವಾ, ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು. ॥ ೧೦೨ ॥

೧೦೩
ಎಲವದ ಮರ ಹೂತು ಫಲವಾದ ತೆರನಂತೆ:
ಸಿರಿಯಾದಡೇನು, ಶಿವಭಕ್ತಿಯಿಲ್ಲದನ್ನಕ್ಕ?
ಫಲವಾದಡೇನು ಹೇಳಾ, ಹಾವುಮೆಕ್ಕೆಯ ಕಾಯಿ?
ಕುಲವಿಲ್ಲದ ರೂಹು ಎಲ್ಲಿದ್ದಡೇನು?
ಬಚ್ಚಲ ನೀರು ತಿಳಿದಲ್ಲಿ ಫಲವೇನು?
ಅವಗುಣಗಳನು ಮೆಚ್ಚ ಕೂಡಲಸಂಗಮದೇವ. ॥ ೧೦೩ ॥

೧೦೪
ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಳ, ಬೆಳುದಿಂಗಳು, ಸಿರಿ ಸ್ಥಿರವಲ್ಲ.
ಕೇಡಿಲ್ಲದ ಪದವಿ
ಕೂಡಲಸಂಗಮದೇವಯ್ಯನ ಮರೆಯದೆ ಪೂಜಿಸು. ॥ ೧೦೪ ॥

೧೦೫
ಎಲ್ಲರೂ ವೀರರು, ಎಲ್ಲರೂ ಧೀರರು.
ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು:
ಕಾಳಗದ ಮುಖದಲ್ಲಿ ಕಾಣಬಾರದು,
ಓಡುವ ಮುಖದಲ್ಲಿ ಕಾಣಬಹುದು.
ನಮ್ಮ ಕೂಡಲಸಂಗನ ಶರಣರು ಧೀರರು,
ಉಳಿದವರೆಲ್ಲರೂ ಅಧೀರರು. ॥ ೧೦೫ ॥

೧೦೬
ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಪರವಧುವನು ಮಹಾದೇವಿಯೆಂಬೆ
ಕೂಡಲಸಂಗಮದೇವಾ. ॥ ೧೦೬ ॥

೧೦೭
ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ.
ಉಪ್ಪ ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ.

ಕೂಡಲಸಂಗಮದೇವಾ,
ಆನು ಮಾಡಿದೆನೆಂಬ ಕಿಚ್ಚು ಸಾಲದೆ? ॥ ೧೦೭ ॥

೧೦೮
ಏತ ತಲೆವಾಗಿದಡೇನು, ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೆ?
ಕೂಡಲಸಂಗನ ಶರಣರು ಬಂದ ಬರವ, ನಿಂದ ನಿಲವ
ಅನಂಗಸಂಗಿಗಳೆತ್ತ ಬಲ್ಲರು. ॥ ೧೦೮ ॥

೧೦೯
ಏನನಾದಡೆಯೂ ಸಾಧಿಸಬಹುದು,
ಮತ್ತೇನನಾದಡೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು,
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ. ॥ ೧೦೯ ॥

೧೧೦
ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು,
ನಿಮ್ಮವರೊಲಿಯದನ್ನಕ್ಕ?
ಶಿವ ಶಿವ, ಮಹಾದೇವಾ,
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ,
ಕೂಡಲಸಂಗಮದೇವಾ. ॥ ೧೧೦ ॥

೧೧೧
ಏನಯ್ಯಾ, ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಕೂಡಲಸಂಗಮದೇವಯ್ಯಾ,
ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ
ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ. ॥ ೧೧೧ ॥

೧೧೨
ಏನಿ ಬಂದಿರಿ, ಹದುಳಿದ್ದಿರೆ ಎಂದಡೆ
ನಿ[ಮ್ಮೈ]ಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಸಿರ[ಪಟ್ಟೆ]ಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಬನೆ ಕೂಡಸಂಗಮದೇವಯ್ಯ? ॥ ೧೧೨ ॥

೧೧೩
ಒಂದಕ್ಕೊಂಬತ್ತ ನುಡಿದು, ಕಣ್ಣ ಕೆಚ್ಚನೆ ಮಾಡಿ, ಗಂಡುಗೆದರಿ
ಮುಡುಹಿಕ್ಕಿ ಕೆ[ಲೆ]ವರ ಕಂಡಡಂಜುವೆ, ಓಸರಿಸುವೆ!
ಓಡಿದೆನೆಂಬ ಭಂಗವಾದಡಾಗಲಿ.
ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ. || ೧೧೩ ||

೧೧೪
ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ,
ಎನ್ನ ಬಿಡು, ತನ್ನ ಬಿಡು ಎಂಬುದು ಕಾಯವಿಕಾರ,
ಎನ್ನ ಬಿಡು, ತನ್ನ ಬಿಡು, ಎಂಬುದು ಮನೋವಿಕಾರ.
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೈದುಗೆ, ಕೂಡಲಸಂಗಮದೇವಾ. || ೧೧೪ ||

೧೧೫
ಒಡೆದ ಹಂಚು ಮರಳಿ ಮಡಕೆಯಾಗಬಲ್ಲುದೆ?
ಕೆಟ್ಟ ವ್ರತಗೇಡಿ ಭಕ್ತನಾಗಬಲ್ಲನೆ?
ಬಾಳೆಗೆ ಫಲವೆ ಕಡೆ, ಚೇಳಿಗೆ ಗರ್ಭವೆ ಕಡೆ.
ಕೂಳು ಮಾರೆಡೆಯುಂಟು, ಸೀರೆ ಮಾರೆಡೆಯುಂಟು,
ಭಕ್ತಿ ಮಾರೆಡೆಯುಂಟೆ, ಕೂಡಲಸಂಗಮದೇವಾ? || ೧೧೫ ||

೧೧೬
ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ,
ಕೊಡು ದೇವ, ಎನ್ನ ಕೈಯಲೊಂದು ಕರಿಕೆಯನು.
'ಮೃಡದೇವಾ ಶರಣೆ'ಂದು ಭಿಕ್ಷಕ್ಕೆ ಹೋದಡೆ
ಅಲ್ಲಿ, 'ನಡೆ ದೇವಾ' ಎಂದೆನಿಸು ಕೂಡಲಸಂಗಮದೇವಾ. || ೧೧೬ ||

೧೧೭
ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹುಗುವಂತೆ,
ನೀನಿಲ್ಲದವರ ಮನೆಯ ಹೊಗೆನು, ಸಂಗಯ್ಯಾ.
ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯಾ
ನೀನಿದ್ದವನೆ ಕುಲಜನು. || ೧೧೭ ||

೧೧೮
ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದಡೆ,
ತುಡುಗುಣಿತನದಲ್ಲಿ ಪರವಧುವ ನೋಡುವ ಸರಸಬೇಡ.

ಕಾಣಿರಣ್ಣಾ! ಒಡೆಯನರಸಿಯ ಸರಸಬೇಡ.
ಕೂಳ ಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ.
ಕೂಡಲಸಂಗಮದೇವ ಕರ ಸಿತಗನಯ್ಯಾ. || ೧೧೮ ||

೧೧೯
ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ,
ನಂಟರು ಬಂದಡೆ ಸಮಯವಿಲ್ಲೆನ್ನಿ.
ಅಂದೇಕೆ ಬಾರರು?
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ? || ೧೧೯ ||

೧೨೦
ಒಡೆಯರುಳ್ಳಾಳಿಂಗೆ ಕೇಡಿಲ್ಲ ಕಾಣಿರೊ!
ಊರೆನ್ನದೆ ಅಡವಿಯೆನ್ನದೆ, ಆಳನರಸಿ ಬಹ [ಆಳ್ದ]ರುಂಟೆ!
ಜೋಳವಾಳಿಂಗೆ ಬಿಜ್ಜಳಂಗೆ ಆಳಾದಡೇನು?
ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲಸಂಗಮದೇವ. || ೧೨೦ ||

೧೨೧
ಒಣಗಿಸಿ ಎನ್ನ ಘುಣಘುಣಲನೆ ಮಾಡಿದಡೆಯೂ,
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ.
ಶರಣೆಂಬುದ ಮಾಣೆ, ಮಾಣೆ.
ಕೂಡಲಸಂಗಮದೇವಯ್ಯಾ, ಎನ್ನ ಹೆಣನ ಮೇಲೆ
ಕಂಚಿಟ್ಟುಂಡಡೆಯೂ ಮಾಣೆ, ಮಾಣೆ. || ೧೨೧ ||

೧೨೨
ಒತ್ತಿ ಹೊಸೆದ ಕಿಚ್ಚ ನಾ ಮಾಡಿದೆನೆಂದು ಮುಟ್ಟಿ ಹಿಡಿದಡೆ,
ಕೈ ಬೇಯದಿಹುದೆ?
ಎನ್ನಿಂದಾಯಿತ್ತು, ಎನ್ನಿಂದಾಯಿತ್ತು, ಎನ್ನಿಂದಾಯಿತ್ತು
ಎನ್ನದಿರು ಮನವೆ,
ನಾನು ಮಾಡಿದೆನೆನ್ನದಿರು ಮನವೆ.
ಕೂಡಲಸಂಗಮದೇವ ಕೇಳಯ್ಯಾ,
ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು. || ೧೨೨ ||

೧೨೩
ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ:
ಆ ಪೂಜೆಯು, ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ, ಚಿತ್ರದ ಕಬ್ಬು ಕಾಣಿರಣ್ಣಾ,
ಅಪ್ಪಿದಡೆ ಸುಖವಿಲ್ಲ, ಮೆಲಿದಡೆ ರುಚಿಯಿಲ್ಲ.
ಕೂಡಲಸಂಗಮದೇವಾ, ನಿಜವಿಲ್ಲದವನ ಭಕ್ತಿ. ॥ ೧೨೩ ॥

೧೨೪
ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ! ॥ ೧೨೪ ॥

೧೨೫
ಒಲೆಯ ಬೂದಿಯ ಬಿಲಿಯಲು ಬೇಡ,
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ?
ಒಂದನಾಡಹೋಗಿ ಒಂಬತ್ತನಾಡುವ ಡಂಬಕರ ಮೆಚ್ಚ
ಕೂಡಲಸಂಗಯ್ಯ. ॥ ೧೨೫ ॥

೧೨೬
ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ,
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು,
ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ.
ಕೂಡಲಸಂಗಮದೇವಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ॥ ೧೨೬ ॥

೧೨೭
ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದಡೇನು?
ತನ್ನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ
ಭೋಗಿಸುವುದೆ ಆಚಾರ.
ಕೂಡಲಸಂಗಮದೇವರನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು. ॥ ೧೨೭ ॥

೧೨೮
ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು,
ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯಾ.
ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ
ಆಯಿತಯ್ಯಾ ಎನ್ನ ಮತಿ, ಕೂಡಲಸಂಗಮದೇವಾ. || ೧೨೮ ||

೧೨೯
ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ.
ಓಡಲಾಗದು ಲೆಂಕನು, ಬೇಡಲಾಗದು ಭಕ್ತನು.
ಓಡೆನಯ್ಯಾ, ಬೇಡೆನಯ್ಯಾ,
ಕೂಡಲಸಂಗಮದೇವಾ. || ೧೨೯ ||

೧೩೦
ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?
ಕೋಡಗ ಬಲ್ಲುದೆ ಸೆಳೆಮಂಚದ ಸುಖವ?
ಕಾಗೆ ನಂದನವನದೊಳಗಿದ್ದಡೇನು,
ಕೋಗಿಲೆಯಾಗಬಲ್ಲುದೆ ಹೇಳಾ?
ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು,
ಕಳಹಂಸಿಯಾಗಬಲ್ಲುದೆ, ಕೂಡಲಸಂಗಮದೇವಾ? || ೧೩೦ ||

೧೩೧
ಓತಿ ಬೇಲಿವರಿವಂತೆ ಎನ್ನ ಮನವಯ್ಯಾ,
ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು,
ಬಾವುಲ ಬಾಳುವೆಯಂತೆನ್ನ ಮನವು.
ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ
ನಾನಿಲ್ಲದ ಭಕ್ತಿಯ ಬಯಸಿದಡುಂಟೆ
ಕೂಡಲಸಂಗಮದೇವಾ? || ೧೩೧ ||

೧೩೨
ಓದಿದಡೇನು, ಕೇಳಿದಡೇನು, ಶಿವಪಥವನರಿಯದನ್ನಕ್ಕ?
ಓದಿತ್ತು ಕಾಣಿರೋ ಶುಕನು, ಶಿವಜ್ಞಾನವನರಿಯದನ್ನಕ್ಕ.
ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು
ಕೂಡಲಸಂಗಮದೇವಾ. || ೧೩೨ ||

೧೩೩

ಕಂಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ,
ಮಹಂತ ಕೂಡಲಸಂಗಮದೇವನ. || ೧೩೩ ||

೧೩೪

ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು
ದೃಷ್ಟಿ[ವಾರಿ] ಶರಣೆಂದಡೆ,
ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ.
ಮುಟ್ಟಿ ಚರಣಕ್ಕೆರಗಿದಡೆ ತನು[ವ]ಪ್ಪಿದಂತೆ,
ಅಹುದು ಪರುಷ ಮುಟ್ಟಿದಂತೆ.
ಕರ್ತೃ ಕೂಡಲಸಂಗನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ. || ೧೩೪ ||

೧೩೫

ಕಂಡ ಭಕ್ತರಿಗೆ ಕೈಮುಗಿಯುವಾತನೆ ಭಕ್ತ,
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ,
ಸದುವಿನಯವೆ ಸದಾಶಿವನ ಒಲುಮೆಯಯ್ಯಾ.
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ. || ೧೩೫ ||

೧೩೬

ಕಂಡುದಕ್ಕೆಳಸೆನೆನ್ನ ಮನದಲ್ಲಿ,
ನೋಡಿ ಸೋಲೆನೆನ್ನ ಕಂಗಳಲ್ಲಿ,
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ.
ಕೂಡಲ ಸಂಗಮದೇವಾ,
ನಿಮ್ಮ ಶರಣನ ಪರಿ ಇಂತುಟಯ್ಯಾ. || ೧೩೬ ||

೧೩೭

ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ,
ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ,
ಬಡವಾದೆನಯ್ಯಾ ಎನ್ನ ತನು ಮನ ಧನವ ಬೇಡುವರಿಲ್ಲದೆ.

ಕಾಡುವ ಬೇಡುವ ಶರಣರ ತಂದು
ಕಾಡಿಸು ಬೇಡಿಸು ಕೂಡಲಸಂಗಮದೇವಾ. || ೧೩೭ ||

೧೩೮
ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ,
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ.
'ಸ್ಥಾವರ ಜಂಗಮ' ಒಂದೇ ಎಂದುದು ಕೂಡಲಸಂಗನ ವಚನ. || ೧೩೮ ||

೧೩೯
ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ ಎನಗಾಯಿತ್ತಯ್ಯಾ,
ಅಕಟಕಟಾ, ಸಂಸಾರ ವೃಥಾಹೋಯಿತ್ತಲ್ಲಾ.
ಕರ್ತುವೆ ಕೂಡಲಸಂಗಮದೇವಾ,
ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ. || ೧೩೯ ||

೧೪೦
ಕಬ್ಬಿನ ಮೇಲೆ ಜೇನಿಟ್ಟಿತ್ತೆಂಬರು,
ಅವು ಒಂದರ ಸಿಹಿಯನೊಂದರಿಯವು.
ಭಕ್ತ ಜಂಗಮದ ನಡುವೆ
ಅರ್ಥ ಪ್ರಾಣ ಅಭಿಮಾನವೆಂಬ ಸಿಗುರು ಕಾಡಿತ್ತು ಕಾಣಾ,
ಕೂಡಲಸಂಗಮದೇವಾ. || ೧೪೦ ||

೧೪೧
ಕಬ್ಬುನದ ಕೋಡಗವ ಪರುಷ ಮುಟ್ಟಲು,
ಹೊನ್ನಾದಡೇನು ಮತ್ತೇನಾದಡೇನು
ತನ್ನ ಮುನ್ನಿನ ರೂಹ ಬಿಡದನ್ನಕ್ಕ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರುಗಳಯ್ಯಾ. || ೧೪೧ ||

೧೪೨
ಕಬ್ಬುನ ಪರುಷವೇದಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದೊಡಾ ಪೂಜೆಯದೇಕೊ? || ೧೪೨ ||

೧೪೩
ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ,
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವನಿಕ್ಕಿ ನೋಡಯ್ಯಾ,

ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು,
ಕೂಡಲಸಂಗಮದೇವಾ. || ೧೪೩ ||

೧೪೪
ಕರಿ ಘನ: ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ.
ಗಿರಿ ಘನ: ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ.
ತಮಂಧ ಘನ: ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ.
ಮರಹು ಘನ: ನಿಮ್ಮ ನೆನೆವ ಮನ ಕಿರಿದೆನ್ನಬಹುದೆ? ಬಾರದಯ್ಯಾ
ಕೂಡಲಸಂಗಮದೇವಾ. || ೧೪೪ ||

೧೪೫
ಕರಿಯಂಜುವುದು ಅಂಕುಶಕ್ಕಯ್ಯಾ,
ಗಿರಿಯಂಜುವುದು ಕುಲಿಶಕ್ಕಯ್ಯಾ,
ತಮಂಧವಂಜುವುದು ಜ್ಯೋತಿಗಯ್ಯಾ,
ಕಾನನವಂಜುವುದು ಬೇಗೆಗಯ್ಯಾ,
ಪಂಚಮಹಾಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ. || ೧೪೫ ||

೧೪೬
ಕಲಿತನ ತನಗುಳ್ಳಡೆ ಸೂಜಿ ಬಾಳು ಮೊದಲಾಗಿ ಕಾದಲೇ ಬೇಕು.
ಶರಣಪಥ ತನಗುಳ್ಳಡೆ ಶಿವಭಕ್ತರ ಮನೆಯಲ್ಲಿ ಶಿವರಸವ
ಪಂಚಾಮೃತವ ಮಾಡಿಕೊಳ್ಳಬೇಕು.
ಭ್ರಾಂತುವಿಡಿದು ಲಿಂಗಕ್ಕೋಗರವನರಸುವ
ಪಾತಕರ ಮೆಚ್ಚ ಕೂಡಲಸಂಗಮದೇವ. || ೧೪೬ ||

೧೪೭
ಕಲಿಯ ಕೈಯ ಕೈದುವಿನಂತಿರಬೇಕಯ್ಯಾ,
ಎಲುದೋರೆ ಸರಸವಾಡಿದಡೆ ಸೈರಿಸಬೇಕಯ್ಯಾ,
ರಣದಲ್ಲಿ ತಲೆ ಹರಿದು ನೆಲಕ್ಕೆ ಬಿದ್ದು
ಬೊಬ್ಬಿಡಲದಕ್ಕೆ ಒಲಿವ ಕೂಡಲಸಂಗಮದೇವ. || ೧೪೭ ||

೧೪೮
ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.

ಉಂಬ ಜಂಗಮ ಬಂದಡೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ. || ೧೪೮ ||

೧೪೯
ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು,
ಹಾಲೊಳಗೆ ತುಪ್ಪವುಂಟು,
ಅಂತರಾಮಿಯಲ್ಲಿ ಶಿವನಿಹನು.
ಇದೇನು ಕಾರಣ ಕತ್ತಲೆ! ಕಾಣಬಾರದು.
ತೋರಬಲ್ಲ ಗುರು ಸುಳಿಯನು, ಕೂಡಲಸಂಗಮದೇವಾ. || ೧೪೯ ||

೧೫೦
ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ. || ೧೫೦ ||

೧೫೧
ಕಳ್ಳ, ಬಂದಿಕಾರ, ಹಾವಡಿಗ, ಹಾದರಿಗ,
ಬಂಟನೋಲೆಯಕಾರನೆಂದೆನಾದಡೆ,
ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿದ್ದಡೆ, ಅದೇ ದ್ರೋಹ.
ನಡೆನುಡಿ ಹುಸಿಯುಂಟಾದಡೆ,
ಕೂಡಲಸಂಗನ ತೋರಿದ ಚೆನ್ನಬಸವಣ್ಣನಾಣೆ. || ೧೫೧ ||

೧೫೨
ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ. || ೧೫೨ ||

೧೫೩
ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ.
ಕರ್ಮಾವಲಂಬಿನಃ ಕೇಚಿತ್ ಕೇಚಿತ್ ಜ್ಞಾನಾವಲಂಬಿನಃ ।

ವಯಂ ತು ಶಿವಭಕ್ತಾನಾಂ ಪಾದರಕ್ಷಾವಲಂಬಿನಃ ||
ಕೂಡಲಸಂಗಮದೇವಾ,
ನಿಮ್ಮ ಸೆರಗೊಡ್ಡಿ ಬೇಡು[ವೆ], ಇದೊಂದೇ ವರವ ಕರುಣಿಸಯ್ಯಾ. || ೧೫೩ ||

೧೫೪
ಕಾಣದ ಠಾವಿನಲಿ ಜರೆದರೆಂದಡೆ ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ?
ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ!
ಎನ್ನ ಮನದ ತದ್ ದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಲಸಂಗಮದೇವಾ. || ೧೫೪ ||

೧೫೫
ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಮೊಗೆಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನಹುಳುವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡಡೆ ಹೋಲಬಹುದೆ?
ಎನ್ನೊಡೆಯ ಕೂಡಲಸಂಗನ ಶರಣರನು
ಪುಣ್ಯವಿಲ್ಲದೆ ಕಾಣಬಹುದೆ? || ೧೫೫ ||

೧೫೬
ಕಾಣೆಯ ಲೋಭ ಕೋಟಿಯ ಲಾಭವ ಕೆಡಿಸಿದುದ
ನಾನರಿಯೆನಯ್ಯಾ.
ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ
ನಾನರಿಯೆನಯ್ಯಾ.
ಕೂಡಲಸಂಗನ ಶರಣರ ಸಂಗದಿಂದ ಅರಿದಡೆ
ನಾನು ಬದುಕುವೆನಯ್ಯಾ. || ೧೫೬ ||

೧೫೭
ಕಾಯದ ಕಳವಳಕ್ಕಂಜಿ, 'ಕಾಯಯ್ಯಾ' ಎನ್ನೆನು,
ಜೀವನೋಪಾಯಕ್ಕೆ 'ಈಯಯ್ಯಾ' ಎನ್ನೆನು.
'ಯದ್ ಭಾವ್ಯಂ ತದ್ ಭವತಿ', ಉರಿ ಬರಲಿ, ಸಿರಿ ಬರಲಿ

ಬೇಕು ಬೇಡೆನ್ನೆನಯ್ಯಾ.
ಆನು ನಿಮ್ಮ ಹಾರೆನು, ಮಾನವರ ಬೇಡೆನು.
ಆಣೆ ನಿಮ್ಮಾಣೆ, ಕೂಡಲಸಂಗಮದೇವಾ. ॥ ೧೫೭ ॥

೧೫೮
ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು,
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು,
ಇಂತಪ್ಪ ಸಂಸಾರಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ, ಕೂಡಲಸಂಗಯ್ಯಾ. ॥ ೧೫೮ ॥

೧೫೯
ಕಿವಿಯ ಸೂತಕ ಹೋಯಿತ್ತು,
ಸದ್ಗುರುವಿನ ವಚನದಿಂದ.
ಕಂಗಳ ಸೂತಕ ಹೋಯಿತ್ತು,
ಸದ್ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು,
ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು,
ನಿಮ್ಮ ಒಕ್ಕುದ ಕೊಂಡೆನಾಗಿ.
ನಾನಾ ಸೂತಕ ಹೋಯಿತ್ತು,
ನಿಮ್ಮ ಶರಣರ ಅನುಭಾವಿಯಾಗಿ.
ಕೂಡಲಸಂಗಮದೇವಾ ಕೇಳಯ್ಯಾ,
ಎನ್ನ ಮನದ ಸೂತಕ ಹೋಯಿತ್ತು,
ನೀವಲ್ಲದಿಲ್ಲೆಂದರಿದೆನಾಗಿ. ॥ ೧೫೯ ॥

೧೬೦
ಕೀಟಕ ಸೂತ್ರದ ನೂಲಗೂಡಮಾಡಿ ಸುತ್ತಿರ್ಪಂತೆ
ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ?
ರಾಟೆಯಿಲ್ಲ, ಅದಕ್ಕೆ ಹಂಜಿ ಮುನ್ನವೆ ಇಲ್ಲ, ನೂತವರಾರೋ?
ತನ್ನೊಡಲ ನೂಲ ತೆಗೆದು ಪಸರಿಸಿ,
ಅದರೊಳು ಪ್ರೀತಿಯಿಂದೊಲಿದಾಡಿ,
ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ,
ತನ್ನಿಂದಾದ ಜಗವ ತನ್ನೊಳಗೈದಿಸಿಕೊಳಬಲ್ಲ
ನಮ್ಮ ಕೂಡಲಸಂಗಮದೇವರು. ॥ ೧೬೦ ॥

೧೬೧
ಕುದುರನೇಸ ತೊಳೆದಡೆಯೂ ಕೆಸರು ಮಾಬುದೆ?
ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯಾ.
ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ ಎನ್ನ ಮನ.
ಕೂಡಲಸಂಗಮದೇವಾ, ನಿಮಗೆ ಶರಣೆಂದು ಶುದ್ಧ ಕಾಣಯ್ಯಾ. || ೧೬೧ ||

೧೬೨
ಕುದುರೆ ಸತ್ತಿಗೆಯವರ ಕಂಡಡೆ ಹೊರಳಿಬಿದ್ದು ಕಾಲಹಿಡಿವರು,
ಬಡಭಕ್ತರು ಬಂದಡೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು.
ಎನ್ನೊಡೆಯ ಕೂಡಲಸಂಗಯ್ಯನವರ
ತಡಗೆಡಹಿ ಮೂಗ ಕೊಯ್ಯದೆ ಮಾಬನೆ? || ೧೬೨ ||

೧೬೩
ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟಡೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ದೀಕ್ಷೆಯ ಕೊಟ್ಟಡೆ
ಭಕ್ತಿಯೆಂತಹುದು? ಮುನ್ನಿನಂತೆ.
ಕೂಡಲಸಂಗಯ್ಯಾ
ಮನಹೀನನ ಮೀಸಲ ಕಾಯ್ದಿರಿಸಿದಂತೆ. || ೧೬೩ ||

೧೬೪
ಕುರಿವಿಂಡು ಕಬ್ಬಿನ ಉಲಿವ ತೋಟವ ಹೊಕ್ಕು,
ತೆರನನರಿಯದೆ ತನಿರಸದ,
ಹೊರಗಣ ಎಲೆಯನೆ ಮೆಲಿದುವು!
ನಿಮ್ಮನರಿವ ಮದಕರಿಯಲ್ಲದೆ
ಕುರಿ ಬಲ್ಲುದೆ ಕೂಡಲಸಂಗಮದೇವಾ? || ೧೬೪ ||

೧೬೫
ಕುರುಳು ಬೆರಳು ಮುಡುಹು ಮುಂಬಲ್ಲ ಕೊಳ್ಳಾ,
ನಿರಿಯನಿಕ್ಕಿ ದಾಂಟಿದಡೆ ಅಂತೆನ್ನ ನಂಬಾ,
ಪರಪುರುಷರ ಮುಖವ ನೋಡದಂತೆ ಮಾಡಾ,
ಬಳಿಕ ನೀನೆಹಗೆ ಇರಿಸಿದಂತಿರಿಸಾ,
ಎನ್ನ ಉರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ,
ಹರಿಬ್ರಹ್ಮರಿಗೆ ಎರಗದಂತೆ ಬಳಿನೀರನೆರೆಯಾ. || ೧೬೫ ||

೧೬೬
ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು:
ಆರೊ ಮಾಡಿದ ಪಾಪಕ್ಕೆ ತಾನೆ ಕೈಯಾನುವನು.
ಸರಿಯೆ ದೇವಭಕ್ತಂಗಿವನು?
ಸರಿಯೆ ಲಿಂಗಭಕ್ತಂಗಿವನು?
ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು
ಹೊನ್ನ ಕಪಿಲೆಯ ರಾವಣಶಾಖದ ಉಚ್ಛಿಷ್ಟದ ಹಾಲಿನಿಂದ
ಕೂಳನಟ್ಟುಂಬವರನೇನೆಂಬೆ
ಕೂಡಲಸಂಗಮದೇವಾ! || ೧೬೬ ||

೧೬೭
ಕುಳ್ಳಿರ್ದು ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ:
ಬೆಳ್ಳಿ ಎತ್ತಿನ ಮರೆಯಲಿರ್ದು ಹುಲ್ಲೆಗಂಬ ತೊಡುವಂತೆ.
ಕಳ್ಳ ಹಾದರಿಗರ ಕೈಯಲು ಪೂಜೆಯ ಕೊಳ್ಳ
ನಮ್ಮ ಕೂಡಲಸಂಗಮದೇವ. || ೧೬೭ ||

೧೬೮
ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ,
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ,
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ,
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ
ಈ ನಾಲ್ಕು ಮೂಲಸ್ಥಾನ.
ನಾನಾ ಸ್ಥಾನವ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲಸಂಗಮದೇವಾ. || ೧೬೮ ||

೧೬೯
ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ?
ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?
ದರಿದ್ರನು ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೇ?
ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ?
ಮುನ್ನಿನ ಪುರಾತರ ನೆನೆದು ಧನ್ಯನಾದೆಹೆನೆಂಬ
ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವಾ. || ೧೬೯ ||

೧೭೦
ಕೆಡೆ ನಡೆಯದೆ, ಕೆಡೆ ನುಡಿಯದೆ, ಅನ್ಯರ ಪ್ರತಿಪಾದಿಸದಿದ್ದಡೆ
ಏನ ಮಾಡನಯ್ಯಾ ಲಿಂಗವು? ಏನ ಕೊಡನಯ್ಯಾ?

ತಾನು ಏನ ಬೇಡಿದುದನೀವನಾಗಿ,
ನಂಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ, ಕೂಡಲಸಂಗಮದೇವಾ. ॥ ೧೭೦ ॥

೧೭೧
ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಚೆ ಚಿಪ್ಪು ಕಾಣಬಹುದು.
ವಾರಿಧಿ ಮೈದೆಗೆದಡೆ
ರತ್ನಮುತ್ತುಗಳ ಕಾಣಬಹುದು.
ಕೂಡಲಸಂಗನ ಶರಣರು ಮನದೆರೆದು ಮಾತನಾಡಿದಡೆ
ಲಿಂಗವ ಕಾಣಬಹುದು. ॥ ೧೭೧ ॥

೧೭೨
ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ?
ಕೈಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯಾ.
ಮನಮುಟ್ಟಿ ಪೂಜಿಸುವೊಡೆ, ಎನ್ನ ಮನ ಶುದ್ಧವಲ್ಲಯ್ಯಾ.
ಭಾವ ಶುದ್ಧವಾದಡೆ, ಕೂಡಲಸಂಗಯ್ಯನು
ಇತ್ತ ಬಾಯೆಂದೆತ್ತಿಕೊಳ್ಳನೇಕಯ್ಯಾ? ॥ ೧೭೨ ॥

೧೭೩
ಕೆಸರಲ್ಲಿ ಬಿದ್ದ ಪಶುವಿನಂತೆ
ಆನು ದೆಸೆದೆಸೆಗೆ ಬಾಯ ಬಿಡುತ್ತಿದ್ದೇನೆ, ಅಯ್ಯಾ.
ಆರೈವವರಿಲ್ಲ, ಅಕಟಕಟ!
ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ. ॥ ೧೭೩ ॥

೧೭೪
ಕೊಡುವಾತ ಸಂಗ, ಕೊಂಬಾತ ಸಂಗ ಕಾಣಿರೆಲವೊ,
ನರಮಾನವರು ಕೊಡುವರೆಂಬವರ ಬಾಯಲಿ
ಬಾಲಹುಳುಗಳು ಸುರಿಯವೆ?
ಮೂರು ಲೋಕಕ್ಕೆ ನಮ್ಮ ಕೂಡಲಸಂಗಯ್ಯ ಕೊಡುವ
ಕಾಣಿರೆಲವೊ. ॥ ೧೭೪ ॥

೧೭೫
ಕೊಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ.
ಕುಲವೇನೊ ಅವದಿರ ಕುಲವೇನೊ?
ಸಕಲಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು. ॥ ೧೭೫ ॥

೧೭೬
ಕೊಲ್ಲೆನಯ್ಯಾ ಪ್ರಾಣಿಗಳ,
ಮೆಲ್ಲೆನಯ್ಯಾ ಬಾಯಿಚ್ಛೆಗೆ,
ಒಲ್ಲೆನಯ್ಯಾ ಪರಸತಿಯರ ಸಂಗವ,
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ.
ಬಳ್ಳದ ಬಾಯಂತೆ ಒಂದೆ ಮನ ಮಾಡಿ
ನಿಲ್ಲೆಂದು ನಿಲಿಸಯ್ಯಾ, ಕೂಡಲಸಂಗಮದೇವಾ. || ೧೭೬ ||

೧೭೭
ಕೋಟ್ಯನುಕೋಟಿ ಜಪವ ಮಾಡಿ ಕೋಟಲೆಗೊಳ್ಳಲದೇಕೆ ಮನವೆ
ಕಿಂಚಿತು ಗೀತವೊಂದನಂತಕೋಟಿ ಜಪ.
ಜಪವೆಂಬುದೇಕೆ, ಮನವೆ?
ಕೂಡಲಸಂಗನ ಶರಣರ ಕಂಡು,
ಆಡಿ ಹಾಡಿ ಬದುಕು ಮನವೆ. || ೧೭೭ ||

೧೭೮
ಕೋಡಗವೇಡಿಸಬೇಡೆಂದಡೆ ಮಾಣದಯ್ಯಾ,
ತೋಡುವ ಹೆಗ್ಗಣ ಮಾಳಿಗೆ ಎಂದಡೆ ಮಾಣದಯ್ಯ,
ಗಾಡಿಗ ದೂಷಕನವರವರನಾಡುವುದೆ ನೇಮ.
ಕೂಡಲಸಂಗಮದೇವಾ, ಇದವರ ಕಾಯಕವಯ್ಯಾ. || ೧೭೮ ||

೧೭೯
ಕೋಣನ ಹೇರಿಂಗೆ ಕುನ್ನಿ ಬಸುಕುತ್ತ ಬಡುವಂತೆ
ತಾವೂ ನಂಬರು, ನಂಬುವರನೂ ನಂಬಲೀಯರು,
ತಾವೂ ಮಾಡರು, ಮಾಡುವರನೂ ಮಾಡಲೀಯರು.
ಮಾಡುವ ಭಕ್ತರ ಕಂಡು ಸೈರಿಸಲಾರದವರ,
ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವ. || ೧೭೯ ||

೧೮೦
ಕೋಪಿ ಮಜ್ಜನಕ್ಕೆರೆದಡೆ ರಕ್ತದ ಧಾರೆ,
ಪಾಪಿ ಹೂವನೇರಿಸಿದಡೆ ಮಸೆದಡ್ಡಾಯುಧದ ಗಾಯ.
ಕೂಪವರನಾರನೂ ಕಾಣೆನು ಮಾದಾರ ಚೆನ್ನಯ್ಯನಲ್ಲದೆ,
ಕೂಪವರನಾರನೂ ಕಾಣೆನು ಡೋಹರ ಕಕ್ಕಯ್ಯನಲ್ಲದೆ,
ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯ
ನಿನ್ನಾಪತ್ತಿಗರಿವರಯ್ಯಾ, ಕೂಡಲಸಂಗಯ್ಯಾ. || ೧೮೦ ||

೧೮೧

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ,
ಇದ್ದಡೇನೊ ಶಿವ ಶಿವಾ ಹೋದಡೇನೊ!
ಕೂಡಲಸಂಗಮದೇವಯ್ಯಾ
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ. || ೧೮೧ ||

೧೮೨

ಗಂಡ ಶಿವಲಿಂಗದೇವರ ಭಕ್ತ,
ಹೆಂಡತಿ ಮಾರಿ ಮಸಣಿಯ ಭಕ್ತೆ.
ಗಂಡ ಕೊಂಬುದು ಪಾದೋದಕ - ಪ್ರಸಾದ,
ಹೆಂಡತಿ ಕೊಂಬುದು ಸುರೆ - ಮಾಂಸ.
ಭಾಂಡ - ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲಸಂಗಮದೇವಾ. || ೧೮೨ ||

೧೮೩

ಗರಿ ತೋರೆ ಗಂಡರೆಂಬವರ ಕಾಣೆ,
ನಿರಿ ಸೋಂಕೆ ಮುನಿ[ಯ]ಲ್ಲ ನೋಡಯ್ಯಾ.
ಬಂಟತನವೇನವನ? ನಂಟುತನವೇನವನ?
ಹುಲ್ಲುಕಿಚ್ಚು, ಹೊಲೆಯನ ಮೇಳಾಪ
ಅಲ್ಲಿ ಹುರುಳಿಲ್ಲ, ಕೂಡಲಸಂಗಮದೇವಾ. || ೧೮೩ ||

೧೮೪

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೆನೆಲೆಗವ್ವಾ.
ತರಗೆಲೆ ಗಿರಿಕೆಂದಡೆ ಹೊರಗನಾಲಿಸುವೆ:
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ.
ಕೂಡಲಸಂಗಮದೇವನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದಡೆ, ಸಂತೋಷ ಪಟ್ಟೆನೆಲೆಗವ್ವಾ. || ೧೮೪ ||

೧೮೫

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.

ಜಗವೆಲ್ಲವ ಕಾಬ ಕಣ್ಣು,
ತನ್ನ ಕೊಂಬ ಕೊಲ್ಲೆಯ ಕಾಣಲರಿಯದು.
ಇದಿರ ಗುಣವ ಬಲ್ಲೆವೆಂಬರು, ತಮ್ಮ ಗುಣವನರಿಯರು,
ಕೂಡಲಸಂಗಮದೇವಾ. || ೧೮೫ ||

೧೮೬
ಗೀತವ ಬಲ್ಲಾತ ಜಾಣನಲ್ಲ, ಮಾತ ಬಲ್ಲಾತ ಜಾಣನಲ್ಲ.
ಜಾಣನು ಜಾಣನು, ಆತ ಜಾಣನು :
ಲಿಂಗವ ನೆರೆ ನಂಬಿದಾತ ಜಾಣನು,
ಜಂಗಮಕ್ಕೆ ಸವೆಸುವಾತ ಆತ ಜಾಣನು,
ಜವನ ಬಾಯಲು ಬಾಲವ ಕೊಯ್ದು ಹೋದಾತ ಆತ ಜಾಣನು,
ನಮ್ಮ ಕೂಡಲಸಂಗನ ಶರಣನು. || ೧೮೬||

೧೮೭
ಗೀತವ ಹಾಡಿದಡೇನು, ಶಾಸ್ತ್ರ ಪುರಾಣವ ಕೇಳಿದಡೇನು,
ವೇದವೇದಾಂತವನೋದಿದಡೇನು?
ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು
ಎಲ್ಲರಲ್ಲಿ [ಪ್ರಾ]ಜ್ಞರಾದಡೇನು?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ. || ೧೮೭ ||

೧೮೮
ಗುರುವಿಂಗೆ ತನುವ ಕೊಟ್ಟು,
ಲಿಂಗಕ್ಕೆ ಮನವ ಕೊಟ್ಟು,
ಜಂಗಮಕ್ಕೆ ಧನವ ಕೊಟ್ಟು,
ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು ನಾನು ಶುದ್ಧನಾದೆನು
ಕಾಣಾ, ಕೂಡಲಸಂಗಮದೇವಾ. || ೧೮೮ ||

೧೮೯
ಗುರುಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನ:
ಹಿಂದ ಬಿಟ್ಟು ಮುಂದ ಹಿಡಿಯಲೇ ಬೇಕು.
ಕೂಡಲಸಂಗಮದೇವ ಕೇಳಯ್ಯಾ,
ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು. || ೧೮೯ ||

೧೯೦
ಗೋತ್ರನಾಮವ ಬೆಸಗೊಂಡಡೆ
ಮಾತು ನೂಕದೆ ಸುಮ್ಮನಿದ್ದಿರಿದೇನಯ್ಯಾ?

ತಲೆಯ ಕುತ್ತಿ ನೆಲನ ಬರೆವುತ್ತಿದ್ದಿರಿದೇನಯ್ಯಾ?
ಗೋತ್ರನಾಮ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯನೆಂಬುದೇನು,
ಕೂಡಲಸಂಗಯ್ಯಾ. || ೧೯೦ ||

೧೯೧
ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ.
ಅಂಬುಜಕೆ ಭಾನುವಿನ ಉದಯದ ಚಿಂತೆ,
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ,
ಎನಗೆ ನಮ್ಮ ಕೂಡಲಸಂಗನ ಶರಣರ ನೆನೆವುದೆ ಚಿಂತೆ. || ೧೯೧ ||

೧೯೨
ಚಂದ್ರನ ಶೈತ್ಯದಲು ಬೆಳೆವ ಕಾಯಕ್ಕೆ
ಬೆಳುದಿಂಗಳು ಬಯಸುವ ಹಂಗೇಕಯ್ಯಾ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ?
ಕೂಡಲಸಂಗನ ಶರಣರು ಬಂದು ತಮ್ಮವನೆಂದಡೆ ಸಾಲದೆ ಅಯ್ಯಾ? || ೧೯೨ ||

೧೯೩
ಚಂದ್ರನು ಅಮೃತಕರನಾದಡೇನಯ್ಯಾ,
ಒಳಗಣ ಕಳಂಕ ಬಿಡದನ್ನಕ್ಕರ?
ಸೂರ್ಯ ಮಹಾಪ್ರಕಾಶನಾದಡೇನಯ್ಯಾ,
ಅಸ್ತಮಾನಕ್ಕೆ ಅಸ್ತಂಗತನೆಂಬ ಹೀನ ಬಿಡದನ್ನಕ್ಕರ?
ಆನು ನಿಮ್ಮ ಕೃಪೆಯ ಹಡೆದು ಫಲವೇನಯ್ಯಾ,
ನಿಮ್ಮ ಶರಣರು ಎನ್ನ ಮೇಲೆ ಮುನಿದು ಹೋದ ಬಳಿಕ?
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರ ಮನದಲ್ಲಿ
ಎನ್ನ ಮೇಲೆ ಕರುಣ ಹುಟ್ಟಿ ಬಪ್ಪಂತೆ ಮಾಡಯ್ಯಾ. || ೧೯೩ ||

೧೯೪
ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,
ಚಂದ್ರ ಕುಂದೆ, ಕುಂದುವುದಯ್ಯಾ,
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ
ಅಂಬುಧಿ ಬೊಬ್ಬಿಟ್ಟಿತ್ತೆ ಅಯ್ಯಾ?
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ, ಅಯ್ಯಾ?
ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ,

ಜಗದ ನಂಟ ನೀನೆ, ಅಯ್ಯಾ,
ಕೂಡಲಸಂಗಮದೇವಯ್ಯಾ! || ೧೯೪ ||

೧೯೫
ಚೇಳಿಂಗೆ ಬಸುರಾಯಿತ್ತೆ ಕಡೆ! ಬಾಳೆಗೆ ಫಲವಾಯಿತ್ತೆ ಕಡೆ!
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದಡೆ ಅದೇ ಕಡೆ
ಕೂಡಲಸಂಗಮದೇವಾ. || ೧೯೫ ||

೧೯೬
ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ,
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ,
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ,
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ,
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ,
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ. || ೧೯೬ ||

೧೯೭
ಜಂಗಮದ ಸನ್ನಿಧಿಯಲ್ಲಿ ವಾಹನವನೇರಲಮ್ಮೆ:
ಏರಿದರೆ ಭವ ಹಿಂಗದು.
ಏನು ಕಾರಣ: ಮುಂದೆ ಸೂಲವನೇರುವ ಪ್ರಾಪ್ತಿಯುಂಟಾದ ಕಾರಣ.
ಜಂಗಮ ಬರಲಾಸನದಲ್ಲಿ ಇರಲಮ್ಮೆ:
ಇದ್ದರೆ ಭವ ಹಿಂಗದು.
ಏನು ಕಾರಣ: ಮುಂದೆ ಕಾಯ್ದ ಇಟ್ಟಿಗೆಯ ಮೇಲೆ
ಕುಳ್ಳಿರುವ ಪ್ರಾಪ್ತಿಯುಂಟಾದ ಕಾರಣ.
ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆನು:
ನಿಂದಡೆ ಭವ ಹಿಂಗದಾಗಿ.
ಏನು ಕಾರಣ: ಮುಂದೆ ಹೆಡಗುಡಿಯ ಕಟ್ಟಿ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ.
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ.
ನಿಮ್ಮವರ ಸುಳುಹು ನೀವೆಂದೇ ಭಾವಿಸಿ,
ತೊತ್ತು ಭೃತ್ಯನಾಗಿಪ್ಪೆನಯ್ಯಾ, ಕೂಡಲಸಂಗಮದೇವಾ. || ೧೯೭ ||

೧೯೮
ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಭಕ್ತಂಗೆ.

ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಜಂಗಮಕ್ಕೆ.
ಆ ಜಂಗಮದ ಕರ್ತೃತ್ವವೆ ಭಕ್ತಂಗೆ ದಾಸೋಹ,
ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ.
ಆ ಭಕ್ತರೊಳಗೆ ಆ ಜಂಗಮವಡಗಿ,
ಆ ಜಂಗಮದೊಳಗೆ ಆ ಭಕ್ತನಡಗಿ,
ಇದನೇನೆಂದು ಹವಣಿಸುವೆನಯ್ಯಾ, ಎರಡೊಂದಾದ ಘನವ?
ಇದನೇನೆಂದುಪಮಿಸುವೆನಯ್ಯಾ, ತೆರಹಿಲ್ಲದ ಘನವ?
ಈ ಎರಡಕ್ಕೆ ಭವವಿಲ್ಲೆಂದು ಕೂಡಲಸಂಗಯ್ಯಾ,
ನಿಮ್ಮ ಶ್ರುತಿಗಳು ಹೇಳಿದವಾಗಿ,
ನಿಮ್ಮ ಕರುಣವೆನಗೆ ಆಯಿತ್ತು. || ೧೯೮ ||

೧೯೯
ಜಂಗಮವಿರಹಿತ ಲಿಂಗಾರ್ಚನೆ: ಓಡಬಿಲಲೆರೆದ ಜಲದಂತೆ.
ಜಂಗಮಸನ್ನಿಹಿತ ಲಿಂಗಾರ್ಚನೆ: ಇದೆ ಭಕ್ತಿಗೆ ಪಥವಯ್ಯಾ.
ಜಂಗಮಪ್ರಸಾದ ಭೋಗೋಪಭೋಗವು: ಎನಗಿದೇ ಲಿಂಗಾರ್ಚನೆ.
ಬೇರೆ ಮತ್ತೊಂದನರಿದೆನಾದಡೆ,
ಕೂಡಲಸಂಗಮದೇವ ನರಕದಲ್ಲಿಕ್ಕುವ. || ೧೯೯ ||

೨೦೦
ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ:
ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು.
ಸತ್ಯವೆಂಬ ಕೂರಲಗನೆ ಕಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ, ಕೂಡಲಸಂಗಮದೇವಾ. || ೨೦೦ ||

೨೦೧
ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ.
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ. || ೨೦೧ ||

೨೦೨
ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ,
ಇದಾವಾವ ಪರಿಯಲ್ಲಿ ಕಾಡಿಹಿತು ಮಾಯೆ,
ಈ ಮಾಯೆಯ ಕಳೆವಡೆ ಎನ್ನಳವಲ್ಲ,
ನೀವೆ ಬಲ್ಲಿರಿ ಕೂಡಲಸಂಗಮದೇವಾ! || ೨೦೨ ||

೨೦೩
ಜನ್ಮ ಜನ್ಮಕ್ಕೆ ಹೊಗಲೀಯದೆ,
ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ
ಕೂಡಲಸಂಗಮದೇವಾ. || ೨೦೩ ||

೨೦೪
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ
ತಲೆದಂಡ, ತಲೆದಂಡ!
ಹುಸಿಯಾದಡೆ, ದೇವಾ ತಲೆದಂಡ, ತಲೆದಂಡ!
ಕೂಡಲ ಸಂಗಮದೇವಾ,
ನೀವಲ್ಲದೆ ಅನ್ಯವ ನೆನೆದಡೆ ತಲೆದಂಡ, ತಲೆದಂಡ! || ೨೦೪ ||

೨೦೫
ಜಾತಿವಿಡಿದು ಸೂತಕವನರಸುವೆ:
ಜ್ಯೋತಿವಿಡಿದು ಕತ್ತಲೆಯನರಸುವೆ!
ಇದೇಕೊ ಮರುಳುಮಾನವಾ? ಜಾತಿಯಲ್ಲಿ ಅಧಿಕನೆಂಬೆ!
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನೊ?
'ಭಕ್ತನೆ ಶಿಖಾಮಣಿ' ಎಂದುದು ವಚನ.
ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು,
ಕೆಡಬೇಡ ಮಾನವಾ. || ೨೦೫ ||

೨೦೬
ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ.
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ.
ಕೇಳು, ಕೂಡಲಸಂಗಮದೇವಾ,
ಮರಣವೆ ಮಹಾನವಮಿ. || ೨೦೬ ||

೨೦೭
ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
ಕೂಡಲಸಂಗನ ಶರಣರ ಅನುಭಾವದ ಬಲದಿಂದ
ಎನ್ನ ಭವದ ಕೇಡು ನೋಡಯ್ಯಾ. ॥ ೨೦೭ ॥

೨೦೮
ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೆಯೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು.
ಮನದ ಕೋಪ ತನ್ನ ಅರಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ. ॥ ೨೦೮ ॥

೨೦೯
ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ,
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ,
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ,
ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ
ಎನಗೆ ಬೇರೆ ವಿಚಾರವುಂಟೆ, ಕೂಡಲಸಂಗಮದೇವಾ? ॥ ೨೦೯ ॥

೨೧೦
ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ,
ಮತ್ತೆಯೂ ವಂಚನೆ ಮಾಣದಯ್ಯಾ.
ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ,
ಮತ್ತೆಯೂ ವಂಚನೆ ಮಾಣದಯ್ಯಾ.
ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ
ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ. ॥ ೨೧೦ ॥

೨೧೧
ತನುವ ಕೊಟ್ಟು ಗುರುವನೊಲಿಸಬೇಕು,
ಮನವ ಕೊಟ್ಟು ಲಿಂಗವನೊಲಿಸಬೇಕು,
ಧನವ ಕೊಟ್ಟು ಜಂಗಮವನೊಲಿಸಬೇಕು.
ಈ ತ್ರಿವಿಧವ ಹೊರಗು ಮಾಡಿ,

ಹರೆಯ ಹೊಯಿಸಿ, ಕುರುಹ ಪೂಜಿಸುವ ಗೊರವರ ಮೆಚ್ಚ
ಕೂಡಲಸಂಗಮದೇವ. ॥ ೨೧೧ ॥

೨೧೨
ತನುವ ಕೊಟ್ಟೆನೆಂದು ನುಡಿದು, ಗುರುವಚನಕ್ಕೆ ದೂರವಾದೆ,
ಮನವ ಕೊಟ್ಟೆನೆಂದು ನುಡಿದು, ಲಿಂಗಮುಖಕ್ಕೆ ದೂರವಾದೆ,
ಧನವ ಕೊಟ್ಟೆನೆಂದು ನುಡಿದು, ಜಂಗಮಮುಖಕ್ಕೆ ದೂರವಾದೆ.
ಕೂಡಲಸಂಗಮದೇವಯ್ಯಾ,
ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ. ॥ ೨೧೨ ॥

೨೧೩
ತನುವ ನೋಯಿಸಿ, ಮನವ ಬಳಲಿಸಿ,
ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೆ?
ಕೂಡಲಸಂಗಮದೇವಾ,
ಶಿವಭಕ್ತರ ನೋವೆ ಅದು ಲಿಂಗದ ನೋವು. ॥ ೨೧೩ ॥

೨೧೪
ತನುವ ಬೇಡಿದಡೀವೆ, ಮನವ ಬೇಡಿದಡೀವೆ,
ಧನವ ಬೇಡಿದಡೀವೆ ನಿಮ್ಮ ಶರಣಂಗೆ.
ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದಡೆ
ಘನಮಹಿಮ, ನಿಮ್ಮ ಪಾದದಾಣೆ.
ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದನರಿದಡೆ
ಕೂಡಲಸಂಗಮದೇವಾ, ಭವ ಘೋರ ನರಕದಲ್ಲಿಕ್ಕಯ್ಯಾ. ॥ ೨೧೪ ॥

೨೧೫
ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತ ಬಲ್ಲರು, ಕೂಡಲಸಂಗಮದೇವಾ. ॥ ೨೧೫ ॥

೨೧೬
ತಂದೆ ನೀನು - ತಾಯಿ ನೀನು, ಬಂಧು ನೀನು - ಬಳಗ ನೀನು.
ನೀನಲ್ಲದೆ ಮತ್ತಾರೂ ಇಲ್ಲಯ್ಯಾ.

ಕೂಡಲಸಂಗಮದೇವಾ,
ಹಾಲಲದ್ದು, ನೀರಲದ್ದು. || ೨೧೬ ||

೨೧೭
ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.
ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವರ ಮೆಚ್ಚ, ಕೂಡಲಸಂಗಮದೇವ. || ೨೧೭ ||

೨೧೮
ತಾಳಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ
ಅದ ಹಾಲಹರವಿಯೆನ್ನರು, ಸುರೆಯ ಹರವಿಯೆಂಬರು.
ಈ ಭಾವನಿಂದೆಯ ಮಾಣಿಸಾ
ಕೂಡಲಸಂಗಮದೇವಾ. || ೨೧೮ ||

೨೧೯
ತಾಳಮಾನ ಸರಿಸವನರಿಯೆ,
ಓಜೆ ಬಜಾವಣೆಯ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ,
ಕೂಡಲಸಂಗಮದೇವಾ,
ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ. || ೨೧೯ ||

೨೨೦
ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ.
ಸಂಸಾರಸಂಗವ ಬಿಡದು ನೋಡೆನ್ನ ಮನವು.
ಈ ನಾಯಿತನವ ಮಾಣಿಸು
ಕೂಡಲಸಂಗಮದೇವಯ್ಯಾ, ನಿಮ್ಮ ಧರ್ಮ. || ೨೨೦ ||

೨೨೧
ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ
ಕುಚಿತರ ಸಂಗ, ಸುಸಂಗಿಗೆ ಸಂಗಡವಿಲ್ಲ!
ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೆ,
ಕೂಡಲಸಂಗಮದೇವಾ? || ೨೨೧ ||

೨೨೨
ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂ ಭೋ! ತೊರೆಯಿಂ ಭೋ!
ಪರನಾರಿಯರ ಸಂಗವ ತೊರೆಯಿಂ ಭೋ!
ಪರಧನದಾಮಿಷವ ತೊರೆಯಿಂ ಭೋ!
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು, ಕೂಡಲಸಂಗಮದೇವಾ. ॥ ೨೨೨ ॥

೨೨೩
ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ.
ದಯವೇ ಧರ್ಮದ ಮೂಲವಯ್ಯಾ.
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ. ॥ ೨೨೩ ॥

೨೨೪
ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ,
ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ,
ಕೂಡಲಸಂಗಮದೇವಾ. ॥ ೨೨೪ ॥

೨೨೫
ದಾಸೋಹವೆಂಬ ಸೋಹೆಗೊಂಡು ಹೋಗಿ,
ಗುರುವ ಕಂಡೆ, ಲಿಂಗವ ಕಂಡೆ,
ಜಂಗಮವ ಕಂಡೆ, ಪ್ರಸಾದವ ಕಂಡೆ.
ಇಂತೀ ಚತುರ್ವಿಧಸಂಪನ್ನನಾದೆ ಕಾಣಾ,
ಕೂಡಲಸಂಗಮದೇವಾ. ॥ ೨೨೫ ॥

೨೨೬
ದಿಟವ ನುಡಿವುದು, ನುಡಿದಂತೆ ನಡೆವುದು.
ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲಸಂಗಮದೇವ. ॥ ೨೨೬ ॥

೨೨೭
ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ, ಎನ್ನ.
ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ,

'ಅವಶ್ಯಮನುಭೋಕ್ತವ್ಯಂ' ಎಂದೆನಿಸದಿರಯ್ಯಾ
ಕೂಡಲಸಂಗಮದೇವಾ, ಸೆರಗೊಡ್ಡಿ ಬೇಡುವೆನು. || ೨೨೭ ||

೨೨೮
ದೂಷಕನವನೊಬ್ಬ ದೇಶವ ಕೊಟ್ಟಡೆ,
ಆಸೆಮಾಡಿ ಅವನ ಹೊರೆಯಲಿರಬೇಡ.
ಮಾದಾರ ಶಿವಭಕ್ತನಾದಡೆ,
ಆತನ ಹೊರೆಯಲು ಭೃತ್ಯನಾಗಿಪ್ಪುದು ಕರ ಲೇಸಯ್ಯಾ,
ತೊತ್ತಾಗಿಪ್ಪುದು ಕರ ಲೇಸಯ್ಯಾ.
ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟು,
ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ. || ೨೨೮ ||

೨೨೯
ದೇವ, ದೇವಾ ಬಿನ್ನಹ ಅವಧಾರು:
ವಿಪ್ರ ಮೊದಲು, ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೆ ಎಂಬೆ.
ಹಾರುವ ಮೊದಲು, ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೆ ಎಂಬೆ.
ಹೀಂಗೆಂದು ನಂಬುವುದೆನ್ನ ಮನ.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ
ಹಲುದೋರೆ ಮೂಗ ಕೊಯಿ, ಕೂಡಲಸಂಗಮದೇವಾ. || ೨೨೯ ||

೨೩೦
ದೇವನೊಬ್ಬ, ನಾಮ ಹಲವು,
ಪರಮಪತಿವ್ರತೆಗೆ ಗಂಡನೊಬ್ಬ,
ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ವನು.
ಹಲವು ದೈವದ ಎಂಜಲ ತಿಂಬವರನೇನೆಂಬೆ,
ಕೂಡಲಸಂಗಮದೇವಾ! || ೨೩೦ ||

೨೩೧
ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ!
ಸತ್ಯವ ನುಡಿವುದೆ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ.
ಆಚಾರವೆ ಸ್ವರ್ಗ, ಅನಾಚಾರವೆ ನರಕ.
ಕೂಡಲಸಂಗಮದೇವಾ, ನೀವೆ ಪ್ರಮಾಣು. || ೨೩೧ ||

೨೩೨
ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತಲೋಕ?
ಶಿವಲೋಕ, ಶಿವಾಚಾರವಯ್ಯಾ.
ಶಿವಭಕ್ತನಿದ್ದ ಠಾವೆ ದೇವಲೋಕ,
ಭಕ್ತನಂಗಳವೆ ವಾರಣಾಸಿ, ಕಾಯವೆ ಕೈಲಾಸ,
ಇದು ಸತ್ಯ, ಕೂಡಲಸಂಗಮದೇವಾ. || ೨೩೨ ||

೨೩೩
ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ. || ೨೩೩ ||

೨೩೪
ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ:
ಇದಾವಂಗಳವಡುವುದಯ್ಯಾ?
ನಿಧಾನ ತಪ್ಪಿಬಂದಡೆ ಒಲ್ಲೆನೆಂಬವರಿಲ್ಲ,
ಪ್ರಮಾದವಶ ಬಂದಡೆ ಹುಸಿಯೆನೆಂಬವರಿಲ್ಲ.
ನಿರಾಶೆ, ನಿರ್ಭಯ ಕೂಡಲಸಂಗಮದೇವಾ
ನೀನೊಲಿದ ಶರಣಂಗಲ್ಲದಿಲ್ಲ. || ೨೩೪ ||

೨೩೫
ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ.
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದಡೆ ಒಡನೆ ನುಡಿವನು,
ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ,
ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ. || ೨೩೫ ||

೨೩೬
ಧೃತಿಗೆಟ್ಟು ಅನ್ಯರ ಬೇಡದಂತೆ,
ಮತಿಗೆಟ್ಟು ಪರರುವ ಹೊಗಳದಂತೆ,
ಪರಸತಿಯರ ರತಿಗೆ ಮನ ಹಾರದಂತೆ,

ಶಿವಪಥವೊಲ್ಲದವರೊಡನಾಡದಂತೆ,
ಅನ್ಯಜಾತಿಯ ಸಂಗವ ಮಾಡದಂತೆ,
ಎನ್ನ ಪ್ರತಿಪಾಲಿಸು, ಕೂಡಲಸಂಗಮದೇವಾ. || ೨೩೬ ||

೨೩೭
ನಚ್ಚಿದೆನೆಂದಡೆ ಮಚ್ಚಿದೆನೆಂದಡೆ, ಸಲೆ ಮಾರುವೋದೆನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು.
ಮನವನಲ್ಲಾಡಿಸಿ ನೋಡುವೆ ನೀನು.
ಧನವನಲ್ಲಾಡಿಸಿ ನೋಡುವೆ ನೀನು.
ಇವೆಲ್ಲಕ್ಕಂಜದಿದ್ದಡೆ ಭಕ್ತಿ ಕಂಪಿತ [ನೀನು] ಕೂಡಲಸಂಗಮದೇವಾ. || ೨೩೭ ||

೨೩೮
ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡಲ್ಲಿ ಚೆನ್ನ,
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ.
ಸವಿದು ನೋಡಿ ಅಂಬಲಿ
ರುಚಿಯಾಯಿತ್ತೆಂದು,
ಕೂಡಲಸಂಗಮದೇವಂಗೆ ಬೇಕೆಂದು
ಕೈದೆಗೆದ ನಮ್ಮ ಚೆನ್ನ. || ೨೩೮ ||

೨೩೯
ನಡೆಯ ಚೆನ್ನ ನುಡಿದು ತೋರಿ,
ನುಡಿಯ ಚೆನ್ನ ನಡೆದು ತೋರಿ,
ಆ ನಡೆನುಡಿ ಎರಡರ ಚೆನ್ನ ಮೃಡ ನಿಮ್ಮೊಳಗಡಗಿಸಿ,
ತಾವೆಡೆಯಿಲ್ಲದೆ ಪರಿಪೂರ್ಣರಾದವರ
ಪಡುಗವ ಹೊರುವೆ, ಪಾದರಕ್ಷೆಯ ಹಿಡಿವೆ,
ಎನಗಿದೆ ಮಾಟ, ಬಯಸುವ ಬೇಟ.
ಕೂಡಲಸಂಗಮದೇವಾ,
ಇದು ನಿಮ್ಮ ಕೂಡುವ ಕೂಟ. || ೨೩೯ ||

೨೪೦
ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು.
ನಂಬಿ ಕರೆದಡೋ ಎನ್ನನೆ ಶಿವನು?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ. || ೨೪೦ ||

೨೪೧

ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ,
ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ.
ಬೇಡ ಬೇಡ, ಅನ್ಯದೈವದ ಸಂಗ ಹೊಲ್ಲ!
ಬೇಡ ಬೇಡ, ಪರದೈವದ ಸಂಗ ಹೊಲ್ಲ!
ಬೇಡ ಬೇಡ, ಅನ್ಯದೈವವೆಂಬುದು ಹಾದರ ಕಾಣಿರೋ,
ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ವ ಕಾಣಿರೋ. ॥ ೨೪೧ ॥

೨೪೨

ನಯನದಾಹಾರವ ಜಂಗಮವ ನೋಡಿಸುವೆನು,
ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು,
ಘ್ರಾಣದಾಹಾರವ ಜಂಗಮವ ವಾಸಿಸುವೆನು,
ಜಿಹ್ವೆಯಾಹಾರವ ಜಂಗಮವನೂಡಿಸುವೆನು,
ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು,
ಅಧಿಕ ಪ್ರೇಮ ಪರಿಣಾ[ಮ]ವ ಮಾಡುವೆನು,
ಸಕಲಪದಾರ್ಥಂಗಳ ನೀಡುವೆನು,
ಕೂಡಲಸಂಗಾ ನಿಮ್ಮ ಶರಣರಿಗೆ. ॥ ೨೪೨ ॥

೨೪೩

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ,
ಅರಳಂಬಿನಲೆಚ್ಚ ಕಾಮನನು[ಳು]ಹಿದೆ.
ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ ಬೇಡನ
ಕೈಲಾಸಕೊಯ್ದೆಯಯ್ಯಾ,
ಎನ್ನನೇತಕೊಲ್ಲೆ ಕೂಡಲಸಂಗಮದೇವಾ? ॥ ೨೪೩ ॥

೨೪೪

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ,
ಶಿವ ಶಿವಾ ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು,
ಕೂಡಲಸಂಗಮದೇವಾ. ॥ ೨೪೪ ॥

೨೪೫

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,

ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ,
ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವನ. || ೨೪೫ ||

೨೪೬
ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ.
ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ. || ೨೪೬ ||

೨೪೭
ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ, ಜಂಗಮದಾಸೋಹಕ್ಕೆಂದು.
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು,
ನಿಮ್ಮ ಸೊಮ್ಮಿಂಗೆ ಸಲಿಸುವೆನು.
ನಿಮ್ಮಾಣೆ ಕೂಡಲಸಂಗಮದೇವಾ. || ೨೪೭ ||

೨೪೮
ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೆ ಅಯ್ಯಾ?
ಮಾಲೆಗಾರನ ಕೇಳಿ ನನೆಯರಳುವುದೆ?
ಆಗಮವನಿದಿರಿಂಗೆ ತೋರುವುದು ಆಚಾರವೆ ಅಯ್ಯಾ?
ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನಿದಿರಿಂಗೆ
ತೋರುವುದು ಆಚಾರವೆ ಅಯ್ಯಾ? || ೨೪೮ ||

೨೪೯
ನಾಳೆ ಬಪ್ಪುದು ನಮಗಿಂದೆ ಬರಲಿ,
ಇಂದು ಬಪ್ಪುದು ನಮಗೀಗಲೆ ಬರಲಿ,
ಇದಕಾರಂಜುವರು, ಇದಕಾರಳಕುವರು?

'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ
ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವಡೆ
ಹರಿಬ್ರಹ್ಮಾದಿಗಳಿಗಳವಲ್ಲ. || ೨೬೯ ||

೨೭೦
ನಿಂದಿಸುವನೊಬ್ಬ, ಸ್ತುತಿಸುವನೊಬ್ಬ,
ಇವರಿಬ್ಬರು ನಮ್ಮ ಶಿವಯೋಗಿಯ ಪರಮಬಂಧುಗಳಯ್ಯಾ.
ಪಾಪವನೊಬ್ಬ ಕೊಂಬ, ಪುಣ್ಯವನೊಬ್ಬ ಕೊಂಬ,
ಕೂಡಲಸಂಗಮದೇವಾ, ನಿಮ್ಮ ಶರಣರು ನಿತ್ಯಮುಕ್ತರು. || ೨೭೦ ||

೨೭೧
ನಿಮಿಷದ ನಿಮಿಷಂ ಭೋ!
ಕ್ಷಣದೊಳಗರ್ಧಂ ಭೋ!
ಕಣ್ಣುಮುಚ್ಚಿ ಬಿಚ್ಚುವಿನಿಸು ಬೇಗಂ ಭೋ!
ಸಂಸಾರದಾಗುಂ ಭೋ!
ಸಂಸಾರದ ಹೋಗುಂ ಭೋ!
ಸಂಸಾರಂ ಭೋ!
ಕೂಡಲಸಂಗಮದೇವ ಮಾಡಿದ
ಮಾಯಂ ಭೋ!
ಅಭ್ರಚ್ಛಾಯಂ ಭೋ! || ೨೭೧ ||

೨೭೨
ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು!
ನಿಮಗೆರಗದ ಕಾರಣ ಕೊರಳಲ್ಲಿ ನೇಣು!
ಹಿಂಡಲೇಕೋ ತೊಳೆಯಲೇಕೋ!
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ!
ಕೂಡಲಸಂಗನ ಶರಣರಲ್ಲಿ
ಡೊಹರ ಕಕ್ಕಯ್ಯನಾವ ತೊರೆಯಲಿ ಮಿಂದ? || ೨೭೨ ||

೨೭೩
ನಿಮ್ಮ ನೋಟವನಂತ ಸುಖ, ನಿಮ್ಮ ಕೂಟ ಪರಮಸುಖ.
ಅವಟುಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನು.
ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
ಮನದಲ್ಲಿ ರತಿಹುಟ್ಟಿ, ನಿಮಿರ್ದವೆನ್ನ ಕಳೆಗಳು. || ೨೭೩ ||

೨೫೪

ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು:
ಸರಿಯಲ್ಲ, ನೋಡಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಚಮ್ಮಾವುಗೆಗೆ! || ೨೫೪ ||

೨೫೫

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತೆ ಇಪ್ಪರು, ಭೂಷಣರಾಗಿ!
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು
ಕೂಡಲ ಸಂಗಮದೇವಾ, ನಿಮ್ಮ ಶರಣರು. || ೨೫೫ ||

೨೫೬

ನೀನೊಲಿದಡೆ ಕೊರಡು ಕೊನರುವುದಯ್ಯಾ,
ನೀನೊಲಿದಡೆ ಬರಡು ಹಯನಹುದಯ್ಯಾ,
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ,
ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ. || ೨೫೬ ||

೨೫೭

ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ.
ಬತ್ತುವ ಜಲವ, ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರು?
ಕೂಡಲಸಂಗಮದೇವಾ. || ೨೫೭ ||

೨೫೮

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟುಕೊಟ್ಟು
ರಕ್ಷಿತವ ಮಾಡುವ ಭರವ ನೋಡಾ!
ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ
ಕಾಯ ನಿಶ್ಚೈಸದೆ. || ೨೫೮ ||

೨೫೯
ನೀರಿಂಗೆ ನೈದಿಲೆಯೆ ಶೃಂಗಾರ,
ಸಮುದ್ರಕ್ಕೆ ತೆರೆಯೆ ಶೃಂಗಾರ,
ನಾರಿಗೆ ಗುಣವೆ ಶೃಂಗಾರ,
ಗಗನಕ್ಕೆ ಚಂದ್ರಮನೆ ಶೃಂಗಾರ,
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೆ ಶೃಂಗಾರ. || ೨೫೯ ||

೨೬೦
ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲಸಂಗಮದೇವನೆಂತೊಲಿವನಯ್ಯಾ? || ೨೬೦ ||

೨೬೧
ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ,
ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ.
ನುಡಿಯಲೂ ಬಾರದು, ನಡೆಯಲೂ ಬಾರದು,
ಲಿಂಗದೇವನೆ ದಿಬ್ಯವೊ ಅಯ್ಯಾ.
ಬಡವನ ಕೋಪವು ಅವುಡಿಗೆ ಮೃತ್ಯುವಾದಂತೆ
ಕಡೆಗೆ ದಾಂಟದು ಕಾಣಾ, ಕೂಡಲಸಂಗಮದೇವಾ. || ೨೬೧ ||

೨೬೨
ನೂರನೋದಿ ನೂರ ಕೇಳಿ ಏನು?
ಆಸೆ ಬಿಡದು, ರೋಷ ಪರಿಯದು
ಮಜ್ಜನಕ್ಕೆರೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ [ಡಂ]ಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ. || ೨೬೨ ||

೨೬೩
ನೆಲನೊಂದೆ: ಹೊಲಗೇರಿ ಶಿವಾಲಯಕ್ಕೆ,
ಜಲವೊಂದೆ: ಶೌಚಾಚಮನಕ್ಕೆ,
ಕುಲವೊಂದೆ: ತನ್ನ ತಾನರಿದವಂಗೆ,

ಫಲವೊಂದೆ: ಷಡುದರುಶನ ಮುಕ್ತಿಗೆ,
ನಿಲವೊಂದೆ ಕೂಡಲಸಂಗಮದೇವಾ, ನಿಮ್ಮನರಿದವಂಗೆ. || ೨೬೩ ||

೨೬೪
ನೆಲ್ಲ ಗಿಡುವಿನೊಳಗೆ ನಾನೊಂದು ಹುಲ್ಲಾಗಿ ಹುಟ್ಟಿದೆನಯ್ಯಾ.
ಆನು ಭಕ್ತನೆಂದೆಂಬೆನೆ? ಆನು ಯುಕ್ತನೆಂದೆಂಬೆನೆ?
ಆನು ಕೂಡಲಸಂಗನ ಶರಣರೊಕ್ಕುದನುಂಡಡೆ,
ಪಾದರಕ್ಷೆಗೆ ಸರಿಯಹೆನೆ? || ೨೬೪ ||

೨೬೫
ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ ಕಾಣಿರೋ.
ತಗರ ಬೆನ್ನಲಿ ಹರಿವ ಸೊಣಗನಂತೆ, ಬೇಡ ಕಾಣಿರೋ.
ಒಂದಾಸೆಗೆ ಸಾಸಿರ ವರುಷ ನರಕದಲದ್ದುವ
ಕೂಡಲಸಂಗಮದೇವ. || ೨೬೫ ||

೨೬೬
ನ್ಯಾಯನಿಷ್ಠುರಿ: ದಾಕ್ಷಿಣ್ಯಪರನಲ್ಲ,
ಲೋಕವಿರೋಧಿ: ಶರಣನಾರಿಗಂಜುವನಲ್ಲ,
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ. || ೨೬೬ ||

೨೬೭
ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ?
ಲಿಂಗದೇವನ ಪೂಜಿಸಿ ಕುಲವನರಸುವರೆ, ಅಯ್ಯಾ?
ಕೂಡಲಸಂಗಮದೇವ
ಭಕ್ತಕಾಯ ಮಮಕಾಯವೆಂದನಾಗಿ. || ೨೬೭ ||

೨೬೮
ಪರ ಚಿಂತೆ ನಮಗೇಕಯ್ಯಾ? ನಮ್ಮ ಚಿಂತೆ ಸಾಲದೆ?
ಕೂಡಲಸಂಗಯ್ಯ ಒಲಿದಾನೊ ಒಲ್ಲನೊ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು. || ೨೬೮ ||

೨೬೯
ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ,
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ.
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ. || ೨೬೯ ||

೨೭೦
ಪುಣ್ಯ ಪಾಪಂಗಳೆಂಬವು ತಮ್ಮ ಇಷ್ಟ ಕಂಡಿರೆ,
'ಅಯ್ಯಾ' ಎಂದಡೆ ಸ್ವರ್ಗ, 'ಎಲವೊ' ಎಂದಡೆ ನರಕ.
ದೇವಾ, ಭಕ್ತಾ, ಜಯಾ, ಜೀ[ಯಾ] ಎಂಬ ನುಡಿಯೊಳಗೆ
ಕೈಲಾಸವೈದುವುದೆ ಕೂಡಲಸಂಗಮದೇವಾ. ‖ ೨೭೦ ‖

೨೭೧
ಬಂದುದ ಕೈಕೊಳ್ಳಬಲ್ಲಡೆ ನೇಮ.
ಇದ್ದುದ ವಂಚನೆಯ ಮಾಡದಿದ್ದಡೆ ಅದು ನೇಮ.
ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ.
ನಮ್ಮ ಕೂಡಲಸಂಗನ ಶರಣರು ಬಂದಡೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ. ‖ ೨೭೧ ‖

೨೭೨
ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ ಅಯ್ಯಾ?
ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು,
ಚಾಂಡಾಲವಾಟಿಕಾಯಾಂ ಶಿವಭಕ್ತಃ ಸ್ಥಿತೋ ಯದಿ|
ತತ್‌ಶ್ರೇಣಿಃ ಶಿವಲೋಕಸ್ಯ ತದ್‌ಗೃಹಂ ಶಿವಮಂದಿರಮ್‌||
ಎಂದುದಾಗಿ, ಲೋಕದ ಡಂಬಕರ ಮಾತು ಬೇಡ,
ಕೂಡಲಸಂಗನಿದ್ದುದೇ ಕೈಲಾಸ. ‖ ೨೭೨ ‖

೨೭೩
ಬಂದೆಹೆನೆಂದು ಬಾರದೆ ಇದ್ದಡೆ, ಬಟ್ಟೆಗಳ ನೋಡುತ್ತಿದ್ದೆನಯ್ಯಾ.
ಇನ್ನಾರನಟ್ಟುವೆ, ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯಾ?
ಕೂಡಲ ಸಂಗನ ಶರಣರು ಬಾರದಿದ್ದಡೆ
ಅಟ್ಟುವೆನೆನ್ನ ಪ್ರಾಣವನು. ‖ ೨೭೩ ‖

೨೭೪
ಬಚ್ಚಲ ನೀರು ತಿಳಿದಡೇನು?
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು?
ಆಕಾಶದ ಮಾವಿನ ಫಲವೆಂದಡೇನು-
ಕೊಯ್ಯಲಿಲ್ಲ, ಮೆಲ್ಲಲಿಲ್ಲ.
ಕೂಡಲಸಂಗನ ಶರಣರ ಅನುಭಾವವಿಲ್ಲದವ
ಎಲ್ಲಿದ್ದಡೇನು, ಎಂತಾದಡೇನು? ‖ ೨೭೪ ‖

೨೭೫
ಬಡಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವ ಹೋದೆಹೆ, ಹೋದೆಹೆನಯ್ಯಾ.
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ.
ಪಶುವಾನು, ಪಶುಪತಿ ನೀನು.
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯಾ ನಿಮ್ಮ ಬಯ್ಯದಂತೆ ಮಾಡು,
ಕೂಡಲಸಂಗಮದೇವಾ. || ೨೭೫ ||

೨೭೬
ಬಡ ಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ!
ಮಾ[ಲ]ಗಾರನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ!
ನಾನಾ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ
ಕೂಡಲಸಂಗಮದೇವಾ. || ೨೭೬ ||

೨೭೭
ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ:
ಮೊದಲ ದಿನ ಹಣೆಮುಟ್ಟಿ, ಮರುದಿನ ಕೈಮುಟ್ಟಿ,
ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ.
ಹಿಡಿದುದ ಬಿಡದಿದ್ದಡೆ ಕಡೆಗೆ ಚಾಚುವ,
ಅಲ್ಲದಿದ್ದಡೆ ನಡುನೀರಲದ್ದುವ ನಮ್ಮ ಕೂಡಲಸಂಗಮದೇವ. || ೨೭೭ ||

೨೭೮
ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ,
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ.
ಶಿವಭಕ್ತಿಮತಿಕ್ರಮ್ಯ ಯದ್ದಾನಂ ಚ ವಿಧೀಯತೇ ।
ನಿಷ್ಫಲಂ ತು ಭವೇದ್ದಾನಂ ರೌರವಂ ನರಕಂ ವ್ರಜೇತ್ ॥
ಇಂತೆಂದುದಾಗಿ, ಕೂಡಲಸಂಗನ ಶರಣರನರಿಯದೆ
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ. || ೨೭೮ ||

೨೭೯
ಬಲೆಗೆ ಸಿಲ್ಕಿದ ಮೃಗದಂತೆ ನಾನಯ್ಯಾ,
ಮರಿದಪ್ಪಿದ ಹುಲ್ಲೆಯಂತೆ ದೆಸೆದೆಸೆಗೆ ಬಾಯಿಬಿಡುತ್ತಿದ್ದೇನೆ.
ನಾನಾರ ಸಾರುವೆನಯ್ಯಾ, ತಾ[ಯಿ] ತಂದೆ[ಯು] ನೀನೇ,
ಸಕಲ ಬಂಧುಬಳಗವು ನೀನೇ ಕೂಡಲಸಂಗಮದೇವಾ. || ೨೭೯ ||

೨೮೦
ಬಲ್ಲಿದರೊಡನೆ ಬವರವಾದಡೆ ಗೆಲಲುಂಟು, ಸೋಲಲುಂಟು,
ಕ[ಳ]ನೊಳಗೆ ಭಾಷೆ ಪೂರಾಯವಯ್ಯಾ.
ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ
ಧನ ಸವೆದು ಬಡವನಾದಡೆ
ಆ ಭಕ್ತನು ಆ ಲಿಂಗಕ್ಕೆ ಪೂಜ್ಯನಹನು. || ೨೮೦ ||

೨೮೧
"ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯಾ"
"ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ.
ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ,
ಲಿಂಗ ನೀನೇ ಅಯ್ಯಾ" ಕೂಡಲಸಂಗಮದೇವಾ. || ೨೮೧ ||

೨೮೨
ಬಸುರ ಬಾಳುವೆಗೆ,
ನಿಮ್ಮಲ್ಲಿ ಮಸಿಯ ಹೂಸಿ ನೇರಿಲಹಣ್ಣ ಮಾರುವಂತೆ,
ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮೊರೆಹೊಕ್ಕೆನಯ್ಯಾ.
ಆವುದ ಹುಸಿಯೆಂಬೆ? ಆವುದ ಕಿರಿದೆಂಬೆ?
ಇದ ನೀನೆ ಬಲ್ಲೆಯಯ್ಯಾ,
ಕೂಡಲಸಂಗಮದೇವಾ, ನಾನು ಉದರಪೋಷಕನಯ್ಯಾ. || ೨೮೨ ||

೨೮೩
ಬಿತ್ತು ಬೆಳೆಯಿತ್ತು, ಕೆಯ್ಯ ಕೊಯ್ಯಿತ್ತು,
ಗೂಡು ಮುರಿಯಿತ್ತು, ಕುತ್ತರಿಯೊಟ್ಟಿತ್ತು,
ಒಕ್ಕಿತ್ತು ತೂರಿತ್ತು ಅಳೆಯಿತ್ತು, ಸಲಗೆ ತುಂಬಿತ್ತು
ಕೂಡಲಸಂಗಮದೇವಯ್ಯಾ,
ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ. || ೨೮೩ ||

೨೮೪
ಬಿಳಿಯ ಕರಿಕೆ, ಕಣಿಗಿಲೆಲೆಯ, ತೊರೆಯ ತಡಿಯ ಮಳಲ ತಂದು,
ಗೌರಿಯ ನೋನುವ ಬನ್ನಿರೆ.
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು
ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು. || ೨೮೪ ||

೨೮೫
ಬೆಟ್ಟದ ಕಲ್ಲು ಸೋರೆಯ ಕೂಡೆ ಆಡಿದಂತಾಯಿತ್ತಯ್ಯ,
ಜಾತಿಯಲ್ಲದ ಜಾತಿಯ ಕೂಡಿ.
ಅದರ ಪರಿಯಂತೆ,
ಸಂಗವಲ್ಲದ ಸಂಗವ ಮಾಡಿದಡೆ ಭಂಗ ತಪ್ಪದು,
ಕೂಡಲಸಂಗಮದೇವಾ. || ೨೮೫ ||

೨೮೬
ಬೆದರಿಸುವ ಸಂಗ, ಬೆಚ್ಚಿಸುವ ಸಂಗ,
ಬೆಚ್ಚಿ ಬಿಸುಡುವ ಸಂಗ.
ತನ್ನ ನಚ್ಚಿ ಮಚ್ಚಿ ಮುಯ್ಯಾಂತೆನೆಂದಡೆ ಮೇಳವಾಡುವ ಸಂಗ,
ಬೋಳೈಸುವ ಸಂಗ.
ಆಳಿಗೊಳಿಸುವ ಸಂಗ, ಇದಿರ ಕೈಯಲ್ಲಿ ಅಳಲಿಸುವ ಸಂಗ,
ಬಳಲಿಸುವ ಸಂಗ, ಒತ್ತಿ ನೋಡುವ ಸಂಗ ಒಳಹೊರಗೆನ್ನದೆ.
ಕೂಡಲಸಂಗಮದೇವಯ್ಯಾ,
ಮಡಿವಾಳ ಮಾಚಿತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು. || ೨೮೬ ||

೨೮೭
ಬೆಲ್ಲವ ತಿಂದ ಕೋಡಗದಂತೆ ಸಿಹಿಯ ನೆನೆಯದಿರಾ, ಮನವೆ.
ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೆ.
ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೆ.
ಕೂಡಲಸಂಗನ ಶರಣರ ಕಂಡು ಲಿಂಗವೆಂದೆ ನಂಬು, ಮನವೆ. || ೨೮೭ ||

೨೮೮
ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು.
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ. || ೨೮೮ ||

೨೮೯
ಬೇರೂರಲಿದ್ದು ಬಂದ ಜಂಗಮವೆ ಲಿಂಗವೆಂದು,
ಮನೆಯಲಿದ್ದ ಜಂಗಮವನುದಾಸೀನವ ಮಾಡಿದಡೆ
ನಾನು ಬೆಂದೆನಯ್ಯಾ.
ಆನು ಬೆಂದ ಬೇಗೆಯನರಿಯೆ, ಕಾಣಾ
ಕೂಡಲಸಂಗಮದೇವಾ. || ೨೮೯ ||

೨೯೦
ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನತುಪ್ಪವ ಹೊಯ್ದಡೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ಕೂಡಲಸಂಗಮದೇವಾ. || ೨೯೦ ||

೨೯೧
ಬ್ರಹ್ಮಪದವಿಯನೊಲ್ಲೆ,
ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ.
ನಾನು ಮತ್ತಾವ ಪದವಿಯನೊಲ್ಲೆನಯ್ಯಾ.
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ. || ೨೯೧ ||

೨೯೨
ಭಕ್ತದೇಹಿಕನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ,
ಆಳ್ದನು ಬರಲಾಳು ಮಂಚದ ಮೇಲಿಪ್ಪುದು ಗುಣವೇ? ಹೇಳಾ.
ಕೂಡಲಸಂಗಮದೇವಾ,
ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ. || ೨೯೨ ||

೨೯೩
ಭಕ್ತನೆಂತೆಂಬೆನಯ್ಯಾ? ಭವಿಯ ಸಂಗ ಬಿಡದನ್ನಕ್ಕ.
ಮಾಹೇಶ್ವರನೆಂತೆಂಬೆನಯ್ಯಾ? ಪರಸ್ತ್ರೀ ಪರಧನದಾಸೆ ಬಿಡದನ್ನಕ್ಕ.
ಪ್ರಸಾದಿಯೆಂತೆಂಬೆನಯ್ಯಾ? ಆಧಿವ್ಯಾಧಿ ನಷ್ಟವಾಗದನ್ನಕ್ಕ.
ಪ್ರಾಣಲಿಂಗಿಯೆಂತೆಂಬೆನಯ್ಯಾ? ಪ್ರಾಣ ಸ್ವಸ್ಥಿರವಾಗದನ್ನಕ್ಕ.
ಶರಣನೆಂತೆಂಬೆನಯ್ಯಾ? ಪಂಚೇಂದ್ರಿಯ ನಾಶವಾಗದನ್ನಕ್ಕ.
ಐಕ್ಯನೆಂತೆಂಬೆನಯ್ಯಾ? ಜನನ ಮರಣ ವಿರಹಿತವಾಗದನ್ನಕ್ಕ.

ಇಂತಪ್ಪ ಭಾಷೆ ವ್ರತ ನೇಮಂಗಳ ನಾನರಿಯೆನಯ್ಯಾ,
ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯಾ.
ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ
ಕೂಡಲಸಂಗಮದೇವಾ. || ೨೯೩ ||

೨೯೪
ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು.
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ.
ಲಕ್ಕ ಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ. || ೨೯೪ ||

೨೯೫
ಭಕ್ತ,ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣನೈಕ್ಯನು
ಮೆಲ್ಲ ಮೆಲ್ಲನೆ ಆದೆಹೆನೆಂಬನ್ನಬರ ನಾನು ವಜ್ರದೇಹಿಯೆ?
ನಾನೇನು ಅಮೃತವ ಸೇವಿಸಿದೆನೆ?
ಆನು ಮರುಜವಣಿಯ ಕೊಂಡೆನೆ?
ನುಡಿದ ನುಡಿಯೊಳಗೆ ಷಡುಸ್ಥಲ ಬಂದು
ಎನ್ನ ಮನವನಿಂಬುಗೊಳ್ಳದಿದ್ದಡೆ,
ಸುಡುವೆನೀ ತನುವ ಕೂಡಲಸಂಗಮದೇವಾ. || ೨೯೫ ||

೨೯೬
ಭಕ್ತರ ಕಂಡಡೆ ಬೋಳರಪ್ಪಿರಯ್ಯಾ,
ಸವಣರ ಕಂಡಡೆ ಬತ್ತಲೆಯಪ್ಪಿರಯ್ಯಾ,
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ,
ಅವರವರ ಕಂಡಡೆ ಅವರವರಂತೆ
ಸೂಳೆಗೆ ಹುಟ್ಟಿದವರ ತೋರದಿರಯ್ಯಾ.
ಕೂಡಲಸಂಗಯ್ಯನ ಪೂಜಿಸಿ, ಅನ್ಯದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ. || ೨೯೬ ||

೨೯೭
ಭಕ್ತರೇ ಸಮರ್ಥರು. ಅಸಮರ್ಥರೆಂದೆನಲುಂಟೆ?
ಚೆನ್ನನೆತ್ತ, ಚೋಳನೆತ್ತ?
ಚೆನ್ನನೊಡನುಂಡ ಶಿವ ಆಹಾ! ಅಯ್ಯಾ!

ಚೆನ್ನ, ಚೋಳನ ಮನೆಯ ಕಂಪಣಿಗನಯ್ಯಾ!
ಕೂಡಲಸಂಗಮದೇವ ಭಕ್ತಿಲಂಪಟನಯ್ಯಾ! || ೨೯೭ ||

೨೯೮
ಭಕ್ತಿಯಿಲ್ಲದ ಬಡವ ನಾನಯ್ಯಾ:
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ.
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ. || ೨೯೮ ||

೨೯೯
ಭಕ್ತಿಯೆಂಬ ಪೃಥ್ವಿಯ ಮೇಲೆ,
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ. || ೨೯೯ ||

೩೦೦
ಭಕ್ತಿಯೆಂಬುದ ಮಾಡಬಾರದು,
ಕರಗಸದಂತೆ ಹೋಗುತ್ತ ಕೊರೆದು, ಬರುತ್ತ ಕೊಯ್ವುದು.
ಘಟಸರ್ಪನಲ್ಲಿ ಕೈದುಡುಕಿದಡೆ ಹಿಡಿವುದ ಮಾಬುದೆ
ಕೂಡಲಸಂಗಮದೇವಾ? || ೩೦೦ ||

೩೦೧
ಭಕ್ತಿರತಿಯೆಂಬ ಮದುವೆಗೆ
ಕಣಗಿಲೆಲೆಯ ಉಂಗುರವನಿಕ್ಕಿ,
ಮೊಲ್ಲೆ ಮಲ್ಲಿಗೆಯ ತೆರೆಯ ಕಟ್ಟಿ,
ಸೇವಂತಿಗೆಯ ಚಪ್ಪರವನಿಕ್ಕಿ,
ಪುಷ್ಪಜಾತಿಗಳೆಲ್ಲಾ ನಿಬ್ಬಣವ ಬನ್ನಿರೇ.
ನಮಗೆಯು ನಮ್ಮ ಕೂಡಲಸಂಗಮದೇವಂಗೆಯು ಮದುವೆ. || ೩೦೧ ||

೩೦೨
ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ.
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ.
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ. || ೩೦೨ ||

೩೦೩
ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು:
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು.
ಲಿಂಗಸಂಬಂಧವಿಲ್ಲದವರ ನುಡಿ
ಕೂಡಲಸಂಗನ ಶರಣರಿಗೆ ಸಮನಿಸದು. || ೩೦೩ ||

೩೦೪
ಭವಭವದಲ್ಲಿ ಭಕ್ತನಾದಡೆ
ಆ ಭವವೆ ಲೇಸು ಕಂಡಯ್ಯಾ.
ಲಿಂಗಾರಾಧನೆ, ಜಂಗಮಾನುಭವ
ಅಂದಂದಿಂಗೆ ಪರಮಸುಖವಯ್ಯಾ.
ಎಂದೆಂದೂ ನಾನಿದನೆ ಬಯಸುವೆ ತಂದೆ,
ಕರುಣಿಸಯ್ಯಾ ಕೂಡಲಸಂಗಮದೇವಾ. || ೩೦೪ ||

೩೦೫
ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ?
ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ?
ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ?
ರೂಢೀಶ್ವರನ ಭೇದಿಸಬಹುದೆ? ಒಡಲಿಲ್ಲ[ದೆ]?
ನಿರಾಳಕರ್ತೃ ಕೂಡಲ ಸಂಗಮದೇವ
ಜಂಗಮಮುಖವಾದನಾಗಿ ಮತ್ತೊಂದನರಿಯೆನಯ್ಯಾ. || ೩೦೫ ||

೩೦೬
ಭೂಮಿಯೊಳಗೆ ನಿಧಾನವಿದ್ದುದ
ಅಂಜನವುಳ್ಳವರು ತೋರಿರಯ್ಯಾ.
ಅಂಜಲುಬೇಡ ಕಂಡಾ, ಮನದಲ್ಲಿ ಸಂದೇಹವ ಮಾಡದಿರಾ.
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ
ತೋರುವ ಕೂಡಲಸಂಗಯ್ಯ. || ೩೦೬ ||

೩೦೭
ಭೇರುಂಡನ ಪಕ್ಷಿಗೆ ದೇಹ ಒಂದೆ,
ತಲೆಯೆರಡರ ನಡುವೆ ಕನ್ನಡವ ಕಟ್ಟಿ
ಒಂದು ತಲೆಯಲ್ಲಿ ಹಾಲನೆರೆದು
ಒಂದು ತಲೆಯಲ್ಲಿ ವಿಷವನೆರೆದಡೆ,
ದೇಹವೊಂದೇ, ವಿಷ ಬಿಡುವುದೇ ಅಯ್ಯಾ.
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ ನಿಂದೆಯ ಮಾಡಿದಡೆ
ನಾನು ಬೆಂದೆ ಕಾಣಾ, ಕೂಡಲಸಂಗಮದೇವಾ. || ೩೦೭ ||

೩೦೮
ಮಂಡೆಯ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯಾ.
ಲಜ್ಜೆಗೆಟ್ಟಾದಡೂ ಲಿಂಗವನೊಲಿಸುವೆ,
ನಾಣುಗೆಟ್ಟಾದಡೂ ಲಿಂಗವನೊಲಿಸುವೆ.
ಕೆಲದ ಸಂಸಾರಿಗಳು ನಗುತಿರ್ದಡಿರಲಿ,
ಕೂಡಲಸಂಗಮದೇವಾ, ಶರಣುಗತಿವೊಕ್ಕೆನಯ್ಯಾ. || ೩೦೮ ||

೩೦೯
ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೊ!
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ!
ದೈವ ದೈವವೆಂದು ಕಾಲಿಡಲಿಂಬಿಲ್ಲ,
ದೈವನೊಬ್ಬನೆ ಕೂಡಲಸಂಗಮದೇವ. || ೩೦೯ ||

೩೧೦
ಮಡಕೆಯ ಮಾಡುವಡೆ ಮಣ್ಣೆ ಮೊದಲು,
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು,
ಶಿವಪಥವನರಿವಡೆ ಗುರುಪಥವೆ ಮೊದಲು,
ಕೂಡಲಸಂಗಮದೇವರನರಿವಡೆ
ಶರಣರ ಸಂಗವೆ ಮೊದಲು. || ೩೧೦ ||

೩೧೧
ಮಣ್ಣ ಮಡಕೆ ಮಣ್ಣಾಗದು ಕ್ರೀಯಳಿದು,
ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು,
ಹೊನ್ನು ಕಬ್ಬುನವಾಗದು ಕ್ರೀಯಳಿದು,

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯಳಿದು,
ಕೂಡಲಸಂಗನ ಶರಣನಾಗಿ
ಮರಳಿ ಮಾನವನಾಗ ಕ್ರೀಯಳಿದು. || ೩೧೧ ||

೩೧೨
ಮನವೆ ಸರ್ಪ, ತನು ಹೇಳಿಗೆ:
ಹಾವಿನೊಡತಣ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದರಿಯೆ,
ಇನ್ನಾವಾಗ ತಿಂದಹುದೆಂದರಿಯೆ.
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ
ಅದೆ ಗಾರುಡ, ಕೂಡಲಸಂಗಮದೇವಾ. || ೩೧೨ ||

೩೧೩
ಮನೆ ನೋಡಾ ಬಡವರು: ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ: ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ: ಬಂದ ತತ್ಕಾಲಕೆ ಉಂಟು,
ಕೂಡಲಸಂಗನ ಶರಣರು ಸ್ವತಂತ್ರಧೀರರು. || ೩೧೩ ||

೩೧೪
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ?
ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನದೊಳಗೆ [ಮನದೊ]ಡೆಯನಿದ್ದಾನೊ, ಇಲ್ಲವೊ?
ಇಲ್ಲ, ಕೂಡಲಸಂಗಮದೇವಾ. || ೩೧೪ ||

೩೧೫
ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ.
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು.
ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ. || ೩೧೫ ||

೩೧೬
ಮರದ ನೆಳಲಲಿದ್ದು ತನ್ನ ನೆಳಲನರಸಬಹುದೆ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ?
ಆನು ಭಕ್ತನೆಂಬ ನುಡಿ ಸುಡದೆ, ಕೂಡಲಸಂಗಮದೇವಾ? || ೩೧೬ ||

೩೧೭
ಮರನನೇರಿದ ಮರ್ಕಟನಂತೆ
ಹಲವು ಕೊಂಬೆಗೆ ಹಾಯುತ್ತಲಿದ್ದೇನೆ.
ಬೆಂದ ಮನವ ನಾನೆಂತು ನಂಬುವೆನಯ್ಯಾ,
ಎಂತು ನಚ್ಚುವೆನಯ್ಯಾ.
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ
ಹೋಗಲೀಯದಯ್ಯಾ. || ೩೧೭ ||

೩೧೮
ಮರನ ಹೂವ ಕೊಯಿದು ಮರಕ್ಕೇರಿಸಿ,
ನದಿಯುದಕವ ನದಿಗರ್ಪಿತವ ಮಾಡಿ,
ಕರುವನಗಲಿಸಿ, ತಾಯ ಮರುಗಿಸಿ
ಮೊಲೆವಾಲ ಕರೆದುಣಬೇಡವೋ!
ಕೂಡಲಸಂಗಮದೇವ ಮಾಡಿದ ಮಾಯೆ,
ಹಲಬರ ಬಾಯ ಟೊಣೆದೇ ಹೋಯಿತ್ತು. || ೩೧೮ ||

೩೧೯
ಮರಮರ ಮಥನದಿಂದ ಅಗ್ನಿ ಹುಟ್ಟಿ
ಆ ಮರನೆಲ್ಲವ ಸುಡದಿಪ್ಪುದೆ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
ಎನ್ನ ತನುಗುಣವೆಲ್ಲವ ಸುಡದಿಪ್ಪುದೆ?
ಇದು ಕಾರಣ, ಮಹಾನುಭಾವರ ತೋರಿಸು
ಕೂಡಲಸಂಗಮದೇವಾ. || ೩೧೯ ||

೩೨೦
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ,
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು
ಕೂಡಲಸಂಗಮದೇವಾ. || ೩೨೦ ||

೩೨೧
ಮಸಿಯನೇಸುಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ?
ಕರ್ಮಸ್ಥಿತಿ ಬೆನ್ನ ಬಿಡದು.
ಅನಂತಕೋಟಿ ಸನ್ಮಾನವ ಮಾಡಿದರೇನು?
ನಿಮಿಷದ ಉದಾಸೀನ ಕೆಡಿಸಿತ್ತು.
ಕೂಡಲಸಂಗಮದೇವಾ
ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯಾ. || ೩೨೧ ||

೩೨೨
ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ,
ಏಡಿಸಿ ಕಾಡಿತ್ತು ಶಿವನ ಡಂಗುರ,
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ,
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ,
ಬೇಡಿತ್ತನೀವನು ಕೂಡಲಸಂಗಮದೇವ. || ೩೨೨ ||

೩೨೩
ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲಾ ಕೇಳಿರಣ್ಣಾ:
ಹಾಗದ ಕೆರಹ ಹೊರಗೆ ಕಳೆದು,
ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ.
ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು.
ಕೂಡಸಂಗನ ಶರಣರಿಗೆ ಸವೆಸಲೇಬೇಕು. || ೩೨೩ ||

೩೨೪
ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ,
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ.
ಮಾಡುವ ನೀಡುವ ನಿಜಗುಣವುಳ್ಳಡೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ. || ೩೨೪ ||

೩೨೫
ಮಾಡುವಂತಿರಬೇಕು ಮಾಡದಂತಿರಬೇಕು.
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು.
ಕೂಡಲಸಂಗಮದೇವರ
ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು. || ೩೨೫ ||

೩೨೬
ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು:
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ
ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು.
ಎನಗಿನ್ನಾವ ಭವವಿಲ್ಲ ಕಾಣಾ,
ಕೂಡಲಸಂಗಮದೇವಾ. || ೩೨೬ ||

೩೨೭
ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು, ಕಂಡಾ!
ವೇದವನೋದಿದವರ ಮುಂದೆ ಅಳು, ಕಂಡಾ!
ಶಾಸ್ತ್ರ ಕೇಳಿದವರ ಮುಂದೆ ಅಳು, ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ. || ೩೨೭ ||

೩೨೮
ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು,
ಸಾಲಬಟ್ಟಡೆ ಮಾರಿಕೊಂಬರಯ್ಯಾ.
ಸಾಲಬಟ್ಟಡೆ ಅವರನೊತ್ತೆಯಿಟ್ಟುಕೊಂಡುಂಬರಯ್ಯಾ.
ಮಾರುವೋಗನೊತ್ತೆಯೋಗ
ನಮ್ಮ ಕೂಡಲಸಂಗಮದೇವ. || ೩೨೮ ||

೩೨೯
ಮಾರಿ ಮಸಣಿಯೆಂಬವು ಬೇರಿಲ್ಲ ಕಾಣಿರೋ.
ಮಾರಿಯೆಂಬುದೇನು?
ಕಂಗಳು ತಪ್ಪಿ ನೋಡಿದಡೆ ಮಾರಿ,
ನಾಲಗೆ ತಪ್ಪಿ ನುಡಿದಡೆ ಮಾರಿ,
ನಮ್ಮ ಕೂಡಲಸಂಗಮದೇವರ ನೆನಹ ಮರೆದಡೆ ಮಾರಿ. || ೩೨೯ ||

೩೩೦
ಮಾವಿನಕಾಯೊಳಗೆ ಒಂದು ಎಕ್ಕೆಯ ಕಾಯಿ ನಾನಯ್ಯಾ.
ಆನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ?
ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ? || ೩೩೦ ||

೩೩೧
ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲಿದ್ದು
ಮೂಗ ಹಿಡಿದು ಧ್ಯಾನಮಾಡುವರಯ್ಯಾ.

ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ.
ತ[ಮ್ಮ] ಕೈಯಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲಸಂಗನನರಿಯದೆ ಮೊರೆಯಿಡುವಂತೆ. ॥ ೩೩೧ ॥

೩೩೨
ಮುಂದು ಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ,
ಸುಪ್ರಭಾತದಲ್ಲಿ ಶಿವಶರಣರ ಮುಖವ ನೋಡುವುದು,
ಹುಟ್ಟಿದ ಜನ್ಮಕ್ಕಿದೆ ಸಫಲವು.
ಸತ್ಯವಚನವಿಂತೆಂದುದಾಗಿ
ಇಂತಿಲ್ಲದವರನೊಲ್ಲ ನಮ್ಮ ಕೂಡಲಸಂಗಮದೇವ. ॥ ೩೩೨ ॥

೩೩೩
ಮುಗಿಲ ಮರೆಯ ಮಿಂಚಿನಂತೆ,
ಒಡಲ ಮರೆಯ ಆತ್ಮನಂತೆ,
ನೆಲದ ಮರೆಯ ನಿಧಾನದಂತೆ ಇಪ್ಪ,
ನಿಮ್ಮ ನಿಲವನಾರು ಬಲ್ಲರು ದೇವಾ.
ನಿಮ್ಮ ನಿಲವ ಹಲಕಾಲದಿಂದ ಕಂಡು ಕಂಡು
ಕಡೆಗಣಿಸಿ, ಮರೆದು ಮತಿಗೆಟ್ಟು ಮರುಳಾದೆನು.
ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ,
ತ್ರಾಹಿ ತ್ರಾಹಿ ಕಾಯಯ್ಯಾ, ಕೂಡಲಸಂಗಮದೇವಾ. ॥ ೩೩೩ ॥

೩೩೪
ಮುನ್ನೂರರುವತ್ತು ದಿನ ಶ್ರವವ ಮಾಡಿ,
ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ.
ಎನಿಸು ಕಾಲ ಲಿಂಗಾರ್ಚನೆಯ ಮಾಡಿ,
ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ?
ಕೊಡನ ತುಂಬಿದ ಹಾಲ ಕೆಡಹಿ,
ಉಡುಗಲೆನ್ನಳವೆ, ಕೂಡಲಸಂಗಮದೇವಾ? ॥ ೩೩೪ ॥

೩೩೫
ಮೇರು ಗುಣವನರಸುವುದೆ ಕಾಗೆಯಲ್ಲಿ?
ಪರುಷ ಗುಣವನರಸುವುದೆ ಕಬ್ಬುನದಲ್ಲಿ?
ಸಾಧು ಗುಣವನರಸುವುದೆ ಅವಗುಣಿಯಲ್ಲಿ?
ಚಂದನ ಗುಣವನರಸುವುದೆ ತರುಗಳಲ್ಲಿ?

ಸರ್ವಗುಣಸಂಪನ್ನ ಲಿಂಗವೆ, ನೀನೆನ್ನಲ್ಲಿ ಅವಗುಣವನರಸುವರೆ?
ಕೂಡಲಸಂಗಮದೇವಾ. || ೩೩೫ ||

೩೩೬
ಮೇಲಾಗಲೊಲ್ಲೆನು ಕೀಳಾಗಲಲ್ಲದೆ,
ಕೀಳಿಂಗಲ್ಲದೆ ಹಯನು ಕರೆವುದೆ?
ಮೇಲಾಗಿ ನರಕದಲೋಲಾಡಲಾರೆನು.
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ ಕೂಡಲಸಂಗಮದೇವಾ. || ೩೩೬ ||

೩೩೭
ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?
ಭಾಷೆ ತಪ್ಪಿದ ಬಳಿಕ ದೇವಾ, ಬಲ್ಲಿದ ಭಕ್ತನೇನ ಮಾಡುವನಯ್ಯಾ?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯನು ಹಾರಿದಡೆ
ಮೀಸಲನು ಸೊಣಗ ಮುಟ್ಟಿದಂತೆ
ಕೂಡಲಸಂಗಮದೇವಾ. || ೩೩೭ ||

೩೩೮
ಮೊರನ ಗೋಟಿಲಿ ಬಪ್ಪ ಕಿರುಕುಳದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು,
ಕುರಿ ಸತ್ತು ಕಾವುದೇ ಹರ ಮುಳಿದವರ?
ಕುರಿ ಬೇಡ ಮರಿ ಬೇಡ,
ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು
ನಮ್ಮ ಕೂಡಲಸಂಗಮದೇವನ. || ೩೩೮ ||

೩೩೯
ಮೌನದಲುಂಬುದು ಆಚಾರವಲ್ಲ.
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ "ಶಿವ ಶರಣೆ"ನುತ್ತಿರಬೇಕು.
ಕರಣವೃತ್ತಿಗಳಡಗುವವು,
ಕೂಡಲಸಂಗನ ನೆನೆವುತ್ತ ಉಂಡಡೆ. || ೩೩೯ ||

೩೪೦
ಲಿಂಗಕ್ಕಲ್ಲದೆ ಮಾಡೆನೀ ಮನವನು,
ಜಂಗಮಕ್ಕಲ್ಲದೆ ಮಾಡೆನೀ ಧನವನು,

ಪ್ರಸಾದಕ್ಕಲ್ಲದೆ ಮಾಡೆನೀ ತನುವನು,
ಲಿಂಗಜಂಗಮಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ.
ಅನರ್ಪಿತವಾದಡೆ ತಪ್ಪೆನ್ನದು,
ಮೂಗ ಕೊಯಿ, ಕೂಡಲಸಂಗಮದೇವಾ. || ೩೪೦ ||

೩೪೧
ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ.
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ,
ಚೌಡೇಶ್ವರಿಯಲ್ಲಿಯೂ ಮೇಳವೇ?
ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲಸಂಗಮದೇವ. || ೩೪೧ ||

೩೪೨
ಲಿಂಗದಲ್ಲಿ ಕಠಿಣವುಂಟೆ?
ಜಂಗಮದಲ್ಲಿ ಕುಲವುಂಟೆ?
ಪ್ರಸಾದದಲ್ಲಿ ಅರುಚಿಯುಂಟೆ?
ಈ ತ್ರಿವಿಧದಲ್ಲಿ ಭಾವಭೇದವನರಸುವೆ[ನೆ?]
ಕೂಡಲಸಂಗಮದೇವಾ, ಧಾ[ರಾ]ವಟ್ಟಲೆನ್ನ ಭಕ್ತಿ. || ೩೪೨ ||

೩೪೩
ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇಬೇಕು,
ದಕ್ಕ ನುಂಗಿದಂತೆ [ಬಿರಿ]ತುಕೊಂಡಿರಬೇಡ.
ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದಡೆ,
ಬೇಡಿದ ಪದವಿಯನೀವ ಕೂಡಲಸಂಗಮದೇವ. || ೩೪೩ ||

೩೪೪
ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ? || ೩೪೪ ||

೩೪೫
ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು, ಕಂಡಾ ಲಿಂಗವೆ,

ಪರಮಸುಖವ ಕೊಡು, ಕಂಡಾ ಲಿಂಗವೆ.
ಕೂಡಲಸಂಗಮದೇವಾ, ಇದೇ ವರವ ನಿಮ್ಮಲ್ಲಿ ಬೇಡುವೆ. || ೩೪೫ ||

೩೪೬
ಲಿಂಗವಶದಿಂದ ಬಂದ ನಡೆಗಳು,
ಲಿಂಗವಶದಿಂದ ಬಂದ ನುಡಿಗಳು,
ಲಿಂಗವಂತರು ತಾವು ಅಂಜಲದೇಕೆ?
ಲಿಂಗವಿರಿಸಿದಂತಿಪ್ಪುದಲ್ಲದೆ,
ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ. || ೩೪೬ ||

೩೪೭
ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು,
ಅವರೆಂತಿದ್ದಡೇನು? ಹೇಗಿದ್ದಡೇನು? ಲಿಂಗವಂತರವರು,
ಉಪಮಿಸಬಾರದ ಮಹಾಘನವು, ಕೂಡಲಸಂಗನ ಶರಣರು. || ೩೪೭ ||

೩೪೮
ಲಿಂಗವಿರದೆ ಸೀಮೆಯ ಕಲ್ಲಿನಲ್ಲಿ?
ಲಿಂಗವಿರದೆ ಪಶುವಿನ ತೊಡೆಯಲ್ಲಿ?
ಕಲ್ಲ ತೆಕ್ಕೊಂಡು ಮೆಳೆಯ ಮೇಲೆ ಇಟ್ಟಡೆ,
ಆ ಕಲ್ಲು ಮೆಳೆಯಲ್ಲಿ ಸಿಕ್ಕಿದಡೆ, ಆ ಮೆಳೆ ಭಕ್ತನಾಗಬಲ್ಲುದೆ?
ಇದು ಕಾರಣ ಸತ್ಯ, ಸಹಜ, ಸದ್ಭಾವ, ಸದ್ವರ್ತನೆ ಉಳ್ಳಡೆ ಸದ್ಭಕ್ತ,
ಇಲ್ಲದಿದ್ದಡೆ ಆ ಮೆಳೆಯೊಳಗೆ ಸಿಕ್ಕಿದ ಕಲ್ಲಿನಂತೆ
ಕಾಣಾ ಕೂಡಲಸಂಗಮದೇವಾ. || ೩೪೮ ||

೩೪೯
ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ,
ಲಿಂಗವಿಲ್ಲದೆ ಉಗುಳ ನುಂಗಿದಡೆ
ಅಂದಂದಿಗೆ ಕಿಲ್ಬಿಷವಯ್ಯಾ
ಏನೆಂಬೆನೇನೆಂಬೆನಯ್ಯಾ?
ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ: ಮುಟ್ಟಲಾಗದು.
ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ: ಕೇಳಲಾಗದು.
ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ
ಕೂಡಲಸಂಗಮದೇವಾ. || ೩೪೯ ||

೩೫೦
ಲೇಸ ಕಂಡು, ಮನ ಬಯಸಿ ಬಯಸಿ,
ಆಸೆ ಮಾಡಿದಡಿಲ್ಲ ಕಂಡಯ್ಯಾ.

ತಾಳಮರಕ್ಕೆ ಕೈಯ ನೀಡಿ,
ಮೇಲೆ ನೋಡಿ, ಗೋಣು ನೊಂದುದಯ್ಯಾ.
ಕೂಡಲಸಂಗಮದೇವಾ ಕೇಳಯ್ಯಾ,
ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ! || ೩೫೦ ||

೩೫೧
ಲೇಸೆನಿಸಿಕೊಂಡು ಅಯ್ದು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ನಾಲ್ಕು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಮೂರು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಎರಡು ದಿವಸ ಬದುಕಿದಡೇನು?
ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ |
ನಾಜಕಲ್ಪಸಹಸ್ರಾಣಿ ಭಕ್ತಿಹೀನಸ್ಯ ಶಾಂಕರಿ ||
ಎಂದುದಾಗಿ, ಕೂಡಲಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿವಸ ಬದುಕಿದಡೇನೊ! || ೩೫೧ ||

೩೫೨
ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ. || ೩೫೨ ||

೩೫೩
ವಚನದಲ್ಲಿ ನಾಮಾಮೃತ ತುಂಬಿ,
ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ.
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ. || ೩೫೩ ||

೩೫೪
ವನದ ಕೋಗಿಲೆ, ಮನೆಗೆ ಬಂದಡೆ
ತನ್ನ ವನವ ನೆನೆವುದ ಮಾಣ್ಬುದೆ?
ಮಲೆಯ ಗಜ ಮನೆಗೆ ಬಂದಡೆ
ತನ್ನ ಮಲೆಯ ನೆನೆವುದ ಮಾಣ್ಬುದೆ?

ಕೂಡಲಸಂಗನ ಶರಣರು ಮರ್ತ್ಯಕ್ಕೆ ಬಂದಡೆ
ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೇ? || ೩೫೪ ||

೩೫೫
ವಾರವೆಂದರಿಯೆ, ದಿನವೆಂದರಿಯೆ,
ಏನೆಂದರಿಯೆನಯ್ಯಾ.
ಇರುಳೆಂದರಿಯೆ, ಹಗಲೆಂದರಿಯೆ,
ಏನೆಂದರಿಯೆನಯ್ಯಾ.
ನಿಮ್ಮ ಪೂಜಿಸಿ ಎನ್ನುವ ಮರೆದೆ
ಕೂಡಲಸಂಗಮದೇವಾ. || ೩೫೫ ||

೩೫೬
ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ.
ಪಶುವೇನ ಬಲ್ಲುದು? ಹಸುರೆಂದೆಳೆಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬ ಉದಕವನೆರೆದು,
ನೋಡಿ ಸಲಹಯ್ಯಾ, ಕೂಡಲಸಂಗಮದೇವಾ. || ೩೫೬ ||

೩೫೭
ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ,
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,
ಮೈಲಾರನ ಪೂಜಿಸಿ ನಾಯಾಗಿ ಬಗಳುವುದ ಕಂಡೆ,
ನಮ್ಮ ಕೂಡಲಸಂಗನ ಪೂಜಿಸಿ ದೇವಾ,
ಭಕ್ತರೆನಿಸಿಕೊಂಬುದ ಕಂಡೆ. || ೩೫೭ ||

೩೫೮
ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯಾ:
ವೀರನಾದಡೆ ವೈರಿಗಳು ಮೆಚ್ಚಬೇಕು,
ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು,
ಭಕ್ತನಾದಡೆ ಜಂಗಮವೆ ಮೆಚ್ಚಬೇಕು.
ಈ ನುಡಿಯೊಳಗೆ ತನ್ನ ಬಗೆಯಿರೆ
ಬೇಡಿದ ಪದವಿಯನೀವ ಕೂಡಲಸಂಗಮದೇವ. || ೩೫೮ ||

೩೫೯
ವೇದಕ್ಕೆ ಒರೆಯ ಕಟ್ಟುವೆ,
ಶಾಸ್ತ್ರಕ್ಕೆ ನಿಗಳವನಿಕ್ಕುವೆ,

ತರ್ಕದ ಬೆನ್ನ ಬಾರನೆತ್ತುವೆ,
ಆಗಮದ ಮೂಗ ಕೊಯಿವೆ, ನೋಡಯ್ಯಾ.
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ. || ೩೫೯ ||

೩೬೦
ವೇದ ನಡನಡುಗಿತ್ತು,
ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ!
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ. || ೩೬೦ ||

೩೬೧
ವೇದವನೋದಿದಡೇನು, ಶಾಸ್ತ್ರವ ಕೇಳಿದಡೇನಯ್ಯಾ?
ಜಪವ ಮಾಡಿದಡೇನು, ತಪವ ಮಾಡಿದಡೇನಯ್ಯಾ?
ಏನ ಮಾಡಿದಡೇನು
ನಮ್ಮ ಕೂಡಲಸಂಗಯ್ಯನ ಮನಮುಟ್ಟದನ್ನಕ್ಕ? || ೩೬೧ ||

೩೬೨
ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ,
ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ.
ಮೊಲನಿಂದ ಕರಕಷ್ಟ ನರನ ಬಾಳುವೆ.
ಸಲೆ ನಂಬೊ, ನಮ್ಮ ಕೂಡಲಸಂಗಮದೇವನ. || ೩೬೨ ||

೩೬೩
ಶರಣ ನಿದ್ರೆಗೈದಡೆ ಜಪ ಕಾಣಿರೊ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ,
ಶರಣ ನಡೆದುದೆ ಪಾವನ ಕಾಣಿರೊ,
ಶರಣ ನುಡಿದುದೆ ಶಿವತತ್ವ ಕಾಣಿರೊ,
ಕೂಡಲಸಂಗನ ಶರಣನ
ಕಾಯವೆ ಕೈಲಾಸ ಕಾಣಿರೊ. || ೩೬೩ ||

೩೬೪
ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ.
ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ.

ಶ್ರುತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ.
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧದಾಸೋಹದಲಲ್ಲದೆ ಕಾಣಬಾರದು
ಕೂಡಲಸಂಗಮದೇವನ. || ೩೬೪ ||

೩೬೫
ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು:
ಸಗಣಕ್ಕೆ ಸಾಸಿರ ಹುಳು, ಹುಟ್ಟವೆ ದೇವಾ?
ಕಾಡಮೃಗವೊಂದಾಗಿರಲಾಗದೆ, ದೇವಾ?
ಊರಮೃಗವೊಂದಾಗಿರಲಾಗದೆ, ಹರನೆ?
ನಮ್ಮ ಕೂಡಲಸಂಗನ ಶರಣರಿಲ್ಲದ ಊರು, ದೇಶ
ವನವಾಸ, ನರವಿಂಧ್ಯ ಕಾಣಿರಣ್ಣಾ. || ೩೬೫ ||

೩೬೬
ಶಿವಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ,
ತನ್ನ ಅಂಗದ ಮೇಲೆ ಲಿಂಗವಿರುತಿರಲು,
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ,
ಅನ್ಯರ ವಚನವ ಕೊಂಡಾಡಲು, ಕರ್ಮ ಬಿಡದು, ಭವಬಂಧನ!
ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು!
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರಿಗೆ
ಮಳಲ ಗೋಡೆಯನಿಕ್ಕಿ, ನೀರಲ್ಲಿ ತೊಳೆದಂತಾಯಿತ್ತಯ್ಯಾ. || ೩೬೬ ||

೩೬೭
ಶಿವಭಕ್ತನಾಗಿ ತನ್ನ ಹಿಡಿದೆಹೆನೆಂದು ಹೋದಡೆ:
ನುಗ್ಗು ಮಾಡುವ, ನುಸಿಯ ಮಾಡುವ,
ಮಣ್ಣ ಮಾಡುವ, ಮಸಿಯ ಮಾಡುವ.
ಕೂಡಲಸಂಗಮದೇವರ ನೆರೆ ನಂಬಿದನಾದಡೆ:
ಕಡೆಗೆ ತನ್ನಂತೆ ಮಾಡುವ. || ೩೬೭ ||

೩೬೮
ಶಿಶುವೆನ್ನಬಹುದೆ? ನಂಬಿಯಣ್ಣನ!
ಸೂಕ್ಷ್ಮನೆನಬಹುದೆ ರವಿಯನು? ಜಗವ ಬೆಳಗುವ!
ದೃಷ್ಟಿ ಕಿರಿದೆನ್ನಬಹುದೆ? ಸೃಷ್ಟಿಯನು ಕಾಣ್ಬ!
ಭಾವ ಕಿರಿದೆನ್ನಬಹುದೆ? ಬಳ್ಳ ಲಿಂಗವಾದುದನು!
ಕೂಡಲಸಂಗಮದೇವಯ್ಯಾ

ಯುಗಜುಗವೆಲ್ಲವನೂ ಮೀರಿದ ಶರಣನ
ಕಿರಿದೆನಬಹುದೆ? ಚೆನ್ನಬಸವಣ್ಣನ! || ೩೬೮ ||

೩೬೯
ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು.
ನಂಬಿ ನಂಬದಿದ್ದಡೆ ಸಂದೇಹಿ, ನೋಡಾ.
ಕಟ್ಟಿದಡೇನು, ಮುಟ್ಟಿದಡೇನು, ಹೂಸಿದಡೇನು,
ಮನಮುಟ್ಟದನ್ನಕ್ಕ?
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು,
ಕೂಡಲಸಂಗಮದೇವ ಒಲಿದಂಗಲ್ಲದೆ. || ೩೬೯ ||

೩೭೦
ಶ್ವಾನ ಮಡಕೆಯನಿಳುಹಿ ಬೋನವನುಂಡು
ಮಡಕೆಯನೇರಿಸಲರಿಯದಂತೆ,
ನಾನು ಷಟ್‌ಸ್ಥಲವನೋದಿ ಏನ ಮಾಡುವೆನಯ್ಯಾ,
ಅವಗುಣಂಗಳೆನ್ನ ಬೆನ್ನ ಬಿಡದನ್ನಕ್ಕರ?
ಕಾರ್ಯವುಳ್ಳ ಕರ್ತ ಜಂಗಮಲಿಂಗದಲ್ಲಿ
ನಾನು ದಾಸೋಹವ ಮಾಡಲರಿಯದೆ ಕೆಟ್ಟೆನು,
ಕೂಡಲಸಂಗಮದೇವಾ. || ೩೭೦ ||

೩೭೧
ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು ನುಡಿವುದು ಶಿವಭಕ್ತರೊಡನೆ.
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಮ್ ।
ಗುರುಣಾಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ ॥
ನಮ್ಮ ಕೂಡಲಸಂಗನ ಶರಣರೊಡನೆ
ಮನದೆರೆದು ಮಾತನಾಡುವುದಯ್ಯಾ. || ೩೭೧ ||

೩೭೨
ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದ
ಆನು ಮುಂದುಗೆಟ್ಟೆನಯ್ಯಾ,
ಆನು ಹೊರಳಿ ಬೀಳುತ್ತಿದ್ದೆನಯ್ಯಾ!
'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ!

ಕೂಡಲಸಂಗನ ಶರಣರು ಬಂದು
ಹೋ ಹೋ, ಅಂಜದಿರೆಂದಡಾನು ಬದುಕುವೆನು. || ೩೭೨ ||

೩೭೩
ಸಂಸಾರವೆಂಬಡವಿಯಲ್ಲಿ ಹುಲಿಯುಂಟು, ಕರಡಿಯುಂಟು.
ಶರಣನಂಜನಂಜ, ಮಹಾಧೀರ ಶರಣನಂಜನಂಜ,
ಕೂಡಲಸಂಗನ ಶರಣಂಗೆ ನಿರ್ಭಯ. || ೩೭೩ ||

೩೭೪
ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ.
ಇದ ನಚ್ಚಿ ಕೆಡಬೇಡ.
ಸಿರಿಯೆಂಬುದ ಮರೆದು, ಪೂಜಿಸು ನಮ್ಮ ಕೂಡಲಸಂಗಮದೇವನ. || ೩೭೪ ||

೩೭೫
ಸಂಸಾರಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆವುತ್ತಲಿದ್ದೂದೆ,
ಸಂಸಾರಸಾಗರ ಉರದುದ್ದವೆ? ಹೇಳಾ!
ಸಂಸಾರಸಾಗರ ಕೊರಳುದ್ದವೆ? ಹೇಳಾ!
ಸಂಸಾರಸಾಗರ ಶಿರದುದ್ದವಾದ ಬಳಿಕ ಏಳ ಹೇಳುವೆನಯ್ಯಾ!
ಅಯ್ಯಾ ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ
ಕೂಡಲ ಸಂಗಮದೇವಾ ನಾನೇವೆನೇವೆನಯ್ಯಾ! || ೩೭೫ ||

೩೭೬
ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದಡೆ ರುಚಿಯುಂಟೇ?
ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ
ಅಕ್ಕಟಾ ಸಂಸಾರ ವೃಥಾಯ ಹೋಯಿತ್ತಯ್ಯಾ.
ಅದೇತರ ಭಕ್ತಿ? ಅದೇತರ ಯುಕ್ತಿ?
ಕೂಡಿಕೋ, ಕೂಡಲಸಂಗಮದೇವಾ. || ೩೭೬ ||

೩೭೭
ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ
ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣಾ.
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ
ನಿಚ್ಚ ಕೆಸರಹುದಲ್ಲದೆ ಅದರಚ್ಚಿಗ ಬಿಡದಣ್ಣಾ.
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ? || ೩೭೭ ||

೩೭೮
ಸತಿಪುರುಷರಿಬ್ಬರೂ ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ
ಅದೆ ಮಾಟ,
ಕೂಡಲಸಂಗಮದೇವರ ಕೂಡುವ ಕೂಟ. || ೩೭೮||

೩೭೯
ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ,
ಅವರಾರಾಧನೆ ದಂಡ.
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನು ಒಲ್ಲ
ಕೂಡಲಸಂಗಮದೇವ, ಭೂಮಿಭಾರಕರ. || ೩೭೯ ||

೩೮೦
ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು,
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು,
ನಾಗೇಂದ್ರನ ಘನವೆಂಬೆನೆ? ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು,
ಅಂತಹ ಪಾರ್ವತಿ ಘನವೆಂಬೆನೆ? ಪರಮೇಶ್ವರನ ಅರ್ಧಾಂಗಿಯಾದಳು,
ಅಂತಹ ಪರಮೇಶ್ವರ ಘನವೆಂಬೆನೆ? ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು. || ೩೮೦ ||

೩೮೧
ಸಮುದ್ರದೊಳಗಣ ಸಿಂಪಿನಂತೆ
ಬಾಯ ಬಿಡುತ್ತಿದ್ದೇನಯ್ಯಾ,
ನೀವಲ್ಲದೆ ಮತ್ತಾರು ಎನ್ನನರಿವರಿಲ್ಲ ನೋಡಯ್ಯಾ.
ಕೂಡಲಸಂಗಮದೇವಾ
ನೀನಲ್ಲದೊಳಕೊಂಬವರಿಲ್ಲಯ್ಯಾ. || ೩೮೧ ||

೩೮೨
ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯಾ, ಎನ್ನ ಭಕ್ತಿ.
ಆನಂದದಿಂದ ನಲಿನಲಿದಾಡುವೆನು.
ಆನಂದದಿಂದ ಕುಣಿಕುಣಿದಾಡುವೆನು.
ಕೂಡಲಸಂಗನ ಶರಣರು ಬಂದಡೆ,
ಉಬ್ಬಿ, ಕೊಬ್ಬಿ, ಹರುಷದಲೋಲಾಡುವೆ. || ೩೮೨ ||

೩೮೩
ಸಾರ: ಸಜ್ಜನರ ಸಂಗ ಲೇಸು ಕಂಡಯ್ಯಾ.
ದೂರ: ದುರ್ಜನರ ಸಂಗವದು ಭಂಗವಯ್ಯಾ.

ಸಂಗವೆರಡುಂಟು : ಒಂದ ಹಿಡಿ, ಒಂದ ಬಿಡು,
ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ. || ೩೮೩ ||

೩೮೪
ಸಾರ: ಸಜ್ಜನರ ಸಂಗವ ಮಾಡುವುದು,
ದೂರ: ದುರ್ಜನರ ಸಂಗ ಬೇಡವಯ್ಯಾ.
ಆವ ಹಾವಾದಡೇನು? ವಿಷವೊಂದೆ,
ಅಂತವರ ಸಂಗ ಬೇಡವಯ್ಯ.
ಅಂತರಂಗ ಶುದ್ಧವಿಲ್ಲದವರ ಸಂಗವು
ಸಿಂಗಿ, ಕಾಳಕೂಟ ವಿಷವೊ, ಕೂಡಲಸಂಗಯ್ಯಾ. || ೩೮೪ ||

೩೮೫
ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ,
ತಪ್ಪುವುದು ಅಪಮೃತ್ಯು, ಕಾಲಕರ್ಮಂಗಳಯ್ಯಾ.
ದೇವಪೂಜೆಯ ಮಾಟ, ದುರಿತಬಂಧನದೋಟ.
ಶಂಭು ನಿಮ್ಮ ನೋಟ, ಹಿಂಗದ ಕಣ್ಬೇಟ.
ಸದಾ ಸನ್ನಿತನಾಗಿ ಶರಣೆಂಬುದು, ನಂಬುವುದು.
ಜಂಗಮಾರ್ಚನೆಯ ಮಾಟ, ಕೂಡಲಸಂಗನ ಕೂಟ. || ೩೮೫ ||

೩೮೬
ಸೂರ್ಯನ ಉದಯ ತಾವರೆಗೆ ಜೀವಾಳ,
ಚಂದ್ರಮನುದಯ ನೆಯ್ದಿಲೆಗೆ ಜೀವಾಳ.
ಕೂಪರ ಠಾವಿನಲ್ಲಿ ಕೂಟ ಜೀವಾಳವಯ್ಯಾ,
ಒಲಿದ ಠಾವಿನಲ್ಲಿ ನೋಟ ಜೀವಾಳವಯ್ಯಾ.
ಕೂಡಲಸಂಗನ ಶರಣರ
ಬರವೆನಗೆ ಪ್ರಾಣ ಜೀವಾಳವಯ್ಯಾ. || ೩೮೬ ||

೩೮೭
ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ.
ಅಡಗ ಮಚ್ಚಿ ಸೊಣಗನೆಂಜಲ ತಿಂಬುದೀ ಲೋಕ.
ಲಿಂಗವ ಮಚ್ಚಿ ಜಂಗಮಪ್ರಸಾದವ ಕೊಂಬವರ ನೋಡಿ ನಗುವರ
ಕುಂಭಿಪಾತಕ ನಾಯಕನರಕದಲ್ಲಿಕ್ಕುವ
ಕೂಡಲಸಂಗಮದೇವ. || ೩೮೭ ||

೩೮೮
ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?

ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ. || ೩೮೮ ||

೩೮೯
ಸ್ವಾಮಿಭೃತ್ಯಸಂಬಂಧಕ್ಕೆ ಆವುದು ಪಥವೆಂದಡೆ:
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದು ಹುಸಿವ, ನಡೆದು ತಪ್ಪುವ
ಪ್ರಪಂಚಿಯನೊಲ್ಲ ಕೂಡಲಸಂಗಮದೇವ. || ೩೮೯ ||

೩೯೦
ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ,
ಎಂದೆಂದೂ ಅಳಿಯೆನೆಂದು
ಗುಡಿಗಟ್ಟಿದೆಯಲ್ಲಾ, ನಿನ್ನ ಮನದಲ್ಲಿ.
ಮಾಯಾಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ
ಕೂಡಲಸಂಗಮದೇವನಲ್ಲದೆ? || ೩೯೦ ||

೩೯೧
ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಕುವರೆ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ?
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ?
ಕೂಡಲಸಂಗಯ್ಯ ಕಾಡುವ ಕಾಟ
ಸಿರಿಯಾಳಂಗಲ್ಲದೆ ಸೈರಿಸಬಹುದೆ? || ೩೯೧ ||

೩೯೨
ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ.
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ.
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ, ಕಡಬಡ್ಡಿಯ ಕೊಡಲಾಗದು. || ೩೯೨ ||

೩೯೩

ಹತ್ತು ಮತ್ತರ ಭೂಮಿ, ಬತ್ತದ ಹಯನು, ನಂದಾದೀವಿಗೆಯ
ನಡೆಸಿಹೆವೆಂಬವರ ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೊ?
ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು ಎಂಬವನ ಬಾಯಲ್ಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಬನೆ
ಕೂಡಲಸಂಗಮದೇವ? || ೩೯೩ ||

೩೯೪

ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು
ಮುಟ್ಟುವ ತೆರನನರಿಯದನ್ನಕ್ಕ?
ಕಟ್ಟಿದಡೇನು ಬಿಟ್ಟಡೇನು
ಮನವು ಲಿಂಗದಲ್ಲಿ ಮುಟ್ಟದನ್ನಕ್ಕ?
ಮಾತಿನಲೆ ಒಲಿಸಿ ಮಹತ್ತಪ್ಪ ಲಿಂಗವ ಕಂಡೆಹೆನೆಂಬ
ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ. || ೩೯೪ ||

೩೯೫

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು.
ಕೊಂದಹರೆಂಬುದನರಿಯದೆ
ಬೆಂದ ಒಡಲ ಹೊರೆವುತ್ತಲದೆ.
ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು.
ಕೊಂದವರುಳಿವರೆ ಕೂಡಲಸಂಗಮದೇವಾ? || ೩೯೫ ||

೩೯೬

ಹರಗಣಪಙ್ತಿಯ ನಡುವೆ ಕುಳ್ಳಿರ್ದು
ನಾನು ಒಡೆತನದ ನಾಯಿತೇಜವ ಹೊತ್ತುಕೊಂಡು,
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದವೂ ಮಿಗಿಲಾಗಿ ಇಕ್ಕಲು, ತೆಗೆದಿರಿಸಿದೆನು.
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು.
ಕರುಣಿ ಚೆನ್ನಬಸವಣ್ಣಾ, ಮರೆದು ಕೊಂಡೆನಾದಡೆ,
ಒಡೆಯ ಕೂಡಲಸಂಗಯ್ಯ ಕೆಡಹಿ ನರಕದಲ್ಲಿಕ್ಕುವ. || ೩೯೬ ||

೩೯೭
ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು:
ಹರಿದು ಹೆದ್ದೊರೆಯು, ಕೆರೆ ತುಂಬಿದಂತಯ್ಯಾ,
ನೆರೆಯದ ವಸ್ತು ನೆರೆವುದು ನೋಡಯ್ಯಾ,
ಅರಸು ಪರಿವಾರ ಕೈವಾರ ನೋಡಯ್ಯಾ,
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯ ಕಲ್ಲುಕೊಂಡಂತೆ, ಕೂಡಲಸಂಗಮದೇವಾ. ॥ ೩೯೭ ॥

೩೯೮
ಹರ[ಹಿ] ಮಾಡುವುದು ಹರ[ವಿ]ಕೆಯ ಕೇಡು,
ನೆರಹಿ ಮಾಡುವುದು ಡಂಬಿನ ಭಕ್ತಿ.
ಹರ[ಹ]ಬೇಡ, ನೆರಹಬೇಡ
ಬಂದ ಬರವನರಿತು ಮಾಡಬಲ್ಲಡೆ ಕೂಡಿಕೊಂಡಿಪ್ಪ
ನಮ್ಮ ಕೂಡಲಸಂಗಮದೇವ. ॥ ೩೯೮ ॥

೩೯೯
ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ.
ಒಂದಕ್ಕಂಜುವೆ, ಒಂದಕ್ಕಳುಕುವೆ:
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ.
ಮುನ್ನಂಜದ ರಾವಳನೇವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವಾ. ॥ ೩೯೯ ॥

೪೦೦
ಹಸಿದು ಎಕ್ಕೆಯ ಕಾಯ ಮೆಲಬಹುದೆ?
ನೀರಡಿಸಿ ವಿಷವ ಕುಡಿಯಬಹುದೆ?
ಸುಣ್ಣದ, ತುಯ್ಯಲ[ದ] ಬಣ್ಣವೊಂದೆ ಎಂದಡೆ
ನಂಟುತನಕ್ಕೆ ಉಣಬಹುದೆ?
ಲಿಂಗಸಾರಾಯ ಸಜ್ಜನರಲ್ಲದವರ
ಕೂಡಲಸಂಗಮದೇವರೆಂತೊಲಿವ? ॥ ೪೦೦ ॥

೪೦೧
ಹಸ್ತಕಡಗ ಕೈಗಧಿಕ ನೋಡಾ:
ಕೊಡಲಹುದು ಕೊಳಲಾಗದು,
ಬಾಹುಬಳೆ ತೋಳಿಂಗಧಿಕ ನೋಡಾ:
ಪರವಧುವನಪ್ಪಲಾಗದು,

ಕರ್ಣಕುಂಡಲ ಕಿವಿಗಧಿಕ ನೋಡಾ:
ಶಿವನಿಂದೆಯ ಕೇಳಲಾಗದು,
ಕಂಠಮಾಲೆ ಕೊರಳಿಂಗಧಿಕ ನೋಡಾ:
ಅನ್ಯದೈವಕ್ಕೆ ತಲೆವಾಗಲಾಗದು.
ಆಗಳೂ ನಿಮ್ಮುವ ನೆನೆದು,
ಕೂಡಲಸಂಗಮದೇವಾ ನಿಮ್ಮುವನೆ ಪೂಜಿಸಿ,
ಸದಾ ಸನ್ನಿಹಿತನಾಗಿಪ್ಪನು: ಲಿಂಗಶಿಖಾಮಣಿಯಯ್ಯಾ. || ೪೦೧ ||

೪೦೨
ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ:
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು.
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ,
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ' ಎಂಬ
ಕರ್ಮಿಗಳನೇನೆಂಬೆ, ಕೂಡಲಸಂಗಮದೇವಾ. || ೪೦೨ ||

೪೦೩
ಹಾಲ ಕಂದಲು, ತುಪ್ಪದ ಮಡಕೆಯ
ಬೋಡು ಮುಕ್ಕೆನಬೇಡ.
ಹಾಲು ಸಿಹಿ, ತುಪ್ಪ ಕಮ್ಮನೆ: ಲಿಂಗಕ್ಕೆ ಬೋನ.
ಕೂಡಲಸಂಗನ ಶರಣರ
ಅಂಗಹೀನರೆಂದಡೆ ನಾಯಕನರಕ. || ೪೦೩ ||

೪೦೪
ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು,
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ, ಉಪ್ಪನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ. || ೪೦೪ ||

೪೦೫
ಹಾಲ ನೇಮ, ಹಾಲ ಕೆನೆಯ ನೇಮ,
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ,
ಬೆಣ್ಣೆಯ ನೇಮ, ಬೆಲ್ಲದ ನೇಮ,
ಅಂಬಲಿಯ ನೇಮದವರನಾರನೂ ಕಾಣೆ.
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚನ್ನಯ್ಯ. || ೪೦೫ ||

೪೦೬
ಹಾಲೆಂಜಲು ಪೇಯನ, ಉದಕವೆಂಜಲು ಮತ್ಸ್ಯದ,
ಪುಷ್ಪವೆಂಜಲು ತುಂಬಿಯ.
ಎಂತು ಪೂಜಿಸುವೆ ಶಿವಶಿವಾ, ಎಂತು ಪೂಜಿಸುವೆ?
ಈ ಎಂಜಲನತಿಗಳೆವಡೆ ಎನ್ನಳವಲ್ಲ.
ಬಂದುದ ಕೈಕೋ ಕೂಡಲಸಂಗಮದೇವಾ. || ೪೦೬ ||

೪೦೭
ಹಾವಡಿಗನು ಮೂಕೊರತಿಯು: ತನ್ನ ಕೈಯಲ್ಲಿ ಹಾವು,
ಮಗನ ಮದುವೆಗೆ ಶಕುನವ ನೋಡಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಡಿಗನ ಕಂಡು,
ಶಕುನ ಹೊಲ್ಲೆಂಬ ಚದುರನ ನೋಡಾ.
ತನ್ನ ಸತಿ ಮೂಕೊರತಿ, ತನ್ನ ಕೈಯಲ್ಲಿ ಹಾವು, ತಾನು ಮೂಕೊರೆಯ.
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ? || ೪೦೭ ||

೪೦೮
ಹಾವಿನ ಡೊಂಕು ಹುತ್ತಕ್ಕೆ ಸಸಿನ,
ನದಿಯ ಡೊಂಕು ಸಮುದ್ರಕ್ಕೆ ಸಸಿನ,
ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ. || ೪೦೮ ||

೪೦೯
ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕ್ಕೆ ಆಸೆಮಾಡುವಂತೆ,
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು
ಮೇಲೇಸು ಕಾಲ ಬದುಕುವನೊ?
ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವರ
ಕೂಡಲಸಂಗಮದೇವಯ್ಯನೊಲ್ಲ, ಕಾಣಿರಣ್ಣಾ. || ೪೦೯ ||

೪೧೦
ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ,
ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲನಾಡುವಂತೆ,
ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದಡೆ
ಸುಣ್ಣಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ. || ೪೧೦ ||

೪೧೧
ಹಾವು ತಿಂದವರ ನುಡಿಸಬಹುದು,
ಗರ ಹೊಡೆದವರ ನುಡಿಸಬಹುದು,
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ.
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯಾ, ಕೂಡಲಸಂಗಮದೇವಾ. || ೪೧೧ ||

೪೧೨
ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದಡೆ
ಲಕ್ಷಸಂಖ್ಯೆಯ ಹಿರಣ್ಯವ ತಂದು ಸಂತೋಷ ಪಡಿಸುವಂತೆ,
ಕಾಳೆಗಮುಖವಾವುದೆಂದರಿಯದ ಹಂದೆ ನೃಪಂಗೆ
ಒಬ್ಬ ಕ್ಷತ್ರಿಯನಹ ಕುಮಾರ ಹುಟ್ಟಿ,
ಕಿಗ್ಗಡಲ ರಕ್ತದ ಹೊನಲಲ್ಲಿ ಕಡಿದು ಮುಳುಗಾಡುವ
ಕೊಳುಗುಳವ ಕಂಡು ಪರಿಣಾಮಿಸುವಂತೆ
ಆನು ಪರಿಣಾಮಿಸುವೆನಯ್ಯಾ, ಕೂಡಲಸಂಗಮದೇವಾ
ನೀವು ಬಂದೆನ್ನ ಬೇಡಿದಡೆ. || ೪೧೨ ||

೪೧೩
ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು,
ಸರ್ಪದಷ್ಟವಾದಡೆಯೂ ಸಾಯರು ನಿಶ್ಶಂಕಿತರಾದವರು.
ಕೂಡಲಸಂಗಮದೇವಯ್ಯಾ,
ಶಂಕಿತಂಗೆ ಪ್ರಸಾದ ಸಿಂಗಿ, ಕಾಳಕೂಟವಿಷವು. || ೪೧೩ ||

೪೧೪
ಹುತ್ತವ ಕಂಡಲ್ಲಿ ಹಾವಾಗಿ,
ನೀರ ಕಂಡಲ್ಲಿ [ಒಳ್ಳೆ]ಯಾದವನ ಮಚ್ಚುವನೆ?
ಬಾರದ ಭವಂಗಳಲ್ಲಿ ಬರಿಸುವನಲ್ಲದೆ, ಮಚ್ಚುವನೆ?
ಅಘೋರನರಕವನುಣಿಸುವನಲ್ಲದೆ, ಮಚ್ಚುವನೆ?
ಅಟಮಟದ ಭಕ್ತರ ಕಂಡಡೆ,
ಕೋಟಲೆಗೊಳಿಸುವ ಕೂಡಲಸಂಗಮದೇವ. || ೪೧೪ ||

೪೧೫
ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ? || ೪೧೫ ||

೪೧೬
ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗುಣಬಾರದು,
ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು.
ಅಳಿಮನದಾಸೆಯವರ ಮೂಗ ಹಲುದೋರೆ ಕೊಯ್ವ
ಕೂಡಲಸಂಗಮದೇವ. || ೪೧೬ ||

೪೧೭
ಹೃದಯ ಕತ್ತರಿ, ತುದಿನಾಲಗೆ ಬೆಲ್ಲೇಂ ಭೋ !
ಆಡಿಹೆನು ಏಂ ಭೋ, ಹಾಡಿಹೆನು ಏಂ ಭೋ !
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನು ಏಂ ಭೋ !
ಆನು ಎನ್ನಂತೆ, ಮನ ಮನದಂತೆ,
ಕೂಡಲಸಂಗಮದೇವ ತಾನು ತನ್ನಂತೆ. || ೪೧೭ ||

೪೧೮
ಹೇಡಿ ಬಿರಿದ ಕಟ್ಟಿದಂತೆ ಆಯಿತೆನ್ನ ವೇಷ :
ಕಾದಬೇಕು, ಕಾದುವಡೆ ಮನವಿಲ್ಲ -
ಆಗಳೆ ಹೋಯಿತ್ತು ಬಿರಿದು,
ಹಗರಣ ನಗೆಗೆಡೆಯಾಯಿತ್ತು.
ಮಾರಂಕ ಜಂಗಮ ಮನೆಗೆ ಬಂದಡೆ
ಕಾಣದಂತಡ್ಡ ಮುಸುಡಿಟ್ಟಡೆ
ಕೂಡಲಸಂಗಮದೇವ ಜಾಣ, ಹಲುದೋರೆ ಮೂಗಕೊಯ್ವ. || ೪೧೮ ||

೪೧೯
ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೋ!
ದೇವಾ ನೀನೊಲಿದವನ, ಸ್ವಾಮಿ ನೀ ಹಿಡಿದವನ ಕುಲವೇನೋ!
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ,
ನಿಮ್ಮಿಂದಧಿಕ ಕೂಡಲಸಂಗಮದೇವಾ. || ೪೧೯ ||

೪೨೦
ಹೊತ್ತಾರೆ ಎದ್ದು, ಅಗ್ಘವಣಿ ಪತ್ರೆಯ ತಂದು,
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು, ಕೂಡಲಸಂಗಮದೇವನ. || ೪೨೦ ||

೪೨೧
ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ,
ಎನ್ನ ಒಡಲಿಂಗೆ, ಎನ್ನ ಒಡವೆಗೆಂದು, ಎನ್ನ ಮಡದಿ ಮಕ್ಕಳಿಗೆಂದು,
ಕುದಿದೆನಾದಡೆ ಎನ್ನ ಮನಕ್ಕೆ ಮನವೆ ಸಾಕ್ಷಿ.
ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಮ್॥
ಎಂಬ ಶ್ರುತಿಯ ಬಸವಣ್ಣನೋದುವನು,
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ.
ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ,
ಎನ್ನ ಒಡಲವಸರಕ್ಕೆ ಕುದಿದೆನಾದಡೆ
ತಲೆದಂಡ ಕೂಡಲಸಂಗಮದೇವಾ! ॥ ೪೨೧ ॥

೪೨೨
ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿ[ವಾರಿ] ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?
ಕರ್ತು ಕೂಡಲಸಂಗಾ,
ನಿಮ್ಮ ತೊತ್ತುಗೆಲಸ ಮಾಡದವನ ಸಂಸಾರವೇನವನ? ॥ ೪೨೨ ॥

೪೨೩
ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ. ॥ ೪೨೩ ॥

೪೨೪
ಹೊಯಿದವರೆನ್ನ ಹೊರೆದವರೆಂಬೆ,
ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ,

ಆಳಿಗೊಂಡವರೆನ್ನ ಆಳ್ದವರೆಂಬೆ,
ಜರಿದವರೆನ್ನ ಜನ್ಮಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನ ಶೂಲದಲಿಕ್ಕಿದರೆಂಬೆ
ಕೂಡಲಸಂಗಮದೇವಾ. || ೪೨೪ ||

೪೨೫
ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಿಲ್ಲದನ್ನಕ್ಕ?
ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ?
ನೂರನೋದಿ ಏವೆನಯ್ಯಾ
ನಮ್ಮ ಕೂಡಲಸಂಗಮದೇವರ ಮನಮುಟ್ಟದನ್ನಕ್ಕ? || ೪೨೫ ||

೪೨೬
ಹೊರಿಸಿಕೊಂಡು ಹೋದ ನಾಯಿ, ಮೊಲನನೇನ ಹಿಡಿವುದಯ್ಯಾ?
ಇರಿಯದ ವೀರ, ಇಲ್ಲದ ಸೊಬಗುವ ಹೇಳುವುದೆ ನಾಚಿಕೆ.
ಆನು ಭಕ್ತನೆಂತೆಂಬೆನಯ್ಯಾ, ಕೂಡಲಸಂಗಮದೇವಾ? || ೪೨೬ ||

೪೨೭
ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು.
ಬಯಸುತ್ತಿರ್ದೆನಯ್ಯ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು, ಕೂಡಲಸಂಗಮದೇವಾ. || ೪೨೭ ||

೪೨೮
ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲ - ಬಿಂದುವಿನ ವ್ಯವಹಾರ ಒಂದೇ,
ಆಶೆಯಾಮಿಷ ರೋಷಹರುಷ ವಿಷಯಾದಿಗಳೆಲ್ಲಾ ಒಂದೇ.
ಏನನೋದಿ, ಏನ ಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಂ ।
ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಮ್ ॥
ಎಂದುದಾಗಿ, ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ.
ಕರ್ಣದಲ್ಲಿ ಜನಿಸಿದರುಂಟೆ ಜಗದೊಳಗೆ?

ಇದು ಕಾರಣ ಕೂಡಲಸಂಗಮದೇವಾ,
ಲಿಂಗಸ್ಥಲವನರಿದವನೆ ಕುಲಜನು. || ೪೨೮ ||

೪೨೯
ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡೆನೆ?
ನೆಲನನುಗ್ಗಡಿಸಿ ಉಘೇ ಚಾಂಗು ಭಲಾ ಎಂದು!
ಕುಲಕಧಿಕ ಹಾರುವಂಗೆ ಸಿದ್ಧಿಗೆ ಎಯಿಸಲೆ!
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ.
ಎಲೆ ಎಲೆ ಕೂಡಲಸಂಗಮದೇವಾ, ನಿಮ್ಮ ನಂಬದವ ಹೊಲೆಯ. || ೪೨೯ ||

೪೩೦
ಹೊಲೆಯ ಹೊಲಬಿಗನಾದಡೆ,
ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ.
ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ,
ಹೊಲಬುಗೆಡಬೇಡ, ಶಿವ ಶರಣೆನ್ನಿರಯ್ಯಾ.
ನಮ್ಮ ಕೂಡಲಸಂಗನ ಮಹಾಮನೆಯಲು
ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ. || ೪೩೦ ||

೪೩೧
ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ.
ನಿಷ್ಕಳಂಕ ನಿಜೈಕ್ಯ ತ್ರಿವಿಧನಿರ್ಣಯ,
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ. || ೪೩೧ ||

೪೩೨
ಹೊಸತಿಲ ಪೂಜಿಸಿ ಹೊಡವಂಟು ಹೋದ
ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ.
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು
ಉದಾಸೀನವ ಮಾಡಿದಡೆ,
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ!
ಕೂಡಲಸಂಗಮದೇವ ಅಘೋರನರಕದಲ್ಲಿಕ್ಕುವ. || ೪೩೨ ||

❖❖

*

ಅಲ್ಲಮಪ್ರಭುದೇವ

೪೩೩
ಅಂಗಜೀವಿಗಳೆಲ್ಲಾ ಅಶನಕ್ಕೆ ನೆರೆದು,
ಲಿಂಗವಾರ್ತೆಯ ನುಡಿ[ವಿ]ರಯ್ಯಾ.
ಕಾಯಜೀವಿಗಳೆಲ್ಲಾ ಕಳವಳಿಸಿ
ಮನಬಂದ ಪರಿಯಲ್ಲಿ ನುಡಿವಿರಿ.
ಗುಹೇಶ್ವರಲಿಂಗ ನಿಮಗೆಲ್ಲಿಯದೊ? ॥ ೧ ॥

೪೩೪
ಅಂಗದ ಕಳೆ ಲಿಂಗದಲ್ಲಿ ಅರತ ಬಳಿಕ,
ಅಂಗವೆಂಬ ಶಂಕೆಯಿಲ್ಲ ನೋಡಾ ಶರಣಂಗೆ.
ಪ್ರಾಣದ ಕಳೆ ಅರಿವಿನಲ್ಲಿ ಅರತ ಬಳಿಕ,
ಶಬ್ದಸಂದಣಿಗೆ ಹಂಗಿಲ್ಲ ನೋಡಾ.
ಶರಣ ನಡೆದಡೆ ನಿರ್ಗಮನಿ, ನುಡಿದಡೆ ನಿಶ್ಶಬ್ದಿ!
ಗುಹೇಶ್ವರನ ಶರಣಂಗೆ ಕುರುಹಿಲ್ಲ ಕೇಳಾ, ಎಲೆ ಅವ್ವಾ. ॥ ೨ ॥

೪೩೫
ಅಂಗದ ಕೈಯಲ್ಲಿ ಲಿಂಗ, ಮನದ ಕೈಯಲ್ಲಿ ಸಂಸಾರ,
ಎಂತಯ್ಯಾ ನಿನ್ನ ಪ್ರಾಣಲಿಂಗವೆಂಬೆ?
ಹೊರಗೆ ಕುರುಹಾಗಿ ತೋರುತ್ತಿದೆ.
ತನುವಿಗೆ ತನು ಸಯವಾಗದು ಮನಕ್ಕೆ ಮನ ಸಯವಾಗದು,
ಎಂತಯ್ಯಾ? ನಿನ್ನ ಪ್ರಾಣಲಿಂಗವೆಂಬೆ ಗುಹೇಶ್ವರಾ. ॥ ೩ ॥

೪೩೬
ಅಂಗದ ಮೇಲೆ ಲಿಂಗಸಂಬಂಧವಾದ ಬಳಿಕ,
ಪ್ರಾಣದ ಮೇಲೆ ಜ್ಞಾನ ನಿರ್ಧಾರವಾಯಿತ್ತು ನೋಡಾ.

ಒಳಹೊರಗೆಂಬ ಉಭಯವು ಏಕಾರ್ಥವಾಯಿತ್ತು,
ಗುಹೇಶ್ವರಾ, ನಿಮ್ಮ ನೆನೆದೆನಾಗಿ. || ೪ ||

೪೩೭
ಅಂಗದಲ್ಲಿ ಮಾಡುವ ಸುಖ, ಲಿಂಗಕ್ಕದು ಭೂಷಣವಾಯಿತ್ತು.
ಕಾಡುಗಿಚ್ಚಿನ ಕೈಯಲ್ಲಿ ಕರಡ ಕೊಯಿಸುವಂತೆ
ಹಿಂದೆ ಮೆದೆಯಿಲ್ಲ, ಮುಂದೆ ಹುಲ್ಲಿಲ್ಲ.
ಅಂಗ ಲಿಂಗವೆಂಬನ್ನಕ್ಕರ ಫಲದಾಯಕ,
ಲಿಂಗೈಕ್ಯವದು ಬೇರೆ ಗುಹೇಶ್ವರಾ. || ೫ ||

೪೩೮
ಅಂಗದೊಳಗೆ ಮಹಾಲಿಂಗವಿರಲು,
ಕೈಯ ಲಿಂಗ ಬಿದ್ದಿತ್ತೆಂದು ನೆಲದೊಳಗಂಗವ ಹೂಳಿ
ಭಂಗಪಡುವರಲ್ಲಾ,
ಗುಹೇಶ್ವರಲಿಂಗವನರಿಯದ ಜಡರು. || ೬ ||

೪೩೯
ಅಂಗನೆಯ ಮೊಲೆ ಲಿಂಗವೆ? ಬಳ್ಳ ಲಿಂಗವೆ?
ಕಿತ್ತು ಬಹ ಸಾಣೆ ಲಿಂಗವೆ? ಆಡಿನ ಹಿಕ್ಕಿ ಲಿಂಗವೆ?
ಮೆಚ್ಚುವರೆ ಪ್ರಮಥರು? ಮೆಚ್ಚುವರೆ ಪುರಾತನರು - ನಿಮ್ಮ ಭಕ್ತರು?
ಭಾವಭ್ರಮೆಯಳಿದು, ಗುಹೇಶ್ವರಾ
ನಿಮ್ಮಲ್ಲಿ ಅನಾದಿಸಂಸಿದ್ಧವಾದ ಜಂಗಮವನರಿದಾತ
ಬಸವಣ್ಣನೊಬ್ಬನೆ. || ೭ ||

೪೪೦
ಅಂಗ ಲಿಂಗದಲ್ಲಿ ತರಹರವಾಗಿ,
ಸಮತೆ ಶಾಂತಿಯಲ್ಲಿ ತರಹರವಾಗಿ,
ಮನ ಜ್ಞಾನದಲ್ಲಿ ತರಹರವಾಗಿ,
ಭಾವ ನಿರ್ಭಾವದಲ್ಲಿ ತರಹರವಾಗಿ ಇರಬಲ್ಲಡೆ,
ಆತನೆ ಅಚ್ಚಶರಣನು ಕಾಣಾ, ಗುಹೇಶ್ವರಾ. || ೮ ||

೪೪೧
ಅಂಬುಧಿಯೊಳಗಾದ ನದಿಗಳು ಮರಳುವುವೆ?
ಉರಿಯೊಳಗಾದ ಕರ್ಪುರ ರೂಪಿಂಗೆ ಬಪ್ಪುದೆ?
ಮರುತನೊಳಗಾದ ಪರಿಮಳ ಲೇಪನಕ್ಕೆ ಬಪ್ಪುದೆ?
ಲಿಂಗವನರಿದು ಲಿಂಗೈಕ್ಯವಾದ ಶರಣ
ಮರಳಿ ಹುಟ್ಟುವನೆ ಗುಹೇಶ್ವರಾ? || ೯ ||

೪೪೨

ಅಕಟಕಟಾ ದೇಹಾರ ಅಭ್ಯಾಸವಾಯಿತ್ತಲ್ಲಾ!
ಅಕಟಕಟಾ ಓಗರ ಉಪಾಹಾರವಾಯಿತ್ತಲ್ಲಾ!
ಅಕಟಕಟಾ ಅನುಭಾವ ಹೊಲಬುಗೆಟ್ಟು ಹೋಯಿತ್ತಲ್ಲಾ!
ಅಕಟಕಟಾ ಷೋಡಶೋಪಚಾರವನರಿಯದೆ
ಕೆಟ್ಟರಲ್ಲಾ ಗುಹೇಶ್ವರಾ. || ೧೦ ||

೪೪೩

ಅಗ್ಘವಣಿ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ
ಪೂಜಿಸಿ ಪೂಜಿಸಿ ಬಳಲುತ್ತೈದಾರೆ.
ಏನೆಂದರಿಯರು ಎಂತೆಂದರಿಯರು.
ಜನ ಮರುಳೊ ಜಾತ್ರೆ ಮರುಳೊ ಎಂಬಂತೆ:
ಎಲ್ಲರೂ ಪೂಜಿಸಿ, ಏನನೂ ಕಾಣದೆ,
ಲಯವಾಗಿ ಹೋದರು, ಗುಹೇಶ್ವರಾ. || ೧೧ ||

೪೪೪

ಅಗ್ಘವಣಿಯ ತಂದು ಮಜ್ಜನವ ಮರೆದವನ,
ಪುಷ್ಪವ ತಂದು ಪೂಜೆಯ ಮರೆದವನ,
ಓಗರವ ತಂದು ಅರ್ಪಿತವ ಮರೆದವನ,
ಲಿಂಗವ ಕಂಡು ತನ್ನ ಮರೆದವನ,
ಮಹಾಘನ ಒಳಕೊಂಡಿತ್ತು ಗುಹೇಶ್ವರಾ. || ೧೨ ||

೪೪೫

ಅಗ್ನಿಗೆ ತಂಪುಂಟೆ?
ವಿಷಕ್ಕೆ ರುಚಿಯುಂಟೆ ಹೇಳಾ?
ಕಂಗಳಿಗೆ ಮರೆಯುಂಟೆ ಹೇಳಾ ಲಿಂಗವೆ?
ದಾಳಿಕಾರಂಗೆ ಧರ್ಮವುಂಟೆ?
[ಕನ್ನಗಳ್ಳಂಗೆ] ಕರುಳುಂಟೆ?
ಗುಹೇಶ್ವರಾ, ನಿಮ್ಮ ಶರಣರು,
ಮೂರು ಲೋಕವರಿಯೆ ನಿಶ್ಚಟರಯ್ಯಾ. || ೧೩ ||

೪೪೬

ಅಘಟಿತ ಘಟಿತನೆ, ವಿಪರೀತ ಚರಿತ್ರನೆ,
ಸಾವರ ಕೈಯಲ್ಲಿ ಪೂಜೆಗೊಂಬರೆ ಲಿಂಗಯ್ಯಾ?
ಸಾವರ ನೋವರ ಕೈಯಲ್ಲಿ ಪೂಜೆಗೊಂಬುದು
ಲಜ್ಜೆ ಕಾಣಾ, ಗುಹೇಶ್ವರಾ. || ೧೪ ||

೪೪೭

ಅಜ್ಞಾನವೆಂಬ ತೊಟ್ಟಿಲೊಳಗೆ,
ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದಶಾಸ್ತ್ರವೆಂಬ ನೇಣ ಕಟ್ಟಿ,
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ,
ಭ್ರಾಂತಿಯೆಂಬ ತಾಯಿ!
ತೊಟ್ಟಿಲು ಮುರಿದು, ನೇಣು ಹರಿದು,
ಜೋಗುಳ ನಿಂದಲ್ಲದೆ,
ಗುಹೇಶ್ವರನೆಂಬ ಲಿಂಗವ ಕಾಣಬಾರದು. || ೧೫ ||

೪೪೮

ಅಟ್ಟುದನಡಲುಂಟೆ? ಸುಟ್ಟುದ ಸುಡಲುಂಟೆ?
ಜ್ಞಾನಾಗ್ನಿಯಲ್ಲಿ ದಗ್ಧವಾದ ಪರಮಶಿವಯೋಗಿಗೆ
ಹುಟ್ಟು ಹೊಂದೆಂಬ ಉಭಯ ಜಡತೆಯುಂಟೆ?
ಅದೆಂತೆಂದಡೆ
ದಗ್ಧಸ್ಯ ದಹನಂ ನಾಸ್ತಿ ಪಾಕಸ್ಯ ಪಚನಂ ನ ಹಿ|
ಜ್ಞಾನಾಗ್ನಿದಗ್ಧದೇಹಸ್ಯ ನ ಚ ದಾಹೋ ನ ಚ ಕ್ರಿಯಾ||
ಎಂದುದಾಗಿ-
ನಮ್ಮ ಗುಹೇಶ್ವರಲಿಂಗವನೊಡಗೂಡಿ,
ಎರಡಳಿದು ನಿಂದ ಮಹಾಮಹಿಮಂಗೆ
ಪರಿಭವವಿಲ್ಲ ಕಾಣಿರೊ. || ೧೬ ||

೪೪೯

ಅನ್ನವನಿಕ್ಕಿ ನನ್ನಿಯ ನುಡಿದು
ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದಡೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು.
ಗುಹೇಶ್ವರನನರಿದ ಶರಣಂಗೆ ಆವ ಫಲವೂ ಇಲ್ಲ. || ೧೭ ||

೪೫೦

ಅಭ್ಯಾಸದ ಮಾತಲ್ಲ, ಶ್ರೋತ್ರದ ಸುಖವಲ್ಲ,
ಶಾಸ್ತ್ರದ ಅನುಭಾವದ ಮಾತಲ್ಲ.
ಒಳಗಣ ಮಾತಲ್ಲ ಹೊರಗಣ ಮಾತಲ್ಲ.
ಇದರಂಗವನರಿಯದೆ,
ಅನುಭಾವವ ಮಾಡಿ ಫಲವೇನಯ್ಯಾ?
ಗುಹೇಶ್ವರಲಿಂಗವು ಉಪಮಾತೀತ ನೋಡಯ್ಯಾ ಸಿದ್ಧರಾಮಯ್ಯ! || ೧೮ ||

೪೫೧
ಅಮೃತಸಾಗರದೊಳಗಿರ್ದು ಆಕಳ ಚಿಂತೆ ಏಕೆ?
ಮೇರುಮಧ್ಯದೊಳಗಿರ್ದು ಜರಗ ತೊಳೆವ ಚಿಂತೆ ಏಕೆ?
ಗುರುವಿನೊಳಗಿರ್ದು ತತ್ವವಿದ್ಯೆಯ ಚಿಂತೆ ಏಕೆ?
ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆ ಏಕೆ?
ಕರಸ್ಥಲದೊಳಗೆ ಲಿಂಗವಿರ್ದ ಬಳಿಕ,
ಮತ್ತಾವ ಚಿಂತೆ ಏಕೆ ಹೇಳಾ, ಗುಹೇಶ್ವರಾ? ॥ ೧೯ ॥

೪೫೨
ಅಮೃತ ಸೇವನೆಯ ಮಾಡಿ ಆಪ್ಯಾಯನ ಘನವಾಯಿತ್ತು.
ಪರುಷವೇದಿಯ ಸಾಧಿಸ ಹೋದಡೆ ದಾರಿದ್ರ್ಯ ಘನವಾಯಿತ್ತು.
ಮರುಜವಣಿಯ ಹಣ್ಣ ಮೆದ್ದು, ಮರಣವಾಯಿತ್ತ ಕಂಡೆ.
ಎಲ್ಲವನೂ ಸಾಧಿಸ ಹೋದಡೆ ಏನೂ ಇಲ್ಲದಂತಾಯಿತ್ತು.
ನಾನು ನಿಜವ ಸಾಧಿಸಿ ಬದುಕಿದೆನು ಗುಹೇಶ್ವರಾ. ॥ ೨೦ ॥

೪೫೩
ಅಯ್ಯಾ, ಸತ್ಯವ ನುಡಿಯದ, ಸದಾಚಾರದಲ್ಲಿ ನಡೆಯದ,
ಸದ್ಭಕ್ತಿಯ ಹಿಡಿಯದ, ನಿಜಮುಕ್ತಿಯ ಪಡೆಯದ,
ಸತ್ಕ್ರಿಯವ ಸಾರದ, ಸಮ್ಯಜ್ಞಾನವ ಮುಟ್ಟದ,
ಸುಡು ಸುಡು - ಈ ವೇಷದ ಭಾಷೆಯ ನೋಡಿ
ಗುಹೇಶ್ವರಲಿಂಗವು ನಗುತ್ತೈದಾನೆ ಕಾಣಾ ಚೆನ್ನಬಸವಣ್ಣಾ. ॥ ೨೧ ॥

೪೫೪
ಅರಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ,
ಬಯಸುವ ಬಯಕೆ ಕೈಸಾರಿದಂತೆ,
ಬಡವ ನಿಧಾನವನೆಡಹಿ ಕಂಡಂತೆ,
ನಾನರಸುತ್ತಲರಸುತ್ತ ಬಂದು
ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ.
ಎನ್ನ ಅರಿವಿನ ಹರಹ ಕಂಡೆ ನೋಡಾ.
ಎನ್ನ ಒಳಹೊರಗೆ ಎಡೆದೆರಹಿಲ್ಲದೆ
ಥಳಥಳಿಸಿ ಬೆಳಗಿ ಹೊಳೆವುತಿಪ್ಪ
ಅಖಂಡಜ್ಯೋತಿಯ ಕಂಡೆ ನೋಡಾ!
ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ
ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ, ಗುಹೇಶ್ವರಾ. ॥ ೨೨ ॥

೪೫೫

ಅರಿದರಿದು ಅರಿವು ಬಂಜೆಯಾಯಿತ್ತು.
ಮರೆ ಮರೆದು ಮರಹು ಬಂಜೆಯಾಯಿತ್ತು.
ಗುಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು. || ೨೩ ||

೪೫೬

ಅರಿದೆನೆಂಬುದು ತಾ ಬಯಲು,
ಅರಿಯೆನೆಂಬುದು ತಾ ಬಯಲು.
ಅರುಹಿನ ಕುರುಹಿನ ಮರಹಿನೊಳಗೆ
ಗುಹೇಶ್ವರನೆಂಬುದು ತಾ ಬಯಲು! || ೨೪ ||

೪೫೭

ಅರಿದೆವರಿದೆವೆಂಬಿರಿ ಅರಿದ ಪರಿಯೆಂತು ಹೇಳಿರೆ?
ಅರಿದವರು ಅರಿದೆವೆಂಬರೆ?
ಅರಿಯಬಾರದ ಘನವನರಿದವರು
ಅರಿಯದಂತಿಪ್ಪರು ಗುಹೇಶ್ವರಾ. || ೨೫ ||

೪೫೮

ಅರಿವಿನಲ್ಲಿ ಉದಯಿಸಿ ಮರಹು ನಷ್ಟವಾಗಿರ್ದ
ಶರಣನ ಪರಿಯನರಸಲುಂಟೆ?
ಗತಿಯ ಹೇಳಲುಂಟೆ?
ಶಿಶು ಕಂಡ ಕನಸಿನಂತಿಪ್ಪರು
ಗುಹೇಶ್ವರಾ, ನಿಮ್ಮ ಶರಣರು! || ೨೬ ||

೪೫೯

ಅರಿವು ಅರಿವು ಎನುತ್ತಿಪ್ಪಿರಿ, ಅರಿವು ಸಾಮಾನ್ಯವೆ?
ಹಿಂದಣ ಹಜ್ಜೆಯ ನೋಡಿ ಕಂಡಲ್ಲದೆ
ನಿಂದ ಹಜ್ಜೆಯನರಿಯಬಾರದು.
ಮುಂದಣ ಹಜ್ಜೆಯ[ನರಿ]ದಲ್ಲದೆ, ಒಂದು ಪಾದ ನೆಲೆಗೊಳ್ಳದು.
ನೆಲನ ಬಿಟ್ಟು, ಆಕಾಶದಲ್ಲಿ ನಿಂದು,
ಮುಗಿಲೊಳಗೆ ಮಿಂಚಿದಲ್ಲದೆ ತಾನಾಗಬಾರದು.
ಗುಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ? || ೨೭ ||

೪೬೦

ಆಕಾಶವ ಮೀರುವ ತರು ಗಿರಿಗಳುಂಟೆ?
ನಿರಾಕಾರವ ಮೀರುವ ಸಾಕಾರವುಂಟೆ?

ಗುಹೇಶ್ವರಲಿಂಗವ ಮೀರುವ ಒಡೆತನವುಂಟೆ,
ಸಂಗನಬಸವಣ್ಣಾ? ‖ ೨೮ ‖

೪೬೧
ಆಡಿಂಗೆ ದಾಯಾದ್ಯರಾದಿರಲ್ಲಾ.
ಕಾಡ ಗಿಡುವಿಂಗೆ ಮೃತ್ಯುವಾದಿರಲ್ಲಾ.
ಅರಿವನರಿಯ ಹೇಳಿ,
ಶ್ರೀಗುರು ಕುರುಹ ಕೈಯಲ್ಲಿ ಕೊಟ್ಟಡೆ,
ಅರಿವನೆ ಮರೆದು ಕುರುಹ ಪೂಜಿಸುವ
ಕುರಿಗಳ ನೋಡಾ ಗುಹೇಶ್ವರಾ. ‖ ೨೯ ‖

೪೬೨
ಆದಿ ತ್ರೈಯುಗದಲ್ಲಿ ದೇವ ದಾನವ ಮಾನವರು
ಮಾಯಾಮೋಹದಲ್ಲಿ ಹುಟ್ಟಿ ತೊಳಲಿ ಬಳಲುತ್ತೈದಾರೆ!
ಆವ ವೇಷವಾದಡೇನು? ತಾಮಸಧಾರಿಗಳು,
ಕಾಮ ಕ್ರೋಧ ಲೋಭ ಬಿಡದ ನಾನಾ ವಿಧದ ಡಂಬಕರು!
ಹೂಳದ ಹುಣ್ಣಿಂಗೆ ಆರಯ್ಯಾ ಮದ್ದನಿಕ್ಕುವರು?
ಇದೇನು ಗುಹೇಶ್ವರ? ಸೋರೆಯ ಬಣ್ಣದ ಹಿರಿಯರು! ‖ ೩೦ ‖

೪೬೩
ಆನು ನೀನೆಂಬುದು ತಾನಿಲ್ಲ,
ತಾನರಿದ ಬಳಿಕ ಏನೂ ಇಲ್ಲ ಇಲ್ಲ.
ಇಲ್ಲದ ಇಲ್ಲವೆ ಎಲ್ಲಿಂದ ಬಪ್ಪುದೊ?
ಅನುವರಿದು, ತನುವ ಮರೆದಡೆ ಭಾವರಹಿತ ಗುಹೇಶ್ವರ. ‖ ೩೧ ‖

೪೬೪
ಆವ ಜಾತಿಯಾದಡೂ ಆಗಲಿ,
ಪುರಾತನರ ಚಾರಿತ್ರದಲ್ಲಿ ನಡೆದು,
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನಮಂ ಕೊಟ್ಟು,
ಅಹಂಕಾರವಳಿದಿಹಂತಹ ಮಹಾತ್ಮರ
ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದಿವೆ.
ಅವರ ಪಾದರಕ್ಷೆಗಳೆರಡನೂ,
ಮಂಡೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯಾ.
ಆ ಗಣಂಗಳ ದಾಸನ ದಾಸ ನಾನು,
ಜನ್ಮ ಜನ್ಮದಲ್ಲಿ ಆಗುವೆ ಕಾಣಾ ಗುಹೇಶ್ವರಾ. ‖ ೩೨ ‖

೪೬೫
ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ,
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ.
ಗುಹೇಶ್ವರಾ, ನಿಮಗಾಗಿ ಸತ್ತವರನಾರನೂ ಕಾಣೆ. || ೩೩ ||

೪೬೬
ಆಸೆಯೆಂಬ ಶೂಲದ ಮೇಲೆ, ವೇಷವೆಂಬ ಹೆಣನ ಕುಳ್ಳಿರಿಸಿ ;
ಧರೆಯ ಮೇಲುಳ್ಳ ಹಿರಿಯರು ಹೇಂಗೆ ಸವೆದರು ನೋಡಾ!
ಆಸೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು,
ಹೇಸಿಕೆಯಾಯಿತ್ತು ಗುಹೇಶ್ವರಾ. || ೩೪ ||

೪೬೭
ಇಕ್ಷುದಂಡಕ್ಕೆ ಕೀಳು ಮೇಲಲ್ಲದೆ
ಸಕ್ಕರೆಯ ದಂಡಕ್ಕೆ ಕೀಳು ಮೇಲುಂಟೆ?
ಪರುಷ ಪಾಷಾಣಕ್ಕೆ ಕೀಳು ಮೇಲಲ್ಲದೆ
ಕಡೆಯಾಣಿಗುಂಟೆ ಒರೆಗಲ್ಲು?
'ಉಂಟು' 'ಇಲ್ಲ' ಎಂಬ ಸಂದೇಹ ನಿಂದಲ್ಲಿ
ಗುಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯಾ. || ೩೫ ||

೪೬೮
ಇಷ್ಟಲಿಂಗವ ತೋರಿ ಮೃಷ್ಟಾನ್ನವ ಹಾರುವವರಿಗೆ
ಇಷ್ಟಾರ್ಥಸಿದ್ಧಿ ಇನ್ನೆಲ್ಲಿಯದೊ?
ಅದೆಲ್ಲಿಯದೊ ಲಿಂಗ? ಅದೆಲ್ಲಿಯದೊ ಜಂಗಮ?
ಅದೆಲ್ಲಿಯದೊ ಪಾದೋದಕ ಪ್ರಸಾದ?
ಅಲ್ಲದಾಟವನಾಡಿ ಎಲ್ಲರೂ ಮುಂದುಗೆಟ್ಟರು,
ಗುಹೇಶ್ವರಾ ನಿಮ್ಮಾಣೆ. || ೩೬ ||

೪೬೯
ಉಗುಳ ನುಂಗಿ ಹಸಿವ ಕಳೆದು,
ತೆವರ ಮಲಗಿ ನಿದ್ರೆಗೆಯ್ದು,
ನೋಡಿ ನೋಡಿ ಸುಖಂಬಡೆದೆನಯ್ಯಾ.
ಗುಹೇಶ್ವರಾ ನಿಮ್ಮ ವಿರಹದಲ್ಲಿ
ಕಂಗಳೇ ಕರುವಾಗಿರ್ದೆನಯ್ಯಾ. || ೩೭ ||

೪೭೦
ಉದಕ ಮಜ್ಜನವಲ್ಲ, ಪತ್ರೆ ಪೂಜೆಯಲ್ಲ.
ಧೂಪ ಪರಿಮಳವಲ್ಲ, ಕಂಚು ಬೆಳಗಲ್ಲ,
ಸಯದಾನ ಅರ್ಪಿತವಲ್ಲ!
ಅದೆಂತೆಂದಡೆ,
ಸಜ್ಜನವೆ ಮಜ್ಜನ, ಸತ್ಯಸದಾಚಾರವೆ ಪತ್ರೆ ಪುಷ್ಪ.
ಅಷ್ಟಮದಂಗಳ ಸುಟ್ಟುದೆ ಧೂಪ, ನಯನವೆ ಸ್ವಯಂ ಜ್ಯೋತಿ,
ಪರಿಣಾಮವೆ ಅರ್ಪಿತ ಕಾಣಾ ಗುಹೇಶ್ವರಾ. || ೩೮ ||

೪೭೧
ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯನು,
ಉಪಚಾರದ ಲಿಂಗ ಉಪಚಾರದ ಜಂಗಮವು.
ಉಪಚಾರದ ಪ್ರಸಾದವ ಕೊಂಡು,
ಗುರುವಿಂಗೆ ಭವದ ಲೆಂಕನಾಗೆ,
ಅಂಧಕನ ಕೈಯ ಅಂಧಕ ಹಿಡಿದಂತೆ
ಇಬ್ಬರೂ ಹೊಲಬುಗೆಟ್ಟರು ಕಾಣಾ ಗುಹೇಶ್ವರಾ. || ೩೯ ||

೪೭೨
ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಬಂತೆ
ದಂಪತಿ ಏಕಭಾವವಾಗಿ ನಿಂದಲ್ಲಿ,
ಗುಹೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು, ಸಂಗನಬಸವಣ್ಣ. || ೪೦ ||

೪೭೩
ಎತ್ತಣ ಮಾಮರ ಎತ್ತಣ ಕೋಗಿಲೆ,
ಎತ್ತಣಿಂದೆತ್ತ ಸಂಬಂಧವಯ್ಯಾ!
ಬೆಟ್ಟದ ಮೇಲಣ ನೆಲ್ಲಿಯಕಾಯಿ
ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯಾ!
ಗುಹೇಶ್ವರಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ! || ೪೧ ||

೪೭೪
ಎನಗೊಂದು ಲಿಂಗ, ನಿನಗೊಂದು ಲಿಂಗ,
ಮನೆಗೊಂದು ಲಿಂಗವಾಯಿತ್ತು.
ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ.
ಮನ ಮುಟ್ಟದ ಲಿಂಗವ ಉಳಿ ಮುಟ್ಟಬಲ್ಲದೆ ಗುಹೇಶ್ವರಾ. || ೪೨ ||

೪೭೫

ಎನ್ನಲ್ಲಿ ನಾನು ನಿಜವಾಗಿ ನಿಮ್ಮನರಿದೆಹೆನೆಂದಡೆ
ಅದು ನಿಮ್ಮ ಮತಕ್ಕೆ ಬಪ್ಪುದೆ?
ಎನ್ನ ನಾನು ಮರೆದು, ನಿಮ್ಮನರಿದಡೆ,
ಅದು ನಿಮ್ಮ ರೂಪೆಂಬೆ.
ಎನ್ನ ನಿನ್ನೊಳು ಮರೆದಡೆ,
ಕನ್ನಡಿಯೊಳಗಣ ಪ್ರತಿಬಿಂಬದಂತೆ
ಭಿನ್ನವಿಲ್ಲದೆ ಇದ್ದೆನು ಕಾಣಾ ಗುಹೇಶ್ವರಾ. ॥ ೪೩ ॥

೪೭೬

ಎರಡೆಂಬತ್ತು ಕೋಟಿ ವಚನವ ಹಾಡಿ
ಹಲವ ಹಂಬಲಿಸಿತ್ತೆನ್ನ ಮನವು,
ಮನ ಘನವವನರಿಯದು, ಘನ ಮನವವನರಿಯದು.
ಗುಹೇಶ್ವರನೆಂಬ ಲಿಂಗವನರಿದ ಬಳಿಕ
ಗೀತವೆಲ್ಲ ಒಂದು ಮಾತಿನೊಳಗು! ॥ ೪೪ ॥

೪೭೭

ಎಲೆಯಿಲ್ಲದ ವೃಕ್ಷ ಉಲಿಯಬಲ್ಲುದೆ?
ಜಲವಿಲ್ಲದ ತಟಾಕ ತೆರೆಗೊಡಲುಂಟೆ?
ಶಬ್ದಮುಗ್ಧವಾದವಂಗೆ ನುಡಿಗೆಡೆಯುಂಟೆ?
ಸಮಯವ ಸಾಧಿಸುವನ್ನಬರ ಎಂತು ನಿಜನಿಃಪತಿಯಪ್ಪುದು?
ಭ್ರಾಂತು ಮರ್ಕಟನ ವೃಶ್ಚಿಕ ಹೊಯಿದಂತೆ
ನಮ್ಮ ಗುಹೇಶ್ವರಲಿಂಗದಲ್ಲಿ
ಮರೆದಾಡಬೇಡವೆಲೆ ಭ್ರಾಂತುಯೋಗಿ ಘಟ್ಟಿವಾಳಯ್ಯ. ॥ ೪೫ ॥

೪೭೮

ಎಲ್ಲ ಎಲ್ಲವನರಿಯಬಹುದು, ಸಾವನರಿಯಬಾರದು.
ಸರ್ವವಿದ್ಯೆ ಸಕಲವ್ಯಾಪ್ತಿಯನರಿಯಬಹುದು, ಸಾವನರಿಯಬಾರದು.
ಹರಿ ಬ್ರಹ್ಮ ಕಾಲ ಕಾಮ ದಕ್ಷಾದಿ ದೇವ, ದಾನವ,
ಮಾನವರಿಗೆಲ್ಲರಿಗೆಯೂ ಸಾವು!
ಮಹಾಪುರುಷರಿಗೆಯೂ ಸಾವು!
ಶಿವ ಶಿವಾ, ಈ ಸಾವನರಿಯದೀ ಲೋಕ!
ಪ್ರಪಂಚವ ಮರೆದು ಲಿಂಗದಲ್ಲಿ ನೆನಹು ನೆಲೆಗೊಂಡಡೆ
ಆ ಮಹಿಮಂಗೆ ಸಾವಿಲ್ಲ.

ಈ ಸಾವನರಿಯದ ಅರೆಮರುಳಗಳ ಅರಿವು
ಮಹಾಹಾನಿ ಕಾಣಾ, ಗುಹೇಶ್ವರಾ. || ೪೬ ||

೪೭೯

ಎಲ್ಲರಂತೆ ನುಡಿದು ಎಲ್ಲರಂತೆ ನಡೆದು
ಎಲ್ಲರಂತೆ ಸಂಸಾರವ ಬಳಸುತ್ತಿಪ್ಪರೆಂದು
ಎಲ್ಲರಂತೆ ಕಾಣಬಹುದೆ
ನಿಜ ದೊರೆಕೊಂಡ ನಿರ್ಮಲಜ್ಞಾನಿಗಳ?
ಅವರ ಮನೋಮಧ್ಯದಲ್ಲಿ ತೊಳಗಿ ಬೆಳಗುವ
ಶಿವಜ್ಞಾನಬೀಜವು ಹೊಳ್ಳಪ್ಪುದೆ?
ಉರಿಯದಿದ್ದಡೂ ಕಿಚ್ಚನೊರಲೆ ಕೊಂಬುದೆ ಗುಹೇಶ್ವರಾ? || ೪೭ ||

೪೮೦

ಎಸೆಯದಿರು ಎಸೆಯದಿರು ಕಾಮಾ,
ನಿನ್ನ ಬಾಣ ಹುಸಿಯಲೇಕೊ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಇವು ಸಾಲದೆ ನಿನಗೆ?
ಗುಹೇಶ್ವರಲಿಂಗದ ವಿರಹದಲ್ಲಿ ಬೆಂದವರ,
ಮರಳಿ ಸುಡಲುಂಟೆ ಮರುಳು ಕಾಮಾ? || ೪೮ ||

೪೮೧

ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ,
ಎಣ್ಣೆಗೆ ಪರಿಮಳ ವೇದಿಸದು.
ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ
ಪ್ರಾಣಲಿಂಗ ಸಂಬಂಧವಾಗದು.
ಇದು ಕಾರಣ, ನಮ್ಮ ಗುಹೇಶ್ವರಲಿಂಗದಲ್ಲಿ
ಇಷ್ಟಲಿಂಗ ಸಂಬಂಧಿಯಾದಲ್ಲದೆ,
ಪ್ರಾಣಲಿಂಗ ಸಂಬಂಧಿಯಾಗಬಾರದು,
ಕಾಣಾ ಸಿದ್ಧರಾಮಯ್ಯಾ. || ೪೯ ||

೪೮೨

ಏನ ಕಂಡಡೇನಯ್ಯಾ, ತನ್ನ ಕಾಣದಾತ ಕುರುಡ.
ಏನ ಕೇಳಿದಡೇನಯ್ಯಾ, ತನ್ನ ಕೇಳದಾತ ಕಿವುಡ.
ಏನ ಮಾತಾಡಿದಡೇನಯ್ಯಾ, ತನ್ನ ಮಾತಾಡದಾತ ಮೂಕ.
ದಿಟದಿಂದ ತನ್ನ ತಾ ಕಾಣಬೇಕು,

ದಿಟದಿಂದ ತನ್ನ ತಾ ಕೇಳಬೇಕು,
ದಿಟದಿಂದ ತನ್ನ ತಾ ಮಾತಾಡಬೇಕು.
ಇದೆ ತನ್ನ ನೆಲೆ, ಸ್ವಭೂಮಿ, ಸ್ವಸ್ವರೂಪು ಕಾಣಾ ಗುಹೇಶ್ವರಾ. || ೫೦ ||

೪೮೩
ಏನೆಂದರಿಯರು ಎಂತೆಂದರಿಯರು,
ಅರಿವನರಿದೆವೆಂಬರು, ಮರಹ ಮರೆದೆವೆಂಬರು.
ಒಂದನರಿದೆನೆಂದಡೆ ಮುಖ ಮೂರಾಯಿತ್ತು.
ಮೂರು ಮುಖವ ಏಕಗ್ರಾಹಕವ ಮಾಡಿದಲ್ಲದೆ
ಶರಣನಲ್ಲ ಗುಹೇಶ್ವರಾ. || ೫೧ ||

೪೮೪
ಐವರ ಸಂಗದಿಂದ ಬಂದೆ ನೋಡಯ್ಯಾ.
ಐವರ ಸಂಗದಿಂದ ನಿಂದೆ ನೋಡಯ್ಯಾ.
ಈ ಐವರೂ ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು.
ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ!
ಗುಹೇಶ್ವರನೆಂಬ ನಿತ್ಯನಿರಂಜನ - ರೂಹಿಲ್ಲದ ಘನವ ಕಂಡೆನಯ್ಯಾ. || ೫೨ ||

೪೮೫
ಒಡಲೊಳಗಿದ್ದು ಒಡಲಿಂಗಾಧಾರವಾಗಿ ಒಡಲ ಸೋಂಕದೆ,
ಒಡಲ ಬೆಳಗುವ ಪರಿಯ ನೋಡಾ!
ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ!
ಪರಮಚೈತನ್ಯ ನಿರಾಳ ಗುಹೇಶ್ವರಲಿಂಗವ ನೋಡಾ! || ೫೩ ||

೪೮೬
ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೊ?
ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೆ ಭಂಗ.
ಭಾವಿಸುವ ಭಾವನೆಗಿಂದ ಸಾವು[ದೆ] ಲೇಸು ಕಾಣಾ ಗುಹೇಶ್ವರಾ. || ೫೪ ||

೪೮೭
ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ?
ಬೇಟದ ಮರುಳಗೆ ಲಜ್ಜೆ ಮುನ್ನುಂಟೆ?
ನಿಮ್ಮನರಿದ ಶರಣಂಗೆ ಪೂಜೆಯ ಹಂಬಲ, ದಂದುಗವೇಕೆ?
ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ?
ಗುಹೇಶ್ವರಲಿಂಗಕ್ಕೆ ಕುರುಹು ಮುನ್ನುಂಟೆ? || ೫೫ ||

೪೮೮
ಓಟೆ ಇದ್ದಂತೆ ಕಾಯಿ ಮೆದ್ದವರುಂಟೆ?
ಕಾಯದ ಗುಣವಿದ್ದಂತೆ ಲಿಂಗವನರಿದವರುಂಟೆ?
ಜೋಡು ಹರಿದಲ್ಲದೆ ಕಾಯವನಿರಿಯಲರಿಯದು ಕೈದು.
ಆ ಭಾವವ ತಿಳಿದಲ್ಲದೆ ನಮ್ಮ ಗುಹೇಶ್ವರಲಿಂಗವನರಿಯಬಾರದು,
ಕಾಣಾ ಎಲೆ ಅಂಬಿಗರ ಚೌಡಯ್ಯ. || ೫೬ ||

೪೮೯
ಓದಿ ಓದಿ ವೇದ ವಾದಕ್ಕಿಕ್ಕಿತ್ತು.
ಕೇಳಿ ಕೇಳಿ ಶಾಸ್ತ್ರ ಸಂದೇಹಕಿಕ್ಕಿತ್ತು.
ಅರಿದೆ ಅರಿದೆನೆಂದು ಆಗಮ ಅಗಲಕ್ಕೆ ಹರಿಯಿತ್ತು.
ನೀನೆತ್ತ ನಾನೆತ್ತಲೆಂದು
ಬೊಮ್ಮ ಬಕ್ಕಟ ಬಯಲು ಗುಹೇಶ್ವರಾ. || ೫೭ ||

೪೯೦
ಕಂಗಳ ಮುಂದಣ ಕತ್ತಲೆ ಇದೇನೋ?
ಮನದ ಮುಂದಣ ಮರವೆ ಇದೇನೊ?
ಒಳಗಣ ರಣರಂಗ ಹೊರಗಣ ಶೃಂಗಾರ!
ಬಳಕೆಗೆ ಬಂದ ಬಟ್ಟೆ ಇದೇನೊ ಗುಹೇಶ್ವರಾ? || ೫೮ ||

೪೯೧
ಕಂಡುದೆಲ್ಲ ಪಾವನ, ಕೇಳಿತ್ತೆಲ್ಲ ಪರಮಬೋಧೆ,
ಮುಟ್ಟಿತ್ತೆಲ್ಲ ಪರುಷದ ಸೋಂಕು,
ಒಡನೆ ನುಡಿದವರೆಲ್ಲ ಸದ್ಯೋನ್ಮುಕ್ತರು,
ಸುಳಿದ ಸುಳುಹೆಲ್ಲ ಜಗತ್ಪಾವನ, ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರ,
ಸೋಂಕಿದ ಜಲವೆಲ್ಲ ಪುಣ್ಯತೀರ್ಥಂಗಳು,
ಶರಣೆಂದು ಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು.
ಗುಹೇಶ್ವರಾ ನಿಮ್ಮ ಸುಳುಹಿನ ಸೊಗಸನುಪಮಿಸಬಾರದು. || ೫೯ ||

೪೯೨
ಕಂಡೆನೆಂಬುದು ಕಂಗಳ ಮರವೆ,
ಕಾಣೆನೆಂಬುದು ಮನದ ಮರವೆ,
ಕೂಡಿದೆನೆಂಬುದು ಅರುಹಿನ ಮರವೆ,
ಅಗಲಿದೆನೆಂಬುದು ಮರಹಿನ ಮರವೆ.
ಇಂತು ಕಂಡೆ ಕಾಣೆ ಕೂಡಿದೆ ಅಗಲಿದೆ ಎಂಬ,
ಭ್ರಾಂತಿಸೂತಕವಳಿದು ನೋಡಲು
ಗುಹೇಶ್ವರಲಿಂಗವನಗಲಲೆಡೆಯಿಲ್ಲ ಕೇಳಾ, ಎಲೆ ತಾಯೆ, || ೬೦ ||

೪೯೩
ಕರ್ಪುರದ ಗಿರಿಯ ಉರಿ ಹಿಡಿದಡೆ ಇದ್ದಿಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?
ಕೆಂಡದ ಗಿರಿಯನರಗಿನ ಬಾಣದಲೆಚ್ಚಡೆ,
ಮರಳಿ ಬಾಣವನರಸಲುಂಟೆ?
ಗುಹೇಶ್ವರನೆಂಬ ಲಿಂಗವನರಿದು
ಮರಳಿ ನೆನೆಯಲುಂಟೆ? || ೬೧ ||

೪೯೪
ಕಬ್ಬು ಬೆಳೆವುದಯ್ಯ ಕರಿಯ ಭೂಮಿಯಿದ್ದಲ್ಲಿ,
ಉಬ್ಬುಬ್ಬಿ ಬೆಳೆವುದಯ್ಯ ಬಲ ಪ್ರಮಾಣವಿರ್ದಲ್ಲಿ.
ದಾರಿದ್ರ್ಯವಿದ್ದಲ್ಲಿ ನಿದ್ರೆ ಬೆಳೆವುದಯ್ಯ,
ಜಟ್ಟಿ ಮಾಸಾಳರಿರ್ದಲ್ಲಿ ಕಾಳಗ ಘನವಪ್ಪುದಯ್ಯ,
ನಮ್ಮ ಶಿವನ ಸಲೆ ಸಂದ ಶರಣರಾದ ಹಿರಿಯರಿದ್ದಲ್ಲಿ
ಬುದ್ಧಿ ಬೆಳವುದಯ್ಯ.
ಇ[ದು] ಕಂಡು ಬೆರಗಾದ ನಮ್ಮ ಗುಹೇಶ್ವರ. || ೬೨ ||

೪೯೫
ಕರಸ್ಥಲದ ಲಿಂಗ ಮನಸ್ಥಲದಲ್ಲಿ ವೇದ್ಯವಾಗಿ,
ಮನಸ್ಥಲದ ಲಿಂಗ ಎನ್ನ ಸರ್ವಾಂಗದಲ್ಲಿ ವೇದ್ಯವಾದ ಬಳಿಕ,
ಇನ್ನು ಭಿನ್ನಭಾವಕ್ಕೆ ತೆರಹುಂಟೆ?
ಗುಹೇಶ್ವರಲಿಂಗವ ಬೆರಸಿ ಸಮರಸವಾದ ಬಳಿಕ
ಎರಡೆಂಬುದಿಲ್ಲ ನೋಡಾ, ಚನ್ನಬಸವಣ್ಣಾ. || ೬೩ ||

೪೯೬
ಕಲ್ಯಾಣವೆಂಬ ಪ್ರಣತೆಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ!
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ
ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ?
ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ?
ಗುಹೇಶ್ವರಲಿಂಗದಲ್ಲಿ

ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು
ಬದುಕಿದೆನು ಕಾಣಾ, ಸಿದ್ಧರಾಮಯ್ಯಾ. || ೬೪ ||

೪೯೭
ಕಲ್ಲೊಳಗಣ ಕಿಚ್ಚು ಉರಿಯದಂತೆ,
ಬೀಜದೊಳಗಣ ವೃಕ್ಷ ಉಲಿಯದಂತೆ,
ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು,
ಗುಹೇಶ್ವರ ನಿಂದ ನಿಲವ ಅನು[ಭಾ]ವಸುಖಿ ಬಲ್ಲ. || ೬೫ ||

೪೯೮
ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿಂಬುದ ಮಾಬುದೆ?
ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ?
ಕಾಲಗಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಬುದೆ?
ಇಂತೀ ಮೃತ್ಯುವಿನ ಬಾಯ ತುತ್ತಾದ
ವೇಷಡಂಬಕರ ನಾನೇನೆಂಬೆ ಗುಹೇಶ್ವರಾ. || ೬೬ ||

೪೯೯
ಕಾಡುಗಿಚ್ಚೆದ್ದಡೆ ಅಡವಿಯೆ ಗುರಿ,
ನೀರುಗಿಚ್ಚೆದ್ದಡೆ ಸಮುದ್ರವೆ ಗುರಿ,
ಒಡಲುಗಿಚ್ಚೆದ್ದಡೆ ತನುವೆ ಗುರಿ,
ಕಾಲಾಗ್ನಿಯೆದ್ದಡೆ ಲೋಕಂಗಳೆ ಗುರಿ,
ಶಿವಶರಣರ ಮನದಲ್ಲಿ ಕೋಪಾಗ್ನಿಯೆದ್ದಡೆ ನಿಂದಕರೆ ಗುರಿ.
ಗುಹೇಶ್ವರಾ ನಿಮ್ಮ ಮಾಯದ ಹೊಡೆಗಿಚ್ಚಿಂಗೆ
ನಾನು ಗುರಿಯಲ್ಲ ಕೇಳಾ. || ೬೭ ||

೫೦೦
ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ
ಇದ ಮಾಡಲೇ ಬೇಕು.
ಸುಳಿವ ಸುಳುಹುಳ್ಳನ್ನಕ್ಕ ಇದ ಮಾಡಲೇ ಬೇಕು.
ಗುಹೇಶ್ವರನೆಂಬ [ಲಿಂಗಕ್ಕೆ] ಆತ್ಮವುಳ್ಳನ್ನಕ್ಕ
ಭಕ್ತಿಯ ಮಾಡಲೇ ಬೇಕು. || ೬೮ ||

೫೦೧
ಕಾಯದ ಕಳವಳವ ಗೆಲಿದಡೇನೊ,
ಮಾಯದ ತಲೆಯನರಿಯದನ್ನಕ್ಕರ?

ಮಾಯೆಯ ತಲೆಯನರಿದಡೇನೊ,
ಜ್ಞಾನದ ನೆಲೆಯನರಿಯದನ್ನಕ್ಕರ?
ಜ್ಞಾನದ ನೆಲೆಯನರಿದಡೇನೊ,
ತಾನು ತಾನಾಗದನ್ನಕ್ಕರ?
ತಾನು ತಾನಾದ ಶರಣನ ನಿಲವಿಂಗೆ
ಒಂದು ದಾರಿ ಮೇರೆಯುಂಟೆ ಗುಹೇಶ್ವರಾ? || ೬೯ ||

೫೦೨
ಕಾಯವ ಹೊತ್ತು ತಿರುಗಾಡುವನ್ನಬರ
ನಾನರಿದೆನೆಂಬುದು ಹುಸಿಯಾಯಿತ್ತು.
ಅರಿದಡೆ ತಾವರೆ ಎಲೆಯ ಬಿಂದುವಿನಂತೆ ಲೇಪವಿಲ್ಲದೆ
ಗುಹೇಶ್ವರಲಿಂಗವನರಿಯಬೇಕು, ಸಂಗನಬಸವಣ್ಣಾ. || ೭೦ ||

೫೦೩
ಕಾಯವೆಂಬ ದೇಗುಲದಲ್ಲಿ ಜೀವವೆಂಬ ದೇವರು,
ಕರಣೇಂದ್ರಿಯಂಗಳೆಂಬ ಸ್ಥಾನಿಕರ ಕೈಯಲ್ಲಿ ಪೂಜಿಸಿಕೊಂಬುದು
ಗುಹೇಶ್ವರಲಿಂಗಕ್ಕೆ ದೂರ! || ೭೧ ||

೫೦೪
ಕಾಲುಗಳೆಂಬವು ಗಾಲಿ ಕಂಡಯ್ಯಾ,
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ.
ಬಂಡಿಯ ಹೊಡೆವರೈವರು ಮಾನಿಸರು,
ಒಬ್ಬರಿಗೊಬ್ಬರು ಸಮವಿಲ್ಲಯ್ಯ.
ಅದರಿಚ್ಛೆಯನರಿದು ಹೊಡೆಯದಿರ್ದಡೆ,
ಅದರಚ್ಚು ಮುರಿಯಿತ್ತು, ಗುಹೇಶ್ವರಾ. || ೭೨ ||

೫೦೫
ಕಾಲೇ ಕಂಬಗಳಾದವೆನ್ನ,
ದೇಹವೇ ದೇಗುಲವಾಯಿತ್ತಯ್ಯಾ!
ಎನ್ನ ನಾಲಗೆಯೇ ಗಂಟೆ,
ಶಿರ ಸುವರ್ಣದ ಕಳಸ ಇದೇನಯ್ಯಾ!
ಗುಹೇಶ್ವರಾ, ನಿಮ್ಮ ಪ್ರಾಣಲಿಂಗಪ್ರತಿಷ್ಠೆ
ಪಲ್ಲಟವಾಗದಂತಿದ್ದೆನಯ್ಯಾ. || ೭೩ ||

೫೦೬
ಕಿಚ್ಚಿನ ದೇವನು, ಕೆಂಡದ ದೇವನು,
ಮಾರಿಯ ದೇವನು, ಮಸಣದ ದೇವನು,
ತಿರುಕ ಗೊರವನೆಂದು ಅಲ್ಲಲ್ಲಿ ಒಂದೊಂದನಾಡುತ್ತಿಪ್ಪರಯ್ಯಾ.
ನಾ ನಿಮ್ಮ ಪೂಜಿಸಿ ನಷ್ಟಸಂತಾನವಾಗಿ,
ಬಟ್ಟಬಯಲಲ್ಲಿ ಬಿದ್ದು ಕೆಟ್ಟೆನು ಗುಹೇಶ್ವರಾ. || ೭೪ ||

೫೦೭
ಕಿಚ್ಚಿನೊಡನೆ ಹೋರಿದ ಹುಳ್ಳಿಯಂತಾದೆನಯ್ಯಾ.
ಬೆಂದ ನುಲಿಯ ಸಂದಿಕ್ಕಿ ಮತ್ತೊಂದ ಮಾಡಬಾರದಯ್ಯಾ.
ಗುಹೇಶ್ವರಾ, [ಎನ್ನ] ನಿಲವಿನ ಪರಿ ಇಂತುಟಯ್ಯಾ. || ೭೫ ||

೫೦೮
ಕಿರಿಯರಾದಡೇನು ಹಿರಿಯರಾದಡೇನು?
ಅರಿವಿಂಗೆ ಹಿರಿದು ಕಿರಿದುಂಟೆ?
ಆದಿ ಅನಾದಿ ಇಲ್ಲದಂದು,
ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು
ಗುಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದು
ಕಾಣಬಂದಿತ್ತು ಕಾಣಾ, ಚನ್ನಬಸವಣ್ಣಾ. || ೭೬ ||

೫೦೯
ಕುಂಡಲಿಗನ ಕೀಟದಂತೆ
ಮೈ ಮಣ್ಣಾಗದಂತೆ
ಇದ್ದೆಯಲ್ಲಾ ಬಸವಣ್ಣಾ.
ಜಲದೊಳಗಣ ತಾವರೆಯಂತೆ
ಹೊದ್ದಿಯೂ ಹೊದ್ದದಂತೆ
ಇದ್ದೆಯಲ್ಲಾ ಬಸವಣ್ಣ.
ಜಲದಿಂದಲಾದ ಮೌಕ್ತಿಕದಂತೆ
ಜಲವು ತಾನಾಗದಂತೆ
ಇದ್ದೆಯಲ್ಲಾ ಬಸವಣ್ಣಾ.
ಗುಹೇಶ್ವರಲಿಂಗದ ಆಣತಿವಿಡಿದು,
ತನುಗುಣ ಮತ್ತರಾಗಿದ್ದ
ಐಶ್ವರ್ಯಾಂಧಕರ ಮತವನೇನ ಮಾಡಬಂದೆಯಯ್ಯಾ,
ಸಂಗನ ಬಸವಣ್ಣಾ? || ೭೭ ||

೫೧೦
ಕುಲಮದ ಛಲಮದ ವಿದ್ಯಾಮದದವರ ತೋರದಿರಾ.
ಅವರ ಆರೂಢಪದವಿಯನೆನಗೆ ತೋರದಿರಾ.
ಅವರ ಗರುವ ಗಂಭೀರವನೆನಗೆ ತೋರದಿರಾ.
ಶಮೆದಮೆಯುಳಿದು ದಶಮುಖ ನಿಂದು
ಲಿಂಗದಲ್ಲಿ ಲೀಯವಾದವರನಲ್ಲದೆ,
ಎನಗೆ ತೋರದಿರಾ ಗುಹೇಶ್ವರಾ. || ೭೮ ||

೫೧೧
ಕೂರ್ಮನ ಶಿಶುವಿನ ಸ್ನೇಹದಂತಿರಬೇಡಾ,
ಸಂಗನಬಸವಣ್ಣಾ?
ಕಾಕಪಿಕಸಂಧಾನದಂತಿರಬೇಡಾ,
ಸಂಗನಬಸವಣ್ಣಾ?
ಕೊಂಬ ತಪ್ಪದೆ ಹಾಯ್ವ ಕಪಿಯಂತಿರಬೇಡಾ,
ಸಂಗನಬಸವಣ್ಣಾ?
ನೀರು ಕ್ಷೀರವ ಭೇದಿಸಿ ತೆಗೆವ ಹಂಸೆಯಂತಿರಬೇಡಾ,
ಸಂಗನಬಸವಣ್ಣಾ?
ಗುಹೇಶ್ವರಲಿಂಗದಲ್ಲಿ ಅವಧಾನ ತಪ್ಪಿ,
ಮರಳಿ ಅರಸಿದಡುಂಟೆ ಹೇಳಾ, ಸಂಗನಬಸವಣ್ಣಾ? || ೭೯ ||

೫೧೨
ಕೃತಯುಗದಲ್ಲಿ
ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ತ್ರೇತಾಯುಗದಲ್ಲಿ
ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ದ್ವಾಪರದಲ್ಲಿ
ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ಕಲಿಯುಗದಲ್ಲಿ
ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ಗುಹೇಶ್ವರಾ,
ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು. || ೮೦ ||

೫೧೩
ಕೆಂಡದ ಗಿರಿಯ ಮೇಲೊಂದು,
ಅರಗಿನ ಕಂಬವಿದ್ದಿತ್ತು ನೋಡಯ್ಯಾ.
ಅರಗಿನ ಕಂಬದ ಮೇಲೆ ಹಂಸೆಯಿದ್ದಿತ್ತು.
ಕಂಬ ಬೆಂದಿತ್ತು, ಹಂಸೆ ಹಾರಿತ್ತು ಗುಹೇಶ್ವರಾ! || ೮೧ ||

೫೧೪
ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು.
ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು.
ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು.
ಜಗತ್‌ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು,
ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು. || ೮೨ ||

೫೧೫
ಕೈಯಲ್ಲಿ ಕಟ್ಟುವರು, ಕೊರಳಲ್ಲಿ ಕಟ್ಟುವರು,
ಮೈಯಲ್ಲಿ ಕಟ್ಟುವರು, ಮಂಡೆಯಲ್ಲಿ ಕಟ್ಟುವರು,
ಮನದಲ್ಲಿ ಲಿಂಗವ ಕಟ್ಟರಾಗಿ!
ಆದ್ಯರು ಹೋದರೆಂದು ವಾಯಕ್ಕೆ ಸಾವರು.
ಸಾವುದು ವಿಚಾರವೆ ಗುಹೇಶ್ವರಾ? || ೮೩ ||

೫೧೬
ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯನೇರ ಬಯಸುವರು,
ವೀರರೂ ಅಲ್ಲ, ಧೀರರೂ ಅಲ್ಲ.
ಇದು ಕಾರಣ,
ನೆರೆ ಮೂರು ಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು,
ತೊಳಲುತ್ತ ಇದ್ದಾರೆ.
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು? || ೮೪ ||

೫೧೭
ಕ್ರಿಯಾಮಥನವಿಲ್ಲದೆ ಕಾಣಬಂದುದೆ,
ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ,
ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ,

ಕ್ಷೀರದೊಳಗಣ ಘೃತ?
ಕ್ರಿಯಾಮಥನವಿಲ್ಲದೆ ಕಾಣಬಂದುದೆ,
ಕಾಷ್ಠದೊಳಗಣ ಅಗ್ನಿ?
ಇದು ಕಾರಣ,
ನಮ್ಮ ಗುಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತಂಗೆ
ಸತ್‌ಕ್ರಿಯಾಚರಣೆಯೆ ಸಾಧನ ಕಾಣಿಭೋ. || ೮೫ ||

೫೧೮
ಕ್ಷೀರಸಾಗರದೊಳಗಿರ್ದ ಹಂಸೆಗೆ ಹಾಲಬಯಸಲುಂಟೆ?
ಪುಷ್ಪದೊಳಗಿರ್ದ ತುಂಬಿಗೆ ಪರಿಮಳವನರಸಲುಂಟೆ?
ತಾವು ಲಿಂಗದೊಳಗಿರ್ದು
ಬೇರೆ ಇತರ ಕಾಮ್ಯಾರ್ಥದೊಳಗಿರ್ಪ
ಭ್ರಾಂತರನೇನೆಂಬೆನಯ್ಯಾ ಗುಹೇಶ್ವರಾ. || ೮೬ ||

೫೧೯
ಗಗನಕ್ಕೆ ನಿಚ್ಚಣಿಕೆಯನಿಕ್ಕಿದವರುಂಟೆ?
ವಾಯುವಿನ ಸ್ಥಳವನರಿದವರುಂಟೆ?
ಅಂಬುಧಿಯ ಗುಣ್ಪನಳೆದವರುಂಟೆ?
ಲಿಂಗದ ಪ್ರಮಾಣ ಹೇಳಬಹುದೆ?
ಚಂದ್ರಮಂಡಲ ತಾರಾಮಂಡಲ ಸೂರ್ಯಮಂಡಲ ಇತ್ತಿತ್ತಲಯ್ಯಾ!
ಪಂಚಮುಖವಾಗಿ, ನೊಸಲಕಣ್ಣು ಚತುರ್ಭುಜ ಅಣುಮಾತ್ರವೆ.
ಒಬ್ಬ ಶರಣನಾಗಿ ಗುಹೇಶ್ವರನೆಂಬ ಘನ ನೆಲೆಯ ಬಲ್ಲಡೆ
ಅಲ್ಲಿಂದತ್ತ ಶರಣು ಶರಣು. || ೮೭ ||

೫೨೦
ಗಗನದ ಮೇಘಂಗಳೆಲ್ಲ ಸುರಿದು[ವು] ಭೂಮಿಯ ಮೇಲೆ.
ಭೂಮಿ ದಣಿಯುಂಡು ಸಸಿಗಳೆಲ್ಲಾ ಬೆಳೆದವು.
ಬಹುವಿಕಾರದಿಂದ ಬೆಳೆದ ಸಸಿ[ಯ]
ವಿಕಾರದಿಂದ ಗ್ರಹಿಸುವ ಕಾಮವಿಕಾರಿಗಳು
ಲಿಂಗವನೆತ್ತ ಬಲ್ಲರು ಗುಹೇಶ್ವರಾ. || ೮೮ ||

೫೨೧
ಗಗನವೆ ಗುಂಡಿಗೆ, ಆಕಾಶವೆ ಅಗ್ಘವಣಿ,
ಚಂದ್ರ ಸೂರ್ಯರಿಬ್ಬರು ಪುಷ್ಪ,
ಬ್ರಹ್ಮ ಧೂಪ, ವಿಷ್ಣು ದೀಪ,

ರುದ್ರನೋಗರ - ಸಯದಾನ ನೋಡಾ!
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ! || ೮೯ ||

೫೨೨
ಘನತರವಾದ ಚಿತ್ರದ ರೂಪ ಬರೆಯಬಹುದಲ್ಲದೆ,
ಪ್ರಾಣವ ಬರೆಯಬಹುದೆ ಅಯ್ಯಾ?
ದಿವ್ಯಾಗಮಂಗಳು ಹೇಳಿದ ಕ್ರೀಯಲ್ಲಿ ದೀಕ್ಷೆಯ ಮಾಡಬಹುದಲ್ಲದೆ,
ಭಕ್ತಿಯ ಮಾಡಬಹುದೆ ಅಯ್ಯಾ?
ಪ್ರಾಣವಹ ಭಕ್ತಿಯ ತನ್ಮಯ ನೀನು.
ಈ ಗುಣವುಳ್ಳಲ್ಲಿ ನೀನಿಹೆ, ಇಲ್ಲದಲ್ಲಿ ನೀನಿಲ್ಲ ಗುಹೇಶ್ವರಾ. || ೯೦ ||

೫೨೩
ಚಿತ್ತಶುದ್ಧವಿಲ್ಲದವರಲ್ಲಿ ಮನ ಸಂಚಲ ನಿಲ್ಲದು.
ಮನಸಂಚಲ ನಿಲ್ಲದವರಲ್ಲಿ ಶಿವಧ್ಯಾನ ಕರಿಗೊಳ್ಳದು.
ಶಿವಧ್ಯಾನ ಕರಿಗೊಳ್ಳದವನ ಮಾತು ಸಟೆ.
ಗುಹೇಶ್ವರಲಿಂಗವನರಿಯದ ಭ್ರಾಂತಿಯೋಗಿಗಳ ಮನ
ಬೇತಾಳದಂತೆ ಕಾಡುವುದು. || ೯೧ ||

೫೨೪
ಚಿನ್ನವನೊರೆಯಬಹುದಲ್ಲದೆ, ಬಣ್ಣವನೊರೆಯಬಹುದೆ?
ಹೂವ ಮುಡಿಯಬಹುದಲ್ಲದೆ, ಗಂಧವ ಮುಡಿಯಬಹುದೆ?
ಕರ್ಮವ ಮಾಡಬಹುದಲ್ಲದೆ, ವಸ್ತುವನರಿಯಬಹುದೆ?
ಗುಹೇಶ್ವರನೆನಬಹುದಲ್ಲದೆ,
ಲಿಂಗವು ತಾನಾಗಬಾರದು ಸಿದ್ಧರಾಮಯ್ಯಾ. || ೯೨ ||

೫೨೫
ಜಂಗಮವೆ ಹೊರಗಿರಲು ಲಿಂಗಾರ್ಚನೆ ಏವುದಯ್ಯಾ?
ಪ್ರಾಣನ ಹೊರಗಿರಿಸಿ ಎಡೆಯಾಡುವ ದೇಹವುಂಟೆ?
ಶರಣರು ಬಂದು ಬಾಗಿಲಲ್ಲಿ ನಿಂದಿರಲು
ತನ್ನ ತಾ ಮರೆದಿಪ್ಪವರ ಕಂಡಡೆ
ನಮ್ಮ ಗುಹೇಶ್ವರಲಿಂಗ ಒಡೆಯ ಹಾಯ್ಕದೆ ಮಾಣ್ಬನೆ? || ೯೩ ||

೫೨೬
ಜಲವಿಲ್ಲದ ಕೆರೆ, ಫಲವಿಲ್ಲದ ಬನ,
ಭಕ್ತನಿಲ್ಲದ ಗ್ರಾಮ ಸುಡುಗಾಡಯ್ಯಾ.
ಅಲ್ಲಿ ಶಿವನಿಲ್ಲ,
ಪ್ರೇತಜಡಾರಣ್ಯದಲ್ಲಿ ಹೋಗಬಹುದೆ ಗುಹೇಶ್ವರಾ? || ೯೪ ||

೫೨೭
ಜ್ಯೋತಿ ಕಂಡಾ, ಇರಲು ಕತ್ತಲೆ ಕಂಡಾ!
ನಿಧಾನ ಕಂಡಾ, ಇರಲು ಬಡತನ ಕಂಡಾ!
ಪ್ರಸಾದ ಕಂಡಾ, ಕೊಂಡೊಡೆ ಪ್ರಳಯ ಕಂಡಾ!
ಗುಹೇಶ್ವರ ಕಂಡಾ, ಇದು ಭ್ರಾಂತು ಕಂಡಾ! || ೯೫ ||

೫೨೮
ತತ್ವವ ನುಡಿವ ಹಿರಿಯರೆಲ್ಲರು,
ತುತ್ತನಿಕ್ಕುವರ ಬಾಗಿಲಲ್ಲಿ, ಅಚ್ಚುಗ ಪಡುತ್ತಿದ್ದರು ನೋಡಾ!
ನಿತ್ಯಾನಿತ್ಯವ ಹೇಳುವ ಹಿರಿಯರು ತಮ್ಮ ಒಡಲ ಕಕ್ಕುಲತೆಗೆ ಹೋಗಿ,
ಭಕ್ತಿಯ ಹೊಲಬನರಿಯದ, ಜಡಜೀವಿ ಮಾನವರ ಇಚ್ಛೆಯ ನುಡಿದು,
ಹಲುಬುತ್ತಿಪ್ಪರು ನೋಡಾ!
ಕತ್ತೆಗೆ ಕರ್ಪೂರವ ಹೇರಿದಂತೆ,
ಅವರಿಗೆ ಇನ್ನೆತ್ತಣ ಮುಕ್ತಿಯೋ ಗುಹೇಶ್ವರಾ. || ೯೬ ||

೫೨೯
ತತ್ವವೆಂಬುದ ನೀನೆತ್ತ ಬಲ್ಲೆಯೊ?
ಸತ್ತು ಮುಂದೆ ನೀನೇನ ಕಾಬೆಯೊ?
ಇಂದೆ ಇಂದೆಯೊ ಇಂದೆ! ಮಾನವಾ.
ಮಾತಿನಂತುಟಲ್ಲ ಶಿವಾಚಾರ,
ದಸರಿದೊಡಕು ಕಾಣಿರಣ್ಣಾ.
ರಚ್ಚೆಯ ಮಾತಲ್ಲ ಬೀದಿಯ ಮಾತಲ್ಲ.
ಏಕೋ ರಾತ್ರಿಯ ಬಿಂದು ನೋಡಾ!
ಗುಹೇಶ್ವರನ ಕೂಡಿದ ಕೂಟ
ಇಂದು ಸುಖ, ಮುಂದೆ ಲೇಸು! || ೯೭ ||

೫೩೦
ತನು ಬತ್ತಲಿದ್ದಡೇನೊ ಮನ ಶುಚಿಯಾಗದನ್ನಕ್ಕರ?
ಮಂಡೆ ಬೋಳಾದಡೇನೊ, ಭಾವ ಬಯಲಾಗದನ್ನಕ್ಕರ?
ಭಸ್ಮವ ಹೂಸಿದಡೇನೊ,
ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ?
ಇಂತೀ ಆಶೆಯ ವೇಷದ ಭಾಷೆಗೆ,
ಗುಹೇಶ್ವರಾ, ನೀ ಸಾಕ್ಷಿಯಾಗಿ ಛೀ ಎಂಬೆನು. || ೯೮ ||

೫೩೧
ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ,
ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರ.
ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ.
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ,
ಸುಷುಮ್ನನಾಳದಿಂದ ಉದಕವ ತಿದ್ದಿ,
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ. || ೯೯ ||

೫೩೨
ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ,
ಬಲಿದು ಷಡ್ವಿಧಭಕ್ತಿಯೆಂಬ ಸೋಪಾನದಿಂದ,
ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ !
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರಾ ನಿಮ್ಮಾಣೆ. || ೧೦೦ ||

೫೩೩
ತನ್ನ ತಾನರಿದಡೆ ನುಡಿಯೆಲ್ಲ ತತ್ವ ನೋಡಾ!
ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ!
ಅರಿದು ಮರೆದ ಶಿವಯೋಗಿಯ ಶಬ್ದವೆಲ್ಲವು
ಉಪದೇಶವಲ್ಲದೆ ಭಿನ್ನವುಂಟೆ?
ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ,
ಎನ್ನ ಮನದೊಳಗೆ ಕಂದು ಕಲೆ ಎಂಬುದಿಲ್ಲ ನೋಡಾ!
ನಮ್ಮ ಗುಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ
ಬಾಯ್ದೆಗೆದೆನಲ್ಲದೆ, ಭಿನ್ನವುಂಟೆ ಹೇಳಾ ಮರುಳೆ? || ೧೦೧ ||

೫೩೪
ತಪವೆಂಬುದು ತಗಹು, ನೇಮವೆಂಬುದು ಬಂಧನ,
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ.
ಇಂತೀ ಚತುರ್ವಿಧದೊಳಗಲ್ಲ
ಗುಹೇಶ್ವರಾ, ನಿಮ್ಮ ಶರಣರು ಅಗ್ರಗಣ್ಯರು. || ೧೦೨ ||

೫೩೫
ತಲೆಯಲಟ್ಟುಣಲೊಲ್ಲದೆ ಒಲೆಯಲಟ್ಟುಂಬರು.
ಒಲೆಯಲುಳ್ಳುದ ಹೊಟ್ಟೆಯಲುಂಬೈಸಕ್ಕರ
ಹೊಗೆ ಘನವಾಯಿತ್ತು,
ಇದ ಕಂಡು ಹೇಸಿಬಿಟ್ಟೆನು ಗುಹೇಶ್ವರಾ. || ೧೦೩ ||

೫೩೬
ತಾಯಿ - ತಂದೆಯಿಲ್ಲದ ಕಂದಾ,
ನಿನಗೆ ನೀನೆ ಹುಟ್ಟಿ ಬೆಳೆದೆಯಲ್ಲಾ!
ನಿನ್ನ ಪರಿಣಾಮವೆ ನಿನಗೆ ಪ್ರಾಣತೃಪ್ತಿಯಾಗಿರ್ದೆಯಲ್ಲಾ!
ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೇ ಬೆಳಗುತ್ತಿರ್ದೆಯಲ್ಲಾ!
ನಿನ್ನ ಚರಿತ್ರ ನಿನಗೆ ಸಹಜ ಗುಹೇಶ್ವರಾ. || ೧೦೪ ||

೫೩೭
ತೆರಹಿಲ್ಲದ ಘನವ ಮನ ಒಳಕೊಂಡು,
ಆ ತೆರಹಿಲ್ಲದ ಮನವ ಘನ ಒಳಕೊಂಡು,
ತನಗೆ ತಾ ತರಹರವಾದ ಬಳಿಕ
ಇನ್ನು ಮರಳಿ ಇಂಬುಗೊಡಲುಂಟೆ?
ಗುಹೇಶ್ವರನ ಲೀಲೆ ಮಾಬನ್ನಕ್ಕರ
ಉರಿಯೊಳಗಣ ಕರ್ಪೂರದಂತಿರಬೇಕು ಕಾಣಾ, ಸಿದ್ಧರಾಮಯ್ಯಾ. || ೧೦೫ ||

೫೩೮
ತೆರೆಯ ಮರೆಯ ಕುರುಹೆಂಬುದೇನೊ
ಒಳಗೆ ಲಿಂಗವನನುವಿಡಿದ ಬಳಿಕ?
ಪೂಜಿಸುವ ಭಕ್ತನಾರೊ? ಪೂಜಿಸಿಕೊಂಬ ದೇವನಾರೊ?
ಮುಂದು ಹಿಂದು, ಹಿಂದು ಮುಂದಾಯಿತ್ತು.
ಗುಹೇಶ್ವರಾ ನಾನು ನೀನು, ನೀನು ನಾನಾದ ಬಳಿಕ
ಮತ್ತೇನುಂಟು ಹೇಳಾ? || ೧೦೬ ||

೫೩೯
ದೇವಲೋಕದ ದೇವಗಣಂಗಳೆಲ್ಲ ಎನ್ನ ಹೊರಗೆಂಬರು,
ಅದು ದಿಟವೆ?
ಸತ್ಯ ಸಾತ್ವಿಕ ಸದ್ಭಕ್ತರು ಎನ್ನ ಹೊರಗೆಂಬರು,
ಅದು ದಿಟವೆ?

ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ,
ನಾ ನಿಮ್ಮೊಳಗು, ಗುಹೇಶ್ವರಾ. ॥ ೧೦೭ ॥

೫೪೦
ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ.
ಕಾಯ ಗುರಿಯಾಗಿ ಲಯವಾಗಿ ಹೋದವರ ಕಂಡೆ.
ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ.
ನೀ ಗುರಿಯಾಗಿ ಹೋದವರನಾರನೂ ಕಾಣೆ ಗುಹೇಶ್ವರಾ. ॥ ೧೦೮ ॥

೫೪೧
ದೇಹದೊಳಗೆ ದೇವಾಲಯವಿದ್ದು,
ಮತ್ತೆ ಬೇರೆ ದೇಗುಲವೇಕಯ್ಯಾ?
ಎರಡಕ್ಕೆ ಹೇಳಲಿಲ್ಲಯ್ಯಾ.
ಗುಹೇಶ್ವರಾ, ನೀನು ಕಲ್ಲಾದಡೆ ನಾನು ಏನಪ್ಪೆನು? ॥ ೧೦೯ ॥

೫೪೨
ಧರೆಯ ಮೇಲುಳ್ಳ ಅರುಹಿರಿಯರೆಲ್ಲರೂ
ಮರುಳುಗೊಂಡಾಡುತ್ತಿದ್ದಾರೆ ನೋಡಾ.
ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ
ಅಂಜದೆ ಪಾಕವ ಮಾಡಿಕೊಂಡು ಉಂಡು,
ಭಂಡವ ಮಾರುತ್ತಿರ್ಪರು ನೋಡಾ.
ಸಂಜೀವಿನಿಯ ಬೇರ ಕಾಣದೆ ಮರಣಕ್ಕೊಳಗಾದರು
ಗುಹೇಶ್ವರನನರಿಯದ ಭವಭಾರಕರೆಲ್ಲರು. ॥ ೧೧೦ ॥

೫೪೩
ಧರೆಯ ಮೇಲೊಂದು ಪಿರಿದಪ್ಪ ಸಂತೆಯ
ನೆರವಿಗೆ ಬಂದವರನೇನೆಂಬೆನು!
ಪರಿಪರಿಯ ಭಂಡದ ವ್ಯವಹಾರದೊಳಗೆ ಕೊಡಲಿಲ್ಲ, ಕೊಳಲಿಲ್ಲ.
ವೃಥಾ ವಿಳಾಸವಿದೇನೊ?
ಅರೆಮರುಳೆಂಬ ಶಿವನು,
ನೆರೆ ಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು
ಬೆರಗಾದೆ ಗುಹೇಶ್ವರಾ. ॥ ೧೧೧ ॥

೫೪೪
ನಡೆದಡೆ ನಡೆಗೆಟ್ಟ, ನಡೆಯ ನಡೆವುದಯ್ಯಾ.
ನುಡಿದಡೆ ನುಡಿಗೆಟ್ಟ, ನುಡಿಯ ನುಡಿವುದಯ್ಯಾ.

ಒಡಲ ಹಿಡಿದಡೆ ಹಿಡಿಯದೆ ಹಿಡಿವುದಯ್ಯಾ.
ಕೊಡುವಡೆ ಕೇಡಿಲ್ಲದ ಕೂಟವ ಕೂಡುವುದಯ್ಯಾ,
ಗುಹೇಶ್ವರಾ, ನಿಮ್ಮಲ್ಲಿ ನಿಲುವುದಯ್ಯಾ. || ೧೧೨ ||

೫೪೫
ನದೀಜಲ, ಕೂಪಜಲ, ತಟಾಕಜಲವೆಂದಂಬು
ಹಿರಿದು ಕಿರಿದಾದುದನರಿಯರು.
ಬೇರೆ ಮತ್ತೊಂದು ಭಾಷೆ ವ್ರತ ನೇಮಂಗಳ ಹಿಡಿವ
ಶೀಲಸಂಬಂಧಿಗಳು ಜಾತ್ಯಂಧರು,
ನಿಮ್ಮನೆತ್ತಬಲ್ಲರು ಗುಹೇಶ್ವರಾ? || ೧೧೩ ||

೫೪೬
ನಾನು ಘನ ತಾನು ಘನವೆಂಬ
ಹಿರಿಯರುಂಟೆ ಜಗದೊಳಗೆ?
ಹಿರಿದು ಕಿರಿದೆಂದಲ್ಲಿ ಏನಾಯಿತ್ತು?
ಹಿರಿದು ಕಿರಿದೆಂಬ ಶಬ್ದವಡಗಿದರೆ,
ಆತನೆ ಶರಣ ಗುಹೇಶ್ವರಾ. || ೧೧೪ ||

೫೪೭
ನಾನೆಂಬ ಅಹಂಕಾರದಲ್ಲಿ ನಾನುಂಡೆನಾದಡೆ,
ಎನಗದೆ ಭಂಗ.
ಸ್ತುತಿ ನಿಂದೆಗೆ ನೊಂದೆನಾದಡೆ,
ಅಂಗೈಯಲ್ಲಿರ್ದ ಗುಹೇಶ್ವರಲಿಂಗಕ್ಕೆ ದೂರ ಕಾಣಾ
ಸಂಗನಬಸವಣ್ಣಾ. || ೧೧೫ ||

೫೪೮
ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ.
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ.
ಪ್ರಮಾಣವೆಂಬುದು ಪ್ರಮಾಣ,
ಗುಹೇಶ್ವರನೆಂಬುದು ಅಪ್ರಮಾಣ! || ೧೧೬ ||

೫೪೯
ನಾ ದೇವನಲ್ಲದೆ ನೀ ದೇವನೆ?
ನೀ ದೇವನಾದಡೆ ಎನ್ನನೇಕೆ ಸಲಹೆ?
ಆರೈದು, ಒಂದು ಕುಡಿತೆ ಉದಕವನೆರೆವೆ,

ಹಸಿದಾಗ ಒಂದು ತುತ್ತು ಓಗರವನಿಕ್ಕುವೆ,
ನಾ ದೇವ ಕಾಣಾ ಗುಹೇಶ್ವರಾ! || ೧೧೭ ||

೫೫೦
ನಿಂದಡೆ, ಹೊನ್ನು ಹೆಣ್ಣು ಮಣ್ಣು ಹಿಡಿದು
ನೆಟ್ಟನೆ ಭಕ್ತನಾಗಿ ನಿಲ್ಲಬೇಕು.
ಸುಳಿದಡೆ, ಹೊನ್ನು ಹೆಣ್ಣು ಮಣ್ಣು ಬಿಟ್ಟು
ನೆಟ್ಟನೆ ಜಂಗಮವಾಗಿ ಸುಳಿಯಬೇಕು.
ನಿಂದು ಭಕ್ತನಲ್ಲದ, ಸುಳಿದು ಜಂಗಮವಲ್ಲದ
ಉಭಯಭ್ರಷ್ಟರನೇನೆಂಬೆ ಗುಹೇಶ್ವರಯ್ಯಾ? || ೧೧೮ ||

೫೫೧
ನಿಜವನರಿದ ನಿಶ್ಚಿಂತನೆ,
ಮರಣವ ಗೆಲಿದ ಮಹಂತನೆ,
ಘನವ ಕಂಡ ಮಹಿಮನೆ,
ಪರವನೊಳಕೊಂಡ ಪರಿಣಾಮಿಯೆ,
ಬಯಲಲೊದಗಿದ ಭರಿತನೆ,
ಗುಹೇಶ್ವರಲಿಂಗಾ, ನಿರಾಳವನೊಳಕೊಂಡ ಸಹಜನೆ! || ೧೧೯ ||

೫೫೨
ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ,
ಹೆಸರಿಟ್ಟು ಕರೆದವರಾರೊ?
ಅಕಟಕಟಾ ಶಬ್ದದ ಲಜ್ಜೆ[ಯ] ನೋಡಾ!
ಗುಹೇಶ್ವರನನರಿಯದ ಅನುಭಾವಿಗಳೆಲ್ಲರ
ತರಕಟ ಕಾಡಿತ್ತು. || ೧೨೦ ||

೫೫೩
ನೆನೆ ಎಂದಡೆ ಏನ ನೆನೆವೆನಯ್ಯಾ?
ಎನ್ನ ಕಾಯವೆ ಕೈಲಾಸವಾಯಿತ್ತು,
ಮನವೆ ಲಿಂಗವಾಯಿತ್ತು, ತನುವೆ ಸೆಜ್ಜೆಯಾಯಿತ್ತು.
ನೆನೆವಡೆ ದೇವನುಂಟೆ? ನೋಡುವಡೆ ಭಕ್ತನುಂಟೆ?
ಗುಹೇಶ್ವರಲಿಂಗ ಲೀಯವಾಯಿತ್ತು. || ೧೨೧ ||

೫೫೪
ನೆಲೆಗಾಂಬನಕ್ಕರ ತೊರೆಯ ಅಂಜಿಕೆಯೈಸೆ,
ನೆಲೆಗಂಡಬಳಿಕ ತೊರೆ ಬರುದೊರೆಯಲ್ಲದೆ ಅಂಜಿಕೆಯಿಲ್ಲ.

ಮನವುಳ್ಳನಕ್ಕರ ಕರ್ಮದ ಕೋಟಲೆಯ್ಯೆಸೆ,
ಮನವಳಿದ ಬಳಿಕ ಕರ್ಮ ನಿಃಕರ್ಮವಲ್ಲದೆ
ಬೇಕು ಬೇಡೆಂಬ ಸಂದೇಹವುಂಟೆ,
ಗುಹೇಶ್ವರಾ ನಿಮ್ಮ ನಿಜವನರಿದ ಶರಣಂಗೆ? || ೧೨೨ ||

೫೫೫
ಪದ್ಯದಾಸೆಯ ಹಿರಿಯರು ಕೆಲಬರು.
ಬುದ್ಧಿಯಾಸೆಯ ಹಿರಿಯರು ಕೆಲಬರು.
ಸಮತೆಯಾಸೆಯ ಹಿರಿಯರು ಕೆಲಬರು.
ಇವರೆಲ್ಲರು ತಮ್ಮ ನಿಜವ ತಾವರಿಯದೆ
ತಪವನಾಚರಿಸಿದರು.
ವೇಷ ನಿರ್ವಯಲಾಗಿ ಆಸೆ ರೋಷವ ಬಿಟ್ಟು
ದಾಸೋಹಿಯಾಗಿದ್ದಡೆ ತಾನೆ ಗುಹೇಶ್ವರಲಿಂಗ. || ೧೨೩ ||

೫೫೬
ಪರಮಜ್ಞಾನವೆಂಬ ಸಸಿಗೆ,
ಗುರುಭಕ್ತಿ ಎಂಬ ಭೂಮಿಯ ಮಣ್ಣ ತಂದು ಪಾತೆಯ ಕಟ್ಟಿದೆ;
ಲಿಂಗಭಕ್ತಿ ಎಂಬ ಗೊಬ್ಬರವ ತುಂಬಿದೆ;
ಜಂಗಮಭಕ್ತಿ ಎಂಬ ಪರಮಾನಂದದ ಜಲವ ನೀಡಿದೆ.
ಇಂತಿವರಿಂದ, ಭಕ್ತಿವೃಕ್ಷ ಫಲವ ಧರಿಸೆ
ಗುಹೇಶ್ವರಲಿಂಗದಲ್ಲಿ ಮುಕ್ತನಾದೆನು ಕಾಣಾ ಸಂಗನಬಸವಣ್ಣಾ. || ೧೨೪ ||

೫೫೭
ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವು.
ಸಂಗದೊಳಗೆ ಶರಣರ ಸಂಗವೆ ಚೆಲುವು.
ಕಾಯಗೊಂಡು ಹುಟ್ಟಿದ ಮೂಢರೆಲ್ಲರು
ಸಾಯದ ಸಂಚವನರಿವುದೆ ಚೆಲುವು, ಗುಹೇಶ್ವರಾ. || ೧೨೫ ||

೫೫೮
ಪರುಷದ ಪುತ್ಥಳಿಗೆ ಕಬ್ಬುನದ ಆಭರಣಗಳುಂಟೆ ಅಯ್ಯಾ?
ಲೋಕದೊಳಗೆ ಲಿಂಗ, ಲಿಂಗದೊಳಗೆ ಲೋಕವಾದಡೆ
ಹಿಂದಣ ಪ್ರಳಯಂಗಳೆಂತಾದವು?
ಇನ್ನು ಮುಂದಣ ಪ್ರಳಯಗಳಿಗಿನ್ನೆಂತೊ?
ಲೋಕವು ಲೋಕದಂತೆ, ಲಿಂಗವು ಲಿಂಗದಂತೆ,
ಈ ಉಭಯದ ಭೇದವ ಗುಹೇಶ್ವರಾ ನಿಮ್ಮ ಶರಣಬಲ್ಲ. || ೧೨೬ ||

೫೫೯

ಪೃಥ್ವಿ ಜಡನೆಂದರಿದವಂಗೆ ಸ್ಥಾವರಾದಿಗಳ ಎರಗಲೇಕಯ್ಯಾ?
ಅಪ್ಪು ಜಡವೆಂದರಿದವಂಗೆ ತೀರ್ಥಸ್ನಾನಂಗಳಲ್ಲಿ ಅತಿಶಯವೇಕಯ್ಯಾ?
ತೇಜ ಜಡವಂದರಿದವಂಗೆ ಹೋಮ ಸಮಾಧಿಗಳೇಕಯ್ಯಾ?
ವಾಯು ಜಡವೆಂದರಿದವಂಗೆ ಧ್ಯಾನ ಮೌನಂಗಳ ಹಿಡಿಯಲೇಕಯ್ಯಾ?
ಆಕಾಶ ಜಡವೆಂದರಿದವಂಗೆ ಮಂತ್ರರೂಢಿ ಏಕಯ್ಯಾ?
ಇನಿತು ಜಡವೆಂದರಿದವಂಗೆ ವಿಧಿ ಕಿಂಕರತೆ ಏಕಯ್ಯಾ?
ಗುಹೇಶ್ವರನ ನಿಜವು ಇದು ತಾನೆಂದರಿದ ಮಹಾತ್ಮಂಗೆ. ॥ ೧೨೭ ॥

೫೬೦

ಪೃಥ್ವಿಯೊಳಗಿಲ್ಲ, ಆಕಾಶದೊಳಗಿಲ್ಲ,
ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ,
ಹೊರಗೆಯೂ ಇಲ್ಲ.
ಏನಾಯಿತ್ತೆಂದರಿಯೆನಯ್ಯಾ.
ಗುಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲ, ಎಂದೂ ಇಲ್ಲ. ॥ ೧೨೮ ॥

೫೬೧

ಪ್ರಣತೆಯೂ ಇದೆ ಬತ್ತಿಯೂ ಇದೆ:
ಜ್ಯೋತಿಯ ಬೆಳಗುವಡೆ,
ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ ?
ಗುರುವಿದೆ ಲಿಂಗವಿದೆ:
ಶಿಷ್ಯನ ಸುಜ್ಞಾನ ಅಂಕುರಿಸದನ್ನಕ್ಕರ
ಭಕ್ತಿ ಎಲ್ಲಿಯದೋ?
'ಸೋಹಂ' ಎಂಬುದ ಕೇಳಿ, ದಾಸೋಹವ ಮಾಡದಿರ್ದಡೆ
ಅತಿಗಳೆವ ನೋಡಾ, ಗುಹೇಶ್ವರ. ॥ ೧೨೯ ॥

೫೬೨

ಪ್ರಾಣಲಿಂಗಕ್ಕೆ ಕಾಯವೆ ಸೆಜ್ಜೆ,
ಆಕಾಶಗಂಗೆಯಲ್ಲಿ ಮಜ್ಜನ,
ಹೂವಿಲ್ಲದ ಪರಿಮಳದ ಪೂಜೆ!
ಹೃದಯಕಮಳದಲ್ಲಿ 'ಶಿವಶಿವಾ' ಎಂಬ ಶಬ್ದ
ಇದು, ಅದ್ವೈತ ಕಾಣಾ ಗುಹೇಶ್ವರಾ. ॥ ೧೩೦ ॥

೫೬೩
ಬಟ್ಟೆಯ ಬಡಿವ ಕಳ್ಳಂಗೆ, ಬೇಹು ಸಂದು,
ಕಳವು ದೊರಕಿದಂತಾಯಿತ್ತು.
ಕುರುಡನು ಎಡಹುತ್ತ ತಡಹಿ ಹಿಡಿದು ಕಂಡಂತಾಯಿತ್ತು.
ನಿರ್ಧನಿಕ ಧನದ ಬಯಕೆಯಲ್ಲಿ ನಡೆವುತ್ತ
ಎಡಹಿದ ಕಲ್ಲು ಪರುಷವಾದಂತಾಯಿತ್ತು.
ಅರಸುವಂಗೆ ಅರಿಕೆ ತಾನಾದಂತಾಯಿತ್ತು.
ಎಲೆ ಗುಹೇಶ್ವರಾ, ನೀನು ಎನಗೆ ದೊರಕುವುದೆಂಬುದು,
ನಾ ಮುನ್ನ ಮಾಡಿದ ಸುಕೃತದ ಫಲ! ಏನ ಬಣ್ಣಿಪೆ ಹೇಳಾ? || ೧೩೧ ||

೫೬೪
ಬತ್ತೀಸಾಯುಧವನು ಅನಂತ ದಿನ ಸಾಧಿಸಿ ಪಿಡಿದರೂ
ಕಾದುವುದು ಒಂದೇ ಕೈದು, ಒಂದೇ ದಿನ.
ಆ ಹಾಂಗೆ ಸ್ಥಲ ಹಲವಾದಡೂ
ಅರಿವುದೊಂದೇ ಮನ, ಒಂದೇ ಲಿಂಗ!
ಆ ಮನವು ಆ ಲಿಂಗದ ನೆಲೆಯಲ್ಲಿ ನಿಂದು ಸ್ಥಲ ಲೋಪವಾದ ಮತ್ತೆ
ಸ್ಥಲವಿಲ್ಲ ನಿಃಸ್ಥಲವಿಲ್ಲ, ನಿಜ ನೀನೇ ಗುಹೇಶ್ವರಾ. || ೧೩೨ ||

೫೬೫
ಬಯಸಿ ಬಂದುದು ಅಂಗಭೋಗ,
ಬಯಸದೇ ಬಂದುದು ಲಿಂಗಭೋಗವೆಂದು ವಚನವನೋದಿ,
ಕಾರ್ಯಕ್ಕಾಗಿ ಬಂದ ವೇಷಧಾರಿಗಳ ಕಂಡು ಹಿಗ್ಗಿ ಹಾರೈಸಿ,
ಅನ್ನದಾಶೆಯಿಂದ ಒಪ್ಪುಗೊಳಿಸಿ,
ಬಯಸಿ ಬಾಯಾರಿ ಬಳಲಬಾರದೆಂದು,
ಗೋಳಿಟ್ಟು, ಬಗುಳಾಡಿ, ಅನ್ನ ಅಶನೋಪಜೀವಿ
ಶೇಷ ಭೋಗಂಗಳಿಗೆ ಕುಕ್ಕುಳ ಕುದಿದು, ಬಿಕ್ಕನೆ ಬಿರಿದು,
ಮತ್ತೆ ಲಿಂಗಾಣತಿಯೆಂಬ ವೇಷಧಾರಿಗಳಿಗೆ
ಅಘೋರನರಕ ತಪ್ಪದು ಗುಹೇಶ್ವರಾ. || ೧೩೩ ||

೫೬೬
ಬಲ್ಲನಿತ ಬಲ್ಲರಲ್ಲದೆ,
ಅರಿಯದುದನೆಂತು ಬಲ್ಲರಯ್ಯಾ?
ಅರಿವು ಸಾಮಾನ್ಯವೆ?

ಅರಿಯದುದನಾರಿಗೂ ಅರಿಯಬಾರದು.
ಗುಹೇಶ್ವರನೆಂಬ ಲಿಂಗವನರಿಯದಡೆರಡು,
ಅರಿದೊಡೊಂದೇ. || ೧೩೪ ||

೫೬೭
ಬಸಿರೊಳಗಣ ಕೂಸಿಂಗೆ ಬೇರೆ ಊಟ, ಬೇರೆ ಮೀಹ ಉಂಟೆ?
ಜ್ಞಾನವೆಂಬ ಗರ್ಭದೊಳಗೆ ಲಿಂಗವೆಂಬ ಶಿಶುವಿರಲು
ಬೇರೆ ಕೊಡುವ ಕೊಂಬ ಪರಿಯೆಂತೊ?
ದೇಹದೊಳಗಿನ ಪ್ರಾಣವ ಬೇರೆ ಮಾಡಿ ಭೋಗಿಸಲುಂಟೆ?
ಅನುಮಾನ ಅಳಿದು ಮಹದಲ್ಲಿ ಮನ ಮುಸುಕಿದ ಬಳಿಕ,
ಭಿನ್ನವ ಮಾಡಲುಂಟೆ ಗುಹೇಶ್ವರಾ? || ೧೩೫ ||

೫೬೮
ಬಿರುಗಾಳಿ ಬೀಸಿ ಮರ ಮುರಿವಂತಹ ಸುಳುಹ ಸುಳಿಯದೆ,
ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು.
ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು.
ನಿಂದಡೆ ನೆಟ್ಟನೆ ಭಕ್ತನಾಗಿ ನಿಲ್ಲಬೇಕು.
ಸುಳಿದು ಜಂಗಮವಾಗಲರಿಯದ,
ನಿಂದು ಭಕ್ತನಾಗಲರಿಯದ
ಉಭಯಭ್ರಷ್ಟರನೇನೆಂಬೆ ಗುಹೇಶ್ವರಾ. || ೧೩೬ ||

೫೬೯
ಬೀದಿಯಲ್ಲಿ ಬಿದ್ದ ಮಾಣಿಕ್ಯವು, ಹೂಳಿದ್ದ ನಿಧಾನವು,
ಆರಿಗೂ ಕಾಣಬಾರದು ನೋಡಾ!
ಮರಣ ಉಳ್ಳವರಿಗೆ ಮರುಜವಣಿ ಸಿಕ್ಕುವುದೆ?
ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ
ಇಪ್ಪರಯ್ಯಾ ಶಿವಶರಣರು.
ನಮ್ಮ ಗುಹೇಶ್ವರನ ಶರಣ ಮರುಳಶಂಕರದೇವರ
ನಿಲವ ನೋಡಾ ಸಂಗನಬಸವಣ್ಣಾ. || ೧೩೭ ||

೫೭೦
ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯಾ?
ಬಯಲು ಬತ್ತಲೆ ಇದ್ದಡೆ ಏನನುಡಿಸುವರಯ್ಯಾ?
ಭಕ್ತನು ಭವಿಯಾದಡೆ
ಅದೇನನುಪಮಿಸುವೆನಯ್ಯಾ ಗುಹೇಶ್ವರಾ? || ೧೩೮ ||

೫೭೧
ಬೆಣ್ಣೆಯ ಕಂದಲ ಕರಗಲಿಟ್ಟಡೆ
ಕಂದಲು ಕರಗಿತ್ತು ಬೆಣ್ಣೆ ಉಳಿಯಿತ್ತು!
ತುಂಬಿ ಇದ್ದಿತ್ತು ಪರಿಮಳವಿಲ್ಲ, ಪರಿಮಳವಿದ್ದಿತ್ತು ತುಂಬಿಯಿಲ್ಲ.
ತಾನಿದ್ದನು ತನ್ನ ಸ್ವರೂಪವಿಲ್ಲ, ಗುಹೇಶ್ವರನಿದ್ದನು ಲಿಂಗವಿಲ್ಲ! ॥ ೧೩೯ ॥

೫೭೨
ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು
ಎಲ್ಲಿ ಚುಂಬಿಸಿದಡೂ ಇನಿದಹುದು.
ಒಳ್ಳಿಹ ಬೇವಿನ ಹಣ್ಣ ಮೆಲ್ಲನೆ ಚುಂಬಿಸಿದಡೆ ಇನಿದಹುದೆ?
ಎಲ್ಲ ವಿದ್ಯೆವನೂ ಬಲ್ಲೆವೆಂದೆಂಬರು,
ಅವರು ಅಲ್ಲದೆ ಹೋದರಯ್ಯಾ ಗುಹೇಶ್ವರಾ. ॥ ೧೪೦ ॥

೫೭೩
ಬೆವಸಾಯವ ಮಾಡಿ
ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ,
ಆ ಬೆವಸಾಯದ ಘೋರವೇತಕಯ್ಯಾ?
ಕ್ರಯವಿಕ್ರಯವ ಮಾಡಿ ಮನೆಯ ಸಂಚ ನಡೆಯದನ್ನಕ್ಕ
ಆ ಕ್ರಯವಿಕ್ರಯದ ಘೋರವೇತಕಯ್ಯಾ?
ಒಡೆಯನನೋಲೈಸಿ
ತನುವಿಂಗೆ ಅಷ್ಟಭೋಗವ ಪಡೆಯದಿರ್ದಡೆ
ಆ ಓಲಗದ ಘೋರವೇತಕಯ್ಯಾ?
ಭಕ್ತನಾಗಿ ಭವಂ ನಾಸ್ತಿಯಾಗದಿರ್ದಡೆ,
ಆ ಉಪದೇಶವ ಕೊಟ್ಟ ಗುರು, ಕೊಂಡ ಶಿಷ್ಯ,
ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ,
ಗುಹೇಶ್ವರನೆಂಬವನತ್ತಲೆ ಹೋಗಲಿ. ॥ ೧೪೧ ॥

೫೭೪
ಬ್ರಹ್ಮ ಘನವೆಂದಡೆ ಬ್ರಹ್ಮನ ನುಂಗಿತ್ತು ಮಾಯೆ,
ವಿಷ್ಣು ಘನವೆಂದಡೆ ವಿಷ್ಣುವ ನುಂಗಿತ್ತು ಮಾಯೆ,
ರುದ್ರ ಘನವೆಂದಡೆ ರುದ್ರನ ನುಂಗಿತ್ತು ಮಾಯೆ,
ತಾ ಘನವೆಂದಡೆ ತನ್ನ ನುಂಗಿತ್ತು ಮಾಯೆ,
ಸರ್ವವೂ ನಿನ್ನ ಮಾಯೆ!
ಒಬ್ಬರನ್ನೊಳಕೊಂಡಿತ್ತೆ ಹೇಳಾ, ಗುಹೇಶ್ವರಾ? ॥ ೧೪೨ ॥

೫೭೫
ಭಸ್ಮವ ಹೂಸಿ ಬತ್ತಲೆಯಿದ್ದಡೇನು ಬ್ರಹ್ಮಚಾರಿಯೆ?
ಅಶನವನುಂಡು ವ್ಯಸನವ ಮರೆದಡೇನು ಬ್ರಹ್ಮಚಾರಿಯೆ?
ಭಾವ ಬತ್ತಲೆಯಿರ್ದು ಮನ ದಿಗಂಬರವಾಗಿರ್ದಡೆ
ಅದು ಸಹಜ ನಿರ್ವಾಣವು ಕಾಣಾ ಗುಹೇಶ್ವರಾ. || ೧೪೩ ||

೫೭೬
ಭಿತ್ತಿ ಮೂರರ ಮೇಲೆ ಚಿತ್ರ ಬರೆಯಿತ್ತು:
ಪ್ರಥಮ ಭಿತ್ತಿಯ ಚಿತ್ರ, ಚಿತ್ರದಂತೆ ಇದ್ದಿತ್ತು,
ಎರಡನೆಯ ಭಿತ್ತಿಯ ಚಿತ್ರ, ಹೋಗುತ್ತ ಬರುತ್ತ ಇದ್ದಿತ್ತು,
ಮೂರನೆಯ ಭಿತ್ತಿಯ ಚಿತ್ರ, ಹೋಯಿತ್ತು ಮರಳಿ ಬಾರದು.
ಗುಹೇಶ್ವರಾ, ನಿಮ್ಮ ಶರಣ ತ್ರಿವಿಧದಿಂದತ್ತತ್ತಲೆ! || ೧೪೪ ||

೫೭೭
ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ,
ಅವು ಜಗಕ್ಕಿಕ್ಕಿದ ವಿಧಿ.
ನಿನ್ನ ಒಡವೆ ಎಂಬುದು ಜ್ಞಾನರತ್ನ.
ಅಂತಪ್ಪ ದಿವ್ಯರತ್ನವ ಕೆಡಗುಡದೆ
ಆ ರತ್ನವ ನೀನು ಅಲಂಕರಿಸಿದೆಯಾದಡೆ,
ನಮ್ಮ ಗುಹೇಶ್ವರಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ, ಎಲೆ ಮನವೆ. || ೧೪೫ ||

೫೭೮
ಭೂಮಿಯಲ್ಲಿ ಹುಟ್ಟಿ ಅಂತರದಲ್ಲಿ ಬೆಳೆವ ಫಲವೃಕ್ಷ
ಸರ್ವರಿಗೆ ಭೂತಹಿತವಾಗಿ ಫಲರಸವನೀವಂತೆ,
ನೀ ಭೂಮಿಯಾಗಿ ನಾ ಸಸಿಯಾಗಿ ಬೆಳೆದ ಬೆಂಬಳಿಯಲ್ಲಿ
ಗುಹೇಶ್ವರಲಿಂಗವೆಂಬುದು ಫಲವಾಯಿತ್ತು,
ಅರಿದ ಅರಿಕೆ ರಸವಾಯಿತ್ತು.
ಸಂಗನಬಸವಣ್ಣನಿಂದ ಎನ್ನಂಗ ಬಯಲಾಯಿತ್ತು! || ೧೪೬ ||

೫೭೯
ಮಂತ್ರವ ಕಲಿತಡೇನು?
ಪುನಶ್ಚರಣೆಯ ಮಾಡಿದಲ್ಲದೆ ಸಿದ್ಧಿಸದು.
ಮದ್ದನರಿದು ಫಲವೇನು?
ಪ್ರಯೋಗಿಸಿಕೊಂಡಲ್ಲದೆ ಮಾಣದು.

ಲಿಂಗವನರಿದಡೇನು?
ನೆನೆದಲ್ಲದೆ ಸಿದ್ಧಿಸದು ಕಾಣಾ ಗುಹೇಶ್ವರಾ. || ೧೪೭ ||

೫೮೦
ಮಜ್ಜನಕ್ಕೆರೆದು ಫಲವ ಬೇಡುವರಯ್ಯಾ,
ತಮಗೆಲ್ಲಿಯದೊ ಆ ಫಲವು ಸೀತಾಳಕ್ಕಲ್ಲದೆ?
ಪತ್ರೆ ಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರಯ್ಯಾ.
ತಮಗೆಲ್ಲಿಯದೊ ಆ ಫಲವು ಗಿಡುಗಳಿಗಲ್ಲದೆ?
ಸೈದಾನವನರ್ಪಿಸಿ ಫಲವ ಬೇಡುವರಯ್ಯಾ
ತಮಗೆಲ್ಲಿಯದೊ ಆ ಫಲವು ಹದಿನೆಂಟು ಧಾನ್ಯಕ್ಕಲ್ಲದೆ?
ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು,
ಫಲವ ಬೇಡುವ ಸರ್ವ ಅನ್ಯಾಯಿಗಳನೇನೆಂಬೆ ಗುಹೇಶ್ವರಾ! || ೧೪೮ ||

೫೮೧
ಮಜ್ಜನಕ್ಕೆರೆವಡೆ,
ನೀನು ಶುದ್ಧ ನಿರ್ಮಲದೇಹಿ.
ಪೂಜೆಯ ಮಾಡುವಡೆ,
ನಿನಗೆ ಗಗನಕಮಲಕುಸುಮದ ಅಖಂಡಿತಪೂಜೆ.
ಧೂಪದೀಪಾರತಿಗಳ ಬೆಳಗುವಡೆ,
ನೀನು ಸ್ವಯಂ ಜ್ಯೋತಿಪ್ರಕಾಶನು.
ಅರ್ಪಿತವ ಮಾಡುವಡೆ,
ನೀನು ನಿತ್ಯತೃಪ್ತನು.
ಅಷ್ಟವಿಧಾರ್ಚನೆಗಳ ಮಾಡುವಡೆ,
ನೀನು ಮುಟ್ಟಬಾರದ ಘನವೇದ್ಯನು.
ನಿತ್ಯನೇಮಗಳ ಮಾಡುವಡೆ,
ನಿನಗೆ ಅನಂತನಾಮಂಗಳಾದವು ಗುಹೇಶ್ವರಾ. || ೧೪೯ ||

೫೮೨
ಮಠವೇಕೋ ಪರ್ವತವೇಕೋ ಜನವೇಕೊ ನಿರ್ಜನವೇಕೊ,
ಚಿತ್ತ ಸಮಾಧಾನವುಳ್ಳ ಶರಣಂಗೆ?
ಮತ್ತೆ, ಹೊರಗಣ ಚಿಂತೆ ಧ್ಯಾನ ಮೌನ ಜಪ ತಪವೇಕೊ,
ತನ್ನ ತಾನರಿದ ಶರಣಂಗೆ ಗುಹೇಶ್ವರಾ? || ೧೫೦ ||

೫೮೩
ಮಣಿಯನೆಣಿಸಿ ಕಾಲವ ಕಳೆಯಬೇಡ.
ಕಣಿಯ ಪೂಜಿಸಿ ದಿನವ ಕಳೆಯಬೇಡ.

ಕ್ಷಣವಾದಡೆಯೂ ಆಗಲಿ, ನಿಜದ ನೆನಹೆ ಸಾಕು.
ಬೆಂಕಿಯಲುಳ್ಳ ಗುಣ ಬಿಸಿನೀರಲುಂಟೆ ಗುಹೇಶ್ವರಾ? || ೧೫೧ ||

೫೮೪
ಮನವೆ ಲಿಂಗವಾದ ಬಳಿಕ ಇನ್ನಾರ ನೆನೆವುದಯ್ಯಾ?
ಭಾವವೆ ಐಕ್ಯವಾದ ಬಳಿಕ ಬಯಸುವುದಿನ್ನಾರನು?
ಭ್ರಮೆಯಳಿದ ನಿಜವು ಸಾಧ್ಯವಾದ ಬಳಿಕ
ಅರಿವುದಿನ್ನಾರನು ಗುಹೇಶ್ವರಾ? || ೧೫೨ ||

೫೮೫
ಮರನುಳ್ಳನ್ನಕ್ಕ ಎಲೆ ಉಲಿವುದು ಮಾಬುದೆ?
ಶರೀರವುಳ್ಳನ್ನಕ್ಕ ವಿಕಾರ ಮಾಬುದೆ?
ಅಯ್ಯಾ ಸುಳುಹುಳ್ಳನ್ನಕ್ಕ ಸೂತಕ ಹಿಂಗುವುದೆ
ಗುಹೇಶ್ವರಾ? || ೧೫೩ ||

೫೮೬
ಮರನೊಳಗಣ ಕಿಚ್ಚು ಮರನ ಸುಟ್ಟಂತಾದೆನಯ್ಯಾ.
ಬಯಲ ಗಾಳಿಯ ಪರಿಮಳ ನಾಸಿಕವನಪ್ಪಿದಂತಾದೆನಯ್ಯಾ.
ಕರುವಿನ ಬೊಂಬೆಯನುರಿಯುಂಡಂತಾದೆನಯ್ಯಾ.
ಗುಹೇಶ್ವರನೆಂಬ ಲಿಂಗವ ಪೂಜಿಸಿ ಭವಗೆಟ್ಟೆನಯ್ಯಾ. || ೧೫೪ ||

೫೮೭
ಮರನೊಳಗಣ ಪತ್ರೆ ಫಲಂಗಳು,
ಮರಕಾಲವಶದಲ್ಲಿ ತೋರುವಂತೆ,
ಹರನೊಳಗಣ ಪ್ರಕೃತಿಸ್ವಭಾವಂಗಳು,
ಹರಭಾವದಿಚ್ಛೆಗೆ ತೋರುವವು.
ಲೀಲೆಯಾದಡೆ ಉಮಾಪತಿ,
ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರಾ. || ೧೫೫ ||

೫೮೮
ಮರ್ತ್ಯಲೋಕದ ಮಾನವರು
ದೇಗುಲದೊಳಗೊಂದು ದೇವರ ಮಾಡಿದಡೆ,
ಆನು ಬೆರಗಾದೆನು.
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ,
ಭೋಗವ ಮಾಡುವರ ಕಂಡು ನಾನು ಬೆರಗಾದೆನು.

ಗುಹೇಶ್ವರಾ
ನಿಮ್ಮ ಶರಣರು, ಹಿಂದೆ ಲಿಂಗವನಿರಿಸಿ ಹೋದರು. || ೧೫೬ ||

೫೮೯
ಮಲಿನ ದೇಹಕ್ಕೆ ಮಜ್ಜನವಲ್ಲದೆ,
ನಿರ್ಮಲ ದೇಹಕ್ಕೆ ಮಜ್ಜನವೇಕೊ?
ಉಂಟೆ ವಿಷಯ ಲಿಂಗನಿಷ್ಪತಿಯಾದ ಶರಣಂಗೆ?
ಅಗಮ್ಯ ಅಗೋಚರ ಅಪ್ರಮಾಣ,
ಗುಹೇಶ್ವರಾ ನಿಮ್ಮ ಶರಣ. || ೧೫೭ ||

೫೯೦
ಮಹಾಲಿಂಗಕ್ಕೆ ಮಜ್ಜನವೆಂದೇನು?
ಪರಿಮಳದ ಲಿಂಗಕ್ಕೆ ಪತ್ರೆಪುಷ್ಪವೆಂದೇನು?
ಜಗಜ್ಯೋತಿ ಲಿಂಗಕ್ಕೆ ದೀಪಾರತಿ ಎಂದೇನು?
ಅಮೃತಲಿಂಗಕಾರೋಗಣೆ ಎಂದೇನು?
ಗುಹೇಶ್ವರಲಿಂಗದಂತುವ ಬಲ್ಲವರಾರೊ? || ೧೫೮ ||

೫೯೧
ಮಾಡುವ ಮಾಟದಿಂದವೆ ಬೇರೊಂದ ಅರಿಯಬೇಕು
ಅರಿವಿಂಗೆ ನೆಮ್ಮುಗೆ ಒಡಗೂಡಬೇಕು.
ಅರಿವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ
ಬಯಲ ಭ್ರಮೆಯ ಕಳೆದು
ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪದವನೆಯ್ದುವುದು ಮಾರಯ್ಯಾ. || ೧೫೯ ||

೫೯೨
ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ,
ತಾಳೋಷ್ಠ ಸಂಪುಟವೆಂಬುದು ನಾದಬಿಂದುಕಳಾತೀತ.
ಗುಹೇಶ್ವರನ ಶರಣರು
ನುಡಿದು ಸೂತಕಿಗಳಲ್ಲ ಕೇಳಾ ಮರುಳೆ. || ೧೬೦ ||

೫೯೩
ಮಿಂದು ದೇವರ ಪೂಜಿಸಿಹೆನೆಂಬ ಸಂದೇಹಿ ಮಾನವಾ ನೀ ಕೇಳಾ,
ಮೀಯದೆ ಮೀನು? ಮೀಯದೆ ಮೊಸಳೆ?
ತಾ ಮಿಂದು, ತನ್ನ ಮನ ಮೀಯದನ್ನಕ್ಕರ
ಈ ಬೆಡಗಿನ ಮಾತ ಮೆಚ್ಚುವನೆ ನಮ್ಮ ಗುಹೇಶ್ವರ? || ೧೬೧ ||

೫೯೪
ಮುಂದಳೂರಿಗೆ ಬಟ್ಟೆ ಇದೇ ಹೋಗೆಂದಡೆ
ಅಂಧಕನೇನು ಬಲ್ಲನು ಹೇಳಾ?
ಸಂಗ್ರಾಮದಲ್ಲಿ ಓಡಿದ ಹಂದೆ ಗೆಲಬಲ್ಲನೆ ಹೇಳಾ?
ನಿಂದ ನಿಲವಿನ ಮಡುವ ಕಂದನೀಸಾಡ ಬಲ್ಲನೆ ಹೇಳಾ?
ಗುಹೇಶ್ವರನೆಂಬ ನಿರಾಳದ ಘನವ
ಪಂಚೇಂದ್ರಿ[ಯ]ಕನೆತ್ತ ಬಲ್ಲನು ಹೇಳಾ? || ೧೬೨ ||

೫೯೫
ಮುಗಿಲನೆಚ್ಚ ಕೋಲು ಮುಗಿಲ ಮುಟ್ಟದೆ ಮರಳಿ ಬಿದ್ದಂತೆ,
ಏರಿ ಜಾರಿ ಬೀಳುವ ಪ್ರಾಣಿಗಳು ಅತ್ತಲಾರು ಬಲ್ಲರೊ?
ಹೊನ್ನು ಹೆಣ್ಣು ಮಣ್ಣೆಂಬ ಬಲೆಯಲ್ಲಿ ಬಿದ್ದವರು
ಅತ್ತಲಾರು ಬಲ್ಲರೊ?
ಗುಹೇಶ್ವರಾ, ನಿಮ್ಮ ಬಂದಿವಿಡಿದು ಸಯಬಂದಿಯಾದೆನು! || ೧೬೩ ||

೫೯೬
ಮುಗಿಲ ಮರೆಯ ಮಿಂಚಿನಂತೆ,
ಬಯಲ ಮರೆಯ ಮರೀಚಿಯಂತೆ,
ಶಬ್ದದ ಮರೆಯ ನಿಶ್ಶಬ್ದದಂತೆ,
ಕಂಗಳ ಮರೆಯ ಬೆಳಗಿನಂತೆ
ಗುಹೇಶ್ವರಾ, ನಿಮ್ಮ ನಿಲವು. || ೧೬೪ ||

೫೯೭
ಮುಸುರೆಯ ಮಡಕೆಯ ನೊಣ ಮುತ್ತಿಕೊಂಡಿಪ್ಪಂತೆ,
ಕಸವುಳ್ಳ ಹೊಲದಲ್ಲಿ ಪಶುಗಳು ನೆರೆದಿಪ್ಪಂತೆ,
ಅನ್ನ ಉದಕ ಹೊನ್ನು ವಸ್ತ್ರವುಳ್ಳ ದೊರೆಯ ಬಾಗಿಲಲ್ಲಿ
ಬಹುಭಾಷೆಯ ಹಿರಿಯರುಗಳು ನೆರೆದುಕೊಂಡಿಪ್ಪರು.
ಗುಹೇಶ್ವರಾ, ನಿಮ್ಮ ಶರಣರು ಆಶಾಪಾಶವಿರಹಿತರು! || ೧೬೫ ||

೫೯೮
ಮೇರುವ ಸಾರಿದ ಕಾಗೆ ಹೊಂಬಣ್ಣವಾಗದಿದ್ದಡೆ,
ಆ ಮೇರುವಿಂದತ್ತಣ ಹುಲುಮೊರಡಿಯೆ ಸಾಲದೆ?
ದೇವಾ, ನಿಮ್ಮ ಪೂಜಿಸಿ ಧಾವತಿಗೊಂಬಡೆ,
ಆ ಧಾವತಿಯಿಂದ ಮುನ್ನಿನ ವಿಧಿ[ಯೆ] ಸಾಲದೆ?

ಗುಹೇಶ್ವರಾ, ನಿಮ್ಮ ಪೂಜಿಸಿ ಸಾವಡೆ,
ನಿಮ್ಮಿಂದ ಹೊರಗಣ ಜವನೆ ಸಾಲದೆ? || ೧೬೬ ||

೫೯೯
ಮೋಟರ ಮದುವೆಗೆ ಭಂಡರು ಹರೆಯ ಹೊಯ್ದು,
ಮೂಕೊರತಿಯರು ಕಳಸವ ಹೊತ್ತರಲ್ಲಾ!
'ಉಘೇ ಚಾಂಗು ಭಲಾ' ಎಂದು ನಿಬ್ಬಣ ನೆರೆದು,
ಹೂದಂಬುಲಕ್ಕೆ ಮುನಿವರದೇನಯ್ಯಾ?
ತ್ರಿಜಗವೆಲ್ಲಾ ನಿಬ್ಬಣವಾಯಿತ್ತು,
ಗುಹೇಶ್ವರನನರಿಯದ ಹಗರಣವೊ! || ೧೬೭ ||

೬೦೦
ರೂಪ[ನೆ] ಕಂಡರು, ನಿರೂಪ[ನೆ] ಕಾಣರು.
ತನುವನೆ ಕಂಡರು, ಅನುವನೆ ಕಾಣರು.
ಆಚಾರವನೆ ಕಂಡರು, ವಿಚಾರವನೆ ಕಾಣರು.
ಗುಹೇಶ್ವರಾ, ನಿಮ್ಮ ಕುರುಹನೆ ಕಂಡರು,
ಕೂಡಲರಿಯದೆ ಕೆಟ್ಟರು! || ೧೬೮ ||

೬೦೧
ಲಿಂಗ ನೋಡಿದರೆ ನೋಡುವ, ಲಿಂಗ ಕೇಳಿದರೆ ಕೇಳುವ,
ಲಿಂಗ ಮುಟ್ಟಿದರೆ ಮುಟ್ಟುವ, ಲಿಂಗ ರುಚಿಸಿದರೆ ರುಚಿಸುವ,
ಲಿಂಗ ವಾಸಿಸಿದರೆ ವಾಸಿಸುವ, ಲಿಂಗ ಕ್ರೀಡಿಸಿದರೆ ಕ್ರೀಡಿಸುವ.
ಇಂತಪ್ಪ ಲಿಂಗ ಪ್ರಸಾದಭೋಗದಲ್ಲಿ ಪರಿಣಾಮಿ
ಗುಹೇಶ್ವರಾ ನಿಮ್ಮ ಶರಣ. || ೧೬೯ ||

೬೦೨
ಲಿಂಗವಂತಂಗೆ ಲಿಂಗದ ವಾರ್ತೆಯ ನುಡಿವುದೇ ಭಂಗ,
ಹಂಗು ನೋಡಾ, ಹಂಗಿನ ಶಬ್ದ ನೋಡಾ!
ಕೊಡನ ತುಂಬಿದ ಹಾಲನೊಡೆಯ ಹಾಯಿಕಿ,
ಇನ್ನು ಉಡುಗಿಹೆನೆಂದಡೆ ಉಂಟೆ ಗುಹೇಶ್ವರಾ? || ೧೭೦ ||

೬೦೩
ಲೋಕದವರನೊಂದು ಭೂತ ಹಿಡಿದಡೆ,
ಆ ಭೂತದಿಚ್ಛೆಯಲ್ಲಿ ನುಡಿವುತ್ತಿಪ್ಪರು.
ಲಾಂಛನಧಾರಿ ವೇಷವ ಧರಿಸಿ,

ಆಸೆಯಿಂದ ಘಾಸಿಯಾಗಲೇಕಯ್ಯಾ?
ಆನೆಯ ಚೋಹವ ತೊಟ್ಟು ನಾಯಾಗಿ ಬೊಗಳುವ
ಮಾನವರನೇನೆಂಬೆ ಗುಹೇಶ್ವರಾ? || ೧೭೧ ||

೬೦೪
ವಾಯು ನಿದ್ರೆಗೆಯ್ದಡೆ ಆಕಾಶ ಜೋಗುಳವಾಡಿತ್ತು.
ಬಯಲು ಬಳಲಿದೆನೆಂದಡೆ ನಿರಾಳ ಮೊಲೆಗೊಟ್ಟಿತ್ತು.
ಆಕಾಶವಡಗಿತ್ತು ಜೋಗುಳ ನಿಂದಿತ್ತು
ಗುಹೇಶ್ವರನೈದಾನೆ ಇಲ್ಲದಂತೆ. || ೧೭೨ ||

೬೦೫
ವಾರಿಕಲ್ಲಪುತ್ಥಳಿಯ ಅಪ್ಪು ಕೊಂಡಂತಾಯಿತ್ತು.
ಅಗ್ನಿಪುರುಷನ ಮುಸುಕ ತೆಗೆದ ಕರ್ಪುರದಂತಾಯಿತ್ತು.
ಕತ್ತಲೆಯೊಳಗೆ ರವಿಯ ಬೆಳಗು ಹೊಕ್ಕಂತಾಯಿತ್ತು.
ಗುಹೇಶ್ವರನ ಶರಣ ಮಡಿವಾಳ ಮಾಚಿತಂದೆಯ ಕೃಪೆಯಿಂದ
ಬಸವಣ್ಣಾ ನಿನ್ನ ಕಂಡೆನು.
ನಿನ್ನನು ಮಡಿವಾಳನನು ನೀನೆಂದೆ ಕಂಡೆನಯ್ಯಾ. || ೧೭೩ ||

೬೦೬
ವಿಭೂತಿ, ಆವ ಭೂಷಣದೊಳಗು?
ಪುಲಿಯ ಚರ್ಮ ಆವ ವಸ್ತ್ರದೊಳಗು?
ಖಟ್ವಾಂಗ ಆವ ಆಯುಧದೊಳಗು?
ನೀ ಇಡುವುದು ಇಂತುಟು, ನೀ ಹೊದೆವುದು ಇಂತುಟು
ನೀ ಹಿಡಿವುದು ಇಂತುಟು.
ನೀ ಕೊಡುವುದು ಇಂದ್ರಪದವಿ ಗುಹೇಶ್ವರಾ. || ೧೭೪ ||

೬೦೭
ವೇದಂಗಳೆಂಬವು ಬ್ರಹ್ಮನ ಬೂತಾಟ.
ಶಾಸ್ತ್ರಂಗಳೆಂಬವು ಸರಸ್ವತಿಯ ಗೊಡ್ಡಾಟ.
ಆಗಮಗಳೆಂಬವು ಋಷಿಯ ಮರುಳಾಟ.
ಪುರಾಣಗಳೆಂಬವು ಪೂರ್ವದವರ [ಪುಂಡಾ]ಟ.
ಇಂತು ಇವನು ಅರಿದವರ ನೇತಿಗಳೆದು
ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರನಲ್ಲಿ ಅಚ್ಚಲಿಂಗೈಕ್ಯನು! || ೧೭೫ ||

೬೦೮
ವೇದ ಪ್ರಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ
ಶಬ್ದ ಪ್ರಮಾಣವಲ್ಲ ಕಾಣೆ ಭೋ ಲಿಂಗಕ್ಕೆ!
ಅಂಗಸಂಗದ ಮಧ್ಯದಲ್ಲಿದ್ದು ಬೈಚಿಟ್ಟು ಬಳಸಿದ
ಗುಹೇಶ್ವರಾ, ನಿಮ್ಮ ಶರಣ. || ೧೭೬|

೬೦೯
ವೇದವೆಂಬುದು ಓದಿನ ಮಾತು,
ಶಾಸ್ತ್ರವೆಂಬುದು ಸಂತೆಯ ಸುದ್ದಿ,
ಪುರಾಣವೆಂಬುದು ಪುಂಡರ ಗೋಷ್ಠಿ,
ತರ್ಕವೆಂಬುದು ತಗರ ಹೋರಟೆ,
ಭಕ್ತಿ ಎಂಬುದು ತೋರಿ ಉಂಬ ಲಾಭ,
ಗುಹೇಶ್ವರನೆಂಬುದು ಮೀರಿದ ಘನವು! || ೧೭೭ ||

೬೧೦
ವೇದ ವೇಧಿಸಲರಿಯದೆ ಕೆಟ್ಟವು,
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು,
ಪುರಾಣ ಪೂರೈಸಲರಿಯದೆ ಕೆಟ್ಟವು .
ಹಿರಿಯರು ತಮ್ಮ ತಾವರಿಯದೆ ಕೆಟ್ಟರು.
ತಮ್ಮ ಬುದ್ಧಿ ತಮ್ಮನೇ ತಿಂದಿತ್ತು.
ನಿಮ್ಮನೆತ್ತ ಬಲ್ಲರು ಗುಹೇಶ್ವರಾ? || ೧೭೮ ||

೬೧೧
ಶಬ್ದವೆಂಬೆನೆ? ಶ್ರೋತ್ರದೆಂಜಲು.
ಸ್ಪರ್ಶವೆಂಬೆನೆ? ತ್ವಕ್ಕಿನೆಂಜಲು.
ರೂಪೆಂಬೆನೆ? ನೇತ್ರದೆಂಜಲು.
ರುಚಿಯೆಂಬೆನೆ? ಜಿಹ್ವೆಯೆಂಜಲು.
ಪರಿಮಳವೆಂಬೆನೆ? ಘ್ರಾಣದೆಂಜಲು.
ನಾನೆಂಬೆನೆ? ಅರಿವಿನೆಂಜಲು.
ಎಂಜಲೆಂಬ ಭಿನ್ನವಳಿದ,
ಬೆಳಗಿನೊಳಗಣ ಬೆಳಗು ಗುಹೇಶ್ವರನೆಂಬ ಲಿಂಗವು. || ೧೭೯ ||

೬೧೨
ಶಬ್ದ ಸಂಭ್ರಮದಲ್ಲಿ ಹಿಂದುಗಾಣರು ಮುಂದುಗಾಣರು,
ತಮ್ಮ ತಾವರಿಯರು.

ಇದು ಕಾರಣ, ಮೂರು ಲೋಕವೆಲ್ಲವು,
ಬರುಸೂರೆವೋಯಿತ್ತು ಗುಹೇಶ್ವರಾ. || ೧೮೦ ||

೬೧೩
ಶಬ್ದ ಸ್ಪರ್ಶ ರೂಪು ರಸ ಗಂಧ, ಪಂಚ ಇಂದ್ರಿಯ,
ಸಪ್ತಧಾತು ಅಷ್ಟಮದದಿಂದ ಮುಂದುಗಾಣದವರು
ನೀವು ಕೇಳಿರೆ:
ಲಿಂಗದ ವಾರ್ತೆಯ
ವಚನದಲ್ಲಿ ರಚನೆಯ ಮಾಡು[ವಿ]ರಯ್ಯಾ.
ಸಂಸಾರದ ಮಚ್ಚು ಬಿಡದನ್ನಕ್ಕ,
ಸೂಕ್ಷ್ಮ ಶಿವಪಥವು ಸಾಧ್ಯವಾಗದು.
ಗುಹೇಶ್ವರಲಿಂಗದಲ್ಲಿ ವಾಕು ಪಾಕವಾದಡೇನೊ,
ಮನ ಪಾಕವಾಗದನ್ನಕ್ಕ? || ೧೮೧ ||

೬೧೪
ಶಬ್ದಿಯಾದಾತ ತರುಗಳ ಹೋತ,
ನಿಶ್ಶಬ್ದಿಯಾದಾತ ಪಾಷಾಣವ ಹೋತ.
ಕೋಪಿಯಾದಾತ ಅಗ್ನಿಯ ಹೋತ,
ಶಾಂತನಾದಾತ ಜಲವ ಹೋತ.
ಬಲ್ಲೆನೆಂಬಾತ ಇಲ್ಲವೆಯ ಹೋತ,
ಅರಿಯೆನೆಂಬಾತ ಪಶುವ ಹೋತ.
ಇದು ಕಾರಣ,
ಅರಿಯೆನೆನ್ನದೆ ಬಲ್ಲೆನೆನ್ನದೆ ಅರುಹಿನ ಕುರುಹನಳಿದುಳಿದು
ಗುಹೇಶ್ವರನೆಂಬ ಲಿಂಗವ ಹೋತವರನಾರನೂ ಕಾಣೆ. || ೧೮೨ ||

೬೧೫
ಶಿಲೆಯೊಳಗಣ ಪಾವಕನಂತೆ,
ಉದಕದೊಳಗಣ ಪ್ರತಿಬಿಂಬದಂತೆ,
ಬೀಜದೊಳಗಣ ವೃಕ್ಷದಂತೆ,
ಶಬ್ದದೊಳಗಣ ನಿಶ್ಶಬ್ದದಂತೆ,
ಗುಹೇಶ್ವರಾ, ನಿಮ್ಮ- ಶರಣ ಸಂಬಂಧ. || ೧೮೩ ||

೬೧೬
ಸಂಸಾರವೆಂಬ ಹೆಣ ಬಿದ್ದಿದ್ದಡೆ,
ತಿನಬಂದ ನಾಯ ಜಗಳವ ನೋಡಿರೆ!

ನಾಯ ಜಗಳವ ನೋಡಿ ಹೆಣ[ನೆದ್ದು] ನಗುತ್ತಿದೆ.
ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ. || ೧೮೪ ||

೬೧೭
ಸತಿ ಭಕ್ತೆಯಾದಡೆ ಹೊಲೆಗಂಜಲಾಗದು,
ಪತಿ ಭಕ್ತನಾದಡೆ ಕುಲಕಂಜಲಾಗದು.
ಸತಿ ಪತಿಯೆಂಬ ಅಂಗಸುಖ ಹಿಂಗಿ,
ಲಿಂಗವೇ ಪತಿಯಾದ ಬಳಿಕ
ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ?
ಹಾಲುಂಡು ಮೇಲುಂಬರೆ ಗುಹೇಶ್ವರಾ? || ೧೮೫ ||

೬೧೮
ಸತಿಯ ಕಂಡು ಬ್ರತಿಯಾದ ಬಸವಣ್ಣ.
ಬ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ.
ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯಾ ಬಸವಣ್ಣ.
ಗುಹೇಶ್ವರಾ ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದ ಬಸವಣ್ಣ ಒಬ್ಬನೇ.|| ೧೮೬ ||

೬೧೯
ಸತ್ತು ಹುಟ್ಟಿ ಕೆಟ್ಟವರೆಲ್ಲರು,
ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು.
ಸಾಯದ ಮುನ್ನ ಸ್ವಯವನರಿದಡೆ
ದೇವನೊಲಿವ ನಮ್ಮ ಗುಹೇಶ್ವರನು. || ೧೮೭||

೬೨೦
ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು,
ಲಕ್ಷಕ್ಕೊಮ್ಮೆ ನುಡಿಯಲಾಗದು,
ಕೋಟಿಗೊಮ್ಮೆ ನುಡಿಯಲಾಗದು.
ಸುಡಲಿ, ಅವಂದಿರ ಕೂಡೆ ಮಾರಿ ಹೋರಲಿ.
ಗುಹೇಶ್ವರಾ, ನಿಮ್ಮ ಶರಣರಲ್ಲದವರೊಡನೆ
ಬಾಯಿದೆರೆಯಲಾಗದು. || ೧೮೮ ||

೬೨೧
ಸನಕ ಸನಂದಾದಿ ಮುನಿಜನಂಗಳೆಲ್ಲರೂ,
ಭಸ್ಮಾಂಗಿಗಳೆಲ್ಲರೂ,
ಇವರು ಸತ್ಯರೆಂಬುದು ಹುಸಿ,

ನಿತ್ಯರೆಂಬುದು ಹುಸಿ,
ಸತ್ತರೆಂಬುದು ದಿಟ ಗುಹೇಶ್ವರಾ. || ೧೮೯ ||

೬೨೨
ಸಮುದ್ರದೊಳಗೆ ನೊರೆ ತೆರೆಗಳು ನೆಗಳ್ದವೆಂದಡೆ
ತಾ ಸಮುದ್ರದಿಂದ ಅನ್ಯವಪ್ಪವೆ?
ನಿರ್ವಿಕಾರ ನಿತ್ಯ ನಿರಂಜನ ನಿರ್ಗುಣ ಪರಿಪೂರ್ಣ ನಿರ್ವಿಕಲ್ಪ
ಪರಬ್ರಹ್ಮಶಿವನಿಂದ ಜಗತ್ತು ಉದಯಿಸಿತ್ತು ಎಂದಡೆ
ಶಿವನಿಂದ ಅನ್ಯವೆನಬಹುದೆ?
ಇಂತಪ್ಪ ಅರಿವು, ನೀವು ಕೊಟ್ಟ ಸಮ್ಯಕ್‌ಜ್ಞಾನಕ್ಕೆ
ಅರಿದಪ್ಪುದಯ್ಯಾ ಗುಹೇಶ್ವರಾ. || ೧೯೦ ||

೬೨೩
ಸಾವನ್ನಕ್ಕರ ಶ್ರಮವ ಮಾಡಿದಡೆ,
ಇನ್ನು ಕಾದುವ ದಿನವಾವುದು?
ಬಾಳುವನ್ನಕ್ಕರ ಭಜಿಸುತ್ತಿದ್ದಡೆ,
ತಾನಹ ದಿನವಾವುದು?
ಅರ್ಥವುಳ್ಳನ್ನಬರ ಅರಿವುತ್ತಿದ್ದಡೆ,
ನಿಜವನೆಯ್ದುವ ದಿನವಾವುದು?
ಕಾರ್ಯಕ್ಕೆ ಬಂದು, ಆ ಕಾರ್ಯ ಕೈಸಾರಿದ ಬಳಿಕ
ಇನ್ನು ಮರ್ತ್ಯಲೋಕದ ಹಂಗೇಕೆ?
ತನಿರಸ ತುಂಬಿದ ಅಮೃತಫಲ ಒಮ್ಮೆಗೆ ತೊಟ್ಟುಬಿಡುವುದು ನೋಡಿರೆ,
ದೃಷ್ಟಾಂತವ !
ಬಸವಣ್ಣ ಚೆನ್ನಬಸವಣ್ಣ ಮೊದಲಾದ ಪ್ರಮಥರು
ಗುಹೇಶ್ವರಲಿಂಗದಲ್ಲಿ ನಿಜವನೈದಿ ನಿಶ್ಚಿಂತರಾಗಿರಯ್ಯಾ! || ೧೯೧ ||

೬೨೪
ಸುಖವನರಿಯದ ಹೆಣ್ಣು ಸೂಳೆಯಾದಳು,
ಲಿಂಗವನರಿಯದ ಭಕ್ತ ಶೀಲವಂತ ಪ್ರಪಂಚಿಯಾದ.
ಈ ಸೂಳೆಗೆ ಸುಖವುಂಟೆ? ಈ ಶೀಲಕ್ಕೆ ಗತಿಯುಂಟೆ?
ಈ ಉಭಯರುಗಳು ಕೆಟ್ಟ ಕೇಡ ನೋಡಾ ಗುಹೇಶ್ವರಾ. || ೧೯೨ ||

೬೨೫
ಸುತ್ತಿಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ.
ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ.

ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ.
ನಿಚ್ಚಕ್ಕೆ ನಿಚ್ಚ ನೆನೆವ ಮನವ,
ಅಂದಂದಿಗೆ ಅತ್ತಲಿತ್ತ ಹರಿವ ಮನವ,
ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು,ಗುಹೇಶ್ವರನೆಂಬ ಲಿಂಗವು. || ೧೯೩ ||

೬೨೬
ಸೃಷ್ಟಿಗೆ ಹುಟ್ಟಿದ ಕಲ್ಲು, ಕಲ್ಲುಕುಟಿಕನಿಂದ ಮೂರ್ತಿಯಾಗಿ
ಮಂತ್ರಕ್ಕೆ ಲಿಂಗವಾಯಿತಲ್ಲಾ.
ಇವರಿಗೆ ಹುಟ್ಟಿದ ಕೂಸ ಲಿಂಗವೆಂದು ಕೈವಿಡಿವ
ವ್ರತಗೇಡಿಗಳನೇನೆಂಬೆ ಗುಹೇಶ್ವರಾ! || ೧೯೪ ||

೬೨೭
ಸ್ಫಟಿಕದ ಘಟದಂತೆ ಒಳಹೊರಗಿಲ್ಲ ನೋಡಾ!
ವಿಗಡಚರಿತ್ರಕ್ಕೆ ಬೆರಗಾದೆನು.
ನೋಡುವಡೆ ಕಾಣಬರುತ್ತಿದೆ, ಮುಟ್ಟುವಡೆ ಕೈಗೆ ಸಿಲುಕದು,
ಹೊದ್ದುವಡೆ ಸಮೀಪ, ಸಾರಿದಡೆ ಅತ್ತತ್ತ ತೋರುತ್ತಿದೆ.
ಆಕಾರ ನಿರಾಕಾರವ ನುಂಗಿ
ಬಯಲ ಸಮಾಧಿಯಲ್ಲಿ ಸಿಲುಕಿತ್ತು ನೋಡಾ!
ದರ್ಶನದಿಂದ ಅಮೃತಾಹಾರವಾಯಿತ್ತು,
ಬೆರಸಿದಡೆ ಇನ್ನೆಂತೊ ಗುಹೇಶ್ವರಾ! || ೧೯೫ ||

೬೨೮
ಸ್ತುತಿ ನಿಂದೆಗೆ ಕಿವುಡನಾಗಿರಬೇಕು.
ಪರಧನ ಪರಸತಿಯರಿಗೆ ಅಂಧಕನಾಗಿರಬೇಕು.
ವಾಕಿನಿಂ ಪರಬ್ರಹ್ಮವ ನುಡಿವ ಕುತರ್ಕಿಗಳ ಎಡೆಯಲ್ಲಿ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು.
'ಒಂದು' ಎಂದು ಅರಿದಲ್ಲಿ ಸಂದೇಹವಿಲ್ಲದಿರಬೇಕು,
ಗುಹೇಶ್ವರಲಿಂಗದಲ್ಲಿ ತನ್ನ ತಾ ಮರೆದಿರಬೇಕು. || ೧೯೬ ||

೬೨೯
ಹಗಲ ಇರುಳ ಮಾಡಿ, ಇರುಳ ಹಗಲ ಮಾಡಿ,
ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ,
ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ
ನುಡಿವವರ ಮಾತ ಕೇಳಲಾಗದು, ಗುಹೇಶ್ವರಾ. || ೧೯೭ ||

೬೩೦
ಹರಹರಾ! ನೀವಿಪ್ಪ ಠಾವನರಿಯದೆ
ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವರ ದಿಟ್ಟತನವ ನೋಡಾ!
ಶಿವಶಿವಾ! ನಿಮ್ಮ ಶ್ರೀಮುಖವನರಿಯದೆ ಸಕಲ ಪದಾರ್ಥವ ನಿಮಗರ್ಪಿಸಿ
ಪ್ರಸಾದವ ಕೊಂಡೆವೆಂದೆಂಬವರ ಎದೆಗಲಿತನವ ನೋಡಾ!
ಹಗರಣದ ಹಣ್ಣ ಮೆದ್ದು ಹಸಿವು ಹೋಯಿತ್ತೆಂಬಡೆ
ಆರು ಮೆಚ್ಚುವರು ಹೇಳಾ, ಗುಹೇಶ್ವರಾ. || ೧೯೮ ||

೬೩೧
ಹರಿವ ನದಿಗೆ ಮೈಯೆಲ್ಲ ಕಾಲು.
ಉರಿವ ಕಿಚ್ಚಿಗೆ ಮೈಯೆಲ್ಲ ನಾಲಗೆ.
ಬೀಸುವ ಗಾಳಿಗೆ ಮೈಯೆಲ್ಲ ಕೈ
ಗುಹೇಶ್ವರಾ ನಿಮ್ಮ ಶರಣಂಗೆ,
ಸರ್ವಾಂಗವೆಲ್ಲ ಲಿಂಗ! || ೧೯೯ ||

೬೩೨
ಹಸಿದಡೆ ಉಣಬಹುದೆ ನಸುಗುನ್ನಿ ತುರುಚಿಯನು?
ಅವಸರಕಿಲ್ಲದ ದೊರೆಗೆ ಅರ್ಥವಿದ್ದಲ್ಲಿ ಫಲವೇನು?
ಸಾಣೆಯ ಮೇಲೆ ಶ್ರೀಗಂಧವ ತೇವರಲ್ಲದೆ
ಇಟ್ಟಿಗೆಯ ಮೇಲೆ ತೇಯಬಹುದೆ?
ರಂಭೆಯ ನುಡಿ ಸಿಂಬಿಗೆ ಶೃಂಗಾರವೆ?
ಜ್ಞಾನಿಯ ಕೂಡೆ ಜ್ಞಾನಿ ಮಾತಾಡುವನಲ್ಲದೆ
ಅಜ್ಞಾನಿಯ ಕೂಡೆ ಜ್ಞಾನಿ ಮಾತಾಡುವನೆ?
ಸರೋವರದೊಳಗೊಂದು ಕೋಗಿಲೆ ಸ್ವರಗೆಯ್ಯುತ್ತಿದ್ದಡೆ
ಕೊಂಬಿನ ಮೇಲೊಂದು ಕಾಗೆ ಕರ್ರೆನ್ನದೆ? ಅಂತೆ ಇದ್ದತ್ತು.
ಭರದಲ್ಲಿ ಬರಡ ಕರೆದೆಹೆನೆಂದು,
ಕಂದಲ ಕೊಂಡು ಹೋದರೆ,
ಕಂದಲೊಡೆದು ಕೈ ಮುರಿದಂತಾಯಿತ್ತು ಗುಹೇಶ್ವರಾ. || ೨೦೦ ||

೬೩೩
ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು.
ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು.
ದೇವರಿಲ್ಲ ಭಕ್ತರಿಲ್ಲ, ನಾನೂ ಇಲ್ಲ ನೀನೂ ಇಲ್ಲ,
ಗುಹೇಶ್ವರಾ, ಪೂಜಿಸುವರೂ ಇಲ್ಲ, ಪೂಜೆಗೊಂಬವರೂ ಇಲ್ಲ. || ೨೦೧ ||

೬೩೪
ಹಸಿವುಳ್ಳನ್ನಕ್ಕ ವ್ಯಾಪಾರ ಬಿಡದು,
ಸೀತ ಉಳ್ಳನ್ನಕ್ಕ ಉಪಾಧಿಕೆ ಬಿಡದು,
ಮಾತುಳ್ಳನ್ನಕ್ಕ ಬೂಟಾಟಿಕೆ ಬಿಡದು,
ನಿದ್ರೆಯುಳ್ಳನ್ನಕ್ಕ ಸತಿಯ ಸಂಗ ಬಿಡದು.
ಇದು ಕಾರಣ,
ಕ್ಷುತ್ತಿಂಗೆ ಭಿಕ್ಷೆ, ಸೀತಕ್ಕೆ ರಗಟೆ, ಮಾತಿಂಗೆ ಮಂತ್ರ,
ಶಯನಕ್ಕೆ ಶಿವಧ್ಯಾನವೆಂದು ಹೇಳಿಕೊಟ್ಟ
ಗುರುವಚನವ ಮೀರಿ ನಡೆವವರಿಗೆ
ಪರದಲ್ಲಿ ಪರಿಣಾಮ ದೊರೆಕೊಳ್ಳದು ನೋಡಾ.
ಇದು ಕಾರಣ,
ಗುರುವಾಜ್ಞೆಯ ಮೀರಿ ಮನಕ್ಕೆ ಬಂದಂತೆ ನಡೆದವರ
ಎನಗೊಮ್ಮೆ ತೋರದಿರಾ ಗುಹೇಶ್ವರಾ. || ೨೦೨ ||

೬೩೫
ಹಾಲ ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ.
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ.
ಅಗ್ಘವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ.
ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ
ಇವು ಷಡುಸ್ಥಲಕ್ಕೆ ಹೊರಗು.
ನಿಜಭಕ್ತಿ ಇಲ್ಲದವರ ಕಂಡಡೆ ಮೆಚ್ಚನು ಗುಹೇಶ್ವರನು. || ೨೦೩ ||

೬೩೬
ಹಿಂದಣ ಅನಂತವನೂ, ಮುಂದಣ ಅನಂತವನೂ
ಒಂದು ದಿನ ಒಳಕೊಂಡಿತ್ತು ನೋಡಾ!
ಒಂದು ದಿನವನೊಳಕೊಂಡು ಮಾತಾಡುವ
ಮಹಂತನ ಕಂಡು ಬಲ್ಲವರಾರಯ್ಯ?
ಆದ್ಯರು ವೇದ್ಯರು ಅನಂತ ಹಿರಿಯರು,
ಲಿಂಗದಂತುವನರಿಯದೆ ಅಂತೆ ಹೋದರು ಕಾಣಾ, ಗುಹೇಶ್ವರಾ! || ೨೦೪ ||

೬೩೭
ಹಿಡಿವ ಕೈಯ [ಮೇ]ಲೆ ಕತ್ತಲೆಯಯ್ಯಾ,
ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ,
ನೆನೆವ ಮನದ ಮೇಲೆ ಕತ್ತಲೆಯಯ್ಯಾ,

ಕತ್ತಲೆ ಎಂಬುದು ಇತ್ತಲೆಯಯ್ಯಾ,
ಗುಹೇಶ್ವರನೆಂಬುದು ಅತ್ತಲೆಯಯ್ಯಾ. || ೨೦೫ ||

೬೩೮
ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ,
ಲಿಂಗದ ಅನುಭಾವದ ಮಾತೇಕೊ?
ಮಾತಿನ ಮಾತಿನ ಮಹಂತರು ಹಿರಿಯರು!
ಗುಹೇಶ್ವರನೆಂಬ ಲಿಂಗಸಾರಾಯವು
ಬಹುಮುಖಿಗಳಿಗೆ ತೋರದು, ತೋರದು. || ೨೦೬ ||

೬೩೯
ಹುಟ್ಟುವರೆಲ್ಲರ ಹುಟ್ಟಬೇಡೆಂದೆನೆ?
ಹೊಂದುವರೆಲ್ಲರ ಹೊಂದಬೇಡೆಂದೆನೆ?
ಪ್ರಳಯದಲ್ಲಿ ಅಳಿವರ ಅಳಿಯಬೇಡೆಂದೆನೆ?
ಗುಹೇಶ್ವರಾ ನಿಮ್ಮನರಿದು ನೆರೆದ ಬಳಿಕ,
ಧರೆಯ ಮೇಲುಳ್ಳವರನಿರಬೇಡವೆಂದೆನೆ? || ೨೦೭ ||

೬೪೦
ಹುಟ್ಟುವಾತ ನಾನಲ್ಲಯ್ಯಾ, ಹೊಂದುವಾತ ನಾನಲ್ಲಯ್ಯಾ.
ಅದೇನೆಂಬೆನಯ್ಯಾ ಎಂತೆಂಬೆನಯ್ಯಾ?
ನಿಜವನರಿದ ಬಳಿಕ ಮತ್ತೆ ಹುಟ್ಟಲುಂಟೆ ಗುಹೇಶ್ವರಾ. || ೨೦೮ ||

೬೪೧
ಹುಸಿಯುಳ್ಳಾತ ಭಕ್ತನಲ್ಲ ಬಾಧೆಯುಳ್ಳಾತ ಜಂಗಮವಲ್ಲ,
ಆಸೆಯುಳ್ಳಾತ ಶರಣನಲ್ಲ.
ಇಂತಪ್ಪ ಹುಸಿ ಆಸೆ ಬಾಧೆಯ ನಿರಾಕರಿಸಿ ಇರಬಲ್ಲಡೆ,
ಗುಹೇಶ್ವರಾ ನಿಮ್ಮ ಶರಣ. || ೨೦೯ ||

೬೪೨
ಹೂಮಿಡಿಯ ಹರಿದು ಒತ್ತಿ ಹಣ್ಣ ಮಾಡಿಹೆನೆಂದಡೆ ಹಣ್ಣಾಗಬಲ್ಲುದೆ?
ಪರಿಮಳವಿಲ್ಲದ ನನೆಯನರಳಿಸಿ ಮುಡಿದಹೆನೆಂದಡೆ ಸೌರಭ ಉಂಟೆ?
ಶಿವಶರಣರ ನಿಲವು ಕಾಂಬ ಕಾಲಕ್ಕೆ ಕಾಣಬಹುದಲ್ಲದೆ
ಎಲ್ಲಾ ಹೊತ್ತು ಕಾಣಬಹುದೆ? ಅಹ ಕಾಲಕ್ಕೆ ತಾನೆ ಅಪ್ಪುದು.
ಗುಹೇಶ್ವರನ ಶರಣರ ನಿಲವ ಕಂಡ ಬಳಿಕ
ಮರಹು, ಬೆಳಗ ಕಂಡ ಕತ್ತಲೆಯಂತೆ
ನೋಡ ನೋಡ ಹರಿವುದು ನೋಡಾ ಸಂಗನಬಸವಣ್ಣಾ. || ೨೧೦ ||

೬೪೩
ಹೂವ ಕೊಯ್ಯ ಹೋಗಿ ಕರಡಿಗೆಯ ಮರೆದೆ;
ಪೂಜಿಸ ಹೋಗಿ ಲಿಂಗವ ಮರೆದೆ.
ಗಾಡಿಗರೊಡನಾಡಿ ಜೇನನಳಿದು ತುಪ್ಪವ ಮರೆದೆ.
ಅವರೆಲ್ಲರ ಒಡನಾಡಿಯಾಗಿ ಗುಹೇಶ್ವರಲಿಂಗವ ಮರೆದೆ. || ೨೧೧ ||

೬೪೪
ಹೊಟ್ಟೆಯ ಮೇಲೆ ಕಟ್ಬೋಗರದ ಮೊಟ್ಟೆಯ ಕಟ್ಟಿದಡೇನು?
ಹಸಿವು ಹೋಹುದೆ?
ಅಂಗದ ಮೇಲೆ ಲಿಂಗಸ್ವಾಯತವಾದಡೇನು?
ಭಕ್ತನಾಗಬಲ್ಲನೆ?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಲುಕಿದಡೆ,
ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ?
ಇಂತಪ್ಪವರ ಕಂಡಡೆ ನಾಚುವೆನಯ್ಯಾ ಗುಹೇಶ್ವರಾ. || ೨೧೨ ||

೬೪೫
ಹೊತ್ತಾರೆ ಪೂಜಿಸಲು ಬೇಡ ಕಂಡಾ.
ಬೈಗೆಯೂ ಪೂಜಿಸಲು ಬೇಡ ಕಂಡಾ.
ಇರುಳುವನು ಹಗಲುವನು ಕಳೆದು,
ಪೂಜೆಯನು ಪೂಜಿಸಲು ಬೇಕು ಕಂಡಾ.
ಇಂತಪ್ಪ ಪೂಜೆಯನು ಪೂಜಿಸುವರ,
ಎನಗೆ ನೀ ತೋರಾ ಗುಹೇಶ್ವರಾ. || ೨೧೩ ||

೬೪೬
ಹೊನ್ನ ತೂಗಿದ ತ್ರಾಸುಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?
ಸನ್ನಿಹಿತರಾದೆವೆಂಬ ನುಡಿಗೆ ನಾಚರು ನೋಡಾ,
ಕನ್ನದಲಿ ಸವೆದ ಕಬ್ಬುನದಂತೆ,
ಮುನ್ನ ಹೋದ ಹಿರಿಯರು ಲಿಂಗದ ಸುದ್ದಿಯನರಿಯರು.
ಇನ್ನಾರು ಬಲ್ಲರು ಹೇಳಾ ಗುಹೇಶ್ವರಾ? || ೨೧೪ ||

೬೪೭
ಹೊನ್ನಿಗಾಗಿ ಸತ್ತುದೊಂದು ಕೋಟ್ಯನುಕೋಟಿ,
ಹೆಣ್ಣಿಗಾಗಿ ಸತ್ತುದೊಂದು ಕೋಟ್ಯನುಕೋಟಿ,
ಮಣ್ಣಿಗಾಗಿ ಸತ್ತುದೊಂದು ಕೋಟ್ಯನುಕೋಟಿ,
ನೀ ಗುರಿಯಾಗಿ ಸತ್ತವರನಾರನೂ ಕಾಣೆ ಗುಹೇಶ್ವರಾ. || ೨೧೫ ||

೬೪೮
ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ.
ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ.
ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ.
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ. || ೨೧೬ ||

೬೪೯
ಹೊರಗನೆ ಕೊಯ್ದು, ಹೊರಗನೆ ಪೂಜಿಸಿ,
ಹೊರಗಾಗಿ ಹೋಯಿತ್ತು ತ್ರೈಜಗವೆಲ್ಲ.
ಆನದನರಿಯದಂತೆ ಲಿಂಗವ ಪೂಜಿಸ ಹೋದಡೆ,
ಕೈ ಲಿಂಗದಲ್ಲಿ ಸಿಲುಕಿತ್ತಲ್ಲಾ!
ಮನ ದೃಢದಿಂದ ನಿಮ್ಮ ನೆನೆದಿಹೆನೆಂದಡೆ
ತನು ಸಂದಣಿಸಿತ್ತು ಗುಹೇಶ್ವರಾ. || ೨೧೭ ||

೬೫೦
ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು.
ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು.
ವಾಯುವಿನ ಸಂಚದ ಪರಿಮಳದ ನಿಲವಿನಂತೆ
ಲಿಂಗೈಕ್ಯ ಸಂಬಂಧವದು ಗುಹೇಶ್ವರಾ. || ೨೧೮ ||

*

ಚೆನ್ನಬಸವಣ್ಣ

೬೫೧
ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಸಂಗವ ಮಾಡನಾ ಶರಣನು,
ನಯನದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ನೋಡನಾ ಶರಣನು,
ಶ್ರೋತ್ರದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ಕೇಳನಾ ಶರಣನು,
ನಾಸಿಕದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಪರಿಮಳವ ವೇಧಿಸ ಶರಣನು,
ಜಿಹ್ವೆಯ ಕೊನೆಯಲ್ಲಿ ಲಿಂಗ ಮುಂತಲ್ಲದೆ

ರುಚಿಯ ನಿಶ್ಚಯಿಸ ಶರಣನು,
ಕೂಡಲ ಚೆನ್ನಸಂಗಾ, ನಿಮ್ಮ ಶರಣ ಸರ್ವಾಂಗಲಿಂಗಿಯಾದ ಕಾರಣ. ॥ ೧ ॥

೬೫೨
ಅಂಗದ ಮೇಲಣ ಲಿಂಗ ಹಿಂಗದಂತಿರಬೇಕು,
ಅಂಗಕ್ಕೆ ಲಿಂಗಕ್ಕೆ ಸಂಬಂಧವೇನೊ ಮನ ಮುಟ್ಟದನ್ನಕ್ಕರ?
ಕಾಯ ಕಾಯಕವ ಮಾಡುತ್ತಿರಲು,
ಮನವು ಲಿಂಗದಲ್ಲಿ ಬೆರಸಿ ತೆರಹಿಲ್ಲದಿಪ್ಪ
ಮಡಿವಾಳನ ಪರಿಯ ನೋಡಾ!
ಅಂಗ ಲಿಂಗ ಸಂಗವೆಂಬ ಸಂದು ಸಂಶಯವಳಿದು,
ಸರ್ವಾಂಗಲಿಂಗಸಂಬಂಧಿ ಕೂಡಲ ಚೆನ್ನಸಂಗಯ್ಯನಲ್ಲಿ
ಮಡಿವಾಳ ಮಾಚಯ್ಯನು! ॥ ೨ ॥

೬೫೩
ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಕ್ಷೇತ್ರತೀರ್ಥಕ್ಕೆ ಹೋಗಲೇಕಯ್ಯ!
ಅಂಗದ ಮೇಲಣ ಲಿಂಗ [ರಂಗದ] ಕಲ್ಲ ತಾಗಿದರೆ
ಆವುದ ಘನವೆಂಬೆನಾವುದ ಕಿರಿದೆಂಬೆ!
ತಾಳ ಸಂಪುಟಕ್ಕೆ ಬಾರದ ಘನವನರಿಯದೆ ಕೆಟ್ಟರು.
ಜಂಗಮದರ್ಶನ ಶಿರಮುಟ್ಟಿ ಪಾವನ,
ಲಿಂಗದರ್ಶನ ಕರಮುಟ್ಟಿ ಪಾವನ.
ಹತ್ತರಿದ್ದ ಲಿಂಗವ ಹುಸಿಮಾಡಿ,
ದೂರದಲಿದ್ದ ಲಿಂಗಕ್ಕೆ ನಮಸ್ಕರಿಸುವ
ವ್ರತಗೇಡಿಯ ತೋರದಿರಯ್ಯಾ!
ಕೂಡಲ ಚೆನ್ನಸಂಗಯ್ಯಾ. ॥ ೩ ॥

೬೫೪
ಅಂಗದ ಮೇಲೆ ಲಿಂಗಧಾರಣವಾದ ಬಳಿಕ
ಮರಳಿ ಭವಿ ನಂಟನೆಂದು ಬೆರಸಿದರೆ
ಕೊಂಡ ಮಾರಿಂಗೆ ಹೋಹುದು ತಪ್ಪದು.
ಹಸಿಯ ಮಣ್ಣಿನಲ್ಲಿ ಮಾಡಿದ ಮಡಕೆ ಅಗ್ನಿಮುಖದಿಂದಾದ ಬಳಿಕ
ಅದು ತನ್ನ ಪೂರ್ವಕುಲವ ಬೆರಸುವುದೆ?
ಅಗ್ನಿದಗ್ಧಘಟಃ ಪ್ರಾಹುರ್ನ ಭೂಯೋ ಮೃತ್ತಿಕಾಯತೇ ।
ತಚ್ಛಿವಾಚಾರಸಂಗೇನ ನ ಪುನರ್ಮಾನುಷೋ ಭವೇತ್ ॥

ಇದು ಕಾರಣ, ಪೂರ್ವ ನಾಸ್ತಿಯಾದ ಭಕ್ತನಪೂರ್ವ,
ಕೂಡಲ ಚೆನ್ನಸಂಗಮದೇವಾ. || ೪ ||

೬೫೫
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯಶಬ್ದವ ಕೇಳನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯವ ಮುಟ್ಟನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯವ ನೋಡನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಆಹಾರ ವ್ಯವಹಾರವನರಿಯನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯವ ಘ್ರಾಣಿಸನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಬರಿ ಶಬ್ದವ ನುಡಿಯನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತನಾಗಿ
ಕೂಡಲ ಚೆನ್ನಸಂಗಯ್ಯನಲ್ಲದನ್ಯವನರಿಯನಾ ಶರಣನು. || ೫ ||

೬೫೬
ಅಂಗದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ, ಅಂಗವೆ ಲಿಂಗ,
ಮನದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ, ಕರಣಂಗಳೆ ಲಿಂಗ,
ಪ್ರಾಣದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ
ಅರಿವಿನ ವಿಷಯಾದಿ ಭೋಗಂಗಳೆ ಲಿಂಗ.
ಅದು ಕಾರಣ,
ಸರ್ವಾಂಗಲಿಂಗ ಸರ್ವಭೋಗ ಲಿಂಗಭೋಗ
ಕೂಡಲ ಚೆನ್ನಸಂಗಮದೇವಾ. || ೬ ||

೬೫೭
ಅಂಗದಲ್ಲಿ ಆಚಾರಲಿಂಗಸಂಬಂಧಿಯಾಗಿಪ್ಪ,
ಮನದಲ್ಲಿ ಮಹಾಲಿಂಗಸಂಬಂಧಿಯಾಗಿಪ್ಪ.
ಇಂತೀ ಉಭಯಸಂಗ ಸಂಬಂಧ ಸನ್ನಹಿತನಾಗಿಪ್ಪ
ಕೂಡಲ ಚೆನ್ನಸಂಗಾ, ನಿಮ್ಮ ಶರಣ. || ೭ ||

೬೫೮
ಅಂಗದಲ್ಲಿ ಲೀಯವಾದವರು ಅಂಗದ ನುಡಿಗಡಣವೆ ನೋಡಾ,
ಲಿಂಗದಲ್ಲಿ ಲೀಯವಾದವರು ಲಿಂಗದ ನುಡಿಗಡಣವೆ ನೋಡಾ,
ಆವ ಸ್ಥಳದಲ್ಲಿ ನಿಂದವರು ಆ ಸ್ಥಳವೆ ನುಡಿವರು ನೋಡಾ.
ಕೂಡಲ ಚೆನ್ನಸಂಗನ ಶರಣರು
ಆ ಲಿಂಗದ ನಡೆ, ಆ ಲಿಂಗದ ನುಡಿಗಡಣವೆ ನೋಡಾ. ॥ ೮ ॥

೬೫೯
ಅಂಗದಿಚ್ಛೆಗೆ ಮದ್ದು ಮಾಂಸ ಬಳ್ಳ ಬಂಗಿಯ ತಿಂಬರು,
ಕಂಗಳಿಚ್ಛೆಗೆ ಪರರ ವಧುವ ನೆರೆವರು,
ಲಿಂಗಲಾಂಛನವಿದ್ದಲ್ಲಿ ಫಲವೇನು? ಲಿಂಗವನರಿಯದೆ.
ಜಂಗಮಮುಖದಲ್ಲಿ ಕುಂದೆಯವು ಬಂದರೆ
ಪೂರ್ವದ ಕೊಂಡ ಮಾರಿಗೆ ಹೋಗುವರೆಂದ
ಕೂಡಲ ಚೆನ್ನಸಂಗಮದೇವ. ॥ ೯ ॥

೬೬೦
ಅಂಗಸಂಗಿಯಾದವಂಗೆ ಲಿಂಗಸಂಗವಿಲ್ಲ,
ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ.
ಅಂಗಸಂಗವೆಂಬುದು ಅನಾಚಾರ,
ಲಿಂಗಸಂಗವೆಂಬುದು ಸದಾಚಾರ.
ಇದು ಕಾರಣ, ಅಂಗಸಂಗವ ಬಿಟ್ಟು
ಲಿಂಗಸಂಗಿಯಾಗಿರಬೇಕು, ಕೂಡಲ ಚೆನ್ನಸಂಗಮದೇವಾ. ॥ ೧೦ ॥

೬೬೧
ಅಂಗಾಶ್ರಯವಳಿದು ಲಿಂಗಾಶ್ರಯವಾದ ಬಳಿಕ
ಅಂಗಕ್ಕೆ ಲಿಂಗಾಚಾರವಲ್ಲದೆ
ಅಂಗಕ್ರೀಯೆಂಬುದನರಿದಂಗವಿಸರು ನೋಡಾ!
ಲಿಂಗದಲ್ಲಿ ನಿಷ್ಠೆವಂತರಾದ ಬಳಿಕ
ಅನ್ಯನಾಮವಿಡಿದು ಬಳಲುವ ಬಳಲಿಕೆ ಇನ್ನೆಲ್ಲಿಯದೋ!
ಇದು ಕಾರಣ
ಕೂಡಲ ಚೆನ್ನಸಂಗನ ಶರಣರು ಅನ್ಯವನಾಚರಿಸುವರಲ್ಲ. ॥ ೧೧ ॥

೬೬೨
ಅಂತರಂಗದಲ್ಲಿ ಅರಿವಾದಡೇನಯ್ಯಾ,
ಬಹಿರಂಗದಲ್ಲಿ ಕ್ರೀ ಇಲ್ಲದನ್ನಕ್ಕ?

ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯವುಂಟೆ?
ಕನ್ನಡಿಯಿಲ್ಲದಿರ್ದಡೆ ತನ್ನ ಮುಖವ ಕಾಣಬಹುದೆ?
ಸಾಕಾರ ನಿರಾಕಾರ ಏಕೋದೇವ,
ನಮ್ಮ ಕೂಡಲ ಚೆನ್ನಸಂಗಯ್ಯನು. || ೧೨ ||

೬೬೩
ಅಂತರಂಗದಲ್ಲಿ ಭಾವಿಸುವನಲ್ಲ,
ಬಹಿರಂಗದಲ್ಲಿ ಬಳಸುವನಲ್ಲ.
ಎರಡನತಿಗಳೆದು ತನ್ನಲ್ಲಿ ತಾನೆ ಸಹಜ ನೋಡಾ.
ಅಂತರಂಗವಿಲ್ಲ ಬಹಿರಂಗವಿಲ್ಲ
ಕೂಡಲ ಚೆನ್ನಸಂಗಾ, ನಿಮ್ಮ ಶರಣಂಗೆ. || ೧೩ ||

೬೬೪
ಅಂದಂದಿಂಗೆ ಬಂದ ಪದಾರ್ಥವನೆಂದೆಂದೂ
ತಾನುಂಬ ಕೈಯಲಿ ಕೊಡುವುದು ಎಂತೊ?
ಲಿಂಗಕ್ಕೆ ನೀಡುವರೆಂತೊ? ಲಿಂಗಕ್ಕೆ ಕೊಡುವರೆಂತೊ?
ಲಿಂಗಕ್ಕೆ ಸಲುವುದೆಂತೊ?
ಶಿವಶಿವಾ! ಮಂಚವೊಂದೆ, ಕಂಚು ಬೇರೆಂಬ ಪ್ರಪಂಚಿಯನೊಲ್ಲ
ಕೂಡಲ ಚೆನ್ನಸಂಗಮದೇವ. || ೧೪ ||

೬೬೫
ಅಂಧಕಾರವೆಂಬ ಗಹ್ವರದೊಳಗೆ ನಿದ್ರೆಯೆಂಬ ರಾಕ್ಷಸಿ ಗ್ರಹಿಸಿ
ವೀರರ ಹುಚ್ಚುಮಾಡಿ, ಧೀರರ ಧೃತಿಗೆಡಿಸಿ,
ಶಾಪಾನುಗ್ರಹಸಮರ್ಥರ ಸತ್ತ್ವಂತಿರಿಸಿ,
ನಿಚ್ಚ ನಿಚ್ಚ ಜೀವನ ನಾಶವ ಮಾಡುತ್ತಿಹುದು ನೋಡಯ್ಯಾ,
ಕೂಡಲ ಚೆನ್ನಸಂಗಮದೇವಾ. || ೧೫ ||

೬೬೬
ಅಗ್ಘವಣಿ ಮೀಸಲಾಗಬೇಕೆಂಬುದು ಶೀಲವೆ?
ಪುಷ್ಪ ಮೀಸಲಾಗಬೇಕೆಂಬುದು ಶೀಲವೆ?
ಇವು ಶೀಲವಲ್ಲ ಕಾಣಿರಯ್ಯ!
ಪಂಚೇಂದ್ರಿಯ ಷಡ್ವರ್ಗ ಸಪ್ತಧಾತು
ಅಷ್ಟಮದಂಗಳ ಕಳೆಯಬಲ್ಲಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಅಚ್ಚಶೀಲ. || ೧೬ ||

೬೬೭
ಅಗ್ಘವಣಿಯನೆ ತುಂಬಿ,
ಪುಷ್ಪವನೆ ತಂದು ಪೂಜಿಸಿ ಲಯಕ್ಕೊಳಗಾದರು.
ಜನ ಮರುಳೋ ಜಾತ್ರೆ ಮರುಳೋ!
ಅಗ್ಘವಣಿಯನೆ ತಂದು ತುಂಬಿದ [ಮಡು] ಬತ್ತಿ ಹೋಯಿತ್ತು,
ಪುಷ್ಪವನೆ ತಂದು ತಂದು ಗಿಡು ಅಡವಿ ಕೂಡಿತ್ತು.
ನೀ ಪೂಜಿಸಿದ ಪೂಜೆ
ಗಿಡುವು ಮಡುವಿಗಲ್ಲದೆ ನಿನಗೆಲ್ಲಿಹುದೋ?
ಮಾಡಿ ಮಾಡಿ [ಮಾಡಿಕೆ] ಕೇಡು.
ಮಾಡಿ ಮನ ಮರುಗದೆ, ನೀಡಿ ನಿಜವಿಲ್ಲದೆ
ಅಣ್ಣಗಳ ಕೆಟ್ಟ ಕೇಡು ನೋಡಾ,
ಮಹಾದಾನಿ ಕೂಡಲ ಚನ್ನಸಂಗಮದೇವಾ. ॥ ೧೭ ॥

೬೬೮
ಅಗ್ನಿಯ ಕೂಡಾಡಿ ಕಾಷ್ಠಂಗಳೆಲ್ಲ
ಕೆಟ್ಟ ಕೇಡ ನೋಡಯ್ಯ,
ಜಲಧಿಯ ಕೂಡಾಡಿ ಘಟ್ಟ - ಬೆಟ್ಟಗಳೆಲ್ಲ
ಕೆಟ್ಟ ಕೇಡ ನೋಡಯ್ಯ,
ಜ್ಯೋತಿಯ ಕೂಡಾಡಿ ಕತ್ತಲೆ
ಕೆಟ್ಟ ಕೇಡ ನೋಡಯ್ಯ,
ನಿಮ್ಮ ಶರಣರ ಕೂಡಾಡಿ, ನನ್ನ ಭವಂಗಳು
ಕೆಟ್ಟ ಕೇಡ ನೋಡಯ್ಯ,
ಕೂಡಲ ಚೆನ್ನಸಂಗಮದೇವಾ. ॥ ೧೮ ॥

೬೬೯
ಅಚ್ಚಪ್ರಸಾದಿ ಅಚ್ಚಪ್ರಸಾದಿಯೆಂದು
ನಿಚ್ಚಕ್ಕೆ ಬಗುಳುವ ಕುನ್ನಿಗಳ ನೋಡಾ!
ಬರದ ನಾಡಿಂದ ಬಂದ ಬಣಗುಗಳಂತೆ
ಮತ್ತಿಕ್ಕುವರೊ ಇಕ್ಕರೊ ಎಂದು ಒಟ್ಟೈಸಿಕೊಂಡು ತಿಂದು,
ಮಿಕ್ಕುದ ಬಿಸುಡುವ ಕುನ್ನಿಗಳ ಮೆಚ್ಚುವನೆ
ನಮ್ಮ ಕೂಡಲ ಚೆನ್ನಸಂಗಮದೇವರು? ॥ ೧೯ ॥

೬೭೦
ಅಜಕೋಟಿ ಕಲ್ಪ ವರುಷದವರೆಲ್ಲರು ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರು ಹಿರಿಯರೆ?
ನಡುಮುರಿದು [ಗೂ]ಡುಗೂರಿ ತಲೆ ನಡುಗಿ ನರೆತೆರೆ ಹೆಚ್ಚಿ,

ಮತಿಗೆಟ್ಟು ಒಂದನಾಡ ಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲರು ಹಿರಿಯರೆ?
ಅನುವನರಿದು, ಘನವ ಬೆರಸಿ
ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು. || ೨೦ ||

೬೨೧
ಅಜ್ಞಾನವೆಂಬ ಕಾಳಿಕೆವಿಡಿದ
ಮನದ ಮೋಹವ ಪರಿಹರಿಸಿದ ಪರಿಯ ನೋಡಿರೆ!
ಒಮ್ಮೆ ಕಾಸಿ ಒಮ್ಮೆ ಕರಗಿಸಿ ಒಮ್ಮೆ ಬಣ್ಣವಿಟ್ಟು
ಎನ್ನ ಮನದ ಮೋಹವ ಕಳೆದನಯ್ಯಾ,
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣ ಬಸವಣ್ಣನು. || ೨೧ ||

೬೨೨
ಅಧರ ತಾಗುವ ರುಚಿಯನು, ಉದರ ತಾಗುವ ಸುಖವನು,
ಲಿಂಗಾರ್ಪಿತವ ಮಾಡದಿದ್ದರೆ ಕೃತಕಿಲ್ಬಿಷ ನೋಡಾ.
ಶ್ರೋತ್ರ ನೇತ್ರ ಭುಂಜನೆಯ ಮಾಡಲಾಗದು.
ತಟ್ಟಿತ್ತು ಮುಟ್ಟಿತ್ತು ಲಿಂಗಾರ್ಪಿತವೆಂದರೆ,
ಅವನಂದೇ ವ್ರತಗೇಡಿ ಕೂಡಲ ಚೆನ್ನಸಂಗಮದೇವಾ. || ೨೨ ||

೬೨೩
ಅನಾಚಾರದ ಕಾಯಕವ ಮಾಡಿ, ಪದಾರ್ಥವನೆ ಗಳಿಸಿ
ಆ ಪದಾರ್ಥವನೆ ಪಾಕವ ಮಾಡಿ, ಓಗರವ ಮಾಡುವರು,
ಆ ಓಗರವನೆ ಪ್ರಸಾದವ ಮಾಡಿ, ಆ ಪ್ರಸಾದವನೆ ಓಗರವ ಮಾಡಿ!
ಇದು ಕಾರಣ, ಕೂಡಲ ಚೆನ್ನಸಂಗನ ಶರಣನು
ಅರ್ಪಿತವಲ್ಲದೆ ಮಾಡನು. || ೨೩ ||

೬೨೪
ಅನುಭಾವ ಅನುಭಾವವೆಂದೆಂಬರು
ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ.
ಅನುಭಾವವೆಂಬುದು ಅಂತರಂಗದ ಶುದ್ಧಿ ಕಾಣಿರೋ.
ಅನುಭಾವವೆಂಬುದು ರಚ್ಚೆಯ ಮಾತೆ?
ಅನುಭಾವವೆಂಬುದು ಸಂತೆಯ ಸುದ್ದಿಯೆ?
ಅನುಭಾವವೆಂಬುದೇನು ಬೀದಿಯ ಪಸರವೆ?

ಏನೆಂಬೆ ಹೇಳಾ ಮಹಾಘನವ!
ಆನೆಯ ಮಾನದೊಳಗಿಕ್ಕಿದರಡಗುವುದೆ
ದರ್ಪಣದೊಳಗಡಗುವುದಲ್ಲದೆ?
ಕಂಡ ಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ ಅನುಭಾವ,
ಬಂದ ಬಂದಲ್ಲಿ ಪ್ರಸಂಗವ ಮಾಡುವ ನಿರ್ಬುದ್ಧಿ ನೀಚರ ಮೆಚ್ಚ,
ಕೂಡಲ ಚೆನ್ನಸಂಗಮದೇವ. || ೨೪ ||

೬೭೫
ಅನ್ನದಾನಿ, ವಸ್ತ್ರದಾನಿ, ಹಿರಣ್ಯದಾನಿಗಳ
ಮನೆಯ ಬಾಗಿಲ ಕಾದಿಪ್ಪರಯ್ಯಾ,
ಬಹುವಿಧದ ವೇಷಧಾರಿಗಳು.
ವಯೋವೃದ್ಧಾಸ್ತಪೋವೃದ್ಧಾ ವೇದವೃದ್ಧಾ ಬಹುಶ್ರುತಾಃ।
ಸರ್ವೇ ತೇ ದಾನಿವೃದ್ಧಸ್ಯ ದ್ವಾರೇ ತಿಷ್ಠಂತಿ ಕಿಂಕರಾಃ॥
ಎಂದುದಾಗಿ
ದೈನ್ಯವ ಬಿಟ್ಟಿಪ್ಪ ನಿರಾಭಾರಿಯ ತೋರಿ ಬದುಕಿಸಾ,
ಕೂಡಲ ಚೆನ್ನಸಂಗಮದೇವಾ. || ೨೫ ||

೬೭೬
ಅನ್ನವನಿಕ್ಕಿದರೆ ಪುಣ್ಯವಹುದು, ವಸ್ತ್ರವ ಕೊಟ್ಟರೆ ಧರ್ಮವಹುದು,
ಹಣವ ಕೊಟ್ಟರೆ ಶ್ರೀಯಹುದು.
ತ್ರಿಕರಣ ಶುದ್ಧವಾಗಿ ನೆನೆದರೆ ಮುಕ್ತಿಯಹುದು,
ಕೂಡಲ ಚೆನ್ನಸಂಗಯ್ಯನ[ಲ್ಲಿ]. || ೨೬ ||

೬೭೭
ಅನ್ಯದೈವವುಳ್ಳ ಭಕ್ತನ ಮನೆಯ ಆರೋಗಣೆ
ಅನ್ಯಾಹಾರದ ಕೂಳು,
ನಂಬಿಗೆಯಿಲ್ಲದ ಭಕ್ತನ ಮನೆಯ ಆರೋಗಣೆ
ಸಂದೇಹದ ಕೂಳು,
ಮಾಡಿ, ಹಮ್ಮ ನುಡಿವ ಭಕ್ತನ ಮನೆಯ ಆರೋಗಣೆ
ಕಾರಿದ ಕೂಳು.
ನಿಮ್ಮ ನಂಬಿದ ಸಜ್ಜನ ಭಕ್ತನ ಮನೆಯ ಆರೋಗಣೆ
ಸದಾಚಾರ ಭೃತ್ಯಾಚಾರ ಶಿವಾಚಾರದಿಂ ಬಂದುದಾಗಿ
ಲಿಂಗಾರ್ಪಿತವಾಯಿತ್ತಯ್ಯಾ, ಕೂಡಲ ಚೆನ್ನಸಂಗಮದೇವಾ. || ೨೭ ||

೬೭೮
ಅಪ್ಪುವನಪ್ಪಿದ ಆಲಿಕಲ್ಲಿನಂತೆ,
ವಾಯುವನಪ್ಪಿದ ಪರಿಮಳದಂತೆ,
ಬಯಲನಪ್ಪಿದ ಜ್ಯೋತಿಯಂತೆ
ಲಿಂಗವನಪ್ಪಿದ ಶರಣ.
ಆತನ ದೇಹಿಯೆನಬಹುದೆ?
ಈ ತ್ರಿವಿಧ ನಿರ್ಣಯ
ಕೂಡಲಚೆನ್ನಸಂಗಾ ನಿಮ್ಮ ಶರಣನ ಪರಿ. || ೨೮ ||

೬೭೯
ಅಯ್ಯಾ, ಸಜ್ಜನ ಸದ್ಭಾವಿಗಳ ಸಂಗದಿಂದ
ಮಹಾನುಭಾವಿಗಳ ಕಾಣಬಹುದು,
ಮಹಾನುಭಾವಿಗಳ ಸಂಗದಿಂದ ಶ್ರೀಗುರುವ ಕಾಣಬಹುದು,
ಶ್ರೀಗುರುವಿನ ಸಂಗದಿಂದ ಲಿಂಗವ ಕಾಣಬಹುದು,
ಲಿಂಗಸಂಗದಿಂದ ಜಂಗಮವ ಕಾಣಬಹುದು,
ಜಂಗಮಸಂಗದಿಂದ ಪ್ರಸಾದವ ಕಾಣಬಹುದು,
ಪ್ರಸಾದದಿಂದ ಆಚಾರವ ಕಾಣಬಹುದಯ್ಯಾ,
ಆಚಾರದಿಂದ ತನ್ನ ಕಾಣಬಹುದಯ್ಯಾ,
ಇದು ಕಾರಣ, ಕೂಡಲ ಚೆನ್ನಸಂಗಮದೇವಾ,
ನಿಮ್ಮ ಸಜ್ಜನ ಸದ್ಭಾವಿಗಳ ಸಂಗವನೆ ಕರುಣಿಸಯ್ಯಾ
ನಿಮ್ಮ ಧರ್ಮ. || ೨೯ ||

೬೮೦
ಅರಸನ ಹೆಸರಿಟ್ಟ ಅನಾಮಿಕನಂತೆ
ನಾಮಕ್ಕರುಹರಲ್ಲದೆ ಪಟ್ಟಕ್ಕರುಹರಪ್ಪರೆ?
ಲಿಂಗ ಜಂಗಮ ಪ್ರಸಾದದ ಅನುಭಾವದ
ಹೆಸರ ಹೇಳಿಕೊಂಡು ಬದುಕುವರಲ್ಲದೆ,
ವೇಷವ ಧರಿಸಿಪ್ಪ ಆಶ್ರಿತರೆಲ್ಲರೂ
ಸಜ್ಜನ ಸಂಬಂಧ ಗುಣಾದಿಗುಣಂಗಳಿಗೆ ಯೋಗ್ಯರೆ?
ಕೂಡಲ ಚೆನ್ನಸಂಗಯ್ಯಾ, ಸಹಜ ಸಮ್ಯಕ್ಕರಲ್ಲದವರಂತಿರಲಿ. || ೩೦ ||

೬೮೧
ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು,
ಓಲೆಕಾರನ ಭಕ್ತಿ ಅಲಗಿನ ಮೊನೆಯಲ್ಲಿ ಹೋಯಿತ್ತು,

ಬಣಜಿಗನ ಭಕ್ತಿ ಬಳ್ಳದ ಮೊನೆಯಲ್ಲಿ ಹೋಯಿತ್ತು,
ಅಕ್ಕಸಾಲೆಯ ಭಕ್ತಿ ಅಗ್ಗಿಷ್ಟಿಗೆಯಲ್ಲಿ ಹೋಯಿತ್ತು,
ಶೀಲವಂತನ ಭಕ್ತಿ ಶಂಕೆಯಲ್ಲಿ ಹೋಯಿತ್ತು,
ಮಾಟ ಕೂಟದವನ ಭಕ್ತಿ ಅಂಜಿಕೆಯಲ್ಲಿ ಹೋಯಿತ್ತು,
ವ್ರತಸ್ಥನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಕಿರಾತರು ಹುಟ್ಟಿ ಪುರಾತರು ಅಡಗಿದರು. || ೩೧ ||

೬೮೨
ಅರಸಿನ ಭಕ್ತಿ ಅಹಂಕಾರದಿಂದ ಕೆಟ್ಟಿತ್ತು,
ಸೂಳೆಯ ಭಕ್ತಿ ಎಂಜಲ ತಿಂದಾಗಲೆ ಹೋಯಿತ್ತು,
ನಂಟುತನದ ಭಕ್ತಿ ನಾಯಕನರಕ,
ಬಡವನ ಭಕ್ತಿ ನಿಧಾನ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ನಿಮ್ಮ ಭಕ್ತರಿಗೆ ಬಡತನವನೆ ಕೊಡು. || ೩೨ ||

೬೮೩
ಅರಿವ ಅರಿಯ ಹೇಳಿ,
ಸದ್ಗುರುನಾಥ ಕುರುಹ ಕೈಯಲ್ಲಿ ಕೊಟ್ಟನಲ್ಲ[ವೆ?]
ತನ್ನ ಅರುಹನೆ ಮರೆದು ಕುರುಹನೆ ಪೂಜಿಸುವ
ನರಗುರಿಗಳ ನೋಡಾ, ಕೂಡಲ ಚೆನ್ನಸಂಗಮದೇವಾ. || ೩೩ ||

೬೮೪
ಅರೆಭಕ್ತರಾದವರ ನೆರೆಮನೆಯಲ್ಲಿರಲಾಗದು,
ಲಿಂಗನಿಷ್ಠೆಯಿಲ್ಲದವರ ಅಂಗಳವ ಮೆಟ್ಟಲಾಗದು,
ಜಂಗಮಪ್ರೇಮವಿಲ್ಲದವರೊಡನೆ ಮಾತನಾಡಲಾಗದು,
ಪ್ರಸಾದ ಪ್ರಸನ್ನಿಕೆಯಿಲ್ಲದವರ ಸಹಪಂಕ್ತಿಯಲ್ಲಿ ಕುಳ್ಳಿರಲಾಗದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ ನೀವು ಸಾಕ್ಷಿಯಾಗಿ
ಚತುರ್ವಿಧ ಸನ್ನಿಹಿತರಲ್ಲದವರ ಮೆಚ್ಚರು ನಿಮ್ಮ ಶರಣರು. || ೩೪ ||

೬೮೫
ಅರ್ಥ[ಮ]ದ, ಅಹಂಕಾರಮದ, ಕುಲಮದ ಬಿಡದು,
ಸಮಯಾಚಾರ ಸಮಯಭಕ್ತಿ
ಇನ್ನಾರಿಗೆಯೂ ಅಳವಡದು ನೋಡಾ.
ಮಾತಿನ ಮಾತಿನ ಮಿಂಚಿನ ಢಾಳಕರಿಗೆ

ಸಮಯಭಕ್ತಿ ಇನ್ನೆಲ್ಲಿಯದೊ
ಕೂಡಲ ಚೆನ್ನಸಂಗಯ್ಯಾ? ॥ ೩೫ ॥

೬೮೬
ಅರ್ಥದ ಭಕ್ತಿ ಉತ್ತರಿಸಿ ಹೋಯಿತ್ತು,
ಅರಸು ಭಕ್ತಿ 'ನಿಲ್ಲು, ಮಾಣು' ಎಂದಲ್ಲಿ ಹೋಯಿತ್ತು,
ಆಚರಣೆಯ ಭಕ್ತಿ ಅಡಗಿ ಹೋಗಿತ್ತು,
ಕೂಡಲ ಚೆನ್ನಸಂಗಮದೇವರಲ್ಲಿ
ಕೀಟಕರು ಹೆಚ್ಚಿ, ಸುರತರು ಅಡಗಿಹೋಯಿತ್ತು. ॥ ೩೬ ॥

೬೮೭
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಲಾಗದು,
ಮಾಡಿದರು ಮಾಡಿರಿ, ಬೇಡಿ ಮಾಡಲಾಗದು.
ಬೇಡಿ ಮಾಡಿದ ಭಕ್ತಿ ಈಡಾಗಲರಿಯದು
ಕೂಡಲ ಚೆನ್ನಸಂಗಯ್ಯಾ. ॥ ೩೭ ॥

೬೮೮
ಆಕಾಶದಲ್ಲಾಡುವ ಪಟಕ್ಕಾದಡೆಯೂ ಮೂಲಸೂತ್ರವಿರಬೇಕು.
ಕಲಿಯಾದಡೆಯೂ ಕಜ್ಜವಿಲ್ಲದೆ ಆಗದು.
ಭೂಮಿಯಿಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು.
ಕೂಡಲ ಚೆನ್ನಸಂಗಮದೇವರಲ್ಲಿ
ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯಬಹುದೆ ಪ್ರಭುವೆ? ॥ ೩೮ ॥

೬೮೯
ಆಚಾರಲಿಂಗವಿಡಿದು ಅನುಭಾವ ಲಿಂಗಸಿದ್ಧಿ.
ಅನುಭಾವಲಿಂಗವಿಡಿದು ಮಾರ್ಗಕ್ರಿಯಾಲಿಂಗಸಿದ್ಧಿ.
ಮಾರ್ಗಕ್ರಿಯಾಲಿಂಗವಿಡಿದು ಮೀರಿದ ಕ್ರಿಯಾಲಿಂಗಸಿದ್ಧಿ.
ಮೀರಿದ ಕ್ರಿಯಾಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ.
'ಲಿಂಗಜಾತಃ ಲಿಂಗಬೀಜಂ' ಎಂದುದಾಗಿ,
ಕೂಡಲ ಚೆನ್ನಸಂಗಯ್ಯಾ, ಲಿಂಗವಿಡಿದು ಲಿಂಗಸಿದ್ಧಿ. ॥ ೩೯ ॥

೬೯೦
ಆಚಾರವುಳ್ಳಡೆ ಗುರು,
ಆಚಾರವುಳ್ಳಡೆ ಲಿಂಗ,
ಆಚಾರವುಳ್ಳಡೆ ಜಂಗಮ,

ಆಚಾರವುಳ್ಳಡೆ ಪಾದೋದಕ,
ಆಚಾರವುಳ್ಳಡೆ ಪ್ರಸಾದ,
ಆಚಾರವುಳ್ಳಡೆ ಸದ್ಭಕ್ತ,
ಆಚಾರವುಳ್ಳಡೆ ದಾಸೋಹ.
ಆಚಾರವಿಲ್ಲದಿದ್ದಡೆ ಗುರುವಲ್ಲ, ನರನು.
ಆಚಾರವಿಲ್ಲದಿದ್ದಡೆ ಲಿಂಗವಲ್ಲ, ಶಿಲೆ.
ಆಚಾರವಿಲ್ಲದಿದ್ದಡೆ ಜಂಗಮನಲ್ಲ, ವೇಷಧಾರಿ.
ಆಚಾರವಿಲ್ಲದಿದ್ದಡೆ ಪಾದೋದಕವಲ್ಲ, ನೀರು.
ಆಚಾರವಿಲ್ಲದಿದ್ದಡೆ ಪ್ರಸಾದವಲ್ಲ, ಅಶನ.
ಆಚಾರವಿಲ್ಲದಿದ್ದಡೆ ಭಕ್ತನಲ್ಲ, ಭೂತಪ್ರಾಣಿ.
ಆಚಾರವಿಲ್ಲದಿದ್ದಡೆ ದಾಸೋಹದ ಮನೆಯಲ್ಲ, ವೇಶಿಯ ಗುಡಿಸಲು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಆಚಾರವಿಲ್ಲದವರಿಗೆ ನಾಯಕನರಕ ತಪ್ಪದು. || ೪೦ ||

೬೯೧
ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ,
ಸಮತೆಯೆಂಬ ತಿರುವ ಮೆಟ್ಟಿ ಜೇವೊಡೆಗೆಯ್ದು,
ಶಿಷ್ಯನೆಂಬ ಬಾಣವ ತೊಡಚಿ,
ಗುರುವೆಂಬ ವ್ಯಾಧನು ಲಿಂಗವೆಂಬ ಬಯಲ ಗುರಿಯನೆಚ್ಚಡೆ,
ಗರಿ ತೋರದಂತೆ ಮುಳುಗಿ ಅಡಗಿತ್ತು.
ಆ ಗರಿಯನು ಬಾಣವನು ಅರಸಲುಂಟೆ,
ಕೂಡಲ ಚೆನ್ನಸಂಗಾ ನಿಮ್ಮಲ್ಲಿ? || ೪೧ ||

೬೯೨
ಆಡಿನ ಕೊರಳಲ್ಲಿ ಮೊಲೆಯಿದ್ದರೇನು ಅಮೃತವುಂಟೆ?
ಭಕ್ತನಾದಲ್ಲಿ ಫಲವೇನು ಶಿವಪಥವನರಿಯದನ್ನಕ್ಕ?
ದಕ್ಕಾಲಿ ಬಿದ್ದ ಕಣ್ಣಿನಂತೆ,
ಜಂಗಮದ ಮೇಲೆ ಹರುಷವಿಲ್ಲದ ನೋಟ.
ಕೂಡಲ ಚೆನ್ನಸಂಗನ ಶರಣನ ಬೆರಸದ ಹರುಷ,
ಅರಸಿಯ ನೋಟದಂತೆ. || ೪೨ ||

೬೯೩
ಆತ್ಮನ ನಿಜವನರಿದು ಪರಮಾತ್ಮಲಿಂಗ ತಾನೆಂದರಿದ ಶರಣಂಗೆ
ಎಂತಿರ್ದಡಂತೆ ಪೂಜೆ ನೋಡಾ!

ಆ ಶರಣ ಭೋಗಿಸಿತ್ತೆಲ್ಲ ಲಿಂಗಾರ್ಪಿತ, ರುಚಿಸಿತ್ತೆಲ್ಲ ಪ್ರಸಾದ,
ಆ ಶರಣನರಿದುದೆಲ್ಲ ಪರಬ್ರಹ್ಮ, ನುಡಿದುದೆಲ್ಲ ಪರತತ್ತ್ವ,
ಆ ಶರಣ ತಾನೆ ಕೂಡಲ ಚೆನ್ನಸಂಗಯ್ಯನು. || ೪೩ ||

೬೯೪
ಆದ್ಯರ ವಚನವೇನು ಬಟ್ಟೆಯ ಸಂಬಳವೆ?
ಮನೆ ಮನೆಯ ಹೊಕ್ಕು ಬೋಧಿಸುವಂತಾಗಿ,
ಮನೆ ಮನೆಯ ಹೊಕ್ಕು ಮೆಚ್ಚಿಸುವಂತಾಗಿ.
ಇದು ಭಕ್ತಿಸ್ಥಲವೆ? ಇದು ಜಂಗಮಸ್ಥಲವೆ?
ಭಕ್ತನಾದರೆ ಭೃತ್ಯನಾಗಿರಬೇಕು.
ಈ ಎರಡೂ ಇಲ್ಲದ ಎಡೆಹಂಚರ ತೋರಿಸದಿರು
ಕೂಡಲ ಚೆನ್ನಸಂಗಮದೇವಾ. || ೪೪ ||

೬೯೫
ಆನೆಯನೇರಿದಡೇನಯ್ಯಾ, ಮಾನವರಿಗೆ ಕೈಯಾನುವಾತ?
ಬೇಡುವು[ದ] [ಬಿ]ಡಲಾರ, ಏರಿ ಬರ್ಪ ಹೆಮ್ಮೆಯ ನೋಡಾ !
ಭವದ ಬಟ್ಟೆಯಲ್ಲಿ ಬಿದ್ದ ಬ್ರಹ್ಮಚಾರಿಯ ಕಂಡು
ಕೂಡಲ ಚೆನ್ನಸಂಗಯ್ಯ ನಗುತಿರ್ದ. || ೪೫ ||

೬೯೬
ಆನೆಯನೇರಿದ ಮಾವತಿಗ ಚಕ್ರೇಶ್ವರನಾಗಬಲ್ಲನೆ ಅಯ್ಯಾ?
ವೇದಾಗಮಶಾಸ್ತ್ರ ಪುರಾಣಂಗಳನೋದಿ ಕೇಳಿ,
ನಡೆ ನುಡಿ ಪೂರಾಯವಾದ ಪುರಾತನರಾಗಬಲ್ಲರೆ ಅಯ್ಯಾ?
ಅದೆಂತೆಂದಡೆ : 'ಪೂರ್ಣಶ್ಚ ಪುರಾತನಃ' ಎಂದುದಾಗಿ.
ತೊತ್ತು ಲಕ್ಷಣವಿರಲು, ನಾಣ್ಯವನುಡಿಸಿ,
ನವರತ್ನಾಭರಣಂಗಳ ತೊಡಿಸಿ, ದಂಡಿಗೆಯನೇರಿಸಲು,
'ಶಂಕರಸ್ಯ ಯಥಾ ಗೌರೀ' ಎನಿಸಿಕೊಳ್ಳಬಲ್ಲಳೆ ಅಯ್ಯಾ?
ಖ್ಯಾತಿಗಾಗಿ ನಿಜತತ್ವಂಗಳನೋದಿ ಕೇಳಿ ಹೇಳಿದಡೇನು?
ಅದಕ್ಕೆ ತಕ್ಕ ಅರಿವು ಆಚಾರ ನಡೆನುಡಿಯಲ್ಲಿ ನಿರ್ಣಯವಿಲ್ಲದಿರ್ದಡೆ
ಕುಂಭೀಪಾತಕ ನಾಯಕನರಕ ತಪ್ಪದು,
ಕೂಡಲ ಚೆನ್ನಸಂಗಮದೇವಾ. || ೪೬ ||

೬೯೭
ಆರಂಬವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ
ಆ ಆರಂಬವೆ ಕೇಡು.

ವ್ಯವಹಾರವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ
ಆ ವ್ಯವಹಾರವೆ ಕೇಡು.
ಓಲಗವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ
ಆ ಓಲಗವೆ ಕೇಡು.
ಭಕ್ತಿಯ ಮಾಡಿ ಜನನ ಮರಣ ವಿರಹಿತನಾಗದಿದ್ದರೆ
ಆ ಭಕ್ತಿಯೆ ಕೇಡು, ಕೂಡಲಚೆನ್ನಸಂಗಮದೇವಾ. || ೪೭ ||

೧೯೮
ಆವಾವ ಪರಿಯಲ್ಲಿ ಆವಾವ ಭಾವದಲ್ಲಿ
ಗುರುಲಿಂಗಜಂಗಮಕ್ಕೆ ದಾಸೋಹವ ಮಾಡಿಹೆನೆಂಬ, ಕೂಡಿಹೆನೆಂಬ
ಸದ್ಭಕ್ತರ ಬಾಗಿಲ ತೋರಿ ಬದುಕಿಸಯ್ಯಾ.
ಎಲ್ಲವನೊಪ್ಪಿಸಿ 'ಲಿಂಗಜಂಗಮವೆನ್ನ ಪ್ರಾಣೇಶ್ವರ' ಎಂಬ
ಮಹಾಪುರಾತನರ ಪಾದರಕ್ಷೆಯ ಹೊತ್ತಿರಿಸೆನ್ನನು
ಕೂಡಲ ಚೆನ್ನಸಂಗಮದೇವಾ. || ೪೮ ||

೧೯೯
ಇಡುವ ಕೊಡುವ ಬಿಡುವ ಕಟ್ಟುವ
ಗೊಡವೆಗಾರನಯ್ಯಾ ಶರಣನು.
ಗಾಳಿಯ ಮರೆಯ ಜ್ಯೋತಿಯಂತೆ,
ಸುಖಸೂಸದೆ ಇಪ್ಪನು.
ತನ್ನರಿವು ಮರವೆಗಳೆಲ್ಲಾ ಪ್ರಾಣಲಿಂಗಾಧೀನವಲ್ಲದೆ,
ಮತ್ತೊಂದನರಿಯನು.
ಆಸರುವನಲ್ಲ ಬೇಸರುವನಲ್ಲ;
ಜಗದ ಕಳಕಳಕ್ಕೆ ಎದ್ದು ಹರಿದಾಡುವನಲ್ಲ.
ಸುಖಮುದ್ರಿತನು ಕೂಡಲ ಚೆನ್ನಸಂಗಾ ಲಿಂಗೈಕ್ಯನು. || ೪೯ ||

೨೦೦
ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ,
ಆವ ಸಂಗವೂ ಇಲ್ಲದ ನಿಜೈಕ್ಯನು.
ಬೇಕು ಬೇಡೆನ್ನದೆ, ಅಳಿದುಳಿದು
ಕರ್ಪುರದ ಗಿರಿಯನುರಿ ತಾಗಿದಂತೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯನು. || ೫೦ ||

೨೦೧
ಇನಿಗಬ್ಬಿನೊಳಗಿನ ತನಿರಸವನರಿಯದೆ
ಸೋಗೆಯ ಹೊರಗಿನ ರವದಿಯ ಸವಿದು ಸಂತಸಬಡುವ ಮೇಷದಂತೆ,
ಅಂತರಂಗದ ಆತ್ಮತೀರ್ಥವನುಳಿದು

ಹೊರಗಿನ ಜಡಭೌತಿಕ ತೀರ್ಥವ ಬೆದಕಿ ಬೆಂಡಾಗಿ
ಹಲವೆಡೆಗೆ ಹರಿವ ನರಗುರಿಗಳು,
ಕೈಸೇರಿದ ರತ್ನವನೊಗೆದು ಕಾಜಿನ ಗುಂಡನು ಕೊಂಡ
ಮರುಳನಂತಾಗಿಪ್ಪರು ನೋಡಾ!
ಆತ್ಮತೀರ್ಥಂ ಸಮುತ್ಸೃಜ್ಯ ಬಹಿಸ್ತೀರ್ಥಾಣಿ ಯೋ ವ್ರಜೇತ್।
ಕರಸ್ಥಂ ಸುಮಹಾರತ್ನಂ ತ್ಯಕ್ತ್ವಾ ಕಾಚಂ ವಿಮಾರ್ಗತೇ॥
ಎಂದುದಾಗಿ, ಕೂಡಲ ಚೆನ್ನಸಂಗಮದೇವಾ,
ನಿಮ್ಮ ನಿಲವಿನ ಗುರುಲಿಂಗಜಂಗಮವೆ ಎನ್ನ ಸ್ವರೂಪವೆಂದರಿದೆನಾಗಿ,
ಆ ಗುರುಲಿಂಗಜಂಗಮದ ಪಾದೋದಕವೆ
ಆತ್ಮತೀರ್ಥವಾಗಿಪ್ಪುದು ಕಾಣಾ.
ಅಂತಪ್ಪ ಆತ್ಮತೀರ್ಥವ ಪಡೆದು ಪರಮಪವಿತ್ರನಾಗಿಪ್ಪೆನು. ॥ ೫೧ ॥

೭೦೨
ಇಲ್ಲದ ಮಾಯೆಯನುಂಟುಮಾಡಿಕೊಂಡು
ಬಲ್ಲತನಕ್ಕೆ ಬಾಯ ಬಿಡಲೇತಕೊ?
ಇಲ್ಲದ ಮಾಯೆಯ ಇಲ್ಲೆನಲರಿಯದೆ
ತಲ್ಲಣಿಸಿ ಬಾಯ ಬಿಡಲೇತಕೊ?
ಎಲ್ಲವ, ತನ್ನ ತಾ ತಿಳಿದು ನೋಡಿದಡೆ
ಕೂಡಲ ಚೆನ್ನಸಂಗಯ್ಯ ತಾನೆ ಬೇರಿಲ್ಲ. ॥ ೫೨ ॥

೭೦೩
ಇಲ್ಲದ ಸಂಸಾರ ಕಣ್ಣ ಮುಂದೆ ರೂಪಾಗಿ ಕಾಡುತ್ತಿರ್ದಡೆ,
ಸುಜ್ಞಾನವೆಂಬ ಅಂಜನವ ಹಚ್ಚಿ,
ಸಕಲಭ್ರಮೆಯೆಂಬ ಕತ್ತಲೆಯ ಕಳೆದು,
ನಿಜಲಿಂಗಸಂಬಂಧವ ನೆಲೆಗೊಳಿಸಿ, ನಿತ್ಯದಲ್ಲಿ ಅಚ್ಚೊತ್ತಿದನಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಭುವಿನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು. ॥ ೫೩ ॥

೭೦೪
ಇಷ್ಟಲಿಂಗ ಪ್ರಾಣಲಿಂಗವೆಂದೆಂಬಿರಿ,
ಇಷ್ಟಲಿಂಗವಾವುದು ಪ್ರಾಣಲಿಂಗವಾವುದು
ಬಲ್ಲರೆ ನೀವು ಹೇಳಿರೆ?
ಇಷ್ಟಲಿಂಗವೆಂಬುದು ದರ್ಪಣ,
ಪ್ರಾಣಲಿಂಗವೆಂಬುದು ಪ್ರತಿಬಿಂಬ.
ದರ್ಪಣ ಮಸುಳಿಸಿದಡೆ

ಪ್ರತಿಬಿಂಬವ ಕಾಣಬಹುದೆ? ಬಾರದು.
ಇಷ್ಟಲಿಂಗಪೂಜೆ ಮಸುಳಿಸಿದಡೆ,
ಪ್ರಾಣಲಿಂಗವ ಕಾಣಬಹುದೆ? [ಬಾರದು].
ಇಷ್ಟಲಿಂಗಮವಿಶ್ವಸ್ಯ ಪ್ರಾಣಲಿಂಗಂ ನ ಪಶ್ಯತಿ।
ದರ್ಪಣಪ್ರತಿಬಿಂಬಸ್ತು ಯಥಾರೂಪಂ ತಥಾ ಭವೇತ್॥"
ಇದು ಕಾರಣ, ಕೂಡಲ ಚೆನ್ನಸಂಗಮದೇವಾ,
ಇಷ್ಟದಲ್ಲಿ ಪ್ರಾಣತೃಪ್ತಿಯಾದವರ ತೋರಿ ಬದುಕಿಸಯ್ಯಾ. || ೫೪ ||

೭೦೫
ಇಷ್ಟಲಿಂಗ ಸಂಬಂಧವಾದ ಬಳಿಕ
ಕಾಯಗುಣ ಕೆಟ್ಟು, ಲಿಂಗಕಾಯವಾಯಿತ್ತು.
ಪ್ರಾಣಲಿಂಗ ಸಂಬಂಧವಾದ ಬಳಿಕ
ಕರಣಗುಣ ಕೆಟ್ಟು, ಲಿಂಗಕರಣಂಗಳಾದುವು.
ಭಾವಲಿಂಗ ಸಂಬಂಧವಾದ ಬಳಿಕ
ಇಂದ್ರಿಯಗುಣ ಕೆಟ್ಟು, ಲಿಂಗೇಂದ್ರಿಯಗಳಾದುವು.
ಇದು ಕಾರಣ, ಶರಣಂಗೆ ಬೇರೆ ಲಿಂಗವಿಲ್ಲ, ಬೇರೆ ಅಂಗವಿಲ್ಲ.
ಅರ್ಪಿತ ಅನರ್ಪಿತವೆಂಬ ಉಭಯ ಶಂಕೆ ಹಿಂಗಿತ್ತು,
ಕೂಡಲ ಚೆನ್ನಸಂಗಯ್ಯಾ ನಿನ್ನೊಳಡಗಿದ ನಿಜೈಕ್ಯಂಗೆ. || ೫೫ ||

೭೦೬
ಉಂಬ ಬಾಯೊಳು ಊಡಿಸಿಕೊಂಬ ಬಾಯಿಯಿದೇನಯ್ಯಾ!
ನೋಡುವ ನಯನದೊಳು ನೋಡಿಸಿಕೊಂಬ ನಯನವಿದೇನಯ್ಯಾ!
ಕೇಳುವ ಶ್ರೋತ್ರದೊಳು ಕೇಳಿಸಿಕೊಂಬ ಶ್ರೋತ್ರವಿದೇನಯ್ಯಾ!
ವಾಸಿಸುವ ವಾಸನೆಯೊಳು ವಾಸಿಸಿಕೊಂಬ ನಾಸಿಕವಿದೇನಯ್ಯಾ!
ಮುಟ್ಟುವ ಪರುಶದೊಳು ಮುಟ್ಟಿಸಿಕೊಂಬ ಪರುಶವಿದೇನಯ್ಯಾ!
ಇಂತಿವರೊಳಗೆ ನೀನಿಪ್ಪ ಅನುವನಾರು ಬಲ್ಲರು
ಕೂಡಲ ಚೆನ್ನಸಂಗಮದೇವಾ? || ೫೬ ||

೭೦೭
ಉಂಬುದು ಊಡುವುದು ಶಿವಾಚಾರ,
ಕೊಂಬುದು ಕೊಡುವುದು ಕುಲಾಚಾರ ಎಂಬ
ಅನಾಚಾರಿಯ ಮಾತ ಕೇಳಲಾಗದು.
ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೆ ಎಂದು,
ಕೊಟ್ಟು ಕೊಂಬುದು ಸದಾಚಾರ, ಉಳಿದುದೆಲ್ಲಾ ಅನಾಚಾರ.
ಅದೆಂತೆಂದಡೆ:

ಸ್ಫಟಿಕದ ಕೊಡದಲ್ಲಿ ಕಾಳಿಕೆಯನರಸುವ ಹಾಗೆ,
ಸಿಹಿಯೊಳಗೆ ಕಹಿಯನರಸುವ ಹಾಗೆ,
ರಜಸ್ಸೂತಕ ಕುಲಸೂತಕ ಜನನಸೂತಕ
ಪ್ರೇತಸೂತಕ ಉಚ್ಛಿಷ್ಟಸೂತಕ ಎಂದಡೆ,
ಆತಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ತೀರ್ಥಪ್ರಸಾದವಿಲ್ಲ.
ಇಂತೀ ಪಂಚಸೂತಕವ ಕಳೆದಲ್ಲದೆ ಭಕ್ತನಾಗ.
ಇಂತಹ ಭಕ್ತರಲ್ಲಿ ಕೊಟ್ಟು ಕೊಂಬುದು ಸದಾಚಾರ,
ಕೂಡಲಚೆನ್ನಸಂಗಮದೇವಾ. || ೫೭ ||

೭೦೮
ಉಚ್ಛಿಷ್ಟದ ಉದಕದೊಳಗೆ ಚಂದ್ರಮನ ನೆಳಲಿದ್ದಡೇನು,
ಅಲ್ಲಿ ಚಂದ್ರಮನಿದ್ದಾತನೆ?
ಸಂಸಾರದ ವ್ಯಾಪ್ತಿಯಲ್ಲಿ ಶರಣನ ಕಾಯವಿರ್ದಡೇನು,
ಅಲ್ಲಿ ಶರಣನಿದ್ದಾತನೆ?
ಕೆಸರೊಳಗಣ ತಾವರೆಯಂತೆ, ಮಠದೊಳಗಣ ಬಯಲಿನಂತೆ,
ಮಮ ಸಾಹಿತ್ಯರೂಪೇಣ ತಮೋಮಾಯೇ ವಿವರ್ಜಯೇತ್।
ಮೇಘನಿರ್ಮಲತೋಯಸ್ಥ ಕಮಲಪತ್ರಮಿವಾಚರೇತ್॥
ಇಂತೆಂದುದಾಗಿ, ಇದ್ದೂ ಇರನು,
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣನು ಉಂಡುಪವಾಸಿ, ಬಳಸಿ ಬ್ರಹ್ಮಚಾರಿ. || ೫೮ ||

೭೦೯
ಉಟ್ಟುದನಳಿದು ಬತ್ತಲೆಯಿದ್ದಡೇನು?
ಅಶನವರತು, ವ್ಯಸನ ನಿಂದು,
ವ್ಯಾಪ್ತಿಗಳು ತಲ್ಲೀಯವಾಗಿದ್ದಡೇನು?
ಮುಟ್ಟಬಾರದ ಠಾವ ಮರೆಗೊಂಡಿಪ್ಪನು,
ಕೂಡಲ ಚೆನ್ನಸಂಗಮದೇವನು. || ೫೯ ||

೭೧೦
ಉಣ್ಣೆ ಕೆಚ್ಚಲ ಹತ್ತಿದ್ದರೇನು ಕ್ಷೀರವದಕುಂಟೆ?
ತಗಣೆ ತನುವ ಹತ್ತಿದ್ದರೇನು
ಅಂಗನೆಯರ ಸುರತದ ಸುಖವ ಬಲ್ಲುದೆ?
ಗಿಳಿ ಓದಿದರೇನು ಲಿಂಗವೇದಿಯಪ್ಪುದೆ?

ಹೇಸರ ಏಸು ದೊಡ್ಡದಾದರೇನು ತೇಜಿಯಾಗಬಲ್ಲುದೆ?
ತತ್ವದ ಮಾತು ಅಂಗಸಂಗಿಗಳಿಗೇಕೆ? ಭರ್ಗನ ಸಂಗ ಭವಿಗೇಕೆ?
ಪಟ್ಟೆಯ ಪವಳದ ಗುಡಿಗೂಡಾರವೇಕೆ ಗೂಗೆಗೆ?
ಗವುಡರ ಮನೆಯ ತೊತ್ತಿಂಗೆ ಬಲ್ಲಹನಾಣೆಯೇಕೆ?
ಕೀಳು ಕುಲದೈವಕ್ಕೆರಗಿ ನರಕಕ್ಕಿಳಿವ ದುರಾಚಾರಿಗಳಿಗೆ
ಶಿವಾಚಾರವಳವಡುವುದೆ, ಕೂಡಲ ಚೆನ್ನಸಂಗಮದೇವಾ? || ೬೦ ||

೭೧೧
ಉದಯ ಮಧ್ಯಾಹ್ನ ಅಸ್ತಮಾನ ತ್ರಿಕಾಲದಲ್ಲಿ
ಪತ್ರೆ ಪುಷ್ಪ ಅಗ್ಗಣಿಯ ತಂದು ಮಜ್ಜನಕ್ಕೆ ನೀಡೆಹೆನೆಂದಡೆ,
ನೆನೆಯದು, ಬಲಿಯದು, ಗರಿಗಟ್ಟಿದಯ್ಯಾ.
ನೀರ ತೋರಿದಡೆ ಒಂದು ಹನಿಯನೂ ಮುಟ್ಟದು.
ನಿಮ್ಮ ಲಿಂಗದ ಪೂಜೆ ನಮ್ಮ ಜಂಗಮದ ಉದಾಸೀನ:
ಇದ ಕಂಡು ನಾ ಬೆರಗಾದೆ, ಕೂಡಲ ಚೆನ್ನಸಂಗಮದೇವಾ. || ೬೧ ||

೭೧೨
ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ,
ಮಾಡುವ ಕರ್ಮಿ ನೀ ಕೇಳಾ.
ಉದಯವೆಂದೇನೊ ಶರಣಂಗೆ?
ಅಸ್ತಮಾನವೆಂದೇನೊ ಶರಣಂಗೆ?
ಮಹಾಮೇರುವಿನ ಮರೆಯಲ್ಲಿರ್ದು
ತಮ್ಮ ನೆಳಲನರಸುವ ಭಾವಭ್ರಮಿತರ ಮೆಚ್ಚ
ನಮ್ಮ ಕೂಡಲ ಚೆನ್ನಸಂಗಮದೇವ. || ೬೨ ||

೭೧೩
ಉದಯಮುಖದಲ್ಲಿ ಹುಟ್ಟಿದ ಬಿಸಿಲ
ಲಿಂಗಾರ್ಪಿತವ ಮಾಡಬೇಕು.
ಅಸ್ತಮಾನಮುಖದಲ್ಲಿ ಹುಟ್ಟಿದ ನೆಳಲ
ಲಿಂಗಾರ್ಪಿತವ ಮಾಡಬೇಕು.
ಅಧಃ ಊರ್ಧ್ವ ಮಧ್ಯವನು
ಲಿಂಗಾರ್ಪಿತವ ಮಾಡಬೇಕು.
ಅಂಬರಮುಖದಲ್ಲಿ ಹುಟ್ಟಿದ ನಿರ್ಮಳೋದಕವನು
ಲಿಂಗಾರ್ಪಿತವ ಮಾಡಬೇಕು.
ಬಯಲಮುಖದಲ್ಲಿ ಹುಟ್ಟಿದ ವಾಯುವನು
ಲಿಂಗಾರ್ಪಿತವ ಮಾಡಬೇಕು.

ಆವ ಪದಾರ್ಥವಾದರೇನು? ಲಿಂಗಾರ್ಪಿತವ ಮಾಡಬೇಕು.
ಕೂಡಲಚೆನ್ನಸಂಗಯ್ಯಾ
ಲಿಂಗಾರ್ಪಿತವಲ್ಲದೆ ಕೊಂಡರೆ ಕಿಲ್ಬಿಷವೆಂಬುದು. || ೬೩ ||

೭೧೪
ಉದಯಾಸ್ತಮಾನವೆಂಬ ಕೊಳಗದಲ್ಲಿ,
ಆಯುಷ್ಯವೆಂಬ ರಾಸಿಯನಳೆವರು
ರಾಸಿ ತೀರದ ಮುನ್ನ ಸಟೆಯ ಸಡಗರ ಬಿಟ್ಟು,
ಶಿವಲಿಂಗಾರ್ಚನೆಯ ಮಾಡುವುದು.
ಕೂಡಲ ಚೆನ್ನಸಂಗಯ್ಯಾ,
ಇದ ಮಾಡದಿರ್ದಡೆ ನಾಯಕನರಕ. || ೬೪ ||

೭೧೫
ಉಪದೇಶವ ಮಾಡಿದ ಗುರುವೊಂದೆ, ಲಿಂಗವೊಂದೆಯಲ್ಲದೆ,
ಸತಿಗೊಂದು ಲಿಂಗ, ಸುತಗೊಂದು ಲಿಂಗ,
ಸೋದರಗೊಂದು ಲಿಂಗ, ದಾಸಿಗೊಂದು ಲಿಂಗ.
ಇಂತು ಒಂದು ಮನೆಗೆ ಗುರುಲಿಂಗವನೆರಡು ಮಾಡಿದರೆ
ಮೆಚ್ಚರು, ನಮ್ಮ ಕೂಡಲ ಚೆನ್ನಸಂಗನ ಶರಣರು. || ೬೫ ||

೭೧೬
ಉಭಯ ತನುಗುಣವಳಿದಲ್ಲದೆ ಅರಿವಿನಾಚಾರವಳವಡದು.
ಅರಿವಿನಾಚಾರ ಅಳವಟ್ಟಲ್ಲದೆ ಲಿಂಗದ ಬೆಳಗು ದೊರೆಕೊಳ್ಳದು.
ಲಿಂಗದ ಬೆಳಗು ದೊರೆಕೊಂಡಲ್ಲದೆ
ಕೂಡಲ ಚೆನ್ನಸಂಗಯ್ಯನಲ್ಲಿ ಪರಿಣಾಮ ದೊರೆಕೊಳ್ಳದು. || ೬೬ ||

೭೧೭
ಉಭಯದಳವು ನಡೆದು ಬಂದು ಮುಂದೆ ನಿಂದಿರ್ದು,
ಭಾಷೆಯಾಗಿ ಬಿರಿದನುಚ್ಚರಿಸುತ್ತ
ಹೊಯಿಕುಟ್ಟಿಯಾಡುವ ಕಾಳಗದೊಳಗೆ
ಕೈದು ಬಿದ್ದಡೆ ಭಂಗವಲ್ಲದೆ
ಶಸ್ತ್ರಸಾಧಕ ಕಲಿತೇನೆಂದು ಅಭ್ಯಾಸಮಾಡುವ ಅಭ್ಯಾಸದೊಳಗೆ
ಕೋಲು ಬಿದ್ದರೆ ಭಂಗವೆ? ಅಲ್ಲ.
ಮತ್ತೆ ಮರಳಿ ಕೋಲ [ತ]ಳೆದುಕೊಂಡು
ಅಭ್ಯಾಸ ಮಾಡುವುದೇ ಉಚಿತವಲ್ಲದೆ,
ನಾನಿನ್ನು ಅಭ್ಯಾಸವ ಮಾಡಲಾಗದು
ಕೋಲು ಬಿದ್ದಿತ್ತೆಂಬ ಗಾವಿಲರ ಮಾತ ಕೇಳಲಾಗದು.

ದೃಷ್ಟವೇ ಕೋಲು, ಅದೃಷ್ಟವೆ ಕೈದು.
ಕಾಣಬಾರದ ಲಿಂಗವ ಕಾಬುದು ತನ್ನ ಸತ್‌ಕ್ರೀ ಕಾಣಾ,
ಕೂಡಲ ಚೆನ್ನಸಂಗಯ್ಯಾ. || ೬೭ ||

೭೧೮
ಉಲಿಗರ ಮಾತು, ಊರುಗರ ತೋಟಿಯೊಳಗುಂಟೆ
ಲಿಂಗಾನುಭಾವ?
ರಚ್ಚೆಯ ಕೆಟ್ಟ ಬೀದಿಯ ಮಾತಿನೊಳಗುಂಟೆ
ಲಿಂಗಾನುಭಾವ?
ಸಂತೆಯೊಳಗೆ ಸಮಾಧಿಯುಂಟೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯನ ಅನುಭಾವ
ಹೊರವೇಷದ ವಾಚಾಳರಿಗೆಲ್ಲಿಯದು? || ೬೮ ||

೭೧೯
ಊರ ಮುಂದೆ ಶ್ವಾನನ ಕಾಣಬಹುದಲ್ಲದೆ,
ಸಿಂಹವ ಕಾಣಬಾರದು.
ನದಿಯ ಮುಂದೆ ಬಕನ ಕಾಣಬಹುದಲ್ಲದೆ,
ಹಂಸನ ಕಾಣಬಾರದು.
ಪಸರದೊಳಗೆ ಗಾಜಿನ ಮಣಿಯ ಕಾಣಬಹುದಲ್ಲದೆ,
ರತ್ನವ ಕಾಣಬಾರದು.
ಧರೆಯ ಮೇಲೆ ವೇಷಧಾರಿಗಳ ಕಾಣಬಹುದಲ್ಲದೆ,
ಶಿವಜ್ಞಾನಿಗಳ ಕಾಣಬಾರದು, ಕೂಡಲಚೆನ್ನಸಂಗಮದೇವಾ. || ೬೯ ||

೭೨೦
ಎಂಜಲ ಮಾತು ನುಡಿವ ರಂಜಕರೆಲ್ಲರು
ಮಿಗೆ ಮಿಗೆ ಮೀಸಲ ತಾವೆತ್ತ ಬಲ್ಲರು?
ಮೀಸಲು ಎಂಜಲಹುದೆ? ಎಂಜಲು ಮೀಸಲಹುದೆ?
ಮಾತಿನ ಬಣಬೆಯ ಮೇದ ಪಶು ಪ್ರಾಣಿಯಂತೆ
ಎಂಜಲಮಾತನೆ ನುಡಿಯುತ್ತಿಹರು,
ಲಿಂಗಸಕೀಲಸಂಯೋಗದ ವರ್ಮಸ್ಥಳವನವರೆತ್ತ ಬಲ್ಲರು!
ಕೂಡಲ ಚೆನ್ನಸಂಗಯ್ಯಾ,
ಉಪದೇಶಸೂತಕಿಗಳೆಲ್ಲರೂ ರೌರವನರಕಿಗಳು. || ೭೦ ||

೭೨೧
ಎನ್ನ ಕಾಯಕ್ಕೆ ಸೀಮೆಯ ಮಾಡುವೆನು,
ಎನ್ನ ಕಾಯದೊಳಗಿರ್ದ ಕರಣಾದಿ ಗುಣಂಗಳಿಗೆ ಸೀಮೆಯ ಮಾಡುವೆನು.

ಎನ್ನ ಶ್ರೋತ್ರಕ್ಕೆ ಸೀಮೆಯ ಮಾಡುವೆನು,
ಎನ್ನ ಶ್ರೋತ್ರದೊಳಗಿರ್ದ ಶಬ್ದಕ್ಕೆ ಸೀಮೆಯ ಮಾಡುವೆನು.
ಎನ್ನ ತ್ವಕ್ಕಿಗೆ ಸೀಮೆಯ ಮಾಡುವೆನು,
ಎನ್ನ ತ್ವಕ್ಕಿನೊಳಗಿರ್ದ ಸ್ಪರ್ಶಕ್ಕೆ ಸೀಮೆಯ ಮಾಡುವೆನು.
ಎನ್ನ ನಯನಕ್ಕೆ ಸೀಮೆಯ ಮಾಡುವೆನು,
ಎನ್ನ ನಯನದೊಳಗಿರ್ದ ರೂಪಕ್ಕೆ ಸೀಮೆಯ ಮಾಡುವೆನು.
[ಎನ್ನ ಜಿಹ್ವೆಗೆ ಸೀಮೆಯ ಮಾಡುವೆನು,
ಎನ್ನ ಜಿಹ್ವೆಯೊಳಗಿರ್ದ ರಸಕ್ಕೆ ಸೀಮೆಯ ಮಾಡುವೆನು]
ಎನ್ನ ಘ್ರಾಣಕ್ಕೆ ಸೀಮೆಯ ಮಾಡುವೆನು,
ಎನ್ನ ಘ್ರಾಣದೊಳಗಿರ್ದ ಗಂಧಕ್ಕೆ ಸೀಮೆಯ ಮಾಡುವೆನು.
ಎನ್ನ ಮನಕ್ಕೆ ಸೀಮೆಯ ಮಾಡುವೆನು,
ಎನ್ನ ಮನದೊಳಗಿರ್ದ ಮರವೆಗೆ ಸೀಮೆಯ ಮಾಡುವೆನು.
ಎನ್ನ ಭಾವಕ್ಕೆ ಸೀಮೆಯ ಮಾಡುವೆನು,
ಎನ್ನ ಭಾವದೊಳಗಿರ್ದ ಭ್ರಾಂತಿಗೆ ಸೀಮೆಯ ಮಾಡುವೆನು.
ಎನ್ನ ಪ್ರಾಣಕ್ಕೆ ಸೀಮೆಯ ಮಾಡುವೆನು,
ಎನ್ನ ಪ್ರಾಣವ ಲಿಂಗದಲ್ಲಿ ಹಿಂಗದಂತೆ ನಿಲಿಸುವೆನು
ಕೂಡಲ ಚೆನ್ನಸಂಗಮದೇವಾ. || ೭೧ ||

೭೨೨
ಎನ್ನ ಕಾಯದೊಳಗೆ ನಿನ್ನ ಕಾಯವಿಪ್ಪುದು,
ನಿನ್ನ ಕಾಯದೊಳಗೆ ಎನ್ನ ಕಾಯವಿಪ್ಪುದು.
ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು,
ನಿನ್ನ ಜೀವದೊಳಗೆ ಎನ್ನ ಜೀವವಿಪ್ಪುದು.
ಎನ್ನ ಪ್ರಾಣದೊಳಗೆ ನಿನ್ನ ಪ್ರಾಣವಿಪ್ಪುದು,
ನಿನ್ನ ಪ್ರಾಣದೊಳಗೆ ಎನ್ನ ಪ್ರಾಣವಿಪ್ಪುದು.
ಎನ್ನ ಇಂದ್ರಿಯಂಗಳೊಳಗೆ ನಿನ್ನ ಇಂದ್ರಿಯಂಗಳಿಪ್ಪವು,
ನಿನ್ನ ಇಂದ್ರಿಯಂಗಳೊಳಗೆ ಎನ್ನ ಇಂದ್ರಿಯಂಗಳಿಪ್ಪವು.
ಎನ್ನ ವಿಷಯಂಗಳೊಳಗೆ ನಿನ್ನ ವಿಷಯಂಗಳಿಪ್ಪವು,
ನಿನ್ನ ವಿಷಯಂಗಳೊಳಗೆ ಎನ್ನ ವಿಷಯಂಗಳಿಪ್ಪವು.
ಎನ್ನ ಕರಣಂಗಳೊಳಗೆ ನಿನ್ನ ಕರಣಂಗಳಿಪ್ಪವು.
ನಿನ್ನ ಕರಣಂಗಳೊಳಗೆ ಎನ್ನ ಕರಣಂಗಳಿಪ್ಪವು.
ಇಂತು ನಾನೆ ರೂಪು, ನೀನೆ ನಿರೂಪು,
ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ.
ಆನು ಕರ್ಪೂರ, ನೀನು ಜ್ಯೋತಿ.
ಆನು ನಿಮ್ಮೊಳಡಗಿದೆನು ಕೂಡಲ ಚೆನ್ನಸಂಗಮದೇವಾ. || ೭೨ ||

೭೨೩
ಎನ್ನ ಘ್ರಾಣದ ಬಾಗಿಲಲ್ಲಿರ್ದು,
ಸುವಾಸನೆಯ ಸುಖಂಗಳ ಭೋಗಿಸುವಾತ ನೀನಯ್ಯಾ.
ಎನ್ನ ಜಿಹ್ವೆಯ ಬಾಗಿಲಲ್ಲಿರ್ದು,
ಸುರುಚಿಯ ಸುಖಂಗಳ ಭೋಗಿಸುವಾತ ನೀನಯ್ಯಾ.
ಎನ್ನ ನೇತ್ರದ ಬಾಗಿಲಲ್ಲಿರ್ದು,
ಸುರೂಪ ಸುಖಂಗಳ ಭೋಗಿಸುವಾತ ನೀನಯ್ಯಾ.
ಎನ್ನ ತ್ವಕ್ಕಿನ ಬಾಗಿಲಲ್ಲಿರ್ದು,
ಸುಸ್ಪರ್ಶವ ಮಾಡಿ ಆ ಸ್ಪರ್ಶನ ಸುಖವ ಸುಖಿಸುವಾತ ನೀನಯ್ಯಾ.
ಎನ್ನ ಶ್ರೋತ್ರದ ಬಾಗಿಲಲ್ಲಿರ್ದು
ಸುಶಬ್ದ ಸುಖಂಗಳ ಭೋಗಿಸುವಾತ ನೀನಯ್ಯಾ.
ಎನ್ನ ಮನದ ಬಾಗಿಲಲ್ಲಿರ್ದು
ಪಂಚೇಂದ್ರಿಯಂಗಳನರಿದು ಸುಖಿಸುವ ಅರಿವಿನ ಮೂರ್ತಿ ನೀನಯ್ಯಾ.
ಅದೇನು ಕಾರಣವೆಂದಡೆ:
ನೀನಾಡಿಸುವ ಜಂತ್ರದ ಬೊಂಬೆ ನಾನೆಂದರಿದ ಕಾರಣ.
ನಿಮ್ಮ ಕರಣಂಗಳೆ ಎನ್ನ ಹರಣಂಗಳಾಗಿ,
ಎನ್ನ ಹರಣಂಗಳೆ ನಿಮ್ಮ ಕರಣಂಗಳಾಗಿ
ಕೂಡಲ ಚೆನ್ನಸಂಗಮದೇವಾ, ನೀನಾಡಿಸಿದಂತೆ ನಾನಾಡಿದೆನಯ್ಯಾ. ॥ ೭೩ ॥

೭೨೪
ಎನ್ನಂತರಂಗದಲ್ಲಿದ್ದ ನಿರವಯ ಲಿಂಗವ ತಂದು, ಸಾವಯ ಲಿಂಗವ ಮಾಡಿ
ಎನ್ನ ಕರಸ್ಥಲಕ್ಕೆ ಕೊಟ್ಟನು ಶ್ರೀ ಗುರುಸ್ವಾಮಿ.
ಆ ಲಿಂಗವೆನ್ನ ಸರ್ವೇಂದ್ರಿಯಂಗಳನಾವರಿಸಿ,
ಕರಣಂಗಳೆಲ್ಲ ಕಿರಣಂಗಳಾಗಿ
ಬೆಳಗಿ ತೋರುವ ಚಿದಾಕಾಶವೆ ಪ್ರಾಣಲಿಂಗವೆಂದರಿದು,
ವಿಚಾರಿಸಿ ತಿಳಿದ ತಿಳಿವು
ಪರಮಾನಂದವನೆಯ್ದಿದ ಮೂಲಚೈತನ್ಯವೆ ಭಾವಲಿಂಗ.
ಇದನರಿದು ನೋಡುವ ಭಾವ ಪರಿಪೂರ್ಣವಾಗಿ ತಾನಹನಲ್ಲದೆ
ಇದಿರಿಟ್ಟು ತೋರುವುದಿಲ್ಲ.
ಅಖಂಡ ಪರಿಪೂರ್ಣವಪ್ಪ ನಿಲವು ತಾನೆ,
ಕೂಡಲ ಚೆನ್ನಸಂಗಮದೇವ. ॥ ೭೪ ॥

೭೨೫
ಎನ್ನ ಶ್ರೋತ್ರದ ಕೊನೆಯಲ್ಲಿರ್ದು ಸುಶಬ್ದವನರಿವಾತನು ನೀನೆ.
ಎನ್ನ ತ್ವಕ್ಕಿನ ಕೊನೆಯಲ್ಲಿರ್ದು ಸುಸ್ಪರ್ಶನವ ಮುಟ್ಟುವಾತನು ನೀನೆ.

ಎನ್ನ ನೇತ್ರದ ಕೊನೆಯಲ್ಲಿರ್ದು ಸುರೂಪವನರಿವಾತನು ನೀನೆ.
ಎನ್ನ ಜಿಹ್ವೆಯ ಕೊನೆಯಲ್ಲಿರ್ದು ಸುರುಚಿಯನರಿವಾತನು ನೀನೆ.
ಎನ್ನ ಘ್ರಾಣದ ಕೊನೆಯಲ್ಲಿರ್ದು ಸುವಾಸನೆಯನರಿವಾತನು ನೀನೆ.
ಎನ್ನ ಸರ್ವಾಂಗದಲ್ಲಿರ್ದು ಸರ್ವಭೋಗೋಪಭೋಗವ
ಭೋಗಿಸುವಾತನೂ ನೀನೆ, ಕೂಡಲ ಚೆನ್ನಸಂಗಮದೇವಾ. || ೭೫ ||

೭೨೬
ಎನ್ನ ಸದ್ಗುರುಸ್ವಾಮಿ ಎನಗೆ ಕರುಣಿಸಿದ ಕಾರುಣ್ಯವ
ನಾನೇನೆಂದುಪಮಿಸುವೆನಯ್ಯಾ?
ಗುರುಲಿಂಗವು ಸಾಕ್ಷಾತ್ ಪರಶಿವನಿಂದ ವಿಶೇಷವು.
ಜ್ಯೋತಿಯಲೊದಗಿದ ಜ್ಯೋತಿಯಂತಾಯಿತ್ತು,
ದರ್ಪಣದೊಳಗಣ ಪ್ರತಿಬಿಂಬದಂತಾಯಿತ್ತು,
ಪದಕದೊಳಗಿರಿಸಿದ ರತ್ನದಂತಾಯಿತ್ತು,
ರೂಪದ ನೆಳಲಿನ ಅಂತರಂಗದಂತಾಯಿತ್ತು.
ಕೂಡಲ ಚೆನ್ನಸಂಗಯ್ಯಾ,
ದರ್ಪಣಕ್ಕೆ ದರ್ಪಣವ ತೋರಿದಂತಾಯಿತ್ತು,
ಎನ್ನ ಸದ್ಗುರುವಿನುಪದೇಶವೆನಗಯ್ಯಾ. || ೭೬ ||

೭೨೭
ಏಕಭಾಜನ ಏಕಭಾಜನವೆಂದೆಂಬರು, ನಾವಿದನರಿಯೆವಯ್ಯಾ.
ಅಂಗದ ಮೇಲೆ ಪ್ರಾಣಲಿಂಗಪ್ರತಿಷ್ಠೆಯಾದ ಬಳಿಕ,
ಲಿಂಗಕ್ಕೆಯೂ ತನಗೆಯೂ ಏಕಭಾಜನವಲ್ಲದೆ ಭಿನ್ನಭಾಜನವುಂಟೆ?
ಲಿಂಗಕ್ಕೆಯೂ ತನಗೆಯೂ ಏಕಭಾಜನವಾಗದನ್ನಕ್ಕರ
ಅಂಗದ ಕಳೆಯಲ್ಲಿ ಲಿಂಗವ ಧರಿಸಿಕೊಳಬಹುದೆ?
ಇದನರಿದು ಏಕಭಾಜನವಾಗದಿರ್ದಡೆ ಅಂತು ದೋಷ.
ಈ ಕುಳಸ್ಥಳದ ಭೇದವ ಭೇದಿಸಬಲ್ಲ
ಕೂಡಲ ಚೆನ್ನಸಂಗಾ, ನಿಮ್ಮ ಶರಣ. || ೭೭ ||

೭೨೮
ಒಬ್ಬರಿಗೊಬ್ಬರು ಮಚ್ಚರಿಸಿ
ನರಕಕ್ಕೆ ಇಳಿಯ ಹೇಳಿಕೊಟ್ಟನೆ ಶ್ರೀಗುರು ಲಿಂಗವನು?
ಶಿವಭಕ್ತರು ಮದ ಮಚ್ಚರವ ಬಿಟ್ಟು
ಗುರುಲಿಂಗಜಂಗಮಕ್ಕೆ ಮಾಡುವ ಸದ್ಭಕ್ತನ ಶಿವನೆಂದು ಕಾಣದಿದ್ದರೆ
ಅಘೋರ ನರಕದಲ್ಲಿಕ್ಕುವ, ಕೂಡಲ ಚೆನ್ನಸಂಗಮದೇವ. || ೭೮ ||

೭೨೯
ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತು,
ಕಿತ್ತಿ ಕಿತ್ತಿ ಮತ್ತೆ ಬಿತ್ತುತ್ತ ಹೋದಡೆ,
ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು
ಬೆಳಸನೀವ ಪರಿಯಿನ್ನೆಂತೊ, ಮರುಳು ಮಾನವಾ!
ಗುರುವಿತ್ತ ಲಿಂಗವ ತೊರೆ ತೊರೆದು, ಮರಳಿ ಮರಳಿ ಧರಿಸಿದಡೆ,
ಆ ಇಷ್ಟಲಿಂಗವು ಅನಿಷ್ಟವ ಕಳೆದು
ಇಷ್ಟಾರ್ಥವನೀವ ಪರಿಯಿನ್ನೆಂತೊ?
ಇದು ಕಾರಣ,
ಕೂಡಲಚೆನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ
ಅಂಗದಲ್ಲಿ ಹೆರೆಹಿಂಗದೆ ಲಿಂಗವ ಧರಿಸಬೇಕು. || ೭೯ ||

೭೩೦
ಓದಿದರೇನು? ಕೇಳಿದರೇನು? ಆಸೆ ಅಳಿಯದು, ರೋಷ ಬಿಡದು,
ಮಜ್ಜನಕ್ಕೆ ನೀಡಿ ಫಲವೇನು?
ವಚನಾರಂಭದ ನುಡಿಯ ಕಲಿತವರೆಲ್ಲ ಅನುಭಾವಿಗಳಪ್ಪರೆ?
ಅಷ್ಟಾಷಷ್ಟಿ ತೀರ್ಥಂಗಳ ಮೆಟ್ಟಿದವರೆಲ್ಲ ತೀರ್ಥವಾಸಿಗಳಪ್ಪರೆ?
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿದವರೆಲ್ಲ
ಲಿಂಗಾರ್ಚಕರಪ್ಪರೆ? ಅಲ್ಲ.
ಲಾಂಛನವ ಹೊತ್ತು ಕಾಂಚನಕ್ಕೆ ಕೈಯ ನೀಡುವ
ಜಗಭಂಡರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? || ೮೦ ||

೭೩೧
ಓದಿದ ವೇದದಲ್ಲಿ ಏನಹುದಯ್ಯಾ?
ಓದಿಸಬಾರದಂಥ ಲಿಂಗಸ್ಥಲ!
ಸಾಧಿಸಿದ ಶಾಸ್ತ್ರದಲೇನಹುದಯ್ಯಾ?
ಸಾಧ್ಯವಾಗದಂಥ ಜಂಗಮಸ್ಥಲ!
ತರ್ಕಿಸಿದ ತರ್ಕದಲ್ಲಿ ಏನಹುದಯ್ಯಾ?
ತರ್ಕಕ್ಕಗೋಚರವಹಂಥ ಪ್ರಸಾದಿಸ್ಥಲ!
ಓದು ವೇದ ಶಾಸ್ತ್ರ ತರ್ಕಕ್ಕಗೋಚರ
ಕೂಡಲ ಚೆನ್ನಸಂಗಾ ನಿಮ್ಮ ಶರಣ. || ೮೧ ||

೭೩೨
ಓಲೆಯಕಾರ ಭಕ್ತನಾದರೆ ಮನದ ಕ್ರೋಧ ಬಿಡದು.
ಒಕ್ಕಲಿಗ ಭಕ್ತನಾದರೆ ಅವನ ಪೂರ್ವಾಶ್ರಯ ಬಿಡದು.

ಹಾರುವ ಭಕ್ತನಾದರೆ ಜಾತಿಸೂತಕ ಬಿಡದು.
ಬೆವಹಾರಿಯ ಭಕ್ತಿಯೊಂದು ಶಬ್ದದಲ್ಲಿ ಹೋಯಿತ್ತು.
ಅರಸಿನ ಭಕ್ತಿ ಅರಸಿ ನೋಡಲಿಲ್ಲ.
ಸೂಳೆಯ ಭಕ್ತಿ ಹದಿನೆಂಟು ಜಾತಿಯ ಎಂಜಲ ತಿಂದಿತ್ತು.
ಕೂಡಲ ಚೆನ್ನಸಂಗಯ್ಯಾ, ಮಜ್ಜನಕ್ಕೆರೆವ ಭವಿಗಳನೇನೆಂಬೆ? || ೮೨ ||

೭೩೩
ಕಂಗಳು ನೋಡಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ಕಿವಿಗಳು ಕೇಳಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ನಾಸಿಕ ಮುಟ್ಟಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ಜಿಹ್ವೆ ಸೋಂಕಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ಕೈಗಳು ಮುಟ್ಟಿದ ಪದಾರ್ಥ ಲಿಂಗಕ್ಕರ್ಪಿತವಲ್ಲ.
ರೂಪು ರಸ ಗಂಧ ರುಚಿ ಸ್ಪರ್ಶವನು
ಕೂಡಲ ಚೆನ್ನಸಂಗಯ್ಯಾ ನೀನರಿಯಲು ಪ್ರಸಾದವೆನಗೆ. || ೮೩ ||

೭೩೪
ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯಾ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕರಿಯರಯ್ಯಾ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯಾ?
ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕರಿಯರಯ್ಯಾ?
ಸ್ಪರ್ಶದೊಳಗೆ ಸ್ಪರ್ಶವಿದ್ದು ಮುಟ್ಟಿಸಲೇಕರಿಯರಯ್ಯಾ?
ಪ್ರಾಣದೊಳಗೆ ಪ್ರಾಣವಿದ್ದುದನೇಕರಿಯರಯ್ಯಾ?
ಕಾಯದೊಳಗೆ ಕಾಯವಿದ್ದು ಬಿಡದು, ಬೇರಾಗದು,
ಕೂಡಲ ಚೆನ್ನಸಂಗಯ್ಯನಿಕ್ಕಿದ ಭೇದವ ಬಿಡಿಸಬಾರದು. || ೮೪ ||

೭೩೫
ಕತ್ತಲಮನೆಯಲ್ಲಿರ್ದ ಮನುಜನು,
ಜ್ಯೋತಿಯನೆನಿತು ಹೊತ್ತು ನೆನೆದಡೆಯೂ ಬೆಳಕಾಗಬಲ್ಲುದೆ,
ಬೆಂಕಿಯ ಹೊತ್ತಿಸದನ್ನಕ್ಕ?
ಮರದುದಿಯ ಫಲವು ನೋಟಮಾತ್ರಕ್ಕುದುರುವುದೆ
ಹತ್ತಿ ಹರಿಯದನ್ನಕ್ಕ?
ಹುಟ್ಟುಗುರುಡನು ಕಷ್ಟಪಟ್ಟು, ಎಷ್ಟು ಹೊತ್ತು ನಡೆದಡೆಯೂ
ಇಚ್ಛಿತ ಪಟ್ಟಣವ ಮುಟ್ಟುವನೆ
ಕಣ್ಣುಳ್ಳವನ ಕೈವಿಡಿಯದನ್ನಕ್ಕ?
ಹಾಂಗೆ, ಸಮ್ಯಗ್‌ಜ್ಞಾನಾತ್ಮಕವಾದ
ಲಿಂಗಾರ್ಚನ, ಲಿಂಗನಿರೀಕ್ಷಣ, ಲಿಂಗಧ್ಯಾನಗಳಿಲ್ಲದೆ,

ಆ ನೆನಹು, ನಿರೀಕ್ಷಣೆ, ಪೂಜೆ
ಇವುಗಳೊಂದೊಂದೆ ಮುಕ್ತಿಯನೀವವೆಂಬ
ಯುಕ್ತಿಗೆಟ್ಟ ಮಂದಮತಿಗಳ ಮೆಚ್ಚುವನೆ ಕೂಡಲಚೆನ್ನಸಂಗಮದೇವನು? || ೮೫ ||

೭೩೬
ಕಬ್ಬುನಗಿದ ಗಾಣ ಬಲ್ಲುದೆ ಹಾಲ ಸವಿಯ?
ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನಿಲವ?
ಹಗರಣಕ್ಕೆ ಪೂಜಿಸುವರು ಬಲ್ಲರೆ ನಮ್ಮ ಶರಣರ ಸುಳುಹ?
ನಡುಮುರಿದು ಗುಡುಗೂರಿದಡೇನು
ಲಿಂಗದ ನಿಜವನರಿಯದನ್ನಕ್ಕ?
ಸಾವನ್ನಕ್ಕ ಜಪವ ಮಾಡಿದಡೇನು
ಲಿಂಗದ ಪ್ರಾಣ ತನ್ನ ಪ್ರಾಣ ಒಡಗೂಡದನ್ನಕ್ಕ?
ಇಂತಿವರೆಲ್ಲರು ಅಭ್ಯಾಸಶಕ್ತಿಗರುಹಿಗರು!
ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ
ಮಾಯಾಕೋಳಾಹಳ ಸಿದ್ಧರಾಮಯ್ಯದೇವರಿಗೆ
ಅಹೋರಾತ್ರಿಯಲ್ಲಿ ನಮೋ ನಮೋ ಎಂದು
ಬದುಕಿದೆನು ಕಾಣಾ ಪ್ರಭುವೆ. || ೮೬ ||

೭೩೭
ಕಬ್ಬುನದ ಸೋಣಗನ ತಂದು ಪರುಷವ ಮುಟ್ಟಿಸಲು,
ಸುವರ್ಣದ ಸೋಣಗನಪ್ಪುದು, ಪರುಷವಾಗದು ನೋಡಾ.
ಲೋಕದ ಮಾನವನ ತಂದು ಭಕ್ತನ ಮಾಡಿದರೆ,
ವೇಷಲಾಂಛನವಹುದು, ಭಕ್ತನಾಗ ನೋಡಾ.
ಗುರುಲಿಂಗಂ ಚರಲಿಂಗಂ ಭಾವಲಿಂಗಂ ಪ್ರಸಾದಕಮ್!
ಚತುರ್ವಿಧಾತ್ಮಕಜ್ಞಾನಂ ಲಿಂಗಭಕ್ತಸ್ಯ ಲಕ್ಷಣಮ್||
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಮಜ್ಜನಕ್ಕೆರೆವ ಭವಿಗಳನೆಂತು ಭಕ್ತರೆಂಬೆ! || ೮೭ ||

೭೩೮
ಕರ್ಮಜಾತನ ಕಳೆದು ಗುರುಲಿಂಗ ಪುಣ್ಯಜಾತನ ಮಾಡಿದ ಬಳಿಕ,
ಶಿವಕುಲವಲ್ಲದೆ ಅನ್ಯಥಾ ಕುಲ ಶರಣಂಗುಂಟೆ?
ಶಿವಧರ್ಮಕುಲೇ ಜಾತಃ ಪೂರ್ವಜನ್ಮವಿವರ್ಜಿತಃ ।
ಉಮಾ ಮಾತಾ ಪಿತಾ ರುದ್ರ ಈಶ್ವರಂ ಕುಲಮೇವ ಚ ॥
ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಶರಣರಿಗೆ ಪ್ರತಿಯ ಕಾಣೆ, ಶಿವನ ಕುಲವಲ್ಲದೆ. || ೮೮ ||

೭೩೯
ಕರಸ್ಥಳ ಸೆಜ್ಜೆಯಾದ ಶರಣನು ಹೊನ್ನಿಗೆ ಕೈಯಾಂತಡದು
ಕರಸ್ಥಳವಲ್ಲ, ಅದು ಕರ್ಮಸ್ಥಳ.
ಅಂಗಸೋಂಕು ಸೆಜ್ಜೆಯಾದ ಶರಣನು
ಅಪ್ಪಿನ ಸೋಂಕಿನ ಸುಖಕ್ಕೆ ಅಂಗೈಸಿದನಾದರೆ
ಅದು ಅಂಗಸೋಂಕಲ್ಲ, ಅದು ಕರ್ಮಸೋಂಕು.
ಮುಖಸೆಜ್ಜೆಯಾದ ಶರಣನು ಹುಸಿ ನುಸುಳು ಬಂದಡದು
ಮುಖಸೆಜ್ಜೆಯಲ್ಲ, ಕರ್ಮಸೆಜ್ಜೆ.
ಉತ್ತಮಾಂಗ ಸೆಜ್ಜೆಯಾದ ಶರಣನು ಪೂರ್ವಲಿಖಿತವನುಂಬಡದು
ಉತ್ತಮಾಂಗವಲ್ಲ, ಅದು ಕರ್ಮಾಂಗ.
ಅಮಳೋಕ್ಯ ಸೆಜ್ಜೆಯಾದ ಶರಣನು
ಅನ್ನಪಾನಕ್ಕೆ ಬಾಯಿದೆರೆದಂದಂದಿಂಗೆ ವ್ರತಗೇಡಿ
ಕೂಡಲ ಚೆನ್ನಸಂಗಮದೇವಾ. ॥ ೮೯ ॥

೭೪೦
ಕಲ್ಪಿತದಿಂದ ಮಾಡುವ ಭಕ್ತ ನಿರ್ಧನಿಕನಾದರೆ
ತನ್ನ ಕೈಯ ಧನವ ವೆಚ್ಚಿಸಿ,
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ,
ಅವರ ಮತ್ತೆ ದಾಸೋಹಕ್ಕೆ ನಿಲಿಸಿ,
ತಾ ಕರ್ತನಾಗಿ ಪರಿಣಾಮಿಸಬಲ್ಲರೆ ಜಂಗಮ.
ಅವರಿಗೆ ನಮೋ ನಮೋ [ಎಂಬೆ].
ಅಂತಲ್ಲದೆ ಮುನ್ನ ಮಾಡಿದಿರಿ, ಈಗ ಮಾಡಿರೇನಿ ಭೋ ಎಂದು,
ಜರಿದು ಝುಂಕಿಸಿ ಹೋಹರ ಜಂಗಮವೆಂಬೆನೆ? ಎನ್ನೆನು.
ಏನು ಕಾರಣವೆಂದರೆ:
ಆತ ಸೂನೆಗಾರ, ಆತ ದೋಷಾರ್ಥಿ, ಆತ ಭವಭಾರಿ.
ಕೂಡಲ ಚೆನ್ನಸಂಗಮದೇವಾ. ॥ ೯೦ ॥

೭೪೧
ಕವಿತ್ವಸಾಧಕರೆಲ್ಲರೂ ಕಳವಳಿಸಿ ಹೋದರು,
ವಿದ್ಯಾಸಾಧಕರೆಲ್ಲರೂ ಬುದ್ಧಿಗೆಟ್ಟರು,
ತತ್ವಸಾಧಕರೆಲ್ಲರೂ ಭಕ್ತಿಹೀನರಾದರು,
ಲಿಂಗಸಾಧಕರೆಲ್ಲರೂ ಭೂಭಾರಕರಾದರು,
ಕೂಡಲ ಚೆನ್ನಸಂಗಮದೇವಯ್ಯಾ
ನಿಮ್ಮ ಬಸವಣ್ಣ ಜಂಗಮಸಾಧಕನಾಗಿ ಸ್ವಯಲಿಂಗವಾದನು! ॥ ೯೧ ॥

೭೪೨
ಕಾಡಸೊಪ್ಪ ನಾಡಮೇಕೆ ತಿಂದಿರದೆ?
ಉಡು ಏಕಾಂತವಾಸದಲ್ಲಿರದೆ?
ಮಂಡೂಕ ಮೀಯದೆ?
ತುರಗ ಬ್ರಹ್ಮಚಾರಿಯೆ?
ತೋಳ ದಿಗಂಬರನೆ?
ಬಾವುಲಿ ತಲೆಕೆಳಕಾಗಿರೆ ತಪಸಿಯೆ?
ಕೇಳಯ್ಯ ಕೂಡಲ ಚೆನ್ನಸಂಗಮದೇವಯ್ಯ,
ನಿಮ್ಮನರಿಯದ ವಿರಕ್ತಿಕೆ ಹೊರಗೆಲ್ಲ ನುಂಪಟೆ, ಒಳಗೆಲ್ಲ ಸಟೆಸಟೆ. ॥೯೨॥

೭೪೩
ಕಾದನಂತೆ, ಕಣನೇರಲೇಕೊ?
ನಪುಂಸಕನಂತೆ, ಗಣಿಕಾಸ್ತ್ರೀಯೇಕೊ?
ನಡೆಯ ಹೆಣನಂತೆ, ನುಡಿಯಲೇಕೋ?
ಪುರಾತರು ನುಡಿದಂತೆ ನಡೆಯಲರಿಯದವರೆಲ್ಲ,
ಹಾಳೂರೊಳಗೆ ನರಿ ಗುಳ್ಳೆಯ ತಿಂದು ಬಗುಳಿದಂತೆ ಕಾಣಾ,
ಕೂಡಲ ಚೆನ್ನಸಂಗಮದೇವಾ. ॥ ೯೩ ॥

೭೪೪
ಕಾಮಿಸಿದಲ್ಲದೆ ಕೊಡದು ಕಾಮಧೇನು,
ಕಲ್ಪಿಸಿದಲ್ಲದೆ ಕೊಡದು ಕಲ್ಪವೃಕ್ಷ,
ಚಿಂತಿಸಿದಲ್ಲದೆ ಕೊಡದು ಚಿಂತಾಮಣಿ,
ಭಾವಿಸಿದಲ್ಲದೆ ಕೊಡನು ಶಿವನು.
ಕಾಮಿಸದೆ ಕಲ್ಪಿಸದೆ ಚಿಂತಿಸದೆ ಭಾವಿಸದೆ ಕೊಡಬಲ್ಲರು,
ಕೂಡಲ ಚೆನ್ನಸಂಗಾ ನಿಮ್ಮ ಶರಣರು. ॥ ೯೪ ॥

೭೪೫
ಕಾಯಕ್ಲೇಶದಿಂದ ತನುಮನ ಬಳಲಿ ಧನವ ಗಳಿಸಿ,
ಗುರುಲಿಂಗಜಂಗಮಕ್ಕೆ ವೆಚ್ಚಿಸಿ,
ದಾಸೋಹವ ಮಾಡುವ ಭಕ್ತನ ಪಾದವ ತೋರಯ್ಯಾ, ನಿಮ್ಮ ಧರ್ಮ.
ಅದೇಕೆಂದಡೆ, ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ನುಡಿ ಪಾವನ.
ಆತಂಗೆ ಉಪದೇಶವ ಮಾಡಿದ ಗುರು ನಿರಂಜನ ನಿರಾಮಯ.
ಅಂತಹ ಭಕ್ತನ ಕಾಯವೆ ಕೈಲಾಸವೆಂದು ಹೊಕ್ಕು,
ಲಿಂಗಾರ್ಚನೆಯ ಮಾಡುವ ಜಂಗಮ ಜಗತ್ಪಾವನ.
ಇಂತಿವರಿಗೆ ನಮೋ ನಮೋ ಎಂಬೆ ಕೂಡಲ ಚೆನ್ನಸಂಗಯ್ಯಾ. ॥ ೯೫ ॥

೭೪೬
ಕಾಯದಿಂದ ಲಿಂಗದರುಶನ, ಕಾಯದಿಂದ ಜಂಗಮದರುಶನ,
ಕಾಯದಿಂದ ಪ್ರಸಾದಸಂಪತ್ತು.
ಕೂಡಲ ಚೆನ್ನಸಂಗಯ್ಯಾ
ಆ ಕಾಯದಲ್ಲಿ ನಿಮ್ಮುವ ಕಂಡೆನಯ್ಯಾ. || ೯೬ ||

೭೪೭
ಕಾಯ ಬ್ರಹ್ಮಚಾರಿಯಾದಡೇನಯ್ಯಾ,
ಆಸೆ ಬ್ರಹ್ಮಚಾರಿಯಾಗದನ್ನಕ್ಕರ?
ಶಬ್ದ ಮೌನಿಯಾದಡೇನಯ್ಯಾ,
ನೆನಹು ಮೌನಿಯಾಗದನ್ನಕ್ಕರ?
ತನು ಬೋಳಾದಡೇನಯ್ಯಾ,
ಮನ ಬೋಳಾಗದನ್ನಕ್ಕರ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಶರಣಸ್ಥಲವಾರಿಗೆಯೂ ಅಳವಡದು. || ೯೭ ||

೭೪೮
ಕಾಲು ಮುಟ್ಟಿದ ಪದಾರ್ಥ ಕಾಲುಲಿಂಗಾರ್ಪಿತ,
ಕೈಮುಟ್ಟಿದ ಪದಾರ್ಥ ಕೈಲಿಂಗಾರ್ಪಿತ,
ತನು ಮುಟ್ಟಿದ ಪದಾರ್ಥ ತನುಲಿಂಗಾರ್ಪಿತ,
ಮನಮುಟ್ಟಿದ ಪದಾರ್ಥ ಮನಲಿಂಗಾರ್ಪಿತ,
[ಕಾಲು ಕೈ] ತನು ಮನ ಮುಟ್ಟದ ಪದಾರ್ಥ ಭೂಮಿಯ ಮೇಲಿಲ್ಲ.
ಕೊಟ್ಟುದ ಕೊಳಬಾರದು, ಕೊಡದೆ ಕೊಳಬಾರದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಗುರು ಕೊಟ್ಟ ಲಿಂಗವು ಕುರುಹಿನ ಲಿಂಗವು. || ೯೮ ||

೭೪೯
ಕಾವಿ ಕಾಷಾಂಬರವ ತೊಟ್ಟವ ಜಂಗಮವೆ?
ಮುರುಹು ಮುದ್ರೆಯನಿಟ್ಟವ ಜಂಗಮವೆ?
ಬರಿಯ ಬೋಳುಗಳೆಲ್ಲ ಜಂಗಮವೆ?
ವೇಷಧಾರಿಗಳೆಲ್ಲ ಜಂಗಮವೆ?
ಅಜ್ಞಾನಿಗಳೆಲ್ಲ ಜಂಗಮವೆ?
ಭೂಭಾರಿಗಳೆಲ್ಲ ಜಂಗಮವೆ? ಅಲ್ಲ.
ಜಂಗಮ ಮತ್ತೆಂ[ತೆಂ]ದರೆ :
ಸೀಮೆಯಿಲ್ಲದ ನಿಸ್ಸೀಮ ಜಂಗಮ,

ಆಸೆಯಿಲ್ಲದ ನಿರಾಸಕ ಜಂಗಮ,
ಚಿಂತೆಯಿಲ್ಲದ ನಿಶ್ಚಿಂತ ಜಂಗಮ.
ಇಂತಪ್ಪ ಜಂಗಮದ ಸುಳುಹು ಕಾಣದೆ
ಕೂಡಲ ಚೆನ್ನಸಂಗಯ್ಯ ತಾನೇ ಜಂಗಮವಾದ. ॥ ೯೯ ॥

೭೫೦
ಕಾಳಾಮುಖಿ ಕಂಗೆಟ್ಟ, ಶೈವ ಸೈವೆರಗಾದ,
ಪಾಶುಪತಿ ಪಥವರಿಯ, ಮಹಾವ್ರತಿ ಮದದಲಳಿದ,
ಸನ್ಯಾಸಿ ಸಂಸಾರಿಯಾದ, [ಜೋಗಿ] ಮರುಳಾಗಿ ತಿರುಗಿದ.
ಈ ಆರನಲ್ಲೆಂದು ಕಳೆದು, ಕೂಡಲ ಚೆನ್ನಸಂಗನ ಶರಣನು
ಆರ ಮೀರಿ ಬೇರೆ ನಿಂದನು. ॥ ೧೦೦ ॥

೭೫೧
ಕಿರಿದಾದ ಬೀಜದಲ್ಲಿ ಹಿರಿಯ ತರುವಡಗಿದ ಪರಿಯಂತೆ,
ಕರಗತವಾದ ಕನ್ನಡಿಯಲ್ಲಿ ಕರಿ ಗಿರಿಗಳು ತೋರುವ ಪರಿಯಂತೆ,
ಜಗದ್ವ್ಯಾಪಕವಾದ ಪರವಸ್ತುವು ಖಂಡಿತಾಕಾರಮಾದ ಶರೀರದಲ್ಲಿ
ಅತಿ ಸೂಕ್ಷ್ಮಪ್ರಮಾಣದಲ್ಲಿರ್ಪಂತೆ,
[ಅದೇ] ಪರತರ ಶಿವಲಿಂಗವು ಸದ್ಭಕ್ತರನುದ್ಧರಿಪ ಸದಿಚ್ಛೆಯಿಂದ
ಲಿಂಗಾಕಾರವಾಗಿ ನೆಲೆಗೊಂಡಿರ್ಪುದು.
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ,
ಪರಬ್ರಹ್ಮರೂಪವಾದ ಲಿಂಗವು, ಮಹದ್ರೂಪದಿಂದ ಅಖಂಡವಾಗಿಯೂ
ಅಣುರೂಪದಿಂದ ಖಂಡಿತವಾಗಿಯೂ ತೋರುವುದು.
ಕೂಡಲ ಚೆನ್ನಸಂಗಮದೇವಾ, ಇದು ನಿಮ್ಮ ದಿವ್ಯಲೀಲೆಯಯ್ಯಾ! ॥ ೧೦೧ ॥

೭೫೨
ಕುಲಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು,
ತನ್ನ ಪ್ರಾಣಲಿಂಗವ ನಿಕ್ಷೇಪಿಸಿ, ಕರ್ಣಮಂತ್ರವ ಹೇಳಿ,
ಆ ಗುರು ಬಂದು ಆ ಶಿಷ್ಯನ ಮನೆಯ ಹೊಗಲೊಲ್ಲದೆ
ಅಕ್ಕಿ ತುಪ್ಪವನೀಸಿಕೊಂಬವನ ಕೇಡಿಂಗೆ ಇನ್ನೇವೆನಯ್ಯಾ?
ತನ್ನ ಪ್ರಾಣಲಿಂಗವನವನಿಗೆ ಕೊಟ್ಟು
ತಾ ಹೊಗೆನೆಂಬ ವ್ರತಗೇಡಿಯ ಇನ್ನೇನೆನಬಹುದಯ್ಯಾ?
ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಆ ಲಿಂಗವ ಮಾರಿಕೊಂಡುಂಬ ಭಂಗಕಾರರು
ಕೆಟ್ಟ ಕೇಡನೇನೆಂಬೆನಯ್ಯಾ! ॥ ೧೦೨ ॥

೭೫೩
ಕೆರೆಯಲ್ಲಿ ಕಂಡರೆ ಉದಕವೆಂಬೆ,
ಮನೆಗೆ ಬಂದರೆ ಅಗ್ಘವಣಿಯೆಂಬೆ.
ಅಂಗಡಿಯಲ್ಲಿ ಕಂಡರೆ ಭತ್ತವೆಂಬೆ,
ಮನೆಗೆ ಬಂದರೆ ಸಯದಾನವೆಂಬೆ.
ಮಾಡುವಲ್ಲಿ ಬೋನವೆಂಬೆ, ನೀಡುವಲ್ಲಿ ಪ್ರಸಾದವೆಂಬೆ.
ಪ್ರಸಾದವೆಂದು ಕೈಕೊಂಡು, ಅಂಜಿ ಎಂಜಲೆಂದರೆ
ಅಂದೇ ವ್ರತಗೇಡಿ ಕೂಡಲ ಚೆನ್ನಸಂಗಯ್ಯಾ. || ೧೦೩ ||

೭೫೪
ಕೆಸರಲ್ಲಿ ತಾವರೆ ಹುಟ್ಟಿ ದೇವರ ಮಂಡೆಯಲ್ಲಿರದೆ?
ಉಚ್ಛಿಷ್ಟದಲ್ಲಿ, ಜಲಮಲಾದಿಗಳಲ್ಲಿ, ಸಮಸ್ತಜಗದಲ್ಲಿ,
ಸೂರ್ಯನ ಪ್ರಭೆ ಇದ್ದಡೇನು, ಅಲ್ಲಿ ಅದು ಸಿಕ್ಕಿಹುದೆ?
ಹೊಲೆಹದಿನೆಂಟು ಜಾತಿ ನೂರೊಂದು ಕುಲದಲ್ಲಿ ಶರಣನು ಹುಟ್ಟಿದಡೆ,
ಆ ಜಾತಿ ಕುಲದಂತಿರಬಲ್ಲನೆ?
ಸಾಕ್ಷಾತ್ ಪರಬ್ರಹ್ಮವೆ ಇಹ[ಲೋಕದಲ್ಲಿ] ಸಂಸಾರಿಯಾಗಿ ಬಂದನೆಂದರಿವುದು.
ಬಹಿರಂಗದಲ್ಲಿ ಕ್ರಿಯಾರಚನೆ,
ಅಂತರಂಗದಲ್ಲಿ ಅರುಹಿನ ಸ್ವಾನುಭಾವಸಿದ್ಧಾಂತ ಪರಿಪೂರ್ಣ ಶರಣನ,
ಈ ಮರ್ತ್ಯದ ನರಕಿಪ್ರಾಣಿಗಳು ಜರಿವರು.
ಕ್ರಿಯಾಚಾರವಿಲ್ಲದೆ, ಅರುಹಿನ ನೆಲೆಯನರಿಯದೆ,
ನಾನೇ ದೇವರೆಂದು ಅಹಂಕರಿಸಿಕೊಂಡಿಪ್ಪ ಅನಾಚಾರಿ ಹೊಲೆಯರಿಗೆ
ಅಘೋರನರಕ ತಪ್ಪದು ಕಾಣಾ,
ಕೂಡಲ ಚೆನ್ನಸಂಗಮದೇವರಲ್ಲಿ
ಬಸವೇಶ್ವರದೇವರು ಸಾಕ್ಷಿಯಾಗಿ. || ೧೦೪ ||

೭೫೫
ಕೇಶ ಕಾಷಾಯಾಂಬರ ವೇಷ ಲಾಂಛನವಾದಡೇನೊ?
ಗ್ರಾಸಕ್ಕೆ ಭಾಜನರಲ್ಲದೆ ಲಿಂಗಕ್ಕೆ ಭಾಜನರಲ್ಲ.
ಈ ಆಸೆಯ ವೇಷವ ಕಂಡಡೆ
ಕಾರಹುಣ್ಣಿಮೆಯ ಹಗರಣವೆಂಬೆ ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೦೫ ||

೭೫೬
ಕೋಡುಗಲ್ಲಿನ ಮೇಲೆ ಮಾಡುವ ತಪವು
ಒಂದು ದಿನದ ಗುರುಸೇವೆಗೆ ಸರಿಯಲ್ಲ.
ಅನಂತಕಾಲ ಮಾಡುವ ಗುರುಸೇವೆಯು
ಒಂದು ದಿನದ ಲಿಂಗಪೂಜೆಗೆ ಸರಿಯಲ್ಲ.

ಅನಂತಕಾಲ ಮಾಡುವ ಲಿಂಗಪೂಜೆಯು
ಒಂದು ದಿನ ಬಡಿಸಿದ ಜಂಗಮತೃಪ್ತಿಗೆ ಸರಿಯಲ್ಲ.
ಅನಂತಕಾಲ ಬಡಿಸಿದ ಜಂಗಮತೃಪ್ತಿಯು
ಒಂದು ಕ್ಷಣದ ನಿಮ್ಮ ಶರಣರ ಅನುಭಾವಕ್ಕೆ ಸರಿಯಲ್ಲ ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೦೬ ||

೭೫೭
ಕ್ರಿಯೆಯಿಲ್ಲದ ಭಕ್ತ ಮನುಜ,
ಕ್ರಿಯೆಯಿಲ್ಲದ ಮಹೇಶ ರಾಕ್ಷಸ,
ಕ್ರಿಯೆಯಿಲ್ಲದ ಪ್ರಸಾದಿ ಯವನ,
ಕ್ರಿಯೆಯಿಲ್ಲದ ಪ್ರಾಣಲಿಂಗಿ ಭವಿ,
ಕ್ರಿಯೆಯಿಲ್ಲದ ಶರಣ ಅಜ್ಞಾನಿ,
ಕ್ರಿಯೆಯಿಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ,
ಕೂಡಲ ಚೆನ್ನಸಂಗಮದೇವಾ. || ೧೦೭ ||

೭೫೮
ಕ್ರಿಯೆಯೆ ಜ್ಞಾನ, ಆ ಜ್ಞಾನವೆ ಕ್ರಿಯೆ.
ಜ್ಞಾನವೆಂದಡೆ ತಿಳಿಯುವುದು,
ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು.
ಪರಸ್ತ್ರೀಯ ಭೋಗಿಸಬಾರದೆಂಬುದೆ ಜ್ಞಾನ,
ಅದರಂತೆ ಆಚರಿಸುವುದೆ ಕ್ರಿಯೆ.
ಅಂತು ಆಚರಿಸದಿದ್ದಡೆ ಅದೆ ಅಜ್ಞಾನ ನೋಡಾ,
ಕೂಡಲ ಚೆನ್ನಸಂಗಮದೇವಾ. || ೧೦೮ ||

೭೫೯
ಗುಬ್ಬಿ ಹೆರರ ಮನೆಯ ತನ್ನ ಮನೆ ಎಂಬಂತೆ,
ಧರೆ ಧನ ವನಿತೆಯರು ಎನ್ನವರು ತನ್ನವರೆಂದು
ಹೋರಿ ಹೋರಿ ಸಾಯುತ್ತದೆ ಜೀವ,
ಸರ್ವಕರ್ತೃ, ಕೂಡಲ ಚೆನ್ನಸಂಗಯ್ಯನೆಂದರಿಯದೆ. || ೧೦೯ ||

೭೬೦
ಗುರು ಕರುಣಿಸೆ ಬಿಟ್ಟಿತ್ತು ಮಾಯೆ,
ಗುರು ಕರುಣಿಸೆ ಬಿಟ್ಟಿತ್ತು ಮರವೆ,
ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ,
ಕೂಡಲ ಚೆನ್ನಸಂಗಮದೇವಾ,
ಗುರು ಕರುಣಿಸೆ ಬಿಟ್ಟಿತ್ತು ಎನ್ನ ಕರ್ಮಪಾಶ. || ೧೧೦ ||

೭೬೧
ಗುರುವಿಲ್ಲದ ಕೂಟ, ಲಿಂಗವಿಲ್ಲದ ನೋಟ,
ಜಂಗಮವಿಲ್ಲದ ಮಾಟ, ಪ್ರಸಾದವಿಲ್ಲದ ಊಟ.
ಈ ನಾಲ್ಕರ ಬೇಟವಿಲ್ಲದ ಕೂಟ,
ಕೂಡಲ ಚೆನ್ನಸಂಗಯ್ಯನೆನಲಿಲ್ಲದ ಆಟ. || ೧೧೧ ||

೭೬೨
ಗುರುವಿಂದಾಯಿತ್ತೆಂಬೆನೆ? ಗುರುವಿಂದಾಗದು.
ಲಿಂಗದಿಂದಾಯಿತ್ತೆಂಬೆನೆ? ಲಿಂಗದಿಂದಾಗದು.
ಜಂಗಮದಿಂದಾಯಿತ್ತೆಂಬೆನೆ? ಜಂಗಮದಿಂದಾಗದು.
ಪಾದೋದಕದಿಂದಾಯಿತ್ತೆಂಬೆನೆ? ಪಾದೋದಕದಿಂದಾಗದು.
ಪ್ರಸಾದದಿಂದಾಯಿತ್ತೆಂಬೆನೆ? ಪ್ರಸಾದದಿಂದಾಗದು.
ತನ್ನಿಂದ ಆಹುದು, ತನ್ನಿಂದ ಹೋಹುದು ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೧೨ ||

೭೬೩
ಗುರುವಿನಲ್ಲಿ ಗುಣವನರಸುವರೆ?
ಲಿಂಗದಲ್ಲಿ ಲಕ್ಷಣವನರಸುವರೆ?
ಜಂಗಮದಲ್ಲಿ ಜಾತಿಯನರಸುವರೆ?
ಅರಸಿದರೆ ನಾಯಕನರಕ ತಪ್ಪದು
ಕೂಡಲ ಚೆನ್ನಸಂಗಮದೇವಾ. || ೧೧೩ ||

೭೬೪
ಗುರುವಿನಲ್ಲಿ ಗುಣಸಂಪಾದನೆಯ ಮಾಡುವನ್ನಕ್ಕ
ಗುರುಸಂಬಂಧಿಯಲ್ಲ.
ಲಿಂಗದಲ್ಲಿ ಸ್ಥಲಸಂಪಾದನೆಯ ಮಾಡುವನ್ನಕ್ಕ
ಲಿಂಗಸಂಬಂಧಿಯಲ್ಲ.
ಜಂಗಮದಲ್ಲಿ ಜಾತಿಸಂಪಾದನೆಯ ಮಾಡುವನ್ನಕ್ಕ
ಜಂಗಮಸಂಬಂಧಿಯಲ್ಲ.
ಪ್ರಸಾದದಲ್ಲಿ ರುಚಿಸಂಪಾದನೆಯ ಮಾಡುವನ್ನಕ್ಕ
ಪ್ರಸಾದಸಂಬಂಧಿಯಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಮಜ್ಜನಕ್ಕೆರೆವ ಭವಿಗಳನೇನೆಂಬೆ? || ೧೧೪ ||

೭೬೫
ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ,
ಜಂಗಮದಲ್ಲಿ ಸಮಯಾಚಾರಿ.
ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ
ತನ್ನ ಶೀಲಕ್ಕೆ ಸಮಶೀಲವಾಗದವರ ಮನೆಯಲನುಸರಿಸಿ ನಡೆದಡೆ
ಕೂಡಲ ಚೆನ್ನಸಂಗನ ಶರಣ
ಪೂರ್ವಾಚಾರ್ಯ ಸಂಗನಬಸವಣ್ಣ ಮೆಚ್ಚ ಕಾಣಿರಣ್ಣಾ. || ೧೧೫ ||

೭೬೬
ಗುರುಶಿಷ್ಯಸಂಬಂಧವನೇನೆಂದುಪಮಿಸುವೆ?
ಜ್ಯೋತಿಯಲೊದಗಿದ ಜ್ಯೋತಿಯಂತಿರಬೇಕು,
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು,
ಸ್ಫಟಿಕದೊಳಗಿರಿಸಿದ ರತ್ನದಂತಿರಬೇಕು,
ರೂಪಿನ ನೆಳಲಿನ ಅಂತರಂಗದಂತಿರಬೇಕು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು. || ೧೧೬ ||

೭೬೭
ಗೆದ್ದಲು ಮನೆಯ ಮಾಡಿದರೆ ಹಾವಿಂಬುಗೊಂಡಿತ್ತು,
ವೇಶಿ ಮನೆಯ ಮಾಡಿದರೆ ಎಂಜಲಿಂಬುಗೊಂಡಿತ್ತು,
ಬಸವಣ್ಣ ಮನೆಯ ಮಾಡಿದರೆ ಪ್ರಸಾದವಿಂಬುಗೊಂಡಿತ್ತು,
ಕೂಡಲ ಚೆನ್ನಸಂಗಮದೇವ ನೀ ಸಾಕ್ಷಿಯಾಗಿ. || ೧೧೭ ||

೭೬೮
ಗೋವಿನ ಹೊಟ್ಟೆಯಲ್ಲಿ ಘೃತವಿದ್ದಡೇನೊ
ಆ ಗೋವು ದಿನದಿನಕ್ಕೆ ಪುಷ್ಟವಾಗಬಲ್ಲುದೆ?
ಅದು ಕಾರಣ, ಆ ಗೋವ ಪೋಷಿಸಿ, ಕರೆದು ಕಾಸಿ,
ಘೃತವ ಮಾಡಿ, ಆ ಗೋವಿಂಗೆ ಕುಡಿಯಲೆರೆದಡೆ
ಆ ಗೋವು ದಿನದಿನಕ್ಕೆ ಪುಷ್ಟವಹುದು.
ಹಾಂಗೆ, ತನ್ನಲ್ಲಿ ವಸ್ತುವಿದ್ದಡೇನೊ?
ವಸ್ತುವ ಗುರುಮುಖದಿಂದ ಕರಸ್ಥಲಕ್ಕೆ ಪಡೆದು,
ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿದಲ್ಲದೆ ಪ್ರಾಣಲಿಂಗವಾಗದು.
ಕೂಡಲ ಚೆನ್ನಸಂಗಯ್ಯನಲ್ಲಿ,
ಇಷ್ಟಲಿಂಗವ ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿ,
ತಾನೆಂಬ ಅನಿಷ್ಟವ ತೊಲಗಿಸಿದಲ್ಲದೆ
ಪ್ರಾಣಲಿಂಗಸಂಬಂಧವಾಗಬಾರದು. || ೧೧೮ ||

೭೬೯
ಘಟದೊಳಗಿದ್ದ ಪದಾರ್ಥವು,
ಆ ಘಟದ ಹೊರಗೆ ಉರಿಯ ಹತ್ತಿಸಿದಲ್ಲದೆ ಪರಿಪಕ್ವವಾಗದು.
ಹಾಗೆ, ಅಂತರಂಗದಲಿರ್ದ ಚಿದ್ವಸ್ತು
ಸಂಸ್ಕಾರಬಲದಿಂದ ಹೊರಹೊರಟಲ್ಲದೆ,
ಅಂತರಂಗದಲಿರ್ದ ಭವರೋಗ ಮಾಣದು.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಅರ್ಚನ ಅರ್ಪಣ ಅನುಭಾವಾದಿಗಳಿಂದ ನೀವು ಪ್ರಕಟಗೊಳ್ಳುವಿರಾಗಿ. || ೧೧೯ ||

೭೭೦
ಜಂಗಮ ಘನವೆಂಬೆನೆ?
ಬೇಡಿ ಕಿರಿದಾಯಿತ್ತು.
ಲಿಂಗ ಘನವೆಂಬೆನೆ?
ಕಲುಕುಟಿಗರ ಕೈಯೆ ಮಾಡಿಸಿಕೊಂಡು ಕಿರಿದಾಯಿತ್ತು.
ಭಕ್ತ ಘನವೆಂಬೆನೆ?
ತನುಮನಧನ ವಂಚನೆಯಿಂದ ಕಿರಿದಾಯಿತ್ತು.
ಇಂತೀ ತ್ರಿವಿಧ ನಿಷ್ಪತ್ತಿಯಾಗದನ್ನಕ್ಕರ,
ಕೂಡಲಚೆನ್ನಸಂಗಮದೇವನೆಂತೊಲಿವನೊ? || ೧೨೦ ||

೭೭೧
ಜಂಗಮ ಬರಬೇಕೆಂದು ಲಿಂಗಾರ್ಚನೆಯ ಮಾಡುವುದು.
ಆ ಜಂಗಮ ಬಂದರೆ ತನ್ನ ಲಿಂಗಾರ್ಚನೆಯ ಮಾಣಬೇಕು,
ಮಾದು ಜಂಗಮಾರ್ಚನೆಯ ಮಾಡಬೇಕು.
ಲಿಂಗದಲೇನುಂಟು? ಜಂಗಮದಲೇನುಂಟೆಂದರೆ:
ಲಿಂಗದಲ್ಲಿ ಫಲವುಂಟು ಪದವುಂಟು
ಕುಲವುಂಟು ಛಲವುಂಟು ಭವವುಂಟು.
ಜಂಗಮದಲ್ಲಿ ಫಲವಿಲ್ಲ ಪದವಿಲ್ಲ
ಕುಲವಿಲ್ಲ ಛಲವಿಲ್ಲ ಭವವಿಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಜಂಗಮವೇ ಲಿಂಗವೆಂದು ನಂಬಿದನಾಗಿ
ಬಸವಣ್ಣ ಸ್ವಯಲಿಂಗವಾದ. || ೧೨೧ ||

೭೭೨
ಜಂಗಮಭಕ್ತನು, ಚಿನ್ನದಂತೆ-ಕಬ್ಬಿನಂತೆ-ಶ್ರೀಗಂಧದಂತೆ ಇರಬೇಕು.
ಅದು ಹೇಂಗೆ?
ಆ ಚಿನ್ನವ ಕಾಸಿದಡೆ ಕರಗಿಸಿದಡೆ ಕಡಿದಡೆ ನಿಗುಚಿದಡೆ

ಬಣ್ಣ ಅಧಿಕವಲ್ಲದೆ ಕಿರಿದಾಗದು,
ಇವರು ನನ್ನನೇಕೆ ಗಾಸಿ ಮಾಡಿದರೆನ್ನದು.
ಆ ಕಬ್ಬ ಕಡಿದಡೆ ಖಂಡಿಸಿದಡೆ
ಗಾಣದಲಿಕ್ಕಿ ಹಿಂಡಿ, ಹಿಳಿದು, ಬಂದ ರಸವನಟ್ಟಡೆ,
ನಾನಾ ಪ್ರಕಾರದಲ್ಲಿ ಸಾಯಸಗೊಳಿಸಿದಡೆಯೂ
ಮಿಗೆ ಮಿಗೆ ಮಧುರವಾಗಿಪ್ಪುದಲ್ಲದೆ ವಿಷವಾಗದು,
ನನ್ನನೇಕೆ ನೋಯಿಸಿದರೆನ್ನದು.
ಆ ಶ್ರೀಗಂಧವು ಕೊರೆದಡೆ ತೇದಡೆ ಹೂಸಿದಡೆ
ಬೆಂಕಿಯೊಳಗೆ ಹಾಯಿಕಿದಡೆ
ಪರಿಮಳ ಘನವಾಯಿತ್ತಲ್ಲದೆ ದುರ್ಗಂಧವಾಗದು,
ತನ್ನಲ್ಲಿ ದುಃಖಗೊಳ್ಳದು.
ಈ ತ್ರಿವಿಧದ ಗುಣದ ಪರಿಯಲ್ಲಿ,
ಭಕ್ತನು ತನ್ನ ಸುಗುಣವ ಬಿಡದ ಕಾರಣ
ಸದ್ಭಕ್ತನಹ ಮಾಹೇಶ್ವರನಹ ಪ್ರಸಾದಿಯಹ
ಪ್ರಾಣಲಿಂಗಿಯಹ ಶರಣನಹ ಐಕ್ಯನಹ.
ಇಂತು ಷಟ್‌ಸ್ಥಲದಲ್ಲಿ ಸಂಪನ್ನನಹಡೆ
ಜಂಗಮಭಕ್ತಿಯೆ ಮೂಲವಯ್ಯಾ
ಕೂಡಲ ಚೆನ್ನಸಂಗಮದೇವಾ. ॥ ೧೨೨ ॥

೭೭೩
ಜಂಗಮ ಲಿಂಗಮೋಹಿತನಾದಡೆ
ತನ್ನ ಕುಲಗೋತ್ರಮೋಹವ ಮರೆಯಬೇಕು.
ಜಂಗಮ ಲಿಂಗಭಕ್ತನಾದಡೆ
ಪೂರ್ವಕುಲವ ಬೆರಸಲಾಗದು.
ಜಂಗಮ ಲಿಂಗಪೂಜಕನಾದಡೆ
ಮಾನವರನು ಉಪಧಾವಿಸಲಾಗದು.
ಜಂಗಮ ಲಿಂಗವೀರನಾದಡೆ
ಅರ್ಥವ ಕಟ್ಟಲಾಗದು.
ಜಂಗಮ ಲಿಂಗಪ್ರಸಾದಿಯಾದಡೆ
ಬೇಡಿದಡೆ ಇಲ್ಲೆನ್ನಲಾಗದು.
ಜಂಗಮ ಲಿಂಗಪ್ರಾಣಿಯಾದಡೆ
ಲಾಂಛನದ ನಿಂದೆಯ ಕೇಳಲಾಗದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಈ ಆರು ಸಹಿತ : ಜಂಗಮಲಿಂಗಭಕ್ತಿ. ॥ ೧೨೩ ॥

೭೭೪
ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಬೇಡುವ
ತುಡುಗುಣಿಗಳ ಏನೆಂಬೆನಯ್ಯಾ?
ಬೇಡಲಾಗದು ಭಕ್ತನ, ಕಾಡಲಾಗದು ಭವಿಯ.
ಬೇಡಿ ಕಾಡಿ ಒಡಲ ಹೊರೆವನಾದರೆ,
ಬೇಟೆಯನಾಡಿದ ಮೊಲನನಟ್ಟು ಬಾಣಸವ ಮಾಡಿ,
ನಾಯಿ ತಿಂದು ಮಿಕ್ಕುದ ತಾ ತಿಂದಂತೆ
ಕೂಡಲ ಚೆನ್ನಸಂಗಮದೇವಾ. ॥ ೧೨೪ ॥

೭೭೫
ಜಲನಿಧಿ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು
ಮಜ್ಜನಕ್ಕೆರೆವರೆಲ್ಲ ಶೀಲವಂತರೆ?
ಭವಿಪಾಕವನೊಲ್ಲೆವೆಂದು ಭುಂಜಿಸುವ
ಉದರಪೋಷಕರೆಲ್ಲ ಶೀಲವಂತರೆ?
ಅವರಲ್ಲ, ನಿಲ್ಲು ಮಾಣು.
ಅಶನವರತು ವ್ಯಸನ ಬೆಂದು
ವ್ಯಾಪ್ತಿಗಳು ಅಲ್ಲಿಯೇ ಲೀಯವಾಗಿ,
ಅಷ್ಟಮದ ಬೆಂದು ನಷ್ಟವಾಗಿ,
ತನುಗುಣ ಸಮಾಧಾನವಾದಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಅಚ್ಚಶೀಲವೆಂಬೆ. ॥ ೧೨೫ ॥

೭೭೬
ಜಾತಿವಿಡಿದು ಜಂಗಮವ ಮಾಡಬೇಕೆಂಬ ಪಾತಕರು ನೀವು ಕೇಳಿರೊ:
ಜಾತಿ ಘನವೊ ಗುರುದೀಕ್ಷೆ ಘನವೊ?
ಜಾತಿ ಘನವಾದ ಬಳಿಕ, ಆ ಜಾತಿಯೆ ಗುರುವಾಗಿರಬೇಕಲ್ಲದೆ
ಗುರುದೀಕ್ಷೆ ಪಡೆದು, ಗುರುಕರಜಾತರಾಗಿ
ಜಾತಕವ ಕಳೆದು ಪುನರ್ಜಾತರಾದೆವೆಂಬುದ ಏತಕ್ಕೆ ಬೊಗಳುವಿರೊ?
ಜಾತಿವಿಡಿದು ಕಳೆಯಿತ್ತೆ ಜಾತಿತಮವು? ಅಜಾತಂಗೆ ಆವುದು ಕುಲ?
ಆವ ಕುಲವಾದಡೇನು ದೇವನೊಲಿದಾತನೆ ಕುಲಜ.
ಅದೆಂತೆಂದಡೆ :
ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯೇನ ಸಾ ದೀಕ್ಷೇತಿ ನಿಗದ್ಯತೇ॥
ಎಂಬುದನರಿದು,
ಜಾತಿ ನಾಲ್ಕುವಿಡಿದು ಬಂದ ಜಂಗಮವೇ ಶ್ರೇಷ್ಠವೆಂದು

ಅವನೊಡಗೂಡಿಕೊಂಡು ನಡೆದು, ಜಾತಿ ಎಂಜಲುಗಳ್ಳರಾಗಿ
ಉಳಿದ ಜಂಗಮವ ಕುಲವನೆತ್ತಿ ನುಡಿದು, ಅವನ ಅತಿಗಳೆದು
ಕುಲವೆಂಬ ಸರ್ಪ ಕಚ್ಚಿ, ಎಂಜಲೆಂಬ ಅಮೇಧ್ಯವ ಭುಂಜಿಸಿ
ಹಂದಿ ನಾಯಂತೆ ಒಡಲ ಹೊರೆವ ದರುಶನ ಜಂಗುಳಿಗಳು
ಜಂಗಮಪಥಕ್ಕೆ ಸಲ್ಲರಾಗಿ,
ಅವರಿಗೆ ಗುರುವಿಲ್ಲ ಗುರುಪ್ರಸಾದವಿಲ್ಲ,
ಲಿಂಗವಿಲ್ಲ ಲಿಂಗಪ್ರಸಾದವಿಲ್ಲ,
ಜಂಗಮವಿಲ್ಲ ಜಂಗಮಪ್ರಸಾದವಿಲ್ಲ.
ಇಂತೀ ತ್ರಿವಿಧಪ್ರಸಾದಕ್ಕೆ ಹೊರಗಾದ ನರಜೀವಿಗಳ
ಸ್ವಯ ಚರ ಪರವೆಂದಾರಾಧಿಸಿ ಪ್ರಸಾದವ ಕೊಳಸಲ್ಲದು ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೨೬ ||

೭೭೭
ಜಾತಿ ಸೂತಕ ಬಿಡದು, ಜನನ ಸೂತಕ ಬಿಡದು,
ಪ್ರೇತ ಸೂತಕ ಬಿಡದು, ರಜಸ್ಸೂತಕ ಬಿಡದು,
ಎಂಜಲು ಸೂತಕ ಬಿಡದು, ಭ್ರಾಂತು ಸೂತಕ ಬಿಡದು,
ವರ್ಣ ಸೂತಕ ಬಿಡದು,
ಇವರೆಂತು ಭಕ್ತರಹರು?
ಹೂಸಿ ಹುಂಡನ ಮಾಡಿದಲ್ಲಿ,
ಬಾಯಿಗೆ ಬೆಲ್ಲವ ತೊಡೆದಲ್ಲಿ,
ಸದ್ಗುರುಲಿಂಗವು ಮೂಗ ಕೊಯ್ಯದೆ ಮಾಬನೆ?
ಕಾಡು ಕಿಚ್ಚಿನ ಕೈಯಲ್ಲಿ ಕರಡದ ಹುಲ್ಲ
ಕೊಯ್ಸಿದಂತಿರಬೇಕು ಭಕ್ತಿ.
ಹಿಂದೆ ಮೆದೆಯಿಲ್ಲ, ಮುಂದೆ ಹುಲ್ಲಿಲ್ಲ.
ಇದು ಕಾರಣ ಕೂಡಲ ಚೆನ್ನಸಂಗನ ಭಕ್ತಿಸ್ಥಲ
ನಿಮ್ಮ ಶರಣಂಗಲ್ಲದೆ ಅಳವಡದು. || ೧೨೭ ||

೭೭೮
ಜ್ಞಾನಾಮೃತಜಲನಿಧಿಯ ಮೇಲೆ ಸಂಸಾರವೆಂಬ ಹಾವಸೆ ಮುಸುಕಿಹುದು.
ನೀರ ಮೊಗೆವರು ಬಂದು ನೂಕಿದಲ್ಲದೆ ತೆರಳದು.
ಮರಳಿ ಮುಸುಕುವುದ ಮಾಣಿಸಯ್ಯಾ.
ಆಗಳೂ ಎನ್ನುವ ನೆನೆವುತ್ತಿರಬೇಕೆಂದು ಬೇಗ ಗುರು ಅಪ್ಪೈಸಿ
ತನ್ನ ಪ್ರಸಾದವೆಂದು ಕುರುಹಕೊಟ್ಟನು,
ದಿವಾರಾತ್ರಿ ತನ್ನನರಿಯಬೇಕೆಂದು.

ಕೆರೆಯ ನೀರನುಂಡು ತೊರೆಯ ನೀರ ಹೊಗಳುವ
ಅರೆಮರುಳರ ಮೆಚ್ಚುವನೆ ನಮ್ಮ ಕೂಡಲ ಚೆನ್ನಸಂಗಮದೇವ? ॥ ೧೨೮ ॥

೭೭೯
ತಂಗುಳ ಬುತ್ತಿಯ ಕಟ್ಟಿ ಹೊಟ್ಟೆಯ ಮೇಲಿಕ್ಕಿಕೊಂಡಿರ್ದಡೆ
ಹಸಿವು ಹೋಗಿ ಆಪ್ಯಾಯನವಹುದೆ?
ಅಂಗದ ಮೇಲೆ ಲಿಂಗವಿದ್ದಲ್ಲಿ ಫಲವೇನು
ಅಂಗವೂ ಲಿಂಗವೂ ಕೂಡುವ ಭೇದವನರಿಯದವರು?
ಗುರುತಲ್ಪಕರು, ಪಂಚಮಹಾಪಾತಕರು. ಅದೆಂತೆಂದಡೆ:
ದ್ವೈತಭಾವಿತದುಃಖಾನಾಮದ್ವೈತಂ ಪರಮಂ ಪದಮ್ ।
ಭಾರಮನ್ನಂ ಪಥಿ ಶ್ರಾಂತೇ ತಸ್ಮಿನ್ ಭುಕ್ತೇ ಸುಖಾವಹಮ್ ॥
ಮತ್ತೆಯೂ
ಅಂಗಾನಾಂ ಲಿಂಗಸಂಬಂಧೋ ಲಿಂಗಾನಾಮಂಗಸಂಯುತಿಃ।
ನಿಮಿಷಾರ್ಧವಿಯೋಗೇನ ನರಕೇ ಕಾಲಮಕ್ಷಯಮ್ ॥
ಎಂದುದಾಗಿ,
ಅಂಗದಲ್ಲಿ ಲಿಂಗ ಒಡಗಲಸಬೇಕು, ಲಿಂಗದಲ್ಲಿ ಅಂಗ ಒಡಗಲಸಬೇಕು.
ಇದು ಕಾರಣ,
ಎಲ್ಲರೂ ಅಂಗಸಂಬಂಧಿಗಳಲ್ಲದೆ
ಲಿಂಗಸಂಬಂಧಿಗಳಪೂರ್ವ ಕಾಣಾ, ಕೂಡಲ ಚೆನ್ನಸಂಗಮದೇವಾ. ॥ ೧೨೯ ॥

೭೮೦
ತದ್ದಿನವ ಮಾಡುವ ಕ್ರೂರಕರ್ಮಿಯ ಮನೆಯಲ್ಲಿ
ಮದ್ಯ ಮಾಂಸವಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡು ಮಾಡುವ ಭಕ್ತನ ಮನೆಯಲು
ದಂಡಕ್ಕಿಕ್ಕುವುದಲ್ಲದೆ ಲಿಂಗಕ್ಕೋಗರವಿಲ್ಲ.
ವರುಷಕ್ಕೊಂದು ತಿಥಿಯೆಂದು ಕೂಟಕ್ಕಿಕ್ಕಲು
ಕೀರ್ತಿವಾರ್ತೆಗೆ ಸಲುವುದಲ್ಲದೆ ಲಿಂಗಕ್ಕೋಗರವಿಲ್ಲ.
ತದ್ದಿನಂ ದಿನದೋಷಂ ಸ್ಯಾತ್ ರಕ್ತಮಾಂಸಸುರಾನ್ವಿತಮ್ ।
ಸ ಸಂಕಲ್ಪಂ ವಿಕಲ್ಪಂ ಚ ನರಕೇ ಕಾಲಮಕ್ಷಯಮ್ ॥
ಈ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ,
ಅಲ್ಲಿ ಹೊಕ್ಕು ಮಾಡಿಸಿಕೊಂಬವರು ಜಂಗಮರಲ್ಲ.
ಕೂಡಲ ಚೆನ್ನಸಂಗಯ್ಯಾ ಈ ತ್ರಿವಿಧವು ನರಕ್ಕೆ ಭಾಜನ. ॥ ೧೩೦ ॥

೭೮೧
ತನತನಗೆ ಕುಳ್ಳಿರ್ದು ಮನಸಿಗೆ ಬಂದಂತೆ
ಘನಲಿಂಗದ ವಾರ್ತೆಯ ಗಳಹುತಿಪ್ಪರು ನೋಡಾ!

ಗುರುಕಾರುಣ್ಯವ ಹಡೆಯದೆ, ಸ್ವರಬಿಂದುಗಳ ತಡೆಯದೆ,
ಹರನ ಶರಣರ ಮುಂದೆ ಹಿರಿದು ಮಾತನಾಡುತಿಪ್ಪರು ನೋಡಾ!
ಇರಿಯದೆ ಮೆರೆವರು, ಅರಿಯದೆ ಉಲಿವರು,
ಕೂಡಲ ಚೆನ್ನಸಂಗಯ್ಯನಲ್ಲಿ ಜನಜಂಗುಳಿಗಳು. ॥ ೧೩೧ ॥

೭೮೨
ತನು ಕಾಮಿಯಾಗದೆ,
ಮನ ಕಾಮಿಯಾಗದೆ,
ಧನ ಕಾಮಿಯಾಗದೆ,
ಅಶನ ವಸನ ಕಾಮಿಯಾಗದೆ,
ಲಿಂಗ ಕಾಮಿಯಾದರೆ
ಕೂಡಲ ಚೆನ್ನಸಂಗಯ್ಯನೆಂಬೆ. ॥ ೧೩೨ ॥

೭೮೩
ತನುಗುಣಸಂಕರದಿಂದ ಪ್ರಸಾದಸಂಗ ಕೆಟ್ಟಿತ್ತು.
ಮನಗುಣಸಂಕರದಿಂದ ಲಿಂಗಸಂಗ ಕೆಟ್ಟಿತ್ತು.
ಲೋಭಗುಣಸಂಕರದಿಂದ ಜಂಗಮಸಂಗ ಕೆಟ್ಟಿತ್ತು.
ಈ ತ್ರಿವಿಧದ ಆಗುಚೇಗೆಯನರಿಯದ ಕಾರಣ
ಭವಘೋರ ನರಕಕ್ಕೊಳಗಾದರು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಈ ತ್ರಿವಿಧದ ಅನುಭವ ಬಲ್ಲ
ಬಸವಣ್ಣಂಗೆ ನಮೋ ನಮೋ [ಎಂಬೆ]. ॥ ೧೩೩ ॥

೭೮೪
ತನು ಗುರುವಿನಲ್ಲಿ ಸವೆದು,
ಮನ ಲಿಂಗದಲ್ಲಿ ಸವೆದು,
ಧನ ಜಂಗಮದಲ್ಲಿ ಸವೆದು,
ತನುವೆ ಗುರುವಾಗಿ, ಮನವೆ ಲಿಂಗವಾಗಿ,
ಧನವೆ ಜಂಗಮವಾಗಿ,
ಇಂತೀ ತ್ರಿವಿಧ ಐಕ್ಯವಾಗಿ ನಿಮ್ಮಲ್ಲಿ ನಿಂದನಾಗಿ,
ಕಾಯವಿಡಿದು ಕರ್ಮವಿರಹಿತನಾದ,
ಕೂಡಲ ಚೆನ್ನಸಂಗಮದೇವರಲ್ಲಿ
ಸಂಗನಬಸವಣ್ಣನು ಉಪಮಾತೀತನಾಗಿರ್ದನು. ॥ ೧೩೪ ॥

೭೮೫
ತನು ಮನ ಧನ ಏಕಾರ್ಥವಾದ ಕಾರಣ,
ಉದಯದಲ್ಲಿ

'ಲಿಂಗವೇ ಶರಣು, ಜಂಗಮವೇ ಶರಣು, ಪ್ರಸಾದವೇ ಶರಣು'
ಕಂಡಯ್ಯಾ.
ಈ ತ್ರಿವಿಧಗುಣಸಂಪನ್ನರು,
ಕೂಡಲ ಚೆನ್ನಸಂಗನ ಶರಣರು ಮಹಾಘನವಯ್ಯಾ. || ೧೩೫ ||

೭೮೬
ತನು ಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ತಂದು,
ಗುರುಲಿಂಗಜಂಗಮಕ್ಕೆ ವೆಚ್ಚಿಸಿ, ದಾಸೋಹವ ಮಾಡಿ,
ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ.
ಅದೇಕೆಂದರೆ : ಅವ ಪರಧನ ಚೋರಕ, ಅವ ಪಾಪಿ,
ಅವಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ.
ಅವನ ಕಾಯಕವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ.
ಇಂತವರ ಬದುಕು,
ಹುಲಿ ಕಪಿಲೆಯ ತಿಂದು ಮಿಕ್ಕುದ ನರಿ ಬಂದು ತಿಂಬಂತೆ ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೩೬ ||

೭೮೭
ತನು ನಿಮ್ಮನಪ್ಪಿ ಮಹಾತನುವಾದ ಬಳಿಕ
ತನುವೆಂಬುದು ಮತ್ತೆಲ್ಲಿಯದೊ?
ಮನ ನಿಮ್ಮನಪ್ಪಿ ಘನಮನವಾದ ಬಳಿಕ
ಮನವೆಂಬುದು ಮತ್ತೆಲ್ಲಿಯದೊ?
ಭಾವ ನಿಮ್ಮನಪ್ಪಿ ನಿರ್ಭಾವವಾದ ಬಳಿಕ
ಭಾವವೆಂಬುದು ಮತ್ತೆಲ್ಲಿಯದೊ?
ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ಲೇಪವಾಗಿ ಮೈದೋರದಿರವ,
ಕೂಡಲ ಚೆನ್ನಸಂಗಯ್ಯ ತಾನೆ ಬಲ್ಲ. || ೧೩೭ ||

೭೮೮
ತನುಮುಟ್ಟಿ ಮನಮುಟ್ಟದೆ ದೂರವಾದರಯ್ಯಾ ಬೆಲೆವೆಣ್ಣಿನಂತೆ.
ಸೂಳೆ ತನುಮುಟ್ಟಿ ಅಪ್ಪುವಳಲ್ಲದೆ ಮನಮುಟ್ಟಿ ಅಪ್ಪಳಾಗಿ.
ಆಚಾರವರಿಯದ ಅರೆಮರುಳುಗಳು ಶಿವಸುಖವನೆತ್ತ ಬಲ್ಲರು
ಕೂಡಲ ಚೆನ್ನಸಂಗಮದೇವಾ? || ೧೩೮ ||

೭೮೯
ತನುವ ಕೊಟ್ಟು, ತನು ಬಯಲಾಯಿತ್ತು,
ಮನವ ಕೊಟ್ಟು, ಮನ ಬಯಲಾಯಿತ್ತು,

ಧನವ ಕೊಟ್ಟು ಧನ ಬಯಲಾಯಿತ್ತು,
ಈ ತ್ರಿವಿಧವನು ಕೊಟ್ಟು ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣಂಗೆ ಬಯಲಸಮಾಧಿಯಾಯಿತ್ತು. || ೧೩೯ ||

೭೯೦
ತನ್ನ ತನುವನೊಪ್ಪಿಸಿದನಯ್ಯಾ ಭಕ್ತನು,
ತನ್ನ ಮನವನೊಪ್ಪಿಸಿದನಯ್ಯಾ ಭಕ್ತನು,
ತನ್ನ ಧನವನೊಪ್ಪಿಸಿದನಯ್ಯಾ ಭಕ್ತನು.
ತನ್ನ ಅಂತರಂಗದಾತ್ಮಸುಖಕ್ಕೆ
ಈ ತ್ರಿವಿಧವನು ಶ್ರೀಗುರು ಹೇಳಿದಂತುಟಂ ಬಿಟ್ಟ
ವ್ರತಗೇಡಿಯ ತೋರದಿರು, ಕೂಡಲ ಚೆನ್ನಸಂಗಮದೇವಾ. || ೧೪೦ ||

೭೯೧
ತನು ಶುದ್ಧವಾಯಿತ್ತು ಗುರುವಿನಿಂದೆ,
ಮನ ಶುದ್ಧವಾಯಿತ್ತು ಲಿಂಗದಿಂದೆ,
ಧನ ಶುದ್ಧವಾಯಿತ್ತು ಜಂಗಮದಿಂದೆ,
ಪ್ರಾಣಶುದ್ಧವಾಯಿತ್ತು ಪ್ರಸಾದದಿಂದೆ.
ಇಂತೀ ಚತುರ್ವಿಧದಿಂದೆನ್ನ ಸರ್ವಾಂಗ ಶುದ್ಧವಾಯಿತ್ತು
ಕೂಡಲ ಚೆನ್ನಸಂಗಮದೇವಾ. || ೧೪೧ ||

೭೯೨
ತನ್ನನಿಕ್ಕಿ ನಿಧಾನವ ಸಾಧಿಸಲರಿಯದ ಹಂದೆಗಳಿದ್ದೇನು ಫಲ?
ಕಾಡಹಂದಿ ನರಿಯ ಹಿಂಡು ತರುವಿಂಧ್ಯದಲ್ಲಿ ಕೂಡಿರವೆ?
ಹಿರಿಯಹಂದಿ ನಾಯವಿಂಡು ನರವಿಂಧ್ಯದಲ್ಲಿ ಕೂಡಿರವೆ?
ತಮ್ಮ ತಮ್ಮ ತಮಂಧ ಕತ್ತಲೆ ಹರಿಯದನ್ನಕ್ಕ
ಇದಿರಿಗೆ ಬುದ್ಧಿಯ ಹೇಳಿ ಉದರವ ಹೊರೆವ
ಚದುರರೆಲ್ಲರು ಹಿರಿಯರಪ್ಪರೆ?
ಲೋಗರ ಮಕ್ಕಳನಿಕ್ಕಿ ನೆಲೆಯ ನೋಡಿಹೆನೆಂದಡೆ,
ಅದೆಂತು ಸಾಧ್ಯವಪ್ಪನಯ್ಯಾ
ನಮ್ಮ ಕೂಡಲ ಚೆನ್ನಸಂಗಮದೇವರು? || ೧೪೨ ||

೭೯೩
ತನ್ನ ಪ್ರೀತಿಯ ಪುತ್ರ ಮಿತ್ರಾದಿಗಳು
ಪರದೇಶದೊಳಗಿಪ್ಪರೆಂಬ ಭಾವದಲ್ಲಿ ಅಡಗಿದ ಆನಂದಕ್ಕಿಂತ
ಮನಮುಟ್ಟಿ ನೆನೆವುದರಿಂದಾದ ಆನಂದ ಮಿಗಿಲಾಗಿಪ್ಪುದು ನೋಡಾ!

ಮನಮುಟ್ಟಿ ನೆನೆವುದರ ಸುಖಕ್ಕಿಂತ,
ಅವರನಪ್ಪಿ ಆಲಂಗಿಸುವುದರಿಂದಾದ ಸುಖ
ಅಧಿಕವಾಗಿ ತೋರ್ಪುದು ನೋಡಾ!
ಒಮ್ಮೆ ಅಪ್ಪಿ ಆಲಿಂಗಿಸಿದ ಆನಂದಕ್ಕಿಂತ
ಅವರೊಡನೆ ಸದಾ ಕೂಡಿಪ್ಪ ಹರ್ಷ
ಹಿರಿದಾಗಿಪ್ಪುದು ನೋಡಾ!
ಇಂತೀ ದೃಷ್ಟಾಂತದಂತೆ,
ಪರಶಿವಲಿಂಗವ ಭಾವದಲ್ಲಿ ಭಾವಿಸುವುದಕ್ಕಿಂತ ಮನಮುಟ್ಟಿ ನೆನೆವುದು,
ಮನಮುಟ್ಟಿ ನೆನೆವುದಕ್ಕಿಂತ ಕಣ್ಮುಟ್ಟಿ ಕಾಣುವುದು,
ಕಣ್ಮುಟ್ಟಿ ಕಾಣುವುದಕ್ಕಿಂತ ಕರಮುಟ್ಟಿ ಪೂಜಿಸುವುದು,
ಕರಮುಟ್ಟಿ ಪೂಜಿಸುವುದಕ್ಕಿಂತ
ಸದಾ ಅಂಗದಲ್ಲಿ ಹಿಂಗದೆ ಧರಿಸುವ ಹರ್ಷವು
ಪರಮಾವಧಿಯಾಗಿಪ್ಪುದು ನೋಡಾ!
ಇದು ಕಾರಣ, ಕೂಡಲ ಚೆನ್ನಸಂಗಯ್ಯನ ಶರಣರು
ಭಾವದಿಂದ ಮನಕ್ಕೆ, ಮನದಿಂದ ನೇತ್ರಕ್ಕೆ, ನೇತ್ರದಿಂದ ಕರಕ್ಕೆ,
ಆ ಶಿವಲಿಂಗವ ಬಿಜಯಂಗೈಸಿಕೊಂಡು
ಪೂಜಾದಿ ಸತ್ಕ್ರಿಯೆಗಳನಗಲದೆ ಅಲಸದೆ ಆಚರಿಸುತಿಪ್ಪರು. || ೧೪೩ ||

೭೯೪
ತನ್ನ ಮನೆಯ ಹೊಗದ ಗುರುವಿನ ಕೈಯಲಿ ಕಾರುಣ್ಯವ ಪಡೆವ ಶಿಷ್ಯ,
ತಾ ಹೊಗದ ಮನೆಯಲುಪದೇಶವ ಮಾಡುವ ಗುರು
ನಾಮಧಾರಕಶಿಷ್ಯಾಣಾಂ ನಾಮಧಾರೀ ಗುರುಸ್ತಥಾ।
ಅಂಧಕೋಽಂಧಕ[ಸ್ಯಾ]ಸಕ್ತೋ ಭವೇತಾಂ ಪತಿತಾವುಭೌ॥
ಇವರಿಬ್ಬರ ಭಕ್ತರೆಂದವರ ಕೂಡಲ ಚೆನ್ನಸಂಗಯ್ಯ
ನಾಯಕ ನರಕದೊಳಗಿಕ್ಕುವ. || ೧೪೪ ||

೭೯೫
ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳೆನೆಂಬ ಶರಣನು,
ಬಿಸಿಲಲಿ ನಿಂದರೆ ಬಿಸಿಲ ಲಿಂಗಾರ್ಪಿತವ ಮಾಡಬೇಕು,
ನೆಳಲಲಿ ನಿಂದರೆ ನೆಳಲ ಲಿಂಗಾರ್ಪಿತವ ಮಾಡಬೇಕು.
ಧೂಪ ದೀಪ ಪರಿಮಳ ವಾಯು ರುಚಿ ರೂಪನು
ಕಾಯದ ಕೈಯಲು ಮುಟ್ಟಿ ಅರ್ಪಿಸುವುದರಿದಲ್ಲ, ನಿಲ್ಲು ಮಾಣು.
ಭಾವದ ಕೈಯಲು ಮುಟ್ಟಿ ಲಿಂಗಕ್ಕೆಂಬರು ನಾವಿದನರಿಯೆವಯ್ಯಾ.
ಶಬ್ದ ಸ್ಪರ್ಶ ರೂಪ ರಸ ಗಂಧ ನಿರವಯಲಿಂಗದಲ್ಲಿ.

ಈ ತೆರನನರಿಯಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತ ಮಹಾಪ್ರಸಾದಿ. || ೧೪೫ ||

೨೯೬
ತನ್ನ ಸತ್ಕಾಯಕದಿಂದೊದಗಿದ ವಿಶುದ್ಧ ಪದಾರ್ಥವ ಲಿಂಗಕ್ಕಿತ್ತು,
ಆ ಲಿಂಗಪ್ರಸಾದವ ತಾನು ಭೋಗಿಸಬೇಕಲ್ಲದೆ,
ಇದು ಸ್ಥೂಲ, ಇದು ಸೂಕ್ಷ್ಮವೆಂದರಿಯದೆ,
ಅಂಗಸುಖಕ್ಕಾಗಿ ಲಿಂಗವನು ಮರೆತು,
ಕಂಡ ಕಂಡ ಪದಾರ್ಥವನುಂಡಡೆ ಅದು ಕೆಂಡದಂತಾಗುವುದಯ್ಯಾ.
ಈ ಮರ್ಮವನರಿಯದನ್ನಕ್ಕ
ಕೂಡಲ ಚೆನ್ನಸಂಗಯ್ಯನಲ್ಲಿ ಸದ್ಭಕ್ತರೆಂತಪ್ಪರಯ್ಯಾ? || ೧೪೬ ||

೨೯೭
ತನ್ನ ಹೊದ್ದದಂತೆ ಮಾಡಿದ,
ತನ್ನ ಸಾರದಂತೆ ಮಾಡಿದ,
ಕಾಮವ ತಂದು ಕಣ್ಣಿಗೆ ತೋರಿದನು.
ವಿಧಿಯ ತಂದು ಮುಂದೊಡ್ಡಿದನು ನೋಡಯ್ಯಾ.
ಪ್ರಸಾದಸಾಧಕರಿಗೆ ಇದೇ ವಿಘ್ನವಯ್ಯಾ.
ಕೂಡಲಚೆನ್ನಸಂಗಮದೇವಯ್ಯ
ತನ್ನ ಹೊದ್ದದಂತೆ ಮಾಡಿದನಯ್ಯಾ. || ೧೪೭ ||

೨೯೮
ತರುಮರಾದಿಗಳಲ್ಲಿಗೆ ಹೋಗಿ ಅನಂತಕಾಲ ತಪಸ್ಸಿಹುದರಿಂದ,
ಒಂದು ದಿನ ಗುರುಚರಣಸೇವೆ ಸಾಲದೆ?
ಅನಂತಕಾಲ ಗುರುಚರಣಸೇವೆಯ ಮಾಡುವುದರಿಂದ,
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ,
ಒಂದು ದಿನ ಜಂಗಮತೃಪ್ತಿ ಸಾಲದೆ?
ಅನಂತಕಾಲ ಜಂಗಮತೃಪ್ತಿಯ ಮಾಡುವುದರಿಂದ,
ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ
ಕೂಡಲ ಚೆನ್ನಸಂಗಮದೇವಾ? || ೧೪೮ ||

೨೯೯
ತಾನು ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಮರಳಿ, ಭವಿಯಾಗಿದ್ದ ತಾಯಿ ತಂದೆ ಒಡಹುಟ್ಟಿದವರ

ಬಂಧುಬಳಗವೆಂದು ಬೆರೆಸಿದರೆ,
ಕೊಂಡ ಮಾರಿಂಗೆ ಹೋಹುದು ತಪ್ಪದು.
ಹಸಿಯ ಮಣ್ಣಿನಲ್ಲಿ ಮಾಡಿದ ಮಡಕೆ,
ಅಗ್ನಿಯ ಮುಖದಲ್ಲಿ ಶುದ್ಧವಾದ ಬಳಿಕ
ಅದು ತನ್ನ ಪೂರ್ವ ಕುಲವ ಕೂಡದು ನೋಡಾ.
ಅದೆಂತೆಂದಡೆ:
ಅಗ್ನಿದಗ್ಧಘಟಃ ಪ್ರಾಹುರ್ನ ಭೂಯೋ ಮೃತ್ತಿಕಾಯತೇ।
ತಚ್ಛಿವಾಚಾರಸಂಗೇನ ನ ಪುನರ್ಮಾನುಷೋ ಭವೇತ್॥
ಎಂದುದಾಗಿ,
ಭಕ್ತನಾಗಿ, ಭವಿಯ ನಂಟನೆಂದು ಪಂತಿಯಲ್ಲಿ ಕುಳ್ಳಿರಿಸಿಕೊಂಡು
ಉಂಡನಾದರೆ ಪಂಚಮಹಾಪಾತಕ,
ಅವಂಗೆ ನಾಯಕನರಕ ತಪ್ಪದು ಕಾಣಾ,
ಕೂಡಲಚೆನ್ನಸಂಗಯ್ಯಾ. ॥ ೧೪೯ ॥

೮೦೦
ತಾಪತ್ರಯವಿಲ್ಲದವ, ವ್ಯಾಪ್ತಿಯನರಿದವ,
ಇರುಳು ಹಗಲೆಂದು ಮನದಲ್ಲಿ ತಾಳದವ,
ತಾಳೋಷ್ಠಸಂಪುಟಕ್ಕೆ ಬಾರದವ,
ಭವಚ್ಛೇದ ಕಾಮಭಂಜನ ಕಾಯವಿಲ್ಲದವ,
ಕಾಲನ ಗೆದ್ದವ, ಮಾಯವ ತೊರೆದವ, ಮತ್ತೊಂದನರಿಯದವ
ನಮ್ಮ ಕೂಡಲ ಚೆನ್ನಸಂಗನನರಿದು ಸುಖಿಯಾದವ. ॥ ೧೫೦ ॥

೮೦೧
ತಾ ಸವಿದಲ್ಲದೆ ಲಿಂಗಕ್ಕೆ ಕೊಡಲಾಗದು,
ಆ ಲಿಂಗವು ಕಹಿ ಸಿಹಿಯೆಂದರಿಯದಾಗಿ.
ಕಹಿಯ ಕಳೆದು ಸಿಹಿಯೆಂದು ಕೊಡದೆ ಕೊಂಡುದು ಕಿಲ್ಬಿಷ,
ಕೂಡಲ ಚೆನ್ನಸಂಗಮದೇವಾ. ॥ ೧೫೧ ॥

೮೦೨
ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದವುಂಟೆ?
ದೀಪಕ್ಕೆ ದೀಪ್ತಿಗೆ ಭಿನ್ನವುಂಟೆ?
ಆತ್ಮಕ್ಕೆಯೂ ದೇಹಕ್ಕೆಯೂ ಸಂದುಂಟೆ?
ಕ್ಷೀರಕ್ಕೆಯೂ ಸ್ವಾದಕ್ಕೆಯೂ ಭೇದವುಂಟೆ?
ಇದು ಕಾರಣ, ಸಾಕಾರವೆ ನಿರಾಕಾರವೆಂದರಿದು,
ಅಂಗಲಿಂಗಸಂಬಂಧವಿಲ್ಲದವರ ಸಂಗ ಭಂಗವೆಂದು,
ಕೂಡಲ ಚೆನ್ನಸಂಗಯ್ಯನ ಶರಣರು ಮೆಚ್ಚರಯ್ಯಾ ಪ್ರಭುವೆ. ॥ ೧೫೨ ॥

೮೦೩
ತೆಂಗಿನೊಳಗಣ ತಿರುಳು ಸೇವಿಸಬರ್ಪುದಲ್ಲದೆ
ಹೊರಗಣ ಪರಟೆ ಸೇವಿಸಲು ಬಾರದು.
ಚಾಂಡಾಲಂಗೆ ಜ್ಞಾನವಂಕುರಿಸಿದಡೆ
ಆತನ ಅಂತರಂಗದ ವೃತ್ತಿಗೆ ಪೂಜ್ಯತೆಯಲ್ಲದೆ
ಬಹಿರಂಗದ ತನುವಿಗೆ ಪೂಜ್ಯತೆಯಾಗದು?
ಒಳಹೊರಗೆಂಬ ಭೇದವಿಲ್ಲದೆ ಸೇವಿಸಲುಚಿತವಪ್ಪಂತೆ
ಶಿವಕುಲಪ್ರಸೂತಂಗೆ ಶಿವಜ್ಞಾನವಾಗಲು
ಆತನ ತನುವೃತ್ತಿಗಳೆರಡೂ ಸೇವ್ಯವಾಗಿರ್ಪವು.
ಇಂತಿದು ಸಾಧಕರ ಸ್ಥಿತಿಯಯ್ಯಾ ಕೂಡಲಚೆನ್ನಸಂಗಮದೇವಾ. ॥ ೧೫೩ ॥

೮೦೪
ತೆರಹಿಲ್ಲದ ಘನವು ಭಿನ್ನವಾಯಿತ್ತೆಂದು
ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ
ಶಿವದ್ರೋಹಿಯ ಮುಖವ ನೋಡಲಾಗದು.
ಕಲುಕುಟಿಗ ಮುಟ್ಟಿ ಚಕ್ಕೆಳುವಾಗ,
ಪ್ರಾಣಲಿಂಗ ಭಿನ್ನವಾಯಿತ್ತೆ? ಭಾವಲಿಂಗ ಭಿನ್ನವಾಯಿತ್ತೆ?
ಪೂಜಾಲಿಂಗ ಭಿನ್ನವಾಯಿತ್ತಲ್ಲದೆ.
ಇಂತೀ ನಿರಾಳದ ನೆಲೆಯ ಸೋಂಕನಾರೂ ಅರಿಯರು.
ಇಷ್ಟಲಿಂಗ ಬಿದ್ದಿತ್ತೆಂಬ ಕಷ್ಟವ ನೋಡಾ
ಕೂಡಲಚೆನ್ನಸಂಗಮದೇವಾ. ॥ ೧೫೪ ॥

೮೦೫
ದಾನವ ಮಾಡುವ ಕ್ರೂರಕರ್ಮರ ಮನೆಯಲ್ಲಿ
ಮಜ್ಜೆ ಮಾಂಸವಲ್ಲದೆ ಲಿಂಗಕ್ಕೆ ಓಗರವಿಲ್ಲ.
ವರುಷಕ್ಕೆ ಒಂದು ತಿಥಿಯ ಮಾಡುವ ಭಕ್ತ,
ಮನೆಯಲ್ಲಿ ಕೂಟಕ್ಕೆಯಿಕ್ಕಿ ಕೀರ್ತಿಗೆ ಸಲುವನಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡು ನೀಡುವ ಭಕ್ತನ ಮನೆಯಲ್ಲಿ ಲಿಂಗಕ್ಕೆ ಓಗರವಿ[ಲ್ಲ].
ಈ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ.
ಅವನ ಮನೆಯ ಹೊಕ್ಕು
ಲಿಂಗಾರ್ಚನೆಯ ಮಾಡಿಸಿಕೊಂಬಾತ
ಜಂಗಮಸ್ಥಲಕ್ಕೆ ಸಲ್ಲ.
ಈ ತ್ರಿವಿಧ ಭಕ್ತಿಯೆಂಬುದು ನರಕಕ್ಕೆ ಭಾಜನವಾಯಿತ್ತು,
ಕೂಡಲ ಚೆನ್ನಸಂಗಮದೇವ, ನೀ ಸಾಕ್ಷಿಯಾಗಿ. ॥ ೧೫೫ ॥

೮೦೬

ದಾಸಿಯ ಸಂಗ ಕಸ ನೀರ ಹೊರಿಸಿತ್ತು,
ವೇಶಿಯ ಸಂಗ ಎಂಜಲ ತಿನ್ನಿಸಿತ್ತು,
ಪರಸ್ತ್ರೀಯ ಸಂಗ ಪಂಚಮಹಾಪಾತಕಕ್ಕಿಕ್ಕಿತ್ತು.
ಇಂತೀ ತ್ರಿವಿಧ ನಾಸ್ತಿಯಾದಂಗಲ್ಲದೆ ಭಕ್ತಿಯಿಲ್ಲ,
ಕೂಡಲ ಚೆನ್ನಸಂಗಮದೇವಾ. || ೧೫೬ ||

೮೦೭

ದಾಸಿಯ ಸಂಗದಿಂದ ಮಜ್ಜನವಂತರಿಸಿತ್ತು.
ವೇಶಿಯ ಸಂಗದಿಂದ ಪ್ರಸಾದವಂತರಿಸಿತ್ತು.
ಪರಸ್ತ್ರೀಯ ಸಂಗದಿಂದ ದೇವರ ಕಾರುಣ್ಯವಂತರಿಸಿತ್ತು.
ಈ ತ್ರಿವಿಧ ನಾಸ್ತಿಯಾದಂಗಲ್ಲದೆ ಭಕ್ತಿಯಿಲ್ಲ
ಕೂಡಲ ಚೆನ್ನಸಂಗಮದೇವಾ. || ೧೫೭ ||

೮೦೮

ದಾಸಿಯ ಸಂಗ, ಭಂಗಿಯ ಸೇವನೆ.
ವೇಶಿಯ ಸಂಗ, ಸುರೆಯ ಸೇವನೆ.
ಪರಸ್ತ್ರೀಯರ ಸಂಗ, ಮಾಂಸದ ಸೇವನೆ.
ಮುಂಡೆಯ ಸಂಗ, ಅಮೇಧ್ಯದ ಸೇವನೆ.
ಕನ್ನೆಯ ಸಂಗ, ರಕ್ತದ ಸೇವನೆ.
ಇಂತೀ ಐವರ ಸಂಗವ ಮಾಡುವ ದ್ರೋಹಿಗೆ
ಕಂಠಪಾವಡ, ಧೂಳಪಾವಡ, ಸರ್ವಾಂಗಪಾವಡ ಉಂಟೆಂಬ
ಪಂಚಮಹಾಪಾತಕರಿಗೆ,
ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪಾದೋದಕ ಪ್ರಸಾದವಿಲ್ಲ
[ನೀ] ಮೊದಲೇ ಇಲ್ಲ, ಕೂಡಲ ಚೆನ್ನಸಂಗಮದೇವಾ. || ೧೫೮ ||

೮೦೯

ಧನವ ಕೊಟ್ಟರೆ ದಾನಿಯಾದ, ತನುವ ಕೊಟ್ಟರೆ ವೀರನಾದ,
ಮನವ ಕೊಟ್ಟರೆ ವಶಿಯಾದ.
ಈ ತ್ರಿವಿಧದಿಂದ ಹೊರಗೆ ಕೊಡಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯ ವು. || ೧೫೯ ||

೮೧೦

ಧರೆ ಗಗನವೆಂಬುದ ನಾನರಿಯೆನಯ್ಯಾ.
'ಲಿಂಗಮಧ್ಯೇ ಜಗತ್‌ಸರ್ವ'ವೆಂಬುದ ನಾನರಿಯೆನಯ್ಯಾ.
ಲಿಂಗಸುಖದ ಸೋಂಕಿನೊಳಗೆ ಶಿವಶಿವಾ ಎನುತಿರ್ದೆನಯ್ಯ.

ಕೂಡಲ ಚೆನ್ನಸಂಗಯ್ಯಾ,
ಅಂಬುಧಿಯೊಳಗೆ ಬಿದ್ದ ಆಲಿಕಲ್ಲಂತೆ,
ಭಿನ್ನಭಾವವಿಲ್ಲದೆ ಶಿವಶಿವಾ ಎನುತಿರ್ದೆನಯ್ಯಾ. ॥೧೬೦॥

೮೧೧
ಧರೆಗೆ ಸೂತಕವುಂಟೆ? ವಾರಿಧಿಗೆ ಹೊಲೆಯುಂಟೆ?
ಉರಿವ ಅನಲಂಗೆ ಜಾತಿಭೇದವುಂಟೆ?
ಹರಿದು ಚರಿಸುವ ಅನಿಲಂಗೆ ಸೀಮೆಯುಂಟೆ?
ಆಕಾಶಕ್ಕೆ ದಾರಿ ಮೇರೆಯುಂಟೆ?
[ಇನಿತ]ರಿಂದಲೊದಗಿದ ಘಟವನು ಆರು ಹೊಲ್ಲೆಂಬರು?
ಸಾರವು ಕರ್ಮ, ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣಂಗೆ. ॥ ೧೬೧ ॥

೮೧೨
ಧರೆಯ ಮೇಲೆ ಸುಳಿವ ವೇಷಲಾಂಛನಧಾರಿಗಳೆಯ್ದೆ,
ಹದಿನೆಂಟು ಜಾತಿಯ ಮನೆಯ ಭಿಕ್ಷವನುಂಡು ಕೆಟ್ಟರು.
ಅರೆಯ ಮೇಲಿಪ್ಪ ಅರುಹಿರಿಯರೆಯ್ದೆ ವಾಯುಭಿಕ್ಷವನುಂಡು ಕೆಟ್ಟರು.
ಗಿರಿಯ ಮೇಲಿಪ್ಪ ತಪಸ್ವಿಗಳೆಯ್ದೆ ವನಭಿಕ್ಷವನುಂಡು ಕೆಟ್ಟರು.
ಅರಿಯದೆ ಇಂದ್ರಿಯಂಗಳ ಕಟ್ಟಿ, ಕುರುಹಿನ ನರಕಕ್ಕೆ ಹೋಹವರ
ಹಿರಿಯರೆಂದು ಎನಗೆ ತೋರದಿರಾ.
ಸರ್ವ ಭ್ರಾಂತಳಿದ ಮಹಂತರನೆನಗೆ ತೋರಾ,
ಕೂಡಲ ಚೆನ್ನಸಂಗಮದೇವಾ. ॥ ೧೬೨ ॥

೮೧೩
ಧೀರಸಂಪನ್ನರೆಲ್ಲ ಅಲಗಿನ ಮೊನೆಗೆ ಭಾಜನವಾದರು ನೋಡಯ್ಯಾ!
ಧನಸಂಪನ್ನರೆಲ್ಲ ರಾಜರಿಗೆ ಭಾಜನವಾದರು ನೋಡಯ್ಯಾ!
ರೂಪಸಂಪನ್ನರೆಲ್ಲ ಸ್ತ್ರೀಯರಿಗೆ ಭಾಜನವಾದರು ನೋಡಯ್ಯಾ!
ಗುಣಸಂಪನ್ನರೆಲ್ಲ ಬಂಧುಗಳಿಗೆ ಭಾಜನವಾದರು ನೋಡಯ್ಯಾ!
ಜ್ಞಾನಸಂಪನ್ನ ಬಸವಣ್ಣ ಲಿಂಗಕ್ಕೆ ಭಾಜನವಾದ ನೋಡಯ್ಯಾ,
ಕೂಡಲ ಚೆನ್ನಸಂಗಮದೇವಾ. ॥ ೧೬೩ ॥

೮೧೪
ನಂಬುಗೆಗೆ ಇಂಬಾಗದೆ ನೈಷ್ಠೆ ನೆಲೆಗೊಳ್ಳದು;
ನೈಷ್ಠೆ ನೆಲೆಗೊಳ್ಳದೆ ಎಚ್ಚರವಚ್ಚೊತ್ತದು;
ಎಚ್ಚರವಿಲ್ಲದೆ ಅನುಭವವು ಮನಂಗೊಳ್ಳದು;
ಅನುಭವವಿಲ್ಲದೆ ಆನಂದವು ತಲೆದೋರದು;

ಆನಂದವಿಲ್ಲದೆ ಶಿವಲಿಂಗದಲ್ಲಿ ಸಮರಸವಾಗದು.
ಇಂತೀ ಆರು ತೆರನಾದ ಭಕ್ತಿಯ ಗೊತ್ತನರಿದಡೆ,
ಭಕ್ತನೆಂಬೆನು ಮಹೇಶ್ವರನೆಂಬೆನು,
ಇಲ್ಲದಿರ್ದಡೆ ಶುದ್ಧಭವಿಯೆಂಬೆನು ಕಾಣಾ.
ಕೂಡಲ ಚೆನ್ನಸಂಗಮದೇವಾ. || ೧೬೪ ||

೮೧೫
ನಡೆವ ನುಡಿವ ಚೈತನ್ಯವುಳ್ಳನಕ್ಕ
ಒಡಲ ಗುಣಂಗಳಾರಿಗೂ ಮಾಣವು.
ನೋಡುವ ನಯನ, ಕೇಳುವ ಶ್ರೋತ್ರ, ವಾಸಿಸುವ ಘ್ರಾಣ,
[ಮುಟ್ಟುವ ತ್ವಕ್ಕು, ರುಚಿಸುವ ಜಿಹ್ವೆ] ತಾಗಿತ್ತೆನಬೇಡ.
ನೋಡುತ್ತ [ಕೇಳುತ್ತ ವಾಸಿಸುತ್ತ ಮುಟ್ಟುತ್ತ, ರುಚಿಸುತ್ತ]
ಲಿಂಗಾರ್ಪಿತವ ಮಾಡಿ
ಲಿಂಗಭೋಗೋಪಭೋಗಿಯಾದ ಪ್ರಸಾದಿಗಳಿಗೆ
ಸರ್ವಾಂಗ ಶುದ್ಧವಾಯಿತ್ತಯ್ಯಾ.
ಕಾಯತ್ರಯಂಗಳ ಜೀವತ್ರಯಂಗಳ
ಭಾವತ್ರಯಂಗಳನೊಂದು ಮಾಡಿ,
ಸುಖ-ದುಃಖ, ಗುಣ-ನಿರ್ಗುಣಂಗಳೆಂಬ ಉಭಯವ,
ಲಿಂಗದಲ್ಲಿ ಏಕವ ಮಾಡಿ,
ಅಹುದಲ್ಲ, ಬೇಕುಬೇಡೆಂಬ ಸಂಶಯವ ಕಳೆದು,
ಕೂಡಲ ಚೆನ್ನಸಂಗನ ಆದಿಯ ಪುರಾತನರು
ಮಾಡಿದ ಪಥವಿದು. || ೧೬೫ ||

೮೧೬
ನದಿ ಕೂಪ ತಟಾಕ ಜಲದಲ್ಲಿ ಕನ್ನವನಿಕ್ಕಿ ಉದಕವ ತಂದು,
ಮಜ್ಜನಕ್ಕೆರೆವವರು ಸುಯಿಧಾನಿಗಳಪ್ಪರೆ?
ಪಾಕದಲ್ಲಿ ಭವಿಪಾಕ ಪರಪಾಕವೆಂದು ಭುಂಜಿಸುವ
ಉದರಪೋಷಕರೆಲ್ಲ ಶೀಲವಂತರಪ್ಪರೆ? ಅಲ್ಲ.
ಆಸೆ ಅರತು, ವ್ಯಸನ ಬೆಂದು, ವ್ಯಾಪ್ತಿಗಳೆಲ್ಲವು ತಲ್ಲೀಯವಾಗಿ,
ತನುಗುಣಗಳೆಲ್ಲ ಸಮಾಪ್ತಿಯಾದಡೆ
ಕೂಡಲ ಚೆನ್ನಸಂಗಮನಲ್ಲಿ ಶೀಲವಂತರೆಂಬೆ. || ೧೬೬ ||

೮೧೭
ನಮ್ಮ ಆದಿಪುರಾತನರು ಪ್ರಸಾದಕ್ಕೆ ತಪ್ಪದೆ ನಡೆದರು,
ನಡೆ ತಪ್ಪದೆ ನುಡಿದರು.
ಇಂತಪ್ಪ ಪುರಾತನರ ವಚನಂಗಳ ಎರಡಿಲ್ಲದೆ ಕೊಂಡಾಡಿ,

ತನು ಮನ ಧನವ ಎರಡಿಲ್ಲದೆ ಸಮರ್ಪಿಸುವ,
ಭಕ್ತರ ಭಕ್ತ ನಾನು, ಆಳಿನಾಳಯ್ಯಾ ನಾನು,
ಕೂಡಲ ಚೆನ್ನಸಂಗನ ಶರಣರು ಸಾಕ್ಷಿಯಾಗಿ. || ೧೬೭ ||

೮೧೮
ನರನೆಂಬ ಪೂರ್ವಾಶ್ರಯವ ಕಳೆದು ಗುರುವೆಂದ.
ಶಿಲೆಯೆಂಬ ಪೂರ್ವಾಶ್ರಯವ ಕಳೆದು ಲಿಂಗವೆಂದ.
ಜಾತಿಸೂತಕವೆಂಬ ಪೂರ್ವಾಶ್ರಯವ ಕಳೆದು ಜಂಗಮವೆಂದ.
ಎಂಜಲವೆಂಬ ಪೂರ್ವಾಶ್ರಯವ ಕಳೆದು ಪ್ರಸಾದವೆಂದ.
ಇಂತೀ ಚತುರ್ವಿಧದ ಪೂರ್ವಾಶ್ರಯವ ಕಳೆಯಬಲ್ಲನಾಗಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ ಸ್ವತಂತ್ರನು. || ೧೬೮ ||

೮೧೯
ನಾನು ಮೆಟ್ಟುವ ಭೂಮಿಯ
ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯಾ.
ನಾ ನೋಡುತಿಹ ಆಕಾಶದ ಚಂದ್ರಸೂರ್ಯರ
ಭಕ್ತರ ಮಾಡಿದಲ್ಲದೆ ನಾ ನೋಡೆನಯ್ಯಾ.
[ನಾ ಬಳಸುವ] ಜಲವ ಭಕ್ತನ ಮಾಡಿದಲ್ಲದೆ
ನಾನು ಬಳಸೆನಯ್ಯಾ.
ನಾನು ಕೊಂಬ ಹದಿನೆಂಟು ಧಾನ್ಯವ
ಭಕ್ತನ ಮಾಡಿದಲ್ಲದೆ ಕೊಳ್ಳೆನು
ಕೂಡಲ ಚೆನ್ನಸಂಗಾ ನಿಮ್ಮಾಣೆ. || ೧೬೯ ||

೮೨೦
ನಾಯಿ ಬಲ್ಲುದೆ ದೇವರ ಬೋನವ?
ದ್ರೋಹಿ ಬಲ್ಲನೆ ಗುರು - ಲಿಂಗ - ಜಂಗಮವನು?
ಅಜ್ಞಾನಿ ಬಲ್ಲನೆ ಸುಜ್ಞಾನಿಯ ನೆಲೆಯನು?
ಸೂಕರ ಬಲ್ಲುದೆ ಸುಭಕ್ಷ್ಯದ ಸವಿಯನು?
ಆಚಾರಕ್ಕೆ ಪ್ರಾಣವಾದ ಸಂಗನಬಸವಣ್ಣನಲ್ಲದೆ
[ಗುರು - ಲಿಂಗ - ಜಂಗಮವನು] ಭೂತಪ್ರಾಣಿಗಳೆತ್ತ ಬಲ್ಲರು
ಕೂಡಲ ಚೆನ್ನಸಂಗಮದೇವಾ. || ೧೭೦ ||

೮೨೧
ನಿಂದಾಸ್ತುತಿಗಳ ಮಾಡುವ ದುರ್ವ್ಯಸನಿಗಳ,
ದುರಾಚಾರಗಳಲ್ಲಿ ನಡೆವವರುಗಳ,
ಭಕ್ತರೆಂ[ದೂ] ಲಿಂಗವಂತರೆಂ[ದೂ]

ಪತಿಕರಿಸರು ನೋಡಯ್ಯಾ.
ದೂಷಣೆಯೆ ಪಾತಕವೆಂದುದಾಗಿ,
ಭಕ್ತರ ನಿಂದಿಸಿ ಪಾತಕದಲ್ಲಿ ಬೀಳುವ
ಪಾಕುಳರ ಮುಖವ ನೋಡಲಾಗದು,
ಕೂಡಲ [ಚೆನ್ನ]ಸಂಗಮದೇವಾ. ॥ ೧೭೧ ॥

೮೨೨
ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?
ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ?
ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ?
ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ?
ಭಾವಶುದ್ಧವುಳ್ಳವಂಗೆ ಹೂವಿನ ಹಂಗೇಕೆ?
ಕೂಡಲ ಚೆನ್ನಸಂಗಯ್ಯಾ,
ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ? ॥೧೭೨॥

೮೨೩
ನಿಧಾನವನಗೆವೆನೆಂದು ಹೋದರೆ
ವಿಘ್ನ ಬಪ್ಪುದು ಮಾಬುದೆ ಅಯ್ಯಾ?
ಸದಾಶಿವನ ಪೂಜಿಸುವೆನೆಂದು ಹೋದಡೆ
ಕದುಬಿ ಹಿಡಿವವಯ್ಯಾ ಸಕಲ ವಿಪತ್ತುಗಳು.
ಎದೆ ಭಂಗವಿಲ್ಲದೆ ನಿಲ್ಲಬಲ್ಲಡೆ
ಸದಮಲ ಸುಖವನೀವ, ನಮ್ಮ ಕೂಡಲ ಚೆನ್ನಸಂಗಮದೇವ. ॥೧೭೩॥

೮೨೪
ನೀಡಿ ನೀಡಿ ನಿಜವಿಲ್ಲದೆ ಕೆಟ್ಟೆ,
ಮಾಡಿ ಮಾಡಿ ಮನವಿಲ್ಲದೆ ಕೆಟ್ಟೆನಯ್ಯಾ.
ಅಟಮಟದ ಬೆಂದ ಸಂಸಾರವ ಹಿಡಿದು,
ಒಡಲ ಹೊರೆವೆನೆಂದು ಭವಭಾರಿಯಾದೆನಯ್ಯಾ.
ಕುಹಕವೆಂಬ ಮಡುವಿನ ಕೆಸರೊಳು ಬಿದ್ದ,
ಪಶುವಿನಂತಾದೆನಯ್ಯಾ.
ಎನ್ನವಗುಣವ ಸಂಪಾದಿಸದಿರಯ್ಯಾ.
ಎನ್ನ ಭವಪಾಶವ ಹರಿದು,
ಇನ್ನಾದರೂ ಕರುಣಿಸ್ಯೆ, ಮಹಾದಾನಿ
ಕೂಡಲ ಚೆನ್ನಸಂಗಮದೇವಯ್ಯಾ. ॥ ೧೭೪ ॥

೮೨೫
ನೊಸಲ ಕಣ್ಣವರಾಗಬಹುದು,
ಅಂಗಾಲ ಕಣ್ಣವರಾಗಬಹುದು,
ಮೈಯೆಲ್ಲ ಕಣ್ಣವರಾಗಬಹುದು,
ಪಂಚಮುಖದವರಾಗಬಹುದು,
ಅಂಗಲಿಂಗಸಂಬಂಧಿಗಳಾಗಬಾರದು.
ಅಂಗಲಿಂಗಸಂಬಂಧಿಗಳಾಗಬಹುದು,
ಕೂಡಲ ಚೆನ್ನಸಂಗಮದೇವರಲ್ಲಿ
ಲಿಂಗೈಕ್ಯರಾಗಬಾರದು. ॥ ೧೭೫ ॥

೮೨೬
ನೊಸಲಲೊಂದು ಕಣ್ಣು, ಮಕುಟವರ್ಧನರಾದರೇನವರು
[ಅಂಗದ ಮೇಲೆ] ಲಿಂಗ ಸಂಬಂಧವಿಲ್ಲದವರ
ಮನೆಯಲು ಮಾಡಿದ ಪಾಕವ ಕೊಂಡರೆ,
ಶ್ವಾನಜನ್ಮನರಕ ತಪ್ಪದಾಗಿ ಬಲ್ಲವರೊಲ್ಲರು.
ಶಿವಭಕ್ತರಲ್ಲದವರ ಮನೆಯಲುಂಡರೆ
ಜನ್ಮಜನ್ಮಾಂತರ ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು.
ಎಲೆ ಶಿವನೆ, ನೀನಿಲ್ಲದವರ ಮನೆಯಲು ತಿನಿಸಿಂಗೆ
ಎನ್ನ ಮನವು ಸೊಗಸದಯ್ಯಾ, ಕೂಡಲ ಚೆನ್ನಸಂಗಮದೇವಾ. ॥ ೧೭೬ ॥

೮೨೭
ನೋಡುವ ನೋಟ ನೀವೆಂದರಿದೆ,
ಕೇಳುವ ಶ್ರೋತ್ರ ನೀವೆಂದರಿದೆ,
ವಾಸಿಸುವ ಘ್ರಾಣ ನೀವೆಂದರಿದೆ,
ಮುಟ್ಟುವ ಸ್ಪರ್ಶ ನೀವೆಂದರಿದೆ,
ರುಚಿಸುವ ಜಿಹ್ವೆ ನೀವೆಂದರಿದೆ,
ಎನ್ನ ಕರಣಂಗಳು ನಿಮ್ಮ ಕಿರಣಂಗಳಾಗಿ
ಕೂಡಲ ಚೆನ್ನಸಂಗಯ್ಯಾ, ನಾ ನಿಮ್ಮ [ಬೇ]ಡಲಿಲ್ಲ.
ನೀ ಕೂರ್ತು ಕೊಡಲಿಲ್ಲಾಗಿ. ॥ ೧೭೭ ॥

೮೨೮
ಪಂಚಾಮೃತವನುಂಡಡೇನು? ಮಲಮೂತ್ರ ವಿಷಯ ಘನವಕ್ಕು.
ಭ್ರಾಂತು ಬೇಡ ಮರುಳೆ, ಬಿಡುವುದು ಕಾಯಗುಣವ.
ಆಸೆ ಆಮಿಷ ಅಶನ ವ್ಯಸನದಲ್ಲಿ ಹಿರಿಯರು ಗರುವರುಂಟೆ ?

ಭ್ರಾಂತು ಬೇಡ ಮರುಳೆ, ಬಿಡುವುದು ಕಾಯಗುಣವ.
ಈ ಭೇದವ ಭೇದಿಸಬಲ್ಲಡೆ ಕೂಡಲ ಚೆನ್ನಸಂಗನ ಶರಣ
ಸಾಣೆಯಲ್ಲಿ ಸವೆದ ಶ್ರೀಗಂಧದಂತಿರಬೇಕು. || ೧೭೮ ||

೮೨೯
ಪರಂಜ್ಯೋತಿವಸ್ತು
ಉಪದೇಶವ ಕೊಟ್ಟು ಗುರುವಾದ,
ಕರಸ್ಥಲಕ್ಕೆ ಬಂದು ಲಿಂಗವಾದ,
ಹಸರವಾದ ಪ್ರಪಂಚವನಳಿಸಿ ದಾಸೋಹವ ಮಾಡಿಸಿಕೊಂಡು ಜಂಗಮವಾದ.
ಆ ಗುರುಲಿಂಗಜಂಗಮ ಒಂದೆಯಲ್ಲದೆ ಭಿನ್ನವಿಲ್ಲ.
ಮೂರಕ್ಕೆ ಮೂರನಿತ್ತು, ಮೂರನೊಂದ ಮಾಡಬಲ್ಲಡೆ
ಆ ಭಕ್ತನಚ್ಚಪ್ರಸಾದಿ ಕಾಣಾ, ಕೂಡಲ ಚೆನ್ನಸಂಗಮದೇವಾ. || ೧೭೯ ||

೮೩೦
ಪರುಷದ ಅರಸಿಂಗೆ ಕಬ್ಬುನದ ಪರಿವಾರದಂತೆ,
ಮುನಿದೊಮ್ಮೆ ಮುಟ್ಟಿದರೂ ಸುವರ್ಣವಾಗುವುದು ತಪ್ಪದು,
ಸ್ನೇಹದಿಂದ ಮುಟ್ಟಿದರೂ ಸುವರ್ಣವಾಗುವುದು ತಪ್ಪದು.
ಪರುಷ ಲೋಹದ ಸಂಗದಂತೆ
ಕೂಡಲಚೆನ್ನಸಂಗನ ಶರಣರ ಸನ್ನಿಧಿ. || ೧೮೦ ||

೮೩೧
ಪರುಷದ ಪರ್ವತದಲ್ಲಿ ಕಬ್ಬುನಂಗಳುಂಟೆ?
ಅಷ್ಟವಿಧಾರ್ಚನೆ ಷೋಡಶೋಪಚಾರ ಸನ್ನಿಹಿತಂಗೆ
ಅವಗುಣಂಗಳುಂಟೆ?
ಭಕ್ತಕಾಯ ಮಮಕಾಯ
ಕೂಡಲ ಚೆನ್ನಸಂಗಮದೇವ. || ೧೮೧ ||

೮೩೨
ಪರುಷ ಮುಟ್ಟಲು ಕಬ್ಬುನ ಹೊನ್ನಾದಂತೆ,
ಪುಣ್ಯ ಪಾಪಗಳಿಲ್ಲ, ಸ್ವರ್ಗನರಕಗಳಿಲ್ಲಯ್ಯಾ ನಿಮ್ಮವರಿಗೆ.
ಕೂಡಲ ಚೆನ್ನಸಂಗಾ ನಿಮ್ಮ ಶರಣ[ರು] ಭವರಹಿತರು. || ೧೮೨ ||

೮೩೩
ಪಾತಾಳದಗ್ಘವಣಿಯ ನೇಣಿಲ್ಲದೆ,
ತೆಗೆಯಬಹುದೆ ಸೋಪಾನದ ಬಲದಿಂದಲ್ಲದೆ?
ಶಬ್ದಸೋಪಾನವ ಕಟ್ಟಿ ನಡೆಯಿಸಿದರು ಪುರಾತನರು,

ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು
ಕೂಡಲ ಚೆನ್ನಸಂಗನ ಶರಣರು. || ೧೮೩ ||

೮೩೪
ಪುರಾತನರ ವಚನವ ಕಲಿತು ಹೇಳುವವರನೇನೆಂಬೆ!
ಅದ ಕುಳ್ಳಿದ್ದು ಕೇಳುವವರನೇನೆಂಬೆ!
ಅದಕ್ಕೆ ಮನ ನಾಚದವರನೇನೆಂಬೆ!
ಇದು ಕಾರಣ,
ಕೂಡಲ ಚೆನ್ನಸಂಗನಲ್ಲಿ ಶಬ್ದ ನಷ್ಟವಾಗದವರನೇನೆಂಬೆ! || ೧೮೪ ||

೮೩೫
ಪ್ರತಿಯಿಲ್ಲದ ಲಿಂಗ ಭಿನ್ನವಾಯಿತ್ತೆಂದು
ತನ್ನ ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ,
ಆತ್ಮದ್ರೋಹಿಯ ಮುಖವ ನೋಡಲಾಗದು.
[ಮಂತ್ರ] ಭಿನ್ನವಿಲ್ಲಾಗಿ ಪೂಜೆ ಭಿನ್ನವಿಲ್ಲ.
ಮಹಾಬಯಲೊಳಗಣ ಪ್ರಾಣದ ಸಂಚವನರಿಯರಾಗಿ
ಕೂಡಲ ಚೆನ್ನಸಂಗಯ್ಯಾ ಅವರು ರೌರವನರಕಿಗಳು. || ೧೮೫ ||

೮೩೬
ಪ್ರಾಣಲಿಂಗ ಓಸರಿಸಿತ್ತು ಓಸರಿಸಿತ್ತು ಎಂಬಿರಯ್ಯಾ,
ಪ್ರಾಣಲಿಂಗ ಓಸರಿಸಿದಡೆ ಕಾಯವೇಕೆ ಬೀಳದು ಹೇಳಿರೆ?
ಪ್ರಾಣಲಿಂಗ ಓಸರಿಸಬಲ್ಲುದೆ ಸರ್ವಭುವನದೊಡೆಯನು?
ಈ ಪ್ರಾಣಲಿಂಗ ಓಸರಿಸಿದುದೆಂದು ಸಮಾಧಿಯ ಹೊಗುವ[ರ]
ಮುಸುಡ ನೋಡಲಾಗದು ಕಾಣಾ,
ಕೂಡಲ ಚೆನ್ನಸಂಗಮದೇವಾ. || ೧೮೬ ||

೮೩೭
ಪ್ರಾಣಲಿಂಗಪ್ರಸಾದ ಎಲ್ಲಾ ಎಡೆಯಲೂ ಉಂಟು,
ಲಿಂಗಪ್ರಾಣಪ್ರಸಾದವಪೂರ್ವ ನೋಡಾ.
ಪ್ರಾಣಲಿಂಗಪ್ರಸಾದಿ ದೇಹಧರ್ಮಿ,
ಲಿಂಗಪ್ರಾಣಪ್ರಸಾದಿ ಲಿಂಗಭೋಗೋಪಭೋಗಿ,
ಕೂಡಲ ಚೆನ್ನಸಂಗಮದೇವಾ. || ೧೮೭ ||

೮೩೮
ಫಲದೊಳಗಣ ಮಧುರಗೋಪ್ಯದಂತಿದ್ದಿತ್ತು,
ಚಂದ್ರಕಾಂತದ ಉದಕದ ತೆರನಂತಿದ್ದಿತ್ತು,

ಮಯೂರನ ತತ್ತಿಯ ಚಿತ್ರದಂತಿದ್ದಿತ್ತು,
ಶಿಶು ಕಂಡ ಕನಸಿನ ಪರಿಯಂತಿದ್ದಿತ್ತು,
ಕೂಡಲ ಚೆನ್ನಸಂಗಯ್ಯ
ಸದ್ಗುರುಚಿತ್ತದ ಪದದಂತಿದ್ದಿತ್ತು. || ೧೮೮ ||

೮೩೯
ಬಂದವಸರದಲ್ಲಿ ಲಿಂಗವ ನೇತ್ರದಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಶ್ರೋತ್ರದಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಘ್ರಾಣದಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಜಿಹ್ವೆಯಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಸರ್ವಾಂಗದಲ್ಲಿ ಇರಿಸಬೇಕು,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಸಾದಿಯಾದಡೆ. ||೧೮೯||

೮೪೦
ಬಸವಣ್ಣ ಮರ್ತ್ಯಲೋಕಕ್ಕೆ ಬಂದು ಮಹಾಮನೆಯ ಕಟ್ಟಿ,
ಭಕ್ತಿ-ಜ್ಞಾನವೆಂಬ ಜ್ಯೋತಿಯನೆತ್ತಿ ತೋರಲು,
ಸುಜ್ಞಾನವೆಂಬ ಪ್ರಭೆ ಪಸರಿಸಿತಯ್ಯಾ ಜಗದೊಳಗೆ.
ಬೆಳಗಿನೊಳು ತಿಳಿದು ನೋಡಿ,
ಹರೆದಿದ್ದ ಶಿವಗಣಂಗಳೆಲ್ಲ ನೆರೆದು ಕೂಡಿತಯ್ಯಾ.
ಕೂಡಲ ಚೆನ್ನಸಂಗಮದೇವಾ,
ನಿಮ್ಮ ಶರಣ ಬಸವಣ್ಣನ ಕೃಪೆಯಿಂದ
ಪ್ರಭುದೇವರ ನಿಜವನರಿದು ನಿಶ್ಚಿಂತರಾದರಯ್ಯಾ
ಶಿವಗಣಂಗಳೆಲ್ಲರು. || ೧೯೦ ||

೮೪೧
ಬೀಜದಿಂದಾಯಿತ್ತು ಅಂಕುರವೆಂದೆಂಬರು,
ಆ ಬೀಜಕ್ಕೆ ಅಂಕುರವೆ ಪ್ರಾಣವೆಂದರಿಯರು.
ಲಿಂಗದಿಂದಾಯಿತ್ತು ಜಂಗಮವೆಂದೆಂಬರು
ಆ ಲಿಂಗಕ್ಕೆ ಜಂಗಮವೆ ಪ್ರಾಣವೆಂದರಿಯರು, ಕಾಣಾ
ಕೂಡಲ ಚೆನ್ನಸಂಗಮದೇವಾ. || ೧೯೧ ||

೮೪೨
ಬೀದಿಯ ಬಸವಂಗೆ ದೇವಾಲಯದ ಪಶುವಿಂಗೆ ಹುಟ್ಟಿದ ಕರು,
ಬಸವಗಳಪ್ಪುವೆ, ಲಿಂಗಮುದ್ರೆಯನೊತ್ತದನ್ನಕ್ಕ?
ಭಕ್ತಂಗೆ ಭಕ್ತೆಗೆ ಹುಟ್ಟಿದರೆಂದರೆ
ಬರಿಯ ಗುರುಕಾರುಣ್ಯದಲ್ಲಿ ಭಕ್ತರಪ್ಪರೆ,

ಅಂಗದ ಮೇಲೆ ಲಿಂಗವಿಲ್ಲದನ್ನಕ್ಕ?
ಅವರನೊಳಗಿಟ್ಟುಕೊಂಡು ನಡೆದರೆ
ಭಕ್ತಿಹೀನರೆನಿಸಿತ್ತು, ಕೂಡಲಚೆನ್ನಸಂಗನ ವಚನ. ॥ ೮೯೨ ॥

೮೪೩

ಬೇಕೆನಲಾಗದು ಶರಣಂಗೆ, ಬೇಡೆನಲಾಗದು ಶರಣಂಗೆ,
ಬಂದ ಸುಖವನತಿಗಳೆಯಲಾಗದು ಶರಣಂಗೆ,
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣರು
ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು. ॥ ೮೯೩ ॥

೮೪೪

ಬೇಕೆಂಬುದು ಕಾಯಗುಣ, ಬೇಡವೆಂಬುದು ವೈರಾಗ್ಯಗುಣ.
ಬೇಕೆಂಬುದು ಇನಿತಿಲ್ಲ, ಬೇಡವೆಂಬುದು ಇನಿತಿಲ್ಲ.
ಈ ಉಭಯವ ಅತಿಗಳೆದು ಭೋಗಿಸಬಲ್ಲಡೆ
ಕೂಡಲ ಚೆನ್ನಸಂಗಮದೇವಾ, ನಿಮ್ಮ ಶರಣನೆಂಬೆ. ॥ ೮೯೪ ॥

೮೪೫

ಬೇಡುವಾತ ಕರ್ತನಲ್ಲ, ಮಾಡುವಾತ ಭಕ್ತನಲ್ಲ.
ಬೇಡಬೇಕು ನೋಯದಂತೆ, ಮಾಡಬೇಕು ಮರುಗದಂತೆ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಈ ಉಭಯದ ನೋವು ಲಿಂಗದ್ರೋಹ. ॥ ೮೯೫ ॥

೮೪೬

ಬೇಡುವಾತ ಜಂಗಮನಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ,
ಬೇಡದೆ, ಆ ಭಕ್ತ ಮಾಡಿದ ಮಾಟವ ಪರಿಣಾಮಿಸಬಲ್ಲಡೆ ಜಂಗಮ.
ಬೇಡಿಸಿಕೊಳ್ಳದೆ ಆ ಜಂಗಮದ ಇಂಗಿತವನರಿದು
ಅವನ ಮನದಿಚ್ಛೆಯ ಸಲಿಸಬಲ್ಲಡೆ ಆತನೆ ಪರಮಭಕ್ತ.
ಆ ಭಕ್ತ, ನನ್ನದು ನಾನೆಂದು ನುಡಿದಡೆ
ನಾಯ ಮಾಂಸ, ಸತ್ತ ಹೆಣನ ಮಲವು!
ಇದು ಕಾರಣ, ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ
ಬೇಡಿಸಿಕೊಳ್ಳದೆ ಮಾಡುವ ಭಕ್ತನುಂಟಾದಡೆಯೂ
ಬೇಡದೆ ಮಾಡಿಸಿಕೊಂಬುವ ಜಂಗಮವಪೂರ್ವವಯ್ಯಾ. ॥ ೮೯೬ ॥

೮೪೭

ಬ್ರಾಹ್ಮಣದೇಹಿಕನಲ್ಲ, ಕ್ಷತ್ರಿಯದೇಹಿಕನಲ್ಲ,
ವೈಶ್ಯದೇಹಿಕನಲ್ಲ, ಶೂದ್ರದೇಹಿಕನಲ್ಲ,

ಭಕ್ತದೇಹಿಕ ದೇವನೆಂದು ಕೇಳಿಯೂ ಅರಿಯರು.
ಶ್ವಪಚನಾದಡೆಯೂ ಲಿಂಗಭಕ್ತನೇ ಕುಲಜನೆಂದುದು.
ಲೈಂಗ್ಯಪುರಾಣೇ:
ನ ಲಿಂಗೀ ಸರ್ವವೇದಜ್ಞೋ ಯಸ್ತು ಚಾಂಡಾಲವದ್ಭವೀ|
ಲಿಂಗಾರ್ಚಕಶ್ಚ ಶ್ವಪಚೋ ದ್ವಿಜಕೋಟಿವಿಶೇಷಿತಃ||
ಎಂದುದಾಗಿ,
ಅಂಗದ ಮೇಲೆ ಲಿಂಗವಿದ್ದ ಶ್ವಪಚನಾದಡೆಯೂ
ಆತನೆ ಸದ್ಬ್ರಾಹ್ಮಣ.
ಅಂಗದ ಮೇಲೆ ಶಿವಲಿಂಗವಿಲ್ಲದ
ಬ್ರಾಹ್ಮಣರೊಂದು ಕೋಟಿಯಾದಡೆಯೂ
ಶ್ವಪಚರಿಂದ ಕರಕಷ್ಟ ನೋಡಾ, ಕೂಡಲ ಚೆನ್ನಸಂಗಮದೇವಾ. || ೧೯೭ ||

೮೪೮
ಬ್ರಾಹ್ಮಣ ಭಕ್ತನಾದರೇನಯ್ಯಾ? ಸೂತಕಪಾತಕಂಗಳ ಬಿಡ.
ಕ್ಷತ್ರಿಯ ಭಕ್ತನಾದರೇನಯ್ಯ? ಕ್ರೋಧವ ಬಿಡ.
ವೈಶ್ಯ ಭಕ್ತನಾದರೇನಯ್ಯ? ಕಪಟವ ಬಿಡ.
ಶೂದ್ರ ಭಕ್ತನಾದರೇನಯ್ಯ? ಸ್ವಜಾತಿಯೆಂಬುದ ಬಿಡ.
ಇಂತೀ ಜಾತಿಡಂಭಕರ ಮೆಚ್ಚುವನೆ, ಕೂಡಲ ಚೆನ್ನಸಂಗಮದೇವ? || ೧೯೮ ||

೮೪೯
ಭಕ್ತ ಜಂಗಮದ ನುಡಿಗಡಣದ ಮೇಳಾಪವೆಂತಿರಬೇಕೆಂದರೆ:
ಪ್ರಚ್ಛನ್ನವಾಗಿ ಲೋಕಕ್ಕೆ ಅದೃಶ್ಯವಾಗಿರಬೇಕು,
ಜಲಚರನ ಪಾದಪಥದಂತಿರಬೇಕು,
ಶಿಶುಕಂಡ ಕನಸಿನಂತಿರಬೇಕು,
ಮೌನಿಯುಂಡ ರುಚಿಯಂತಿರಬೇಕು, ಶಿವಾಚಾರಕ್ಕೆ ಇದು ಚಿಹ್ನ.
ಅಂತಲ್ಲದೆ ಹಗರಣದ ವಾದ್ಯದಂತೆ ನಗೆಗೆಡೆಯಾಗಿರುತಿಪ್ಪ[ವರು],
ಭೇರುಂಡ ಬಾಯಿವಡೆದಿಪ್ಪವರ ಭಕ್ತರೆಂತೆಂಬೆ? ಜಂಗಮವೆಂತೆಂಬೆ?
ಕೂಡಲ ಚೆನ್ನಸಂಗಮದೇವಾ. || ೧೯೯ ||

೮೫೦
ಭಕ್ತನ ಹಾಡಿ ಬೇಡುವಾತ ಜಂಗಮವಲ್ಲ.
ಭಕ್ತನ ಹೊಗಳಿ ಬೇಡುವಾತ ಜಂಗಮವಲ್ಲ.
ಭಕ್ತನ ಓದಿ ಬೇಡುವಾತ ಜಂಗಮವಲ್ಲ.
ಭಕ್ತನ ಕೊಂಡಾಡಿ ಬೇಡುವಾತ ಜಂಗಮವಲ್ಲ.

ಭಕ್ತನ ಸ್ತುತಿಸಿ ಬೇಡುವಾತ ಜಂಗಮವಲ್ಲ.
ಭಕ್ತನ ಕೈವಾರಿಸಿ ಬೇಡುವಾತ ಜಂಗಮವಲ್ಲ.
ಕೂಡಲಚೆನ್ನಸಂಗಮದೇವರಲ್ಲಿ ಬೇಡದೆ ಮಾಡುವನೆ ಭಕ್ತ,
ಬೇಡದೆ ಮಾಡಿಸಿಕೊಂಬಾತನೆ ಜಂಗಮ. ॥ ೨೦೦ ॥

೮೫೧
ಭಕ್ತರ ಮಠವನರಸಿಕೊಂಡು ಹೋಗಿ,
ಭಕ್ತದೇಹಿಕ ದೇವನೆಂಬ ಶ್ರುತಿವಾಕ್ಯವ ಕೇಳಿ,
ಭಕ್ತನೆ ದೇವನೆಂದರಿದು ಯುಕ್ತಿಯನರಸುವ ಪಾತಕರ ವಿಧಿಗಿನ್ನೆಂತೊ?
ಭಕ್ತರ ಮಠಕ್ಕೆ ಹೋಗಿ 'ಅದು ಇದು' ಎಂಬ ಸಂದೇಹಪಾತಕ ನೀ ಕೇಳಾ,
ಭಕ್ತರ ಮಠದೊಳಗೆ ಭಕ್ತಿರಸದ ಬೆಳಸು, ಲಿಂಗದ ಬೆಳೆ, ಪ್ರಸಾದದ ರಾಶಿ.
ಇಂತಪ್ಪ ಪ್ರಸಾದದಲ್ಲಿಗೆ ಹೋಗಿ
ಸೂತಕವನರಸುವ ಪಾತಕರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ? ॥ ೨೦೧ ॥

೮೫೨
ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು,
ಭಕ್ತಸ್ಥಲವೆಲ್ಲರಿಗೆಲ್ಲಿಯದೊ?
ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ ಮನವಂಚನೆ,
ಜಂಗಮದಲ್ಲಿ ಧನವಂಚನೆವುಳ್ಳನ್ನಕ ಭಕ್ತನೆ?
ಗುರುವಿನಲ್ಲಿ ಚಾರಿತ್ರವ, ಲಿಂಗದಲ್ಲಿ ಲಕ್ಷಣವ,
ಜಂಗಮದಲ್ಲಿ ಜಾತಿಯನರಸುವನ್ನಕ್ಕ ಭಕ್ತನೆ,
ಅಲ್ಲ, ಅವನು ದೋಷಾರ್ಥಿ.
ಭಕ್ತಶ್ಚ ಪ್ರತಿಪಕ್ಷಶ್ಚ ಸದಾಚಾರೇಣ ವರ್ಜಿತಃ ।
ಗುರುಲಿಂಗಜಂಗಮದ್ವೇಷೀ ಯೋ ನರಸ್ಸ ದುರಾತ್ಮಕಃ ॥
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಭಕ್ತಸ್ಥಲವೆಲ್ಲರಿಗೆಲ್ಲಿಯದೊ? ॥ ೨೦೨ ॥

೮೫೩
ಭಕ್ತ ಶಾಂತನಾಗಿರಬೇಕು,
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು,
ಭೂತಹಿತವಹ ವಚನವ ನುಡಿಯಬೇಕು,
ಜಂಗಮದಲ್ಲಿ ನಿಂದೆಯಿಲ್ಲದೆ
ಸಕಲಪ್ರಾಣಿಗಳ ತನ್ನಂತೆ ಭಾವಿಸಬೇಕು,
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಲೇ ಬೇಕು,

ಅಪಾತ್ರದಾನವ ಮಾಡಲಾಗದು,
ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು,
ಇದೇ ಮೊದಲಲ್ಲಿ ಬೇಹ ಶೌಚ ನೋಡಾ.
ಲಿಂಗವ ಪೂಜಿಸಿ ಪ್ರಸಾದವ ಪಡೆವರೆ ಎನಗಿದೇ ಸಾಧನ
ಕೂಡಲ ಚೆನ್ನಸಂಗಮದೇವಾ. || ೨೦೩ ||

೮೫೪
ಭಕ್ತಿಗೆ ಅನುಭಾವವೆ ಬೀಜ ಕಾಣಿರೆ,
ಭಕ್ತಿಗೆ ಅನುಭಾವವೆ ಆಚಾರ ಕಾಣಿರೆ,
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು.
ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿದ್ದಡೆ
ಕೂಡಲ ಚೆನ್ನಸಂಗಮದೇವರು ಅಘೋರನರಕದಲ್ಲಿಕ್ಕುವ. || ೨೦೪ ||

೮೫೫
ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂದು,
ಜಂಗಮವ ಕಂಡು ಗೃಹಕ್ಕೆ ಬಿಜಯಂಗೈಸಿ ತಂದು,
ತೊತ್ತಿನ ಕೈಯಲ್ಲಿ ಅಗ್ಗವಣಿಯ ತಂದಿರಿಸಿ,
ಪಾದಾರ್ಚನೆಯ ಮಾಡುವ ಭಕ್ತನ ಯುಕ್ತಿಯ ಕೇಳಿರಣ್ಣಾ!
ಭಕ್ತರ ಬಸುರಲ್ಲಿ ಬರುತ ಬರುತಲಾ
ತೊತ್ತಿನ ಬಸುರಲ್ಲಿ ಬರುತ್ತಿಪ್ಪನು ಕಾಣಾ,
ಕೂಡಲ ಚೆನ್ನಸಂಗಮದೇವಾ. || ೨೦೫ ||

೮೫೬
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ,
ಭವಿಯೊಡನೆ ಸಂಗವು ಭಂಗವೆಂದರಿಯರು.
ಭವಿಯೊಡನೆ ಸಂಗವ ಮಾಡುವರು
ಕೂಡಲ ಚೆನ್ನಸಂಗಯ್ಯಾ, ಅವರತ್ತಲೂ ಅಲ್ಲ - ಇತ್ತಲೂ ಅಲ್ಲ. || ೨೦೬ ||

೮೫೭
ಭವಿ ಭಕ್ತನಾದರೇನಯ್ಯ ಪೂರ್ವಾಶ್ರಯವಳಿಯದನ್ನಕ್ಕ?
ವೇಶಿ ಭಕ್ತೆಯಾದರೇನಯ್ಯ ಎಂಜಲ ತಿಂಬುದ ಬಿಡದನ್ನಕ್ಕ?
ಅರಸು ಭಕ್ತನಾದರೇನಯ್ಯ, ಅಂಹಕಾರವಳಿಯದನ್ನಕ್ಕ?
ಇಂತೀ ಮೂವರಿಗೆ ಲಿಂಗವ ಕೊಟ್ಟಾತ ವ್ಯವಹಾರಿ, ಕೊಂಡಾತ ಲಾಭಗಾರ.
ಇವರ ಭಕ್ತಿಯೆಂಬುದು,
ಒಕ್ಕಲಗಿತ್ತಿ ಹೊಸ್ತಿಲ ಪೂಜೆಯ ಮಾಡಿ, ಇಕ್ಕಾಲಿಕ್ಕಿ ದಾಟಿದಂತಾಯಿತ್ತು.
ಹಟ್ಟಿಯ ಹೊರಗೆ ಬೆನವನ ಪೂಜೆಯ ಮಾಡಿ

ತಿಪ್ಪೆಯೊಳಗೆ ಬಿಟ್ಟಂತಾಯಿತ್ತು.
ಜಂಗಮದ ಪೂಜೆಯ ಮಾಡಿ, ನೈಷ್ಠೆಯಿಲ್ಲದ ಭ್ರಷ್ಟರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ? ॥ ೨೦೭ ॥

೮೫೮
ಭವಿಯ ಮನೆಯಲ್ಲಿ ಭವಿಪಾಕವಲ್ಲದೆ
ಭಕ್ತನ ಮನೆಯಲ್ಲಿ ಭವಿಪಾಕವಿಲ್ಲ.
ಆ ಭಕ್ತನೂ ಆ ಭಕ್ತನ ಸ್ತ್ರೀಯೂ ಲಿಂಗಮುಂತಾಗಿ,
ಗುರುಲಿಂಗ ಜಂಗಮಕ್ಕೆ ಬೇಕೆಂದು ಭಕ್ತಿರತಿಯಿಂದ
ಲಿಂಗಹಸ್ತದಲ್ಲಿ ಮಾಡಿದ
ಸರ್ವದ್ರವ್ಯಂಗಳು ಸಕಲಪದಾರ್ಥಂಗಳೆಲ್ಲವೂ
ಶುದ್ಧಪಾಕ, ಅತ್ಯಂತ ಪವಿತ್ರಪಾಕ, ಲಿಂಗಕ್ಕೆ ಸಲುವುದು.
ಅದನತಿಗಳೆದಡೆ ದ್ರೋಹ.
ಲಿಂಗಕ್ಕೆ ಕೊಟ್ಟುಕೊಳಬೇಕು ಕೂಡಲ ಚೆನ್ನಸಂಗಮದೇವಾ. ॥ ೨೦೮ ॥

೮೫೯
ಭಾಷೆಗೇರಿಸಿ ತನುವಿಂಗೆ ಅಲಗ ಕೊಂಡರೆ ಲಿಂಗ ಓಸರಿಸಿತ್ತಯ್ಯಾ.
ಆತ ವೀರನೆನಿಸುವ.
ಲಿಂಗಕ್ಕೆ ದೂರ, ಜಂಗಮಕ್ಕೆ ದೂರ,
ಪ್ರಸಾದಕ್ಕೆ ದೂರ, ವ್ರತಗೇಡಿಯಾಗಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ ಬ್ರಹ್ಮೇತಿಕಾರನೆನಿಸುವ. ॥ ೨೦೯ ॥

೮೬೦
ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆಂದೆನಬೇಡ,
ಮುಂದಣ ಫಲದೊಳಗರಸಿಕೋ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆಂದೆನಬೇಡ,
ಮುಂದಣ ಬಣ್ಣದೊಳಗರಸಿಕೋ!
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆಂದೆನಬೇಡ,
ಮುಂದಣ ಅಗ್ನಿಯೊಳಗರಸಿಕೋ!
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ.
ಇದು ಕಾರಣ, ಕೂಡಲ ಚೆನ್ನಸಂಗನ ಶರಣರ
ಪಾದ ಪ್ರತಿಬಿಂಬದೊಳಗರಸಿಕೋ
ಸಂಗನ ಬಸವಣ್ಣಾ! ॥ ೨೧೦ ॥

೬೬೧
ಭೈರವನನಾರಾಧಿಸಿ ಬಾಹಿರವೋದರಯ್ಯಾ,
ಮೈಲಾರನನಾರಾಧಿಸಿ ಕುರುಳು ಬೆರಳ ಕಡಿಸಿಕೊಂಡು
ನಾಯಾಗಿ ಬಗಳುತ್ತಿಪ್ಪರು,
ಜಿನನನಾರಾಧಿಸಿ ಲಜ್ಜೆದೊರೆದರು ನೋಡಾ.
ನಮ್ಮ ಕೂಡಲ ಚೆನ್ನಸಂಗಯ್ಯನನಾರಾಧಿಸಿ
'ದೇವಭಕ್ತ'ಯೆಂದೆನಿಸಿಕೊಂಬರು ನೋಡಯ್ಯಾ. || ೨೧೧ ||

೬೬೨
ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು,
ವಸ್ತ್ರ ಮಾಸಿದರೆ ಮಡಿವಾಳರಿಗಿಕ್ಕುವುದು,
ಮನದ ಮೈಲಿಗೆಯ ತೊಳೆಯಬೇಕಾದಡೆ
ಕೂಡಲ ಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು. || ೨೧೨ ||

೬೬೩
ಮಡಿಲಲ್ಲಿ ಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದರೇನು?
ಕೊರಳಲ್ಲಿ ಸುತ್ತಿದ ಹಾವಿನಂತೆ ಕೊರಳಲ್ಲಿ ಕಟ್ಟಿದರೇನು?
ಕಳವು ಹಾದರ ಭವಿಯ ಸಂಗ ಅನ್ಯದೈವವ ಬಿಡದನ್ನಕ್ಕ
ಲಿಂಗಭಕ್ತನೆನಿಸಲು ಬಾರದಯ್ಯ.
ಅನಾಚಾರದಿಂ ನರಕ, ಆಚಾರದಿಂ ಸ್ವರ್ಗ.
ಕೂಡಲ ಚೆನ್ನಸಂಗಯ್ಯನೊಲ್ಲ ಭೂಮಿಭಾರಕರ. || ೨೧೩ ||

೬೬೪
ಮತಿಗೆಟ್ಟ ಕುಂಬರ ಮಣ್ಣ ಸೂಜಿಯ ಮಾಡಿ
ಕಂಬಾರಗೇರಿಗೆ ಮಾರಹೋದಡೆ,
ಅವರುಕ್ಕಿನ ಸೂಜಿಯ ಮಾರುವರಾಗಿ!
ವೇಷಧಾರಿ ಮಾತ ಕಲಿತು, ಅಭಿಮಾನಕ್ಕೆ ಪರೀಕ್ಷೆಯ ಕೊಡುವಂತೆ
ಕೂಡಲ ಚೆನ್ನಸಂಗನ ನಿಲವನರಿಯದೆ
ಉಲಿಯದಿರಾ, ಲೀಲೆಯ ಪಶುವೆ! || ೨೧೪ ||

೬೬೫
ಮಧುರಗುಣವ ಇರುವೆ ಬಲ್ಲುದು.
ವೇಳೆಯ ಗುಣವ ಕೋಳಿ ಬಲ್ಲುದು.
ಗೋತ್ರದ ಗುಣವ ಕಾಗೆ ಬಲ್ಲುದು.
ಈ ಮನುಷ್ಯಜನ್ಮದಲ್ಲಿ ಹುಟ್ಟಿ,

ಶಿವಜ್ಞಾನಿಗಳ ಬರವನರಿಯದಿಪ್ಪಡೆ
ಆ ಕೋಳಿ ಕಾಗೆ ಇರುವೆಗಿಂದಲು ಕರಕಷ್ಟ ಕಾಣಾ,
ಕೂಡಲಚೆನ್ನಸಂಗಮದೇವಾ. || ೨೧೫ ||

೮೬೬
ಮನಕ್ಕೆ ಮನವೇಕಾರ್ಥವಾಗಿ,
ಪ್ರಾಣಕ್ಕೆ ಪ್ರಾಣವೇಕಾರ್ಥವಾಗಿ,
ಭಾವಕ್ಕೆ ಭಾವವೇಕಾರ್ಥವಾಗಿ,
ಸಂಗಕ್ಕೆ ಸಂಗ ಸಮರತಿಯಾಗಿ,
ಕೂಡಿದ ಕೂಟವನಗಲಬಾರದಯ್ಯ.
ಅಗಲಿ ಒಂದು ನಿಮಿಷ ಸೈರಿಸಬಾರದಯ್ಯಾ.
ಕೂಡಲಚೆನ್ನಸಂಗಾ,
ನಿಮ್ಮ ನಚ್ಚುಮೆಚ್ಚಿನ ಶರಣರನಗಲುವ ಅಗಲಿಕೆ,
ಎನ್ನ ಪ್ರಾಣದ ಹೋಕು ನೋಡಯ್ಯಾ. || ೨೧೬ ||

೮೬೭
ಮನೆಯೊಳಗಣ ಜ್ಯೋತಿ ಮನೆಯ ಮುಟ್ಟದಂತೆ,
ಬಸುರೊಳಗಣ ಶಿಶು ಬಸುರ ಮುಟ್ಟದಂತೆ,
ಕಕ್ಷೆ, ಕರಸ್ಥಳ, ಅಂಗಸೋಂಕು, ಮುಖಸೆಜ್ಜೆ, ಕಂಠ, ಉತ್ತಮಾಂಗ,
ಇವೆಲ್ಲ ಆಯತಂಗಳಲ್ಲದೆ ಪ್ರಾಣಲಿಂಗಸ್ಥಳ ಬೇರೆ.
ಇದು ಕಾರಣ, ಕೂಡಲ ಚೆನ್ನಸಂಗಾ ನಿಮ್ಮ ಶರಣನ ಪರಿ ಬೇರೆ. || ೨೧೭ ||

೮೬೮
ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು,
ಕ್ಷೀರದೊಳಡಗಿದ ತುಪ್ಪದಂತಿದ್ದಿತ್ತು,
ಚಿತ್ರಕನೊಳಡಗಿದ ಚಿತ್ರದಂತಿದ್ದಿತ್ತು,
ಆಲಿಯೊಳಡಗಿದ ತೇಜದಂತಿದ್ದಿತ್ತು,
ನುಡಿಯೊಳಡಗಿದ ಅರ್ಥದಂತಿದ್ದಿತ್ತು,
ಕೂಡಲ ಚೆನ್ನಸಂಗಯ್ಯಾ, ನಿಮ್ಮ ನಿಲವು. || ೨೧೮ ||

೮೬೯
ಮರುತನ ಸಂಗದಿಂದ ಪರಿಮಳ ಬೀಸರವಾಯಿತ್ತು,
ನುಡಿಯ ಗಡಣದಿಂದ ಅನುಭಾವ ಬೀಸರವಾಯಿತ್ತು,
ಮಾಟದ ಸಂಭ್ರಮದಿಂದ ಭಕ್ತಿ ಬೀಸರವಾಯಿತ್ತು,
ಕೂಟದ ಬೆರಕೆಯ ಸಂಭ್ರಮದಿಂದ ಅರಿವು ಬೀಸರವಾಯಿತ್ತು.

ಸೂಕ್ಷ್ಮ ಶಿವಪಥವು ಸಾಮಾನ್ಯಂಗಳವೆ?
ಕೂಡಲ ಚೆನ್ನಸಂಗನ ಶರಣರಿಗಲ್ಲದಿಲ್ಲ. || ೨೧೯ ||

೮೭೦
ಮಸಣವೈರಾಗ್ಯರು ಲಕ್ಷ ಲಕ್ಷ, ಪುರಾಣವೈರಾಗ್ಯರು ಲಕ್ಷ ಲಕ್ಷ,
ಪ್ರಸೂತಿವೈರಾಗ್ಯರು ಲಕ್ಷ ಲಕ್ಷ, ಪಿತ್ತವೈರಾಗ್ಯರು ಲಕ್ಷ ಲಕ್ಷ,
ಸ್ವಯಾನುಭಾವ ಸಮ್ಯಕ್‌ಜ್ಞಾನ ವೈರಾಗ್ಯರನೊಬ್ಬರನೂ ಕಾಣೆ,
ಕೂಡಲ ಚೆನ್ನಸಂಗಮದೇವಾ. || ೨೨೦ ||

೮೭೧
ಮಾಂಸಕ್ಕೆ ಮೆಚ್ಚಿದ ಅರಸುಗಳು ನಾಯೆಂಜಲ ತಿಂದು
ನರಕಕ್ಕಿಳಿದು ಹೋದರು.
ಸೂಳೆಗೆ ಮೆಚ್ಚಿದವರು ಸೂಳೆಯ ಬಂಟರೆಂಜಲ ತಿಂದು
ನರಕಕ್ಕಿಳಿದು ಹೋದರು.
ಇದು ಲೋಕವರಿಯಲುಂಟು.
ಲಿಂಗವ ಮೆಚ್ಚಿದ ಸದ್ಭಕ್ತರು ಗುರುಲಿಂಗಜಂಗಮದ
ಒಕ್ಕು ಮಿಕ್ಕ ಪ್ರಸಾದವ ಕೊಂಡು,
ಆಗಳೆ ಅಂತೆ ಮೋಕ್ಷವನೈದಿದರೆಂಬುದು.
ಶಿವರಹಸ್ಯದಲ್ಲಿ:
ಶ್ವಾನೋಚ್ಛಿಷ್ಟಾಯತೇ ರಾಜಾ ವೇಶ್ಯೋಚ್ಛಿಷ್ಟಂ ಜಗತ್ತ್ರಯಮ್।
ಜಂಗಮೋಚ್ಛಿಷ್ಟಭುಂಜಾನೋ ಸದ್ಯೋ ಮುಕ್ತೋ ನ ಸಂಶಯಃ॥
ಎಂದುದಾಗಿ
ಗುರುಲಿಂಗಜಂಗಮದ ಪ್ರಸಾದವ ಕೊಂಬವರ ಕಂಡು
ನಿಂದಿಸುವರ ಬಾಯಲ್ಲಿ ಬಾಲಹುಳು ಸುರಿಯದೆ ಮಾಬ್ಬುವೆ,
ಕೂಡಲಚೆನ್ನಸಂಗಮದೇವಾ? || ೨೨೧ ||

೮೭೨
ಮಾಂಸಪಿಂಡವೆಂದೆನಿಸದೆ ಮಂತ್ರಪಿಂಡವೆಂದೆನಿಸಿದ ಬಸವಣ್ಣ,
ವಾಯುಪ್ರಾಣಿಯೆಂದೆನಿಸದೆ ಲಿಂಗಪ್ರಾಣಿಯೆಂದೆನಿಸಿದ ಬಸವಣ್ಣ,
ಜಗಭರಿತನೆಂಬ ಶಬ್ದಕ್ಕೆ ಅಂಗವಿಸದೆ, ಶರಣಭರಿತ ಲಿಂಗವೆನಿಸಿದ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು. || ೨೨೨ ||

೮೭೩
ಮಾಡುವರಯ್ಯಾ ಮಾಡುವರಯ್ಯಾ ಮರುಳುಗೊಂಡಂತೆ,
ವರ್ಮವರಿಯದ ಮಾಟ ಸಯದಾನದ ಕೇಡು,

ಕರ್ಮದ ಬೆಳೆಸು.
ಕೂಡಲ ಚೆನ್ನಸಂಗನ ಶರಣರ ಅನುವರಿಯದೆ
ಮಾಡುವ ಮಾಟ ಭವಮಾಟ. || ೨೨೩ ||

೮೭೪
ಮಾಡುವಲ್ಲಿ ಎನ್ನ ನಾನು ಅರೆಯಿತ್ತು ಮಾಡಿದೆನಾದಡೆ,
ನೀಡುವಲ್ಲಿ ಎನ್ನ ನಾನು ಅರೆಯಿತ್ತು ನೀಡಿದೆನಾದಡೆ,
[ಉಣಿಸುವಲ್ಲಿ] ಎನ್ನ ನಾನು ರುಚಿಗೆ ಹಾರೈಸಿದೆನಾದಡೆ,
ನಿಮಗಂದೇ ದ್ರೋಹಿಯಯ್ಯಾ!
ಮಾಡುವಲ್ಲಿ ನೀಡುವಲ್ಲಿ [ಉಣಿಸುವಲ್ಲಿ] ಕೂಡೆ ಶುದ್ಧನಲ್ಲದಡೆ
ನೀನಂದೆ ಮೂಗ ಕೊಯ್ಯಾ, ಕೂಡಲ ಚೆನ್ನಸಂಗಮದೇವಾ. || ೨೨೪ ||

೮೭೫
ಮಾತಿನ ಮಾತಿನ ಗೀತಾಂಗದಲ್ಲಿ ಸುಜಾಣನಾಗಲಹುದು.
ಶ್ರೋತ್ರಶೋಭೆ ಪ್ರಜ್ಞಾಪ್ರವೀಣತೆಯಲ್ಲಿ ಶಾಸ್ತ್ರಿಕನಾಗಲಹುದು.
ಅಂತರಂಗ ಬಹಿರಂಗವನಂತವ ಕಾಣಬಹುದು.
ಅಂತರಾಗಮ, ಗಣಿತ ಗುಣಿತ, ಶ್ರುತಿ ಸ್ಮೃತಿಗತರ್ಕ್ಯನಾಗಿರಬಹುದು.
ಭೂತವಿಕಾರದ ಪ್ರಕೃತಿಸ್ವಭಾವ ಭ್ರಾಂತಳಿದಿರಬಹುದು.
ಕಾಂತಾ ರತಿಗುಣವರ್ಜಿತ ಸನ್ಯಾಸಿ, ಕ್ಷೇತ್ರವಾಸಿಗಳಾಗಿರಬಹುದು.
ಎನ್ನೊಡೆಯ ಕೂಡಲ ಚೆನ್ನಸಂಗಮದೇವನ
ನಚ್ಚಿನ ಮೆಚ್ಚಿನ ಇಚ್ಛಾವಶ[ವರ್ತಿ]ಯಾಗಿರಬಾರದು
ಲಿಂಗಾನುಭಾವಿಗಲ್ಲದೆ. || ೨೨೫ ||

೮೭೬
ಮಿಂಚು ಮಿಂಚಿದಡೆ,
ಮಿಂಚಿನಲುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು.
ಇಂದ್ರಚಾಪ ತೋರಿದಡೆ,
ಇಂದ್ರಚಾಪದಲುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು.
ಮಹಾನುಭಾವಿಗಳು ಮನದೆರೆದು ಮಾತನಾಡಿದಡೆ,
ಅನುಭಾವದೊಳಗುಳ್ಳ ಪ್ರಯೋಗವನಾಕ್ಷಣವೆ ಪ್ರಯೋಗಿಸಬೇಕು.
ಕೂಡಲ ಚೆನ್ನಸಂಗಯ್ಯನಲ್ಲಿ ಸ್ವಾಯತವಾದ ಶರಣರು ಸ್ವೇಚ್ಛಾಪರರು. || ೨೨೬ ||

೮೭೭
ಮುತ್ತಿನ ಮೊತ್ತವ ಕತ್ತೆಗಲಂಕರಿಸಿದಡೇನು
ಅದಕೆ ಮುತ್ತಿನ ಬೆಲೆ ಗೊತ್ತಾಗಬಲ್ಲುದೆ?
ಬುತ್ತಿಯನೆನಿಸು ಹೊತ್ತು ನೆತ್ತಿಯಲ್ಲಿ ಹೊತ್ತಡೇನು

ತೃಪ್ತಿಯಾಗಬಲ್ಲುದೆ?
ನೈಷ್ಠೆಯಿಲ್ಲದ ಕಷ್ಟಜೀವಿಗೆ ಇಷ್ಟಲಿಂಗವ ಕಟ್ಟಿದಡೇನು
ಶ್ರೇಷ್ಠ ಶಿವಭಕ್ತನಾಗಬಲ್ಲನೆ?
ಅದು ಕಾರಣ, ಉತ್ತಮಾಧಿಕಾರಿಯನರಿದು
ಇಷ್ಟಲಿಂಗವ ಕೊಟ್ಟ ಗುರುವಿಗೆ
ಕೂಡಲ ಚೆನ್ನಸಂಗಯ್ಯನು ಮೆಚ್ಚಿ ಮನ್ನಣೆಯನೀವನು. || ೨೨೭ ||

೮೭೮
ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?
ಗುರುಕಾರುಣ್ಯವ ಪಡೆದ ಭಕ್ತರು
ಹಿಂದಣ ಪೂರ್ವಾಶ್ರಯವ ಬೆರಸಲಾಗದು,
ಬೆರಸಿದರೆ ಆಚಾರದ್ರೋಹ
ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ
ಪಾದೋದಕದ್ರೋಹ ಪ್ರಸಾದದ್ರೋಹ.
ಇಂತು ಷಡ್ವಿಧದ್ರೋಹ ಬಂದುದೆಂದರಿಯದವಂಗೆ
ಕುಂಭೀಪಾಕ ನಾಯಕನರಕದಲ್ಲಿಕ್ಕುವ
ಕೂಡಲ ಚೆನ್ನಸಂಗಮದೇವ. || ೨೨೮ ||

೮೭೯
ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ,
ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ,
ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು
ನಿಮ್ಮ ಶರಣರು.
ತಾವೇನು ಮರುಜವಣಿಯ ಕೊಂಡರೆ?
ಅಮೃತಸೇವನೆಯ ಮಾಡಿದರೆ?
ಆವ ಸ್ಥಲದಲ್ಲಿ ನಿಂದರೂ
ಆ ಸ್ಥಲದಲ್ಲಿ ಷಡುಸ್ಥಲ ಅಳವಡದಿದ್ದರೆ,
ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ದು ಹೋಗುವೆನೆಂದ
ಕೂಡಲ ಚೆನ್ನಸಂಗಮದೇವ. || ೨೨೯ ||

೮೮೦
'ಯತ್ರ ಜೀವಸ್ತತ್ರ ಶಿವ'ನೆಂಬ ಬಾಲಭಾಷೆಯ ಕೇಳಲಾಗದು.
ಶಿವಶಿವಾ 'ಯತ್ರಜೀವಸ್ತತ್ರ ಶಿವ'ನಾದರೆ
ಜೀವಂಗೆ ಮರಣವೇಕೋ?
'ಯತ್ರ ಜೀವಸ್ತತ್ರ ಶಿವ'ನಾದರೆ

ಜನನ ಸ್ಥಿತಿ ಮರಣ ರುಜೆ ಸಂಸಾರ ಬಂಧನವೇಕೋ?
'ಯತ್ರ ಜೀವಸ್ತತ್ರ ಶಿವ'ನಾದರೆ
ಪುಣ್ಯಪಾಪ ಪ್ರಳಯಕಾಲ ಕಲ್ಪಿತವೇಕೊ?
ಇದು ಕಾರಣ 'ಯತ್ರ ಜೀವಸ್ತತ್ರ ಶಿವ'ನಲ್ಲ.
ಉತ್ಪತ್ತಿ ಸ್ಥಿತಿ ಪ್ರಳಯರಹಿತನು ಸದ್ಭಕ್ತರಲ್ಲಿಪ್ಪನಲ್ಲದೆ
ಮತ್ತೆಲ್ಲಿಯೂ ಇಲ್ಲ,
ಕೂಡಲ ಚೆನ್ನಸಂಗಮದೇವಾ. || ೨೩೦ ||

೮೮೧
ರಚನೆ ರಂಜಕವ ನುಡಿವಾತ ಜಂಗಮವಲ್ಲ,
ನರರ ಹೊಗಳಿ ಹಾಡಿ ಬೇಡುವಾತ ಜಂಗಮವಲ್ಲ,
ನರರ ಕೈವಾರಿಸುವಾತ ಜಂಗಮವಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಪ್ರಭುವೇ ಜಂಗಮ, ಬಸವಣ್ಣನೇ ಭಕ್ತ. || ೨೩೧ ||

೮೮೨
ರಣವನರ್ಚಿಸಿ, ಭೂತಕ್ಕೆ ಬಲಿಯ ಕೊಡುವ ಕಲಿಯ ಮನ
ಮೊನೆಯ ಮೇಲೆ ಇಪ್ಪಂತೆ
ಸಮಯಾಚಾರವ ಮಾಡಬೇಕು.
ಮಾಡಿಹೆನೆಂಬುದು ಸಾಮಾನ್ಯವೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಸಮಯಭಕ್ತಿ ಸಂದಿತ್ತು ಸಂಗನಬಸವಣ್ಣಂಗೆ. || ೨೩೨ ||

೮೮೩
ರೂಪನರ್ಪಿಸಿ ಫಲವೇನು, ರುಚಿಯನರ್ಪಿಸದನ್ನಕ್ಕ?
ರುಚಿಯನರ್ಪಿಸಿ ಫಲವೇನು, ಪರಿಣಾಮವನರ್ಪಿಸದನ್ನಕ್ಕ?
ಪರಿಣಾಮವನರ್ಪಿಸಿ ಫಲವೇನು, ತನ್ನನರ್ಪಿಸದನ್ನಕ್ಕ?
ತನ್ನನರ್ಪಿಸಿ ಫಲವೇನು,
ಕೂಡಲ ಚೆನ್ನಸಂಗಯ್ಯನೆಂಬ ಭಾವ ಬರಿದಾಗದನ್ನಕ್ಕ? || ೨೩೩ ||

೮೮೪
ಲಿಂಗಕಲ್ಲದೆ ಇಂಬುಗೊಡೆನು, ಎನ್ನ ಮನವ.
ಜಂಗಮಕಲ್ಲದೆ ಇಂಬುಗೊಡೆನು, ಎನ್ನ ಧನವ.
ಪ್ರಸಾದಕಲ್ಲದೆ ಇಂಬುಗೊಡೆನು, ಎನ್ನ ಜಿಹ್ವೆಯ.
ಸಕಲ ಇಂದ್ರಿಯಂಗಳನು ತ್ರಿವಿಧದಲ್ಲಿಯೆ

ತಂದು ನಿಲ್ಲಿಸುವೆನು.
ಕೂಡಲ ಚೆನ್ನಸಂಗಮದೇವರಪ್ಪಯಿಸಿಪ್ಪ ಕಾರಣದಿಂದ
ಎನ್ನರಿವ ಅನ್ಯರಿಗೆ ಬೀಯಮಾಡಲಾರೆನು. ॥೨೩೪॥

೮೮೫
ಲಿಂಗಕ್ಕೆ ಮನ ಭಾಜನ, ಜಂಗಮಕ್ಕೆ ಧನ ಭಾಜನ,
ಪ್ರಸಾದಕ್ಕೆ ತನು ಭಾಜನ.
ಈ ತ್ರಿವಿಧಭಾಜನದಲ್ಲಿ ಸಹಭೋಜನವ ಮಾಡುವನು
ಕೂಡಲ ಚೆನ್ನಸಂಗಾ, ನಿಮ್ಮ ಶರಣ ಬಸವಣ್ಣನು. ॥೨೩೫॥

೮೮೬
ಲಿಂಗದ ಪೂರ್ವಾಶ್ರಯವ ಕಳೆದು,
ಇದು ಪ್ರಾಣಲಿಂಗವೆಂದು ತೋರಬಂದನಯ್ಯಾ ಬಸವಣ್ಣನು!
ಲಾಂಛನದ ಪೂರ್ವಾಶ್ರಯವ ಕಳೆದು,
ಇದು ಜಂಗಮಲಿಂಗವೆಂದು ತೋರಬಂದನಯ್ಯಾ ಬಸವಣ್ಣನು!
ಪ್ರಸಾದದ ಪೂರ್ವಾಶ್ರಯವ ಕಳೆದು,
ಇದು, ಪ್ರಸಾದವೆಂದು ಸಯವ ಮಾಡಿ
ತೋರಬಂದನಯ್ಯಾ ಬಸವಣ್ಣನು!
[ಇಂತು] ಲಿಂಗ ಜಂಗಮದ ಪ್ರಸಾದದ
ಪೂರ್ವಾಶ್ರಯವ ಕಳೆಯಲೆಂದು
ಮರ್ತ್ಯಕ್ಕೆ ಜನಿಸಿದನಯ್ಯಾ, ಕೂಡಲ ಚೆನ್ನಸಂಗನಲ್ಲಿ ಬಸವಣ್ಣನು. ॥೨೩೬॥

೮೮೭
ಲಿಂಗದಲ್ಲಿ ಕಠಿಣವಾರ್ತೆ, ಜಂಗಮದಲ್ಲಿ ಜಾತಿವಾರ್ತೆ,
ಪ್ರಸಾದದಲ್ಲಿ ಅಪವಿತ್ರವಾರ್ತೆಯ ಕೇಳಲಾಗದು ಶಿವ, ಶಿವ!
ಕೂಡಲ ಚೆನ್ನಸಂಗಮದೇವನು ಅಘೋರನರಕದಲಿಕ್ಕುವ. ॥ ೨೩೭ ॥

೮೮೮
ಲಿಂಗದಲ್ಲಿ ಕೊಡಲುಂಟು ಕೊಳಲುಂಟಾಗಿ ಅರ್ಪಿತ,
ಜಂಗಮದಲ್ಲಿ ಕೊಟ್ಟು ಕೊಳಲಿಲ್ಲಾಗಿ ಅನರ್ಪಿತ,
ಪ್ರಸಾದದಲ್ಲಿ ಕೊಡಲು ಕೊಳಲಿಲ್ಲಾಗಿ ಉಭಯನಾಸ್ತಿ.
ಈ ತ್ರಿವಿಧ ಸಂಚದ ಸನುಮತವನು
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ॥ ೨೩೮ ॥

೮೮೯
ಲಿಂಗ ಬಂದು ಮನವನಿಂಬುಗೊಂಬುದು,
ಜಂಗಮ ಬಂದು ಧನವನಿಂಬುಗೊಂಬುದು,

ಪ್ರಸಾದ ಬಂದು ತನುವನಿಂಬುಗೊಂಬುದು,
[ಈ] ತ್ರಿವಿಧವು ತಾನೆ, ಕೂಡಲ ಚೆನ್ನಸಂಗಾ,
ನೀನೊಲಿದ ಶರಣಂಗೆ ದೃಷ್ಟ. || ೨೩೯ ||

೮೯೦
ಲಿಂಗಮುಖವು ಜಂಗಮವೆಂದುದಾಗಿ,
ತಾನು ಸತ್ಕಾಯಕದಿಂದ ಸಂಪಾದಿಸಿದ ಸತ್ಪದಾರ್ಥವ ಜಂಗಮಕ್ಕಿತ್ತು,
ತತ್‌ಪ್ರಸಾದವ ಭಕ್ತಿಯಿಂದ ಪಡೆದು ಸೇವಿಸಬಲ್ಲಡೆ,
ಅದು ಅಶನವೆಂಬೆ,
ಈ ಕ್ರಮಕ್ಕೆ ಹೊರಗಾದುದೆ ಅನಶನವೆಂಬೆ,
'ಸಾಶನಾನಶನೇ ಅಭಿ' ಎಂದುದಾಗಿ.
ಇಂತೀ ಅಶನ ಅನಶನಗಳ ಭೇದವನರಿಯದೆ
ತನುವ ದಂಡಿಸದೆ ಮನವ ಖಂಡಿಸದೆ
ತನಗಾಗಿ ಜನವ ಮೋಸಂಗೈದು ತಂದು,
ಮನೆಯಲ್ಲಿ ಮಡಗಿದ ದ್ರವ್ಯವು
ಗುರುವಿಂಗೆ ಸಲ್ಲದು,
ಲಿಂಗಕ್ಕೆ ಸಲ್ಲದು, ಜಂಗಮಕ್ಕೆ ಸಲ್ಲದಾಗಿ.
ಇಂತೀ ಬಿನುಗು ಮಾನವನ ನಮ್ಮ ಕೂಡಲ ಚೆನ್ನಸಂಗಮದೇವನು,
ಹೀನಯೋನಿಯಲ್ಲಿ ಬರಿಸದೆ ಮಾಣ್ಬನೆ? || ೨೪೦ ||

೮೯೧
ಲಿಂಗ ಮುಂತಾಗಿಯೇ ನಡೆವನು ಶರಣನು,
ಲಿಂಗ ಮುಂತಾಗಿಯೇ ನುಡಿವನು ಶರಣನು,
ಲಿಂಗ ಮುಂತಾಗಿಯೇ ತೃಪ್ತನು ಶರಣನು,
ಲಿಂಗಕಾಯ ಶರಣ, ಶರಣಕಾಯ ಲಿಂಗ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಸರ್ವಾಂಗಲಿಂಗಿ. || ೨೪೧ ||

೮೯೨
ಲಿಂಗವನರಿವರೆ ಮನ ನಿಚ್ಚಣಿಗೆ,
ಜಂಗಮವನರಿವರೆ ಧನ ನಿಚ್ಚಣಿಗೆ,
ಪ್ರಸಾದವನರಿವರೆ ತನು ನಿಚ್ಚಣಿಗೆ,
ಈ ತ್ರಿವಿಧವನರಿವರೆ ತ್ರಿವಿಧ ನಿಚ್ಚಣಿಗೆ.
ಇದು ಕಾರಣ, ಕೂಡಲ ಚೆನ್ನಸಂಗನ
ಶರಣಂಗಲ್ಲದಿಲ್ಲವೀ ಸಂಪತ್ತು. || ೨೪೨ ||

೮೯೩
ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಯ್ಯಾ,
ಬಂದುದೆ ಪರಿಣಾಮ, ನಿಂದುದೆ ನಿವಾಸ,
ಅದು ಇದು ಎಂಬುದಿಲ್ಲ, ಕೂಡಲ ಚೆನ್ನಸಂಗನ ಶರಣರಿಗೆ. || ೨೪೩ ||

೮೯೪
ಲೋಕದ ನುಡಿ ತನಗೆ ಡೊಂಕು, ತನ್ನ ನುಡಿ ಲೋಕಕ್ಕೆ ಡೊಂಕು.
ಊರ ಹೊದ್ದ, ಕಾಡ ಹೊದ್ದ, ಆಪ್ಯಾಯನ ಭುಕ್ತಿವಿರಹಿತ ಶರಣ.
ಕಪಾಲದೊಳಗೆ ಉಲುಹಡಗಿದ,
ಕೂಡಲ ಚೆನ್ನ[ಸಂಗ]ಯ್ಯನಲ್ಲಿ ಒಂದಾದ, ಲಿಂಗೈಕ್ಯವು. || ೨೪೪ ||

೮೯೫
ಲೋಕದೊಳಗಿಪ್ಪವರು,
ಲೋಕದೊಳು ಸುಳಿವವರು,
ಲೋಕದ ಹಂಗಿಗರು,
ಲಿಂಗದ ಸುದ್ದಿಯ ತಾವೆತ್ತ ಬಲ್ಲರು?
ಬರಿದೆ ಹೋರುವ ಭ್ರಮಿತರು.
ಇವರ, ತ್ರಿವಿಧಕ್ಕೆ ವಿರಹಿತರೆಂಬೆ ಕೂಡಲ ಚೆನ್ನಸಂಗಮದೇವಾ. || ೨೪೫ ||

೮೯೬
ಲೋಕವನು ಹೊದ್ದ, ಲೌಕಿಕವ ಬೆರಸ, ಏಕಗ್ರಾಹಿ ಶರಣ,
ಲಿಂಗವ ಪೂಜಿಸಿ ಅನ್ಯವನರಿಯದ ಅಚ್ಚಲಿಂಗೈಕ್ಯ,
ಕೂಡಲ ಚೆನ್ನಸಂಗಾ ನಿಮ್ಮ ಶರಣ. || ೨೪೬ ||

೮೯೭
ಲೋಹ ಪರುಷವ ಮುಟ್ಟುವುದಲ್ಲದೆ,
ಪರುಷ ಪರುಷವ ಮುಟ್ಟುವುದೆ ಅಯ್ಯಾ?
ಅಂಗವಿಡಿದಂಗೆ ಪ್ರಸಾದವಲ್ಲದೆ,
ಲಿಂಗವಿಡಿದಂಗೆ ಪ್ರಸಾದವುಂಟೆ?
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ
ಕಿರಿದಿಂಗೆ ಕಿರಿದು, ಹಿರಿದಕ್ಕೆ ಹಿರಿದು, ವಾಙ್ಮನಕ್ಕಗೋಚರ.
ಕೂಡಲ ಚೆನ್ನಸಂಗಮದೇವ [ಕೇಳಯ್ಯಾ]
ಸ್ವರೂಪು ಪ್ರಸಾದಿ, ನಿರೂಪು ಲಿಂಗೈಕ್ಯ! ||೨೪೭||

೮೯೮
ವಜ್ರವ ಒರಲೆ ಮುಟ್ಟಬಲ್ಲುದೆ ಅಯ್ಯಾ?
ಮದ್ದಿನ ಚೀಲವ ಹಾವು ಮುಟ್ಟಬಲ್ಲುದೆ ಅಯ್ಯಾ?

ಕಿಚ್ಚಿದ್ದ ಒಲೆಯಲ್ಲಿ ಶ್ವಾನ ಮಲಗಬಲ್ಲುದೆ ಅಯ್ಯಾ?
ಸಮುದ್ರಕ್ಕೆ ಹೋಗಿ [ಸುಪ್ಪನು] ಸಲಿಸುವರೆ ಅಯ್ಯಾ?
ಗುರುಲಿಂಗಜಂಗಮವ ಪೂಜಿಸಿ ಬರಿ ಸಾವ ಸಾವರೆ,
ಊರ ಮುಂದಣ ಹೆಮ್ಮಾರಿಯೆ ಲೇಸೆಂದ
ಕೂಡಲ ಚೆನ್ನಸಂಗಮದೇವ. || ೨೪೮ ||

೮೯೯
ವಾಯುವಶದಿಂದ ತರುಗಳಲ್ಲಾಡುವವು,
ಭರತವಶದಿಂದ ಮೃದಂಗಾದಿಯಾದ ಪಟಹ ನುಡಿವವು,
ಕೂಡಲ ಚೆನ್ನಸಂಗಯ್ಯಾ, ಲಿಂಗವಶದಿಂದ ಶರಣ ಮಾತಾಡುವ. || ೨೪೯ ||

೯೦೦
ವಾರವೇಳು ಕುಲ ಹದಿನೆಂಟು ಎಂಬರಯ್ಯಾ,
ಅದ ನಾವು ಅಲ್ಲವೆಂಬೆವು.
ಇರುಳೊಂದು ವಾರ, ಹಗಲೊಂದು ವಾರ,
ಭವಿಯೊಂದು ಕುಲ, ಭಕ್ತನೊಂದು ಕುಲ,
ನಾವು ಬಲ್ಲುದು ಕಾಣಾ, ಕೂಡಲ ಚೆನ್ನಸಂಗಮದೇವಾ. || ೨೫೦ ||

೯೦೧
ವಾಸಿಸುವ ನಾಸಿಕ ನೀನೆಂದರಿದೆ,
ರುಚಿಸುವ ಜಿಹ್ವೆ ನೀನೆಂದರಿದೆ,
ನೋಡುವ ನಯನ ನೀನೆಂದರಿದೆ,
ಮುಟ್ಟುವ ತ್ವಕ್ಕು ನೀನೆಂದರಿದೆ,
ಕೇಳುವ ಶ್ರೋತ್ರ ನೀನೆಂದರಿದೆ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ನಾ ನಿಮ್ಮ ಬೇಡಲಿಲ್ಲಾಗಿ ಕೂರ್ತು ಕೊಡಲಿಲ್ಲ. || ೨೫೧ ||

೯೦೨
ವೀರನಾದರೆ ಅಲಗಿನ ಮೊನೆಯಲ್ಲಿ ಕಾಣಬಹುದು,
ಧೀರನಾದರೆ ತನ್ನ ಸೋಂಕಿದಲ್ಲಿ ಅರಿಯಬಹುದು,
ಭಕ್ತನಾದರೆ ತಾಗು ನಿರೋಧದಲ್ಲಿ ಅರಿಯಬಹುದು.
ಕೂಡಲ ಚೆನ್ನಸಂಗಯ್ಯಾ,
ಸುಜ್ಞಾನಿಯಾದರೆ ಸುಳುಹಿನಲ್ಲಿ ಅರಿಯಬಹುದು. ||೨೫೨||

೯೦೩
ವ್ರತಸ್ಥನರಿವು ಪ್ರಪಂಚಿನಲೆ ಹೋಯಿತ್ತು,
ಭಾಷೆವಂತನರಿವು ವಂಚನೆಯಲೆ ಹೋಯಿತ್ತು,

ನೇಮಸ್ಥನರಿವು ಸಂಕಲ್ಪದಲೆ ಹೋಯಿತ್ತು,
ಶೀಲವಂತನರಿವು ಸೂತಕದಲೆ ಹೋಯಿತ್ತು,
ಜಂಗಮದರಿವು ಬೇ[ಡಿದಾಗ]ಲೆ ಹೋಯಿತ್ತು,
ಪ್ರಸಾದದರಿವು ಬೆರಕೆಯಲ್ಲಿ ಹೋಯಿತ್ತು.
ಇಂತಿವು ಷಡುಸ್ಥಲದ ನಿರ್ಣಯಕ್ಕೆ ಸಲ್ಲದೆ ಹೋ[ದ]ವು,
ಕೂಡಲಚೆನ್ನಸಂಗನಲ್ಲಿ. || ೨೫೩ ||

೯೦೪
ಶರಣನೆನಿಸಿಕೊಂಬುದು ಕರ ಅರಿದು ನೋಡಯ್ಯಾ!
ಸತ್ಯಸದ್ಭಕ್ತರೊಳಡಗಿ ತನ್ನ ಕುರುಹ ಲೋಕಕ್ಕೆ ತೋರದಿರಬೇಕು.
ಸಕಲಜೀವರಾಶಿಗಳಿಗೆ ರೋಷ ಹರುಷವ ತಾಳದಿರಬೇಕು.
ಇಂತಪ್ಪ ಶರಣನಲ್ಲಿ ಸನ್ನಿಹಿತ ನಮ್ಮ ಕೂಡಲ ಚೆನ್ನಸಂಗಮದೇವ. || ೨೫೪ ||

೯೦೫
ಶರಣ ಶರಣನ ಕಂಡು,
'ಶರಣು' ಎಂದು ಕರವ ಮುಗಿವುದೆ ಭಕ್ತಿಲಕ್ಷಣ.
ಶರಣ ಶರಣನ ಕಂಡು,
ಪಾದವಿಡಿದು ವಂದಿಸುವುದೆ ಭಕ್ತಿಲಕ್ಷಣ.
ಶರಣ ಚರಣವ ಪಿಡಿಯದೆ
ಕಂಡೂ ಕಾಣದೆ ಪೋದನಾದಡೆ
ಕೂಡಲ ಚೆನ್ನಸಂಗನ ಶರಣರು ಮನ್ನಿಸರಯ್ಯಾ. || ೨೫೫ ||

೯೦೬
ಶಬ್ದ ಸ್ಪರ್ಶ ರೂಪ ರಸ ಗಂಧ ಪಂಚೇಂದ್ರಿಯ ಮೊದಲಾಗಿ
ನಡೆದವು ಲಿಂಗದತ್ತತ್ತಲೆ.
ಬಂದ ಸುಖ ಲಿಂಗಾರ್ಪಿತವೆಂದು
ನಡೆದವು ಲಿಂಗದತ್ತತ್ತಲೆ.
ಕೂಡಲ ಚೆನ್ನಸಂಗಾ,
ಲಿಂಗ ನೀನಾಗಿ ಶರಣಂಗೆ. || ೨೫೬ ||

೯೦೭
ಶಾಖೆಯಿಲ್ಲದೆ ಕಪಿ ಪಿಡಿಯದು,
ಚಿಗುರಿಲ್ಲದೆ ಪಿಕ ನುಡಿಯದು,
ಪ್ರಭೈಸಿದಲ್ಲದೆ ಉಲಿಯದು ಕುಕ್ಕುಟ.
ಹೂಮಿಡಿಯ ಹರಿದು ಹಣ್ಣನರಸಲುಂಟೆ?
ತಮ್ಮ ಮರೆಯದೆ ಲಿಂಗವ ಮೆರೆವರೆಲ್ಲ

ಅಜ್ಞಾನಿಗಳು ಅನಾಚಾರಿಗಳು ಆಚಾರಭ್ರಷ್ಟರು,
ಗುರುಲಿಂಗಜಂಗಮ ದ್ರೋಹಿಗಳು.
ಅಶನವರತು ವ್ಯಸನ ನಿಂತು
ತನು ಕರಗಿ ಮನವೆರಗಿ
ನಿಮಗೆ ಮಾಡದ ಅಜ್ಞಾನಿಗಳನೇನೆಂಬೆ
ಕೂಡಲ ಚೆನ್ನಸಂಗಮದೇವಾ. ॥ ೨೫೭ ॥

೯೦೮
ಶಿವಯೋ[ಗ] ನಿಭ್ರಾಂತ ಶರಣ.
ಕರ್ಮಕಾಯನಲ್ಲ, ಕಾಯಕಲ್ಪಿತನಲ್ಲ,
ಸಂಕಲ್ಪ ವಿಕಲ್ಪ ವಿರಹಿತನು.
ಅವರವರ ಕೂಡಿಕೊಂಡಿಪ್ಪ, ತನ್ನ ಪರಿಬೇರೆ.
ಶರಣ ನಿರಂತರ ಪರಮಸುಖಿ.
ಕೂಡಲ ಚೆನ್ನಸಂಗಾ, ನಿಮ್ಮ ಶರಣ ಪ್ರಪಂಚಿನೊಳಗಿಪ್ಪ, ತನ್ನ ಪರಿ ಬೇರೆ. ॥ ೨೫೮ ॥

೯೦೯
ಶಿವಲಿಂಗವ ನೋಡುವ ಕಣ್ಣಲ್ಲಿ
ಪರಸ್ತ್ರೀಯ ನೋಡಿದಡೆ ಅಲ್ಲಿ ಲಿಂಗವಿಲ್ಲ.
ಪರಬ್ರಹ್ಮವ ನುಡಿವ ಜಿಹ್ವೆಯಲ್ಲಿ,
ಪರಸ್ತ್ರೀಯರ ಅಧರಪಾನವ ಕೊಂಡಡೆ ಪ್ರಸಾದಕ್ಕೆ ದೂರ.
ಘನಲಿಂಗವ ಪೂಜಿಸುವ ಕೈಯಲ್ಲಿ,
ಪರಸ್ತ್ರೀಯರ ಕುಚವ ಮುಟ್ಟಿದಡೆ, ತಾ ಮಾಡಿದ ಪೂಜೆ ನಿಷ್ಫಲ.
ಇದನರಿಯದಿರ್ದಡೆ ಬಳ್ಳದಲ್ಲಿ ಸುರೆಯ ತುಂಬಿ
ಮೇಲೆ ಬೂದಿಯ ಹೂಸಿದಂತಾಯಿತ್ತು ಕಾಣಾ,
ಕೂಡಲ ಚೆನ್ನಸಂಗಮದೇವಾ. ॥ ೨೫೯॥

೯೧೦
ಶೀಲವಂತರು ಲಕ್ಕ ಲಕ್ಕ, ನೇಮಸ್ಥರು ಲಕ್ಕ ಲಕ್ಕ,
ವ್ರತಸ್ಥರು ಲಕ್ಕ ಲಕ್ಕ,
ಅರ್ಥ ಪ್ರಾಣ ಅಭಿಮಾನವನೊಪ್ಪಿಸಿದ ವೈರಾಗಿಗಳು ಲಕ್ಕ ಲಕ್ಕ.
ಕೂಡಲ ಚೆನ್ನಸಂಗಯ್ಯನಲ್ಲಿ ಇವರೆಲ್ಲಾ ಫಲ ಸದರ್ಥರಲ್ಲದೆ
ಲಿಂಗ ಸದರ್ಥರಾರೂ ಇಲ್ಲ. ॥ ೨೬೦ ॥

೯೧೧
ಶೀಲವಂತರು ಶೀಲವಂತರೆಂದೆಂಬರು ನಾವಿದನರಿಯೆವಯ್ಯ.
ಅಂಗನೆಯರ ಅಧರಪಾನವು

ತನ್ನ ಉದರವ ಹೊಗುವನ್ನಕ್ಕ ಶೀಲವೆಲ್ಲಿಯದೊ?
ಈಷಣತ್ರಯವೆಂಬ ಸೊಣಗ ಬೆಂಬತ್ತಿ ಬರುತ್ತಿರಲು ಶೀಲವೆಲ್ಲಿಯದೊ?
ಹೆರಸಾರಿ ಮನವು ಮಹದಲ್ಲಿ ನಿಂದರೆ ಶೀಲ,
ಪರಿಣಾಮ ನೆಲೆಗೊಂಡರೆ ಶೀಲ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ ಶೀಲವಂತರಪೂರ್ವ. || ೨೬೧ ||

೬೧೨
ಶೀಲವಂತರೆಲ್ಲಾ ಶೀಲವಂತರಯ್ಯಾ,
ಭಾಷೆವಂತರೆಲ್ಲಾ ಭಾಷೆವಂತರಯ್ಯಾ,
ವ್ರತವಂತರೆಲ್ಲಾ ವ್ರತವಂತರಯ್ಯಾ,
ಸತ್ಯವಂತರೆಲ್ಲಾ ಸತ್ಯವಂತರಯ್ಯಾ,
ನೇಮವಂತರೆಲ್ಲಾ ನೇಮವಂತರಯ್ಯಾ,
ಕೂಡಲ ಚೆನ್ನಸಂಗಮದೇವಯ್ಯಾ
ಸಂಗನಬಸವಣ್ಣನೊಬ್ಬನೆ ಲಿಂಗವಂತ. || ೨೬೨ ||

೬೧೩
ಶೀಲ ಶೀಲವೆಂದು ಗರ್ವಿಸಿ ನುಡಿವುತಿಪ್ಪರು, ಶೀಲವಾವುದೆಂದರಿಯರು.
ಇದ್ದುದ ವಂಚನೆಯ ಮಾಡದಿಪ್ಪುದೆ ಶೀಲ,
ಇಲ್ಲದಿದ್ದುದಕ್ಕೆ ಕಡನ ಬೇಡದಿಪ್ಪುದೆ ಶೀಲ,
ಪರಧನ ಪರಸತಿಗೆಳಸದಿಪ್ಪುದೆ ಶೀಲ,
ಪರದೈವ ಪರಸಮಯಕ್ಕೆಳಸದಿಪ್ಪುದೆ ಶೀಲ,
ಗುರುನಿಂದೆ ಶಿವನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ,
ಕೂಡಲಚೆನ್ನಸಂಗನ ಶರಣರ ಬರವಿಂಗೆ
ಮುಯ್ಯಾಂತು ಪರಿಣಾಮಿಸ ಬಲ್ಲರೆ ಅಚ್ಚಶೀಲ. || ೨೬೩ ||

೬೧೪
ಶೀಲಶೀಲವೆಂಬರು ಶೀಲ ಭಕ್ತಿಯೊಳಗಿಲ್ಲ.
ಅದೇನು ಕಾರಣವೆಂದರೆ:
ಧಾನ್ಯ ಧರಣಿಯೆಂಜಲು,
ಅಗ್ಘಣಿ ಮೇಘದೆಂಜಲು,
ಪರಿಮಳ ವಾಯುವಿನೆಂಜಲು,
ಪಾಕ ಅಗ್ನಿಯೆಂಜಲು.
ಕೈಯ್ಯೊಳಗೆ ಸೊಡರ ಪಿಡಿದು
ಕಣ್ಣುಕಾಣದೆ ಎಡಹಿ ಬೀಳುವ ಕುಟಿಲಶೀಲರ ಮೆಚ್ಚುವನೆ?
ಕೂಡಲ ಚೆನ್ನಸಂಗಮದೇವ. || ೨೬೪ ||

೯೧೫

ಷೋಡಶಕಳೆಯುಳ್ಳ ಜಂಗಮವ
ರಾಜರುಗಳು ಪೂಜೆಯ ಮಾಡುವರು.
ವಿಷಯವುಳ್ಳ ಜಂಗಮವ
ವೇಸಿ ಪೂಜೆಯ ಮಾಡುವಳು.
ರಸವಿದ್ಯೆಯುಳ್ಳ ಜಂಗಮವ
ಅಕ್ಕಸಾಲೆ ಪೂಜೆಯ ಮಾಡುವನು.
ವೇಷವುಳ್ಳ ಜಂಗಮವ
ಭಕ್ತರು ಪೂಜೆಯ ಮಾಡುವರು.
ಜ್ಞಾನವುಳ್ಳ ಜಂಗಮವ ಆರಿಗೂ ಕಾಣಬಾರದು,
ಕೂಡಲ ಚೆನ್ನಸಂಗಮದೇವಾ. || ೨೬೫ ||

೯೧೬

ಸಂಗಾ, ನೀನಿಲ್ಲದವರಂಗಣ ಪಂಚಮಹಾಪಾತಕ, ಏಳನೆಯ ನರಕ.
ಸಂಗಾ, ನೀನಿಲ್ಲದವರಂಗಣ ಬ್ರಹ್ಮೇತಿಗೆ ಅದು ಮೊದಲು.
ಸಂಗಾ, ನೀನಿದ್ದವರಂಗಣ ಲಿಂಗಾಂಗಣ, ಅವರಂಗವು ಲಿಂಗ.
ಸಂಗಾ, ನೀನಿದ್ದವರಂಗಣವೆ ವಾರಣಾಸಿಯಿಂದಧಿಕ.
ಸಂಗಾ, ನೀನಿದ್ದವರಂಗಣ ಅಮೃತ ದಿವ್ಯಕ್ಷೇತ್ರದಿಂದಧಿಕ.
ಸಂಗಾ, ಕೂಡಲ ಚೆನ್ನಸಂಗಾ,
ನಿಮ್ಮ ಶರಣರ ಸಂಗ ಸುಸಂಗವೆನಗೆ. || ೨೬೬ ||

೯೧೭

ಸಜ್ಜನ ಸದ್ಭಾವಿ ಅನ್ಯರಲ್ಲಿ ಕೈಯ್ಯಾಂತು ಬೇಡ,
ಲಿಂಗವ ಮುಟ್ಟಿದ ಕೈ ಮೀಸಲು.
ಕಂಗಳಲ್ಲಿ ಒಸೆದು ನೋಡ ಪರವಧುವ.
ಮನದಲ್ಲಿ ನೆನೆಯನನ್ಯವ, ಮಾನವ ಸೇವೆಯ ಮಾಡ,
ಲಿಂಗವ ಬೇಡ, ಲಿಂಗದ ಹಂಗನೊಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣ. || ೨೬೭ ||

೯೧೮

ಸತಿಯ ಕೈಯಲ್ಲಿ ಕೊಟ್ಟುದು ಪ್ರಾಣಲಿಂಗವಲ್ಲ,
ಸುತನ ಕೈಯಲ್ಲಿ ಕೊಟ್ಟುದು ಪ್ರಾಣಲಿಂಗವಲ್ಲ,
ಅಲಸಿ ನಾಗವತ್ತಿಗೆಯಲಿರಿಸಿದುದು ಪ್ರಾಣಲಿಂಗವಲ್ಲ,
ತನುವ ಸೋಂಕಿ ವಜ್ರಲೇಪದಂತಿರಬೇಕು.

ಮನ-ಕರದಲ್ಲಿ ಕೊಟ್ಟ ಪ್ರಾಣಲಿಂಗ ಹಿಂಗಿದರೆ
ಅವನಂದೇ ವ್ರತಗೇಡಿ, ಕೂಡಲಚೆನ್ನಸಂಗಮದೇವಾ. || ೨೬೮ ||

೬೧೯
ಸತಿಯ ಸಂಗವತಿಸುಖವೆಂದರಿದಡೇನು,
ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ?
ಕಣ್ಣು ಕಾಂಬುದೆಂದಡೆ,
ಕತ್ತಲೆಯಲ್ಲಿ ಕಾಂಬುದೆ ದೀಪವಿಲ್ಲದನ್ನಕ್ಕರ?
ಸೂರ್ಯನ ಪ್ರಕಾಶದಿಂದ ಕಂಡು
ತಾನೆ, ಕಂಡೆನೆಂಬ ಜಗದ ನಾಣ್ಣುಡಿಯಂತಾಯಿತ್ತು.
ಅಂಗವ ಬಿಟ್ಟು ಆತ್ಮನುಂಟೆ? ಶಕ್ತಿಯ ಬಿಟ್ಟು ಶಿವನುಂಟೆ?
ಇದು ಕಾರಣ, ಸ್ಥೂಲ ಸೂಕ್ಷ್ಮ ಕಾರಣ ತನುತ್ರಯವಿರಲು,
ಇಷ್ಟ ಪ್ರಾಣ ಭಾವವೆಂಬ ತ್ರಿವಿಧಲಿಂಗಸಂಬಂಧ ಬೇಡವೆಂದಡೆ
ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೆ?
ಕೂಡಲ ಚೆನ್ನಸಂಗಯ್ಯನಲ್ಲಿ
ಇಷ್ಟಲಿಂಗಸಂಬಂಧವಿಲ್ಲದವರ ಮುಖವ
ನೋಡಲಾಗದು ಪ್ರಭುವೆ. || ೨೬೯ ||

೬೨೦
ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಾಡಿದರೇನು?
ನಿಷ್ಠೆಯಿಲ್ಲದ ಪೂಜೆಯನೇಸುಕಾಲ ಮಾಡಿದರೇನು?
ಭಾವ ನೆಲೆಗೊಳ್ಳದ ಪ್ರಸಾದವನೇಸುಕಾಲ ಕೊಂಡಲ್ಲಿ ಫಲವೇನು?
ಅಭ್ಯಾಸವಾಯಿತ್ತಲ್ಲದೆ,
ಒಬ್ಬರೊಬ್ಬರ ಕಂಡು ಮಾಡುವರಲ್ಲದೆ,
ಸಹಜವಿಲ್ಲ, ಸಮ್ಯಕ್ಕಿಲ್ಲ, ನಿಜವಿಲ್ಲ.
ಇದು ಕಾರಣ, ಇಂತಪ್ಪವರ ಭಕ್ತರೆಂದೆನಲಾಗದು,
ಕೂಡಲ ಚೆನ್ನಸಂಗಯ್ಯಾ ನೀ ಸಾಕ್ಷಿಯಾಗಿ ಛೀಯೆಂಬೆನು. || ೨೭೦ ||

೬೨೧
ಸತ್ಯವುಳ್ಳವರಿಗೆ ನಿತ್ಯನೇಮದ ಹಂಗೇಕಯ್ಯಾ?
ಅರಿವುಳ್ಳವರಿಗೆ ಅಗ್ಗವಣಿಯ ಹಂಗೇಕಯ್ಯಾ?
ಮನಶುದ್ಧವುಳ್ಳವರಿಗೆ ಮಂತ್ರದ ಹಂಗೇಕಯ್ಯಾ?
ಭಾವಶುದ್ಧವುಳ್ಳವರಿಗೆ ಪತ್ರೆಯ ಹಂಗೇಕಯ್ಯಾ?

ನಿಮ್ಮನರಿದ ಶರಣರಿಗೆ ನಿಮ್ಮ ಹಂಗೇಕಯ್ಯಾ
ಕೂಡಲ ಚೆನ್ನಸಂಗಮದೇವಾ? ॥ ೨೭೧ ॥

೯೨೨
ಸದ್ಗುರುಕಾರುಣ್ಯವುಳ್ಳ ಭಕ್ತನ ಲಿಂಗ ಓಸರಿಸಿದರೆ
ವ್ರತಗೇಡಿಯೆಂದು ಕಳೆಯಬಾರದು, ಕೊಲಬಾರದು, ಕಾರಣವುಂಟಾಗಿ:
'ಸುವ್ರತಂ ಸುಲಭಂ ಸಿದ್ಧಂ ಶತ್ರುಜಿತ್ ಶತ್ರುಪಾವನಃ' ಎಂದುದಾಗಿ
ಅಲಿಂಗೀ ಲಿಂಗರೂಪೇಣ ಯೋ ಲಿಂಗಮುಪಜೀವತಿ।
ಸ ಪತೇತ್ ಮಹಾಘೋರೇ ನರಕೇ ಕಾಲಮಕ್ಷಯಮ್॥
ಎಂದುದಾಗಿ, ಶಸ್ತ್ರ, ಸಮಾಧಿ, ಜಲಾಂತ, ವನಾಂತ, ದಿಗ್ಬಲಿ, ದಹನ
- ಈ ಆರರಲ್ಲಿ ಸತ್ತಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತ ವ್ರತಗೇಡಿ. ॥ ೨೭೨ ॥

೯೨೩
ಸಾಕಾರ ಹದಿನೆಂಟು ಕುಳವನಂಗದಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಾಹೇಶ್ವರ,
ಅಲ್ಲಲ್ಲಿಗೆ ಪ್ರಸಾದಿಯಾಗಿಪ್ಪ
ಆ ಸಾಕಾರವನೇನೆಂದುಪಮಿಸುವೆ!
ನಿರಾಕಾರ ಹದಿನೆಂಟು ಕುಳವನಾತ್ಮನಲ್ಲಿ ಆಚರಿಸುತ್ತ
ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ,
ಅಲ್ಲಲ್ಲಿಗೆ ಐಕ್ಯನಾಗಿಪ್ಪ
ಆ ನಿರಾಕಾರವನೇನೆಂದುಪಮಿಸುವೆ!
ಇಂತು ಉಭಯಸ್ಥಲ ಒಂದಾಗಿ ನಿಂದ ನಿಜದ ಘನದಲ್ಲಿ
ಕುಳವಡಗಿತ್ತು, ಕೂಡಲ ಚೆನ್ನಸಂಗಾ. ॥ ೨೭೩ ॥

೯೨೪
ಸಾರಾಯ ಪದಾರ್ಥವನಾರಯ್ಯಬೇಕೆಂದು
ಶರಣ ಮರ್ತ್ಯಕ್ಕೆ ಬಂದು,
ತನ್ನ ಇಪ್ಪತ್ತೈದಿಂದ್ರಿಯಂಗಳ ಭಕ್ತರ ಮಾಡಿ,
ಮೆಲ್ಲಮೆಲ್ಲನೆ ಅವರ ಪೂರ್ವಾಶ್ರಯವ ಕಳೆದು,
ಕಲ್ಪಿತವಿಲ್ಲದೆ ಅರ್ಪಿತವ ಮಾಡಲು,
ಇಂದ್ರಿಯಂಗಳು ತಮ್ಮ ತಮ್ಮ ಮುಖದಲ್ಲಿ ಗ್ರಹಿಸಲಮ್ಮದೆ
ಕೂಡಲ ಚೆನ್ನಸಂಗಂಗೆ ಬೇಕೆಂದು ಹಿಡಿದುಕೊಂಡೈದವೆ! ॥ ೨೭೪ ॥

೯೨೫
ಸಾಲವ ಕೊಂಡು ನಿಮ್ಮ ಶರಣ ಶಿವಲೋಕಕ್ಕೆ ಹೋದನಲ್ಲಾ:
ಪೃಥ್ವಿಯ ಸಾಲವ ಪೃಥ್ವಿಗೆ ಕೊಟ್ಟು,
ಅಪ್ಪುವಿನ ಸಾಲವ ಅಪ್ಪುವಿಗೆ ಕೊಟ್ಟು,
ತೇಜದ ಸಾಲವ ತೇಜಕ್ಕೆ ಕೊಟ್ಟು,
ವಾಯುವಿನ ಸಾಲವ ವಾಯುವಿಗೆ ಕೊಟ್ಟು,
ಆಕಾಶದ ಸಾಲವ ಆಕಾಶಕ್ಕೆ ಕೊಟ್ಟು,
ಪ್ರಸಾದವನಾರಿಗೆಯೂ ಕೊಡಲಿಲ್ಲೆಂದು
ಕೂಡಲ ಚೆನ್ನಸಂಗನಲ್ಲಿ ಹೂಣೆಹೊಕ್ಕ ಶರಣಂಗೆ
ಮಿಗೆ ಮಿಗೆ ನಮೋ ನಮೋ ಎಂಬೆ. || ೨೭೫ ||

೯೨೬
ಸುವರ್ಣದ ಕೆಲಸಕ್ಕೆ ಹೊಂಬಿತ್ತಾಳೆಯ ಕೆಲಸವೆಂಬರು,
ಸಕ್ಕರೆ ಮೃದುವೆಂದರೆ ಮರಳು ಮೃದುವೆಂಬರು,
ಕಪ್ಪುರ ಬಿಳಿದೆಂದರೆ ಉಪ್ಪು ಬಿಳಿದೆಂಬರು,
ಸಿಂಹದ ನಡು ಸಣ್ಣದೆಂದರೆ ನಾಯ ನಡು ಸಣ್ಣದೆಂಬರು,
ಶಿವಜ್ಞಾನಿಗಳಿಗೆ ಲೋಕದ ಅಜ್ಞಾನಿಗಳು ತಾವು ಸಮವೆಂಬರು,
ಇದು, ಹಂಚ ಹಿಡಿದು ಮೈಯೆಲ್ಲ ಮಸಿಯಾದಂತಾಯಿತ್ತು ಕಾಣಾ,
ಕೂಡಲ ಚೆನ್ನಸಂಗಮದೇವಾ. || ೨೭೬ ||

೯೨೭
ಸೂಳೆಯ ಮಗ ಮಾಳವ ಪಾಳ್ಯದೊಳಗೆಲ್ಲಾ,
ತಮ್ಮಪ್ಪನ ಕಾಣದೆ ಅರಸುತ್ತೈದಾನೆ.
ಆಳೆಂದರಿಯ, ಅರಸೆಂದರಿಯ.
ಬಹುಲಿಂಗಪೂಜಕಶ್ಚೈವ ಬಹುಭಾವಗುರುಸ್ತಥಾ।
ಬಹುಪ್ರಸಾದಂ ಭುಂಜತೇ ವೇಶ್ಯಾಪುತ್ರಸ್ತಥೈವ ಚ ॥
ಎಂದುದಾಗಿ
ಮತಿಹೀನ ಕಾಳಮೂಳರಿಗೆ ಶಿವಭಕ್ತಿ ದೊರೆಯದು,
ಆಣೆ ನಿಮ್ಮಾಣೆ, ಕೂಡಲಚೆನ್ನ ಸಂಗಮದೇವಾ. || ೨೭೭ ||

೯೨೮
ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ ಭಕ್ತರ
ಲಿಂಗಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ?
ದಿನ ಶ್ರೇಷ್ಠವೋ? ಲಿಂಗ ಶ್ರೇಷ್ಠವೊ?

ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು.
ಸೋಮೇ ಭೌಮೇ ವ್ಯತೀಪಾತೇ ಸಂಕ್ರಾಂತಿಶಿವರಾತ್ರಯೋಃ।
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಮ್॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಇಂಥವರ ಮುಖವ ನೋಡಲಾಗದು. || ೨೭೮ ||

೯೨೯
ಸೃಷ್ಟಿಯ ಮೇಲಣ ಕಣಿಯ ತಂದು, ಇಷ್ಟಲಿಂಗವೆಂದು ಮಾಡಿ,
ಅಷ್ಟತನುವಿನ ಕೈಯಲ್ಲಿ ಕೊಟ್ಟು,
ಅಷ್ಟತನುವಿನ ಕೈತಪ್ಪಿ ಸೃಷ್ಟಿಯ ಮೇಲೆ ಬಿದ್ದರೆ
ಕೆಟ್ಟನವನನಾಚಾರಿಯೆಂದು ಮುಟ್ಟರು ನೋಡಾ.
ಮುಟ್ಟಿದ ಪ್ರಾಣವ, ಬಿಚ್ಚದ ಭೇದವ, ಕಷ್ಟ ಜೀವಿಗಳೆತ್ತ ಬಲ್ಲರು
ಕೂಡಲ ಚೆನ್ನಸಂಗಮದೇವಾ ? || ೨೭೯ ||

೯೩೦
ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು,
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು,
ಅಷ್ಟವಿಧಾರ್ಚನೆ ಷೋಡಶೋಪಚಾರ ಎಂಬರಲ್ಲದೆ
ತಮ್ಮನಿಕ್ಕಿ ನಿಧಾನವ ಸಾಧಿಸುವರ ಆರನೂ ಕಾಣೆ,
ಕೂಡಲ ಚೆನ್ನಸಂಗಮದೇವಾ. || ೨೮೦ ||

೯೩೧
ಹರ ತನ್ನ ರೂಪ ತೋರಬೇಕೆಂದು,
ಗುರುರೂಪವಾಗಿ ಬಂದು
ಮನಸ್ಥಲಕ್ಕೆ ಮಂತ್ರವಾದ,
ತನುಸ್ಥಲಕ್ಕೆ ಪ್ರಸಾದವಾದ,
ಕರಸ್ಥಲಕ್ಕೆ ಲಿಂಗವಾದ.
ಇಂತೀ ತ್ರಿವಿಧದಲ್ಲಿ ತ್ರಿವಿಧ ಸಾಹಿತ್ಯವಾದನಯ್ಯಾ,
ಕೂಡಲ ಚೆನ್ನಸಂಗನಲ್ಲಿ ಬಸವಣ್ಣನು. || ೨೮೧ ||

೯೩೨
ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ
ಬಕನು ಶುಚಿಯಾಗಬಲ್ಲುದೆ?
ನಿಧಿನಿಧಾನದೊಳಗಿದ್ದರೇನು
ಪಾಷಾಣ ಹೊನ್ನಾಗಬಲ್ಲುದೆ?

ಕಲ್ಪತರುಗಳ ಸಂಗದಲ್ಲಿದ್ದರೇನು
ಕೊರಡು ಫಲವಾಗಬಲ್ಲುದೆ?
ಕಾಶೀಕ್ಷೇತ್ರದಲ್ಲಿ ಶುನಕನಿದ್ದರೇನು
ಅದರ ಕ್ಷೀರ ಪಂಚಾಮೃತವಾಗಬಲ್ಲುದೆ?
ಖಂಡುಗ ಹಾಲೊಳಗೆ ಇದ್ದಿಲ ಹಾಕಿದರೇನು
ಬಿಳಿದಾಗಬಲ್ಲುದೆ?
ಇದು ಕಾರಣ,
ಕೂಡಲ ಚೆನ್ನಸಂಗನ ಶರಣರ ಸನ್ನಿಧಿಯಲ್ಲಿದ್ದರೇನು
ಅಸಜ್ಜನ ಸದ್ಭಕ್ತನಾಗಬಲ್ಲನೆ? ॥ ೨೮೨॥

೬೩೩
ಹಲವು [ಪರಿಯ] ಪುಷ್ಪದಲ್ಲಿ ಪರಿಮಳವನರಸುವರೆ?
ಪಿರಿದು ರಸದಾಳಿಯ ಕಬ್ಬಿನಲ್ಲಿ ಹಣ್ಣನರಸುವರೆ?
ಸುರಭಿಗೆ ತನು ಕತ್ತಲೆಯೆಂದು ಬೆಳಗನರಸುವರೆ?
ಪರಶಿವಮೂರ್ತಿ ಸಂಗನ ಶರಣರಲ್ಲಿ
ಕ್ರಿಯೆ ನಿಃಕ್ರಿಯೆಯನರಸುವರೆ?
ಅವರಿದ್ದಿರವೆ ಮುಕ್ತಿ, ಕೂಡಲ ಚೆನ್ನಸಂಗಮದೇವಾ. ॥ ೨೮೩ ॥

೬೩೪
ಹಾಲ ಹಿಡಿದು ಬೆಣ್ಣೆಯನರಸಲುಂಟೆ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ?
ಲಿಂಗಸಂಗವ ಮಾಡಿಹೆನೆಂಬಾತಂಗೆ ಅನ್ಯದೈವಭಜನೆ ಏತಕಯ್ಯಾ?
ಇಷ್ಟಲಿಂಗಮವಿಶ್ವಸ್ಯ ಯೋಽನ್ಯದೈವಮುಪಾಸತೇ।
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್॥
ಇಂತೆಂದುದಾಗಿ,
ಇಂತಪ್ಪ ಪಾತಕಂಗೆ ಅಘೋರನರಕ ತಪ್ಪದು ಕಾಣಾ,
ಕೂಡಲ ಚೆನ್ನಸಂಗಮದೇವಾ. ॥ ೨೮೪ ॥

೬೩೫
ಹುಸಿಯಂಕುರಿಸಿತ್ತು ಹೊಲೆಯನಲ್ಲಿ,
ಹುಸಿ ಎರಡೆಲೆಯಾಯಿತ್ತು ಮಾದಿಗನಲ್ಲಿ,
ಹುಸಿ ನಾಲ್ಕೆಲೆಯಾಯಿತ್ತು ಸಮ್ಮಗಾರನಲ್ಲಿ,
ಹುಸಿ ಆರೆಲೆಯಾಯಿತ್ತು ಅಗಸನಲ್ಲಿ,
ಹುಸಿ ಎಂಟೆಲೆಯಾಯಿತ್ತು ವ್ಯವಹಾರಿಯಲ್ಲಿ,
ಹುಸಿ ಸಸಿಯಾಗಿತ್ತು ಹಾದರಿಗನಲ್ಲಿ,
ಹುಸಿ ಗಿಡವಾಯಿತ್ತು ಮದ್ಯಪಾನಿಯಲ್ಲಿ,

ಹುಸಿ ಮರನಾಯಿತ್ತು ಜೂಜುಗಾರನಲ್ಲಿ,
ಹುಸಿ ಹೂವಾಯಿತ್ತು ಡೊಂಬನಲ್ಲಿ,
ಹುಸಿ ಕಾಯಾಯಿತ್ತು ಅಕ್ಕಸಾಲಿಗನಲ್ಲಿ,
ಹುಸಿ ಹಣ್ಣಾಯಿತ್ತು ಸೂಳೆಯಲ್ಲಿ,
ಹುಸಿ ಹಣ್ಣಾಗಿ ತೊಟ್ಟು ಬಿಚ್ಚಿತ್ತು ಅರಸನಲ್ಲಿ.
ಇಂತೀ ಹುಸಿಯ ನುಡಿವವರಿಗೆ
ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ,
ಪಾದೋದಕವಿಲ್ಲಾಗಿ ಮೋಕ್ಷವಿಲ್ಲ.
ಕಾರಣ ನಮ್ಮ ಕೂಡಲಚೆನ್ನಸಂಗಯ್ಯನ ಶರಣರು
ಹುಸಿಯ ಬಿಟ್ಟುಕಳೆದು ನಿಜಲಿಂಗೈಕ್ಯರಾದರು. || ೨೮೫||

೯೩೬
ಹುಸಿಯ ಹಸರವನಿಕ್ಕಿ ವಚನವನರ್ಪಿಸುವನಲ್ಲ.
ಆನು ಬಲ್ಲೆನೆಂಬ ಅರಿವಿನ ಕೊರವಂಜಿಯಂತೆ
ಜಗಕ್ಕೆ ಹೇಳುವನಲ್ಲ.
ಘನಕ್ಕೆ ಮಹಾಘನ ತಾನಾದ ಕಾರಣ,
ಕೂಡಲ ಚೆನ್ನಸಂಗನ ಶರಣರು
ಕುಟಿಲ ಕುಹಕದೊಳಗೆ ವರ್ತಿಸುವರಲ್ಲ. || ೨೮೬ ||

೯೩೭
ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ,
ಎನ್ನ ಕಾಯಗುಣ ಅಹಂಕಾರ ಪ್ರಬೋಧೆಗಳಯ್ಯಾ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳನಿಕ್ಕಿ
ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು.
ಲಿಂಗಯ್ಯ ತಂದೆ, ಆಧಿವ್ಯಾಧಿಗಳೆಲ್ಲವ ಕಳೆದು
ನಿರ್ವಾಣಮಪ್ಪ ಪಥವ ಕರುಣಿಸಯ್ಯಾ,
ಕೂಡಲ ಚೆನ್ನಸಂಗಮದೇವಾ. || ೨೮೭ ||

೯೩೮
ಹೊತ್ತಾರೆಯ ಪೂಜೆ, ಹಗಲಿನ ಪೂಜೆ, ಬೈಗಿನ ಪೂಜೆ,
ನಿಚ್ಚಕ್ಕೆ ಪೂಜೆಯ ಮಾಡಿ ಅಚ್ಚಿಗಗೊಂಡರೆಲ್ಲರು.
ನಿಶ್ಚಿಂತ ನಿರಾಳ ನಿಜೈಕ್ಯ ಲಿಂಗವ ಹೊತ್ತಿಂಗೆ ತರಲಹುದೆ?
ಹೊತ್ತನೆ ಪೂಜಿಸಿ, ಹೊತ್ತನೆ ಅರ್ಚಿಸಿ, ಇತ್ತಲೆಯಾದರೆಲ್ಲರು.
ನಿಶ್ಚಿಂತವನರಿದು ನಿಜವನೆಯ್ದುವರೆ ಸುಚಿತ್ತ ಸಮಾಧಾನ.
ಕೂಡಲ ಚೆನ್ನಸಂಗನೆಂಬ ಲಿಂಗ ನಿಶ್ಚಿಂತ ನಿಜೈಕ್ಯವು. || ೨೮೮ ||

೯೩೯
ಹೊನ್ನಿಂಗೆ ಬಂದಾತನಲ್ಲ, ಹೆಣ್ಣಿಂಗೆ ಬಂದಾತನಲ್ಲ,
ಅಶನಕ್ಕೆ ಬಂದಾತನಲ್ಲ, ವಸನಕ್ಕೆ ಬಂದಾತನಲ್ಲ,
ಕೂಡಲ ಚೆನ್ನಸಂಗಯ್ಯಾ,
ಭಕ್ತಿಯ ಪಥವ ತೋರ ಬಂದನಯ್ಯಾ, ಬಸವಣ್ಣನು. ॥ ೨೮೯ ॥

೯೪೦
ಹೊನ್ನು ಭಕ್ತನೆಂಬೆನೆ? ಹೊನ್ನಿನೊಳಗಣ ಮುದ್ರೆ ಭವಿ.
ಹೆಣ್ಣು ಭಕ್ತನೆಂಬೆನೆ? ಹೆಣ್ಣಿನೊಳಗಣ ವಿರಹ ಭವಿ.
ಮಣ್ಣು ಭಕ್ತನೆಂಬೆನೆ? ಮಣ್ಣಿನೊಳಗಣ ಬೆಳೆಸು ಭವಿ.
ಈ ತ್ರಿವಿಧ ಭವಿಯ ಕಳೆದು ಪ್ರಸಾದವ ಮಾಡಿಕೊಳಬಲ್ಲರೆ,
ಕೂಡಲ ಚೆನ್ನಸಂಗನಲ್ಲಿ ಅಚ್ಚಶೀಲವಂತನೆಂಬೆ. ॥ ೨೯೦ ॥

೯೪೧
ಹೊಲೆಹೊಲೆಯನೆಂದು ಹೊರಗಿರು ಎಂದೆಂಬರು,
ಹೊಲೆಯನೆಂತವನಯ್ಯಾ?
ತನ್ನ ಹೊಲೆಯ ತಾನರಿಯದೆ
ಮುನ್ನಿನವರ ಹೊಲೆಯನರಸುವ
ಭ್ರಷ್ಟರಿಗೆ ಏನೆಂಬೆನಯ್ಯಾ,
ಮಹಾದಾನಿ ಕೂಡಲ ಚನ್ನಸಂಗಮದೇವಾ. ॥ ೨೯೧ ॥

*

ಸಿದ್ಧರಾಮೇಶ್ವರ

೯೪೨
ಅಂಗಕ್ಕೆ ಭೋಗವ ಕೊಟ್ಟವರ ನೋಡಿದೆನಲ್ಲದೆ,
ಲಿಂಗಕ್ಕೆ ಕೊಟ್ಟವರ ನೋಡಲಿಲ್ಲ.
ಲಿಂಗಕ್ಕೆ ಷೋಡಶೋಪಚಾರಂಗಳ ಕೊಟ್ಟವರ ನೋಡಿದೆನಲ್ಲದೆ,
ಮನವ ಕೊಟ್ಟವರ ನೋಡಲಿಲ್ಲ.
ಮನವ ಕೊಟ್ಟವರ ನೋಡಿದೆನಲ್ಲದೆ,
ಮನ ಲಿಂಗವಾದವರ ನೋಡಲಿಲ್ಲ,
ಕಪಿಲಸಿದ್ಧ ಮಲ್ಲಯ್ಯಾ. ॥ ೧ ॥

೯೪೩
ಅಂಗ [ಲಿಂಗ] ಒಂದಾದ ಬಳಿಕ
[ಅಂ]ಗೇಂದ್ರಿಯಂಗಳಾಚರಿಸಲಾಗದು.
ಅಂಗೇಂದ್ರಿಯಂಗಳು ಹೋಗಿ
ಲಿಂಗೇಂದ್ರಿಯಂಗಳಾಗಿ ಆಚರಿಸುವುದು.
'ಘೃತೋ ಭೂತ್ವಾ ಕಥಂ ಕ್ಷೀರಂ ಭವತ್ಯೇವಂ ವರಾನನೇ'
ಎಂಬಾಗಮೋಕ್ತಿ ಪುಸಿಯಾಯಿತ್ತೆ?
ಆಗಿ ಆಚರಿಸಿದಡೆ ಭವ ಹಿಂಗದು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೨ ॥

೯೪೪
ಅಂಗವ ಬೆರಸದ ಲಿಂಗ, ಪ್ರಾಣವ ಬೆರಸುವ ಪರಿಯೆಂತೊ?
ಬೆನಕನ ತೋರಿ ಬೆಲ್ಲವ ಮೆಲುವಂತೆ
ಇಷ್ಟಲಿಂಗವ ತೋರಿ ಹೊಟ್ಟೆಯ ಹೊರೆವರು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ದೂರ ನೀ ಹೊತ್ತೆ, ಸೂರೆಯನಾರಿಕೆ ಕೊಂಡರು. ॥ ೩ ॥

೯೪೫
ಅಂಗವೆಂದಡೆ ಅಜ್ಞಾನ, ಲಿಂಗವೆಂದಡೆ ಸುಜ್ಞಾನ,
ಲಿಂಗವಿಡಿದು ಆಚರಿಸುವುದಲ್ಲದೆ
ಅಂಗವಿಡಿದು ಆಚರಿಸಬಾರದು,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೪ ॥

೯೪೬
ಅಗ್ನಿಯ ಸೋಂಕಿದಲ್ಲಿ ಕನಕದ ಕಲಂಕ ಹೋಯಿತ್ತು.
ಜಲವ ಸೋಂಕಿದಲ್ಲಿ ದೇಹದ ಕಲಂಕ ಹೋಯಿತ್ತು.
ಭಾಗೀರಥಿಯ ಸೋಂಕಿದಲ್ಲಿ ದೋಷ ದಗ್ಧವಾಗಿ ಹೋಯಿತ್ತು.
ನಮ್ಮ [ಕಪಿಲಸಿದ್ಧ] ಮಲ್ಲಿಕಾರ್ಜುನನೆಂಬ ಲಿಂಗವ ಸೋಂಕಿದಲ್ಲಿ
ಪ್ರಾರಬ್ಧತ್ರಯ ನಿವಾರಣವಾಗಿ ಹೋಯಿತ್ತು, ಕಂಡೆಯಾ ಬಾಚರಸಯ್ಯಾ. ॥ ೫ ॥

೯೪೭
ಅಯ್ಯಾ, ಕಬ್ಬುನ ನೀರನೊಳಕೊಂಬಂತೆ,
ಶಬುದ ನಿರಾಳವನೊಳಕೊಂಬಂತೆ,
ಮರೀಚಿಯ ಬಯಲೊಳಕೊಂಬಂತೆ,

ಎನ್ನನೆಂದೊಳಕೊಂಬೆ, ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೭ ||

೯೪೮
ಅಯ್ಯಾ ಕರುಣಿ,
ಕಂಬನಿಯ ದೆಸೆಗೆಟ್ಟ ವಾರುಧಿಯೊಳಗೆ
ಮುಸುಕಿ ಮುಸುಕಿ ಮೋಹಿಸುತ್ತಿದ್ದೆ.
ಅಯ್ಯಾ, ದೆಸೆಗೆಟ್ಟ ಪಶುವಾನು.
ಪಶುಪಾಶಮೋಚನಾ
ಹಸುಳೆಯ ನಿನ್ನ ವಶಕ್ಕೆ ತೆಗೆದೆತ್ತ ಬಾ,
ಎನ್ನ ಕರುಣಿ ಕಪಿಲಸಿದ್ಧ ಮಲ್ಲಿಕಾರ್ಜುನಾ. || ೭ ||

೯೪೯
ಅಯ್ಯಾ, ನರಸಮುದ್ರವೆಂಬ ಕೊಳಚೆಯೊಳಗಣ
ಚಿಕ್ಕ ಕೊಳಚೆಯೊಳಗೆ
ಅಯ್ಯಾ, ಲೋಕ ಬಿದ್ದು ತೇಕುತ್ತಿದ್ದುದಯ್ಯ.
ಇದರಂದ ಹೊಲ್ಲ! ಕಯ್ಯ ನೀಡು
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೮ ||

೯೫೦
ಅಯ್ಯಾ, ನಾನು ಸಂಸಾರವೆಂಬ ತೆಪ್ಪದೊಳಗಿರ್ದು
ಭವವೆಂಬ ಸಮುದ್ರದೊಳಗದ್ದಿ ಮುಳುಗುತ್ತಿದ್ದೇನಯ್ಯಾ.
ಬೇಗ ಬಾರಾ, ಬಾರಯ್ಯಾ ಬಾರಾ.
ವಜ್ರಲೇಪದಲ್ಲಿ ಬಿದ್ದಿದ್ದೇನೆ ಬೇಗ ಬಂದೆತ್ತಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೯ ||

೯೫೧
ಅಯ್ಯಾ, ನಿನ್ನವರ ಕಂಡು ಕರಗದನ್ನಕ್ಕರ,
ನಿನ್ನವರ ಕಂಡು ನೀನೆಂದೆ ಕಾಣದನ್ನಕ್ಕರ,
ನಿನ್ನವರ ಮೂರ್ತಿಧ್ಯಾನದಲ್ಲಿ ಮೂರ್ಛೆವೋಗದನ್ನಕ್ಕರ
ವೇಷದ ಗೌಳೆಯರ, ಲಾಂಛನದ ಲಂಪಟರ
ಮಜ್ಜನಕ್ಕೆರೆವ ಭವಿಗಳಿಗೆ ಏಕೊಲಿವೆಯಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೦ ||

೯೫೨
ಅಯ್ಯಾ, ನಿಮ್ಮ ಶ್ರೀಪಾದವ ಹರಿದು ಹತ್ತುವೆ.
ನೆನೆವ ಮನವ ಕೆಡಿಸಲೆಂದು ಮೋಹದ ಗಾಳಿ ಬೀಸಲೊಡನೆ

ಕೋಪದ ಕಿಚ್ಚು ಹತ್ತಿ ಬೇವೆನಯ್ಯಾ.
ಅಯ್ಯಾ, ನಿಮ್ಮ ನೆನೆವ ಮನವ, ಕಾಡುವ ವಿಧಿಯ ಕೊಂದು
ಎನ್ನಲ್ಲಿ ನೆಲಸಯ್ಯಾ,
ಗುರುವೆ ದೇವರದೇವ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೧ ॥

೯೫೩

ಅಯ್ಯಾ, ಸಂಸಾರ ನಿಸ್ಸಾರವೆಂಬ ವಿಂಧ್ಯದೊಳಗೆ
ಅಯ್ಯಾ, ಕಾಮನೆಂಬ ಕಳ್ಳನ ತೋರಿ ಬೆಚ್ಚಿ ಬೆದರಿಸುವೆ.
ಅಯ್ಯಾ, ಕಾಮನ ಕರೆದು ಎನ್ನವನೆನ್ನವನೆನ್ನಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೨ ॥

೯೫೪

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ,
ಎಲೆ ಅಯ್ಯಾ, ನಿಮ್ಮ ಕಂಡು ಕಂಗಳು ಕಡೆಗೋಡಿವರಿದುವಯ್ಯಾ.
ಎನ್ನ ಮನಕ್ಕೆ ಮನ ವೇದ್ಯವಾದಡೆ [ಮೈ]ಮರೆದೆನೆಲೆ ಅಹಾ, ಅಯ್ಯಾ,
ಕಪಿಲಸಿದ್ಧ ಮಲ್ಲಿನಾಥನ ಕಂಡ ಸುಖವು ಆರಿಗೆಯೂ ಇಲ್ಲ. ॥ ೧೩ ॥

೯೫೫

ಅರಿತವನೆಂತು ಸತ್ತನು? ಅರಿತವನೆಂತು ಹುಟ್ಟಿದನು?
ಅರಿತವನೆಂತು ಅಘೋರಪಾಶಕ್ಕೆ ಒಳಗಾದನು?
ಅರಿತವನೆ ಚಿರಂಜೀವಿ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೪ ॥

೯೫೬

ಅಹುದಹುದು ಮತ್ತೇನು?
ಮರಹಿಂಗೆ ಹಿರಿದು ಕಿರಿದುಂಟಲ್ಲದೆ,
ಅರುಹಿಂಗೆ ಹಿರಿದು ಕಿರಿದುಂಟೆ? ಹೇಳಯ್ಯಾ.
ಸಾವಂಗೆ ಭಯವುಂಟಲ್ಲದೆ
ಅಜಾತಂಗೆ ಭಯವುಂಟೆ? ಹೇಳಯ್ಯಾ.
ಕಪಿಲಸಿದ್ಧ ಮಲ್ಲಿನಾಥನಲ್ಲಿ,
ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆ ಕಾಣಾ,
ಚೆನ್ನಬಸವಣ್ಣಾ. ॥ ೧೫ ॥

೯೫೭

ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ
ಬರುತ್ತಿದೆ ನೋಡಾ ಈ ಘಟ.
ಬಂದುದರಿಯೆ, ಹೋದುದರಿಯೆ.

ನಿಂದ ವಸ್ತುವದು ನಿಜವೆಂದರಿದೆ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೬ ||

೯೫೮
ಆಗಳು ಎನ್ನ ಮನ ಉದರಕ್ಕೆ ಹರಿವುದು,
ಕಾಣಲಾರೆನಯ್ಯಾ.
ಅಯ್ಯಾ, ಭೇದಿಸಲಾರೆ ತಂದೆ.
ಎನ್ನನುದರ ಬಲೆಯಲ್ಲಿ ಸಿಲುಕಿಸಿ ತಾ ಹೋದ
ಕಪಿಲಸಿದ್ಧ ಮಲ್ಲಿಕಾರ್ಜುನ. || ೧೭ ||

೯೫೯
ಆನೆಯ ಕಾವವನ, ಆಡ ಕಾವವನ ಅಂತರವನರಿ ಕಂಡಾ.
ಕೋಡಗನ ಪರಿಯಲಿ ಕುಳ್ಳಿರಲು ನೀನು ಕಲಿ ಕಂಡಾ.
ಮರುಳಿನ ಮನದ ಪರಿಯನರಿ ಕಂಡಾ.
ಕಪಿಲಸಿದ್ಧ ಮಲ್ಲಿನಾಥಯ್ಯಾ, ಕತ್ತಲೆಯೆಂಬುದ ಕಳೆ ಕಂಡಾ,
ಮಕ್ಕಳ ಮತವನರಿ ಕಂಡಾ. || ೧೮ ||

೯೬೦
ಆರೇನೆಂದಡೂ ಓರಂತಿಪ್ಪುದೆ ಸಮತೆ.
ಆರು ಜರಿದವರೆನ್ನ ಮನದ ಕಾಳಿಕೆಯ
ಕಳೆದರೆಂಬುದೆ ಸಮತೆ.
ಆರು ಸ್ತೌತ್ರ್ಯವ ಮಾಡಿಹರೆನ್ನ ಜನ್ಮ ಜನ್ಮದ ಹಗೆಗಳೆಂಬುದೆ ಸಮತೆ,
ಇಂತಿದು ಗುರುಕಾರುಣ್ಯ.
ಮನವಚನಕಾಯದಲ್ಲಿ ಅವಿತತವಿಲ್ಲದಿರ್ದಡೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ, ನಿನ್ನವರ ನೀನೆಂಬುದೆ ಸಮತೆ. || ೧೯ ||

೯೬೧
ಆವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಪೊರಳ್ಚುಗೆಯ,
ಮೇಣು ಹಂಸೆಯ ಹಾಸಿನ ಮೇಲೆ ಪೊರಳ್ಚುಗೆಯ,
ಪೊರಳ್ಚಿದಡೆ ಮನ ವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ
ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೨೦ ||

೯೬೨
ಆವನಾನೊಬ್ಬನು ತಗುಳ್ದಟ್ಟಿ ಕಲ್ಲುಗುಂಡಿನಲ್ಲಿಡುಗೆ
ಮೇಣು ಪೂವಿನಲ್ಲಿಡುಗೆ.

ಇಟ್ಟಡೆ ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ
ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೨೧ ॥

೯೬೩
ಉದಕವೆಲ್ಲ ಒಂದೆ:
ಈಚಲವ ಆಶ್ರಯಿಸಿ ಮದ್ಯಪಾನವೆನಿಸಿತ್ತು,
ಸುರತರುವ ಆಶ್ರಯಿಸಿ ಅಮೃತವೆನಿಸಿತ್ತು.
ದೇಹವೆಲ್ಲ ಒಂದೆ:
ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತ್ತು;
ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಲವೆನಿಸಿತ್ತು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೨೨ ॥

೯೬೪
ಉಸುರ ಹಿಡಿದು ಮಜ್ಜನಕ್ಕೆರೆವೆನಯ್ಯಾ ನಿಮಗೆ,
ವಿಷಯ ಮಾದು ಗಂಧವನೀವೆನಯ್ಯಾ ನಿಮಗೆ,
ನೆನಹ ನೆಲೆಗೊಳಿಸಿ ಕೊಡುವೆನು ಕುಸುಮವನು,
ತನುಗುಣಾದಿಗಳನುರುಹಿ ದಶಾಂಗಧೂಪವನಿಕ್ಕುವೆನು.
ಎನ್ನನೆ ನಿಮಗೆ ಬೋನಕ್ಕೆ ಸವೆವೆನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ,
ಹೊರ ಬಳಕೆಯ ಪೂಜೆಗೆ ಎರಗದೆನ್ನ ಮನವು. ॥ ೨೩ ॥

೯೬೫
ಊರಲ್ಲಿರುವ ವಸ್ತು ಅದೆ ನೋಡಯ್ಯಾ.
ವನದಲ್ಲಿರುವ ವಸ್ತು ಅದೆ ನೋಡಯ್ಯಾ.
ಚರಿಸಿ ಚರಿಸಿ ಜಗವನುದ್ಧರಿಸುವ ವಸ್ತು ಅದೆ ನೋಡಯ್ಯಾ.
ಮೂಲೋಕದರೆಯ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ಪರವಸ್ತು ಅದೆ ನೋಡಯ್ಯಾ. ॥ ೨೪ ॥

೯೬೬
ಊರಿಗೊಂದು ಹಳ್ಳವಾದಡೆ,
ನೀರು ಕುಡಿವವರಿಗೂ ಒಂ[ದೊಂ]ದೆ ಹಳ್ಳವೆ? ಇಲ್ಲಿಲ್ಲ.
ಅರಿವವರಿಗೆ ಒಬ್ಬ ದೇವರಾದಡೆ,

ಆ ಲೋಕದವರಿಗೂ ಒ[ಬ್ಬೊ]ಬ್ಬನೆ? ಇಲ್ಲಿಲ್ಲ.
ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲದೆ ಬೇರೆ ದೈವವಿಲ್ಲ. ॥ ೨೫ ॥

೯೬೭
ಎನ್ನ ತನುಮನದೊಡೆಯ ನೀನೆ ಕಂಡಯ್ಯಾ.
ಮನದ ಮಹಾದೇವ ನೀನಾದ ಬಳಿಕ
ಇನ್ನು ನಾ ಮನವ ಕದ್ದೆಲ್ಲಿ ಬೈಚಿಡುವೆನಯ್ಯಾ?
ಎನ್ನ ಮನೋವಾಕ್ಕಾಯದೊಡೆಯ ನೀನೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಶರಣು ಶರಣು! ॥ ೨೬ ॥

೯೬೮
ಎನ್ನ ಭರಭಾರ ನಿಮ್ಮದಯ್ಯಾ,
ಎನ್ನ ಹಾನಿವೃದ್ಧಿ ನಿಮ್ಮದಯ್ಯಾ,
ಎನ್ನ ಕರಕರ ಕಾಡದಿರು ತಂದೆ!
ನಿನ್ನ ಕಾಟ ಎನ್ನ ಪ್ರಾಣದೋಟ!
ಕಪಿಲಸಿದ್ಧ ಮಲ್ಲಿನಾಥಾ,
ಕೊಲ್ಲು, ಕಾಯಿ : ನಿಮ್ಮ ಧರ್ಮದವ ನಾನು. ॥ ೨೭ ॥

೯೬೯
ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮ ಬಾರದಯ್ಯಾ.
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀ[ಯ ಯಾಗ] ಸಮ ಬಾರದಯ್ಯಾ.
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರೀ ಲಕ್ಷ ಜಪ ಸಮ ಬಾರದಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೮॥

೯೭೦
ಎಲೆ ಅಯ್ಯಾ, ಎನಗೆ ಜವ್ವನವೇರಿತ್ತಯ್ಯಾ, ಹರೆಯ ಹತ್ತಿತ್ತಯ್ಯಾ,
ಪ್ರಾಯ ಸಮರೂಪಿಗೆ ಬಂದಿತ್ತಯ್ಯಾ.
ಜವ್ವನಕ್ಕೆ ಜಯವಂತನಿಲ್ಲ, ಹರೆಯಕ್ಕೆ ಹರುಷಿತನಿಲ್ಲ.
ಪ್ರಾಯಕ್ಕೆ ಪ್ರೌಢಿಗನಿಲ್ಲದೆ ಭ್ರಮೆಬಡುತ್ತಿದ್ದೇನಯ್ಯಾ.
ಜವ್ವನಿಗ ಜಯವ ಮಾಡಿದಡೆ ಆನು ಬದುಕುವೆನಯ್ಯಾ,
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥ ೨೯ ॥

೯೭೧
ಎಲೆ ಅಯ್ಯಾ, ನಿಮ್ಮ ಬರವಿಂಗೆ ಕಣ್ಬೇಟಗೊಂಡೆನು.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಎನ್ನ ಮನವೆಂಬ
ಮಂಚವ ಪಚ್ಚಡಿಸಿದೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಚಿತ್ತ ಸುಯಿಧಾನಿಯಾಗಿದ್ದೇನೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ
ಜ್ಞಾನದ ಸೆರಗ ಹಾಸಿ ಆಸೆಬಡುತ್ತಿದ್ದೇನೆ.
ಎಲೆ ಅಯ್ಯಾ, ನೀ ಬಂದು ಅವಿತಥವಿಲ್ಲದೆ ಕೂಡಿ ನಿನ್ನವಳೆಂದೆನಿಸಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. || ೩೦ ||

೯೭೨
ಎಸೆವಡೆದ ಮೃಗದಂತೆ ಎನ್ನ ಮನ, ಶಂಭುವೆ!
ಕಲ್ಲೆನ್ನದು ಮುಳ್ಳೆನ್ನದು.
ಭಕ್ತಿಯೆಂಬ ಸಂಕಲೆಯನಿಕ್ಕೆನ್ನ ಮನಕ್ಕೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೧ ||

೯೭೩
ಏಕೆನ್ನ ಸಿರಿಗಳು ಕೆರೆಗಳು ಮರಗಳು ಫಲಗಳು
ಬೀಯದ ಮುನ್ನ ಒಯ್ಯನೆ ಮಾಡಿ ಭೋ!
ಹಾಲುಳ್ಳಲ್ಲಿ ಹಬ್ಬವನು.
ಎನ್ನ ಭಕ್ತಿ ಯುಕ್ತಿ ಸವೆಯದ ಮುನ್ನ
ಲಿಂಗವೆ ಜಂಗಮವೆಂದು ಮಾಡಿ ಭೋ!
ಸ್ವತಂತ್ರ, ತನ್ನನೀವ ಕಪಿಲಸಿದ್ಧ ಮಲ್ಲಿಕಾರ್ಜುನ. || ೩೨ ||

೯೭೪
ಏನಯ್ಯಾ, ಏನಯ್ಯಾ! ಮಕ್ಕಳಿಗೆ ಜನಕರು ಕಾಡುವರೆ?
ನಾನು ಗುರುಸ್ಥಲಕ್ಕೆ ಯೋಗ್ಯನಲ್ಲ,
ಲಿಂಗಸ್ಥಲಕ್ಕೆ ಯೋಗ್ಯನಲ್ಲ,
ಜಂಗಮಸ್ಥಲಕ್ಕೆ ಯೋಗ್ಯನಲ್ಲ.
ನಾ ನಿಮ್ಮ ರಾಜಾಂಗಣದ ಕೂಲಿಕಾರ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೩ ||

೯೭೫
ಒಡಗೂಡಿದ ಒಚ್ಚತನವ ಬಿಡುಮನರು ಬಲ್ಲರೆ,
ಮೃಡ, ನಿಮ್ಮ ಶರಣರಲ್ಲದೆ?

ಕಡಲೊಳಗೆ ಮುತ್ತಿಪ್ಪ ಕಡು ಘಾತದ ಭೇದವನು
ಜಡಜೀವಿಗಳು ಬಲ್ಲರೆ, ಮೃಡ ನಿಮ್ಮ ಶರಣರಲ್ಲದೆ?
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೪ ||

೯೭೬
ಓದುವುದದು ಸದ್ಗುಣಕ್ಕಲ್ಲದೆ
ಕಿವಿಯನೂದುವುದಕ್ಕೇನೋ, ಅಯ್ಯಾ?
ಮಾಡುವ ಭಕ್ತಿ ಮೋಕ್ಷಕ್ಕಲ್ಲದೆ
ಡಂಭಾಚಾರಕ್ಕೇನೋ, ಅಯ್ಯಾ?
ಆಡುವ ವೇಷ ದ್ರವ್ಯಕ್ಕಲ್ಲದೆ
ಜನರಾಡಂಬರಕ್ಕೇನೋ, ಅಯ್ಯಾ?
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೫ ||

೯೭೭
ಕಟೆದ ಕಲ್ಲು ಲಿಂಗವೆಂದೆನಿಸಿತ್ತು;
ಕಟೆಯದ ಕಲ್ಲು ಕಲ್ಲೆನಿಸಿತ್ತು.
ಪೂಜಿಸಿದ ಮಾನವ ಭಕ್ತನೆನಿಸಿದನು;
ಪೂಜಿಸದ ಮಾನವ ಮಾನವನೆನಿಸಿದನು.
ಕಲ್ಲಾದಡೇನು? ಪೂಜೆಗೆ ಫಲವಾಯಿತ್ತು;
ಮಾನವನಾದಡೇನು? ಭಕ್ತಿಗೆ ಕಾರಣಿಕನಾದನು.
ಕಲ್ಲು ಲಿಂಗವಲ್ಲ, ಲಿಂಗ ಕಲ್ಲಲ್ಲ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೬ ||

೯೭೮
ಕಣ್ಬೇಟವೆಂಬ ಕಾನನದಲ್ಲಿ ಅರಸುತ್ತಿದ್ದೇನೆ,
ಭಕ್ತಿಯೆಂಬ ಹೊಮ್ಮಿಗವ ಸೋವುತ್ತಿದ್ದೇನೆ.
ಲಿಂಗತ್ರಯವೆಂಬ ಬಲೆಗಾಗಿ ಮಿಗ ಸಿಕ್ಕಿ,
ಬಲೆ ಹರಿದೊಂದಾದಡೆ,
ಎಯ್ದಿದೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ಪರಮ ಮುಕ್ತಿರಾಜ್ಯವನು. || ೩೭ ||

೯೭೯
ಕರಿಕೆಯ ಕಂಡು ಪಶುಗಳಾಶ್ರಯಿಸುವವು.
ಔತಣ ಕಂಡು ದ್ವಿಜರಾಶ್ರಯಿಸುವರು.
ಯುದ್ಧವ ಕಂಡು ಶೂರರಾಶ್ರಯಿಸುವರು.

ಸಭೆಯ ಕಂಡು ವಿದ್ವಾಂಸರಾಶ್ರಯಿಸುವರು.
ಇವರೆಲ್ಲ ಮಾಯಾಮೂಲಕರಲ್ಲದೆ
ಮಾಯಾರಹಿತರಲ್ಲಯ್ಯಾ.
ಕಂಡು ಕಂಡು ಕಣ್ದೆರೆದು ನೋಡದ
ಮಹಾ ಮಹಿಮ ಜಂಗಮನ ಪಾದಕ್ಕೆ
ನಮೋ ನಮೋ ಎಂಬೆನಯ್ಯಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೩೮ ||

೯೮೦
ಕ[ರ]ಣ ಕಾನನದೊಳಗಾನು ಹೊಲಬುಗೆಟ್ಟೆನಯ್ಯಾ;
ನೆನಹೆಂಬ ಮಠದೊಳಗೆ ನಿರ್ಮಳನಾದೆನಯ್ಯಾ;
ಘನತರ ಸಂಯೋಗದಲ್ಲಿ ನೀನು ನಾನಾದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಸಂದು ಸವೆದು ಒಂದಾದೆ. || ೩೯ ||

೯೮೧
ಕರುಣಾಕರ, ಕರತಳಾಮಳಕ ಎಂದಪ್ಪುದಯ್ಯಾ?
ನಿನ್ನ ನೆನಹಿನ ಮಹಾಸಮುದ್ರದೊಳಗದ್ದಿ ಎಂದಾಳ್ವೆನಯ್ಯಾ?
ಬಂದುದು ಬಾರದೆಂಬ ಸಂದೇಹವನೆಂದು ಸವೆವೆನಯ್ಯಾ?
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಎಂದಯ್ಯಾ ಕರುಣ ಕಂದೆರೆವುದು? || ೪೦ ||

೯೮೨
ಕರುಣಾಕರನೆ, ಎನ್ನ ದೆಸೆಗೆಟ್ಟ ಪಶುವನು
ಹಸಗೆಡಿಸುವುದು ನಿನಗುಚಿತವೆ ಹೇಳಾ!
ಸಕಲ ಸಾನಂದನೆ, ಆನಂದರೂಪನೆ
ವಿಕಲವನು ಮಾಣಿಸಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೪೧ ||

೯೮೩
ಕಲ್ಪವೃಕ್ಷ ಮರನೆನ್ನಬಹುದೆ?
ಕಾಮಧೇನು ಪಶುವೆನ್ನಬಹುದೆ?
ಪರುಷದ ಕಣಿ ಪಾಷಾಣವೆನ್ನಬಹುದೆ?
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ನುಂಗಿದವರೆಲ್ಲ
ಮಾನವರೆನ್ನಬಹುದೆ? || ೪೨ ||

೯೮೪
ಕಲ್ಲು ದೇವರಲ್ಲಿ ವಲ್ಲಭನಿದ್ದಾನೆಂದು
ಲಲ್ಲೆಗರೆಯಬೇಡ, ಖುಲ್ಲತನದಿಂದ.
ಒಮ್ಮೆ ಅರಿಯಬಲ್ಲಡೆ,
ಕಪಿಲಸಿದ್ಧಮಲ್ಲಿಕಾರ್ಜುನನ
ಶರಣರ ಪಾದದಲ್ಲಿ ತಲ್ಲೀಯವಾಗಾ, ಕಲ್ಲಯ್ಯಾ. || ೪೩ ||

೯೮೫
ಕಲ್ಲು ನೀರಲ್ಲಿದ್ದಂತಲ್ಲದೆ,
ನೀರ ನುಂಗಿ ನೀರಾಗಬಹುದೆ ಅಯ್ಯಾ?
ಅಗ್ನಿ ನೀರಲ್ಲಿದ್ದಂತಲ್ಲದೆ,
ನೀರ ನುಂಗಿ ನೀರಾಗಬಹುದೆ, ಅಯ್ಯಾ?
ಪ್ರಸಾದಿ ಭವದಲ್ಲಿದ್ದಂತಲ್ಲದೆ,
ಭವ ನುಂಗಿ ಭವಿಯಾಗಬಹನೆ, ಅಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೪೪ ||

೯೮೬
ಕಲ್ಮುಡಿಗನ ಕೈಯಲ್ಲಿ ಕಲ್ಲುಳಿ ಕೊಟ್ಟಡೆ,
ಕೊಟ್ಟಂತಲ್ಲದೆ ಕಲ್ಲು ರೂಪಾಗಿ ಬಾರದಯ್ಯಾ.
ಆದ್ಯರ ವಚನ ಅವಿದ್ಯಾವಂತನ ಜಿಹ್ವೆಯಲ್ಲಿದ್ದಡೆ,
ಇದ್ದಂತಲ್ಲದೆ ವಿದ್ಯಾಮಯಕೀರ್ತಿಯಾಗನಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೪೫ ||

೯೮೭
ಕಳವಳದ ಕಂದೆರವಿಗೊಳಗು ಮಾಡಿದಿರಿ.
ಹಾ ಹಾ ಎಲೆ ಅಯ್ಯಾ,
ಎನ್ನ ವಿಕಾರದಲ್ಲಿ ಗುರಿ ಮಾಡಿದಿರಯ್ಯಾ.
ಕೋಪದ ಕಾಡುಗಿಚ್ಚಿಗೆ ಅಡವಿಯ ಗುರಿಮಾಡಿದಿರಿ,
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. || ೪೬ ||

೯೮೮
ಕಾಣಬಹುದು ಕೈಗೆ ಸಿಲುಕದು,
ಅರಿಯಬಹುದು ಕುರುಹಿಡಬಾರದು,
ಭಾವಿಸಬಹುದು ಬೆರಸಬಾರದು.
ಇಂತೀ ಉಪಮಿಸಬಾರದ ಮಹಾಘನವ
ಕಪಿಲಸಿದ್ಧ ಮಲ್ಲಿಕಾರ್ಜುನಾ, ನಿಮ್ಮ ಶರಣನೇ ಬಲ್ಲ. || ೪೭ ||

೯೮೯
ಕಾಮನನು ನೋಡಿದ ಕಂಗಳಲ್ಲಿ ನೋಡದೆ,
ಸೋಮನಯನದಿ ನೋಡಿ ಸಲಹು ತಂದೆ.
ಕಾಮಾರಿಯಯ್ಯ ನೀನು, ಕಾಮಂಗೆ ಒಪ್ಪಿಸದಿರು ಎನ್ನ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೪೮ ||

೯೯೦
ಕಾಯದ ಹೊರಕಣ್ಣ ಮುಚ್ಚಿ,
ಮನ ಭಾವದರಿವಿನೊಳಕಣ್ಣ ತೆರೆದು,
ಬಂದಾನೆಂಬ ಪರವಶಕ್ಕೆ ಕಿವಿಯಾಂತು ಕೇಳುತ್ತಿದ್ದೇನೆ.
ಅದೆತ್ತಣಿಂದ ಸುಳಿದನೆಂದರಿಯೆನಯ್ಯಾ.
ಅರುಹಿನ ನೇತ್ರಕ್ಕೆ ಶರ್ವನ ಪ್ರತಿಬಿಂಬ ಸೂಚಿಸಿ ಹೊಳೆದಡೆ,
ಕಣ್ದುಂಬಿ ನೋಡಿದೆ, ಮನದುಂಬಿ ನೆನೆದೆ,
ಆ ಪ್ರತಿಬಿಂಬವಿಡಿದು ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವೆನು. || ೪೯ ||

೯೯೧
ಕಾಯ ಧರಿಸಿದವ ನವನೀತ ರೋಮದಂತಿರಬೇಕು,
ಮುಕುರದ ಪ್ರತಿಬಿಂಬದಂತಿರಬೇಕು,
ಬೆಟ್ಟದಲ್ಲಿಯ ಕಾಡಕಿಚ್ಚಿನಂತಿರಬೇಕು,
ಆಷಾಢದಲ್ಲಿಯ ಚಂಡಮಾರುತನಂತಿರಬೇಕು.
ಸರ್ವರಲ್ಲಿ ಸರ್ವರಂತಾಗಿರಬೇಕು ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೦ ||

೯೯೨
ಕಾಯ್ದ ಕರ್ಬುನ ನೀರನೊಳಕೊಂಬಂತೆ,
ಬಿದ್ದ ಬಿಂದುವ ಭೂಮಿಯೊಳಕೊಂಬಂತೆ,
ನವನೀತ ಘೃತವನೊಳಕೊಂಬಂತೆ,
ವೀಳ್ಯ ರಸವೊಳಕೊಂಬಂತೆ-
ಎನ್ನ ಕಾಯವ ತನ್ನ ಕಾಯದಲ್ಲಿ ಒಳಕೊಂಬ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನ, ಮಹಾಶರಣನ. || ೫೧ ||

೯೯೩
ಕುಂಬಾರನ ಆವಿಗೆಯಲ್ಲಿ ಕುಂಬಾರನಿಲ್ಲ.
ಕಂಬಾರನ ಕಲಶಂಗಳಲ್ಲಿ ಕಂಬಾರನಿಲ್ಲ.
ಆವಿಗೆ ಕಲಶಂಗಳಲ್ಲಿ ಅಸ್ತಿತ್ವ ಉಂಟಾಗಿಹ
ಕುಂಬಾರ ಕಂಬಾರನಂತಿಪ್ಪ ನೋಡಾ,
ಈ ಪ್ರಪಂಚದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ. || ೫೨ ||

೯೯೪
ಕುರಿಯ ಹೆಸರು ಒಂದೆ, ಅಗ್ನಿಯ ಹೆಸರು ಒಂದೆ ಆದಲ್ಲಿ,
ಅಗ್ನಿಯ ಸಾಮರ್ಥ್ಯ ಕುರಿಗೆ ಬಂದೀತೇನಯ್ಯಾ?
ಕಪ್ಪೆಯ ಹೆಸರು ಹಾವಿನ ಹೆಸರು ಒಂದೇ ಆದಲ್ಲಿ,
ಹಾವಿನ ಸಾಮರ್ಥ್ಯ ಕಪ್ಪೆಗೆ ಬಂದೀತೇನಯ್ಯಾ?
ನನ್ನ ಹೆಸರು, ನಮ್ಮ ಶಿವಶರಣರ ಹೆಸರು ಒಂದೆ ಆದಲ್ಲಿ,
ಅವರ ಸಾಮರ್ಥ್ಯ ಎನಗೆ ಬಂದೀತೇನಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೫೩ ||

೯೯೫
ಕುಲಜನಾಗಿ ನಾನೇವೆನಯ್ಯ?
ಕುಲದ ಬಳಿಯ ದೇವನಲ್ಲ, ಮನದ ಬಳಿಯ ದೇವನ್ಯೆಸೆ.
ಆವ ಯೋನಿಜನಾದಡೇನು?
ನೀನೊಲಿದವನೆ ಕುಲಜನಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೪ ||

೯೯೬
ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ:
ಕುಲವೇ ಡೋಹರನ? ಕುಲವೇ ಮಾದಾರನ? ಕುಲವೇ ದೂರ್ವಾಸನ?
ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೇ ಕೌಂಡಿನ್ಯನ?
ಕುಲವ ನೋಳ್ಪಡೆ ಹುರುಳಿಲ್ಲ;
ಅವರ ನಡೆಯ ನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೫ ||

೯೯೭
ಕೆರೆಯ ನೀರು, ಮರದ ಪುಷ್ಪ ಧರಿಸಿದಡೇನು ಅಯ್ಯಾ,
ಆಗುವುದೆ ಆಗುವುದೆ ಲಿಂಗಾರ್ಚನೆ?
ನೀರೆರೆಯಲಿಕ್ಕಾತನೇನು ಬಿಸಿಲಿನಿಂದ ಬಳಲಿದನೆ?
ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೆ?
ನಿನ್ನ ಮನವೆಂಬ ನೀರಿಂದ, ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲಡೆ
ಭಕ್ತನೆಂಬೆ, ಮಹೇಶ್ವರನೆಂಬೆ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೬ ||

೯೯೮
ಕ್ರಿಯೆಗಳಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲಯ್ಯಾ.
ಕ್ರಿಯಾಸು ಶತಶೋ ಭೇದಾ ಜ್ಞಾನಮೇಕಂ ವಿರಾಜತೇ।
ಸುರುಚೀನಿ ಪದಾರ್ಥಾನಿ ಜಿಹ್ವೈಕೈವ ವಿರಾಜತೇ ॥
ಎಂಬುಪನಿಷತ್ತು ಪುಸಿಯಲ್ಲ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೭ ||

೯೯೯
ಕ್ಷೀರಶರಧಿಯೊಳಿರುವ ಹಂಸೆಗೆ
ಅನ್ಯಕ್ಷೀರದ ಹಂಗುಂಟೇನಯ್ಯಾ?
ಸುಗಂಧಮಯ ಪುಷ್ಪದಲ್ಲಿರುವ ಭೃಂಗಂಗೆ
ಅನ್ಯಪರಿಮಳದ ಹಂಗುಂಟೇನಯ್ಯಾ?
ಸಮುದ್ರದೊಳಿರುವ ಮಂಡೂಕಂಗೆ
ಅನ್ಯ ಅಂಬುವಿನ ಹಂಗುಂಟೇನಯ್ಯಾ?
ಮೊಲೆಯನುಣ್ಣುವ ಶಿಶುವಿಂಗೆ
ಅನ್ಯಕ್ಷೀರ ನೀರಿನ ಹಂಗುಂಟೇನಯ್ಯಾ?
ಸಕಲಪ್ರದಾಯಕ ಲಿಂಗದೊಳಿದ್ದ ಶರಣಂಗೆ
ಅನ್ಯಪದದಾಶೆಯ ಹಂಗುಂಟೇ?
ಹೇಳಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೮ ||

೧೦೦೦
ಗಂಧವೃಕ್ಷವ ಕಡಿದಲ್ಲಿ
ನೊಂದೆನೆಂದು ಗಂಧವ ಬಿಟ್ಟಿತ್ತೆ ಅಯ್ಯಾ?
ಚಂದ ಸುವರ್ಣವ ತಂದು ಕಾಸಿ ಬಡಿದಡೆ
ನೊಂದೆನೆಂದು ಕಳಂಕ ಹಿಡಿಯಿತ್ತೆ ಅಯ್ಯಾ?
ಸಂದು ಸಂದು ಕಡಿದ ಕಬ್ಬು ಯಂತ್ರದಲ್ಲಿಟ್ಟು ತಿರುಹಿ, ಕಾಸಿದಡೆ,
ನೊಂದೆನೆಂದು ಸಿಹಿಯಾಗುವುದ ಬಿಟ್ಟಿತ್ತೆ ಅಯ್ಯಾ?
ತಂದು ತಂದು ಭವಕಟ್ಟಿ ಬಿಟ್ಟಡೆ,
ನಿಮ್ಮರಿವು ಬಿಟ್ಟೆನೆ ಅಯ್ಯಾ? ಕಪಿಲಸಿದ್ಧ ಮಲ್ಲಿಕಾರ್ಜುನಾ. || ೫೯ ||

೧೦೦೧
ಗಿರಿಗಹ್ವರದೊಳಗರಸಿ ತೊಳಲಿ ಬಳಲಿದೆನವ್ವಾ.
ನೋಡಿ ನೋಡಿ ಕಣ್ಣು ನಟ್ಟಾಲಿ ಬಿದ್ದವವ್ವಾ.
ನೀನು ಗುರುವಾಗಿ ಬಂದು ಎನ್ನ ಭವವ ಹರಿದೆ.
ನೀನು ಭಕ್ತಕಾರಣ ಪರಶಿವಮೂರ್ತಿಯೆಂದರಿದೆ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೬೦ ||

೧೦೦೨
ಗುರುವಿಡಿದು ತನುವಾಯಿತ್ತು,
ಲಿಂಗವಿಡಿದು ಮನವಾಯಿತ್ತು,
ಜಂಗಮವಿಡಿದು ಧನವಾಯಿತ್ತು,
ಬಸವಣ್ಣವಿಡಿದು ಭಕ್ತಿಯಾಯಿತ್ತು,
ಕಪಿಲಸಿದ್ಧಮಲ್ಲಿನಾಥಯ್ಯಾ. || ೬೧ ||

೧೦೦೩
ಗೋಪ ಭೂಪನ ನೆನೆದಡೆ ಭೂಪನಾಗಬಲ್ಲನೆ?
ಅಂದಿನ ಗಣಂಗಳ ಕಂಡು, ಇಂದಿನ ಜೀವಿಗಳು ನೆನೆನೆನೆದು
ಧನ್ಯರಾದೆವೆಂಬ ಪರಿಯ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೬೨ ॥

೧೦೦೪
ಘಾತವಪ್ಪ ಶರಧಿ,
ಪ್ರೇತವಪ್ಪ ಅಡವಿ,
ಘಾತಕ ಭವಕೆ ಬಹ ಕೂಪದೊಳಗೆ ನೂಕಿದರೆ ಬೀಳೆ,
ನಿನ್ನಾಧಾರವುಂಟು.
ಅನಾದಿ ಸಂಸಿದ್ಧ ಯೋಗಮೂರ್ತಿ
ನಿನ್ನ ಒಡನಾಡಿ ನಾ ನಿನ್ನ ಠಕ್ಕನರಿಯೆನೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೬೩ ॥

೧೦೦೫
ಚರಿಸಿ ಜಂಗಮವೆನಿಸಿತ್ತಯ್ಯಾ ಲಿಂಗವು.
ನೆಲಸಿ ಲಿಂಗವೆನಿಸಿತ್ತಯ್ಯಾ ಲಿಂಗವು.
ಇದರಿರವ ಅರುಹಿದಲ್ಲಿ ಗುರುವೆನಿಸಿತ್ತಯ್ಯಾ ಲಿಂಗವು.
ಗುರು - ಲಿಂಗ - ಜಂಗಮಕ್ಕೆ ತಿಲಾಂಶ ಭೇದವಿಲ್ಲ
ನೋಡಾ, ಎಲೆ ದೇವಾ.
ಭೇದಿಸಿದವಗೆ ಭವಬಾಧೆ ತಪ್ಪುವುದೆ,
ದೇವರ ದೇವ ಕಪಿಲಸಿದ್ಧ ಮಲ್ಲಿಕಾರ್ಜುನದೇವಾ? ॥ ೬೪ ॥

೧೦೦೬
ಚರಿಸುವ ಚರನಿಗೆ ಚ[ರ್ಯೆ]ಯೆ ಭೂಷಣ.
ಸುಂದರ ನಾರಿಗೆ ಗಂಭೀರ ಪುರುಷನೆ ಭೂಷಣ.
ಕೊಳನಲ್ಲಿಯ ನೀರಿಗೆ ಕಲಹಂಸೆಯೆ ಭೂಷಣ.
ವನದಲ್ಲಿಯ ವಸಂತಕ್ಕೆ ಕೋಕಿಲನಾದವೆ ಭೂಷಣ.
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಶರಣರಿಗೆ
ನಿರ್ಮಲ ನಿಜಾನಂದವೆ ಭೂಷಣ. ॥ ೬೫ ॥

೧೦೦೭
ಜಗವನಾಡಿಸುವನು, ಜಗವನೇಡಿಸುವನು.
ಜಗದ ನಟನಾಟಕನ ಪರಿಯ ನೋಡಯ್ಯಾ!
ಜಗವ ರಂಜಿಸುವನು, ಜಗವ ಭುಂಜಿಸುವನು,
ಜಗದೊಳಗಿಪ್ಪನು, ಜಗದ ಹೊರಗಿಪ್ಪನು.

ಜಗಕೆ ತೋರಿಯೂ ತೋರದಂತಿಪ್ಪನು.
ದರ್ಪಣದೊಳಗಣ ಪ್ರತಿಬಿಂಬದಂತಿಪ್ಪನು.
ಉದಕ-ಪದ್ಮಪತ್ರದಂತಿಪ್ಪನು.
ನಿಜಗುರುವೆ, ಸ್ವತಂತ್ರ ಕಪಿಲಸಿದ್ಧ ಮಲ್ಲೇಶ್ವರ[ನ]
ನೋಟ ತೀರಲೊಡನೆ ಜಗದಾಟ ತೀರಿತು. || ೬೬ ||

೧೦೦೮
ಜಲದಲ್ಲಿಯ ಚಂದ್ರನ ಚಲನೆ ಜಲದಲಲ್ಲದೆ,
ನಿಜಚಂದ್ರನಲ್ಲಿಲ್ಲವಯ್ಯಾ.
ಘಟದಲ್ಲಿಯ ಪ್ರತಿಬಿಂಬಗಳು ಘಟದಲ್ಲಲ್ಲದೆ,
ಬಿಂಬದಲ್ಲಿಲ್ಲ ನೋಡಯ್ಯಾ.
ಜಲದಲ್ಲಿಯ ಚಂದ್ರನ ಚಲನೆ
ಘಟದಲ್ಲಿಯ ಪ್ರತಿಬಿಂಬ ನಿಜವಲ್ಲ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೬೭ ||

೧೦೦೯
ಜಲದೊಳಗೆ ಮತ್ಸ್ಯ ಜಲವ ತನ್ನ ನಾಸಿಕದತ್ತ
ಹೊದ್ದಲೀಯದ ಪರಿಯ ನೋಡಾ ಅಯ್ಯಾ.
ಶರಣ ಸರ್ವಪ್ರಪಂಚಿನೊಳಗಿದ್ದು
ಆ ಪ್ರಪಂಚು ತನ್ನತ್ತ ಹೊದ್ದಲೀಯದ ಪರಿಯ ನೋಡಾ ಅಯ್ಯಾ.
ಮತ್ಸ್ಯಂಗಾ ಬುದ್ಧಿಯ, ಶರಣಂಗೀ ಬುದ್ಧಿಯ ಕರುಣಿಸಿದೆಯಲ್ಲಾ,
ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯಾ. || ೬೮ ||

೧೦೧೦
ಜಲದೊಳಗೆ ಹುಟ್ಟಿದ ಬುದ್ಬುದಂಗಳು ಜಲದೊಳಗಡಗುವಂತೆ
ನಿನ್ನೊಳಗಡಗಿಪ್ಪುದನಾರು ಬಲ್ಲರಯ್ಯ?
ಶರಣದೇಹಿಕ ದೇವ ಮಹವನೊಡಗೂಡಿಪ್ಪ ಭೇದವ ಬಲ್ಲವರಾರಯ್ಯ?
ಕೊಡನೊಳಗಣ ಚಂದ್ರ ಹಲವರೊಳಗೆ ವರ್ತಿಸುವಂತೆ
ನೀನವರೊಳಗೆ ಹೊದ್ದದಿಪ್ಪುದನು ನಿನ್ನವರಲ್ಲದರಿವರಾರೈ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೬೯ ||

೧೦೧೧
ಜಾತಿ ವಿಜಾತಿಯು ನೀರ್ಗುಡಿಯ ಹೋದರೆ
ಸುಡು ಹೋಗೆಂದು ನೂಂಕಿತ್ತೆ ಆ ಜಲವು?

ಆ ಜಲದಂತಾಗಬೇಡವೆ ಹಿರಿಯರಾದವರು.
ಎನ್ನ ಮನ ವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಬುದ್ಧಿ
ಎನ್ನನೆಂದು ಬಂದು ಪೊರ್ದಿಪ್ಪುದೊ ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ. || ೭೦ ||

೧೧೧೨
ಜೀವವುಳ್ಳನ್ನಕ್ಕರ ಕ್ರೋಧದ ಮೂಲ,
ಕಾಯವುಳ್ಳನ್ನಕ್ಕರ ಕಾಮದ ಮೂಲ,
ಸಂಸಾರವ್ಯಾಪ್ತಿಯುಳ್ಳನ್ನಕ್ಕರ ಆಸೆಯ ಮೂಲ.
ಇಂತಪ್ಪಾಸೆಯ ಕೆಡಿಸಿ ಶಿವಯೋಗದ ಲೇಸ ತೋರು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೭೧ ||

೧೧೧೩
ಜ್ಞಾನಿಗಳು ತಾವಾದ ಬಳಿಕ ಮುಕುರದ ಬಿಂಬದಂತಿರಬೇಕು.
ಜ್ಞಾನಿಗಳು ತಾವಾದ ಬಳಿಕ ಜ್ಞಾನದಲ್ಲಿ ಕದಲದಂತಿರಬೇಕು.
ಜ್ಞಾನಿಗಳು ತಾವಾದ ಬಳಿಕ ಸಂಶಯರಹಿತರಾಗಿರಬೇಕು,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೭೨ ||

೧೧೧೪
ತನು ಕೊಡುವಡೆ ಗುರುವಿನದು;
ಮನ ಕೊಡುವಡೆ ಲಿಂಗದದು;
ಧನ ಕೊಡುವಡೆ ಜಂಗಮದದು.
ಅವರ ಪದಾರ್ಥವನವರಿಗೆ ಕೊಟ್ಟು ಭಕ್ತನಾದೆನೆಂಬವರ
ಹಿರಿಯತನದ ಕೇಡ ನೋಡಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೭೩ ||

೧೧೧೫
ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ.
ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ.
ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದ ಬಸವಣ್ಣ.
ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ,
ಸದ್ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ,
ನಿಮ್ಮ ಶರಣ ಸ್ವಯಪ್ರಸಾದಿಯಾದನಯ್ಯಾ ಬಸವಣ್ಣ. || ೭೪ ||

೧೦೧೬
ತನುವೆಂಬ ಹೇಳಿಗೆಗೆ ಮನಸರ್ಪನಾವರಿಸಿ,
ಇನಿ[ತು] ಬಂದಡೆ ಅದಕ್ಕಿಂಬುಗೊಡದೆ,
ಇರುತಿರ್ಪ ಸರ್ಪನನು ತೆಗೆದು
ಶಿವಲಿಂಗವನು ನೆಲೆಗೊಳಿಸಿದ
ಶ್ರೀ ಗುರುವೆ ಶರಣು ಶರಣೆಂಬ ವಾಕ್ಯಂಗಳಲ್ಲಿ
ಆಕಾರ ಚತುಷ್ಟಯವ ಆನಂದದಲ್ಲಿರಿಸಿದ
ಏಕೋರುದ್ರ ಶಿಷ್ಟ ಕಪಿಲಸಿದ್ಧ ಮಲ್ಲಿಕಾರ್ಜುನ. || ೭೫ ||

೧೦೧೭
ತಾಮಸದಿಂದ ನಿನ್ನ ನೆನೆವವರಿಗೆ
ತಾಮಸಪದವನೀಯುವಿರಯ್ಯಾ.
ಆರೈದು ನಿನ್ನುವನು ಓರಂತೆ ನೆನೆವವರಿಗೆ
ಕಾರುಣ್ಯ ಪದವನೀವೆ ಅಯ್ಯಾ,
ಅನಾದಿಮೂರುತಿ ಕಪಿಲಸಿದ್ಧ ಮಲ್ಲಿನಾಥಯ್ಯಾ. || ೭೬ ||

೧೦೧೮
ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು.
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು.
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು.
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು.
ಅದು ಕಾರಣ, ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ! || ೭೭ ||

೧೦೧೯
ತಿಳಿದು ತಿಳಿದು ವಿಷಯಕ್ಕೆ ಮೈಗೊಟ್ಟಡೆ ಅನುಭಾವಿಯೆ, ಅಯ್ಯಾ?
ಅಳಿದು ಅಳಿದು ಆನಂದಕ್ಕೆ ಮೈಗೊಟ್ಟಡೆ ಅಜ್ಞಾನಿಯೆ, ಅಯ್ಯಾ?
ತಿಳಿದ ಬಳಿಕ ವಿಷಯಗಳಳಿಯಬೇಕು.
ಅಳಿದ ಬಳಿಕ,
ಎಳೆಯ ಚಂದ್ರಧರ ಕಪಿಲಸಿದ್ಧ ಮಲ್ಲಿಕಾರ್ಜುನನಾಗಲೇಬೇಕು. || ೭೮ ||

೧೦೨೦
ತಿಳಿದೆ ನಾ ತಿಳಿದೆ ನಾ ಎಂದು ಹಲಬರು ಹೋದರು, ಅಹಂಕಾರದಲ್ಲಿ.
ತಿಳಿಯೆ ನಾ ತಿಳಿಯೆ ನಾ ಎಂದು ಹಲಬರು ಹೋದರು, ಮರವೆಯಲ್ಲಿ.

ತಿಳಿದೆನೆಂಬುದು ತಿಳಿಯೆನೆಂಬುದು ಜ್ಞಾನದ ಮೈದೊಡಕು.
ತಿಳಿಯೆ ಅರಿವು, ಮರೆ(ಯೆ ಮರೆ)ಯೆಂಬುಭಯುವ ತಿಳಿದು ತಿಳಿಯದಂತಿರೆ,
ತಿಳಿನೀರ ನಳಿನಾಕ್ಷನುತ ಕಪಿಲಸಿದ್ಧ ಮಲ್ಲಿಕಾರ್ಜುನ ತಾನೆ. || ೭೯ ||

೧೦೨೧
ದರ್ಪಣದಲ್ಲಿ ಮುಖವ ನೋಡುವರಲ್ಲದೆ,
ದರ್ಪಹರನಲ್ಲಿ ಮುಖವ ನೋಡುವರೊಬ್ಬರೂ ಇಲ್ಲ, ನೋಡಯ್ಯಾ.
ನ್ಯಾಯದಲ್ಲಿ ದ್ರವ್ಯವ ಕೊಡುವರಲ್ಲದೆ,
ನ್ಯಾಯಾತೀತನ ಪೂಜೆಗೆ ಒಬ್ಬನೂ ಭಂಡಾರವೀಡಾಡಲಿಲ್ಲ;
ಕಪಿಲಸಿದ್ಧ ಮಲ್ಲಿಕಾರ್ಜುನಗಳ್ಳರು! || ೮೦ ||

೧೦೨೨
ದರಿದ್ರ ಧನಾಢ್ಯಂಗಂಜುವನಲ್ಲದೆ ದರಿದ್ರಂಗಂಜುವನೆ?
ದೊರೆ ಮಹಾದೊರೆಗಂಜುವನಲ್ಲದೆ ದೊರೆತನಕ್ಕಂಜುವನೆ?
ಪರಶಿವಯೋಗಿ ಅಂತರ್ಯಾಮಿಗಂಜುವನಲ್ಲದೆ,
ಲೋಕದ ಗುಂಗಿಗಳಿಗಂಜುವನೆ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೮೧ ||

೧೦೨೩
ದುಷ್ಕರ್ಮಂಗಳ ಮಾಡುವರನಂತರುಂಟು,
ಸತ್ಕರ್ಮಂಗಳ ಮಾಡುವರೊಬ್ಬರೂ ಇಲ್ಲ ನೋಡಯ್ಯಾ.
ದುಷ್ಕರ್ಮವೆಂದಡೆ ವಿಷಯವಾಸನೆ,
ಸತ್ಕರ್ಮವೆಂದಡೆ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವ ವಾಸನೆ. || ೮೨ ||

೧೦೨೪
ದೇವನಾನಂದದ ಭಕ್ತರ ನಿಲವ ಕೇಳಿರಯ್ಯಾ:
ಹರಿವ ನದಿಯ ತೆರನಂತೆ ಹರವಾಗಿಪ್ಪರಯ್ಯಾ,
ತಾವು ಮಾಡುವರಲ್ಲದೆ ಮಾಟದೊಳಗಿರರು
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೮೩ ||

೧೦೨೫
ದೇಹ ನಾನೆಂದು ನಂಬಿದೆ, ಎಲೆ ಮನವೆ.
ದೇಹದಲ್ಲಿಹ ಗುಣಂಗಳು ನಿನ್ನಲ್ಲಿ ಕಂಡಯ್ಯಾ ಮನವೆ.
ಪೃಥ್ವಿಯ ಗುಣ ಶಾಂತಿ, ಉದಕದ ಗುಣ ಸ್ವಾದ,
ಅಗ್ನಿಯ ಗುಣ ಸರ್ವಭಕ್ಷಣ, ವಾಯುವಿನ ಗುಣ ನಿರ್ಮಲತ್ವ,
ಆಕಾಶದ ಗುಣ ನಿರ್ವಯಲು.

ಈ ಪಂಚತತ್ವದ ಗುಣ ನಿನ್ನಲ್ಲಿರಲು,
ನೀನೆ ಪಂಚಮುಖ ನೋಡಾ ಮನವೆ, ಕಪಿಲಸಿದ್ಧ ಮಲ್ಲಿಕಾರ್ಜುನಾ. ‖ ೮೪ ‖

೧೦೨೬
ಧರೆ ಇಲ್ಲದೆ ಬೆಳೆಯಬಹುದೆ ಧಾನ್ಯವ?
ಮಳೆ ಇಲ್ಲದೆ ನೋಡಬಹುದೆ ಬೆಳೆಗಳ?
ಒಂದು ವಸ್ತುವಿಗಾದಡೂ ದ್ವಂದ್ವವೆ ಬೇಕು.
ನಮ್ಮ ಕಪಿಲಸಿದ್ಧ ಮಲ್ಲನ ನೋಡುವಡೆ
ಲಿಂಗಪೂಜೆ ಜಂಗಮದಾಸೋಹವೆ ಬೇಕು. ‖ ೮೫ ‖

೧೦೨೭
ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ.
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ.
ಮೃಡನೆ, ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗಾ,
ನುಡಿಯ ಬ್ರಹ್ಮಂಗಳಿಂದಪ್ಪುದೇನೊ! ‖ ೮೬ ‖

೧೦೨೮
ನದಿಯ ನೀರು ಹೋದುವಯ್ಯಾ ಸಮುದ್ರಕ್ಕೆ;
ಸಮುದ್ರದ ನೀರು ಬಾರವಯ್ಯಾ ನದಿಗೆ.
ನಾನು ಹೋದೆನಯ್ಯಾ ಲಿಂಗದ ಕಡೆಗೆ;
ಲಿಂಗ ಬಾರದು ನೋಡಯ್ಯಾ ನನ್ನ ಕಡೆಗೆ.
ಮಗ ಮುನಿದಡೆ ತಂದೆ ಮುನಿಯನು;
ನಾ ಮುನಿದಡೆ ನೀ ಮುನಿಯೆ ನೋಡಯ್ಯಾ,
ಕಪಿಲಸಿದ್ಧ ಮಲ್ಲಿನಾಥಾ. ‖ ೮೭ ‖

೧೦೨೯
ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ.
ಸ್ಮೃತಿಗಳು ಸಮುದ್ರದ ಪಾಲಾಗಲಿ;
ಶ್ರುತಿಗಳು ವೈಕುಂಠವ ಸೇರಲಿ;
ಪುರಾಣಗಳು ಅಗ್ನಿಯ ಸೇರಲಿ;
ಆಗಮಗಳು ವಾಯುವ ಹೊಂದಲಿ.
ಎಮ್ಮ ನುಡಿ, ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾಲಿಂಗದ
ಹೃದಯದೊಳು ಗ್ರಂಥಿಯಾಗಿರಲಿ. ‖ ೮೮ ‖

೧೦೩೦
ನಿಂದಿಸಿದಲ್ಲಿ ಕುಂದುವನಲ್ಲ ಜಂಗಮನು.
ವಂದಿಸಿದಲ್ಲಿ ಆನಂದಮಯನಲ್ಲ ಜಂಗಮನು.

ಬಂದುಪಚಾರದಲ್ಲಿ ಸಂದುಗೊಳ್ಳುವನಲ್ಲ ಜಂಗಮನು.
ಬಂದಲ್ಲಿ ನೀಡದಿರೆ ಕ್ರೋಧಿಯಲ್ಲ ಜಂಗಮನು.
ಇಂದುಧರ ಕಪಿಲಸಿದ್ಧ ಮಲ್ಲನೆಂಬೆ ಇಂತಪ್ಪ ಜಂಗಮ[ವ]ನು. || ೮೯ ||

೧೦೩೧
ನಿಮ್ಮ ಶ್ರೀಪಾದವ ಹರಿದು ಹತ್ತುವ - ನೆನೆವ
ಮನವ ಕೆಡಿಸಲೆಂದು,
ಮೋಹದ ಗಾಳಿ ಕೈವೀಸಲೊಡನೆ
ಕೋಪದ ಕಿಚ್ಚು ಹತ್ತಿ ಬೆಂದೆನಯ್ಯಾ.
ನಿಮ್ಮ ನೆನೆವ ಮನವ ಕಾಡುವ ವಿಧಿಯ ಕೊಂದು
ನೆಲಸೆನ್ನ ಕಪಿಲಸಿದ್ಧ ಮಲ್ಲಿನಾಥ ದೇವರದೇವಾ! || ೯೦ ||

೧೦೩೨
ನಿಧಾನವ ಕಂಡರೆ ಜಲಗ ತೊಳೆಯಲೇಕೆ?
ಮಾಣಿಕ್ಯ ದೊರಕೊಂಡರೆ ಕೊಳ್ಳಿಯ ಬೆಳಕೇಕೆ?
ಕಾಮಧೇನು ಕರೆವರೆ ಕರುವಿನ ಹಂಗೇಕೆ?
ಎಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನದೇವರು
ತಮ್ಮ ನಿಜರೂಪವ ತೋರಿದ ಬಳಿಕ,
ಆರಾಧನೆಯೆಂಬ ಉಪಚಾರದ ಹಂಗೇಕೆ ಹೇಳಾ. || ೯೧ ||

೧೦೩೩
ನೀರ ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು, ನೋಡಯ್ಯಾ.
ದೇಹ ಜೀವದ ಸಂದ ನೀವು ಬಿಚ್ಚಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ?
ನೀವಿಕ್ಕಿದ ತೊಡಕ ಬಿಡಿಸಬಾರದು :
ನೀವು ಬಿಡಿಸಿದ ತೊಡಕನಿಕ್ಕಬಾರದು.
ಕಪಿಲಸಿದ್ಧ ಮಲ್ಲಿನಾಥಯ್ಯಾ,
ಎನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ, ನಿಮ್ಮ ಧರ್ಮ. || ೯೨ ||

೧೦೩೪
ನುಡಿಯಬಹುದು ಅದ್ವೈತವನೊಂದು ಕೋಟಿ ವೇಳೆ;
ಒಮ್ಮೆ ನಡೆಯಬಹುದೆ ನಿರ್ಧರವಾಗಿ ಸದ್ಭಕ್ತಿ ಸದಾಚಾರವ?
ನುಡಿದಂತೆ ನಡೆವ, ನಡೆದಂತೆ ನುಡಿವ
ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ
ಪಾದವ ಹಿಡಿದು ಬದುಕಿಸಯ್ಯಾ, ಪ್ರಭುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೯೩ ||

೧೦೩೫

ನುಡಿವಲ್ಲಿ ದೋಷವನಾರಿಸದೆ ಬಾಯಿಚ್ಚೆಗೆ ಬಂದಂತಾಡಿದಡೆ
ಅದು ಹೆಮ್ಮೆಯಲ್ಲದೆ ಸಹಜಜ್ಞಾನವಲ್ಲ.
ಅದೇನು ಕಾರಣವೆಂದಡೆ,
ಪಾಷಾಣದ ಮೂರ್ತಿ ಘನವೆಂದಡೆ ಅಗ್ನಿಯಿಂದ ಭಂಗ.
ಅಗ್ನಿ ಘನವೆಂದಡೆ ತೋಯದಿಂದ ಭಂಗ.
ತೋಯ ಘನವೆಂದಡೆ ಮಾರುತನಿಂದ ಭಂಗ.
ಮಾರುತ ಘನವೆಂದಡೆ ಬಯಲಿನಿಂದ ಭಂಗ.
ಬಯಲು ಘನವೆಂದಡೆ ಅಂತಃಕರಣದಿಂದ ಭಂಗ.
ಅಂತಪ್ಪಂತಃಕರಣ ಘನವೆಂದಡೆ ಮಾಯೆಯಿಂದ ಭಂಗ.
ಮಾಯೆ ಘನವೆಂದಡೆ, ಮಹಾದೇವ ಕಪಿಲಸಿದ್ಧ ಮಲ್ಲಿಕಾರ್ಜುನ
ಪರಬ್ರಹ್ಮದಿಂದ ಭಂಗ ಕೇಳಾ, ಮಡಿವಾಳತಂದೆ. || ೯೪ ||

೧೦೩೬

ನುಡಿಹಿಡಿದು ತಾರ್ಕಿಕರಂತೆ ತರ್ಕಿಸುವಾತ ನಾನಲ್ಲ.
ಆಡುವ ಮಾತಿಗೆ ಈಡ ಮಾಡುವ ನುಡಿಯಲ್ಲಿ ವಾಕ್ಪಟುತನವು ನಿಜವಲ್ಲ.
ನಡೆಯುವ ನಂದಿ ಕುಂಟುವುದುಂಟು,
ಹೋಗುವ ಮನುಜ ಎಡಹುವುದುಂಟು,
ಮಾತಾಡುವ ಶರಣ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ
ತಪ್ಪಿದಡೆ ತಪ್ಪಲ್ಲ ಕೇಳಾ, ಪ್ರಭುವೆ. || ೯೫ ||

೧೦೩೭

ನೆಲ್ಲ ಗಿಡುವಿನ ಮರೆಯಲೊಂದು ಹುಲ್ಲು ಗಿಡುವಾನಯ್ಯಾ.
ನಿಮ್ಮ ಚರಣವೆ ಶರಣು ಶರಣೆಂದು
ನಾನು ಧನ್ಯನಾದೆನು ನೋಡಯ್ಯಾ.
ನಿಮ್ಮ ನೆನೆದವರೆಲ್ಲ ಧನ್ಯರು,
ಕಪಿಲಸಿದ್ಧ ಮಲ್ಲಿನಾಥಯ್ಯಾ. || ೯೬ ||

೧೦೩೮

ಪಂಚೇಂದ್ರಿಯವೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವಂತೆ ಮಾಡಯ್ಯಾ.
ಮೀಸಲು ಬೀಸರವೋಗದ ಮುನ್ನ
ನೀ ನಿತ್ಯನಾಗಿ ಪ್ರಯೋಗಿಸಯ್ಯಾ.

ಎನ್ನಾಸುರದ ಸ್ನೇಹವಿಂಗಿಹೋಗದ ಮುನ್ನ ಈಶ ನೀ ಕೂಡಿಕೊಳ್ಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೯೭ ||

೧೦೩೯
ಪತ್ರೆಯ ನೇಮದವರು ಒಂದು ಕೋಟಿ.
ಲಿಂಗಾರ್ಚನೆಯ ನೇಮದವರು ಒಂದು ಕೋಟಿ.
ಜಂಗಮ ತೃಪ್ತಿಯವರು ಒಂದು ಕೋಟಿ.
ತನ್ನ ತಾ ತಿಳಿಯುವ ನೇಮದವರು ಒಬ್ಬರೂ ಇಲ್ಲವಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೯೮ ||

೧೦೪೦
ಪರತರವ ಸಾಧಿಸುವಡೆ ಪ್ರಪಂಚದ ವಿಷಯ ಅಳಿದಿರಬೇಕು.
ರಾಜ್ಯವ ಸಾಧಿಸುವಡೆ ಪ್ರಾಣದಾಸೆಯ ಮರೆದಿರಬೇಕು.
ವಿದ್ಯೆಯ ಸಾಧಿಸುವಡೆ ಅನ್ಯ ಆಸೆಯ ಮರೆದಿರಬೇಕು.
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವಡೆ
ಸಂಶಯವಳಿದು ನಿಶ್ಚಿಂತನಾಗಬೇಕು. || ೯೯ ||

೧೦೪೧
ಪರರಾಣಿಯರ ನೋಡುವಲ್ಲಿ,
ಅಂಧನಾಗಿಪ್ಪ ನೋಡಾ ಜಂಗಮನು.
ಪರಧನವ ಕಂಡಲ್ಲಿ,
ಹುಲಿಯ ಕಂಡ ಹುಲ್ಲೆಯಂತೆ ಭೀತಿಬಡುವ ನೋಡಾ ಜಂಗಮನು.
ದುರ್ನರರ ಸಂಭಾಷಣೆಯ ಕೇಳುವಲ್ಲಿ,
ಅತಿಮೂರ್ಖನಾಗಿಪ್ಪ ನೋಡಾ ಜಂಗಮನು.
ದುಷ್ಕರ್ಮಪಥದೊ[ಳ್ಚರಿ]ಸುವಲ್ಲಿ,
ಕಡುಜಡ ಹೆಳವ ನೋಡಾ ಜಂಗಮನು.
ಅಕ್ಷಾಂಗವಿಷಯಗಳೊಳು,
ನಿಷ್ಕರುಣಿಯಾಗಿಪ್ಪ ನೋಡಾ ಜಂಗಮನು.
ಶಿವನಿಂದಕರ ಸ್ವರಗೇಳುವಲ್ಲಿ,
ಬಧಿರನಾಗಿಪ್ಪ ನೋಡಾ ಜಂಗಮನು.
ದುರಾತ್ಮರಿಗೆ ಜ್ಞಾನದ್ರವ್ಯ ಕೊಡುವಲ್ಲಿ,
ಲೋಭಿಯಾಗಿಪ್ಪ ನೋಡಾ ಜಂಗಮನು,
ಕಪಿಲಸಿದ್ಧ ಮಲ್ಲಿಕಾರ್ಜುನನು. || ೧೦೦ ||

೧೦೪೨
ಪರುಷ ಮುಟ್ಟಿದ ಕಬ್ಬುನ
ಪರುಷವಾಗದಿದ್ದರೆ ಕೊರತೆಯಯ್ಯಾ.

ನಿನ್ನ ಮುಟ್ಟಿ ಪೂಜಿಸಿದವರು ನೀನೆಯಾಗದಿದ್ದರೆ
ನಿನ್ನ ದೇವತನದ ಮಾನಕ್ಕೆ ಹಾನಿ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೦೧ ॥

೧೦೪೩
ಪರುಷಲಿಂಗವ ಕೈಯಲ್ಲಿ ಹಿಡಿದು
ಸರ್ವಫಲವನೀಯೆಂಬರು.
ಶ್ರೀಗುರುಸ್ವಾಮಿ ಕರಸ್ಥಲಕಿತ್ತುದು ಹುಸಿಯೆ?
ಇವಂದಿರು ಕೆಟ್ಟ ಕೇಡಿಂಗೆ ಕಡೆಯಿಲ್ಲ.
ಮುಟ್ಟಿಯೂ ಮುಟ್ಟದವರನೇನೆಂಬೆನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೦೨ ॥

೧೦೪೪
ಪರುಷ ಸೋಂಕಿದ ಬಳಿಕ
ಕಾರ್ಬೊನ್ನದ ಕೇಡು ನೋಡಿರಯ್ಯಾ.
ಜ್ಯೋತಿ ಸೋಂಕಿದ ಬಳಿಕ
ತಮಂಧದ ಕೇಡು ನೋಡಿರಯ್ಯಾ.
ಅಮೃತ ಸೋಂಕಿದ ಬಳಿಕ
ರೋಗದ ಕೇಡು ನೋಡಿರಯ್ಯಾ.
ನಮ್ಮ ಕಪಿಲಸಿದ್ಧ ಮಲ್ಲನ ಸೋಂಕಿದ ಬಳಿಕ
ಭವದ ಕೇಡು ನೋಡಿರಯ್ಯಾ. ॥ ೧೦೩ ॥

೧೦೪೫
ಪಶುಗಳಿಗೆಲ್ಲ ಪೃಷ್ಠದಲ್ಲಿ ಬಾಲವಿದ್ದಡೆ,
ಮಾಡುವೆನೆಂಬವನ ಮುಖದಲ್ಲಿ ಬಾಲ ನೋಡಾ.
ಪಶುಗಳಿಗೆಲ್ಲ ಮಸ್ತಕದಲ್ಲಿ ಶೃಂಗವಿದ್ದಡೆ,
ಮಾಡಿದ ಪೂಜೆ ಕೈಕೊಂಡೆನೆಂಬವನ
ಮನದ ಕೊನೆಯ ಮೇಲೆ ಶೃಂಗ ನೋಡಾ.
ಮಾಡಿದೆನೆಂಬುದುಳ್ಳನ್ನಕ್ಕ ಭಕ್ತನೆಂಬೆ[ನೆ ಅ]ಯ್ಯಾ?
ಮಾಡಿಸಿಕೊಂಡೆನೆಂಬುದುಳ್ಳನ್ನಕ್ಕ
ನಿರುಪಾಧಿ ನಿರಂಜನ ಜಂಗಮವೆಂಬೆನೆ ಅಯ್ಯಾ?
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೦೪ ॥

೧೦೪೬
ಪುಣ್ಯವ ಮಾಡಬೇಕೆಂದು ಮರುಗಬೇಡ,
ಪಾಪವ ಮಾಡದಿದ್ದಡೆ ಪುಣ್ಯ ದಿಟ.

ಬೇರೆ ತೀರ್ಥ ಬೇಡ.
ಸತ್ಯವ ನುಡಿವಲ್ಲಿ ಸಂದಿಲ್ಲದಿಹನು,
ಕಪಿಲಸಿದ್ಧ ಮಲ್ಲಿಕಾರ್ಜುನ
ಹುಸಿಗೆ [ಹುರುಡಿಗನು]. ॥ ೧೦೫ ॥

೧೦೪೭
ಪೊರ ಕಣ್ಣನೆ ಮುಚ್ಚಿ, ಒಳ ಕಣ್ಣನೆ ತೆರೆದು
ಬಂದಾನೆಂಬ ರಭಸಕ್ಕೆ ಕಿವಿಯಾತು ಕೇಳುತ್ತಿದ್ದೆನು.
ಅದೆತ್ತಣಿಂದ ಸುಳಿದನೆಂದರಿಯೆನಯ್ಯಾ.
ಸರ್ವ ಪ್ರತಿಬಿಂಬ ಹೊಳೆದರೆ
ಕಣ್ಣ ತುಂಬಿ ತುಂಬಿ ಹಿಡಿದೆ.
ಆ ಪ್ರತಿಬಿಂಬವಿಡಿದೆ ಕಪಿಲಸಿದ್ಧ ಮಲ್ಲಿಕಾರ್ಜುನನ [ಕೂ]ಡುವೆನು. ॥ ೧೦೬ ॥

೧೦೪೮
ಬಣ್ಣವಿಲ್ಲದೆ ಚಿನ್ನ ನಾಮಕ್ಕರ್ಹವಾದ ಪರಿ ಇನ್ನೆಂತಯ್ಯಾ.
ಹೂವೊಣಗಿ ವಾಸನೆ ಮುಡಿದ ಠಾವಿನಲ್ಲಿ
ವಾಸನೆ ನಿಂದುದಿಲ್ಲವೆ? ಅಯ್ಯಾ.
ಕ್ರೀಶುದ್ಧವಾದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವು
ಭಾವಶುದ್ಧವಾಗಿರ್ಪನು. ॥ ೧೦೭ ॥

೧೦೪೯
ಬಯಸುವೆನಯ್ಯಾ ನಿನ್ನವರ ಸಂಗವ,
ಎಳಸುವೆನಯ್ಯಾ ನಿನ್ನವರ ಸಂಗಕ್ಕೆ.
ಬಯಕೆ ಬೇರನ್ಯಕ್ಕೆಳಸದಂತೆ
ಹರುಷಿತನ ಮಾಡಯ್ಯಾ ಭಕ್ತಿಯೊಳಗೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೦೮ ॥

೧೦೫೦
ಬಸವನ ಎರಡನೆಯ ಶಂಭುವೆನ್ನುವರು.
ನಾವು ಮೂರನೆಯ ಶಂಭುವೇನಯ್ಯಾ?
ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ,
ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೦೯ ॥

೧೦೫೧
ಬೀಸುವ ಗಾಳಿ ಧೂಳಿಯನೆತ್ತಲು
ಮಸುಳಿದನೆ ಸೂರ್ಯನು?

ಆ ಸೂರ್ಯನಂತೆ ಬೆಳಗುತ್ತಿ[ರು] ನೋಡಾ !
ಹಿರಿಯರ ಮನವು ವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊದ್ದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೧೦ ॥

೧೦೫೨
ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯಾ?
ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ,
ಸಂಗದೊಳಿರ್ದವರ ಅಜ್ಞಾನವಳಿದು ನಿಜವನೈದುವರಯ್ಯಾ.
ನಿಮ್ಮ ಮಹಾನುಭಾವದ ಸೋಂಕಿನ ಸೆರಗಿನೊಳಗಿರ್ದು,
ನಾನು ಪರಮಸುಖಿಯಾಗಿ
ಮಡಿವಾಳನ ಪಾದದಲ್ಲಿ ಮನ ಮಗ್ನವಾದೆನು ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೧೧ ॥

೧೦೫೩
ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕೂಡುವುದು.
ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು.
ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೧೨ ॥

೧೦೫೪
ಭಕ್ತನಾದ ಬಳಿಕ ಜಂಗಮ ಮೆಚ್ಚಲೇ ಬೇಕು;
ಜಂಗಮವಾದ ಬಳಿಕ ಭಕ್ತ ಮೆಚ್ಚಬೇಕು.
ಭಕ್ತನ ಕಾಯವೆ ಜಂಗಮದ ಕಾಯ;
ಜಂಗಮದ ಕಾಯವೆ ಭಕ್ತನ ಕಾಯ.
ಕಪಿಲಸಿದ್ಧ ಮಲ್ಲೇಶಯ್ಯನಲ್ಲಿ ಇದೆ ಉಪಾಯ. ॥ ೧೧೩ ॥

೧೦೫೫
ಭಕ್ತನಾದ ಬಳಿಕ ಭಕ್ತಿವಿಡಿದಾಚರಿಸುವುದೆಂತಯ್ಯಾ?
ಭಕ್ತ ತಾನಾದ ಬಳಿಕ ಭಕ್ತಿಯ ಹೊಲಬನರಿಯಬೇಕು.
ಭಕ್ತ ತಾನಾದ ಬಳಿಕ ಜ್ಞಾನಕ್ರಿಯಾವಿವರವ ವಿಚಾರಿಸಿ ನೋಡಬೇಕು.
ಭಕ್ತ ತಾನಾದ ಬಳಿಕ ಅರುಹಿನ ಕುರುಹುವಿಡಿದಾಚರಿಸಬೇಕು.
ಭಕ್ತ ತಾನಾದ ಬಳಿಕ ತಾಪತ್ರಯಕ್ಕೊಳಗಾಗದೆ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಐಕ್ಯ ಹೊಂದಲೇಬೇಕು. ॥ ೧೧೪ ॥

೧೦೫೬
ಭಕ್ತ ಭಕ್ತನ ಕಂಡಲ್ಲಿ ಕೈಮುಗಿವುದೆ ಭಕ್ತಸ್ಥಲ.
ಜಂಗಮ ಜಂಗಮವ ಕಂಡಲ್ಲಿ ಶರಣೆಂಬುದೆ ಜಂಗಮಸ್ಥಲ.

ಭಕ್ತ ಜಂಗಮ ಎಂದು ಬೇರುಂಟೆ?
ರಸದಂತೆ ಭಕ್ತ, ರುಚಿಯಂತೆ ಜಂಗಮ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೧೫ ||

೧೦೫೭
ಭಕ್ತಿಯಿಲ್ಲದ ಬೇಗೆಯಲ್ಲಿ ಬೆಂದೆನಯ್ಯಾ ತಂದೆ.
ನಿತ್ಯವಪ್ಪ ಭಕ್ತಿಪಥವ ಕುಡು ತಂದೆ!
ತತ್ತ್ವ ಕಾಮ್ಯಾರ್ಥವನೊಲ್ಲೆನಯ್ಯಾ, ಭಕ್ತಿಯೊಳಗಿರಿಸಯ್ಯಾ.
ನಿತ್ಯ ನಿಗಮ[ಕ]ಗೋಚರ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಭಕ್ತರ ಸಂಗದೊಳಿರಿಸಯ್ಯಾ. || ೧೧೬ ||

೧೦೫೮
ಭಾವ ಬಲಿದಲ್ಲಿ ಲಿಂಗವೆನಿಸಿತ್ತು;
ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು;
ಭಾವ ನಿರ್ಭಾವವಾದಲ್ಲಿ ಏನೆಂದೆನಿಸದು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೧೭ ||

೧೦೫೯
ಭೂಷಣವುಳ್ಳ ಜಂಗಮವ ಭೂಪಾಲ ಪೂಜಿಸುವ,
[ವಿಷಯ]ವುಳ್ಳ ಜಂಗಮವ ವೇಶಿ ಪೂಜಿಸುವಳು.
ವೇಷಧಾರಿ ಜಂಗಮವ ಲೋಕವೆಲ್ಲ ಪೂಜಿಸುವುದು,
ಜ್ಞಾನವುಳ್ಳ ಜಂಗಮವನಾರೂ ಪೂಜಿಸರು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೧೮ ||

೧೦೬೦
ಮಂತ್ರವ ಜಪಿಸಿ ಫಲವೇನಯ್ಯಾ,
ಮಂತ್ರಮೂರ್ತಿ ಕಾಣದನ್ನಕ್ಕ?
ಯಂತ್ರವ ಧರಿಸಿ ಫಲವೇನಯ್ಯಾ,
ಅಂತರ ರೋಗ ಪರಿಹಾರವಾಗದನ್ನಕ್ಕ?
ತಂತ್ರವನೋದಿ ಫಲವೇನಯ್ಯಾ,
ಅದರಂತರ ಮೈಗೂಡದನ್ನಕ್ಕ?
ಶರಣನಾಗಿ ಫಲವೇನಯ್ಯಾ,
ಲಿಂಗ ಜಂಗಮವ ಪೂಜಿಸಿ ಮೋಕ್ಷವಡೆಯದನ್ನಕ್ಕ?
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೧೯ ||

೧೦೬೧
ಮಜ್ಜನಕ್ಕೆರೆಯ ಹೇಳಿದಡೆ ನಾನೇನ ಮಜ್ಜನಕ್ಕೆರೆವೆನು?
ಒಳಗೊಂದು ಪ್ರಾಣಲಿಂಗವ ಕಂಡೆನಯ್ಯಾ.
ಹೊರಗಣ ಹೂವ ಕೊಯ್ದು, ಹೊರಗನೆ ಮಜ್ಜನಕ್ಕೆರೆವರು,
ಉಪಚಾರದ ನೇಮವ ನಾನೊಲ್ಲೆನಯ್ಯಾ.
ಸ್ವಾನುಭಾವವನರಿಯದವನೇತರ ಸುಖಿಯೊ?
ಕಪಿಲಸಿದ್ಧ ಮಲ್ಲಿನಾಥನವನನೊಲ್ಲನಯ್ಯಾ. || ೧೨೦ ||

೧೦೬೨
ಮನುಜರ ಮನ್ನಣೆಯದು
ಮಸೆದಲಗಿನ ಗಾಯ ನೋಡಾ.
ಮನುಜರ ಮನ್ನಣೆಯದು
ಪರಿಮಳಪುಷ್ಪದ ಸೋಂಕು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೨೧ ||

೧೦೬೩
ಮರದೆಲೆಯ ತಂದು,
ಕುರುಹಿಡಬಾರದ ಪರಮ ಅರುಹ ಪೂಜಿಸಿದ
ಮರುಳರ ನೋಡಿ ಬೆರಗಾದೆನಯ್ಯಾ.
ಕುರುಹ ಪೂಜೆ ಅರುಹು ಆದಾಗಲೆ ಮರಹಿನ ಕೇಡು.
ಮರವೆಯ ಮುಂದಿಟ್ಟಡೆ ಸಿರಿಗರ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೨೨ ||

೧೦೬೪
ಮಲತ್ರಯದ ಕೆಸರಿನೊಳಗೆ ಒಸೆದು ಬಿದ್ದವ ನಾನು.
ವಸುಧೆಪತಿ ನೀ ಎನ್ನ ತಡಿಗೆ ಚಾಚ.
ಮದೀಶನೆ, ಕರುಣಕಾನನದೊಳಗೆ ಸಂತವಿರಿಸಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೨೩ ||

೧೦೬೫
ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೆ,
ಮತ್ತಾರ ಹಿತಕ್ಕಲ್ಲ ನೋಡಯ್ಯಾ.
ನೋಡಿದರು ನೋಡಿದರು ತಮ್ಮ ಹಿತಕ್ಕಲ್ಲದೆ,
ಮತ್ತಾರ ಹಿತಕ್ಕಲ್ಲ ನೋಡಯ್ಯಾ.
ತನ್ನ ಬಿಟ್ಟನ್ಯಹಿತವ ನೋಡಿದಡೆ,
ಕೂಡಿಕೊಂಬ ನಮ್ಮ ಕಪಿಲಸಿದ್ಧ ಮಲ್ಲಯ್ಯನವರ. || ೧೨೪ ||

೧೦೬೬
ಮಾನವಿಲ್ಲದ ಭೋಜನವದು ಶ್ವಾನನ ಮಾಂಸವಯ್ಯಾ.
ಜ್ಞಾನವಿಲ್ಲದ ಕ್ರಿಯೆಯದು ಸಿದ್ಧಿಗಳಿಗೀಡಯ್ಯಾ.
ಧ್ಯಾನವಿಲ್ಲದ ಪೂಜೆಯದು ಕಾನನ ಜ್ಯೋತಿಯಯ್ಯಾ.
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ,
ನೀನಿಲ್ಲದ ಭಕ್ತಿಯದು ಚಾಂಡಾಲ ಪಾಕವಯ್ಯಾ. || ೧೨೫ ||

೧೦೬೭
ಮುಳುಗುವಾತ ಮುಳುಗುವವನನೆತ್ತಬಲ್ಲನೆ?
ತಾ ಮಾಯೆಯೊಳಗಾಗಿ,
ಮಾಯಿಕರ ತನ್ನ ಪಾದಾಂಬುವಿಂ ಪರಿಹರಿಪೆನೆಂಬವ, ತೆಗೆದುಕೊಂಬವ
ಇವರಿರ್ವರೂ ಮುಳುಗಿ ಯಮಪಾಶಕ್ಕೊಳಗಾದರು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೨೬ ||

೧೦೬೮
ಮೃತ್ತಿಕೆಯೊಂದರಲ್ಲಿ ಮಡಕೆಗಳು ನೂರಾರು.
ಮನವೊಂದರಲ್ಲಿ ಕ್ರಿಯಾದಿಗಳು ನೂರಾರು.
ಜನಕನೊಬ್ಬನಲ್ಲಿ ಸಂತತಿಗಳು ನೂರಾರು.
ಘನಕ್ಕೆ ಘನವಾದ ಚಿನ್ಮಯ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಜಗತ್ತುಗಳು ನೂರಾರು. || ೧೨೭ ||

೧೦೬೯
ಮೃದು ರುಚಿ ರೂಪು ಕೂಡಿ ಸಕ್ಕರೆಯಾಯಿತ್ತು.
ಗುರು ಲಿಂಗ ಜಂಗಮ ಕೂಡಿ ವಸ್ತುವಾಯಿತ್ತು.
ಮೃದುವಿನಂತೆ ಗುರು, ರುಚಿಯಂತೆ ಲಿಂಗ, ರೂಪಿನಂತೆ ಜಂಗಮ,
ಕೇಳಾ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೧೨೮ ||

೧೦೭೦
ಯೋಗಿಗೆ ಕೋಪವೆ ಮಾಯೆ,
ರೋಗಿಗೆ ಅಪಥ್ಯವೆ ಮಾಯೆ,
ಜ್ಞಾನಿಗೆ ಮಿಥ್ಯವೆ ಮಾಯೆ.
ಅರಿದೆನೆಂಬವಂಗೆ ನಾನು ನೀನೆಂಬುದೆ ಮಾಯೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೨೯ ||

೧೦೭೧
ಯೋಗಿನಾಥನ ಒಲುಮೆ ಯೋಗಿಯಾದವಂಗಲ್ಲದೆ,
ಭೋಗಿಯಾದಾತಂಗೆಲ್ಲಿಹುದಯ್ಯಾ?

ಪಂಚಮಸ್ವರದಾಯತ ಕೋಗಿಲೆಗಲ್ಲದೆ ಕಾಗೆಗೆಲ್ಲಿಹುದೊ?
ಕಪಿಲಸಿದ್ಧ ಮಲ್ಲಿಕಾರ್ಜುನ ಯೋಗಿನಾಥಾ. || ೧೩೦ ||

೧೦೭೨
ಲಿಂಗ ಘನವೆಂಬೆನೆ? ಗುರುವಿಡಿದು ಕಂಡೆ.
ಗುರು ಘನವೆಂಬೆನೆ? ಸಾಕಾರವಿಡಿದು ಕಂಡೆ.
ಸಾಕಾರ ಘನವೆಂಬೆನೆ? ನಿರಾಕಾರವಿಡಿದು ಕಂಡೆ.
ನಿರಾಕಾರ ಘನವೆಂಬೆನೆ? ಜಂಗಮವಿಡಿದು ಕಂಡೆನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. || ೧೩೧ ||

೧೦೭೩
ಲಿಂಗವಂತರು ತಾವಾದ ಬಳಿಕ,
ಅಂಗನೆಯರ ನಡೆನುಡಿಗೊಮ್ಮೆ
ಲಿಂಗದ ರಾಣಿಯರೆಂದು ಭಾವಿಸಬೇಕು.
ಲಿಂಗವಂತರು ತಾವಾದ ಬಳಿಕ,
ಅನುಭವದ ವಚನಗಳ ಹಾಡಿ
ಸುಖದುಃಖಗಳಿಗಭೇದ್ಯವಾಗಿರಬೇಕು.
ಲಿಂಗವಂತರು ತಾವಾದ ಬಳಿಕ,
ಜಂಗಮವ ಪೂಜಿಸಿ ಸದಾ ಲಿಂಗೈಕ್ಯಸುಖಿಗಳಾಗಿರಬೇಕು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೩೨ ||

೧೦೭೪
ಲಿಂಗವ ಪೂಜಿಸುವರ ಕಂಡಡೆ,
ಎನ್ನ ಮನ ಉಬ್ಬಿತ್ತು ನೋಡಯ್ಯಾ
ಜಂಗಮವ ಪೂಜಿಸುವರ ಕಂಡಡೆ,
ಹೋದ ಪ್ರಾಣ ಬಂದಂತಾಯಿತ್ತಯ್ಯಾ.
ತನ್ನ ತಾನರಿವರ ಕಂಡಡೆ,
ಕಪಿಲಸಿದ್ಧ ಮಲ್ಲಯ್ಯನೀತನೆಂದು
ನಂಬಿತ್ತು ನೋಡಯ್ಯಾ, ಎನ್ನ ಮನ. || ೧೩೩ ||

೧೦೭೫
ಲಿಂಗವ ಪೂಜಿಸುವವರನಂತರುಂಟು.
ಜಂಗಮವ ಪೂಜಿಸುವವರನಂತರುಂಟು.
ತನ್ನ ತಾನರಿದು, ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ
ಕೂಡುವವರೊಬ್ಬರೂ ಇಲ್ಲ. || ೧೩೪ ||

೧೦೭೬
ಲಿಂಗವಾದ ಬಳಿಕ ಪೂಜಿಸಲಿಲ್ಲ;
ಜಂಗಮವಾದ ಬಳಿಕ ನೋಡಲಿಲ್ಲ;
ಪ್ರಸಾದಿಯಾದ ಬಳಿಕ ರುಚಿಸಲಿಲ್ಲ.
ಇಂತೀ ತ್ರಿವಿಧ ಒಂದಾದ ಬಳಿಕ,
ಕಪಿಲಸಿದ್ಧ ಮಲ್ಲಯ್ಯಾ, ಬೇರೊಂದು ತಿಳಿಯಲಿಲ್ಲ. ॥ ೧೩೫ ॥

೧೦೭೭
ಲಿಂಗವೇ ಅಂಗವಾಗಿಹೆನೆಂಬವನ ಭಾವ ಇದರಲ್ಲೇ ನಿಶ್ಚಯ
ನೋಡಾ ಮನವೆ:
ಸ್ತುತಿ ನಿಂದೆಗಳಲ್ಲಿ ಹರ್ಷ ರೋಷಗಳಿಲ್ಲದಿರಬೇಕು.
ನೀಚಾನೀಚ ಗುಣವ ನೋಡದೆ ನಮ್ಮ ಭಾಷಾವಂತನಾಗಬೇಕು.
ಸರ್ವಜೀವಿಗಳು ತನ್ನಂತೆ ತಿಳಿದು ನೋಡಬೇಕು.
ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು.
ಆಕಾಶದ ಬೆಳಗಿನ ಬೆಳಗ ನೋಡಿ
ಬೆಳಗುಮಯನಾಗಬೇಕು ನೋಡಾ,
ಎಲೆ ಮನವೆ, ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ. ॥ ೧೩೬ ॥

೧೦೭೮
ಲಿಂಗ ಹೋಯಿತ್ತೆಂದು ಅಂಗವ ಬಿಡುವವನ ನೋಡಿ,
ಎನ್ನಂಗ ನಡುಗಿತ್ತಯ್ಯಾ.
ಲಿಂಗ ಹೋದಡೆ ನಿನ್ನ ಪ್ರಾಣಂಗಳುಳಿವವೆ?
ಲಿಂಗಪ್ರಾಣಿ ಪ್ರಾಣಲಿಂಗಿ ಎಂಬುದದು ಹುಸಿಯೆ,
ಅಯ್ಯಾ, ಕಪಿಲಸಿದ್ಧ ಮಲ್ಲಿಕಾರ್ಜುನಾ? ॥ ೧೩೭ ॥

೧೦೭೯
ಲೋಕ ತನ್ನೊಳಗಾದ ಬಳಿಕ, ಲೋಕದ ಸೊಮ್ಮು ತನಗೇಕಯ್ಯಾ?
ಪರುಷ ತಾನಾದ ಬಳಿಕ, ಸುವರ್ಣದ ಸೊಮ್ಮು ತನಗೇಕಯ್ಯಾ?
ಧೇನು ತಾನಾದ ಬಳಿಕ, ಅನ್ಯಗೋವಿನ ಸೊಮ್ಮು ತನಗೇಕಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೩೮ ॥

೧೦೮೦
ಲೋಕದಲ್ಲಿ ಸಾರ್ವಭೌಮರು
ತಮ್ಮ ರಾಣಿಯರಿಗೆ ಮೈಗೊಟ್ಟರಲ್ಲದೆ
ಮೂಲೋಕದರಸ ಎನ್ನ ಕಪಿಲಸಿದ್ಧ ಮಲ್ಲೇಶನೆಂಬ

ಇಷ್ಟಲಿಂಗಕ್ಕೆ ಮೈಗೊಡದೆ ಭವಕ್ಕೀಡಾದರು,
ಮನವೆ, ತಿಳಿ ನೀನು ಕಂಡಾ. || ೧೩೯ ||

೧೦೮೧
ವಚನಾನುಭವ ವಾಗ್ರಚನೆಯಲ್ಲ ಮನವೆ,
ವಚನಾನುಭವ ವಾಗ್ರಚನೆಯಲ್ಲ.
'ವಚನಾನುಭವ ವಚೋ ನ' ಎಂಬುದು ಶ್ರುತಿಸಿದ್ಧ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೪೦ ||

೧೦೮೨
ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ;
ವಚಿಸಿ ಅನುಭವಿಯಾದವ ಪಂಡಿತನಯ್ಯಾ.
ವಿದ್ಯೆಯೆಂಬುದು ಅಭ್ಯಾಸಿಕನ ಕೈವಶ;
ಅವಿದ್ಯೆಯೆಂಬುದು ಸರ್ವರಲ್ಲಿ ವಶ.
ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ,
ಮಹಾಪಂಡಿತ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೪೧ ||

೧೦೮೩
ವಾಕ್ಸಿದ್ಧಿಯುಳ್ಳವರು ಕೋಟಾನುಕೋಟಿ,
ಮನೋರಥಸಿದ್ಧಿಯುಳ್ಳವರು ಕೋಟಾನುಕೋಟಿ,
ಭಾವಸಿದ್ಧಿಯುಳ್ಳವರು ಕೋಟಾನುಕೋಟಿ,
ನಿಮ್ಮ ಸಿದ್ಧಿಯುಳ್ಳವರು ಇಲ್ಲ ಕಂಡಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೪೨ ||

೧೦೮೪
ವಿದ್ಯೆಯನರಿಯದವ ಗುದ್ದಾಟಕ್ಕೊಳಗಾದ.
ಅವಿದ್ಯೆಯನರಿಯದವ ಪ್ರಪಂಚವ ಒದ್ದುಬಿಟ್ಟ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೪೩ ||

೧೦೮೫
ವೀರಧೀರರುಗಳೆಲ್ಲಾ ಕೈಲಾಸಪುರಕ್ಕೆ ದಾಳಿಯ ದಂಡು ಕಾಣಿರೆ.
ಸುತ್ತಿ ಮುತ್ತಿ ಪರಬ್ರಹ್ಮವೆಂಬ ಕೋಂಟೆಯ ಕೊಳ್ಳಿರೆ.
ಸಮತೆ ಸೈರಣೆ ಸಮಾಧಾನವೆಂಬ ಕೈದುವ ಕೊಳ್ಳಿರೆ.
ಅತಿರಥ ಮಹಾರಥರೆಲ್ಲರೂ ಆಯತವಾಗಿರೆ.
ನಮ್ಮ ಕಪಿಲಸಿದ್ಧ ಮಲ್ಲಿನಾಥನೆಂಬ ಶಿವಲಿಂಗವನೊಡಗೂಡಿಕೊಳ್ಳಿರೆ. || ೧೪೪ ||

೧೦೮೬
ವೀರನಾದಡೆ ವೈರಿಗಳ ಕಾಟ ಬಹಳವಯ್ಯಾ.
ದಾನಶೂರನಾದಡೆ ಯಾಚಕರ ಗೋಳು ಬಹಳವಯ್ಯಾ.
ಅತಿರೂಪನಾದಡೆ ಅಂಗನೆಯರ ಕಾಟ ವಿಶೇಷವಯ್ಯಾ.
ಮೂರರಲ್ಲಿ ನಿಂತಡೆ ಮಲತ್ರಯಂಗಳ ಘೋರ ಹೆಚ್ಚಾಯಿತಯ್ಯಾ.
ಅಂಗದಲ್ಲಿ ಲಿಂಗಸಂಬಂಧವಾಗಬಾರದು;
ಆದ ಬಳಿಕ ವೀರನಾಗಿ ವಿಷಯಂಗಳನಳಿವುದು
ಬಹುಘೋರವು ಬಹುಘೋರವು ನೋಡಯ್ಯಾ,
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೪೫ ॥

೧೦೮೭
ವೇದಪ್ರಿಯನಲ್ಲಯ್ಯಾ ನೀನು;
ಶಾಸ್ತ್ರಪ್ರಿಯನಲ್ಲಯ್ಯಾ ನೀನು;
ನಾದಪ್ರಿಯನಲ್ಲಯ್ಯಾ ನೀನು;
ಸ್ತೋತ್ರಪ್ರಿಯನಲ್ಲಯ್ಯಾ ನೀನು;
ಯುಕ್ತಿಪ್ರಿಯನಲ್ಲಯ್ಯಾ ನೀನು;
ಮುಕ್ತಿಪ್ರಿಯನಲ್ಲಯ್ಯಾ ನೀನು;
ಭಕ್ತಿಪ್ರಿಯನೆಂದು ನಂಬಿದೆ, ಮರೆವೊಕ್ಕೆ
ಕಾಯಯ್ಯಾ ನೀನು, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥ ೧೪೬ ॥

೧೦೮೮
ವೇದಪ್ರಿಯನಾದಡೆ ಛಿದ್ರಿಸುವೆಯಾ ಬ್ರಹ್ಮನ ಮಸ್ತಕವ?
ಶಾಸ್ತ್ರಪ್ರಿಯನಾದಡೆ ಒಳಗು ಮಾಡುವೆಯಾ ಶಬ್ದಕ್ಕೆ?
ಮುಕ್ತಿಪ್ರಿಯನಾದಡೆ ಭವಕ್ಕೆ ತರುವೆಯಾ ಎನ್ನ?
ಭಕ್ತಿಪ್ರಿಯನಾದಲ್ಲಿ ಒಯ್ಯಲಿಲ್ಲವೆ ಬೇಡನ,
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೪೭ ॥

೧೦೮೯
ವೇದ ವೇದಾಂತವನೋದಿದಡೇನು
ಮನಸ್ಸೂತಕವಳಿಯದನ್ನಕ್ಕ?
ಸಿದ್ಧ ಸಿದ್ಧಾಂತವ ಶ್ರಮಬಟ್ಟಡೇನು
ಸಾಧಿಸಿ ಕೀರ್ತಿಯ ಪಡೆಯದನ್ನಕ್ಕ?
ಇವೆಲ್ಲ ಹೊರಗಣ ಮಾತು.
ಮಾತೊಂದೆ ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲಿ
ಸದಾಚಾರ ಸನ್ಮಾರ್ಗವಯ್ಯಾ. ॥ ೧೪೮ ॥

೧೯೯೦
ವೇದ ವೇದಾಂತವನೋದಿದವರೆಲ್ಲ ನಿರಂಜನರಾದಡೆ,
ಜನರಾರೊ ಈ ಲೋಕದಲ್ಲಿ?
ಸಿದ್ಧಾಂತವ ಸಾಧಿಸಿದವರೆಲ್ಲ ದೇವರಾದಡೆ,
ಸುರರಾರೋ ಸ್ವರ್ಗದಲ್ಲಿ?
ವೇದಾಂತವಳವಟ್ಟಿತ್ತು ಪ್ರಮಥರಿಗೆ,
ಸಿದ್ಧಾಂತವಳವಟ್ಟಿತ್ತು ಒಬ್ಬೊಬ್ಬರಿಗೆ.
ಈ ಎರಡರ ಕೀಲವಳವಟ್ಟಿತ್ತು ಎನ್ನ ಗುರು ಚೆನ್ನಬಸವಣ್ಣಂಗೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೪೯ ||

೧೯೯೧
ವೇಷದಲ್ಲಿ ಭಕ್ತನಾದಡೇನು, ವೇಷದಲ್ಲಿ ಮಹೇಶನಾದಡೇನು,
ಗುಣವಿಲ್ಲದನ್ನಕ್ಕರ?
ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟು?
ರುಚಿಯಿಂದಲ್ಲದೆ ರೂಪದಿಂದವೆ? ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೫೦ ||

೧೯೯೨
ವೇಷವ ಧರಿಸಿ ಫಲವೇನಯ್ಯಾ,
ವೇಷದಂತಾಚರಣೆ ಇಲ್ಲದನ್ನಕ್ಕ?
ವೇದಾಂತವನೋದಿ ಫಲವೇನಯ್ಯಾ,
ಬ್ರಹ್ಮ ತಾವಾಗದನ್ನಕ್ಕ?
ನಾನು ಕೆರೆಯ ತೋಡಿ ಫಲವೇನಯ್ಯಾ,
ಪುಣ್ಯತೀರ್ಥಂಗಳು ಬರದನ್ನಕ್ಕ?
ಕಪಿಲಸಿದ್ಧ ಮಲ್ಲಿನಾಥಾ. || ೧೫೧ ||

೧೯೯೩
ವ್ಯಾಧಿಹೋಗುವ ಪರ್ಯಂತರ
ರಸರಸಾಯನದ ಹಂ[ಗ]ಯ್ಯಾ.
ಕ್ಷುತ್ಪಿಪಾಸೆಯಡಗುವ ಪರ್ಯಂತರ
ಅನ್ನೋದಕದ ಹಂ[ಗ]ಯ್ಯಾ.
ನಾ ಲಿಂಗಸಂಬಂಧಿಯಾಗುವ ಪರ್ಯಂತರ
ನಿಮ್ಮ ಹಂಗಿನವನಯ್ಯಾ,
ಎಲೆ ಕಪಿಲಸಿದ್ಧ ಮಲ್ಲಿನಾಥಾ. || ೧೫೨ ||

೧೮೯೪
ಶರಣನಾದಡೆ ಸತಿಯಗೂಡಾಟವೇಕಯ್ಯಾ?
ಇಂದ್ರಿಯಂಗಳು ಹರಿಯಲೇಕೆ? ತಾನೆ ಸತಿ ಲಿಂಗವೆ ಪತಿಯಾದ ಬಳಿಕ.
ಸರ್ವ ಸಂಯೋಗಕ್ಕೆ ಲಿಂಗವೆ ಪತಿ, ತಾನೆ ಸತಿಯಾದಾತ
ಅನ್ಯ ಸತಿಯರಿಗೆರಗ, ಕರಣಂಗಳ ಹರಿಯಲೀಯ, ಕಾರ್ಪಣ್ಯಕ್ಕೊದಗ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಒಡಗೂಡಿದ ಶರಣ. || ೧೫೩ ||

೧೮೯೫
ಶಾಸ್ತ್ರವ ಹೇಳುವವರೊಂದು ಕೋಟಿ.
ವೇದ ವೇದಾಂತವ ಹೇಳುವವರೊಂದು ಕೋಟಿ.
ನ್ಯಾಯಾನ್ಯಾಯವ ಹೇಳುವವರೊಂದು ಕೋಟಿ.
ಕಪಿಲಸಿದ್ಧ ಮಲ್ಲಿಕಾರ್ಜುನನ ಮಾಯಾಕೀಲವ
ಹೇಳುವವರೊಬ್ಬರೂ ಇಲ್ಲ ಎಲ್ಲಾದರೂ. || ೧೫೪ ||

೧೮೯೬
ಶೇಷನ ಫಣೆಯಲ್ಲಾಡುವುದು ಲೇಸು ಕಂಡಯ್ಯಾ.
ಮೃತ್ಯುವಿನ ಬಾಯೊಳಗಿರುವುದು ಬಹು ಲೇಸು ಕಂಡಯ್ಯಾ.
ನಮ್ಮ ಕಪಿಲಸಿದ್ಧ ಮಲ್ಲಿನಾಥ ನಡೆದ ದಾರಿಯಲ್ಲಿ
ನಡೆವುದು ಲೇಸು ಕಂಡಯ್ಯಾ. || ೧೫೫ ||

೧೮೯೭
ಶ್ವಾನನ ಗುಣ ನೋಡದು ನೋಡಾ ಮದಗಜವು.
ಕಾನನದ ಗುಣ ನೋಡದು ನೋಡಾ ಮಹದಗ್ನಿಯು.
ಕಾವಳದ ಗುಣ ನೋಡದು ನೋಡಾ ಮಹತ್ಪ್ರಕಾಶವು.
ಜನನದ ಗುಣ ನೋಡದು ನೋಡಾ ಶಿವಾನುಭಾವಜ್ಞಾನವು.
ಎನ್ನ ಗುಣ ನೋಡದು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನನ ಪೂಜಿಸಿದ ಫಲವು. || ೧೫೬ ||

೧೮೯೮
ಸಂತೆಯೊಳಿದ್ದ ಕಲ್ಲುಗಳೆಲ್ಲಾ ಲಿಂಗವೇನೋ ಅಯ್ಯಾ?
ಪರ್ವತ ವಾರಣಾಸಿ ಬದರಿಕಾಕ್ಷೇತ್ರಂಗಳಲ್ಲಿದ್ದ
ಕಲ್ಲುಗಳೆಲ್ಲಾ ಲಿಂಗವೇನೋ ಅಯ್ಯಾ?
ಅಂತಕಾಂತಕ ಶ್ರೀಗುರುಮೂರ್ತಿ ತನ್ನರುಹಿನ ರೂಪವಿಂತೆಂದು
ತೋರಿದ ನಿಜ ಕಲ್ಲೇ ನಿಜಲಿಂಗ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೫೭ ||

೧೦೯೯
ಸಂಭ್ರಮದ ಶರಧಿಯೊಳಿಂಬಿನಲಿ ಪರಿತಪ್ಪಾಗ
ಗಂಭೀರ ಉಳ್ಳುದನೊಂದನು ಕಾಣೆ.
ಎನ್ನ ಬಿಡು ತನ್ನ ಬಿಡೆಂಬುದು ತನುಗುಣ ಸಂಬಂಧ.
ಎನ್ನ ಬಿಡು ತನ್ನ ಬಿಡೆಂಬುದು ಕಾಯವಿಕಾರ.
ದೆಸೆದೆಸೆವರಿದು ಪಸರಿಸುವ ಮನವನು
ನಿಮ್ಮ ವಶಕ್ಕೆ ತಂದಿರಿಸಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೫೮ ||

೧೧೦೦
ಸಂಸಾರವೆಂಬ ಅರಣ್ಯದೊಳಗೆ ಆಸುರವೊ, ಬಿಡದಿರೆನ್ನ.
ಬೊಪ್ಪ, ಬೆನ್ನಲಿದ್ದು ಸಲುಹುದೆನ್ನ.
ಪಂಚೇಂದ್ರಿಯವೆಂಬ ಐದು ನಾಯ ಬಿಟ್ಟು,
ಕಾಮನೆಂಬ ಬೇಟೆಗಾರನ ಬಾರಿಗೊಪ್ಪಿಸದಿರು,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೫೯ ||

೧೧೦೧
ಸಂಸಾರವೆಂಬ ರಾಹುವಿನ ಅಣಲೊಳಗೆ ಇದ್ದೆನಯ್ಯಾ,
ಆವಾಗ ನುಂಗಿಹಿತೆಂದರಿಯೆ, ಆವಾಗ ಉಗುಳಿಹಿತೆಂದರಿಯೆನಯ್ಯಾ.
ಅದರ ಬಾಯಿಂದೆನ್ನ ತೆಗೆದು ಕಾಯಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೬೦ ||

೧೧೦೨
ಸಂಸಾರವೆಂಬ ವಿಂಧ್ಯದೊಳಗೆ ಕಾಮನೆಂಬ ಕಳ್ಳನ ಕಂಡು
ಬೆಚ್ಚಿ ಬೆದರುತ್ತಿದ್ದೇನಯ್ಯಾ.
ಆ ಕಾಮನ ಕರೆದು ಎನ್ನ ನಿನ್ನವನೆಂದು ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೬೧ ||

೧೧೦೩
ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೆ?
ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೆ?
ಭೂಮಿಯ ಬಿಟ್ಟು ಜಗವ ಮಾಡಬಹುದೆ?
ಜಂಗಮವಿರಹಿತ ಲಿಂಗವಿಲ್ಲ, ಲಿಂಗವಿರಹಿತ ಜಂಗಮವಿಲ್ಲ ಕೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. || ೧೬೨ ||

೧೧೧೦೪
ಸತ್ಯವ ನುಡಿದೆವೆಂದೆಂಬಿರಿ
ಸತ್ಯ ನಿಮಗೆಲ್ಲರಿಗೆ ಸುಲಭವೆ?
ಅದೇನು ಕಾರಣ ಸುಲಭವಲ್ಲ? ಸತ್ತಿಹಿರಾಗಿ.
ಸತ್ಯವ ನುಡಿದವರಿಗೆ ಸಾವುಂಟೆ?
ಸತ್ಯವ ನುಡಿವಲ್ಲಿ ಸಂದಿಲ್ಲದಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಹುಸಿಗೆ ಹುರುಡಿಗನು. || ೧೬೩ ||

೧೧೧೦೫
ಸಾಕುವವರು ತಾವಾದ ಬಳಿಕ
ನೂಕುವವರು ತಾವಾಗಬಾರದಯ್ಯಾ.
ಹೇಳಿದವರು ತಾವಾದ ಬಳಿಕ
ಈ ಪ್ರಪಂಚದಲ್ಲೆನ್ನ ಗೋಳಿಡಿಸಬಾರದಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೧೬೪ ||

೧೧೧೦೬
ಸಿಂಹ ಮದಕರಿಯ ಮೇಲೆ ಹಾರುವುದಲ್ಲದೆ,
ಮದಮಹಿಷಿಯ ಮೇಲೆ ಹಾರುವುದೆ ಅಯ್ಯಾ?
ಪಕ್ಷಿ ಆಕಾಶದಲ್ಲಿ ಹಾರುವುದಲ್ಲದೆ,
ಪಂಜರದಲ್ಲಿ ಹಾರದು ನೋಡಯ್ಯಾ.
ನಮ್ಮ ಕಪಿಲಸಿದ್ಧ ಮಲ್ಲೇಶನನರಿವವರು
ಜ್ಞಾನದ ಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು. || ೧೬೫ ||

೧೧೧೦೭
ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು,
ಸುಖಕ್ಕೆ ಪುಣ್ಯವೆಂದು, ಸುಖಕ್ಕೆ ಪ್ರಾರಬ್ಧವೆಂದು,
ನುಡಿವರಯ್ಯಾ ಸಿದ್ಧಾಂತಿಗಳು.
ಸುಖವೆ ದೈವವೆನಲಾಗಿ ಮಾಡುವ ಕ್ರಿಯೆಯಲ್ಲರಿಯಬಂದಿತ್ತು.
ಸುಖವು ದೈವವಲ್ಲ;
ದೈವವದು ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಕೂಡುವ ಕೂಟವು. || ೧೬೬ ||

೧೧೧೦೮
ಸುಗಂಧ ಎಣ್ಣೆ ನೀರಡಿಕೆಗೆ ಕುಡಿಯಬಹುದೆ?
ಬಂಗಾರದ ಸಲಾಕೆ ಎದೆಯಲ್ಲಿ ಒತ್ತಬಹುದೆ?
ವಜ್ರದ ತುಂಡು ತಿನ್ನಬಹುದೆ?

ಗುರುಭಕ್ತಿಯಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಶರಣನ
ನುಡಿಯ ಕೇಳಿ ಸುಮ್ಮನಿರಬಹುದೆ? ॥ ೧೬೭ ॥

೧೧೦೯
ಸುವರ್ಣಕ್ಕೆ ಅಲಂಕಾರಕ್ಕೆ ಭೇದವುಂಟೆ ಅಯ್ಯಾ?
ಜ್ಯೋತಿಗೆ ಪ್ರಕಾಶಕ್ಕೆ ಭೇದವುಂಟೆ ಅಯ್ಯಾ?
ನೂಲಿಂಗೆ ಪಟಕ್ಕೆ ಭೇದವುಂಟೆ ಅಯ್ಯಾ?
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ,
ಚೆನ್ನಬಸವಣ್ಣಂಗೆ ನನಗೆ ಭೇದವುಂಟೆ ಅಯ್ಯಾ?
ಇಲ್ಲ ನೋಡಾ ಪ್ರಭುವೆ. ॥ ೧೬೮ ॥

೧೧೧೦
ಹಣ್ಣ ಹಿಡಿದ ಬಾಲಕಂಗೆ ಬೆಲ್ಲವ ಕೊಟ್ಟೇನು ಹಣ್ಣ ತಾ ಎಂಬಂತೆ,
ಮಣ್ಣು ಮೂರನು ಹಿಡಿದ ಭಕ್ತಂಗೆ
ಮುಕ್ಕಣ್ಣನ ಪದವಿ ಕೊಟ್ಟೇವೆಂಬ ತೆರನಂತೆ,
ಗುರು - ಲಿಂಗ - ಜಂಗಮರು ಬೇಡುವರಲ್ಲದೆ,
ತಮ್ಮಿಚ್ಛೆಗೆ ಕೈಯಾನುವರೆ ಕಪಿಲಸಿದ್ಧ ಮಲ್ಲಿಕಾರ್ಜುನಾ? ॥ ೧೬೯ ॥

೧೧೧೧
ಹುಟ್ಟಿದ ಕಲ್ಲು ಲಿಂಗವಾಯಿತ್ತು;
ಹುಟ್ಟಿದ ಕಲ್ಲು ದೇವಾಲಯವಾಯಿತ್ತು;
ಹುಟ್ಟಿದ ಪಶು ಹೊಲಕ್ಕೆ ಬಂದಿತ್ತು;
ಹುಟ್ಟಿದ ಮರ ಕಟ್ಟಳೆಯಾದವು.
ಹುಟ್ಟಿ ಕೀರ್ತಿಯ [ಮು]ಟ್ಟದವ
ಇಟ್ಟಿ ಇಟ್ಟಿ ಹುಳಿಯನ್ನದಂತೆ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೭೦ ॥

೧೧೧೨
ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯಾ?
ಮಣ್ಣಳಿದ ಬಳಿಕ ಹೊನ್ನಿನ ಹಂಗೇಕಯ್ಯಾ?
ಮುಕ್ಕಣ್ಣನಾದ ಬಳಿಕ ಮೂರರ ಹಂಗೇಕಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೭೧ ॥

*

ಅಕ್ಕಮಹಾದೇವಿ

೧೧೧೩

ಅಂಗವ ಲಿಂಗಮುಖದಲ್ಲಿ ಅರ್ಪಿಸಿ
ಅಂಗ ಅನಂಗವಾಯಿತ್ತು.
ಮನವ ಅರಿವಿಂಗರ್ಪಿಸಿ
ಮನ ಲಯವಾಯಿತ್ತು.
ಭಾವವ ತೃಪ್ತಿಗರ್ಪಿಸಿ
ಭಾವ ಬಯಲಾಯಿತ್ತು.
ಅಂಗ ಮನ ಭಾವವಳಿದ ಕಾರಣ
ಕಾಯ ಅಕಾಯವಾಯಿತ್ತು.
ಎನ್ನ ಕಾಯದ ಭೋಗವ
ಲಿಂಗವೇ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು.
ಇದು ಕಾರಣ, ಚೆನ್ನಮಲ್ಲಿಕಾರ್ಜುನನೆಂಬ ಗಂಡನ
ಒಳಹೊಕ್ಕು ಬೆರೆಸಿದೆನು. ॥ ೧ ॥

೧೧೧೪

ಅಕ್ಕ ಕೇಳೌ, ನಾನೊಂದು ಕನಸ ಕಂಡೆ.
ಅಕ್ಕಿ ಅಡಕೆ ಓಲೆ ತೆಂಗಿನಕಾಯ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ.
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು. ॥ ೨ ॥

೧೧೧೫

ಅಕ್ಕಟಕ್ಕಟಾ, ಸಂಸಾರದ ಹಗರಣ ಬಂದಾಡಿತಲ್ಲಾ!
ಅಪ್ಪಾ ಬೊಪ್ಪಾ ಎಂಬ ಚೋಹವು,
ಅದು ಮೊಟ್ಟಮೊದಲಲ್ಲಿ ಬಂದಾಡಿತ್ತು.
ತುಪ್ಪವ ತೊಡೆದಂತೆ ಮೀಸೆಯ ಚೋಹವು,
ಅದು ನಟ್ಟ ನಡುವೆ ಬಂದಾಡಿತ್ತು.
ಮುಪ್ಪು ಎಂಬ ಚೋಹವು,
ಅದು ಕಟ್ಟಕಡೆಯಲಿ ಬಂದಾಡಿತ್ತು.

ನಿಮ್ಮ ನೋಟವು ತೀರಲೊಡನೆ
ಜಗದಾಟವು ತೀರಿತ್ತು ಕಾಣಾ, ಚೆನ್ನಮಲ್ಲಿಕಾರ್ಜುನಾ. || ೩ ||

೧೧೧೬
ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ?
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು, ಸುಖವೆಂದಪ್ಪುದಯ್ಯಾ?
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನ ದೇವ, ಚೆನ್ನಮಲ್ಲಿಕಾರ್ಜುನನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ! || ೪ ||

೧೧೧೭
ಅಘಟಿತ ಘಟಿತನ ಒಲವಿನ ಶಿಶು!
ಕಟ್ಟಿದೆನು ಜಗಕ್ಕೆ ಬಿರಿದನು.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಗೆ
ಇಕ್ಕಿದೆನು ಕಾಲಲಿ ತೊಡರನು.
ಗುರುಕೃಪೆಯೆಂಬ ತಿಗುರನಿಕ್ಕಿ,
ಮಹಾಶರಣೆಂಬ ತಿಲಕವನಿಕ್ಕಿ,
ನಿನ್ನ ಕೊಲುವೆ ಗೆಲುವೆ "ಶಿವ ಶರಣೆಂ"ಬ ಅಲಗಕೊಂಡು,
ಬಿಡು ಬಿಡು ಕರ್ಮವೆ ನಿನ್ನ ಕೊಲ್ಲದೆ ಮಾಣೆನು.
ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ:
ಕೆಡದ 'ಶಿವ ಶರಣೆ'ಂಬ ಅಲಗನೆ ಕೊಂಡು
ನಿನ್ನ ಕೊಲುವೆ ಗೆಲುವೆ ನಾನು.
ಬ್ರಹ್ಮಪಾಶವೆಂಬ ಕಳನನೆ ಸವರಿ,
ವಿಷ್ಣುಮಾಯೆಯೆಂಬ ಎಡೆಗೋಲ ನೂಕಿ,
ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯ
ತಲೆದೂಗಲಿ ಕಾದುವೆನು, ನಾನು. || ೫ ||

೧೧೧೮
ಅಪಾರ ಘನಗಂಭೀರದ ಅಂಬುಧಿಯಲ್ಲಿ
ತಾರಾಪಥವಂ ನೋಡಿ ನಡೆಯೆ ಭೈತ್ರದಿಂದ,
ದ್ವೀಪದ್ವೀಪಾಂತರಕ್ಕೆ
ಸಕಲ ಪದಾರ್ಥವನೆಯ್ದಿಸುವುದು.
ಎನ್ನ ದೇವ, ಚೆನ್ನಮಲ್ಲಿಕಾರ್ಜುನಯ್ಯನ ಸಮೀಪ

ತೂರ್ಯಸಂಭಾಷಣೆಯನರಿದಡೆ
ಮುನ್ನಿನಲ್ಲಿಗೆಯ್ದಿಸುವುದು. || ೬ ||

೧೧೧೯
ಅಮೃತವನುಂಬ ಶಿಶುವಿಂಗೆ ವಿಷವನೂಡುವರೆ ಅಯ್ಯಾ?
ನೆಳಲ ತಂಪಿನಲ್ಲಿ ಬೆಳೆದ ಸಸಿಗೆ ಉರಿಯ ಬೇಲಿಯ ಕಟ್ಟುವರೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಕರುಣದ ಕಂದನೊಡನೆ
ಸೂನೆಗಾರರ ಮಾತನಾಡಿಸುವರೆ ಅಯ್ಯಾ? || ೭ ||

೧೧೨೦
ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಡೆ ಮಾಣು;
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ನೋಡಿದಡೆ ನೋಡು, ನೋಡದಡೆ ಮಾಣು;
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಮಚ್ಚಿದಡೆ ಮಚ್ಚು, ಮಚ್ಚದಡೆ ಮಾಣು;
ಆನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ ನೀನು ಒಲಿದಡೆ ಒಲಿ, ಒಲಿಯದಡೆ ಮಾಣು ;
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ಆನು ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆನಯ್ಯಾ. || ೮ ||

೧೧೨೧
ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತಾಯಿತ್ತು.
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ.
ಇಹದ ಸುಖ - ಪರದ ಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ.
ಚೆನ್ನಮಲ್ಲಿಕಾರ್ಜುನಯ್ಯಾ,
ಗುರುಪಾದವ ಕಂಡು ಧನ್ಯಳಾದೆ ನೋಡಾ. || ೯ ||

೧೧೨೨
ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ಕೊಂಬಂತೆ.
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ಕೊಂಬಂತೆ.
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿಕೊಂಬಂತೆ. || ೧೦ ||

೧೧೨೩
ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ದೇವಾಂಗವನುಟ್ಟೆನೆಲೆ ಪುರುಷ ಬಾರಾ,
ಪುರುಷರತ್ನವೆ ಬಾರಾ.
ನಿನ್ನ ಬರವೆನ್ನ ಅಸುವಿನ ಬರವಾದುದೀಗ,
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದಹನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು. || ೧೧ ||

೧೧೨೪
ಅರ್ಥಸನ್ಯಾಸಿಯಾದಡೇನಯ್ಯಾ?
ಆವಂಗದಿಂದ ಬಂದಡೂ ಕೊಳದಿರಬೇಕು.
ರುಚಿಸನ್ಯಾಸಿಯಾದಡೇನಯ್ಯಾ?
ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು.
ಸ್ತ್ರೀಸನ್ಯಾಸಿಯಾದಡೇನಯ್ಯಾ?
ಜಾಗ್ರಸ್ವಪ್ನಸುಷುಪ್ತಿಯಲ್ಲಿ ತಟ್ಟದಿರಬೇಕು.
ದಿಗಂಬರಿಯಾದಡೇನಯ್ಯಾ?
ಮನ ಬತ್ತಲೆಯಿರಬೇಕು.
ಇಂತೀ ಚತುರ್ವಿಧ ಹೊಲಬನರಿಯದೆ ವೃಥಾ ಕೆಟ್ಟರು,
ಕಾಣಾ, ಚೆನ್ನಮಲ್ಲಿಕಾರ್ಜುನಾ. || ೧೨ ||

೧೧೨೫
ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ಕಂಡಡೆ
ಕರೆದು ತೋರಿರೆ. || ೧೩ ||

೧೧೨೬
ಆಡುವುದು ಹಾಡುವುದು ಹೇಳುವುದು ಕೇಳುವುದು
ನಡೆವುದು ನುಡಿವುದು
ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.
ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು. || ೧೪ ||

೧೧೨೭
ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ,
ಕೂಡಿರ್ದ ಸತಿಸುತರು ತಮತಮಗೆ ಹರಿದು ಹೋಗುತ್ತೈದಾರೆ ;

ಬೇಡ ಬೇಡವೆಲೆ ಬಂಜೆಯಾಗಿ ಕೆಡಬೇಡ, ಬಯಲಿಂಗೆ ಮನವೆ.
ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ,
ಹೂ[ಣೆ] ಹೊಕ್ಕು ಬದುಕು ಕಂಡಾ, ಮನವೆ. || ೧೫ ||

೧೧೨೮
ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡೆಯಾ?
ಏನ ಮಾಡಿದಡೂ ಆನಂಜುವಳಲ್ಲ.
ತರಗೆಲೆಯ ಮೆಲಿದು ಆನಿಹೆನು,
ಸರಿಯ ಮೇಲೊರಗಿ ಆನಿಹೆನು.
ಚೆನ್ನಮಲ್ಲಿಕಾರ್ಜುನಯ್ಯಾ, ಕರ ಕೇಡನೊಡ್ಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು. || ೧೬ ||

೧೧೨೯
ಆವ ವಿದ್ಯೆಯ ಕಲಿತಡೇನು?
ಸಾವ ವಿದ್ಯೆ ಬೆನ್ನಬಿಡದು.
ಅಶನವ ತೊರೆದಡೇನು, ವ್ಯಸನವ ಮರೆದಡೇನು?
ಉಸುರ ಹಿಡಿದಡೇನು, ಬಸುರ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನದೇವಯ್ಯಾ,
ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು? || ೧೭ ||

೧೧೩೦
ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು.
ಕಾಣಲಾರೆನಯ್ಯಾ ನಿಮ್ಮುವನು, ಭೇದಿಸಲರಿಯೆ.
ಮಾಯದ ಸಂಸಾರದಲ್ಲಿ ಸಿಲುಕಿದೆನು.
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಹೊದ್ದುವಂತೆ ಮಾಡಾ, ನಿಮ್ಮ ಧರ್ಮ. || ೧೮ ||

೧೧೩೧
ಆಳುತನದ ಮಾತನೇರಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಗಚ್ಚೆಯ.
ತಿಗುರನೇರಿಸಿ ತಿಲಕವನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ,
ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ,
ಕಾಣಾ ಚೆನ್ನಮಲ್ಲಿಕಾರ್ಜುನಾ. || ೧೯ ||

೧೧೩೨
ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿನೀರೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ. ॥ ೨೦ ॥

೧೧೩೩
ಉಡುವೆ ನಾನು ಲಿಂಗಕ್ಕೆಂದು,
ತೊಡುವೆ ನಾನು ಲಿಂಗಕ್ಕೆಂದು,
ಮಾಡುವೆ ನಾನು ಲಿಂಗಕ್ಕೆಂದು,
ನೋಡುವೆ ನಾನು ಲಿಂಗಕ್ಕೆಂದು,
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ.
ಮಾಡಿಯೂ ಮಾಡದಂತಿಪ್ಪೆ ನೋಡಾ.
ಆನೆನ್ನ ಚೆನ್ನಮಲ್ಲಿಕಾರ್ಜುನನೊಳಗಾಗಿ
ಹತ್ತರೊಡನೆ ಹನ್ನೊಂದಾಗಿಪ್ಪುದನೇನ ಹೇಳುವೆನವ್ವಾ! ॥ ೨೧ ॥

೧೧೩೪
ಉದಯದಲೆದ್ದು ನಿಮ್ಮ ನೆನೆವೆನಯ್ಯಾ.
ಕಸದೆಗೆದು ಚಳೆಯ ಕೊಟ್ಟು
ನಿಮ್ಮ ಬರವ ಹಾರುತಿರ್ದೆನಯ್ಯಾ.
ಹಸೆ ಹಂದರವನಿಕ್ಕಿ ನಿಮ್ಮಡಿಗಳಿಗೆಡೆಮಾಡಿಕೊಂಡಿರ್ದೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನಾವಾಗ ಬಂದೆಯಾ ಎನ್ನ ದೇವಾ? ॥ ೨೨ ॥

೧೧೩೫
ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ,
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ! ಶಿವನ ನೆನೆಯಿರೆ!
ಈ ಜನ್ಮ ಬಳಿಕಿಲ್ಲ.
ಚೆನ್ನಮಲ್ಲಿಕಾರ್ಜುನದೇವರ ದೇವನ ನೆನೆದು
ಪಂಚಮಹಾಪಾತಕರೆಲ್ಲರು ಮುಕ್ತಿವಡೆದರಂದು! || ೨೩ ||

೧೧೩೬
ಉರಿಯೊಡ್ಡಿದಡೆ ಸೀತಳವೆನಗೆ;
ಗಿರಿ ಮೇಲೆ ಬಿದ್ದರೆ ಪುಷ್ಪವೆನಗೆ;
ಸಮುದ್ರ ಮೇಲುವಾಯಿದರೆ ಕಾಲುವೆಯೆನಗೆ.
ಚೆನ್ನಮಲ್ಲಿಕಾರ್ಜುನಾ,
ನಿಮ್ಮಾಣೆಯೆಂಬುದು ತಲೆಯೆ[ತ್ತ]ಬಾರದ ಭಾರವೆನಗೆ. || ೨೪ ||

೧೧೩೭
ಉಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ
ಚೆನ್ನಮಲ್ಲಿಕಾರ್ಜುನಾ? || ೨೫ ||

೧೧೩೮
ಉಳ್ಳುದೊಂದು ತನು, ಉಳ್ಳುದೊಂದು ಮನ.
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ?
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ?
ಅಕಟಕಟಾ, ಕೆಟ್ಟೆ, ಕೆಟ್ಟೆ!
ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ!
ಎರಡಕ್ಕೆ ಬಿಟ್ಟ ಕರುವಿನಂತೆ!
ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ
ಚೆನ್ನಮಲ್ಲಿಕಾರ್ಜುನಾ? || ೨೬ ||

೧೧೩೯
ಊಡಿದಡುಣ್ಣದು, ನೀಡಿದಡೊಲಿಯದು,
ಕಾಡದು ಬೇಡದು ಒಲಿಯದು ನೋಡಾ.

ಊಡಿದಡುಂಡು, ನೀಡಿದಡೊಲಿದು, ಬೇಡಿದ ವರವ ಕೊಡುವ
ಜಂಗಮಲಿಂಗದ ಪಾದವ ಹಿಡಿದು ಬದುಕಿದೆ,
ಕಾಣಾ ಚೆನ್ನಮಲ್ಲಿಕಾರ್ಜುನಾ. || ೨೭ ||

೧೧೪೦
ಎನ್ನ ನಾಲಗೆಗೆ ಬಪ್ಪ ರುಚಿ ನಿಮಗರ್ಪಿತ.
ಎನ್ನ ನಾಸಿಕಕ್ಕೆ ಬಪ್ಪ ಪರಿಮಳ ನಿಮಗರ್ಪಿತ.
ಎನ್ನ ಕಾಯಕ್ಕೆ ಬಪ್ಪ ಸುಖ ನಿಮಗರ್ಪಿತ.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮಗರ್ಪಿಸದ ಮುನ್ನ ಮುಟ್ಟಲಮ್ಮೆನಯ್ಯಾ. || ೨೮ ||

೧೧೪೧
ಎನ್ನನಿರಿದಡೆ ಸೈರಿಸುವೆ, ಎನ್ನ ಕೊರೆದಡೆ ಸೈರಿಸುವೆ,
ಎನ್ನ ಕಡಿದು ಹರಹಿದಡೆ ಮನಕ್ಕೆ ತಾರೆನು.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ [ನೋಡಲ್]ೆನ್ನ ಕಣ್ಣ ಮುಂದೆ ಕಂಡು
ಮೊಗೆದುಂಡಮೃತದಂತೆ ಆದೆನಯ್ಯಾ. || ೨೯ ||

೧೧೪೨
ಎನ್ನ ಮನ ಪ್ರಾಣ ಭಾವ ನಿಮ್ಮಲ್ಲಿ ನಿಂದ ಬಳಿಕ
ಕಾಯದ ಸುಖವ ನಾನೇನೆಂದರಿಯೆನು.
ಆರು ಸೋಂಕಿದರೆಂದರಿಯೆನು.
ಚೆನ್ನಮಲ್ಲಿಕಾರ್ಜುನನ ಮನದೊಳಗೆ ಒಚ್ಚತವಾದ ಬಳಿಕ
ಹೊರಗೇನಾಯಿತ್ತೆಂದರಿಯೆನು. || ೩೦ ||

೧೧೪೩
ಎನ್ನ ಮನವ ಮಾರುಗೊಂಡನವ್ವಾ.
ಎನ್ನ ತನುವ ಸೂರೆಗೊಂಡನವ್ವಾ,
ಎನ್ನ ಸುಖವನೊಪ್ಪುಗೊಂಡನವ್ವಾ.
ಎನ್ನ ಇರವನಿಂಬುಗೊಂಡನವ್ವಾ.
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು. || ೩೧ ||

೧೧೪೪
ಎನ್ನ ಮಾಯದ ಮದವ ಮುರಿಯಯ್ಯಾ.
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ.
ಎನ್ನ ಜೀವದ ಜಂಜಡವ ಮಾಣಿಸಯ್ಯಾ.

ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ, ನಿಮ್ಮ ಧರ್ಮ! || ೩೨ ||

೧೧೪೫
ಎಮ್ಮೆಗೊಂದು ಚಿಂತೆ, ಸಮ್ಮಗಾರಗೊಂದುಚಿಂತೆ.
ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ.
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ.
ಒಲ್ಲೆ ಹೋಗು, ಸೆರಗ ಬಿಡು ಮರುಳೆ.
ಎನಗೆ ಚೆನ್ನಮಲ್ಲಿಕಾರ್ಜುನದೇವರು
ಒಲಿವರೊ ಒಲಿಯರೊ ಎಂಬ ಚಿಂತೆ! || ೩೩ ||

೧೧೪೬
ಎರದ ಮುಳ್ಳಿನಂತೆ ಪರಗಂಡರೆನಗವ್ವಾ.
ಸೋಂಕಲಮ್ಮೆ ಸುಳಿಯಲಮ್ಮೆ;
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ.
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ, || ೩೪ ||

೧೧೪೭
ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,
ಕನಸಿನಲ್ಲಿ ಕಳವಳಿಸಿ, ಆನು ಬೆರಗಾದೆ.
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ;
ಆಪತ್ತಿಗೆ ಸಖಿಯರನಾರನೂ ಕಾಣೆ.
ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,
ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ. || ೩೫ ||

೧೧೪೮
ಎಲ್ಲಿ ಹೋದಡೆ ಕಲಿಗೆ ಭಯವಿಲ್ಲ,
ಹಂದೆಗೆ ಸುಖವಿಲ್ಲ ಕಾಣಿರಣ್ಣಾ.
ಈವಂಗವಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ.
ನಿಮ್ಮ ಮುಟ್ಟಿ, ಪರಧನ ಪರಸ್ತ್ರೀಯ ತೊರೆದಾತಂಗೆ
ಮುಂದೆ ಭವವಿಲ್ಲ ಚೆನ್ನಮಲ್ಲಿಕಾರ್ಜುನಾ. || ೩೬ ||

೧೧೪೯
ಎಳೆವ[ರೆಯ]ದಲ್ಲಿ ಮೋಹಮೊಳೆ ಹುಟ್ಟಿತ್ತು,
ಗುರುಹಸ್ತದಲ್ಲಿ ಅಂಕುರವಾಯಿತ್ತು,

ಏಳೆಲೆ ಹೋಯಿತ್ತು ಬಳಗದ ನಡುವೆ.
ಕೇಳೆಲೆಯವ್ವಾ, ನೀನು ಕೇಳು ತಾಯೆ.
ಒಂಬತ್ತೆಲೆ [೯೦]ದಿಂಗೆ ಪರಿಪೂರ್ಣವಾಯಿತ್ತು ನೋಡವ್ವಾ.
ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ,
ಲೋಕದವರ ಸಂಬಂಧವಿಲ್ಲೆಂದು
ಬಿಟ್ಟು ತೊಲಗಿದೆನು ಕಾಣಾ ಎಲೆಯವ್ವಾ. || ೩೭ ||

೧೧೫೦

ಒಡಲ ಕಳವಳಕ್ಕಾಗಿ ಅಡವಿಯ ಪೊಕ್ಕೆನು.
ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು.
ಅವು ನೀಡಿದವು ತಮ್ಮ ಲಿಂಗಕ್ಕೆಂದು.
ಆನು ಬೇಡಿ ಭವಿಯಾದೆನು; ಅವು ನೀಡಿ ಭಕ್ತರಾದವು.
ಇನ್ನು ಬೇಡಿದೆನಾದಡೆ ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮಾಣೆ. || ೩೮ ||

೧೧೫೧

ಕಂಗಳಲ್ಲಿ ಕಾಂಬೆನೆಂದು
ಕತ್ತಲೆಯ ಹೊಕ್ಕಡೆಂತಹುದಯ್ಯಾ?
ಬೆಟ್ಟದ ತುದಿಯ ಮೆಟ್ಟಲೆಂದು
ಹಳ್ಳಕೊಳ್ಳಂಗಳಲ್ಲಿ ಇಳಿದಡೆಂತಹುದಯ್ಯಾ?
ನೀನಿಕ್ಕಿದ ಸಯದಾನವನೊಲ್ಲದೆ
ಬೇರೆ ಬಯಸಿದೊಡೆಂತಪುದಯ್ಯಾ?
ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು
ಕಿರುಕುಳಕ್ಕೆ ಸಂದಡೆಂತಹುದಯ್ಯಾ? || ೩೯ ||

೧೧೫೨

ಕಟಿಹಾದ ಬಿದಿರಿನಲ್ಲಿ ಮರಳಿ ಕಳಲೆ ಮೂಡಬಲ್ಲುದೆ?
ಸುಟ್ಟ ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ?
ತೊಟ್ಟಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪಬಲ್ಲುದೆ?
ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದಡೆ,
ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ
ಚೆನ್ನಮಲ್ಲಿಕಾರ್ಜುನಾ? || ೪೦ ||

೧೧೫೩

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು.
ಕರ್ಣಕ್ಕೆ ಶೃಂಗಾರ ಪುರಾತನರ ಸಂಗೀತಂಗಳ ಕೇಳುವುದು.
ವಚನಕ್ಕೆ ಶೃಂಗಾರ ಸತ್ಯವ ನುಡಿವುದು.

ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ.
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ.
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ? || ೪೧ ||

೧೧೫೪
ಕಲ್ಲ ಹೊಕ್ಕಡೆ ಕಲ್ಲ ಬಿರಿಸಿದೆ,
ಗಿರಿಯ ಹೊಕ್ಕಡೆ ಗಿರಿಯ ಬಿರಿಸಿದೆ.
ಭಾಪು ಸಂಸಾರವೆ, ಬೆನ್ನಿಂದ ಬೆನ್ನುಹತ್ತಿ ಬಂದೆ.
ಚೆನ್ನಮಲ್ಲಿಕಾರ್ಜುನಯ್ಯಾ ಇನ್ನೇವೆನಿನ್ನೇವೆ. || ೪೨ ||

೧೧೫೫
ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು!
ಹೊಗಬಾರದು, ಅಸಾಧ್ಯವಯ್ಯಾ.
ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು.
ಒಳಹೊರಗು ಶುದ್ಧನಾದಂಗಲ್ಲದೆ ಕಲ್ಯಾಣವ ಹೊಗಬಾರದು.
ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು.
ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ,
ಕಲ್ಯಾಣವಂ ಕಂಡು ನಮೋ ನಮೋ ಎನುತಿದ್ದೆನು. || ೪೩ ||

೧೧೫೬
ಕಲ್ಲು ಹೊತ್ತು ಕಡಲೊಳಗೆ ಮುಳುಗಿದಡೆ
ಎಡರಿಂಗೆ ಕಡೆಯುಂಟೆ ಅವ್ವಾ?
ಉಂಡು ಹಸಿವಾಯಿತ್ತೆಂದಡೆ ಭಂಗವೆಂಬೆ.
ಕಂಡ ಕಂಡ ಠಾವಿನಲ್ಲಿ ಮನ ಬೆಂದಡೆ
ಗಂಡ ಚೆನ್ನಮಲ್ಲಿಕಾರ್ಜುನಯ್ಯನೆಂತೊಲಿವನವ್ವಾ? || ೪೪ ||

೧೧೫೭
ಕಳನೇರಿ ಇಳಿವುದು ವೀರಂಗೆ ಮತವಲ್ಲ.
ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ.
ಮನದೊಡೆಯ ಮನವನಿಂಬುಗೊಂಬನಯ್ಯಾ.
ಏರಲಾಗದು ಶ್ರೀಪರ್ವತವ; ಏರಿ ಇಳಿದಡೆ ವ್ರತಕ್ಕೆ ಭಂಗ.
ಕಳನೇರಿ ಕೈದು ಮರೆದಡೆ
ಮಾರಂಕ ಚೆನ್ನಮಲ್ಲಿಕಾರ್ಜುನನಿಮ್ಮೈಗಾಣಲಿರಿವನು. || ೪೫ ||

೧೧೫೮
ಕಳವಳದ ಮನ ತಲೆಕೆಳಗಾದುದವ್ವಾ;
ಸುಳಿದು ಬೀಸುವ ಗಾಳಿ ಉರಿಯಾದುದವ್ವಾ;
ಬೆಳುದಿಂಗಳು ಬಿಸಿಯಾಯಿತ್ತು ಕೆಳದಿ.
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವಾ;
ತಿಳುಹಾ, ಬುದ್ಧಿಯ ಹೇಳಿ ಕರೆತಾರೆಲಗವ್ವಾ;
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ. || ೪೬ ||

೧೧೫೯
ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ.
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವಾ.
ಹಾಸಿದ ಹಾಸಿಗೆಯು ಹಂಗಿಲ್ಲದೆ ಹೋಯಿತ್ತು ಕೇಳವ್ವಾ.
ಚೆನ್ನಮಲ್ಲಿಕಾರ್ಜುನದೇವರ ದೇವನ ಕೂಡುವ ಕೂಟವ
ನಾನೇನೆಂದರಿಯದೆ ಮರೆದೆ ಕಾಣವ್ವಾ. || ೪೭ ||

೧೧೬೦
ಕಾಮವುಳ್ಳವರಿಗೆ ಕಾಯಸಂಗ ಮಚ್ಚು ನೋಡಾ,
ಕಾಮವಿಲ್ಲದವರಿಗೆ ಲಿಂಗಸಂಗ ಮಚ್ಚು ನೋಡಾ.
ಕಾಮವಿಕಾರಿ ಕಾಯದತ್ತ ಮುಂತಾದಡೆ,
ನಾ ನಿಮ್ಮತ್ತ ಮುಂತಾದೆ.
ಚೆನ್ನಮಲ್ಲಿಕಾರ್ಜುನಯ್ಯಾ,
ಕಾಮವಿಕಾರಿಯ ಸಂಗವ ಹೊದ್ದಿದಡೆ ನಿಮ್ಮಾಣೆ. || ೪೮ ||

೧೧೬೧
ಕಾಮಾರಿಯ ಗೆಲಿದೆನು ಬಸವಾ, ನಿಮ್ಮಿಂದ.
ಸೋಮಧರನ ಹಿಡಿತಪ್ಪೆನು ಬಸವಾ, ನಿಮ್ಮ ಕೃಪೆಯಿಂದ.
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು?
ಭಾವಿಸಲು ಗಂಡು ರೂಪು ಬಸವಾ, ನಿಮ್ಮ ದಯದಿಂದ.
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ
ಎರಡುವರಿಯದೆ ಕೂಡಿದೆನು ಬಸವಾ, ನಿಮ್ಮ ಕೃಪೆಯಿಂದ. || ೪೯ ||

೧೧೬೨
ಕಾಯ ಕರ್ರನೆ ಕಂದಿದಡೇನಯ್ಯಾ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ

ಚೆನ್ನಮಲ್ಲಿಕಾರ್ಜುನಯ್ಯಾ,
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ? || ೫೦ ||

೧೧೯೩
ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ.
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ.
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ.
ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ.
ಅರುಹಿಂಗೆ ಮರಹಾಗಿ ಕಾಡಿತ್ತು ಮಾಯೆ.
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ.
ಚೆನ್ನಮಲ್ಲಿಕಾರ್ಜುನಾ,
ನೀನೊಡ್ಡಿದ ಮಾಯೆಯನಾರಿಗೂ ಗೆಲಬಾರದು. || ೫೧ ||

೧೧೯೪
ಕಾಯದ ಕಳವಳವ ಕೆಡಿಸಿ, ಮನದ ಮಾಯೆಯ ಮಾಣಿಸಿ,
ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯಾ.
ಶಿವಶಿವಾ, ಎನ್ನ ಭವಬಂಧನವ ಬಿಡಿಸಿ,
ನಿಮ್ಮತ್ತ ತೋರಿದ ಘನವನುಪಮಿಸಬಾರದಯ್ಯಾ.
ಇರುಳೋಸರಿಸಿದ ಜಕ್ಕವಕ್ಕಿಯಂತೆ
ನಾನಿಂದು ನಿಮ್ಮ ಶ್ರೀಪಾದವನಿಂಬುಗೊಂಡು
ಸುಖದೊಳೋಲಾಡುವೆನಯ್ಯಾ, ಚೆನ್ನಮಲ್ಲಿಕಾರ್ಜುನಾ. || ೫೨ ||

೧೧೯೫
ಕಾಯ ಪ್ರಸಾದವೆನ್ನ, ಜೀವ ಪ್ರಸಾದವೆನ್ನ,
ಪ್ರಾಣ ಪ್ರಸಾದವೆನ್ನ, ಮನಪ್ರಸಾದವೆನ್ನ,
ಧನ ಪ್ರಸಾದವೆನ್ನ, ಭಾವ ಪ್ರಸಾದವೆನ್ನ,
ಸಯದಾನ ಪ್ರಸಾದವೆನ್ನ, ಸಮಭೋಗ ಪ್ರಸಾದವೆನ್ನ,
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಪ್ರಸಾದವ ಹಾಸಿ ಹೊದಿಸಿಕೊಂಡಿಪ್ಪೆನು. || ೫೩ ||

೧೧೯೬
ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ.
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ.
ಸುಖವಿಲ್ಲದೆ ಧಾವತಿಗೊಂಡೆನವ್ವಾ.
ಚೆನ್ನಮಲ್ಲಿಕಾರ್ಜುನದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ. || ೫೪ ||

೧೧೬೭
ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು.
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು.
ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು.
ಚೆನ್ನಮಲ್ಲಿಕಾರ್ಜುನಯ್ಯಾ,
ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು. || ೫೫ ||

೧೧೬೮
ಕುಲಗಿರಿಯ ಶಿಖರದ ಮೇಲೆ ಬಾಳೆಬೆಳೆವುದಯ್ಯಾ ಎಂದಡೆ
ಬಾಳೆ ಬೆಳೆವುದಯ್ಯಾ ಎನಬೇಕು.
ಓರೆಗಲ್ಲ ನುಗ್ಗುಗುಟ್ಟಿ ಮೆಲಬಹುದಯ್ಯಾ ಎಂದಡೆ
ಅದು ಅತ್ಯಂತ ಮೃದು ಮೆಲಬಹುದಯ್ಯ ಎನಬೇಕು.
ಸಿಕ್ಕಿದ ಠಾವಿನಲ್ಲಿ ಉಚಿತವ ನುಡಿವುದೆ ಕಾರಣ,
ಚೆನ್ನಮಲ್ಲಿಕಾರ್ಜುನ[ಯ್ಯಾ] ಮರ್ತ್ಯಕ್ಕೆ ಬಂದುದಕ್ಕಿದೆ ಗೆಲವು. || ೫೬ ||

೧೧೬೯
ಕೂಡಿ ಕೂಡುವ ಸುಖದಿಂದ
ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು. ಕೆಳದಿ!
ಒಚ್ಚೊತ್ತಗಲಿದಡೆ ಕಾಣದಿರಲಾರೆ.
ಎನ್ನ ದೇವ ಚೆನ್ನಮಲ್ಲಿಕಾರ್ಜುನನಗಲಿಯಗಲದ
ಸುಖವೆಂದಪ್ಪುದೊ? || ೫೭ ||

೧೧೭೦
ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ,
ಜಲವರತ ತಟಾಕದಂತೆ, ಬೆಂದ ನುಲಿಯಂತೆ-
ಮತ್ತೆ ಹಿಂದಣಂಗವುಂಟೆ ಅಣ್ಣಾ,
ಚೆನ್ನಮಲ್ಲಿಕಾರ್ಜುನನಂಗವೆ ಆಶ್ರಯವಾದವಳಿಗೆ? || ೫೮ ||

೧೧೭೧
ಕೆಚ್ಚಿಲ್ಲದ ಮರನ ಕ್ರಿಮಿ ಇಂಬುಗೊಂಬಂತೆ,
ಒಡೆಯನಿಲ್ಲದ ಮನೆಯ ಶುನಕ ಸಂಚುಗೊಂಬಂತೆ,
ನೃಪತಿಯಿಲ್ಲದ ದೇಶವ ಮನ್ನೆಯರಿಂಬುಗೊಂಬಂತೆ,
ನಿಮ್ಮ ನೆನಹಿಲ್ಲದ ಶರೀರ[ವು]
ಭೂತ ಪ್ರೇತ ಪಿಶಾಚಿಗಳಿಂಬುಗೊಂಬಂತೆ
ಚೆನ್ನಮಲ್ಲಿಕಾರ್ಜುನಾ. || ೫೯ ||

೧೧೭೨
ಕೆಡದಿರೇ ಕೆಡದಿರೇ, ಮೃಡನಡಿಯ ಹಿಡಿಯಿರೇ.
ದೃಢವಲ್ಲ ನೋಡಿರೆ ಸಂಸಾರಸುಖವು.
ಚೆನ್ನಮಲ್ಲಿಕಾರ್ಜುನ ಬರೆದ ಅಕ್ಷರವು ತೊಡೆಯದ ಮುನ್ನ
ಬೇಗ ಬೇಗ ಶಿವಶರಣೆನ್ನಿ. || ೬೦ ||

೧೧೭೩
ಕೊಳಲ ದನಿಗೆ ಸರ್ಪ ತಲೆದೂಗಿದಡೇನು,
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು, ಕೇಳಿದಡೇನು,
ತನ್ನಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ. || ೬೧ ||

೧೧೭೪
ಕೋಲ ತುದಿಯ ಕೋಡಗದಂತೆ,
ನೇಣ ತುದಿಯ ಬೊಂಬೆಯಂತೆ,
ಆಡಿದೆನಯ್ಯಾ ನೀನಾಡಿಸಿದಂತೆ,
ಆನು ನುಡಿದೆನಯ್ಯಾ ನೀ ನುಡಿಸಿದಂತೆ,
ಆನು ಇದ್ದೆನಯ್ಯಾ ನೀನು ಇರಿಸಿದಂತೆ,
ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ. || ೬೨ ||

೧೧೭೫
ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ.
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ.
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ.
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯಾ.
ಎಲೆ ಪರಶಿವಮೂರ್ತಿ ಹರನೆ, ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿ ಭವಂಗಳು ಕೆಟ್ಟ ಕೇಡ ನೋಡಾ, ಚೆನ್ನಮಲ್ಲಿಕಾರ್ಜುನಾ || ೬೩ ||

೧೧೭೬
ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?

ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ? || ೬೪ ||

೧೧೬೭
ಗಿರಿಯಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು?
ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ?
ಪೇಳಿರೆ, ಕೆಳದಿಯರಿರಾ! || ೬೫ ||

೧೧೬೮
ಗುರುಪಾದತೀರ್ಥವೆ ಮಂಗಳ ಮಜ್ಜನವೆನಗೆ.
ವಿಭೂತಿಯೆ ಒಳಗುಂದದರಿಷಿಣವೆನಗೆ.
ದಿಗಂಬರವೆ ದಿವ್ಯಾಂಬರವೆನಗೆ.
ಶಿವಭಕ್ತರ ಪಾದರೇಣುವೆ ಅನುಲೇಪನವೆನಗೆ.
ರುದ್ರಾಕ್ಷಿಯೆ ಮೈದೊಡಿಗೆಯೆನಗೆ.
ಶರಣರ ಪಾದರಕ್ಷೆಯೆ ಶಿರದಲ್ಲಿ ತೊಂಡಿಲು ಬಾಸಿಗವೆನಗೆ.
ಚೆನ್ನಮಲ್ಲಿಕಾರ್ಜುನನ ಮದವಳಿಗೆಗೆ
ಬೇರೆ ಶೃಂಗಾರವೇಕೆ ಹೇಳಿರೆ ಅವ್ವಗಳಿರಾ! || ೬೬ ||

೧೧೬೯
ಗುರುವೆಂಬ ತೆತ್ತಿಗನು
ಲಿಂಗವೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು,
ಕಾದಿದೆ ಗೆಲಿದೆ ಕಾಮನೆಂಬವನ.
ಕ್ರೋಧಾದಿಗಳು ಕೆಟ್ಟು, ವಿಷಯಂಗಳೋಡಿದವು.
ಅಲಗು ಎನ್ನೊಳು ನಟ್ಟು ಆನಳಿದ ಕಾರಣ,
ಚೆನ್ನಮಲ್ಲಿಕಾರ್ಜುನಲಿಂಗವ ಕರದಲ್ಲಿ ಹಿಡಿದೆ. || ೬೭ ||

೧೧೭೦
ಗುರುವೆ ತೆತ್ತಿಗನಾದ,
ಲಿಂಗವೆ ಮದುವಣಿಗನಾದ,

ನಾನೆ ಮದುವಳಿಗೆಯಾದೆನು.
ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು.
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ.
ಇದು ಕಾರಣ, ಚೆನ್ನಮಲ್ಲಿಕಾರ್ಜುನನನೆ ಗಂಡನೆನಗೆ.
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ. || ೬೮ ||

೧೧೮೧
ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು.
ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು.
ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವನು.
ಇವರ ಮಾತೆಲ್ಲವು ಸಹಜವೆ!
ನರಕಸಂಸಾರದಲ್ಲಿ ಹೊದಕುಳಿಗೊಳುತ್ತ
ಶಿವನಿಲ್ಲ ಮುಕ್ತಿಯಿಲ್ಲ, ಹುಸಿಯೆಂದಡೆ
ನರಕದಲ್ಲಿಕ್ಕದೆ ಬಿಡುವನೆ ಚೆನ್ನಮಲ್ಲಿಕಾರ್ಜುನಯ್ಯ? || ೬೯ ||

೧೧೮೨
ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದ ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕ ಗೂಳಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ,
ನೀ ಕೊಂದಡೆಯೂ ಶರಣೆಂಬುದ ಮಾಣೆ. || ೭೦ ||

೧೧೮೩
ಚಕ್ರ ಬೆಸಗೆಯ್ವಡೆ ಅಲಗಿನ ಹಂಗೇಕೆ?
ಮಾಣಿಕ್ಯದ ಬೆಳಗುಳ್ಳಡೆ ದೀಪದ ಹಂಗೇಕೆ?
ಪರುಷ ಕೈಯ್ಯಲುಳ್ಳಡೆ ಸಿರಿಯ ಹಂಗೇಕೆ?
ಕಾಮಧೇನು ಕರೆವಡೆ ಕರುವಿನ ಹಂಗೇಕೆ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಲಿಂಗವು
ಕರಸ್ಥಳದೊಳಗುಳ್ಳಡೆ ಇನ್ನಾವ ಹಂಗೇಕೆ? || ೭೧ ||

೧೧೮೪

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಸರವೆತ್ತಿ ಪಾಡುವ ಕೋಗಿಲೆಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಎರಗಿ ಬಂದಾಡುವ ತುಂಬಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಕೊಳನ ತಡಿಯೊಳಾಡುವ ಹಂಸೆಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ,
ನೀವು ಕಾಣಿರೆ, ನೀವು ಕಾಣಿರೆ.
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ. || ೭೨ ||

೧೧೮೫

ತನು ಕರಗದವರಲ್ಲಿ
ಮಜ್ಜನವನೊಲ್ಲೆಯಯ್ಯಾ ನೀನು.
ಮನ ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ
ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ
ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ
ಧೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ
ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ
ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯಕಮಲ ಅರಳದವರಲ್ಲಿ
ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳು ಚೆನ್ನಮಲ್ಲಿಕಾರ್ಜುನಯ್ಯಾ? || ೭೩ ||

೧೧೮೬
ತನು ನಿಮ್ಮ ರೂಪಾದ ಬಳಿಕ
ಆರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ
ಆರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ
ಆರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ
ಆರನರಿವೆ?
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮಿಂದ ನೀವೇಯಾದಿರಾಗಿ
ನಿಮ್ಮನೆ ಅರಿವುತ್ತಿರ್ದೆನು. || ೭೪ ||

೧೧೮೭
ತನುವ ಬೇಡಿದಡೆ ತನುವ ಕೊಟ್ಟು ಶುದ್ಧವಪ್ಪೆ.
ಮನವ ಬೇಡಿದಡೆ ಮನವ ಕೊಟ್ಟು ಶುದ್ಧವಪ್ಪೆ.
ಧನವ ಬೇಡಿದಡೆ ಧನವ ಕೊಟ್ಟು ಶುದ್ಧವಪ್ಪೆ.
ನೀನಾವುದ ಬೇಡಿದಡೂ ಓಸರಿಸಿದಡೆ, ಕೈವಾರಿಸಿದಡೆ
ಹಿಡಿದು ಮೂಗ ಕೊಯಿ.
ಎನ್ನ ಕಲಿತನದ ಬಿನ್ನಪವ ಕಡೆತನಕ ನಡೆಸದಿರ್ದಡೆ
ತಲೆದಂಡ ಕಾಣಾ, ಚೆನ್ನಮಲ್ಲಿಕಾರ್ಜುನಾ. || ೭೫ ||

೧೧೮೮
ತನುವೆಂಬ ಸಾಗರ ತುಂಬಲು,
ಮನವೆಂಬುದು ಹರುಗೋಲಾಯಿತ್ತು ಅಂಬಿಗಾ.
ಎನ್ನ ಗಮ್ಮನೆ ತೆಗೆಯೋ ಅಂಬಿಗಾ.
ತೊರೆ[ಯ] ದಾಂಟಿಹೆನೆಂಬ ಭರವಸೆ ಕರ ಘನ,
ಗಮ್ಮನೆ ತೆಗೆಯೋ ಅಂಬಿಗಾ.
ಸಿರಿಶೈಲ ಚೆನ್ನಮಲ್ಲಿಕಾರ್ಜುನಾ
ನಿನ್ನ ಕಾಣಲು ಬಂದಿಹೆ ಅಂಬಿಗಾ. || ೭೬ ||

೧೧೮೯
ತನುಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡೆನ್ನ.
ಮನಶುದ್ಧವಾಯಿತ್ತು ಅಸಂಖ್ಯಾತರ ನೆನೆದೆನ್ನ.
ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ ಎನ್ನ.
ಕಂಗಳು ಶುದ್ಧವಾಯಿತ್ತು ಸಕಲಗಣಂಗಳ ನೋಡಿ ಎನ್ನ.

ಭಾವನೆ ಎನಗಿದು ಜೀವನ ಲಿಂಗತಂದೆ.
ನೆಟ್ಟನೆ ನಿಮ್ಮ ಮನಮುಟ್ಟಿ ಪೂಜಿಸಿ
ಭವಗೆಟ್ಟೆ ನಾನು, ಚೆನ್ನಮಲ್ಲಿಕಾರ್ಜುನಾ. || ೭೭ ||

೧೧೯೦
ತನ್ನವಸರಕ್ಕಾಗಿ ಹಗಲುಗನ್ನವನಿಕ್ಕಿದಡೆ,
ಕನ್ನ ಸವೆಯಲಿಲ್ಲ, ಕಳವು ದೊರೆಯಲಿಲ್ಲ!
ಬೊಬ್ಬುಲಿಯನೇರಿದ ಮರ್ಕಟನಂತೆ
ಹಣ್ಣ ಮೆಲ್ಲಲಿಲ್ಲ, ಕುಳ್ಳಿರೆ ಠಾವಿಲ್ಲ.
ನಾನು ಸರ್ವಸಂಗಪರಿತ್ಯಾಗ ಮಾಡಿದವಳಲ್ಲ,
ನಿಮ್ಮ ಕೂಡಿ ಕುಲವಳಿದವಳಲ್ಲ, ಚೆನ್ನಮಲ್ಲಿಕಾರ್ಜುನಾ. || ೭೮ ||

೧೧೯೧
ತನ್ನ ವಿನೋದಕ್ಕೆ ತಾನೆ ಸೃಜಿಸಿದ ಸಕಲ ಜಗತ್ತ.
ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚನು.
ತನ್ನ ವಿನೋದಕ್ಕೆ ತಾನೆ ತಿರುಗಿಸಿದನನಂತ ಭವದುಃಖಂಗಳಲ್ಲಿ.
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದ ಮತ್ತೆ
ತಾನೆ ಪರಿವನದರ ಮಾಯಾಪಾಶವನು. || ೭೯ ||

೧೧೯೨
ತಾನು ದಂಡು ಮಂಡಲಕ್ಕೆ ಹೋದಹೆನೆಂದಡೆ
ನಾನು ಸುಮ್ಮನಿಹೆನಲ್ಲದೆ,
ತಾನೆನ್ನ ಕೈಯೊಳಗಿದ್ದು, ತಾನೆನ್ನ ಮನದೊಳಗಿದ್ದು
ಎನ್ನ ಕೂಡದಿದ್ದಡೆ ನಾನೆಂತು ಸೈರಿಸುವೆನವ್ವಾ?
ನೆನಹೆಂಬ ಕುಂಟಣಿ ಚೆನ್ನಮಲ್ಲಿಕಾರ್ಜುನನ
ನೆರಹದಿದ್ದಡೆ ನಾನೇವೆ ಸಖಿಯೆ? || ೮೦ ||

೧೧೯೩
ತುಂಬಿದುದು ತುಳುಕದು ನೋಡಾ.
ನಂಬಿದುದು ಸಂದೇಹಿಸದು ನೋಡಾ.
ಒಲಿದುದು ಓಸರಿಸದು ನೋಡಾ.
ನೆರೆಯರಿದುದು ಮರೆಯದು ನೋಡಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನೊಲಿದ ಶರಣಂಗೆ ನಿಸ್ಸೀಮಸುಖವಯ್ಯಾ. || ೮೧ ||

೧೧೯೪
ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ,
ಮನ ಬಂದುದನು ಬಯಸಿ ಬೇವುತ್ತಿದ್ದೇನಯ್ಯಾ.
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ. || ೮೨ ||

೧೧೯೫
ನಚ್ಚುಗೆ ಮನ ನಿಮ್ಮಲ್ಲಿ, ಮಚ್ಚುಗೆ ಮನ ನಿಮ್ಮಲ್ಲಿ,
ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ,
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ,
ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ.
ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಯ್ಯಾ. || ೮೩ ||

೧೧೯೬
ನಡೆಯದ ನುಡಿಗಡಣ, ಮಾಡದ ಕಲಿತನ,
ಚಿತ್ರದ ಸತಿಯ ಶೃಂಗಾರವದೇತಕ್ಕೆ ಪ್ರಯೋಜನ?
ಎಲೆಯಿಲ್ಲದ ಮರನು, ಜಲವಿಲ್ಲದ ನದಿಯು,
ಗುಣಿಯಲ್ಲದ ಅವಗುಣಿಯ ಸಂಗವದೇತಕ್ಕೆ ಪ್ರಯೋಜನ?
ದಯವಿಲ್ಲದ ಧರ್ಮ, ಉಭಯವಿಲ್ಲದ ಭಕ್ತಿಯು,
ನಯವಿಲ್ಲದ ಶಬ್ದವದೇತಕ್ಕೆ ಪ್ರಯೋಜನ
ಎನ್ನ ದೇವ ಚೆನ್ನಮಲ್ಲಿಕಾರ್ಜುನ? || ೮೪ ||

೧೧೯೭
ನಾನು ನಿನಗೊಲಿದೆ, ನೀನು ಎನಗೊಲಿದೆ;
ನೀನೆನ್ನನಗಲದಿಪ್ಪೆ, ನಾ ನಿನ್ನಗಲದಿಪ್ಪೆನಯ್ಯಾ.
ನಿನಗೆ ಎನಗೆ ಬೇರೊಂದು ಠಾವುಂಟೆ?
ನೀನು ಕರುಣಿಯೆಂಬುದ ಬಲ್ಲೆನು;
ನೀನಿರಿಸಿದ ಗತಿಯೊಳಗಿಪ್ಪವಳಾನು.
ನೀನೆ ಬಲ್ಲೆ, ಚೆನ್ನಮಲ್ಲಿಕಾರ್ಜುನಾ. || ೮೫ ||

೧೧೯೮
ನಿಮ್ಮ ನಿಲವಿಂಗೆ ನೀವು ನಾಚಬೇಡವೆ?
ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬ ನಡೆನುಡಿ ಏಕೆ?
ಅಲ್ಲ ಎನಿಸಿಕೊಂಬುದರಿಂದ

ಆ ಕ್ಷಣವೆ ಸಾವುದು ಲೇಸು ಕಾಣಾ
ಚೆನ್ನಮಲ್ಲಿಕಾರ್ಜುನಾ. ॥ ೮೬ ॥

೧೧೯೯
ನೆಲದ ಮರೆಯ ನಿಧಾನದಂತೆ,
ಫಲದ ಮರೆಯ ರುಚಿಯಂತೆ,
ಶಿಲೆಯ ಮರೆಯ ಹೇಮದಂತೆ,
ತಿಲದ ಮರೆಯ ತೈಲದಂತೆ,
ಮರದ ಮರೆಯ ತೇಜದಂತೆ,
ಭಾವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು. ॥ ೮೭ ॥

೧೨೦೦
ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ ಕಂಬ,
ಪವಳದ ಚಪ್ಪರವಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ,
ಮದುವೆಯ ಮಾಡಿದರು, ಎಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ,
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು. ॥ ೮೮ ॥

೧೨೦೧
ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ
ಮರುಳಾಗಿ ತೋರುವುದು.
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ. ॥ ೮೯ ॥

೧೨೦೨
ಪೃಥ್ವಿ ಪೃಥ್ವಿಯ ಕೂಡದ ಮುನ್ನ,
ಅಪ್ಪು ಅಪ್ಪುವ ಕೂಡದ ಮುನ್ನ,
ತೇಜ ತೇಜವ ಕೂಡದ ಮುನ್ನ,
ವಾಯು ವಾಯುವ ಕೂಡದ ಮುನ್ನ,
ಆಕಾಶ ಆಕಾಶವ ಕೂಡದ ಮುನ್ನ-

ಪಂಚೇಂದ್ರಿಯಂಗಳೆಲ್ಲ ಹಂಚುಹರಿಯಾಗದ ಮುನ್ನ
ಚೆನ್ನಮಲ್ಲಿಕಾರ್ಜುನಂಗೆ ಶರಣೆನ್ನಿರೆ! ॥ ೯೦ ॥

೧೨೦೩
ಬಂಜೆ ಬೇನೆಯನರಿವಳೆ?
ಬಲದಾಯಿ ಮುದ್ದು ಬಲ್ಲಳೆ?
ನೊಂದವರ ನೋವ ನೋಯದವರೆತ್ತ ಬಲ್ಲರೊ?
ಚೆನ್ನಮಲ್ಲಿಕಾರ್ಜುನಯ್ಯನಿರಿದಲಗು
ಒಡಲಲ್ಲಿ ಮುರಿದು ಹೊರಳುವೆನ್ನಳಲನು
ನೀವೆತ್ತ ಬಲ್ಲಿರೆ, ಎಲೆ ತಾಯಿಗಳಿರಾ? ॥ ೯೧ ॥

೧೨೦೪
ಬಂದಹನೆಂದು ಬಟ್ಟೆಯ ನೋಡಿ,
ಬಾರದಿದ್ದಡೆ ಕರಗಿ ಕೊರಗಿದೆನವ್ವಾ.
ತಡವಾದಡೆ ಬಡವಾದೆ ತಾಯೆ.
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತಕ್ಕೆ ಸಡಲಿದ ಜಕ್ಕವಕ್ಕಿಯಂತಾದೆನವ್ವಾ. ॥ ೯೨ ॥

೧೨೦೫
ಬಯಲು ಲಿಂಗವೆಂಬೆನೆ? ಬಗಿದು ನಡೆವಲ್ಲಿ ಹೋಯಿತ್ತು.
ಬೆಟ್ಟ ಲಿಂಗವೆಂಬೆನೆ? ಮೆಟ್ಟಿ ನಿಂದಲ್ಲಿ ಹೋಯಿತ್ತು.
ತರುಮರಾದಿಗಳು ಲಿಂಗವೆಂಬೆನೆ ? ತರಿದಲ್ಲಿ ಹೋಯಿತ್ತು.
ಲಿಂಗ ಜಂಗಮದ ಪಾದವೇ ಗತಿಯೆಂದು ನಂಬಿದ
ಸಂಗನಬಸವಣ್ಣನ ಮಾತ ಕೇಳದೆ ಕೆಟ್ಟೆನಯ್ಯಾ,
ಚೆನ್ನಮಲ್ಲಿಕಾರ್ಜುನಾ. ॥ ೯೩ ॥

೧೨೦೬
ಬಿಟ್ಟೆನೆಂದಡೆ ಬಿಡದೀ ಮಾಯೆ,
ಬಿಡದಿದ್ದ[ದು] ಬೆಂಬತ್ತಿತ್ತು ಮಾಯೆ.
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ,
ಸವಣಂಗೆ ಸವಣಿಯಾಯಿತ್ತು ಮಾಯೆ,
ಯತಿಗೆ ಪರಾಕಿಯಾಯಿತ್ತು ಮಾಯೆ.
ನಿನ್ನ ಮಾಯೆಗೆ ನಾನಂಜುವಳಲ್ಲ,
ಚೆನ್ನಮಲ್ಲಿಕಾರ್ಜುನದೇವಾ, ನಿಮ್ಮಾಣೆ. ॥ ೯೪ ॥

೧೨೦೭

ಬೆಂದ ಸಂಸಾರ ಬೆಂಬಿಡದೆ ಕಾಡಿಹುದಯ್ಯ,
ಏವೆನೇವೆನಯ್ಯಾ?
ಅಂದಂದಿನ ದಂದುಗಕ್ಕೆ ಏವೆನೇವೆನಯ್ಯಾ?
ಬೆಂದ ಒಡಲ ಹೊರೆವುದಕ್ಕೆ ನಾನಾರೆ.
ಚೆನ್ನಮಲ್ಲಿಕಾರ್ಜುನಯ್ಯಾ, ಕೊಲ್ಲು ಕಾಯಿ, ನಿಮ್ಮ ಧರ್ಮ. ॥ ೯೫ ॥

೧೨೦೮

ಬೆಟ್ಟಕ್ಕೆ ಸಾರವಿಲ್ಲೆಂಬರು;
ತರುಗಳು ಹುಟ್ಟುವ ಪರಿ ಇನ್ನೆಂತಯ್ಯಾ?
ಇದ್ದಲಿಗೆ ರಸವಿಲ್ಲೆಂಬರು;
ಕಬ್ಬುನ ಕರಗುವ ಪರಿ ಇನ್ನೆಂತಯ್ಯಾ?
ಎನಗೆ ಕಾಯವಿಲ್ಲೆಂಬರು;
ಚೆನ್ನಮಲ್ಲಿಕಾರ್ಜುನನೊಲಿವ ಪರಿ ಇನ್ನೆಂತಯ್ಯಾ? ॥ ೯೬ ॥

೧೨೦೯

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು. ॥ ೯೭ ॥

೧೨೧೦

ಭಾನುವಿನಂತಿಪ್ಪುದು ಜ್ಞಾನ,
ಭಾನುಕಿರಣದಂತಿಪ್ಪುದು ಭಕ್ತಿ.
ಭಾನುವನುಳಿದು ಕಿರಣಂಗಳಿಲ್ಲ,
ಕಿರಣಂಗಳನುಳಿದು ಭಾನುವಿಲ್ಲ.
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು
ಚೆನ್ನಮಲ್ಲಿಕಾರ್ಜುನಾ? ॥ ೯೮ ॥

೧೨೧೧
ಮದನಾರಿಯೆಂಬ ಮಳೆ ಹೊಯ್ಯಲು,
ಶಿವಯೋಗವೆಂಬ ತೊರೆ ಬರಲು,
ಕಾಮನೆ ಅಂಬಿಗನಾದ ನೋಡಾ !
ಕರ್ಮದ ಕಡಲೆನ್ನನೆಳೆದೊಯ್ವಾಗ
ಕೈಯ ನೀಡು ತಂದೆ, ಚೆನ್ನಮಲ್ಲಿಕಾರ್ಜುನಾ. ॥ ೯೯ ॥

೧೨೧೨
ಮನೆ ಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ!
ಬೇಡಿದಡೆ ಇಕ್ಕದಂತೆ ಮಾಡಯ್ಯ!
ಇಕ್ಕಿದಡೆ ನೆಲಕ್ಕೆ ಬೀಳುವಂತೆ ಮಾಡಯ್ಯ!
ನೆಲಕ್ಕೆ ಬಿದ್ದಡೆ ನಾನೆತ್ತಿಕೊಂಬುದಕ್ಕೆ ಮುನ್ನವೆ
ಸುನಿಯೆತ್ತಿಕೊಂಬಂತೆ ಮಾಡಾ ಚೆನ್ನಮಲ್ಲಿಕಾರ್ಜುನಯ್ಯ. ॥ ೧೦೦ ॥

೧೨೧೩
ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು.
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು.
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ. ॥ ೧೦೧ ॥

೧೨೧೪
ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ? ॥ ೧೦೨ ॥

೧೨೧೫
ಮರ್ತ್ಯಲೋಕದ ಭಕ್ತರ ಮನವ
ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ.

ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ.
ಭಾವವೆಲ್ಲ ಮಹಾಘನದ ಬೆಳಗು,
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್‌ಜ್ಞಾನಿ ಚೆನ್ನಬಸವಣ್ಣನ
ಶ್ರೀಪಾದಕ್ಕೆ ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ. || ೧೦೩ ||

೧೨೧೬
ಮುಂಗೈಯಲ್ಲಿ ವೀರಗಂಕಣವಿಕ್ಕಿ,
ಮುಂಗಾಲಲ್ಲಿ ತೊಡರು ಬಾವಲಿಯ ಕಟ್ಟಿದೆ.
ಗಂಡುಡಿಗೆಯನುಟ್ಟೆನೆಂಬ ಮಾತಿನ ಬಿರಿದ [ನೆಗಹಿ]ದೆನು.
ಚೆನ್ನಮಲ್ಲಿಕಾರ್ಜುನಾ,
ನಿಮ್ಮಾಣೆಗೆ ಊಣೆಯವ ತಂದೆನಾದಡೆ,
ನಿಮ್ಮ ತೊತ್ತಿನ ಮಗಳಲ್ಲಯ್ಯಾ. || ೧೦೪ ||

೧೨೧೭
ಮುತ್ತು ಒಡೆದಡೆ ಬೆಸೆಯಬಹುದೆ ?
ಮನ ಮುರಿದಡೆ ಸಂತಕ್ಕೆ ತರಬಹುದೆ?
ಅಪ್ಪುಗೆ ಸಡಿಲಿದ ಸುಖವ ಮರಳಿ ಅರಸಿದರುಂಟೆ?
ಸಾಧಕನೊಯಿದ ನಿಧಾನದ ಕುಳಿಯಂತೆ ಅಲ್ಲಿ ಏನುಂಟು?
ಮಚ್ಚು ಪಲ್ಲಟವಾಗಿ, ನೋಟದ ಸು[ಖವು] ಹಿಂಗಿದರೊಳವೆ?
ನೋಡದಿರು, ಕಾಡದಿರು, ಮನ ಬಳ[ಲಿ]ಸದಿರು.
ಭಾಷೆಗೆ ತಪ್ಪಿದರೆ ಮುಳ್ಳುಮೊನೆಯ ಕಿಚ್ಚಿನಂತೆ.
ಲೇಸು ಬೀಸರವೋಗದ ಮುನ್ನ
ಚೆನ್ನಮಲ್ಲಿಕಾರ್ಜುನನ ಕೂಡಿ ಧಾತುಗೆಟ್ಟ ಬಳಿಕ ಒಳವೆ? || ೧೦೫ ||

೧೨೧೮
ಮುತ್ತು ನೀರಲಾಯಿತ್ತು,
ವಾರಿಕಲ್ಲು ನೀರಲಾಯಿತ್ತು,
ಉಪ್ಪು ನೀರಲಾಯಿತ್ತು.
ಉಪ್ಪು ಕರಗಿತ್ತು,
ವಾರಿಕಲ್ಲು ಕರಗಿತ್ತು,
ಮುತ್ತು ಕರಗಿದುದನಾರೂ ಕಂಡವರಿಲ್ಲ.
ಈ ಸಂಸಾರಿ ಮಾನವರು [ಅಂ]ಗವ ಮುಟ್ಟಿ

ಭವಭಾರಿಗಳಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ, ಚೆನ್ನಮಲ್ಲಿಕಾರ್ಜುನಾ. || ೧೦೬ ||

೧೨೧೯
ರತ್ನದ ಸಂಕೋಲೆಯಾದಡೆ ತೊಡರಲ್ಲವೆ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ
ಜನನಮರಣ ಬಿಡುವುದೆ ಚೆನ್ನಮಲ್ಲಿಕಾರ್ಜುನಾ? || ೧೦೭ ||

೧೨೨೦
ಲೇಸು ಹಾಸು, ನೋಟವಾಭರಣ, ಆಲಿಂಗನ ವಸ್ತ್ರ,
ಚುಂಬನವಾರೋಗಣೆ, ಲಲ್ಲೆವಾತು ತಾಂಬೂಲ,
ಲವಲವಿಕೆಯ ಅನುಲೇಪನವೆನಗೆ.
ಚೆನ್ನಮಲ್ಲಿಕಾರ್ಜುನನ ಕೂಟ ಪರಮಸುಖವವ್ವಾ. || ೧೦೮ ||

೧೨೨೧
ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳುದೊಂದು ಮನ.
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ? || ೧೦೯ ||

೧೨೨೨
ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ.
ಆಕಾರವಿಡಿದು ಸಾಕಾರಸಹಿತ ನಡೆವೆ.
ಹೊರಗೆ ಬಳಸಿ ಒಳಗೆ ಮರೆದಿಪ್ಪೆ.
ಬೆಂದ ನುಲಿಯಂತೆ ಹುರಿಗುಂದದಿಪ್ಪೆ.
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,
ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆ. || ೧೧೦ ||

೧೨೨೩
ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ? || ೧೧೧ ||

೧೨೨೪
ವಾನರಂಗಳಿಗೆ
ಛೈತ್ರ ತಪ್ಪಿ ಬಂದಡೆ
ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗೆಳು ಸಾರಿದವು.
ಸಾರಿದಡೆ ಆ ವಾನರಂಗಳು ಬಲ್ಲವೆ ಮುತ್ತಿನ ರಕ್ಷೆಯ?
ನವರತ್ನದ ಪೆಟ್ಟಿಗೆಯ ತೆರೆದು ನೋಡಿ, ಕೆಯ್ಕೊಂಡು,
ವಾನರಂಗಳು ಮೆದ್ದು ನೋಡಿ,
ಹಣ್ಣಲ್ಲವೆಂದು ಬಿಟ್ಟು ಕಳೆದವು.
ಲೋಕದೊಳಗೆ ಶರಣ ಸುಳಿದಡೆ,
ಆ ಶರಣನ ನಡೆ ನುಡಿ ಚಾರಿತ್ರವ ಕರ್ಮಿಗಳೆತ್ತ ಬಲ್ಲರು!
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಇರವನು ನಿಮ್ಮ ಶರಣರು ಬಲ್ಲರಲ್ಲದೆ
ಆ ವಾನರನಂತಹ ಮನುಜರೆತ್ತ ಬಲ್ಲರು! ॥೧೧೨॥

೧೨೨೫
ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿ ಭೋ.
ಇವ ಕುಟ್ಟಲೇಕೆ ಕುಸುಕಲೇಕೆ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ. ॥ ೧೧೩ ॥

೧೨೨೬
ಶಿವಭಕ್ತರ ರೋಮ ನೊಂದಡೆ, ಶಿವನು ನೋವ ನೋಡಾ.
ಶಿವಭಕ್ತರು ಪರಿಣಾಮಿಸಿದಡೆ, ಶಿವನು ಪರಿಣಾಮಿಸುವ ನೋಡಾ.
ಭಕ್ತದೇಹಿಕದೇವನೆಂದು ಶ್ರುತಿ ಹೊಗಳುವ ಕಾರಣ,
ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ.
ತಾಯಿ ನೊಂದಡೆ ಒಡಲಶಿಶು ನೋವ ತೆರನಂತೆ,
ಭಕ್ತರು ನೊಂದಡೆ ತಾ ನೋವ ನೋಡಾ ಚೆನ್ನಮಲ್ಲಿಕಾರ್ಜುನ. ॥ ೧೧೪ ॥

೧೨೨೭
ಸಂಗದಿಂದಲ್ಲದೆ ಅಗ್ನಿ ಹುಟ್ಟದು,
ಸಂಗದಿಂದಲ್ಲದೆ ಬೀಜ ಮೊಳೆದೋರದು,
ಸಂಗದಿಂದಲ್ಲದೆ ಹೂವಾಗದು.
ಸಂಗದಿಂದಲ್ಲದೆ ಸರ್ವಸುಖದೋರದು.
ಚೆನ್ನಮಲ್ಲಿಕಾರ್ಜುನಯ್ಯಾ,

ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು
ಪರಮಸುಖಿಯಾದೆನಯ್ಯಾ! ॥ ೧೧೫ ॥

೧೨೨೮
ಸಂಸಾರವೆಂಬ ಹಗೆಯಯ್ಯಾ ಎನ್ನ ತಂದೆ.
ಎನ್ನ ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯಾ.
ಎನ್ನುವನರಸಿಯರಸಿ ಹಿಡಿದು ಕೊಲುತ್ತಿದೆಯಯ್ಯಾ.
ನಿನ್ನ ನಾ ಮೊರೆಹೊಕ್ಕೆ ಕಾಯಯ್ಯಾ.
ಎನ್ನ ಬಿನ್ನಪವನವಧರಿಸಾ, ಚೆನ್ನಮಲ್ಲಿಕಾರ್ಜುನಾ. ॥ ೧೧೬ ॥

೧೨೨೯
ಸಾವಿರ ಹೊನ್ನಿಂಗೆ ಸಾದಕೊಂಡು
ಸುಣ್ಣವ ಬೆರಸಿದಂತೆ ಮಾಡಿದೆಯಯ್ಯಾ.
ಮೂರು ಲಕ್ಷದ ಬೆಲೆಗೆ ರತ್ನವ ಕೊಂಡು
ಮಡುವಿನಲ್ಲಿ ಇಟ್ಟಂತೆ ಮಾಡಿದೆಯಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ಎನ್ನ ಮುಟ್ಟಿ ಪಾವನವ ಮಾಡಿ
ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯಾ. ॥ ೧೧೭ ॥

೧೨೩೦
ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು.
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ. ॥ ೧೧೮ ॥

೧೨೩೧
ಸೆಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ,
ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ ಜಜ್ಜರಿಸಿ
ತನು ಮನ ದೃಷ್ಟಿ ನಟ್ಟು ಲಿಂಗದಲ್ಲಿ
ಒಜ್ಜರಿಸುವ ಶಿವಸುಖದೊಳೋಲಾಡುತ್ತ,
ಸಜ್ಜನ ಸದ್ಭಕ್ತಿರತಿಯೊಡನೆ ಕೂಡಾಡಿ
ಲಜ್ಜೆಗೆಟ್ಟು ನಿಮ್ಮ ನೆರೆದೆನು, ಚೆನ್ನಮಲ್ಲಿಕಾರ್ಜುನಾ. ॥ ೧೧೯ ॥

೧೨೩೨

ಹಂದಿಯೂ ಮದಕರಿಯೂ ಒಂದೇ ದಾರಿಯಲ್ಲಿ ಸಂಧಿಸಿದಡೆ,
ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದಡೆ,
ಈ ಹಂದಿಯದು ಕೇಸರಿಯಪ್ಪುದೆ ಚೆನ್ನಮಲ್ಲಿಕಾರ್ಜುನಾ? || ೧೨೦ ||

೧೨೩೩

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ,
ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ. || ೧೨೧ ||

೧೨೩೪

ಹಗಲೆನ್ನೆ ಇರುಳೆನ್ನೆ, ಉದಯವೆನ್ನೆ ಅಸ್ತಮಾನವೆನ್ನೆ,
ಹಿಂದೆನ್ನೆ ಮುಂದೆನ್ನೆ, ನೀನಲ್ಲದೆ ಪೆರತೊಂದಹುದೆನ್ನೆ.
ಮನ ಘನವಾದುದಿಲ್ಲವಯ್ಯಾ.
ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ.
ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಆನಿನ್ನೆಂದು ಕಾಂಬೆನು ಹೇಳಾ, ಚೆನ್ನಮಲ್ಲಿಕಾರ್ಜುನಾ. || ೧೨೨ ||

೧೨೩೫

ಹಣ್ಣು ಮೆದ್ದ ಬಳಿಕ ಆ ಮರನನಾರು ತರಿದಡೇನು?
ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು?
ಮಣ್ಣು ಬಿಟ್ಟ ಬಳಿಕ ಆ ಕೆಯ್ಯನಾರು ಉತ್ತಡೇನು?
ಚೆನ್ನಮಲ್ಲಿಕಾರ್ಜುನನನರಿದ ಬಳಿಕ
ಆ ಕಾಯವ ನಾಯಿ ತಿಂದಡೇನು? ನೀ[ರಗೂ]ಡಿದಡೇನು? || ೧೨೩ ||

೧೨೩೬

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು.
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು.
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು.
ಶಯನಕ್ಕೆ ಹಾಳು ದೇಗುಲಗಳುಂಟು.
ಚೆನ್ನಮಲ್ಲಿಕಾರ್ಜುನಯ್ಯಾ,
ಆತ್ಮಸಂಗಾತಕ್ಕೆ ನೀನೆನಗುಂಟು. || ೧೨೪ ||

೧೨೩೭

ಹಸಿವೆ ನೀನು ನಿಲ್ಲು ನಿಲ್ಲು;
ತೃಷೆಯೆ ನೀನು ನಿಲ್ಲು ನಿಲ್ಲು;

ನಿದ್ರೆಯೆ ನೀನು ನಿಲ್ಲು ನಿಲ್ಲು;
ಕಾಮವೆ ನೀನು ನಿಲ್ಲು ನಿಲ್ಲು;
ಕ್ರೋಧವೆ ನೀನು ನಿಲ್ಲು ನಿಲ್ಲು;
ಮೋಹವೆ ನೀನು ನಿಲ್ಲು ನಿಲ್ಲು;
ಲೋಭವೆ ನೀನು ನಿಲ್ಲು ನಿಲ್ಲು;
ಮದವೆ ನೀನು ನಿಲ್ಲು ನಿಲ್ಲು;
ಮಚ್ಚರವೆ ನೀನು ನಿಲ್ಲು ನಿಲ್ಲು;
ಸಚರಾಚರವೆ ನೀನು ನಿಲ್ಲು ನಿಲ್ಲು;
ನಾನು ಚೆನ್ನಮಲ್ಲಿಕಾರ್ಜುನದೇವರ
ಅವಸರದ ಓಲೆಯನೊಯ್ಯುತ್ತಲಿದ್ದೇನೆ; ಶರಣಾರ್ಥಿ. || ೧೨೫ ||

೧೨೩೮
ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ ?
ಸೂರ್ಯಕಾಂತದ ಅಗ್ನಿಯನಾರು ಭೇದಿಸಬಲ್ಲರು?
ಅಪಾರಮಹಿಮ ಚೆನ್ನಮಲ್ಲಿಕಾರ್ಜುನಾ,
ನೀನೆನ್ನೊಳಡಗಿಪ್ಪ ಪರಿಯ
ಬೇರಿಲ್ಲದೆ ಕಂಡು ಕಣ್ದೆರೆದೆನು. || ೧೨೬ ||

೧೨೩೯
ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೆ ಲೇಸು ಕಂಡಯ್ಯಾ.
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ.
ತಾಯಿ ರಕ್ಕಸಿಯಾದಂತೆ ಕಾಯವಿಕಾರವು.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನೊಲಿದವರು ಕಾಯಗೊಂಡಿದ್ದರೆನಬೇಡ. || ೧೨೭ ||

೧೨೪೦
ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ.
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ.
ಕಂದಾ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯಾ, ಚೆನ್ನಮಲ್ಲಿಕಾರ್ಜುನಾ. || ೧೨೮ ||

೧೨೪೧
ಹಿಂದಣ ಹಳ್ಳ, ಮುಂದಣ ತೊರೆ,
ಸಲ್ಲುವ ಪರಿಯೆಂತು ಹೇಳಾ!

ಹಿಂದಣ ಕೆರೆ, ಮುಂದಣ ಬಲೆ,
ಹದುಳವಿನ್ನೆಲ್ಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯಾ, ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ. ॥ ೧೨೯ ॥

೧೨೪೨
ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ,
ಬೆಳೆದೆನು ಅಸಂಖ್ಯಾತರ ಕರುಣದೊಳಗೆ.
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ.
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದಿರೆನ್ನ.
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ,
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ.
ಬಸವಣ್ಣ ಮೆಚ್ಚಲು ಒಗತನವ ಮಾಡುವೆ.
ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು.
ಅವಧರಿಸಿ, ನಿಮ್ಮಡಿಗಳೆಲ್ಲರೂ
ಮರಳಿ ಬಿಜಯಂಗೈವುದು, ಶರಣಾರ್ಥಿ. ॥ ೧೩೦ ॥

೧೨೪೩
ಹೂವು ಕಂದಿದಲ್ಲಿ ಪರಿಮಳವನರಸುವರೆ?
ಕಂದನಲ್ಲಿ ಕುಂದನರಸುವರೆ?
ಎಲೆ ದೇವ, ಸ್ನೇಹವಿದ್ದ ಠಾವಿನೊಳು ದ್ರೋಹವಾದ ಬಳಿಕ
ಮರಳಿ ಸದ್ಗುಣನರಸುವರೆ?
ಎಲೆ ದೇವ, ಬೆಂದ ಹುಣ್ಣಿಗೆ ಬೇಗೆಯನಿಕ್ಕುವರೆ?
ಕೇಳಯ್ಯಾ, ಶ್ರೀಶೈಲ ಚೆನ್ನಮಲ್ಲಿಕಾರ್ಜುನಾ
ಹೊಳೆಯಿಳಿದ ಬಳಿಕ ಅಂಬಿಗಂಗೇನುಂಟು? ॥ ೧೩೧ ॥

೧೨೪೪
ಹೊಳೆವ ಕೆಂಜೆಡೆಯ ಮೇಲೆ ಎಳೆವೆಳುದಿಂಗಳು,
ಫಣಿಮಣಿ ಕರ್ಣಕುಂಡಲ ನೋಡವ್ವಾ;
ರುಂಡಮಾಲೆಯ ಕೊರಳವನ ಕಂಡಡೆ ಒಮ್ಮೆ ಬರಹೇಳವ್ವಾ!
ಗೋವಿಂದನ ನಯನ ಉಂಗುಟದ ಮೇಲಿಪ್ಪುದು,
ಚೆನ್ನಮಲ್ಲಿಕಾರ್ಜುನದೇವನ ಕುರುಹವ್ವಾ. ॥ ೧೩೨ ॥

*

ಅಕ್ಕಮ್ಮ

೧೨೪೫
ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,
ಭಕ್ತರ ಪಡುಗ, ಪಾದತ್ರಾಣ, ಪಹರಿ, ಬಾಗಿಲು, ಬೊಕ್ಕಸ, ಬಿಯಗ
ಮುಂತಾದ ಕಾಯಕವಂ ಮಾಡಿಕೊಂಡು
ವ್ರತಕ್ಕೆ ಊಣೆಯವಿಲ್ಲದೆ, ಮಾಡುವ ಕೃತ್ಯಕ್ಕೆ ಕಡೆಯಾಗದೆ -
ಈ ಭಕ್ತನ ಅಂಗಳ ಅವಿಮುಕ್ತಿಕ್ಷೇತ್ರ,
ಆತನ ಮನೆಯೆ ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಾಶ್ರಯ. ॥ ೧ ॥

೧೨೪೬
ಕಾಮಿಗೆ ವ್ರತವುಂಟೆ, ನಿಃಕಾಮಿಗಲ್ಲದೆ?
ಕ್ರೋಧಿಗೆ ವ್ರತವುಂಟೆ, ಸಮಾಧಾನಿಗಲ್ಲದೆ?
ಲೋಭಿಗೆ ವ್ರತವುಂಟೆ, ಉದಾರಿಗಲ್ಲದೆ?
ಇಂತೀ ಕ್ಷಮೆ ದಮೆ ಶಾಂತಿ ಸಮಾಧಾನಸಂಪದ ಮುಂತಾಗಿ
ಗುರುಲಿಂಗಜಂಗಮಕ್ಕೆ, ತನುಮನಧನದಲ್ಲಿ ನಿರತನಾಗಿ,
ತನ್ನ ತ್ರಾಣಕ್ಕೆ ಇದ್ದಂತೆ ಚಿತ್ತಶುದ್ಧಾತ್ಮನಾಗಿ ಇಪ್ಪ ಮಹಾಭಕ್ತನೆ
ಕೃತ್ಯವಿಲ್ಲದ ಶರಣ.
ಆತನ ಪಾದ ಎನ್ನ ಹೃದಯದಲ್ಲಿ ಅಚ್ಚೊತ್ತಿದಂತಿಪ್ಪುದು.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು
ಅವರುವ ಎತ್ತುಕಟ್ಟುವ ಗೊತ್ತಾಗಿಪ್ಪನು. ॥ ೨ ॥

೧೨೪೭
ಕೆರೆ ಪೂದೋಟ ಅರವಟ್ಟಿಗೆ ಬಾವಿ ವಿವಾಹ
ಮುಂತಾದ ಧರ್ಮಂಗಳ ಕಟ್ಟಿಹೆವೆಂದು
ನೇಮದಿಂದ ತಿರುಗುವ ಶೀಲ ಅದಾರಿಗೆ ಯೋಗ್ಯ?
ಸರಿ ಹುದುಗಿನ ಸೂಳೆ ಸೀರೆಯನುಟ್ಟಂತೆ
ಅದಾರಿಗೆ ಸುಖದುಃಖವೆಂಬುದ ನೀನೆ ಅರಿ.
ಸರಿ ಹುದುಗಿನ ಧರ್ಮವುಂಟೆ?

[ಆ]ರಿಕೆಯ ಒಡವೆಯ ಊರೆಲ್ಲಕ್ಕೆ ತಂದಿಕ್ಕಿ,
ನಾ ಮಾಡಿದೆನೆಂದಡೆ ಇದಾರು ಮೆಚ್ಚುವರು?
ಆ ಮಾಟವನಾರಯ್ಯಲಿಲ್ಲ, ಅದು ಸ್ವಕಾರ್ಯಕ್ಕೆ ಏರಿದ ಪಥ.
ಇಂತೀ ವ್ರತ ನೇಮ ಶೀಲವನರಿಯಬೇಕು;
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ
ಧರ್ಮಜ್ಞನಾಗಿ ವ್ರತವನಂಗೀಕರಿಸಬೇಕು. || ೩ ||

೧೨೪೮
ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು.
ಲಿಂಗವಾದಡೂ ಆಚಾರದೋಹಳವಾದಲ್ಲಿ ಪೂಜಿಸಲಾಗದು.
ಜಂಗಮವಾದಡೂ ಆಚಾರ ಅನುಸರಣೆಯಾ[ಗ]ದಲ್ಲಿ ಕೂಡಲಾಗದು.
ಆಚಾರವೆ ವಸ್ತು, ವ್ರತವೆ ಪ್ರಾಣ, ಕ್ರಿಯೆಯೆ ಜ್ಞಾನ, ಜ್ಞಾನವೆ ಆಚಾರ.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು ತಾನೆ. || ೪ ||

೧೨೪೯
ಚಿನ್ನ ಒಡೆದಡೆ ಕರಗಿದಡೆ ರೂಪಪ್ಪುದಲ್ಲದೆ,
ಮುತ್ತು ಒಡೆದು ಕರಗಿದಡೆ ರೂಪಪ್ಪುದೆ?
ಮರ್ತ್ಯದ ಮನುಜ ತಪ್ಪಿದರೊಪ್ಪಬೇಕಲ್ಲದೆ,
ಸದ್ಭಕ್ತ ಸದ್ಭೈವ ತಪ್ಪಿದಡೆ ಒಪ್ಪಬಹುದೆ?
ಆಚಾರಕ್ಕು ಅಪಮಾನಕ್ಕು ಅಂಗವೆ ಕಡೆಯಲ್ಲದೆ,
ಬೇರೊಂದಂಗವ ಮಾಡಿ ಗುರುಲಿಂಗಜಂಗಮದ ಮುಖದಿಂದ
ಶುದ್ಧವೆಂದು ತಂದು ಕೂಡಿಕೊಳಬಹುದೆ?
ಲಿಂಗಬಾಹ್ಯನ, ಆಚಾರಭ್ರಷ್ಟನ, ಜಂಗಮವ ಕೊಂದವನ
ಇವರುವ ಕಂಡು ನುಡಿದಡೆ ಕುಂಭೀಪಾತಕಕ್ಕೆ ಒಳಗು;
ಇದಕ್ಕೆ ಸಂದೇಹವಿಲ್ಲ.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ಆಣತಿ. || ೫ ||

೧೨೫೦
ತನ್ನಾಚಾರಕ್ಕೆ ಬಂದವರು ತನ್ನವರೆಂದು ಭಾವಿಸಬೇಕಲ್ಲದೆ,
ತನ್ನಾಚಾರಕ್ಕೆ ಹೊರಗಾದವರ ಅಣ್ಣತಮ್ಮನೆಂದು
ತಾಯಿತಂದೆ ಎಂದು, ಹೊನ್ನು ಮಣ್ಣು ಹೆಣ್ಣಿನವರೆಂದು
ಅಂಗೀಕರಿಸಿದಡೆ, ಅವರಂಗಣವ ಕೂಡಿದಡೆ,
ಅವರೊಂದಾಗಿ ನುಡಿದಡೆ, ಭಕ್ತರು ಸತ್ಯರಿಗೆ ಮುನ್ನವೆ ಹೊರಗು.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು ಅವರನೊಳಗಿಟ್ಟುಕೊಳ್ಳ. || ೬ ||

೧೨೫೧
ತನುಶೀಲವಂತರುಂಟು, ಧನಶೀಲವಂತರುಂಟು,
ಧರೆಶೀಲವಂತರುಂಟು, ಕನಕವನಿತೆಶೀಲವಂತರುಂಟು.
ಫಲ ಕುಸುಮ ವಿದಳ ಬಹುಧಾನ್ಯ ಮುಂತಾದ
ರಸದ್ರವ್ಯ ಪಶು ಪಾಷಾಣ ವಸ್ತ್ರ ಪರಿಮಳ
ಛತ್ರ ಚಾಮರ ಅಂದಳ ಕರಿ ತುರಗಂಗಳು
ಮುಂತಾದವೆಲ್ಲಕ್ಕೂ ಶೀಲವಂತರುಂಟು.
ಅನುಸರಣೆಯ ಕಂಡಲ್ಲಿ, ಆಚಾರ ತಪ್ಪಿದಲ್ಲಿ, ಲಿಂಗ ಬಾಹ್ಯವಾದಲ್ಲಿ,
ಆಗವೆ ಅಂಗವ ಬಿಟ್ಟು ಲಿಂಗದೊಡಗೂಡುವ ಶೀಲವಂತರಂಗವ ಕಾಣೆ.
ಎನ್ನ ಕ್ರೀ ಭಂಗವಹುದಕ್ಕೆ ಮುನ್ನವೆ ನಿರಂಗವ ಹೇಳಾ,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವೆ. ॥ ೭ ॥

೧೨೫೨
ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ,
ಕೃಷಿ ತೀರಿದ ಮತ್ತೆ ಗುರುದರ್ಶನ ಲಿಂಗಪೂಜೆ ಜಂಗಮಸೇವೆ
ಶಿವಭಕ್ತರ ಸುಖಸಂಭಾಷಣೆ ಶರಣರ ಸಂಗ -
ಈ ನೇಮವನರಿವುತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ.
ಆಚಾರವೆ ಪ್ರಾಣವಾಗಿಪ್ಪ ರಾಮೇಶ್ವರಲಿಂಗಕ್ಕೆ
ಆತನೆ ಚೇತನಭಾವ. ॥ ೮ ॥

೧೨೫೩
ತಾ ಮುಳುಗಿದ ಮತ್ತೆ ಸಮುದ್ರದ ಪ್ರಮಾಣ ತನಗೇನು?
ತಾನೊಂದು ಶಸ್ತ್ರದಲ್ಲಿ ಸಲೆ ಸಂದ ಮತ್ತೆ
ತನ್ನಂಗವ ಹಲವು ಶಸ್ತ್ರ ಬಂಧಿಸಿದಡೇನು?
ತಾ ನಿಂದ ನಿರಿಗೆಯಲ್ಲಿ ಸಂದ ಮತ್ತೆ
ಸಂದಣಿಗಾರರ ಬಂಧದ ಮಾತೇತಕ್ಕೆ?
ಇದು ವ್ರತಾಚಾರದ ನಿಂದ ನಿರಿಗೆ, ಸಲೆ ಸಂದ ನೇಮ.
ಕಟ್ಟಾಚಾರಿಯ ದೃಷ್ಟನಿಷ್ಠೆ.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದೊಳಗೆ ಕಟ್ಟಿದ ತೊಡರು. ॥ ೯ ॥

೧೨೫೪
ದುಷ್ಟರಿಗಂಜಿ ಕಟ್ಟಿಕೊಳ್ಳಬಹುದೆ ಕಡ್ಡಾಯದ ವ್ರತವ?
ಆ ವ್ರತದ ವಿಚಾರವೆಂತೆಂದಡೆ:
ಅಲಗಿನ ತುಪ್ಪದ ಸವಿಗೆ ಲಲ್ಲೆಯಿಂದ ನೆಕ್ಕಿದಡೆ
ಅಲಗಿನ ಧಾರೆ ನಾಲಗೆಯ ತಾಗಿ, ಆ ಜೀವ ಹಲುಬುವ ತೆರದಂತೆ.

ಒಲವರವಿಲ್ಲದ ಭಕ್ತಿ, ಛಲವಿಲ್ಲದ ನಿಷ್ಠೆ,
ಎಲವದ ಮರನ ಕಾಯ್ದ ವಿಹಂಗನಂತೆ.
ಇಂತೀ ಸಲೆ ನೆಲೆಯನರಿಯದವನ ವ್ರತಾಚಾರ
ಕೊಲೆ ಹೊಲೆ ಸೂತಕಕ್ಕೊಡಲಾಯಿತ್ತು.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಹೊರಗಾದ ನೇಮ. || ೧೦ ||

೧೨೫೫

ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು.
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು.
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ.
ಆವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯಾ,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ. || ೧೧ ||

೧೨೫೬

ಭಕ್ತಂಗೆ ಬಯಕೆ ಉಂಟೆ? ನಿತ್ಯಂಗೆ ಸಾವುಂಟೆ?
ಸದ್ಭಕ್ತಂಗೆ ಮಿಥ್ಯ ತಥ್ಯ ಉಂಟೆ?
ಕರ್ತೃ ಭೃತ್ಯನಾದ ಠಾವಿನಲ್ಲಿ ಪ್ರತ್ಯುತ್ತರಂಗೆಯ್ದಡೆ
ಸತ್ಯಸದಾಚಾರಕ್ಕೆ ಹೊರಗು,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಾಣತಿ. || ೧೨ ||

೧೨೫೭

ಭಕ್ತರ ಮನೆಗೆ ಸತ್ಯಶರಣರು ಬಂದಲ್ಲಿಯೆ
ಮದುವೆಯ ಉತ್ಸಾಹಕ್ಕಿಂದ ವೆಗ್ಗಳವೆಂದು ಕಂಡು,
ತನುಕರಗಿ, ಮನಬೆರಸಿ, ಕಂಗಳು ತುಂಬಿ ಪುಳಕಿತವಾಗಿ
ವಂಚನೆ ಸಂಕಲ್ಪವೆಂಬ ಶಂಕೆದೋರದೆ,
ನಿಶ್ಯಂಕನಾಗಿ ಮಾಡುವ ಭಕ್ತನ ವಂಕದ ಬಾಗಿಲೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ಮಸ್ತಕ. || ೧೩ ||

೧೨೫೮

ವೇಷ ಎಲ್ಲಿರದು?
ಸೂಳೆಯಲ್ಲಿ, ಡೊಂಬನಲ್ಲಿ, ಭೈರೂಪನಲ್ಲಿರದೆ?
ವೇಷವ ತೋರಿ ಒಡಲ ಹೊರೆವ
ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೊ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ? || ೧೪ ||

೧೨೫೯
ವ್ರತವೆಂಬುದೇನು? ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ.
ವ್ರತವೆಂಬುದೇನು? ಇಂದ್ರಿಯಂಗಳ ಸಂದಮುರಿವ ಕುಲಕುಠಾರ.
ವ್ರತವೆಂಬುದೇನು? ಸಕಲ ವ್ಯಾಪಕಕ್ಕೆ ದಾವಾನಳ.
ವ್ರತವೆಂಬುದೇನು? ಸರ್ವದೋಷನಾಶನ.
ವ್ರತವೆಂಬುದೇನು? ಚಿತ್ತಸುಯಿದಾನದಿಂದ
ವಸ್ತುವ ಕಾಂಬುದಕ್ಕೆ ಕಟ್ಟಿದ ಗುತ್ತಗೆ.
ವ್ರತವೆಂಬುದೇನು? ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು
ಅವರಿಗೆ ತತ್ತಲ ಮಗನಾಗಿಪ್ಪನು. || ೧೫ ||

೧೨೬೦
ಸಂದೇಹವುಳ್ಳನ್ನಕ್ಕ ವ್ರತಾಂಗಿಯಲ್ಲ.
ಅಲಗಿನ ಮೊನೆಗಂಜುವನ್ನಕ್ಕ ಪಟುಭಟನಲ್ಲ.
ತ್ರಿವಿಧದ ಅಂಗವುಳ್ಳನ್ನಕ್ಕ ಲಿಂಗಾಂಗಿಯಲ್ಲ.
ಸೋಂಕು ಬಂದಲ್ಲಿ ಆ ಅಂಗವ ಬಿಡದಿದ್ದಡೆ ಶೀಲವಂತನಲ್ಲ.
ಈ ನೇಮಂಗಳಲ್ಲಿ ನಿರತನಾದವಂಗೆ
ಅಲ್ಲಿ ಇಲ್ಲಿಯೆಂಬ ಅಂಜಿಕೆ ಎಲ್ಲಿಯೂ ಇಲ್ಲ;
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿಯೂ ಇಲ್ಲ. || ೧೬ ||

*

ಅಮುಗೆ ರಾಯಮ್ಮ

೧೨೬೧
ಅಂಗದ ಆಪ್ಯಾಯನಕ್ಕೆ ಲಿಂಗವ ಮರೆದು ತಿರುಗುವ
ಭಂಡ ಭವಿಗಳನೇನೆಂಬೆನಯ್ಯಾ?
ಲಿಂಗದಲ್ಲಿ ನಿತ್ಯರಲ್ಲ; ಜಂಗಮದಲ್ಲಿ ಪ್ರೇಮಿಗಳಲ್ಲ!
ಹಿಡಿದ ಛಲದಲ್ಲಿ ಕಡುಗಲಿಗಳಲ್ಲ.
ಮೃಡನ ಕಂಡೆಹೆನೆಂಬ ಮೂರ್ಖರ ಮುಖವ ನೋಡಲಾಗದು;
ಅವರಡಿಯ ಮೆಟ್ಟಲಾಗದು ಕಾಣಾ ಅಮುಗೇಶ್ವರಾ. || ೧ ||

೧೨೬೨
ಅನುಭಾವಿಗೆ ಅಂಗಶೃಂಗಾರವುಂಟೆ?
ಅನುಭಾವಿಗೆ ಕಾಮಕ್ರೋಧವುಂಟೆ?

ಅನುಭಾವಿಗೆ ನಾಹಂ ಕೋಹಂ ಸೋಹಂ ಎಂಬ
ಭ್ರಾಂತಿನ ಭ್ರಮೆಯುಂಟೆ?
ಅನುಭಾವಿಗೆ ನನ್ನವರು ತನ್ನವರೆಂಬ
ಗನ್ನ ಗದಕಿನ ಮಾತುಂಟೆ?
ಅನುಭಾವಿಗಳೆಂಬವರು ಅಲ್ಲಿಗಲ್ಲಿಗೆ
ತಮ್ಮ ಅನುಭಾವಂಗಳ ಬೀರುವರೆ?
ಅನುಭಾವಿಗಳ ಪರಿಯ ಹೇಳಿಹೆ ಕೇಳಿರಣ್ಣಾ :
ನೀರಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಂಡಿನಂತೆ
ಇರಬಲ್ಲಡೆ ಅನುಭಾವಿಗಳೆಂಬೆನಯ್ಯಾ.
ವಚನಂಗಳ ಓದಿ ವಚನಂಗಳ ಕೇಳಿ
ಕಂಡ ಕಂಡ ಠಾವಿನಲ್ಲಿ ಬಂಡುಗೆಲೆವ ಜಗಭಂಡರ,
ಆತ್ಮತೇಜಕ್ಕೆ ತಿರುಗುವ ವೇಷಧಾರಿಗಳ ಕಂಡು
ಅನುಭಾವಿಗಳೆಂದಡೆ ಅಘೋರನರಕ ತಪ್ಪದು ಕಾಣಾ, ಅಮುಗೇಶ್ವರಾ. ॥ ೨ ॥

೧೨೬೩
ಅರಿಯಬಲ್ಲಡೆ ವಿರಕ್ತನೆಂಬೆನು.
ಆಚಾರವನರಿದಡೆ ಅಭೇದ್ಯನೆಂಬೆನು.
ಸ್ತುತಿ ನಿಂದೆಗೆ ಹೊರಗಾದಡೆ ಸುಮ್ಮಾನಿ ಎಂಬೆನು.
ಘನತತ್ವವನರಿದು ಶಿಶುಕಂಡ ಕನಸಿನಂತೆ ಇದ್ದಡೆ
ಶಿವಜ್ಞಾನಿ ಎಂಬೆನಯ್ಯಾ ಅಮುಗೇಶ್ವರಾ. ॥ ೩ ॥

೧೨೬೪
ಅರಿವು ಸಂಬಂಧವುಳ್ಳ ಪರಿಪೂರ್ಣಜ್ಞಾನಿಗಳ
ಅಡಿಗಳಿಗೆ ನಾನೆರಗುವೆನಯ್ಯಾ.
ಎಡೆದೆರಹಿಲ್ಲದೆ ಮೃಡನ ನೆನೆವವರ
ಅಡಿಗಳಿಗೆ ನಾನೆರಗುವೆನಯ್ಯಾ.
ಕಡುಗಲಿಗಳ ಕಂಡಡೆ ಪರಶಿವನೆಂಬೆನಯ್ಯಾ;
ಅಮುಗೇಶ್ವರಲಿಂಗವನರಿದ ಘನಮಹಿಮನೆಂಬೆನಯ್ಯಾ. ॥ ೪ ॥

೧೨೬೫
ಆಕಾಶಕ್ಕೆ ಹಾರುವಂಗೆ ದೋಟಿಯ ಕೋಲ ಹಂಗೇತಕಯ್ಯಾ?
ಭೂಮಿಯ ಸೋಂಕದೆ ನಡೆವವಂಗೆ ಭೂಮಿಯ ಹಂಗೇತಕಯ್ಯಾ?
ತನ್ನ ತಾನರಿದವಂಗೆ ಬಿನ್ನಾಣಿಗಳ ಮಾತೇಕಯ್ಯಾ?
ಅಗಮ್ಯವಾಗಿ ಚರಿಸುವಂಗೆ ಅಂಗ[ಣದ] ಹಂಗೇತಕಯ್ಯಾ?
ಅಮುಗೇಶ್ವರಲಿಂಗವನರಿದ ಶರಣಂಗೆ
ಕಾವಿ ಕಾಷಾಂಬರವ ಹೊದ್ದು ತಿರುಗುವ ಕರ್ಮಿಗಳ ಹಂಗೇತಕಯ್ಯಾ? ॥ ೫ ॥

೧೨೬೬
ಉತ್ತಮ ತೇಜಿಗೆ ಚಬುಕಿನಲ್ಲಿ ತೆಗೆವರುಂಟೆ?
ಪಟ್ಟಣಕ್ಕೆ ಒಡೆಯನಾದ ಬಳಿಕ, ಜಾತಿಗೋತ್ರವನರಸಲುಂಟೆ?
ಪರಮಸುಜ್ಞಾನಿಗೆ ಪ್ರಾಣದ ಹಂಗುಂಟೆ?
ಲಿಂಗವನಪ್ಪಿದ ಶರಣನ ಕಂಡಕಂಡವರು ಜರಿದಡೆ, ಸಂದೇಹವುಂಟೆ?
ಇಹಲೋಕದವರು ಜರಿದರೆಂದು ವಿಪರೀತಗೊಳಲೇಕೆ?
ಅಮುಗೇಶ್ವರಲಿಂಗವನರಿದ ಶರಣಂಗೆ
ಆರು ಹರಸಿದಡೇನು, ಆರು ಹಳಿದಡೇನು? || ೬ ||

೧೨೬೭
ಉತ್ತಮ ತೇಜಿಯ ಮರಿಗೆ ಸುಪ್ಪತ್ತಿಗೆಯಲ್ಲದೆ
ಕತ್ತೆಯ ಮರಿಗೆ ಸುಪ್ಪತ್ತಿಗೆಯ ಹಾಸುವರೆ?
ಅಜ್ಞಾನಿಗಳ ಹೃದಯದಲ್ಲಿ ಪರಮಾಮೃತವ ಸುರಿದಡೆ
ಪರರ ಕಾಡಿ ಬೇಡದೆ ಮಾಣ್ಬರೆ?
ಕುಂಜರನ ವೇಷವ ತೊಟ್ಟು, ಹಂದಿಯಂತೆ ತಿರುಗುವ
ಅಜ್ಞಾನಿಗಳನೇನೆಂಬೆ ಅಮುಗೇಶ್ವರಾ? || ೭ ||

೧೨೬೮
ಒಡೆಯನ ಕಂಡಡೆ ಬಡಿವುದಯ್ಯಾ ಬಾಲವನು ಸುನಿ.
ಕೊಡುವ ಕೊಂಬುವರ ಕಂಡು ಅವರಡಿಗೆರಗುವರಯ್ಯಾ.
ಮೃಡನ ವೇಷವ ತೊಟ್ಟು
ಕುರಿಗಳಂತೆ ತಿರುಗುವ ಜಡಜೀವಿಗಳ ಕಂಡಡೆ,
ಮೃಡನ ಶರಣರು ಮೋರೆಯನೆತ್ತಿ ನೋಡರು
ಕಾಣಾ ಅಮುಗೇಶ್ವರಾ. || ೮ ||

೧೨೬೯
ಕತ್ತಲೆಯ ಮನೆಯಲ್ಲಿ ಸಕ್ಕರೆಯ ಸವಿದವನಂತಿರಬೇಕು.
ಬಟ್ಟಬಯಲಲ್ಲಿ ನಿಂದು ಇಷ್ಟಲಿಂಗವ ಕಂಡವನಂತಿರಬೇಕು.
ಇದಕ್ಕೆ ಗುರುವಿನ ಹಂಗೇಕೆ, ಲಿಂಗದ ಪೂಜೆ ಏಕೆ, ಸಮಯದ ಹಂಗೇಕೆ?
ತನ್ನ ತಾನು ಅರಿದವಂಗೆ ಏಣಾಂಕ[ಧರ]ನ ಶರಣರ ಸಂಗವೇಕೆ?
ಇಷ್ಟವನರಿದವಂಗೆ ನಾನೇನು, ನೀನೇನು ಎಂಬ
ಗೊಜಡಿನ ಭ್ರಮೆಯೇಕೆ ಅಮುಗೇಶ್ವರಾ? || ೯ ||

೧೨೭೦
ಕತ್ತೆಯಂತೆ ಬತ್ತಲೆಯಿದ್ದಡೇನು, ಇಷ್ಟಲಿಂಗಸಂಬಂಧಿಯಾಗಬಲ್ಲನೆ?
ಕಟ್ಟಿದ್ದ ಲಿಂಗವ ಕಯ್ಯಲ್ಲಿ ಹಿಡಿದಡೇನು, ನಿತ್ಯನಾಗಬಲ್ಲನೆ?

ಅನಿತ್ಯ ಹೊತ್ತುಕೊಂಡು ತಿರುಗುವ ಅಘೋರಿಗಳ ಕಂಡಡೆ
ಮಾಗಿಯ ಕೋಗಿಲೆಯಂತೆ ಮೋರೆಯ ತೋರೆನು ಅಮುಗೇಶ್ವರಾ. || ೧೦ ||

೧೨೭೧
ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನ ಮರಿ ಆನೆಯಾಗಬಲ್ಲುದೆ?
ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ,
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ. || ೧೧ ||

೧೨೭೨
ಕಾದ ಹಾಲ ನೊಣ ಮುಟ್ಟಬಲ್ಲುದೆ?
ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?
ಮರುಜವಣಿಯ ಕಡ್ಡಿ ಕಯ್ಯಲಿದ್ದವಂಗೆ ಸರ್ಪ ಕಡಿಯಬಲ್ಲುದೆ?
ಈ ತ್ರಿವಿಧವನರಿದವಂಗೆ ಹಿಂದೆ ಶಂಕೆಯಿಲ್ಲ! ಮುಂದೆ ಭೀತಿಯಿಲ್ಲ!
ಕಳಂಕ ಇಲ್ಲದೆ ಅಮುಗೇಶ್ವರಲಿಂಗವು ಅಪ್ಪಿಕೊಂಡಿತ್ತು. || ೧೨ ||

೧೨೭೩
ಕಾಯವಿಕಾರಕ್ಕೆ ತಿರುಗುವರು ಕೋಟ್ಯನುಕೋಟಿ;
ಕಡುಗಲಿಗಳನಾರನೂ ಕಾಣೆನಯ್ಯಾ.
ಅಂಗಶೃಂಗಾರಿಗಳಾಗಿ ತಿರುಗುವರು ಕೋಟ್ಯನುಕೋಟಿ;
ಲಿಂಗಶೃಂಗಾರಿಗಳನಾರನೂ ಕಾಣೆನಯ್ಯಾ.
ವಚನರಚನೆಯ ಅರ್ಥ ಅನುಭಾವವ ಬಲ್ಲೆನೆಂದು
ಒಬ್ಬರನೊಬ್ಬರು ಜರಿದು ಸದ್ಯೋನ್ಮುಕ್ತರಾದೆವೆಂಬ
ಜಗಭಂಡರ ಮೆಚ್ಚುವನೆ ಅಮುಗೇಶ್ವರಲಿಂಗವು? || ೧೩ ||

೧೨೭೪
ಕುಂಜರನ ಮರಿಯ ಸರಪಳಿಯಲ್ಲಿ ಕಟ್ಟುವರಲ್ಲದೆ,
ಹಂದಿಯ ಮರಿಯ ಸರಪಳಿಯಲ್ಲಿ ಕಟ್ಟುವರೆ ಅಯ್ಯಾ?
ಸಿಂಹದ ಮರಿಯ ಕಂಡಡೆ ಸೋಜಿಗಬಡುವರಲ್ಲದೆ,
ಸಿಂಗಳೀಕನ ಮರಿಯ ಕಂಡಡೆ ಸೋಜಿಗಬಡುವರೆ ಅಯ್ಯಾ?
ಕಸ್ತೂರಿಯ ಮೃಗವ ಕಂಡಡೆ ಆಶ್ಚರ್ಯಗೊಂಬರಲ್ಲದೆ
ಕತ್ತೆಯ ಮರಿಯ ಕಂಡಡೆ ಕಣ್ಣಿನಲ್ಲಿ ನೋಡರು ನೋಡಾ!
ಲಿಂಗವನಪ್ಪಿ ಅಗಲದಿಪ್ಪ ಲಿಂಗೈಕ್ಯನ ಕಂಡಡೆ
ಜಗವೆಲ್ಲಾ ಕೊಂಡಾಡುತಿಪ್ಪರು ನೋಡಾ!

ಅಮುಗೇಶ್ವರನೆಂಬ ಲಿಂಗವನರಿಯದ ಅಜ್ಞಾನಿಗಳ ಕಂಡಡೆ
ಕತ್ತೆಯ ಮರಿಯೆಂದು ಕಣ್ಣುಮುಚ್ಚಿಕೊಂಡಿಪ್ಪರು ನೋಡಾ! || ೧೪ ||

೧೨೭೫
ಕೊಂಬಿನ ಕುರಿಯಂತೆ ಕೂಗಿದಡೇನು, ಲಿಂಗೈಕ್ಯರಾಗಬಲ್ಲರೆ?
ಕೋಟ್ಯನುಕೋಟಿಯನೋದಿದಡೇನು, ಸಾತ್ವಿಕರಾಗಬಲ್ಲರೆ?
ಬೆನ್ನುಹುಳಿತ ಕೋಣನಂತೆ ಮನೆಮನೆಯ ತಿರಿದುಂಡಡೇನು,
ಮಹಾಜ್ಞಾನಿಯಾಗಬಲ್ಲರೆ?
ಅಮುಗೇಶ್ವರಲಿಂಗವನರಿಯದವರು ಓದಿದಡೇನು?
ಕತ್ತೆ ಬೂದಿಯಲ್ಲಿ ಬಿದ್ದಂತಾಯಿತ್ತು. || ೧೫ ||

೧೨೭೬
ಜ್ಞಾನವೆಂಬುದು ಬೀದಿಯ ಪಸರವೆ?
ಬೊಕ್ಕಣಕ್ಕೆ ತುಂಬುವ ಹುರುಳಿಯೆ?
ಚೀಲದೊಳಗಣ ಜೀರಿಗೆಯೆ?
ಗಾಣದೊಳಗಣ ಹಿಂಡಿಯೆ?
ಜ್ಞಾನವೆಂಬುದ ಎಲ್ಲರೊಡನೆ ಬೀರದಿರಬೇಕು.
ಗೆಲ್ಲ ಸೋಲಿನ ಮಾತು ಬಂದಡೆ ಗೆಲ್ಲವ ನುಡಿಯದಿರಬೇಕು.
ಹೀಂಗಿರಬಲ್ಲಡೆ ವಿರಕ್ತನೆಂಬೆನು, ಈಶ್ವರನೆಂಬೆನು,
ಅಮುಗೇಶ್ವರಲಿಂಗವೆಂಬೆನು. || ೧೬ ||

೧೨೭೭
ನಿಜವನರಿದ ವಿರಕ್ತನು ನಿಜಾನುಭಾವಿಯೆಂದು ನುಡಿವನೆ?
ಅತ್ಯತಿಷ್ಠದ್ದಶಾಂಗುಲನೆಂಬ ಘನವನರಿದು
ಕತ್ತಲೆಯ ಮನೆಯಲ್ಲಿ ಮಧುರವ ಸವಿದಂತೆ ಇರಬೇಕು,
ಕಾಣಾ ಅಮುಗೇಶ್ವರಾ. || ೧೭ ||

೧೨೭೮
ನೀರೊಳಗೆ ಹೋದವನ ಹೆಜ್ಜೆಯ ಕಾಬವರುಂಟೆ?
ಅಂದಳವನೇರಿದ ಆತ್ಮನ ಹೆಜ್ಜೆಯ ಕಾಬವರುಂಟೆ?
ಆನೆಯನೇರಿಕೊಂಡು ಅರಿವನರಸುವನಂತೆ,
ಜ್ಞಾನಿಗಳ ಸಂಗದಲ್ಲಿರ್ದು ಆತ್ಮತೇಜಕ್ಕೆ ಹೋರುವನಂತೆ,
ನಾನು ನೀನೆಂಬುದನಳಿದು, ತಾನೆಯಾಗಿರಬಲ್ಲಡೆ
ಅಮುಗೇಶ್ವರಲಿಂಗವು ತಾನೆ ಎಂಬೆನು. || ೧೮ ||

೧೨೭೯
ಪಟ್ಟಣದ ಸೂಳೆಯ ಕೂಡೆ ಪರಬ್ರಹ್ಮವ ನುಡಿಯಲೇಕೆ?
ಸಂತೆಗೆ ಬಂದವರ ಕೂಡೆ ಸಹಜವ ನುಡಿಯಲೇಕೆ?
ಕತ್ತೆಯನೇರುವರ ಕೂಡೆ ನಿತ್ಯರೆಂದು ನುಡಿಯಲೇಕೆ?
ಹೊತ್ತುಹೋಕರ ಕೂಡೆ ಕರ್ತನ ಸುದ್ದಿಯ ನುಡಿಯಲೇಕೆ?
ಅಮುಗೇಶ್ವರಲಿಂಗವನರಿದ ಶರಣಂಗೆ
ಹತ್ತು ಸಾವಿರವನೋದಲೇಕೆ?
ಹತ್ತು ಸಾವಿರವ ಕೇಳಲೇಕೆ?
ಭ್ರಷ್ಟರ ಕೂಡೆ ನುಡಿಯಲೇಕೆ? || ೧೯ ||

೧೨೮೦
ಬೀಜವಿಲ್ಲದೆ ವೃಕ್ಷ ಬೆಳೆಯಬಲ್ಲುದೆ?
ಹೂವಿಲ್ಲದೆ ಹಣ್ಣಾಗಬಲ್ಲುದೆ?
ತೆಂಗಿನ ಮರವ ಬಿತ್ತಿದಡೆ ಅಂಬರಕ್ಕೆ ಹೋಯಿತ್ತು,
ಕಾಯಿಲ್ಲದೆ ನೀ[ರಿ]ಲ್ಲದೆ
ಗಾಳಿಗೆ ಮರ ಮುರಿದಂತೆ ಆಯಿತ್ತು ಕಾಣಾ.
ಅಮುಗೇಶ್ವರಲಿಂಗವನರಿಯದ
ಅನಾಚಾರಿಗಳ ವಿರಕ್ತರೆಂಬೆನೆ? ಎನಲಾಗದು. || ೨೦ ||

೧೨೮೧
ಬೆಟ್ಟದ ನೆಲ್ಲಿಯಕಾಯ ಪಟ್ಟಣಕ್ಕೆ ಹೊತ್ತುಕೊಂಡು ಹೋಗಿ
ಹೊಟ್ಟೆಯ ಹೊರೆವವನಂತೆ,
ಉತ್ತಮ ತೇಜಿಯ ಹೆಸರ ಹೇಳಿ
ಕಡಲೆಯ ತಿಂಬ ಗಾವಲಿಗನಂತೆ,
ಆದ್ಯರ ವಚನಂಗಳ ಅಲ್ಲಲ್ಲಿಗೆ ಉಸುರಿ,
ಅನ್ನ ಕೂಳಿಂಗೆ ಹರಿದಾಡುವ ಅಜ್ಞಾನಿಗಳ
ಅನುಭಾವಿಗಳೆಂಬೆನೆ? ಅಯ್ಯಾ ವಿರಕ್ತರೆಂಬೆನೆ?
ವೇಷವ ಹೊತ್ತು ತಿರುಗುವ [ಡಂ]ಬನಂತೆ
ಬಲ್ಲೆಬಲ್ಲೆನೆಂಬ ಅಹಂಕಾರವ ನುಡಿವ ಭವಿಗಳ
ಅನುಭಾವಿಗಳೆಂಬೆನೆ? ವಿರಕ್ತರೆಂಬೆನೆ?
ವಿಷಯವ ಮುಂದುಗೊಂಡು ತಿರುಗುವ ಅನುಭಾವಿಗಳನೆಂತು
ವಿರಕ್ತರೆಂಬೆನಯ್ಯಾ, ಅಮುಗೇಶ್ವರಲಿಂಗವೆ? || ೨೧ ||

೧೨೮೨
ಮಂಡೆ ಬೋಳಾಗಿ ತುಂಡುಗಂಬಳಿ ಹೊದ್ದ ಬಳಿಕ
ಅಂದಚಂದಗಳೇಕೆ?
ಖಂಡಿತನೆ! ಕಂಡಕಂಡವರ ಮನ ಮೆಚ್ಚುವಂತೆ
ಅಂದಚಂದಗಳೇಕೆ?
ಮಂಡೆ ಬೋಳಾದಡೆ ಮಹಾನುಭಾವಿಗಳು ಮೆಚ್ಚುವಂತೆ ಇರಬೇಕು
ಕಾಣಾ, ಅಮುಗೇಶ್ವರಾ. || ೨೨ ||

೧೨೮೩
ಮರನನೇರಿ ಹಣ್ಣನರಸಹೋದಡೆ
ಮರ ಮುರಿದು ಬಿದ್ದ ಮರುಳ ಮಾನವನಂತೆ,
ಕೆಸರೊಳಗಣ ಹುಲ್ಲ ಮೇಯ ಹೋದ ಪಶುವಿನಂತೆ,
ಕೊಂಬೆ ಕೊಂಬೆಗೆ ಹಾರುವ ಕೋಡಗನಂತೆ,
ಉಂಡ ಮನೆಯ ದೂರುವ ಒಡೆಕಾರನಂತೆ,
ಹಳ್ಳಹಳ್ಳ ತಿಬ್ಬಳಿ ತಿರುಗುವ ಬಳ್ಳುವಿನಂತೆ,
ಮಾತಿನಲ್ಲಿ ಬ್ರಹ್ಮವ ನುಡಿವ ವೇಷಧಾರಿಗಳ ಲಿಂಗಾಂಗಿಗಳೆಂದಡೆ,
ಮಾರಿಗೆ ತಂದ ಹಂದಿಯ ನಾಯಿ ನರಿ ತಿಂಬಂತೆ
ಕಾಣಾ, ಅಮುಗೇಶ್ವರಾ. || ೨೩ ||

೧೨೮೪
ಮರುಜವಣಿಯ ಕಂಡವಂಗೆ ಮರಣದ ಹಂಗುಂಟೆ?
ಪರುಷವುಳ್ಳವಂಗೆ ಪಾಷಾಣದ ಹಂಗುಂಟೆ?
ಸರ್ವಾಂಗಲಿಂಗವಾದವಂಗೆ ಅನರ್ಪಿತವುಂಟೆ?
ಜ್ಯೋತಿಯ ಬೆಳಗಿನಲ್ಲಿದ್ದವಂಗೆ ಕತ್ತಲೆಯ ಹಂಗುಂಟೆ?
ಅಮುಗೇಶ್ವರಲಿಂಗವಾದವಂಗೆ [ಅ]ಂಗದ ಹಂಗುಂಟೆ? || ೨೪ ||

೧೨೮೫
ಮುಂಡದಲ್ಲಿ ತಿರುಗುವವರು ಕೋಟ್ಯನುಕೋಟಿ;
ತಲೆಯಲ್ಲಿ ತಿರುಗುವವರನಾರನೂ ಕಾಣೆ.
ಅಂಗದಲ್ಲಿಪ್ಪ ಮಲಿನವ ಕಳೆವರು ಕೋಟ್ಯನುಕೋಟಿ;
ಮನದಲ್ಲಿಪ್ಪ ಮಲಿನವ ಕಳೆವವರನಾರನೂ ಕಾಣೆ,
ಅಮುಗೇಶ್ವರಾ. || ೨೫ ||

೧೨೮೬
ಮೂಗಿಲ್ಲದವಂಗೆ ಕನ್ನಡಿಯ ತೋರಲೇಕೆ?
ಕೈಯಿಲ್ಲದವಂಗೆ ಕುದುರೆಯನೇರಲೇಕೆ?

ಕಾಲಿಲ್ಲದವಂಗೆ ನಿಚ್ಚಣಿಗೆಯನೇರಲೇಕೆ?
ಭಕ್ತಿ ಜ್ಞಾನ ವೈರಾಗ್ಯವಿಲ್ಲದವಂಗೆ ಇಷ್ಟಲಿಂಗವೇಕೆ
ಅಮುಗೇಶ್ವರಾ? || ೨೬ ||

೧೨೮೭
ವಿರಕ್ತನಾದ ಬಳಿಕ ವಿಷಯಕ್ಕೆ ದೂರನಾಗಿರಬೇಕು.
ಒಣಗಿದ ಮರನ ವಾಯು ಅಪ್ಪಿದಂತಿರಬೇಕು.
ಸಮುದ್ರದೊಳಗೆ ತರುಗಿರಿಗಳು ಮುಳುಗಿದಂತಿರಬೇಕು.
ಮೂಗ ಕಂಡ ಕನಸಿನಂತಿರಬೇಕು.
ಜಾಲಗಾರ ಕಂಡ ರತ್ನದಂತಿರಬಲ್ಲಡೆ, ವಿರಕ್ತನೆಂಬೆನು.
ಹೀಂಗಲ್ಲದೆ, ಅರಿವುಳ್ಳವರೆಂದು
ತಮ್ಮ ಅಗಮ್ಯವ ಬೀರುವ ಅಜ್ಞಾನಿಯ
ಭಕ್ತನೆಂದಡೆ, ಮಾಹೇಶ್ವರನೆಂದಡೆ, ಪ್ರಸಾದಿಯೆಂದಡೆ,
ಪ್ರಾಣಲಿಂಗಿಯೆಂದಡೆ, ಶರಣನೆಂದಡೆ, ಐಕ್ಯನೆಂದಡೆ
ಅಘೋರನರಕ ತಪ್ಪದು ಕಾಣಾ, ಅಮುಗೇಶ್ವರಲಿಂಗವೆ. || ೨೭ ||

೧೨೮೮
ವೇಷವ ತೊಟ್ಟು ಗ್ರಾಸಕ್ಕೆ ತಿರುಗುವ
ವೇಷಧಾರಿಗಳ ಕಂಡಡೆ ನಾಚಿತ್ತೆನ್ನ ಮನ.
ಲಿಂಗವನರಿಯದೆ ಲಿಂಗೈಕ್ಯರೆಂಬ
ಅಂಗವಿಕಾರಿಗಳ ಕಂಡಡೆ ಹೊದ್ದದು ಎನ್ನ ಮನ.
ಅರಿದು ಆಚರಿಸಿದೆನೆಂಬ ಅಜ್ಞಾನಿಗಳ ಕಂಡಡೆ
ಮೃಡನ ಶರಣರು ಮೆಚ್ಚುವರೆ?
ಅಮುಗೇಶ್ವರಲಿಂಗವನರಿಯದಿರ್ದಡೆ
ಎಂತು ಲಿಂಗೈಕ್ಯರೆಂಬೆನಯ್ಯಾ? || ೨೮ ||

೧೨೮೯
ಹೆದರದಿರು ಮನವೆ, ಹಿಮ್ಮೆಟ್ಟದಿರು ಮನವೆ,
ಹಿಡಿದ ಛಲವ ಬಿಡದಿರು ಮನವೆ.
ಜರಿದರೆಂದು ಝುಂಕಿಸಿದರೆಂದು
ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧದಲ್ಲಿ ಘಟವ ಬಿಡದೆ,
ಗುರುವಾಡದು ಲಿಂಗವಾದಡು ಜಂಗಮವಾದಡು
ನೊಸಲಲ್ಲಿ ಕಣ್ಣುಳ್ಳ ಪಶುಪತಿಯಾದಡು
ತೆತ್ತಿಗರು ಕಂಡು ಒತ್ತಿ ನುಡಿದರೆಂದು ಘಟವ ಬಿಡುವ ಕರ್ಮಿಗಳು
ಏಳೇಳು ಜನ್ಮದಲ್ಲಿ ಸೂಕರನ ಹೊಟ್ಟೆಯಲ್ಲಿ ಹುಟ್ಟಿ,

ನೂರೊಂದು ಕುಲ ಹದಿನೆಂಟು ಜಾತಿಯ ಅಮೇಧ್ಯವ ತಿಂದು
ಹೊಲೆಯರ ಮನೆಯ ಹೊಸ್ತಿಲ ಕಾಯ್ದುಕೊಂಡಿಪ್ಪರಯ್ಯ,
ಅಮುಗೇಶ್ವರಲಿಂಗವೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. || ೨೯ ||

೧೨೯೦
ಹೊನ್ನ ಬಿಟ್ಟಡೇನು, ಹೆಣ್ಣ ಬಿಟ್ಟಡೇನು, ಮಣ್ಣ ಬಿಟ್ಟಡೇನು,
ವಿರಕ್ತನಾಗಬಲ್ಲನೆ?
ಆದ್ಯರ ವಚನಂಗಳ ಹತ್ತುಸಾವಿರವ ಲೆಕ್ಕವಿಲ್ಲದೆ ಓದಿದಡೇನು,
ನಿತ್ಯನಾಗಬಲ್ಲನೆ?
ಮಂಡೆಯ ಬೋಳಿಸಿಕೊಂಡು ಅಂದಚಂದಕೆ ತಿರುಗುವ
ಜಗಭಂಡರ ಮೆಚ್ಚುವನೆ, ಅಮುಗೇಶ್ವರಲಿಂಗವು? || ೩೦ ||

*

ಆಯ್ದಕ್ಕಿ ಲಕ್ಕಮ್ಮ

೧೨೯೧
ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?
ಬೆಟ್ಟ ಬಲ್ಲಿತ್ತೆಂದಡೆ,
ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?
ಘನಶಿವಭಕ್ತರಿಗೆ ಬಡತನವಿಲ್ಲ; ಸತ್ಯರಿಗೆ ದುಷ್ಕರ್ಮವಿಲ್ಲ.
ಎನಗೆ ಮಾರಯ್ಯಪ್ರಿಯ ಅಮರೇಶ್ವರಲಿಂಗವುಳ್ಳನ್ನಕ್ಕ
ಆರ ಹಂಗಿಲ್ಲ ಮಾರಯ್ಯಾ. || ೧ ||

೧೨೯೨
ಆವ ಬೀಜವು ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ?
ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.
ನೀ ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ?
ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ
ಅರಿವಿಂಗೆ ಬೇರೊಂದೊಡಲುಂಟೆ?
ಬೇರೊಂದಡಿಯಿಡದಿರು,
ಮಾರಯ್ಯಪ್ರಿಯ ಅಮರೇಶ್ವರಲಿಂಗವನರಿಯಬಲ್ಲಡೆ. || ೨ ||

೧೨೯೩
ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ.
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ. || ೩ ||

೧೨೯೪
ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ,
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದ ಭಕ್ತಿ. || ೪ ||

೧೨೯೫
ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ?
ಭಕ್ತರು ಬಡವರೆಂದು ಮತ್ತೊಂದ ಕೊಟ್ಟೆಹೆನೆಂದಡೆ,
ಮಾರಯ್ಯಪ್ರಿಯ ಅಮರೇಶ್ವಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ. || ೫ ||

೧೨೯೬
ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು
ದಾಸೋಹವ ಮಾಡಬಹುದೆ?
ಒಮ್ಮನವ ತಂದು ಒಮ್ಮನದಲ್ಲಿಯೇ ಮಾಡಿ
ಇಮ್ಮನವಾಗದ ಮುನ್ನವೆ
ಮಾರಯ್ಯಪ್ರಿಯ ಅಮರೇಶ್ವಲಿಂಗಕ್ಕೆ
ಸಲಬೇಕು ಮಾರಯ್ಯಾ. || ೬ ||

೧೨೯೭
ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು,
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ. || ೭ ||

*

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

೧೨೯೮
ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;
ಸತ್ಯಶುದ್ಧವಿಲ್ಲದುದು ಕಾಯಕವಲ್ಲ.
ಆಸೆಯೆಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯಮುಕ್ತಿ.
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ. ॥ ೧ ॥

೧೨೯೯
ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
ನಿಂದಯಾ ಶಿವಭಕ್ತಾನಾಂ ಕೋಟಿಜನ್ಮನಿ ಸೂಕರಃ।
ಸಪ್ತಜನ್ಮನಿ ಭವೇತ್ ಕುಷ್ಠೀ ದಾಸೀಗರ್ಭೇಷು ಜಾಯತೇ॥
ಎಂದುದಾಗಿ, ತನ್ನ ಪ್ರಾಣದ ಮೇಲೆ ಬಂದಡೂ ಬರಲಿ, ಇವರ ಬಿಡಬೇಕು.
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ. ॥ ೨ ॥

೧೩೦೦
ಭಾಗ್ಯವುಳ್ಳ ಪುರುಷಂಗೆ
ಕಾಮಧೇನು ಕಾಮಿಸಿದುದನೀವುದಯ್ಯಾ,
ನಿರ್ಭಾಗ್ಯ ಪುರುಷಂಗೆ
ಕಾಮಧೇನು ತುಡುಗುಣಿಯಾಗಿ ತೋರುವುದಯ್ಯಾ.
ಸತ್ಯಪುರುಷಂಗೆ
ಕಲ್ಪವೃಕ್ಷ ಕಲ್ಪಿಸಿದುದನೀವುದಯ್ಯಾ,
ಅಸತ್ಯಪುರುಷಂಗೆ
ಕಲ್ಪವೃಕ್ಷ ಬೊಬ್ಬುಲಿಯಾಗಿ ತೋರುವುದಯ್ಯಾ.
ಧರ್ಮಪುರುಷಂಗೆ
ಚಿಂತಾಮಣಿ ಚಿಂತಿಸಿದುದನೀವುದಯ್ಯಾ,
ಅಧರ್ಮ ಪುರುಷಂಗೆ
ಚಿಂತಾಮಣಿ ಗಾಜಿನ ಮಣಿಯಾಗಿ ತೋರುವುದಯ್ಯಾ.
ಶ್ರೀಗುರು ಕಾರುಣ್ಯವುಳ್ಳ ಸದ್ಭಕ್ತಂಗೆ

ಜಂಗಮ ಲಿಂಗವಾಗಿ ತೋರುವುದಯ್ಯಾ,
ಭಕ್ತನಲ್ಲದ ಪಾಪಿಷ್ಠಂಗೆ ಜಂಗಮಲಿಂಗ
ಮಾನವನಾಗಿ ತೋರುವುದಯ್ಯಾ,
ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ. || ೩ ||

೧೩೦೧
ವ್ರತವೆಂಬುದು ನಾಯಕರತ್ನ;
ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವನ ಕಳೆ;
ವ್ರತವೆಂಬುದು ಸುಯಿದಾನ.
ವ್ರತ ತಪ್ಪಲು, ಉರಿಲಿಂಗಪೆದ್ದಿಗಳರಸನೊಲ್ಲನವ್ವಾ. || ೪ ||

*

ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

೧೩೦೨
ಕಾಗೆಯ ನಾಯ ತಿಂದವರಿಲ್ಲ;
ವ್ರತಭ್ರಷ್ಟನ ಕೂಡಿದವರಿಲ್ಲ.
ನಾಯಿಗೆ ನಾರಂಗವಕ್ಕುವುದೆ?
ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕಲ್ಲದೆ?
ನೀವೇ ಸಾಕ್ಷಿ ನಿಜಗುಣೇಶ್ವರಲಿಂಗದಲ್ಲಿ. || ೧ ||

*

ಕದಿರ ರೆಮ್ಮವ್ವೆ

೧೩೦೩
ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ:
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು,
ನಿಂದ ಬೊಂಬೆ ಮಹಾರುದ್ರ,
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ.
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,

ಸುತ್ತಿತ್ತು ನೂಲು, ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ, ಎನ್ನ ಗಂಡ ಕುಟ್ಟಿಹ.
ಇನ್ನೇವೆ, ಕದಿರ ರೆಮ್ಮಿಯೊಡೆಯ ಗುಮ್ಮೆಶ್ವರಾ? ॥ ೧ ॥

*

ಕನ್ನಡಿಕಾಯಕದ ರೇಮಮ್ಮ

೧೩೦೪
ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?
ಲಿಂಗಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?
ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನಿಕ್ಕುವೆ.
ಮುಂಡಿಗೆಯನೆತ್ತಿರೊ ಭ್ರಷ್ಟ ಭವಿಗಳಿರಾ!
ಎತ್ತಲಾರದಡೆ ಸತ್ತ ಕುನ್ನಿಯ ಬಾಲವ,
ನಾಲಗೆ ಮುರುಟಿರೋ ಸದ್ಗುರುಸಂಗ ನಿರಂಗಲಿಂಗದಲ್ಲಿ. ॥ ೧ ॥

*

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

೧೩೦೫
ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯಲುಂಟೆ?
ನೀ ಬೆರೆದಡೂ ಬೆರೆ; ನಾನೊಲ್ಲೆ ನಿಜಶಾಂತೇಶ್ವರಾ. ॥ ೧ ॥

*

ಕಾಲಕಣ್ಣಿಯ ಕಾಮಮ್ಮ

೧೩೦೬
ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ,
ಗುರುಲಿಂಗಜಂಗಮದ ಕಾಲ ಕಟ್ಟುವೆ,
ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರುತುರನೆ ತೂರುವೆ,
ನಿರ್ಭೀತಿ ನಿಜಲಿಂಗದಲ್ಲಿ! ॥ ೧ ॥

*

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

೧೩೦೭
ಆಯುಷ್ಯತೀರಲು ಮರಣ,
ವ್ರತ ತಪ್ಪಲು ಶರೀರ ಕಡೆ.
ಮೇಲುವ್ರತವೆಂಬ ತೂತರ ಮೆಚ್ಚ
ನಮ್ಮ ಅಗಜೇಶ್ವರಲಿಂಗವು. ॥ ೧ ॥

*

ಕೊಟ್ಟಣದ ಸೋಮಮ್ಮ

೧೩೦೮
ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ,
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದುದು ಹೋಗಲಿ, ಅರಿದು ಬೆರೆದೆನಾದಡೆ,
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ.
ಒಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ. ॥ ೧ ॥

*

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

೧೩೦೯
ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು,
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ?
ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು,
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ?

ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ?
ಇದು ಕಾರಣ, ಪರಂಜ್ಯೋತಿ ಪರಮಕರುಣಿ
ಪರಮಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು,
ಮರೆದಡೆ ಕಾಣಬಾರದು.
ಅರಿವಿಂದ ಕಂಡೊದಗಿದ ಸುಖವು
ಮಸಣಯ್ಯಪ್ರಿಯ ಗಜೇಶ್ವರಾ. ॥ ೧ ॥

*

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

೧೩೧೦
ಹದ ಮಣ್ಣಲ್ಲದೆ ಮಡಕೆಯಾಗಲಾರದು.
ವ್ರತಹೀನನ ಬೆರೆಯಲಾಗದು.
ಬೆರೆದಡೆ ನರಕ ತಪ್ಪದು ;
ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ. ॥ ೧ ॥

*

ಗೊಗ್ಗವ್ವೆ

೧೩೧೧
ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು?
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ. ॥ ೧ ॥

೧೩೧೨
ಮೊಲೆ [ಮೂ]ಡಿ ಬಂದಡೆ ಹೆಣ್ಣೆಂಬರು.
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ? ॥ ೨ ॥

*

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

೧೩೧೩
ಚರಣಾಯುಧ ವೇಳೆಯನರಿವುದಯ್ಯಾ.
ಭಕ್ತ ವ್ರತಹೀನನನರಿದು ನೆರೆಯನಯ್ಯಾ.
ನೆರೆದಡೆ ನರಕ, ಗುರುಶಾಂತೇಶ್ವರಾ. ॥ ೧ ॥

*

ದುಗ್ಗಳೆ

೧೩೧೪
ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುದೇವರಂತಾಗಬೇಕು.
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು.
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥಾ? ॥ ೧ ॥

*

ನಾಗಲಾಂಬಿಕೆ

೧೩೧೫
ಮನದೊಡೆಯ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು.
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ.
ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ.
ಬಸವ[ಣ್ಣ]ಪ್ರಿಯ ಚೆನ್ನಸಂಗಯ್ಯನು
ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು. ॥ ೧ ॥

*

ನೀಲಮ್ಮ

೧೩೧೬

ಆಗಿಂಗೆ ಮುಯ್ಯಾನದಿರು, ಚೇಗಿಂಗೆ ಬೆಂಬೀಳದಿರು,
ಆಹಾ ಮನವೆ, ಸಂತೈಸಿಕೊ ನಿನ್ನ ನೀನೆ.
ಆಗೆಂದಡೆ ನಿನ್ನ ವಶವಲ್ಲ; [ಚೇ]ಗೆಂದಡೆ ನಿನ್ನಿಚ್ಛೆಯಲ್ಲ,
ಭೋಗಾದಿಭೋಗಂಗಳೆಲ್ಲವು ಸಂಗಯ್ಯನಧೀನವಾಗಿ. ॥ ೧ ॥

೧೩೧೭

ಎಲೆಗಳೆದ ಮರದಲ್ಲಿ ನೆಳಲನರಸಲಿಲ್ಲ.
ಕಳೆಯರತ ದೀಪದಲ್ಲಿ ಬೆಳಗನರಸಲಿಲ್ಲ.
ಕುರುಹಳಿದ ಮೂರ್ತಿಯಲ್ಲಿ ರೂಪನರಸಲಿಲ್ಲ.
ಶಬ್ದವಡಗಿ ನಿಶ್ಶಬ್ದನಾದ ಬಸವನಲ್ಲಿ ಶಬ್ದವನರಸಲಿಲ್ಲ.
ಸಂಗಯ್ಯನಲ್ಲಿ ಕಾಯವಿಲ್ಲದ ಕರುಣೆಯಾದೆ ನಾನು. ॥ ೨ ॥

೧೩೧೮

ಪಾರ್ವತಿಯ ರೂಪ ಕಂಡು ಪರಶಿವನ ಸಂಗ ನಿಸ್ಸಂಗವಾಗಿ,
ತಾಯಿ ಮಗನಂಗದಿಂದ ತನುವಳಿದು ನಿರಾಭಾರರೂಪವನೆಯ್ದಿ,
ಬಸವನ ಅನುಭವದಿಂದ ವಿವರವ ಕಂಡು
ವಿಚಾರಪತ್ನಿಯಾದೆನಯ್ಯಾ ಸಂಗಯ್ಯಾ. ॥ ೩ ॥

*

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ

೧೩೧೯

ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ?
ನೆರೆದಡೆ ನರಕವಯ್ಯಾ ನಿಂಬೇಶ್ವರಾ. ॥ ೧ ॥

*

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೧೩೨೦

ಕಾಯಕ ತಪ್ಪಿದಡೆ ಸೈರಿಸಬಾರದು,
ವ್ರತ ತಪ್ಪಲೆಂತೂ ಸೈರಿಸಬಾರದು,
ಕರ್ಮಹರ ಕಾಳೇಶ್ವರಾ. ॥ ೧ ॥

೧೩೨೧

ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ,
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ,
ವ್ರತಹೀನನ ನೆರೆಯಲು ನರಕಕ್ಕೆ ಮೂಲ,
ಕರ್ಮಹರ ಕಾಳೇಶ್ವರಾ. ॥ ೨ ॥

*

ಬೊಂತಾದೇವಿ

೧೩೨೨

ಊರೊಳಗಣ ಬಯಲು,
ಊರ ಹೊರಗಣ ಬಯಲೆಂದುಂಟೆ?
ಊರೊಳಗಣ ಬ್ರಾಹ್ಮಣ ಬಯಲು
ಊರ ಹೊರಗಣ ಹೊಲೆಯ ಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೇ,
ಭಿತ್ತಿಯಿಂದೊಳಹೊರಗೆಂಬ ನಾಮವೈಸೆ.
ಎಲ್ಲಿನೋಡಿ ಕರೆವಡೆ ಓ ಎಂಬಾತನೆ ಬಿಡಾಡಿ. ॥ ೧ ॥

*

ಮುಕ್ತಾಯಕ್ಕ

೧೩೨೩

ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು.
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು.
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ.

ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ
ಆರೂಢಗೆಟ್ಟೆಯೊ ಅಜಗಣ್ಣಾ. ॥ ೧ ॥

೧೩೨೪
ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು.
ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು.
ನಾನೆಂತು ಬದುಕುವೆನಣ್ಣಾ?
ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು.
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣಾ, ನಿನ್ನ ಯೋಗ! ॥ ೨ ॥

೧೩೨೫
ಅಲರೊಳಗಡಗಿದ ಪರಿಮಳದಂತೆ,
ಪತಂಗದೊಳಡಗಿದ ಅನಲನಂತೆ,
ಶಶಿಯೊಳಡಗಿದ ಷೋಡಶಕಳೆಯಂತೆ,
ಉಲುಹ[ಲ]ಡಗಿದ ವಾಯುವಿನಂತೆ,
ಸಿಡಿಲೊಳಡಗಿದ ಗಾತ್ರದ ತೇಜದಂತೆ
ಇರಬೇಕಯ್ಯಾ ಯೋಗ, ಎನ್ನ ಅಜಗಣ್ಣತಂದೆಯಂತೆ. ॥ ೩ ॥

೧೩೨೬
ಅಹುದಹುದು ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.
ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ,
ಉರಿಯೊಳಗಡಗಿದ ಕರ್ಪುರದಂತೆ, ಬಯಲನಪ್ಪಿದ ವಾಯುವಿನಂತೆ
ಇಪ್ಪ ನಿಲವು, ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ?
ಅರಿವೊಡೆ ಮತಿಯಿಲ್ಲ, ನೆನೆವೊಡೆ ಮನವಿಲ್ಲ;
ಎನ್ನ ಅಜಗಣ್ಣತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ
ನಮೋ ನಮೋ ಎನುತಿರ್ದೆನು. ॥ ೪ ॥

೧೩೨೭
ತನ್ನ ತಾನರಿದವಂಗೆ ಅರಿವೆ ಗುರು.
ಅರಿವರತು ಮರಹು ನಷ್ಟವಾದಲ್ಲಿ, ದೃಷ್ಟನಷ್ಟವೆ ಗುರು.
ದೃಷ್ಟನಷ್ಟವೆ ಗುರು ತಾನಾದಲ್ಲಿ,
ಮುಟ್ಟಿ ತೋರಿದವರಿಲ್ಲದಡೇನು?
ಸಹಜವ ನೆಲೆಗೊಳಿಸುವ ನಿರ್ಣಯ ನಿಷ್ಪತ್ತಿಯೆ ಗುರು ನೋಡಾ.
ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ. ॥ ೫ ॥

೧೩೨೮
ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ,
ಬಯಲಬೊಂಬೆಯ ಕೈಯಲ್ಲಿ ಕೊಟ್ಟು,
ಮುದ್ದಾಡಿಸುತ್ತಿರ್ದೆನಯ್ಯಾ.
ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕೆ,
ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದೆನಯ್ಯಾ,
ಎನ್ನ ಅಜಗಣ್ಣನ ಯೋಗಕ್ಕೆ. || ೬ ||

೧೩೨೯
ನುಡಿಯಲುಬಾರದು ಕೆಟ್ಟ ನುಡಿಗಳ.
ನಡೆಯಲುಬಾರದು ಕೆಟ್ಟ ನಡೆಗಳ.
ನುಡಿದಡೇನು, ನುಡಿಯದಿರ್ದಡೇನು?
ಹಿಡಿದ ವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣತಂದೆ. || ೭ ||

೧೩೩೦
ಸಿಡಿಲುಹೊಯ್ದ ಬಾವಿಗೆ ಸೋಪಾನವುಂಟೆ?
ಷಡುವರ್ಣರಹಿತಂಗೆ ಬಣ್ಣವುಂಟೆ?
ಕಡಲದಾಂಟಿದವಂಗೆ ಹರುಗೋಲುಂಟೆ?
ಬಿಡದೆ ಕಟ್ಟಿದ ಒರೆಗೆ ಸಂಧಾನವುಂಟೆ?
ಒಡಲಿಲ್ಲದವಂಗೆ ಒಡವೆಯುಂಟೆ?
ನುಡಿಯುಂಟೆ ಎಮ್ಮ ಅಜಗಣ್ಣದೇವಂಗೆ? || ೮ ||

೧೩೩೧
ಸಿಡಿಲುಹೊಯ್ದ ಬಾವಿಗೆ ಸೋಪಾನವೇಕೊ?
ನೆರೆಯರಿದ ಬಳಿಕ ಮತ್ತೆ ಮತಿ ಹುಟ್ಟಲುಂಟೆ?
ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೊ?
ತನ್ನಲ್ಲಿ ತಾನು ತದ್ಗತವಾದ ಬಳಿಕ
ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ನೋಡಾ,
ಎನ್ನ ಅಜಗಣ್ಣತಂದೆಗೆ. || ೯ ||

*

ಮೋಳಿಗೆ ಮಹಾದೇವಿ

೧೩೩೨
ಊರ್ವಸಿ ಕರ್ಪೂರವ ತಿಂದು
ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರಲ್ಲದೆ,
ಹಂದಿ ಕರ್ಪೂರವ ತಿಂದು
ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರೆ?
ಹುಡುಹುಡು ಎಂದಟ್ಟುವರಲ್ಲದೆ!
ನಡೆನುಡಿ ಶುದ್ಧವುಳ್ಳವರು ಪುರಾತನರ ವಚನವ ಓದಿದಡೆ
ಅನುಭಾವವ ಮಾಡಿದಡೆ ಮೆಚ್ಚುವರಲ್ಲದೆ,
ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ
ಅನುಭಾವವ ಮಾಡಿದಡೆ ಮೆಚ್ಚುವರೆ?
ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ
ಆ ಹಂದಿಗಿಂದ ಕರಕಷ್ಟ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥ ೧ ॥

೧೩೩೩
ಎಸುವರ ಬಲ್ಲೆ;
ಎಚ್ಚ ಬಾಣ ತಿರುಗಿ ಬಪ್ಪಂತೆ ಎಸುವರ ಕಾಣೆ.
ಪೂಜಿಸುವರ ಬಲ್ಲೆ;
ಪೂಜಿಸಿದ ಲಿಂಗ ಅಭಿಮುಖವಾಗಿ
ಸರ್ವಾಂಗದಲ್ಲಿ ವೇಧಿಸುವರ ಕಾಣೆ.
ನುಡಿಗೆ ನಡೆ, ಆ ನಡೆಗೆ ನುಡಿ
ಉಭಯವ ವೇಧಿಸುವರ ಕಾಣೆ.
ಈ ಉಭಯವು ಸಿದ್ಧಿಯಾಗಿ ಸಿದ್ಧಾಂತವಾದಲ್ಲಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನು
ಕ್ರೀಜ್ಞಾನ ನಿರತವಾದವಂಗಲ್ಲದೆ ಸಾಧ್ಯವಿಲ್ಲ. ॥ ೨ ॥

೧೩೩೪
ಕಲ್ಲ ಬಿತ್ತಿ ನೀರನೆರೆದಲ್ಲಿ
ಪಲ್ಲವಿಸುವುದೆ ದಿಟದ ಬೀಜದ ವೃಕ್ಷದಂತೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ಇಲ್ಲದಲ್ಲಿ
ಗುರುಭಕ್ತಿ, ಶಿವಲಿಂಗಪೂಜೆ, ಚರಸೇವೆ

- ತ್ರಿವಿಧ ಇತ್ತಲೆ ಉಳಿಯಿತ್ತು.
ಮತ್ತೆ ನಿಜವಸ್ತುವಿನ ಸುದ್ದಿ ನಿಮಗೆತ್ತಣದೊ?
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ
ವಿಶ್ವಾಸಬೇಕು. ॥ ೩ ॥

೧೩೩೫
ಕಾಣಿಗೆ ಹೋರಿ ಕಡವರವ ನೀಗಲೇತಕ್ಕೆ?
ಅಲುಗಾಡಿ ತುಂಬಿದ ಕೊಡನ ಹೊಡೆಗೆಡಹಲೇತಕ್ಕೆ?
ನಿನ್ನಂಗದಲ್ಲಿ ಗುರುಕೊಟ್ಟ ಲಿಂಗವೆಂಬುದೊಂದು ಕುರುಹು ಇರುತ್ತಿರಲಿಕ್ಕೆ,
ಆ ನಿಜಲಿಂಗದ ಸಂಗವನರಿಯದೆ,
ಸಂದಿಗೊಂದಿಯಲ್ಲಿ ಹೊಕ್ಕೆಹೆನೆಂಬ ಗೊಂದಣವೇತಕ್ಕೆ?
ತಾ ನಿಂದಲ್ಲಿ ಕೆಡಹಿದ ಒಡವೆಯ, ಆಚೆಯಲ್ಲಿ ನೆನೆದು ಅರಸಿದಡಿಲ್ಲ.
ಅದು ಮತ್ತೆ ತನಗೆ ಸಂಧಿಸುವುದೆ?
ಘನಲಿಂಗ ನಿನ್ನಂಗದಲ್ಲಿದ್ದಂತೆ ಕಂಡೆ, ಕಾಣೆನೆಂಬ
ನಿನ್ನ ನಿಜ ನಿಂದಲ್ಲಿಯೆ ಸಂದೇಹವ ತಿಳಿದುಕೋ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥ ೪ ॥

೧೩೩೬
ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ?
ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ?
ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ?
ನಿತ್ಯ ಅನಿತ್ಯವ ತಿಳಿದು,
ಮರ್ತ್ಯ - ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ.
ನಿಶ್ಚಯವ ತಾನರಿತು ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ,
ಆ ಬಚ್ಚಬಯಲ ಬೆಳಗ ನಿನ್ನ ನೀನೆ ನೋಡಿಕೋ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥ ೫ ॥

೧೩೩೭
ದುಕೂಲ ಮುಂತಾದ ವಸ್ತ್ರಂಗಳಲ್ಲಿ,
ಹೇಮ ಮುಂತಾದ ಆಭರಣಂಗಳಲ್ಲಿ,
ಮೌಕ್ತಿಕ ರತ್ನ ಮುಂತಾದ ಪಾಷಾಣಂಗಳಲ್ಲಿ,
ಚಂದನ ಗಂಧ ಮುಂತಾದ ಸುವಾಸನೆಯಲ್ಲಿ,
ಅಂದಳ ಛತ್ರ ಚಾಮರ ಕರಿ ತುರಗಂಗಳು ಮುಂತಾದ
ತಾನು ಸೋಂಕುವ ವೈಭವ ಮುಂತಾದ

ಸಕಲಸುಖಂಗಳು ಲಿಂಗಕ್ಕೆಂದು ಕಲ್ಪಿಸಿ,
ಅಂಗೀಕರಿಸುವವನಿರವು ವಾರಿಶಿಲೆ ನೋಡನೋಡಲಿಕ್ಕೆ ನೀರಾದ ತೆರದಂತೆ,
ಅಂಬರದ ವರ್ಣ ನಾನಾ ಚಿತ್ರದಲ್ಲಿ ಸಂಭ್ರಮಿಸಿ
ಕಂಗಳು ಮುಚ್ಚಿ ತೆರೆವುದಕ್ಕೆ ಮುನ್ನವೆ
ಅದರಂದದ ಕಳೆ ಅಳಿಯದಂತಿರಬೇಕು.
ಇದು ಲಿಂಗಭೋಗೋಪಭೋಗಿಯ ಸಂಗದ ಸುಖ,
ನಿರಂಗದ ನಿಶ್ಚಯ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಲಿಂಗದಲ್ಲಿ
ವಿರಳವಿಲ್ಲದ ಪರಮಸುಖ. || ೬ ||

೧೩೩೮
ನೀರು ನೆಲನಿಲ್ಲದೆ ಇರಬಹುದೆ?
ಬೀಜ ನೆಲೆಯಿಲ್ಲದೆ ಹುಟ್ಟಬಹುದೆ?
ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ?
ಚಿತ್ತ ಚಿತ್ತುವಿಲ್ಲದೆ ವಸ್ತುವ ಲಕ್ಷಿಸಿ ಗ್ರಹಿಸಬಲ್ಲುದೆ?
ಇಂತೀ ಕ್ರೀ ಜ್ಞಾನ ಸಂಬಂಧ ಸ್ಥಲಭಾವ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ
ಉಭಯಸ್ಥಲಭೇದ. || ೭ ||

೧೩೩೯
ನುಡಿದ ನುಡಿಯೆಲ್ಲವು ಮಹಾಪ್ರಸಂಗವಾದ ಮತ್ತೆ
ಲೆಕ್ಕವಿಲ್ಲದ ವೇದ, ಸಂಖ್ಯೆಯಿಲ್ಲದ ಶಾಸ್ತ್ರ,
ಕಡೆ ನಡು ಮೊದಲಿಲ್ಲದ ಪುರಾಣವನೋದಲೇತಕ್ಕೆ?
ಅಲಗು ಮರೆ ಉಳ್ಳವಂಗೆ ಶಸ್ತ್ರದ ಭಯವೇತಕ್ಕೆ?
ಬಾಣದ ತೊಗಲುಳ್ಳವಂಗೆ ಅಂಬಿನ ಗಾಯವೇತಕ್ಕೆ?
ಶಬ್ದಮುಗ್ಧವಾದವಂಗೆ ಇಚ್ಛೆಯ ನುಡಿದು ಕುಚಿತ್ತನಾಗಲೇಕೆ?
ಅದು ತನ್ನ ಸ್ವಯದಿಂದ ಅಲ್ಲ-ಅಹುದೆಂಬುದಕ್ಕೆ ದೃಷ್ಟವಾಯಿತ್ತು.
ಬೆಳಗಿನ ಮುಖದಿಂದ ಬೆಳಗಿನ ಕಳೆಯನರಿವಂತೆ
ನಿನ್ನಿಂದ ನೀನೇ ತಿಳಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನ ಭಿನ್ನಭಾವವಿಲ್ಲದೆ. || ೮ ||

*

ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

೧೩೪೦
ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಕೋಲುಂಟೆ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ ಭಕ್ತಂಗುಂಟೆ?
ವ್ರತ ತಪ್ಪಲು, ಶರೀರವಿಡಿವ ನರಕಿಗೆ ಮುಕ್ತಿಯಿಲ್ಲ,
ಅಮುಗೇಶ್ವರಲಿಂಗದಲ್ಲಿ. ॥ ೧ ॥

*

ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ

೧೩೪೧
ಲಿಂಗಬಾಹ್ಯನ, ಆಚಾರಭ್ರಷ್ಟನ, ವ್ರತ ತಪ್ಪುಕನ,
ಗುರುಲಿಂಗಜಂಗಮವ ಕೊಂದವನ,
ಪಾದೋದಕ ಪ್ರಸಾದ ದೂಷಕನ,
ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ,
ಶಕ್ತಿಯುಳ್ಳಡೆ ಸಂಹಾರವ ಮಾಡುವುದು.
ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು
ಶಿವಮಂತ್ರ ಜಪಿಸುವುದು.
ಅಷ್ಟೂ ಆಗದಿದ್ದಡೆ, ಆ ಸ್ಥಳವ ಬಿಡುವುದು.
ಅದಲ್ಲದಿದ್ದಡೆ, ಕುಂಭೀಪಾತಕ ನಾಯಕನರಕದಲ್ಲಿಕ್ಕುವ
ಶ್ರೀಗುರುಸಿದ್ಧೇಶ್ವರನು. ॥ ೧ ॥

*

ಸತ್ಯಕ್ಕ

೧೩೪೨
ಅರ್ಚನೆ ಪೂಜನೆ ನೇಮವಲ್ಲ;
ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ, ನಿತ್ಯನೇಮ. ॥ ೧ ॥

೧೩೪೩

ಇನಿಯಂಗೆ ತವಕವಿಲ್ಲ; ಎನಗೆ ಸೈರಣೆಯಿಲ್ಲ.
ಮನದಿಚ್ಛೆಯನರಿವ ಸಖಿಯರಿಲ್ಲ, ಇನ್ನೇವೆನವ್ವಾ?
ಮನುಮಥವೈರಿಯ ಅನುಭಾವದಲ್ಲಿ
ಎನ್ನ ಮನ ಸಿಲುಕಿ ಬಿಡದು,
ಇನ್ನೇನ ಮಾಡುವೆನೆಲೆ ಕರುಣವಿಲ್ಲದ ತಾಯೆ?
ದಿನ ವೃಥಾ ಹೋಯಿತ್ತಾಗಿ,
ಯೌವ್ವನ ಬೀಸರವಾಗದ ಮುನ್ನ
ಪಿನಾಕಿಯ ನೆರಹವ್ವಾ ಶಂಭುಜಕ್ಕೇಶ್ವರನ! || ೨ ||

೧೩೪೪

ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು.
ವಾಯು ನುಂಗಿದ ಪರಿಮಳದಂತೆ ಲಿಂಗೈಕ್ಯವು.
ಉರಿಯೊಳಡಗಿದ ಕರ್ಪೂರದಂತೆ ಲಿಂಗೈಕ್ಯವು.
ಭಾವವನಡಸಿದ ಬಯಲಿನಂತೆ ಲಿಂಗೈಕ್ಯವು.
ಅರಿವು ನುಂಗಿದ ಮರಹಿನಂತೆ ಲಿಂಗೈಕ್ಯವು.
"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ"
ಎಂದುದಾಗಿ,
ವಾಙ್ಮನಕ್ಕೆ ಅಗೋಚರವಾದ ಮಹಾಶರಣನ ಒಳಗೊಂಡು
ಥಳಥಳಿಸಿ ಬೆಳಬೆಳಗಿ ಹೊಳೆವುತ್ತ,
ನಿಶ್ಶಬ್ದಬ್ರಹ್ಮವಾಗಿರ್ದನಯ್ಯಾ ನಮ್ಮ ಶಂಭುಜಕ್ಕೇಶ್ವರನು. || ೩ ||

೧೩೪೫

ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ?
ಏಕೆನ್ನ ಘೋರ ಸಂಸಾರದಲ್ಲಿರಿಸಿದೆ?
ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ?
ಏಕೆ ಹೇಳಾ ಎನ್ನ ಲಿಂಗವೆ? ಆನು ಮಾಡಿದ ತಪ್ಪೇನು?
ಸಾಕಲಾಗದೆಂದು ಅಕ್ಕೊತ್ತಿ ನೂಕಿದಡೆ
ಏಕೆ ನಾ ನಿಮ್ಮ ಬಿಡುವೆ ಶಂಭುಜಕ್ಕೇಶ್ವರಾ? || ೪ ||

೧೩೪೬

ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.

ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ. || ೫ ||

೧೩೪೭
ಭವಿಯ ಬೆರಸಿದ ಭಕ್ತಿ, ಹವಿಯ ಬೆರಸಿದ ಬೀಜ,
ಉದಕ ಬೆರಸಿದ ಎಣ್ಣೆಜ್ಯೋತಿ ಪ್ರಜ್ವಲಿಸುವುದೆ?
ಭವಿಯಲ್ಲ ಭಕ್ತನಲ್ಲ, ಹವಿಯಲ್ಲ ಬೀಜವಲ್ಲ, ಉದಕವಲ್ಲ ಎಣ್ಣೆಯಲ್ಲ!
ಒಡಲಿಚ್ಛೆಗೆ ಹೋಗಿ ಭವಿಯ ಮನೆಗೆ ತುತ್ತಿಡುವ
ನರಕಿಗಳಿಗೇಕೊಲಿವ ನಮ್ಮ ಶಂಭುಜಕ್ಕೇಶ್ವರನು? || ೬ ||

೧೩೪೮
ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ.
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ.
ಅದು ಜಗದ ಹಾಹೆ, ಬಲ್ಲವರ ನೀತಿಯಲ್ಲ.
ಏತರ ಹಣ್ಣಾದಡೂ ಮಧುರವೆ ಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ.
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ. || ೭ ||

೧೩೪೯
ಹೊರಗಿದ್ದಹನೆಂದು ನಾನು ಮರೆದು ಮಾತನಾಡಿದೆ;
ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು.
ತೆರಹಿಲ್ಲದಭವ ನುಡಿಗೆಡೆಗೊಡನು;
ಆತನ ಬಯಲಿಂಗೆ ಬೇಟಗೊಂಡೆನವ್ವಾ.
ನಾನೇನ ಮಾಡುವೆನೆಲೆ ತಾಯೆ,
ಮರೆದಡೆ ಎಚ್ಚರಿಸುವ ಕುರುಹಿಲ್ಲದ ಗಂಡನು.
ತನ್ನನರಿದಡೆ ಒಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರನು. || ೮ ||

*

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೧೩೫೦
ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ
ಸತ್ತ ನಾಯ, ಕಾಗೆಯ ಕಂಡಂತೆ.
ಅವರೊಡನೆ ನುಡಿಯಲಾಗದು ಭೀಮೇಶ್ವರಾ. || ೧ ||

*

ಸೂಳೆ ಸಂಕವ್ವೆ

೧೩೫೧
ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನನರಿದು ಬೆರೆದಡೆ,
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ.
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ. ॥ ೧ ॥

*

ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ

೧೩೫೨
ಅಂಗವ ಮರೆದವಂಗೆ ಲಿಂಗದ ಹಂಗೇಕೊ?
ಅರಿವ ಕಂಡವಂಗೆ ಕುರುಹಿನ ಹಂಗೇಕೊ?
ತಾನು ತಾನಾದವಂಗೆ ಧ್ಯಾನದ ಹಂಗೇಕೊ?
ಮನ ಮುಗ್ಧವಾದವಂಗೆ ಮಾನವರ ಹಂಗೇಕೊ?
ಆಸೆಯನಳಿದವಂಗೆ ರೋಷದ ಹಂಗೇಕೊ?
ಕಾಮನ ಸುಟ್ಟವಂಗೆ ಕಳವಳದ ಹಂಗೇಕೊ?
ನಡೆಗೆಟ್ಟವಂಗೆ ನುಡಿಯ ಹಂಗೇಕೊ?
ನಿಶ್ಚಿಂತನಾದವಂಗೆ ಉಚ್ಚರಣೆಯ ಹಂಗೇಕೊ?
ಬಯಲು ಬಯಲಾದವಂಗೆ ಭಾವದ ಹಂಗೇಕೊ?
ತನ್ನ ಮರೆದು ನಿಮ್ಮನರಿದ ಶರಣಂಗೆ ಅಲ್ಲಿಯೆ ಐಕ್ಯ ಕಂಡೆಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧ ॥

೧೩೫೩
ಅಂಗವೆಂದಡೆ ಲಿಂಗದೊಳಡಗಿತ್ತು;
ಲಿಂಗವೆಂದಡೆ ಅಂಗದೊಳಡಗಿತ್ತು.
ಅಂಗದೊಳಡಗಿದ ಲಿಂಗವನೆ ಕಂಗಳಲ್ಲಿ ಹೆರೆಹಿಂಗದೆ ನೋಡಿದಡೆ,
ಮಂಗಳದ ಮಹಾಬೆಳಗು ಕಾಣಿಸಿತ್ತು.
ಇಂತಪ್ಪ ಮಂಗಳದ ಮಹಾಬೆಳಗ ತೋರಿದ ಶರಣರಂಘ್ರಿಗೆ ಎರಗಿ
ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೨ ॥

೧೩೫೪
ಅಯ್ಯಾ, ನರರೊಳು ಹುಟ್ಟಿ,
ಮರಹಿನೊಳಗೆ ಬಿದ್ದವಳ ತಂದು,
ಮಹಾಶರಣರು ಎನಗೆ ಕುರುಹ ತೋರಿದರು.
ಗುರುವೆಂಬುದನರುಹಿದರು,
ಜಂಗಮವೆ ಜಗದ ಕರ್ತುವೆಂದರುಹಿದರು.
ಅವರ ನೆಲೆವಿಡಿದು ಮನವ ನಿಲಿಸಿದೆ,
ಕಾಯ ಜೀವವೆಂಬುದನರಿದೆ,
ಭವಬಂಧನವ ಹರಿದೆ, ಮನವ ನಿರ್ಮಲವ ಮಾಡಿದೆ.
ಬೆಳಗಿದ ದರ್ಪಣದಂತೆ ಚಿತ್ತ ಶುದ್ಧವಾದಲ್ಲಿ,
ನೀವು ಅಚ್ಚೊತ್ತಿದ್ದ ಕಾರಣದಿಂದ ನಿಮ್ಮ ಪಾದವಿಡಿದು
ನಾನು ನಿಜಮುಕ್ತಳಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೩ ॥

೧೩೫೫
ಅಯ್ಯಾ, ನಾನು ಬಂದ ಬಂದ ಭವಾಂತರದಲ್ಲಿ
ನೀವು ಕಡೆಹಾಯಿಸಿದಿರೆಂಬುದನರಿಯದೆ,
ಕಂಗಳಿಗೆ ಕನ್ನಡಿಯ ತೋರಿದಡೂ ನಿಮ್ಮ ಕಾಣದೆ ಇದ್ದೆನಯ್ಯಾ.
ಅದು ಕಾರಣದಿಂದ, ಮನಕ್ಕೆ ಪ್ರಾಣವಾಗಿ ಬಂದು ನಿಂದಿರಿ;
ತನುವಿಂಗೆ ರೂಪಾಗಿ ಬಂದು ಸುಳಿದಿರಿ.
ನಿಮ್ಮ ಸುಳುಹ ಕಾಣಲೊಡನೆ,
ಎನ್ನ ತನು ಕರಗಿ, ಮನ ಮಗ್ನವಾಯಿತ್ತು.
ಎನ್ನ ಮರಣಭಯ ಹಿಂಗಿತ್ತು; ಎನ್ನ ಕಾಯಗುಣ ಕೆಟ್ಟಿತ್ತು;
ಕರಣಗುಣ ಸುಟ್ಟಿತ್ತು; ಭಾವವಳಿಯಿತ್ತು; ಬಯಕೆ ಸವೆಯಿತ್ತು.
ಮಹಾದೇವನಾದ ಶರಣ ಚೆನ್ನಮಲ್ಲೇಶ್ವರನ ಪಾದವಿಡಿದು
ನಾ ನಿಜಮುಕ್ತಳಾದೆನಯ್ಯಾ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೪ ॥

೧೩೫೬
ಆಸೆಯನಳಿದು, ರೋಷವ ನಿಲಿಸಿ,
ಜಗದ ಪಾಶವ ಹರಿದು,
ಈಶ್ವರನೆನಿಸಿಕೊಂಬ ಶರಣರ
ಜಗದ ಹೇಸಿಗಳೆತ್ತಬಲ್ಲರು
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ? ॥ ೫ ॥

೧೩೫೭
ಆಸೆಯುಳ್ಳನ್ನಕ್ಕ ರೋಷ ಬಿಡದು;
ಕಾಮವುಳ್ಳನ್ನಕ್ಕ ಕಳವಳ ಬಿಡದು;
ಕಾಯಗುಣವುಳ್ಳನ್ನಕ್ಕ ಜೀವನ ಬುದ್ಧಿ ಬಿಡದು;
ಭಾವವುಳ್ಳನ್ನಕ್ಕ ಬಯಕೆ ಸವೆಯದು;
ನಡೆಯುಳ್ಳನ್ನಕ್ಕ ನುಡಿಗೆಡದು.
ಇವೆಲ್ಲವು ಮುಂದಾಗಿದ್ದು ಹಿಂದನರಿದೆನೆಂಬ
ಸಂದೇಹಿಗಳಿರಾ, ನೀವು ಕೇಳಿರೋ:
ನಮ್ಮ ಶರಣರು ಹಿಂದ ಹೇಗೆ ಅರಿದರೆಂದಡೆ-
ಆಸೆಯನಳಿದರು, ರೋಷವ ಹಿಂಗಿದರು;
ಕಾಮನ ಸುಟ್ಟರು, ಕಳವಳವ ಹಿಂಗಿದರು;
ಕಾಯಗುಣವಳಿದರು, ಜೀವನ ಬುದ್ಧಿಯ ಹಿಂಗಿದರು;
ಭಾವವ ಬಯಲುಮಾಡಿದರು, ಬಯಕೆಯ ಸವೆದರು.
ಹಿಂದನರಿದು ಮುಂದೆ ಲಿಂಗವೆ ಗೂಡಾದ ಶರಣರ
ಈ ಸಂದೇಹಿಗಳೆತ್ತ ಬಲ್ಲರು, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. || ೬ ||

೧೩೫೮
ಕಂಗಳ ಮುಂದೆ ಮಾಣಿಕವಿದ್ದು ಕಾಣಲೇಕರಿಯರಯ್ಯಾ?
ಬಾಗಿಲ ಮುಂದೆ ಹಾಲಸಾಗರವಿದ್ದು ಒರತೆಯ ನೀರಿಗೆ ಹಾರುವಂತೆ
ಕಂಗಳ ಮುಂದೆ ಮಹಾಶರಣನಿದ್ದು ಕತ್ತಲೆ ಎನಲೇಕೆ?
ಇನ್ನು ಬೇರೆ ಲಿಂಗವನರಸಿಹೆನೆನಲೇಕೆ?
ಆ ಮಹಾಶರಣ ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. || ೭ ||

೧೩೫೯
ಕಂಡಿಹೆ ಕೇಳಿಹೆನೆಂಬ ದ್ವಂದ್ವವ ಹಿಂಗಿ,
ಉಂಡಿಹೆ ಉಟ್ಟಿಹೆನೆಂಬ ಹಂಗ ಬಿಟ್ಟು,
ನಡೆದಿಹೆ ನುಡಿದಿಹೆನೆಂಬ ಮಾಟವ ನಿಲಿಸಿ, ಜಗದಾಟವ ನಿಲಿಸಿ,
ಮಾಟಕೂಟ ಜಪಕೋಟಲೆಯೊಳು ಸಿಕ್ಕದೆ ದಾಟಿ ಹೋದ
ಶರಣರ ಪಾದಕ್ಕೆ ಶರಣೆಂದು ಬದುಕಿದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. || ೮ ||

೧೩೬೦
ಕತ್ತಲೆ ಬೆಳಗೆಂಬುದಿಲ್ಲ ನಿತ್ಯನಾದವಂಗೆ.
ಚಿತ್ತ ಪರಚಿತ್ತವೆಂಬುದಿಲ್ಲ ವಸ್ತುವಿನ ನೆಲೆಯ ಕಂಡವಂಗೆ.
ನಿತ್ಯ ಅನಿತ್ಯವೆಂಬುದಿಲ್ಲ ಕರ್ತೃ ತಾನಾದವಂಗೆ.

ಈ ಮೂರರ ಗೊತ್ತುವಿಡಿದು ನಿಶ್ಚಿಂತನಾಗಿ ನಿರ್ವಯಲನೈದುವ
ಶರಣರ ಪಾದಕ್ಕೆ ಶರಣೆಂದು ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೯ ॥

೧೩೬೧
ಕೈಲಾಸ ಮರ್ತ್ಯಲೋಕ ಎಂಬರು.
ಕೈಲಾಸವೆಂದಡೇನೊ, ಮರ್ತ್ಯಲೋಕವೆಂದಡೇನೊ?
ಅಲ್ಲಿಯ ನಡೆಯೂ ಒಂದೆ,
ಇಲ್ಲಿಯ ನಡೆಯೂ ಒಂದೆ.
ಅಲ್ಲಿಯ ನುಡಿಯೂ ಒಂದೆ,
ಇಲ್ಲಿಯ ನುಡಿಯೂ ಒಂದೆ ಕಾಣಿರಯ್ಯಾ ಎಂಬರು.
ಕೈಲಾಸದವರೆ ದೇವರ್ಕಳೆಂಬರು,
ಮರ್ತ್ಯಲೋಕದವರೆ ಮಹಾಗಣಂಗಳೆಂಬರು.
ಸುರಲೋಕದೊಳಗೆ ಸಾಸಿರ ಕಾಲಕ್ಕಲ್ಲದೆ ಅಳಿದಿಲ್ಲವೆಂಬರು,
ನರಲೋಕದೊಳಗೆ ಸತ್ತು ಸತ್ತು ಹುಟ್ಟುತಿಹರೆಂಬರು.
ಇದ ಕಂಡು ನಮ್ಮ ಶರಣರು
ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ,
ಭವವ ದಾಂಟಿ ತಮ್ಮ ತಮ್ಮ ಹುಟ್ಟನರಿದು,
ಮಹಾಬೆಳಗನೆ ಕೂಡಿ, ಬೆಳಗಿನಲ್ಲಿ ಬಯಲಾದರಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೦ ॥

೧೩೬೨
ತನು ನಷ್ಟವಾದಡೇನಯ್ಯಾ, ಮನ ನಷ್ಟವಾಗದನ್ನಕ್ಕ?
ವಾಕ್ಕು ನಷ್ಟವಾದಡೇನಯ್ಯಾ, ಬೇಕು ಬೇಡೆಂಬುದಳಿಯದನ್ನಕ್ಕ?
ಅಂಗಸುಖ ನಷ್ಟವಾದಡೇನಯ್ಯಾ, ಕಂಗಳ ಪಟಲ ಹರಿಯದನ್ನಕ್ಕ?
ಮನ ಮುಗ್ಧವಾದಡೇನಯ್ಯಾ, ಅಹಂ ಎಂಬುದ ಬಿಡದನ್ನಕ್ಕ?
ಇವೆಲ್ಲರೊಳಗಿದ್ದು ವಲ್ಲಭನೆನಿಸಿಕೊಂಬವರ ನುಡಿಯ ಒಲ್ಲರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ. ॥ ೧೧ ॥

೧೩೬೩
ತನುವ ಕರಗಿಸಿ, ಹರಿವ ಮನವ ನಿಲಿಸಿ,
ಅಂಗಗುಣವ ಅಳಿದು, ಲಿಂಗಗುಣವ ನಿಲಿಸಿ,
ಭಾವವಳಿದು, ಬಯಕೆ ಸವೆದು,
ಮಹಾದೇವನಾದ ಶರಣರ
ಜಗದ ಮಾನವರೆತ್ತ ಬಲ್ಲರು, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ? ॥ ೧೨ ॥

೧೩೬೪
ತನುವೆಂಬ ಹುತ್ತದಲ್ಲಿ ಮನವೆಂಬ ಸರ್ಪ
ಹೆಡೆಯನುಡುಗಿಕೊಂಡಿರಲು
ಜ್ಞಾನಶಕ್ತಿ ಬಂದು ಎಬ್ಬಿಸಲು,
ಉರಿ ಭುಗಿಲೆನುತ್ತ ಹೆಡೆಯನೆತ್ತಿ ಊರ್ಧ್ವಕ್ಕೇರಲು,
ಅಷ್ಟಮದವೆಲ್ಲ ಹಿಟ್ಟುಗುಟ್ಟಿದವು;
ಕರಣಂಗಳೆಲ್ಲ ಉರಿದುಹೋದವು.
ಇದ್ದ ಶಕ್ತಿಯನೆ ಕಂಡು,
ಮನ ನಿಶ್ಚಯವಾದುದನೆ ನೋಡಿ,
ಪಶ್ಚಿಮದ ಕದವ ತೆಗೆದು,
ಬಟ್ಟಬಯಲ ಬೆಳಗಿನೊಳಗೆ ಓಲಾಡಿ
ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೩ ॥

೧೩೬೫
ನರರ ಬೇಡೆನು, ಸುರರ ಹಾಡೆನು, ಕರಣಂಗಳ ಹರಿಯಬಿಡೆನು,
ಕಾಮನ ಬಲೆಗೆ ಸಿಲ್ಕೆನು, ಮರವೆಗೊಳಗಾಗೆನು.
ಪ್ರಣವ ಪಂಚಾಕ್ಷರಿಯ ಜಪಿಸಿಹೆನೆಂದು
ತನುವ ಮರೆದು ನಿಜಮುಕ್ತಳಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೪ ॥

೧೩೬೬
ನಿಮ್ಮ ಪಾದವಿಡಿದು ಮನ ಪಾವನವಾಯಿತ್ತು;
ಎನ್ನ ತನು ಶುದ್ಧವಾಯಿತ್ತು; ಕಾಯಗುಣವಳಿಯಿತ್ತು.
ಕರಣಗುಣ ಸುಟ್ಟು, ಭಾವವಳಿದು, ಬಯಕೆ ಸವೆದು,
ಮಹಾದೇವನಾದ ಶರಣರ ಪಾದವಿಡಿದು ನಿಜಮುಕ್ತಳಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೫ ॥

೧೩೬೭
ನೆನೆದೆಹೆನೆಂದಡೆ ಏನ ನೆನೆವೆನಯ್ಯಾ!
ಮನ ಮಂಕಾಯಿತ್ತು, ತನು ಬಯಲಾಯಿತ್ತು,
ಕಾಯ ಕರಗಿತ್ತು, ದೇಹ ಹಮ್ಮಳಿಯಿತ್ತು.
ತಾನು ತಾನಾಗಿ ಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೬ ॥

೧೩೬೮
ನೆನೆವುತ್ತಿದೆ ಮನ,
ದುರ್ವಾಸನೆಗೆ ಹರಿವುತ್ತಿದೆ ಮನ,
ಕೊನೆಗೊಂಬೆಗೆ ಎಳೆವುತ್ತಿದೆ ಮನ,
ಕಟ್ಟಿಗೆ ನಿಲ್ಲದು ಮನ,
ಬಿಟ್ಟಡೆ ಹೋಗದು ಮನ.
ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು,
ಗೊತ್ತಿಗೆ ನಿಲಿಸಿ,
ಬಚ್ಚಬರಿಯ ಬಯಲಿನೊಳಗೆ ಓಲಾಡುವ
ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೭ ॥

೧೩೬೯
ನೋಡುವೆನೆಂದಡೆ ನೋಟವಿಲ್ಲ;
ಕೇಳುವೆನೆಂದಡೆ ಕಿವಿಯಿಲ್ಲ;
ವಾಸಿಸುವೆನೆಂದಡೆ ನಾಸಿಕವಿಲ್ಲ;
ನುಡಿವೆನೆಂದಡೆ ಬಾಯಿಯಿಲ್ಲ;
ಹಿಡಿವೆನೆಂದಡೆ ಹಸ್ತವಿಲ್ಲ;
ನಡೆವೆನೆಂದಡೆ ಕಾಲಿಲ್ಲ;
ನೆನೆವೆನೆಂದಡೆ ಮನವಿಲ್ಲ.
ಇಂತು ನೆನಹು ನಿಷ್ಪತ್ತಿಯಾಗಿ,
ಶರಣರ ಪಾದದಲ್ಲಿಯೆ ಬೆರೆದು ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೮ ॥

೧೩೭೦
ಮನ ಮರವೆಗೆ ಮುಂದುಮಾಡಿತ್ತು.
ತನು ಕಳವಳಕ್ಕೆ ಮುಂದುಮಾಡಿತ್ತು.
ಆಸೆ ರೋಷವೆಂಬವು ಅಡ್ಡಗಟ್ಟಿದವು.
ಇವರೊಳಗೆ ಜಗದೀಶ್ವರನೆನಿಸಿಕೊಂಬವರ ನುಡಿಯು ಓಸರಿಸುವದು,
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೧೯ ॥

೧೩೭೧
ಮಾಣಿಕವ ಕಂಡವರು ತೋರುವರೆ ಅಯ್ಯಾ?
ಮುತ್ತ ಕಂಡವರು ಅಪ್ಪಿಕೊಂಬರಲ್ಲದೆ,
ಬಿಚ್ಚಿ ಬಿಚ್ಚಿ ತೋರುವರೆ ಅಯ್ಯಾ?

ಆ ಮುತ್ತಿನ ನೆಲೆಯನು, ಮಾಣಿಕದ ಬೆಲೆಯನು,
ಬಿಚ್ಚಿ ಬೇರಾಗಿ ತೋರಿ ರಕ್ಷಣೆಯ ಮಾಡಿದ ಕಾರಣದಿಂದ,
ಬಚ್ಚಬರಿಯ ಬೆಳಗಿನೊಳಗೋಲಾಡಿ
ನಿಮ್ಮ ಪಾದದೊಳಗೆ ನಿಜಮುಕ್ತಳಾದೆನಯ್ಯಾ ಚೆನ್ನಮಲ್ಲೇಶ್ವರಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೨೦ ॥

೧೩೭೨
ಸಾಕಯ್ಯಾ,
ಲೋಕದ ಹಂಗು ಹರಿಯಿತ್ತು;
ತನುವಿನಾಸೆ ಬಿಟ್ಟಿತ್ತು;
ಮನದ ಸಂಚಲ ನಿಂದಿತ್ತು.
ನುಡಿಗಡಣ ಹಿಂಗಿತ್ತು;
ಘನವ ಬೆರೆಯಿತ್ತು;
ಬೆಳಗ ಕೂಡಿತ್ತು.
ಬಯಲಿನೊಳಗೋಲಾಡಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ. ॥ ೨೧ ॥

೧೩೭೩
ಸಾಯದ ಮುಂಚೆ ಸತ್ತಹಾಗೆ ಇರುವರು:
ಆರಿಗೂ ವಶವಲ್ಲ, ನಮ್ಮ ಶರಣರಿಗಲ್ಲದೆ.
ಅದು ಹೇಗೆಂದಡೆ : ಹಗಲಿರುಳೆಂಬ ಹಂಬಲ ಹರಿದರು,
ಜಗದಾಟವ ಮರೆದರು, ಆಡದ ಲೀಲೆಯನೆ ಆಡಿದರು.
ಆರು ಕಾಣದ ಘನವನೆ ಕಂಡರು.
ಮಹಾಬೆಳಗಿನೊಳಗೋಲಾಡಿ ಸುಖಿಯಾದರಯ್ಯಾ,
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣನ ಶರಣರು. ॥ ೨೨ ॥

*

ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

೧೩೭೪
ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ.
ಆವ ವ್ರತವಾದಡೂ ಒಂದೆ ವ್ರತವಯ್ಯಾ.
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕನರಕ
ಗಂಗೇಶ್ವರಲಿಂಗದಲ್ಲಿ. ॥ ೧ ॥

*

ಅಂಗಸೋಂಕಿನ ಲಿಂಗತಂದೆ

೧೩೭೫

ಮರದೊಳಗಣ ಬೆಂಕಿ ತನ್ನ ತಾನೆ ಉರಿಯಬಲ್ಲುದೆ?
ಶಿಲೆಯೊಳಗಣ ದೀಪ್ತಿ ಆ ಬೆಳಗ ತನ್ನ ತಾನೆ ಬೆಳಗಬಲ್ಲುದೆ?
ಆ ತೆರನಂತೆ ಕುಟಿಲನ ಭಕ್ತಿ, ಕಿಸುಕುಳನ ವಿರಕ್ತಿ,
ಮಥನಿಸಿಯಲ್ಲದೆ ದಿಟಹುಸಿಯ ಕಾಣಬಾರದು.
ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿದಲ್ಲದೆ
ನಿಶ್ಚಯವನರಿಯಬಾರದು.
ಗುರುವಾದಡೂ ಲಿಂಗವಾದಡೂ ಜಂಗಮವಾದಡೂ
ಪರೀಕ್ಷಿಸಿ ಹಿಡಿಯದವನ ಭಕ್ತಿ, ವಿರಕ್ತಿ,
ತೂತ ಕುಂಭದಲ್ಲಿಯ ನೀರು, ಸೂತ್ರ ತಪ್ಪಿದ ಬೊಂಬೆ,
ನಿಜನೇತ್ರ ತಪ್ಪಿದ ದೃಷ್ಟಿ.
ಬೇರು ಮೇಲಾದ ಸಸಿಗೆ ನೀರಿನಾರೈಕೆಯುಂಟೆ?
ಇಂತು ಆವ ಕ್ರೀಯಲ್ಲಿಯೂ ಭಾವಶುದ್ಧಾತ್ಮನಾಗಿ ಆರೈಕೆ ಬೇಕು,
ಭೋಗಬಂಕೇಶ್ವರಲಿಂಗದ ಸಂಗದ ಶರಣನ ಸುಖ. ॥ ೧ ॥

*

ಅಂಬಿಗರ ಚೌಡಯ್ಯ

೧೩೭೬

ಅಂಗವ ಅಂದ ಮಾಡಿಕೊಂಡು ತಿರುಗುವ
ಭಂಗಗೇಡಿಗಳು ನೀವು ಕೇಳಿರೋ.
ಅಂಗಕ್ಕೆ ಅಂದವಾವುದೆಂದರೆ:
ಗುರುವಿಗೆ ತನುವ ಕೊಟ್ಟಿರುವುದೆ ಚೆಂದ,
ಲಿಂಗಕ್ಕೆ ಮನವ ಕೊಟ್ಟಿರುವುದೆ ಚೆಂದ.
ಜಂಗಮಕ್ಕೆ ಧನವ ಕೊಟ್ಟಿರುವುದೆ ಚೆಂದ,
ಅಷ್ಟಾವರಣದಲ್ಲಿ ನಿಬ್ಬೆರಗಿನಿಂದ ಕೂಡಿ
ಭಕ್ತಿಯೆಂಬ ಸಮುದ್ರದಲ್ಲಿ ಈಸಾಡುವುದೆ ಚೆಂದ.
ಶಿವನ ಪಾದವ ಹೊಂದುವುದೆ ಚೆಂದ.
ಈ ಮಾರ್ಗವ ಬಿಟ್ಟು, ಸಂಸಾರವೇ ಅಧಿಕವೆಂದು
ತನ್ನ ಹೆಂಡಿರು ಮಕ್ಕಳು ಸಂಪತ್ತು
ಇವು [ತ]ನಗೆ ಶಾಶ್ವತವೆಂದು ತಿಳಿದು,

ಒಂದು ಕಾಸನಾದರೂ ಪರರಿಗೆ ಕೊಡದೆ,
ತಾನೇ ತಿಂದು, ನೆಲದಲ್ಲಿ ಮಡಗಿ,
ಕಡೆಗೆ ಯಮನ ಕೈಯಲ್ಲಿ ಸಿಲ್ಕಿ,
ನರಕ ಕೊಂಡದಲ್ಲಿ ಮುಳುಗೇಳುವುದೇ ನಿಶ್ಚಯ.
ಇಂತಹ ಅಂದಗೇಡಿಗಳ ಮುಖವ ನೋಡಲಾಗದೆಂದಾತ,
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. || ೧ ||

೧೩೭೭
ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು,
ನಂಬಿದರೆ ಒಂದೆ ಹುಟ್ಟಲಿ
ಕಡೆಯ ಹಾಯಿಸುವನಂಬಿಗರ ಚೌಡಯ್ಯ. || ೨ ||

೧೩೭೮
ಅಂಬಿಗನು ಜಗದೊಳಗೆ ಇಂಬಿಲೋಲಾಡುವನು,
ತುಂಬಿದ ಸಾಗರದೊಳಗೆ ನೋಡಯ್ಯ.
ನಿಂದ ದೋಣಿಯನೇರಿದಂದಿನ ಹುಟ್ಟಹಿಡಿದು
ಕಂಡವರಂದವನರಿದಾತ ತೊಳಸುತ್ತಿದ್ದನು.
ಚಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು,
ಶಿವನೊಂದೆ ಠಾವಿಗೊಯ್ದಿಳುಹುವೆನೆಂದನಂಬಿಗ ಚೌಡಯ್ಯ. || ೩ ||

೧೩೭೯
ಅಗ್ನಿ ದಿಟವೆಂದಡೆ ತಾ ಹುಸಿ, ಕಾಷ್ಠವಿಲ್ಲದೆ.
ಕಾಷ್ಠದಲ್ಲಿ ಅಡಗಿ ಸುಡದಿಪ್ಪ ಭೇದವನರಿತಡೆ,
ಪ್ರಾಣಲಿಂಗಿಯೆಂದೆಂಬೆನೆಂದನಂಬಿಗ ಚೌಡಯ್ಯ. || ೪ ||

೧೩೮೦
ಅಡವಿಯ ಹೊಗಿಸಿತ್ತು,
ಹುಡುಕುನೀರಲದ್ದಿತ್ತು,
ಜಡೆಗಟ್ಟಿ ಭಸ್ಮವ ತೊಡೆಸಿತ್ತು,
ಉಡೆವುಚ್ಚುಗೊಳಿಸಿತ್ತು,
ಹಿಡಿದೊತ್ತಿ ಕೇಶವ ಕೀಳಿಸಿತ್ತು,
ಪಡಿಪುಚ್ಚಗೊಳಿಸಿತ್ತು ಊರೊಳಗೆಲ್ಲ.
ಈ ಬೆಡಗಿನ ಮಾಯೆಯ
ಬಡಿಹಾರಿ ಸಮಯಿಗಳ ನುಡಿಗೆ
ನಾಚುವೆನೆಂದನಂಬಿಗ ಚೌಡಯ್ಯ. || ೫ ||

೧೩೮೧
ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ.
ಮಡುವಿನೊಳಗರಸುವಡೆ ಮತ್ಸ್ಯಮಂಡೂಕನಲ್ಲ.
ತಪಂಬಡುವಡೆ ವೇಷಕ್ಕೆ ವೇಳೆಯಲ್ಲ.
ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ.
ಅಷ್ಟತನುವಿನೊಳಗೆ ಹುದುಗಿದ್ದ ಲಿಂಗವ
ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ. || ೬ ||

೧೩೮೨
ಅತ್ಯಾಹಾರವನುಂಡು ಹೊತ್ತುಗಳೆದು
ಹೋಕಿನ ಮಾತನಾಡುತ್ತ,
ಚಿತ್ತ ಬಂದ ಪರಿಯಲ್ಲಿ ವ್ಯವಹರಿಸಿಕೊಳ್ಳುತ್ತ,
ಮತ್ತೆ ಶಿವನ ನೆನೆದೆನೆಂದಡೆ ಶಿವನ ವರ ಎತ್ತಲೆಂದರಿಯದೆಂದಾತ,
ನಮ್ಮಂಬಿಗರ ಚೌಡಯ್ಯ. || ೭ ||

೧೩೮೩
ಅಯ್ಯಾ!
ಪಾಷಾಣಕ್ಕೆ ಗಿರಿ ಸವೆದವು.
ಪತ್ರೆಗೆ ತರು ಸವೆದವು.
ಸಪ್ತಸಾಗರಂಗಳು ಮಜ್ಜನಕ್ಕೆ ಸವೆದವು.
ಅಗ್ನಿ ಧೂಪಕ್ಕೆ ಸವೆಯಿತ್ತು.
ವಾಯು ಕಂಪಿತಕ್ಕೆ ಸವೆಯಿತ್ತು.
ಉಘೆ! ಚಾಂಗು ಭಲಾ! ಎಂಬ ಶಬ್ದ ಸವೆಯಿತ್ತು.
ಎನಗಿನ್ನೆಂತೊ.
ಉಮೇಶನ ಶರಣರು
ಮಹಮನೆಯಲ್ಲಿ ಶಿವಲಿಂಗಾರ್ಚನೆಗೆ ಕುಳ್ಳಿರ್ದಡೆ,
ನಾನವರ ಪಾದರಕ್ಷೆಯ
ಕಾಯ್ದುಕೊಂಡಿದ್ದೇನೆಂದನಂಬಿಗ ಚೌಡಯ್ಯ. || ೮ ||

೧೩೮೪
ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೊ.
ಅಂಧಕನ ಕೈಯನಂಧಕ ಹಿಡಿದಡೆ
ಮುಂದನಾರು ಕಾಬರು ಹೇಳೆಲೆ ಮರುಳೆ.
ತೊರೆಯಲದ್ದವನನೀಸಲರಿಯದವ
ತೆಗೆವ ತೆರನಂತೆಂದನಂಬಿಗ ಚೌಡಯ್ಯ. || ೯ ||

೧೩೮೫
ಅರಿವನರಿದಲ್ಲಿ ತಾನೆನ್ನದೆ ಇದಿರೆನ್ನದೆ,
ಮತ್ತೇನುವ ಉಳಿದುವ ಸಂಪಾದಿಸದೆ,
ಅರುಣನ ಕಿರಣದಲ್ಲಿ ಅರತ ಸಾರದಂತೆ,
ಕಾದ ಹಂಚಿನಲ್ಲಿ ನೀರ ಬಿಟ್ಟಂತೆ
ಬಧಿರನ ಕಾವ್ಯದಂತೆ,
ಚದುರನ ಒಳುಪಿನಂತೆ
ತಲೆದೋರದೆ ನಿಂದಾತನ ಅಡಿಗೆರಗುವೆನೆಂದನಂಬಿಗ ಚೌಡಯ್ಯ. || ೧೦ ||

೧೩೮೬
ಅರ್ಚನೆಯ ಮಾಡುವಲ್ಲಿ ಆವೇಶ ಅರತಿರಬೇಕು.
ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು.
ಕೊಡುವ ಕೊಂಬಲ್ಲಿ ಸರ್ವಭೂತ ಹಿತನಾಗಿರಬೇಕು.
ಇಂತೀ ಸಡಗರಿಸಿಕೊಂಡಿಪ್ಪಾತನ ಅಡಿಗೆರಗುವೆನೆಂದ
ಅಂಬಿಗರ ಚೌಡಯ್ಯ. || ೧೧ ||

೧೩೮೭
ಅಸುರ ಮಾಲೆಗಳಿಲ್ಲ,
ತ್ರಿಶೂಲ ಡಮರುಗವಿಲ್ಲ,
ಬ್ರಹ್ಮಕಪಾಲವಿಲ್ಲ,
ಭಸ್ಮಭೂಷಣನಲ್ಲ,
ವೃಷಭವಾಹನನಲ್ಲ,
ಋಷಿಯರುಗಳೊಡನಿದ್ದಾತನಲ್ಲ.
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದಿಲ್ಲೆಂದನಂಬಿಗರ ಚೌಡಯ್ಯ. || ೧೨ ||

೧೩೮೮
ಆರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು,
ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು,
ನಾಡೆಲ್ಲರೂ ನೋಡಿಯೆಂದು ಪೂಜಿಸುತ್ತ,
ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?
ನಾಡೆಲ್ಲಕ್ಕೋ? ಪೂಜಿಸಿದಾತಗೋ?
ಇದ ನಾನರಿಯೆ, ನೀ ಹೇಳೆಂದನಂಬಿಗ ಚೌಡಯ್ಯ. || ೧೩ ||

೧೩೮೯
ಆಶೆಯುಳ್ಳಾತನೊಬ್ಬರಾಧೀನದಲ್ಲಿಪ್ಪನು.
ಆಶೆಯ ಮನದ ಕೊನೆಯನರಿದಾತ

ಕೈಲಾಸದಾಚೆಯಲ್ಲಿಪ್ಪನೆಂದಾತ
ನಮ್ಮ ಅಂಬಿಗ ಚೌಡಯ್ಯ! ॥ ೧೪ ॥

೧೩೯೦
ಉಂಡರೆ ಭೂತನೆಂಬರು,
ಉಣದಿದ್ದರೆ ಚಕೋರನೆಂಬರು.
ಭೋಗಿಸಿದರೆ ಕಾಮಿಯೆಂಬರು,
ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು.
ಊರೊಳಗಿದ್ದರೆ ಸಂಸಾರಿ ಎಂಬರು,
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು.
ನಿದ್ರೆಗೈದರೆ ಜಡದೇಹಿ ಎಂಬರು,
ಎದ್ದಿದ್ದರೆ [ಚೋ]ರನೆಂಬರು.
ಇಂತೀ ಜನಮೆಚ್ಚಿ ನಡೆ[ಯ]ದವರ
ಎಡದ ಪಾದ ಕಿರುಗುಣಿಯಲ್ಲಿ ಮನೆಮಾಡು, ಮನೆಮಾಡು
ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥ ೧೫ ॥

೧೩೯೧
ಎತ್ತ ಸುತ್ತಿ ಬಂದಡೂ ಊರಿಗೆ ಬಪ್ಪುದು ತಪ್ಪದು.
ಹಲವು ಮಾತನಾಡಿದಡೇನು? ಮೂರು ಮಲವ ಮರೆದಿರಬೇಕು.
ಹೊಲಬುದಪ್ಪಿದ ಮೃಗ ಬಲೆಯೊಳಗೆ ಬಿದ್ದಂತಾಗಬೇಡ.
ಇದನರಿತು ಬದುಕೆಂದನಂಬಿಗ ಚೌಡಯ್ಯ. ॥ ೧೬ ॥

೧೩೯೨
ಕಂಥೆ ತೊಟ್ಟವ ಗುರುವಲ್ಲ,
ಕಾವಿ ಹೊತ್ತವ ಜಂಗಮವಲ್ಲ,
ಶೀಲ ಕಟ್ಟಿದವ ಶಿವಭಕ್ತನಲ್ಲ,
ನೀರು ತೀರ್ಥವಲ್ಲ,
ಕೂಳು ಪ್ರಸಾದವಲ್ಲ.
ಹೌದೆಂಬವನ ಬಾಯ ಮೇಲೆ
ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೆ ತೂಗಿ ತೂಗಿ ಟೊಕಟೊಕನೆ
ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥ ೧೭ ॥

೧೩೯೩
ಕಟ್ಟಿದ ಲಿಂಗವ ಕಿರಿದು ಮಾಡಿ,
ಬೆಟ್ಟದ ಲಿಂಗವ ಹಿರಿದು ಮಾಡುವ ಪರಿಯ ನೋಡ!

ಇಂತಪ್ಪ ಲೊಟ್ಟಿಮೂಳರ ಕಂಡರೆ
ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು
ಲೊಟಲೊಟನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ. ॥ ೧೮ ॥

೧೩೯೪
ಕಟ್ಟಿಹೆ ಬಿಟ್ಟಿಹೆನೆಂಬ ದಂದುಗ
ನಿಮಗೇಕೆ ?
ತೆರನನರಿಯದೆ ಹಲವು ತಪ್ಪಲ ತರಿತಂದು
ಮೇಲೊಟ್ಟಲೇಕೆ ?
ಜಂಗಮ ಬಂದರೆ ತೆರನರಿತು ಅರ್ಪಿಸಬಲ್ಲಡಲ್ಲಿ
ತಾನೆ ಶಿವನು ತೆರಹಿಲ್ಲದಿಪ್ಪನೆಂದಾತ ನಮ್ಮಂಬಿಗ ಚೌಡಯ್ಯ. ॥ ೧೯ ॥

೧೩೯೫
ಕಲ್ಲದೇವರ ಪೂಜೆಯ ಮಾಡಿ,
ಕಲಿಯುಗದ ಕತ್ತೆಗಳಾಗಿ ಹುಟ್ಟಿದರು.
ಮಣ್ಣದೇವರ ಪೂಜಿಸಿ ಮಾನಹೀನರಾದರು.
ಮರನ ದೇವರೆಂದು ಪೂಜಿಸಿ ಮಣ್ಣ ಕೂಡಿದರು.
ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು!
ಜಗದ್ಭರಿತವಾದ ಪರಶಿವನೊಳಗೆ
ಕಿಂಕರನಾದ ಶಿವಭಕ್ತನೆ ಶ್ರೇಷ್ಠನೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥ ೨೦ ॥

೧೩೯೬
ಕುಡಿವ ನೀರೆನ್ನಬಹುದೆ, ಹುಡುಕುನೀರಲದ್ದುವಾಗ?
ಅಡುವ ಕಿಚ್ಚೆನ್ನಬಹುದೆ, ಮನೆಯ ಸುಡುವಾಗ?
ಒಡಲು ತನ್ನದೆನ್ನಬಹುದೆ, ಪುಣ್ಯ-ಪಾಪವನುಂಬಾಗ?
ಒಡಲಜೀವವೆನ್ನಬಹುದೆ, ಇಕ್ಕಿ ಹೋಹಾಗ?
ಇವನೊಡೆಬಡಿದು ಕಳೆಯೆಂದಾತನಂಬಿಗ ಚೌಡಯ್ಯ. ॥ ೨೧ ॥

೧೩೯೭
ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ,
ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು
ಅಕ್ಕಿ ಕಣಕವ ಕೊಂಡುಹೋಗುವ ಗುರುವಿನ ಕಂಡರೆ,
ಕೆಡವಿ ಹಾಕಿ ಮೂಗನೆ ಕೊಯ್ದು
ಇಷ್ಟಂಗಿಯ ಕಲ್ಲಿಲೆ ತಿಕ್ಕಿ
ಸಾಸಿವೆಯ ಹಿಟ್ಟನೆ ತಳಿದು

ಮೇಲೆ ಲಿಂಬಿಯ ಹುಳಿಯನೆ ಹಿಂಡಿ
ಪಡುವ ಗಾಳಿಗೆ ಹಿಡಿಯೆಂದಾತ ನಮ್ಮ ಅಂಬಿಗರ ಚೌಡಯ್ಯ. || ೨೨ ||

೧೩೯೮
ಗಾಳಿ ಹಡೆದಲ್ಲಿ ತೂರಿಕೊಳ್ಳಯ್ಯಾ,
ಗಾಳಿ ನಿನ್ನಾಧೀನವಲ್ಲಯ್ಯಾ.
ನಾಳೆ ತೂರಿಹೆನೆಂದಡೆ ಇಲ್ಲಯ್ಯಾ.
ಶಿವಶರಣೆಂಬುದೊಂದು ಗಾಳಿಯ ಹಡೆದಲ್ಲಿ,
ಬೇಗ ತೂರೆಂದನಂಬಿಗ ಚೌಡಯ್ಯ. || ೨೩ ||

೧೩೯೯
ಗಿಣಿಯಿಲ್ಲದ ಪಂಜರ ಹಲವು ಮಾತನಾಡಬಲ್ಲುದೆ?
ದೇವರಿಲ್ಲದ ದೇಗುಲಕ್ಕೆ ಮಂತ್ರ, ಅಭಿಷೇಕವುಂಟೆ?
ಅರಿವು ನಷ್ಟವಾಗಿ ಕುರುಹಿನ ಹಾವಚೆಯ
ನಾನರಿಯೆನೆಂದನಂಬಿಗ ಚೌಡಯ್ಯ. || ೨೪ ||

೧೪೦೦
ಚಿತ್ರವ ಬರೆವ ಲೆಕ್ಕಣಿಕೆಯ ಕಟ್ಟಿಗೆಯಂತೆ
ನೋಡಿದಡೆ ರೋಮ ಹಲವಾಗಿ,
ಬರೆವಡೆ ಕೂಡಿಹ ದಾರಿ ಒಂದೆಯಾಗಿ ತೋರುವೊಲು,
ತನ್ನಿಚ್ಛೆಗೆ ಪ್ರಕೃತಿ ಹಲವಾಗಿ
ವಸ್ತುವ ಮುಟ್ಟುವಲ್ಲಿ
ಏಕಚಿತ್ತವಾಗಿರಬೇಕೆಂದನಂಬಿಗ ಚೌಡಯ್ಯ. || ೨೫ ||

೧೪೦೧
ತಟಾಕ ಒಡೆದಡೆ ಕಟ್ಟುವಡೆವುದಲ್ಲದೆ,
ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಿಂಗೆ ಹಿಂಗಿ ನಿಂದುದುಂಟೆ?
ಅರಿಯದವಂಗೆ ಅರಿಕೆಯ ಹೇಳಿದಡೆ ಅರಿವನಲ್ಲದೆ
ಅರಿದು ಮರೆದವಂಗೆ ಬೇರೊಂದೆಡೆಯ ಹೇಳಿಹೆನೆಂದಡೆ,
ಕಡೆ ನಡು ಮೊದಲಿಲ್ಲ ಎಂದನಂಬಿಗ ಚೌಡಯ್ಯ. || ೨೬||

೧೪೦೨
ತಡಿ ನೆಲೆ ಇಲ್ಲದ ಮಹಾನದಿಯಲ್ಲಿ
ಒಡಲಿಲ್ಲದಂಬಿಗ ಬಂದೈದಾನೆ.
ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ
ಗಡಣವಿಲ್ಲದೆ ಹಾಯಿಸು[ವ] ಹೊಳೆಯ,
ನುಡಿಯಿಲ್ಲದ ನಿಸ್ಸೀಮ ಗ್ರಾಮದಲಿರಿಸು[ವ]ನೆಂದಾತನಂಬಿಗ ಚೌಡಯ್ಯ. || ೨೭ ||

೧೪೦೩
ದೇಹಾರವ ಮಾಡುವಣ್ಣಗಳಿರಾ,
ಒಂದು ತುತ್ತು ಆಹಾರವನಿಕ್ಕಿರೆ.
ದೇಹಾರಕ್ಕೆ ಆಹಾರವೆ ನಿಚ್ಚಣಿಗೆ.
ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ,
ಆ ಹರನಿಲ್ಲೆಂದನಂಬಿಗ ಚೌಡಯ್ಯ. || ೨೮ ||

೧೪೦೪
ನಾರಿವಾಳವ ತಂದು ನಾಯಮುಂದೆ ಹಾಕಿದಡೆ,
ಒಡೆಯಲರಿಯದು, ತಿನಲರಿಯದು.
ಅದರವೊಲು ಜಂಗಮದೊಳಗೆ ಲಿಂಗವನರಿ[ಯ]ದವ
ಭಂಗಿಯ ತಿಂದಂತೆ.
ತನ್ನ ಹೊದ್ದಿದ್ದ ತನ್ನ, ತಾ ತಿಳಿಯಲರಿಯದಿದ್ದಡೆ
ತೆಂಗ ತಿನಲರಿಯದ ನಾಯಂತೆ ಎಂದನಂಬಿಗ ಚೌಡಯ್ಯ. || ೨೯ ||

೧೪೦೫
ಬಡತನಕ್ಕೆ ಉಂಬುವ ಚಿಂತೆ,
ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ,
ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ,
ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ,
ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ [ನಿಜ]ಶರಣನು. || ೩೦ ||

೧೪೦೬
ಬಯಲ ಉದಕವ ಹಿಡಿದು ಮಜ್ಜನಕ್ಕೆರೆವೆನಯ್ಯ.
ಸಕಲವನುಳಿದೊಂದು ಪುಷ್ಪದ ಪೂಜೆಯ ಮಾಡುವೆನಯ್ಯ.
ಸುಗಂಧ ದುರ್ಗಂಧವ ಕಳೆದು ಧೂಪಾರತಿಯ ಮಾಡುವೆನಯ್ಯಾ.
ಪರಬ್ರಹ್ಮವ ಹಿಡಿದು ನಿವಾಳಿಯನೆತ್ತುವೆನಯ್ಯಾ.
ಪುಣ್ಯಪಾಪವ ಕಳೆದು ಓಗರವನಿಕ್ಕುವೆನಯ್ಯಾ.
ಹದಿನಾಲ್ಕು ಭುವನವನೊಳಗುಮಾಡಿ ಹೊರಗೆ ನಿಂದು
ಸದಾಶಿವನ ಪೂಜಿಸಿದಾತನಂಬಿಗ ಚೌಡಯ್ಯ. || ೩೧ ||

೧೪೦೭
ಬೆಟ್ಟದ ಲಿಂಗವ ಹಿರಿದು ಮಾಡಿಕೊಂಡು ಪರಿವ ಕೊಟ್ಟಿ ಮೂಳರಿರಾ,
ಬಿಟ್ಟುಕೊಡಿ ನಿಮ್ಮ ಇಷ್ಟಲಿಂಗವ.
ನಮ್ಮ ಕೈಗೆ ಕೊಡದಿದ್ದಡೆ, ನಟ್ಟನಡುನೀರೊಳಗೊಯ್ದು,
ಕಟ್ಟಿ ಮುಳುಗಿಸಿ
ನಿಮ್ಮನು ಲಿಂಗೈಕ್ಯರ ಮಾಡುವೆನೆಂದಾತ
ನಮ್ಮಂಬಿಗ ಚೌಡಯ್ಯ. || ೩೨ ||

೧೪೦೮
ಬೆಲ್ಲಕ್ಕೆ ಚದುರಸವಲ್ಲದೆ ಸಿಹಿಗೆ ಚದುರಸವುಂಟೆ?
ಕುರುಹಿಂಗೆ ಪೂಜೆಯಲ್ಲದೆ ಅರಿವಿಂಗೆ ಪೂಜೆ ಉಂಟೆ?
ಅರಿವು ಕರಿಗೊಂಡಲ್ಲಿ ಕೈಯ ಕುರುಹು
ಅಲ್ಲಿಯೆ ಲೋಪವೆಂದನಂಬಿಗ ಚೌಡಯ್ಯ. || ೩೩ ||

೧೪೦೯
ಬ್ರಹ್ಮಕ್ಕೆ ಬಾಯಿ ತೆರೆದು ಮಾತನಾಡಿ,
ಪರಬೊಮ್ಮದ ವಶ್ಯವ ನುಡಿದು,
ಒಮ್ಮನ ಅಂಬಲಿಯನಿಕ್ಕೆಂದು ಹಲುಬುವ
ಹೊಲಬುಗೆಟ್ಟವರ ಕಂಡು,
ಅವರಿಗೆ ಒಲವರವಿಲ್ಲಾ ಎಂದನಂಬಿಗ ಚೌಡಯ್ಯ. || ೩೪ ||

೧೪೧೦
ಬ್ರಹ್ಮದ ಮಾತನಾಡಿ,
ಕನ್ನೆಯರ ಕಾಲದೆಸೆಯಲ್ಲಿ ಕುಳಿತಡೆ
ಪರಬೊಮ್ಮದ ಮಾತು
ಅಲ್ಲಿಯೆ ನಿಂದಿತ್ತೆಂದನಂಬಿಗ ಚೌಡಯ್ಯ. || ೩೫ ||

೧೪೧೧
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವರು!
ಅದಾವ ವಿಚಾರವಯ್ಯ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು
'ಉಧೋ ಉಧೋ' ಎಂಬರು!
ಅದಾವ ವಿಚಾರವಯ್ಯ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಹಗ್ಗಹುರಿ ಬೆನ್ನಸಿಡಿ ಬಾಯಬೀಗದಲ್ಲಿ ಹೋಗುವರು!

ಅದಾವ ವಿಚಾರವಯ್ಯ?
ಇಂಥ ಭವಿಮಾರ್ಗದಲ್ಲಿ ಚರಿಸುವ
ಶಿವದ್ರೋಹಿಗಳಿಗೆ ಲಿಂಗಧಾರಣವ ಮಾಡುವನೊಬ್ಬ ಗುರುದ್ರೋಹಿ,
ಅವರಿಗೆ ಚರಣೋದಕವ, ತಾ ಧರಿಸುವ ವಿಭೂತಿ-ರುದ್ರಾಕ್ಷಿಯ
ಕೊಡುವನೊಬ್ಬ ಲಿಂಗದ್ರೋಹಿ!
ಅವನು ಭಕ್ತನೆಂದು
ಅವನ ಮನೆಯ ಹೊಕ್ಕು, ಮಂತ್ರವ ಹೇಳಿ,
ಅನ್ನವ ತಿಂದವನೊಬ್ಬ ಜಂಗಮದ್ರೋಹಿ!
ಇಂತೀ ನಾಲ್ವರಿಗೆ ಸೂರ್ಯಚಂದ್ರರುಳ್ಳನ್ನಕ್ಕ
ಎಕ್ಕಲಕೊಂಡದಲ್ಲಿಕ್ಕದೆ ಮಾಣ್ಬನೆ ಅಂಬಿಗರ ಚೌಡಯ್ಯನು? ‖ ೩೬ ‖

೧೪೧೨
ಮಡುವಿನಲ್ಲಿ ಮೊಗೆತಹೆನೆ? ಅಗ್ಗವಣಿ ಶುದ್ಧವಲ್ಲ.
ಗಿಡುವಿನ ಪುಷ್ಪವ ತಹೆನೆ? ಹೂ ನಿರ್ಮಾಲ್ಯ.
ಅಟ್ಟ ಅಡಿಗೆಯನಾದಡೆ ಮನ ಮುನ್ನವೆ ಉಂಡಿತ್ತು.
ನುಡಿವ ಶಬ್ದ ಎಂಜಲಾಯಿತ್ತು.
ಹಿಡಿಯೊಳಯಿಂಕೆ ಒಂದ ಕೊಂಡುಬಂದು
ಲಿಂಗವೆಂದು ಸಂಕಲ್ಪವ ಮಾಡಿದಡೆ
ಅದಕ್ಕೆ ಬೋನವ ಕೊಡಲೊಲ್ಲೆನೆಂದನಂಬಿಗ ಚೌಡಯ್ಯ. ‖ ೩೭ ‖

೧೪೧೩
ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು?
ಕಾಮಿನಿಯರ ಕಾಲದೆಸೆ ಸಿಕ್ಕಿ,
ಕ್ರೋಧದ ದಳ್ಳುರಿಯಲ್ಲಿ ಬೆಂದು,
ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ
ಅದೇಕೊ, ಅದೇತರ ಮಾತೆಂದನಂಬಿಗ ಚೌಡಯ್ಯ. ‖ ೩೮ ‖

೧೪೧೪
ಹಸಿಯ ಸೊಪ್ಪು ಮುರಿದು ತರುವಾಗ
ನೀವೇನು ಆಡಿನ ಮಕ್ಕಳೆ?
ಹಸಿಯ ಸೊಪ್ಪು ತಂದು ಬಿಸಿ ಮಾಡಿ
ಶಶಿಧರನೆಂಬ ಜಂಗಮಕ್ಕೆ ನೀಡಲು,
ಆ ಲಿಂಗದ ಹಸಿವು ಹೋಯಿತ್ತೆಂದಾತ
ನಮ್ಮಂಬಿಗ ಚೌಡಯ್ಯ. ‖ ೩೯ ‖

೧೪೧೫
ಹಾಡಿ ಮಾಡುವ ಹರ[ವಿ]ಕೆಯ ಕೇಡು,
ಕೂಡಿ ಮಾಡುವ ಕೂಡಿಕೆಯ ಕೇಡು,
ಹಾಡಿ ಮಾಡಿ, ಕೂಡಿ ಮಾಡಿ
ಬದುಕಿಗೆ ಕೇಡು ತಂದುಕೊಳ್ಳಲೇತಕೊ?
ತನ್ನ ಬೇಡಲಿಕ್ಕೆ ಬಂದ ಜಂಗಮದ ಇರವನರಿತು,
ನೀಡ ಕಲಿತರೆ ರೂಢಿಯೊಳಗೆ ಆತನೆ ಜಾಣನೆಂದಾತ
ನಮ್ಮ ಅಂಬಿಗರ ಚೌಡಯ್ಯ. || ೪೦ ||

೧೪೧೬
ಹೊಡವಡಲೇಕೆ, ಹಿಡಿದು ಪೂಜಿಸಲೇಕೆ,
ಎಡೆಯಾಡಲೇಕೆ ದೇಗುಲಕ್ಕಯ್ಯಾ?
ಬಡವರಂಧಕರಿಂಗೆ ಒಡಲಿಗನ್ನವನಿಕ್ಕಿದಡೆ,
ಹೊಡವಂಟನಾತ ಮೂರು ಲೋಕಕ್ಕೆ[ಯಿದೆ].
ಬಡವರಂಧಕರಿಗೆ ಒಡಲಿಗನ್ನವನಿಕ್ಕದಿದ್ದರೆ,
ಹೊಡೆವಡಲಿಕೆ ಹುರುಳಿಲ್ಲವೆಂದನಂಬಿಗ ಚೌಡಯ್ಯ. || ೪೧ ||

*

ಅಗ್ಘವಣಿ ಹಂಪಯ್ಯ

೧೪೧೭
ಹುಸಿಯ ನುಡಿಯನು ಭಕ್ತ,
ವ್ಯಸನಕ್ಕೆಳಸನು ಭಕ್ತ,
ವಿಷಯಂಗಳಾತಂಗೆ ತೃಣವು ನೋಡಾ,
ಬಯಸುವವನಲ್ಲ ಭಕ್ತ.
ದಯೆಯೆಂಬುದು ತನ್ನ ಕೈಯಲ್ಲಿ,
ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು.
ಕೋಪವೆಂಥದೆಂದರಿಯ,
ತಾಪತ್ರಯಂಗಳು ಮುಟ್ಟಲಮ್ಮವು,
ವ್ಯಾಪ್ತಿಗಳಡಗಿದವು.
ಲಿಂಗವನೊಳಕೊಂಡ ಪರಿಣಾಮಿ.
ಆತನ ಪಥ ಲೋಕಕ್ಕೆ ಹೊಸತು,
ಲೋಕದ ಪಥವಾತನಿಗೆ ಹೊಸತು.

ತನಗೊಮ್ಮೆಯು ಲಿಂಗಧ್ಯಾನ,
ಲಿಂಗಕೊಮ್ಮೆಯು ತನ್ನ ಧ್ಯಾನ.
ಘನಘನ ಮಹಿಮೆಯ ಹೊಗಳಲೆನ್ನಳವಲ್ಲ.
ಪನ್ನಗಧರ ಕೇಳಯ್ಯಾ, ಚೆನ್ನ ಹಂಪೆಯ ವಿರುಪಯ್ಯಾ,
ನಿಮ್ಮ ನಂಬಿದ ಸತ್ಯಶರಣ ಪರಿಣಾಮಿ. ॥ ೧ ॥

*

ಅಗ್ಘವಣಿ ಹೊನ್ನಯ್ಯ

೧೪೧೮
ಆದಂತೆ ಆಗಲಿ, ಮಾದಂತೆ ಮಾಣಲಿ ಎನಲಾಗದು.
ನೇಮದಾತಂಗೆ ಛಲಬೇಕು, ಛಲಬೇಕು.
ಹಿಡಿದುದ ಬಿಡಲಾಗದಯ್ಯಾ.
ಹುಲಿಗೆರೆಯ ವರದ ಸೋಮನಾಥನು
ಮನಮುಟ್ಟಿದ ಧೀರಂಗಲ್ಲದೆ ಸೋಲುವನಲ್ಲ. ॥ ೧ ॥

*

ಅಜಗಣ್ಣ ತಂದೆ

೧೪೧೯
ಇನನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ,
ವಾಯುವಿನ ಕೈಯ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ,
ಉರಿಯ ಮುಖದೊಳಗಿಪ್ಪ ಕರ್ಪೂರದಂತಾಯಿತ್ತೆನ್ನ ಗುರುವಿನುಪದೇಶ.
ಮಹಾಘನ ಸೌರಾಷ್ಟ್ರ ಸೋಮೇಶ್ವರನ
ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆಮಾಡಿದ ಕಾರಣ
ಸಕಲಪ್ರಪಂಚು ಬಿಟ್ಟೋಡಿತ್ತು. ॥ ೧ ॥

*

ಅನಾಮಿಕ ನಾಚಯ್ಯ

೧೪೨೦
ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕುಲವಿಲ್ಲ;
ಮರಣಕ್ಕೆ ಮನ್ನಣೆಯಿಲ್ಲ, ಆಸೆಗೆ ಹವಣಿಲ್ಲ,
ವಂಚಕನನಾಮಿಕ ನಾಚಯ್ಯಪ್ರಿಯ ಚೆನ್ನರಾಮಯ್ಯ. ॥ ೧ ॥

*

ಅಪ್ಪಿದೇವಯ್ಯ

೧೪೨೧
ಹೊನ್ನು ಹೆಣ್ಣು ಮಣ್ಣು ಬಿಡಿಸದ ಗುರುವಿನ ಉಪದೇಶವನೊಲ್ಲೆ,
ರೋಷ ಹರುಷವ ಕೆಡಿಸದ ಲಿಂಗವ ಪೂಜಿಸೆ,
ತಾಮಸಭ್ರಮೆಯನಳಿಯದ ಜಂಗಮಕ್ಕೆ ದಾಸೋಹವ ಮಾಡೆ,
ಪರಮಾನಂದವಲ್ಲದ ಪಾದೋದಕವ ಕೊಳ್ಳೆ,
ಪರಿಣಾಮವಲ್ಲದ ಪ್ರಸಾದವನುಣ್ಣೆ,
ಆನೆಂಬುದನಳಿಯದ ಈಶ್ವರೀಯ ವರದ ಮಹಾಲಿಂಗವನೇನೆಂದೆಂಬೆ ! ॥ ೧ ॥

*

ಅಮರಗುಂಡದ ಮಲ್ಲಿಕಾರ್ಜುನತಂದೆ

೧೪೨೨
ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ,
ಧರ್ಮಾರ್ಥಕಾಮಮೋಕ್ಷಂಗಳೆಂಬ
ಉಕ್ಕಡದವರೆಚ್ಚತ್ತಿರಿ! ಎಚ್ಚತ್ತಿರಿ!
ಭಯ ಘನ! ಭಯ ಘನ!
ಅಜ್ಞಾನವೆಂಬ ತೀವ್ರ ಕತ್ತಲೆ ಕರ ಘನ! ಕರ ಘನ!
ಒಂಬತ್ತು ಬಾಗಿಲ ಜತನವ ಮಾಡಿ! ಜತನವ ಮಾಡಿ!
ಜ್ಞಾನಜ್ಯೋತಿಯ ಪ್ರಬಲವ ಮಾಡಿ! ಪ್ರಬಲವ ಮಾಡಿ!
ಐವರು ಕಳ್ಳರು ಕನ್ನವ ಕೊರೆವುತ್ತೈದಾರೆ,
ಸುವಿಧಾನವಾಗಿರಿ! ಸುವಿಧಾನವಾಗಿರಿ!
ಜೀವಧನವ ಜತನವ ಮಾಡಿ! ಜತನವ ಮಾಡಿ!
ಭಳಿರೆಲಾ! ಭಳಿರೆಲಾ!
ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ
ಬಾಗಿಲ ತೆರೆದು, ನಡೆವುದೆ ಸುಪಥ ಸ್ವಯಂಭುನಾಥನಲ್ಲಿಗೆ.
ಇದನರಿತು ಮಹಾಮಹಿಮ ಮಾಗುಡದ ಮಲ್ಲಿಕಾರ್ಜುನದೇವರಲ್ಲಿ
ಎಚ್ಚರಿಕೆಗುಂದದಿರಿ! ಎಚ್ಚರಿಕೆಗುಂದದಿರಿ! ॥ ೧ ॥

*

ಅಮುಗಿದೇವಯ್ಯ

೧೪೨೩

ಅಲಗಿನ ಮೊನೆಯನೇರಬಹುದು,
ಹುಲಿಯ ಬಲೆಯ ಹೊಗಬಹುದು,
ಸಿಂಹದ ಕೊರಳಿಗೆ ಹಾಯಬಹುದು,
ಸಿದ್ಧಸೋಮನಾಥಾ, ನಿಮ್ಮ ಮುಟ್ಟದೆ ನಿಮಿಷ ಕುಳ್ಳಿರಬಾರದು. ॥ ೧ ॥

೧೪೨೪

ಆಲಿಕಲ್ಲ ಕಡಿದು ಪುತ್ಥಳಿಯ ಕಂಡರಿಸುವಂತೆ,
ಉಪ್ಪಿನ ಪೊಟ್ಟಣವನುದಕದಲದ್ದುವಂತೆ,
ಕರ್ಪುರದ ಪ್ರಣತೆಯಲ್ಲಿ ಜ್ಯೋತಿಯ ಬೆಳಗುವಂತೆ
ಸಿದ್ಧಸೋಮನಾಥಲಿಂಗ ಗ್ರಾಹಿ ಅಗ್ರಾಹಿ ತಾ. ॥ ೨ ॥

೧೪೨೫

ಇಹಪರನಲ್ಲ, ಪರಾಪರನಲ್ಲ,
ಭಾವಿಸಿ ಭಾವಿಯಲ್ಲ,
ಕಾಮಿಸಿ ಕಾಮಿಯಲ್ಲ.
ಅನಾಯಾಸ ನಿರಂಜನನು ಸಿದ್ಧ ಸೋಮನಾಥಲಿಂಗಾ
ನಿಮ್ಮ ಶರಣ ಬಳಸಿ ಬಳಸುವನಲ್ಲ. ॥ ೩ ॥

೧೪೨೬

ಊಷ್ಮದೊರತೆಯಂತೆ, ಬಿಸಿಲ ನೆಳಲಿನಂತೆ,
ಬೆಟ್ಟದ ಶಬ್ದ, ಉರಿಯ ನೆಳಲು, ಮಂಜಿನ ಮಳೆಯಂತೆ ಸುಳಿವ,
ಸಿದ್ಧಸೋಮನಾಥಾ ನಿಮ್ಮ ಶರಣ. ॥ ೪ ॥

೧೪೨೭

ಕಂಗಳ ಕತ್ತಲೆಯ ಕೆಡಿಸಿದ ರವಿಯ ಚಂದದಂತಾಯಿತ್ತೆನ್ನ
ಗುರುವಿನುಪದೇಶ.
ಕನ್ನಡಿ ರವಿಯ ತನ್ನೊಳಗೆ ಇರಿಸಿದಂತಾಯಿತ್ತೆನ್ನ
ಗುರುವಿನುಪದೇಶ.
ಜಲದ ನಿರ್ಮಳ ಗಗನವನೊಳಕೊಂಡ ಪರಿಯಂತಾಯಿತ್ತೆನ್ನ
ಗುರುವಿನುಪದೇಶ.
ಚಂದ್ರಕಾಂತದ ಶಿಲೆಯ ಬಿಂದು ಚಂದ್ರಮ ಸೋಂಕಿದಂತಾಯಿತ್ತೆನ್ನ

ಗುರುವಿನುಪದೇಶ.
ಕೊಡನೊಳಗಣ ಬಯಲ ಹಂಚಿಕೊಂಡ ಪರಿಯಂತಾಯಿತ್ತೆನ್ನ
ಗುರುವಿನುಪದೇಶ.
ಇದು ಕಾರಣ, ದರ್ಪಣಕೆ ದರ್ಪಣವ ತೋರಿದಂತಾಯಿತ್ತೆನ್ನ
ಗುರುವಿನುಪದೇಶ.
ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗದಂತಾಯಿತ್ತೆನ್ನ
ಗುರುವಿನುಪದೇಶ. || ೫ ||

೧೪೨೮
ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ?
ನೆನೆದ ಮಾತ್ರದಲ್ಲಿ ಅಹುದೆ, ಕಾರ್ಯದಲಲ್ಲದೆ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ.
ಒಂದಿಲ್ಲದಿರ್ದಡೊಂದಾಗದು.
ಜ್ಞಾನವಿಲ್ಲದಿರ್ದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ವಾಗ್ಜಾಲ ಭ್ರಾಂತು.
ಇದು ಕಾರಣ,
ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು. || ೬ ||

೧೪೨೯
ಮರುಳು ಮದ್ದುಕುಣಿಕೆಯ ಕಾಯ ತಿಂದು,
ಮರುಳೇರಿತ್ತ ಹೇಳಲುಂಟೆ? ಶಿವಶಿವಾ!
ಲಿಂಗ ತನ್ನನವಗ್ರಹಿಸಿದ ಬಳಿಕ ಅಂಗವಿಕಾರವೆಂಬುದನರಿಯರು,
ಸಿದ್ಧಸೋಮನಾಥನೆಂಬ ಶಬ್ದ ಭಂಗವಳಿದು ಸಂಗವುಳಿದ ಬಳಿಕ. || ೭ ||

೧೪೩೦
ಶಿವನ ನೆನೆದಡೆ ಭವ ಹಿಂಗುವುದೆಂಬ
ವಿವರಗೇಡಿಗಳ ಮಾತ ಕೇಳಲಾಗದು,
ಹೇಳದಿರಯ್ಯಾ.
ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ?
ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ?
ರಂಭೆಯ ನೆನೆದಡೆ ಕಾಮದ ಕಳವಳವಡಗುವುದೆ ಅಯ್ಯಾ?
ನೆನೆದರಾಗದು, ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ,
ಸದ್ಗುರು ಸಿದ್ಧಸೋಮನಾಥಲಿಂಗನ ನೆನೆಯಬಾರದು. || ೮ ||

೧೪೩೧
ಹುಡಿ ಹತ್ತದ ಗಾಳಿಯಂತೆ,
ಕಾಡಿಗೆ ಹತ್ತದಾಲಿಯಂತೆ,

ನೆಯ್ ಹತ್ತದ ನಾಲಗೆಯಂತೆ,
ಮಂಗಳ ಮಣ್ಣ ಬೆರಸದಂತೆ,
ಸಿದ್ಧಸೋಮನಾಥಾ,
ನಿಮ್ಮ ಶರಣನು ಸಕಲಸುಖಂಗಳ ಸುಖಿಸಿಯೂ ಬೇರಿಪ್ಪನು. ॥ ೯ ॥

*

ಅರಿವಿನ ಮಾರಿತಂದೆ

೧೪೩೨
ಅಪ್ಪು ಮಣ್ಣು ಕೂಡಿ ಘಟವಾದಂತೆ,
ಚಿತ್ತು ಶಕ್ತಿ ಕೂಡಿ ಎನಗೆ ಇಷ್ಟವಾಗಿ ಬಂದು ನಿಂದೆಯಲ್ಲಾ!
ಚಿತ್ತ ನಿಲುವುದಕ್ಕೆ ಗೊತ್ತಾಗಿ,
ಗೊತ್ತಿನ ಮರೆಯಲ್ಲಿ
ನಾ ಹೊತ್ತ ಸಕಲೇಂದ್ರಿಯವನೀಸುವುದಕ್ಕೆ ತೆಪ್ಪವಾಗಿ
ಭವಸಾಗರವ ದಾಂಟಿಸಿದೆಯಲ್ಲಾ!
ಭಕ್ತಿಪ್ರಿಯ ಸತ್ಯಕರಂಡಮೂರ್ತಿ
ಸದಾಶಿವಮೂರ್ತಿಲಿಂಗವೆ ಎನ್ನಂಗದಲ್ಲಿ ಹಿಂಗದಿರು. ॥ ೧ ॥

೧೪೩೩
ಅರಸು ಆಲಯವ ಹಲವ ಕಟ್ಟಿಸಿದಂತೆ,
ಶರೀರದಲ್ಲಿ ಆತ್ಮನು ಹಲವು ನೆಲೆವುಂಟೆಂದು
ತಿರುಗುತ್ತಿಹ ಭೇದವಾವುದು ಹೇಳಿರಯ್ಯಾ?
ಆ ಘಟದೊಳಗಳ ಭೇದ:
ಅಸು ಹಿಂಗಿದಾಗ ಘಟವಡಗಿತ್ತು,
ಅರಸಿಲ್ಲದಾಗ ಆಲಯ ದೆಸೆಗೆಟ್ಟಿತ್ತು.
ಅಳಿವುದೊಂದು, ಉಳಿದಿಹಲ್ಲಿ ಕಾಬುದೊಂದೆ ಭೇದ,
ಸದಾಶಿವಮೂರ್ತಿಲಿಂಗವನರಿತಲ್ಲಿ. ॥ ೨ ॥

೧೪೩೪
ಅಸಿಯ ಮೊನೆಯ ಮುರಿದಡೆ ಮಸೆದಡೆ ಮೊನೆಯಾಗದೆ ಅಯ್ಯಾ?
ಅಸು ಮರೆದಡೆ ಆತ್ಮನನರಿದಡೆ ಕೇಡುಂಟೆ ಅಯ್ಯಾ?
ಮರೆವುದು ಅರಿವುದು ಎರಡುಳ್ಳನ್ನಕ್ಕ,
ಮರೆಯದೆ ಪೂಜಿಸು ಸದಾಶಿಮೂರ್ತಿಲಿಂಗವ. ॥ ೩ ॥

೧೪೩೫
ಆಕಾಶದಲ್ಲಿ ತೋರುವ ಮೋಡದ ಮುಗಿಲಿನಂತೆ,
ಶಶಾಂಕನ ಕಾಬ ಅಂಬುಧಿಯಂತೆ,
ವಿಷಧರನ ಕಾಬ ವಿಷಜದಂತೆ ಹೆಚ್ಚುಗೆಯಾಗಿ
ಆತ್ಮಭೇದದಲ್ಲಿ ಕುರುಹಿಟ್ಟುದ ಕಂಡು
ಮನವುಣ್ಮಿ ತನುಕರಗಿ ನಿಶ್ಚಯ ನಿಜತತ್ತ್ವದಲ್ಲಿ ಬೆಳಗುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. || ೪ ||

೧೪೩೬
ಆತ್ಮ ಘಟಮಧ್ಯದಲ್ಲಿ ನಿಂದು,
ಕೈಯಲ್ಲಿ ಮುಟ್ಟಿ, ಕಿವಿಯಲ್ಲಿ ಕೇಳಿ, ನಾಸಿಕದಲ್ಲಿ ವಾಸಿಸಿ,
ಕಣ್ಣಿನಲ್ಲಿ ನೋಡಿ, ಬಾಯಲ್ಲಿ ಉಂಬಂತೆ,
ಪಂಚೇಂದ್ರಿಯಕ್ಕೆ ತತ್ತಾಗಿ ಹಂಚಿಕೊಂಡಿಹುದು ಒಂದೆ ಆತ್ಮ.
ಅವರವರ ಮುಖಂಗಳಿಂದ ಗುಣವನರಿವನ್ನಕ್ಕ,
ಇಷ್ಟದ ಮರೆಯಲ್ಲಿ ಚಿತ್ತ ನಿಂದು, ವಸ್ತುನಾಮವಾಗಬೇಕು.
ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೫ ||

೧೪೩೭
ಉದಕ ನಿಂದಲ್ಲಿ ಪ್ರತಿಬಿಂಬ ನಿಶ್ಚಯವಾಯಿತ್ತು.
ಆ ಜಲ ಸಂಚಾರದಿಂದ ಕದಲೆ ಮತ್ತೆ
ಪ್ರತಿರೂಪಿಂಗೆ ಎಡೆಯುಂಟೆ?
ಚಿತ್ತ ಸಂಚಾರಿಸುವಲ್ಲಿ ಕುರುಹಿನ ಗೊತ್ತಿಗೆ ಒಡೆತನವುಂಟೆ?
ಇಂತೀ ಉಭಯದ ಸಕೀಲ ನಿಂದು, ಕಳೆ ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. || ೬ ||

೧೪೩೮
ಓಗರ ಹಸಿಯಿತ್ತೆಂದು ಉಂಬವರಿಲ್ಲ,
ನೀರು ಬಾಯಾರಿತ್ತೆಂದು ಕುಡಿವರಿಲ್ಲ,
ಭೂಮಿಗೆ ಬಡತನವೆಂದು ಬಿತ್ತುವರಿಲ್ಲ.
ತಮ್ಮ ಒಲವರಕ್ಕೆ ತಾವು ಮಾಡುವಲ್ಲಿ ಗನ್ನದ ಆಸೆ ಬೇಡ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೭ ||

೧೪೩೯
ಕರೆವ ಪಶುವಿಂಗೆ ತೃಣ ದವಸ ಎಯ್ದಾದಲ್ಲಿ
ಹಾಲ ವೆಗ್ಗಳವ ಕಾಬಂತೆ,
ಕ್ರೀಶುದ್ಧತೆಯಾಗಿ ಮನ ವಚನ ಕಾಯ ತ್ರಿಕರಣ ಶುದ್ಧವಾಗಿ ಇದ್ದಲ್ಲಿಯೆ

ವಸ್ತುವಿನ ಹೆಚ್ಚುಗೆಯ ಒದಗು, ಅನಿತ್ಯವ ನೀಗಿ ನಿಂದ ಬೆಳಗು,
ಸದಾಶಿವಮೂರ್ತಿಲಿಂಗದ ಸಂಗದ ಸಂತೋಷದ ಇರವು. ॥ ೮ ॥

೧೪೪೦
ಕಲ್ಲಿನೊಳಗಣ ಜ್ಯೋತಿ, ಉರಿಯೊಳಗಣ ಉಷ್ಣ,
ಹಣ್ಣಿನೊಳಗಣ ಸಾರದ ಸವಿಯಂತೆ,
ಸವಿಲೇಪವಾದ ಚಿತ್ತದ ವಿಲಾಸಿತದಂತೆ
ನಿಜಲಿಂಗದಲ್ಲಿ ಘನಬೆಳಗು ತೋರುತ್ತಲಿದೆ,
ಸದಾಶಿವಮೂರ್ತಿಲಿಂಗದಲ್ಲಿ. ॥ ೯ ॥

೧೪೪೧
ಕಲ್ಲು ಮರ ಮಣ್ಣಿನ ಮರೆಯಲ್ಲಿ ಪೂಜಿಸಿಕೊಂಬುದು ವಸ್ತುವೆ?
ತನ್ನ ಮನಸ್ಸಿನ ಗೊತ್ತಲ್ಲದೆ.
ಅಲ್ಲಿಪ್ಪುದನರಿವ ಅರಿವು ತಾನೆ ನಿಜವಸ್ತುವಾಗಿ ಬೆಳಗುತ್ತದೆ,
ಸದಾಶಿವಮೂರ್ತಿಲಿಂಗವೆಯಾಗಿ. ॥ ೧೦ ॥

೧೪೪೨
ಕಾಯದ ಕಕ್ಕುಲತೆಗಾಗಿ ಜೀವಿಗಳ ಬಾಗಿಲ ಕಾಯದೆ,
ಈಷಣತ್ರಯಕ್ಕಾಗಿ ಭವದುಃಖಿಗಳ ಬಾಗಿಲಲ್ಲಿ ನಿಂದು
ವೇಳೆಯ ಕಾವಂಗೆ ಭಾವರಹಿತ ಬ್ರಹ್ಮವೇಕೆ?
ಅದು ನಾಣ್ನುಡಿಗಳೊಳಗು, ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥ ೧೧ ॥

೧೪೪೩
ಕಾಯವುಳ್ಳನ್ನಕ್ಕ ಮಾಡುವುದು ಲಿಂಗಪೂಜೆಯ,
ಜೀವವುಳ್ಳನ್ನಕ್ಕ ಅರಿವುದು ಅಭೇದ್ಯ ವಸ್ತುವ,
ಉಭಯವ ಕಡೆಗಾಣಿಸಿ ನಿಂದಲ್ಲಿ
ಸದಾಶಿವಮೂರ್ತಿಲಿಂಗವೆಂದು ಕುರುಹಿಡಲಿಲ್ಲ. ॥ ೧೨ ॥

೧೪೪೪
ಕುರಿಯೊಡೆಯ ಹಲಬರ ನಡುವೆ ನಿಂದಿರೆ ತನ್ನ ಒಡೆಯನನರಿವಂತೆ,
ಸಕಲೇಂದ್ರಿಯ ಬಹುದುಃಖದಲ್ಲಿದ್ದಡೂ
ತತ್ಕಾಲಕ್ಕೆ ಅರ್ಚನೆ ನೇಮ ಕೃತ್ಯ ತಪ್ಪದೆ ಮಾಡಬೇಕು.
ಇದು ನಿಶ್ಚಯದ ಇರವು,
ಸದಾಶಿವಮೂರ್ತಿಲಿಂಗವನರಿವುದಕ್ಕೆ ಕಟ್ಟಿದ ಗೊತ್ತು. ॥ ೧೩ ॥

೧೪೪೫
ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ
ಬೆಳೆಗೆ ಮುನಿದವರುಂಟೆ ಅಯ್ಯಾ?

ಅರಿದಂಗವ ತಾಳಿದವರಲ್ಲಿ ಮರವೆಗೆ ಮುನಿವರಲ್ಲದೆ
ಅರಿವಿಗೆ ಮುನಿವರುಂಟೆ ಅಯ್ಯಾ?
ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ
ಮೊಲೆಯ ಕಟ್ಟಿದರುಂಟೆ ಅಯ್ಯಾ?
ಗುರುವಾದಡೂ ಆಗಲಿ,
ಲಿಂಗವಾದಡೂ ಆಗಲಿ,
ಜಂಗಮವಾದಡೂ ಆಗಲಿ
ಅರಿವಿಂಗೆ ಶರಣು, ಮರವಿಂಗೆ ಮಥನವ ಮಾಡಿದಲ್ಲದೆ ಇರೆ.
ಇದು ನೀವು ಕೊಟ್ಟ ಅರಿವಿನ ಮಾರನ ಇರವು,
ಸದಾಶಿವಮೂರ್ತಿಲಿಂಗದ ಬರವು. || ೧೪ ||

೧೪೪೬

ಕೋಟಿ ಗುರುವಾಗಬಹುದು, ಭಕ್ತನಾಗಬಾರದು.
ಕೋಟಿ ಚರವಾಗಬಹುದು, ಭಕ್ತನಾಗಬಾರದು.
ಕೋಟಿ ಲಿಂಗವಾಗಬಹುದು, ಭಕ್ತನಾಗಬಾರದು.
ತ್ರಿವಿಧಕ್ಕಾಧಾರ ಭಕ್ತನ ವಿಶ್ವಾಸ, ತ್ರಿವಿಧದ ಪ್ರಾಣ ಭಕ್ತನ ಚಿತ್ತ.
ಭಕ್ತನ ಬಾಗಿಲಲ್ಲಿ ಈಶ್ವರನಿಪ್ಪ,
ಭಕ್ತನ ಅಂಗಳದಲ್ಲಿ ಮಹಾಲಿಂಗವಿಪ್ಪುದು.
ಭಕ್ತನ ಆಶ್ರಯದಲ್ಲಿ ಪ್ರಸಾದಕ್ಕೆ
ಸದಾಶಿವಮೂರ್ತಿಲಿಂಗವು ಕಾಯಿದುಕೊಂಡಿಪ್ಪನು. || ೧೫ ||

೧೪೪೭

ಗಂಧವನೊಳಕೊಂಡ ಕುಸುಮವ ಕೊಯ್ಯಬಹುದಲ್ಲದೆ,
ಗಂಧವನೊಳಕೊಂಡ ವಾಯುವ ಕೊಯ್ಯಬಹುದೆ?
ಆತ್ಮನನೊಳಕೊಂಡಿದ್ದ ಘಟವನರಿಯಬಹುದಲ್ಲದೆ
ಘಟವನೊಳಕೊಂಡಿದ್ದಾತ್ಮನನರಿಯಬಹುದೆ?
ವಸ್ತು ಅಂಗವಾದಲ್ಲಿ ಅರಿಯಬಹುದಲ್ಲದೆ
ಅಂಗ ವಸ್ತುವಾದಲ್ಲಿ ಹಿಂಗಿ ಅರಿವ ಠಾವಿನ್ನಾವುದು?
ಕುಸುಮಕ್ಕೆ ಕಡೆ ನಡು ಮೊದಲಲ್ಲದೆ ಗಂಧಕ್ಕೆ ಕಡೆ ನಡು ಮೊದಲುಂಟೆ?
ಅರಿವುದಕ್ಕೆ, ಅರುಹಿಸಿಕೊಂಬುದಕ್ಕೆ, ಕುರುಹನರಿತಲ್ಲಿಯೆ
ಸದಾಶಿವಮೂರ್ತಿಲಿಂಗವೆಂಬ ರೂಪು ನಿಂದಿತ್ತು. || ೧೬ ||

೧೪೪೮

ಗಂಧವೊಂದೆಂದಡೆ, ಹಲವು ವಾಸನೆಯ ಕುಸುಮದಲ್ಲಿ ಸಿಕ್ಕಿ,
ವಾಸನೆ ಭಿನ್ನವಾಗಿ ತೋರುವಂತೆ,

ಆತುಮನೊಂದೆಂದಡೆ, ಹಲವು ಘಟದಲ್ಲಿ ಸಿಕ್ಕಿ,
ಅವರವರ ನೆಲಹೊಲಂಗಳಲ್ಲಿ ಸಿಕ್ಕಿ
ಫಲಭೋಗಂಗಳಿಗೆ ಒಳಗಾಯಿತ್ತು.
ಆತ್ಮನ ಒಲವರವೊಂದೆನಬಹುದೆ ?
ಸುಗಂಧಕ್ಕೂ ದುರ್ಗಂಧಕ್ಕೂ ಒಂದೆ ವಾಯು.
ಅರಿವಾತ್ಮವೊಂದೆಂದಡೆ,
ಉಭಯವನರಿಯಬೇಕು, ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೧೭ ||

೧೪೪೯
ಗುರುವಿಂಗೂ ಲಿಂಗಕ್ಕೂ ಜಂಗಮಕ್ಕೂ
ಭಕ್ತನಂಗವೆ ಮಂದಿರವಾಗಿ,
ಮನದ ವಿಶ್ರಾಂತಿಯೆ ಸುಖಭೋಜನ ಭೋಗಂಗಳಾಗಿ
ತಾಳುವ ಕಾರಣ,
ಭಕ್ತನಂಗವೆ ಸದಾಶಿವಮೂರ್ತಿಲಿಂಗದ ಅಂಗ. || ೧೮ ||

೧೪೫೦
ಜಂಗಮಲಿಂಗವಾದಲ್ಲಿ ಜಂಗುಳಿಗಳ ಬಾಗಿಲ ಕಾಯದಿರಬೇಕು.
ಒಡೆಯನ ಓಲಗವ ಬಂಟ ಕಾಯಬೇಕಲ್ಲದೆ,
ಬಂಟನ ನಿಳಯವ ಒಡೆಯ ಕಾಯಬಲ್ಲನೆ?
ಇಂತಿವನರಿದು, ರಾಜಮಂದಿರದಲ್ಲಿ
ಗೃಹಸ್ಥ ಆಶ್ರಯದಲ್ಲಿ
ವೇಳೆಯನರಿದು ಭುಂಜಿಸಿಹೆನೆಂಬ
ದರ್ಶನ ಜಂಗುಳಿಗೆ ಜಂಗಮಸ್ಥಲವಿಲ್ಲ ಎಂದೆ.
ಸದಾಶಿವಮೂರ್ತಿಲಿಂಗವು ಅವರಂಗಕ್ಕೆ ಮುನ್ನವೆ ಇಲ್ಲ ಎಂದೆ. || ೧೯ ||

೧೪೫೧
ನಿಕ್ಷೇಪವ ನಿಕ್ಷೇಪಿಸುವಲ್ಲಿ ಮತ್ತಾರೂ ಅರಿಯದಂತೆ
ಇರಿಸಬೇಕೆಂಬುದಕ್ಕಿಂದವು ಕಡೆಯೆ
ಶಿವತತ್ವಪರಮಜ್ಞಾನ?
ಇಂತಿದನರಿತು ಲಿಂಗಬಾಹಿರರಲ್ಲಿ,
ಕಂಡ ನಿಂದ ಠಾವಿನಲ್ಲಿ,
ಬಂದಂತೆ ಬಾಯ ಬಡಿವರಲ್ಲಿ
ಶಿವಪ್ರಸಂಗವನೊಂದನೂ ನುಡಿಯಲಾಗದು.
ಮೀರಿ ನುಡಿದಡೆ ಸದಾಶಿವಮೂರ್ತಿಲಿಂಗಕ್ಕೆ ದೂರ. || ೨೦ ||

೧೪೫೨

ನಿಜಗುರುವಿನ ಇರವು ಹೇಗಿರಬೇಕೆಂದಡೆ:
ನಿರ್ಮಲ ಸುಚಿತ್ತನಾಗಿ
ತನ್ನ ಸೋಂಕುವ ಸುಖದುಃಖಗಳು ಬಂದಲ್ಲಿ
ಆಗುಚೇಗೆಯನರಿಯದೆ,
ಫಲವ ಹೊತ್ತ ತರುವಿನಂತೆ,
ಕೆಚ್ಚಲ ಕ್ಷೀರದಂತೆ,
ಕಪಿತ್ಥದ ಫಳ ಗಟ್ಟಿಗೊಂಡಂತೆ.
ಹೊರಗಳ ಇರವು, ಒಳಗಳ ನಿಜ.
ಲೌಕಿಕಕ್ಕೆ ಗುರುವಾಗಿ ಪರಮಾರ್ಥಕ್ಕೆ ಸದ್ಗುರುವಾಗಿ
ಡುಂಡುಫಳದಂತೆ ಹೊರಗಳ ಬಿರುಬು,
ಒಳಗಳ ಮಧುರಸಾರದಂತಿರಬೇಕು.
ಕರು[ಣಿ] ಕಾರುಣ್ಯಾಂಬುಧಿ ಸದ್ಗುರುವಿನ ಇರವು
ಸದಾಶಿವಮೂರ್ತಿಲಿಂಗವು ತಾನೆ. || ೨೧ ||

೧೪೫೩

ಪಾತಾಳದ ನೀರ ಹುರಿ ಸಂಚದಿಂದ ಧರೆಗೆ ತಾಹಂತೆ
ಅರಿವು ಆತ್ಮನಲ್ಲಿ ಅಡಗಿದ್ದುದ ತಂದೆಯಲ್ಲಾ!
ಕರದಿ ಕುರುಹಾಗಿ, ಅಡಗಿದೆಯಲ್ಲಾ!
ಶೃಂಗಾರ ನಿಳಯದ ಮುಚ್ಚಳು
ಕೀಲಿನಿಂದ ಕಡೆಗಾಣಿಸಿದಂತೆ ಅಡಗಿದೆಯಲ್ಲಾ!
ಕುರುಹು ಭಿನ್ನವಿಲ್ಲದೆ ಎನ್ನೊಡಗೂಡು,
ಸದಾಶಿವಮೂರ್ತಿಲಿಂಗವೆ. || ೨೨ ||

೧೪೫೪

ಬಯ್ಚಿಟ್ಟ ಬಯ್ಕೆಯ ಒಡೆಯ ಬೇಡಿದಡೆ ಕೊಡದಿರ್ದಡೆ
ಸ್ವಾಮಿದ್ರೋಹಿಕೆಯಲ್ಲವೆ?
ಅಟ್ಟ ಅಡಿಗೆಯ ಪತಿಗಿಕ್ಕದೆ ಸತಿ ಉಂಡಡೆ ನೆಟ್ಟನೆ ಕಳ್ಳೆಯಲ್ಲವೆ?
ಕೊಟ್ಟಾತ ಒಡವೆಯ ಬೇಡಿದಡೆ
ಕಟ್ಟಿ ಹೋರುವ ಕಷ್ಟಜೀವಿಗೇಕೆ ತ್ರಿವಿಧಭಕ್ತಿ, ಸಜ್ಜನಯುಕ್ತಿ?
ಇಂತೀ ಸಜ್ಜನಗಳ್ಳರ ಬಲ್ಲನಾಗಿ
ಸದಾಶಿವಮೂರ್ತಿಲಿಂಗವು ಒಲ್ಲನು. || ೨೩ ||

೧೪೫೫

ಬ್ರಹ್ಮವನರಿತ ಮತ್ತೆ ಸುಮ್ಮನೆ ಇರಬೇಕು.
ಬ್ರಹ್ಮಪ್ರಸಂಗವ ಮಾಡುವಲ್ಲಿ ಪರಬ್ರಹ್ಮಿಗಳಲ್ಲಿ

ಪ್ರಸಂಗವ ಮಾಡಬೇಕು.
ತನ್ನ ಅಗಮ್ಯವ [ಮ]ರೆಯಬೇಕೆಂದು
ಬೀದಿಯ ಪಸರದಂತೆ, ಲಾಗನಾಡುವ ವಿಧಾಂತನಂತೆ ಆಗಬೇಡ.
ಕಳ್ಳನ ಚೇಳೂರಿದಂತಿರು, ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೨೪ ||

೧೪೫೬
ಮಠದಲ್ಲಿ ತೋರುವ ಜ್ಯೋತಿ ಅಂಗ ಚಿಕ್ಕಿತ್ತಾಗಿ,
ಬೆಳಗು ಪರಿಪೂರ್ಣವಾಗಿ ನಿಳಯವ ತುಂಬಿದಂತೆ
ಘಟದೊಳಗಳ ಸ್ವಯಂಜ್ಯೋತಿ
ಸರ್ವಾಂಗ ಪರಿಪೂರ್ಣವಾಗಿ ಬೆಳಗುತ್ತಿಹ
ಅರಿವಾತ್ಮನ ಭೇದವ ಅರಿತಲ್ಲಿಯೆ
ಸದಾಶಿವಮೂರ್ತಿಲಿಂಗ ನೆಲೆಗೊಂಡುದು. || ೨೫ ||

೧೪೫೭
ಮಣ್ಣಿನೊಳಗೆ ಚಿನ್ನ ಹುಟ್ಟಿ ಮಣ್ಣ ಬಿಟ್ಟಂತಿರಬೇಕು,
ಕಲ್ಲಿನೊಳಗೆ ಕಾಂತಿ ಹುಟ್ಟಿ ಕಲ್ಲ ಬಿಟ್ಟಂತಿರಬೇಕು,
ಕ್ರೀ ಭಾವದಲ್ಲಿ ಅರಿವು ನೆಲೆಗೊಂಡು.
ಸಾಳಿಸಸಿಯ ತುದಿಯಲ್ಲಿ ತುಷ ಮೇಲುಗಳೆದು ನಿಂದಂತೆ,
ಕ್ರೀ ನಿಂದು ಅರಿವು ತಲೆದೋರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೨೬ ||

೧೪೫೮
ಮಾಡುವಂಗೆ ಅರಿವೆ ಕಾರಣ, ಮಾಡಿಸಿಕೊಂಬವಂಗೆ ಅರಿವೆ ಕಾರಣ,
ಸರ್ವಮಯವೆಲ್ಲಕ್ಕು ಅರಿವೆ ಮುಖ್ಯ,
ಸದಾಶಿವಮೂರ್ತಿಲಿಂಗಕ್ಕು ಅರಿವೆ ಕಾರಣ. || ೨೭ ||

೧೪೫೯
ಮೊನೆ ತಪ್ಪಿದಲ್ಲಿ
ಅಲಗಿನ ಘನವೇನ ಮಾಡುವುದು?
ಅರಿವು ಹೀನವಾದಲ್ಲಿ
ಕ್ರೀಯ ಹರವರಿಯೇನ ಮಾಡುವುದು?
ವರ್ತನ ಶುದ್ಧವಿಲ್ಲದೆ
ಲಾಂಛನದ ಉತ್ಕೃಷ್ಟವೇನ ಮಾಡುವುದು?
ತ್ರಿಕರಣ ಶುದ್ಧವಿಲ್ಲದ ಮಾಟ
ದ್ರವ್ಯದ ಕೇಡು, ಭಕ್ತಿಗೆ ಹಾನಿ.

ಇಂತೀ ಗುಣಾದಿಗುಣಂಗಳಲ್ಲಿ ಅರಿಯಬೇಕು,
ಸದಾಶಿವಮೂರ್ತಿಲಿಂಗವನರಿಯಬೇಕು. || ೨೮ ||

೧೪೬೦
ಲಿಂಗಕ್ಕೆ ಸಹಭೋಜನವಾದಲ್ಲಿ
ಕೂರ್ಮನ ಶಿಶುವಿನ ಸ್ನೇಹದಂತಿರಬೇಕು,
ಅಯಸ್ಕಾಂತದ ಶಿಲೆ ಲೋಹದಂತಿರಬೇಕು,
ಶಶಿಶಿಲೆಯಂತೆ ಒಸರುವ ಅರ್ಪಿತ, ಕೂಡುವ ಕೂಟ.
ಭ್ರಮರ ಚಂಪಕದಂತೆ ಒಡಗೂಡಿ ಲಿಂಗವ
ಎಡೆ ತೆರಪಿಲ್ಲದ ಸಹಭೋಜನಕ್ಕೆ ಕೊಡುವಾತನ ಅಡಿಗೆ
ಕಡೆ ನಡು ಮೊದಲಿಲ್ಲದೆರಗುವೆ.
ಆತ ಸದಾಶಿವಲಿಂಗವು ತಾನೆ. || ೨೯ ||

೧೪೬೧
ವೇದವೇದಾಂತಂಗಳಿಂದ ಸಿದ್ಧಸಿದ್ಧಾಂತಂಗಳಿಂದ
ಎಲ್ಲಿ ನೋಡಿದಡೂ ವಿಚಾರವೊಂದೆ ಭೇದ.
ಅರಿದಲ್ಲಿ ಮಲಕ್ಕೆ ಹೊರಗು, ಮರೆದಲ್ಲಿ ಮಲಕ್ಕೆ ಒಳಗು.
ಅರಿವು ಮರವೆ ನಿಂದಲ್ಲಿ ಸದಾಶಿವಮೂರ್ತಿಲಿಂಗದ ಬೆಳಗು. || ೩೦ ||

೧೪೬೨
ವಾಗದ್ವೈತದಲ್ಲಿ ನುಡಿದು ಸ್ವಯಾದ್ವೈತದಲ್ಲಿ ನಡೆದು ತೋರಬೇಕು.
ಊರೊಳಗೆ ಪಂಥ, ರಣದೊಳಗೆ ಓಟವೆ?
ಮಾತಿನಲ್ಲಿ [ರೇ]ಚನೆ, ಮನದಲ್ಲಿ ಆಸೆಯೆ?
ಈ ಘಾತಕರ ಶಾಸ್ತ್ರ, ವಚನರಚನೆಗೆ ಮಚ್ಚಿ ಮಾಡುವನ ಭಕ್ತಿ,
ಅಲಗಿನ ಘೃತವ ಶ್ವಾನ ನೆಕ್ಕಿ ನಾಲಗೆ ಹರಿದು
ಮತ್ತಲಗ ಕಂಡು ತೊಲಗುವಂತಾಯಿತ್ತು, ಉಭಯದ ಇರವು.
ಇಂತೀ ಭೇದಂಗಳಲ್ಲಿ ಅರಿತು ನಿರತನಾಗಿರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. || ೩೧ ||

೧೪೬೩
ಸಿದ್ಧರಸ ಲೇಸೆಂದಡೆ ತಾನಿದ್ದ ಕುಡಿಕೆ ಹೇಮವಾದುದಿಲ್ಲ.
ಲೋಹಕ್ಕಲ್ಲದೆ ವೇಧಿಸುವುದಿಲ್ಲ.
ವಸ್ತು ಸರ್ವಮಯದಲ್ಲಿ ಸಂಪೂರ್ಣವಾಗಿದ್ದಡೇನು,
ತನ್ನ ಅರಿವವರ ಹೃದಯದಲ್ಲಿಯಲ್ಲದೆ ಇರ,
ಸದಾಶಿವಮೂರ್ತಿಲಿಂಗದಿರವು. || ೩೨ ||

೧೪೬೪
ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ
ಒದೆವುದಲ್ಲದೆ ಉಣಲೀಸುವುದೆ?
ಅರಿವು ನಷ್ಟವಾದವ ಕ್ರೀಯ ಬಲ್ಲನೆ?
ಕ್ರೀಯೆಂಬುದೆ ಹಸು,
ಅರಿವೆಂಬುದೆ ಹಾಲು,
ಬಯಕೆಯೆಂಬುದೆ ಕರು.
ಇಂತೀ ತ್ರಿವಿಧವನರಿದಲ್ಲಿ ಸದಾಶಿವಮೂರ್ತಿಲಿಂಗವು ತಾನೆ. || ೩೩ ||

*

ಅವಸರದ ರೇಕಣ್ಣ

೧೪೬೫
ಎಲ್ಲಾ ಧರೆಯಲ್ಲಿಯೂ ಹೇಮ ಹರಿದ ಮತ್ತೆ
ಅರಿದೊರೆಗಳು ಇರಿದಾಡಲೇತಕ್ಕೆ?
ಎಲ್ಲವೂ ಸತ್ಯಮಯವಾದಲ್ಲಿ
ಅವ ಕೆಟ್ಟನಿವ ಕೆಟ್ಟನೆಂದು ಹೋರಿಯಾಡಲೇತಕ್ಕೆ?
ರತ್ನ ರಜತ ಮೌಕ್ತಿಕ ಹೇಮ ಇವು ಮುಂತಾದ
ಸ್ಥಾವರ ಫಲ ಸಸಿ ವೃಕ್ಷಂಗಳು ಮೊದಲಾದುವೆಲ್ಲವೂ
ತಮ್ಮ ತಮ್ಮ ಸ್ವಸ್ಥಭೂಮಿಗಳಲ್ಲಿ ಅಲ್ಲದೆ ಹುಟ್ಟವಾಗಿ,
ಕುಲವಿಪ್ಪೆಡೆಯಲ್ಲಿ ಆಚಾರ,
ಆಚಾರವಿಪ್ಪೆಡೆಯಲ್ಲಿ ನಿಷ್ಠೆ,
ನಿಷ್ಠೆ ಇಪ್ಪೆಡೆಯಲ್ಲಿ ನಿಜಲಿಂಗವಸ್ತು,
ವಸ್ತು ನಿಶ್ಚಯವಾದ ಎಡೆಯಲ್ಲಿ ಭಕ್ತಿಯ ಬೆಳಸು,
ಕೊಯ್ದು, ಒಕ್ಕಿ, ತೂರಿ, ಅಳತೆ ಸಂದಿತ್ತು,
ಸದ್ಯೋಜಾತಲಿಂಗವೆಂಬ ಕಣಜಘಟದಲ್ಲಿ. || ೧ ||

೧೪೬೬
ದಾರಿಯಲ್ಲಿ ಬೀದಿಯಲ್ಲಿ ಮನೆಗಳಲ್ಲಿ
ಹೊನ್ನು ಹೆಣ್ಣು ಮಣ್ಣಿನ ಮೇಲಣ ಕಾಮವಿಕಾರ ತೋರಿದಡೆ
ಅದಕ್ಕೇನೂ ಶಂಕೆಯಿಲ್ಲ.
ಅದೇನು ಕಾರಣವೆಂದಡೆ:
ಚಿತ್ರದ ಹುಲಿ, ಕನಸಿನ ಹಾವು, ಜಲಮಂಡುಕ ಕಚ್ಚಿ ಸತ್ತವರುಂಟೆ?
ಇದು ಕಾರಣ, ಜಾಗ್ರಸ್ವಪ್ನಸುಷುಪ್ತಿಗಳಲ್ಲಿ ಕಾಮವಿಕಾರ ತೋರಿತ್ತೆಂದು
ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಗಳಿಂದ ಘಟವ ಬಿಟ್ಟಡೆ

ಆತ ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ.
ಇದು ಭಕ್ತರಾಚರಣೆ, ವಿರಕ್ತನಿರ್ಣಯ.
ಇಂತಪ್ಪವರಿಗೆ ಸದ್ಯೋಜಾತಲಿಂಗವುಂಟಿಲ್ಲವೆಂದೆನು. || ೨ ||

೧೪೬೭
ಬೇವಿನ ಮರದಲ್ಲಿ ಕುಳಿತು
ಬೆಲ್ಲವ ಮೆದ್ದಡೆ ಕಹಿಯಪ್ಪುದೆ?
ಅಂಧಕ ಅಮೃತವನೀಂಟಿದಲ್ಲಿ ಹುಳಿಯಪ್ಪುದೆ?
ಪಂಗುಳ ಪಯಣಕ್ಕೆ ಬಟ್ಟೆ[ಯಿ]ಲ್ಲಾ ಎಂದಡೆ
ಕೊಂದವರುಂಟೆ ಅವನನು?
ಇದು ಕ್ರಿಯಾಶ್ರದ್ಧೆ, ಶುಶ್ರೂಷಾಭಾವ ಸದ್ಯೋಜಾತಲಿಂಗಕ್ಕೆ. || ೩ ||

೧೪೬೮
ಮರನನೇರದೆ ಹಣ್ಣ ಕೊಯ್ಯಬಹುದೆ?
ಕುಸುಮವಿಲ್ಲದೆ ಗಂಧವ ಮುಡಿಯಬಹುದೆ?
ಉಪದೃಷ್ಟವಿಲ್ಲದೆ ನಿಜದೃಷ್ಟವ ಕಾಣಬಹುದೆ?
ಕ್ರೀಶ್ರದ್ಧೆಯಿಲ್ಲದೆ ತ್ರಿವಿಧಕರ್ತೃ ತನಗೆ ಸಾಧ್ಯವಪ್ಪುದೆ?
ಇದು ಕಾರಣ, ಗುರುವಿನಲ್ಲಿ ಸದ್ಭಾವ, ಲಿಂಗದಲ್ಲಿ ಮೂರ್ತಿಧ್ಯಾನ,
ಜಂಗಮದಲ್ಲಿ ತ್ರಿವಿಧಮಲದೂರಸ್ಥನಾಗಿಪ್ಪುದು,
ಸದ್ಭಕ್ತನಂಗ, ಚಿದ್ಘನವಸ್ತುವಿನ ಸಂಗ, ಸದ್ಯೋಜಾತಲಿಂಗಕ್ಕೆ ಸುಸಂಗ. || ೪ ||

೧೪೬೯
ಮುಟ್ಟುವುದು ತಟ್ಟುವುದು ಸೋಂಕುವುದು ಸುಳಿವುದು
ಲಿಂಗ ಮುಂತೆಂಬಲ್ಲಿ ಅಂಗ ಹಿಂಚೆಂಬಲ್ಲಿ,
ಮುಂದುಹಿಂದಣ ಉಭಯವನರಿವುದಕ್ಕೆ ಸಂದೇಹಾಸ್ಪದವಾದಲ್ಲಿ
ಅದು ಅನರ್ಪಿತಭೇದ ಸದ್ಯೋಜಾತಲಿಂಗಕ್ಕೆ. || ೫||

*

ಆದಯ್ಯ

೧೪೭೦
ಅಂಗದ ಮೇಲಣ ಲಿಂಗ ಅಂಗದಲ್ಲಿ ಪೂರ್ಣವಾಗಿ
ತನುಗುಣವಳಿಯಿತ್ತು.
ಮನದ ಮೇಲಣ ಲಿಂಗ ಮನದಲ್ಲಿ ಪೂರ್ಣವಾಗಿ
ನೆನಹಿನ ಸಂಕಲ್ಪ ಕೆಟ್ಟಿತ್ತು.
ಪ್ರಾಣದ ಮೇಲಣ ಲಿಂಗ ಪ್ರಾಣದಲ್ಲಿ ಪೂರ್ಣವಾಗಿ
ಪ್ರಾಣನ ಪ್ರಕೃತಿ ನಷ್ಟವಾಯಿತ್ತು.

ಭಕ್ತಿ ಜ್ಞಾನ ಲಿಂಗಸನ್ನಿಹಿತವಾಗಿರಬಲ್ಲರಾಗಿ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಸ್ವತಂತ್ರರು. || ೧ ||

೧೪೭೧
ಅಂಗದ ಮೇಲಣ ಲಿಂಗ ಹಿಂಗಿದಾತನ ಭವಿ ಎಂಬರು.
ಅಂಗದ ಮೇಲಣ ಲಿಂಗ ಹಿಂಗದಾತನ ಭಕ್ತನೆಂಬರು.
ಅಂಗದೊಳಗೆ ಬೆರಸಿರ್ಪ ಲಿಂಗದ ಹೊಲಬನಾರೂ ಅರಿಯರು.
ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೇ?
ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲಡೆ
ಹಿಂಗುವದು ಭವಮಾಲೆ, ಸೌರಾಷ್ಟ್ರ ಸೋಮೇಶ್ವರಾ. || ೨ ||

೧೪೭೨
ಅಂಗಸುಖಿಗೆ ಲಿಂಗಸುಖವಳವಡದು,
ಲಿಂಗಸುಖಿಗೆ ಅಂಗಸುಖವಿಂಬುಗೊಳದು.
ವಾಗದ್ವೈತ, ಕ್ರಿಯಾದ್ವೈತ, ಭಾವಾದ್ವೈತ
ಇಂತೀ ತ್ರಿವಿಧಾದ್ವೈತ ಲಿಂಗಸುಖಸಾಹಿತ್ಯವಾದಲ್ಲಿ,
ನರಕವಿಲ್ಲ, ಸ್ವರ್ಗವಿಲ್ಲ, ಕರ್ಮವಿಲ್ಲ, ಭವವಿಲ್ಲ, ಮರಣವಿಲ್ಲ,
ಫಲವಿಲ್ಲ, ಪದವಿಲ್ಲ, ಇಹವಿಲ್ಲ, ಪರವಿಲ್ಲ.
ಸೌರಾಷ್ಟ್ರ ಸೋಮೇಶ್ವರಾ, ನೀ ಸಾಕ್ಷಿಯಾಗಿ. || ೩ ||

೧೪೭೩
ಅಗಣಿತನದ್ವಯನನುಪಮನಪ್ಪ
ಅಭವಂಗೆ ಭವರಹಿತನಾಗಿ ಭಕ್ತಿಯ ಮಾಡಬೇಕಲ್ಲದೆ,
ತಾನು ಭವದೊಳ್ಬಿರ್ದು, ಬಂಧನಕ್ಕೊಳಗಾಗಿ, ಮರ್ತ್ಯರಿಗೆ ತೊತ್ತಾಗಿ,
ಮಾಯಾಪಾಶದ ಕಾಲಕಣ್ಣಿಯೊಳು ಸಿಕ್ಕಿ,
ಕಾಮಂಗೆ ಗುರಿಯಾಗಿ, ಕಾಲಂಗೆ ಕೈವಶವಾಗಿ,
ಮಾಡುವ ಭಕ್ತಿಗೆ ನಾಚರು ನೋಡಾ.
ವರ್ಮವನರಿತು ಮಾಡದ ಭಕ್ತಿ
ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. || ೪ ||

೧೪೭೪
ಅಯ್ಯಾ, ಹುಲ್ಲುಮೊರಡಿಯೊಳಗೆ ಕಲ್ಪತರುವನರಸುವರೆ?
ಅಯ್ಯಾ, ಹಾವುಮೆಕ್ಕೆಯಲ್ಲಿ ದ್ರಾಕ್ಷಫಳವನರಸುವರೆ?
ಅಯ್ಯಾ, ಗೋರಿಕಲ್ಲುಗಳೊಳಗೆ ಚಿಂತಾಮಣಿಯನರಸುವರೆ?
ಅಯ್ಯಾ, ರೀತಿಕೆಯಲ್ಲಿ ಅಪರಂಜಿಯನರಸುವರೆ?

ಅಯ್ಯಾ, ಅಬಲಲ್ಲಿ ಅರವಿಂದವನರಸುವರೆ?
ಅಯ್ಯಾ, ಎನ್ನೊಳಗದಾವ ಗುಣವನರಸದೆ ನೀನೇ ಕರುಣಿಸಯ್ಯಾ,
ಕಾರುಣ್ಯಮೂರ್ತಿಯೆ ಸೌರಾಷ್ಟ್ರ ಸೋಮೇಶ್ವರಾ. ॥ ೫ ॥

೧೪೭೫
ಅರುವಿನ ಕ್ರಿಯೆಯಲ್ಲಿ ತೊಳತೊಳಗಿ ಬೆಳಗುವ
ಲಿಂಗೈಕ್ಯನು ಎಂತಿರ್ಪನೆಂದಡೆ:
ಬಾವನ್ನದೊಳಗಿಪ್ಪ ಸುಗಂಧದಂತೆ,
ಮಾಣಿಕ್ಯದೊಳಗಿಪ್ಪ ಸುರಂಗಿನಂತೆ,
ಚಿನ್ನದೊಳಗಿಪ್ಪ ಬಣ್ಣದಂತೆ ಭೇದವಿಲ್ಲದಚಲನಯ್ಯಾ.
ಸಂಪಗೆಯ ಕಂಪುಂಡ ಭ್ರಮರನಂತೆ
ಸೌರಾಷ್ಟ್ರ ಸೋಮೇಶ್ವರಲಿಂಗದ ಪರಮಸುಖದೊಳಗೆ
ಪರವಶನಾದ ಲಿಂಗೈಕ್ಯನು. ॥ ೬ ॥

೧೪೭೬
ಇನನ ಕರದಲ್ಲಿ ತಮವಿದ್ದು ಬದುಕಬಲ್ಲುದೆ?
ವಾಯುವಿನ ಹಸ್ತದಲ್ಲಿ ಸೊಡರಿದ್ದು ಬೆಳಗಬಲ್ಲುದೆ?
ಉರಿಯ ಮುಖದಲ್ಲಿ ಕರ್ಪುರವಿದ್ದು ಜೀವಿಸಬಲ್ಲುದೆ?
ಸೌರಾಷ್ಟ್ರ ಸೋಮೇಶ್ವರನ ಶರಣರ ಮುಂದಣ
ಕರಣಮಥನ, ಇಂದ್ರಿಯದಿಚ್ಛೆ,
ತನುಗುಣ, ಮನಗುಣ, ಪ್ರಾಣಗುಣಾದಿಗಳಿರಬಲ್ಲವೆ? ॥ ೭ ॥

೧೪೭೭
ಎತ್ತನೇರಿ ಎತ್ತನರಸುವನಂತೆ,
ತಾನಿರ್ದು ತನ್ನನರಸಿ ಕೇಳುವನಂತೆ,
ಹೊತ್ತ ನಿಜವನರಿಯದತ್ತಲಿತ್ತ ಸುತ್ತಿ ಬಳಲುವನಂತೆ,
ಹಿಡಿದಿರ್ದ ಲಿಂಗವ ಕಾಣದೆ ಮೂವಿಧಿಗಾಣ್ಬರನೇನೆಂಬೆನಯ್ಯಾ!
ತನ್ನಲ್ಲಿ ಗುರು ಲಿಂಗ ಜಂಗಮ ಪ್ರಸಾದ ಒಂದೆಂದು ಅರಿಯದ
ಅಜ್ಞಾನಬದ್ಧರನೆನಗೆ ತೋರದಿರಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥ ೮ ॥

೧೪೭೮
ಕಟ್ಟಣೆಯೊಳಗಣ ಕಾಂಸ್ಯಕದಂತೆ,
ಅಣೆಯೊಳಗಣ ಕೇಣದಂತೆ,
ಚಿನ್ನದೊಳಗಣ ಬಣ್ಣದಂತೆ,
ಪಟದೊಳಗಣ ತಂತುವಿನಂತೆ,
ಎನ್ನಲ್ಲಿ ಭಿನ್ನವಿಲ್ಲದಿದ್ದೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ. ॥ ೯ ॥

೧೪೭೯
ಕಡಲೊಳಗಣ ವಡಬ ಹೊದ್ದಿಯೂ ಹೊದ್ದದಂತೆ,
ಇಂದುಕಾಂತದೊಳಗೆ ಬಿಂದುವಿದ್ದಿಲ್ಲದಂತೆ,
ದರ್ಪಣದೊಳಗಣ ಪ್ರತಿಬಿಂಬ ಮುಟ್ಟಿಯೂ ಮುಟ್ಟದಂತೆ,
ಸರ್ವಸಾಕ್ಷಿಕನಾದ ಸೌರಾಷ್ಟ್ರ ಸೋಮೇಶ್ವರನು
ಪಿಂಡದೊಳಗಡಗಿ ಇಲ್ಲದಂತಿಪ್ಪನಯ್ಯಾ. || ೧೦ ||

೧೪೮೦
ಕಡವರವಿರ್ದು ಬಡತನವೇಕೊ?
ಮರುಜವಣೆಯಿರ್ದು ಮರಣವಾಗಲೇಕೊ?
ಅಗ್ನಿಸ್ತಂಭವಿರ್ದು ತನು ಹೊತ್ತಿ ಉರಿಯಲೇಕೊ?
ಅಮೃತಸಾಗರದಲ್ಲಿರ್ದು ಆಪ್ಯಾಯನವೇಕೊ?
ಪರಮಜ್ಞಾನವಿರ್ದು ಪರವಿಹದ ಪರಿಭವವೇಕೊ?
ಸೌರಾಷ್ಟ್ರ ಸೋಮೇಶ್ವರಲಿಂಗವಿರ್ದು ಮುಕ್ತಿಕಾಮಿತವೇಕೊ? || ೧೧ ||

೧೪೮೧
ಕಣ್ಣು ತನ್ನ ತಾ ಕಾಣಲರಿಯದಂತೆ,
ಹಣ್ಣು ತನ್ನ ರುಚಿಯ ತಾನರಿಯದಂತೆ,
ಉರಿ ತನ್ನ ಉಷ್ಣವ ತಾನರಿಯದಂತೆ,
ಬಯಲು ತನ್ನ ತೆರಪ ತಾನರಿಯದಂತೆ,
ಲಿಂಗೈಕ್ಯ ತನ್ನೊಳಗಳ ಲಿಂಗವ ತಾನರಿಯದಂತೆ,
ನಾ ಸತ್ತೆನೆಂಬ ಹೆಣನಿಲ್ಲವಾಗಿ.
ತನ್ನ ಮರೆದು ಲಿಂಗವ [ಮ]ರೆದ ಲಿಂಗೈಕ್ಯರು
ಸೌರಾಷ್ಟ್ರ ಸೋಮೇಶ್ವರನಲ್ಲಿ, ಅನುಭಾವವ ಮಾಡಲಿಲ್ಲ ;
ನುಡಿದು ಹೇಳಲಿಲ್ಲ; ನಡೆದು ತೋರಲಿಲ್ಲ. || ೧೨ ||

೧೪೮೨
ಕರಸ್ಥಲದಲ್ಲಿ ಲಿಂಗವಿರಲು
ಆ ಹಸ್ತವೇ ಕೈಲಾಸ, ಈ ಲಿಂಗವೇ ಶಿವನು.
ಇದು ಕಾರಣ, ಇಲ್ಲಿಯೇ ಕೈಲಾಸ.
ಇದಲ್ಲದೆ ಬೇರೆ ಬೆಳ್ಳಿಯ ಬೆಟ್ಟವೇ ಕೈಲಾಸವೆಂದು
ಅಲ್ಲಿಪ್ಪ ರುದ್ರನೇ ಶಿವನೆಂದು
ಕೈಲಾಸಕ್ಕೆ ಹೋದಹೆ ಬಂದಹೆನೆಂಬ ಭ್ರಾಂತು ಬೇಡ ಕೇಳಿರಣ್ಣಾ.
ಕಾಯದ ಅನುಗ್ರಹಲಿಂಗದಲ್ಲಿ ಶ್ರದ್ಧೆ ಇಲ್ಲದೆ ಇರಲು

ಇನ್ನೆಲ್ಲಿಯ ನಂಬುಗೆಯಯ್ಯಾ?
ಅಲ್ಲಲ್ಲಿಗೆ ಹರಿಹಂಚಾಗಿ ಕೆಡಬೇಡ ಕೇಳಿರಣ್ಣಾ.
ಅಂಗದೊಳಗೆ ಲಿಂಗಾಂಗ ಸಂಗವನರಿತು
ಒಳಹೊರಗು ಒಂದೇಯಾಗಿ
ಶಿಖಿ ಸಂಗದಲ್ಲಿ ಕರ್ಪೂರ ಉರಿಯಾಗಿಪ್ಪಂತೆ,
ಸರ್ವಾಂಗದಲ್ಲಿ ಲಿಂಗಸೋಂಕಿ
ಅಂಗಭಾವವಳಿದು, ಲಿಂಗಭಾವ ತನ್ಮಯವಾಗಿಪ್ಪ
ತದ್ಗತಸುಖ ಉಪಮಾತೀತವಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥ ೧೩ ॥

೧೪೮೩
ಕಲ್ಲಿನಲ್ಲಿ ಕನಕ ಒಗೆದಡೆ
ಕನಕ ಕಲ್ಲಿಂಗೆ ಕಿಂಕರನಪ್ಪುದೆ?
ಶುಕ್ತಿಯಲ್ಲಿ ಮೌಕ್ತಿಕ ಒಗೆದಡೆ
ಮೌಕ್ತಿಕ ಶುಕ್ತಿಗೆ ಕಿಂಕರನಪ್ಪುದೆ?
ಧರೆಯಲ್ಲಿ ಸುರತರು ಒಗೆದಡೆ
ಸುರತರು ಧರೆಗೆ ಕಿಂಕರನಪ್ಪುದೆ?
ಜನನಿಯುದರದಲ್ಲಿ ಘನಶರಣ ಒಗೆದಡೆ
ಜನನಿ ಜನಕಂಗೆ ಕಿಂಕರನಪ್ಪ[ನೆ]?
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು
ಸ್ವತಂತ್ರಶೀಲರಗ್ರಗಣ್ಯರು. ॥ ೧೪ ॥

೧೪೮೪
ಕಾಮಂಗೆ ಕೈತಲೆಗೊಟ್ಟ ಕೈವಾರಿಗಳಿಗೆಲ್ಲಿಯದೊ,
ಕೈವಲ್ಯ ಪದವಿ?
ಕಾಲಂಗೆ ಕಾಯವನೊಪ್ಪಿಸಿಕೊಟ್ಟ ಕಾಮುಕರಿಗೆಲ್ಲಿಯದೊ,
ಕೈಲಾಸದ ಬಟ್ಟೆ?
ಕರ್ಮಕಪಟದ ಕಮ್ಮರಿಯೊಳು ಸಿಲುಕಿ ಕಳವಳಿಸುತಿರ್ಪ
ಕರ್ಮಕಾಂಡಿಗಳಿಗೆಲ್ಲಿಯದೊ,
ಸ್ವರ್ಗಾಪವರ್ಗ?
ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜವನರಿಯದ
ಕುಜನರಿಗೆಲ್ಲಿಯದೊ ನಿತ್ಯಾನಂದ ನಿಜಸುಖ? ॥ ೧೫ ॥

೧೪೮೫
ಕಾಮದ ಸೀಮೆಯ ಕಳೆಯದನ್ನಕ್ಕ,
ಕೋಪದ ಕೂಪ ಹೂಳದನ್ನಕ್ಕ,

ಲೋಭದ ಲಾಭ ಕ್ಷಯಿಸದನ್ನಕ್ಕ,
ಮೋಹದ ಗಾಹು ನಂದದನ್ನಕ್ಕ,
ಮದದುನ್ಮದ ಕೆದರದನ್ನಕ್ಕ,
ಮಚ್ಚರದ ಕೆಚ್ಚು ಬಿಚ್ಚದನ್ನಕ್ಕ.
ಅರಿಗಳಾರತವಡಗಿ ನಿರುತವಾಗದನ್ನಕ್ಕ,
ಸೌರಾಷ್ಟ್ರ ಸೋಮೇಶ್ವರಲಿಂಗವೆಂತು ಸಾಧ್ಯವಪ್ಪುದಯ್ಯಾ? || ೧೬ ||

೧೪೮೬

ಕಾಮಧೇನು ಕಾಮಿಸಿದಲ್ಲದೆ ಈಯಲರಿಯದು,
ಕಲ್ಪವೃಕ್ಷ ಕಲ್ಪಿಸಿದಲ್ಲದೆ ಈಯಲರಿಯದು,
ಚಿಂತಾಮಣಿ ಚಿಂತಿಸಿದಲ್ಲದೆ ಈಯಲರಿಯದು,
ತವನಿಧಿ ತೆಗೆದಲ್ಲದೆ ಈಯಲರಿಯದು,
ನವನಿಧಿ ಬಯಸಿದಲ್ಲದೆ ಕೊಡಲರಿಯದು.
ಕಾಮಿಸದೆ ಕಲ್ಪಿಸದೆ ಚಿಂತಿಸದೆ [ತೆಗೆಯದೆ] ಬಯಸದೆ
ಎನ್ನನೀವುದಕ್ಕೆ ಮುನ್ನವೆ ತನ್ನನಿತ್ತ
ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡೆ. || ೧೭ ||

೧೪೮೭

ಕಾಷ್ಠದೊಳಗೆ ಅಗ್ನಿ ಇಪ್ಪಂತೆ,
ಹಾಲೊಳಗೆ ತುಪ್ಪವಿಪ್ಪಂತೆ,
ತನುವಿನಲ್ಲಿ ಚೇತನವಿಪ್ಪಂತೆ,
ಪಿಂಡದಲ್ಲಿ ಘನಲಿಂಗ ಪೂರ್ಣವಾಗಿಪ್ಪನಾಗಿ ಇಹಪರನಾಸ್ತಿ.
ಇಹಪರನಾಸ್ತಿಯಾಗಿ, ನಿರ್ವಯಲನೈದಿಪ್ಪನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. || ೧೮ ||

೧೪೮೮

ಕ್ಷೀರಸಮುದ್ರದಲ್ಲಿ ಬೆರಸಿದ ಜಲವೆಲ್ಲ ಕ್ಷೀರವಾಗಿಪ್ಪುದೆಂತಂತೆ
ಮನ ನಿಮ್ಮಲ್ಲಿ ಬೆರಸಿದ ಬಳಿಕ ಅಹಂಕಾರವಿಲ್ಲ.
ಅಹಂಕಾರವಿಲ್ಲಾಗಿ ಪ್ರಾಣ ನಿಮ್ಮಲ್ಲಿ ಸಂಚಿತ.
ಇಂತಾದ ಬಳಿಕ ಅಂಗವೆಂಬುದಿಲ್ಲ,
ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲದೆ ಮತ್ತೇನೂ ಇಲ್ಲ. || ೧೯ ||

೧೪೮೯

ಖ್ಯಾತಿಗೆ ಜೋತು, ಲಾಭಕ್ಕೆ ಲೋಭಿಸಿ,
ಪೂಜೆಯ ಮಾಜದೆ ರಾಜದ್ವಾರದಲ್ಲಿ ಸುಳಿದು

ಬಳಲುವ ಹಿರಿಯರೆಲ್ಲರೂ ಇತ್ತಿತ್ತಲಲ್ಲದೆ
ಅತ್ತತ್ತಲೆಲ್ಲಿಯದೋ?
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ತಲ್ಲೀಯವಾದ
ಶರಣರತ್ತತ್ತಲಲ್ಲದೆ ಇತ್ತಿತ್ತಲೆಂತಿಹರೋ. || ೨೦ ||

೧೪೯೦
ಗುರುವಿನಲ್ಲಿ ಗುಣವನರಸಲಿಲ್ಲ,
ಲಿಂಗದಲ್ಲಿ ಲಕ್ಷಣವನರಸಲಿಲ್ಲ,
ಜಂಗಮದಲ್ಲಿ ಕುಲವನರಸಲಿಲ್ಲ,
ಪಾದೋದಕದಲ್ಲಿ ಶುದ್ಧವನರಸಲಿಲ್ಲ,
ಪ್ರಸಾದದಲ್ಲಿ ರುಚಿಯನರಸಲಿಲ್ಲ.
ಸೌರಾಷ್ಟ್ರ ಸೋಮೇಶ್ವರನ ಶರಣರಲ್ಲಿ ಮತ್ತೇನನೂ ಅರಸಲಿಲ್ಲ. || ೨೧ ||

೧೪೯೧
ಘಟವ ಮಾಡಿದ ಕುಲಾಲನು ಆ ಘಟದೊಳಿಪ್ಪುದಿಲ್ಲವೆಂತಂತೆ,
ಬೆಳಸ ಬಿತ್ತಿದವನು ಆ ಬೆಳೆಯೊಳಿಪ್ಪುದಿಲ್ಲವೆಂತಂತೆ,
ರಥವ ಮಾಡಿದ ರಥಿಕ ತಾ ಆ ರಥದೊಳಿಪ್ಪುದಿಲ್ಲವೆಂತಂತೆ,
ಸರ್ವವನಾಡಿಸುವ ಶರ್ವನು ಯಂತ್ರ ಯಂತ್ರಿಯಂತಿರ್ಪನಾಗಿ
ಸರ್ವವೂ ಶಿವನೆಂಬ ಅಜ್ಞಾನಿಗಳ ಮೆಚ್ಚುವನೆ
ನಮ್ಮ ಸೌರಾಷ್ಟ್ರ ಸೋಮೇಶ್ವರ? || ೨೨ ||

೧೪೯೨
ಚೌಷಷ್ಟಿವಿದ್ಯೆಗಳ ಕಲಿತಡೇನೊ?
ಅಷ್ಟಾಷಷ್ಟಿಕ್ಷೇತ್ರಂಗಳ ಮೆಟ್ಟಿದಡೇನೊ?
ಬಿಟ್ಟಡೇನೊ? ಕಟ್ಟಿದಡೇನೋ?
ಅರಿವಿನಾಚಾರ ಕರಿಗೊಳ್ಳದನ್ನಕ್ಕ.
ಘನಲಿಂಗದ ಬೆಳಗು ಸ್ವಯವಾದ ಶರಣಂಗಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗಸುಖವೆಡೆಗೊಳ್ಳದು. || ೨೩ ||

೧೪೯೩
ಜಪತಪ ನೇಮವಲ್ಲ,
ಮಂತ್ರತಂತ್ರ ನೇಮವಲ್ಲ,
ಧೂಪದೀಪಾರತಿ ನೇಮವಲ್ಲ,
ಪರಧನ, ಪರಸ್ತ್ರೀ, ಪರದೈವಂಗಳಿಗೆರಗದಿಪ್ಪುದೆ ನೇಮ.
ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲಿದ್ದ ಕಾರಣ ನಿತ್ಯನೇಮ. || ೨೪ ||

೧೪೯೪
ಟಿಕ್ಕೆಯೊಳಗೆ ಮಾಣಿಕ್ಯ ಉಂಟೆ ಅಯ್ಯಾ?
ರಾಮಠದಲ್ಲಿ ಮೃಗನಾಭಿಯುಂಟೆ ಅಯ್ಯಾ?
ಕಲ್ಲಮೊರಡಿಯೊಳಗೆ ಚಿಲುಮೆಯಗ್ಗವಣಿಯುಂಟೆ ಅಯ್ಯಾ?
ಸರ್ವದುರ್ಗುಣಿಯಾನು, ಎನ್ನಲ್ಲಿ ಆವ ಗುಣವನರಸುವಿರಿ?
ನೀನೇ ಕೃಪೆಮಾಡಯ್ಯಾ, ಸದ್ಗುರುವೆ ಸೌರಾಷ್ಟ್ರ ಸೋಮೇಶ್ವರಾ. || ೨೫ ||

೧೪೯೫
ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ
ಕಳಹಂಸೆ ಬಲ್ಲುದಲ್ಲದೆ,
ಒಡನಿರ್ದ ನೀರುಗಾಗೆ ತಾನೆತ್ತ ಬಲ್ಲುದೊ?
ಸುಧಾಕಿರಣನಿಂ ಬೆಳಗಿದ ಬೆಳುದಿಂಗಳ ರುಚಿಯ
ಚಕೋರ ಬಲ್ಲುದಲ್ಲದೆ,
ಒಡನಿರ್ದ ಕಾಕೋಳಿ ತಾನೆತ್ತ ಬಲ್ಲುದೊ?
ಕಾರ್ಗಾಲ ಮುಂಬನಿಯ ಸುಖವ
ಚಾದಗೆ ಬಲ್ಲುದಲ್ಲದೆ,
ಅಡವಿಯಲ್ಲಿರ್ದ ಕೊಕರ ತಾನೆತ್ತ ಬಲ್ಲುದೊ?
ಸೌರಾಷ್ಟ್ರ ಸೋಮೇಶ್ವರನ ಶರಣರ ಇರವ
ಮಹಾನುಭಾವಿಗಳು ಬಲ್ಲರಲ್ಲದೆ,
ಒಡನಿರ್ದ ಜಡಮತಿಯ ಮಾನವರು ತಾವೆತ್ತ ಬಲ್ಲರೊ? || ೨೬ ||

೧೪೯೬
ತೆರೆಯಡಗಿದ ಸಾಗರದೊಳಗೆ ಆಕಾಶ ಬಿಂಬಿ[ಸೆ]
ಅಂಬರ ಜಲವನೊಳಕೊಂಡಂತೆ,
ದಿನಮಣಿ ಮಣಿಮುಕುರದಲ್ಲಿ ಹೊಳೆಯಲು
ಮುಕುರವೇ ರವಿಯಾಗಿಪ್ಪಂತೆ,
ಗುರುಶಿಷ್ಯ ಸಂಬಂಧ ಅಭಿನ್ನ ಸೇವ್ಯವಾದ ಬಳಿಕ
ಗುರುವೆಂದೆನಲುಂಟೆ ಶಿಷ್ಯಂಗೆ? ಶಿಷ್ಯನೆನಲುಂಟೆ ಗುರುವಿಂಗೆ?
ಇಂತು ಉಭಯನಾಸ್ತಿಯಾದ ಉಪದೇಶ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಸ್ವಯವಾಯಿತ್ತು. || ೨೭ ||

೧೪೯೭
ದೇವದೇಹಿಕ ಭಕ್ತನಾಗಿ:
ಶ್ರೋತ್ರವ ಲಿಂಗಕ್ಕೆ ಕೇಳಲಿತ್ತು
ಪ್ರಸಾದಶ್ರೋತ್ರದಲ್ಲಿ ಕೇಳುವನಾ ಶರಣನು.

ತ್ವಕ್ಕು ಲಿಂಗಕ್ಕೆ ಸೋಂಕಲಿತ್ತು
ಪ್ರಸಾದತ್ವಕ್ಕಿನಲ್ಲಿ ಸೋಂಕುವನಾ ಶರಣನು.
ನೇತ್ರವ ಲಿಂಗಕ್ಕೆ ನೋಡಲಿತ್ತು
ಪ್ರಸಾದನೇತ್ರದಲ್ಲಿ ನೋಡುವನಾ ಶರಣನು.
ಜಿಹ್ವೆಯ ಲಿಂಗಕ್ಕೆ ರುಚಿಸಲಿತ್ತು
ಪ್ರಸಾದಜಿಹ್ವೆಯಲ್ಲಿ ರುಚಿಸುವನಾ ಶರಣನು.
ಘ್ರಾಣವ ಲಿಂಗಕ್ಕೆ ಘ್ರಾಣಿಸಲಿತ್ತು
ಪ್ರಸಾದಘ್ರಾಣದಲ್ಲಿ ವಾಸಿಸುವನಾ ಶರಣನು.
ಮನವ ಲಿಂಗಕ್ಕೆ ನೆನೆಯಲಿತ್ತು
ಪ್ರಸಾದಮನದಲ್ಲಿ ನೆನೆವನಾ ಶರಣನು.
ಇದು ಕಾರಣ, ಸೌರಾಷ್ಟ್ರ ಸೋಮೇಶ್ವರನ ಶರಣಂಗೆ
ಪ್ರಸಾದವಲ್ಲದಿಲ್ಲವಯ್ಯಾ. ॥ ೨೮ ॥

೧೪೯೮
ದೇಶ ಉಪ-ದೇಶವಾಗದನ್ನಕ್ಕ,
ಜೀವ ಉಪ-ಜೀವವಾಗದನ್ನಕ್ಕ,
ಕರಣಂಗಳು ಉಪ-ಕರಣಂಗಳಾಗದನ್ನಕ್ಕ,
ನಯನಂಗಳು ಉಪ-ನಯನಂಗಳಾಗದನ್ನಕ್ಕ,
ಭೋಗಂಗಳು ಉಪ-ಭೋಗಂಗಳಾಗದನ್ನಕ್ಕ
ಅಂಗ ಪ್ರಾಣ ಮನ ಭಾವ ಕರಣಂಗಳಲ್ಲಿ ಭರಿತವೆಂತಿಪ್ಪೆಯಯ್ಯಾ?
ಸೌರಾಷ್ಟ್ರ ಸೋಮೇಶ್ವರಾ,
ನೀನು ಒಲಿ ಒಲಿಯೆಂದರೆಂತೊಲಿವೆಯಯ್ಯಾ. ॥ ೨೯ ॥

೧೪೯೯
ನೀರು ನೀರ ಕೂಡಿದಂತೆ, ಕ್ಷೀರ ಕ್ಷೀರ ಬೆರಸಿದಂತೆ
ಸುಜ್ಞಾನಗುರುಪಾದೋದಕಾನಂದದೊಳಗೆ ಪ್ರಜ್ಞಾನಶರಣ.
ಆನಂದಭಕ್ತಿಯಿಂದ ಸಮರಸವಾದ ಪರಮಸುಖದೊಳಗೆ
ಎರಡರಿಯದ ಮೌನಿ, ನಿಜಭರಿತ ನಿರಾಳ
ಸೌರಾಷ್ಟ್ರ ಸೋಮೇಶ್ವರನ ಶರಣ. ॥ ೩೦ ॥

೧೫೦೦
ನೇತ್ರಂಗಳ ಮುಚ್ಚಿ ರೂಹಿಲ್ಲದ ನಿಲವ ಕಾಣಬೇಕು.
ಶ್ರೋತ್ರಂಗಳ ಮುಚ್ಚಿ ಶಬ್ದವಿಲ್ಲದ ನಾದವ ಕೇಳಬೇಕು.
ಜಿಹ್ವೆಯ ಮುಚ್ಚಿ ಸ್ವಾದುವಿಲ್ಲದ ರುಚಿಯನರಿಯಬೇಕು.
ನಾಸಿಕವ ಮುಚ್ಚಿ ಉಸಿರ ನುಂಗಿದ ಪರಿಮಳವನರಿಯಬೇಕು.

ಅಂಗವ ಮುಚ್ಚಿ ಲಿಂಗಸಂಗ ಸಮಸುಖವನರಿಯಬೇಕು.
ಸೌರಾಷ್ಟ್ರ ಸೋಮೇಶ್ವರವಿಡಿದು, ಪಂಚೇಂದ್ರಿಯಂಗಳಳಿದು
ಲಿಂಗೇಂದ್ರಿಯಗಳಾಗಬೇಕು. || ೩೧ ||

೧೫೦೧
ಪಂಚೇಂದ್ರಿಯಂಗಳು ಲಿಂಗಮುಖವಾಗಿ ನಿಂದು,
ಮನಸಹಿತ ಪಂಚವಿಷಯಂಗಳಂಶದ ಸಕಲಸುಖಂಗಳು
ಲಿಂಗಾರ್ಪಿತದಿಂದ ಚರಿಸುತ್ತ,
ಬೇರೆ ಮತ್ತೊಂದು ದೆಸೆಯಿಲ್ಲದೆ ನಿಂದುವು,
ಸೌರಾಷ್ಟ್ರ ಸೋಮೇಶ್ವರಲಿಂಗನಿವಾಸಿಯಾದ ಶರಣಂಗೆ. || ೩೨ ||

೧೫೦೨
ಪೃಥ್ವಿಯ ಕೂಡಿ ನೆಲನಹನಲ್ಲ,
ಅಪ್ಪುವ ಕೂಡಿ ಜಲವಹನಲ್ಲ,
ಅಗ್ನಿಯ ಕೂಡಿ ಕಿಚ್ಚನಹನಲ್ಲ,
ವಾಯುವ ಕೂಡಿ ಗಾಳಿಯಹನಲ್ಲ,
ಆಕಾಶವ ಕೂಡಿ ಬಯಲಹನಲ್ಲ,
ಆತ್ಮ ಕೂಡಿ ಭವಕರ್ಮಿಯಹನಲ್ಲ.
ಲಿಂಗವ ಕೂಡಿ ಲಿಂಗವಹನು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. || ೩೩ ||

೧೫೦೩
ಬೀಜದೊಳಗಣ ವೃಕ್ಷ, ಅಂಕುರ, ಪಲ್ಲವ, ಪತ್ರ,
ಕುಸುಮ, ಫಲ ಮೈದೋರದಂತೆ,
ಕಾಷ್ಠದೊಳಗಣ ಅಗ್ನಿ ಉರಿ ಉಷ್ಣದೋರದಂತೆ,
ಪತಂಗನ ಕರದೊಳಗಡಗಿಪ್ಪ ಮರೀಚಿ ಪ್ರವಹಿಸದಂತೆ,
ಬಿಂದುವಿನೊಳಡಗಿಪ್ಪ ನಾದ ದನಿದೋರದಂತೆ,
ಪಿಂಡ ಬ್ರಹ್ಮಾಂಡಗಳ ಕೂಡಿಪ್ಪ
ಸೌರಾಷ್ಟ್ರ ಸೋಮೇಶ್ವರಲಿಂಗವನಾರೂ ಬೆರೆಸಬಾರದಯ್ಯಾ. || ೩೪ ||

೧೫೦೪
ಭಾನುಮಂಡಲವಂಜುವದೆ ಮಂಜು ಮುಸುಕಿದಡೆ?
ಕಾಲಾಗ್ನಿ ಅರಗಿನ ಬಾಣ [ತಾ]ಗೆ ಪ್ರಳಯವಪ್ಪುದೆ?
ರಣರಂಗಧೀರ ತೃಣಪುರುಷನೊಡನೆ ಹೆಣಗುವನೆ ಸಮರಕ್ಕೆ?
ಶಿವಜ್ಞಾನವಿಹೀನರ ಹೀನೋಕ್ತಿಯೊಡನೆ
ಸೌರಾಷ್ಟ್ರ ಸೋಮೇಶ್ವರನ ಶರಣರು ಪ್ರತಿಪಾದ್ಯರುಂಟೆ? || ೩೫ ||

೧೫೦೫
ಭ್ರಮರ ಸೋಂಕಿದ ಕೀಟ ಭ್ರಮರನಾಗದೆ, ಮರಳಿ ಕೀಟನಪ್ಪುದೆ?
'ಭ್ರಮದ್ ಭ್ರಮರಚಿಂತಾಯಾಂ ಕೀಟೋಽಪಿ ಭ್ರಮರಾಯತೇ'
ಎಂದುದಾಗಿ.
ಅಗ್ನಿ ಸೋಂಕಿದ ಕಾಷ್ಠ ಅಗ್ನಿಯಾಗದೆ, ಮರಳಿ ಕಾಷ್ಠವಪ್ಪುದೆ?
ಭುವನ ಸೋಂಕಿದ ಕರಕ ಭುವನವಾಗದೆ, ಮರಳಿ ಕರಕವಪ್ಪುದೆ?
ಸೌರಾಷ್ಟ್ರ ಸೋಮೇಶ್ವರಲಿಂಗ ಸೋಂಕಿದ ಶರಣರು
ಲಿಂಗವಾಗದೆ ಮರಳಿ ಮನುಜರಪ್ಪರೆ?
'ಯಥಾ ಲಿಂಗಂ ತಥಾ ಶರಣಃ' ಎಂದುದಾಗಿ. || ೩೬ ||

೧೫೦೬
ಮರ್ಕಟ ದರ್ಪಣವ ಹಿಡಿದು ನೋಡಿ ತನ್ನ ಪ್ರತಿಬಿಂಬವ ಕಂಡು
ದರ್ಪಣವ ಮರ್ಕಟವೆಂದು ಬಗೆದೇಡಿಸಲನುಗೆಯ್ವಂತೆ,
ಮನೋವಿಕಾರದಿಂ ಪ್ರಕೃತಿವಿಡಿದು ಚರಿಸುತಿರ್ಪ ಮರ್ತ್ಯದ ಮನುಜರು
ಪ್ರಕೃತಿ ನಿಃಕಂಪನವಾದ ಪರಮಾನುಭಾವಿಗಳಪ್ಪ
ಪರಮಲಿಂಗೈಕ್ಯರ ಅನುವನರಿಯದೆ,
ಬಾಯಿಗೆ ಬಂದಂತೆ ಒಂದೊಂದ ನುಡಿವ
ಮಂದಮತಿಗಳಪ್ಪ ಸಂದೇಹಿಗಳು
ನಿಮ್ಮನೂ ತಮ್ಮನೂ ತಾವೆತ್ತ ಬಲ್ಲರಯ್ಯಾ
ಸೌರಾಷ್ಟ್ರ ಸೋಮೇಶ್ವರಾ. || ೩೭ ||

೧೫೦೭
ಮಾತ ಕಲಿತು ಮಂಡೆಯ ಬೋಳಿಸಿ ವೇಷಭಾಷೆಗಳಿಂ
ದೇಶ ಕೋಶ ಭುವನಂಗಳ ತೊಳಲಿ ಬಳಲಿ ನಿಂದರೇನಾಯಿತ್ತೊ?
ಜಟಾಬಂಧದಿಂ ಗಡ್ಡದ ಹಿರಿಯರಪ್ಪೆ ಭೋ!
ನಾನೆಂ[ಬ] ಬಿಂದು ಬೀಸರವಾಗದಿರ್ದಡೇನಾಯಿತ್ತೊ?
ಹೆಚ್ಚುಕುಂದ ಬಿಚ್ಚದನ್ನಕ್ಕ.
ತಥ್ಯಮಿಥ್ಯರಾಗದ್ವೇಷ ಭಯಮೋಹಂಗಳುಳ್ಳನ್ನಕ್ಕ
ಸೌರಾಷ್ಟ್ರ ಸೋಮೇಶ್ವರಲಿಂಗ ಎಂತು ಸಾಧ್ಯವಪ್ಪುದಯ್ಯಾ. || ೩೮ ||

೧೫೦೮
ಮಾಯೆಯೆಂದೇನೊ ಮದವಳಿದಂಗೆ?
ಕಾಯವೆಂದೇನೊ ಕಳವಳವಳಿದಂಗೆ?
ಜೀವವೆಂದೇನೊ ಪ್ರಕೃತಿಯಳಿದಂಗೆ?
ಭಾವವೆಂದೇನೊ ಭ್ರಮೆಯಳಿದಂಗೆ?
ಅರಿವೆಂದೇನೊ ಮರಹಳಿದಂಗೆ?

ತಾನೆಂದೇನೊ ಇದಿರಳಿದಂಗೆ?
ಸೌರಾಷ್ಟ್ರ ಸೋಮೇಶ್ವರಾ,
ತಾನು ತಾನಾದ ಶರಣಂಗೆ ನೀನೆಂದೇನೊ. || ೩೯ ||

೧೫೦೯
ಮುತ್ತು ನೀರೊಳಗೆ ಹುಟ್ಟಿ, ಮರಳಿ ನೀರಾಗದಂತೆ,
ತಿಳಿಯ ಕಾಸಿದ ತುಪ್ಪ ಕ್ಷೀರವಾಗದಂತೆ,
ತೊಟ್ಟುಬಿಟ್ಟ ಹಣ್ಣು ಹೂಮಿಡಿಯಾಗದಂತೆ,
ಸಂಸಾರದಲ್ಲಿ ಹುಟ್ಟಿ ಅದ ಹೊದ್ದದೆ,
ಸ್ವಯಂಪ್ರಕಾಶ ಲಿಂಗದ ಬೆಳಗಿನಲ್ಲಿ ಬೆಳೆದು,
ತಲ್ಲೀಯವಾಗಿರ್ದರಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. || ೪೦ ||

೧೫೧೦
ರಸವನುಗುಳ್ದು ಕಸವನಗಿವವನಂತೆ,
ಕೈಯ ಪಿಂಡವ ಬಿಟ್ಟು ಒಣಗೈಯ್ಯ ನೆಕ್ಕುವನಂತೆ,
ತಾಯ ಮೊಲೆವಾಲನೊಲ್ಲದೆರೆವಾಲಿಂಗೆಳಸುವನಂತೆ,
ಅಮೃತಾಹಾರ ಮುಂದಿಟ್ಟಿರಲು ಮನ ಹೇವರಿಕೆಯ ಬಿಡದವನಂತೆ,
ದೀಪವ ಹಿಡಿದು ಮುಂದುಗಾಣದಿಹ
ಪರಿಯ ನೋಡಾ ಅಯ್ಯಾ.
ತನ್ನಲ್ಲಿ ಗುರುಲಿಂಗಜಂಗಮವಿರಲನ್ಯವಿಟ್ಟರಸುವ
ಭಿನ್ನಜ್ಞಾನವ ನೋಡಾ!
ಸೌರಾಷ್ಟ್ರ ಸೋಮೇಶ್ವರಲಿಂಗಸಂಗ ಹಿಂಗದಿರಲು
ವೇಷಭೂಷಣಂಗಳಾಸೆಯ ನೋಡಾ! || ೪೧ ||

೧೫೧೧
ವೇದಂಗಳ ಹಿಂದೆ ಹರಿಯದಿರು, ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು. || ೪೨ ||

೧೫೧೨
ಶಬ್ದಶಾಸ್ತ್ರ ತರ್ಕಾಗಮಂಗಳ ಹೇಳಿ ಕೇಳಿ,
ಕಲಿತುಲಿದವರೆಲ್ಲಾ ವಿದ್ಯಾಗೂಡಾದರಲ್ಲದೆ,
ಲಿಂಗಗೂಡಾದುದಿಲ್ಲ ನೋಡಯ್ಯಾ.

ಕಲಿಕಲಿತು ಉಲಿವ ಅಭ್ಯಾಸದ ಮಾತಿಂಗೆ
ಮರುಳಪ್ಪರೆ ನಮ್ಮ ಶಿವಶರಣರು?
ಆದಿ ಅನಾದಿಗಭೇದ್ಯವಾದ ನಿಜವ ಭೇದಿಸಲರಿತು
ಮನ ಘನದಲ್ಲಿ ನಿವಾಸಿಯಾಗಬೇಕು.
ಮನ ಘನದಲ್ಲಿ ನಿವಾಸಿಯಾಗದೆ
ಸೌರಾಷ್ಟ್ರ ಸೋಮೇಶ್ವರಲಿಂಗವ ಬಲ್ಲೆನೆಂದು ನುಡಿವ
ಬರಿ ಮಾತಿನ ಬಾಯ ಬಣ್ಣದ ಸೊಲ್ಲು, ಸಲ್ಲದೆ ಹೋಯಿತ್ತು. ॥ ೪೩ ॥

೧೫೧೩
ಸೂಕರಂಗೆ ಸುಗಂಧ ಸೊಗಸುವುದೆ?
ಶುನಕಂಗೆ ಷಡುರಸಾನ್ನ ಸಂಘಟ್ಟವೆ?
ಕತ್ತೆಗೆ ಕರ್ಪೂರ ಯೋಗ್ಯವೆ?
ಮರ್ಕಟಂಗೆ ಮುಕುರ ಸಾಮ್ಯವೆ?
ದುರ್ವಿಷಯಿಗಳಪ್ಪ ದುರಾತ್ಮರ್ಗೆ
ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಿಹಿತವೆ? ॥ ೪೪ ॥

೧೫೧೪
ಹಣ ಬಂಗಾರ ವಸ್ತ್ರ ಕಪ್ಪಡ
ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು,
ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ,
ಕೊಟ್ಟಡೆ ಮುಟ್ಟದ ಭಾಷೆ,
ಪರಧನ ಪರಸತಿಗೆ ಅಳುಪದ ಭಾಷೆ,
ಇಂತಿದಕಳುಪಿದೆನಾದಡೆ ಸೌರಾಷ್ಟ್ರ ಸೋಮೇಶ್ವರಾ
ನಿಮ್ಮಾಣೆ ನಿಮ್ಮ ಪ್ರಮಥರಾಣೆ. ॥ ೪೫ ॥

೧೫೧೫
ಹಿಂದಣ ಭವವನೊರಸಿ, ಮುಂದಣ ಜನನಕರ್ಮವ ಸಂಹರಿಸಿ,
ಮಲ ಮಾಯೆಯ ಶಿಕ್ಷಿಸಿ, ಎನ್ನ ರಕ್ಷಿಸಿದಿರಯ್ಯಾ ಗುರುವೆ.
ಕಬ್ಬುನದ ಗಿರಿಯ ಪರುಷರಸ ಸೋಂಕಿದಂತೆ
ಸೌರಾಷ್ಟ್ರ ಸೋಮೇಶ್ವರನೆಂಬ ಗುರು ಸೋಂಕಲು
ಎನ್ನ ಅವಗುಣಂಗಳರತು ಹೋದವು. ॥ ೪೬ ॥

೧೫೧೬
ಹುಟ್ಟುವುದೇ ಬಂಧ, ಸಾವುದೇ ಮೋಕ್ಷ ಎಂಬ
ಅರೆಮರುಳುಗಳನೇನೆಂಬೆನಯ್ಯಾ.
ಸಾವ ಹುಟ್ಟುವ ಬಂಧದಲ್ಲಿ ಮೋಕ್ಷ ಉಂಟೇ?

ಸಂಚಿತ ಪ್ರಾರಬ್ಧ ಆಗಾಮಿ ಸವೆದು
ಅಷ್ಟಭೋಗಂಗಳು ತೀರಿ, ಹುಟ್ಟು ಹೊಂದು ಬಿಟ್ಟುದೇ ಮೋಕ್ಷ.
ಅಂತಪ್ಪ ಮೋಕ್ಷ ಸಿದ್ಧಿಯಪ್ಪಡೆ
ಸೌರಾಷ್ಟ್ರ ಸೋಮೇಶ್ವರಲಿಂಗವ ಕೈವಿಡಿದಲ್ಲದಾಗದು. || ೪೭ ||

೧೫೧೭
ಹೆಚ್ಚದು - ಕುಂದದು,
ಮಚ್ಚದು - ಬೆಚ್ಚದು,
ಬಾಡದು - ಬತ್ತದು,
ಕಂದದು - ಕುಂದದು,
ಕರಗದು - ಕೊರಗದೆನ್ನರಿವು,
ಸೌರಾಷ್ಟ್ರ ಸೋಮೇಶ್ವರಲಿಂಗದೊಡಗೂಡಿ
ತಾನೆನ್ನದಿದಿರೆನ್ನದು. || ೪೮ ||

*

ಆನಂದಯ್ಯ

೧೫೧೮
ಪಾಷಾಣವ ಹಿಡಿದು ಮಾರಿಯ ಸಂಗವ ಮಾಡುವಿರಿ,
ಘಾಸಿಯಾಗಿ ಜನ್ಮಜನ್ಮಕ್ಕೆ [ಬ]ಹಿರಿ.
ಈಶನ ಕಂಡೆನೆಂಬುದು ಅಳಿಯಾಸೆ.
ಈ ದೋಷಿಗಳಿಗೆ
ಆನಂದಸಿಂಧು ರಾಮೇಶ್ವರ ಹೇಸುವ. || ೧ ||

*

ಆಯ್ದಕ್ಕಿ ಮಾರಯ್ಯ

೧೫೧೯
ಕಟ್ಟಿಗೆ ಕಸ ನೀರು ತಂದು,
ಸತ್ಯರ ಮನೆಯಲ್ಲಿ ಒಕ್ಕುದನೀಸಿಕೊಂಡು,
ತನ್ನ ಕೃತ್ಯ ತಪ್ಪದೆ ಒಕ್ಕುದ ಕೊಂಡು,
ಸತ್ಯನಾಗಿಪ್ಪ ಭಕ್ತನಂಗವೆ ಅದು ಅಮರೇಶ್ವರಲಿಂಗದ ಸಂಗ. || ೧ ||

೧೫೨೦
ಕಾಯಕದಲ್ಲಿ ನಿರತನಾದಡೆ,
ಗುರುದರ್ಶನವಾದಡೂ ಮರೆಯಬೇಕು,

ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ,
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು. || ೨ ||

೧೫೨೧
ಚಂದ್ರಕಾಂತದ ಶಿಲೆಯಲ್ಲಿ ಬಿಂದು ಅಡಗಿಪ್ಪಂತೆ,
ಗೋವುಗಳಲ್ಲಿ ಗೋರಂಜನ ರಂಜಿಸುವಂತೆ,
ಶಿಲೆಕಾಷ್ಠಂಗಳಲ್ಲಿ ಅನಲ ಅಡಗಿಪ್ಪಂತೆ,
ಸತ್ಯರ ಹೃದಯದಲ್ಲಿ
ಮೌಕ್ತಿಕದ ಉದಕದಂತೆ ಭಾವವಿಲ್ಲದೆ ಅಡಗಿದೆಯಲ್ಲಾ,
ಅಮರೇಶ್ವರಲಿಂಗವೆ. || ೩ ||

೧೫೨೨
ತವನಿಧಿಯ ಬೆಳೆವಂಗೆ ಕಣಜದ ಹಂಗುಂಟೆ?
ವಿರಕ್ತಂಗೆ ಆರೈಕೆಗೊಂಬವರುಂಟೆ?
ಕಾಯಕವ ಮಾಡುವ ಭಕ್ತಂಗೆ ಇನ್ನಾರುವ ಕಾಡಲೇತಕ್ಕೆ?
ಆ ಗುಣ ಅಮರೇಶ್ವರಲಿಂಗಕ್ಕೆ ದೂರ. || ೪ ||

೧೫೨೩
ತೊಟ್ಟುಬಿಡುವನ್ನಕ್ಕ ಮತ್ತಾ ಬುಡದಾಸೆ ಬೇಕು,
ಮರ್ತ್ಯದ ಹಂಗುಳ್ಳನ್ನಕ್ಕ
ಸತ್ಯಶರಣರ ಸಂಗ, ನಿತ್ಯಜಂಗಮಸೇವೆ ಕೃತ್ಯವಿರಬೇಕು,
ಅಮರೇಶ್ವರಲಿಂಗವನರಿವುದಕ್ಕೆ. || ೫ ||

೧೫೨೪
ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು,
ಕಾಯಕ ಸತ್ತು, ಹಣ ಹೊನ್ನ ಬೇಡೆಹೆನೆಂಬುದು
ಕಷ್ಟವಲ್ಲವೆ ಸದ್ಭಕ್ತಂಗೆ?
ಆ ಗುಣ ಅಮರೇಶ್ವರಲಿಂಗಕ್ಕೆ ದೂರ. || ೬ ||

೧೫೨೫
ಬೇಡಿ ತಂದು ದಾಸೋಹವ ಮಾಡುವನ್ನಬರ,
ಪಂಗುಳನ ಪಯಣದಂತೆ.
ಯಾಚಕತ್ವ ಭಕ್ತಂಗುಂಟೆ?
ಭಕ್ತನಾಗಿ ಹುಟ್ಟಿ, ಭಕ್ತರ ಬೇಡಿತಂದು ಮಾಡಿ,
ಮುಕ್ತಿಯನರಸಲುಂಟೆ?
ಅದು ಅಮರೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು. || ೭ ||

೧೫೨೬
ಭಕ್ತರಿಗೆ ಬಡತನವುಂಟೆ? ಸತ್ಯರಿಗೆ ಕರ್ಮವುಂಟೆ?
ಚಿತ್ತ ಮುಟ್ಟಿ ಸೇವೆಯ ಮಾಡುವ ಭಕ್ತಂಗೆ
ಮರ್ತ್ಯ ಕೈಲಾಸವೆಂಬುದುಂಟೆ ?
ಆತನಿದ್ದುದೆ ಸುಕ್ಷೇತ್ರ,
ಆತನಂಗವೆ ಅಮರೇಶ್ವರಲಿಂಗದ ಸಂಗಸುಖ. || ೮ ||

೧೫೨೭
ಹಾಗದ ಕಾಯಕವ ಮಾಡಿ, ಹಣ ಅಡ್ಡವ ತಾ ಎಂಬಲ್ಲಿ
ಸತ್ಯದ ಕಾಯಕ ಉಂಟೆ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ. || ೯ ||

*

ಉಗ್ಘಡಿಸುವ ಗಬ್ಬಿದೇವಯ್ಯ

೧೫೨೮
ಜ್ಞಾನ ಬಾ, ಮಾಯೆ ಹೋಗೆಂದು ಕಳುಹುತ್ತಿದ್ದೇನೆ.
ಅರಿವು ಬಾ, ಅಜ್ಞಾನ ಹೋಗೆಂದು ಕಳುಹುತ್ತಿದ್ದೇನೆ.
ನಿಃಕಲ ಬಾ, ಸಕಲ ಹೋಗೆಂದು ಕಳುಹುತ್ತಿದ್ದೇನೆ.
ನಿಃಪ್ರಪಂಚ ಬಾ, ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ.
ಕೂಡಲಸಂಗಮದೇವರಲ್ಲಿ ಬಸವಣ್ಣನ ಬಲ್ಲವರನೊಳಗೆ ಕೂಡಿ,
ಅರಿಯದವರ ಹೊರಗೆ ತಡೆವುತ್ತಿದ್ದೇನೆ. || ೧ ||

೧೫೨೯
ಭಾವಭ್ರಮೆವಂತರು ಬಾರದಿರಿ,
ಜ್ಞಾನಹೀನರು ಬೇಗ ಹೋಗಿ,
ತ್ರಿವಿಧ ಮಲಕ್ಕೆ ಕಚ್ಚಿಮುಟ್ಟಿ ಹೊಡೆದಾಡುವರತ್ತಲಿರಿ.
ನಿರುತ ಸ್ವಯಾನುಭಾವರು ಬನ್ನಿ,
ಪರಬ್ರಹ್ಮಸ್ವರೂಪರು ಬನ್ನಿ,
ಏಕಲಿಂಗನಿಷ್ಠಾಪರರು ದೃಢವಂತರು ಬನ್ನಿ,
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ,

ಎಂದು ಎನಗೆ ಕೊಟ್ಟ ಕಾಯಕ
ಕೂಡಲಸಂಗಮದೇವರಲ್ಲಿ ಬಸವಣ್ಣ. ॥ ೨ ॥

*

ಉಪ್ಪರಗುಡಿಯ ಸೋಮಿದೇವಯ್ಯ

೧೫೩೦
ತಾ ದೇವರಾದ ಮತ್ತೆ
ಪೂಜೆಗೊಂಬವರಲ್ಲಿ ಅಡಿಗಡಿಗೆ ಗಡಿತಡಿಗೆ ಬರಲೇತಕ್ಕೆ?
ತಾ ಪರಮನಿರ್ವಾಣದಲ್ಲಿ ತಿರಿಗಿ
ಆಡು[ವ]ವರ, ಕೂಡುವ[ವ]ರ,
ಒಳ್ಳಿತ್ತ ಸಡಗರಿಸಿ ನುಡಿವವರ ಒಡಗೂಡಿ,
ಬಾಗಿಲು ಚಾವಡಿ ಮನೆಯಲ್ಲಿ
ನಿಲ್ಲು, ಬಾ-ಹೋಗೆನಿಸಿಕೊಳಲೇತಕ್ಕೆ?
ಅವರನೆಲ್ಲಿ ಕಂಡಲ್ಲಿಯೆ ನೋಡಿ,
ಅವರು ಸಲ್ಲೀಲೆಯಲ್ಲಿ ಮಾಡುವುದ ಕೇಳಿ,
ಅಲ್ಲಿಯೆ ಪರಮಾನಂದದಲ್ಲಿ ಸುಖಿಯಹ ಮಹಾತ್ಮಂಗೆ
ಅಲ್ಲಿಯಿಲ್ಲಿಯೆಂಬ ಭಾವದ ಭ್ರಮೆಯಿಲ್ಲ.
ಗಾರುಡೇಶ್ವರಲಿಂಗವನರಿದ ಶರಣ. ॥ ೧ ॥

೧೫೩೧
ಸರ್ಪನಲ್ಲಿ ವಿಷ ಇದ್ದಿತೆಂದಡೆ,
ಸರ್ವಾಂಗದಲ್ಲಿ ವಿಷ ತಪ್ಪದಿಪ್ಪುದೆ,
ವಿಷವಿಪ್ಪ ಠಾವು ಒಂದಲ್ಲದೆ?
ಪೃಥ್ವಿಯಲ್ಲಿ ನಿಕ್ಷೇಪವಿದ್ದಿತ್ತೆಂದಡೆ,
ಅಲ್ಲಲ್ಲಿ ಎಲ್ಲಾ ಠಾವಿನಲ್ಲಿ ಅಡಗಿಪ್ಪುದೆ?
ಸಮಯಕುಲದಲ್ಲಿ ವಸ್ತು ಪರಿಪೂರ್ಣವೆಂದಡೆ,
ದರ್ಶನಪಾಷಂಡಿಗಳಲ್ಲಿ ವಸ್ತು ಪರಿಪೂರ್ಣನಾಗಿಪ್ಪನೆ?
ಇಪ್ಪ, ಸತ್ಯಸನ್ಮುಕ್ತರಲ್ಲಿಯಲ್ಲದೆ, ಪರಮವಿರಕ್ತನಲ್ಲಿಯಲ್ಲದೆ.
ವಿಷವಿದ್ದ ಬಾಯ ಮುಚ್ಚಿ ಹಿಡಿವುದು,
ನೆಲದಲ್ಲಿದ್ದ ನಿಧಾನವನರಿದು ಅಗಿವುದು,
ನೆರೆ ವಸ್ತುವಿದ್ದ ಠಾವನರಿದು ಪೂಜಿಸುವುದು.
ಇಂತೀ ಬಯಕೆಗೆ ಬಯಕೆ, ಸಮೂಹಕ್ಕೆ ತ್ರಿವಿಧಮಲ,

ಖ್ಯಾತಿಲಾಭಕ್ಕೆ ಭೂತಹಿತ.
ಅರಿವುಳ್ಳವರಲ್ಲಿ ಎರವಿಲ್ಲದ ಕೂಟ.
ಇಂತಿವು ಜಗದಲ್ಲಿ ಅರಿದು ಮಾಡುವನ ಪರಿತೋಷ,
ಗಾರುಡೇಶ್ವರಲಿಂಗದಲ್ಲಿ ಎರಡಳಿದವನ ಕೂಟ. || ೨ ||

*

ಉರಿಲಿಂಗದೇವ

೧೫೩೨
ಅಂತರಂಗದಲ್ಲಿ ಆವರಿಸಿ,
ಬಹಿರಂಗದಲ್ಲಿ ತೋರುವೆ.
ಕಂಗಳ ಕೊನೆಯಲ್ಲಿ ಮೂರುತಿಯಾಗಿ,
ಮನದ ಕೊನೆಯಲ್ಲಿ ತೋರುವೆ.
ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಪರಂಜ್ಯೋತಿ
ಉರಿಲಿಂಗದೇವ ನೀನಯ್ಯಾ. || ೧ ||

೧೫೩೩
ಅರಿದೊಡೆ ಶರಣ, ಮರೆದೊಡೆ ಮಾನವ.
ಪಾತಕನು, ಹೊಲೆಯನು, ನಾನೇತಕ್ಕೆ ಬಾತೆ?
ಹೊತ್ತಿಗೊಂದೊಂದು ಪರಿಯ ಗೋಸುಂಬೆಯಂತೆ
ಈಶನ ಶರಣರ ಕಂಡುದಾಸೀನವ ಮಾಡುವ
ದಾಸೋಹವರಿಯದ ದೂಷಕನು ನಾನಯ್ಯ.
ಏಸು ಬುದ್ಧಿಯ ಹೇಳಿ ಬೇಸತ್ತೆನೀ ಮನಕೆ,
ಈಶ ನೀ ಸಲಹಯ್ಯಾ, ಉರಿಲಿಂಗತಂದೆ. || ೨ ||

೧೫೩೪
ಅವರಾರ ಪರಿಯಲ್ಲ ಎಮ್ಮ ನಲ್ಲನು.
ವಿಶ್ವವೆಲ್ಲವು ಸತಿಯರು, ಸೋಜಿಗದ ಪುರುಷನು.
ಅವರವರ ಪರಿಯಲ್ಲೆ ಅವರವರ ನೆರೆವನು,
ಅವರವರಿಗವರಂತೆ ಸುಖಮಯನು ನೋಡಾ.
ಅವರೆಲ್ಲರ ವಂಚಿ[ಸ], ಎನ್ನನಗಲದ ಪರಿಯ ನೋಡಾ, ಕೆಳದಿ.
ನೀನೊಳ್ಳಿದಳಾದಡೆ ಮಹಾಮಂತ್ರವ ಜಪಿಸು,
ನಿನ್ನನಗಲನು, ನಿನ್ನಾಣೆ, ಉರಿಲಿಂಗದೇವ, ತನ್ನಾಣೆ ಕೆಳದಿ. || ೩ ||

೧೫೩೫
ಆತನ ಬಿರುದೆನ್ನ ಉರದಲ್ಲಿ ಇದೆ ಕಂಡಯ್ಯಾ.
ಏಕೆ ಬಂದಿರೋ ಎಲೆ ಅಣ್ಣಗಳಿರಾ!
ನಿಮಗಪ್ಪುವುದಕ್ಕೆಡೆಯಿಲ್ಲ.
ನಿಮಗಪ್ಪುವದಕಡ್ಡಬಂದಹನೆಮ್ಮ ನಲ್ಲ.
ಏಕೆ ಬಂದಿರೋ,
ಉರಿಲಿಂಗದೇವನಪ್ಪಿ ಸೊಪ್ಪಾದ ಹಿಪ್ಪೆಗೆ? || ೪ ||

೧೫೩೬
ಇಂಬಿನ ಚುಂಬನ ಅಮೃತಾಹಾರ,
ಆಲಿಂಗನವೆ ಆಭರಣ,
ಸೋಂಕೆ ವಸ್ತ್ರ,
ನೋಟವೆ ಕೂಟ,
ಒಡನಾಟವೆ ಅಷ್ಟಭೋಗವೆನಗೆ.
ಉರಿಲಿಂಗದೇವನ ಕೂಟವೆ
ಪರಾಪರ ವಾಙ್ಮನಾತೀತ ಪರಮಸುಖ. || ೫ ||

೧೫೩೭
ಇಬ್ಬರಿಗೊಂದಂಬ ತೊಡುವೆ ಗಡ ಕಾಮಾ.
ಅರಿದರಿದು, ಬಿಲುಗಾರನಹೆಯೊ!
ಎಸೆ [ಇ]ಬ್ಬರು ಒಂದಹರು ಗಡ!
ಇದು ಹೊಸತು, ಚೋದ್ಯವೀ ಸರಳ ಪರಿ ನೋಡಾ!
ಎನಗೆಯೂ ಉರಿಲಿಂಗದೇವಗೆಯೂ ತೊಟ್ಟೆಸು.
ನಾವಿಬ್ಬರೊಂದಾಗೆ ಬಿಲ್ಲಾಳಹೆ, ಎಸೆಯೆಲೋ ಕಾಮಾ. || ೬ ||

೧೫೩೮
ಕಾಯಕ್ಕೆ ಕಾಯವಾಗಿ ಪ್ರಾಣಕ್ಕೆ ಪ್ರಾಣವಾಗಿ
ಮನಕ್ಕೆ ಮನವಾಗಿ ನೆರೆವ ನೋಡೆಲಗವ್ವಾ.
ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿಪೆ, ಮಹಾಸುಖವ!
ನಲ್ಲನ ನೋಟದ ಕೂಟದನುವನೇನೆಂದುಪಮಿಸುವೆ, ಮಹಾಘನವ!
ನಾನು ತಾನೆಂದು ವಿವರಿಸಬಾರದಂತೆ
ನೆರೆದನು ನೋಡಾ, ಉರಿಲಿಂಗದೇವನು. || ೭ ||

೧೫೩೯
ನಲ್ಲನ ರೂಪೆನ್ನ ನೇತ್ರವ ತುಂಬಿತ್ತು,
ನಲ್ಲನ ನುಡಿಯೆನ್ನ ಶ್ರೋತ್ರವ ತುಂಬಿತ್ತು,

ನಲ್ಲನ ಸುಗಂಧವೆನ್ನ ಘ್ರಾಣವ ತುಂಬಿತ್ತು,
ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು,
ನಲ್ಲನ ಆಲಿಂಗನವೆನ್ನ ಅಂತರಂಗ, ಬಹಿರಂಗದಲ್ಲಿ,
ನಲ್ಲನ ಪ್ರೇಮವೆನ್ನ ಮನವ ತುಂಬಿತ್ತು.
ಕೂಡಿ ಸುಖಿಯಾದೆ ಉರಿಲಿಂಗದೇವನ. ॥ ೮ ॥

೧೫೪೦
ಲೋಕದಂತೆ ಬಾರರು,
ಲೋಕದಂತೆ ಇರರು,
ಲೋಕದಂತೆ ಹೋಗರು, ನೋಡಯ್ಯ.
ಪುಣ್ಯದಂತೆ ಬಪ್ಪರು,
ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು, ನೋಡಯ್ಯಾ.
ಉರಿಲಿಂಗದೇವಾ,
ನಿಮ್ಮ ಶರಣರು ಉಪಮಾತೀತರಾಗಿ
ಉಪಮಿಸಬಾರದು. ॥ ೯ ॥

೧೫೪೧
ಹಾಡುವೆ ನಲ್ಲನ, ಬೇಡುವೆ ನಲ್ಲನ,
ಕೂಡುವೆ ನಲ್ಲನ ನಿಚ್ಚನಿಚ್ಚ ನೋಡಾ.
ಅವನೆ ಸಖನೆನಗೆ, ಅವನೆ ಸುಖವೆನಗೆ,
ಅವನೆ ಪ್ರಾಣವು ಕೇಳಲೆ ಕೆಳದಿ.
ಉರಿಲಿಂಗದೇವನೆನಗೆ ಸಂಜೀವನ ಕೆಳದಿ. ॥ ೧೦ ॥

*

ಉರಿಲಿಂಗಪೆದ್ದಿ

೧೫೪೨
ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ?
ಮಹಾಜ್ಞಾನಸ್ವರೂಪಂಗೆ ವಿಷಯವುಂಟೆ?
ಸದ್ಗುರುಕಾರುಣ್ಯವ ಪಡೆದು ಲಿಂಗಾರ್ಚನೆಯಂ ಮಾಡುವ
ಮಹಾಭಕ್ತಂಗೆ ಬೇರೆ ಮುಕ್ತಿಯ ಬಯಕೆ ಉಂಟೆ?
ಅವರುಗಳಿಗೆ ಅದು ಸ್ವಯಂಭು ಸಹಜಸ್ವಭಾವ.
ಇನ್ನು ತೃಪ್ತಿ ಆಪ್ಯಾಯನ ಅರಸಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೧ ॥

೧೫೪೩
ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ
ಕೆಲಬರಿಗೆ ಅಮೃತವಾಗಿ, ಕೆಲಬರಿಗೆ ವಿಷವಾಗದು ನೋಡಾ.
ಎಂತು ಅಂತೆ,
ಶ್ರೀಗುರು ಸರ್ವರಿಗೆಯೂ ಗುರುವಾಗಿರಬೇಕಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨ ||

೧೫೪೪
ಅಮೃತಸೇವನೆಯಾದ ಬಳಿಕ
ಭಿನ್ನರುಚಿಯ ನಿಶ್ಚಯಿಸಲುಂಟೆ?
ಸತ್ಯಶಾಂತಿಜ್ಞಾನವಿಂಬುಗೊಂಡ ಮಹಾಪುರುಷಂಗೆ
ಸುಖದ ಪದವ ನಿಶ್ಚಯಿಸಲುಂಟೆ?
ಸದ್ಗುರುಕಾರುಣ್ಯವ ಪಡೆದ ಮಹಾಭಕ್ತಂಗೆ
ಮುಕ್ತಿಯ ನಿಶ್ಚಯಿಸಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩ ||

೧೫೪೫
ಅಯ್ಯಾ, ನಿಮ್ಮ ಶರಣರ ಚರಣದ ಭಕ್ತಿಯೇ
ಎನಗೆ ಸಾಲೋಕ್ಯಪದವಯ್ಯಾ.
ಅಯ್ಯಾ, ನಿಮ್ಮ ಶರಣರ ಅರ್ಚನೆ ಪೂಜೆಯೇ
ಎನಗೆ ಸಾಮೀಪ್ಯಪದವಯ್ಯಾ.
ಅಯ್ಯಾ, ನಿಮ್ಮ ಗಣಂಗಳ ಧ್ಯಾನವೇ
ಎನಗೆ ಸಾರೂಪ್ಯಪದವಯ್ಯಾ.
ಅಯ್ಯಾ, ನಿಮ್ಮ ಪುರಾತನರ ಜ್ಞಾನಾನುಭಾವ ಸಮರಸಾನಂದವೇ
ಎನಗೆ ಸಾಯುಜ್ಯಪದವಯ್ಯಾ.
ಇಂತೀ ಚತುರ್ವಿಧಪದಂಗಳನಲ್ಲದೆ ಅನ್ಯವ ನಾನರಿಯೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪ ||

೧೫೪೬
ಅರಿದು ಮಾಡದ ಭಕ್ತಿ ಭವಕ್ಕೆ ತಂದಿತ್ತು.
ಅದೆಂತೆಂದಡೆ,
ಫಲಭೋಗಂಗಳ ಬಯಸುವನಾಗಿ
ಫಲವನುಂಡು ಮರಳಿ ಭವಕ್ಕೆ ಬಹನಾಗಿ.
ಇದು ಕಾರಣ,
ಅರಿದು ಮುಕ್ತಿಯ ಹಡೆವಡೆ ಅನುಭವವೇ ಬೇಕು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೫ ||

೧೫೪೭

ಆದಿಮಧ್ಯ ಅವಸಾನದಲ್ಲಿಯೂ ಎನ್ನನು
ಆಸೆಯೇ ಗ್ರಹಿಸುತ್ತಿದೆ.
ಶಿವ ಶಿವಾ, ಆಸೆಯಿಂದ ಗಾಸಿಯಾಗುತ್ತಿದ್ದೇನೆ.
ಶಿವ ಶಿವಾ, ಆ ಹೊನ್ನು ಹೆಣ್ಣು ಮಣ್ಣಿನ ಆಸೆ
ಗಾಸಿಮಾಡಿ ಕಾಡುತ್ತಿದೆ.
ಶಿವ ಶಿವಾ, ಈ ಆಸೆಯ ಕೆಡಿಸಿ
ನಿಮ್ಮ ಶ್ರೀಪಾದದಾಸೆಯೆ ನಿವಾಸವಾಗಿರಿಸಯ್ಯಾ ಎನ್ನನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೬ ||

೧೫೪೮

ಆಶೆಯುಳ್ಳನ್ನಬರ ಆಶ್ರಯಿಸುವ ಆಶ್ರಯವು
ದಾಸಿಯಿಂದ ಕರಕಷ್ಟ, ಕಾಣಿರೊ!
ಆಶೆಯೆ ದಾಸಿ ಕಾಣಿರೊ, ಅಯ್ಯಾ!
ಆ ನಿರಾಶೆಯೆ ಈಶ ಪದ, ಕಾಣಿರಣ್ಣಾ!
ದಾಸತ್ವದ ಈಶತ್ವದ ಅನುವನು ವಿಚಾರಿಸಿ,
ಆಶೆ ಅಡಗಿದಡೆ ಅದೆ ಈಶ ಪದ, ತಪ್ಪದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೭ ||

೧೫೪೯

ಎನ್ನಂಗದಲ್ಲಿ ನಿನಗೆ ಮಜ್ಜನ,
ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ,
ಎನ್ನ ತುರುಬಿನಲ್ಲಿ ನಿನಗೆ ಕುಸುಮಪೂಜೆ.
ಎನ್ನ ನೇತ್ರದಲ್ಲಿ ನಿನಗೆ ನಾನಾರೂಪು ವಿಚಿತ್ರ ವಿನೋದ,
ಎನ್ನ ಶ್ರೋತ್ರದಲ್ಲಿ ನಿನಗೆ ಪಂಚಮಹಾವಾದ್ಯ ಕೇಳಿಕೆ,
ಎನ್ನ ನಾಸಿಕದಲ್ಲಿ ನಿನಗೆ ಸುಗಂಧ, ಧೂಪಪರಿಮಳ,
ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ,
ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣಾಲಂಕಾರಪೂಜೆ,
ಎನ್ನ ಸಚ್ಚಿದಾನಂದ ಸಜ್ಜೆಗೃಹದಲ್ಲಿ ನೀನು
ಸ್ಪರ್ಶನಂಗೆಯ್ದು ನೆರೆದಿಪ್ಪೆಯಾಗಿ
ನೀ ನಾನೆಂಬೆರಡಳಿದು
ತಾನು ತಾನಾದ ಘನವನೇನೆಂಬೆನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೮ ||

೧೫೫೦
ಎನ್ನ ಗತಿ, ನಿನ್ನ ಗತಿ.
ಎನ್ನ ಕೇಳಿಕೆ, ನಿನ್ನ ಕೇಳಿಕೆ.
ಎನ್ನ ನೋಟವೇ, ನಿನ್ನ ನೋಟ.
ಎನ್ನಂಗ ಸ್ಪರ್ಶನವೇ, ನಿನ್ನಂಗ ಸ್ಪರ್ಶನ.
ಎನ್ನಂಗ ಸುಖಭೋಗವೇ, ನಿನ್ನಂಗ ಸುಖಭೋಗ.
ಎನ್ನೊಳಗೆ ನೀನು, ನಿನ್ನೊಳಗೆ ನಾನು.
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ
ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೯ ॥

೧೫೫೧
ಎನ್ನ ಸರ್ವಾಂಗದಲ್ಲಿ ಲಿಂಗವೈದಾನೆ, ಐದಾನೆ.
ಎನ್ನ ಮನವನರಿಯದೆ ಕೆಟ್ಟೆ ಕೆಟ್ಟೆನಯ್ಯಾ.
ಎನ್ನ ಅಂತರಂಗ ಬಹಿರಂಗದಲ್ಲಿ ಲಿಂಗವೈದಾನೆ,
[ಎನ್ನ] ಮನವನರಿಯದೆ ಕೆಟ್ಟೆ ಕೆಟ್ಟೆ[ನಯ್ಯಾ]
ವಿಶ್ವಾಸದಿಂ ಗ್ರಹಿಸಲೊಲ್ಲದೆ ಕೆಟ್ಟೆ ಕೆಟ್ಟೆನಯ್ಯಾ.
ಈ ಮನ ವಿಶ್ವಾಸದಿಂದ ಗ್ರಹಿಸಿದಡೆ
ಸತ್ಯನಹೆ ನಿತ್ಯನಹೆ ಮುಕ್ತನಹೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೧೦ ॥

೧೫೫೨
ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ,
ದೇವ ನೀನಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ.
ಈ ಪರಿಯ ಮಾಡುವರಿನ್ನಾರು ಹೇಳಾ?
ಎನಗೆ ನೀನೇ ಗತಿ, ನಿನಗೆ ನಾನೇ ಗತಿ
ಇನ್ನೇಕೆ ಜವನಿಕೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥ ೧೧ ॥

೧೫೫೩
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ರಾಗ ದ್ವೇಷವೆನಿಪ ಒಡಲಿರೆ,
ರಾಗ ದ್ವೇಷ ಗಮನಾಗಮನಂಗಳಿರುತ್ತಿರೆ,
ಬ್ರಹ್ಮವಾನೆಂಬ ಬರಿಯ ವಾಗದ್ವೈತದಲ್ಲಿ ಫಲವಿಲ್ಲ.
ನಂಬು, ಸುಖಸಾಗರವನರಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ. ॥ ೧೨ ॥

೧೫೫೪
ಕಾಮಧೇನು ಕಾಮಿಸಿದುದ ಕುಡದಿರ್ದಡೆ
ಆ ಕಾಮಧೇನು ಬಂಜೆ ಆಕಳಿಂದ ಕಷ್ಟ ನೋಡಾ.
ಕಲ್ಪತರು ಕಲ್ಪಿಸಿದುದ ಕುಡದಿರ್ದಡೆ
ಆ ಕಲ್ಪತರು ತರಿ ತಾರಿ ಬೊಬ್ಬುಲಿಯಿಂದವೂ ಕಷ್ಟ ನೋಡಾ.
ಚಿಂತಾಮಣಿ ಚಿಂತಿಸಿದುದ ಕುಡದಿರ್ದಡೆ
ಚಿಂತಾಮಣಿ ಗಾಜುಮಣಿಯಿಂದವೂ ಕರಕಷ್ಟ ನೋಡಾ.
ಶ್ರೀಗುರುಕಾರುಣ್ಯವ ಪಡೆದು ಸದ್ಭಕ್ತನಾಗಿ
ಶ್ರೀಗುರುಲಿಂಗಜಂಗಮಕ್ಕೆ ಪ್ರೀತಿಯಿಂದ ದಾಸೋಹವ ಮಾಡದಿರ್ದಡೆ
ಆ ಭಕ್ತನು ಲೋಕದ ಭವಿಗಳಿಂದವೂ ಕರಕಷ್ಟ ನೋಡಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೧೩ ||

೧೫೫೫
ಗುರುವ ಕಂಡಲ್ಲಿ ನಿನ್ನನೇ ಕಾಬೆ,
ಲಿಂಗವ ಕಂಡಲ್ಲಿ ನಿನ್ನನೇ ಕಾಬೆ,
ಜಂಗಮವ ಕಂಡಲ್ಲಿ ನಿನ್ನನೇ ಕಾಬೆ.
ನಿನ್ನನಲ್ಲದ ಮತ್ತೊಂದ ತೋರದಿಹ ಅರಿವು ನೀನೇ ಬಲ್ಲೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೧೪ ||

೧೫೫೬
ಗುರುವನರಿವನ್ನಕ್ಕರ ಅಷ್ಟಾದಶ ವಿದ್ಯೆಯನರಿಯಲುಂಟು
ಓದಲುಂಟು ಕೇಳಲುಂಟು ಹೇಳಲುಂಟು.
ಗುರುಕರುಣದಿಂದ ಗುರುವನರಿದ ಬಳಿಕ, ಗುರುವಲ್ಲದೆ ತಾನಿಲ್ಲ.
ಕೇಳಲಿಲ್ಲ ಹೇಳಲಿಲ್ಲ, ಹೇಳಲಿಲ್ಲಾಗಿ ಅರಿಯಲಿಲ್ಲ.
ಅರಿಯಲಿಲ್ಲದ ಅರಿವನರುಹಿಸಿದ ಗುರುವನರಿಯಲುಂಟೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೧೫ ||

೧೫೫೭
ಗುರುವಿನ ಮಹತ್ವವನು, ಶಿಷ್ಯನ ಗುರುತ್ವವನು
ಆರಯ್ಯ ಬಲ್ಲವರು?
ಗುರು ಶಿಷ್ಯನಾದ ಪರಿಯನು, ಶಿಷ್ಯ ಗುರುವಾದ ಪರಿಯನು
ಆರಯ್ಯ ಬಲ್ಲವರು?
ವಾಙ್ಮನೋತೀತ, ಉಪಮಿಸಬಾರದ ಘನವು, ಮಹಾಕ್ರೀಯನು.
ಭಕ್ತಿಯಿಂದ ಗುರು ಭಕ್ತವತ್ಸಲನಾಗಿ ಶಿಷ್ಯ ಗುರುವಾದ ಪರಿ,
ಅದು ಬೀಜವೃಕ್ಷನ್ಯಾಯದಂತೆ ಅವಿನಾಭಾವವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೧೬ ||

೧೫೫೮
ಜಗವೊಂದೆಸೆ, ತಾನೊಂದೆಸೆ,
ಮತ್ತಾ ಜಗದೊಳಗೆ ತಾ, ತನ್ನೊಳಗೆ ಜಗ.
ಆಗಮವೊಂದೆಸೆ, ತಾನೊಂದೆಸೆ,
ಮತ್ತಾ ಆಗಮದೊಳಗೆ ತಾ, ತನ್ನೊಳಗೆ ಆಗಮ.
ವಿಧಿಯೊಂದೆಸೆ, ತಾನೊಂದೆಸೆ,
ಮತ್ತಾ ವಿಧಿಯೊಳಗೆ ತಾ, ತನ್ನೊಳಗೆ ವಿಧಿ.
ಕ್ರೀಯೊಂದೆಸೆ, ತಾನೊಂದಸೆ,
ಮತ್ತಾ ಕ್ರೀಯೊಳಗೆ ತಾ, ತನ್ನೊಳಗೆ ಕ್ರೀ.
ಇಂತೀ ಜಗ, ಆಗಮ, ವಿಧಿ, ಕ್ರೀ ನಿಷೇಧವಾಗಿ,
ಹೊದ್ದಿಯೂ ಹೊದ್ದನು, ನೀರ ತಾವರೆಯಂತೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. || ೧೭ ||

೧೫೫೯
ಜಗದೊಳಗಣ ಸೂರ್ಯನಂತಿರ್ಪನಯ್ಯ ಶಿವನು.
ಲೋಕಾದಿ ಲೋಕಂಗಳೊಳಗಿರ್ದಡೇನು,
ಜಗದ ಪುಣ್ಯ, ಪಾಪ, ಸ್ವರ್ಗ, ನರಕ,
ಬಂಧ, ಮೋಕ್ಷಕ್ಕೊಳಗಾದಾತನೇ ಅಲ್ಲ.
ಅದೆಂತೆಂದಡೆ,
ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ,
ಸೂರ್ಯಂಗಿಲ್ಲವಾಗಿ,
ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ,
ಶಿವನಿಗಿಲ್ಲವಾಗಿ.
ಅನಂತಕೋಟಿ ಬ್ರಹ್ಮಾಂಡಗಳು
ತನ್ನ ಒಡಲೊಳಗೆ ಅಡಗಿದವೆಂದಡೆ
ತಾ ಹೊರಗಾಗಿ ಅಡಗಲೆಡೆ ಏನುಂಟು?
ಇದು ಕಾರಣ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ,
ವಿಶ್ವಾಧಿಪತಿಯಾಗಲೂ ಬಲ್ಲ. || ೧೮ ||

೧೫೬೦
ಜಲ ಮಲಿನ[ವಪ್ಪು]ವ ತೊಳೆವಂತೆ,
ಮನದ ತಮಂಧವ ತೊಳೆ[ದು]
ದರ್ಪಣದೊಳಗಣ ಪ್ರತಿಬಿಂಬದಂತೆ ಇಪ್ಪಿರಿಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೧೯ ||

೧೫೬೧
ಜಾತವೇದಸ್ಸಿನಲ್ಲಿ ಶೋಧಿಸಿ
ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ.
ಅದೆಂತೆಂದಡೆ :
'ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ' ಎಂದುದಾಗಿ
ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨೦ ||

೧೫೬೨
ಜ್ಯೋತಿ ಕರ್ಪುರದ ಸಂಗ ಜ್ಯೋತಿಯಪ್ಪಂತೆ,
ಅಪ್ಪುವಿನ ಸಂಗದಿಂದ ಉಪ್ಪುವಪ್ಪುವಪ್ಪಂತೆ,
ಶ್ರೀಗುರುವಿನ ಸಂಗವ ಶಿಷ್ಯಮಾಡಿ ಶ್ರೀಗುರುವಪ್ಪುದು.
ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨೧ ||

೧೫೬೩
ಪಂಕವಿಲ್ಲದ ಕಮಲಕ್ಕೆ ಸುಗಂಧ ಸುಲಲಿತವೆಂತಪ್ಪುದಯ್ಯಾ?
ಹೊನ್ನು ಹೆಣ್ಣು ಮಣ್ಣಿಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯಾ?
ಕಮಲ ಪಂಕದಲಿ ವರ್ತಿಸಿದಂತೆ ವರ್ತಿಸುತ್ತಿಪ್ಪರು ನಿಮ್ಮ ಶರಣರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨೨ ||

೧೫೬೪
ಪಂಚಭೂತದನುವರಿದು ಸುಸಂಗನಾದ ಬಳಿಕ
ಪಂಚಮುಖನು ಬೇರುಂಟೆ ತನ್ನೊಳಗಲ್ಲದೆ?
ವಂಚನೆಯೊಳು ಪಂಚಬ್ರಹ್ಮವನೋದಿ ಫಲವೇನು?
ಈಚುವೋದ ತೆನೆಯಂತೆ.
ವಂಚನೆಯಿಲ್ಲದೆ ಸಂಚಿಸಿಕೊಳ್ಳನೆ ಕಂಚಿಯ ಕೈಲಾಸಕ್ಕೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ? || ೨೩ ||

೧೫೬೫
ಪಂಚಭೂತವಂಗವಾಗಿಪ್ಪ ಆತ್ಮಂಗೆ
ಪಂಚೇಂದ್ರಿಯಂಗಳೇ ಮುಖಂಗಳು,
ಪಂಚಕರಣಂಗಳೇ ಕೈಗಳು, ಪಂಚವಿಷಯಂಗಳೇ ಪೂಜೆ,
ಪಂಚಪದಾರ್ಥವೇ ಭೋಗ.
ಇದನೆಲ್ಲವ ತನ್ನ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ,
ಆತ ಸರ್ವನಿರ್ವಾಣಿ, ಸಕಲನಿಷ್ಕಲಾತ್ಮಕನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨೪ ||

೧೫೬೬
ಪರಲೋಕದಲ್ಲಿ ಲಾಭವನರಸುವರು
ಇಹಲೋಕದಲ್ಲಿ ಲೋಭವ ಮಾಡದೆ, ಮಾಡಿರೆ ದಾಸೋಹವ.
ಹಲವು ಕಾಲದಿಂದ ನೆಯ್ದ ವಸ್ತ್ರವ ಲೋಭವ ಮಾಡದೆ ಇತ್ತಡೆ
ಶಿವ ಮೆಚ್ಚಿ ತವನಿಧಿಯ ಕೊಡನೆ ದಾಸಮಯ್ಯಂಗೆ?
ದೇವಾಂಗವಸ್ತ್ರವನು ಶಿವಗಣಂಗಳಿಗೆ ತೃಪ್ತಿಬಡಿಸಿದ ಅಮರನೀತಿ
ಶಿವನ ಕೌಪೀನಕ್ಕೆ ತನ್ನ ಗುರಿಯ ಮಾಡಿದಡೆ
ಕಾಯವೆರಸಿ ಕೈಲಾಸಕ್ಕೆ ಹೋಗನೆ?
ಇದು ಕಾರಣ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಶರಣರಿಗೆ
ಉಣಲಿಕ್ಕಿ ಉಡಕೊಟ್ಟು ಉಪಚರಿಸಿದಡೆ
ಶಿವನೊಲಿದು ಇತ್ತ ಬಾ ಎಂದೆತ್ತಿಕೊಳ್ಳನೆ? ॥ ೨೫ ॥

೧೫೬೭
ಪರುಷದ ಗೃಹದೊಳಗಿದ್ದು,
ತಿರಿವನೆ ಮನೆ ಮನೆಯ?
ತೊರೆಯೊಳಗಿದ್ದವನು,
ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥ ೨೬ ॥

೧೫೬೮
ಪರುಷವು ಪಾಷಾಣದಂತೆ ಇಪ್ಪುದು,
ಆ ಪರುಷವು ಪರುಷವೇದಿಗಳಿಗಲ್ಲದೆ ಅರಿಯಬಾರದು,
ಆ ಪರುಷದ ಫಲಸಿದ್ಧಿ ಪರುಷವೇದಿಗಳಿಗಲ್ಲದೆ ಅಳವಡದು.
ಲಿಂಗವೂ ಲಿಂಗವಂತನಾಗಿ
ದೇವ ದಾನವ ಮಾನವರೊಳಗಾಗಿ
ಅವರಂತೆ ಇಪ್ಪನು.
ಆ ಲಿಂಗವು ಲಿಂಗವೇದ್ಯಂಗಲ್ಲದೆ ಅರಿಯಬಾರದು.
ಪರುಷವೇದಿ ಪರುಷದ ಫಲಸಿದ್ಧಿಯಿಂದ ಸುಖಿಸುವಂತೆ
ಲಿಂಗವೇದಿ ಲಿಂಗವಂತರ ಸಂಗದಿಂದ ಸುಖಿಸಿ ಮುಕ್ತನಪ್ಪನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೨೭ ॥

೧೫೬೯
ಪುಣ್ಯಾಂಗನೆಯ ಸುತಂಗೆ
ಪಿತನುಂಟು, ಪಿತಾಮಹನುಂಟು, ಪ್ರಪಿತಾಮಹನುಂಟು.
ಪಣ್ಯಾಂಗನೆಯ ಸುತಂಗೆ ಪಿತನಿಲ್ಲ, ಮೇಲೇನೂ ಇಲ್ಲ,
ಅವನ ಬದುಕು ನಗೆಗೇಡೆ.
ಭಕ್ತಾಂಗನೆಯ ಸುತನಹ ಸದ್ಭಕ್ತಂಗೆ
ಪಿತನು ಗುರು, ಪಿತಾಮಹನು ಜಂಗಮ,
ಪ್ರಪಿತಾಮಹನು ಮಹಾಲಿಂಗ ಉಂಟು ಕೇಳಿರಣ್ಣಾ.
ಅಭಕ್ತಾಂಗನೆಯ ಸುತನಹ ತಾಮಸಭಕ್ತಂಗೆ
ಪಿತನಹ ಗುರುವಿಲ್ಲ, ಪಿತಾಮಹ ಜಂಗಮವಿಲ್ಲ,
ಪ್ರಪಿತಾಮಹ ಮಹಾಲಿಂಗವಿಲ್ಲ.
ಅವನ ಸ್ಥಿತಿ ಗತಿ ನಗೆಗೇಡೆ ಕೇಳಿರಣ್ಣಾ, ಇದು ದೃಷ್ಟ ನೋಡಿರೆ.
ಇದು ಕಾರಣ,
ಭಕ್ತಿಹೀನನಾದ ಅಭಕ್ತಾಂಗನೆಯ ಮಗನ ಸಂಗವ ಬಿಡಿಸಿ,
ಸದ್ಭಕ್ತಿ ಸದಾಚಾರಸಂಪನ್ನರಪ್ಪ
ಶರಣರ ಸಂಗದಲ್ಲಿರಿಸಯ್ಯಾ, ನಿಮ್ಮ ಬೇಡಿಕೊಂಬೆ
ಉರಿಲಿಗಂಪೆದ್ದಿಪ್ರಿಯ ವಿಶ್ವೇಶ್ವರಾ. || ೨೮ ||

೧೫೭೦
ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ
ಶ್ರೀಗುರು ಲಿಂಗ ಜಂಗಮಕ್ಕೆ ಸ್ನೇಹಿಸಬೇಕು.
ಸ್ನೇಹವೇ ಬಾತೆ ಕಾಣಿರೋ,
ಲಿಂಗಕ್ಕೆ ಸ್ನೇಹವೇ ಭಕ್ತಿ ಕಾಣಿರೋ,
ಸ್ನೇಹವೇ ಭಕ್ತಿಗೆ ಮೂಲ ಕಾಣಿರೋ.
ಕಣ್ಣಪ್ಪ, ಮಾದಾರ ಚೆನ್ನಯ್ಯ, ಚೋಳಿಯಕ್ಕನ ಸ್ನೇಹವ ನೋಡಿ ಭೋ.
ಅವರಂತೆ ಸ್ನೇಹವ ಮಾಡಲು ಭಕ್ತಿ ಮುಕ್ತಿ ಪರಿಣಾಮ ಮಹಾಸುಖ.
ಆ ಸುಖಸ್ವರೂಪ ತಾನಾಗಿ ಇಪ್ಪನು ಶಿವನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೨೯ ||

೧೫೭೧
ಪುರಾಕೃತಪುಣ್ಯಫಲದ ಪರಿಯ ನೋಡಿರೆ!
ಶ್ರೀಗುರು, ಲಿಂಗ ಜಂಗಮ ಪ್ರಸಾದವಾಗಿ ಪ್ರತ್ಯಕ್ಷವಾದ!
ಶಿವ ಶಿವಾ, ಗುರುವೆಂಬ ಕಲ್ಪವೃಕ್ಷ, ಲಿಂಗವೆಂಬ ಕಾಮಧೇನು,
ಜಂಗಮವೆಂಬ ಚಿಂತಾಮಣಿ, ಪ್ರಸಾದವೆಂಬ ಮಹಾಮೃತವು.
ಈ ಚತುರ್ವಿಧಪ್ರಸಾದಾಮೃತವ ಭೋಗಿಸದೆ

ಅಜ್ಞಾನಸಂಸಾರವೆಂಬ ಅಂಬಿಲವ ಬಯಸುವರನೇನೆಂಬೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೦ ||

೧೫೭೨
ಬಹಿರಂಗದಲ್ಲಿ ಶಿವಲಿಂಗ, ಅಂತರಂಗದಲ್ಲಿ ಅನ್ಯದೈವ.
ಬಹಿರಂಗದಲ್ಲಿ ಲಿಂಗಕ್ರೀ, ಅಂತರಂಗದಲ್ಲಿ ಅನ್ಯಕ್ರೀ.
ಬಹಿರಂಗದಲ್ಲಿ ಭಕ್ತರು, ಅಂತರಂಗದಲ್ಲಿ ಭವಿಗಳು.
ಇಂತಿವರುಗಳ ಭಕ್ತರೆಂಬೆನೆ? ಎನಬಾರದು,
ನಿಮ್ಮ ಪೂಜಿಸಿಹರಾಗಿ ಭಕ್ತರೆಂಬೆನೆ? ಸದಾಚಾರಕ್ಕೆ ಸಲ್ಲರು.
ಲಿಂಗವಂತರು ಮೆಚ್ಚರು.
ಈ ಉಭಯ ಸಂಕೀರ್ಣವ ನೀನೆ ಬಲ್ಲೆ.
ಎನ್ನ ಮನವಿಡಿಯದು, ಎನಗಿನ್ನಾವುದು ಬುದ್ಧಿ ಎಂಬುದ
ವಿಚಾರಿಸಿ ಕರುಣಿಸಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೧ ||

೧೫೭೩
ಬ್ರಹ್ಮ ವಿಷ್ಣು ಮೊದಲಾದ ದೇವದಾನವ ಮಾನವರೆಲ್ಲರನೂ
ಆಸೆ ಗಾಸಿಮಾಡಿ ಕಾಡಿತ್ತು.
ಮಹತ್ತಪ್ಪ ವ್ರತನಿಯಮ ಗುರುತ್ವ ಉಳ್ಳವರನೂ
ಕೆಡಿಸಿ ಲಘುಮಾಡಿ ನಗೆಗೆಡೆಮಾಡಿತ್ತು.
ಈ ಸಾಮರ್ಥ್ಯವುಳ್ಳ ಪುರುಷರನು ಗಾಸಿಮಾಡಿ ಸೋಲಿಸಿ
ತಾನು ಗೆಲ್ಲುವ ಸಾಮರ್ಥ್ಯವುಳ್ಳ ಆಸೆ ಇದೇನೋ!
ಎಂದು ವಿಚಾರಿಸಲು,
ಶಿವಸಂಬಂಧಿ ಆಸೆಗೆ ಆಸಕ್ತನಾದಡೆ
ಶಿವನಾಜ್ಞೆಯಿಂದ ಕಾಡುವುದು,
ಶಿವನೊಲಿದವರ ಹೊದ್ದಲಮ್ಮದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೨ ||

೧೫೭೪
ಮಣ್ಣ ಬೆಲ್ಲವ ಮಾಡಿ, ಮಗುವಿನ ಕೈಯಲ್ಲಿ ಕೊಟ್ಟು,
ಊರ ತಿರುಗುವ ತುಡುಗುಣಿಯಂತೆ.
ಪ್ರಾಣಲಿಂಗವನರುಹುವ ಜ್ಞಾನಗುರುವಿನ
ಕೈಯ ದೀಕ್ಷೆಯ ಪಡೆಯಲರಿಯದೆ,
ಇಷ್ಟಲಿಂಗವನೊಬ್ಬ ಭ್ರಷ್ಟನ ಕೈಯಲೀಸಿಕೊಂಡು,
ಅಲ್ಲಿ ಭಜಿಸಿ ಭ್ರಾಂತುಗೊಂಬ ಮಿಟ್ಟಿಯ ಭಂಡರನೇನೆಂಬೆ ಹೇಳಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೩ ||

೧೫೭೫
'ಯಥಾ ಬೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು.
ಕಲ್ಪವೃಕ್ಷದ ಬೀಜದಿಂದಾದ ಸಸಿ, ಕಲ್ಪವೃಕ್ಷವಪ್ಪುದು ತಪ್ಪದು,
ದಿಟದಿಟ ತಪ್ಪದು ನೋಡಾ.
ಕಾಮಧೇನುವಿನ ಶಿಶು ಕಾಮಧೇನುವಪ್ಪುದು ತಪ್ಪದು
ದಿಟದಿಟ ನೋಡಾ.
ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ತಪ್ಪದು,
ದಿಟದಿಟ ನೋಡಾ.
'ಯಥಾ ಬೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು
ಶಿವನೇ ಬಲ್ಲನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೪ ||

೧೫೭೬
ರತ್ನಂಗಳೊಳಗೆ ಚಿಂತಾಮಣಿ ಮಹಾರತ್ನವೆಂತು
ಪೂಜ್ಯವಾಗಿ ಒಪ್ಪುವುದು,
ಧೇನುಗಳೊಳಗೆ ಕಾಮಧೇನುವೆಂತು
ಪೂಜ್ಯವಾಗಿ ಒಪ್ಪುವುದು,
ಅಂತೆ, ಕಾಣಿರೆ ತತ್ವಂಗಳೊಳಗೆ ಶ್ರೀ ಗುರುತತ್ವವೆ ಪೂಜ್ಯವು.
ಶ್ರೀಗುರುತತ್ವವೆ ಒಪ್ಪುವುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೫ ||

೧೫೭೭
ಲಿಂಗದಲ್ಲಿ ಮನ ಲೀಯವಾಗಿ,
ಜಂಗಮದಲ್ಲಿ ಧನ ಲೀಯವಾಗಿ,
ಸದ್ಗುರುಲಿಂಗದಲ್ಲಿ ತನು ಲೀಯವಾಗಿ ಹೋಗಲು
ಭಕ್ತ ಲಿಂಗದೊಳಗೆ, ಲಿಂಗ ಭಕ್ತನೊಳಗೆ.
ವಂಚನೆಯಿಲ್ಲದ ದಾಸೋಹ ಕೇವಲ ಮುಕ್ತಿ,
ಇದು ಸತ್ಯ ನಿತ್ಯ ಶಿವ ಬಲ್ಲನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೬ ||

೧೫೭೮
ಲಿಂಗಭರಿತ ಶರಣ, ಶರಣಭರಿತ ಲಿಂಗವದೆಂತೆಂದಡೆ:
'ಶರಣಮಧ್ಯೇ ತು ಲಿಂಗಂ ಸ್ಯಾತ್ ಲಿಂಗಮಧ್ಯೇ ತು ಶರಣಃ'
ಎಂದುದಾಗಿ,
ಶರಣ ಬೇರೆಯೆ? ಲಿಂಗ ಬೇರೆಯೆ? ಶಿವ ಶಿವಾ ಒಂದೇ ಕಾಣಿರಣ್ಣಾ.
ಶರಣಕ್ರೀ ಎಲ್ಲವೂ ಲಿಂಗಕ್ರೀ, [ಲಿಂಗಕ್ರೀ] ಎಲ್ಲವೂ ಶರಣಕ್ರೀ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೭ ||

೧೫೭೯
ಲಿಂಗವಂತನು ಲಿಂಗವಿಲ್ಲದವರ ಬಯಸಿದಡೆ ಆತಂಗೆ ಲಿಂಗವಿಲ್ಲ,
ಲಿಂಗವಿಲ್ಲದವನು ಆರಿಗೂ ಬಾತೆ ಅಲ್ಲ.
ಬಾತೆ ಅಲ್ಲದವಂಗೆ ಆರೂ ಸ್ನೇಹಿಸರು, ಆರು ಏನನೂ ಕೊಡರು.
ಇದು ಕಾರಣ,
ದುರಾಶೆಯಂ ಬಿಟ್ಟು ನಿರಾಶೆಯಾಗಿ
ಲಿಂಗವನಾಶ್ರೈಸಿದಡೆ ಪ್ರಸಾದವಪ್ಪುದು.
ಪ್ರಸಾದದಿಂದಿಹಪರ ಸಿದ್ಧಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೮ ||

೧೫೮೦
ಲಿಂಗವ ನಂಬಿ, ಲಿಂಗಾರ್ಚನೆಯ ಮಾಡಿ,
ಲಿಂಗವಾದರು ಅಸಂಖ್ಯಾತಪುರಾತನರು.
ಲಿಂಗವ ನಂಬದೆ ಅಂಗದಿಚ್ಛೆಯ ನಡೆದು ಭಂಗಿತರಾದರು,
ದೇವದಾನವಮಾನವರನೇಕರು, ಇದು ದೃಷ್ಟ.
ಇಷ್ಟಾನಿಷ್ಟವಿದೆ:
ಅನಿಷ್ಟವ ಬಿಟ್ಟು ಇಷ್ಟವ ಹಿಡಿದು ಬದುಕಿರಯ್ಯಾ ಕೆಡಬೇಡ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೩೯ ||

೧೫೮೧
ಲಿಂಗವನರಿದ ಲಿಂಗವಂತನು ಸರ್ವಾಂಗಲಿಂಗಮೂರ್ತಿ.
ಆತನ ನುಡಿಯೆ ವೇದ,
ಆತನ ನಡೆಯೆ ಶಾಸ್ತ್ರ ಪುರಾಣ ಆಗಮ ಚರಿತ್ರವು.
ಆ ಮಹಾಮಹಿಮನ ನುಡಿಯಲ್ಲಿ ತರ್ಕವ ಮಾಡಲಾಗದು.
ನಡೆಯಲ್ಲಿ ನಾಸ್ತಿಕವ ಮಾಡಿದಡೆ ನರಕ ತಪ್ಪದಯ್ಯಾ.
ಲಿಂಗವರಿದ ಮಹಾಮಹಿಮಂಗೆ ನಮೋ ನಮೋ ಎಂಬೆನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೦ ||

೧೫೮೨
ವೇದವನೋದಿ ಕೇಳಿ
ವೇದದ ವರ್ಮವನರಿದ ಫಲ ದಾಸೋಹವಯ್ಯಾ.
ಶಾಸ್ತ್ರವನೋದಿ ಕೇಳಿ
ಶಾಸ್ತ್ರದ ವರ್ಮವನರಿದ ಫಲ ದಾಸೋಹವಯ್ಯಾ.
ಪುರಾಣವನೋದಿ ಕೇಳಿ
ಪುರಾಣದ ವರ್ಮವನರಿದ ಫಲ ದಾಸೋಹವಯ್ಯಾ.

ಆಗಮವನೋದಿ ಕೇಳಿ
ಆಗಮದ ವರ್ಮವನರಿದ ಫಲ ದಾಸೋಹವಯ್ಯಾ.
ಪುರಾತನರ ಗೀತ ವಚನ ಪ್ರಸಂಗಾನುಭಾವದಲ್ಲಿ
ದೃಷ್ಟಫಲ ದಾಸೋಹವಯ್ಯಾ.
ವೇದ ಶಾಸ್ತ್ರ ಪುರಾಣ ಆಗಮ
ಪುರಾತನರ ಗೀತದ ವಚನ ಪ್ರಸಂಗವನರಿದು
ದಾಸೋಹವಿಲ್ಲದಿದ್ದಡೆ
ಆ ಓದು ಗಿಳಿ ಓದಿದಂತೆ.
ಆ ಕೇಳುವೆ, ಮರುಳ ಕೇಳುವೆಯಂತೆ.
ಅವನೇತಕ್ಕೂ ಬಾರ್ತೆಯಲ್ಲಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೪೧ ॥

೧೫೮೪
ಶಿವ ತನ್ನ ವಿನೋದಕ್ಕೆ ರಚಿಸಿದನು, ಅನಂತ ವಿಶ್ವವನು.
ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೆ? ಇಲ್ಲ.
ವಿಶ್ವಮಯ ತಾನಾದನು.
ವಿಶ್ವವೆಲ್ಲವೂ ತಾನಾದಡೆ
ವಿಶ್ವದುತ್ಪತ್ತಿಸ್ಥಿತಿಲಯಕ್ಕೊಳಗಾದನೇ? ಇಲ್ಲ.
ಅದೇನು ಕಾರಣವೆಂದಡೆ;
ಅಜಾತನಾಗಿ ಉತ್ಪತ್ತಿ ಇಲ್ಲ, ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ,
ಮರಣರಹಿತನಾಗಿ ಲಯಕ್ಕೊಳಗಲ್ಲ,
ಇಂತೀ ಗುಣತ್ರಯಂಗಳ ಹೊದ್ದಲರಿಯ.
ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ.
ತನ್ನಲ್ಲಿ ತಾನಲ್ಲದ ಅನ್ಯವು ತೋರಲರಿಯದಾಗಿ, ಇದಿರಿಲ್ಲ.
ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ.
ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ,
ಮರಳಿ ಅರಸಾಗಬಲ್ಲ.
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು,
ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ. ॥ ೪೨ ॥

೧೫೮೫
ಶಿವನೇ ದೈವ, ಶಿವಭಕ್ತನೇ ಕುಲಜ, ಷಡಕ್ಷರವೇ ಮಂತ್ರ,
ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ನೇಮ,

ಆಸೆಯಿಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ,
ವಂಚನೆ ಇಲ್ಲದಿಪ್ಪುದೇ ಭಕ್ತಿ,
ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ.
ಇದು ಸತ್ಯ, ಶಿವಬಲ್ಲ, ಶಿವನಾಣೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೩ ||

೧೫೮೫
ಶ್ರೀಗಂಧದ ತರು ಕಾಮರನಾದುದುಂಟೆ?
ಹೇಮದ ಪರ್ವತ ಹುಲುಮೊರಡಿಯಾದುದುಂಟೆ?
ಮಹಾಸಿಂಹ ಹುಲುಮೃಗವಾದುದುಂಟೆ?
ಜ್ಞಾನಿ ಅಜ್ಞಾನಿಯಾದುದುಂಟೆ?
ವಿರಕ್ತ ಸಂಸಾರಿಯಾದುದುಂಟೆ?
ಲಿಂಗವೆ ತಾನೆಂದರಿದ ಶರಣಂಗೆ
ಬೇರೆ ಅಂಗೇಂದ್ರಿಯಂಗಳ ವಿಕಾರವೆಂಬುದುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ! || ೪೪ ||

೧೫೮೬
ಸಾಕಾರವಿಡಿದು ಅರ್ಚನೆ ಪೂಜನೆಯಂ ಮಾಡುವುದಲ್ಲದೆ
ನಿರಾಕಾರವ ನಂಬಲಾಗದು.
ಅಗ್ನಿಯಲ್ಲಿಹ ಗುಣವು ಪ್ರಕಾಶದಲುಂಟೆ?
ಶ್ರೀಗುರು ಕರಸ್ಥಲದಲ್ಲಿ ಬಿಜಯಂಗೈಸಿ ಕೊಟ್ಟ
ಇಷ್ಟಲಿಂಗವಿದ್ದ ಹಾಂಗೆ
ವಜ್ರದೊಳಗೆ ಬಯಲನರಸುವರೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೫ ||

೧೫೮೭
ಸಾಲೋಕ್ಯವೆಂದೇನೋ,
ಅಂಗದ ಮೇಲೆ ಲಿಂಗಸಂಬಂಧವಾಗಿರುತ್ತಿರಲು?
ಸಾಮೀಪ್ಯವೆಂದೇನೋ,
ಗುರುಲಿಂಗಜಂಗಮದಾಸೋಹ ಸನ್ನಿಧಿಯೊಳಿರುತ್ತಿರಲು?
ಸಾರೂಪ್ಯವೆಂದೇನೋ,
ಅನವರತ ಅರ್ಚನೆಯೊಳಿರುತ್ತಿರಲು?
ಸಾಯುಜ್ಯವೆಂದೇನೋ,
ಚತುರ್ದಶಭುವನವನೊಳಕೊಂಡ ಮಹಾಘನವ

ಮನ ಅವಗವಿಸಿ ನೆನೆಯುತ್ತಿರಲು?
ಇಂತೀ ಚತುರ್ವಿಧ ಪದವೆಂಬುದೇನೋ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮನರಿದ ಶರಣಂಗೆ? || ೪೬ ||

೧೫೪೮

ಸೂರ್ಯನಿಲ್ಲದೆ ಹಗಲುಂಟೆ ಅಯ್ಯಾ?
ದೀಪ ಇಲ್ಲದೆ ಬೆಳಕುಂಟೆ ಅಯ್ಯಾ?
ಪುಷ್ಪವಿಲ್ಲದೆ ಪರಿಮಳವನರಿಯಬಹುದೆ ಅಯ್ಯಾ?
ಸಕಲವಿಲ್ಲದೆ ನಿಷ್ಕಲವ ಕಾಣಬಾರದು.
ಮಹಾಘನ ನಿರಾಳ ಪರಶಿವ[ನ]
ಲಿಂಗವು ತೋರಿತ್ತು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೭ ||

೧೫೪೯

ಸೊಡರ ಹಿಡಿದು ಕುಣಿಯಲ್ಲಿ ಬೀಳುವವರ ಕಂಡು,
ವಿಧಿಯ ಕೈಯಲ್ಲು ನಿಸ್ತರಿಸಲಾರೆನಯ್ಯಾ ನಾನು.
ಅಹಂಗಾದೇನಲ್ಲಾ ಎಂಬ ಚಿಂತೆಯ ನಿಸ್ತರಿಸಲಾರೆನಯ್ಯಾ.
ವೇದವೆಂಬ ಮಹಾಜ್ಯೋತಿಯ ಹಿಡಿದು
ಶಿವಪಥದಲ್ಲಿ ನಡೆಯಲರಿಯದೆ
ಪಾಪದ ಕುಣಿಯಲ್ಲಿ ಬೀಳುವವರ ಕಂಡು ನಗೆಯಾದುದಯ್ಯಾ.
ಗುರೂಪದೇಶವೆಂಬ ಜ್ಯೋತಿಯ ಹಿಡಿದು,
ಶಿವಪಥದಲ್ಲಿ ನಡೆದು
ಪ್ರಸಾದವೆಂಬ ನಿಧಾನವ ಕಂಡುಕೊಂಡು
ಉಂಡು ಪರಿಣಾಮಿಸಿ ಬದುಕಿದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೮ ||

೧೫೫೦

ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯನಿಚ್ಛೈಸುವುದೆ?
ಪರುಷ ದೊರಕೊಂಡ ಪುರುಷನು ಜರಗ ತೊಳೆಯಲಿಚ್ಛೈಸುವನೇ?
ದಾಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛೈಸುವನೇ?
ಇವರು ಮೂವರಿಗೆಯೂ ಇನ್ನಾವುದೂ ಇಚ್ಛೆಯಿಲ್ಲ.
ರುಚಿ ಪದಾರ್ಥವಿದ್ದಂತೆ, ಲಿಂಗಪದವು ಸಹಜಸುಖವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. || ೪೯ ||

*

ಉಳಿಯುಮೇಶ್ವರ ಚಿಕ್ಕಣ್ಣ

೧೫೯೧
ಅಸ್ಥಿ, ಚರ್ಮ, ಮಾಂಸ, ರಕ್ತ, ಖಂಡದ ಚೀಲ:
ಬಾ[ತೆ]ಗೆಟ್ಟೊಡಲ ನಾನೆಂತು ಸಲಹುವೆನಯ್ಯಾ?
ಹುರುಳಿಲ್ಲದಿಹ ಸಂಸಾರ:
ಎಂದಿಂಗೆ ನಾನಿದ ಹೊತ್ತು ತೊಳಲುವುದ ಬಿಡುವೆನಯ್ಯಾ?
ಎಂದಿಂಗೆ ನಾನಿದರ ಸಂಶಯವಳಿವೆನಯ್ಯಾ?
ಎಡಹಿ ಕೊಡ, ನೀರೊಳಗೆ ಒಡೆದಂತೆ
ಎನ್ನೊಡಲೊಡೆದು ನಿಮ್ಮೊಳೆಂದು ನೆರೆವೆನೊ ಉಳಿಯುಮೇಶ್ವರಾ. ॥ ೧ ॥

೧೫೯೨
ಆನು ಭಕ್ತ, ಆನು ಶರಣ, ಆನು ಲಿಂಗೈಕ್ಯನೆಂದೊಡೆ
ಲಿಂಗವು ನಗದೆ?
ಪಂಚೇಂದ್ರಿಯಂಗಳು ನಗವೆ?
ಅರಿಷಡ್ವರ್ಗಂಗಳು ನಗವೆ?
ಎನ್ನ ತನುವಿನೊಳಗಣ
ಸತ್ವರಜತಮೋ ಗುಣಂಗಳು ನಗವೆ?
ಹೇಳಯ್ಯಾ ಉಳಿಯುಮೇಶ್ವರಾ? ॥ ೨ ॥

೧೫೯೩
ಎನ್ನ ಮನವ ಮಂಚವ ಮಾಡಿ,
ತನುವ ಪಚ್ಚಡಿಸುವೆ ಬಾರಯ್ಯ!
ಎನ್ನ ಅಂತರಂಗದಲ್ಲಿಪ್ಪೆ ಬಾರಯ್ಯ!
ಎನ್ನ ಬಹಿರಂಗದಲ್ಲಿಪ್ಪೆ ಬಾರಯ್ಯ!
ಎನ್ನ ಶಿವಲಿಂಗದೇವನೆ ಬಾರಯ್ಯ!
ಎನ್ನ ಭಕ್ತವತ್ಸಲನೆ ಬಾರಯ್ಯ!
'ಓಂ ನಮಃ ಶಿವಾಯ' ಎಂದು ಕರೆವೆನು
ಉಳಿಯುಮೇಶ್ವರಲಿಂಗವೆ ಬಾರಯ್ಯ! ॥ ೩ ॥

೧೫೯೪
ತೊರೆಯ ಉದಕವ ಕೊಂಡು,
ತರಿದ ಸೊಪ್ಪನೆ ಮೆದ್ದು,
ಇರವು ಲಿಂಗಗೂಡಾಗಿ ಇರಬೇಕು.
ಕೆರೆಯ ನೀರನೆ ಮಿಂದು,

ಅರುವೆಗಪ್ಪಡ ಉಟ್ಟು,
ಇರವು ಲಿಂಗಗೂಡಾಗಿ ಇರಬೇಕು.
ಅರಿವೆಲ್ಲವ ಮುಚ್ಚಿ,
ಹೆರರಿಗಾಸೆಯ ಮಾಡಿಸಿ,
ಎನ್ನನಿರಿದಿರಿದು ಸುಡುವರೆ
ಉಳಿಯುಮೇಶ್ವರಾ? ॥ ೪ ॥

೧೫೯೫
ವಾರಣಾಸಿ, ಅವಿಮುಕ್ತಿ ಇಲ್ಲಿಯೇ ಇದ್ದಾನೆ.
ಹಿಮದ ಕೇತಾರ, ವಿರೂಪಾಕ್ಷ ಇಲ್ಲಿಯೇ ಇದ್ದಾನೆ.
ಗೋಕರ್ಣ, ಸೇತುರಾಮೇಶ್ವರ ಇಲ್ಲಿಯೇ ಇದ್ದಾನೆ.
ಶ್ರೀಶೈಲ ಮಲ್ಲಿನಾಥ ಇಲ್ಲಿಯೇ ಇದ್ದಾನೆ.
ಸಕಲಲೋಕಪುಣ್ಯಕ್ಷೇತ್ರ ಇಲ್ಲಿಯೇ ಇದ್ದಾನೆ,
ಸಕಳಲಿಂಗ ಉಳಿಯುಮೇಶ್ವರ ತನ್ನಲ್ಲಿ ಇದ್ದಾನೆ. ॥ ೫ ॥

*

ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ

೧೫೯೬
ಅಂಗವಿಕಾರ ಸಾಕೇಳಿ,
ಬಹುವಿಡಂಗದ ಪ್ರಕೃತಿಯ ಮರೆದೇಳಿ.
ನಿಮ್ಮ ಭಕ್ತಿಮುಕ್ತಿಯ ಲಿಂಗದ ಕೂಟವ ನೆನೆದೇಳಿ.
ನಿಮ್ಮ ಗುರುವಾಜ್ಞೆಯ
ನಿಮ್ಮ ವಿರಕ್ತಿ ಅರಿವಿನ ಸಾವಧಾನವನರಿದೇಳಿ.
ಸಾರಿದೆ, ಎವೆ ಹಳಚಿದಡಿಲ್ಲ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥ ೧ ॥

೧೫೯೭
ನಾಲ್ಕು ಜಾವಕ್ಕೆ ಒಂದು ಜಾವ
ಹಸಿವು ತೃಷೆ ಮಿಕ್ಕಾದ ವಿಷಯದೆಣಿಕೆಗೆ ಸಂದಿತ್ತು.
ಮತ್ತೊಂದು ಜಾವ
ನಿದ್ರೆ ಸ್ವಪ್ನ ಕಳವಳ ನಾನಾ ಅವಸ್ಥೆ ಬಿಟ್ಟಿತ್ತು.
ಮತ್ತೊಂದು ಜಾವ
ಅಂಗನೆಯರ ಕುಚ, ಅಧರ ಚುಂಬನ
ಮಿಕ್ಕಾದ ಬಹುವಿಧ ಅಂಗವಿಕಾರದಲ್ಲಿ ಸತ್ತಿತ್ತು.

ಇನ್ನೊಂದು ಜಾವವಿದೆ:
ನೀವು ನೀವು ಬಂದ ಬಟ್ಟೆಯ ತಿಳಿದು
ಮುಂದಳ ಆಗುಚೇಗೆಯನರಿದು
ನಿತ್ಯನೇಮವ ವಿಸ್ತರಿಸಿಕೊಂಡು
ನಿಮ್ಮ ಶಿವಾರ್ಚನೆ ಪೂಜೆ ಪ್ರಣವದ ಪ್ರಮಥಾಳಿ
ಭಾವದ ಬಲಿಕೆ ವಿರಕ್ತಿಯ ಬಿಡುಗಡೆ ಸದ್ಭಕ್ತಿಯ ಮುಕ್ತಿ
ಇಂತೀ ಕೃತ್ಯದ ಕಟ್ಟು ತಪ್ಪದಿರಿ.
ಅರುಣೋದಯಕ್ಕೆ ಒಡಲಾಗದ ಮುನ್ನವೆ
ಖಗ ವಿಹಂಗಾದಿಗಳ ಪಶುಮೃಗ ನರಕುಲದುಲುಹಿಂಗೆ ಮುನ್ನವೆ
ಧ್ಯಾನಾರೂಢರಾಗಿ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ
ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥ ೨ ॥

*

ಎಲೆಗಾರ ಕಾಮಣ್ಣ

೧೫೫೮
ಎಲೆ ಮಿಗಲು ಆರು ತಿಂಗಳಿರುವುದು.
ವ್ರತ ಹೋಗಲು ಆ ಕ್ಷಣ, ಭ್ರಷ್ಟನೆಂದು ಕೂಡರು.
ಎಲೆ ಹಳದಾದಡೆ ಶಿವಂಗರ್ಪಿತ.
ವ್ರತ ನಷ್ಟವಾಗಲಾಕ್ಷಣ ಮರಣವಯ್ಯಾ
ಆತುರೇಶ್ವರಲಿಂಗವೆ. ॥ ೧ ॥

*

ಏಕಾಂತ ರಾಮಿತಂದೆ

೧೫೫೯
ಅಶನ ವ್ಯಸನ ಸರ್ವವಿಷಯಾದಿಗಳಲ್ಲಿ ಹುಸಿದು,
ಪಿಸುಣತ್ವದಿಂದ ಗಸಣಿಗೊಂಡು,
ಮಾಡಿಸಿಕೊಂಬುದು ಸದ್ಗುರುವಿಗೆ ಸಂಬಂಧವಲ್ಲ.
ತಿಲರಸ-ವಾರಿಯ ಭೇದದಂತೆ,
ಮಣಿಯೊಳಗಿದ್ದ ಸೂತ್ರದಂತೆ
ಅಂಗವ ತೀರ್ಚಿ ಪಾಯ್ದು ನಿಂದ ಅಹಿಯ ಅಂಗದಂತೆ
ಗುರುಸ್ಥಲಸಂಬಂಧ,
ಎನ್ನಯ್ಯ ಚೆನ್ನರಾಮೇಶ್ವರಲಿಂಗವನರಿಯಬಲ್ಲಡೆ. ॥ ೧ ॥

೧೬೦೦
ಕಾಯ ಹಲವು ಭೇದಗಳಾಗಿ
ಆತ್ಮನೇಕವೆಂಬುದು ಅದೇತರ ಮಾತು?
ಬೆಂಕಿಯಿಂದಾದ ಬೆಳಗು ಸುಡಬಲ್ಲುದೆ? ಬೆಂಕಿ[ಯ]ಲ್ಲದೆ.
ಹಲವು ಘಟದಲ್ಲಿ ಅವರವರ ಹೊಲಬಿನಲ್ಲಿ ಅನುಭವಿಸುತ್ತ
ಮತ್ತೊಂದರಲ್ಲಿ ಕೂಟಸ್ಥವಪ್ಪ ಸುಖ ಉಂಟೆ?
ಈ ಗುಣ ಎನ್ನಯ್ಯ ಚೆನ್ನರಾಮನನರಿದಲ್ಲಿ. ॥ ೨ ॥

*

ಏಲೇಶ್ವರ ಕೇತಯ್ಯ

೧೬೦೧
ಆತ ಅಂಗವ ತೊಟ್ಟಡೇನು? ಪರಾಂಗನೆಯರ ಸೋಂಕ.
ಕರವಿದ್ದಡೇನು? ಮತ್ತೊಂದ ಅಪಹರಿಸಿ ತೆಗೆಯ.
ಕರ್ಣವಿದ್ದಡೇನು? ಮತ್ತೊಂದು ಅನ್ಯಶಬ್ದವ ಕೇಳ.
ಕಣ್ಣಿದ್ದಡೇನು? ಲಿಂಗವಲ್ಲದುದ ನೋಡ.
ನಾಸಿಕವಿದ್ದಡೇನು? ಅರ್ಪಿತವಲ್ಲದುದ ವಾಸಿಸ.
ಜಿಹ್ವೆಯಿದ್ದಡೇನು? ಪ್ರಸಾದವಲ್ಲದುದ ಸ್ವೀಕರಿಸ.
ಇಂತಿವೆಲ್ಲರಲ್ಲಿ ಸರ್ವವ್ಯವಧಾನಿಯಾಗಿ
ನಡೆನುಡಿ ಅರಿವು ಶುದ್ಧಾತ್ಮನು ಏಲೇಶ್ವರಲಿಂಗವು ತಾನೆ. ॥ ೧ ॥

೧೬೦೨
ಆವ ವ್ರತ ನೇಮವ ಹಿಡಿದಡೂ
ಆ ವ್ರತ ನೇಮದ ಭಾವ ಶುದ್ಧವಾಗಿರಬೇಕು.
ಅಸಿ ಕೃಷಿ ಯಾಚಕ ವಾಣಿಜ್ಯತ್ವದಿಂದ ಬಂದ ದ್ರವ್ಯಂಗಳಲ್ಲಿ
ಬಾಹ್ಯದ ಬಳಕೆ-ಅಂತರಂಗದ ನಿರಿಗೆ
ಉಭಯ ಶುದ್ಧವಾಗಿಪ್ಪ ಭಕ್ತನಂಗವೆ ಏಲೇಶ್ವರಲಿಂಗದಂಗ. ॥ ೨ ॥

೧೬೦೩
ಒಡೆಯರು ಭಕ್ತರಲ್ಲಿ ಕೃಷಿಯಿಲ್ಲದೆ ಬೇಡಿ ತಂದು,
ತನ್ನ ಮಡದಿ ಮಕ್ಕಳ ಹೊರೆದು,
ಮಿಕ್ಕಾದುದ ಒಡೆಯರಿಗಿಕ್ಕಿಹೆನೆಂಬ
ಅಡುಗೂಳಿಕಾರನ ಗಂಜಿಗುಡಿಹಿಯ ಭಕ್ತಿ
ತನ್ನ ಸಂಸಾರದ ಅಡಿಯೊಳಗೆ ಅಡಗಿತ್ತು,

ಇದ ಬೆದಕಿದಡೆ ಹುರುಳಿಲ್ಲ.
ನನ್ನಿಯೆತ್ತಿಗೆ ಎನ್ನ ಮಣ್ಣೆತ್ತು ಘನವೆನಬೇಕು,
ಅದು ಭಕ್ತಿಪಕ್ಷದ ಓಸರ.
ಬಿಡಲಿಲ್ಲ, ಅರಿದು ಹಿಡಿಯಲಿಲ್ಲ.
ಆ ಅಂಗವ, ಒಡಗೂಡುವ ಶರಣರು ನೀವೆ ಬಲ್ಲಿರಿ.
ಎನಗದು ಸಂಗವಲ್ಲ ಏಲೇಶ್ವರಲಿಂಗಕ್ಕೆ. || ೩ ||

೧೬೦೪
ಒಡೆಯರು ಭಕ್ತರಿಗೆ ಸಲುವ ಸಹಪಙ್ತೆಯಲ್ಲಿ,
ಗುರು ಅರಸೆಂದು, ತನ್ನ ಪರಿಸ್ಪಂದವೆಂದು
ರಸದ್ರವ್ಯವ ಎಸಕದಿಂದ ಇಕ್ಕಿದಡೆ,
ಅದ ತಾನರಿದು ಕೊಂಡಡೆ ಕಿಸುಕುಳದ ಪಾಕುಳ.
ಅಲ್ಪ ಜಿಹ್ವಾಲಂಪಟಕ್ಕೆ ಸಿಕ್ಕಿ ಸಾವ ಮತ್ಸ್ಯದಂತೆಯಾಗದೆ,
ಈ ಗುಣವ ನಿಶ್ಚಯಿಸಿದಲ್ಲಿ ಏಲೇಶ್ವರಲಿಂಗವನರಿಯಬಲ್ಲ. || ೪ ||

೧೬೦೫
ಕ್ರೀಯ ಅನುವನರಿದಾತ ಗುರುವೆಂಬೆ,
ಕ್ರೀಯ ಅನುವನರಿತುದು ಲಿಂಗವೆಂಬೆ,
ಕ್ರೀಯ ಅನುವನರಿದಾತ ಜಂಗಮವೆಂಬೆ.
ಇಂತೀ ತ್ರಿವಿಧಮೂರ್ತಿ ಆಚಾರಕ್ಕೆ ಅನುಕೂಲವಾಗಿ
ಬಂಗಾರದೊಳಗೆ ಬಣ್ಣವಡಗಿದಂತೆ,
ಆ ಬಣ್ಣವೇಧಿಸಿ ಬಂಗಾರವಾದಂತೆ.
ಇಂತು ಆಚಾರಕ್ಕೂ ಅರಿವಿಂಗೂ ಪಡಿಪುಚ್ಚವಿಲ್ಲವಾಗಿ,
ಆಚಾರವೆ ಕುಲ, ಅನಾಚಾರವೇ ಹೊಲೆ.
ಇದಕ್ಕೆ ಒಲವರವಿಲ್ಲ, ಏಲೇಶ್ವಲಿಂಗವ ಕೇಳಲಿಲ್ಲ. || ೫ ||

೧೬೦೬
ತಂದೆಯ ಮಗ ಕರೆದು, ಮಗನ ತಂದೆ ಕರೆದು,
ಭಾವನ ಮೈದುನ ಕರೆದು, ಮೈದುನನ ಭಾವ ಕರೆದು,
ತಮ್ಮ ಬಂಧುಗಳ ಜಂಗಮವೆಂದು ಕೂಡಿಕೊಂಡು ಉಂಬ
ಜಗಭಂಡರ ನೇಮ ಸುಸಂಗವಲ್ಲ, ಏಲೇಶ್ವರಲಿಂಗಕ್ಕೆ. || ೬ ||

೧೬೦೭
ತಾವರೆಯ ಎಲೆಯ ಮೇರಳ ನೀರಿನಂತೆ
ಎನ್ನ ಮನ ಆವ ವ್ರತವನೂ ನೆಮ್ಮದಿದೆ ನೋಡಾ.
ಎನ್ನ ಸಂದೇಹದಿಂದ ಮಹಾವ್ರತಿಗಳ ಸಂಗ
ಸುಸಂಗವಾಗದಿದೆ ನೋಡಾ.

ಕ್ರೀಯನರಿಯದು, ಅರಿವ ನೆನೆಯದು,
ಬರುದೊರೆಯೋಹ ಮನಕ್ಕೆ
ಒಂದು ಕುರುಹ ತೋರಾ, ಏಲೇಶ್ವರಲಿಂಗಾ. || ೭ ||

೧೬೦೮
ಪರಪಾಕದ್ರವ್ಯವ ಬಿಟ್ಟಲ್ಲಿ
ಬಹುಜಲ, ಹರಿವ ಜಲ ಮುಂತಾದ
ಬಹು ನಿರೀಕ್ಷಣೆಯಾದ ಜಲಂಗಳ ಮುಟ್ಟಲಿಲ್ಲ.
ಇಂತೀ ಪಾಕ ತಮ್ಮಾಯತವೆ, ಉದಕ ಅನ್ಯರಾಯತವೆ?
ಮೊಲೆಯ ಮುಚ್ಚಿ ಸೀರೆಯ ತೆರೆದಲ್ಲಿ ಅಪಮಾನವೆಲ್ಲಿ ಅಡಗಿತ್ತು?
ಇಂತೀ ವ್ರತದಂಗವ ನೀವೆ ಬಲ್ಲಿರಿ.
ಇದು ಏಲೇಶ್ವರಲಿಂಗಕ್ಕೆ ಒಪ್ಪದ ಕ್ರೀ. || ೮ ||

೧೬೦೯
ಮನಕ್ಕೆ ವ್ರತವ ಮಾಡಿ,
ತನುವಿಗೆ ಕ್ರೀಯ ಮಾಡಬೇಕು.
ಇಂದ್ರಿಯಂಗಳಿಗೆ ಕಟ್ಟನಿಕ್ಕಿ,
ಆತ್ಮನ ಸಂದೇಹವ ಬಿಡಿಸಿ ಕ್ರೀಯ ಮಾಡಬೇಕು.
ಹೀಂಗಲ್ಲದೆ ವ್ರತಾಚಾರಿಯಲ್ಲ.
ಮನಕ್ಕೆ ಬಂದಂತೆ ಹರಿದು, ಬಾಯಿಗೆ ಬಂದಂತೆ ನುಡಿದು,
ಇಂತೀ ನಾ ವ್ರತಿಯೆಂದರೆ ಮೂಗನರಿಯದೆ ಮಾಣ
ಏಲೇಶ್ವರಲಿಂಗನು. || ೯ ||

೧೬೧೦
ವ್ರತಸಂಬಂಧಭಾವಿ ಒಡೆಯರು
ಭಕ್ತರ ಮನೆಗೆ ಒಡಗೂಡಿ ಹೋಗಿ
ಅವರ ಮಡದಿಯರ ಕಂಡು ಮನವ ಬಿಡೆಯವ ಮಾಡಿದಡೆ,
ಅವರೊಡವೆಗೆ ವಂಚಿಸಿದಡೆ, ಸುಡುವನೊಡಲ.
ಅವ ಮೃಡಭಕ್ತನಲ್ಲ, ಇಹ ಪರಕ್ಕೆ ದೂರ,
ಏಲೇಶ್ವರಲಿಂಗಕ್ಕೆ ಮುನ್ನವೆ ದೂರ. || ೧೦ ||

೧೬೧೧
ವ್ರತಸ್ಥನಾಗಿ
ಭವಿಗಳ ಕೆಳಗೆ ಬೊಕ್ಕಸ ಭಂಡಾರ ಅಸಿ ಕೃಷಿ ವಾಣಿಜ್ಯ

ಮುಂತಾದ ಕಾಯಕವ ಬಿಟ್ಟು,
ತನ್ನ ಸ್ವಕಾಯಕದಿಂದ ಬಂದು ಒದಗಿದ ದ್ರವ್ಯವ ಒಡೆಯನ ಮುಂದಿಟ್ಟು,
ತಾನೊಡಗೂಡಿ ಕೊಂಡ ಪ್ರಸಾದಿಯ ಪ್ರಸಾದವ
ಎನ್ನೊಡೆಯನ ಮುಂದಿಟ್ಟು
ಏಲೇಶ್ವರಲಿಂಗಕ್ಕೆ ಕೊಡುವೆನು. ॥ ೧೧ ॥

*

ಒಕ್ಕಲಿಗ ಮುದ್ದಣ್ಣ

೧೬೧೨
ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ [ಬ]ಲಿದು,
ಉಂಡು ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ. ॥ ೧ ॥

೧೬೧೩
ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ.
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. ॥ ೨ ॥

*

ಕಂಬದ ಮಾರಿತಂದೆ

೧೬೧೪
ನಾನಾ ಜನ್ಮಂಗಳಲ್ಲಿ ಬಂದಡೂ,
ನಾನಾ ಯುಕ್ತಿಯಲ್ಲಿ ನುಡಿದಡೂ,
ನಾನಾ ಲಕ್ಷಣಂಗಳಲ್ಲಿ ಶ್ರುತ ದೃಷ್ಟ ಅನುಮಾನಂಗಳ
ಲಕ್ಷಿಸಿ ನುಡಿವಲ್ಲಿ,
ಏನನಹುದು ಏನನಲ್ಲಾಯೆಂಬ ಠಾವನರಿಯಬೇಕು.
ಮಾತ ಬಲ್ಲೆನೆಂದು ನುಡಿಯದೆ,
ನೀತಿವಂತನೆಂದು ಸುಮ್ಮನಿರದೆ,

ಆ ತತ್ಕಾಲದ ನೀತಿಯನರಿದು
ಸಾತ್ವಿಕ ಲಕ್ಷಣದಲ್ಲಿಪ್ಪಾತನ ಲಕ್ಷಣವೇ ನಿರೀಕ್ಷಣ,
ಕದಂಬಲಿಂಗಾ. ॥ ೧ ॥

*

ಕನ್ನಡಿ ಕಾಯಕದ ಅಮ್ಮಿದೇವಯ್ಯ

೧೬೧೫
ಆವಾವ ಜಾತಿ [ಗೋ]ತ್ರದಲ್ಲಿ ಬಂದಡೂ
ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕವಿಲ್ಲದಿರಬೇಕು.
ಆವಾವ ವ್ರತವ ಹಿಡಿದಡೂ,
ಇದಿರ ದಾಕ್ಷಿಣ್ಯ[ವ] ಮರೆದು
ತನ್ನಯ ತ್ರಿಕರಣ ಶುದ್ಧವಾಗಿ ನಡೆಯಬೇಕು.
ಪರಪುರುಷಾರ್ಥಕ್ಕೆ ಅರಿಯಿಸಿಕೊ[ಳಬಹುದೆ] ಮೂಗ?
ಅರುಹಿರಿಯರು ಹೇಳಿದರೆಂದು ಕಲಸಬಹುದೆ ಅಮಂಗಲವ?
ಇಂತೀ ಕ್ರೀಯಲ್ಲಿ ಭಾವಶುದ್ಧವಾಗಿ
ಭಾವದಲ್ಲಿ ದಿವ್ಯಜ್ಞಾನಪರಿಪೂರ್ಣವಾಗಿಪ್ಪ ಗುರುಚರಭಕ್ತಂಗೆ
ಚೆನ್ನಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವು ತಾನೆಯೆಂದು ಭಾವಿಸುವನು. ॥ ೧ ॥

೧೬೧೬
ಪಂಜ ಹಿಡಿವಂಗೆ ಸಂದೇಹವಲ್ಲದೆ
ಉರಿವ ಬೆಳಗಿಂಗೆ ಸಂದೇಹವುಂಟೆ?
ಸಂಸಾರ ಸಂದಣಿಯಲ್ಲಿ
ಅನಂಗನ ಆತುರದಲ್ಲಿ
ಹೊಂದಿ ಬೇವಂಗೆ ಲಂದಣತನವಲ್ಲದೆ
ನಿಜಪ್ರಸಂಗಿ, ನಿರತಿಶಯ ಲಿಂಗಾಂಗಿ, ಪರಬ್ರಹ್ಮ ಪರಿಣಾಮಿ
ಜಗದ ಹ[ದಿರಿ]ಗರಲ್ಲಿ ಸಿಕ್ಕಿ ಪರಿಭ್ರಮಣಕ್ಕೊಳಗಾಹನೆ?
ಇಂತೀ ನಿಜವನರಿದಾತ[ನ]ನೆ
ಚೆನ್ನಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವು ತಾನೆಂಬೆನು. ॥ ೨ ॥

*

ಕನ್ನದ ಮಾರಿತಂದೆ

೧೬೧೭

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ
ಎನಗೆ ಕತ್ತಿಯ ಕೊಟ್ಟ ಕರ್ತುವಿಗೆ ಭಂಗ.
ಅವರು ಮರೆದಿರ್ದಲ್ಲಿ ಮನೆಯ ಹೊಕ್ಕಡೆ
ಎನ್ನ ಚೋರತನದ ಅರಿಕೆಗೆ ಭಂಗ.
ಮರೆದಿರ್ದವರ ಎಬ್ಬಿಸಿ ಅವರಿಗೆ ಅವರೊಡವೆಯ ತೋರಿ,
ಎನ್ನೊಡವೆಯ ತಂದೆ, ಮಾರನ ವೈರಿ ಮಾರೇಶ್ವರಾ. ॥ ೧ ॥

*

ಕರುಳ ಕೇತಯ್ಯ

೧೬೧೮

ಎಂದಿಂಗೂ ಸಾವುದು ತಪ್ಪದೆಂದು ಅರಿದ ಮತ್ತೆ,
ವ್ರತಭಂಗಿತನಾಗಿ ಅಂ[ದಂ]ದಿಂಗೆ ಸಾಯಲೇತಕ್ಕೆ?
ನಿಂದೆಗೆಡೆಯಾಗದ ಮುನ್ನವೆ
ಲಿಂಗವ ಹಾ[ರಿ] ಚಿತ್ತವ ನಿಜಲಿಂಗವನೆಯ್ದಿ,
ಮನಕ್ಕೆ ಮನೋಹರ ಶಂಕೇಶ್ವರಲಿಂಗವ ಕೂಡಿ. ॥ ೧ ॥

೧೬೧೯

ತನಗಲ್ಲದುದ ಘಟ ಸೋಂಕಿದಲ್ಲಿ ಅಲ್ಲಿಯೇ ಕಡಿವೆನು.
ತನಗಲ್ಲದುದ ಕೈ ಮುಟ್ಟಿದಲ್ಲಿ ಅಲ್ಲಿಯೇ [ತರಿ]ವೆನು.
ತನಗಲ್ಲದುದ ಕಿವಿ ಕೇಳಿದಲ್ಲಿ ಅಲ್ಲಿಯೇ ಗೂಂಟ ಬಲಿವೆನು.
ತನಗಲ್ಲದುದ ನಾಸಿಕ ವಾಸಿಸಿದಲ್ಲಿ ಅಲ್ಲಿಯೇ ದಸಿಯ ದಕ್ಕನೇರಿಸುವೆನು.
ದೃಷ್ಟಿ ಅನುತಪ್ಪಿ ನೋಡಿದಲ್ಲಿ ಅಲ್ಲಿಯೇ ಕಿತ್ತಿಡುವೆನು.
ಚಿತ್ತ ಅನುತಪ್ಪಿ ಮತ್ತೊಂದ ನೆನೆದಡೆ,
ಆತ್ಮನನಲ್ಲಿಯೆ ಕಿತ್ತು ಹಾಕುವೆನು.
ಇದಕ್ಕೆ ನೀವೇ ಸಾಕ್ಷಿ,
ಮನಕ್ಕೆ ಮನೋಹರ ಶಂಕೇಶ್ವರಲಿಂಗವು. ॥ ೨ ॥

*

ಕಲಕೇತಯ್ಯ

೧೬೨೦
ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು?
ಕೊಡದಡೆ ಒಡಗೂಡಿ ಬಯ್ಯಲೇತಕ್ಕೆ?
ಒಡೆಯರು ಭಕ್ತರಿಗೆ ಮಾಡಿಹೆನೆಂದು
ಗಡಿತಡಿಗಳಲ್ಲಿ ಕವಾಟ ಮಂದಿರ ಮಂದೆ ಗೊಂದಿಗಳಲ್ಲಿ
ನಿಂದು ಕಾಯಲೇತಕ್ಕೆ?
ಈ ಗುಣ ಕಾಯಕದಂದವೆ?
ಈ ಗುಣ ಹೊಟ್ಟೆಗೆ ಕಾಣದ ಸಂಸಾರದ ಘಟ್ಟದ ನಿಲವು.
ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ
ಮೇಖಲೇಶ್ವರಲಿಂಗಕ್ಕೆ ಮುಟ್ಟದೆ ಹೋಯಿತ್ತು. ॥ ೧ ॥

*

ಕಿನ್ನರಿ ಬ್ರಹ್ಮಯ್ಯ

೧೬೨೧
ಚಿಲಿಪಾಲ ಚಿನ್ನದ ಹರಿವಾಣದಲ್ಲಿ ಭೋಗಿಪುದು ಭೂಷಣವಲ್ಲದೆ,
ಮಣ್ಣ ಹರಿವಾಣದಲ್ಲಿ [ಅ]ಭೂಷಣವೆ?
ತಾ ಮಾಳ್ಪ ಶಿವಲಿಂಗಪೂಜೆಗೆ ಕಾಯ ಪವಿತ್ರವಲ್ಲದೆ,
ಅಪವಿತ್ರವೆಂತೊ ತ್ರಿಪುರಾಂತಕಲಿಂಗವೆ? ॥ ೧ ॥

೧೬೨೨
ನಿನ್ನ ಹರೆಯದ, ರೂಹಿನ ಚೆಲುವಿನ, ನುಡಿಯ ಜಾಣಿನ,
ಸಿರಿಯ ಸಂತೋಷದ,
ಕರಿ ತುರಗ ರಥ ಪದಾತಿಯ ನೆರವಿಯ,
ಸತಿ ಸುತರ ಬಂಧುಗಳ ಸಮೂಹದ,
ನಿನ್ನ ಕುಲದಭಿಮಾನದ
ಗರ್ವವ ಬಿಡು, ಮರುಳಾಗದಿರು.
ಅಕಟಕಟಾ ರೋಮಜನಿಂದ ಹಿರಿಯನೆ?
ಮದನನಿಂ ಚೆಲುವನೆ?
ಸುರಪತಿಯಿಂದ ಸಂಪನ್ನನೆ?
ವಾಮದೇವ ವಶಿಷ್ಠರಿಂದ ಕುಲಜನೆ?

ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ
ನುಡಿ ತಡವಿಲ್ಲ ಕೇಳೋ ನರನೆ!
ಎನ್ನ ಮಹಾಲಿಂಗ ತ್ರಿಪುರಾಂತಕದೇವರ ಪೂಜಿಸಿದೆಯಾದರೆ
ಕೇಡಿಲ್ಲದ ಪದ ದೊರಕೊಂಬುದು ಮರುಳೆ. ‖ ೨ ‖

೧೬೨೩
ಹುಸಿಯೆಂಬ ಅಲಗಿಂಗೆ ಒಡಲೆ ಗುರಿಯಾಯಿತ್ತು.
ಏನೆಂಬೆನೇನೆಂಬೆ ವಿಧಿ ಮಾಡಿತ್ತ.
[ಶಮೆ ದಮೆಯಾದಿ]ಗಳು ನೆಲೆಗೊಳ್ಳದೆ ಹೋದವು.
ಮಹಾಲಿಂಗ ತ್ರಿಪುರಾಂತಕನ ಶರಣರೆ
ಎನ್ನೊಡೆಯರೆಂದರಿಯದೆ ಇದ್ದ ಕಾರಣ,
ತೆರಹು ಮರಹಿನಲ್ಲಿ ತಾವೆಡೆಗೊಂಡವು. ‖ ೩ ‖

*

ಕೀಲಾರದ ಭೀಮಣ್ಣ

೧೬೨೪
ಕರ್ಪೂರದ ಹಣತೆಯಲ್ಲಿ ಬತ್ತಿಯ ಹಾಕಿ ಉರುಹಬಹುದೆ?
ಕಿಚ್ಚಿನ ಮಧ್ಯದಲ್ಲಿ ನಿಂದು ಕೆಟ್ಟೀತೆಂದು
ಹುಲ್ಲ ಸೊಪ್ಪ ಹಾಕಿ ಹೊತ್ತಿಸಬಹುದೆ?
ಅಲಗು ಕೂರವಾಯಿತ್ತೆಂದು ತನ್ನೊಡಲನಿರಿದು
ಅಲಗಿನ ಕೂರ ಸುಲಲಿತವೆನ್ನಬಹುದೆ?
ಆ ಗುಣ ಅಲ್ಲಲ್ಲಿಗೆ ದೃಷ್ಟ.
ಇದು ನಿಶ್ಚಯ, ನಿಜ ಲಿಂಗಾಂಗಿಗೆ ಅರಿವಿನ ಭೇದ,
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗನರಿದವನ ತೆರ. ‖ ೧ ‖

೧೬೨೫
ವ್ಯಾಧನಂತೆ ಜಾಲಗಾರನಂತೆ ಹೇಮಚೋರನಂತೆ
ಇಂತೀ ಗಾಹುಗಳ್ಳರಂತೆ ಮಾತಿನಲ್ಲಿ ಬ್ರಹ್ಮವ ನುಡಿದು
ಸರ್ವ ಸಂಸಾರದಲಿ ಏಳುತ್ತ ಮುಳುಗುತ್ತ
ಬೇವುತ್ತ ನೋವುತ್ತ ಮತ್ತೆ
ಬ್ರಹ್ಮದ ಸುಮ್ಮಾನದ ಸುಖಿಗಳೆಂತಪ್ಪರೊ?
ಇಂತು ನುಡಿಯಬಾರದು, ಸಮಯವ ಬಿಡಬಾರದು,
ಕ್ರೀಯ ಅರಿದು ಮರೆಯಬಾರದು ಜ್ಞಾನವ.
ಇಂತೀ ಭೇದವನರಿದು ಹರಿದವಗಲ್ಲದೆ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗವು ಸಾಧ್ಯವಿಲ್ಲ. ‖ ೨ ‖

*

ಕೂಗಿನ ಮಾರಯ್ಯ

೧೬೨೬

ನಾರಿಯೂ ಮರನೂ ಕೂಡಿ ಬಾಗಲಿಕ್ಕಾಗಿ
ಶರ ಚರಿಸುವುದಕ್ಕೆಡೆಯಾಯಿತ್ತು.
ಭಕ್ತಿಯೂ ವಿರಕ್ತಿಯೂ ಕೂಡಲಿಕ್ಕಾಗಿ
ವಸ್ತುವನರಿವುದಕ್ಕೆ ಒಡಲಾಯಿತ್ತು.
ಆ ವಸ್ತು ತ್ರಿಕರಣವ ವೇಧಿಸಿದ ಮತ್ತೆ ತ್ರಿಗುಣ ನಷ್ಟ.
ಆ ನಷ್ಟದಲ್ಲಿ ಪಂಚೇಂದ್ರಿಯ ನಾಶನ,
ಸಪ್ತಧಾತು ವಿಸರ್ಜನ, ಅಷ್ಟಮದ ಹುಟ್ಟುಗೆಟ್ಟಿತ್ತು,
ಹದಿನಾರು ತೊಟ್ಟು ಬಿಟ್ಟಿತ್ತು, ಇಪ್ಪತ್ತೈದರ ಬಟ್ಟೆ ಕೆಟ್ಟಿತ್ತು,
ಸದ್ಭಾವದ ನಿಷ್ಠೆ ತಲ್ಲೀಯವಾಯಿತ್ತು.
ಇಂತಿವರೊಳಗಾದ ಕುಲವಾಸನೆ ಹೊಲಬುಗೆಟ್ಟಿತ್ತು.
ನಾನಾರೆಂಬುದ ತಿಳಿದಲ್ಲಿ
ಕೂಗಿನ ಕುಲಕ್ಕೆ ಹೊರಗಾಯಿತ್ತು
ಮಹಾಮಹಿಮ ಮಾರೇಶ್ವರನನರಿಯಲಾಗಿ. ॥ ೧ ॥

೧೬೨೭

ಬಿಂಗಕ್ಕೆ ಹೊರೆಯಲ್ಲದೆ
ನಿಜಶಿಲೆಯ ದೀಪ್ತಿಯ ತರಂಗಕ್ಕೆ ಹೊರೆಯುಂಟೆ?
ಸಂಸಾರಿಗೆ ಪ್ರಕೃತಿ ರಾಗದ್ವೇಷಂಗಳಲ್ಲದೆ
ಮನವು ಮಹದಲ್ಲಿ ನಿಂದ ನಿಜಲಿಂಗಾಂಗಿಗೆ
ಈ ಉಭಯದ ಸಂದುಂಟೆ?
ಈ ಗುಣದಂಗಲಿಂಗಾಂಗಿಯ ಸಂಗ
ಮಹಾಮಹಿಮ ಮಾರೇಶ್ವರಾ. ॥ ೨ ॥

*

ಕೋಲ ಶಾಂತಯ್ಯ

೧೬೨೮

ಕೋಲು ಕಪ್ಪರವ ಹಿಡಿದು,
ಭಾಳಾಂಬಕನ ಲೀಲೆಯ ತೊಟ್ಟು,
ಅಶನದಾಪ್ಯಾಯನಕ್ಕೆ ತಿರುಗು[ವುದು] ಬಾಲಲೀಲೆಯಲ್ಲದೆ

ಭಾಳಾಂಬಕನ ನೆಲೆಯಲ್ಲ.
ಜಾಳು ಮಾತ ಬಿಟ್ಟು ಮೂರಕ್ಷರದ ನೆಲೆಯನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧ ॥

೧೬೨೯
ಕೋಲ ಬಳಿಯ ಅಂಧಕನಂತೆ,
ವಾಹನದ ಪಂಗುಳನಂತೆ,
ಗಹನದಲ್ಲಿ ಸಿಕ್ಕಿದ ಶಿಶುವಿನಂತೆ,
ಸ್ಥಾನದಪ್ಪಿ ಹೊಲಬುದಪ್ಪಿದ್ದೇನೆ.
ಹೊಲದ ಹೊಲಬ ಹೇಳು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨ ॥

೧೬೩೦
ಗೋವು ಮೊದಲು ಚತುಃಪಾದಿ ಜೀವಂಗಳು
ತಾವು ಬಂದ ಹಾದಿಯ ಮೂಸಿ ನೋಡಿ
ತಮ್ಮಯ ಬೀಡಿಂಗೆ ಹೋಹಂತೆ,
ಆ ಪರಿ ನಿನಗಿಲ್ಲ, ಪಶುವಿನ ಮತಿಯಷ್ಟು ಗತಿಯಿಲ್ಲ.
ಬಂದುದ ಮರೆದ ಬಂಧಜೀವಿಗ ನಾನಾ[ಗೆ]
ಜೀವಕಾಯದ ಸಂದ ಬಿಡಿಸು.
ಬಿಂದು ನಿಲುವ ಅಂದವ ಹೇಳು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩ ॥

೧೬೩೧
ಜಡೆ ಮುಡಿ ಬೋಳು ಹೇಗಾದಡಾಗಲಿ,
ನಡೆನುಡಿ ಸಿದ್ಧಾಂತವಾದಡೆ ಸಾಕು,
ಆತ ಪರಂಜ್ಯೋತಿ ಗುರುವಹ.
ಆ ಇರವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪ ॥

೧೬೩೨
ನಿರ್ಮಲ ಜಲಸ್ಥಾನದಲ್ಲಿ ಇದ್ದಡೇನು,
ತಹುದಕ್ಕೆ ಘಟವಿಲ್ಲದ ಮತ್ತೆ?
ಅರಿವಿನ ಮಾತ ಬರಿಕಾಯರು ನುಡಿದಡೇನು,
ಕುರುಹಿಲ್ಲದ ಮತ್ತೆ?
ತನ್ನ ಸೀಮೆಯ ತಾನರಿದು ಅಲ್ಲಿಗೆಯಿದುವನಂತೆ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫ ॥

೧೬೩೩
ಪಥವನರಿಯದೆ ಇಷ್ಟವ ಕಟ್ಟುವ ಗುರು
ಬೆಳಕಿಗೆ ಸಿಕ್ಕಿದ ಪತಂಗನಂತಾದ.
ಗುರುವಿನ ಕೈಯಲ್ಲಿ ಕಟ್ಟಿದ ಶಿಷ್ಯ
ಕೀಟಕನ ಕೈಯಲ್ಲಿ ಸಿಕ್ಕಿದ ಮಕ್ಷಿಕನಂತಾದ.
ಚೇಟಿ ದಾಸನ ಕೂಟದಂತಾಯಿತ್ತು;
ಅದೇತರ ಭೇದ, ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೬ ||

೧೬೩೪
ಬಿತ್ತಿದ ಬೆಳೆ, ಕಟ್ಟಿದ ಕೆರೆ, ಸಲಹಿದ ಶರೀರ, ನೆಟ್ಟ ವೃಕ್ಷ
ತನಗಲ್ಲದೆ ಅವಕ್ಕೊಡಲುಂಟೆ?
ತಾ ಮಾಡುವ ಭಕ್ತಿ ತನಗಲ್ಲದೆ ಬೇರೊಂದು ಗುಣವನರಸಲಿಲ್ಲ.
ಆ ಪರಿಯ ನಿನ್ನ ನೀ ತಿಳಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೭ ||

೧೬೩೫
ಬಿಸಿಲ ಮುಂದಣ ಮಂಜಿನಂತಾಯಿತ್ತು.
ದಿಟದ ಮುಂದಣ ಸಟೆಯಂತಾಯಿತ್ತು.
ಪುಣ್ಯದ ಮುಂದಣ ಪಾಪದಂತಾಯಿತ್ತು.
ಯೋಗಿಯ ಮುಂದಣ ಸಂಸಾರದಂತಾಯಿತ್ತು.
ಧೀರನ ಮುಂದಣ ಹೇಡಿಯಂತಾಯಿತ್ತು.
ಉರಗನ ಮುಂದಣ ಭೇಕನಂತಾಯಿತ್ತು.
ಹರಿಯ ಮುಂದಣ ಕರಿಯಂತಾಯಿತ್ತು.
ವಿವೇಕಿಯ ಮುಂದಣ ದುಃಖದಂತಾಯಿತ್ತು.
ಪುಣ್ಯಾರಣ್ಯದಹನ ಭೀಮೇಶ್ವರನೆಂಬ
ಸದ್ಗುರು ಕಾರುಣ್ಯವಾಗಲೊಡನೆ
ಎನ್ನ ಸುತ್ತಿಹ ಪ್ರಪಂಚು ಸರ್ವವೂ ಓಡಿದವಯ್ಯಾ! || ೮ ||

೧೬೩೬
ಭಕ್ತನಾದಲ್ಲಿ ಆವ ಸೋಂಕು ಬಂದಡೂ ಭಾವಶುದ್ಧವಾಗಿರಬೇಕು.
ಭಕ್ತಂಗಲ್ಲದೆ ತಾಕು ಸೋಂಕು ಮತ್ತೊಬ್ಬರಿಗೆ ಬಾರವು.
ಬಿರಿದ ಕಟ್ಟಿದ ಬಂಟಂಗೆ ತಡಹಲ್ಲದೆ ಬರುಬರಿಗುಂಟೆ ಮೊನೆದಗಹು?
ನಿಮ್ಮನರಿವಂಗೆ ಮರವೆ ಬಂದಡೆ
ನಿಮ್ಮನರಿದು ತನ್ನ ತಾನರಿಯಬೇಕೆಂಬುದ ನಿನ್ನ ನೀ ತಿಳಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೯ ||

೧೬೩೭

ಮಾಡಿ ಆಡಲೇತಕ್ಕೆ? ಸಲಹಿ ಕೊಲಲೇತಕ್ಕೆ?
ಬಿತ್ತಿ ಕೀಳಲೇತಕ್ಕೆ? ಕಟ್ಟಿ ಒಡೆಯಲೇತಕ್ಕೆ?
ಮಾಡಿ ಮಾಡಿ ಮನಗುಂದುವ,
ನೀಡಿ ನೀಡಿ ನಿಜಗುಂದುವ ಬೇಡ.
ಆ ಮಾಟವ ನಿನ್ನ ನೀನರಿ.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೦ ॥

೧೬೩೮

ಲಂದಣಗಿತ್ತಿಯ ಮಾತು ಬಂದಿಕಾರರ ಜಗಳದಂತೆ.
ಕಂಡವರಲ್ಲಿ ತಂದು ಮಾಡುವನ ಮಾಟ
ಸಾಕಿಕೊಂಡಿಹನ ದಯದಂತೆ.
ಆ ಮಾಟದ ಅಂದವನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೧ ॥

೧೬೩೯

ವೇಸಿಯ ಸಂಗ ದ್ರವ್ಯದ ಕೇಡು,
ದಾಸಿಯ ಸಂಗ ಮಾನಹಾನಿಗೆ ಮೊದಲು,
ನಿಮ್ಮ ಶರಣರ ಸಂಗ ಕರಣಂಗಳ ಕೇಡು.
ಇಂತೀ ಆಗುಚೇಗೆಯನರಿ ನಿನ್ನ ನೀ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೨ ॥

೧೬೪೦

ವ್ರತ ನೇಮವ ತೋರಿ
ಗದಕದಲ್ಲಿ ಮಾಡುವ ಭಕ್ತಿ[ಗಿಂತ]
ಪಶುವ ಕೊಂದು ಹಸಿಯ ಭಕ್ಷಿಸುವವನ ದೆಸೆ ಲೇಸು.
ಪಶುಪತಿಯ ಭಕ್ತನಾಗಿದ್ದು ಹುಸಿದು ಸರ್ವರ ವಂಚಿಸಿ
ಪಿಸುಣತನದಿಂದ ಕಾಡಿ ಬೇಡಿ ತಂದವನ ಮನೆಯನ್ನ ಕಿಸುಕುಳಕೆ ಸರಿ.
ಅದು ಹುಸಿಯಲ್ಲ, ನಿನ್ನ ನೀ ತಿಳಿದು ನೋಡು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೩ ॥

೧೬೪೧

ಸಂಜೀವನವ ತಂದೆನೆಂದಡೆ ಅದು ಬಂದ ಠಾವಿಲ್ಲವೆ?
ಕಾಮಧೇನುವ ಕಟ್ಟಿದೆನೆಂದಡೆ ಅದು ಹುಟ್ಟಿದ ಠಾವಿಲ್ಲವೆ?
ಇಷ್ಟನರಿಯದೆ ವಿರಕ್ತನಾದೆನೆಂಬ

ವಿಧಾಂತರ ಕತ್ತೆಗಾಹಿಯ ಮಾತು ಬೇಡ.
ಕುರುಹಿನ ಮರೆಯ ನಿಜವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೧೪ ||

೧೬೪೨
ಸದ್ಗತಿಯ ತೋರುವ ಗುರುವಿಂಗೆ ರಾಜಸ ತಾಮಸವುಂಟೆ ?
ಕೆಡದ ಜ್ಯೋತಿಗೆ ಪಡಿ ಕುಡಿಕೆ ಎಣ್ಣೆ ಉಂಟೆ ?
ಆ ಬಿಡು[ನು]ಡಿಯ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೧೫ ||

೧೬೪೩
ಸುಖದುಃಖ ಸತಿ ಪುರುಷಂಗೂ ಸರಿ,
ಗತಿ ಭೇದ ಕರ್ತೃ ಭೃತ್ಯಂಗೂ ಸರಿ,
ನೀರು ನೆಲದಂತೆ, ಸಾರ ಸುಧೆಯಂತೆ.
ಭಕ್ತ ಜಂಗಮದ ಇರವು, ಕರ್ಪೂರ ಉರಿಯಂತೆ ಇದು ನಿಶ್ಚಯ.
ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. || ೧೬ ||

*

ಗಜೇಶ ಮಸಣಯ್ಯ

೧೬೪೪
ಅಪ್ಪಿನ ಸೋಂಕಿನ ಸುಖವನಗಲುವ ಮನಕ್ಕಿಂದ
ಬಂಜೆಯಾಗಿಪ್ಪುದು ಕರಸುಖ ನೋಡವ್ವಾ.
ಕಂಗಳ ನೋಟ ಮನಕ್ಕೆ ಸೈರಿಸದು,
ಎಣೆಗೊಂಡು ಬಡವಾದ ಪರಿಯ ನೋಡವ್ವಾ.
ತುಪ್ಪುಳನಿಕ್ಕಿದ ಹಂಸೆಯಂತಾದೆನವ್ವಾ
ಮಹಾಲಿಂಗ ಗಜೇಶ್ವರನುಳಿದಡೆ. || ೧ ||

೧೬೪೫
ಆತನ ನೋಡಿದಂದು
ದೆಸೆಗಳ ಮರೆದೆನಿನ್ನೆಂತವ್ವಾ.
ಅವ್ವಾ ಅವ್ವಾ ಆತನ ನುಡಿಸಿದಡೆ
ಮೈಯೆಲ್ಲಾ ಬೆವತುದಿನ್ನೆಂತವ್ವಾ.
ಅವ್ವಾ ಅವ್ವಾ ಆತನ ಕೈಯ ಹಿಡಿದಡೆ
ಎನ್ನ ನಿರಿಗಳು ಸಡಿಲಿದವಿನ್ನೆಂತವ್ವಾ.

ಇಂದೆಮ್ಮ ಮಹಾಲಿಂಗ ಗಜೇಶ್ವರನನಪ್ಪಿದೆನೆಂದಡೆ
ನಾನಪ್ಪ ಮರೆದೆನಿನ್ನೆಂತವ್ವಾ. || ೨ ||

೧೬೪೬

ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ,
ಹೇಳಲೂಬಾರದು, ಕೇಳಲೂಬಾರದು ;
ಏನ ಹೇಳುವೆನವ್ವಾ, ಶಿಖಿ ಕರ್ಪೂರ ಬೆರಸಿದಂತೆ.
ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಲಿಬಾರದವ್ವಾ. || ೩ ||

೧೬೪೭

ಇರುಳಿನ ಜಕ್ಕವಕ್ಕಿಯಂತೆ ಅಗಲಿ ಹಲುಬುತಿರೆ
ಇರುಳಿನ ತಾವರೆಯಂತೆ ಮುಖಬಾಡಿ,
ಇರುಳಿನ ನೆಯ್ದಿಲಂತೆ ಕಣ್ಣ ಮು[ಚ್ಚ]ದೆ.
ಇರುಳಿನ ಸಮುದ್ರದಂತೆ ಘನವಾಗಿ ಸಲೆ ಉಮ್ಮಳಿಸಿ
ಸಂಜೆವರಿದು ಮಹಾಲಿಂಗ ಗಜೇಶ್ವರನ ಬರವಿಂಗೆ ಬೆಳಗಾಯಿತ್ತು. || ೪ ||

೧೬೪೮

ಉದರವ ತಾಗಿದ ಮಾತು ಅಧರದಲ್ಲಿ ಬೀಸರವೋದೀತೆಂದು
ಅಧರವ ಮುಚ್ಚಿಕೊಂಡಿರ್ದಳವ್ವೆ.
ಕಂಗಳ ಕೊನೆ ಬೀಸರವೋದೀತೆಂದು
ಕಂಗಳ ಮುಚ್ಚಿಕೊಂಡಿರ್ದಳವ್ವೆ.
ಪರಿಮಳ ಬೀಸರವೋದೀತೆಂದು
ಅಳಿಗೆ ಬುದ್ಧಿಯ ಹೇಳಿದಳವ್ವೆ.
ಮನ ಬೀಸರವೋದೀತೆಂದು
ದಿನಕರನ ಕಾವಲಕೊಟ್ಟಳವ್ವೆ,
ಇಂದು ನಮ್ಮ ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ. || ೫ ||

೧೬೪೯

ಎನ್ನ ಕಡೆಗಣ್ಣು ಕೆಂಪಾಯಿತವ್ವಾ.
ಎನ್ನ ನಳಿತೋಳು ಉಡುಗಿದವವ್ವಾ.
ಇಕ್ಕಿದ ಹವಳದ ಸರ ಬೆಳುಹಾದವವ್ವಾ.
ಮುಕ್ತಾಫಳಹಾರದಿಂದ ಆನು [ಬೆ]ಂದೆನವ್ವಾ.
ಇಂದೆನ್ನ ಮಹಾಲಿಂಗ ಗಜೇಶ್ವರನು
ಬಹಿರಂಗವನೊಲ್ಲದೆ ಅಂತರಂಗದಲಿ ನೆರೆದ, ಕಾಣೆ ಅವ್ವಾ! || ೬ ||

೧೬೫೦
ಎಲೆ ಎಲೆ ತಾಯೆ ನೋಡವ್ವಾ!
ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲಬುತ್ತಿದ್ದೆ ನೋಡವ್ವಾ!
ಮಾಗಿಯ ಕೋಗಿಲೆಯಂತೆ ಮೂಗಿಯಾಗಿದ್ದೆ ನೋಡವ್ವಾ!
ಮಹಾಲಿಂಗ ಗಜೇಶ್ವರನ
ಅನುಭಾವಸಂಬಂಧಿಗಳ ಬರವೆನ್ನ
ಪ್ರಾಣ[ದ] ಬರವು ನೋಡ[ವ್ವಾ]. ॥ ೭ ॥

೧೬೫೧
ಒಲಿದವರ ಕೊಲುವಡೆ ಮಸೆದ ಕೂರಲಗೇಕೆ?
ಅವರನೊಲ್ಲೆನೆಂದಡೆ ಸಾಲದೆ?
ಆಲಿಕಲ್ಲು ಕರಗಿದಂತೆ
ಅವರೊಡನೊಡನೆ ಕರಗಿದಡೆ ಸಾಲದೆ?
ಮಳಲ ಪ್ರತಿಮೆಯ ಅಡಿಗೆ ನೀರ್ಗುಡಿಸಿದಂತೆ
ಅವರೊಡನೊಡನೆ ಕರಗಿದಡೆ ಸಾಲದೆ ಅವ್ವಾ.
ಮಹಾಲಿಂಗ ಗಜೇಶ್ವರನ ಶರಣರನಗಲಿದಡೆ
ತುಪ್ಪದಲ್ಲಿ ಕಿಚ್ಚ ನಂದಿಸಿದಂತಾದೆನವ್ವಾ! ॥ ೮ ॥

೧೬೫೨
ಕೋಗಿಲೆಗಳು ಹುಲುವಟ್ಟೆ ಹೋದ ಬನದಂತೆ ಆದೆ ನೋಡವ್ವಾ.
ರಾ[ಯ]ರಾಡಿದ ಹೊಳಲಿನಂತೆ ಆದೆ ನೋಡವ್ವಾ.
ಜವ್ವನಗಳು ಬಳಲ್ದ ಸ್ತ್ರೀಯರ ಮುಖಕಾಂತಿಯಂತೆ ಆದೆ ನೋಡವ್ವಾ.
ಚಂದ್ರಮನಿಲ್ಲದ ನಕ್ಷತ್ರಗಳಂತೆ ಆದೆ ನೋಡವ್ವಾ.
ಮಹಾಲಿಂಗ ಗಜೇಶ್ವರನನಗಲುವುದರಿಂದ
ಸಾವುದು ಸುಖ ನೋಡವ್ವ. ॥ ೯ ॥

೧೬೫೩
ಗಿಡು ಮರದ ಕುರುಬಿತ್ತಿಯ ಜವ್ವನದಂತೆ
ನುಡಿಯಲರಿಯದ ಮುಗ್ಧೆಯಾಗಿರ್ದೆನವ್ವಾ.
ಹಗಲನರಿಯದ ಜಕ್ಕವಕ್ಕಿಯಂತೆ
ಮನ ಬಯಸುತ್ತಲಿರ್ದೆನವ್ವಾ.
ಹಲವು ಕಾಲ ಎಲವದ ಮರನ ಸಾರಿರ್ದ ಗಿಳಿಯಂತಾದೆನವ್ವಾ.
ಇಂದು ಮಹಾಲಿಂಗ ಗಜೇಶ್ವರದೇವನ
ನೆರೆಯಲರಿಯದೆ ಇವರೆಲ್ಲರ ವಿಧಿಯ ಹೊತ್ತೆನವ್ವಾ. ॥ ೧೦ ॥

೧೬೫೪

ತಮ್ಮ ತಮ್ಮ ಗಂಡರು ಚೆಲುವರೆಂದು
ಕೊಂಡಾಡುವ ಹೆಣ್ಣುಗಳು ಪುಣ್ಯಜೀವಿಗಳವ್ವಾ!
ನಾನೆನ್ನ ನಲ್ಲನೆಂಥವನೆಂದರಿಯೆನವ್ವಾ!
ಮಹಾಲಿಂಗ ಗಜೇಶ್ವರದೇವನು
ನಿರಿಯ ಸೆರಗ ಸಡಿಲಿಸಲೊಡನೆ
ಆನೇನೆಂದರಿಯೆನವ್ವಾ. || ೧೧ ||

೧೬೫೫

ನೆನಹಿನ ನಲ್ಲನು ಮನೆಗೆ ಬಂದಡೆ
ನೆನೆವುದಿನ್ನಾರ ಹೇಳವ್ವಾ.
ನೆರೆವ ಕ್ರೀಯಲ್ಲಿ ಸುಖಿಸುವದಲ್ಲದೆ,
ನೆನೆವುದಿನ್ನಾರ ಹೇಳವ್ವಾ.
ನೆನೆದೆನೆಂಬ ಭರವೇಕವ್ವಾ.
ಮಹಾಲಿಂಗ ಗಜೇಶ್ವರದೇವರ ಕಂಡಲ್ಲಿ,
ಅಗಲಿದಡೆ ಕರೆಗೊಂಬಲ್ಲಿ, ನಾನೇನು ಕಲುಮನದವಳೆ ಕೇಳವ್ವಾ. || ೧೨ ||

೧೬೫೬

ಮಾತಂಗಿಯ ಹೊಳೆಯಲ್ಲಿ ಉತ್ತಮನ ನೆಳಲು ಸುಳಿದಡೆ,
ರೂಪು ಹೊಲೆಯನಾಗಬಲ್ಲುದೆ ಅಯ್ಯಾ?
ಮರ್ತ್ಯಲೋಕದ ಮಾನವರೊಳಗೆ ಶರಣ ಸುಳಿದಡೆ,
ಶರಣ ಸೂತಕಿಯಾಗಬಲ್ಲನೆ ಅಯ್ಯಾ?
ಮರ್ತ್ಯ[ದ] ಭವಿಯ ಮಾತ, ವರ್ತಮಾನವೆಂಬ ಜೀವಿಗಳ,
ಅಗೆದೊಗೆಯದೆ ಮಾಬನೆ ಮಹಾಲಿಂಗ ಗಜೇಶ್ವರಯ್ಯ! || ೧೩ ||

೧೬೫೭

ಮುನಿಸ ಮುನಿದಡೆ ಶ್ರೀಗಂಧದ ಮುರಡಿನ ಹಾಂಗಿರಬೇಕವ್ವಾ.
ತೆಗೆದಪ್ಪಿದಡೆ ಚಂದನ ಶೀತಾಳದ ಹಾಂಗಾಗಬೇಕವ್ವಾ.
ಹೆಣಗುವಲ್ಲಿ ಮೈಯೆಲ್ಲಾ ಕೈಯಾಗಿ ಹೆಣಗಬೇಕವ್ವಾ.
ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ
ನೊಂದು ಅಂಕದ ಮೇಲೆ ಬಿದ್ದ ಹಾಂಗಿರಬೇಕವ್ವಾ. || ೧೪ ||

೧೬೫೮

ಸಮರಸದೊಳಗಣ ಸ್ನೇಹ
ಮತ್ಸ್ಯ ಕೂರ್ಮ ವಿಹಂಗದಂತೆ:
ಸ್ನೇಹದ ನೋಟದಲ್ಲಿಯೇ ತೃಪ್ತಿ,

ಸ್ನೇಹದ ನೆನಹಿನಲ್ಲಿಯೇ ತೃಪ್ತಿ,
ಸ್ನೇಹದ ಸ್ಪರ್ಶನದಲ್ಲಿಯೇ ತೃಪ್ತಿ.
ಈ ಪರಿಯಲ್ಲಿ
ಎಮ್ಮ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು
ವಾರಿಕಲ್ಲ ಪುತ್ಥಳಿ ಕರಗಿ
ಅಪ್ಪುವನೊಡಗೂಡಿದಂತಾಯಿತ್ತು. || ೧೫ ||

*

ಗಾವುದಿ ಮಾಚಯ್ಯ

೧೬೫೯
ತನ್ನ ದೇಹ ತನಗೆ ಹೊರೆಯಾದ ಮತ್ತೆ
ತಾ ಹೊರುವುದೇನು?
ತಾ ಹೇಳುವ ಅರಿವು ತನಗೆ ಮರವೆಯಾದ ಮತ್ತೆ
ತಾನರಿವುದೇನು?
ಇದು ಕಾರಣ, [ಕಲ್ಯಾಣದ] ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. || ೧ ||

೧೬೬೦
ಭಕ್ತರು ದ್ರವ್ಯವ ಗಳಿಸಿದಲ್ಲಿ
ತಮ್ಮ ತನುವಿದ್ದಲ್ಲಿಯೆ ಗುರುಲಿಂಗ ಜಂಗಮಕ್ಕರ್ಪಿಸುವುದು.
ಇದೇ ಸದ್ಭಕ್ತಿಯ ಹೊಲಬು.
ತಾನಳಿದು ಮತ್ತೆ ಮನೆಮಕ್ಕಳಿಗೆಂದಡೆ
ಅದೆ ಆಚಾರಕ್ಕೆ ಭಂಗ.
ಆತ ಸ್ವಾಮಿಗೆ ಸ್ವಾಮಿದ್ರೋಹಿ.
ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ಕೇಳಿ ಎಲ್ಲರೂ
ಸತ್ಯವೆನ್ನಿರಣ್ಣಾ. || ೨ ||

*

ಗುಪ್ತ ಮಂಚಣ್ಣ

೧೬೬೧
ಆತ್ಮತೇಜದಿಂದ ಹೋರುವ ಮಿಥ್ಯಾಭಾವಿಗೆ
ನಿಜತತ್ವದ ಮಾತೇಕೆ ?

ವೇದ ಶಾಸ್ತ್ರ ಪುರಾಣ ಆಗಮಂಗಳಲ್ಲಿ ಬಲ್ಲವರಾದಡೆ
ವಾದಕ್ಕೆ ಹೋರಿಹೆನೆಂಬ ಸಾಧನವೇಕೆ?
ಇಷ್ಟನರಿವುದಕ್ಕೆ ದೃಷ್ಟ:
ಕುಸುಮ ಗಂಧದ ತೆರದಂತೆ;
ಅನಲ ಅನಿಲನ ತೆರದಂತೆ;
ಕ್ಷೀರ ನೀರಿನ ತೆರದಂತೆ;
ಅದು ತನ್ನಲ್ಲಿಯೆ ಬೀರುವ ವಾಸನೆ.
ನಾರಾಯಣಪ್ರಿಯ ರಾಮನಾಥನಲ್ಲಿ
ಐಕ್ಯಾನುಭಾವಿಯಾದ ಶರಣ. ॥ ೧ ॥

೧೬೬೨
ಕಾಲವನರಿವುದಕ್ಕೆ ಕೋಳಿಯಾಯಿತ್ತು.
ಋತುಕಾಲವನರಿವುದಕ್ಕೆ ಕೋಗಿಲೆಯಾಯಿತ್ತು.
ಶಾಖೆಯ ಲಂಘನವನರಿವುದಕ್ಕೆ ಗೋಲಾಂಗುಲವಾಯಿತ್ತು.
ಕರಣದ ಮರಣವನರಿವುದಕ್ಕೆ ಮಲತ್ರಯ ದೂರನಾ[ದೆ]
ನಾರಾಯಣಪ್ರಿಯ ರಾಮನಾಥ. ॥ ೨ ॥

೧೬೬೩
ಕೀರ್ತಿಗೆ ಜಗವ ಕೊಂಡು ಮಾಡುವಾತ ಭಕ್ತನೆ?
ನಿಂದಿಸಿಹರೆಂದು ಅಂಜಿಕೊಂಡಿಪ್ಪವ ತಪಸಿಯಲ್ಲ;
ಜಗವ ಮೆಚ್ಚಬೇಕೆಂದು ಮಾಡುವಾತ ಭಕ್ತನಲ್ಲ;
ಇಚ್ಛೆಗೆ ನುಡಿವವ ವಿರಕ್ತನಲ್ಲ.
ಇದರಚ್ಚುಗ ನಿಮಗೇಕೆ?
ನಾರಾಯಣಪ್ರಿಯ ರಾಮನಾಥ ಒಚ್ಚತ ನಿಮ್ಮನೊಲ್ಲ. ॥ ೩ ॥

೧೬೬೪
ಕುರುಡನ ಕೈಯ ಕೋಲ ಹಿಂಗಿದಾಗ ಅವ ಅಡಿಯಿಡಬಲ್ಲನೆ?
ಮೃಡಭಕ್ತಿಯ ಮಾಡುವಂಗೆ ದೃಢಚಿತ್ತವಿಲ್ಲದಿರ್ದಡೆ
ಕಡೆಗಾಣಿಸಬಲ್ಲನೆ?
ಇಂತೀ ವಿಶ್ವಾಸದಡಿ ಬೆಚ್ಚಂತಿರಬೇಕು,
ನಾರಾಯಣಪ್ರಿಯ ರಾಮನಾಥನಲ್ಲಿ. ॥ ೪ ॥

೧೬೬೫
ಕೆನೆಯ ತೆಗೆದು ಹಾಲನೆರೆವವಳ ವಿನಯ
ತಲೆಯನೊಡೆದು ಲಾಲನೆಯ ಮಾಡುವಳಂತೆ,
ವಂದಿಸಿ ನಿಂದಿಸುವನ ಭಕ್ತಿ

ಕೈನೆರವಿಂಗೆ ಹೋಗಿ
ತಮ್ಮವರಳಿದ ಅಂದವ ನೆನೆದು ಅಳುವರಂತೆ,
ನಾರಾಯಣಪ್ರಿಯ ರಾಮನಾಥಾ. || ೫ ||

೧೬೬೬
ಕೈದಿಲ್ಲದವಂಗೆ ಕಾಳಗವುಂಟೆ?
ಆತ್ಮನಿಲ್ಲದ ಘುಟಕ್ಕೆ ಚೇತನವುಂಟೆ?
ಅಜಾತನ ನೀತಿಯನರಿಯದವ
ನಿರ್ಧರದ ಜ್ಯೋತಿರ್ಮಯವ ಬಲ್ಲನೆ?
ಇಷ್ಟವನರಿಯದವನ ಮಾತಿನ ನೀತಿ
ಮಡಕೆಯ ತೂತಿನ ಬೈಕೆಯ ನೀರು
ನಾರಾಯಣಪ್ರಿಯ ರಾಮನಾಥಾ. || ೬ ||

೧೬೬೭
ಪುಷ್ಪಕೆ ಗಂಧ ಬಲಿವಲ್ಲಿ
ಫಲಕ್ಕೆ ರಸ ತುಂಬುವಲ್ಲಿ,
ತರಳೆಗೆ ವಿಷಯ ತೋರುವಲ್ಲಿ,
ಇವು ಋತುವಲ್ಲದೆ ಸ್ವಯವಲ್ಲ.
ತನ್ನನರಿವುದಕ್ಕೆ ಮುನ್ನವೆ ಲಿಂಗತನ್ಮಯವಾಗಿರಬೇಕು.
ಹೇಮದ ಪುತ್ಥಳಿಯ ಕರಗಿ[ಸಿ] ಮರಳಿ
ರೂಪನರಸಲುಂಟೆ?
ನಾರಾಯಣಪ್ರಿಯ ರಾಮನಾಥಾ. || ೭ ||

೧೬೬೮
ಲಿಂಗಪೂಜೆಯ ಮಾಡುವಲ್ಲಿ
ಮನ ಗುರಿಯ ತಾಗಿದ ಕೋಲಿನಂತಿರಬೇಕು.
ಶಿವಲಿಂಗಪೂಜೆಯ ಮಾಡುವಲ್ಲಿ
ಶ್ರವಕ್ಕೆ ಸಂಜೀವನ [ಮು]ಟ್ಟಿದಂತಿರಬೇಕು.
ಹೀಗಲ್ಲದೆ ಪೂಜೆಯಲ್ಲ.
ಒಳಗಣ ಹುಳುಕು ಮೇಲಕ್ಕೆ ನಯವುಂಟೆ,
ಆ ತರು ಒಣಗುವವಲ್ಲದೆ ?
ಇಂತೀ ಬರುಬರ ಅರ್ಚನೆ ಹುರಿಯ ಬೊಂಬೆಯಂತೆ.
ಇಂತೀ ಅರಿಗುರಿಗಳ ಪೂಜೆ ಬರುಕಟೆಯಂತೆ
ನಾರಾಯಣಪ್ರಿಯ ರಾಮನಾಥಾ. || ೮ ||

೧೬೬೯
ಲಿಂಗ ಸಂಗಿಯಾದಲ್ಲಿ ಕಲ್ಲು-ನೆಲ್ಲಿನಂತಿರಬೇಕು.
ಲಿಂಗ ಪ್ರಾಣವಾದಲ್ಲಿ ಉರಿ-ಕರ್ಪೂರದಂತಾಗಬೇಕು.
ಆ ತದ್ಭಾವ ಲಿಂಗದ ಕೂಟ.
ವರುಣನ ಕಿರಣ ಕೊಂಡ ಮರೀಚಿಕಾ ಜಲದಂತೆ,
ಮಕರ - ಉದಕಪಥದಂತೆ
ನಾಮದೋರದ ಇರವು, ನಾರಾಯಣಪ್ರಿಯ ರಾಮನಾಥಾ. ॥ ೯ ॥

೧೬೭೦
ಲೋಕವ ಕುರಿತಲ್ಲಿ ಆಚಾರದ ಮಾತು,
ತನ್ನ ಕುರಿತಲ್ಲಿ ಅನಾಚಾರದ ಮಾತು.
ಆಚಾರಸಂಪನ್ನರನ್ನೆಲ್ಲಿಯೂ ಕಂಡೆ,
ಅನಾಚಾರಸಂಪನ್ನರನ್ನೆಲ್ಲಿಯೂ ಕಾಣೆ!
ಭಕ್ತ ಭವಿಯಾಗಬಹುದಲ್ಲದೆ, ಭವಿ ಭಕ್ತನಾಗಬಾರದು!
ಬೆಣ್ಣೆಗೆ ತುಪ್ಪವಲ್ಲದೆ, ತುಪ್ಪ ಬೆಣ್ಣೆಯಪ್ಪುದೆ?
ತರು ಬೆಂದಲ್ಲಿ ಕರಿಯಲ್ಲದೆ, ಕರಿ ಬೆಂದಲ್ಲಿ ತರು ಉಂಟೆ?
ಇದು ಅಘಟಿತ, ಅನಾಮಯ,
ನಾರಾಯಣಪ್ರಿಯ ರಾಮನಾಥಾ. ॥ ೧೦ ॥

*

ಗುರುಪುರದ ಮಲ್ಲಯ್ಯ

೧೬೭೧
ಎನ್ನ ಪಾದವೆ ಪದಶಿಲೆಯಾಗಿ,
ಎನ್ನ ಕಾಲೆ ಕಡಹದ ಕಂಬಂಗಳಾಗಿ,
ಎನ್ನ ತೋಳೆ ನಾಗವೇದಿಕೆಯಾಗಿ,
ಎನ್ನ ಅಸ್ಥಿಯೆ ಸುತ್ತಳ ಜಂತಿಯಾಗಿ,
ಎನ್ನ ಅಧರವೆ ಒಳಬಾಗಿಲಾಗಿ,
ಎನ್ನ ಗುರುಕರುಣವೆ ಲಿಂಗವಾಗಿ,
ಎನ್ನ ಅಂಗವೆ ರಂಗಮಧ್ಯವಾಗಿ,
ಎನ್ನ ಹೃದಯಕಮಲವೆ ಪೂಜೆಯಾಗಿ,
ಎನ್ನ ಕಿವಿಗಳೆ ಕೀರ್ತಿಮುಖವಾಗಿ,

ಎನ್ನ ನೆನೆವ ನಾಲಗೆಯೆ ಘಂಟೆಯಾಗಿ,
ಎನ್ನ ಶಿರವೆ ಸುವರ್ಣದ ಕಳಸವಾಗಿ,
ಎನ್ನ ನಯನವೆ ಕುಂದದ ಜ್ಯೋತಿಯಾಗಿ,
ಎನ್ನ ಚರ್ಮವೆ ನಿರ್ಮಲ ಹೊದಿಕೆಯಾಗಿ,
ಎನ್ನ ನೆನಹೆ ನಿಮಗೆ ಉಪಾಹಾರವಾಗಿ,
ಗುರುಪುರದ ಮಲ್ಲಯ್ಯನಿದ್ದನಾಗಿ! ॥ ೧ ॥

೧೬೭೨
ಹೊತ್ತಿಂಗೊಂದು ಪರಿಯಹ ಮನವ ಕಂಡು,
ದಿನಕ್ಕೊಂದು ಪರಿಯಹ ತನುವ ಕಂಡು,
ಅಂದಂದಿಗೆ ಭಯದೋರುತ್ತಿದೆ.
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು,
ಅಂದಂದಿಂಗೆ ಭಯವಾಗುತ್ತಿದೆ.
ಈ ಮನ ನಿಮ್ಮ ನೆನೆಯಲೀಯದು,
ಮನ ಹಗೆಯಾದುದಯ್ಯಾ,
ಸದ್ಗುರುವೆ ಪುರದ ಮಲ್ಲಯ್ಯಾ! ॥ ೨ ॥

*

ಗೋರಕ್ಷ

೧೬೭೩
ಹಿಟ್ಟಿನ ಲೆಪ್ಪದಲ್ಲಿ ಚಿತ್ರದ ಕರಚರಣಾದಿಗಳ ಮಾಡಿ,
ತುಪ್ಪದ ಮಧುರದ ಸಾರವ ಕೂಡಿ,
ಕಿಚ್ಚಿನಲ್ಲಿ ಸುಟ್ಟು ಮೆದ್ದಲ್ಲಿ
ಮತ್ತೆ ಕೈಕಾಲಿನ ಚಿತ್ರದ ಬಗೆಯುಂಟೆ?
ಇದು ನಿಶ್ಚಯ ವಸ್ತು ಸ್ವರೂಪ.
ಮರ್ತ್ಯದ ದೃಕ್ಕು ದೃಶ್ಯಕ್ಕೆ ನಿಶ್ಚಯವಾಗಿಹನು,
ಏಕಲಿಂಗ ನಿಷ್ಠೆವಂತರಲ್ಲಿ ಕಟ್ಟಳೆಯಾಗಿಹನು,
ಆತ್ಮ ಲಕ್ಷ್ಯ-ನಿರ್ಲಕ್ಷ್ಯ
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗವು. ॥ ೧ ॥

*

ಘಟ್ಟಿವಾಳಯ್ಯ

೧೬೭೪
ಅಬ್ಧಿಯ ಘೋಷವೆದ್ದು
ನಿರ್ಭರ ನಿರ್ವೇಗದಿಂದ ಅಬ್ಬರಿಸಿ ಬರುವಾಗ
ಅದನೊಬ್ಬರು ಹಿಡಿದ[ರುಂಟೆ]?
ಆಕಾಶದ ಸಿಡಿಲು ಆರ್ಭಟದಿಂದ ಬಡಿವಲ್ಲಿ
ತಾಕು ತಡೆಯುಂಟೆ?
ಮಹಾದ್ಭುತವಾದ ಅಗ್ನಿಯ ಮುಂದೆ
ಸಾರವರತ ತೃಣಕಾಷ್ಠವಿ[ದ್ದುದುಂ]ಟೆ?
ತಾ ಸರ್ವಮಯವಾದ ನಿಃಕಳಂಕ ನಿರಂಜನ ಐಕ್ಯಾನುಭಾವಿಗೆ
ಅಂಡ ಪಿಂಡ ಬ್ರಹ್ಮಾಂಡ ಅಬ್ಧಿ ಆಕಾಶ ಆತ್ಮನೆಂದುಂಟೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ॥ ೧ ॥

೧೬೭೫
ಒಡೆದ ಮಡಕೆಗೆ ಸರಿಯಿಂದ ಸಂದು ಕೂಡುವುದೆ?
ದಗ್ಧವಾದ ಪಟ ಅಗಸರ ಕಲ್ಲಿಗೆ ಹೊದ್ದುವುದೆ?
ಬದ್ಧ ಭವಿಗಳೆಂದು ಬಿಟ್ಟ ಮತ್ತೆ ಸಮಯದ ಹೊದ್ದಿಗೆ ಏಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨ ॥

೧೬೭೬
ಜಂಗಮವಾಗಿ ಹುಟ್ಟಿದ ಮತ್ತೆ
ಹಿಂದಣ ಹೆಜ್ಜೆಯ ಮೆಟ್ಟಲುಂಟೆ?
ಜಂಗಮವೆಂಬ ಮಾತಿಂಗೊಳಗಾದಲ್ಲಿ
ಮೂರು ಮಲತ್ರಯವ ಹಿಂಗಿರಬೇಕು.
ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು ; ಅದು ನಿಜದ ಸಂಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಈ ಗುಣ ಆರಿಗೂ ಇಲ್ಲ ಇಲ್ಲ ಎಂದೆ. ॥ ೩ ॥

೧೬೭೭
ತಮ್ಮ ಮಲವ ತಾವು ಮುಟ್ಟವು ಆವ ಜಾತಿಯು.
ತ್ರಿವಿಧ ಮಲಕ್ಕೆ ಹೊರಗಾಗಿ ಮತ್ತೆ ಮಲತ್ರಯಕ್ಕೆ ಬೀಳುವ
ಮಲಭಾಂಡದೇಹಿಗೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಒಲವರವಿಲ್ಲ ಇಲ್ಲ ಎಂದೆ. ॥ ೪ ॥

೧೬೭೮
ನಾ ನೀನೆಂಬುದಳಿದ ಪರಮಲಿಂಗೈಕ್ಯಂಗೆ
ಪರವೆಂಬುದಿಲ್ಲ, ಇಹವೆಂಬುದಿಲ್ಲ.
ಮರಹೆಂಬುದಿಲ್ಲ, ಅರಿವೆಂಬುದಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. || ೫ ||

೧೬೭೯
ಭೂಮಿ ಘನವೆಂಬೆನೆ ಪಾದಕ್ಕೊಳಗಾಯಿತ್ತು.
ಗಗನ ಘನವೆಂಬೆನೆ ಕಂಗಳಿಗೊಳಗಾಯಿತ್ತು.
ಮಹವು ಘನವೆಂಬೆನೆ ಮಾತಿಂಗೊಳಗಾಯಿತ್ತು.
ಘನ ಘನವೆಂಬುದಿನ್ನೆಲ್ಲಿಯದೆಲವೊ!
ಅರಿವಿಂಗಾಚಾರವಿಲ್ಲ, ಕುರುಹಿಂಗೆ ನೆಲೆಯಿಲ್ಲ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. || ೬ ||

೧೬೮೦
ರೋಗಿಗೆ ಹಾಲು ಸಿಹಿಯಪ್ಪುದೆ?
ಗೂಗೆಗೆ ರವಿ ಲೇಸಪ್ಪುದೆ?
ಚೋರಗೆ ಬೆಳಗು ಗುಣವಪ್ಪುದೆ?
ಭವಸಾಗರದ ಸಮಯದಲ್ಲಿದ್ದವರು
ನಿರ್ಭಾವನ ಭಾವವನೆತ್ತ ಬಲ್ಲರು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. || ೭ ||

೧೬೮೧
ಸತ್ತ ಶವ ಕಿಚ್ಚ ಬಲ್ಲುದೆ?
ನಿಷ್ಠೆ ನಿಬ್ಬೆರಗಾದ ಕರ್ತೃ ಮರ್ತ್ಯರ ಬಲ್ಲನೆ?
ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವುದೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. || ೮ ||

೧೬೮೨
ಸುಳಿದಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ,
ನಡೆದಡೆ ಗಮನವಿಲ್ಲ, ನುಡಿದಡೆ ಶಬ್ದವಿಲ್ಲ,
ದಗ್ಧಪಟನ್ಯಾಯದ ಹಾಗೆ.
ಉಂಡಡೆ ಉಪಾಧಿಯಿಲ್ಲ,
ಉಣ್ಣದಿದ್ದಡೆ ಕಾಂಕ್ಷೆಯಿಲ್ಲ,
ಯಥಾಲಾಭ ಸಂತುಷ್ಟನಾಗಿ.
ಸ್ತುತಿಯಿಲ್ಲ ನಿಂದೆಯಿಲ್ಲ, ನಂಟಿಲ್ಲ ಹಗೆಯಿಲ್ಲ,
ಅರಿವಿಲ್ಲ ಮರಹಿಲ್ಲ,

ತಾನೆಂಬ ನೆನಹಿಲ್ಲವಾಗಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಮುಂದೆ ಏನೂ ಎನಲಿಲ್ಲ, ನಿಲ್ಲು ಮಾಣು. ॥ ೯ ॥

*

ಚಂದಿಮರಸ

೧೬೮೩
ಇಂದುವಿನ ಬೆಳಗಿಂದ ಇಂದುವ
ಭಾನುವಿನ ಬೆಳಗಿಂದ ಭಾನುವ
ದೀಪದ ಬೆಳಗಿಂದ ದೀಪವ ಕಾಬಂತೆ,
ತನ್ನ ಬೆಳಗಿಂದ ತನ್ನನೇ ಕಂಡಡೆ
ನಿನ್ನ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧ ॥

೧೬೮೪
ಇಂದ್ರಿಯಂಗಳೊಡಗೂಡಿ ಬಹಿರ್ಮುಖನಾಗಿ
ವಿಷಯಂಗಳಲ್ಲಿ ಆಸಕ್ತಿಯುಳ್ಳವನು
ಅಂತರ್ಮುಖ ರೂಪನಪ್ಪ ಪ್ರತ್ಯಗಾತ್ಮನನೆಂತೂ ಕಾಣಲರಿಯನು.
ಮೇರುಗಿರಿಯ ಕಂಡೆಹೆನೆಂದು ತೆಂಕಮುಖನಾಗಿ ನಡೆದು
ಮೇರುಗಿರಿಯ ಕಾಣಲರಿಯನೆಂತಂತೆ.
ಸಕಲ ವಿಷಯಾಸಕ್ತಿಯ ಬಿಟ್ಟು ನಿರ್ವಿಷಯಿಯಾಗಿ
ನಿಜದಲ್ಲಿ ನಿಂದ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨ ॥

೧೬೮೫
ಇಹಪರವೆಂಬ ಇದ್ದೆಸೆಯಾಗಿರ್ದನ ಪರಿ ಹೊಸತು!
ನೆಯಿ ಹತ್ತದ ನಾಲಗೆಯಂತೆ,
ಹುಡಿ ಹತ್ತದ ಗಾಳಿಯಂತೆ,
ಕಾಡಿಗೆ ಹತ್ತದ ಆಲಿಯಂತೆ ಇರ್ದನಯ್ಯಾ!
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಆಚರಿಸುತ್ತ ಆಚರಿಸುತ್ತ ಆಚರಿಸದಂತಿರ್ದ ನೋಡಯ್ಯಾ! ॥ ೩ ॥

೧೬೮೬
ಏನೆಂದೆನಲಿಲ್ಲದ ಮಹಾಘನವು
ತನ್ನ ಲೀಲೆಯಿಂದ ತಾನೇ ಸ್ವಯಂಭುಲಿಂಗವಾಯಿತ್ತು!
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ,
ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ,
ಆತ್ಮನಿಂದಾದುದು ಆಕಾಶ,
ಆಕಾಶದಿಂದಾದುದು ವಾಯು,
ವಾಯುವಿನಿಂದಾದುದು ಅಗ್ನಿ,
ಅಗ್ನಿಯಿಂದಾದುದು ಅಪ್ಪು,
ಅಪ್ಪುವಿನಿಂದಾದುದು ಪೃಥ್ವಿ,
ಪೃಥ್ವಿಯಿಂದಾದುದು ಸಕಲಜೀವವೆಲ್ಲಾ.
ಇವೆಲ್ಲ ನಿಮ್ಮ ನೆನಹು ಮಾತ್ರದಿಂದಾದವು
ಸಿಮ್ಮಲಿಗೆಯ ಚೆನ್ನರಾಮಾ. || ೪ ||

೧೬೮೭
ಕವಿ ಗಮಕಿ ವಾದಿ ವಾಗ್ಮಿಯೆಂಬವರ ಮಾತಿಂಗಿಲ್ಲ.
ಶಾಸ್ತ್ರಿಕರ ಶಾಸ್ತ್ರಕ್ಕಿಲ್ಲ,
[ತಾ]ರ್ಕಿಗಳ ತರ್ಕಕ್ಕಿಲ್ಲ.
[ಶಾ]ಬ್ದಿಕರ ಶಬ್ದ ನೆರೆಯ[ವು],
ತೋರುವಡೆ ವಿಷಯವಾಗಿರದು.
ಅರಿವೊಡೆ ಅತರ್ಕ್ಯ,
ಅದು ನಿನ್ನಲ್ಲಿಯೆ ಅದೆ,
ಸಿಮ್ಮಲಿಗೆಯ ಚೆನ್ನರಾಮ. || ೫ ||

೧೬೮೮
ಕಾಳಕೂಟ ಹಾಳಾಹಳ ವಿಷಂಗಳು
ಕುಡಿದವರನಲ್ಲದೆ ಮಿಕ್ಕವರನೇನನೂ ಮಾಡಲಮ್ಮವು!
ಸ್ತ್ರೀಯೆಂಬ ಕಡು ನಂಜು
ನೋಡಿದವರ, ನುಡಿಸಿದವರ,
ಕೇಳಿದವರ, ಕೂಡಿದವರ,
ಗಡಣ ಸಂಗ ಮಾತ್ರದಿಂ
ಮಡುಹಿ ನರಕದಲ್ಲಿ ಕೆಡಹವೆ ಮಾಣಳು!
ದೇವ ದಾನವ ಮಾನವನಾದಡೂ ಉಳಿಯಲೀಯಳು!
ಆವಂಗೆಯೂ ಗೆಲಬಾರದೀ ಮಾಯೆಯ!
ಗೆಲಿದಾತ ನೀನೇ ಸಿಮ್ಮಲಿಗೆಯ ದಾತ ನೀನೆ,
ಸಿಮ್ಮಲಿಗೆಯ ಚೆನ್ನರಾಮಾ! || ೬ ||

೧೬೮೯
ಕುರುಡ ಕಾಣನೆಂದು, ಕಿವುಡ ಕೇಳನೆಂದು
ಹೆಳವ ಹರಿಯನೆಂದು, ಮರುಳ ಬಯ್ದನೆಂದು,
ಪಿಶಾಚಿ ಹೊಯ್ದನೆಂದು ಮನಕತಬಡುವರೆ ಹೇಳಾ?
ತಾನರಿವುಳ್ಳಾತ ತತ್ವವನರಿಯದವರಲ್ಲಿ
ಗುಣದೋಷವನರಸುವರೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. || ೭ ||

೧೬೯೦
ಗಾಳಿ ಬೀಸುವಲ್ಲಿ ಕೇಳೆಲವೊ
ಬೀಸಣಿಗೆಯ ಉಸುರೆಂತು ಮೆರೆವುದು ಹೇಳಾ ಮರುಳೆ!
ನಿಸ್ಸಾಳ ಬಾರಿಸುವಲ್ಲಿ ಢವುಡೆ ತಂಬಟದ ದನಿ
ಎಂತು ಮೆರೆವುದು ಹೇಳಾ ಮರುಳೆ!
ಸಿಮ್ಮಲಿಗೆಯ ಚೆನ್ನರಾಮನೆಂಬ
ಸೀಮೆಯಿಲ್ಲದ ನಿಸ್ಸೀಮಂಗೆ
ಲಿಂಗ ಸಂಸಾರಿ ಸರಿಯಲ್ಲ ಹೇಳಾ ಮರುಳೆ! || ೮ ||

೧೬೯೧
ಘನಗಂಭೀರ ಮಹಾವಾರುಧಿಯಲ್ಲಿ
ಫೇನ ತರಂಗ ಬುದ್ಬುದಂಗಳಾದವಲ್ಲದೆ ಬೇರಾಗಬಲ್ಲವೆ?
ಆತ್ಮನೆಂಬ ಅಂಬುಧಿಯಲ್ಲಿ
ಸಕಲ ಬ್ರಹ್ಮಾಂಡಕೋಟಿಗಳಾದವಲ್ಲದೆ ಬೇರಾಗಬಲ್ಲವೆ?
ಇದ ಬೇರೆಂಬ ಅರೆಮರುಳುಗಳ ನಾನೇನೆಂಬೆ?
ವಿಶ್ವವನರಿದು ನೋಡಲು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ ಬೇರಿಲ್ಲ. || ೯ ||

೧೬೯೨
ಜಾಣನಯ್ಯಾ ಸದ್ಗುರುವ ನಂಬುವಲ್ಲಿ,
ಜಾಣನಯ್ಯಾ ವಿಷಯಂಗಳ ಬಿಡುವಲ್ಲಿ,
ಜಾಣನಯ್ಯಾ ಅವಿದ್ಯವ ಗೆಲ್ಲುವಲ್ಲಿ,
ಜಾಣನಯ್ಯಾ ತನ್ನ ತಾನರಿವಲ್ಲಿ,
ಜಾಣನಯ್ಯಾ ನಿಜಗುಣನ ಶ್ರೀಪಾದವ ಪಿಡಿವಲ್ಲಿ,
ಜಾಣನಯ್ಯಾ, ಸಿಮ್ಮಲಿಗೆಯ ಚೆನ್ನರಾಮ. || ೧೦ ||

೧೬೯೩
ತನ್ನದಾದಡೇನೋ ಕನ್ನಡಿ, ಅನ್ಯರದಾಡಡೇನೋ ಕನ್ನಡಿ?
ತನ್ನ ರೂಪ ಕಂಡಡೆ ಸಾಲದೆ?
ಸದ್ಗುರು ಆವನಾದಡೇನೋ?
ತನ್ನನರುಹಿಸಿದಡೆ ಸಾಲದೆ?
ಸಿಮ್ಮಲಿಗೆಯ ಚೆನ್ನರಾಮಾ. ॥ ೧೧ ॥

೧೬೯೪
ತನು ಕಿಂಕರನಾಗದೆ, ಮನ ಕಿಂಕರನಾಗದೆ,
ಇಂದ್ರಿಯ ಕಿಂಕರನಾಗದೆ, ಆತ್ಮ ಕಿಂಕರನಾಗದೆ,
ಶ್ರುತಿ ಕಿಂಕರನಾಗದೆ,
ಇವೆಲ್ಲವ ನೆರೆ ತೊರೆದು,
ಏನು ಎನ್ನದೆ, ಮರ್ಯಾದೆ ತಪ್ಪದೆ,
ಸದ್ಗುರು ಕಿಂಕರನಾಗಿ
ಭವಗೆಟ್ಟು ಹೋದವರನೇನೆಂಬೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨ ॥

೧೬೯೫
ನಾಯ ಕುನ್ನಿಯ ಕಚ್ಚಬೇಡ,
ಬೊಗಳಬೇಡವೆಂದಡೆ ಮಾಣ್ಬುದೆ?
ಹಂದಿಯನಶುದ್ಧವ ತಿನಬೇಡ,
ಹೊರಳಬೇಡವೆಂದಡೆ ಮಾಣ್ಬುದೆ?
ನಯದಿ ಬುದ್ಧಿಗಲಿಸಿದಡೆ ಮಾಣ್ಬವೆ ತಮ್ಮ ಸಹಜವ?
ದುರ್ವಿಷಯಿಗೆ ಸದ್ಗುರು ಬೋಧೆಯಿಂದ
ನಿರ್ವಿಷಯವಪ್ಪುದೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೩ ॥

೧೬೯೬
ನಿಜವಸ್ತುವೊಂದೇ,
ಎರಡಾಗಬಲ್ಲುದದೊಂದೇ,
ಬೇರೆ ತೋರಬಲ್ಲುದದೊಂದೇ,
ತನ್ನ ಮರೆಯಬಲ್ಲುದದೊಂದೇ,
ಆ ಮರವೆಯ ಬಲ್ಲುದದೊಂದೇ,
ತಾನಲ್ಲದನ್ಯವಿಲ್ಲೆಂದರಿದರಿವು ತಾನೇ
ಸಿಮ್ಮಲಿಗೆಯ ಚೆನ್ನರಾಮ. ॥ ೧೪ ॥

೧೬೯೭
ನೇಣ ಹಾವೆಂದು ಬಗೆದವನಂತೆ
ಈ ದೇಹಾದಿ ಆನೆಂದು ಬಗೆದು,
ತನ್ನ ಭ್ರಮೆಯಿಂದ ಇಲ್ಲದ ಸಂಸಾರದ ಸಕಲ
ದುಃಖಕ್ಕೊಳಗಾದರಯ್ಯಾ.
ಆ ಭ್ರಮೆಯ ಹುಸಿಯೆಂದು ತಿಳಿದ ತಿಳಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. || ೧೫ ||

೧೬೯೮
ಫಣಿ ತನ್ನ ಹೆಡೆಯ ಮಣಿಯ ಕಂಡಹರೆಂದು ಕತ್ತಲೆಗೋಡಿತ್ತಯ್ಯಾ.
ಬಳಿ ಬಳಿಯಲ್ಲಿ ಬೆಳಗು ಬರುತ್ತಿರಲು
ತಾನಡಗುವ ಠಾವಿನ್ನೆಲ್ಲಿಯದಯ್ಯಾ?
ತ[ನ್ನಿರ]ವಿನ ಕುರುಹಳಿಯದನ್ನಕ್ಕ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವೆಲ್ಲಿಯದಯ್ಯಾ? || ೧೬ ||

೧೬೯೯
ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ
ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು
ನಾಲ್ಕೂ ದೆಸೆಯಲಟ್ಟುತ ಬರೆ,
ಕಂಡು ಭಯದಿಂದ ಹೋಗ ದೆಸೆಯಿಲ್ಲದೆ,
ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ
ಹಾವ ಕಂಡು, ಇಲಿಗಡಿದ ಬಳ್ಳಿಯ ಹಿಡಿದು ನಿಲೆ,
ಜೇನು ಹುಳು ಮೈಯನೂರುವಾಗ
ಮೂಗಿನ ತುದಿಯಲೊಂದು ಹನಿ ಮಧು ಬಂದು ಬೀಳೆ,
ಆ ಮಧುವ ಕಂಡು, ಹಿರಿದಪ್ಪ ದುಃಖವೆಲ್ಲವ ಸೈರಿಸಿ,
ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ,
ಈ ಸಂಸಾರ ಸುಖ ವಿಚಾರಿಸಿ ನೋಡಿದಡೆ ದುಃಖದಾಗರ.
ಇದನರಿದರಿದು ಸಕಲ ವಿಷಯಂಗಳಲ್ಲಿ ಸುಖವಿಂತುಟೆಂದು
ನಿರ್ವಿಷಯನಾಗಿ ನಿಂದ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. || ೧೭ ||

೧೭೦೦
ಬಲ್ಲೆವು ಬಲ್ಲೆವೆಂದೆಂಬರು,
ಬಯಲ ಭ್ರಮೆಗೆ ಬಳಲುತ್ತಿರ್ಪರು.
ಹಗಲುಗತ್ತಲೆ! ಹಗಲುಗತ್ತಲೆ!

ಹದಿರ ನುಡಿವ ಚದುರರಿಗೆಲ್ಲಾ ಹಗಲುಗತ್ತಲೆ!
ಬಲ್ಲವರನಲ್ಲೆನಿಸಿತ್ತು ಸಿಮ್ಮಲಿಗೆಯ ಚೆನ್ನರಾಮನೆಂಬ
ನಾಮದೊಡಕು. || ೧೮ ||

೧೭೦೧
ಮನದಿಂದ ಸಂಸಾರ ಸುಖದುಃಖ ಮಾಯಾಮಯ,
ಈ ಮನವ ವಿಷಯದಲ್ಲಿ ಕೂಡಲೀಯದೆ ನಿಮ್ಮಲ್ಲಿ ನಿಲಿಸೆ,
ಆ ಮನ ತಾನು ತನ್ನ ನಿಜದಲ್ಲಿ ನಿಂದು ನೋಡೆ,
ಆ ನೋಡುವ ನೋಟ ಉಳಿದಂದು
ಉಳಿದ ಪರಮಾನಂದ ನೀನೇ
ತಿಳಿದು ನೋಡಾ, ಸಿಮ್ಮಲಿಗೆಯ ಚೆನ್ನರಾಮಾ. || ೧೯ ||

೧೭೦೨
ಯತಿಗಳ ವ್ರತಿಗಳ ಧೃತಿಗೆಡಿಸಿತ್ತು ಮಾಯೆ.
ಕಲಿಗಳ ಛಲಿಗಳ ಬಲುಹ ಮುರಿಯಿತ್ತು ಮಾಯೆ.
ಹರಿ ಬ್ರಹ್ಮ ರುದ್ರಾದಿಗಳೆಲ್ಲರ ತರಕಟ ಕಾಡಿತ್ತು ಮಾಯೆ.
ಹೋ! ಹೋ!! ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಮಾಯಾಮರ್ಕಟ ವಿಧಿಯೇ! || ೨೦ ||

೧೭೦೩
ಲೋಕಗತಿ ಬೇರೆ ತನ್ನ ಗತಿ ಬೇರೆ ನಿಜಗುಣನಿಗೆ.
ಜಡಾಜಡ ಕರ್ಮಭೇದದಿಂದ
ಲೋಕಕ್ಕೆ ಜ್ಞಾನಿ ಮರುಳು
ಜ್ಞಾನಿಗೆ ಲೋಕ ಮರುಳು.
ಈ ಭಾವಭೇದವ ತಿಳಿಯಲರಿದು ನೋಡಾ, ವಿಪರೀತಗತಿ.
ನೋಡುವಡೆ ನಿಜಗುಣ ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. || ೨೧ ||

೧೭೦೪
ಲೋಕವ ತಾ ಹೇಸಿದ ಬಳಿಕ
ತನ್ನ ಲೋಕ ಹೇಸುವಂತಿರಬೇಕು.
ಲೋಕದ ಚಾರಿತ್ರ ಶೃಂಗಾರವ ತಾ ಹೇಸಿದ ಬಳಿಕ
ತನ್ನ ಚಾರಿತ್ರ ಶೃಂಗಾರವ ಲೋಕ ಕಂಡು ಹೇಸುವಂತಿರಬೇಕು.
ದೇಹಗುಣರಹಿತವಾದ ವಿರಕ್ತಿ
ಜ್ಞಾನಕ್ಕೆ ಇದೇ ಯುಕ್ತಿ.

ಈ ಯುಕ್ತಿಯ ತಿಳಿದಡೆ ಅದೇ ಮುಕ್ತಿ!
ಸಿಮ್ಮಲಿಗೆಯ ಚೆನ್ನರಾಮಾ. ॥ ೨೨ ॥

೧೭೦೫
ಶಿವಗಣಂಗಳ ಬರವ ಕಂಡು ಕೈಮುಗಿದು ಅಂಜಲೇಬೇಕು.
ಶರಣೆನ್ನಲೊಲ್ಲದೀ ಮನವು ;
ಆಳಿನ ಭಕ್ತಿಯನರಿಯದು,
ಬಾಗಿ ಶರಣೆನ್ನಲೊಲ್ಲದೀ ಮನವು.
ಆಳ್ದನೆಂದು ನಂಬಿಯೂ ನಂಬದಾಗಿ,
ಸಿಮ್ಮಲಿಗೆಯ ಚೆನ್ನರಾಮನೆನ್ನ ಕೇಡ ನೋಡಿ ನಗುತ್ತೈದಾನೆ. ॥ ೨೩ ॥

೧೭೦೬
ಸಂಕಲ್ಪವೆಂಬ ಸಂಕಲೆ ಹರಿಯಿತ್ತಲ್ಲಾ!
ಕಾಮವೆಂಬ ಕಂಬವ ಕಿತ್ತೀಡಾಡಿತ್ತಲ್ಲಾ!
ಮಾಯವೆಂಬ ಮಾವತಿಗನ ಮೀರಿತ್ತು,
ಆಸೆಯೆಂಬ ಅಂಕುಶಕ್ಕೆ ನಿಲ್ಲದು,
ಮಾಯಾಪಾಶವೆಂಬ ಪಾಯದಳ ಅಂಜಿ ಓಡಿತ್ತು.
ಮದಗಜವೆಂಬ ಆನೆ ಅಳಿದ ಬಳಿಕ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಆನೆ ಆನೆ ಎಂಬುದೇನೂ ಇಲ್ಲದೆ ಹೋಯಿತ್ತು. ॥ ೨೪ ॥

೧೭೦೭
ಸಕಲ ಸಂಸಾರದ ಆಸುರತೆಯನರಿದು, ಅಹಂ ಮಮತೆಯನಳಿದು,
ಲೇಸಿದು ಹೊಲ್ಲೆಹವಿದು, ತತ್ತ್ವವಿದು ಅತತ್ತ್ವವಿದೆಂದರಿದು,
ಏನುವನು ಸಂಪಾದಿಸ[ದ] ನಿಜಸುಖ ನೀನೇ,
ನಿಜಗುಣರೂಪಾಗಿರ್ದ ಸುಖಮುಖದ ಪಿಕದಂತೆ
ಮೌನಿಯಾಗಿ ನಿಂದ ನಿಲುವು ನೀನೇ
ನಿಜಗುಣ, ಸಿಮ್ಮಲಿಗೆಯ ಚೆನ್ನರಾಮಾ. ॥ ೨೫ ॥

೧೭೦೮
ಸಂಸಾರವೆಂಬ ಹೇರಡವಿಯ ಅಂಧಕಾರದ,
ಜನ್ಮಪಥವ ಆಧಿವ್ಯಾಧಿಗಳೆಂಬ ಗಿರಿದುರ್ಗ ಜಲದುರ್ಗಂಗಳ,
ಧನವನಿತೆ ವಿಷಯ ಮೃಗತೃಷ್ಣೆಯ ಬಳಿವಿಡಿದ
ರಾಗದ್ವೇಷದ ಕೊಳದರಲುಗಳ
ಖಗಮೃಗದ ಭಯದ

ತಾಪತ್ರಯದ ಕಾಳುಗಿಚ್ಚಿನಲ್ಲಿ ಬೇವ ನರಗುರಿಗಳಾದ
ಸಾವ ಕೆಡುವ ಅಹಂ ಮಮತೆಯು ಹೊತ್ತು ನಡೆವ ಜೀವರಿಗೆ
ಭವಬಂಧನ ಹರಿದು ಗುರುಪದವಪ್ಪುದು:
ನಿಜಗುಣನ ಶ್ರೀಪದವ ಶರಣುಗತಿವೊಕ್ಕಡೆ, ನಿತ್ಯ ಸುಖಪೂರಿತ,
ಸಿಮ್ಮಲಿಗೆಯ ಚೆನ್ನರಾಮ ತಾನಹ, ನೆರೆ ನಂಬಿದಡೆ. ॥ ೨೬ ॥

೧೭೦೯
ಸಮುದ್ರದಿಂದಾದ ತೆರೆಗಳು ಸಮುದ್ರದೊಳಗಡಗುತ್ತ
ಆ ಸಮುದ್ರದೊಳಗೇ ಇಹವು.
ತೆರೆಗಳು ಬೇರೊಂದುದಕವೆ?
ನಿಮ್ಮಿಂದಲಾದ ಜಗವು ನಿಮ್ಮಲ್ಲಿಯೆ ಇದ್ದು
ನಿಮ್ಮಲ್ಲಿಯೆ ಅಡಗುವುದು.
ಬೇರೆ ಬೇರೆ ಕುಲವುಂಟೆ ಈ ಜಗಕ್ಕೆ?
ಅದೆಂತೆಂದಡೆ :
ಬ್ರಹ್ಮಬೀಜಂ ಜಗತ್ ಸರ್ವಂ ಬ್ರಹ್ಮಣ್ಯೈವ ವಿವರ್ಧತೇ।
ಬ್ರಹ್ಮಣ್ಯೇವ ಲಯಂ ಯಾತಿ ಜಾತಿಭೇದಃ ಕಥಂ ಭವೇತ್॥
ಇಂತೆಂದುದಾಗಿ,
ಕುಲವೂ ಇಲ್ಲ ಛಲವೂ ಇಲ್ಲ.
ಮರೆಯ ನುಡಿಯನೊಪ್ಪುವನೆ?
ಸಿಮ್ಮಲಿಗೆಯ ಚೆನ್ನರಾಮು, ಬಿಡು ಜಡನೇ. ॥ ೨೭ ॥

೧೭೧೦
ಸಾವು ತಡವಲ್ಲ, ನರಕ ದೂರವಲ್ಲ,
ಕೆಮ್ಮನೆ ಕೆಡಬೇಡ.
ವಿಷಯವ ಬಿಡು, ಗುರುಭಕ್ತಿಯ ನಂಬು ಸುಖಿಯಪ್ಪೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨೮ ॥

೧೭೧೧
ಹಂದಿ ಹೈನವಲ್ಲ! ಸಂಸಾರಿ ಜಂಗಮವಲ್ಲ.
ಸಂಸಾರಿ ಜ್ಞಾನಿಗೂ ನಿರಾಭಾರಿ ಹೆಡ್ಡತನಕ್ಕೂ ಸರಿಯೆನ್ನಬಹುದೇ?
ಸಿಮ್ಮಲಿಗೆಯ ಚೆನ್ನರಾಮಾ. ॥ ೨೯ ॥

೧೭೧೨
ಹುಲ್ಲ ಮನುಷ್ಯನ ಕಂಡು ಹುಲ್ಲೆ ತಾ ಬೆದರುವಂತೆ
ಇಲ್ಲದ ಶಂಕೆಯನುಂಟೆಂಬನ್ನಕ್ಕ

ಅದಲ್ಲಿಯೇ ರೂಪಾಯಿತ್ತು.
ಹೇಡಿಗಳನೇಡಿಸಿ ಕಾಡಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಭಾವದ ಗಸಣಿ. || ೩೦ ||

*

ಜಗಳಗಂಟ ಕಾಮಣ್ಣ

೧೭೧೩
ಸಾವ ದೇವರನೊಲ್ಲೆ, ಭಾವವಳಿಯದ ಭಕ್ತಿಯನೊಲ್ಲೆ,
ಆವಾವ ಪರಿಯಲ್ಲು ವಿಧಿಯನೊಲ್ಲೆ,
ಕಾಮೇಶ್ವರನೆಂಬುದನೊಂದನೆ ಬಲ್ಲೆ. || ೧ ||

*

ಜೇಡರ ದಾಸಿಮಯ್ಯ

೧೭೧೪
ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮಾವಾಸ್ಯೆ;
ಮಟ್ಟ ಮಧ್ಯಾಹ್ನ ಸಂಕ್ರಾಂತಿ;
ಮತ್ತೆ ಅಸ್ತಮಾನ ಪೌರ್ಣಮಿ;
ಭಕ್ತನ ಮನೆಯ ಅಂಗಳವೆ ವಾರಣಾಸಿ ಕಾಣಾ! ರಾಮನಾಥಾ. || ೧ ||

೧೭೧೫
ಅಡಗಿನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ.
ಎಲೆ ಮೃಡನೆ! ನೀನು ಪ್ರಾಣ ಪ್ರಕೃತಿಗಳೊಳಗೆ
ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ! ರಾಮನಾಥ. || ೨ ||

೧೭೧೬
ಅಡವಿ ಅರಣ್ಯದಲ್ಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರೆದಡೆ,
ತುಂಬಿದ ಸಕ್ಕರೆಯ ಮಡುವಿನೊಳಗೊಕ್ಕಂತೆ! ರಾಮನಾಥ. || ೩ ||

೧೭೧೭
ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯಾ.
ಅನುಭಾವವೀ ತನುವಿಂಗೆ ಆಧಾರ.

ಅನುಭಾವರ ಅನುಭಾವವನು
ಮನವಾರೆ ವೇಧಿಸಿದವರಿಗೆ ಜನನವಿಲ್ಲ ಕಾಣಾ! ರಾಮನಾಥ. || ೪ ||

೧೭೧೮
ಅರುಹ ಅರಿಯಲೆಂದು
ಕುರುಹ ಕೈಯಲ್ಲಿ ಕೊಟ್ಟ!
ಅರುಹನೆ ಮರೆದು ಕುರುಹನೆ [ಅ]ರಿದ!
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ? ರಾಮನಾಥ. || ೫ ||

೧೭೧೯
ಆಚಾರಸಹಿತವಿದ್ದಡೆ ಗುರುವೆಂಬೆ.
ಆಚಾರಸಹಿತವಿದ್ದಡೆ ಲಿಂಗವೆಂಬೆ.
ಆಚಾರಸಹಿತವಿದ್ದಡೆ ಜಂಗಮವೆಂಬೆ.
ಸದಾಚಾರಸಹಿತವಿರದೆ
ಅನ್ಯದೈವ ಭವಿಮಾಟಕೂಟವ ಮಾಡುವನ ಮನೆಯಲ್ಲಿ
ಲಿಂಗಾರ್ಚನೆಯ ಮಾಡಿದೆನಾದಡೆ
ನಿಮಗಂದೆ ದೂರವಯ್ಯಾ, ರಾಮನಾಥ. || ೬ ||

೧೭೨೦
ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ. || ೭ ||

೧೭೨೧
ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ.
ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ
ಹತ್ತಿಪ್ಪೆ ಕಾಣಾ! ರಾಮನಾಥ. || ೮ ||

೧೭೨೨
ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ವಾಯು ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ. || ೯ ||

೧೭೨೩
ಈಶ ನಿಮ್ಮ ಪೂಜಿಸಿದ ಬಳಿಕ
ಅನ್ಯ ದೈವಂಗಳಿಗೆ ಹೇಸಲೇ ಬೇಕು.

ಹೇಸದೆ ಅನ್ಯದೈವಕ್ಕೆ ಆಸೆ ಮಾಡಿದಡೆ
ಅವ ನಮ್ಮ ಈಶ್ವರಂಗೆ ಹೊರಗು.
ದೋಷರಹಿತ ಭಕ್ತರು ಅವಂಗೆ ಕುಲವೆಂದು
ಕೂಸ ಕೊಟ್ಟು ಕೂಡುಂಡಡೆ
ಮೀಸಲ ಬೋನವ ನಾಯಿ ಮುಟ್ಟಿದಂತೆ ಕಾಣಾ! ರಾಮನಾಥಾ. || ೧೦ ||

೧೭೨೪
ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದಡೆ
ಆ ತೃಣವನು ಆ ಕೆಂಡ ನುಂಗುವಂತೆ,
ಗುರುಚರಣದ ಮೇಲೆ ತನುತೃಣವನಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ! ರಾಮನಾಥ. || ೧೧ ||

೧೭೨೫
ಎಣ್ಣೆಯಿದ್ದು ಎಳ್ಳು ನೆನೆಯದ ಭೇದವ
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ
ಕಾಮವಿದ್ದು ಕನ್ನೆಯನುಭವಿಸದ ಭೇದವ
ಪರವಿದ್ದು ಪ್ರಾಣನ ಪ್ರಕೃತಿಯ ಹರಿಯದ ಭೇದವ
ನರರೆತ್ತ ಬಲ್ಲರೈ? ರಾಮನಾಥ. || ೧೨ ||

೧೭೨೬
ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ.
ಕರ್ತಾರ! ನಿನಗೆ ಕರವೆತ್ತಿ ಹೊಡೆವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ, ರಾಮನಾಥ. || ೧೩ ||

೧೭೨೭
ಎತ್ತು ನಿಮ್ಮ ದಾನ; ಬಿತ್ತು ನಿಮ್ಮ ದಾನ.
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ? ರಾಮನಾಥ. || ೧೪ ||

೧೭೨೮
ಎನ್ನ ನಾನರಿವುದಕ್ಕೆ ಮುನ್ನ ಎಲ್ಲಿದ್ದೆಯಯ್ಯ?
ಎನ್ನೊಳಗೆ ಇದ್ದೆಯಯ್ಯ!
ಎನ್ನ ನಾನರಿಯಲು, ಮುಂದೆ ಬಂದು ಗುರುರೂಪಾಗಿ
ಎನ್ನೊಳಗೆ ಅಡಗಿದ್ದೆಯಲ್ಲ! ರಾಮನಾಥ. || ೧೫ ||

೧೭೨೯
ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳ ತೂರಿದಲ್ಲಿ ಬತ್ತವುಂಟೆ?
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಕಾಣಾ! ರಾಮನಾಥ. || ೧೬ ||

೧೭೩೦
ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ.
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರಾ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ! ರಾಮನಾಥ. || ೧೭ ||

೧೭೩೧
ಒಡಲುಗೊಂಡೆನಾಗಿ ಮೃಡ! ನಿಮಗೆ ಹಗೆಯಾದೆನಯ್ಯಾ.
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವದಯ್ಯಾ, ರಾಮನಾಥ. || ೧೮ ||

೧೭೩೨
ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ! ನೀ ಪ್ರಾಣ ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ. || ೧೯ ||

೧೭೩೩
ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು!
ಅರವಟಿಗೆ ಛತ್ರವು ತಮ್ಮದೆಂಬರು!
ಎಲೆ ಪಯಿರೈದದಿರೆ, ಸುರಿವ ಮಳೆ ಸುರಿಸದಿದ್ದಡೆ,
ಅವರೇತರಲ್ಲಿ ನೀಡುವರಯ್ಯಾ! ರಾಮನಾಥ. || ೨೦ ||

೧೭೩೪
ಒಲವರವಿಲ್ಲದ ಭಕ್ತಿ, ಲವಲವಿಕೆಯಿಲ್ಲದ ಪೂಜೆ,
ಸಲೆ ನಿಮ್ಮ ನಂಬಿಯೂ ನಂಬದವನ ಬಾಳುವೆ,
ಹೊಲೆಯರ ನಾಯ ಹುಲುಸರವಿಯಿಂದ ಕರಕಷ್ಟ ಕಾಣಾ! ರಾಮನಾಥ. || ೨೧ ||

೧೭೩೫
ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ. || ೨೨ ||

೧೭೩೬
ಕಣ್ಣು ಮೀಸಲು ಶಿವನ; ಕೈ ಮೀಸಲು ಶಿವನ.
ಕಾಲು ಮೀಸಲು ಶಿವನ; ನಾಲಗೆ ಮೀಸಲು ಶಿವನ.
ಕಿವಿ ಮೀಸಲು ಶಿವನ; ನಾಸಿಕ ಮೀಸಲು ಶಿವನ.
ತನು ಮನವೆಲ್ಲಾ ಮೀಸಲು ಶಿವನ.
ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ! ರಾಮನಾಥ. || ೨೩ ||

೧೭೩೭
ಕತ್ತೆ ಬಲ್ಲುದೆ ಕಸ್ತುರಿಯ ವಾಸನೆಯ?
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?
ಭಕ್ತಿಯನರಿಯದ ವ್ಯರ್ಥಜೀವಿಗಳು
ನಿಮ್ಮನವರನೆತ್ತ ಬಲ್ಲರೈ? ರಾಮನಾಥ. || ೨೪ ||

೧೭೩೮
ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ.
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮನಾಥ. || ೨೫ ||

೧೭೩೯
ಕುಲಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ
ತಲೆವಾಗುವೆ ನಾನು ಕುಲಜರೆಂದು.
ಬೆಬ್ಬನೆ ಬೆರತು, ನಿಮ್ಮನೊಲಿಸಿದ ಶರಣರಿಗೆ
ತಲೆವಾಗದವನ ತಲೆ ಶೂಲದ ಮೇಲಣ ತಲೆ ಕಾಣಾ! ರಾಮನಾಥ. || ೨೬ ||

೧೭೪೦
ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಲಕ್ಕೆ ಅರಸಾಗಿ ಹುಟ್ಟುವನಾತನು.
ಗಂಡನುಳ್ಳಮ್ಮನ ಕಂಡು ಒಡವೆರೆದಾತ
ನರಕದಲ್ಲಿ ದಿಂಡುಗೆಡೆದಿಪ್ಪನೈ, ರಾಮನಾಥ. || ೨೭ ||

೧೭೪೧
ಗಂಡ ಭಕ್ತನಾಗಿ, ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ!
ಸತ್ತ ನಾಯ ತಂದು ಅಟ್ಟದ ಮೇಲಿಳುಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ ಕಾಣಾ! ರಾಮನಾಥ. || ೨೮ ||

೧೭೪೨
ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲವೆ?
ತರುಗಳೆಲ್ಲ ಕೂಡಿ ಕಲ್ಪತರುವಿಗೆ ಸರಿಯಾಗಬಲ್ಲವೆ?
ಸರಿಯಲ್ಲ ನೋಡಾ !
ನಮ್ಮ ಭಕ್ತರಿಗೆ ನರರು ಸುರರು ಸರಿಯಲ್ಲ ನೋಡಾ!
ಪರುಷಕ್ಕೆ ಪಾಷಾಣ ಸರಿಯೆ?
ಮರುಜವಣಿಗೆ ಔಷಧ ಸರಿಯೆ?
ಇದು ಕಾರಣ, ಶಿವಭಕ್ತರ್ಗೆ ಲೋಕದವರು ಸರಿಯೆಂದರೆ
ನರಕ ತಪ್ಪದಯ್ಯಾ, ರಾಮನಾಥಾ. || ೨೯ ||

೧೭೪೩
ಗುರು ಲಿಂಗ ಒಂದೆಂಬರು.
ಗುರು ಲಿಂಗ ಒಂದಾದ ಠಾವ ತಿಳಿದು ನೋಡಿರೆ.
ಗುರುಕಾರುಣ್ಯವಾದ ಬಳಿಕ
ಅಂಗದ ಮೇಲೆ ಲಿಂಗವಿರಬೇಕು.
ಲಿಂಗವಿಲ್ಲದ ಗುರುಕಾರುಣ್ಯವು
ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ ಕಾಣಾ! ರಾಮನಾಥ. || ೩೦ ||

೧೭೪೪
ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ! ರಾಮನಾಥ. || ೩೧ ||

೧೭೪೫
ಚಿನ್ನದೊಳಗಣ ಬಣ್ಣವ ಆ ಚಿನ್ನ ತನ್ನ ತಾನರಿವುದೆ?
ಕಬ್ಬು ರುಚಿಸಬಲ್ಲುದೆ ತನ್ನ ತಾನೆ?
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ? ರಾಮನಾಥ. || ೩೨ ||

೧೭೪೬
ಜಂಬೂದ್ವೀಪವನೆಲ್ಲ ತಿರುಗಿದಡೇನು,
ಜಂಬುಕ ಶಂಭುಧ್ಯಾನದಲ್ಲಿ ಸೈವೆರಗಪ್ಪುದೆ?

ಕುಂಭಿನಿಯ ತಿರುಗಿ ಕೋಟಿತೀರ್ಥವ ಮಿಂದಡೇನು?
ಶಂಭು! ನಿಮ್ಮಲ್ಲಿ ಸ್ವಯವಾಗದವನು
ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ! ರಾಮನಾಥ. || ೩೩ ||

೧೭೪೭
ಜ್ವರ ಬಡಿದ ಬಾಯಿಗೆ ನೊರೆವಾಲು ಉರಸುವುದೆ?
ನರಕದಲ್ಲಿ ಬೀಳುವ ಮನುಜರಿಗೆ
ಶಿವಭಕ್ತಿಯೆಂಬುದು ಕಿರುಗಹಿ ಕಾಣಾ! ರಾಮನಾಥ. || ೩೪ ||

೧೭೪೮
ತನು ತನ್ನ ದೆಸೆಯಲೇಸು ದಿನವಿರ್ದಡೇನು?
ಮನ ತನ್ನ ಹರಿದತ್ತ ಹರಿದ ಬಳಿಕ.
ಕೆನೆಯಿಲ್ಲದ ಮೊಸರ ಕಡೆದಡೆ
ಅಲ್ಲಿ ಒಂದು ಹನಿ ತುಪ್ಪವಿಲ್ಲ ಕಾಣಾ! ರಾಮನಾಥ. || ೩೫ ||

೧೭೪೯
ತಾಯ ಗರ್ಭದ ಶಿಶು ತಾಯ ಕುರುಹನರಿಯದು.
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು.
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ! ರಾಮನಾಥ. || ೩೬ ||

೧೭೫೦
ತೀವಿ ಕುಳ್ಳಿರ್ದ ಸಭೆ ಈಯಬಲ್ಲುದೆ ದಾನವ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ?
ಇರಿಯಬಲ್ಲರೆ ನೂರಕ್ಕೊಬ್ಬ ಸಹಸ್ರಕ್ಕೊಬ್ಬ.
ಹುಣಿಸೆಯ ಹೂವೆಲ್ಲ ಕಾಯಾಗಬಲ್ಲುದೆ? ರಾಮನಾಥ. || ೩೭ ||

೧೭೫೧
ತೊಡೆಯಲ್ಲಿ ಮುದ್ರೆಯನೊತ್ತಿದಡೇನು?
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ?
ಮಡಿಲಲ್ಲಿ ಲಿಂಗವ ಕಟ್ಟಿದಡೇನೊ?
ಲೋಕದ ಅಜ್ಞಾನಿತನ ಬಿಡುವುದೆ?
ನಡೆ ನುಡಿ ಸತ್ಯಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ! ರಾಮನಾಥ. || ೩೮ ||

೧೭೫೨
ದೇಹಗೊಂಡು ಹುಟ್ಟಿದವರು
ಒಪ್ಪಚ್ಚಿ ದೇಹಾರವ ಮಾಡುವಿರಯ್ಯ.

ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ
ಆಹಾರವ ಕೊಂಡಡೆ
ಕೋಳಿ ಹುಳವನಾಯ್ದು ತಿಂದಂತೆ ಕಾಣಾ! ರಾಮನಾಥ. || ೩೯ ||

೧೭೫೩
ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ. || ೪೦ ||

೧೭೫೪
ನಿಡಿದೊಂದು ಕೋಲುವನು ಕಡಿದು ಎರಡ ಮಾಡಿ,
ಅಡಿಯ ಹೆಣ್ಣ ಮಾಡಿ, ಒಡತಣದ ಗಂಡ ಮಾಡಿ,
ನಡುವೆ ಹೊಸೆದಡೆ ಹುಟ್ಟಿದ ಕಿಚ್ಚು ಹೆಣ್ಣೊ ಗಂಡೊ? ರಾಮನಾಥ. || ೪೧ ||

೧೭೫೫
ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು?
ಅದು ಪಟ್ಟಣವೆಂದೆನಿಸುವುದು!
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ! ರಾಮನಾಥ. || ೪೨ ||

೧೭೫೬
ನೀನೀಶನೀಯದೆ ಮಾನಿಸನೀವನೆ?
ನೀನೀಸುವ ಕಾರಣ ಮಾನಿಸನೀವನು.
ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ,
ನೀನೀಸುವೆ ಕಾಣಾ ರಾಮನಾಥ. || ೪೩ ||

೧೭೫೭
ಪರವಧುವ ನೆರೆಯದೆ, ಪರಧನವ ತುಡುಕದೆ,
ಪರದೈವದಿಚ್ಛೆವಡೆಯದೆ,
ಗುರು ಲಿಂಗ ಜಂಗಮಕ್ಕೆ ವರ ದಾಸನಾದಾತನೆ
ಧರೆ ಮೂರಕ್ಕೆ ಗುರುವಾಗಿಪ್ಪನೈ, ರಾಮನಾಥ. || ೪೪ ||

೧೭೫೮
ಬರು ಶಠಗನ ಭಕ್ತಿ ದಿಟವೆಂದು ನಚ್ಚಲು ಬೇಡ.
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ! ರಾಮನಾಥ. || ೪೫ ||

೧೭೫೯
ಭವಿಯ ಕಳೆದು ಭಕ್ತನಾದ ಬಳಿಕ
ಭವಿ ನಂಟನೆಂದು ಹೊಗಿಸಲಾಗದು.
ನಂಟುತನಕ್ಕೆ ಆತ್ಮನಿಚ್ಛೆಗೆ ಅಳುಪಿ ಭವಿಯೊಡನುಂಡಡೆ
ಹಂದಿಯ ಬಾಯ ತುತ್ತ ನಾಯಿ ಸೆಳತಿಂದಂತೆ ಕಾಣಾ ! ರಾಮನಾಥ. || ೪೬ ||

೧೭೬೦
ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀನಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ. || ೪೭ ||

೧೭೬೧
ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ.
ಎಣಿಸುವಡೆ ತನು ಭಿನ್ನ, ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ, ರಾಮನಾಥ. || ೪೮ ||

೧೭೬೨
ಮನೆಯಲ್ಲಿ ಅಟ್ಟೆನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ. || ೪೯ ||

೧೭೬೩
ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ.
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ.
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ. || ೫೦ ||

೧೭೬೪
ಮೊಲೆ ಮುಡಿ ಬಂದಡೆ ಹೆಣ್ಣೆಂಬರು.
ಗಡ್ಡ ಮೀಸೆ ಬಂದಡೆ ಗಂಡೆಂಬರು.
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ. || ೫೧ ||

೧೭೬೫
ವೇಶಿಯ ಎಂಜಲ ತಿಂದು ಈಶ್ವರಪ್ರಸಾದವ ಭುಂಜಿಸಿದಡೆ
ಓಸರಿಸಿತ್ತಯ್ಯ ಲಿಂಗವು ಆ ದ್ರೋಹಿಗೆ!
ಭಾಷೆ ತಪ್ಪುವವನು, ಭವದಲ್ಲಿ ಬಳಲುವನೆಂದವನ ಕಂಡು
ಹೇಸಿ, ಕಡೆಗೆ ತೊಲಗಿದೆನು ಕಾಣಾ ರಾಮನಾಥ. || ೫೨ ||

೧೭೬೬
ವೇಷವನೂ ವೇಶಿಯನೂ ಸರಿಯೆಂಬೆ.
ವೇಷವು ಲೋಕವ ಹಾರುವದು.
ವೇಶಿಯೂ ಲೋಕವ ಹಾರುವಳು.
ವೇಷವ ಹೊತ್ತು ಲೋಕವ ಹಾರದಿರ್ದಡೆ
ಆತನ ಈಶ್ವರನೆಂಬೆ ಕಾಣಾ! ರಾಮನಾಥ. || ೫೩ ||

೧೭೬೭
ವೇಷವ ಹೊತ್ತ ಹಿರಿಯರು ಈಶ್ವರಧ್ಯಾನದಲ್ಲಿರಬೇಕು.
ವೇಷವ ತೋರಿ ಗ್ರಾಸಕ್ಕಾಗಿ ಆಸೆಮಾಡಿ
ಲೋಗರ ಮನೆಯ ಕಾದು
ಗ್ರಾಸವ ಪಡೆದು ಉದರವ ಹೊರವ ವೇಷವು
ವೇಶಿಯಿಂದವು ಕರಕಷ್ಟ! ರಾಮನಾಥ. || ೫೪ ||

೧೭೬೮
ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ!
ಅಂಬರಕ್ಕೆ ಗಡಿಗೆ ಬೋದಿಗೆಯಿಲ್ಲದಂತಿರಿಸಿದೆ!
ಎಲೆ ಮೃಡನೆ! ನೀನಲ್ಲದೆ ಉಳಿದ ದೈವಂಗಳಿಗಹುದೆ? ರಾಮನಾಥ. || ೫೫ ||

೧೭೬೯
ಶಿವಪೂಜೆಯೆತ್ತ, ವಿಷಯದ ಸವಿಯೆತ್ತ;
ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು
ವೇಶಿಯರ ಎಂಜಲ ಹೇಸದೆ ತಿಂಬ
ದೋಷಿಗಳನೇನೆಂಬೆನೈ, ರಾಮನಾಥ. || ೫೬ ||

೧೭೭೦
ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದಡೆ
ಅವರರಸಿಯ ಪಾರ್ವತಿಯ ಸರಿಯೆಂದು ಕಾಣಬೇಕು.
ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ
ಮಾತನಾಡುವ ನರಕಿಗಳನೇನೆಂಬೆ, ರಾಮನಾಥ. || ೫೭ ||

೧೭೭೧
ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ. || ೫೮ ||

೧೭೭೨
ಸತಿಯರ ಸಂಗವನು ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ! ರಾಮನಾಥ. || ೫೯ ||

೧೭೭೩
ಹಂದಿ ಶ್ರೀಗಂಧವ ಹೂಸಿದಡೇನು,
ಗಂಧ[ಗ]ಜನಾಗಬಲ್ಲುದೆ?
ನವಿಲು ನಲಿಯಿತ್ತೆಂದಡೆ,
ಕಾಕೋಳಿ ಪುಚ್ಚವ ತೆರಕೊಂಡಂತೆ
ಕರ್ಮಿಗಳ ಭಕ್ತಿ!
ಹೊರವೇಷದ ವಿಭೂತಿ ರುದ್ರಾಕ್ಷಿಯ ಹೂಸಿದಡೇನು?
ತೆರನನರಿದು ಮರವೆಯ ಕಳೆದು
ಮಾತಿನಂತೆ ನೀತಿಯುಳ್ಳಡೆ
ಅವರ ಅಜಾತರೆಂಬೆ ಕಾಣಾ! ರಾಮನಾಥ. || ೬೦ ||

೧೭೭೪
ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಮಿಸುನಿಯ ಚಿನ್ನದಂತೆ.
ಅರೆದು ನೋಡುವ ಚಂದನದಂತೆ.
ಅರಿದು ನೋಡುವ ಕಬ್ಬಿನ ಕೋಲಿನಂತೆ.
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥನು. || ೬೧ ||

೧೭೭೫
ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ. || ೬೨ ||

೧೭೭೬
ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ.

ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ! ರಾಮನಾಥ. || ೬೩ ||

೧೭೭೭
ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ
ಕಣ್ಣಿಟ್ಟು ನೋಡಿರೋ ಶಿವಲಿಂಗದೇವನ.
ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರೆದು
ಬರುದೊರೆಹೋಗದೆ ಮರೆಯದೆ ಪೂಜಿಸಿ,
ನಮ್ಮ ರಾಮನಾಥನ. || ೬೪ ||

೧೭೭೮
ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರವ ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ! ರಾಮನಾಥ. || ೬೫ ||

*

ಜೋದರ ಮಾಯಣ್ಣ

೧೭೭೯
ಮುನ್ನ ಪರಸತಿ ಪಾರ್ವತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಬಳಿಕ ಎನ್ನ ಶರಣಸತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಇನ್ನು ಸತಿಯರೆಲ್ಲಾ ಗುರುಸತಿಯರೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ನಡೆದುದು ತಪ್ಪದೆ ನುಡಿದುದು ಹುಸಿಯದೆ
ನಡೆಸಿತ್ತು ನುಡಿಸಿತ್ತು ಗುರುವಚನ.
ಅಚ್ಚಿಗವಿಲ್ಲದೆ ಮಚ್ಚಿದ ಮನವನು
ನಿಶ್ಚಿಂತ ಮಾಡಿತ್ತು ಗುರುವಚನ.
ಶಂಭು ಸೋಮನಾಥಲಿಂಗ ಸಂಗ
ಸುಸಂಗವ ಮಾಡಿತ್ತು ಗುರುವಚನ. || ೧ |

*

ಡಕ್ಕೆಯ ಬೊಮ್ಮಣ್ಣ

೧೭೮೦
ಕೈ ಕೈದ ಹಿಡಿದು ಕಾದುವಾಗ,
ಕೈದೊ ಕೈಯೊ ಮನವೊ?
ಅಂಗ ಲಿಂಗ ಸಂಬಂಧದಲ್ಲಿ ಸಂಬಂಧಿಸುವಾಗ,
ಅಂಗವೊ ಲಿಂಗವೊ ಆತ್ಮನೋ?
ಈ ಮೂರಂಗವನರಿದಲ್ಲಿ ಕಾಲಾಂತಕ ಭೀಮೇಶ್ವರಲಿಂಗನರಿದುದು. || ೧ ||

೧೭೮೧
ತುಂಬಿದ ಹರುಗುಲದಲ್ಲಿ ಒಬ್ಬಂಬಿಗನ [ದೆ]ಸೆಯಿಂದ
ಬೆಂಬಳಿಯಲ್ಲಿ ಹೋಹರಂತೆ
ಸಕಲೇಂದ್ರಿಯವೆಂಬ ಅಂಗದ ಹರಿಗುಲದಲ್ಲಿ
ಲಿಂಗವೆಂಬ ಅಂಬಿಗನ ದೆಸೆಯಲ್ಲಿ ಹೋಹ ಬೆಂಬಳಿಯ ತೋರಯ್ಯಾ,
ಕಾಲಾಂತಕ ಭೀಮೇಶ್ವರಲಿಂಗವೆ. || ೨ ||

೧೭೮೨
ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಲ್ಲಿ ಬಂದಳು ಮಾಯೆ.
ವಿಷ್ಣುವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರುಗಿದಳು ಮಾಯೆ.
ರುದ್ರಂಗೆ ಉಮಾದೇವಿಯಾಗಿ ಶಿರ ತೊಡೆಯಲ್ಲಿ ಕಾಡಿದಳು ಮಾಯೆ.
ಎಳ್ಳಿಗೆ ಎಣ್ಣೆ, ಮುಳ್ಳಿಗೆ ಮೊನೆಯಾಗಿ, ಹೂವಿಗೆ ಗಂಧವಾಗಿ,
ಅವರವರಂಗದಲ್ಲಿ ಹಿಂಗದ ಪ್ರತಿರೂಪಾಗಿ
ಸಂದಿಲ್ಲದೆ ಕಾಡುತ್ತಿದಾಳೆ ಮಾಯೆ.
ಡಕ್ಕೆಯ ಉಲುಹಡಗುವುದಕ್ಕೆ ಮುನ್ನವೆ ಮುನ್ನವೆ ನಿಶ್ಚೈಸಿಕೊಳ್ಳಿ,
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. || ೩ ||

೧೭೮೩
ಲೇಸೆನಿಸುವ ವಸ್ತುವ ಬೈತಿಡುವುದಕ್ಕೊಂದಾಶ್ರಯ ಬೇಕು.
ಮನ ಘನವನಾಶ್ರಯಿಸುವುದಕ್ಕೆ, ಅನುವನರಿದು ನೆಮ್ಮುವುದಕ್ಕೆ,
ಚಿದ್ಘನಲಿಂಗವೆಂಬ ಕುರುಹು ಬೇಕು.
ಇದರಿಂದ ಬೇರೆ ಕಾಬ ಅರಿವಿಲ್ಲ.
ಆ ಕುರುಹೆ ಅರಿವಿಗೆ ಆಶ್ರಯವಾದ ಕಾರಣ,
ಕಾಲಾಂತಕ ಭೀಮೇಶ್ವರಲಿಂಗವು ಕುರುಹುಗೊಂಡಿತ್ತು. || ೪ ||

೧೭೮೪
ಶಿಲೆ ಭಾವ ಹಿಂಗಿ ಕುರುಹಾಯಿತ್ತು, ಕಾರುಕನ ಕೈಯಲ್ಲಿ.
ಪಾಷಾಣ ಭಾವ ಹಿಂಗಿ ಕಳೆಯಾಯಿತ್ತು, ಆಚಾರ್ಯನ ಕೈಯಲ್ಲಿ.
ಕಳೆ ನೆಲೆಯಾಯಿತ್ತು, ಪೂಜಿಸುವಾತನ ಚಿತ್ತದಲ್ಲಿ.
ಚಿತ್ತ ವಸ್ತುವಿನಲ್ಲಿ ಬೆರೆದು ಕಾಲಾಂತಕ ಭೀಮೇಶ್ವರಲಿಂಗವಾಯಿತ್ತು. ॥ ೫ ॥

೧೭೮೫
ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ? ಎಂಬರು.
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?
ಪತಿಯಿಂದ ಬಂದ ಸೋಂಕು ಸತಿಗೆ ಕೇಡಲ್ಲವೆ?
ಒಂದಂಗದ ಕಣ್ಣು ಉಭಯದಲ್ಲಿ, ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು. ॥ ೬ ॥

*

ಡೋಹರ ಕಕ್ಕಯ್ಯ

೧೭೮೬
ಎನ್ನ ಕಷ್ಟಕುಲದ ಸೂತಕ
ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತ್ತು!
ಶುಕ್ಲಶೋಣಿತದಿಂದಲಾದ ಸೂತಕ
ನಿಮ್ಮ ಮುಟ್ಟಲೊಡನೆ ಬಯಲಾಯಿತ್ತು!
ತಟ್ಟಿದ ಮುಟ್ಟಿದ ಸುಖಂಗಳನೆಲ್ಲವ
ಲಿಂಗಮುಖಕ್ಕೆ ಅರ್ಪಿಸಿದೆನಾಗಿ
ಎನ್ನ ಪಂಚೇಂದ್ರಿಯಂಗಳು ಬಯಲಾದುವು!
ಎನ್ನ ಅಂತರಂಗದಲ್ಲಿ ಜ್ಞಾನಜ್ಯೋತಿಯೆಡೆಗೊಂಡುದಾಗಿ
ಒಳಗೂ ಬಯಲಾಯಿತ್ತು.
ಸಂಸಾರ ಸಂಗದ ಅವಸ್ಥೆಯು ಮೀರಿದ ಕ್ರೀಯಲ್ಲಿ
ತರಹರವಾಯಿತ್ತಾಗಿ ಬಹಿರಂಗ ಬಯಲಾಯಿತ್ತು!
ಅಭಿನವ ಮಲ್ಲಿಕಾರ್ಜುನಾ,
ನಿಮ್ಮ ಮುಟ್ಟಿದ ಕಾರಣ ನಾನೂ ಬಯಲಾದೆ! ॥ ೧ ॥

೧೭೮೭
[ಎನ್ನ ಕಷ್ಟ]ಕುಲದಲ್ಲಿ ಹುಟ್ಟಿಸಿದೆಯಯ್ಯಾ,
ಎಲೆ ಲಿಂಗ ತಂದೆ.
ಕೆಟ್ಟೆನಯ್ಯಾ, ನಿಮ್ಮ [ಮುಟ್ಟದಿ]ಹೆನೆಂದು.
ಎನ್ನ ಕೈ ಮುಟ್ಟದಿರ್ದಡೆ ಮನ ಮುಟ್ಟಲಾಗದೆ?
ಅಭಿನವ ಮಲ್ಲಿಕಾರ್ಜುನಾ. ॥ ೨ ॥

*

ತಳವಾರ ಕಾಮಿದೇವಯ್ಯ

೧೭೮೮
ಎತ್ತಾಗಿದ್ದು ಹೆಗಲ ಕೊಡೆನೆಂದಡೆ ನಿಶ್ಚಯವೆ?
ತೊತ್ತಾಗಿದ್ದು ಹೇಳಿದುದ ಕೇಳೆನೆಂದಡೆ ಮೆಚ್ಚುವರೆ?
ಭಕ್ತನಾಗಿದ್ದು ಭಾರಣೆಯನಾದರಿಸದಿದ್ದಡೆ ಅದು ಅಚ್ಚಿಗವೆಂದೆ,
ಕಾಮಹರಪ್ರಿಯ ರಾಮನಾಥಾ. ॥ ೧ ॥

೧೭೮೯
ವ್ಯವಹಾರವ ಮಾಡಿದಲ್ಲಿ ಲಾಭವ ಕಾಣದಿರ್ದಡೆ
ಆ ವ್ಯವಹಾರವೇತಕ್ಕೆ?
ಗುರುಲಿಂಗಜಂಗಮಕ್ಕೆ ಖ್ಯಾತಿಗೆ ಮಾಡಿದಡೆ
ಮೊದಲು ತಪ್ಪಿ ಲಾಭವನರಸುವಂತೆ,
ಕಾಮಹರಪ್ರಿಯ ರಾಮನಾಥಾ. ॥ ೨ ॥

*

ತುರುಗಾಹಿ ರಾಮಣ್ಣ

೧೭೯೦
ಕೋಲೋಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತೆ
ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು,
ಇಂದ್ರಿಯಂಗಳ ಇಚ್ಛೆಯಲ್ಲಿ ತ್ರಿವಿಧವ ಹಿಡಿದಿರುವರ ಸಂದಿಯಲ್ಲಿ ನುಸುಳದೆ,
ವಸ್ತುವಿನಂಗದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಇದೆ ಬಟ್ಟೆ. ॥ ೧ ॥

*

ತೆಲುಗೇಶ ಮಸಣಯ್ಯ

೧೭೯೧
ಕಾಮ ಸನ್ನಿಭನಾಗಿ ತಾ ಚೆಲುವನಾದಡೆ
ಕಾಮಿನೀಜನವೆಲ್ಲಾ ಮೆಚ್ಚಬೇಕು.
ದಾನಗುಣದವನಾಗಿ ಕರೆದೀವನಾದಡೆ
ಯಾಚಕಜನವೆಲ್ಲಾ ಮೆಚ್ಚಬೇಕು.
ವೀರನಾದಡೆ ವೈರಿಗಳು ಮೆಚ್ಚಬೇಕು.
ಖೂಳನಾದಡೆ ತನ್ನ ತಾ ಮೆಚ್ಚಿಕೊಂಬ.
ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದಡೆ,
ದೇವರು ಮೆಚ್ಚಿ ಜಗವು ತಾ ಮೆಚ್ಚುವುದು. ॥ ೧ ॥

೧೭೯೨
ಗುರು ಕರುಣವ ಹಡೆದುದಕ್ಕೆ ಚಿಹ್ನವಾವುದೆಂದಡೆ:
ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು.
ಅಂಗದ ಮೇಲೆ ಲಿಂಗ ಸ್ವಾಯತವಿಲ್ಲದೆ
ಬರಿದೆ ಗುರುಕರುಣವಾಯಿತ್ತೆಂದಡೆ ಅದೆಂತೋ?
ಲಿಂಗವಿಹೀನನಾಗಿ ಗುರುಕರುಣವುಂಟೇ?
ಆ ಮಾತ ಕೇಳಲಾಗದು.
ಇದು ಕಾರಣ, ಲಿಂಗಧಾರಣವುಳ್ಳುದೆ ಸದಾಚಾರ,
ಇಲ್ಲದಿರೆ ಅನಾಚಾರವೆಂಬೆನಯ್ಯಾ, ತೆಲುಗೇಶ್ವರಾ. ॥ ೨ ॥

*

ದಶಗಣ ಸಿಂಗಿದೇವಯ್ಯ

೧೭೯೩
ಸತಿ ಸುತ ಮಾತಾಪಿತರಿಗೆಂದು ಪಡೆದಡೆ ನಿಮ್ಮಾಣೆ ಕಂಡಯ್ಯಾ.
ಮಾನವರ ಸೇವೆಯ ಮಾಡಿದಡೆ ನಿಮ್ಮಾಣೆ ಕಂಡಯ್ಯಾ.
ನೀವಲ್ಲದನ್ಯಕ್ಕೆರಗಿದಡೆ ನಿಮ್ಮಾಣೆ ಕಂಡಯ್ಯಾ.
ಎನ್ನ ಸತಿಯಲ್ಲದನ್ಯ ಸತಿಗಳುಪಿದಡೆ ನಿಮ್ಮಾಣೆ ಕಂಡಯ್ಯಾ.
ತನು ಮನ ಧನ ವಂಚನೆಯಾದಡೆ,
ನಾಚಯ್ಯಪ್ರಿಯ ಮಲ್ಲಿನಾಥಯ್ಯಾ, ನಿಮ್ಮಾಣೆ ಕಂಡಯ್ಯಾ. ॥ ೧ ॥

೧೭೯೪
ಹೆಂಡಿರೆ[ನ್ನುವ] ಮಕ್ಕಳೆ[ನ್ನುವ] ತೊತ್ತಿರೆ[ನ್ನುವ]
ಬಂಟರೆ[ನ್ನುವ] ಹಗೆಗಳೆ[ನ್ನುವ] ತಪ್ಪೆನ್ನದಯ್ಯಾ.
ಜಾಗ್ರತ ಸ್ವಪ್ನ ಸುಷುಪ್ತಿಯಲ್ಲಿ ತಪ್ಪೆನ್ನದಯ್ಯಾ.
ನಾಚಯ್ಯಪ್ರಿಯ ಮಲ್ಲಿನಾಥಯ್ಯಾ,
ನೀನಿರ್ದವರ ನೀನೆನ್ನದ ತಪ್ಪೆನ್ನದಯ್ಯಾ. ॥ ೨ ॥

*

ದಸರಯ್ಯ

೧೭೯೫
ಪೃಥ್ವಿಯ ಅಂಶಿಕ ಅಂಗವಾಗಿ,
ಅಪ್ಪುವಿನ ಅಂಶಿಕ ಶುಕ್ಲ ಶೋಣಿತವಾಗಿ,
ತೇಜದ ಅಂಶಿಕ ಹಸಿವಾಗಿ,
ವಾಯುವಿನಂಶಿಕ ಜೀವಾತ್ಮನಾಗಿ,
ಆಕಾಶದ ಅಂಶಿಕ ಬ್ರಹ್ಮರಂಧ್ರವಾಗಿ,
ಇಂತೀ ಐದರ ಗುಣವುಳ್ಳನ್ನಕ್ಕ ಗೆಲ್ಲ ಸೋಲ ಬಿಡದು.
ಇವನಲ್ಲಿಗಲ್ಲಿಯೆ ಇಂಬಿಟ್ಟು
ಇಂತೀ ಲಲ್ಲೆಯ ಬಿಡಿಸಯ್ಯಾ.
ಎನ್ನಲ್ಲಿ ನಿಮಗೆ ಖುಲ್ಲತನ ಬೇಡ.
ಅದು ಎನ್ನ ಸೋಂಕಲ್ಲ,
ಅದು ನಿನ್ನ ಸೋಂಕು ದಸರೇಶ್ವರಲಿಂಗಾ. ॥ ೧ ॥

*

ದಾಸೋಹದ ಸಂಗಣ್ಣ

೧೭೯೬
ಕುಂಭದಲ್ಲಿ ಬೆಂದ ಅಶನಕ್ಕೆ ಒಂದಗುಳಲ್ಲದೆ
ಹಿಂಗಿ ಹಿಂಗಿ ಹಿಸುಕಲುಂಟೆ?
ಗುರುತಪ್ಪುಕನ ಲಿಂಗಬಾಹ್ಯನ ಜಂಗಮನಿಂದಕನ
ಆಚಾರಭ್ರಷ್ಟನ ಜ್ಞಾನಹೀನನ
ಅರಿತು ಕಂಡು ಕೂಡಿದಡೆ,
ಖಂಡವ ಬಿಟ್ಟು ಮತ್ಸ್ಯಕ್ಕೆ ಹರಿದ ಜಂಬುಕನಂತೆ ಆಗದೆ?

ಸದಾಚಾರದಲ್ಲಿ ಸಂದಿರಬೇಕು,
ಕಟ್ಟಾಚಾರದಲ್ಲಿ ನಿಂದಿರಬೇಕು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧ ॥

೧೭೯೭

ನೋಡುವರೆಲ್ಲರು ಆಡಬಲ್ಲರೆ?
ಮಾತನಾಡುವರೆಲ್ಲರು ಲಿಂಗಾಂಗಯೋಗ ಬಲ್ಲರೆ?
ಸಾಧನೆಯ ಮಾಡುವ ಬಾಲರೆಲ್ಲರೂ ಕಳನ ಹೊಕ್ಕು ಕಾದಬಲ್ಲರೆ?
ಈ ಮಾತಿನ ಮಾಲೆಯ ಸಂಸಾರದ ತೂತ ಯೋಗಿಗಳೆಲ್ಲರೂ
ಲಿಂಗಾಂಗ ನಿಹಿತ ಯೋಗವ ಬಲ್ಲರೆ?
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨ ॥

೧೭೯೮

ಮಂಜರಿ[ಯು] ನುಂಗಿದ ಚೂಡ
ತನ್ನ ಕಾಲವೇಳೆಗೆ ನಿಂದು ಕೂಗಿದುದುಂಟೆ?
ಲಿಂಗವನರಿದ ಚಿತ್ತ
ಸಂಸಾರದ ಸಂದಣಿಯಲ್ಲಿ ಮುಳುಗುವುದೆ?
ಈ ದ್ವಂದ್ವವನರಿದು ಯೋಗ ಸಂಬಂಧಿಯಾಗಿರಬೇಕು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩ ॥

೧೭೯೯

ಮಣ್ಣಿನಲ್ಲಿ ಹುಟ್ಟಿದ ಹೊನ್ನು, ಕಲ್ಲಿನಲ್ಲಿ ಹುಟ್ಟಿದ ರನ್ನ,
ಚಿಪ್ಪಿನಲ್ಲಿ ಹುಟ್ಟಿದ ಮುತ್ತು, ವೃಕ್ಷದಲ್ಲಿ ಹುಟ್ಟಿದ ಗಂಧ
ಅವು ತಮ್ಮ ಸ್ವಸ್ಥಾನಂಗಳ ಮೀರಿ
ಪರಸ್ಥಾನಂಗಳಲ್ಲಿ ನಿಂದು ಪ್ರಾಪ್ತಿಯನೆಯ್ದುವಂತೆ,
ಪಿಂಡ ಅಂಡದಲ್ಲಿ ಹುಟ್ಟಿ ಅಂಡವನತಿಗಳೆದು ನಿಜ ಪಿಂಡವಾದಂತೆ,
ಗುರುವಿನ ಕರಕಮಲದಲ್ಲಿ ಹುಟ್ಟಿ,
ಲಿಂಗಮೂರ್ತಿಯ ಸರ್ವಾಂಗದಲ್ಲಿ ಬೆಳೆದು
ಜಂಗಮವಪ್ಪ ನಿರಂಗ ಪ್ರಸಾದದಲ್ಲಿ ಬೆರೆದು ಅವಿರಳನಾದವಂಗೆ
ಬಂಧ ಮೋಕ್ಷ ಕರ್ಮಂಗಳ ಬೆಂಬಳಿಗೆ ಸಲ್ಲ!
ಅದು ನಿರಂಗವಸ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪ ॥

೧೪೦೦

ವಾದ್ಯಕ್ಕೆ ಬಂಧವಲ್ಲದೆ ನಾದಕ್ಕೆ ಬಂಧವುಂಟೆ?
ಅರಿವಿಂಗೆ ಬಂಧವಲ್ಲದೆ ಅರುಹಿಸಿಕೊಂಬವಂಗೆ ಬಂಧವುಂಟೆ?
ಅರಿದೆಹೆನೆಂಬ ಭ್ರಮೆ ಅರುಹಿಸಿಕೊಂಡಹೆನೆಂಬ ಕುರುಹು
ಉಭಯ ನಾಸ್ತಿಯಾದಲ್ಲಿ ಭಾವಶುದ್ಧವಿಲ್ಲ.
[ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ],
ಮಾತುಳಂಗ ಮಧುಕೇಶ್ವರನು. || ೫ ||

೧೪೦೧

ಶಿಲೆಯೊಳಗೆ ಪಾವಕನಿಪ್ಪ ತೆರನಂತೆ
ಕಡೆ ನಡು ಮೊದಲೆನ್ನದೆ
ಎಲ್ಲಿ ಮುಟ್ಟಿದಲ್ಲಿ ಕಿಡಿ ಪಲ್ಲೈಸುವಂತೆ
ಸರ್ವಾಂಗಲಿಂಗವಾದ ಶರಣಂಗೆ ಆವ ಗುಣದಲ್ಲಿ ನೋಡಿದಡೂ,
ಅಲ್ಲಿಯೆ ಲಿಂಗ ಮುಂಚು.
ತನಗೆ ಅನ್ಯ ಭಿನ್ನವೆಂಬ ಮುಟ್ಟಿನ ಸೂತಕ ಕಟ್ಟಿನ ಭಾವವಿಲ್ಲ.
ಹಣ್ಣಿನಲ್ಲಿ ವಿಷ ವೇಧಿಸಲಿಕ್ಕಾಗಿ ಹಣ್ಣು ಸಾವುದೆ
ಹಣ್ಣಿನ ರಸವ ಕೊಂಡವನಲ್ಲದೆ?
ಈ ಗುಣ ಸರ್ವಾಂಗಲಿಂಗಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೬ ||

೧೪೦೨

ಶ್ರೀಗುರು ಕುರುಹು ಕೊಟ್ಟು,
ಕುರುಹಿನ ಬೆಂಬಳಿಯಲ್ಲಿ ಅರಿಯೆಂದು ಹೇಳಲಿಕ್ಕಾಗಿ,
ಆ ಉಭಯವ ಮರೆದು ಬೇರೊಂದರಿವಿನ ಮುಖದಲ್ಲಿ
ಒಡಗೂಡಿಹೆನೆಂಬ ಅಡಗಗಳ್ಳರ ನೋಡಾ.
ಕುರಿ ನಾಯಿ ವತ್ಸ ಮೊದಲಾಗಿಯೂ ತಮ್ಮ ಒಡೆಯನ ಬಲ್ಲವು.
ಇಂತೀ ಗುಣವನರಿಯದ ಬಡಿವ ಬಾಯವರನೊಡಗೂಡ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೭ ||

೧೪೦೩

ಸರ್ಪ ಮುಟ್ಟಿದಡೇನು ವಿಷ ತಪ್ಪಿದ ಮತ್ತೆ?
ಲೌಕಿಕ ವರ್ತನವಾದಡೇನು ಚಿತ್ತ ವಸ್ತುವಿನಲ್ಲಿ ಮುಟ್ಟಿದ ಮತ್ತೆ?
ತ್ರಿವಿಧವ ಮುಟ್ಟಿ ಪೂಜಿಸಿದಡೇನು
ತ್ರಿವಿಧ ಮಲತ್ರಯಕ್ಕೆ ಕಚ್ಚಿ ಕಡಿದಾಡಿದ ಮತ್ತೆ?

ಮಾತಿನ ಮಾಲೆಯಿಂದ ದ್ವೈತಾದ್ವೈತಂಗಳ ಎಷ್ಟು ನುಡಿದಡೇನು
ಚಿತ್ತ ವಸ್ತುವಿನಲ್ಲಿ ನಿಹಿತವಿಲ್ಲದ ಮತ್ತೆ?
ಇಂತಿವನರಿತು ಗುರುಕರಜಾತನಾದವಂಗೆ ಕರ್ತೃಭೃತ್ಯನೆಂಬ
ಸೂತಕದ ಸುಳುಹಿಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೮ ||

೧೮೦೪
ಸುಗಂಧದ ಅಂಗವಿದ್ದು ಕರಂಡದಲ್ಲಿ ಬಂಧಿಸಲಿಕ್ಕಾಗಿ, ಗಂಧ ನಿಂದಿತ್ತಲ್ಲದೆ,
ವಾಯುವಿನ ಕೈಯ ಗಂಧವ ಕರಂಡದಲ್ಲಿ ಕೂಡಿ ಮುಚ್ಚಲಿಕ್ಕೆ
ನಿಂದುದುಂಟೆ ಆ ಸುವಾಸನೆ ?
ಈ ಗುಣ ಲಿಂಗಾಂಗಿಯ ಸಂಗದ ಇರವು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೯ ||

೧೮೦೫
ಹುತ್ತಕ್ಕೆ ಸರ್ಪನಾಗಿ, ಉದಕಕ್ಕೆ ಒಳ್ಳೆಯಾಗಿ,
ಕೊಂಬೆಗೆ ಕೋಡಗನಾಗಿ ಅವರವರ ಬೆಂಬಳಿಯಲ್ಲಿ
ಅಜಬೀಜವ ಕಾವ ಜಂಬುಕನಂತೆ ತಿರುಗಲೇತಕ್ಕೆ?
ಆಯುಷ್ಯ ತೀರಿದಲ್ಲಿ ಮರಣ, ಐಶ್ವರ್ಯ ಹೋದಲ್ಲಿ ದಾರಿದ್ರ್ಯ ಬಪ್ಪುದು
ಎಲ್ಲಿದ್ದಡೂ ತಪ್ಪದೆಂದರಿದ ಮತ್ತೆ
ಬಾಯಿಮುಚ್ಚಿ ಸತ್ತಂತಿಪ್ಪ ತೆರ.
ಇದು ಭಕ್ತಿ ವಿರಕ್ತಿಯ ಪಥ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೧೦ ||

*

ನಗೆಯ ಮಾರಿತಂದೆ

೧೮೦೬
ಕಲ್ಲಿಯ ಹಾಕಿ ನೆಲ್ಲವ ತಳಿದು,
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ;
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ

ಅದೇತರ ನುಡಿ? ಮಾತಿನ ಮರೆ.
ಆತುರವೈರಿ ಮಾರೇಶ್ವರಾ. ॥ ೧ ॥

೧೮೦೭
ಕೈದ ಮಾಡಿದ ಕಾರುಕ ಧೀರನಹನೆ?
ಚಿತ್ತದ ಆಮ್ನೆಯಿಂದ, ಶಾಸ್ತ್ರ ಭಿತ್ತಿಯಿಂದ,
ಕವಿತ್ವದ ಲಕ್ಷಣದಿಂದ,
ಅನಿತ್ಯ ಅನಿತ್ಯವೆಂದು ಮಿಕ್ಕಾದವರಿಗೆ ಹೇಳುವ ಕರ್ತುವಲ್ಲದೆ
ತತ್ ಪ್ರಾಣಲಿಂಗಾಂಗಯೋಗ ತಾನಾಗಬೇಕು,
ಆತುರವೈರಿ ಮಾರೇಶ್ವರಾ. ॥ ೨ ॥

೧೮೦೮
ಗುರುವಿನಲ್ಲಿ ಗುಣವಿಲ್ಲದಿರ್ದಡೆ ಪೂಜ್ಯನಾಗಿ ಪೊಡವಡಿಸಿಕೊಳಲೇಕೆ?
ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ ತ್ರಿಸಂಧ್ಯಾಕಾಲದಲ್ಲಿ ಪೂಜಿಸಿಕೊಳಲೇಕೆ?
ಜಂಗಮದಲ್ಲಿ ಜಾತಿಯಿಲ್ಲದಿರ್ದಡೆ ಹಿರಿದು ಕಿರಿದೆಂದು ಹೋರಲೇಕೆ?
ಇದನೇನ ಹೇಳುವೆ?
ಗುರು ಭವಕ್ಕೊಳಗಾದ, ಲಿಂಗ ಲಕ್ಷಣಕ್ಕೊಳಗಾಯಿತ್ತು.
ಜಂಗಮ ಜಾತಿಗೊಳಗಾದ!
ಇವನೆಲ್ಲವ ಹೇಳಿ ಹೇಳಿ:
ಎನಗಿದು ಒಳ್ಳಿತ್ತೊ ಹೊಲ್ಲವೊ? ಗೆಲ್ಲತನಬೇಡ.
ಆತುರವೈರಿ ಮಾರೇಶ್ವರಾ. ॥ ೩ ॥

೧೮೦೯
ತಾ ಹೊಂದುವಾಗ ಕೈದು ಬಾ ಎಂದು ಕರೆದುದುಂಟೆ?
ತಡಿಯಲ್ಲಿದ್ದು ಮಡುವಿನಲ್ಲಿ ಬೀಳುವಾಗ
ಆ ಮಡು ಒಡಗೂಡುವ ಬಾ ಎಂದು ಕರೆಯಿತ್ತೆ?
ತಮವಡಸಿದ ನಿಳಯ ಕರೆಯಿತ್ತೆ ಜ್ಯೋತಿಯ?
ನೀ ಬಂದ ಮಣಿಹಕ್ಕೆ ಎನ್ನ ಇರಲೀಸೆಯೆಂದು
ಆಸ್ಮಿಕದಲ್ಲಿ ಆತುರವೈರಿ ಮಾರೇಶ್ವರ ನುಡಿದ. ॥ ೪ ॥

೧೮೧೦
ನಡೆವ ಕಾಲು, ಆನುವ ಕೈ, ಬೇಡುವ ಬಾಯಿ,
ಸರ್ವವನೊಡಗೂಡುವ ಮನವುಡಗಿ,
ಘನಲಿಂಗದಲ್ಲಿ ತಲ್ಲೀಯವಾದವನಂಗ,

ಮರುಳು ಕಂಡ ಕನಸಿನಂತೆ, ಮೂಗನ ಕಾವ್ಯದಂತೆ,
ಜಲಲಿಪಿಯಂತೆ, ಉರಿಯ ಧೂಮದಂತೆ,
ಇದಾರಿಗೂ ಅಸಾಧ್ಯ, ಆತುರವೈರಿ ಮಾರೇಶ್ವರಾ. ‖ ೫ ‖

೧೮೧೧
ಬೀಜವೊಡೆದು ಮೊಳೆಯಂಕುರಿಸುವಾಗ ಎಲೆ ಎಲ್ಲಿದ್ದಿತ್ತು?
ಎಲೆ ಸುಳಿಬಿಟ್ಟು ಕವಲುವಾಗ ಶಾಖೆಯೆಲ್ಲಿದ್ದಿತ್ತು?
ಶಾಖೆ ಒಡೆದು ಕುಸುಮ ತೋರುವಾಗ ಫಲವೆಲ್ಲಿದ್ದಿತ್ತು?
ಫಲ ಬಲಿದು ರಸ ತುಂಬುವಾಗ ಸವಿಯೆಲ್ಲಿದ್ದಿತ್ತು?
ಸವಿಯ ಸವಿದು ಪರಿಣತೆಗೊಂಬಾಗ ಅದೇತರೊದಗು?
ಇಷ್ಟರ ನೀತಿಯನರಿ, ಆತುರವೈರಿ ಮಾರೇಶ್ವರಾ. ‖ ೬ ‖

೧೮೧೨
ಮಣ್ಣೆಂಬುದು ದೇಹ, ಹೊನ್ನೆಂಬುದು ಕಾಂಕ್ಷೆ,
ಹೆಣ್ಣೆಂಬುದು ಸಕಲ ಸುಖಭೋಗಂಗಳು.
ಅಣ್ಣಾ, ಇದ ಹೇಳದೆ ಮಣ್ಣ ಮುದ್ದೆಯ ಕೈಯಲ್ಲಿ ಕೊಟ್ಟು
ಸುಣ್ಣನೆ ಹೋದೆ, ಆತುರವೈರಿ ಮಾರೇಶ್ವರಾ. ‖ ೭ ‖

೧೮೧೩
ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ,
ಹೊಯಿವ ದೊಣ್ಣೆ ಕೈಯಲ್ಲಿ, ಲೇಸಾಯಿತ್ತು ಈತನಿರವು!
ಮಾತಿನಲ್ಲಿ ಆಗಮ, ಮನದಲ್ಲಿ ತೂತಿನ ಕುಡುಕೆಯ ಆಶೆ,
ಇದು ನೀತಿಯಲ್ಲ, ಆತುರವೈರಿ ಮಾರೇಶ್ವರಾ. ‖ ೮ ‖

*

ನಿಜಗುಣಯೋಗಿ

೧೮೧೪
ಆನುಳ್ಳನ್ನಕ್ಕ ನೀನುಂಟೆಲೆ ಮಾಯೆ,
ಆನಿಲ್ಲದಿರ್ದಡೆ ನೀನಿಲ್ಲ.
ಆನು ನೀನೆಂಬುಭಯವಳಿಯಲು
ಆನಂದ, ನಿಜಗುಣಯೋಗ. ‖ ೧ ‖

*

ನಿವೃತ್ತಿ ಸಂಗಯ್ಯ

೧೮೧೫
ಸಚರಾಚರವೆಲ್ಲಕ್ಕೆ ಆಸೆಯೆ ಪ್ರಾಣ.
ಸಚರಾಚರದ ಚತುರಾಸಿ ಬಲದೊಳಗೆ
ಆಸೆಯಿಲ್ಲದೆ ಚರಿಸುವ ಲಿಂಗಾಂಗಿಯ ತೋರಾ.
ಆಶಯಾ ಬದ್ಧ್ಯತೇ ಲೋಕಃ ಕರ್ಮಣಾ ಬಹು ಚಿಂತಯಾ।
ಆಯುಃ ಕ್ಷೀಣಂ ನ ಜಾನಾತಿ ವೇಣುಸೂತ್ರಂ ವಿಧೀಯತೇ॥
ಎಂದುದಾಗಿ, ಆಸೆಯನೆ ಧಿಕ್ಕರಿಸಿ
ನಿರಾಸೆಯಲಿ ನಡೆವವರ ಸರಿಯೆಂಬೆ ಕಾಣಾ,
ನಿವೃತ್ತಿ ಸಂಗಯ್ಯ. ॥ ೧ ॥

*

ನುಲಿಯ ಚಂದಯ್ಯ

೧೮೧೬
ಆವಾವ ಕಾಯಕದಲ್ಲಿ ಬಂದಡೂ ಭಾವಶುದ್ಧವಾಗಿ
ಗುರು-ಲಿಂಗ-ಜಂಗಮಕ್ಕೆ ಮಾಡುವುದೇ ಶಿವಪೂಜೆ.
ಮಾಡುವ ಮಾಟವಿಲ್ಲದೆ ಮಾತಿಂಗೆ ಮಾತಾಡುವುದು
ಅದೇತರ ಪೂಜೆ ?
ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ, ಮಡಿವಾಳಯ್ಯ. ॥ ೧ ॥

೧೮೧೭
ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು
ಜಂಗಮಕ್ಕೆ ಮಾಡಿದೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ.
ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು
ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ
ದಾಸೋಹವ ಮಾಡುವುದೆ ಮಾಟ.
ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ
ಕಾಯಕದಿಂದ ಬಂದುದು ಲಿಂಗಾರ್ಪಿತ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು. ॥ ೨ ॥

೧೮೧೮

ಕೈದ ಹಿಡಿದಾಡುವರೆಲ್ಲರು ಇರಿಯಬಲ್ಲರೆ?
ಸಾಧನೆಯ ಮಾಡುವ ಬಾಲರೆಲ್ಲರೂ ಕಾದಬಲ್ಲರೆ?
ಅರ್ತಿಗೆ ಮಾಡುವ ಕೃತ್ಯವಂತರೆಲ್ಲರೂ ಸದ್ಭಕ್ತರಪ್ಪರೆ?
ಅದು ಚಂದೇಶ್ವರಲಿಂಗಕ್ಕೆ ಸಲ್ಲದ ಮಾಟ. || ೩ ||

೧೮೧೯

ಗುರುವನರಿದಲ್ಲಿ ಉತ್ಪತ್ಯಕ್ಕೆ ಹೊರಗಾಗಬೇಕು.
ಲಿಂಗವನರಿದಲ್ಲಿ ಸ್ಥಿತಿಗೆ ಹೊರಗಾಗಬೇಕು.
ಜಂಗಮವನರಿದಲ್ಲಿ ಲಯಕ್ಕೆ ಹೊರಗಾಗಬೇಕು.
ಈ ಗುಣವನರಿದಲ್ಲದೆ ಸದ್ಭಕ್ತನಲ್ಲ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ ಕಾಣಬಾರದು. || ೪ ||

೧೮೨೦

ಗುರುವಾದಡೂ ಕಾಯಕದಿಂದವೆ ಜೀವನ್ಮುಕ್ತಿ,
ಲಿಂಗವಾದಡೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು.
ಜಂಗಮವಾದಡೂ ಕಾಯಕದಿಂದವೆ ವೇಷದ ಪಾಶ ಹರಿವುದು.
ಗುರುವಾದಡೂ ಚರಸೇವೆಯ ಮಾಡಬೇಕು.
ಲಿಂಗವಾದಡೂ ಚರಸೇವೆಯ ಮಾಡಬೇಕು.
ಜಂಗಮವಾದಡೂ ಚರಸೇವೆಯ ಮಾಡಬೇಕು.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು. || ೫ ||

೧೮೨೧

ಗುರುವಿಗೆ ತನುವೆಂದಲ್ಲಿ, ಲಿಂಗಕ್ಕೆ ಮನವೆಂದಲ್ಲಿ
ಜಂಗಮಕ್ಕೆ ಧನವೆಂದಲ್ಲಿ
ಮತ್ತೊಂದರಾಸೆಗೆ ಕೊಂಡಾಡಲೇತಕ್ಕೆ?
ಆ ಗುಣ ಚಂದೇಶ್ವರಲಿಂಗಕ್ಕೆ ದೂರ. || ೬ ||

೧೮೨೨

ಜಲಚರಕೇಕೆ ತೆಪ್ಪದ ಹಂಗು?
ವಿಹಂಗಗೇಕೆ ಅಡಿವಜ್ಜೆಯ ಮೆಟ್ಟು?
ಮಧುರರಸಕ್ಕೇಕೆ ಮೇಲಪ್ಪ ಸಿಹಿ?
ಕಲ್ಪವೃಕ್ಷಕ್ಕೇಕೆ ಕಾಲದ ಹಂಗು?
ದಾಸೋಹವನರಿದು ಮಾಡುವಂಗೆ ಇನ್ನೇತರ ಪೂಜೆ ಪುಣ್ಯ?
ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಎಡೆದೆರಪಿಲ್ಲ. || ೭ ||

೧೮೨೩
ನಾನೆಂದು ಇಹನ್ನಬರ ಗುರುಪೂಜೆಯ ಮಾಡಬೇಕು.
ನಾನೆಂದು ಇಹನ್ನಬರ ಲಿಂಗಪೂಜೆಯ ಮಾಡಬೇಕು.
ನಾನೆಂದು ಇಹನ್ನಬರ ಜಂಗಮಪೂಜೆಯ ಮಾಡಬೇಕು.
ನಾ ನೀನೆಂಬುಭಯವಳಿಯೆ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ ಏನೂ ಎನಲಿಲ್ಲ. ॥ ೮ ॥

೧೮೨೪
ಸತ್ಯಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ
ಚಿತ್ತ ವಿಚ್ಛಂದವಾಗದಿರಬೇಕು.
ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು.
ನೇಮದ ಕೂಲಿಯ ಬಿಟ್ಟು
ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ,
ತಾ ಮಾಡುವ ಸೇವೆ ನಷ್ಟವಯ್ಯಾ.
ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು.
ನನಗೆ ನಮ್ಮ ಜಂಗಮದ ಪ್ರಸಾದದಾಗೇ
ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ. ॥ ೯ ॥

*

ಪುರದ ನಾಗಣ್ಣ

೧೮೨೫
ನೆನೆವ ಮನಕ್ಕೆ ಮಣ್ಣನೆ ತೋರಿದೆ.
ನೋಡುವ ಕಣ್ಣಿಗೆ ಹೆಣ್ಣನೆ ತೋರಿದೆ.
ಪೂಜಿಸುವ ಕೈಗೆ ಹೊನ್ನನೆ ತೋರಿದೆ.
ಇಂತೀ ತ್ರಿವಿಧವನೆ ತೋರಿ ಕೊಟ್ಟು
ಮರಹನಿಕ್ಕಿದೆಯಯ್ಯಾ.
ಅಮರಗುಂಡದ ಮಲ್ಲಿಕಾರ್ಜುನಯ್ಯಾ
ನೀ ಮಾಡಿದ ಬಿನ್ನಾಣಕ್ಕೆ ನಾನು ಬೆರಗಾದೆನು. ॥ ೧ ॥

*

ಪ್ರಸಾದಿ ಭೋಗಣ್ಣ

೧೮೨೬

ತತ್ವಂಗಳಿಂದ ಗೊತ್ತ ನೋಡಿಹೆನೆಂದಡೆ
ಮರ್ಕಟ ದರ್ಪಣದಂತೆ, ತಾನಾಡಿದಂತಲ್ಲದೆ
ಬೇರೊಂದು ಗುಣವಿಲ್ಲ.
ಗಿರಿಯ ಗಹ್ವರದಲ್ಲಿ ಕರೆದಡೆ ಕರೆದಂತೆ.
ವಿಶ್ವಾಸವೆಂತೆ ಅಂತೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ ಹಾಂಗಿಪ್ಪನು. || ೧ ||

೧೮೨೭

ಭಕ್ತಿಯೆಂಬುದೆ ಬೇರು, ವಿರಕ್ತಿಯೆಂಬುದೆ ಮರ, ಫಲವೆಂಬುದೆ ಜ್ಞಾನ.
ಪಕ್ವಕ್ಕೆ ಬಂದಿತ್ತೆಂಬಾಗಲೆ ಅವಧಿಜ್ಞಾನ,
ತೊಟ್ಟು ಬಿಟ್ಟಲ್ಲಿಯೆ ಪರಮಜ್ಞಾನ,
ಸವಿದಲ್ಲಿಯೆ ಅಂತರೀಯಜ್ಞಾನ,
ಸುಖ ತನ್ಮಯವಾದಲ್ಲಿಯೆ ದಿವ್ಯಜ್ಞಾನ,
ದಿವ್ಯತೇಜಸ್ಸು ಹಿಂಗದಲ್ಲಿಯೇ ಪರಿಪೂರ್ಣಜ್ಞಾನ,
ಅದು ಮಹದೊಡಲೆಂಬುದಕ್ಕೆ ಎಡೆಯಿಲ್ಲ,
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಅಪ್ರಮಾಣಾದ ಕಾರಣ. || ೨ ||

೧೮೨೮

ಲೋಹದ ಪಿಂಡವೆಂದಡೆ
ಅಲಗಾಗದ ಮುನ್ನವೆ ಇರಿಯಬಲ್ಲುದೆ?
ಕುಸುಮದ ಗಿಡುವೆಂದಡೆ ಕುಸುಮವಾಸನೆಯ ಕೊಂಡು
ಎಸಗುವುದಕ್ಕೆ ಮುನ್ನವೆ, ಆ ಗಿಡುವಿನ ಪರ್ಣನ ಸುವಾಸನೆವುಂಟೆ?
ಇಂತೀ ದ್ವೈತ ಅದ್ವೈತದ ಭೇದ ಉಭಯಸ್ಥಲ ವಿವರ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. || ೩ ||

೧೮೨೯

ವಾಯುವಡಗಿದ ಮಹಾರ್ಣವದಂತೆ,
ನಾದವನೊಳಕೊಂಡ ತನ್ಮಯದಂತೆ,
ಶೂನ್ಯ ಸೋಂಕಿಲ್ಲದ ನಿಶ್ಚಯದಂತೆ,

ವಸ್ತುವಿನಲ್ಲಿ ಲೇಪವಾದ ಸುಚಿತ್ತನಂಗ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವ ಕೂಡಿದ ಕೂಟ. || ೪ ||

*

ಪ್ರಸಾದಿ ಲೆಂಕ ಬಂಕಣ್ಣ

೧೮೩೦
ಪ್ರಸಾದವೆ ಅಂಗವಾದವನ ಇರವು ಎಂತುಟೆಂದಡೆ :
ಒ[ಣ]ಗಿಲ್ಲದ ಕುಂಭ ಒಡೆದು ಹೋಳಾದಂತೆ
ಮರೀಚಿಕಾಜಲವ ತುಂಬಿ ಸುರಿದ ಅಂಗದಂತಿರಬೇಕು.
ಉರಿಯ ಮಧ್ಯದಲ್ಲಿ ನಷ್ಟವಾದ ಕರ್ಪೂರದ ಗಿರಿಯಂತಿರಬೇಕು.
ಮಹಾಪ್ರಸಾದವ ಕೊಂಡಲ್ಲಿ ಇದಿರು ಮುಯ್ಯಿಲ್ಲದಿರಬೇಕು.
ಹರವರಿ ನಷ್ಟವಾಗಿ ದಹನ ಚಂಡಿಕೇಶ್ವರಲಿಂಗದಲ್ಲಿ
ಒಡಗೂಡಿರಬೇಕು. || ೧ ||

*

ಬಹುರೂಪಿ ಚೌಡಯ್ಯ

೧೮೩೧
ಅನುದಿನಂಗಳೆಂಬವು ಪ್ರಣತೆಯಾಗಿ,
ವರುಷವೆಂಬವು ಬತ್ತಿಯಾಗಿ,
ಜೀವಜಾತಿಯ ಬೆಳಗ ಬೆಳಗಿನಲರಿಯಬೇಕು.
ಬೆಳಗುಳ್ಳಲ್ಲಿ ಆತ ನಡೆಸಿದಂತೆ ನಡೆಯಬೇಕು.
ಬೆಳಗುಳ್ಳಲ್ಲಿ ಆತ ನುಡಿಸಿದಂತೆ ನುಡಿಯಬೇಕು.
ಎಣ್ಣೆಯೆಂಬ ಜವ್ವನ ಸವೆಯದ ಮುನ್ನ,
ಬೆಳಗು ಕತ್ತಲೆಯಾಗದ ಮುನ್ನ
ರೇಕಣ್ಣಪ್ರಿಯ ನಾಗಿನಾಥಾ, ಬೆಳಗ ಬೆಳಗಿನಲರಿಯಬೇಕು. || ೧ ||

೧೮೩೨
ಆಡಿದೆನೈವರನೊಡಗೂಡಿ.
ಮಾಡಿದೆ ಶರ್ವನ ಸಂಗವ.
ನೋಡಿದೆ ನಾ ನೀನೆಂಬ ಭೇದವಳಿದು.
ಕೂಡಿದೆ ಕೇಡಿಲ್ಲದ ಕೂಟವ.
ಆಟ ಮಾಯಿತ್ತು, ನೋಟ ತೀರಿತ್ತು
ರೇಕಣ್ಣಪ್ರಿಯ ನಾಗಿನಾಥಾ. || ೨ ||

೧೮೩೩
ಆಡುವಡೆ ಸದಾಚಾರಿಗಳ ಕೂಡೆ ಆಡುವುದು.
ನುಡಿವಡೆ ಜಂಗಮಪ್ರೇಮಿಯ ಕೂಡೆ ನುಡಿವುದು.
ಮಾತಾಡುವಡೆ ಪ್ರಸಾದಿಯ ಕೂಡೆ ಮಾತನಾಡುವುದು.
ಭಕ್ತಿಹೀನನ ಕಂಡಡೆ ಮನ ಮುನಿಸ ಮಾಡಿಸಾ
ರೇಕಣ್ಣಪ್ರಿಯ ನಾಗಿನಾಥಾ. || ೩ ||

೧೮೩೪
ಎಲ್ಲಾ ಜಗಂಗಳೊಳಗಿರ್ದಡೇನು
ಶಿವನು ಜಗದಂತಹನಲ್ಲ.
ಜಗವ ತನ್ನೊಳಗಿಕ್ಕಿ ತಾ ಹೊರಗಿರ್ದಹೆನೆಂದಡೆ
ಬ್ರಹ್ಮಾಂಡದಂತಹನೇ? ಅಲ್ಲ.
ಆಕಾಶದೋಪಾದಿಯಲ್ಲಿ ಸರ್ವಲೋಕದ
ಒಳ ಹೊರಗೆ ಮೂಲಚೈತನ್ಯ ತಾನಾಗಿ, ಆಧಾರವಾದ
ನಮ್ಮ ರೇಕಣ್ಣಪ್ರಿಯ ನಾಗಿನಾಥ. || ೪ ||

೧೮೩೫
ಕಲ್ಲೊಳಗಣ ಕಿಚ್ಚಿಂ[ಗೆ] ಬೂದಿಯಿಲ್ಲದಂತಿರಿಸಿದೆ ಅಯ್ಯಾ ಎನ್ನ,
ಲಿಂಗದೊಳಗೆ.
ಗಾಳಿಗಂಧ ಕೂಡಿದಂತಿರಿಸಯ್ಯಾ ಎನ್ನ,
ಲಿಂಗದೊಳಗಂಗವನು.
ರೇಕಣ್ಣಪ್ರಿಯ ನಾಗಿನಾಥಾ, ನಿಮ್ಮ ಒಲವಿನೊಳಗಣ ನಿಲವು
ಸೊಡರ ಬೆಳಗಿನಲಡಗಿದ ಎಣ್ಣೆಯಂತೆ ಇರಿಸಯ್ಯಾ ಎನ್ನ,
ಲಿಂಗದೊಳಗಂಗವನು. || ೫ ||

೧೮೩೬
ಕೈಯ ಮರೆದು ಕಾದುವ ಅಂಕವದೇನೊ?
ಭಾವ ಮರೆದು ನೋಡುವ ನೋಟವದೇನೊ?
ಭಯವ ಮರೆದು ಮಾಡುವ ಭಕ್ತಿಯದೇನೊ?
ರೇಕಣ್ಣಪ್ರಿಯ ನಾಗಿನಾಥನಲ್ಲಿ ಗುರುವ ಮರೆದು
ಲಿಂಗವನೊಲಿಸಿದೆನೆಂದಡೆ ಆ ಉಭಯ ಗುರು ಲಿಂಗವೆರಡೂ ಇಲ್ಲ. || ೬ ||

೧೮೩೭
ಗಾರುಡಿಗನ ವಿಷವಡರಬಲ್ಲುದೆ?
ಸೂರ್ಯನ ಮಂಜು ಮುಸುಕಬಲ್ಲುದೆ?
ಗಾಳಿಯ ಮೊಟ್ಟೆಯ ಕಟ್ಟಬಹುದೆ?
ಅಗ್ನಿಯ ಕೈಯಿಂದ ಆಕಾಶ ಬೇಯಬಲ್ಲುದೆ?

ನಿಮ್ಮನರಿದ ನಿಜಯೋಗಿಗೆ ಕರ್ಮಪಾಶವೆಲ್ಲಿಯದೊ
ರೇಕಣ್ಣಪ್ರಿಯ ನಾಗಿನಾಥಾ? || ೭ ||

೧೮೩೮
ಗುರು ಎನ್ನ ಮುಟ್ಟಿ
ಗುರು ಶುದ್ಧವಾದನಯ್ಯ.
ಲಿಂಗ ಎನ್ನ ಮುಟ್ಟಿ
ಲಿಂಗ ಶುದ್ಧವಾಯಿತ್ತಯ್ಯ.
ಜಂಗಮ ಎನ್ನ ಮುಟ್ಟಿ
ಜಂಗಮ ಶುದ್ಧವಾದನಯ್ಯ.
ಪ್ರಸಾದ ಎನ್ನ ಮುಟ್ಟಿ
ಪ್ರಸಾದ ಶುದ್ಧವಾಯಿತ್ತಯ್ಯ.
ಈ ಚತುರ್ವಿಧ ಎನ್ನ ಮುಟ್ಟಿ
ಶುದ್ಧವಾಯಿತ್ತು ಕಾಣಾ
ರೇಕಣ್ಣಪ್ರಿಯ ನಾಗಿನಾಥಾ. || ೮ ||

೧೮೩೯
ಜಂಗಮದನುವನರಿಯದಿರ್ದಡೆ
ಲಿಂಗ ತಮತಮಗೆಲ್ಲಿಯದೊ?
ಲಿಂಗವಿಪ್ಪ ಸಜ್ಜೆಯೆಲ್ಲಾ
ಜಂಗಮದ ಪ್ರಾಣವಲ್ಲವೆ?
ಲಿಂಗವು, ರೇಕಣ್ಣಪ್ರಿಯ ನಾಗಿನಾಥಾ
ಜಂಗಮದ ಕಾಯವ ತೊಟ್ಟುಕೊಂಡು
ಸುಳಿವನಾಗಿ. || ೯ ||

೧೮೪೦
ನನಗೆ ನಾನೆ ಗುರುವಾದೆನಯ್ಯಾ.
ನನಗೆ ನಾನೆ ಲಿಂಗವಾದೆನಯ್ಯಾ.
ನನಗೆ ನಾನೆ ಜಂಗಮವಾದೆನಯ್ಯಾ.
ನನಗೆ ನಾನೆ ಪ್ರಸಾದವಾದೆನಯ್ಯಾ.
ನನಗೆ ನಾನೆ ಭಕ್ತನಾದೆನಯ್ಯಾ.
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಆಗುಹೋಗನರಿಯೆನಯ್ಯಾ. || ೧೦ ||

೧೮೪೧

ಬಾಯೊಳಗಿದ್ದ ರುಚಿಯನುಗುಳಿ ನುಂಗ[ಲುಂಟೆ?]
ಕಣ್ಣಿನೊಳಗಿದ್ದ ರೂಪನಗಲಿ ನೋಡಲುಂಟೆ?
ಕೈಯೊಳಗಿದ್ದ ವಸ್ತುವ ಬಿಟ್ಟು ಹಿಡಿಯಲುಂಟೆ?
ತನ್ನೊಳಗಿದ್ದ ಘನವ ಭಿನ್ನವಿಟ್ಟರಸುವ[ರೇ]
ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನಿಂದ ಬದುಕಿತೀ ಲೋಕವೆಲ್ಲ. ॥ ೧೧ ॥

೧೮೪೨

ಬಿತ್ತೆತ್ತ ಮುಂತಾಗಿ ಬಿತ್ತಿದಡೇನೋ?
ಬೀಜ ನಿರಾಳದ ಬೆಳಸು.
ಶರಣಚಾರಿತ್ರವೆಂತಿರ್ದಡೇನೋ?
ರೇಕಣ್ಣಪ್ರಿಯ ನಾಗಿನಾಥನ ಶರಣರ
ಅನರಿವರೆಂದಡೆ ನಾಯಕನರಕ. ॥ ೧೨ ॥

೧೮೪೩

ಹತ್ತಿ ಕದಿರು ರಾಟಿ ಮೊದಲಿಲ್ಲ,
ನೂಲುಂಟು ಸೆಲದಿಯ ಹೃದಯದಲ್ಲಿ.
ಭಕ್ತರ ಭಾವದಲ್ಲಿ ಲಿಂಗವುಂಟು,
ರೇಕಣ್ಣಪ್ರಿಯ ನಾಗಿನಾಥನ ಶರಣರ
ಮನದ ಕೊನೆಯನೆತ್ತಿದಡೆ ಲಿಂಗದ ಗೊಂಚಲುಂಟು. ॥ ೧೩ ॥

*

ಬಳ್ಳೇಶ ಮಲ್ಲಯ್ಯ

೧೮೪೪

ಅಪಾರ ಮಹಿಮನೆಂಬುದು ನಿಮ್ಮ ಭೇರಿ.
ಬೇಡಿತ್ತನೀವನೆಂಬುದು ನಿಮ್ಮ ತಮ್ಮಟ.
ಜಗವಂದಿತ ಲೋಕದೊಡೆಯನೆಂಬುದು ನಿಮ್ಮ ಶಂಖ.
ಪರದೈವವಿಲ್ಲವೆಂಬುದು ನಿಮ್ಮ ಡಮರುಗ.
ಶಿವ ಕಾಡನೆಂಬವರ ಬಾಯ
ತ್ರಿಶೂಲದಲ್ಲಿರಿವ ಬಳ್ಳೇಶ್ವರಲಿಂಗದ ಡಂಗುರ ಮೂಜಗದೊಳಗಯ್ಯಾ. ॥ ೧ ॥

೧೮೪೫

ಆವ ಪ್ರಾಣಿಗೂ ನೋವ ಮಾಡಬೇಡ.
ಪರನಾರಿಯರ ಸಂಗ ಬೇಡ.
ಪರಧನಕ್ಕಳುಪಬೇಡ.
ಪರದೈವಕ್ಕೆರಗಬೇಡ.
ಈ ಚತುರ್ವಿಧ ತವಕವ ಮಾಡುವಾಗ
ಪರರು ಕಂಡಾರು, ಕಾಣರು ಎಂದೆನಬೇಡ.
ಬಳ್ಳೇಶ್ವರಲಿಂಗಕ್ಕಾರು ಮರೆಮಾಡಬಾರದಾಗಿ
ಅಘೋರನರಕದಲ್ಲಿಕ್ಕುವ. ॥ ೨ ॥

*

ಬಾಚಿಕಾಯಕದ ಬಸವಣ್ಣ

೧೮೪೬

ಕುಲಗೋತ್ರಜಾತಿಸೂತಕದಿಂದ
ಕೆಟ್ಟವರೊಂದು ಕೋಟ್ಯನುಕೋಟಿ.
ಜನನಸೂತಕದಿಂದ ಕೆಟ್ಟವರು ಅನಂತಕೋಟಿ.
ಮಾತಿನ ಸೂತಕದಿಂದ ಮೋಸವಾದವರು
ಮನು ಮುನಿಸ್ತೋಮ ಅಗಣಿತಕೋಟಿ.
ಆತ್ಮಸೂತಕದಿಂದ ಅಹಂಕರಿಸಿ ಕೆಟ್ಟವರು
ಹರಿಹರ ಬ್ರಹ್ಮಾದಿಗಳೆಲ್ಲರು.
'ಯದ್ದೃಷ್ಟಂ ತನ್ನಷ್ಟಂ' ಎಂಬುದನರಿಯದೆ
ಹದಿನಾಲ್ಕು ಲೋಕವೂ ಸಂಚಿತಾಗಾಮಿಯಾಗಿ
ಮರಳಿ ಮರಳಿ ಹುಟ್ಟುತ್ತಿಪ್ಪರಯ್ಯ.
ಇಂತೀ ಸೂತಕದ ಪ್ರಪಂಚ ಬಿಡಲಾರದ ಪಾಷಂಡಿ ಮರುಳುಗಳಿಗೆ
ಪರಬ್ರಹ್ಮ ದೊರಕುವದೆ ಅಯ್ಯಾ?
ಇದು ಕಾರಣ, ನಾಮರೂಪಕ್ರೀಗಳಿಗೆ ಸಿಲ್ಕುವನಲ್ಲವಯ್ಯ.
ಅಗಮ್ಯ ಅಪ್ರಮಾಣ ಅಗೋಚರವಯ್ಯ.
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವಲ್ಲದೆ ಉಳಿದವರಿಗಿಲ್ಲವೆಂಬೆನು. ॥ ೧ ॥

೧೮೪೭

ಪೃಥ್ವಿಯ ಮರೆಯ ಸುವರ್ಣದಂತೆ
ಚಿಪ್ಪಿನ ಮರೆಯ ಮುತ್ತಿನಂತೆ

ಅಪ್ಪುವಿನ ಮರೆಯ ಅಗ್ನಿಯಂತೆ
ಒಪ್ಪದೊಳಗಣ ಮಹಾಪ್ರಕಾಶದಂತೆಯಿಪ್ಪ
ಘನಲಿಂಗವನರಿಯೆ.
ರುದ್ರ ಬ್ರಹ್ಮ ವಿಷ್ಣ್ವಾದಿಗಳು
ತಮ್ಮ ಆತ್ಮಜ್ಞಾನ [ನಿಶ್ಚಿಂ]ತೆಯೆಂಬ ನಿಜವ ನೀಗಾಡಿಕೊಂಡರು.
ಇದನರಿಯದೆ ಆಚರಿಸುವರು, ಆರಿಗೂ ಅಳವಲ್ಲವಯ್ಯಾ.
ಇಷ್ಟಪ್ರಾಣಭಾವಸಂಬಂಧಿಗಳಪ್ಪ
ಸದ್ಭಾವಾಚಾರವೆಡೆಗೊಂಡ ಶರಣಂಗಲ್ಲದೆ
ಮಿಕ್ಕಿನ ದುರಾಚಾರಿಗಳಿಗೆ ಸಾಧ್ಯವಲ್ಲ,
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು. || ೨ ||

೧೮೪೮
ವಜ್ರದ ಘಟ, ಸೂಜಿಯಲ್ಲಿ ಛಿದ್ರಿಸಿಕೊಂಬುದೆ?
ಭದ್ರಗಜ, ಅಜಕುಲದಲ್ಲಿ ಗರ್ಜಿಸಿಕೊಂಬುದೆ?
ನಿರ್ಧರದ ಭಟ, ಜೀವಗಳ್ಳನಲ್ಲಿ ಅದ್ದಲಿಸಿಕೊಂಬನೆ?
ಇಂತೀ ನಿರ್ಧರವ ತಿಳಿದಲ್ಲಿ, ಸಕಲವಿಷಯ ರೋಗರುಜೆಗಳಲ್ಲಿ
ಮಿಕ್ಕಾದ ತಾಪತ್ರಯಂಗಳಲ್ಲಿ ಲಿಂಗಾಂಗಿ ಒಡಲಗೊಡುವನೆ?
ಇಂತಿವ ಕಂಡು ಮುಂಗಯ್ಯಾಭರಣಕ್ಕೆ ಮುಕುರದ ಹಂಗೇಕೆ?
ತಾ ಕಂಡು ನೋಡಿದ ಮತ್ತೆ ಇನ್ನಾರುವ ಕೇಳಲೇತಕ್ಕೆ?
ಇಂತಿವನರಿದು, ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವು ಹುಟ್ಟುಗೆಟ್ಟ. || ೩ ||

*

ಬಾಲಬೊಮ್ಮಣ್ಣ

೧೮೪೯
ಹಾವಿನ ಬಿಲದಲ್ಲಿ ಕೋಲನಿಕ್ಕಲಾಗಿ
ಕೋಲ ಬೆಂಬಳಿಯಲ್ಲಿ ಹಾಯ್ವ ಹಾವಿನ ತೆರದಂತೆ ನಿಶ್ಚಯ ವಸ್ತು.
ಇದನರಿವುತ್ತಲೆ ನಿಜವಸ್ತುವಿನ ಗುಣ ಮೋಹದಲ್ಲಿ ಅಚ್ಚೊತ್ತಿದಂತೆ
ಎರಡಳಿಯಬೇಕು, ವೀರಶೂರ ರಾಮೇಶ್ವರಲಿಂಗದಲ್ಲಿ. || ೧ ||

*

ಬಾಲಸಂಗಣ್ಣ

೧೮೫೦
ಬಂಗಾರಕ್ಕೆ ಒಳಹೊರಗುಂಟೆ?
ಕರ್ಪುರ ಚಂದನ ಅಗರು ಇರವಂತಿ ಶಾವಂತಿ
ಮೊಲ್ಲೆ ಮಲ್ಲಿಗೆ ಅದಿರ್ಗಂತಿ ಮರುಗ ದವನ
ಪಚ್ಚೆ ಮುಡಿವಾಳ ಕೇತಕಿ ಮುಂತಾದ
ಸಕಲ ಪತ್ರಪುಷ್ಪಗಳಿಗೆ ಒಳಹೊರಗುಂಟೆ?
ಅವರಂದವುಳ್ಳನ್ನಕ್ಕ ಸರ್ವಾಂಗದಲ್ಲಿ
ಗಂಧಪರಿಪೂರ್ಣಮಾಗಿರ್ಪುದದರಂತೆ
ಕಮಠೇಶ್ವರಲಿಂಗದಲ್ಲಿ ಉಭಯ ಮುಟ್ಟಳಿದ ಶರಣನಿರವು. ॥ ೧ ॥

*

ಬಾಹೂರ ಬೊಮ್ಮಣ್ಣ

೧೮೫೧
ಆವ ಸ್ಥಲ ಸಾಧಿಸಿ ಬಂದು ನಿಂದಡೂ
ಭಾವಶುದ್ಧಾತ್ಮವಾಗಿ ವೇಧಿಸುವುದೊಂದೆ ವಸ್ತು.
ಅದು ಭಕ್ತಿಯ ಬೇರು, ಸದಾಶ್ರದ್ಧೆಯ ಶಾಖೆ,
ವಿಶ್ವಾಸದ ಫಲ, ನಿಜತತ್ವದ ರಸ, ಸ್ವಯದ ಸ್ವಾದು.
ಅದು ಸಂಗನಬಸವಣ್ಣನಿಂದ ಬಂದ ಬೆಳೆ,
ಬ್ರಹ್ಮೇಶ್ವರಲಿಂಗದಲ್ಲಿ ಐಕ್ಯವಾಯಿತ್ತು. ॥ ೧ ॥

೧೮೫೨
ಕಾದ ಲೋಹದ ಮೇಲೆ ನೀರನೆರೆದಡೆ
ನೀರ ಕುಡಿದುದು ಕಾಹೊ, ಕಬ್ಬುನವೊ?
ಎಂಬುದನರಿತಲ್ಲಿ ಅಂಗಲಿಂಗಸಂಬಂಧಿ.
ಕ್ಷೀರ ಉಕ್ಕುವಲ್ಲಿ ಆರೈದು ನೀರನೆರೆದಡೆ
ಆ ನೀರ ಕುಡಿದುದು ಹಾಲೊ, ಹಂಚೊ?
ಎಂಬುದ ಕಡೆಗಾಣಿಸಿದಲ್ಲಿ
ಕ್ರೀ ಜ್ಞಾನ ಆತ್ಮಲಿಂಗಸಂಬಂಧಿ.
ಇಂತೀ ಉಭಯದ ಒಳಗನರಿತಲ್ಲಿ
ಕ್ರೀಗೆ ವರ್ತನೆ, ಅರಿವಿಂಗೆ ಕೂಟ.

ಈ ಗುಣ ಸಂಗನಬಸವಣ್ಣನ ಆಟ.
ಬ್ರಹ್ಮೇಶ್ವರಲಿಂಗದ ಒಳಗನರಿದವರಾಟ. || ೨ ||

೧೮೫೩

ಕಾಯ ತೊಟ್ಟಿನಲ್ಲಿ ನೀರ ಬಿಟ್ಟಡೆ
ಕಾಯಿ ನಿಂದುದುಂಟೆ ಬೇರೊಣಗಿದ ಮತ್ತೆ?
ಇಂತೀ ಮೂಲಭೇದದಿಂದ ಶಾಖೆ ಪರ್ಣ ಫಲವಲ್ಲದೆ
ಮೊದಲಿಗೆ ನಷ್ಟ ಲಾಭಕ್ಕೆ ದಿನವುಂಟೆ?
ಜ್ಞಾನಹೀನನು ಆವ ಸ್ಥಲವ ನೆಮ್ಮಿ ಮಾತನಾಡಿದಡೂ
ಷಡುಸ್ಥಲದಲ್ಲಿ ಭಾವಶುದ್ಧವಾಗಿಪ್ಪನೆ?
ಇದು ಕಾರಣದಲ್ಲಿ ಗುರುವಾಜ್ಞೆಯ ಮೀರದೆ
ಶಿವಲಿಂಗಪೂಜೆಯ ಮರೆಯದೆ
ಜಂಗಮಸೇವೆಯಲ್ಲಿ ಸನ್ನದ್ಧನಾಗಿ
ಆವುದಾನೊಂದು ವ್ರತವೆಂದು ಹಿಡಿದು
ಅದ್ವೈತವನರಿದೆನೆಂದು ಬಿಡದೆ
ನಿಂದ ನಿಂದ ಸ್ಥಲಕ್ಕೆ ನಿಬದ್ಧಿಯಾಗಿ ನಿಂದಲ್ಲಿಯೆ ಲಿಂಗಸಂಗ,
ಸಂಗನಬಸವಣ್ಣನ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವನರಿದುದು. || ೩ ||

೧೮೫೪

ಕೃಷಿಯಿಂದ ಮುಂದಣ ಫಲವ ಕಾಂಬಂತೆ,
ಅಸಿಕ[ಲೆ]ಯಿಂದ ಮುಂದಣ ಅರಿಬಲವ ಗೆಲುವಂತೆ,
ಸತ್ಕ್ರಿಮಾರ್ಗ ಮರ್ಮ ಧರ್ಮಂಗಳನರಿದು
ಮುಂದಣ ಅಸುರ ಕರ್ಮಂಗಳ ತಮ ಬಂಧಂಗಳನೀಸಿ
ಗೆಲುವುದಕ್ಕೆ ಇಷ್ಟಲ್ಲದಿಲ್ಲ.
ಇದು ವಸ್ತುಪೂಜಕನ ವಿಶ್ವಾಸ, ಸಂಗನಬಸವಣ್ಣನ ಸಂಬಂಧ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ವಿಶ್ವಾಸಭಿತ್ತಿ. || ೪ ||

೧೮೫೫

ಕೊರಡು ಕೊನರ್ವೊದಲ್ಲಿ, ಬರಡು ಹಯನಾದಲ್ಲಿ,
ಚಿತ್ರದ ಬೊಂಬೆ ನಿಜಕರ್ತೃರೂಪಾಗಿ ಬಂದಲ್ಲಿ
ಅವು ಹಾಹೆಯ ದೃಷ್ಟವೋ, ವಿಶ್ವಾಸಿಯ ಚಿತ್ತವೋ?
ಇದು ಭಕ್ತಿಯ ಹೊಲಬಿಗೆ ಮುಖ್ಯ.
ಸಂಗನಬಸವಣ್ಣನ ಸತ್ಯ, ಬ್ರಹ್ಮೇಶ್ವರಲಿಂಗವ ಕೂಡುವ ಕೃತ್ಯ. || ೫ ||

೧೮೫೬

ಗುರುನಿಷ್ಠೆ ಲಿಂಗನಿಷ್ಠೆ ಜಂಗಮನಿಷ್ಠೆ.
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗನಿಷ್ಠೆ
ವೀರಧೀರಂಗಲ್ಲದಾಗದು.
ಇದು ಸಂಗನಬಸವಣ್ಣನಿಂದ ಬಂದ ಸಂತತಿಗಲ್ಲದಾಗದು.
ಬ್ರಹ್ಮೇಶ್ವರಲಿಂಗವನರಿವುದಕ್ಕೆ
ತ್ರಿಗುಣಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ. || ೬ ||

೧೮೫೭

ಚಂದ್ರಕಾಂತದ ಶಿಲೆಯಲ್ಲಿ ಬಿಂದುವಿದ್ದಡೆ
ಹಿಂಡಿ ಹಿಳಿದಡೆ ಬಂದುದುಂಟೆ ಆ ಬಿಂದು?
[ಅ]ರುಣಶಿಲೆಯಲ್ಲಿ ಉರುಹಿ ನೋಡಲಿಕ್ಕೆ
ಉರಿದುದುಂಟೆ ಅನಲ?
ಅವು ತಮ್ಮ ಒಲವರದ ಸಾಮ್ಯಕ್ಕಲ್ಲದೆ
ಫಲಿಸುವುದಿಲ್ಲ.
ಇಂತೀ ತೆರದಂತೆ ಕ್ರೀ ಜ್ಞಾನ ಎಲ್ಲವ ಬಲ್ಲೆನೆಂದು
ಅಡ್ಡವಾಯ್ದು ಅಲ್ಲಲ್ಲಿ ನುಡಿದಡೆ
ನಿಜವಸ್ತು ಸಲ್ಲೀಲೆಯಲ್ಲಿಪ್ಪನೆ?
ಶ್ರದ್ಧೆ ಸನ್ಮಾರ್ಗಿಗಳಲ್ಲಿಯಲ್ಲದೆ ಗೆಲ್ಲಗೂಳಿಗಳಲ್ಲಿಯಿಲ್ಲ.
ಸಂಗನಬಸವಣ್ಣ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವು ಅವರಲ್ಲಿ ಇಲ್ಲವಾಗಿ. || ೭ ||

೧೮೫೮

ನಿಂದ ನೆಲೆಯ ನೀರಿನಂತೆ,
ಮರ ಶಿಲೆಯಲ್ಲಿ ಸಂಧಿಸಿ ನಿಂದ ಪಾವಕನಂತೆ,
ಕರಂಡದಲ್ಲಿ ಬಂಧಿಸಿ ನಿಂದ ಸುವಾಸನೆಯಂತೆ,
ಈ ಅಂಗದಲ್ಲಿ ನಿಂದ ನಿಜಲಿಂಗಾಂಗಸಂಗಸಂಬಂಧ.
ಈ ಗುಣ ಸಂಗನಬಸವಣ್ಣಂಗೆ ಸಂಬಂಧವಾಯಿತ್ತು.
ಬ್ರಹ್ಮೇಶ್ವರಲಿಂಗವು ಅವರಿಗೆ ಒಳಗಾದ. || ೮ ||

೧೮೫೯

ಬಾಯಿ ಮುಚ್ಚಿ ನಾಸಿಕದಲ್ಲಿ ಉಣಬಹುದೆ?
ನಾಸಿಕವ ಮುಚ್ಚಿ ಬಾಯಲ್ಲಿ ವಾಸಿಸಬಹುದೆ?
ಕಣ್ಣು ಮುಚ್ಚಿ ಕಿವಿಯಲ್ಲಿ ನೋಡಬಹುದೆ?
ಕಿವಿಯ ಮುಚ್ಚಿ ಕಣ್ಣಿನಲ್ಲಿ ಕೇಳಬಹುದೆ?

ಇಂತೀ ಇವಕೆ ಆತ್ಮ ಒಂದೆಂದಡೆ
ತಮ್ಮ ತಮ್ಮ ಸ್ವಸ್ಥಾನಂಗಳಲ್ಲಿ ಅಲ್ಲದೆ ದೃಷ್ಟವ ಕಾಣಬಾರದು.
ಆವ ಸ್ಥಲ ನೆಮ್ಮಿದಡೂ ಆ ಸ್ಥಲಕ್ಕೆ ವಿಶ್ವಾಸಬೇಕು.
ಇದು ಸಂಗನಬಸವಣ್ಣನ ಭಕ್ತಿ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ಇಕ್ಕಿದ ಭಿತ್ತಿ. || ೯ ||

೧೮೬೦
ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾರಚನೆಗಳಿಂದ
ಮಾತಿನ ಮಾಲೆಯ ಎಷ್ಟು ನುಡಿದಡೇನು?
ಹೆಂಡದಂತೆ, ಮೃತ ಘಟದಂತೆ, ಶಿಥಿಲ ಫಳದಂತೆ
ಅದಾರಿಗೆ ಯೋಗ್ಯ?
ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವು
ಅವರಲ್ಲಿ ನಿಲ್ಲನಾಗಿ. || ೧೦ ||

೧೮೬೧
ಹಾಲನಟ್ಟಿ ಹಾವ ಸಲಹಿದಲ್ಲಿ
ಅದು ತನ್ನಯ ಉಚಿತಕ್ಕೆ ಹಾಳಾಹಳವ ಬಿಟ್ಟಿತ್ತೆ?
ಕುಕ್ಕುಟನ ಮಾಳಿಗೆಯಲ್ಲಿ ಕೂಡಿ
ಪ್ರತಿಗೂಡಿನಲ್ಲಿ ಕೂಡಲಿಕ್ಕೆ
ತನ್ನ ತತ್ಕಾಲಕ್ಕೆ ಕೂಗುವುದು ಬಿಟ್ಟಿತ್ತೆ?
ಇಂತೀ ವರ್ತನದಂತೆ ಭಕ್ತಿಢಾಳಕರ ದರ್ಶನ,
ಚೋರಕರ, ವಾಚಾರಚನೆಗರ, ಬರಿಮಾತಿನ ಪೂಸರ,
ಈಶ್ವರಭಕ್ತರ ಪರಮೇಶ್ವರನ ರೂಪು ಎನಲಾರೆ,
ಮತ್ತೆ ನೀತಿಯ ವಿಶ್ವಾಸವ ಬಿಡಲಾರೆ.
ಈ ಭಕ್ತಿಯೆಂಬ ಪಾಶವ ಹರಿವುದಕ್ಕೆ
ನಿಹಿತವ ತೋರಯ್ಯಾ ಸಂಗನಬಸವಣ್ಣಾ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ಕುರುಹ ಹೇಳಣ್ಣಾ. || ೧೧ ||

*

ಬಿಬ್ಬಿ ಬಾಚಯ್ಯ

೧೮೬೨
ಅಗ್ನಿ ಲೋಹದಂತೆ, ಫಲ ರಸದಂತೆ
ಕಾಯ ಜೀವದ ಪರಿಯಂತೆ, ಅಂಗ ನೆರಳಿನಂತೆ

ಅಂಗಲಿಂಗಸಂಬಂಧವಾಗಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೧ ॥

೧೮೬೩
ಇಕ್ಷುದಂಡಕ್ಕೆ ಹಣ್ಣುಂಟೆ?
ಕಾಮಧೇನುವಿಂಗೆ ಕರುವುಂಟೆ?
ಕಲ್ಪತರುವಿಂಗೆ ತತ್ಕಾಲವುಂಟೆ?
ಸರ್ವಜ್ಞಂಗೆ ಇಷ್ಟಪ್ರಾಣಜ್ಞಾನಭಿನ್ನನಾಸ್ತಿ.
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯ ಸ್ಥಲ. ॥ ೨ ॥

೧೮೬೪
ಕರ್ದಮ ಕಮಲದಂತೆ, ವೇಣು ದ್ವಾರದಂತೆ,
ನೇಣು ಬಂಧದಂತೆ
ಬಿಡುವಿಲ್ಲದಿರಬೇಕು ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೩ ॥

೧೮೬೫
ಕಾಯಿ ಒಂದರಲ್ಲಿ ಶಾಖೆ ಹಲವಹ ತೆರದಂತೆ,
ಅರಿವು ಒಂದೆ, ರೂಪು ಭಿನ್ನಂಗಳಾಗಿ ತೋರುವ ತೆರದಂತೆ,
ಘಟದ ವಾರಿಯಲ್ಲಿ ತೋರುವ ಇಂದುವಿನಂತೆ,
ಅದೊಂದೆ ಭೇದ, ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೪ ॥

೧೮೬೬
ಕುರುಡ ಕನ್ನಡಿಯ ಪಿಡಿದಲ್ಲಿ ಅದೇನ ಒಡಗೂಡುವ?
ಬಧಿರಂಗೆ ಗಾಂಧರ್ವವಿರಲಿ ಸ್ವರಸಂಚವುಂಟೆ?
ಅರಿವುಹೀನಂಗೆ ಘಟಧರ್ಮದ ಪೂಜೆಯಲ್ಲದೆ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಅರಿವು ಸನ್ನದ್ಧವಾಗಬೇಕು. ॥ ೫ ॥

೧೮೬೭
ಕೈದುವ ಹಿಡಿದಾಡುವ ವಿಧಾಂತನ ಭಾವದಂತಿರಬೇಕು,
ಜನರ ನಡುವೆ ಆಡುವ ಅಹಿಯ ಮನದಂತಿರಬೇಕು,
ಕಣನ ಹೊಕ್ಕ ಭಟನ ಉಭಯಕರದಂತಿರಬೇಕು,
ಕ್ರೀ ಜ್ಞಾನಸಂಬಂಧ
ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ ಸ್ವಾನುಭಾವಿಯಾದ ಶರಣಂಗೆ. ॥ ೬ ॥

೧೮೬೮
ತಿಲದ ಮರೆಯ ತೈಲವ ಅರೆದು ಕಾಬಂತೆ,
ಚಂದನದ ಮರೆಯ ಗಂಧವ ಬಂಧಿಸಿ ಕಾಬಂತೆ,
ಶೃಂಗಿಯ ನಾದವ ಖಂಡಿಸಿ ಅರಿವಂತೆ
ಇಷ್ಟಜ್ಞಾನವನರಿವುದಕ್ಕೆ ಇದೇ ದೃಷ್ಟ.
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯ ಸ್ಥಲ. || ೭ ||

೧೮೬೯
ನಾದ ಭೇದ ಹೊರಹೊಮ್ಮಿ ಮತ್ತಲ್ಲಿಯೆ ಅಡಗುವಂತೆ,
ಚಿದ್ರೂಪ ವಿಲಾಸಿತ ಸಕಲರೂಪಿನಲ್ಲಿ ಹೊಂದಿದ್ದು
ಮತ್ತಲ್ಲಿಯೆ ಎಯ್ದುವಂತೆ,
ಇದಿರಿಟ್ಟು ಕಾಬುದು, ಕಾಣಿಸಿಕೊಂಬುದು
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಅಡಗಿತ್ತು. || ೮ ||

೧೮೭೦
ನಾಲಗೆಯ ಹಿಡಿದು ನುಡಿಯಲುಬಹುದೆ ಅಯ್ಯಾ?
ಕೈ ಸಿಕ್ಕಿದಲ್ಲಿ ಓಡಬಹುದೆ ಅಯ್ಯಾ?
ಕ್ರೀಯ ಮರೆದು ಅರಿವನರಿಯಬಹುದೆ ಅಯ್ಯಾ?
ಕುಸುಮವ ಬಿಟ್ಟು ಗಂಧವ ಮುಡಿಯಬಹುದೆ ಅಯ್ಯಾ?
ಇಂತೀ ಉಭಯವನರಿತಡೆ ಪ್ರಾಣಲಿಂಗಯೋಗ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೯ ||

೧೮೭೧
ನೀರು ಮಣ್ಣಿನಂತೆ, ಬೇರು ಸಾರದಂತೆ, ಗಂಧ ತರುವಿನಂತೆ
ಒಂದ ಬಿಟ್ಟೊಂದು ಹಿಂಗಿರವಾಗಿ,
ಅಂಗ ಲಿಂಗ ಪ್ರಾಣಯೋಗ ಸಂಬಂಧ ಸಂದಿಲ್ಲ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೧೦ ||

೧೮೭೨
ಪೃಥ್ವಿಯೆಂಬ ಅಂಗದ ಧರೆಯಲ್ಲಿ
ಅಪ್ಪುವೆಂಬ ಅಸು ಹರಿವುತ್ತಿರಲಾಗಿ
ಬಹುಚಿತ್ತವೆಂಬ ಜನರು ನೆರೆದು,
ಅರುವೆಂಬ ಹರುಗೋಲು ಕೆಟ್ಟರೆ,
ಕುರುಹಿನ ಜಲ್ಲೆಯ ಹಿಡಿದು
ಒತ್ತುವರಿಲ್ಲದೆ ತಡಿಯಲ್ಲಿ ಕೂಗುತ್ತೈದಾರೆ,
ಏಣಾಂಕಧರ ಸೋಮೇಶ್ವರಲಿಂಗವನರಿಯದೆ. || ೧೧ ||

೧೮೭೩
ಫಲ-ತರುವಿನಂತೆ, ತಿಲ-ಸಾರದಂತೆ,
ಮಧುರ-ದಂಡದಂತೆ, ಶರಧಿಯಲ್ಲಿರುವ ಲಘುವಿನಂತೆ
ಭಿನ್ನ ಭಾವವಿಲ್ಲದಿರಬೇಕು ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೧೨ ||

೧೮೭೪
ಬಲುಗಜಕ್ಕೆ ಬಾದಳದಲ್ಲಿ ಹಾದಿಯುಂಟೆ?
ವಿಕ್ರಮಪಕ್ಷಿ ಕಲ್ಲಿಗೆ ಸಿಕ್ಕುವುದುಂಟೆ?
ಬಲ್ಲವನೆಲ್ಲರಿಗೆ ಲಲ್ಲೆಯ ನುಡಿವನೆ?
ಬಲ್ಲವನ ಇರವು ಛಲ್ಲಿಯ ರೂಹಿನಂತೆ.
ಇದ ಬಲ್ಲವರಾರೊ, ಏಣಾಂಕಧರ ಸೋಮೇಶ್ವರಲಿಂಗ. || ೧೩ ||

೧೮೭೫
ಮೌನವಾದ ಮತ್ತೆ ಜಗಳವುಂಟೆ?
ಧ್ಯಾನವಾದ ಮತ್ತೆ ಪರಾಕುಂಟೆ?
ಸ್ಥಲ ಲೇಪವಾದ ಮತ್ತೆ ಭೇದದ ಭಿನ್ನವುಂಟೆ?
ಕ್ರೀ ಜ್ಞಾನ ಸಮಗಂಡಲ್ಲಿ, ಭಾವ ಶುದ್ಧವಾಯಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೧೪ ||

೧೮೭೬
ಸ್ವಾದವಿಲ್ಲದ ಹಣ್ಣು, ಸೌರಭವಿಲ್ಲದ ಕುಸುಮ,
ಸಾರವಿಲ್ಲದ ದ್ರವ, ಅದಾರಿಗೆ ಯೋಗ್ಯ?
ಅರಿವಿಲ್ಲದವನ ಇಷ್ಟದ ಬರಿಯ ಡಂಬಕದ ಪೂಜೆ
ಅಡಿಯಿಡಲಿಲ್ಲ, ಏಣಾಂಕಧರ ಸೋಮೇಶ್ವರಲಿಂಗಕ್ಕೆ. || ೧೫ ||

೧೮೭೭
ಹಿಂಡಿನೊಳಗಣ ಕುರುಬನ ತೋಳ ತಿಂಬಾಗ
ಕುರಿ ಮಾಣಿಸಬಲ್ಲವೆ?
ಕಟ್ಟೊಡೆಯ ಕೊಲುವಾಗ
ಮತ್ತೊಬ್ಬರು ಬೇಡಾ ಎನಲುಂಟೆ?
ಹುಟ್ಟಿಸಿದಾತ ಭವದ ಗೊತ್ತಿಂಗೆ ತಳ್ಳುವಡೆ
ನಮ್ಮ ಗೊತ್ತಿನ ಅರಿವೇನ ಮಾಡುವುದು?
ಉಭಯವು ನಿನ್ನಾಟ, ಏಣಾಂಕಧರ ಸೋಮೇಶ್ವರಲಿಂಗವೆ. || ೧೬ ||

*

ಬೊಕ್ಕಸದ ಚಿಕ್ಕಣ್ಣ

೧೮೭೮

ಗಾಂಧರ್ವಕ್ಕೆ ರಾಗದ ಹೆಸರಿಟ್ಟಂತೆ,
ಸ್ವರವೊಂದು, ಸಂಚಾರದ ಪರಿ ಬಣ್ಣ ಬೇರಾದಂತೆ,
ಗೋವರ್ಣ ಹಲವು, ಕ್ಷೀರ ಏಕವರ್ಣವಾದಂತೆ,
ಕಾಯಕ ಹಲವಾದಲ್ಲಿ
ಮಾಡುವ ಮಾಟ, ಶರಣರೊಳಗಾಟ,
ಲಿಂಗವ ಕೂಡುವ ಕೂಟ ಏಕವಾಗಿರಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿವುದಕ್ಕೆ. ॥ ೧ ॥

೧೮೭೯

ಶೀತವುಳ್ಳನ್ನಕ್ಕ ಉಷ್ಣವ ಪ್ರತಿಪಾದಿಸಬೇಕು.
ಉಷ್ಣವುಳ್ಳನ್ನಕ್ಕ ಶೀತವ ಪ್ರತಿಪಾದಿಸಬೇಕು.
ದಿನದಲ್ಲಿ ಎದ್ದು, ರಾತ್ರಿಯಲ್ಲಿ ಒರಗುವನ್ನಕ್ಕರ
ಅದ್ವೈತ ಅಸತ್ಯ ನೋಡಾ.
ಇದು ಕಾರಣ, ಕ್ರಿಯೆ ಮರೆಯಲಿಲ್ಲ,
ಅರಿವು ಶೂನ್ಯವೆಂದು ಬಿಡಲಿಲ್ಲ.
ಅದು ಶಿಲೆಯ ಮರೆಯ ಪಾವಕ, ತಿಲದೊಳಗಣ ತೈಲ.
ಅವರ ಒಲವರದಲ್ಲಿ ಕುಲವ ಕಾಣಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿವುದಕ್ಕೆ. ॥ ೨ ॥

*

ಭೋಗಣ್ಣ

೧೮೮೦

ಅಯ್ಯಾ ನಿಮ್ಮ ಶರಣರ ಇರವು,
ಉರಿಯ ಕೈಯ ದೀವಿಗೆಯಂತೆ ಇದ್ದಿತ್ತಯ್ಯಾ.
ನಿಮ್ಮ ಶರಣರ ಸುಳುಹು,
ಪವನನ ಕೈಯ ಪರಿಮಳದಂತೆ ಇದ್ದಿತ್ತಯ್ಯಾ.
ಹುತಾಶನವೆಂಬ ಗದ್ದುಗೆಯ ಮೇಲೆ
ಕರ್ಪುರದರಸುವಂ ಕುಳ್ಳಿರಿಸಲು,
ಅರಸು ಗದ್ದುಗೆಯ ನುಂಗಿದನೊ?
ಗದ್ದುಗೆ ಅರಸನ ನುಂಗಿತ್ತೊ? ಎಂಬ ನ್ಯಾಯದಲ್ಲಿ

ಕಂಗಳ ಗದ್ದುಗೆಯ ಮೇಲೆ
ಸದ್ಗುರುಲಿಂಗವೆಂಬ ಅರಸನಂ ಕುಳ್ಳಿರಿಸಲು,
ಆ ಲಿಂಗ ಕಂಗಳ ನುಂಗಿದನೊ?
ಕಂಗಳು ಲಿಂಗವ ನುಂಗಿ[ದವೊ]?
ಈ ಉಭಯವ ನುಂಗಿದ ಬೆಡಗು ಬಿನ್ನಾಣವ,
ನಿಜಗುರು ಭೋಗೇಶ್ವರಾ, ನಿಮ್ಮ ಶರಣರಲ್ಲಿ ಕಾಣಬಹುದು. ॥ ೧ ॥

೧೮೮೧
ಪಕ್ಕ ಮುರಿದ ಹಕ್ಕಿಯಂತೆ,
ಸಾಸಿವೆಯನೊಕ್ಕಿದ ಎತ್ತಿನಂತೆ,
ಬೆಳಗ ಕಂಡು ಮೈಮರೆದ ಹುಲ್ಲೆಯಂತೆ,
ಅಳಿಕುಲಕ್ಕೆ ವಿಷವಾದ ಸಂಪಗೆಯ ಪುಷ್ಪದಂತೆ,
ಎನ್ನ ತನು ಮನ ಕುಲಕ್ಕೆ
ನಿಮ್ಮ ನೆನಹೆಂಬ ಜ್ವಾಲೆ ತಾಗಿ ಸತ್ತೆನಯ್ಯಾ ಸಾಯದಂತೆ.
ಹುಲ್ಲುಸರವಿಯಲ್ಲಿ ಕಟ್ಟಿದ ಕಿಚ್ಚಿನಂತೆ,
ಬೇಯದಂತೆ ಬೆಂದೆನಾಗಿ,
ನಿಜುಗುರು ಭೋಗೇಶ್ವರಾ, ನಿಮ್ಮ ಸಂಗಸುಖವದೇಕೊ? ॥ ೨ ॥

*

ಮಡಿವಾಳ ಮಾಚಿದೇವ

೧೮೮೨
ಅಂಗ ಲಿಂಗಸಂಬಂಧವಾಗಬೇಕೆಂಬ
ಭಂಗಿತರ ಮಾತ ಕೇಳಲಾಗದು.
ಅಂಗ ಲಿಂಗಸಂಬಂಧ ಕಾರಣವೇನು
ಮನ ಲಿಂಗಸಂಬಂಧವಾಗದನ್ನಕ್ಕ?
ಮನವು ಮಹದಲ್ಲಿ ನಿಂದ ಬಳಿಕ
ಲಿಂಗಸಂಬಂಧವೇನು ಹೇಳಾ, ಕಲಿದೇವರ ದೇವ. ॥ ೧ ॥

೧೮೮೩
ಅಂಧಕಾರದ ದೆಸೆಯಿಂದ ಚಂದ್ರನ ಪ್ರಭೆಯಾಯಿತು.
ನಿಂದಕರ ನುಡಿಯ ಏಡಿಸಲ್ಕೆ ಶಿವಭಕ್ತಿಯ ಪ್ರಭೆಯಾಯಿತು.
ಅಹುದೆಂದಡೆ ಅಲ್ಲವೆಂದತಿಗಳೆವರ ಕುತರ್ಕ ಶಾಸ್ತ್ರದಿಂದ
ಯಮಗತಿಗರ ಕೂಡಿ ನಾನಾ ಜನ್ಮಕ್ಕೇರದೆ,

ಶಿವಾಚಾರದ ಪಥವ ತೋರಿಸಯ್ಯಾ
ಕಲಿದೇವರ ದೇವ. || ೨ ||

೧೮೮೪

ಅರಿವನರಿದೆನೆಂದು ಕ್ರೀಯ ಬಿಡಬಾರದು.
ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೆ?
ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನ[ಕೆಡೆಯುಂ]ಟೆ?
ನೀ ಮಾಡುವ ಮಾಟ, ಶಿವಪೂಜೆಯ ನೋಟ ಭಾವವಿರಬೇಕು.
ಅದು ಕಲಿದೇವರ ದೇವಯ್ಯನ ಕೂಟ, ಚಂದಯ್ಯ. || ೩ ||

೧೮೮೫

ಆ ಮಹಾಲಿಂಗವಂತನೊಬ್ಬನುಂಡನೆನಬೇಡ.
ಆತನ ದಂತಂಗಳೆಲ್ಲ ಪಂತಿಕಾರರು.
ಆತನ ನಡುವಿಪ್ಪ ಕಾಂತಿರೂಪ ನೀನು ಕಾಣಾ,
ಕಲಿದೇವಯ್ಯ. || ೪ ||

೧೮೮೬

ಆಶಾಪಾಶವ ಬಿಟ್ಟಡೇನಯ್ಯಾ
ರೋಷ ಪಾಶವ ಬಿಡದನ್ನಕ್ಕರ?
ರೋಷ ಪಾಶವ ಬಿಟ್ಟಡೇನಯ್ಯಾ
ಮಾಯಾಪಾಶ ಬಿಡದನ್ನಕ್ಕರ?
ಇಂತೀ ತ್ರಿವಿಧಪಾಶವ ಹರಿದು
ನಿಜನಿಂದ ಲಿಂಗೈಕ್ಯರ ತೋರಾ
ಕಲಿದೇವರ ದೇವಾ. || ೫ ||

೧೮೮೭

ಇರಿಯಲಾಗದು ಪ್ರಾಣಿಯ.
ಜರೆಯಲಾಗದು ಹೆರರ.
ನೆರನೆತ್ತಿ ನುಡಿಯಲಾಗದಾರುವನು.
ಹೆರರ ವಧುವ ಕಂಡು ಮನ ಮರುಗದಿರ್ದಡೆ,
ಶಿವಲೋಕ [ಕರ]ತಳಾಮಳಕವೆಂದ
ಕಲಿದೇವರ ದೇವ. || ೬ ||

೧೮೮೮

ಇರುಳು ಹಗಲೆಂದರಿಯದ ಅಂಧಕನ ಕೈಯಲ್ಲಿ
ಕೈದೀವಿಗೆ ಇರ್ದಡೇನು, ಪಥವ ನೋಡಿ ನಡೆಯಬಲ್ಲನೆ?

ಗುರುಚರಪರವನರಿಯದ ದುರಾಚಾರಿಯ ಕೈಯಲ್ಲಿ
ಲಿಂಗವಿರ್ದಡೇನು, ಅವ ಸತ್ಯಸದಾಚಾರವನುಳ್ಳ
ಭಕ್ತಿವಂತರಿಗೆ ಸರಿಯಹನೆ?
ಅವನು ಶಿವಭಕ್ತನಾಗಿ ಕೆಟ್ಟುಹೋದ ತೆರನೆಂತೆಂದಡೆ :
ಭಕ್ತರ ಗೃಹದಲ್ಲಿ ತುಡುಗ ತಿಂದ ನಾಯಿ,
ಮರಳಿ ಮತ್ತೆ ಹೊಲಸಿಂಗೆರಗಿದ ತೆರನಾಯಿತ್ತೆಂದ
ಕಲಿದೇವಯ್ಯ. || ೭ ||

೧೮೮೯
ಉಂಡಡೆ ಭೂತವೆಂಬರು,
ಉಣ್ಣದಿರ್ದಡೆ ಚಕೋರಿಯೆಂಬರು.
ಊರೊಳಗಿರ್ದಡೆ ಸಂಸಾರಿಕನೆಂಬರು,
ಅಡವಿಯೊಳಗಿರ್ದಡೆ ಮರ್ಕಟವೆಂಬರು.
ಮಾತನಾಡಿದಡೆ ಪಾಪಕರ್ಮಿಯೆಂಬರು,
ಮಾತನಾಡದಿರ್ದಡೆ ಮುಸುಕರ್ಮಿಯೆಂಬರು.
ಮಲಗದಿರ್ದಡೆ ಚೋರನೆಂಬರು,
ಮಲಗಿರ್ದಡೆ ಜಡದೇಹಿಯೆಂಬರು.
ಇಂತೀ ವಸುಧೆಯೊಳಗೆ ಎಂಟುವಿಧ ಕಳೆಯಲು ವಶವಲ್ಲ ಕಾಣಾ,
ಕಲಿದೇವರ ದೇವ. || ೮ ||

೧೮೯೦
ಎಲ್ಲೆಲ್ಲಿಯ ಪ್ರಾಣಿಯ ಕೊಲ್ಲದಿಹುದೆ ಧರ್ಮ,
ಒಲ್ಲದಿಪ್ಪುದೇ ತಪ.
ಪರವಧುವಿನ ಆಸೆ, ತನ್ನ ಮನದಲ್ಲಿ ಇಲ್ಲದಿರ್ದಡೆ,
ದೇವ ತಾನಲ್ಲಿಯೇ ಎಂದ, ಕಲಿದೇವಯ್ಯ. || ೯ ||

೧೮೯೧
ಗರಿಯ ಕ[ಟ್ಟ]ದ ಕೋಲು ಗುರಿಯ ತಾಗಬಲ್ಲುದೆ?
ಗುರು ಲಿಂಗ ಜಂಗಮದ ಪಾದತೀರ್ಥ ಪ್ರಸಾದವನರಿಯದೆ,
ಪರಮನ ಕಂಡೆನೆಂಬ ದುರಾಚಾರಿಗಳ ಮುಖವ
ನೋಡಲಾಗದೆಂದಾತ, ನಮ್ಮ ಕಲಿದೇವರ ದೇವಯ್ಯ. || ೧೦ ||

೧೮೯೨
ಪರಸ್ತ್ರೀಯರ ನೋಡುವ ಕಣ್ಣಲ್ಲಿ
ಲಿಂಗವ ನೋಡಿದ ಅವರಿಗೆ ಲಿಂಗವಿಲ್ಲ.
ಪರಬ್ರಹ್ಮವ ನುಡಿವ ನಾಲಗೆಯಲ್ಲಿ

ಪರಸ್ತ್ರೀಯರ ಅಧರಪಾನವ ಕೊಂಡಡೆ
ಪ್ರಸಾದಕ್ಕೆ ದೂರ.
ಘನಲಿಂಗವ ಪೂಜಿಸುವ ಕೈಯಲ್ಲಿ
ಪರಸ್ತ್ರೀಯರ ತೋಳು ಕುಚವ ಮುಟ್ಟಿದಡೆ
ತಾ ಮಾಡುವ ಪೂಜೆ ನಿಷ್ಫಲ.
ಇದನರಿದಡೆ ವ್ರತ.
ಅಲ್ಲದಿರ್ದಡೆ, ಸುರೆಯ ಒಳಗೆ ತುಂಬಿ,
ಹೊರಗೆ ಬೂದಿಯ ಪೂಸಿದಂತಾಯಿತ್ತು, ಕಲಿದೇವಾ. ॥ ೧೧ ॥

೧೮೯೩
ಪೃಥ್ವಿಯ ಮೇಲಣ ಶಿಲೆಯ ತಂದು, ಪ್ರತಿಮೆಗಳ ಮಾ[ಡೆ],
ಕಲ್ಲುಕುಟಿಗನಲ್ಲಿಯೆ ಗುರುವಾದ, ಕಲ್ಲು ಶಿಷ್ಯನಾದ.
ಹಿಂದಣಾದಿಯನರಿಯದ ಗುರು,
ಮುಂದೆ ವೇಧಿಸಲಿಲ್ಲದ, ಉಪದೇಶವ ಕೊಳ್ಳಲರಿಯದ ಶಿಷ್ಯ,
ಈ ಎರಡೂ ಕಲ್ಲುಕುಟಿಗನ ಕಲ್ಲಿನಂತೆ ಕಾಣಾ,
ಕಲಿದೇವಯ್ಯ. ॥ ೧೨ ॥

೧೮೯೪
ಭಕ್ತ ಭಕ್ತರೆಂದು ನುಡಿವಿರಿ,
ಭಕ್ತರೆಂತಾದಿರೊ ನೀವು?
ನಿತ್ಯ ನಿರಂಜನಲಿಂಗ ಹಸ್ತದೊಳಗಿದ್ದು,
ಪೃಥ್ವಿಯ ಮೇಲಣ ಪ್ರತಿಷ್ಠೆಗೆರಗುವ
ವ್ಯರ್ಥರನೇನೆಂಬೆನಯ್ಯಾ, ಕಲಿದೇವಯ್ಯ? ॥ ೧೩ ॥

೧೮೯೫
ವಚನದ ರಚನೆಯ ನುಡಿವ ಬಯಲುರಂಜಕರೆಲ್ಲ
ಭಕ್ತರಪ್ಪರೆ ಅಯ್ಯಾ?
ವಚನ ತನ್ನಂತಿರದು, ತಾನು ವಚನದಂತಿರ.
ಅದೆಂತೆಂದಡೆ :
ತನುಮನಧನವನೆಲ್ಲ ಹಿಂದಿಟ್ಟುಕೊಂಡು,
ಮಾತಿನ ಬಣಬೆಯ ಮುಂದಿಟ್ಟುಕೊಂಡು,
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ,
ಆ ತೆರನಾಯಿತೆಂದ ಕಲಿದೇವರದೇವಯ್ಯ. ॥ ೧೪ ॥

೧೮೯೬
ವೇದ ವಿಪ್ರರ ಬೋಧೆ,
ಶಾಸ್ತ್ರ ಸಂತೆಯ ಮಾತು,

ಪುರಾಣ ಪುಂಡರ ಗೋಷ್ಠಿ,
ಆಗಮ ಅನೃತದ ನುಡಿ,
ತರ್ಕ ವ್ಯಾಕರಣ ಕವಿತ್ವ ಪ್ರೌಢಿ,
ಇಂತಿವರಂಗದ ಮೇಲೆ ಲಿಂಗವಿಲ್ಲದ ಭಾಷೆ.
ಇದು ಕಾರಣ,
ತನ್ನೊಳಗನರಿದ ಅನುಭಾವಿಯಿಂದ ಘನವಿಲ್ಲೆಂದ,
ಕಲಿದೇವ. ॥ ೧೫ ॥

೧೮೯೭
ಸತ್ಯಸದಾಚಾರ ಭಕ್ತಿಯನರಿಯದೆ
ಬರಿದೆ ಭಕ್ತರೆಂಬುದ ನೋಡಾ.
ಮತ್ತೆ ಮರಳಿ ಮನೆದೈವ ಕುಲದೈವಕೆರಗುತ್ತ
ಭಕ್ತರೆಂದು ನುಡಿದಡೆ ನರಕದಲ್ಲಿ ಮೆಟ್ಟುವೆ[ನೆಂದ
ಕಲಿದೇವಯ್ಯ. ॥ ೧೬ ॥

೧೮೯೮
ಸಿಂಹದ ಮುಂದೆ ಜಿಂಕೆಯ ಜಿಗಿದಾಟವೆ?
ಪ್ರಳಯಾಗ್ನಿಯ ಮುಂದೆ ಪತಂಗದಾಟವೆ?
ಸೂರ್ಯನ ಮುಂದೆ ಕೀಟದಾಟವೆ?
ನಿಮ್ಮ ಮುಂದೆ ಎನ್ನಾಟವೆ, ಕಲಿದೇವರ ದೇವಾ? ॥ ೧೭ ॥

೧೮೯೯
ಹುಟ್ಟಿದ ಕಲ್ಲಿಗೆ, ನೆಟ್ಟ ಪ್ರತಿಷ್ಠೆಗೆ
ಕಟ್ಟಿದ ಲಿಂಗವಡಿಯಾಗಿ ಬೀಳುವ
ಲೊಟ್ಟಗುಡಿಹಿಗಳನೇನೆಂಬೆನಯ್ಯಾ, ಕಲಿದೇವರ ದೇವಾ. ॥ ೧೮ ॥

೧೯೦೦
ಹೆಣ್ಣಿಗಾಗಿ ಸತ್ತಡೆ ಜನನ ಮರಣ.
ಹೊನ್ನಿಗಾಗಿ ಸತ್ತಡೆ ಜನನ ಮರಣ.
ಮಣ್ಣಿಗಾಗಿ ಸತ್ತಡೆ ಜನನ ಮರಣ.
ಪರಧನ ಪರಸತಿಗಾಗಿ ಸತ್ತಡೆ ಜನನ ಮರಣ.
ಶಿವಭಕ್ತನಾಗಿ ಏಕಲಿಂಗನಿಷ್ಠಾ ಸಂಪನ್ನನಾಗಿ,
ಶಿವಾಚಾರಕ್ಕಾಗಿ ಸತ್ತಡೆ ಮುಕ್ತಿಯೆಂದ ಕಲಿದೇವಯ್ಯ. ॥ ೧೯ ॥

*

ಮಡಿವಾಳ ಮಾಚಿದೇವನ ಸಮಯಾಚಾರದ ಮಲ್ಲಿಕಾರ್ಜುನ

೧೯೦೧
ಕರಸ್ಥಲದ ಲಿಂಗವ ಬಿಟ್ಟು,
ಧರೆಯ ಮೇಲಣ ಪ್ರತುಮೆಗೆರಗುವ
ನರಕಿ ನಾಯಿಗಳನೇನೆಂಬೆನಯ್ಯಾ,
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಾ. || ೧ ||

೧೯೦೨
ಸತಿಯ ನೋಡಿ ಸಂತೋಷವ ಮಾಡಿ,
ಸುತರ ನೋಡಿ ಸುಮ್ಮಾನವ ಮಾಡಿ,
ಮತಿಯ ಹೆಚ್ಚುವಿನಿಂದ ಮೈಮರೆದೊರಗಿ,
ಸತಿಸುತರೆಂಬ ಸಂಸಾರದಲ್ಲಿ ಮತಿಗೆಟ್ಟು,
ಮರುಳಾದುದನೇನೆಂಬೆ,
ಎನ್ನ ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಾ. || ೨ ||

*

ಮಧುವಯ್ಯ

೧೯೦೩
ಓಗರ ಹಸಿದು ಆಪ್ಯಾಯನವನುಂಡುದನಾರೂ ಅರಿಯರು.
ನೀರು ಬಾಯಾರಿ ಭೂಮಿಯ ಕುಡಿದುದನಾರೂ ಅರಿಯರು.
ದೇವರು ರೂಪಾಗಿ ಸಕಲರೊಳಗೆ ಗತಿಗೆಡುವುದನಾರೂ ಅರಿಯರು.
ವಿಪರೀತ ಕುರುಹಾಯಿತ್ತು,
ಅರ್ಕೇಶ್ವರಲಿಂಗನ ಗೊತ್ತಿಗೆ ಬಂದ ಕಾರಣ. || ೧ ||

೧೯೦೪
ಕುಕ್ಕೊಂಬಿನ ಕಾಗೆಯಂತೆ
ಜೀವ ಎತ್ತ ಹಂಬಲಿಸಿದಡೂ
ಆಸೆಯೆಂಬ ಗೊತ್ತಿಗೆ ಬಹವರೆಲ್ಲರು ನಿಶ್ಚಯವನರಿಯಬಲ್ಲರೆ?
ತುತ್ತು ಕುತ್ತಿಗಾಗಿ ವೇಷವ ತೊಟ್ಟಿಹ
ಚಿತ್ತಶುದ್ಧಾತ್ಮವಿಲ್ಲದವರ ಅರ್ಕೇಶ್ವರಲಿಂಗನೊಪ್ಪನವರ. || ೨ ||

೧೯೦೫
ತನು ನಿರ್ವಾಣ - ಮನ ಸಂಸಾರ.
ಮಾತು ಬ್ರಹ್ಮ - ನೀತಿ ಅಧಮ.
ಅದೇತರ ಅರಿವು?
ಘಾತಕನ ಕೈಯ ಕತ್ತಿಯಂತೆ,
ಇದು ನಿಹಿತವಲ್ಲ, ಅರ್ಕೇಶ್ವರಲಿಂಗವನರಿವುದಕ್ಕೆ. ॥ ೩ ॥

೧೯೦೬
ಲಿಂಗವನರಿತು ಅಂಗ ಲಯವಾಗಬೇಕು.
ಅಂಕುರ ತೋರಿ ಬೀಜ ನಷ್ಟವಾದಂತೆ,
ಸ್ವಯಂಭು ತೋರಿ ಪ್ರತಿಷ್ಠೆ ನಷ್ಟವಾದಂತೆ,
ಅರ್ಕೇಶ್ವರಲಿಂಗವ ಅರಿದ ಗೊತ್ತಿನ ಒಲುಮೆ. ॥ ೪ ॥

*

ಮನಸಂದ ಮಾರಿತಂದೆ

೧೯೦೭
ಇಷ್ಟಲಿಂಗ, ಪ್ರಾಣಲಿಂಗವೆಂದು
ಬೇರೊಂದು ಕಟ್ಟಣೆಯ ಕಟ್ಟಬಹುದೆ?
ವೃಕ್ಷ ಬೀಜದಲ್ಲಿ ಅಡಗಿ,
ಬೀಜ ವೃಕ್ಷವ ನುಂಗಿಪ್ಪ ತೆರನಂತೆ,
ಇಷ್ಟ ಪ್ರಾಣ ಬೆಚ್ಚಂತಿರಬೇಕು.
ಅಪ್ಪು ಮುತ್ತಾದಂತೆ, ಉಭಯದ ಗೊತ್ತು ತಾನೆ,
ಮನಸಂದಿತ್ತು ಮಾರೇಶ್ವರಾ. ॥ ೧ ॥

೧೯೦೮
ಕಲ್ಲು ರತಿಯಿಂದ ರತ್ನವಾದಂತೆ,
ಉದಕ ಸಾರವರತು ಲವಣವಾದಂತೆ,
ವಾರಿ ವಾಯುವ ಸಂಗದಿಂದ ಬಲಿದಂತೆ,
ಪೂರ್ವವನಳಿದು ಪುನರ್ಜಾತನಾದ ಮತ್ತೆ,
ಎನ್ನವರೆಂದು ಬೆರಸಿದಲ್ಲಿ,
ಆ ಗುಣ ಆಚಾರಕ್ಕೆ ಹೊರಗಾಯಿತ್ತು.
ಮಾತೆ ಪಿತ ಸಹೋದರ ಬಂಧುಗಳೆಂದು
ಮನ ಕೂರ್ತು ಬೆರಸಿದಲ್ಲಿ,

ಆಚಾರಕ್ಕೆ ಭ್ರಷ್ಟ, ವಿಚಾರಕ್ಕೆ ದೂರ,
ಪರಮಾರ್ಥಕ್ಕೆ ಸಲ್ಲ.
ಇವನೆಲ್ಲವ ಕಳೆದುಳಿದು ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೨ ||

೧೯೦೯
ಕಾಯವಿಡಿದಿಹನ್ನಬರ ಶಿವಭಕ್ತಂಗೆ ಕಾಯಕವೆ ಕೈಲಾಸ.
ಕಾಯಕವಿಲ್ಲದವನ ಅರಿವು ವಾಯವಾಯಿತ್ತು.
ಅಡುಗೂಳಿಯ ಮನೆಯಂತೆ ಗಡಿಗೆಯ ಗಂಜಿಯಾಸೆಬೇಡ.
ಕೊಡುವರೆಂದೊಬ್ಬರ ಮನೆಗೆ ಅಡಿಗಡಿಗೆ ಹೋಗಬೇಡ.
ಇಂತಿವರಡಿಯ ಕಾಬುದಕ್ಕೆ ಮೊದಲೆ ಅಡಗಿದೆಯಲ್ಲಾ,
ಮನಸಂದಿತ್ತು ಮಾರೇಶ್ವರಾ. || ೩ ||

೧೯೧೦
ಖ್ಯಾತಿಲಾಭದ ಪೂಜೆ, ದ್ರವ್ಯವ ಕೆಡಿಸುವುದಕ್ಕೆ ಮೊದಲಾಯಿತ್ತು.
ವೈರಾಗ್ಯದ ವಿರಕ್ತಿ ಮೂರಕ್ಕೆ ಒಡಲುಗೊಳಿಸಿತ್ತು.
ವಾಗದ್ವೈತದ ಕೇಣಸರ ಗೆಲ್ಲ ಸೋಲಕ್ಕೆ ಕಲ್ಲೆದೆಯ ಮಾಡಿತ್ತು.
ಇವೆಲ್ಲವ ತಿಳಿದು, ಇಲ್ಲ ಉಂಟು ಎಂಬಲ್ಲಿಯೆ
ಮನಸಂದಿತ್ತು ಮಾರೇಶ್ವರಾ. || ೪ ||

೧೯೧೧
ಗರಳವ ಬೈಚಿಟ್ಟುಕೊಂಡಿಪ್ಪ ಉರಗನಂತೆ,
ಫಲವನಿಂಬಿಟ್ಟುಕೊಂಡಿಹ ತರುವಿನಂತೆ,
ನಿಧಾನವ ಮರೆಸಿಕೊಂಡಿಪ್ಪ ಧರೆಯಂತೆ,
ಗಂಧವನಿಂಬಿಟ್ಟ ಚಂದನದಂತೆ,
ಇವರಂಗವಾವ ತೆರದಲ್ಲಿ ನಿಂದಿತ್ತು?
ಸಂಗ ದುಸ್ಸಂಗವನರಿದು ಸಲೆ ಸಂದುದು
ನಿಂದುದು, ಮನಸಂದುದು ಮಾರೇಶ್ವರಾ. || ೫ ||

೧೯೧೨
ಗೋವಧೆಯ ಮಾಡಿ, ಗೋದಾನವ ಮಾಡಿದಡೆ,
ಕೊಂದ ಕೊಲೆಗೂ ಮಾಡಿದ ದಾನಕ್ಕೂ ಸರಿಯೆ?
ಆಚಾರಕ್ಕೂ ಅನಾಚಾರಕ್ಕೂ ಪಡಿಪುಚ್ಚವುಂಟೆ?
ನೇಮಕ್ಕೆ ಹಾನಿಯಾದಲ್ಲಿ
ಭಂಗಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. || ೬ ||

೧೯೧೩
ಭಕ್ತರು ನಾವೆಂದು ನಿತ್ಯನೇಮವ ಮಾಡಿಕೊಂಡೆವೆಂದು
ಮನೆಮನೆಯ ಬಾಗಿಲ ತಪ್ಪಲ ಕಾಯಲೇತಕ್ಕೆ?
ಇದು ಶಿವಭಕ್ತರಿಗೆ ಒಪ್ಪುವುದೆ?
ಇಂತೀ ವ್ರತನೇಮವ ಮಾರಿ,
ಘಟವ ಹೊರೆವ ಕುಟಿಲರಿಗಂಜಿ,
ಮುನ್ನವೆ ಮನಸಂದಿತ್ತು ಮಾರೇಶ್ವರಾ. || ೭ ||

೧೯೧೪
ಮೊದಲಿಗೆ ಮರ ನೀರನೆರೆದಡೆ ಎಳಕುವುದಲ್ಲದೆ,
ಕಡೆ ಕಿಗ್ಗೊಂಬಿಗೆರೆದವರುಂಟೆ?
ಅರಿದು ಪೂಜಿಸುವಲ್ಲಿ ಹರಿವುದು ಮನಪಾಶ.
ಅರಿದು ಅರ್ಪಿಸುವಲ್ಲಿ ಲಿಂಗದ ಒಡಲೆಲ್ಲ ತೃಪ್ತಿ.
ತನ್ನನರಿದಲ್ಲಿ ಸಕಲಜೀವವೆಲ್ಲ ಮುಕ್ತಿ.
ತನ್ನ ಸುಖ ದುಃಖ ಇದಿರಿಗೂ ಸರಿಯೆಂದಲ್ಲಿ,
ಅನ್ಯಭಿನ್ನವಿಲ್ಲ, ಮನಸಂದಿತ್ತು ಮಾರೇಶ್ವರಾ. || ೮ ||

೧೯೧೫
ರಾಜನ ಭಕ್ತಿ ತಾಮಸದಿಂದ ಕೆಟ್ಟಿತ್ತು.
ಪಂಡಿತನ ಯುಕ್ತಿ ಖಂಡನವಿಲ್ಲದೆ ನಿಂದಿತ್ತು.
ಸುಸಂಗಿಯ ನಿರಂಗ ದುಸ್ಸಂಗದಿಂದ ಕೆಟ್ಟಿತ್ತು.
ಪತಂಗನಂತಾಗದೆ ಮುನ್ನವೆ ನಿನ್ನ ನೀನರಿ.
ಅರಿದಡೆ ನಿನಗಿದಿರಿಲ್ಲ, ಮನಸಂದಿತ್ತು ಮಾರೇಶ್ವರಾ. || ೯ ||

೧೯೧೬
ವಾಚಕ ಚಪಳತ್ವದಿಂದ ಮಾತನಾಡಿದಡೇನು,
ತ್ರಿವಿಧದ ಆಸೆ ಬಿಡದನ್ನಕ್ಕ?
ರೋಷದ ನಾಶ ಕೀಳದನ್ನಕ್ಕ?
ಮಾತೆಲ್ಲವೂ ಮೂರರಾಸೆಯಲ್ಲಿ ಸಿಕ್ಕಿ,
ರೋಷದ ಪಾಶದಲ್ಲಿ ಕಟ್ಟುವಡೆದು,
ಮತ್ತೇತರ ಭಾಷೆಯ ನೀತಿ?
ಹೋತಿನ ಕೊರಳ ಮೊಲೆಯ ಆಸೆ ಮಾಡಿ ಉಂಡಡೆ,
ಅಲ್ಲೇತರ ಸುಖ?
ಮತ್ತೀ ಗುಣದಾಸೆ ಹರಿದು ನಿಂದಡೆ,
ಮನಸಂದಿತ್ತು ಮಾರೇಶ್ವರಾ. || ೧೦ ||

೧೯೧೭
ವೇದವ ಕಲಿತಲ್ಲಿ ಪಾಠಕನಲ್ಲದೆ ಜ್ಞಾನಿಯಲ್ಲ, ನಿಲ್ಲು.
ಶಾಸ್ತ್ರ ಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ, ನಿಲ್ಲು.
ವ್ರತ ನೇಮ ಕೃತ್ಯ ಪೂಜಕನಾ ದಡೇನು?
ದಿವ್ಯಜ್ಞಾನದ ಠಾವನರಿಯಬೇಕು.
ಈ ಭೇದಂಗಳ ತಿಳಿದರಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೧೧ ||

೧೯೧೮
ಹರಿವ ಹಾವು, ಉರಿವ ಕಿಚ್ಚೆಂದಡೆ
ಮುಟ್ಟುವವರಿಗೆ ಭೀತಿಯಲ್ಲವೆ?
ಅರಿದು ಹಿಡಿದಡೆ, ಉರಗ [ಒಳ್ಳೆ]ಗೆ ಸರಿ.
ಸ್ತಂಭಕ್ಕೆ ಅಗ್ನಿ ಚಂದನದ ಮಡು.
ಲಿಂಗವ ಹಿಡಿಯಬಲ್ಲಡೆ, ಅಂಗ ನಿರಂಗದ ಕೂಟ.
ಉಭಯದ ಸಂಗವನರಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೧೨ ||

೧೯೧೯
ಹೂವ ಕೊಯಿವುದಕ್ಕೆ ಮುನ್ನವೆ,
ವಾಸನೆಯ ಕೊಯ್ಯಬೇಕು.
ಲಿಂಗ ಬಹುದಕ್ಕೆ ಮುನ್ನವೆ,
ಅರಿವನರಿಯಬೇಕು.
ನಾನೆಂಬುದಕ್ಕೆ ಮೊದಲೆ,
ವಸ್ತುಭಾವದಲ್ಲಿ ಮನಸಂದಿರಬೇಕು, ಮಾರೇಶ್ವರಾ. || ೧೩ ||

*

ಮನುಮುನಿ ಗುಮ್ಮಟದೇವ

೧೯೨೦
ಅಮೃತದ ಗುಟಿಕೆಯ ಮರೆದು
ಅಂಬಲಿಯನರಸುವನಂತೆ,
ಶಂಬರವೈರಿ ತನ್ನಲ್ಲಿ ಇದ್ದು
ಕುಜಾತಿಯ ಬೆಂಬಳಿಯಲ್ಲಿ ಹೋಹವಂಗೆ
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗ,
ಅವರಿಗೆ ಇಲ್ಲಾ ಎಂದೆ. || ೧ ||

೧೯೨೧
ಉತ್ಪತ್ಯ ಗುರುವಿನಲ್ಲಿ, ಸ್ಥಿತಿ ಲಿಂಗದಲ್ಲಿ, ಲಯ ಜಂಗಮದಲ್ಲಿ.
ಮೂರನರಿತು ಮೀರಿದ ಘನಕೂಟ ವಸ್ತುವಿನಲ್ಲಿ.

ಇದ ಸಾರಿದೆ, ಗೂಡಿನ ಒಳಗನರಿತು ಕೂಡು,
ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವ. ॥ ೨ ॥

೧೯೨೨
ಕಾಯಸೂತಕವಳಿದು, ಜೀವದ ಭವ ಹಿಂಗಿ,
ಜ್ಞಾನಗುರು ಕೊಟ್ಟ ಭಾವದ ಲಿಂಗವಿರೆ,
ಮತ್ತೇನನು ನೋಡಲೇಕೆ?
ಗಂಡನುಳ್ಳವಳಿಗೆ ಮತ್ತೊಬ್ಬ ಬಂದಡೆ ಚೆಂದವುಂಟೆ?
ಅದರಂಗ ನಿಮಗಾಯಿತ್ತು.
ಲಿಂಗವಿದ್ದಂತೆ ಜೀವಿಗಳ ಅಂಗವ ನೋಡಿ
ಬದುಕಿಹೆನೆಂಬ ಭಂಡರಿಗೇಕೆ?
ಗುಡಿಯ ಗುಮ್ಮಟನಾಥನಲ್ಲಿ ಅಗಮ್ಯೇಶ್ವರಲಿಂಗ
ಅವರ ಬಲ್ಲನಾಗಿ ಒಲ್ಲ. ॥ ೩ ॥

೧೯೨೩
ಕೊಲುವಂಗೆ ಜೀವದ ದಯವಿಲ್ಲ.
ಪರಾಂಗನೆಯ ಬೆರಸುವಂಗೆ ಪರಮೇಶ್ವರನ ಒಲವರವಿಲ್ಲ.
ಪರರುವ ಬಂಧಿಸಿ ಬೇಡುವಂಗೆ ಧನದ ಒಲವರವಿಲ್ಲ.
ಪ್ರಾಣತ್ಯಾಗಿಗೆ ಕಾಣಿಯಾಚಿಯ ಕೇಣಸರವಿಲ್ಲ.
ಅಘುಹರನ ಶರಣನಾಗಿ,
ಜಗವ ಬೋಧಿಸದೆ ಜಗಭರಿತನಾಗಿ ಇರಬೇಕು.
ಆತ ಅಘುಹರಮೂರ್ತಿ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ತಾನೆ. ॥ ೪ ॥

೧೯೨೪
ವಾರಿಯ ಶಿಲೆ ಕರಗುವುದಲ್ಲದೆ ಒಡೆದುದುಂಟೆ ಅಯ್ಯಾ?
ಹೇಮದ ಬಣ್ಣ ಪಾವಕನ ಜ್ವಾಲೆಗಂಜುವುದೆ?
ವಿಶಾಲ ಸಂಪದ ಕಾಲನ ಕಮ್ಮಟಕ್ಕೆ ಲೋಲನಹನೆ?
ಇದನರಿಯದ ಬಾಲರ ಮಾತೇಕೆ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ? ॥ ೫ ॥

೧೯೨೫
ಹಾದಿಯ ತೋರಿದವರೆಲ್ಲರು
ಭಯಕ್ಕೆ ನಿರ್ಭಯವಂತರಾಗಬಲ್ಲರೆ?
ವೇದ ಶಾಸ್ತ್ರ ಪುರಾಣ ಆಗಮಂಗಳ ಹೇಳುವರೆಲ್ಲರು
ವೇದಿಸಬಲ್ಲರೆ ನಿಜತತ್ವವ?

ಹಂದೆಯ ಶೃಂಗಾರ, ಪೂಷನ ಕಠಿಣದಂದ,
ಅರಿವಿಲ್ಲದವನ ಸಂಗ, ಇಂತಿವರ ಬಿಡು[ನು]ಡಿಯನರಿ.
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವಲಿಂಗದಲ್ಲಿ,
ಎಡೆಬಿಡುವಿಲ್ಲದೆ ಒಡಗೂಡು. ॥ ೬ ॥

*

ಮರುಳಶಂಕರದೇವ

೧೯೨೬
ಸಂಸಾರವೆಂಬ ಸಾಗರವ ದಾಂಟುವಡೆ,
ಅರಿವೆಂಬ ಹರುಗೋಲನಿಕ್ಕಿ,
ಜ್ಞಾನವೆಂಬ ಅಂಬಿಗ ಹರುಗೋಲದಲ್ಲಿ ಕುಳ್ಳಿರ್ದು,
ಸುಜ್ಞಾನವೆಂಬ ಘಾತದ ಗಳೆಯ ಪಿಡಿದು,
ನಾನೀ ಹೊಳೆಯ ಕಂಡು, ಅಂಬಿಗನ ಕೇಳಿದಡೆ,
ನಾನು ಹಾ[ಯಿ]ಸಿಕೊಟ್ಟೆಹೆನೆಂದನು.
ನಾನು ನಿನ್ನ ನಂಬಿ ಹರುಗೋಲನೇರಿದೆನು ಕಾಣಾ, ಅಂಬಿಗರಣ್ಣಾಯೆಂದು
ನಾನು ಹರುಗೋಲದಲ್ಲಿ ಕುಳ್ಳಿರ್ದು ಹೊಳೆಯೊಳಗೆ ಹೋಗಲಿಕೆ,
ಕಾಮವೆಂಬ ಕೊರಡು ಅಡ್ಡಬಿದ್ದಿತ್ತು.
ಕ್ರೋಧವೆಂಬ ಸುಳುಹಿನೊಳಗೆ
ಅಹಂಕಾರವೆಂಬ ಮೀನು ಬಂದು ನಿಂದಿತ್ತು.
ಮಾಯೆಯೆಂಬ ಮೊಸಳೆ ಬಂದು ಬಾಯಬಿಡುತ್ತಿದ್ದಿತ್ತು.
ಮೋಹವೆಂಬ ನೊರೆತೆರೆಗಳು ಹೆಚ್ಚಿ ಬರುತ್ತಿದ್ದಿತ್ತು.
ಲೋಭವೆಂಬ ಕಾಳ್ಗಡಲು ಎಳೆದೊಯ್ವುತ್ತಿದ್ದಿತ್ತು.
ಮರವೆ[ಯೆ]ಂಬ ಮೊರಹು ನೂಕುತ್ತಲಿದ್ದಿತ್ತು.
ಮತ್ಸರವೆಂಬ ಗಾಳಿ ತಲೆಕೆಳಗು ಮಾಡುತ್ತಿದ್ದಿತ್ತು.
ಇವೆಲ್ಲವನೂ ಪರಿಹರಿಸಿ,
ಎನ್ನ ಹೊಳೆಯ ದಾಂಟಿಸಿದನು, ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಅಂಬಿಗರಣ್ಣನು ಕೂಲಿಯ ನನ್ನ ಬೇಡಿದಡೆ,
ಕೂಲಿಯ ಕೊಡುವಡೇನೂ ಇಲ್ಲೆಂದಡೆ,
ಕೈಸೆರೆಯಾಗಿ ಎನ್ನನೆಳೆದೊಯ್ದನಯ್ಯಾ.
ಅರುವೆಯ ಕೊಟ್ಟ ಕೂಲಿಗೆ ತನ್ನ ಕರುವ ಕಾಯಿಸಿಕೊಂಡನಯ್ಯಾ.
ಅರಿಯದೆ ಹರುಗೋಲವ ನೆರೆತೊರೆಯ ದಾಂಟಿಸಿದ ಕೂಲಿಗೆ
ಕರುವ ಕಾಯಿದೆನು ಕಾಣಾ.

ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧ ॥

೧೯೨೭
ಸಿಂಬೆಗೆ ರಂಭೆತನವುಂಟೆ?
ಸಂಭ್ರಮವಳಿದುದಕ್ಕೆ ನವರಸದಂಗದ ಕಳೆಯುಂಟೆ?
ಡಿಂಗರಿಗಂಗೆ ಸಮಯವೆಂಬ ಸಂಭ್ರಮವುಂಟೆ?
ಪರುಷದ ದೆಸೆಯಿಂದ ಪಾಷಾಣದ ಕುಲ ಹರಿವಂತೆ,
ನೀ ಬಂದೆಯಲ್ಲಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆ. ॥ ೨ ॥

*

ಮಲ್ಲಿಕಾರ್ಜುನ ಪಂಡಿತಾರಾಧ್ಯ

೧೯೨೮
ಧನ ಜವ್ವನವುಳ್ಳಲ್ಲಿ ಶಿವ ಶರಣೆ[ನ್ನೆ]
ಮಾನವಾ, ನೆನೆ ನೆನೆಯೋ, ನೀ ಕೆಡದ ಮುನ್ನ.
ಧನ ನಿಲ್ಲದು, ಜವ್ವನ ನಿಲ್ಲದು, ನಿನ್ನ ಪ್ರಾಣ ನಿಲ್ಲದು.
ಇದನರಿದು, ಶ್ರೀ ಮಲ್ಲಿಕಾರ್ಜುನನ ನೆನೆಯೋ,
ನೀ ಕೆಡದ ಮುನ್ನ. ॥ ೧ ॥

*

ಮಳುಬಾವಿಯ ಸೋಮಣ್ಣ

೧೯೨೯
ಆಗಿಲ್ಲದ ಸಿರಿ, ಆಯುಷ್ಯವಿಲ್ಲದ ಬದುಕು.
ಸುಖವಿಲ್ಲದ ಸಂಸಾರ.
ಎಳತಟಗೊಂಬ ಕಾಯದ ಸಂಗ.
ಬಳಲಿಸುವ ಜೀವಭಾವ.
ಇವರ ಕಳವಳವಳಿದಲ್ಲದೆ
ಮಳುಬಾವಿಯ ಸೋಮನ ತಿಳಿಯಬಾರದು. ॥ ೧ ॥

*

ಮಾದಾರ ಚೆನ್ನಯ್ಯ

೧೯೩೦
ನಡೆನುಡಿ ಸಿದ್ಧಾಂತವಾದಲ್ಲಿ, ಕುಲ ಹೊಲೆ ಸೂತಕವಿಲ್ಲ.
ನುಡಿ ಲೇಸು, ನಡೆಯಧಮವಾದಲ್ಲಿ,
ಅದೆ ಬಿಡುಗಡೆಯಿಲ್ಲದ ಹೊಲೆ.
ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ,
ಕೆಟ್ಟು ನಡೆವುತ್ತ, ಮತ್ತೆ ಕುಲಜರೆಂಬ ಒಡಲವರುಂಟೆ?
ಆಚಾರವೆ ಕುಲ, ಅನಾಚಾರವೆ ಹೊಲೆ.
ಇಂತೀ ಉಭಯವ ತಿಳಿದರಿಯಬೇಕು.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾತ್ಮಾರಾಮ ರಾಮನಾ. ॥ ೧ ॥

೧೯೩೧
ವೇದ ಶಾಸ್ತ್ರಕ್ಕೆ ಹಾರುವನಾಗಿ,
ವೀರ ವಿತರಣಕ್ಕೆ ಕ್ಷತ್ರಿಯನಾಗಿ,
ಸರ್ವವನಾರೈದು ನೋಡುವಲ್ಲಿ
ವೈಶ್ಯನಾಗಿ ವ್ಯಾಪಾರದೊಳಗಾಗಿ,
ಕೃಷಿಯ ಮಾಡುವುದಕ್ಕೆ ಶೂದ್ರನಾಗಿ.
ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ
ಎರಡು ಕುಲವಲ್ಲದೆ,
ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ.
ಬ್ರಹ್ಮವನರಿದಲ್ಲಿ ಬ್ರಾಹ್ಮಣ,
ಸರ್ವಜೀವಹತ ಕರ್ಮಕ್ಕೊಳಗಾಗಿದ್ದಲ್ಲಿ ಸಮಗಾರ.
ಈ ಉಭಯವನರಿದು ಮರೆಯಲಿಲ್ಲ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾತ್ಮಾರಾಮ ರಾಮನಾ. ॥ ೨ ॥

೧೯೩೨
ಶುಕ್ಲ ಶೋಣಿತ ಮಜ್ಜೆ ಮಾಂಸ ಹಸಿವು ತೃಷೆ
ವ್ಯಸನ ವಿಷಯಾದಿಗಳೊಂದೆ ಭೇದ.
ಮಾಡುವ ಕೃಷಿವ್ಯವಸಾಯ ಹಲವಲ್ಲದೆ,
ತೋರುವ ತೋರಿಕೆ ಅರಿವಾತ್ಮನೊಂದೆ ಭೇದ.
ಆವ ಕುಲವಾದಡೂ ಅರಿದಲ್ಲಿಯೆ ಪರತತ್ವಭಾವಿ,
ಮರೆದಲ್ಲಿಯೆ ಮಲಮಾಯಾಸಂಬಂಧಿ.

ಇಂತೀ ಉಭಯವನರಿದು ಮರೆಯಲಿಲ್ಲ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾತ್ಮಾರಾಮ ರಾಮನಾ. ॥ ೩ ॥

*

ಮಾದಾರ ಧೂಳಯ್ಯ

೧೯೩೩
ಅಲಗು ಮೊನೆಧಾರೆ ಕಟ್ಟುಳ್ಳವ ರಣಕ್ಕಂಜುವನೆ?
ಮಲತ್ರಯದೂರ ಹಲವ ಕೆಲವರ ಒಲವರಕ್ಕೆ ಸಿಕ್ಕುವನೆ?
ವಿರಳವೆಂಬುದ ಕಂಡು, ಅವಿರಳವೆಂಬುದನರಿತು,
ಶ್ರುತ ದೃಷ್ಟ ಅನುಮಾನಂಗಳ ಕಳೆದುಳಿದ ಮತ್ತೆ,
ಅರ್ಚಿಸಿ, ಪೂಜಿಸಿ ಕಂಡೆಹೆನೆಂಬುದು ಇತ್ತಲೆ ಉಳಿಯಿತ್ತು,
ಕಾಮಧೂಮ ಧೂಳೇಶ್ವರನತ್ತಲೈದಾನೆ. ॥ ೧ ॥

೧೯೩೪
ಆಧ್ಯಾತ್ಮಿಕದಿಂದಾದ ದೇಹವ
ವ್ಯಾಧಿ ಬಾಧಿಸುವುದಕ್ಕೆ ಮುನ್ನವೆ,
ಬೇಗ ಬೇಗ ಶಿವನ ಭಜಿಸಿರೊ.
ದೇಹಧರ್ಮವು ಆರ ವಶವಲ್ಲ.
ದೇವ ದಾನವ ಮಾನವಾದಿಗಳಾದಡೂ
ಆವುದಾನೊಂದು ವ್ಯಾಧಿ ಬಿಡವು.
'ತೇನ ವಿನಾ ತೃಣಾಗ್ರಮಪಿ ನ ಚಲತಿ'
ಎಂದುದಾಗಿ, ಅಂದಂದಿಗೆ ದಿನ ತುಂಬಿದಂತೆ ನಿಶ್ಚೈಸಿ,
ಕಾಮಧೂಮ ಧೂಳೇಶ್ವರನನೊಲಿಸಲೋಸುಗ
ಬಂದ ಬಳಿಕ ಮರೆಯದಿರಿರೊ. ॥ ೨ ॥

೧೯೩೫
ಕುಸುಮದೊಳಗಡಗಿದ ಸುವಾಸನೆಯಂತೆ.
ರಸಿಕನಲ್ಲಿ ಅಡಗಿದ ಎಸಕದಂತೆ,
ಕೇಶದಲ್ಲಿ ಅಡಗಿದ ರಸರಂಜನೆಯಂತೆ,
ಅರಿದು, ಅರುಹಿಸಿಕೊಂಬುದು.
ಎರಡಳಿದು ಪರಿಪೂರ್ಣವಾದಲ್ಲಿ,
ಹಲವುಮಾತಿನ ಹೊಲಬಿನ ಸೂತಕವೇತಕ್ಕೆ
ಕಾಮಧೂಮ ಧೂಳೇಶ್ವರಾ? ॥ ೩ ॥

೧೯೩೬
ತಿಲದೊಳಗಣ ತೈಲ, ಫಲದೊಳಗಣ ರಸ,
ಹೇಮದೊಳಗಣ ಬಣ್ಣ, ಮಾಂಸದೊಳಗಣ ಕ್ಷೀರ,
ಇಕ್ಷುದಂಡದ ಸಾರದ ಸವಿ,
ಒಳಗು ಹೊರಗಾಗಿಯಲ್ಲದೆ ಕುಲದ ಸೂತಕ ಬಿಡದು.
ಇಷ್ಟದಲ್ಲಿ ತೋರುವ ವಿಶ್ವಾಸ ದೃಷ್ಟವಾಗಿಯಲ್ಲದೆ,
ಶಿಲೆಕುಲದ ಸೂತಕ ಬಿಡದು.
ಬಿಡುವನ್ನಕ್ಕ ಜ್ಞಾನಶೂನ್ಯವಿಲ್ಲ, ಕಾಮಧೂಮ ಧೂಳೇಶ್ವರಾ. ॥ ೪ ॥

೧೯೩೭
ಮರೀಚಿಕಾಜಲವ ಮೊಗೆದವರುಂಟೆ?
ಸುರಚಾಪವ ಹಿಡಿದು ಎಸೆದವರುಂಟೆ?
ವಾರಿಯ ಮಣಿಗೆ ದಾರವನೇರಿಸಿದವರುಂಟೆ?
ಬಯಲೊಳಗಡಗಿದ ಬ್ರಹ್ಮ,
ಶಿಲೆಯೊಳಗಾಡುವ ಸಲೆ ನೆಲೆಯರಿಯದ ಸೂತಕರಿಗೆ
ಮಹಾಘನದ ಹೊಲಬೇತಕ್ಕೆ ಕಾಮಧೂಮ ಧೂಳೇಶ್ವರಾ? ॥ ೫ ॥

೧೯೩೮
ಸತ್ಯಶುದ್ಧಕಾಯಕವ ಮಾಡಿ ತಂದು,
ವಂಚನೆಯಿಲ್ಲದೆ ಪ್ರಪಂಚಳಿದು,
ನಿಚ್ಚಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ,
ಕಾಮಧೂಮ ಧೂಳೇಶ್ವರ. ॥ ೬ ॥

೧೯೩೯
ಸುಳಿವ ಅನಿಲಂಗೆ ಮೈಯೆಲ್ಲ ಕೈ.
ಸುಡುವ ಅನಲಂಗೆ ಭಾವವೆಲ್ಲ ಬಾಯಿ.
ಹರಿವ ನೀರಿಂಗೆ ತ[ನ್ನ ಮೈಯೆ]ಲ್ಲ ಅಡಿ.
ಅರಿಯದೆ ಮರೆಯದೆ ಮುಟ್ಟಿಹಂಗೆ
ಕಡೆ ನಡು ಮೊದಲೆಂದು ಅರ್ಪಿತವಿಲ್ಲ.
ಇಲ್ಲ ಎಂಬ ಸೂತಕಕ್ಕೆ ಮುನ್ನವೆ ಇಲ್ಲ,
ಕಾಮಧೂಮ ಧೂಳೇಶ್ವರನು. ॥ ೭ ॥

*

ಮಾರೇಶ್ವರೊಡೆಯ

೧೯೪೦

ಊಡಿದರುಣ್ಣದು, ಒಡನೆ ಮಾತಾಡದು.
ನೋಡದು, ನುಡಿಯದು, ಬೇಡದು, ಕಾಡದು.
ಕಾಡಬೆರಣಿಯ ಕೈಯಲ್ಲಿಕೊಟ್ಟು,
ಹೇಳದೆ ಹೋದೆಯೋ ಮಾರೇಶ್ವರಾ. ॥ ೧ ॥

*

ಮೆರೆಮಿಂಡಯ್ಯ

೧೯೪೧

ಅಂಗದಲ್ಲಿದ್ದು ಕೈಗೆ ಬಂದೆ.
ಕೈಯಿಂದ ಮನಕ್ಕೇಕೆ ಬಾರೆಯಯ್ಯಾ?
ನಾ [ಹಾಡೆ] ನೀ ಕೇಳಿ, ಬಾಯಿ ಕಿವಿ ನೋವಿಲ್ಲವೆ ಅಯ್ಯಾ?
ನೀ ಸಾವ ದಿನವಿಲ್ಲ, ನಾನುಳಿವ ದಿನವಿಲ್ಲ.
ನಿನ್ನಂಗವಡಗದು, ಎನ್ನ ಮನವುಡುಗದು.
ಕ್ರೀಯೆಂಬ ಹಾವಸೆಯಲ್ಲಿ ಸಿಕ್ಕಿ,
ಮೇಲನರಿಯದೆ ತೊಳಲುತ್ತೈದೇನೆ.
ಐಘಟಕ್ಕೆ ಠಾವ ಹೇಳಾ, ಐಘಟದೂರ ರಾಮೇಶ್ವರಲಿಂಗವೆ. ॥ ೧ ॥

೧೯೪೨

ಅಂಗಲಿಂಗಸಂಬಂಧದಿರವು,
ಬೀಜವೊಡೆದು, ಮೊಳೆದೋರುವಂತೆ,
ಕುಸುಮ ಬಲಿದು, ದೆಸೆಗೆ ವಾಸನೆ ಪಸರಿಸುವಂತೆ,
ಘನಲಿಂಗ ಘಟ, ಕುರುಹಿನಲ್ಲಿ ನಿಜದೋರುತ್ತದೆ.
ಐಘಟದೂರ ರಾಮೇಶ್ವರಲಿಂಗ ಮೂರ್ತಿ, ಅಮೂರ್ತಿ ಆಗುತ್ತದೆ. ॥ ೨ ॥

೧೯೪೩

ಅಶನದಾಸೆಗಾಗಿ ಆಚಾರವ ತಪ್ಪಿ,
ವಿಷಯದಾಸೆಗಾಗಿ ವಿರಕ್ತಿಯ ಬಿಟ್ಟು,
ಸಕಲರ ಕೂಟದಲ್ಲಿ ವಿಕಳತೆಗೊಂಬ

ಪ್ರಕೃತಿಭಾವಿಗುಂಟೆ ನಿಜಭಕ್ತಿ,
ಐಘುಟದೂರ ರಾಮೇಶ್ವರಲಿಂಗವನರಿವುದಕ್ಕೆ? || ೩ ||

೧೯೪೪

ಅಸಿಯಾಗಲಿ ಕೃಷಿಯಾಗಲಿ,
ವಾಚಕ ವಾಣಿಜ ಮಸಿಯಾಗಲಿ,
ಮಾಡುವಲ್ಲಿ ಹುಸಿಯಿಲ್ಲದಿರಬೇಕು.
ಅದು ಅಸಮಾಕ್ಷನ ಬರವು, ಪಶುಪತಿಯ ಇರವು,
ಐಘುಟದೂರ ರಾಮೇಶ್ವರಲಿಂಗ ತಾನೆ. || ೪ ||

೧೯೪೫

ಕಾಮದಲ್ಲಿ ಅಳಿದು, ಕ್ರೋಧದ ದಳ್ಳುರಿಯಲ್ಲಿ ಬೆಂದು,
ಮೋಹದ ಸಮುದ್ರದಲ್ಲಿ ಮುಳುಗಿ,
ನಾನಾ ಭವರಸಂಗಳನುಂಡು ಘೋರಸರಾಗಬೇಡ.
ಅರಿ, ಐಘುಟದೂರ ರಾಮೇಶ್ವರಲಿಂಗವ. || ೫ ||

೧೯೪೬

ಕುಸುಮ ಒಣಗಿದಾಗ ಸೌರಭವಡಗಿತ್ತು.
ಸಾರವರತಾಗ ಸಸಿ ಹೊಂದಿತ್ತು.
ಕುರುಹ ಮರೆದಾಗ ಅರಿವು ನಿಂದಿತ್ತು.
ಐಘುಟದೂರ ರಾಮೇಶ್ವರಲಿಂಗ ಭಜನೆಗೊಳಗಾಗಬೇಕು. || ೬ ||

೧೯೪೭

ಚಿನ್ನ ವಿಶೇಷ, ಮಣ್ಣು ಅಧಮವೆಂದಡೆ,
ಅದು ನಿಂದು ಕರಗುವುದಕ್ಕೆ
ಮಣ್ಣಿನ ಕೋವೆಯೆ ಮನೆಯಾಯಿತ್ತು.
ಇಷ್ಟವನರಿವ ವಸ್ತುವ ನೆಮ್ಮುವುದಕ್ಕೆ ಇದೇ ದೃಷ್ಟ,
ಐಘುಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೭ ||

೧೯೪೮

ತನ್ನ ತಾನರಿದಡೆ,
ತನ್ನರಿವೆ ಗುರು, ತಾನೆ ಲಿಂಗ, ತನ್ನ ನಿಷ್ಠೆಯೇ ಜಂಗಮ.
ಇಂತೀ ತ್ರಿವಿಧವು ಒಂದಾದಡೆ
[ಐಘುಟದೂರ] ರಾಮೇಶ್ವರಲಿಂಗವು ತಾನೆ. || ೮ ||

೧೯೪೯

ತನ್ನವರನ್ಯರಹರು,
ಹೆಣ್ಣು ಹೊನ್ನು ಮಣ್ಣು ಹಿಡಿದು ಹೋರಲಾಗಿ.

ಆ ಮೂರ ಬಿಟ್ಟಡೆ ಅನ್ಯರು ತನ್ನವರಹರು.
ಅರಿದವಂಗೂ ಸರಿ, ಜಗದ ಒಡಲಾದವಂಗೂ ಸರಿ,
ಆಸೆವೊಂದೇ ಭೇದ. ಉಭಯಕ್ಕೆ ಹೊರಗಾಗು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೯ ॥

೧೯೫೦
ತಾ ಮೀವನ್ನಕ್ಕ ಲಿಂಗಕ್ಕೆ ಮಜ್ಜನ.
ತಾನುಂಬನ್ನಕ್ಕ ಲಿಂಗಕ್ಕೆ ನೈವೇದ್ಯ.
ತನ್ನ ತನು ಭೋಗವ ಮಾಡುವನ್ನಕ್ಕ
ಲಿಂಗಾರ್ಪಿತವಾಗಬೇಕು.
ಇದು ಸದ್ಭಕ್ತಮಾರ್ಗದಿರವು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೧೦ ॥

೧೯೫೧
ಧನವ ಗಳಿಸಿದವ ಹೆಣನಾದ,
ಧರೆಯ ಗಳಿಸಿದವ ಅರಿಗಳಿಗೆ ಒಡಲಾದ,
ಕನ್ಯೆಯ ಗಳಿಸಿದವ ಕುಕ್ಕುರಯೋನಿಯಲ್ಲಿ ಸಿಕ್ಕಿದಂತಾದ.
ಅಟ್ಟುವ ವಾಸಿಯಲ್ಲಿ ಕುಕ್ಕುಳಗುದಿಯಬೇಡ.
ಸತ್ಯಕ್ಕೆ [ಒಳ]ಗಾಗು, ಅಸತ್ಯಕ್ಕೆ [ಹೊರ]ಗಾಗು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೧೧ ॥

೧೯೫೨
ನರದೇಹವ ತೊಟ್ಟು,
ತಾ ಗುರುವೆಂದು ಇದಿರಿಗೆ ಇಷ್ಟವ ಕೊಟ್ಟು,
ಅವರ ಮನೆಯಲ್ಲಿ ಒಲ್ಲದೆ,
ಅಕ್ಕಿ ತುಪ್ಪವ ನೀಡಿಸಿಕೊಂಡು,
ಅಟ್ಟುಕೊಂಡುಂಬ ಮಿಟ್ಟೆಯ ಭಂಡರ ಕೈಯಲ್ಲಿ
ಕಟ್ಟಿಸಿಕೊಂಡ ಲಿಂಗ, ದೃಷ್ಟದಿ ಶ್ರವಕಾಯ.
ಇದನರಿತು, ಅಲ್ಲಿ ಹೊಕ್ಕು ಉಂಡವಂಗೆ
ಕರಟನ ಕೈಯ ಕೀಟಕ, ಆ ಕಾಕೂಳು,
ಘಟಿತಮಯ ಐಘಟದೂರ ರಾಮೇಶ್ವರಲಿಂಗ
ಅವರ ಒಲ್ಲನಾಗಿ. ॥ ೧೨ ॥

೧೯೫೩
ನೀರೊಳಗಣ ಕಿಚ್ಚಿಗೆ ನೀರೇ ತಾಯಿ.
ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ.

ಮರದೊಳಗಣ ಕಿಚ್ಚಿಗೆ ಮರನೇ ತಾಯಿ.
ಅವು ಹೊರಹೊಮ್ಮಿದಾಗ ತಾಯ ತಿಂದು,
ತಾವು ತಲೆದೋರುವಂತೆ
ಕುರುಹಿಂದ ಅರಿವನರಿತು,
ಅರಿವು ಕುರುಹು ನಷ್ಟವ ಮಾಡಿ ನಿಂದಲ್ಲಿಯೆ
ಐಘುಟದೂರ ರಾಮೇಶ್ವರಲಿಂಗ,
ಅಂಗವ ಅರಿತು ನಿಂದ ನಿಲವು. || ೧೩ ||

೧೯೫೪
ಪಂಚೇಂದ್ರಿಯಂಗಳಲ್ಲಿ ಲಿಂಗಮುಖವಾಗಿ ಕೊಳ್ಳಬೇಕೆಂಬರು.
ಆ ಇಂದ್ರಿಯಂಗಳು ಲಿಂಗಕ್ಕೆ ಹೊರತೆಯೆ?
ಲಿಂಗದ ಮುಖದಲ್ಲಿ ಇಂದ್ರಿಯಂಗಳು ಬಂದು ನಿಂದು,
ತಮ್ಮ ಸಂದೇಹವ ಬಿಡಿಸಿಕೊಂಬವಲ್ಲದೆ,
ಇಂದ್ರಿಯಂಗಳ ಮುಖಕ್ಕೆ ಲಿಂಗವಿಲ್ಲ.
ಲಿಂಗಮುಖದಲ್ಲಿ ಇಂದ್ರಿಯಂಗಳು ನಿವೃತ್ತಿ,
ಐಘುಟದೂರ ರಾಮೇಶ್ವರಲಿಂಗದಲ್ಲಿ. || ೧೪ ||

೧೯೫೫
ಫಲ, ರಸವ ಇರಿಸಿಕೊಂಡಿದ್ದಂತೆ,
ನೆಲ, ನಿಧಾನವನಿರಿಸಿಕೊಂಡಿದ್ದಂತೆ,
ತಾಯಿ, ಗರ್ಭದ ಶಿಶುವ ಆರೈಕೆಯಲ್ಲಿ ತಾಳಿಕೊಂಡಿಪ್ಪಂತೆ,
ಇದ್ದೆಯಲ್ಲಾ ನೀ ಕುರುಹಾಗಿ.
ಅರಿವ ಆತ್ಮನ ಮರೆಯಮಾಡಿಕೊಂಡಿದ್ದೆಯಲ್ಲಾ, ಅರಿವನರಿವುದಕ್ಕೆ.
ಕುರುಹಿನ ಮೂರ್ತಿಯಲ್ಲಿ ಅಂಗವ ಮರೆದು, ವಸ್ತುವ ಹಿಂಗದಿರು,
ಐಘುಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೧೫ ||

೧೯೫೬
ಭಕ್ತನಾದಲ್ಲಿ ಪಂಕವ ಹೊದ್ದದ ವಾರಿಯಂತಿರಬೇಕು,
ಜಲವ ಮುಟ್ಟದ ತೈಲದಂತಿರಬೇಕು,
ರಸಬದ್ಧ [ಲೋಹ]ದಂತಿರಬೇಕು,
ಮರಾಳನ ಮಾಟದಂತೆ, ಸಂಸಾರದ ಒದಗನರಿತು ಅರಿಯದಂತಿರಬೇಕು,
ಐಘುಟದೂರ ರಾಮೇಶ್ವರಲಿಂಗದಲ್ಲಿ. || ೧೬ ||

೧೯೫೭
ಬೋಧೆಯ ಹೇಳಿ ಉಂಬವಂಗೆ
ಆಗುಚೇಗೆಯ ಮಾತೇಕೆ?
ಅವ ಮಾತ ಕಲಿತ ಮಾತುಗನಂತೆ,

ಆಟವ ಕಲಿತ ಕೋಲಾಟಿಕನಂತೆ.
ಛೀ ಅದೇತರ ಅರಿವು?
ಐಘಟದೂರ ರಾಮೇಶ್ವರಲಿಂಗಕ್ಕೆ ಮುನ್ನವೆ ದೂರ. ‖ ೧೭ ‖

೧೯೫೮
ಮನ ಮುಟ್ಟದ ಪೂಜೆ,
ಮಣ್ಣು ಗೋಡೆಯ ತೊಳೆದು, ನಿರ್ಮಲವನರಸುವನಂತೆ.
ವಸ್ತುವ ಮುಟ್ಟದ ಅರ್ಪಿತ,
ಕುಕ್ಕರ ಅಸ್ಥಿಯ ಕಡಿದು, ತನ್ನಯ ಶೋಣಿತಕ್ಕೆ ಚಪ್ಪರಿವಂತೆ.
ಇದು ನಿಶ್ಚಯದ ಮುಟ್ಟಲ್ಲ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ‖ ೧೮ ‖

೧೯೫೯
ವಾಯು ಪಟವಾಡುವಲ್ಲಿ, ಹಿಡಿದವನ ಕೈಯಲ್ಲಿ ನೂಲು ಸಿಕ್ಕಿ ಆಡುವಂತೆ,
ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ, ಎಡೆ ಬಿಡುವಿಲ್ಲದಾಡಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ‖ ೧೯ ‖

೧೯೬೦
ಶರೀರ ಬೆಳೆದು, ಪ್ರಳಯಕ್ಕೊಳಗು.
ಬುದ್ಧಿ ಬೆಳೆದು, ಸುಖಕ್ಕೊಳಗು.
ಸುಖ ಬೆಳೆದು, ವಿಕಾರಕ್ಕೊಳಗು.
ವಿಕಾರ, ಸಕಲಮರಣಕ್ಕೆ ಒಳಗಾಯಿತ್ತು.
ಇಂತಿವಕ್ಕೆ ಹೊರಗಾಗು, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ‖ ೨೦ ‖

*

ಮೇದರ ಕೇತಯ್ಯ

೧೯೬೧
ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ,
ಉರಿ ಸಿರಿ ಉಭಯವೂ ಸರಿ,
ಎನ್ನದಿರ್ದಡೆ ಭಕ್ತನಿಗದೇ ಹಾನಿ.
ಜಂಗಮವೆಂದು ಪ್ರಮಾಣಿಸಿ,
ತನ್ನ ಕಂಗಳ ಮುಂದೆ ಕಂಡವರ ಭಜಿಸಲಿಕ್ಕೆ,

ತನ್ನಂಗವ ಹೊರೆದಡೆ
ತೀರ್ಥಪ್ರಸಾದಕ್ಕೆ ಅವನಂದೇ ಹೊರಗು, ಗವರೇಶ್ವರಾ. ॥ ೧ ॥

೧೯೬೨
ಮೊದಲಿಲ್ಲದೆ ಲಾಭವುಂಟೆ?
ನಿರೀಕ್ಷಣೆಯಿಲ್ಲದೆ ಪರೀಕ್ಷೆಯುಂಟೆ?
ಗುರುವಿಲ್ಲದೆ ಲಿಂಗವುಂಟೆ?
ಇಂತೀ ವೇಷದ ಭಾಷೆಗೆ ಹೇಸಿದೆನು ಕಾಣಾ, ಗವರೇಶ್ವರಾ. ॥ ೨ ॥

*

ಮೈದುನ ರಾಮಯ್ಯ

೧೯೬೩
ಆಲಿಕಲ್ಲ, ನೀರೊಳಗೆ ಬೆರಸಿದಂತೆ,
ಉಪ್ಪಿನ ಹರಳ, ಉದಕದೊಳಗೆ ಹಾಕಿದಂತೆ,
ಕರ್ಪುರದ ಹಣತೆಯಲ್ಲಿ, ಜ್ಯೋತಿಯ ಬೆಳಗ ಬೆರಸಿದಂತೆ,
ಮಹಾಲಿಂಗ ಚೆನ್ನರಾಮೇಶ್ವರಲಿಂಗದಲ್ಲಿ ಬೆರಸಿ,
ಎರಡಳಿದಡಗಿದ ನಿಜಲಿಂಗೈಕ್ಯನು. ॥ ೧ ॥

೧೯೬೪
ಮಳಲಲ್ಲಿ ರಸ ಉಂಟೆ? ನೆಳಲಿಗೆ ತಡೆ ಉಂಟೆ?
ರಣದಲ್ಲಿ ತಪ ಉಂಟೆ?
ನೇಹ ತಪ್ಪಿದಲ್ಲಿ ಮೋಹವನರಸಲುಂಟೆ?
ಮಹಾಲಿಂಗ ಚೆನ್ನರಾಮ,
ಮನ ಮುರಿದ ಬಳಿಕ, ಕಂಗಳಿಗೆ ವಿಷವಯ್ಯಾ. ॥ ೨ ॥

೧೯೬೫
ಶಿವಶರಣರ ಬರವ ಕಂಡು,
ಶಿರಬಾಗಿ, ಕರಮುಗಿದಂಜಲೇಬೇಕು.
ಶರಣೆನ್ನಲೊಲ್ಲದೀ ಮನವು.
ಆಗಿನ ಸಧ್ಯಫಲದ ಲಾಭದ ಭಕ್ತಿಯನರಿಯದಾಗಿ,
ಶರಣೆನ್ನಲೊಲ್ಲದೀ ಮನವು.
ಆಳ್ದರೆಂದು ನಂಬಿಯೂ ನಂಬಲೊಲ್ಲದಾಗಿ,
ಮಹಾಲಿಂಗ ಚೆನ್ನರಾಮೇಶ್ವರನೆನ್ನ ಕಡೆಗೆ ನೋಡಿ, ನಗು[ತ್ತಲೈದಾನೆ]. ॥ ೩ ॥

*

ಮೋಳಿಗೆ ಮಾರಯ್ಯ

೧೯೬೬
ಅಂದಚಂದದ ಬಣ್ಣವ ಹೊದ್ದು,
ಹರನ ಶರಣರೆಂಬ ಅಣ್ಣಗಳೆಲ್ಲರು
ಕರಣಂಗಳೆಂಬ ಉರವಣೆಯ ಅಂಬಿಗಾರದೆ,
ಭಕ್ತಿಯೆಂಬ ಹರಿಗೆಯ ಹಿಡಿದು,
ಮುಕ್ತಿಯೆಂಬ ಗ್ರಾಮವ ಮುತ್ತಿ ಕಾದಿ,
ಸತ್ತರೆಲ್ಲರು ರುದ್ರನ ಶೂಲದ ಗಾಯದಲ್ಲಿ.
ಎನಗೆ ಹೊದ್ದಿಗೆ ಯಾವುದೋ, ನಿಃಕಳಂಕ ಮಲ್ಲಿಕಾರ್ಜುನಾ? ॥ ೧ ॥

೧೯೬೭
ಅಂಬುವಿಲ್ಲದಿರ್ದಡೆ ಅಂಬುಜವನಾರು ಬಲ್ಲರು?
ನೀರಿಲ್ಲದಿರ್ದಡೆ ಹಾಲನಾರು ಬಲ್ಲರು?
ನಾನಿಲ್ಲದಿರ್ದಡೆ ನಿನ್ನನಾರು ಬಲ್ಲರು?
ನಿನಗೆ ನಾ, ನನಗೆ ನೀ.
ನಿನಗೂ ನನಗೂ ಬೇರೊಂದು ನಿಜವುಂಟೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೨ ॥

೧೯೬೮
ಅನುಪಮ ಲಿಂಗವೆ, ಎನ್ನ ನೆನಹಿಂಗೆ ಬಾರೆಯಾ, ಅಯ್ಯಾ?
ಎನ್ನ ತನುಮನ ಶುದ್ಧವಿಲ್ಲೆಂದು,
ಎನ್ನ ನೆನಹಿನಲ್ಲಿ
ನೀ ನಿಲ್ಲೆಯಾ ಅಯ್ಯಾ?
ಎನ್ನ ಪಾತಕದ ಪುಂಜವ ನೀ ಅತಿಗಳೆಯಾ.
ಎನ್ನ ಹಸಿವಿಂಗೆ ಅಸು ನೀನೆ,
ವಿಷಯಕ್ಕೆ ಮನ ನೀನೆ,
ಭೋಗಿಸುವುದಕ್ಕೆ ಅಂಗ ನೀನೆ.
ಸ್ಫಟಿಕದ ಘಟದೊಳಗಣ ಬಹುರಂಗಿನಂತೆ,
ಎನ್ನ ಅಂಗಮಯ ನೀನಾಗಿ, ಹಿಂಗಲೇಕೆ ನಿಃಕಳಂಕ ಮಲ್ಲಿಕಾರ್ಜುನಾ? ॥ ೩ ॥

೧೯೬೯
ಅಪ್ಪು ಬೆರಸಿದ ಕಟ್ಟಿಗೆಯ ಕಿಚ್ಚಿನಲ್ಲಿಕ್ಕಿದಡೆ,
ಅದು ಚಿತ್ತಶುದ್ಧವಾಗಿ ಹೊತ್ತಬಲ್ಲುದೆ, ತಟ್ಟಾರಿದ ಕಾಷ್ಠದಂತೆ?
ಇಂತೀ ಅರ್ತಿಕಾರರಿಗೆ ಸಿಕ್ಕುವನೆ ನಿಜವಸ್ತು,
ನಿಃಕಳಂಕ ಮಲ್ಲಿಕಾರ್ಜುನಾ. ॥ ೪ ॥

೧೯೭೦
ಅರಿತೆಹೆನರಿತೆಹೆನೆಂದು ಹೊರಹೊಮ್ಮುವಾಗ,
ಕಾಯ ಮರುಜವಣಿಯೆ?
ಮಹಾಪ್ರಳಯಕ್ಕೆ ಹೊರಗಾದ ಶ್ರವವೆ?
ಅವತಾರಕ್ಕೆ ಹೊರಗಾದ ನಿರಂಗವೆ?
ಅಸಗ ನೀರಡಿಸಿ ಸತ್ತಂತಾಯಿತ್ತು ಅವನಿರವು,
ನಿಃಕಳಂಕ ಮಲ್ಲಿಕಾರ್ಜುನಾ. || ೫ ||

೧೯೭೧
ಅರಿವನರಿವನ್ನಕ್ಕ ಅರ್ಚನೆ ಬೇಕು, ಪುಣ್ಯವನರಿವನ್ನಕ್ಕ ಪೂಜೆ ಬೇಕು.
ತಾನೆಂಬುದನರಿವನ್ನಕ್ಕ ಎಲ್ಲ ನೇಮವ ಭಾವಿಸಬೇಕು.
ಕಾಲ ಕರ್ಮ ಜ್ಞಾನ ಭಾವ ತಾನುಳ್ಳನ್ನಕ್ಕ ಭಜಿಸಬೇಕು.
ತನ್ನ ಮರೆದು, ವಸ್ತುವ ಕುರಿತು ನಿಂದ ಮತ್ತೆ
ಬತ್ತಲೆ ಹೋಹವಂಗೆ ಎತ್ತಲೂ ಭಯವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೬ ||

೧೯೭೨
ಅರಿವ ಹೇಳುವ ಹಿರಿಯರೆಲ್ಲರೂ
ಕುರುಹಿನ ಶಿಲೆಯ ಕೈಯಲ್ಲಿ ಹಿಡಿದು,
ನರಗುರಿಗಳ ಕುರುಹಿನ ಬಾಗಿಲಲ್ಲಿ ನಿಂದು,
ಮೊರೆಯಿಡುತ್ತಿರ್ಪ[ರು].
ಈ ಅರಿಗುರಿಗಳ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನ. || ೭ ||

೧೯೭೩
ಅಸಿಯಾಗಲಿ ಮಸಿಯಾಗಲಿ ಕೃಷಿಯಾಗಲಿ
ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ,
ಪಶುಪತಿಗೆಂದೇ ಪ್ರಮಾಣಿಸಿ ಭಕ್ತಿಯೆಸಕದಿಂದ.
ಹಸಿವಿಲ್ಲದೆ ತೃಷೆಯಿಲ್ಲದೆ ವಿಷಯವನರಿಯದೆ,
ಮಾಡುವ ಭಕ್ತಿಯಲ್ಲಿ ಹುಸಿಯಿಲ್ಲದೆ ಮಾಡುತ್ತಿರ್ಪ
ಭಕ್ತನ ಅಂಗಣವೆ ವಾರಣಾಸಿ,
ಆತನ ಆಶ್ರಯವೆ ವಿಮುಕ್ತಕ್ಷೇತ್ರ,
ಆತನ ಮುಖವೆ ಮೋಕ್ಷದಾಗರ,
ಆತನಂಗವೆ ಹಿಂಗದ ಬೆಳಗು,
ಆತನ ಪಾದವೆ ಪವಿತ್ರ ಸುಧೆ.
ಹೀಂಗೆ ತ್ರಿಕರಣ ಶುದ್ಧಾತ್ಮ ಭಕ್ತನ

ಒಕ್ಕುದ ಕಾಯ್ದುಕೊಂಡಿರ್ಪ ಕುಕ್ಕುರನಂತೆ ಮಾಡಾ.
ಎನಗಿದೇ ನಿಶ್ಚಯ, ನಿಃಕಳಂಕ ಮಲ್ಲಿಕಾರ್ಜುನಾ. ॥ ೮ ॥

೧೯೭೪
ಆಗಮವನರಿದಲ್ಲಿ ಆಗುಚೇಗೆಯನರಿಯಬೇಕು.
ಶಾಸ್ತ್ರವನರಿದಲ್ಲಿ ಸಾವನರಿಯಬೇಕು.
ಪುರಾಣವನರಿದಲ್ಲಿ ಪುಂಡರ ಸಂಗವ ಹರಿಯರ್ಬೇಕು.
ಇಂತಿವನರಿದ ಚಿತ್ತಶುದ್ಧಂಗಲ್ಲದೆ ಸನ್ಮತವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೯ ॥

೧೯೭೫
ಆತ್ಮತೇಜವ ಬಿಟ್ಟಾಗವೆ ಗುರುವನರಿದವ,
ಮನವಿಕಾರವ ಬಿಟ್ಟಾಗವೆ ಲಿಂಗವನರಿದವ.
ಧನವಿಕಾರವ ಬಿಟ್ಟಾಗವೆ ಜಂಗಮವನರಿದವ.
ಇಂತೀ ತ್ರಿವಿಧ ನಾಸ್ತಿಯಾದಂಗಲ್ಲದೆ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸಹಜಭಕ್ತನಲ್ಲ. ॥ ೧೦ ॥

೧೯೭೬
ಆದ್ಯರ ವಚನವ ನೋಡಿ, ಓದಿ ಹೇಳಿದಲ್ಲಿ ಫಲವೇನಿ ಭೋ?
ತನ್ನಂತೆ ವಚನವಿಲ್ಲ, ವಚನದಂತೆ ತಾನಿಲ್ಲ.
ನುಡಿಯಲ್ಲಿ ಅದ್ವೈತವ ನುಡಿದು, ನಡೆಯಲ್ಲಿ ಅಧಮರಾದಡೆ,
ಶಿವಶರಣರು ಮೆಚ್ಚುವರೆ?
ಇದು ಕಾರಣ, ಅವರ ನಡೆನುಡಿ ಶುದ್ಧವಿಲ್ಲವಾಗಿ,
ಅವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಪಂಚಮ ಪಂಚಾಕ್ಷರವಿಲ್ಲ.
ಇಂತಿವಿಲ್ಲದೆ ಬರಿಯ ಮಾತಿನಲ್ಲಿ ಬೊಮ್ಮವ ನುಡಿವ
ಬ್ರಹ್ಮೇತಿಕಾರರ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನ. ॥ ೧೧ ॥

೧೯೭೭
ಆನೆ ಕುದುರೆ ಭಂಡಾರವಿರ್ದಡೇನೊ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು,
ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ?
ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.
ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ. ॥ ೧೨ ॥

೧೯೭೮
ಏತದ ತುದಿಯಲ್ಲಿ ಕಟ್ಟಿದ ಮಡಕೆಯಂತೆ,
ಅದ ನೀತಿವಂತರು ಮೆಟ್ಟಿ,
ಧರೆ ಪಾತಾಳದುದಕವ ತಂದು,
ಪಾತೆಗೆ ಹರಹಿದ ತೆರದಂತೆ
ಸರ್ವಮಯದಲ್ಲಿ ಒಪ್ಪಿಪ್ಪ ವಸ್ತುವನರಿದು
ನಿರ್ಜಾತನಾಗಬಲ್ಲಡೆ, ಆತನೆ ಜೀವನ್ಮುಕ್ತ
ನಿಃಕಳಂಕ ಮಲ್ಲಿಕಾರ್ಜುನಾ. || ೧೩ ||

೧೯೭೯
ಕಣ್ಣಿಲ್ಲದವಂಗೆ ಬಣ್ಣ ಬಚ್ಚಣೆಯೇಕೆ?
ಮನ್ನಣೆಯಿಲ್ಲದ ಠಾವಿನಲ್ಲಿ ಅಣ್ಣ ಅಪ್ಪ ಎನಲೇಕೆ?
ನನ್ನಿಯ ಗುಣವಿಲ್ಲದಲ್ಲಿಗೆ,
ಪನ್ನಗಧರನ ಶರಣರು ಮತ್ತಲ್ಲಿಗೆ ಹೋದಡೆ,
ಕಲ್ಲು ತಾಗಿದ [ಶ]ರದಂತಾಯಿತ್ತು.
ಬಲ್ಲವರಿಗೆ ಇದೇ ಗುಣವೆಂದೆ,
ಪ್ರಾಣವಲ್ಲಭ ನಿಃಕಳಂಕ ಮಲ್ಲಿಕಾರ್ಜುನಾ. || ೧೪ ||

೧೯೮೦
ಕತ್ತೆ, ಕರ್ಪೂರವ ಬಲ್ಲುದೆ? ನಾಗ, ನಾಣ್ಣುಡಿಯ ಬಲ್ಲುದೆ?
ನಾಯಿ, ಸುಭಕ್ಷ್ಯ ಬಲ್ಲುದೆ? ಮಕ್ಷಿಕ, ಗಂಧವ ಬಲ್ಲುದೆ?
ಹುಟ್ಟುಗೊಡ್ಡು, ಮಕ್ಕಳ ಗರ್ಭವ ಬಲ್ಲುದೆ?
ಜಗದಲ್ಲಿ ಹೊತ್ತು ಹೋರುವ ಮಿಥ್ಯವಂತರಿಗೆ
ತತ್ವದ ಶುದ್ಧಿಯ ಹೇಳಿದಡೆ,
ನಿತ್ಯರುದ್ರನಾದಡೂ ತಪ್ಪದು ನರಕ, ನಿಃಕಳಂಕ ಮಲ್ಲಿಕಾರ್ಜುನಾ. || ೧೫ ||

೧೯೮೧
ಕಲ್ಲು ಮಣ್ಣು ಮರದಲ್ಲಿ ದೇವನಿದ್ದಹನೆಂದು
ಎಲ್ಲಿಯೂ ತೊಳಲುತ್ತಿರ್ಪ ಅಣ್ಣಗಳು ಕೇಳಿರೊ.
ಅದು ಅಲ್ಲಲ್ಲಿಟ್ಟ ಬಲ್ಲತನದ ಕುರುಹಲ್ಲದೆ, ಸೊಲ್ಲಿಗತೀತನನರಿಯಾ.
ಮನದಿರವೆಲ್ಲಿಹುದು ಅವನಲ್ಲಿಹ, ನಿಃಕಳಂಕ ಮಲ್ಲಿಕಾರ್ಜುನಾ. || ೧೬ ||

೧೯೮೨
ಕಳೆ ಮೆಳೆಯ ಕಿತ್ತಲ್ಲದೆ ಹೊಲ ಶುದ್ಧವಲ್ಲ.
ಹೊಲೆ ಮಲವ ಕಳೆದಲ್ಲದೆ ಮನ ಶುದ್ಧವಲ್ಲ.
ಜೀವದ ನೆ[ಲೆ]ಯನರಿದಲ್ಲದೆ ಕಾಯ ಶುದ್ಧವಲ್ಲ.

ಕಾಯ ಜೀವದ ಸಂಚವನರಿದಲ್ಲದೆ ಜ್ಞಾನಲೇಪಿಯಲ್ಲ.
ಇಂತೀ ಭಾವದ ಭ್ರಮಿತರಿಗೇಕೆ ಜ್ಞಾನದ ಒಳಗು,
ನಿಃಕಳಂಕ ಮಲ್ಲಿಕಾರ್ಜುನಾ. ‖ ೧೭ ‖

೧೯೮೩
ಕಾಯದ ಕೈಯಲ್ಲಿ ಲಿಂಗಪೂಜೆ,
ಮನದ ಕೈಯಲ್ಲಿ ಸಂಸಾರ.
ಎಂತಹದಯ್ಯಾ ಲಿಂಗಪೂಜೆ?
ಎಂತಹದಯ್ಯಾ ಜಂಗಮಪೂಜೆ?
ಇಂತಪ್ಪ ನಾಚಿಕೆಗೆಟ್ಟ ಮೂಕೊರೆಯರ ತೋರದಿರಾ,
ನಿಃಕಳಂಕ ಮಲ್ಲಿರ್ಜುನಾ. ‖ ೧೮ ‖

೧೯೮೪
ಕೋಲು ಹೋದ ಮತ್ತೆ ಕಾಳಗದ ಇರವೇಕೆ?
ಜಾಣನಾದ ಮತ್ತೆ ಕೇಳಲೇಕೆ ಆರುವನು?
ಜ್ಞಾನಿಯಾದ ಮತ್ತೆ ಬಾಳಲೇಕೆ ಭವದಲ್ಲಿ?
ಇದು ವೇಣುವಿನೊಳಗಣ ಕಿಚ್ಚಿನಂತಾಯಿತ್ತು.
ಇದಕ್ಕೆ ಜಾಣತನವೆ, ನಿಃಕಳಂಕ ಮಲ್ಲಿಕಾರ್ಜುನಾ? ‖ ೧೯ ‖

೧೯೮೫
ಗರಳವಿಲ್ಲದುರಗಂಗೆ ಹಲಬರಂಜಿದರುಂಟೆ?
ಕೈದಿಲ್ಲದ ಭಟ ಗರ್ಜಿಸಿದಡೆ ಅಂಜಿದರುಂಟೆ?
ಇಷ್ಟಬಾಹ್ಯ ದೃಷ್ಟವ ಮಾತನಾಡಿದಡೆ,
ನೆಟ್ಟನೆ ಪ್ರಾಣಲಿಂಗಿಯಪ್ಪನೆ?
ಅದು ನಿಶ್ಚಯವಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ‖ ೨೦ ‖

೧೯೮೬
ಗಾಜಿನ ಗೋಡೆಯ ಸುಣ್ಣ ವೇಧಿಸಬಲ್ಲುದೆ?
ನಾಗರ ಹೆಡೆಯ ಚಿಕ್ಕೆರ ಬಲ್ಲುದೆ?
ಉರಿಯ ಪುತ್ಥಳಿಯ ಅರಗು ಮುಟ್ಟಿ ಅಪ್ಪಬಲ್ಲುದೆ?
ಲಿಂಗಮಯ ಸಿರಿವಂತರ ಅಂಗವ ಸಂಗಿಸಬಲ್ಲವೆ ಇಂದ್ರಿಯಂಗಳು?
ಇಂತೀ ಗುಣವ ಹಿಂಗಿ, ಲಿಂಗವೆ ತಾನಾಗಿಪ್ಪ
ನಿಃಕಳಂಕ ಮಲ್ಲಿಕಾರ್ಜುನಾ. ‖ ೨೧ ‖

೧೯೮೭
ಗಾಣದಲ್ಲಿ ಸಿಲುಕಿದ ಎಳ್ಳು,
ನೋಯದೆ ಎಣ್ಣೆಯ ಬಿಡುವುದೆ?

ಕಾಯದಲ್ಲಿ ಸಿಲುಕಿದ ಜೀವ,
ನೋಯದೆ ಕರಣಂಗಳ ಬಿಡುವನೆ?
ಭಾವದಲ್ಲಿ ಸಿಲುಕಿದ ಭ್ರಮೆ,
ನೋಯದೆ ವಿಕಾರವ ಬಿಡುವುದೆ?
ಇಂತಿವನರಿದಲ್ಲದೆ ಜ್ಞಾನಲೇಪವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೨ ||

೧೯೮೮
ಗಾರುಡವ ತಿಳಿದಡೆ ಹಾವಿನ ಸರಸವೆ ಲೇಸು.
ಆಪ್ಯಾಯನವನರಿತಡೆ ಹಸಿವಿನ ಸಂಗವೆ ಲೇಸು.
ವಿಕಾರವರಿತಡೆ ಕಾಲವ್ಯಾಘ್ರನ ಸಂಭಾಷಣೆಯೆ ಲೇಸು.
ನನ್ನನರಿತು, ನಿಮ್ಮ ಬೆರೆದಡೆ ನಿನಗೆ ಲೇಸು,
ನಿಃಕಳಂಕ ಮಲ್ಲಿಕಾರ್ಜುನಾ. || ೨೩ ||

೧೯೮೯
ಗಾಳಿಯಲೆದ್ದ ಧೂಳು, ತೃಣ ಎಲೆ ಮೊದಲಾದ
ಬಹುವ್ಯಾಪಾರ, ಗಾಳಿಯ ಮುಟ್ಟಿದುದಿಲ್ಲ.
ಶರಣನ ಸರ್ವೇಂದ್ರಿಯ, ಗಾಳಿಯ ಧೂಳಿನ ಪರಿಯಂತೆ,
ಪಳುಕದ ಭಾಂಡ ಬಹುವರ್ಣದಂತೆ,
ಮುಟ್ಟಿಯೂ ಮುಟ್ಟದಿರ್ಪ ಮಹಾಶರಣಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. || ೨೪ ||

೧೯೯೦
ಗುರುವೆಂಬೆನೆ,
ಕಂಡಕಂಡವರಿಗೆ ಲಿಂಗವ ಕೊಟ್ಟು, ದ್ರವ್ಯಕ್ಕೆ ಹಂಗಿಗನಾದ.
ಲಿಂಗವೆಂಬೆನೆ,
ಸಂಸಾರಕ್ಕೆ ಅಂಗವ ಕೊಟ್ಟ.
ಜಂಗಮವೆಂಬೆನೆ,
ಕಂಡಕಂಡವರ ಅಂಗಳವ ಹೊಕ್ಕು, ಬಂಧನಕ್ಕೊಳಗಾದ.
ಎನಗಿದರಂದವಾವುದೊ, ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ. || ೨೫ ||

೧೯೯೧
ಗುರುಶಿಷ್ಯ ಸಂಬಂಧ,
ಕಮಠನ ಶಿಶುವಿನ ಕೂರ್ಮೆಯಂತಿರಬೇಕು.
ಗುರುಶಿಷ್ಯ ಸಂಬಂಧ,
ಬಿತ್ತುಳಿದ ಕಾರ್ಪಾಸದ ಪಾವಕನ ಸಂಗದಂತಿರಬೇಕು.

ಗುರುಶಿಷ್ಯ ಸಂಬಂಧ,
ಪಯದ ಅಪ್ಪುವಿನ ಸಂಗದಂತಿರಬೇಕು.
ಗುರುಶಿಷ್ಯ ಸಂಬಂಧ,
ಲೆಕ್ಕಣಿಕೆಯೊಳಡಗಿದ ಸುರೇಖೆಯಂತಿರಬೇಕು.
ಹೀಂಗಲ್ಲದೆ ಹಸ್ತಮಸ್ತಕಸಂಯೋಗವ ಮಾಡಿದ ಗುರುವಿನ ಇರವು,
ಒಡೆದ ಗಡಿಗೆಯಲ್ಲಿ ಸುಧೆಯ ತುಂಬಿ ಅದಿರಬೇಕೆಂದಡೆ,
ಪಡಿಗೆ ತೆರಹಿಲ್ಲ ಎಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೨೬ ॥

೧೯೯೨
ಜಂಗಮ ಸುಳಿದಡೆ ವಸಂತ ಗಾಳಿಯಂತೆ ಸುಳಿವ.
ಬಿರುಗಾಳಿಯಂತೆ ಸುಳಿವನೆ? ಸುಳಿಯ.
ಜಂಗಮಸ್ಥಲವೆಂತೆಂದಡೆ, ಮಳಲೊಳಗಣ ಅಗ್ಗಣಿಯಂತೆ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕದಡ ಚೆಲ್ಲಿ,
ತಿಳಿಯ ಕೊಳಬಲ್ಲಡೆ ಜಂಗಮವೆಂಬೆ.
ಇಂತಲ್ಲದಿರ್ದಡೆ ಭೂತಪ್ರಾಣಿಯೆಂಬೆ ಕಾಣಾ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೨೭ ॥

೧೯೯೩
ಜೀವನ ಕಡಿದವಂಗಿಲ್ಲದ ಪಾಪ, ಕತ್ತಿಗುಂಟೆ ಎಲೆ ದೇವಾ?
ಎಚ್ಚವನಿದ್ದಂತೆ ಅಂಬಿಗೆ ಮುನಿವರೆ?
ಕೊಲಿಸಿದರಸಿದ್ದಂತೆ ಬಂಟಂಗೆ ಮುನಿವರೆ?
ಎಲೆ ದಿವ್ಯಜ್ಞಾನವೆ,
ಎನ್ನೊಡೆಯ ನಿಃಕಳಂಕ ಮಲ್ಲಿಕಾರ್ಜುನನಿದ್ದಂತೆ,
ಎನ್ನನೇಕೆ ಕಾಡಿಹೆ? ॥ ೨೮ ॥

೧೯೯೪
ತಲೆಯ ಹಿಡಿಯಲರಿಯದೆ ನಡುವ ಹಿಡಿದ ಮತ್ತೆ,
ಕಚ್ಚದೆ ಸರ್ಪನೇನ ಮಾಡುವುದು?
ಹಗೆಯ ಕೊಲಹೋಗಿ,
ಅವನ ಕಡುಗಲಿತನಕ್ಕಂಜಿ ಅಡಿಗೆರಗಿದಡೆ,
ಅವ ಒಡಗೂಡಿ ಇರಿಯದೆ ಮಾಣ್ಬನೆ?
ಮೃಡನಡಿಯನರಿಯದೆ
ನರಕದಲ್ಲಿ ಬೀಳುವ ಕುರಿಗಳಿಗೇಕೆ, ನೆರೆ ಅರಿವು?
ಕರಿಗೊಂಡವಂಗಲ್ಲದೆ ಬರಿಮಾತಿಂಗುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ? ॥ ೨೯ ॥

೧೯೯೫

ನಾನರಿಯದಿರ್ದಡೆ
ಜ್ಞಾನಿಗಳ ಸಂಭಾಷಣೆಯನರಸುತ್ತಿದ್ದೇನೆ.
ಕಲಿಗಳೊಂದಿಗೆ ಹಂದೆ ಹೋಹಂತೆ,
ಹೊಳೆಯಲ್ಲಿ ಹೋಹನ ಉಡಿಯ ಹಿಡಿದು ಹೋಹಂತೆ,
ಅಂಧಕ ದೃಷ್ಟಿಯವನೊಡನೆ ನಡೆವಂತೆ,
ಆನು ನಿಮ್ಮ ಶರಣರ ಬೆಂಬಳಿವಿಡಿದೆಯ್ದುವೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೦ ||

೧೯೯೬

ನೀರೊಳಗಣ ಶಿಲೆಯ ಒಡೆಯರುಗಳೆಲ್ಲರೂ ಕೂಡಿ,
ಅದ ಊರಿ ನೆನೆಯಿತ್ತೆಂದಡೆ, ಅದು ಸಾರಾಯವಾಯಿತ್ತೆ?
ಮೀರಿದ ಶರಣರೆಲ್ಲರೂ ಕೂಡಿ,
ಗುರು ಕೊಟ್ಟ ಲಿಂಗವ ಸೇರುವ ಸಾರಾಯವ ಬಲ್ಲರೆ?
ಹುತ್ತವ ಬಡಿದಡೆ ಹಾವು ಸತ್ತುದುಂಟೆ?
ಇದು ನಿಶ್ಚಯವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೧ ||

೧೯೯೭

ನೆಲ ತಳವಾರನಾದಡೆ, ಕಳ್ಳಂಗೆ ಹೊಗಲೆಡೆಯುಂಟೆ?
ಸರ್ವಾಂಗಲಿಂಗಿಗೆ ಅನರ್ಪಿತವುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ? || ೩೨ ||

೧೯೯೮

ಪರರ ಕಾಡಿ ಬೇಡಿ ಮಾಡೆಹೆನೆಂಬ ಮೋಡಿ ಏತಕ್ಕೆ?
ಕಾಡ ಸೊಪ್ಪಾದಡೇನು, ಬೇಡದೆ ಉಂಬ ಆರೂಢಂಗೆ
ಮೂರಡಿಗೊಮ್ಮೆ ನಮೋ ನಮೋ ಎಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೩ ||

೧೯೯೯

ಪರುಷದ ಪುತ್ಥಳಿಯ ಇರವಿನಂತೆ, ಪೃಥ್ವಿಯ ನುಂಗಿದ ಉದಕದಂತೆ,
ಅನಲ ನುಂಗಿದ ತಿಲದಂತೆ, ವರುಣನ ಕಿರಣಕೊಂಡ ದ್ರವದಂತೆ,
ಇನ್ನೇನನುಪಮಿಸುವೆ? ಇನ್ನಾರಿಗೆ ಹೇಳುವೆ?
ನೋಡುವುದಕ್ಕೆ ಕಣ್ಣಿಲ್ಲ, ಕೇಳುವುದಕ್ಕೆ ಕಿವಿಯಿಲ್ಲ,
ಕೀರ್ತಿಸುವುದಕ್ಕೆ ಬಾಯಿಲ್ಲ, ಏನು ಎಂಬುದಕ್ಕೆ ತೆರಪಿಲ್ಲ
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವು. || ೩೪ ||

೨೦೦೦
ಪೂಜೆಯಿಂದ ತಾ ಪೂಜ್ಯವಂತನಾದೆಹೆನೆಂದು ಮಾಡುವಾತನ ಇರವು
ಹೊಲತಿ ಶುದ್ಧನೀರ ಮಿಂದೆನೆಂದು ಕೆಲಬರ ಮುಟ್ಟುವಂತೆ,
ತನ್ನ ಹೊಲೆಯ ಮರೆದು.
ಆ ವಿಧಿ ನಿಮಗಾಯಿತ್ತು.
ತ್ರಿಕರಣ ಶುದ್ಧವಿಲ್ಲದ ಪೂಜೆಯವರು
ಕೆಟ್ಟ ಕೇಡಿಂಗೆ ಇನ್ನೇವೆ, ನಿಃಕಳಂಕ ಮಲ್ಲಿಕಾರ್ಜುನಾ. ‖ ೩೫ ‖

೨೦೦೧
ಫಲದ ಸವಿಯ ವೃಕ್ಷವರಿದಡೆ
ಕೊಡುವುದೆ ಇದಿರಿಂಗೆ?
ಅನ್ನದ ಸವಿಯ ಕುಡಿಕೆಯರಿದಡೆ
ಮಿಗುವುದೆ ಇದಿರಿಂಗೆ?
ಲಿಂಗಸಂಗಿಯಾದಡೆ ಕಂಡಕಂಡವರಲ್ಲಿ ಉಲಿವನೆ?
ನಿಸ್ತರಂಗವನ್ನೈದಿದ ಮಂಗಲೋತ್ತರದಂತೆ ಇದರ ಸಂಗವು.
ಲಿಂಗೈಕ್ಯವು ಹೀಂಗಿದೆ
ನಿಃಕಳಂಕ ಮಲ್ಲಿಕಾರ್ಜುನಾ. ‖ ೩೬ ‖

೨೦೦೨
ಬಯಲು ಬತ್ತಲೆಯಾದಡೆ ಹೊದಿಸುವರಿನ್ನಾರೊ?
ಏರಿ ನೀರ ಕುಡಿದಡೆ ಬಿಡಿಸುವರಿನ್ನಾರೊ?
ಮಹಾಮೇರು ನಡೆದಡೆ ಪಥಕಿಂಬುಗೊಡುವರಿನ್ನಾರೊ?
ಅರಿದವ ಮರೆದವನಾದಡೆ, ಅರಿಕೆಯ ಹೇಳುವರಿನ್ನಾರೊ?
ನಿಮ್ಮ ನಿಜವ ನೀವೇ ಬಲ್ಲಿರಿ.
ನಾನಂಜುವೆ, ನಿಃಕಳಂಕ ಮಲ್ಲಿಕಾರ್ಜುನಾ. ‖ ೩೭ ‖

೨೦೦೩
ಬಳ್ಳಿ ಮರನ ಸುತ್ತಿ, ಅದು ಸಾಲದೆ ಮತ್ತೊಂದಕ್ಕೆ ಅಲ್ಲಾಡುವಂತೆ,
ನಿಲ್ಲದು ಮನ ಕ್ರೀಯಲ್ಲಿ, ಸಲ್ಲದು ಮನ ನಿಶ್ಚಯದಲ್ಲಿ.
ಬೆಲ್ಲವ ಮೆಲಿದ ಕೋಡಗದಂತೆ, ಕಲ್ಲಿನೊಳಗಾದ ಮತ್ಸ್ಯದಂತೆ,
ಅಲ್ಲಿಗೆ ಹೊಲಬ ಕಾಣದೆ, ಇಲ್ಲಿಗೆ ನೆಲೆಯ ಕಾಣದೆ,
ತಲ್ಲಣಗೊಳ್ಳುತ್ತಿದ್ದೇನೆ.
ಎನ್ನ ಭಾವದಲ್ಲಿ ನೀನಿರು, ನಿಃಕಳಂಕ ಮಲ್ಲಿಕಾರ್ಜುನಾ. ‖ ೩೮ ‖

೨೦೦೪
ಭಕ್ತ ದೇವನಿಗೆ ನೀರು ತಾವರೆಯ ತೆರನಂತೆ,
ಭಕ್ತ ದೇವನಿಗೆ ಕ್ಷೀರ ನೀರಿನ ತೆರನಂತೆ,
ನಿನಗೂ ನನಗೂ ಬೇರೊಂದೆಡೆಯುಂಟೆ, ನಿಃಕಳಂಕ ಮಲ್ಲಿಕಾರ್ಜುನಾ? ॥ ೩೯ ॥

೨೦೦೫
ಭಕ್ತ ತಾ ಮಾಡುವ ಕಾಯಕ,
ತನಗೆಂದಡೆ ಗುರುವಿಂಗೆ ದೂರ,
ತನ್ನ ಸತಿಗೆಂದಡೆ ಲಿಂಗಕ್ಕೆ ದೂರ,
ತನ್ನ ಸುತರಿಗೆಂದಡೆ ಜಂಗಮಕ್ಕೆ ದೂರ.
ತನ್ನ ಬಂಧುಗಳಿಗೆಂದಡೆ ಸಂಗನಬಸವಣ್ಣ ಮೊದಲಾದ
ಶರಣ ಸಂಕುಳಕ್ಕೂ ದೂರ, ನನಗೂ ದೂರ.
ಎನ್ನೊಳಗಾದ ನಿಃಕಳಂಕ ಮಲ್ಲಿಕಾರ್ಜುನನು ನಿನಗೂ ದೂರ. ॥ ೪೦ ॥

೨೦೦೬
ಭಕ್ತಿ ಜ್ಞಾನ ಕ್ರೀ ಮಾಡುವ ಮಾಟಂಗಳಲ್ಲಿ
ಚಿತ್ತಶುದ್ಧವಿಲ್ಲದ ಸತಿಯಾದಡೂ ಒಲ್ಲೆ,
ಪುತ್ರ ಬಂಧುಗಳಾದಡೂ ಒಲ್ಲೆ.
ಇಂತೀ ಇವನರಿತು ಕೂಡಿದೆನಾದಡೆ
ಎನ್ನ ಭಾವಕ್ಕೆ ಇದೆ ಭಂಗ.
ಇದು ಪ್ರಸನ್ನವಪ್ಪ ಭಕ್ತಿಯ ಕಳೆ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೪೧ ॥

೨೦೦೭
ಭಿತ್ತಿಯ ಮೇಲಣ ಚಿತ್ರದ ಬೊಂಬೆಯ ಕೈಯಲ್ಲಿ
ಹೊತ್ತುವ ದೀಪ ಇದ್ದಡೇನು, ಕತ್ತಲೆಯ ಬಿಡಿಸಬಲ್ಲುದೆ?
ನಿಷ್ಠೆಹೀನನಲ್ಲಿ ಇಷ್ಟಲಿಂಗ ಇರುತಿರಲಿಕ್ಕೆ ದೃಷ್ಟವ ಬಲ್ಲನೆ?
ಭಕ್ತಿಹೀನಂಗೆ ನಿತ್ಯಾನಿತ್ಯವ ಹೇಳಲಿಕ್ಕೆ,
ನಿಶ್ಚಯಿಸಬಲ್ಲನೆ ನಿಃಕಳಂಕ ಮಲ್ಲಿಕಾರ್ಜುನಾ? ॥ ೪೨ ॥

೨೦೦೮
ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ,
ವೇದ ಶಾಸ್ತ್ರ ಪುರಾಣ ಆಗಮ ಶ್ರುತಿ ಸ್ಮೃತಿ ತತ್ವದಿಂದ
ಇದಿರಿಗೆ ಬೋಧಿಸಿ ಹೇಳುವ ಹಿರಿಯರೆಲ್ಲರೂ ಹಿರಿಯರಪ್ಪರೆ?
ನುಡಿದಂತೆ ನಡೆದು, ನಡೆದಂತೆ ನುಡಿದು,

ನಡೆನುಡಿ ಸಿದ್ಧಾಂತವಾಗಿಯಲ್ಲದೆ ಅರುಹಿರಿಯರಾಗಬಾರದು.
ಗೆಲ್ಲಸೋಲಕ್ಕೆ ಹೋರಿ ಬಲ್ಲಿದರಾದೆವೆಂದು
ತನ್ನಲ್ಲಿದ್ದ ಹುಸಿಯ ಹುಸಿವ ಕಲ್ಲೆದೆಯವನ ನೋಡಾ.
ಇವರೆಲ್ಲರ ಬಲ್ಲತನವ ಕಂಡು ನಿಲ್ಲದೆ ಹೋದ,
ನಿಃಕಳಂಕ ಮಲ್ಲಿಕಾರ್ಜುನ. || ೪೩ ||

೨೦೦೯
ಮಣ್ಣಬೆಕ್ಕು ನನ್ನಿಯ ಮೂಷಕನ ಮುಟ್ಟಿದುದುಂಟೆ?
ಜಗಗನ್ನರ ಕ್ರೀ ವಿರಕ್ತಿಪ್ರಸನ್ನನ ಮುಟ್ಟಿದುದುಂಟೆ?
ಇದ ಚೆನ್ನಾಗಿ ತಿಳಿದು ನೋಡಿ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ. || ೪೪ ||

೨೦೧೦
ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡಿದೆವೆಂದು
ಸಂತೈಸಿಕೊಂಬಾದ್ಯರು ನೀವು ಕೇಳಿರಯ್ಯ.
ಭ್ರಮರ ಕೀಟಕವ ತಂದಳಿದು ತನ್ನಂತೆ ಮಾಡಿದುದಿಲ್ಲವೆ?
ಚ[ಕ್ರಿ] ಮೃತ್ತಿಕೆಯ ತಂದು
ತನ್ನ ನೆನಹಿನಲ್ಲಿ ತೋರಿದ
ಗುಣಕುಂಭವ ಮಾಡಿದುದಿಲ್ಲವೆ?
ಕಾರುಕ ಶಿಲೆಯ ತಂದು
ತನ್ನ ಮನಕ್ಕೆ ತೋರಿದ
ಸ್ವರೂಪವ ಮಾಡಿದುದಿಲ್ಲವೆ?
ಇಂತಿವೆಲ್ಲವು ಹಿಡಿದವರ ಗುಣಕ್ಕೊಳಗಾದವು.
ಇದನರಿಯದೆ ನಾವು ಗುರುವಾದೆವೆಂದು,
ಇದಿರು ಶಿಷ್ಯರೆಂದು ಭಾವಿಸಿ, ಸೇವೆಯ ಕೊಂಬ ಗುರು,
ಹರಿದ ಹರುಗೋಲನೇರಿ ತೊರೆಯ ಪಾಯ್ವುದಕ್ಕೆ ತೆರನಿಲ್ಲದೆ,
ಅದರಡಿಯಲ್ಲಿ ತುಂಬಿ ಸೂಸುವ ತೆರ ನಿಮಗಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. || ೪೫ ||

೨೦೧೧
ಮುಕುರಕ್ಕೆ ತಮಂಧವೆಂದು ಒರಸಿದರುಂಟೆ?
ಉದ[ಕ]ಕ್ಕೆ ತೃಷೆಯೆಂದು ನೀರಡಸಿದರುಂಟೆ?
ಬೆಂಕಿಗೆ ಚಳಿಯೆಂದು ಅಂಗಕ್ಕೆ ಹೊದಿಸಿದರುಂಟೆ?
ಲಿಂಗಾರೂಢಗೆ ಅವರಂಗಕ್ಕೆ ಮಾಡಿದೆವೆಂದಡೆ
ಅದರಂದವ ತಿಳಿಯಾ, ನಿಃಕಳಂಕ ಮಲ್ಲಿಕಾರ್ಜುನಾ. || ೪೬ ||

೨೦೧೨
ಮೂಕೊರೆಯನ ಕೈಯಲ್ಲಿ ವಾಸನೆಯ ಕುಸುಮವ ಕೊಟ್ಟಡೆ
ಅವನಿಗದು ಲೇಸೋ, ಕಷ್ಟವೋ? ಭಾವಿಸಿಕೊಳ್ಳಿರಣ್ಣಾ.
ಭಕ್ತಿಹೀನಂಗೆ ಸತ್ಯವ ಹೇಳಿದಡೆ,
ಅದೆತ್ತಣ ಸುದ್ದಿ, ನಿಃಕಳಂಕ ಮಲ್ಲಿಕಾರ್ಜುನಾ. || ೪೭ ||

೨೦೧೩
ಲಿಂಗಕ್ಕೆ ಮಜ್ಜನವ ಮಾಡುವಲ್ಲಿ ಮಂಡೆಯ ಕುರುಹು ಕಾಣೆ
ಲಿಂಗಕ್ಕುಣ ಬಡಿಸುವಡೆ ಬಾಯ ನೆಪ್ಪ ಕಾಣೆ.
ಇದಕ್ಕಿನ್ನೇವೆ? ಇನ್ನಾರಿಗೆ ಹೇಳುವೆ?
ಕೊಟ್ಟ ಗುರು ದೃಷ್ಟವ ಹೇಳಿದುದಿಲ್ಲ.
ಸೊಡರ ಹಿಡಿದು ಹಾಳ ಹಗಹದಲ್ಲಿ ಬೀಳುವ ತೆರನೆನಗಾಯಿತ್ತು
ನಿಃಕಳಂಕ ಮಲ್ಲಿಕಾರ್ಜುನಾ. || ೪೮ ||

೨೦೧೪
ಲಿಂಗವ ಕೈಯಲ್ಲಿ ಹಿಡಿದು, ಭಕ್ತರಂಗಣವ ಕಾಯಲೇತಕ್ಕೋ?
ಲಿಂಗವ ಕೈಯಲ್ಲಿ ಹಿಡಿದು, ಅವರಂಗದಿಚ್ಛೆಯ ನುಡಿದು,
ತನ್ನ ದಿಂಡ ಹೊರೆಯಲೇತಕ್ಕೋ?
ಸಂದನಳಿದ ಸದಮಲಾನಂದಂಗೆ ಇದರಿಂದ ಒಂದೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೪೯ ||

೨೦೧೫
ವಿರಕ್ತಿಯ ಹೇಳಿ ಹರಿದಾಡುವ ಹಿರಿಯರೆಲ್ಲರೂ
ಕರಸ್ಥಲದಲ್ಲಿ ಲಿಂಗವ ಹಿಡಿದು,
ಎರವಿನ ದ್ರವ್ಯ ಸ್ಥಿರವಲ್ಲವೆಂದು ಹೇಳಿ,
ಅವರು ಕೊಡುವುದಕ್ಕೆ ಮೊದಲೆ,
ತಾವು ಕೈಯಾಂತ ಬರು ಕಪಿಗಳ ನೋಡಿ ಬೆರಗಾದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೫೦ ||

೨೦೧೬
ವೇದವ ಕಲಿತು, ಶಾಸ್ತ್ರವನೋದಿ,
ನಾನಾ ಪುರಾಣಂಗಳಲ್ಲಿ ಪರಿಣತೆಯಾದೆವೆಂದು
ಶ್ರುತಿ ಸ್ಮೃತಿಗಳಲ್ಲಿ ಪರತತ್ವವ ನೋಡಿ
ಕಂಡೆಹೆವೆಂದು ಹೇಳುತ್ತಿರ್ಪ ಹಿರಿಯರೆಲ್ಲರೂ
ಇಕ್ಕುವ ದಾತನ ಬಾಗಿಲ ಕಾಯ್ದು ಚಿಕ್ಕಮಕ್ಕಳಾದರು.
ದೃಷ್ಟವ ಬೋಧಿಸುವ ಹಿರಿಯರೆಲ್ಲರೂ ಕೆಟ್ಟರಲ್ಲಾ,

ಉತ್ತರದ ಬಲೆಗೆ ಸಿಕ್ಕಿದ ಮೂಷಕನಂತೆ.
ಇವರ ದೃಷ್ಟವ ಕಂಡು ಮತ್ತೆ ಹಿರಿಯರೆಂದು ಹೋರುತ್ತಿರ್ಪ
ಮಿಟ್ಟೆಯ ಭಂಡರ ನೋಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೫೧ ||

೨೦೧೭
ಸಂಜೀವನವ ಕೈಯಲ್ಲಿ ಹಿಡಿದಿರ್ದು,
ಸಾವ ಹುಟ್ಟುವ ಜೀವವ ನಾ ಕಂಡೆ.
ಕಂಗಳ ಮುಂದೆ ಕಡವರ ತುಂಬಿರ್ದು,
ದಾರಿದ್ರ್ಯದಲ್ಲಿ ನೊಂದವರ ನಾ ಕಂಡೆ.
ತನ್ನಂಗದಲ್ಲಿ ಅಲಗ ಹೂಣೆಯಾಗಿ ಹೊತ್ತಿರ್ದು,
ಕೋಲಿನ ಹೊರೆಯ ಮೊನೆಯಲ್ಲಿ
ಇರಿಯಿಸಿಕೊಂಡು ಸತ್ತವರ ನಾ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ ಹೋದವರ. || ೫೨ ||

೨೦೧೮
ಸಾಸಿರ ನೋಂಪಿಯ ನೋ[ಂ]ತು,
ನೂಲೆಳೆಯ ಹರಿದಂತಾಯಿತ್ತೆನ್ನ ಭಕ್ತಿ.
ಭಾವದಲ್ಲಿ ಬಲಿಕೆಯಿಲ್ಲ, ಜ್ಞಾನದಲ್ಲಿ ಶುದ್ಧವಿಲ್ಲ.
ಮಾಟದಲ್ಲಿ ಕೂಟವಿಲ್ಲ, ಈ ವ್ಯವಹಾರ ಸಾಕು.
ಖ್ಯಾತಿಯ ಬಿಡಿಸಾ, ನಿಃಕಳಂಕ ಮಲ್ಲಿಕಾರ್ಜುನಾ. || ೫೩ ||

೨೦೧೯
ಸುಗಂಧ ಕೊಡುವ ಮೃಗವೆಂದಡೆ,
ನೋಯಿಸಿ, ಬಂಧಿಸಿದಡೆ ಗಂಧ ಬಂದುದುಂಟೆ, ದುರ್ಗಂಧವಲ್ಲದೆ?
ಇಂತೀ ಅರಿವಿನ ತೆರದಲ್ಲಿ ನುಡಿವ
ಮಾತಿನ ಬ್ರಹ್ಮವ ಬಲ್ಲೆವೆಂದು,
ಒತ್ತಿ ನುಡಿಯಬಹುದೆ ಸದಾತ್ಮರ?
ಅವರಿಚ್ಛೆಯೊಳಿರ್ದು ಸುಚಿತ್ತವನರಿವುದು.
ಭೃತ್ಯತ್ವದಿಂದ ತನಗೆ ಸಿಕ್ಕಿಚ್ಛೆಯ ಕಾಣಿಸಿಕೊಳಬೇಕಲ್ಲದೆ
ತಾ ಕಷ್ಟನಾಗಿ, ಆ ಮಹಾತ್ಮರ ದೃಷ್ಟವ ನೋಡಿಹೆನೆಂದಡೆ
ಸ್ವಪ್ನದಲ್ಲಿಯೂ ತಲೆದೋರನಾಗಿ.
ಇಂತೀ ನಿಶ್ಚಯದ ವಸ್ತುವನರಿತು
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ ಬೆಚ್ಚಂತಿರಬೇಕು. || ೫೪ ||

೨೦೨೦
ಹಿಡಿದ ಹೊಲಕ್ಕೆ ಒಡವೆಯ ಕೊಡೆನೆಂದಡೆ,
ಬಿಡುವರೆ ಪೊಡವಿಯೊಡೆಯರು?
ನುಡಿದ ಮಾತಿಂಗೆ ನಡೆಯದಿದ್ದಡೆ,
ಕೆಡೆನುಡಿಯದೆ ಬಿಡುವರೆ, ಲಿಂಗವನೊಡಗೂಡಿದ ಶರಣರು?
ಇದಕ್ಕೆ ಪಡಿಪುಚ್ಚವಿಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೫ ||

೨೦೨೧
ಹುಳ್ಳಿಯ ಹಗುರದಿಂದ ಹಳ್ಳವ ಹಾಯಬೇಕು.
ಬಲ್ಲವರ ಸಂಗದಿಂದ,
ನಿಂದ ಸಂಸಾರದ ತಳ್ಳಿಯ ಹರಿಯಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. || ೫೬ ||

*

ರಾಯಸದ ಮಂಚಣ್ಣ

೨೦೨೨
ಕೈದು ಮೊನೆಯೇರುವುದಕ್ಕೆ ಮೊದಲೇ ಕಟ್ಟಬಲ್ಲಡೆ
ಕೈದೇನ ಮಾಡುವುದು?
ಹಾವು ಬಾಯಿ ಬಿಡುವುದಕ್ಕೆ ಮೊದಲೇ ಹಿಡಿದ ಮತ್ತೆ
ವಿಷವೇನ ಮಾಡುವುದು?
ಮನ ವಿಕಾರಿಸುವುದಕ್ಕೆ ಮೊದಲೇ ಮಹದಲ್ಲಿ ನಿಂದ ಮತ್ತೆ
ಇಂದ್ರಿಯಂಗಳೇನ ಮಾಡಲಾಪವು, ಜಾಂಬೇಶ್ವರಾ ? || ೧ ||

೨೦೨೩
ಬರೆದು ಮತ್ತೆ ತೊಡೆದಡೆ ಆ ಲೇಖ ಶುದ್ಧವಲ್ಲ ಎಂದೆ.
ಅರಿದು ಮತ್ತೆ ಮರೆದಡೆ ಆ ಅರಿವಿಂಗೆ ಭಂಗವೆಂದೆ.
ಸತ್ತ ಮತ್ತೆ ಸಮುದ್ರವೂ ಸರಿ, ಒಕ್ಕುಡುತೆಯುದಕವೂ ಸರಿ, ಜಾಂಬೇಶ್ವರಾ || ೨ ||

೨೦೨೪
ಮರಾಳಂಗೆ ಹಾಲನೀರನೆರೆದಲ್ಲಿ
ನೀರನುಳುಹಿ ಹಾಲ ಕೊಂಬ ಭೇದವ ನೋಡಾ!
ಎಣ್ಣೆ ನೀರ ಕೂಡಿದಲ್ಲಿ, ಅದು ತನ್ನಿಂದಲೇ ಬೆಳೆದು
ಚೆನ್ನಾಗಿ ಉರಿದ ಭೇದವ ನೋಡಾ!
ಮಣ್ಣಿನಲ್ಲಿ ಹೊನ್ನು ಬೆರೆದು, ತನ್ನ ತಪ್ಪಿಸಿಕೊಂಡು,

ಹೊನ್ನು ಬೆಲೆಯಾದ ಭೇದವ ನೋಡಾ!
ತನ್ನೊಳಗೆ ತಾನಿದ್ದು, ತನ್ನನರಿಯದೆ
ತೊಳಲುವ ಬಿನ್ನಾಣವ ನೋಡಾ!
ಚೆನ್ನಾಗಿ ದುಡಿವ ಅಣ್ಣಗಳೆಲ್ಲರೂ ಹೊನ್ನು ಹೆಣ್ಣು ಮಣ್ಣೆಂಬ ಬಲೆಗೆ ಸಿಕ್ಕಿ
[ನಿಧಿಯು]ಳ್ಳ ಅಣ್ಣಗಳ ಬಾಗಿಲಲ್ಲಿ ನಿಂದು,
ಬಣ್ಣಗೆಟ್ಟವರ ಕಂಡು, ಚುನ್ನವಾಡುತಿರ್ದ, ಜಾಂಬೇಶ್ವರ. ॥ ೩ ॥

*

ಲದ್ದೆಯ ಸೋಮಯ್ಯ

೨೦೨೫
ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು,
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ? ॥ ೧ ॥

*

ವಚನಭಂಡಾರಿ ಶಾಂತರ

೨೦೨೬
ಮಲವ ತೊಳೆಯಬಹುದಲ್ಲದೆ,
ಅಮಲವ ತೊಳೆಯಬಹುದೆ ಅಯ್ಯಾ?
ಮಾತಾಡಬಹುದಲ್ಲದೆ,
ಅಜಾತನನರಿಯಬಹುದೆ ಅಯ್ಯಾ?
ಮಾಟವ ಮಾಡಬಹುದಲ್ಲದೆ,
ವರ್ಮದ ಕೂಟವ ಕೂಡಬಹುದೆ ಅಯ್ಯಾ?
ರಣದ ಪಂಥವ ಹೇಳಬಹುದಲ್ಲದೆ,
ಕಾದಬಹುದೆ ಅಯ್ಯಾ?
ಮಾತುಗಳ ಕೂಡಿ ಓತು ಹೇಳುವರೆಲ್ಲರು
ಉಮಾಕಾಂತನ ಬಲ್ಲರೆ?
ಈ ಮಾತಿನ ಮಾತಿಗೆ ಅಂಜಿ,
ಅಲೇಖನಾದ ಶೂನ್ಯ ಕಲ್ಲಿನೊಳಗೆ ಆದೆ ಹೇಳಾ. ॥ ೧ ॥

*

ವೀರ ಗೊಲ್ಲಾಳ

೨೦೨೭

ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು.
ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು.
ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು.
ಇಂತಿವನೆಲ್ಲವನರಿವ ಚಿತ್ತ ದೇವರಲ್ಲ,
ಕರಣಂಗಳ ಮೊತ್ತದೊಳಗಾಗಿ ಸತ್ವಗೆಟ್ಟಿತ್ತು.
ಇಂತಿವ ಕಳೆದುಳಿದ ವಸ್ತುವಿಪ್ಪೆಡೆ ಯಾವುದೆಂದಡೆ:
ಕಂಡವರೊಳಗೆ ಕೈಕೊಂಡಾಡದೆ,
ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಬೆರೆಯದೆ,
ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ,
ಮತ್ತೊಂದು ಪೆರತನರಿಯದೆ ನಿಂದಾತನೆ ಸರ್ವಾಂಗಲಿಂಗಿ,
ವೀರಬೀರೇಶ್ವರಲಿಂಗದೊಳಗಾದ ಶರಣ. ‖ ೧ ‖

*

ವೇದಮೂರ್ತಿ ಸಂಗಣ್ಣ

೨೦೨೮

ವೇಳೆಯನರಿದು ಧ್ವನಿದೋರುವ ತಾಮ್ರಚೂಡಂಗೆ ಅದಾವ ಜ್ಞಾನ?
ಮಧುರರಸಂಗಳಿದ್ದ ಠಾವನರಿದೆಯಿದುವ ಪಿಪೀಲಿಕಂಗೆ ಅದಾವ ಜ್ಞಾನ?
ತಾನುಂಡು ನೆನೆದಡೆ ಶಿಶು ತೃಪ್ತಿಯಹ ಕೂರ್ಮಂಗೆ ಅದಾವ ಜ್ಞಾನ?
ಇಂತೀ ಜೀವಜಾಲಂಗಳೆಲ್ಲವೂ ಜ್ಞಾನಕ್ಕೊಳಗು.
ಅರಿದು ನಡೆದಡೆ ವೇದವೇದ್ಯನು,
ಅರಿದು ನಡೆದಡೆ ಶಾಸ್ತ್ರಸಂಬಂಧಿ,
ಅರಿದು ನಡೆದಡೆ ಪುರಾಣಪುಣ್ಯವಂತನು,
ಅರಿದು ನಡೆದಡೆ ಸಕಲಾಗಮಭರಿತನು.
ಇಂತೀ ಪಂಚಾಕ್ಷರಿಯ ಮೂಲ, ಷಡಕ್ಷರಿಯ ಭೇದ.
ಜಗಕ್ಕಾಧಾರವಾರೆಂಬುದ ಏಕಮೇವನದ್ವಿತೀಯನೆಂಬುದ ತಿಳಿದು,
ಸೋಹಂ ಕೋಹಂ ಎಂಬುದ ತಿಳಿದು,
ಆ ನಿಜವೆ ವಸ್ತುವಿಗೊಡಲೆಂಬುದ ಪ್ರಮಾಣಿಸಿ,
ನುಡಿದು ನಡೆಯಬಲ್ಲವನೆ ವೇದವೇದ್ಯನು ಕಾಣಾ,
ಲಲಾಮಭೀಮಸಂಗಮೇಶ್ವರಲಿಂಗವು ತಾನಾದ ಶರಣ. ‖ ೧ ‖

*

ವೈದ್ಯ ಸಂಗಣ್ಣ

೨೦೨೯
ಭಕ್ತಗೊಂದೆ ವಾಕ್ಯ, ಬಾಳೆಗೊಂದೆ ಫಲ.
ವಿರಕ್ತ ಬಿಟ್ಟುದ ಹಿಡಿದಲ್ಲಿ ಮತ್ತೆ ಮುಟ್ಟಿದಡೆ ಸತ್ತನಾಯ ಹಡುಹು.
ಮತ್ತೆ ಸತ್ಕ್ರಿಯೆಯಲ್ಲಿ ನಡೆವವ ತನ್ನ ನಿತ್ಯನೇಮವ ತಪ್ಪಿ,
ಕೆಟ್ಟು ನಡೆದು, ಮತ್ತೆ ದ್ರವ್ಯವ ಕೊಟ್ಟು,
ಭಕ್ತರೊಡೆಯರಲ್ಲಿ ತಪ್ಪ ಪರಿಹರಿಸಿಕೊಂಡಿಹೆನೆಂದು ಬಹ
ಮಿಟ್ಟೆಯ ಭಂಡರ ಕಂಡಡೆ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರ
ಲಿಂಗವಾಯಿತ್ತಾದಡೂ ಒಡಗೂಡಲೊಲ್ಲೆ. ॥ ೧ ॥

*

ಶಂಕರದಾಸಿಮಯ್ಯ

೨೦೩೦
ಎರಳೆ ಯತಿಯಂತೆ, ಕಾಕ ಪಿಕದಂತಿರಬೇಡವೆ?
ತಿಟ್ಟನೆ ತಿರುಗಿ, ತೊಟ್ಟನೆ ತೊಳಲಿ ಬಳಲುವರ ಕಳ ಹೇಸಿಕೆಯ ನೋಡಾ!
ಇರುಳು ಹಗಲೆನ್ನದೆ ತಿರುಗುವವರ ಕಂಡು ಹೇಸಿದೆ.
ಅರಿದಡೆ ಶರಣ, ಮರೆದಡೆ ಮಾನವ.
ಸತ್ತ ಕಸನ ಹೊತ್ತುಕೊಂಡು ಊರೂರಿಗೆ ಮಾರುವ
ಕಾಶಾಂಬರಧಾರಿಗಳನೊಲ್ಲ, ನಿಜಗುರು ಶಂಕರದೇವ. ॥ ೧ ॥

*

ಶಿವನಾಗಮಯ್ಯ

೨೦೩೧
ಅಂಗದ ಮೇಲೆ ಲಿಂಗವಿದ್ದ ಬಳಿಕ, ಲಿಂಗಹೀನರ ಬೆರಸಲಾಗದು.
ಅಂಗದ ಮೇಲೆ ಲಿಂಗವಿದ್ದ ಬಳಿಕ,
ಲಿಂಗ ಮುಂತಾಗಿ ಎಲ್ಲಾ ಕ್ರೀಗಳನೂ ಗಮಿಸಬೇಕಲ್ಲದೆ,
ಅಂಗ ಮುಂತಾಗಿ ಗಮಿಸಲಾಗದು.
ಲಿಂಗಸಂಬಂಧಿಯಾಗಿ ಅಂಗಮುಂತಾಗಿಪ್ಪವರು ಲಿಂಗಕ್ಕೆ ದೂರವಯ್ಯಾ,
ನಾಗಪ್ರಿಯ ಚೆನ್ನರಾಮೇಶ್ವರಾ. ॥ ೧ ॥

*

ಶಿವಲೆಂಕ ಮಂಚಣ್ಣ

೨೦೩೨

ಅಂಗ ಮುಟ್ಟಿ ಅಪ್ಪಿ, ಕಂಗಳು ತುಂಬಿ ನೋಡಿ,
ಕೈಯಾಟ ಹೆರೆಹಿಂಗದೆ ಪೂಜಿಸಿ,
ಮನಕ್ಕೆ ತೆರಪಿಲ್ಲದೆ ಅರಿದು, ಎಡೆಬಿಡುವಿಲ್ಲದ ಸುಖ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವ ಕೂಡುವ ಕೂಟ. ॥ ೧ ॥

೨೦೩೩

ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ,
ಕಾಡಿ ಬೇಡಿ ಮಾಡುವುದು ದಾಸೋಹವೆ?
ಆವ ಕಾಯಕವು ಪ್ರಾಣವೆ ಕಡೆಯಾಗಿ, ದ್ರವ್ಯ ಮೊದಲಾಗಿ,
ಚಿತ್ತಶುದ್ಧದಲ್ಲಿ ಗುರುಚರಕ್ಕೆ ಮುಯ್ಯಾಂತು ಬಂದುದಕ್ಕೆ ಸರಿಗಂಡು,
ಲಿಂಗದೇಹಿಗಳಿಗೆಲ್ಲಾ ಒಂದೇ ಪ್ರಮಾಣದಲ್ಲಿ ಸಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ. ॥ ೨ ॥

೨೦೩೪

ಕಾಯವೆ ದೇಗುಲವಾಗಿ, ಕುರುಹಿಟ್ಟು ಕೊಟ್ಟ ಕುರುಹೆ ದೇವರಾಗಿ,
ನೋಡುವ ಕಣ್ಣೆ ಪೂಜಿಸುವ ಹೂವಾಗಿ,
ಆನಂದಾಶ್ರುಗಳೆ
ಸಕಲಭೋಗ ಅಷ್ಟವಿಧಾರ್ಚನೆ ಷೋಡಶೋಪಚರಿಯವಾಗಿ,
ಅರತುದೆ ಅಡ್ಡವಣಿಗೆ ಪರಿಯಾಣವಾಗಿ,
ಪರಿಣಾಮವೆ ನೈವೇದ್ಯವಾಗಿ,
ಅಖಂಡಭಕ್ತಿರತಿಯೆ ತಾಂಬೂಲವಾಗಿ ಪೂಜಿಸುತಿರ್ದೆನಯ್ಯಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ
ಎನ್ನ ಪ್ರಾಣಪೂಜೆಯ ನಿಮಗೆ. ॥ ೩ ॥

೨೦೩೫

ಕಾಮವೆಂಬುದೆ ಕಂಗಳ ಮುಂದೆ ಸುಳಿದಾಡುತ್ತಿದೆ.
ಕ್ರೋಧವೆಂಬುದೆ ಮನದ ಮುಂದೆ ಇಕ್ಕಿ ಹರಿದಾಡುತ್ತಿದೆ.
ಲೋಭವೆಂಬುದೆ ಸರ್ವವೆಲ್ಲರಲ್ಲಿ ಬೆರಸಿ ಕುಕ್ಕುಳಗುದಿವುತ್ತಿದೆ.
ಆಮಿಷ ತಾಮಸ ರಾಗದಿಂದ ಬ[ರುದೊ]ರೆ ಹೋಗುತ್ತಿದೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿಯದೆ. ॥ ೪ ॥

೨೦೩೬

ಗುರು ವೈಭವಕ್ಕೆ ಸಿಕ್ಕಿದಾಗಲೆ ಶಿಷ್ಯಂಗೆ ನರಕ ಪ್ರಾಪ್ತಿ.
ಲಿಂಗ ಭಜನೆಗೆ ಸಿಕ್ಕಿದಾಗಲೆ ಮರಣಕ್ಕೊಳಗು.
ಜಂಗಮ ಜಂಗುಳಿಯಾಗಿ,
ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ, ನಿರಂಗಕ್ಕೆ ಹೊರಗು.
ಇಂತೀ ಇವರು ನಿಂದುದಕ್ಕೆ ಬಂಧವಿಲ್ಲದಿರಬೇಕು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. ॥ ೫ ॥

೨೦೩೭

ಗುರುಸೇವೆಯಲ್ಲಿ ತನು ಕರಗಿ,
ಲಿಂಗಸೇವೆಯಲ್ಲಿ ಮನ ಕರಗಿ,
ಜಂಗಮಸೇವೆಯಲ್ಲಿ ಧನ ಕರಗಿ,
ಮಹಾಘನವನರಿದಲ್ಲಿ ಪ್ರಕೃತಿ ಕರಗಿ,
ನಿಜ ನಿಶ್ಚಯವಾಗಿ ನಿಂದಾತನೆ ಸದ್ಭಕ್ತನು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ. ॥ ೬ ॥

೨೦೩೮

ತನುವಿನಲ್ಲಿ ಮನೋಮೂರ್ತಿಯಾಗಿ:
ಜಿಹ್ವೆಯಲ್ಲಿ ರುಚಿಸುವವ ನೀನಾಗಿ,
ಕರ್ಣದಲ್ಲಿ ಆದರಿಸಿ ಕೇಳುವವ ನೀನಾಗಿ,
ನಯನದಲ್ಲಿ ಎವೆ ಹಳಚದೆ ನೋಡುವವ ನೀನಾಗಿ,
ನಾಸಿಕದಲ್ಲಿ ಸುವಾಸನೆಯ ಗ್ರಹಿಸುವವ ನೀನಾಗಿ,
ಪಾದಪಾಣಿಗಳಲ್ಲಿ ಸರ್ವಾಂಗಮುಖವಾಗಿ,
ಸಕಲಸುಖಿಯಾಗಿ, ಭೋಗಮೂರ್ತಿಯಾದೆಯಲ್ಲಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೭ ॥

೨೦೩೯

ಪರಧನವನೊಲ್ಲದಿಪ್ಪುದೆ ವ್ರತ.
ಪರಸ್ತ್ರೀಯರ ಕೂಡದಿಪ್ಪುದೆ ಶೀಲ.
ಸರ್ವಜೀವವ ಕೊಲ್ಲದಿಪ್ಪುದೆ ನೇಮ.
ತಥ್ಯಮಿಥ್ಯವನಳಿದಿಪ್ಪುದೆ ನಿತ್ಯನೇಮ.
ಇದು, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಸಂದೇಹವಿಲ್ಲದ ವ್ರತ. ॥ ೮ ॥

೨೦೪೦

ರಸವನರಿವುದಕ್ಕೆ ಜಿಹ್ವೆಯಾಗಿ ಬಂದು,
ಗಂಧವನರಿವುದಕ್ಕೆ ನಾಸಿಕವಾಗಿ ಬಂದು,

ರೂಪವನರಿವುದಕ್ಕೆ ಅಕ್ಷಿಯಾಗಿ ಬಂದು,
ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು,
ಸ್ಪರುಶನವನರಿವುದಕ್ಕೆ ತ್ವಕ್ಕಾಗಿ ಬಂದು,
ಇಂತೀ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. || ೯ ||

೨೦೪೧
ವ್ಯಾಧನ ಚಿತ್ತದಂತೆ, ಸಾಧನೆಯಯ್ಯನ ಮೈಲಾಗಿನಂತೆ,
ಭೇದಿಸಿಯೈದುವ ಪನ್ನಗನಂತೆ,
ಇಡುವ ತೊಡುವ, ಕೊಡುವ ಕೊಂಬಲ್ಲಿ,
ಲಿಂಗಪ್ಪನ ಒಡಗೂಡಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ, ಬೆಚ್ಚಂತಿರಬೇಕು. || ೧೦ ||

೨೦೪೨
ಹೊರಗೆ ಚಿಲುಮೆ, ಒಳಗೆ ಮೂತ್ರದ ಕುಳಿ.
ಹೊರಗೆ ಸ್ವಯಂಪಾಕ, ಒಳಗೆ ಅಧರಪಾಕ.
ಹೊರಗೆ ಭವಿ ನಿರಸನ, ಒಳಗೆ ಭವಿಸಂಗ ಕೂಟ.
ಇಂತಿವೆಲ್ಲವು, ಆಡುವ ವಿಧಾಂತ ನೇಮವ ಹಿಡಿದಂತಾಯಿತ್ತು.
ಇಂತೀ ಗುಣವನೊಪ್ಪ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. || ೧೧ ||

*

ಸಂಗಮೇಶ್ವರದ ಅಪ್ಪಣ್ಣ

೨೦೪೩
ಅಂದಂದಿಗೆ ನೂರು ತುಂಬಿತ್ತೆಂಬ ದಿಟವಿರಬೇಕು.
ಸಂದ ಪುರಾತನರ ನೆನೆಯುತ್ತಿರಬೇಕು.
ಜಂಗಮ ಮಠಕ್ಕೆ ಬಂದಡೆ, ವಂಚನೆಯಿಲ್ಲದೆ ಮಾಡಬೇಕು.
ಎನಗಿದೇ ವರವನೀವುದು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. || ೧ ||

೨೦೪೪
ಅನೇಕ ಪರಿಯ ಭಕ್ತಿಯ ವೇಷವನಳವಡಿಸಿಕೊಂಡು,
ಮನೆಮನೆದಪ್ಪದೆ ತಿರುಗುವೆನು.
ಅವರ ಇಚ್ಛೆಗೆ ಅನುಮಾನವಿಡಿದು ನುಡಿವೆನು.
ಅವರ ಮನಧರ್ಮವನರಿಯದೆ ನುಡಿದೆನಾದಡೆ,

ಅನೇಕ ಪರಿಯಲ್ಲಿ ಭಂಗಬಡುವೆನು.
ದಿಟದ ಭಕುತನಂತೆ,
ಪುರಾತರ ವಚನಂಗಳ ಉದರ ನಿಮಿತ್ತವಾಗಿ ಬಳಸುವೆನು.
[ಕಡು] ಪಾಪಿಗಿನ್ನೇನು ಹದನಯ್ಯ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ? ॥ ೨ ॥

೨೦೪೫
ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು,
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನರಿವು ನಿಮ್ಮ ಘನದೊಳಗೆ ಸವೆದು,
ನಿಶ್ಚಲ ನಿಜೈಕ್ಯವಾಗಿ,
ಬಸವಪ್ರಿಯ ಕೂಡಲ ಚೆನ್ನಸಂಗಯ್ಯಾ,
ನೀ ನಾನೆಂಬುದೇನಾಯಿತ್ತೆಂದರಿಯೆನು. ॥ ೩ ॥

೨೦೪೬
ಕುಲವುಳ್ಳನ್ನಕ್ಕ ಭಕ್ತನಲ್ಲ, ಛಲವುಳ್ಳನಕ್ಕ ಮಹೇಶ್ವರನಲ್ಲ,
ಫಲವುಳ್ಳನ್ನಕ್ಕ ಪ್ರಸಾದಿಯಲ್ಲ.
ಕುಲ ಗುರುಕೃಪೆಯ ಕೆಡಿಸಿತ್ತು, ಛಲ ಲಿಂಗಾರ್ಚನೆಯ ಕೆಡಿಸಿತ್ತು.
ಫಲ ದುಃಖಂಗಳಿಗೆ ಗುರಿ ಮಾಡಿತ್ತು.
ಕುಲಂ ಛಲಂ ಧನಂ ಚೈವ ಯೌವನಂ ರೂಪಮೇವ ಚ ।
ವಿದ್ಯಾ ರಾಜ್ಯಂ ತಪಶ್ಚೈವ ಯೇ ತೇ ಚಾಷ್ಟಮದಾಃ ಸ್ಮೃತಾಃ ॥
ಎಂದುದಾಗಿ,
ಒಂದು ಸುರೆಯ ಕುಡಿದವರು ಬಂಧುಬಳಗವನರಿಯರು.
ಎಂಟು ಸುರೆಯ ಕುಡಿದವರು ನಿಮ್ಮನೆತ್ತ ಬಲ್ಲರಯ್ಯಾ,
ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ? ॥ ೪ ॥

೨೦೪೭
ತಿಥಿವಾರವೆಂದರಿಯೆನಯ್ಯಾ, ಲಗ್ನವಿಲಗ್ನವೆಂದರಿಯೆನಯ್ಯಾ.
ಇದನರಿತು [ಏಳು] ವಾರ, ಹದಿನೆಂಟು ಕುಲವೆಂದೆಂಬರು.
ನಾವಿದನರಿಯೆವಯ್ಯಾ,
ಇರುಳೊಂದು ವಾರ, ಹಗಲೊಂದು ವಾರ.
ಭವಿಯೊಂದು ಕುಲ, ಭಕ್ತನೊಂದು ಕುಲ,
ನಾವು ಬಲ್ಲುದು ಇದು ತಾನೆ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೫ ॥

೨೦೪೮
ತಿರಿದುಕೊಂಡು ಬಂದಾದರೆಯೂ
ನಿಮ್ಮ ಭಕ್ತರಿಗೆ ಆನು ಬೆಸಕೆಯ್ವ ಭಾಗ್ಯವನು,
ಮಾಡು ಕಂಡಯ್ಯಾ.
ಮನ ವಚನ ಕಾಯದಲ್ಲಿ ನಿಮ್ಮ ಶರಣರಿಗೆ ಆನು ತೊತ್ತಾಗಿಪ್ಪುದು,
ಮಾಡು ಕಂಡಯ್ಯಾ.
ಹಲವು ಮಾತೇನು ಲಿಂಗಜಂಗಮಕ್ಕೆ ಈವುದನೆ
ಮಾಡು ಕಂಡಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಾ. || ೬ ||

೨೦೪೯
ಬಯಸಿದ ಬಯಕೆ ಕೈಸಾರುವಂತೆ,
ನಿಧಿ ನಿಧಾನ ಮನೆಗೆ ಬಪ್ಪಂತೆ,
ಪರಿಮಳವನರಸಿ ಬಪ್ಪ ಭ್ರಮರನಂತೆ,
ಚಿಂತಾಮಣಿಯ ಪುತ್ಥಳಿ ನಡೆಗಲಿತಂತೆ,
ಬಸವಪ್ರಿಯ ಕೂಡಲಚೆನ್ನಸಂಗನಲ್ಲಿ
ಪ್ರಭುದೇವರ ಬರವು ಕಾಣಬರುತ್ತಿದೆ ನೋಡಾ, ಸಂಗನಬಸವಣ್ಣಾ. || ೭ ||

೨೦೫೦
ಭಕ್ತರು [ಭಕ್ತರ] ಮನೆಗೆ ಬಂದಡೆ,
ತಮ್ಮ ಮನೆಯಲ್ಲಿ ತಾವಿಪ್ಪಂತಿರಬೇಕು.
ಅಂಜದೆ ಅಳುಕದೆ ನಡುಗುತ್ತಿರದೆ, ತಮ್ಮ ಶುದ್ಧಿ ತಾವಿರಬೇಕು.
ತಾವು ಆಳ್ವವರು ಆಳಿನಂತಿದ್ದಡೆ,
ಬಸವಪ್ರಿಯ ಕೂಡಲ ಚೆನ್ನಸಂಗ ಹಲ್ಲ ಕಳೆವ. || ೮ ||

೨೦೫೧
ವೇದ ನಾಲ್ಕನು ಓದಿದಡೇನು? ಶಾಸ್ತ್ರವ ನೆರೆ ಕೇಳಿದಡೇನು?
ಶಿವಜ್ಞಾನಹೀನರು ಬಲ್ಲರೆ ಭಕ್ತಿಯ ಪಥವನು?
ಅಲೋಡ್ಯಂ ಚ ಚತುರ್ವೇದೀ ಸರ್ವಶಾಸ್ತ್ರವಿಶಾರದಃ |
ಶಿವತತ್ವಂ ನ ಜ್ಞಾನಾತಿ ದರ್ವೀ ಪಾಕರಸಂ ಯಥಾ ||
ಕ್ಷೀರದೊಳಗಣ ಸಟ್ಟುಗ ಸವಿಸ್ವಾದುಗಳ ಬಲ್ಲುದೆ?
ಓದಿದ ನಿರ್ಣಯವ ನಮ್ಮ ಮಾದಾರ ಚೆನ್ನಯ್ಯ,
ಮಡಿವಾಳಯ್ಯ, ಡೋಹರ ಕಕ್ಕಯ್ಯನವರು ಬಲ್ಲರು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. || ೯ ||

೨೦೫೨
ಶ್ರೀಗುರುವಿನ ಕಾರುಣ್ಯದಿಂದ ಕರಸ್ಥಲಕ್ಕೆ ಪ್ರತ್ಯಕ್ಷವಾಗಿ,
ಶಿವಲಿಂಗವ ಬಿಜಯಂಗೈಸಿ, ಸರ್ವಾಂಗವೆಲ್ಲವನು
ಲಿಂಗಸ್ಪರುಶನವ ಮಾಡಿಕೊಟ್ಟ ಬಳಿಕ,
ಲಿಂಗಾಂಗನೆಯರು ಹೊಲೆಗಂಡೆವೆಂದು ತೊಲಗಲಾಗದು.
ಹೊಲತಿ ಲಿಂಗವ ಮುಟ್ಟಿ ಪೂಜಿಸಲಾಗದು?
ಅದೆಂತೆಂದಡೆ :
ಲಿಂಗಾರ್ಚನರತಾ ನಾರೀ ಸೂತಕೀ ಸ್ಯಾತ್ ರಜಸ್ವಲಾ |
ರವಿರಗ್ನಿರ್ಯಥಾ ವಾಯು ತಥಾ ಕೋಟಿಗುಣಃ ಶುಚಿಃ ||
ಮತ್ತಂ,
ಪೂಜಾಲೋಪೋ ನ ಕರ್ತವ್ಯಃ ಸೂತಕೇ ಮೃತಕೇऽಪಿವಾ |
ಜಲಬುದ್ಬುದವದ್ದೇಹಂ ತಸ್ಮಾಲ್ಲಿಂಗಂ ಸದಾऽರ್ಚಯೇತ್ ||
ಎಂದುದಾಗಿ ಇದು ಕಾರಣ,
ಅಂಗದ ಮೇಲೆ ಲಿಂಗವುಳ್ಳ ಭಕ್ತಾಂಗನೆಯರಲ್ಲಿ
ಹೊಲೆಸೂತಕವ ಕಲ್ಪಿಸುವ[ವ]ರಿಗೆ ಗುರುಲಿಂಗವಿಲ್ಲವಯ್ಯಾ,
ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ. || ೧೦ ||

*

ಸಕಳೇಶ ಮಾದರಸ

೨೦೫೩
ಅಂಕುರ ಪಲ್ಲವ ತರು ಕುಸುಮ ಫಲರಸಸಾರಾಯ ಇನಿತಿನಿತೆಲ್ಲಿದ್ದುದೋ,
ಬೀಜ ಮೊಳೆದೋರದಂದು?
ನಾಭಿಗಳೆಯದ ಪಶುವಿನ ಅಮೃತವೆಲ್ಲಿದ್ದುದೊ, ವೃಷಭ ಮುಟ್ಟದಂದು?
ಘನಕುಚ ಯೌವನೆಯರ ರಜಪ್ರಶ್ನೆಯಲ್ಲಿ ಒದಗಿದ ಹಸುಗೂಸು ಎಲ್ಲಿದ್ದುದೊ, ಕೊಡಗೂಸು ಕನ್ಯೆಯಳಿಯದಂದು?
ತ್ರಿಜಗದ ಉತ್ಪತ್ಯ, ಸಚರಾಚರದ ಗಂಭೀರವೆಲ್ಲಿದ್ದುದೊ,
ಶಿವನ ಅಷ್ಟತನುಮೂರ್ತಿಗಳಿಲ್ಲದಂದು?
ಸಪ್ತಸ್ವರ ಬಾವನ್ನಕ್ಷರವೆಲ್ಲಿದ್ದುದೊ,
ಜ್ಞಾನ ಉದಯಿಸದಂದು?
ಶರಧಿಯೊಳಗಣ ರತ್ನವೆಲ್ಲಿದ್ದುದೊ, ಸ್ವಾತಿಯ ಸಲಿಲವೆರಗದಂದು?
ಶರಣಪಥ ಲಿಂಗೈಕ್ಯವೆಲ್ಲಿದ್ದುದೊ,
ಆರಾಧ್ಯ ಸಕಳೇಶ್ವರದೇವರು ಕರುಣಿಸಿ ಕಣ್ದೆರೆದು ತೋರದಂದು? || ೧ ||

೨೦೫೪
ಅಜಾತನು, ಜಾತನ ಜಾತಕನೆಂಬೆನು,
ಅಜಾತಂಗೆ ಜಾತಂಗೆ ಕುಲಹೊಲೆಯಿಲ್ಲೆಂಬೆನು,
ಹಿರಿಯಮಾಹೇಶ್ವರನೆಂಬೆನು,
ಸಮಯಾಚಾರವ ಬೆರಸಲಮ್ಮೆನು.
ನಿಚ್ಚ ಪೂಜಿಸುವ ಪೂಜಕ ನಾನು!
ಸಕಳೇಶ್ವರದೇವಾ, ಎನ್ನ ನಾಚಿಸಬೇಡ. || ೨ ||

೨೦೫೫
ಅದು ಬೇಕು, ಇದು ಬೇಕುಯೆಂಬರು.
ಎದೆಗುದಿಹಬೇಡ, ಸುದೈವನಾದಡೆ ಸಾಕು.
ಪಡಿಪದಾರ್ಥ ತಾನಿದ್ದೆಡೆಗೆ ಬಹುದು.
ನಿಧಿ ನಿಕ್ಷೇಪಂಗಳಿದ್ದೆಡೆಗೆ ಬಹವಯ್ಯಾ.
ಹೃದಯಶುದ್ಧವಾಗಿ, ಸಕಳೇಶ್ವರಾ ಶರಣೆಂದಡೆ, ನಿಜಪದವನೀವ. || ೩ ||

೨೦೫೬
ಅರ್ಥಸನ್ಯಾಸಿ, ಬ್ರಹ್ಮಚಾರಿ ಆನಯ್ಯ.
ದೊರಕೊಳ್ಳದಿರ್ದಡೆ ಒಲ್ಲೆನೆಂಬೆನು.
ದಿಟಕ್ಕೆ ಬಂದಡೆ ಪರಿಹರಿಸಲರಿಯೆನು.
ಎನಗೆ ನಿಸ್ಪೃಹದ ದೆಸೆಯನೆಂದಿಂಗೀವೆಯಯ್ಯಾ,
ಸಕಳೇಶ್ವರದೇವಾ! || ೪ ||

೨೦೫೭
ಅಶನ ವ್ಯಸನಾದಿಗಳನಂತನಂತ.
ಕಾಶಾಂಬರಧಾರಿಗಳನಂತನಂತ.
ಸಕಳೇಶ್ವರದೇವಾ,
ನೀನಲ್ಲದೆ ಪೆರತನರಿಯದವರು ಎತ್ತಾನು ಒಬ್ಬರು. || ೫ ||

೨೦೫೮
ಆರುವನೊಲ್ಲೆನೆಂದು ಅರಣ್ಯವ ಹೊಗುವದು
ಕಾರ್ಯವಲ್ಲ, ದುರುಳತನ.
ಊರೊಳಗಿದ್ದಡೆ ನರರ ಹಂಗು.
ಅರಣ್ಯದಲ್ಲಿದ್ದಡೆ ತರುಗಳ ಹಂಗು.
ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿ ಕೊಂಬ
ಶರಣನೆ ಜಾಣ, ಸಕಳೇಶ್ವರದೇವಾ. || ೬ ||

೨೦೫೯
ಆಶೆಯಿಂದ ಬಿಟ್ಟು ಕಿರಿಯರಿಲ್ಲ,
ನಿರಾಶೆಯಿಂದ ಬಿಟ್ಟು ಹಿರಿಯರಿಲ್ಲ.
ದಯದಿಂದ ಬಿಟ್ಟು ಧರ್ಮವಿಲ್ಲ,
ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ.
ಸಚರಾಚರಕ್ಕೆ ಸಕಳೇಶ್ವರನಿಂದ ಬಿಟ್ಟು ದೈವವಿಲ್ಲ. || ೭ ||

೨೦೬೦
ಇದಿರೆನ್ನ ಹಳಿವವರು ಮತಿಯ ಬೆಳಗುವರು.
ಮನದ ಕಾಳಿಕೆಯ ಕಳೆವವರೆನ್ನ ನಂಟರು.
ದುರಾಚಾರದಲ್ಲಿ ನಡೆವವರು ಕನ್ನಡಿ ಎನಗೆ,
ಹೇಯೋಪಾದಿಯ ತೋರುವವರು.
ಇದು ಕಾರಣ, ನಾನನ್ಯ ದೇಶಕ್ಕೆ ಹೋಗೆನು.
ಸಕಳೇಶ್ವರದೇವರ ತೋರುವವರೊಳರಿಲ್ಲಿಯೆ. || ೮ ||

೨೦೬೧
ಈಶನಿಂದತ್ತ ಹಿರಿಯರಿಲ್ಲ.
ಆಸೆಯಿಂದತ್ತ ಕಿರಿಯರಿಲ್ಲ.
ದೆಸೆಯಿಂದತ್ತ ದಿಕ್ಕಿಲ್ಲ,
ಜಪದಿಂದತ್ತ ಪುಣ್ಯವಿಲ್ಲ.
ಸಚರಾಚರದೊಡೆಯ ಸಕಳೇಶ್ವರದೇವ,
ವಿಚಾರದಿಂದತ್ತ ಸಹಾಯವಿಲ್ಲ. || ೯ ||

೨೦೬೨
ಎನ್ನ ಮನದಲ್ಲಿ ದಿಟವಿಲ್ಲ, ಪೂಜಿಸಿ ಏವೆನು?
ಹೃದಯದಲ್ಲೊಂದು, ವಚನದಲ್ಲೊಂದು ಎನಗೆ ನೋಡಾ.
ಎನ್ನ ಕಾಯ ಭಕ್ತ, ಮನ ಭವಿ ಸಕಳೇಶ್ವರದೇವಾ. || ೧೦ ||

೨೦೬೩
ಏರಿಯ ಕಟ್ಟಬಹುದಲ್ಲದೆ ನೀರ ತುಂಬಬಹುದೆ?
ಕೈದುವ ಕೊಡಬಹುದಲ್ಲದೆ ಕಲಿತನವ ಕೊಡಬಹುದೆ?
ವಿವಾಹವ ಮಾಡಬಹುದಲ್ಲದೆ ಪುರುಷತನವ ಹರಸಬಹುದೆ?
ಘನವ ತೋರಬಹುದಲ್ಲದೆ ನೆನಹ ನಿಲಿಸಬಹುದೆ?
'ಓದು ಒಕ್ಕಾಲು ಬುದ್ಧಿ ಮುಕ್ಕಾಲು'
ಎಂಬ ಲೋಕದ ಗಾದೆಮಾತಿನಂತೆ,
ಸದ್ಗುರುಕಾರುಣ್ಯವಾದಡೂ ಸಾಧಿಸಿದವನಿಲ್ಲ, ಸಕಳೇಶ್ವರಾ. || ೧೧ ||

೨೦೬೪
ಕರ್ತನೊಬ್ಬನೆ ದೇವ, ಸತ್ಯವೆ ಸುಭಾಷೆ,
ಭೃತ್ಯಾಚಾರವೆ ಆಚಾರವಯ್ಯಾ.
ಮತ್ತೆ ದೇವರಿಲ್ಲ, ಮತ್ತೆ ಆಚಾರವಿಲ್ಲ,
ಮತ್ತೆ ಸುಭಾಷೆಯೆಂಬುದಿಲ್ಲ.
ಮಹಂತ ಸಕಳೇಶ್ವರದೇವರನೊಲಿಸಿದ ಪುರಾತರ ಪಥವಿದು.
ಅವಿತಥವಿಲ್ಲದೆ ನಂಬುವದು. || ೧೨ ||

೨೦೬೫
ಕಾಡಪತ್ರೆಯ ನಾಡಕೀಡೆ ತಿಂದಿರವೆ? ಉಡು ಏಕಾಂತ ನಿವಾಸಿಯೆ?
ತೋಳ ದಿಗಂಬರಿಯೆ? ಎತ್ತು ಬ್ರಹ್ಮಚಾರಿಯೆ?
ಬಾವುಲ ತಲೆಕೆಳಗಾಗಿದ್ದಡೆ ತಪಸ್ವಿಯೆ?
ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಶರಣರು
ಹೊರಹಂಚೆ ಒಳಬೊಳ್ಳೆ, ಒಲ್ಲರು ಲಿಂಗೈಕ್ಯರು. || ೧೩ ||

೨೦೬೬
ಕಾಮನೆಂಬ ಬಿಲ್ಲಾಳವುಂಟೆಂಬುದ, ನಾವು ಕೇಳಿ ಬಲ್ಲೆವೈಸೆ!
ಅವನೆಲ್ಲರನೆಸೆವ.
ಅವ ನಮ್ಮ ಕಂಡಡೆ, ಬಿಟ್ಟೆಮ್ಮ ನಿಟ್ಟೈಸದೆ ಸರಿವ.
ಸಕಳೇಶ್ವರದೇವರನರಿಯದ ನಿರ್ಭಾಗ್ಯರನೆಸೆವ. || ೧೪ ||

೨೦೬೭
ಕಾಯದಿಂದ ಗುರುವ ಕಂಡೆ,
ಕಾಯದಿಂದ ಲಿಂಗವ ಕಂಡೆ,
ಕಾಯದಿಂದ ಜಂಗಮವ ಕಂಡೆ,
ಕಾಯದಿಂದ ಪ್ರಸಾದವ ಕಂಡೆ.
ಕಾಯದಿಂದ ಸಕಳೇಶ್ವರದೇವರ ಪೂಜಿಸುವಲ್ಲಿ,
ಉತ್ತರಸಾಧಕನಾದೆಯಲ್ಲಾ, ಎಲೆ ಕಾಯವೆ. || ೧೫ ||

೨೦೬೮
ಕುಭಾಷೆ ಸುಭಾಷೆಯ ಕೇಳದಂತಿರಬೇಕು.
ಮೃದುಕಠಿಣಂಗಳನಾರಯ್ಯದಂತಿರಬೇಕು.
ರಸಗಂಧಂಗಳ ಅರಿಯದಂತಿರಬೇಕು.
ಲಿಂಗವಲ್ಲದೆ ಮತ್ತೊಂದ ಕಾಣದಂತಿರಬೇಕು.
ಇಂದ್ರಿಯಂಗಳ ಬಳಿಸಂದಲ್ಲದೆ
ದೇವ ಸಕಳೇಶ್ವರದೇವನನೊಲಿಸಬಾರದು. || ೧೬ ||

೨೦೭೯
ಗರ ಹೊಡೆದಂತೆ ಬೆ[ರ]ತುಕೊಂಡಿಪ್ಪರು.
ಮರನೇರಿ ಬಿದ್ದಂತೆ ಹಮ್ಮುದಂಬೋದರು.
ಉರಗನ ವಿಷವಾವರಿಸಿದಂತೆ ನಾಲಗೆ ಹೊರಳದು, ಕಣ್ಣಾಗಣರು.
ನಿಮ್ಮ ಕರುಣವೆ ಕರ ಚೆಲುವು, ಸಕಳೇಶ್ವರಯ್ಯಾ.
ಸಿರಿ ಸೋಂಕಿದವನ ಪರಿ ಬೇರೆ ತಂದೆ. || ೧೭ ||

೨೦೭೦
ಗುರುಪ್ರಸಾದವ ಕೊಂಬರೆ, ನಾಚುವುದು ಮನ.
ಲಿಂಗಪ್ರಸಾದವ ಕೊಂಬರೆ, ನಾಚುವುದು ಮನ.
ಜಂಗಮಪ್ರಸಾದವ ಕೊಂಬರೆ, ನಾಚುವುದು ಮನ.
ಸಮಯಪ್ರಸಾದವ ಕೊಂಬರೆ, ನಾಚುವುದು ಮನ.
ಸೂಳೆಯ ಬೊಜಗನ ಎಂಜಲ ತಿಂಬರೆ, ನಾಚದು ಮನ.
ಮಹಂತ ಸಕಳೇಶ್ವರಯ್ಯನು ಮೂಗ ಕೊಯ್ಯದೆ ಮಾಣನು. || ೧೮ ||

೨೦೭೧
ಜಗದಗಲದ ಕಲ್ಲು ನೆಲಕ್ಕೆ ಬಿದ್ದಡೆ, ಕೆಲಕ್ಕೆ ಸಾರುವನೆಗ್ಗ.
ನಗುತಲು ತಲ್ಲಣಿಸದೆ ಶಿವ ಶರಣೆನುತ್ತಿಹುದು.
ನಗುತಲು ತಲ್ಲಣಿಸದೆ ಹರ ಶರಣೆನುತ್ತಿಹುದು.
ಸಕಳೇಶ್ವರದೇವರು ವಿಮುಖವಾದಡೆ,
ನೆನಹೆಂಬಲಗಿನಲ್ಲಿ ಕೈಮಾಡುತ್ತಿಹುದು. || ೧೯ ||

೨೦೭೨
ಜನಮೆಚ್ಚೆ ಶುದ್ಧನಲ್ಲದೆ, ಮನಮೆಚ್ಚೆ ಶುದ್ಧನಲ್ಲವಯ್ಯಾ.
ನುಡಿಯಲ್ಲಿ ಜಾಣನಲ್ಲದೆ, ನಡೆಯಲ್ಲಿ ಜಾಣನಲ್ಲವಯ್ಯಾ.
ವೇಷದಲ್ಲಿ ಅಧಿಕನಲ್ಲದೆ, ಭಾಷೆಯಲ್ಲಿ ಅಧಿಕನಲ್ಲವಯ್ಯಾ.
ಧನ ದೊರಕದಿದ್ದಡೆ ನಿಸ್ಪೃಹನಲ್ಲದೆ, ಧನ ದೊರಕಿ ನಿಸ್ಪೃಹನಲ್ಲವಯ್ಯಾ.
ಏಕಾಂತದ್ರೋಹಿ, ಗುಪ್ತಪಾತಕ, ಯುಕ್ತಿಶೂನ್ಯಂಗೆ
ಸಕಳೇಶ್ವರದೇವ ಒಲಿ ಒಲಿಯೆಂದಡೆ, ಎಂತೊಲಿವನಯ್ಯಾ? || ೨೦ ||

೨೦೭೩
ಜ್ಯೋತಿ ಸೋಂಕಿದ ಬತ್ತಿಯೆಲ್ಲ ಜ್ಯೋತಿಯಪ್ಪವಯ್ಯಾ.
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ.
ಪ್ರಸಾದವ ಮುಟ್ಟಿದ ಪದಾರ್ಥಂಗಳೆಲ್ಲ ಪ್ರಸಾದವಪ್ಪವಯ್ಯಾ.
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗಾಂಗವಪ್ಪವಯ್ಯಾ.

ಸಕಳೇಶ್ವರದೇವಯ್ಯಾ, ನಿಮ್ಮ ಮುಟ್ಟಿದವರೆಲ್ಲ
ನಿಮ್ಮಂತೆ ಅಪ್ಪರಯ್ಯಾ. || ೨೧ ||

೨೦೭೪
ತನುವ ಪಡೆದು, ಧನವ ಗಳಿಸಬೇಕೆಂದು
ಮನುಜರ ಮನೆಯ ಬಾಗಿಲಿಗೆ ಹೋಗಿ,
ಮನಬಂದ ಪರಿಯಲ್ಲಿ ನುಡಿಸಿಕೊಂಡು,
ಮನನೊಂದು ಬೆಂದು ಮರುಗುತ್ತಿರಲಾರೆ.
ಸಕಳೇಶ್ವರದೇವಾ, ನೀ ಕರುಣಿಸಿ ಇದ್ದ ಠಾವಿನಲ್ಲಿ ಇಹಂಥ
ಪರಮಸುಖ ಎಂದು ದೊರೆಕೊಂಬುದೊ? || ೨೨ ||

೨೦೭೫
ದೇವಾ, ನಿಮ್ಮಲ್ಲಿ ಬಯಸಿ ಬೇಡುವಡೆ ಏನಿಲ್ಲ ದೇವಾ!
ಆಯುವ ಬೇಡುವೆನೆ? ಸಂಸಾರಕ್ಕಾನಂಜುವೆ.
ಸ್ತ್ರೀಯ ಬೇಡುವೆನೆ? ಪರಾಂಗನೆಯ ಪಾಪ.
ಮುಕ್ತಿಯ ಬೇಡುವೆನೆ? ಅದು ನಿನ್ನ ಪದವಿ.
ಸಕಳೇಶ್ವರದೇವಾ, ಆನೇನುವನೊಲ್ಲೆ,
ನಿಮ್ಮ ಶರಣರ ಸಂಗವುಳ್ಳಡೆ ಸಾಕು. || ೨೩ ||

೨೦೭೬
ದೇಶದೇಶಾಂತರವ ತಿರುಗಿ, ತೊಳಲಿ ಬಳಲಿ,
ಕೆಲರ ಹಳಿದು, ಕೆಲರ ಹೊಗಳಿ, ವೃಥಾ ಹೋಯಿತ್ತೆನ್ನ ಸಂಸಾರ.
ಗಿರಿಯ ಶಿಖರದ ಮೇಲೆ, ಲಿಂಗಧ್ಯಾನದಲ್ಲಿ
ಮೌನಿಯಾಗಿರಿಸೆನ್ನ, ಸಕಳೇಶ್ವರಯ್ಯಾ. || ೨೪ ||

೨೦೭೭
ನಡೆ ನುಡಿ ಚೈತನ್ಯಹರಣವುಳ್ಳನ್ನಕ್ಕ ಕ್ರೀಯೆಂತಂತೆ ನಡೆವುದು.
ಉರವಣೆ ಬೇಡ ಕಂಡಾ ಮನವೆ.
ಹೂಮಿಡಿ ಹರಿದಡೆ ಹಣ್ಣಹವೆ, ಎಲೆ ಮರುಳೆ?
ಲಿಂಗದಲ್ಲಿ ಮನ ಲೀಯವಾಗದನ್ನಕ್ಕ ಸಕಳೇಶ್ವರದೇವ ಮೆಚ್ಚುವನೆ? || ೨೫ ||

೨೦೭೮
ನಿಜವನರಿಯದ ಶರಣರು, ಲಿಂಗೈಕ್ಯರು,
ಗಿರಿ ಗಹನ ಗಹ್ವರದೊಳಗಿದ್ದಲ್ಲಿ ಫಲವೇನೊ?
ಮನವು ಲೇಸಾಗಿದ್ದಡೆ ಸಾಲದೆ?
ಪರಮಸುಖಿಯಾಗಿರ್ಪ ಶರಣನ ಹೃದಯದಲ್ಲಿ
ಸದಾ ಸನ್ನಿಹಿತನು ಸಕಳೇಶ್ವರದೇವ. || ೨೬ ||

೨೦೭೯
ನೇಮಿಯ ನೇಮ, ಲಿಂಗಾರ್ಚನೆಯ ಕೆಡಿಸಿತ್ತಲ್ಲಾ.
ಮತಿಗೆಟ್ಟ ಕುಂಬಾರ ಮಣ್ಣಸೂಜಿಯ ಮಾಡಿ,
ಕಮ್ಮಾರಗೇರಿಗೆ ಮಾರಹೋದಂತೆ,
ಸಕಳೇಶ್ವರದೇವಾ,
ನಿಮ್ಮ ಶರಣರು ಶೃಂಗಾರದಲ್ಲಿ ಲಿಂಗವ ಮರೆದರಲ್ಲಾ. ॥ ೨೭ ॥

೨೦೮೦
ಬಲೀಂದ್ರನ ಸಿರಿಗಿಂದ ಅಧಿಕರನಾರನೂ ಕಾಣೆನಯ್ಯಾ.
ಅಂಥ ಸಂಪತ್ತು ಮೂರಡಿಗೆಯ್ದುದು.
ಕೆಡುವಂತಿದ್ದುದೆ ಕೌರವನ ರಾಜ್ಯ?
ಮಡಿವಂತಿದ್ದುದೆ ರಾವಳನ ಬಲಾಧಿಕೆ?
ಪರಸ್ತ್ರೀ, ಲಕ್ಷ್ಮೀ ಆರಿಗೆಯೂ ನಿತ್ಯವಲ್ಲ.
ಇದು ಶಾಶ್ವತವೆ, ಸಕಳೇಶ್ವರದೇವಾ? ॥ ೨೮ ॥

೨೦೮೧
ಬೆಬ್ಬನೆ ಮಡಕೆಯಂತೆ ಬೆಬ್ಬಿಸಿಕೊಂಡಿದ್ದಡೇನಯ್ಯಾ?
ಮುತ್ತಲ ಹೂತಂತೆ, ಆಲ ಬಿಳಿಲು ಬಿಟ್ಟು, ಜಡೆಗಟ್ಟಿಕೊಂಡಿದ್ದಡೇನು?
ಕಂತೆಬೊಂತೆಯ ಹೊದೆದು ಚಿಂತಿಸುತಿದ್ದಡೇನು?
ತನುಮನಧನ ವಂಚನೆಯಿಲ್ಲದ ಭಕ್ತನ ಮನವ
ಮನೆಯಮಾಡಿಕೊಂಡಿಪ್ಪ, ಸಕಳೇಶ್ವರದೇವ. ॥ ೨೯ ॥

೨೦೮೨
ಭಕ್ತಂಗೆ ಬೇಡದ ಭಾಷೆ, ನಿನಗೆ ಕೊಡದ ಭಾಷೆ.
ಭಕ್ತಂಗೆ ಓಡದ ಭಾಷೆ, ನಿನಗೆ ಕಾಡುವ ಭಾಷೆ.
ಭಕ್ತಂಗೆ ಸತ್ಯದ ಬಲ, ನಿನಗೆ ಶಕ್ತಿಯ ಬಲ.
ಇಬ್ಬರ ಗೆಲ್ಲ ಸೋಲಕ್ಕೆ ಕಡೆಯಿಲ್ಲ.
ಈ ಇಬ್ಬರಿಗೆಯೂ ಒಡೆಯರಿಲ್ಲದ ಅಂಕ.
ಇನ್ನು ಭಕ್ತನು ಭಕ್ತಿಯ ಛಲವ ಬಿಡನಾಗಿ,
ಭಕ್ತ ಸೋತಡೆ, ಭಕ್ತನದೆ ಗೆಲುವು.
ಭಕ್ತ ಗೆದ್ದಡೆಂತು ಗೆಲುವು
ಇದ ನೀನೆ ವಿಚಾರಿಸಿಕೊಳ್ಳಾ, ಭಕ್ತದೇಹಿಕದೇವ ಸಕಳೇಶ್ವರಾ. ॥ ೩೦ ॥

೨೦೮೩
ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ
ಎಂದೆಂದಿಗೂ ಕೇಡಿಲ್ಲ.

ಮಾಡಿ ಭೋ, ಮಾಡಿ ಭೋ.
ಎನಗೆ ಲೇಸಾಯಿತ್ತು, ಹೋಯಿತ್ತೆಂಬ ಚಿಂತೆ ಬೇಡ,
ಇದ್ದಿತ್ತೆಂಬ ಸಂತೋಷ ಬೇಡ,
ಸಕಳೇಶ್ವರದೇವನವರನರಿದು ಸಲಹುವನಾಗಿ. || ೩೧ ||

೨೦೮೪
ಮೃತ್ತಿಕೆಯೊಂದರಲಾದ ಭಾಂಡದಂತೆ,
ಚಿನ್ನವೊಂದರಲಾದ ಭೂಷಣದಂತೆ,
ಉದಕವೊಂದರಲಾದ ವಾರಿಕಲ್ಲಿನಂತೆ,
ಬ್ರಹ್ಮದಿಂದಲಾದ ಜಗವು, ಭಿನ್ನವೆಲ್ಲಿಯದು ಸಕಳೇಶ್ವರಾ? || ೩೨ ||

೨೦೮೫
ಮೆಕ್ಕೆ ಮಿನಿಕೆ ಮೊದಲಾಗಿ ಅವು ಪಕ್ವಕ್ಕೆ ಬಂದಡೆ, ವಿಷ ಬಿಡುವವು.
ಸೋರೆ ವಾರುಣಿ ಫಣಿ ಅವು ಹರೆಯ ಹಿರಿದಾದಡೆ, ಮನದ ವಿಷ ಬಿಡವು.
ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಮನುಜಂಗೆ,
ನರೆ ಹಿರಿದಾದಡೇನು, ಮನದ ಅವಗುಣ ಬಿಡದು. || ೩೩ ||

೨೦೮೬
ಮೇಘಧಾರೆಯಿಂದ ಸುರಿದ ಹನಿಯೆಲ್ಲ ಮುತ್ತಪ್ಪವೆ?
ಧರೆಯ ಮೇಲಿಪ್ಪರೆಲ್ಲ ಶರಣರಪ್ಪರೆ?
ಪರುಷವ ಮುಟ್ಟದೆ ಪಾಷಾಣವ ಮುಟ್ಟಿದ ಕಬ್ಬುನ ಹೇಮವಹುದೆ?
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ,
ಭಾವ ಮುಟ್ಟದಿರ್ದಡೆ ವಾಯ ಕಾಣೆ ಭೋ.
ರಜವ ತೂರಿ ಚಿನ್ನವನರಸುವಂತೆ,
ನಿಮ್ಮನರಿಯದೆ, ಅಂಜನವನೆಚ್ಚಿದ ಕಣ್ಣಿಗೆ ತೋರುವುದೆ ಕಡವರ?
ಜಂಗಮವ ನಂಬಿದ ಮಹಂತಂಗೆ ತೋರದಿಪ್ಪನೆ ತನ್ನ?
ಎಲ್ಲಾ ದೈವವ ಪೂಜಿಸಿ, ಬರಿದಾದೆಲವದ ಫಲದಂತೆ,
ಸಕಳೇಶ್ವರನ ಸಕೀಲವನರಿಯದವರು ಇಲ್ಲಿಂದಿತ್ತಲೆ. || ೩೪ ||

೨೦೮೭
ಶಿವಯೋಗಿ ಭಿಕ್ಷವ ಕೊಂಬಲ್ಲಿ
ಜಾತಿಸೂಕವಿಲ್ಲದಿರಬೇಕು, ಆಚಾರ ಸಂಕಲ್ಪವಿಲ್ಲದಿರಬೇಕು.
ಶಿವಂಗೆ ಸಲ್ಲದ ದ್ರವ್ಯಕ್ಕೆ ಕೈಯಾನದಿರಬೇಕು.
ಆಶೆ ರೋಷ ಹರುಷವಿಲ್ಲದಿರಬೇಕು.
ಇಂತೀ ಕ್ರಮವನರಿದು,
ಭಕ್ತಿಭಿಕ್ಷವ, ಲಿಂಗನೈವೇದ್ಯವ ಮಾಡಿಕೊಳಬಲ್ಲ ಶರಣನ
ನೀನೆಂಬೆನಯ್ಯಾ, ಸಕಳೇಶ್ವರಾ. || ೩೫ ||

೨೦೮೮
ಶೀಲ ಶೀಲವೆಂದು ಗರ್ವೀಕೃತದಲ್ಲಿ ನುಡಿವ
ಉದ್ದೇಶ ಪ್ರಾಣಿಗಳೆಲ್ಲರೂ ಅನಂತಶೀಲರೆ?
ಹೂ ಬಾವಿ ಮಠಕ್ಕೆ ಸೀಮೆಯ ಮಾಡುವುದು ಶೀಲವೆ?
ಮನಕ್ಕೆ ಸೀಮೆಯ ಮಾಡುವುದು ಶೀಲವಲ್ಲದೆ.
ಹುಸಿಯ ಕಳೆವುದು ಶೀಲವಲ್ಲದೆ, ಭಕ್ತರ ಕಳೆವುದು ಶೀಲವೆ?
ಲಿಂಗ ಪ್ರಾಣವ ಮಾಡುವುದು ಶೀಲವಲ್ಲದೆ.
ಪ್ರಾಣ ಲಿಂಗವ ಮಾಡುವುದು ಶೀಲವೆ?
ಇಂತೆಲ್ಲ ಶೀಲರು ದುಶ್ಶೀಲರು.
ಸಕಳೇಶ್ವರದೇವಾ, ನಾನೇನೆಂದರಿಯೆ, ನೀನಿರಿಸಿದಂತಿರ್ಪೆ. || ೩೬ ||

೨೦೮೯
ಸಮತೆಯಿಲ್ಲದ ಮಾಟವೆಂಬುದು,
ಬಿತ್ತಿದ ಕೆಯ್ಯ ಕಸವು ಕೊಂಡಂತೆ.
ಸಮತೆಯಿಲ್ಲದ ಶೀಲವೆಂಬುದು,
ಒಟ್ಟಿದರಳೆಯನುರಿ ಕೊಂಡಂತೆ.
ಇನ್ನಾರ ಮಾಟವಾದಡೇನು?
ಆವ ಶೀಲವಾದಡೇನು?
ಹೊರಗನೆ ತೋರಿ,
ಒಳಗನೆ ಪೂಜಿಸುವ ಉಪಾಯದಲ್ಲಿ ಬದುಕುವರು,
ಸಕಳೇಶ್ವರದೇವಂಗೆ ದೂರವಾಗಿಪ್ಪರು. || ೩೭ ||

೨೦೯೦
ಸರವರದ ಮಂಡೂಕನು ತಾವರೆಯ ನೆಳಲ ಸಾರಿದಡೆ
ಪರಿಮಳವದಕೆ ಅಯ್ಯಾ? ಅಲಅ ಅರಿಯಬಾರದು.
ಪರಿಮಳವದಕೆ ಅಯ್ಯಾ? ಅಲಅ ಅರಿಯಬಾರದು, ಮದಾಳಿಗಲ್ಲದೆ.
ಸಕಳೇಶ್ವರದೇವಾ, ನಿಮ್ಮ ವೇದಿಸಿದ ವೇದ್ಯಂಗಲ್ಲದೆ,
ನಿಮ್ಮ ನಿಲವನರಿಯಬಾರದು. || ೩೮ ||

೨೦೯೧
ಸರ್ಪದಷ್ಟವಾದವರು ತಮ್ಮ ತಾವರಿಯರು.
ಕಾಮದಷ್ಟವಾದವರು ಲಜ್ಜೆ ನಾಚಿಕೆಯ ತೊರೆವರು.
ಸಂಸಾರದಷ್ಟವಾದವರು ಪರಮಾರ್ಥವನರಿಯರು.
ಲಿಂಗದಷ್ಟವಾದಡೆ ಅಂಗವೆನಲಿಲ್ಲ,
ಆರಾಧ್ಯಪ್ರಿಯ ಸಕಳೇಶ್ವರದೇವನಲ್ಲಿ ಸುಖಿಯಾಗಿ[ಪ್ಪ]ರು. || ೩೯ ||

೨೮೨

ಹರಗಣಂಗಳ ನೆರಹಿ ಮಾಡುವ ಮಾಟ,
ಉರಿಯ ನಾಲಗೆ ಕೊರಳನಪ್ಪಿದಂತಾಯಿತ್ತಯ್ಯಾ.
ಒಡೆದ ಮಡಕೆಯಲಮೃತವ ತುಂಬಿ,
ಮುರುವ ಕುಟ್ಟಿ ಅಟ್ಟುಂಬ ತೆರನಂತಾಯಿತ್ತಯ್ಯಾ.
ಭಕ್ತದೇಹಿಕದೇವ ಮನೆಗೆ ಬಂದಡೆ,
ಮತ್ತೆ ಮಾಡಿಹೆನೆಂಬುದಿಲ್ಲವು.
ಮೂಗಿಲ್ಲದ ಮುಖಕ್ಕೆ ಶೃಂಗಾರವ ಮಾಡಿದಂತಾಯಿತ್ತಯ್ಯಾ.
ಶರಣಸನ್ನಹಿತ ಸಕಳೇಶ್ವರದೇವನ ಅರಿದೂ ಅರಿಯದಂತಿರ್ದಡೆ,
ಮಳಲಗೌರಿಯ ನೋಂತು ನದಿಯಲ್ಲಿ ಬೆರಸಿದಂತಾಯಿತ್ತಯ್ಯಾ. || ೪೦ ||

೨೮೩

ಹೊಯಿದ ಹರೆಗೆ ಕುಣಿದಾಡುವರೆಲ್ಲಾ,
ಹಾಡಿದ ಗೀತಕ್ಕೆ ತಲೆದೂಗುವರೆಲ್ಲಾ,
ಪಂಜರದೊಳಗಣ ಅರಗಿಳಿಯಂತೆ, ಅದು ಆಡುವುದು, ಹಾಡುವದು.
ಸಕಳೇಶ್ವರದೇವರಲ್ಲಿ,
ಅಭ್ಯಾಸಕ್ಕೆ, ಮಜ್ಜನಕ್ಕೆ ಎರೆವರೆಲ್ಲಾ ಭಕ್ತರೆ? || ೪೧ ||

*

ಸಗರದ ಬೊಮ್ಮಣ್ಣ

೨೮೪

ಕಂಗಳ ಸೂತಕ ಹೋಯಿತ್ತು, ನಿಮ್ಮಂಗದ ದರ್ಶನದಿಂದ.
ಮನದ ಸೂತಕ ಹೋಯಿತ್ತು, ನಿಮ್ಮ ನೆನಹು ವೇಧಿಸಿ.
ಸಕಲಸೋಂಕಿನ ಭ್ರಾಂತು ಬಿಟ್ಟಿತ್ತು, ನಿಮ್ಮ ಹಿಂಗದ ಅರಿಕೆಯಲ್ಲಿ.
ಇಂತೀ ನಾನಾವಿಧದ ಭೇದೋಪಭೇದಂಗಳೆಲ್ಲವು,
ನಿಮ್ಮ ಕಾರುಣ್ಯದಲ್ಲಿಯೆ ಲಯ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೧ ||

೨೮೫

ಕಾಯಗುಣದಲ್ಲಿದ್ದು ಕರಣಂಗಳಂತಾಡದಿದ್ದಡೆ,
ಕಾಯದ ಸಂಗವೆ ಲೇಸು,
ಇಂದ್ರಿಯಂಗಳ ಸಂಸರ್ಗದಲ್ಲಿದ್ದು ಮುಟ್ಟುವ ಸಂಗವ ಬಲ್ಲಡೆ,
ಇಂದ್ರಿಯಂಗಳ ಸಂಗವೆ ಲೇಸು.
ಅವಗುಣದಲ್ಲಿದ್ದು ಅರತು, ತನ್ನಯ ಸಾವರಿತಡೆ,

ಸಾವೇ ಲೇಸು,
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ಕೂಡಿ ಕೂಟವಾದ ಮತ್ತೆ. || ೨ ||

೨೦೯೬
ಗೋಡೆಯ ಮರೆಯಲ್ಲಿ ನಿಂದು, ಕಾದುವರಿಗೇನು ಭೀತಿ?
ಅರೆನೆಲನಿದ್ದಂತೆ ನೋಟದ ಬರುಬರಿಗೇನು ಭೀತಿ?
ಎನ್ನ ಸುಖದುಃಖಕ್ಕೆ ಮುಯ್ಯಾಂತು,
ನೀ ಮುಂಚು, ನಾ ಹಿಂಚಾಗಿಯಿದ್ದ ಮತ್ತೆ
ಎನಗೆ ಬಂದ ಉಬ್ಬಸವಾವುದು?
ಆಳಿನಪಮಾನ ಆಳ್ದಂಗೆ ಆದಂತೆ
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ,
ನೀನಿರ್ದಂತೆ ಎನಗಾವ ಭೀತಿ? || ೩ ||

೨೦೯೭
ತನುವಿನೊಳಗಣ ತನುವಿನಲ್ಲಿ ಕೂಡಿದವನಾರೊ?
ಮನದೊಳಗಣ ನೆನಹಿನಲ್ಲಿ ನೆನಹಿಸಿಕೊಂಬವನಾರೊ?
ಬಾಯೊಳಗಣ ಬಾಯಲ್ಲಿ ಉಂಬವನಾರೊ?
ಕಣ್ಣಿನೊಳಗಣ ಕಣ್ಣಿನಲ್ಲಿ ನೋಡುವನಾರೊ?
ನಾ ನೀನೆಂಬಲ್ಲಿ ಅದೇನು ಹೇಳಾ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ? || ೪ ||

೨೦೯೮
ಹೂವ ಕೊಯ್ಯುವರಲ್ಲದೆ,
ಹೂವಿನ ಗಂಧವ ಕೊಯ್ದವರುಂಟೆ ಅಯ್ಯಾ?
ಮಾತನಾಡುವರಲ್ಲದೆ,
ಮಾತಿನ ಭೇದದ ವಾಸನೆಯ ಕಂಡವರುಂಟೆ ಅಯ್ಯಾ?
ಇದು ನೀತಿಯ ಒದಗು.
ಕ್ರೀಯ ನಿಹಿತವಾಗಿ ಮಾಡುವಲ್ಲಿ
ಭಾವಶುದ್ಧವಾಗಿರಬೇಕು.
ಮಾತನರಿದಾಡುವಲ್ಲಿ
ಮಾತಿನ ರೀತಿಗೆ ತಾ ಒದಗು ನಿಹಿತವಾಗಿರಬೇಕು.
ಅದು ಕೂಟಸ್ಥ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೫ ||

*

ಸತ್ತಿಗೆ ಕಾಯಕದ ಮಾರಯ್ಯ

೨೦೯೯
ಉದಯಕ್ಕೆ ಉತ್ಪತ್ಯವಾಗಿ, ಮಧ್ಯಾಹ್ನಕ್ಕೆ ಸ್ಥಿತಿಯಾಗಿ,
ಅಸ್ತಮಾನಕ್ಕೆ ಲಯವಹ ದೇಹವ ಹೊತ್ತು ಮತ್ತೆ,
ನಿಶ್ಚಿಂತದಲ್ಲಿ ನಿಂದು, ಕಷ್ಟವ ಬಿಡಿಸುವ ಠಾವ ತೋರಾ.
ಹಗಲಿಂಗೆ ಹಸಿವು ತೃಷೆ, ಇರುಳಿಂಗೆ ವಿಷಯ ವ್ಯಸನ ವ್ಯಾಪಾರ.
ಇಂತೀ ಘಟವ ಹೊಕ್ಕು,
ಐದಕ್ಕೆ ಒಡಲಾದೆಯಲ್ಲಾ ಐಘಂಟೇಶ್ವರಲಿಂಗಾ. ॥ ೧ ॥

೨೧೦೦
ಕಾಯಕವೆಂದು ಕಲ್ಪಿಸಿ ಮಾಡುವಲ್ಲಿ,
ತುಡುಗುಣಿಯಂತೆ ಮಡದಿ ಮಕ್ಕಳಿಗೆಂದು
ಹೆಡಿಗೆ ಗಳಿಗೆಯಲ್ಲಿ ಹೊಯ್ದು,
ಕಡ ಪರಪತಿಯೆಂದು ಕೊಟ್ಟಡೆ,
ಅದು ಗುರು ಪರ ಚರ ಈ ಮೂರರೊಡವೆಯಲ್ಲ.
ಆತನು ಮೃಡಭಕ್ತನೆಂದು
ಅವನ ಮನೆಯಲ್ಲಿ ಒಡಗೂಡಿ ಉಂಡಡೆ,
ಅಡಗ ನಾಯಿ ತಿಂದು, ಮಿಕ್ಕುದ ನರಿ ತಿಂದಂತೆ,
ಐಘಂಟೇಶ್ವರಲಿಂಗವೆ ಸಾಕ್ಷಿಯಾಗಿ. ॥ ೨ ॥

*

ಸಿದ್ಧಾಂತಿ ವೀರಸಂಗಯ್ಯ

೨೧೦೧
ವಾರಿಯಿಂದಾದ ಮುತ್ತು
ಶಾಂತಿಯ ಜಲದಲ್ಲಿ ಹಾಕಲಿಕಾಗಿ,
ಮುನ್ನಿನ ಎನ್ನಯ ವಾರಿ ಬಂದಿತ್ತೆಂದು
ತಾ ಗಟ್ಟಿಗೊಂಡುದಿಲ್ಲ.
ಈ ಮುತ್ತು ತದ್ಭಾವ ಅಪ್ಪುವಿನಂತಾದುದಿಲ್ಲ.
ಈ ಉಭಯದ ಭೇದವ ತಿಳಿದಡೆ,
ದ್ವೈತಾದ್ವೈತವ ಬಲ್ಲರೆಂಬೆ.
ಹೀಂಗಲ್ಲದೆ ಗೆಲ್ಲಸೋಲಕ್ಕೆ ಹೋರುವ

ಕಲ್ಲೆದೆಯವರಿಗೆಲ್ಲಿಯದೊ,
ಗೋಳಕಾಕಾರ ವಿಶ್ವವಿರಹಿತ ಲಿಂಗವು ಸಾಧ್ಯವಪ್ಪುದು? ॥ ೧ ॥

*

ಸುಂಕದ ಬಂಕಣ್ಣ

೨೧೦೨
ಅಂಗದಲ್ಲಿದ್ದು ಅವಧಾನಿಯಾಗಿ,
ಭಾವದಲ್ಲಿದ್ದು ಭವಚ್ಛೇದನವಾಗಿ,
ಸುಖದಲ್ಲಿದ್ದು ಅಸು ಅಂತಕನಾಗಿ,
ಸಕಲಭೋಗಂಗಳಲ್ಲಿದ್ದು ಭೋಗವಿರಾಗನಾಗಿ,
ಬಂಕೇಶ್ವರಲಿಂಗವ ನೋಡುತ್ತಿದ್ದು
ನೋಡದಂತಿರು, ಮನ ಘನದಲ್ಲಿ ನಿಂದು. ॥ ೧ ॥

೨೧೦೩
ಅನ್ನದ ಮೇಲಣ ಲವಲವಿಕೆ,
ನಿದ್ರೆಯ ಮೇಲಣ ಲವಲವಿಕೆ,
ಅಂಗನೆಯರ ಮೇಲಣ ಲವಲವಿಕೆಯಿದ್ದಂತೆ
ಲಿಂಗದಲ್ಲಿರಬೇಕು.
ಶಿವಲಿಂಗದಲ್ಲಿ ಮೋಹವನಳವಡಿಸಿದರೆ,
ತನ್ನನೀವ ನಮ್ಮ ಚೆನ್ನಬಂಕನಾಥದೇವನು. ॥ ೨ ॥

೨೧೦೪
ಕಾಳಗ ಕರಣಂಗಳಲ್ಲಿ ಸೋಲುವೆ.
ಮನ ಮಹವನೊಡಗೂಡಿದವರಲ್ಲಿ ಕೇಣಸರಬೇಡ.
ಸರ್ವಪ್ರಾಣಿಗಳಲ್ಲಿ ಊಣೆಯನರಸಬೇಡ.
ತನ್ನಯ ಮನ ಪ್ರಮಾಣಿಸಿದಲ್ಲಿ ನಾ ನೀನೆಂದೆನಬೇಡ,
ಬಂಕೇಶ್ವರಲಿಂಗವ ಭಾವಿಸಿದಲ್ಲಿ. ॥ ೩ ॥

೨೧೦೫
ಕ್ಷಯಕಾರಣವೆಂಬ ಪಟ್ಟಣಕ್ಕೆ ಲಯಕಾರಣವೆಂಬ ಅರಸು.
ಪೋಲಿಕಾರ ಪ್ರಧಾನ, ಮದೋನ್ಮತ್ತ ತಳವಾರ.
ಇಂತೀ ಪಟ್ಟಣದರಸು,
ಮರವೆಯ ಮಹಾರಾಜ್ಯವನು ಆಳುತ್ತಿರಲಾಗಿ,
ಆತನ ಅಡಿಗೆರಗಿ ಅಂಜುವರೆಲ್ಲ,
ಬಂಕೇಶ್ವರಲಿಂಗವ ಕಂಡರಿಯದ ಕಾರಣ. ॥ ೪ ॥

೨೧೧೬
ತನುಮಂಡಲ ರಣಮಯವಾಯಿತ್ತು.
ಕರಣಂಗಳ ಹಿಂಡು ಕೆದರಿತ್ತು.
ತನುಮಂಡಲದರಸು ಹಿಂದುಮುಂದಾದ
ಚಂಡಿಕ ಪ್ರಚಂಡತಮ ಕೋದಂಡ ಮಾರ್ತಾಂಡಮಯ
ಸ್ವಯಕುಲ ಚಕ್ರವರ್ತಿ ಗೆದ್ದ, ಬಂಕೇಶ್ವರಲಿಂಗದೊಲುಮೆಯಿಂದ. || ೫ ||

೨೧೦೭
ಮನ ಬುದ್ಧಿ ಚಿತ್ತ ಅಹಂಕಾರವೆಂಬಿವು ತನಗೆ ವೈರಿಗಳು.
ನಿರ್ಮಲ ಸುಚಿತ್ತ ದಿವ್ಯಜ್ಞಾನವೆ ತನಗೆ ಕೂಪರು.
ಮರೆದಡೆ ಹಗೆ.
ತನ್ನ ತಾನರಿತಡೆ, ತನ್ನಯ ಪರಿಸ್ಪಂದ ದಿವ್ಯಜ್ಞಾನ.
ಇಂತೀ ಉಭಯವ ತಿಳಿ, ಬಂಕೇಶ್ವರಲಿಂಗದಲ್ಲಿ. || ೬ ||

೨೧೦೮
ಸರ್ವೇಂದ್ರಿಯವೆಲ್ಲವು ಸರ್ವಸುಖಂಗಳ ಭೋಗಿಸಿ,
ಸರ್ವೇಶ್ವರನ ಗೊತ್ತ ಮುಟ್ಟಿಸಲರಿಯದೆ ಮತ್ತರಾಗಬೇಡ.
ಗಳೆಯನೇರಿದ ವಿಧಾಂತ ಲಾಗು ಬಾರದೆ ಇಳಿದಡೆ ಅವಗದೇ ಭಂಗ.
ಸರ್ವವನರಿದ ಜೀವನ್ಮುಕ್ತ ಮರಳಿ ಸರ್ವವನೊಡಗೂಡಿದಡೆ,
ಬಂಕೇಶ್ವರಲಿಂಗಕ್ಕೆ ದೂರ. || ೭ ||

೨೧೦೯
ಹಸಿದುಂಬ ಅಣ್ಣಗಳೆಲ್ಲರೂ ಅಸುವಿನ ಘಾತಕ್ಕೊಳಗಾದರು.
ಹಸಿವೆಯ ವಿಷಯಂಗಳಲ್ಲಿ ನಸಿದಾಡದೆ ಹುಸಿಯದೆ,
ಮರ್ತ್ಯರಂತೆ ಗಸಣೆಗೊಳ್ಳದೆ, ದಯದೆರಕದಲ್ಲಿರು,
ಬಂಕೇಶ್ವರಲಿಂಗವನರಿವುದಕ್ಕೆ. || ೮ ||

*

ಸೊಡ್ಡಳ ಬಾಚರಸ

೨೧೧೦
ಅಣ್ಣನೆಂಬಣ್ಣಗಳಣ್ಣೆಸೂದ್ಯೆ ಹೊನ್ನು.
ಅಣ್ಣನೆಂಬಣ್ಣಗಳನಣ್ಣೆಸೂದ್ಯೆ ಹೆಣ್ಣು.
ಅಣ್ಣನೆಂಬಣ್ಣಗಳನಣ್ಣೆಸೂದ್ಯೆ ಮಣ್ಣು.
ಹೊನ್ನ ಕಂಡ ಬಳಿಕ ಅಣ್ಣದಣ್ಣಗಳುಂಟೆ?
ಹೆಣ್ಣ ಕಂಡ ಬಳಿಕ ಅಣ್ಣದಣ್ಣಗಳುಂಟೆ?

ಮಣ್ಣ ಕಂಡ ಬಳಿಕ ಅಣ್ಣದಣ್ಣಗಳುಂಟೆ?
ಹೆಣ್ಣು ಹಿರಣ್ಯ ಭೂಮಿಯೆಂಬ ಹುಡಿಯ ಜಗದ ಕಣ್ಣಲ್ಲಿ ಹೊಯ್ದು,
ನಿಮ್ಮ ನೆನೆವುದಕ್ಕೆ ತೆರಹುಗುಡದಿದೆಯಲ್ಲಾ,
ಮುಕ್ಕಣ್ಣ ಸೊಡ್ಡಳ ಗರಳಧರಾ. ॥ ೧ ॥

೨೧೧೧
ಈ ಪತ್ರೆಗೀ ಫಲ, ಈ ಪುಷ್ಪಕೀ ಫಲ,
ಈ ಪೂಜೆಗೀ ಫಲವೆಂಬ ಕೈಕೂಲಿಕಾರರೆಲ್ಲ ಕರ್ಮಿಗಳಯ್ಯಾ,
ಸ್ವರ್ಗನರಕಗಳನುಂಬ ಕರ್ಮಿಗಳಯ್ಯಾ.
ಒಡಲೊಡವೆ ಪಡೆದರ್ಥವ ಮೃಡದೇವ ಸೊಡ್ಡಳಂಗರ್ಪಿತವೆಂದಾತ
ಬೆಡಗಿನ ಶಿವಪುತ್ರ, ಉಳಿದವರಂತಿರಲಿ. ॥ ೨ ॥

೨೧೧೨
ಉಂಡುಂಡು ಜರೆದವನು ಯೋಗಿಯೆ?
ಅಶನಕ್ಕೆ ಅಳುವವನು ಯೋಗಿಯೆ?
ವ್ಯಸನಕ್ಕೆ ಮರುಗುವವನು ಯೋಗಿಯೆ?
ಆಧಿವ್ಯಾಧಿಯುಳ್ಳವನು ಯೋಗಿಯೆ?
ಯೋಗಿಗಳೆಂದಡೆ ಮೂಗನಾಗಳೆ ಕೊಯಿವೆ.
ಯೋಗಿಗಳ ಯೋಗಿ ಶಿವಯೋಗಿ,
ಸೊಡ್ಡಳಾ, ಸಿದ್ಧರಾಮನೊಬ್ಬನೆ ಶಿವಯೋಗಿ. ॥ ೩ ॥

೨೧೧೩
ಎನ್ನ ಕಾಯವೆಂಬ ಸಿಂಹಾಸನದಲ್ಲಿ,
ಪ್ರಾಣವೆಂಬ ಲಿಂಗವ ಮೂರ್ತಿಗೊಳಿಸಿ,
ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು,
ಮೆಲ್ಲಮೆಲ್ಲನೆ ಸುತ್ತಿಮುತ್ತಿದ ಸಂಸಾರ ಬಯಲ ಬೆರಸಿ,
ನಾ ನೀನೆಂಬ ಭೇದವಳಿದು,
ಮಹಾದಾನಿ ಸೊಡ್ಡಳನಲ್ಲಿ ಲಿಂಗೈಕ್ಯವಾಯಿತ್ತು. ॥ ೪ ॥

೨೧೧೪
ಒಂದು ಇಂದ್ರಿಯ ಮೊದಲಾದುದಕ್ಕೆ ಕಡೆಯಿಲ್ಲ.
ಕುಂಜರನು ಸ್ಪರ್ಶೇಂದ್ರಿಯದ ಬಳಿ ಸಂದು,
ಫಣಿ ರಾಗರಸದಿಂದ,
ಭ್ರಮರ ಸೌರಭ್ಯದಿಂದ,
ಮತ್ಸ್ಯ ರುಚಿಯಿಂದ,
ಪತಂಗ ರೂಪಿಂದ,

ಒಂದೊಂದು ವಿಷಯದಲ್ಲಿ ಒಂದೊಂದು ಪ್ರಾಣಿಗಳು ನೊಂದು
ಬಂಧನಕ್ಕೆ ಬಂದುದನರಿಯಾ.
ಪಂಚೇಂದ್ರಿಯ ಬೆಂಬಳಿಯಲ್ಲಿ ಹರಿವ ಮನುಜರ
ಕೊಂದು ಕೂಗದೆ ಮಾಯೆ? ದೇವರಾಯ ಸೊಡ್ಡಳಾ. || ೫ ||

೨೧೧೫
ಕುಡುವವ ಮಾನವನೆಂದಡೆ
ಹೊಡೆ ಬಾಯ ಕೆರವಿನಟ್ಟೆಯಲ್ಲಿ.
ಮಾನುಷನ ಹೃದಯದೊಳು ತಾನೀಶ ಹೊಕ್ಕು,
ಸಲ್ಲುವಷ್ಟು ಕುಡಿಸುವ, ದೇವರಾಯ ಸೊಡ್ಡಳ. || ೬ ||

೨೧೧೬
ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ?
ಚಂದನವಿದ್ದಂತೆ ದುರ್ಗಂಧದ ಮೈಯಲ್ಲಿ ಪೂಸುವರೆ?
ಸುರಭಿ ಮನೆಯಲ್ಲಿ ಕರೆವುತ್ತಿರೆ, ಹರಿವರೆ ಸೊಣಗನ ಹಾಲಿಂಗೆ?
ಬಯಸಿದಮೃತವಿದ್ದಂತೆ,
ಅಂಬಿಲವ ನೆರೆದುಂಬ ಭ್ರಮಿತ ಮಾನವಾ, ನೀನು ಕೇಳಾ.
ಪರಮಪದವಿಯನೀವ ಚೆನ್ನ ಸೊಡ್ಡಳನಿದ್ದಂತೆ,
ಸಾವದೇವರ ನೋಂತರೆ, ಕಾವುದೆ ನಿನ್ನ? || ೭ ||

೨೧೧೭
ಗಂಡನುಳ್ಳ ಹೆಂಡಿರನು ಕಂಡು
ಅಳುಪದಿರು ಮನವೆ.
ಬಂದ ಬಸುರನೂ ಉಂಡ ಮೊಲೆಯನೂ ಕಂಡು
ಮರುಗದಿರಾ ಮನವೆ.
ಉದ್ದಂಡತನದಲ್ಲಿ ನಡೆವ ಭಂಡರನು
ಹುಳುಗೊಂಡದಲ್ಲಿಕ್ಕುವ, ಸೊಡ್ಡಳದೇವ. || ೮ ||

೨೧೧೮
ತನುವಿಕಾರ, ಮನವಿಕಾರ, ಜನನಮರಣಸ್ಥಿತಿ ಕಾರಣ.
ಹೊನ್ನ ತೋರಿ[ದು], ಜಗದ ಕಣ್ಣ ಮೊದಲಿಗೆ.
ಹೆಣ್ಣ ಸುಳಿಸಿ[ದು], ಜಗದ ಕಣ್ಣ ಮೊದಲಿಗೆ.
ಮಣ್ಣ ಹರಹಿ[ದು], ಜಗದ ಕಣ್ಣ ಮೊದಲಿಗೆ.
ತನುವ ತಪ್ಪಿಸಿ, ಜಗವ ಸಂಸಾರಕ್ಕೊಪ್ಪಿಸಿ,
ನುಣ್ಣನೆ ಹೋದನುಪಾಯದಿ ದೇವರಾಯ ಸೊಡ್ಡಳ. || ೯ ||

೨೧೧೯
ತಮ್ಮ ಪುತ್ರರಂಗದ ಮೇಲೆ, ತಮ್ಮ ಗುರುವಿನ ಹಸ್ತದಲ್ಲಿ
ಲಿಂಗಸಾಹಿತ್ಯವ ಮಾಡಿದ ಬಳಿಕ,
ಆ ಗುರುವಿನ ಪುತ್ರರಲ್ಲದೆ, ತಮ್ಮ ಪುತ್ರರಲ್ಲ.
ತಾವವರೂ ಗುರುವಿನ ಸೊಮ್ಮೆಂದರಿದು,
ಮತ್ತೆ ತಮ್ಮ ಪುತ್ರಿಯರೆಂದು ಮಾರಿಕೊಂಡುಂಡು,
ನಾನು ಭಕ್ತ, ನಾನು ಮಹೇಶ್ವರನೆಂಬ ಶಿವಾಚಾರ ಭ್ರಷ್ಟರುಗಳ
ವೀರ ಸೊಡ್ಡಳ ಮೆಚ್ಚುವನೇ ಚೆನ್ನಬಸವಣ್ಣಾ. || ೧೦ ||

೨೧೨೦
ನೆರೆಮನೆಯಲ್ಲಿ ಸಿರಿಯಿರ್ದಡೆ ಕಾರಣವೇನು?
ಪುರಾತನರ ವಚನ ವಚಿಸಿದಲ್ಲಿ ಫಲವೇನು?
ವಚನದಂತೆ ತಾನಿಲ್ಲ, ತನ್ನಂತೆ ವಚನವಿಲ್ಲ.
ಮೂಗಿಲ್ಲದವರು ಕನ್ನಡಿಯ ನೋಡಿದಡೆ
ಶೃಂಗಾರ ಮೆರೆವುದೆ, ದೇವರಾಯ ಸೊಡ್ಡಳಾ? || ೧೧ ||

೨೧೨೧
ಬಂಟತನವ ಮಾಡಬೇಕೆಂದು, ಬಟ್ಟೆಯ ಬಡಿಯಬೇಕೆಂದು,
ಕೆಟ್ಟದುದನರಸಬೇಕೆಂದು, ಕೊಟ್ಟುದ ಬೇಡಬೇಕೆಂದು,
ಮುಂಜಾವದಲೇಳುವರಯ್ಯಾ, ಹಲಬರು ಕೆಲಬರು.
ಆಹಾರವನುಣಬೇಕೆಂದು, ವ್ಯವಹಾರವ ಮಾಡಬೇಕೆಂದು,
ಆ ಹೆಣ್ಣ ತರಬೇಕೆಂದು, ಈ ಹೆಣ್ಣ ಕೊಡಬೇಕೆಂದು
ಮುಂಜಾವದಲೇಳುವರಯ್ಯಾ, ಹಲಬರು ಕೆಲಬರು.
ಕರ್ತು ಸೊಡ್ಡಳದೇವಂಗೆ ತೊತ್ತುಗೆಲಸವ ಮಾಡಬೇಕೆಂದು,
ಕಣ್ಣತೆರವುತ್ತಲೇಳುವರು ಅಲ್ಲಲ್ಲಿ ಒಬ್ಬೊಬ್ಬರು. || ೧೨ ||

೨೧೨೨
ಭಕ್ತ ಭಕ್ತನೆಂದು ಯುಕ್ತಿಗೆಟ್ಟು ನುಡಿವಿರಿ,
ಭಕ್ತಿಸ್ಥಲವೆಲ್ಲರಿಗೆಲ್ಲಿಯದೊ?
ಹಾಗದಾಸೆ, ಹಣವಿನಾಸೆಯುಳ್ಳನ್ನಕ್ಕ ಭಕ್ತನೆ ?
ಅಯ್ಯಾ, ಅರ್ಥಪ್ರಾಣಾಭಿಮಾನ ವಂಚನೆಯುಳ್ಳನ್ನಕ್ಕ ಭಕ್ತನೆ?
ಹೊನ್ನು ಹೆಣ್ಣು ಮಣ್ಣು ಹಣಿದವಾಡದನ್ನಕ್ಕ ಭಕ್ತನೆ?
ಭಕ್ತರಿಗೆ ನಾವು ಹೇಳಿದಡೆ ದುಗುಡ ದುಮ್ಮಾನ,
ನೀನೊಮ್ಮೆ ಹೇಳಾ, ಪ್ರಳಯಕಾಲದ ಸೊಡ್ಡಳಾ. || ೧೩ ||

೨೧೨೩
ಭಕ್ತರಲ್ಲದವರೊಡನೆ ಆಡದಿರು, ಆಡದಿರು.
ಅರ್ಥದಾಸೆಗೆ ದುರ್ಜನರ ಸಂಗವ ಮಾಡದಿರು, ಮಾಡದಿರು.
ಉತ್ತಮರ ಕೆಡೆನುಡಿಯದಿರು, ನುಡಿಯದಿರು.
ಮುಂದೆ ಹೊತ್ತ ಹೊರೆ ದಿಮ್ಮಿತ್ತಹುದು.
ನಿತ್ಯವಲ್ಲದ ದೈವಕ್ಕೆರಗದಿರು, ಎರಗದಿರು.
ಕರ್ತು ಸೊಡ್ಡಳನ ನೆರೆ ನಂಬು, ಡಂಬಕ ಬೇಡ. || ೧೪ ||

೨೧೨೪
ಮನದ ಸಂಚಲದೋವರಿಯೊಳಗೆ
ಮಿಂಚಿನ ಗೊಂಚಲು ಬಳ್ಳಿವರಿಯಿತ್ತಯ್ಯಾ.
ಎನ್ನ ಕಾಯದ ಕರಣಂಗಳೊಳಗೆ,
ನಿರುಪಮಸುಖ ಸಾಧ್ಯವಾಯಿತ್ತು.
ಬಯಸುವ ಬಯಕೆ ಕೈಸಾರಿತ್ತು,
ಅರಸುವ ಅರಕೆ ನಿಂದಿತ್ತು.
ಅಹಾ! ಕರತಲಾಮಲಕವಾಯಿತ್ತಲ್ಲಾ.
ಸತ್ಯ ಶರಣರ ದರುಶನವೇನ ಮಾಡದೊ!
ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ
ಶ್ರೀಪಾದವ ಕಂಡು ಬದುಕಿದೆನಯ್ಯಾ. || ೧೫ ||

೨೧೨೫
ಲಿಂಗದೇವನೆ ಕರ್ತ,
ಶಿವಭಕ್ತನೆ ಶ್ರೇಷ್ಠ.
ಕೊಲ್ಲದಿರ್ಪುದೆ ಧರ್ಮ.
ಅಧರ್ಮದಿಂದ ಬಂದುದನೊಲ್ಲದಿರ್ಪುದೆ ನೇಮ.
ಅಳುಪಿಲ್ಲದಿರ್ಪುದೆ ವ್ರತ.
ಇದೇ ಸತ್ಪಥ, ಉಳಿದುದೆಲ್ಲ ಮಿಥ್ಯವೆಂದೆ ಕಾಣಾ,
ದೇವರಾಯ ಸೊಡ್ಡಳಾ. || ೧೬ ||

೨೧೨೬
ಶಿವಯೆಂದೋದದವನ ಓದು, ಗಿಳಿಯೋದು.
ಶಿವ ನಿಮ್ಮನಾರಾಧಿಸದವನ ಮನೆ, ಕೆಮ್ಮನೆ.
ಶಿವ ನಿಮ್ಮ ನೋಡದವನ ಕಣ್ಣು, ಹೀಲಿಯ ಕಣ್ಣು.
ಶಿವ ನಿಮ್ಮ ಹಾಡದವನ ಬಾಯಿ, ಕನ್ನದ ಬಾಯಿ.
ಶಿವ ನಿಮ್ಮ ಹೊಗಳದವನ ಬಾಯ ನಾಲಗೆ,

ಬಚ್ಚಲ ತಂಪಿನ ಜವುಗಿನಲ್ಲಿ ಹುಟ್ಟಿದ ಜಿಗುಳಿಯಯ್ಯಾ.
ಶಿವ ನಿಮಗೆರಗದ ಕರ್ಮಿ, ಶೂಲದ ಹೆಣ.
ಶಿವ ನಿಮ್ಮ ನೆನೆಯದವನ ದೇಹ, ಸಂದೇಹ.
ಶಿವ ನಿಮ್ಮ ಭಕ್ತನಲ್ಲದವನ
ಸಿರಿ ವಿದ್ಯೆ ಬುದ್ಧಿ ಕುಲ ಧನ
ಸಬದ ಮೇಲಣ ತೊಡಿಗೆ.
ಅಂತವನೇತಕ್ಕೆ ಬಾತೆ?
ಇದು ಕಾರಣ, ಭವಘೋರಕ್ಕಾರದೆ ಶರಣುಹೊಕ್ಕೆನಯ್ಯಾ.
ಸೊಡ್ಡಳಾ, ಇನ್ನು ಭವಬಂಧನ ನಮಗಿಲ್ಲವಯ್ಯಾ. || ೧೭ ||

೨೧೨೭

ಶ್ರುತಿತತಿಗಳ ಶಿರದ ಮೇಲೆ ಒಪ್ಪುತ್ತಿಪ್ಪ
ಅತ್ಯತಿಷ್ಠದ್ದಶಾಂಗುಲನ ಕಂಡೆನಯ್ಯಾ.
ಅಣುವಿಂಗೆ ಅಣು ಮಹತ್ತಿಂಗೆ ಮಹತ್ತಾದ
ತ್ರಿಣಯನಮೂರ್ತಿಯ ಕಂಡೆನಯ್ಯಾ.
ವಾಙ್ಮನಕ್ಕಗೋಚರವಾದ ನಿರವಯ ಬ್ರಹ್ಮನ ಕಂಡೆನಯ್ಯಾ.
ನಿತ್ಯನೇಕೋರುದ್ರನದ್ವಿತೀಯನ ಕಂಡೆನಯ್ಯಾ.
ಎನ್ನ ಕರಸ್ಥಲದೊಳಗೆ ಮಹಾದಾನಿ ಸೊಡ್ಡಳನ ಕಂಡೆನಯ್ಯಾ. || ೧೮ ||

೨೧೨೮

ಸಂಸಾರ ಸಂಸಾರ! ಕಾಳಗತ್ತಲೆ ಕಾಳಗತ್ತಲೆ!!
ಕರ ಹಿರಿದು ಕರ ಹಿರಿದು! ಎಚ್ಚತ್ತಿರು ಎಚ್ಚತ್ತಿರು ಜ್ಞಾನಧನಕ್ಕೆ!!
ಎಚ್ಚತ್ತಿರು ಎಚ್ಚತ್ತಿರು ಇಂದ್ರಿಯಗಳ್ಳರಿಗೆ!
ಕಾಮಃ ಕ್ರೋಧಶ್ಚ ಲೋಭಶ್ಚ ದೇಹೇ ತಿಷ್ಠಂತಿ ತಸ್ಕರಾಃ ।
ಜ್ಞಾನರತ್ನಾಪಹಾರಾಯ ತಸ್ಮಾತ್ ಜಾಗೃತ ಜಾಗೃತ॥
ಜನ್ಮದುಃಖಂ ಜರಾದುಃಖಂ [ಮೃತಿ]ರ್ದುಃಖಂ ಪುನಃ ಪುನಃ ।
ಸಂಸಾರಸಾಗರೋ ದುಃಖಂ ತಸ್ಮಾತ್ ಜಾಗೃತ ಜಾಗೃತ॥
ಎಂದುದಾಗಿ,
ಸಲೆ ಜೀವಿತಗೊಂಡ ಸೊಡ್ಡಳ ಆಳು, ಭಲಾ ಭಲಾ ಎನ್ನುತ್ತಿರಾ!! || ೧೯ ||

೨೧೨೯

ಸೊಣಗಂಗೆ [ಖ]ಂಡವ ಚೆಲ್ಲುವ ತೆರನಂತೆ,
ಸಂಸಾರಿಗೆ ಸಂಸಾರವ ಚೆಲ್ಲದೆ, ತೋರುವನೆ ಶರಣಪಥಂಗಳ?
ತೋರುವನೆ ಭಕ್ತಿಪಥಂಗಳ?
ಅದೆಂತೆಂದಡೆ:

ಅಶ್ರುತಿಃ ಕರ್ಣಪೂರಂ ಚ ಶ್ರುತೋ ಧರ್ಮೋಽಪ್ಯರೋಚಕಃ|
ಚರ್ಮಖಂಡನಭಕ್ಷ್ಯಾಣಾಂ ಶ್ವಾನಮನ್ನಮರೋಚಕಮ್||
ಎಂದುದಾಗಿ, ಸೊಡ್ಡಳದೇವ ತಾನೊಲ್ಲದವರ
ಭವದುಃಖ ದೋಣೆಯಲೂಡುವ. || ೨೦ ||

೨೧೩೦
ಹದನರಿದು ಹರಗುವ, ಬೆದೆಯರಿದು ಬಿತ್ತುವ,
ಸಸಿ ಮಂದವಾದಡೆ ತೆಗೆವನಯ್ಯಾ.
ಒಂದೊಂದ ಹೊಕ್ಕು ಬೆಳವಸಿಯ ತೆನೆಯ ಮೆಲುವನಯ್ಯಾ.
ಕೊಯಿವನಯ್ಯಾ, ಕೊರೆವನಯ್ಯಾ, ಒಕ್ಕುವನಯ್ಯಾ, ತೂರುವನಯ್ಯಾ.
ಲೋಕಾದಿಲೋಕಂಗಳ ಹಗೆಯನಿಕ್ಕುವನಯ್ಯಾ, ದೇವರಾಯ ಸೊಡ್ಡಳ. || ೨೧ ||

೨೧೩೧
ಹುತ್ತ ಹೋರಿನೊಳಗೆ ಕೈಯನಿಕ್ಕುವನೆನ್ನ ಶಿಶುವೆಂದು,
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ, ಬೆಂಬತ್ತಿ ಬಿಡಂ ಭೋ.
ಅಯ್ಯಾ ಎಂದಡೆ ಓ ಎಂಬೆ.
ಅನ್ಯವಿಷಯಕೆನ್ನ ಹತ್ತಲೀಯದೆ, ಎತ್ತೆತ್ತ
ನೋಡಿದಡತ್ತತ್ತ ಸೊಡ್ಡಳ. || ೨೨ ||

೨೧೩೨
ಹೆಂಗೂಸಿಂಗೆ ಶೃಂಗಾರ, ಪುರುಷನ ಕೂಟವೆಯ್ದುವನ್ನಕ್ಕ.
ಗಂಡುಗೂಸಿಂಗಾಚಾರ, ಪರಮನ ಕೂಟವೆಯ್ದುವನ್ನಕ್ಕ.
ಪುರುಷನ ಕೂಟದಲ್ಲಿ ಬಂಗಾರ ಶೃಂಗಾರ ವಸ್ತ್ರವಳಿಯಲು, ನಿಜ ಉಳಿಯಿತ್ತು.
ಪರಮನ ಕೂಟದಲ್ಲಿ ಆಗಮಾಚಾರವಳಿಯಲು, ನಿಜ ಉಳಿಯಿತ್ತು.
ಆ ಸಜ್ಜನಕ್ಕೆ, ಈ ಸಜ್ಜನಿಕಂಗೆ ಸಜ್ಜನವೆ ಲೇಸು,
ಸಜ್ಜನದ ಗಂಡ ದೇವರಾಯ ಸೊಡ್ಡಳಾ. || ೨೩ ||

*

ಹಡಪದ ಅಪ್ಪಣ್ಣ

೨೧೩೩
ಅಂಗದ ಮೇಲೆ ಲಿಂಗವಿದ್ದವರೆಲ್ಲರ ಸರಿಗಾಣಬೇಕೆಂಬರು.
ಲಿಂಗಲಾಂಛನಧಾರಿಗಳೆಲ್ಲ, ಶರಣಂಗೆ ಸರಿಯೆ?
ಶರಣರ ಸಂಗ ಎಂತಿಪ್ಪುದೆಂದರೆ,

ಪರಮಜ್ಞಾನವೆಂಬ ಉರಿಯನೆ ಉಟ್ಟು, ಉರಿಯನೆ ತೊಟ್ಟು,
ಉರಿಯನೆ ಉಂಡು, ಉರಿಯನೆ ಹಾಸಿ, ಉರಿಯನೆ ಹೊದ್ದು,
ನಿರ್ವಯಲಾದ ಶರಣಂಗೆ ನರರುಗಳ ಸರಿ ಎನ್ನಬಹುದೆ?
ಹರಿಗೆ ಕರಿ ಸರಿಯೆ? ಉರಗಗೆ ಒಳ್ಳೆ ಸರಿಯೆ?
ಮರುಗಕ್ಕೆ ಗರುಗ ಸರಿಯೆ?
ಇಂತೀ ನಿರ್ವಯಲಾದ ಶರಣಂಗೆ ಮರ್ತ್ಯದ ನರಗುರಿಗಳು ಸರಿ ಎಂದರೆ,
ನಾಯಕ ನರಕದಲ್ಲಿಕ್ಕುವ, ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. ॥ ೧ ॥

೨೧೩೪

ಅನ್ನವನ್ನಿಕ್ಕಿದರೇನು? ಹೊನ್ನ ಕೊಟ್ಟರೇನು?
ಹೆಣ್ಣ ಕೊಟ್ಟರೇನು? ಮಣ್ಣ ಕೊಟ್ಟರೇನು? ಪುಣ್ಯ ಉಂಟೆಂಬರು.
ಅವರಿಂದಾದೊಡವೆ ಏನು? ಅವರೀವುದಕ್ಕೆ.
ಇದಕ್ಕೆ ಪುಣ್ಯವಾವುದು, ಪಾಪವಾವುದು?
ನದಿಯ ಉದಕವ ನದಿಗೆ ಅರ್ಪಿಸಿ,
ತನತನಗೆ ಪುಣ್ಯ ಉಂಟೆಂಬ ಬಡ ಹಾರುವರಂತೆ,
ಸದಮಳ ಶಾಶ್ವತ ಮಹಾಘನಲಿಂಗವನರಿಯದೆ,
ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. ॥ ೨ ॥

೨೧೩೫

ಅಯ್ಯಾ, ನಿಮ್ಮ ಶರಣರು ವೇಷವ ತೋರಿ ಗ್ರಾಸವ ಬೇಡುವರಲ್ಲ.
ದೇಶವ ತಿರುಗಿ ಕಲಿತ ಮಾತ ನುಡಿವರಲ್ಲ.
ಲೇಸಾಗಿ ನುಡಿವರು, ಆಶೆ ಇಲ್ಲದೆ ನಡೆವರು, ರೋಷವಿಲ್ಲದೆ ನುಡಿವರು.
ಹರುಷವಿಲ್ಲದೆ ಕೇಳುವರು, ವಿರಸವಿಲ್ಲದೆ ಮುಟ್ಟುವರು.
ಸರಸವಿದ್ದಲ್ಲಿಯೇ ವಾಸಿಸುವರು.
ಇಂತಪ್ಪ ಬೆರಸಿ ಬೇರಿಲ್ಲದ ನಿಜೈಕ್ಯಂಗೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.
ಇಂತಪ್ಪ ಶರಣರ ನೆಲೆಯ ನಾನೆತ್ತ ಬಲ್ಲೆನಯ್ಯಾ? ॥ ೩ ॥

೨೧೩೬

ಅಯ್ಯಾ, ಹುಟ್ಟಿದ ಮನುಜರೆಲ್ಲ
ಹೊಟ್ಟೆ ಹೊಟ್ಟೆ ಎಂದು ಹೊಟ್ಟೆಗೆ ಹಸಿದು, ಹೊಟ್ಟೆಗೆ ಕುದಿದು,
ಹೊಟ್ಟೆಗೆ ಹೊರೆದು, ಹೊಟ್ಟೆಗೆ ತುಂಬಿ,
ತಾವು ಬಂದ ಬಟ್ಟೆಯನೆ ಅರಿಯದೆ ಕೆಟ್ಟಿತ್ತು ಜಗವೆಲ್ಲ.

ಅದಂತಿರಲಿ. ಇನ್ನು ಆ ಶರಣರ ಮತವೆಂತೆಂದರೆ,
ಹೊಟ್ಟೆ ಎಂಬುದನೆ ಮೆಟ್ಟಿಟ್ಟು ತೂರಿ,
ಅಲ್ಲಿದ್ದ ಗಟ್ಟಿಯಾಗಿರ್ದ ಪ್ರಸಾದವನೆ ಊಟವೆಂದು ಹಿಡಿದು,
ಮುಟ್ಟಿ ನಿಮ್ಮೊಳೊಡವೆರೆದು, ಬಟ್ಟಬಯಲಾದರು ಕಾಣಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. ॥ ೪ ॥

೨೧೩೭
ಆಕಾಶವ ನೂಕುತ್ತಿಹಂಗೆ ಅಟ್ಟಗೋಲ ಹಂಗುಂಟೆ?
ಏಕ ಮನವ ನಿಲಿಸುವರೆ, ಬೇರೊಂದು ಸಾಕಾರವುಂಟೆ?
ಬೇಕು ಬೇಡೆಂಬವೆರಡಳಿದವಂಗೆ, ಇಹಲೋಕದ ಹಂಗುಂಟೆ?
ಈ ಜೋಕೆ ನಿಮ್ಮೊಳು ಏಕವಾಗಿಹ ಶರಣಂಗಲ್ಲದೆ,
ಲೋಕದ ಮಾನವರಿಗುಂಟೆ?
ನಿಮ್ಮ ನೆಲೆಯನರಿವುದು ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. ॥ ೫ ॥

೨೧೩೮
ಆಗುತಿವೆ, ಉದಯ ಮಧ್ಯಾಹ್ನ ಅಸ್ತಮಾನ.
ಹೋಗುತಿವೆ, ದಿನ ವಾರ ಮಾಸ ಸಂವತ್ಸರವು.
ಸಾವುತಿವೆ, ಆಯುಷ್ಯ ಭಾಷೆ.
ಇವರೊಳು ಬೇಗದಿ ತಿಳಿದು ನೀಗಿ, ನಿಷ್ಪತ್ತಿಯಾದರೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣ. ॥ ೬ ॥

೨೧೩೯
ಆಚಾರದ ಅರಿವು ಹೊರಗಾದ ಮೇಲೆ,
ಅಂಗದ ಮೇಲೆ ಲಿಂಗವಿದ್ದು ಫಲವೇನು?
ಕುರುಡನ ಕೈಯ ಕನ್ನಡಿ ಇದ್ದ ಹಾಗೆ,
ಬರಡಾವಿಗೆ ಶಿಶು ಹುಟ್ಟಿದ ಹಾಗೆ,
ಕುರುಡಗೆ ಕಣ್ಣು ಬೇನೆ ಬಂದ ಹಾಗೆ,
ಕುರುಡಿಗೆ ಮಕ್ಕಳಾದ ಹಾಗೆ,
ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ.
ಇವರೇನ ಮಾಡಿದರೇನು?
ತಮ್ಮ ಹಾನಿವೃದ್ಧಿಯನರಿಯದನ್ನಕ್ಕ,
ಕಾಲ ಕಾಮಾದಿಗಳ ಬಾಯೊಳಗೆ ಸಿಲ್ಕಿ,
ಅಗಿದಗಿದು ತಿನಿಸಿಕೊಳುತಿಪ್ಪರಲ್ಲ,
ಎನ್ನ ದೇವ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. ॥ ೭ ॥

೨೧೪೦
ಆಟದಲಿ ಕೆಲಹೊತ್ತುಗಳೆದು, ಕೂಟದಲಿ ಕೆಲಹೊತ್ತುಗಳೆದು,
ನೋಟದಲಿ ಕೆಲಹೊತ್ತುಗಳೆದು,
ಊಟದ ಹೊತ್ತಿಗೆ ಲಿಂಗವ ಕೂಡಿಹೆನೆಂಬವನೊಬ್ಬ,
ಊಟ ಮಾಟಕೂಟದಲ್ಲಿ
ಕೋಟಲೆಗೊಳುತ್ತಿದ್ದೆನೆಂಬುವನೊಬ್ಬ ಪೋಟ.
ಇವರಿಬ್ಬರ ನೋಟ ಬೇಟಕ್ಕೆ ಸಿಕ್ಕದೆ ದಾಂಟಿಹೋದನು,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೮ ||

೨೧೪೧
ಈ ಮಹಾಘನ ನೆಲೆಗೊಂಡಿಪ್ಪ
ಶರಣನ ನೆಲೆ ಎಂತಿಪ್ಪುದೆಂದಡೆ:
ಪೃಥ್ವಿ ಪೃಥ್ವಿಯನೆ ಕೂಡಿ, ಅಪ್ಪು ಅಪ್ಪುವನೆ ಕೂಡಿ,
ಅಗ್ನಿ ಅಗ್ನಿಯನೆ ಕೂಡಿ, ವಾಯು ವಾಯುವನೆ ಕೂಡಿ,
ಆಕಾಶ ಆಕಾಶವನೆ ಕೂಡಿ, ಪಂಚತತ್ವವೆಲ್ಲ ಹಂಚು ಹರಿಯಾಗಿ,
ಹಿಂಚುಮುಂಚು ಮಾಡುವ ಮನದ ಸಂಚಲವಡಗಿ,
ಕರ್ಮದ ಗೊಂಚಲ ನಿಂದ ನಿಶ್ಚಿಂತ ನಿಜೈಕ್ಯಂಗೆ
ನಮೋ ನಮೋ ಎನುತಿರ್ದೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೯ ||

೨೧೪೨
ಉಟ್ಟರೆ ತೊಟ್ಟರೇನಯ್ಯ? ನಟ್ಟುವರಂತೆ.
ಕೊಟ್ಟರೆ ಕೊಂಡರೇನಯ್ಯ? ವೇಶಿಯರಂತೆ.
ಬಿಟ್ಟರೆ ಕಟ್ಟಿದರೇನಯ್ಯ? ಬೈರೂಪನಂತೆ.
ಇವಾವಂಗವ ಮಾಡಿದರೇನಯ್ಯ ?
ಮುಟ್ಟಿ ನಮ್ಮ ಶರಣರೊಡನೆ ಒಡವೆರೆಯದಿದ್ದವರು
ಉಟ್ಟಿದ್ದರೇನು, ಬಿಟ್ಟಿದ್ದರೇನು ಹೇಳಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ? || ೧೦ ||

೨೧೪೩
ಕಟ್ಟಬೇಕು ಮನವ, ಮೆಟ್ಟಬೇಕು ಮದವ,
ಸುಟ್ಟುರುಹಬೇಕು ಸಪ್ತವ್ಯಸನಗಳ.
ಆ ತೊಟ್ಟಿಲ ಮುರಿದು, ಕಣ್ಣಿಯ ಹರಿದು, ಆ ಬಟ್ಟ ಬಯಲಲ್ಲಿ ನಿಂದಿರೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೧೧ ||

೨೧೪೪
ಕಾಡಬೇಡ ಕಂಡವರ, ಬೇಡಬೇಡ ನರರುಗಳ,
ಆಡಬೇಡ ಅನೃತವ, ನೋಡಬೇಡ ಪರಸ್ತ್ರೀಯರ.
ಗಾಢಗಂಭೀರ ಲಿಂಗಾರೂಢವಾದ, ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೧೨ ||

೨೧೪೫
ಕೀಡೆ ತುಂಬಿಯ ಬಿಡದೆ ನೆನೆಯೆ,
ನೋಡಲಾಕ್ಷಣ ತುಂಬಿಯಾಗಿಹುದು.
ರೂಢಿಯೊಳು ಅಗಮ್ಯ ಶರಣರ ಪಾದವೆ ಗೂಡಾಗಿ ನಿಂದಿರೆ,
ಬಸವಪ್ರಿಯ ಕೂಡಲ ಚೆನ್ನ[ಬಸವಣ್ಣ]. || ೧೩ ||

೨೧೪೬
ಜಂಗಮ ಜಂಗಮವೆಂದು ನುಡಿದು,
ಜಗದ ಹಂಗಿಗರಾಗಿ ಇರಲಾಗದು.
ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು
ಜಂಗುಳಿಗಳ ಬಾಗಿಲ ಕಾಯಲಾಗದು.
ಜಂಗಮದ ಸುಳುಹು ಎಂತಿರಬೇಕೆಂದರೆ:
ತನ್ನ ನಂಬಿದ ಸಜ್ಜನ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ,
ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ,
ತಾ ನಿರ್ಗಮನಿಯಾಗಿ ಸುಳಿಯಬಲ್ಲರೆ, ಜಂಗಮಲಿಂಗವದು.
ಇಂತಲ್ಲದೆ ಕಂಡವರ ಕಾಡಿ ಬೇಡಿ,
ಕೊಟ್ಟರೆ ಕೊಂಡಾಡಿ, ಕೊಡದಿದ್ದಡೆ ಜರಿದು,
ತಾಗು ನಿರೋಧಕ್ಕೆ ಗುರಿಯಾಗಿ ನೋವುತ್ತ, ಬೇವುತ್ತ
ಧಾವತಿಗೊಂಬ ಗಾವಿಲರ ಎಂತು ಜಂಗಮವೆಂಬೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ? || ೧೪ ||

೨೧೪೭
ಜಗದಗಲ ಮುಗಿಲಗಲ,
ಪಾದ ಪಾತಾಳದಿಂದತ್ತತ್ತ,
ಮಕುಟ ಬ್ರಹ್ಮಾಂಡದಿಂದತ್ತತ್ತ.
ವಿಶ್ವ ಬ್ರಹ್ಮಾಂಡವನು,
ತನ್ನ ಕುಕ್ಷಿಯೊಳು ನಿಕ್ಷೇಪವ ಮಾಡಿಕೊಂಡಿಪ್ಪ ದೇವನೀಗ ಎನ್ನ ದೇವ.
ಆ ದೇವನೊಳಗೆ ನಾನಡಕ, ನನ್ನೊಳಗೆ ಆ ದೇವನಡಕ.
ಇಂತಪ್ಪ ದೇವನ ನಂಬಿ, ನಾ ಕೆಟ್ಟು ಬಟ್ಟಬಯಲಾದೆ.
ಈ ದೇವನನರಿಯದೆ
ಜಗವೆಲ್ಲ ಕಲ್ಲುದೇವರು, ಮಣ್ಣದೇವರು, ಮರದೇವರು

ಎಂದು ಇವನಾರಾಧಿಸಿ, ಕೆಟ್ಟರಲ್ಲಾ
ಸ್ವರ್ಗ ಮರ್ತ್ಯ ಪಾತಾಳದವರೆಲ್ಲರು.
ಎನ್ನ ದೇವನನರಿದು ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ.
ಇದು ಕಾರಣ, ಆವ ಲೋಕದವರಾದರೂ ಆಗಲಿ,
ಎನ್ನ ದೇವನನರಿದರೆ, ಭವವಿಲ್ಲ ಬಂಧನವಿಲ್ಲ.
ನೆರೆ ನಂಬಿದರೆ, ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೧೫ ||

೨೧೪೮
ತನುವಿನಿಚ್ಛೆಗೆ ಶೀಲವ ಕಟ್ಟಿಕೊಂಬವರು ಲಕ್ಷೋಪಲಕ್ಷ ಉಂಟು.
ಮನದಿಚ್ಛೆಗೆ ಶೀಲವ ಕಟ್ಟಿಕೊಂಬವರು ಅಪೂರ್ವ ನೋಡಾ.
ತನುಮನವೆರಡು ಏಕವಾಗಿ, ಧನದಾಸೆಯಂ ಬಿಟ್ಟು,
ಮನ ಮಹದಲ್ಲಿ ನಿಂದುದೆ ಶೀಲಸಂಬಂಧ.
ಇನಿತಲ್ಲದ ದುಶ್ಶೀಲರ ಎನಗೊಮ್ಮೆ ತೋರದಿರು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೧೬ ||

೨೧೪೯
ತನ್ನ ತಾನರಿದವರು ಎಂತಿಪ್ಪರೆಂದರೆ,
ಕನ್ನಡಿಗೆ ಕನ್ನಡಿಯ ತೋರಿದಂತಿಪ್ಪರು.
ಕಣ್ಣಲಿ ನೋಡಿದರೆ ಮನದಲ್ಲಿ ಹಳಚಿದಂತಿಪ್ಪರು.
ಕುಂದಣದ ಚಿನ್ನವ ಪುಟಕೆ ಹಾಕಿದಂತಿಪ್ಪರು.
ಅದಂತಿರಲಿ, ಮುಂದೆ ಮೀರಿದ ಘನವು ಅಗಮ್ಯವಾಯಿತ್ತು.
ಇದನರಿಯಬಾರದು.
ಇನ್ನು ತನ್ನ ತಾನರಿಯದವರು ಎಂತಿಪ್ಪರೆಂದರೆ, ಕೇಳಿ.
ಚಿನ್ನಬಣ್ಣವಿಟ್ಟಂತಿಪ್ಪರು ಕಾಣಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೧೭ ||

೨೧೫೦
ತನ್ನ ತಾನರಿಯದೆ, ತನ್ನ ತಾ ನೋಡದೆ, ತನ್ನ ತಾ ನುಡಿಯದೆ,
ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕವಿಲ್ಲ, ಪ್ರಸಾದವಿಲ್ಲ.
ಅವನು ಸರ್ವಾಪರಾಧಿ, ಅವನ ಮುಖವ ನೋಡಲಾಗದು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೧೮ ||

೨೧೫೧
ತೀರ್ಥಯಾತ್ರೆ ಲಿಂಗದರುಶನಕ್ಕೆ ಹೋಗಿ,
ಕರ್ಮವ ಹಿಂಗಿಸಿಕೊಂಡೆನೆಂಬ ಭಂಗಿತರ ಮಾತ ಕೇಳಲಾಗದು.

ಅದೇನು ಕಾರಣವೆಂದರೆ,
ತೀರ್ಥವಾವುದು, ಯಾತ್ರೆ ಯಾವುದು, ಲಿಂಗವಾವುದು,
ಬಲ್ಲರೆ ನೀವು ಹೇಳಿರೆ.
ಮಹಾಘನ ಗುರುಪಾದತೀರ್ಥದಿಂದ ವೆಗ್ಗಳ ತೀರ್ಥ ಉಂಟೆ?
ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ?
ಇಂಗಿತವನರಿದ ಬಳಿಕ,
ತನ್ನ ಅಂಗದ ಮೇಲಿರ್ಪ ಲಿಂಗವಲ್ಲದೆ ಬೇರೆ ಲಿಂಗ ಉಂಟೆ?
ಇದನರಿಯದೆ ಇನ್ನು ತೀರ್ಥಯಾತ್ರೆ ಲಿಂಗದರುಶನ ಉಂಟೆಂಬ
ಅಂಗಹೀನರ ಮುಖವ ನೋಡಲಾಗದು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೧೯ ||

೨೧೫೨
ನುಡಿದಡೆ ಗುರುವಾಗಿ ನುಡಿಯಬೇಕು,
ನಡೆದರೆ ಪರವಾಗಿ ನಡೆಯಬೇಕು,
ಕುಳಿತರೆ ಲಿಂಗವಾಗಿ ಕುಳಿತಿರಬೇಕು,
ಇದ್ದರೆ ಜಂಗಮವಾಗಿ ಇರಬೇಕು.
ಈ ನಾಲ್ಕರ ಹೊಂದಿಗೆಯನರಿಯದವರು
ಎಷ್ಟು ದಿನವಿದ್ದರೂ ಫಲವೇನು ಹೇಳಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ? || ೨೦ ||

೨೧೫೩
ನುಡಿದರೇನಯ್ಯ ನಡೆ ಇಲ್ಲದನ್ನಕ್ಕ?
ನಡೆದರೇನಯ್ಯ ನುಡಿ ಇಲ್ಲದನ್ನಕ್ಕ?
ಈ ನಡೆನುಡಿಯರಿದು ಏಕವಾಗಿ,
ತಾವು ಮೃಡಸ್ವರೂಪರಾದ ಶರಣರಡಿಗೆರಗಿ ನಾನು ಬದುಕಿದೆನಯ್ಯಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೨೧ ||

೨೧೫೪
ಪುರಾತರು ಪುರಾತರು ಎಂದು,
ಪುರಾಣದೊಳಗಣ ಕಥೆಯನೆ ಕಲಿತುಕೊಂಡು,
ಪುರದ ಬೀದಿಯೊಳಗೆ ಹರದರಂತೆ ಮಾತಿನ ಹಸರವನಿಕ್ಕಿ
ಮಾರುವ ಅಣ್ಣಗಳಿರಾ, ನೀವು ಕೇಳಿರೊ.
ಅಂದು ಹೋದವರ ಸುದ್ದಿಯ ನುಡಿ[ವ]ರೆ,
ಇಂದು ಬಂ[ದಿ]ರೋ ನಿಮಗೆ ಇಂದು ಬಂದವರನರಿಯದನ್ನಕ್ಕ?
ಅಂದು ಹೋದವರ, ಇಂದು ಬಂದವರ ಒಂದೇ ಎಂದರಿದ ಭಕ್ತರ

ಆಚರಣೆಯ ತೋರಿ ಬದುಕಿಸಯ್ಯಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. ॥ ೨೨ ॥

೨೧೫೫
ಭಕ್ತನಾದರೆ ಎಂತಿರಬೇಕೆಂದರೆ,
ಉಲುಹಡಗಿದ ವೃಕ್ಷದಂತಿರಬೇಕು,
ಶಿಶು ಕಂಡ ಕನಸಿನಂತಿರಬೇಕು,
ಗಲಭೆಗೆ ನಿಲ್ಲದ ಮೃಗದಂತಿರಬೇಕು.
ತಾಯ ಹೊಲಬುದಪ್ಪಿದ ಎಳೆಗರುವಿನಂತೆ,
ತ್ರಿಕಾಲದಲ್ಲಿಯು ಲಿಂಗವನೆ ನೆನೆವ
ಶರಣರ ಎನಗೊಮ್ಮೆ ತೋರಯ್ಯಾ ಶಿವನೆ,
ಬಸವಪ್ರಿಯ ಕೂಡಲ ಚೆನ್ನಸಂಗನಬಸವಣ್ಣಾ. ॥ ೨೩ ॥

೨೧೫೬
ಭಕ್ತನೊಂದು ಕುಲ, ಭವಿಯೊಂದು ಕುಲವೆಂಬರು.
ಭಕ್ತನೆಂತಿಪ್ಪ ಭವಿಯೆಂತಿಪ್ಪನೆಂದರೆ, ಆರೂ ಅರಿಯರು.
ಇದು ಬಲ್ಲವರು ತಿಳಿದು ನೋಡಿ.
ಭಕ್ತನೆಂದರೆ [ಲಿಂ]ಗ, ಭವಿ ಎಂದರೆ [ಅಂ]ಗ.
ಈ ಎರಡರ ಸಕೀಲಸಂಬಂಧವನರಿದರೆ,
ಆತನೆ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. ॥ ೨೪ ॥

೨೧೫೭
ಭಕ್ತಿಯ ಮಾಡಿಹೆನೆಂಬವರೆಲ್ಲ ಭಾಗ್ಯವಂತರಾದರು.
ಮುಕ್ತಿಯ ಸಾಧಿಸಿಹೆನೆಂಬವರೆಲ್ಲ ಮೂವಿಧಿಗೊಳಗಾದರು.
ತತ್ವವನರಿದಿಹೆನೆಂಬವರೆಲ್ಲ ತರ್ಕಿಗಳಾದರು.
ವಿರಕ್ತಿಯ ಮಾಡಿಹೆನೆಂಬವರೆಲ್ಲ ವೈರಾಗಿಗಳಾದರು.
ಈ ಚತುರ್ವಿಧದೊಳಗೆ ಆವಂಗವೂ ಅಲ್ಲ.
ಎಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣನಲ್ಲಿ ಶರಣರ ಪರಿ ಬೇರೆ. ॥ ೨೫ ॥

೨೧೫೮
ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದರೆ,
ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ,
ಮುಗಿಲ ಮರೆಯ ಮಿಂಚಿನಂತೆ, ನೀರೊಳಗಣ ಕಿಚ್ಚಿನಂತೆ,
ಕಾಷ್ಠದೊಳಗಣ ಅಗ್ನಿಯಂತೆ, ತೃಣದೊಳಗಡಗಿದ ಚೈತನ್ಯದಂತೆ,
ಈ ವಿಶ್ವದೊಳು ಇದ್ದೂ ಇಲ್ಲದಂತಿಪ್ಪ ಮಹಾಘನವ
ನಿಮ್ಮ ಶರಣರು ಬಲ್ಲರಲ್ಲದೆ,

ಮರ್ತ್ಯ ಮರಣಬಾಧೆಗೊಳಗಾದ ಮನುಜರೆತ್ತಬಲ್ಲರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? || ೨೬ ||

೨೧೫೯
ಮಾತನರಿದಂಗೆ ಮಥನದ ಹಂಗೇಕೊ?
ನಿತ್ಯವನರಿದಂಗೆ ತೀರ್ಥದ ಹಂಗೇಕೊ?
ಪರಮಾರ್ಥವನರಿದಂಗೆ ಪ್ರಸಾದದ ಹಂಗೇಕೊ?
ಜ್ಯೋತಿಯನರಿದಂಗೆ ಕತ್ತಲೆಯ ಹಂಗೇಕೊ?
ಲೋಕವರಿದಂಗೆ ವ್ಯಾಕುಲದ ಹಂಗೇಕೊ?
ಈ ತೆರನನರಿದಂಗೆ ಮುಂದಾವ ಭೀತಿಯುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ? || ೨೭ ||

೨೧೬೦
ಲಿಂಗನಯನದಲ್ಲಿ ನೋಡುತ್ತ, ಲಿಂಗಜಿಹ್ವೆಯಲ್ಲಿ ನುಡಿವುತ್ತ,
ಲಿಂಗಹಸ್ತದಲ್ಲಿ ಮುಟ್ಟುತ್ತ, ಲಿಂಗನಾಸಿಕದಲ್ಲಿ ವಾಸಿಸುತ್ತ,
ಲಿಂಗಶ್ರೋತದಲ್ಲಿ ಕೇಳುತ್ತ, ಲಿಂಗಪಾದದಲ್ಲಿ ನಡೆವುತ್ತ,
ಸರ್ವಾಂಗಲಿಂಗಮಯವಾದ ಶರಣರ ಸಂಗಸುಖದೊಳಗೆ
ಎನ್ನನಿರಿಸಯ್ಯಾ, ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೨೮ ||

೨೧೬೧
ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಲಿಬೇಡ.
ಹಿಂದು ಮುಂದು ಆಡಲಿಬೇಡ, ಸಂದೇಹಗೊಳಲಿಬೇಡ.
ದ್ವಂದ್ವಬುದ್ಧಿಯ ಕಳೆದು ನಿಂದಿರೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೨೯ ||

೨೧೬೨
ವಜ್ರದ ಮನೆಯೊಳಗಿರ್ದು,
ಗೊರಲೆ ಮುಟ್ಟೀತೆಂಬ ಸಂದೇಹವೇಕೆ?
ಭದ್ರಗಜದ ಮೇಲೆ ಬರುತಿರ್ದು
ಕೆಳಗಿರ್ದ ಗುಜ್ಜನಾಯಿ ಮುಟ್ಟೀತೆಂಬ ಸಂದೇಹವೇಕೆ?
ಸಂಜೀವನ ಕೈಯ ಸಾರಿರ್ದು
ಸತ್ತೆನೋ, ಬದುಕಿದೆನೋ ಎಂಬ ಸಂದೇಹವೇಕೆ?
ಸಜ್ಜನ ಸದ್ಭಕ್ತರ ಸಂಗದೊಳಗಿರ್ದು,
ಇಂದಿಗೆ ನಾಳಿಗೆಂಬ ಸಂದೇಹವೇಕೆ?
ಹತ್ತರಡಿಯ ಬಿದ್ದ ಹಾವು ಸಾಯದೆಂದು
ಗಾದೆಯ ಮಾತ ನುಡಿವರು

ನಿತ್ಯರಪ್ಪ ಶರಣರ ಸಂಗದೊಳಗಿರ್ದು,
ಮತ್ತೊಂದು ಉಂಟೆಂದು ಭಾವಿಸಿ ನೋಡುವ
ಕತ್ತೆ ಮನುಜರ ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ. || ೩೦ ||

೨೧೬೩
ಶರಣನ ಅಂಗವು ಎಂತಿಪ್ಪುದೆಂದರೆ,
ವಾರಿಕಲ್ಲು ನೀರೊಳಗೆ ಬಿದ್ದಂತೆ,
[ಕ್ಷಾ]ರ ಬಲಿದು, ಶರಧಿಯ ಕೂಡಿದಂತೆ,
ಅರಗಿನ ಬೊಂಬೆಗೆ ಉರಿಯ ಸರವ ಮಾಡಿದಂತೆ,
ಪರಿಮಳವ ಕೂಡಿದ ವಾಯುವಿನಂತೆ,
ಆಡಂಬರವ ಮಾಡಿ ತೋರಿದ ಆಕಾಶದಂತೆ,
ಇದೀಗ ಶರಣರಂಗ, ಇದರಂದವ ತಿಳಿದರೆ ಐಕ್ಯ.
ಇದರೊಳು ನಿಶ್ಚಿಂತನಾದರೆ ನಿರವಯವು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೩೧ ||

೨೧೬೪
ಶೀಲವಂತರು, ಶೀಲವಂತರು ಎಂಬರು
ಶೀಲವಂತಿಕೆಯನಾರು ಬಲ್ಲರು ಹೇಳಾ?
ನೆಲಕೆ ಶೀಲವೆಂಬೆನೆ?
ಹೊಲೆ ಹದಿನೆಂಟುಜಾತಿ ನಡೆ ನುಡಿವುದಕ್ಕೆ ಒಂದೆಯಾಯಿತ್ತು.
ಜಲಕೆ ಶೀಲವೆಂಬೆನೆ?
ಮೀನ ಮೊಸಳೆಗಳು ಖಗಮೃಗಂಗಳು ಮಿಂದೆಂಜಲು.
ಬೆಳೆಗೆ ಶೀಲವೆಂಬೆನೆ?
ಎತ್ತು ಕತ್ತೆ ತಿಂದು ಮಿಕ್ಕ ಎಂಜಲು.
ಹೊನ್ನಿಗೆ ಶೀಲವೆಂಬೆನೆ?
ಉರ ಹೊರೆಯಾಗಿಪ್ಪುದು.
ಹೆಣ್ಣಿಗೆ ಶೀಲವೆಂಬೆನೆ ?
ಕಣ್ಣುಗೆಡಿಸಿ ಕಾಡುತಿಪ್ಪುದು.
ಇನ್ನಾವುದು ಶೀಲ ಹೇಳಿರಣ್ಣಾ?
ಇದಕ್ಕೆ ಒಳಗಾದವರೆಲ್ಲ ದುಃಶೀಲರು.
ಇದ ಹಿಡಿದು ಹಿಡಿಯದೆ, ಬಿಟ್ಟು ಬಿಡದೆ,
ತನ್ನ ಮನಕ್ಕೆ ಶೀಲವಾಗಿಪ್ಪುದೆ ಅಚ್ಚಶೀಲ ಕಾಣಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೩೨ ||

೨೧೬೫
ಸತಿಸುತ ಮಾತಾಪಿತರಂದದಿ ಮೋಹದಲಿ ಮನಮಗ್ನವಾದರೆ,
ಅವನಿಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ.
ಅದೇನು ಕಾರಣವೆಂದರೆ,
ಆತನ ಧ್ಯಾನ ಸತಿಯ ಮೇಲೆ ಸುತರ ಮೇಲೆ
ಮಾತಾಪಿತರ ಮೇಲೆ ಇಪ್ಪುದಲ್ಲದೆ,
ಲಿಂಗದ ಮೇಲಿಲ್ಲ.
ಅದು ಕಾರಣ,
ಆತ ಕಟ್ಟಿದುದು ಲಿಂಗವಲ್ಲ, ತೊಟ್ಟುದುದು ವಿಭೂತಿ ರುದ್ರಾಕ್ಷಿಯಲ್ಲ.
ಅದು ಕಾರಣ,
ಆತನಾಚಾರಕ್ಕೆ ದೂರ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೩೩ ||

೨೧೬೬
ಸಾವಾಗ ದೇವನೆಂದರೆ, ಸಾವು ಬಿಡುವುದೇ?
ಇದಾವ ಮಾತೆಂದು ನುಡಿವಿರಿ, ಎಲೆಯಣ್ಣಗಳಿರಾ.
ಬಾಳುವಲ್ಲಿ ಬದುಕುವಲ್ಲಿ, ಗುರು ಲಿಂಗ ಜಂಗಮವನರಿಯದೆ,
ಹಾಳುಹರಿಯ ತಿಂದ ಶುನಕನಂತೆ
ಕಾಲ್ಗೆಡೆದು ಓಡಾಡಿ ಏಳಲಾರದೆ ಬಿದ್ದಾಗ, ಶಿವ ಶಿವ ಎಂದರೆ,
ಅಲ್ಲಿ ದೇವನಿಪ್ಪನೆಂದು ಇದ ನೋಡಿ ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ || ೩೪ ||

೨೧೬೭
ಸೀಮೆಭೂಮಿಯೆಂದೇನೋ, ಹೇಮವನುರುಹಿದಂಗೆ.
ಕಾಮದ ಕತ್ತಲೆಯೆಂದೇನೋ, ಕಾಮನ ಗೆಲಿದಂಗೆ.
ನೇಮನಿತ್ಯವೆಂದೇನೋ, ತಾನು ತಾನಾದವಂಗೆ.
ನಿಶ್ಶೀಲ ಶೀಲವೆಂದೇನೋ, ನಿಶ್ಶೂನ್ಯವಾದ ಮಹಾಮಹಿಮ ಶರಣಂಗೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೩೫ ||

೨೧೬೮
ಹಗಲು ಗೂಗೆಗೆ ಇರುಳಾಗಿಪ್ಪುದು,
ಇರುಳು ಕಪಟೆಗೆ ಹಗಲಾಗಿಪ್ಪುದು.
ಇದು ಜಗದಾಟ.
ಈ ಹಗಲು ಇರುಳೆಂಬ ಉಭಯವಳಿದು, ನಿಗಮಂಗಳಿಗೆ ನಿಲುಕದ,
ಸಗುಣ ನಿರ್ಗುಣ ಅಗಮ್ಯ ಅಗೋಚರವಪ್ಪ

ಮಹಾಘನ ಗುರುವಿನ ನೆಲೆಯ,
ನಿಮ್ಮ ಶರಣರು ಬಲ್ಲರಲ್ಲದೆ
ಮರ್ತ್ಯದ ಮರಣಬಾಧೆಗೊಳಗಾಗುವ ಮನುಜರೆತ್ತ ಬಲ್ಲರೊ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ! || ೩೬ ||

೨೧೮೯
ಹರಿವ ಜಲಧಿಯಂತೆ ಚರಿಸಿ ಬಹ ಮನವ
ನಿಲ್ಲೆಂದು ನಿಲಿಸುವ ಪುರುಷರುಂಟೆ?
ಬಿರುಗಾಳಿ ಬೀಸಿದರೆ ಒಲಿ ಒಲಿದು ಉರಿವ ಬಲುಗಿಚ್ಚಿನ ಉರಿಯ
ನೆಲೆಗೆ ನಿಲಿಸುವರುಂಟೆ?
ಮಹಾಬಯಲೊಳಗಣ ಸಂಚವನರಿದು ಅವಗಡಿಸುವರುಂಟೆ?
ಇವ ಬಲ್ಲೆನೆಂಬವರೆಲ್ಲ
ಅನ್ನದ ಮದ, ಅಹಂಕಾರದ ಮದ, ಕುಲಮದ, ಛಲಮದ,
ಯೌವನಮದ, ವಿದ್ಯಾಮದ, ತಪದ ಮದ, ಆತ್ಮದ ಮದ
ಇಂತೀ ಅಷ್ಟಮದವಿಡಿದು ಬಲ್ಲೆವೆಂಬರಲ್ಲದೆ,
ದೃಷ್ಟ ನಷ್ಟವಾವುದೆಂದರಿಯದೆ, ಎಲ್ಲರೂ ಭ್ರಷ್ಟರಾಗಿ ಹೋದರು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ,
ನಿಮ್ಮ ನೆಲೆಯನರಿಯದ ಕಾರಣ. || ೩೭ ||

೨೧೭೦
ಹಲವಂದ ಚಂದದಲ್ಲಿ ಹಾಡಿದರೇನಯ್ಯ,
ಲಿಂಗದ ನೆಲೆಯನರಿಯದನ್ನಕ್ಕ?
ಕಲಿಯಾಗಿ, ವೈರಾಗ್ಯ ತಲೆಗೇರಿ ಹರಿದಾಡಿದರೇನಯ್ಯ?
ಮಾಯೆಯ ಬಲೆಯ ನುಸುಳಿಸಿದಲ್ಲದೆ
ನಿಮ್ಮ ನೆಲೆಯ ಕಾಣಬಾರದು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೩೮ ||

೨೧೭೧
ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ,
ವಿಷಯಸುಖಂಗಳಿಗೆ ಹುಸಿಯನೆ ನುಡಿದು,
ಗಸಣೆಗೊಳಗಾಗುವ ಮನುಜರೆತ್ತ ಬಲ್ಲರೊ,
ಮಹಾಘನಗುರುವಿನ ನೆಲೆಯ?
ಮರಣಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರೊ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ? || ೩೯ ||

೨೧೭೨
ಹಸಿವಿನಾಸೆಗೆ ಅಶನವ ಕೊಂಬರು,
ವಿಷಯದಾಸೆಗೆ ಹುಸಿಯ ನುಡಿವರು.
ಹಸನಾಗಿ ವ್ಯಸನವ ಹೊತ್ತು,
ಭಸಿತವ ಹೂಸಿ ವಿಶ್ವವ ತಿರುಗಿದರು.
ಈ ಹುಸಿಯ ಬಿಟ್ಟು, ಮಾಯೆಯ ಮಸಕವ ಮಾಣ್ದಲ್ಲದೆ
ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣನ ಕೂಡ. || ೪೦ ||

೨೧೭೩
ಹಾಲ ಕಂಡ ಬೆಕ್ಕು ಮೆಲ್ಲುಲಿ ತೆಗೆದು ಕುಡಿವುತ್ತಿರಲು,
ಬಾಲನಿಗಿರ್ದ ಹಾಲ ಬೆಕ್ಕು ಕುಡಿವುತ್ತಿದೆಯೆಂದು ನಾರಿ ಕಂಡು,
ಗುದಿಗೆಯಲಿ ಹೊಡೆದರೆ, ಏಳುತ್ತ ಬೀಳುತ್ತ ಕಾಲ್ಗೆಡೆದು ಓಡುವಂತೆ,
ಏನ ಹೇಳುವೆಯಯ್ಯ?
ಮರ್ತ್ಯದ ಮನುಜರು ಕರಣಂಗಳ ಹರಿಯ ಬಿಟ್ಟು,
ತಮ್ಮ ಬಾಳುವೆಯ ಮರೆದು,
ಕಾಲನ ಬಾಯಲ್ಲಿ ಆಳುತ್ತ ಮುಳುಗುತ್ತಲಿಪ್ಪುದನಾರೂ
ಅರಿಯರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? || ೪೧ ||

೨೧೭೪
ಹಾವ ಹಿಡಿವುದ ಹಾವಾಡಿಗ ಬಲ್ಲನಲ್ಲದೆ,
ಕಡೆಯಲ್ಲಿದ್ದ ಜಾವಳಿಗನೆತ್ತ ಬಲ್ಲನು?
ನೋವು ಬಂದರೆ ವ್ಯಾಧಿಯಲ್ಲಿ ನರಳುವಾತ ಬಲ್ಲನಲ್ಲದೆ,
ಕಡೆಯಲಿಪ್ಪ ದುರುಳನೆತ್ತ ಬಲ್ಲನು?
ದೇವ ನಿಮ್ಮ ಶರಣನು ಬೆರೆದಿಪ್ಪ ಭೇದವ
ನೋವುತ್ತ ಬೇವುತ್ತ ಧಾವತಿಗೊಳುತಿಪ್ಪ
ಗಾವಿಲರೆತ್ತ ಬಲ್ಲರು ಲಿಂಗೈಕ್ಯರನುವ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ? || ೪೨ ||

೨೧೭೫
ಹುಟ್ಟಲೇಕೊ ನರರ ಜನ್ಮದಲ್ಲಿ?
ಕಟ್ಟಲೇಕೋ ಕೊರಳಲ್ಲಿ ಲಿಂಗವ?
ಕಟ್ಟಿಯೂ ಕಾಣದೆ, ತೊಟ್ಟನೆ ತೊಳಲಿ,
ಅರಸಲೇಕೊ ಧರೆಯ ಮೇಲೆ?
ಅರಸಿಯೂ ಕಾಣದೆ, ಸತ್ತು ಮೆಟ್ಟಿ ಹೂಳಿಸಿಕೊಳಲೇಕೊ?
ಇದನರಿದರಿದು, ಹುಟ್ಟು ಹೊಂದಳಿದ ಶರಣರ

ನಿತ್ಯನಿತ್ಯ ನೆನೆದು ಬದುಕಿದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೪೩ ||

೨೧೭೬
ಹುಟ್ಟಿದ ಮನುಜರೆಲ್ಲ
ಹೊಟ್ಟೆಯ ಹೊರೆವುದೇನು ಸೋಜಿಗವೊ?
ಹುಲುಹೆಣನ ಸುಟ್ಟು,
ಹೊಲೆಯನು ಹೊಟ್ಟೆಯ ಹೊರೆವುತ್ತ[ಲ]ವನೆ.
ಸಂತೆಯಲ್ಲಿ ಎದೆಯ ಮೇಲೆ ಕಲ್ಲಹಾಕಿಕೊಂಬವನು
ಹೊಟ್ಟೆಯ ಹೊರೆವುತ್ತಲವನೆ.
ಉಲಿ ಉಲಿದು ಕಂಡವರಿಗೆ ಹಲುಗಿರಿವವನು,
ಹೊಟ್ಟೆಯ ಹೊರೆವುತ್ತ[ಲ]ವನು.
ಈ ಲಿಂಗದ ನೆಲೆಯನರಿಯದವರು
ಇವರೊಳು ಸಲುವರಲ್ಲದೆ
ಎಮ್ಮ ಶರಣರಿಗೆ ನಿಲುಕರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೪೪ ||

೨೧೭೭
ಹುತ್ತದ ಮೇಲಣ ಸರ್ಪ ಸತ್ತಿತ್ತೆಂದು ಮುಟ್ಟಿ ಬಾಳ್ದ ಮನಜರುಂಟೆ?
ಒತ್ತಿಗೆ ಬಂದ ವ್ಯಾಘ್ರನನಪ್ಪಿಕೊಂಡ ಮನುಜರುಂಟೆ?
ತತ್ವವ ಬಲ್ಲ ಶರಣರು ಸತ್ತ ಹಾಗೆ ಇದ್ದರೆ,
ಇವರು ಕತ್ತೆಯ ಮನುಜರೆಂದು ಮರ್ತ್ಯದವರು ಒತ್ತಿ ನುಡಿದರೆ,
ಅವರೆತ್ತ ಬಲ್ಲರೊ?
ಅವರ ನುಡಿದವರು ಅತ್ತಲೂ ಅಲ್ಲ, ಇತ್ತಲೂ ಅಲ್ಲ ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೪೫ ||

೨೧೭೮
ಹೊತ್ತಾರೆಯಿಂದ ಅಸ್ತಮಯ ತನಕ
ಸುತ್ತಿರ್ದ ಮಾಯಾಪ್ರಪಂಚನೆ ಅಳೆವುತ್ತ ಸುರಿವುತ್ತಲಿರ್ದು,
ಕತ್ತಲೆಯಾದರೆ, ಕಾಳವಿಷಯದೊಳಗೆ
ಮುಳುಗುತ್ತ, ಸತ್ತು ಹುಟ್ಟುತ್ತ
ಮತ್ತೆ ಬೆಳಗಾಗಿರ್ದು, ನಾನು ತತ್ವವ ಬಲ್ಲೆನೆಂದು ನುಡಿವ
ಕತ್ತಲೆಮನುಜರ ಅತ್ತ ಹೊದ್ದದೆ,
ಇತ್ತಲೆ ನಿಂದು ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ. || ೪೬ ||

೨೧೭೯
ಹೊತ್ತು ಹೊತ್ತಿಗೆ ಲಿಂಗಪೂಜೆಯ ಮಾಡಿಯೂ
ಮತ್ತೆಯು ಸತ್ಯವಾವುದು, ನಿತ್ಯವಾವುದೆಂದರಿಯದೆ ಕೆಟ್ಟರೆಲ್ಲ ಜಗವು.
ಸತ್ಯವಾಗಿ ನುಡಿವ ಶರಣರ ಕಂಡರೆ, ಕತ್ತೆ ಮಾನವರೆತ್ತಬಲ್ಲರೊ?
ಅಸತ್ಯವನೆ ನುಡಿದು, ಹುಸಿಯನೆ ಬೋಧಿಸುವ ಹಸುಕರ ಕಂಡರೆ,
ಇತ್ತ ಬನ್ನಿ ಎಂಬರು.
ಇಂತಪ್ಪ ಅನಿತ್ಯ ದೇಹಿಗಳ ಭಕ್ತರೆಂದು ಜಂಗಮವೆಂದು
ನೋಡಿದರೆ, ನುಡಿಸಿದರೆ, ಮಾತನಾಡಿದರೆ, ನೀಡಿದರೆ,
ಅಘೋರನರಕವೆಂದು ನಮ್ಮ ಆದ್ಯರ ವಚನ ಸಾರುತಿದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೪೭ ||

*

ಹಡಪದ ರೇಚಣ್ಣ

೨೧೮೦
ಭಕ್ತನಂತೆ! ತ್ರಿವಿಧ ಮಲಕ್ಕಿಕ್ಕುವನೆ ಚಿತ್ತವ?
ವಿರಕ್ತನಂತೆ! ಸರ್ವವ್ಯಾಪಾರಕ್ಕೆ ಮೊತ್ತದ ಇಂದ್ರಿಯ ವರ್ಗದಲ್ಲಿ,
ಸುಚಿತ್ತವ ಬಿಟ್ಟು ಮತ್ತೆ ವಿರಕ್ತನಪ್ಪನೆ?
ಈ ಉಭಯದ ಭಾವವ ನಿಶ್ಚೈಸಿದಲ್ಲಿ,
ಕುಸುಮ ಗಂಧದಂತೆ, ಮುಕುರ ಬಿಂಬದಂತೆ,
ಉರಿ ಕರ್ಪುರದಿರವಿನ ತೆರದಂತೆ,
ನಿಃಕಳಂಕ ಕೂಡಲಚೆನ್ನಸಂಗಮದೇವ ತಾನಾದ ಶರಣ. || ೧ ||

೨೧೮೧
ಮರದ ದೇವರಿಗೆ ಉರಿಯ ಪೂಜೆಯುಂಟೆ?
ಮಣ್ಣಿನ ಹರುಗುಲದಲ್ಲಿ ತುಂಬಿದ ತೊರೆಯ ಹಾಯಬಹುದೆ?
ತೆರಕಾರನ ನಚ್ಚಿ ಕಳನೇರಬಹುದೆ?
ಇಂತೀ ಗುಣದ ದೃಷ್ಟವ ಕಡೆಗಾಣಿಸಿದಲ್ಲಿ,
ಪ್ರಮಾಣಿಸಿದಲ್ಲಿಯೂ ಏತರನು,
ಹಾಂಗೆ ಬರಿಹುಂಡರ, ಆಚಾರಭ್ರಷ್ಟರ, ಅರ್ತಿಕಾರರ,
ಚಚ್ಚಗೋಷ್ಠಿವಂತರ, ಬಹುಯಾಚಕರ,
ಪಗುಡೆ ಪರಿಹಾಸಕರ, ತ್ರಿವಿಧದಲ್ಲಿ ಸೂತಕವನರಸುವ
ವಿಶ್ವಾಸಘಾತಕರ, ಅಪ್ರಮಾಣ ಪಾತಕರ,
ಭಕ್ತಿಯ ತೊಟ್ಟಲ್ಲಿ ಭಕ್ತನೆಂದಡೆ,
ವಿರಕ್ತಿಯ ತೊಟ್ಟಲ್ಲಿ ಕರ್ತುವೆಂದಡೆ,

ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ,
ತಪ್ಪ ಕಂಡಲ್ಲಿ ಎತ್ತಿ ತೋರುವೆನು.
ಗುಟ್ಟಿನಲ್ಲಿ ಚಿತ್ತ ಬಿಡದಿರ್ದಡೆ,
ಇದು ನಿಮಗೆ ನಿಶ್ಚಯವಲ್ಲಾ ಎಂಬೆನು.
ಮತ್ತೆಯೂ ಇವ ಕಚ್ಚಿ ಬಿಡಲಾರದಿರ್ದಡೆ,
ನಿಃಕಳಂಕ ಕೂಡಲಚೆನ್ನಸಂಗಮದೇವರಾದಡೂ ಎತ್ತಿ ಹಾಕುವೆನು. ॥ ೨ ॥

*

ಹಾವಿನಹಾಳ ಕಲ್ಲಯ್ಯ

೨೧೮೨
ಅಂದಂದಿನ ದಿನವ ಸಂಸಾರವಂದಂದಿಗೆ ಗ್ರಹಿಸುತ್ತಿದೆ.
ಎಂದಯ್ಯಾ ನಿಮ್ಮ ನೆನೆವೆ, ಎಂದಯ್ಯಾ ನಿಮ್ಮ ಪೂಜಿಸುವೆ.
ಸಮಚಿತ್ತದಿಂದ ನಿಮ್ಮ ನೆನೆವಡೆ,
ನಾಳಿಂಗಿಂದೇ ಲೇಸು ಮಹಾಲಿಂಗ ಕಲ್ಲೇಶ್ವರಾ. ॥ ೧ ॥

೨೧೮೩
ಅತ್ಯಾಶೆಯೆಂಬುದೆ ಪಾಪ, ಬೇರೆ ಪಾಪೆಂಬುದಿಲ್ಲ ಕಂಡಿರೆ ಅಯ್ಯಾ!
ಪರಿಣಾಮವೆಂಬುದೆ ಪರಮಾನಂದ,
ಬೇರೆ ಪರಲೋಕವಿಲ್ಲ, ಕಂಡಿರೆ ಅಯ್ಯಾ!
ಇಹಪರದಾಶೆಯಿಲ್ಲದಿಹುದೆ ಶಿವಯೋಗ.
ಮಹಾಲಿಂಗ ಕಲ್ಲೇಶ್ವರ ಬಲ್ಲ, ಸಿದ್ಧರಾಮನ ಪರಿಯ. ॥ ೨ ॥

೨೧೮೪
ಅರಳಿದ ಪುಷ್ಪ ಪರಿಮಳಿಸದಿಹುದೆ?
ತುಂಬಿದ ಸಾಗರ ನೊರೆತೆರೆಯಾಡದಿಪ್ಪುದೆ?
ಆಕಾಶವ ಮುಟ್ಟುವವ ದೋಂಟಿಗೋಲವಿಡಿವನೆ?
ಪರಮಪರಿಣಾಮಿ, ಕರ್ಮವನತಿಗಳೆಯದಿಹನೆ,
ಮಹಾಲಿಂಗ ಕಲ್ಲೇಶ್ವರಾ? ॥ ೩ ॥

೨೧೮೫
ಅರಿವೆ ಗುರು, ಆಚಾರವೆ ಶಿಷ್ಯ, ಜ್ಞಾನವೆ ಲಿಂಗ,
ಪರಿಣಾಮವೆ ತಪ, ಸಮತೆಯೆಂಬುದೆ ಯೋಗದಾಗು ನೋಡಾ.
ಈಸುವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ
ಮಹಾಲಿಂಗ ಕಲ್ಲೇಶ್ವರದೇವರು ನಗುವರು. ॥ ೪ ॥

೨೧೮೬
ಅಶನದಾಪ್ಯಾಯನ, ವ್ಯಸನ ಉಳ್ಳನ್ನಕ್ಕ
ಆ ನಿಮ್ಮ ನೆನೆವುದು ಹುಸಿಯಯ್ಯಾ.
ಆ ನಿಮ್ಮ ಪೂಜಿಸುವುದು ಹುಸಿಯಯ್ಯಾ.
ಎನ್ನ ಹಸಿವಿಂಗೆ ನೀನೇ ಓಗರವಾದರೆ,
ನಾ ನಿಮ್ಮ ನೆನೆವುದು ದಿಟ ಕಾಣಾ, ಮಹಾಲಿಂಗ ಕಲ್ಲೇಶ್ವರಾ. || ೫ ||

೨೧೮೭
ಆವ ನೇಮವನು ಮಾಡ, ಆವ ಕರ್ಮವನು ಹೊದ್ದ.
ಆವ ಶೀಲವ ಹಿಡಿಯ, ಆವ ತಪಕ್ಕೂ ನಿಲ್ಲ.
ಆವ ಜಂಜಡಕ್ಕೂ ಹಾರ, ಕೇವಲಾತ್ಮಕನು.
ಸಾವಯ ನಿರವಯವೆನಿಸಿದ ಸಹಜವು ತಾನೆ,
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ. || ೬ ||

೨೧೮೮
ಇಕ್ಕದೆ ಕೋಗಿಲೆ, ಕಾಗೆಯ ತತ್ತಿಯಲ್ಲಿ?
ಸಾಕದೆ ತನ್ನ ಶಿಶುವ ಮನಬುದ್ಧಿಯಿಂದ?
ಇಕ್ಕಿದಡೇನೊ, ದೇವಾ ಪಿಂಡವ ತಂದು.
ಮಾನವ ಯೋನಿಯಲ್ಲಿ ಹುಟ್ಟಿದಡೇನೊ?
ಲಿಂಗಶರಣನು ನರರ ಯೋನಿಯಲ್ಲಿ ಹುಟ್ಟಿದಾತನೇ? ಅಲ್ಲ.
ಬಾರದೆ ಪಕ್ಷಿಯ ಬಸುರಲ್ಲಿ ಅಶ್ವತ್ಥವೃಕ್ಷವು?
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ, ಕಾಗೆಗೆ ಪಿಕ ಶಿಶುವೆ? || ೭ ||

೨೧೮೯
ಉದಕದ ತಂಪವ ತಾವರೆಯಲ್ಲದೆ
ಹೊರಗಣ ಕೊರಡೆತ್ತಬಲ್ಲುದೊ?
ಹೂವಿನ ಪರಿಮಳವ ತುಂಬಿಯಲ್ಲದೆ
ಹೊರಗಣ ನೊಣನೆತ್ತಬಲ್ಲುದೊ?
ಕ್ಷೀರದ ರುಚಿಯ ಹಂಸೆಯಲ್ಲದೆ
ಕೆಲದಲ್ಲಿದ್ದ ಬಕನೆತ್ತ ಬಲ್ಲುದೊ?
ಮಾವಿನ ಹಣ್ಣಿನ ರುಚಿಯನರಗಿಳಿಗಳು ಬಲ್ಲುವಲ್ಲದೆ
ಹೊರಗಣ ಕೋಳಿಗಳೆತ್ತ ಬಲ್ಲವೊ?
ಊಟದ ರುಚಿಯನು ನಾಲಗೆಯಲ್ಲದೆ
ಕಲಸುವ ಕೈ ತಾನೆತ್ತ ಬಲ್ಲುದೊ?
ಕೂಟದ ಸುಖವನು ಯೌವನೆಯಲ್ಲದೆ

ಬಾಲೆ ತಾನೆತ್ತ ಬಲ್ಲಳೊ?
ಚಂದ್ರಸೂರ್ಯರಂತರಾಂತರವ ಖೇಚರರು ಬಲ್ಲರಲ್ಲದೆ
ಗಗನದೊಳಗಾಡುವ ಹದ್ದುಗಳು ತಾವೆತ್ತ ಬಲ್ಲವೊ?
ಎಲೆ ಮಹಾಲಿಂಗ ಕಲ್ಲೇಶ್ವರಯ್ಯಾ,
ನಿಮ್ಮ ನಿತ್ಯನಿಜೈಕ್ಯರ ನಿಲುವನು
ಮಹಾನುಭಾವಿಗಳು ಬಲ್ಲರಲ್ಲದೆ
ಲೋಕದ ಜಡಜೀವಿಗಳೆನಿಸುವ ಮಾನವರೆತ್ತ ಬಲ್ಲರೊ? ॥ ೮ ॥

೨೧೯೦
ಎಡದ ಕೈಯಲ್ಲಿ ನಿಗಳ ಕಂಕಣವನಿಕ್ಕಿ,
ಬಲದ ಕೈಯ ಕಡಿದುಕೊಂಡಡೆ, ನೋವಿನ್ನಾವುದು ಹೇಳಾ.
ಒಡಲೊಂದೆ ಪ್ರಾಣವೊಂದೆಯಾಗಿ, ನೋವಿನ್ನಾರದು ಹೇಳಾ.
ಲಿಂಗ ಜಂಗಮವನಾರಾಧಿಸಿ, ನಿಂದೆಗೆ ತಂದಡೆ ನೊಂದೆನಯ್ಯಾ,
ಮಹಾಲಿಂಗ ಕಲ್ಲೇಶ್ವರಾ. ॥ ೯ ॥

೨೧೯೧
ಎತ್ತೆತ್ತ ನೋಡಿದಡತ್ತತ್ತ ನಿಮ್ಮನೆ ಕಾಬೆ.
ಎದ್ದು ನೋಡಿ ನಿಮ್ಮನೆ ಕಾಬೆ, ನಿದ್ರೆಗೆಯ್ದು ನಿಮ್ಮನೆ ಕಾಬೆ.
ಅಹೋರಾತ್ರಿಯಲ್ಲಿ ನಿಮ್ಮ ಧ್ಯಾನದಲ್ಲಿರಿಸು,
ಮಹಾಲಿಂಗ ಕಲ್ಲೇಶ್ವರಾ. ॥ ೧೦ ॥

೨೧೯೨
ಒಲಿದೊಲಿಸಿಕೊಳ್ಳಬೇಕು, ಒಲಿದಲ್ಲದಿಲ್ಲ.
ಹಲವು ಕೊಂಬಿಗೆ ಹಾರದಿರು, ಮರುಳೆ.
ಅಟ್ಟಿ ನೋಡುವ, ಮುಟ್ಟಿ ನೋಡುವ,
ತಟ್ಟಿ ನೋಡುವ, ಒತ್ತಿ ನೋಡುವ.
ಅಟ್ಟಿದಡೆ, ತಟ್ಟಿದಡೆ, ನಿಷ್ಠೆಯಂ ಬಿಡದಿರ್ದಡೆ,
ತನ್ನನೀವ, ಮಹಾಲಿಂಗ ಕಲ್ಲೇಶ್ವರ. ॥ ೧೧ ॥

೨೧೯೩
ಕಂಗಳು ತುಂಬಿ ನಿಮ್ಮುವ ನೋಡುತ್ತ ನೋಡುತ್ತಲಯ್ಯಾ,
ಕಿವಿಗಳು ತುಂಬಿ ನಿಮ್ಮುವ ಕೇಳುತ್ತ ಕೇಳುತ್ತಲಯ್ಯಾ,
ಮನ ತುಂಬಿ ನಿಮ್ಮುವ ನೆನೆವುತ್ತ ನೆನೆವುತ್ತಲಯ್ಯಾ,
ಮಹಾಲಿಂಗ ಕಲ್ಲೇಶ್ವರದೇವರಲ್ಲಿ ಸುಖಿಯಾಗಿರ್ದೆನಯ್ಯಾ. ॥ ೧೨ ॥

೨೧೯೪
ಕರ್ಪೂರದ ಕಳ್ಳನ ಹುಲ್ಲಿನಲ್ಲಿ ಕಟ್ಟಿಸಲು,
ಅಗ್ನಿಯೆಂಬ ಹಿತವ ಬಂದು ಬಿಡಿಸಲಾಗಿ,
ಪಾಶ ಬೆಂದು ಕಳ್ಳ ತನ್ನಲ್ಲಿಯೆ ಅಡಗಿದಂತೆ,
ಶರಣಂಗೆ ಬಯಲಪಾಶ ಬಂದು ಕಟ್ಟಿರಲು,
ಬಯಲಲಿಂಗ ಬಂದು ಬಿಡಿಸಲು,
ಬಯಲು ಬಯಲು ಏಕವಾಯಿತ್ತು.
ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತು ಸದಾಶೂನ್ಯವಾಯಿತ್ತು. || ೧೩ ||

೨೧೯೫
ಕಲ್ಲೊಳಗಣ ಕಿಚ್ಚು ಉರಿಯದ ಪರಿಯಂತೆ,
ಬೀಜದೊಳಗಣ ವೃಕ್ಷ ಉಲಿಯದ ಪರಿಯಂತೆ,
ಪುಷ್ಪದ ಕಂಪು ನನೆಯಲ್ಲಿ ತೋರದಂತೆ,
ಚಂದ್ರಕಾಂತದ ಉದಕ ಒಸರದ ಪರಿಯಂತೆ,
ಮಹಾಲಿಂಗ ಕಲ್ಲೇಶ್ವರನಲ್ಲಿ ಲಿಂಗೈಕ್ಯ.
ಇಹವೆನ್ನ ಪರವೆನ್ನ ಸಹಜವೆನ್ನ ತಾನೆನ್ನ. || ೧೪ ||

೨೧೯೬
ಕೂಪರ ಕೊಲುವಡೆ ಮಸೆದ ಕೊರಲಗು ಮತ್ತೇಕೆ?
ಒಲ್ಲೆನೆಂದಡೆ ಸಾಲದೆ, ಕೊಲೆ ಮರಳಿ ಮತ್ತುಂಟೆ?
ಮಹಾಲಿಂಗ ಕಲ್ಲೇಶ್ವರ ಒಲ್ಲೆನೆಂದಟ್ಟಿದಡೆ,
ತುಪ್ಪದಲ್ಲಿ ಕಿಚ್ಚ ನಂದಿಸಿದಂತಾಯಿತ್ತು. || ೧೫ ||

೨೧೯೭
ಗುರುವಿದೆ, ಲಿಂಗವಿದೆ, ಜಂಗಮವಿದೆ, ಪಾದತೀರ್ಥ ಪ್ರಸಾದವಿದೆ.
ಮತ್ತೆಯೂ ಬಳಲುತಿದ್ದೇನೆ, ಭಕ್ತಿ ಸಹಜವಳವಡದಾಗಿ.
ಇದರ ಸಂದು ಸಕೀಲವನರಿಯದೆ ಮತ್ತೆಯೂ ಬಳಲುತ್ತಿದ್ದೇನೆ,
ಮಹಾಲಿಂಗ ಕಲ್ಲೇಶ್ವರಯ್ಯಾ,
ಸಹಜ ಸದ್ಭಾವ ಸತ್ಯಶರಣರ ಮಹಾನುಭಾವರ ಸಂಗವಿಲ್ಲಾಗಿ. || ೧೬ ||

೨೧೯೮
ತನ್ನ ಗುಣವ ಹೊಗಳಬೇಡ, ಇದಿರ ಗುಣವ ಹಳಿಯಬೇಡ.
ಕೆಮ್ಮನೊಬ್ಬರ ನುಡಿಯಬೇಡ, ನುಡಿದು ನುಂಪಿತನಾಗಬೇಡ.
ಇದಿರ ಮುನಿಯಿಬೇಡ, ತಾ ಮುನಿಯಬೇಡ.

ತಾನು ಬದುಕವ್ವೆಸುದಿನ,
ಸಮತೆ ಸಮಾಧಾನ ತುಂಬಿ ತುಳುಕದಿರಬೇಕು.
ಮಹಾಲಿಂಗ ಕಲ್ಲೇಶ್ವರದೇವರ ನಿಚ್ಚಳ ನಿಜವನರಿದಡೆ,
ಬಚ್ಚಬರಿಯ ಸಹಜ ಸಮಾಧಾನವಳವಟ್ಟಿರಬೇಕು. ॥ ೧೭ ॥

೨೧೯೯
ದಾನಿಯಾದಡೇನು ಅವನ ಬೇಡಿದಲ್ಲದರಿಯಬಾರದು.
ರಣರಂಗ ಧೀರನಾದಡೇನು ಅಲಗಲಗು ಹಳಚಿದಲ್ಲದರಿಯಬಾರದು.
ಸ್ನೇಹವಾದಡೇನು ಅಗಲಿದಲ್ಲದರಿಯಬಾರದು.
ಹೇಮಜಾತಿಯಾದಡೇನು ಒರೆದಲ್ಲದರಿಯಬಾರದು.
ಮಹಾಲಿಂಗ ಕಲ್ಲೇಶ್ವರನ ಘನವನರಿದೆಹೆನೆಂದಡೆ,
ಸಂಸಾರಸಾಗರವ ದಾಂಟಿದಲ್ಲದರಿಯಬಾರದು. ॥ ೧೮ ॥

೨೨೦೦
ದೇಹದೊಳಗೆ ದೇಹವಿದ್ದು,
ದೇಹ ಕರಣೇಂದ್ರಿಯಂಗಳ ಪ್ರೇರಿಸುವನು,
ಆ ಲೋಕದ ಆಗುಚೇಗೆ ತನಗಿಲ್ಲ.
ಅದೆಂತೆಂದಡೆ :
ಕಮಲಪತ್ರಜಲದಂತೆ,
ಆ ಕಹಳೆಯಲ್ಲಿಹ ನಾದದಂತೆ,
ಹುಡಿ ಹತ್ತದ ಗಾಳಿಯಂತೆ,
ನುಡಿ ಹತ್ತದ ಶಬ್ದದಂತಿಪ್ಪನಯ್ಯಾ ಶಿವನು,
ಸರ್ವಾಂತರ್ಯಾಮಿಯಾಗಿ ಮಹಾಲಿಂಗ ಕಲ್ಲೇಶ್ವರನು. ॥ ೧೯ ॥

೨೨೦೧
ಪರಮಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ.
ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ.
ಎನಗೆ ನಿಮ್ಮ ತೊತ್ತು ಸೇವೆಯೆ ಸಾಕು,
ಮಹಾಲಿಂಗ ಕಲ್ಲೇಶ್ವರಾ. ॥ ೨೦ ॥

೨೨೦೨
ಪರಸ್ತ್ರೀಯರ ರೂಪ ಕಾಯದ ಕಣ್ಣಿನಲ್ಲಿ ಕಂಡು,
ಮನ ಹರಿದು, ತನು ಕರಗಿ ಬೆರಸಿದ ಬಳಿಕ ಸಂಗವಲ್ಲದೇನು ಹೇಳಾ!
ಮನ ಬೆರಸಿ, ತನು ತಳಿತು, ಇಂದ್ರಿಯಂಗಳು ತುಳುಕಿದ ಬಳಿಕ,
ಸಂಗವಲ್ಲದೇನು ಹೇಳಾ?

ಮಹಾಲಿಂಗ ಕಲ್ಲೇಶ್ವರ ಬಲ್ಲ ಸಿದ್ಧರಾಮನ ಪರಿಯ,
ಮನದ ಹಾದರಿಗ[ನ], ಶಬ್ದರುಚಿಕರ[ನ]. || ೨೧ ||

೨೨೦೩

ಪೂರ್ವಜಾತವ ಕಳೆದು ಪುನರ್ಜಾತನಾದ ಬಳಿಕ, ಏನೆಂದೆನಲುಂಟೆ?
ಭಕ್ತಕಾಯ ಮಮಕಾಯವಾದ ಬಳಿಕ, ಏನೆಂದೆನಲುಂಟೆ?
ಅದೆಂತೆಂದಡೆ :
ನ ಮುಕ್ತಿಶ್ಚ ನ ಧರ್ಮಶ್ಚ ನ ಪುಣ್ಯಂ ಚ ನ ಪಾಪಕಮ್।
ನ ಕರ್ಮ ಚ ನ ಜನ್ಮ ಚ ಗುರೋರ್ಭಾವನಿರೀಕ್ಷಣಾತ್॥
ಎಂದುದಾಗಿ,
ಇದು ಕಾರಣ, ಹಮ್ಮು ಬಿಮ್ಮು ಸೊಮ್ಮನಳಿದ,
ಮಹಾಲಿಂಗ ಕಲ್ಲೇಶ್ವರ ತಾನಾದ ಬಳಿಕ, ಏನೆಂದೆನಲುಂಟೆ? || ೨೨ ||

೨೨೦೪

ಬಯಲು ಮೊಳಗಿ, ಮಳೆ ಸೃಜಿಸಿ,
ಆ ಬಯಲು ಆ ಮಳೆಯನೊಡಗೂಡಿ
ದೃಷ್ಟವಪ್ಪ ವಾರಿಕಲ್ಲಾಗಿ ತೋರಿದಂತೆ,
ನಿನ್ನ ನೆನಹೆ ನಿನಗೆ ಶಕ್ತಿಯಾಯಿತ್ತಲ್ಲಾ.
ಆ ನಿಮ್ಮಿಬ್ಬರ ಸಮರತಿಯೆ,
ನಿಮಗೆ ಅಖಂಡವೆಂಬ ನಾಮ ಸೂಚನೆಯಾಯಿತ್ತಲ್ಲಾ.
ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಆದಿಗೆ, ಇದೇ ಪ್ರಥಮವಾಯಿತ್ತಲ್ಲಾ. || ೨೩ ||

೨೨೦೫

ಬಾರೆ, ಏತಕ್ಕಯ್ಯ? ನಿಮ್ಮ ಬರವ ಹಾರುತ್ತಿರ್ದೆನು.
ಸಾರೆ, ಏತಕ್ಕಯ್ಯ? ನಿಮ್ಮ ಸರವ ಹಾರುತ್ತಿರ್ದೆನು.
ತೋರೆ, ಏತಕ್ಕಯ್ಯ? ನಿಮ್ಮ ಲಿಂಗರೂಪು, ನಿಜಜ್ಞಾನವ.
ಪೂಜೆಗೊಂಬಾಗಳಲ್ಲದೆ ಎನ್ನ ಮನಕ್ಕೆ ಬರಲಾಗದೆ,
ಮಹಾಲಿಂಗ ಕಲ್ಲೇಶ್ವರಾ? || ೨೪ ||

೨೨೦೬

ಬಾಲಕಿ ಹಾಲ ಸವಿದಂತೆ, ಮರುಳಿನ ಮನದ ನೆನಹಿನಂತೆ,
ಮೂಗ ಕಂಡ ಕನಸಿನಂತೆ, ಮೈಯರಿಯದ ನೆಳಲಿನಂತೆ,
ಬಂಜೆಯ ಮನದ ಸ್ನೇಹದಂತೆ,
ಮಹಾಲಿಂಗ ಕಲ್ಲೇಶ್ವರನಲ್ಲಿ ಎನಗೆ ಲಿಂಗೈಕ್ಯವು. || ೨೫ ||

೨೨೦೭

ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ,
ಎಲ್ಲರಿಗೆಯೂ ಜನನವೊಂದೆ.
ಆಹಾರ ನಿದ್ರೆ ಭಯ ಮೈಥುನವೊಂದೆ,
ಪುಣ್ಯಪಾಪವೊಂದೆ, ಸ್ವರ್ಗವೊಂದೆ.
ಬೇರೆಂಬ ಭಂಗಿತರು ನೀವು ಕೇಳಿರೆ!
ಅರಿವೇ ಸತ್ಕುಲ, ಮರವೇ ದುಃಕುಲ,
ಅರಿವುವಿಡಿದು ಮನಪ[ಕ್ವ].
ಆಗಮವಿಡಿದು ಆಚಾರ, ಆಚಾರವಿಡಿದು ಸಮಯ.
ಅರಿದಡೆ ಶರಣ, ಮರೆದಡೆ ಮಾನವ.
ವಿಚಾರಿಸಿದಡೆ ಸಚರಾಚರವೆಲ್ಲವೂ ಪಂಚಭೂತಮಯ.
ಚಂದಿರಾದಿಗಳೊಳಗೊಂದು ಮನುಷ್ಯಜನ್ಮ.
ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಂ ।
ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಮ್ ॥
ಎಂದುದಾಗಿ
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಶರಣರು ಅಜಾತಚರಿತ್ರರಾಗಿ,
ಆವ ಜಾತಿಯನೂ ಹೊದ್ದರು. ॥ ೨೬ ॥

೨೨೦೮

ಲಿಂಗನಿಷ್ಠೆಯಿಲ್ಲದವರಂಗಳವ ಮೆಟ್ಟಲಾಗದು.
ಜಂಗಮನಿಷ್ಠೆಯಿಲ್ಲದವರೊಡನೆ ಮಾತನಾಡಲಾಗದು.
ಪ್ರಸಾದನಿಷ್ಠೆಯಿಲ್ಲದವರ ಸಹಪಙ್ತಿಯಲ್ಲಿ ಕುಳ್ಳಿರಲಾಗದು.
ಲಿಂಗಮುಖಕ್ಕೆ ಬಾರದ ರುಚಿ, ಕಿಲ್ಬಿಷ [ನೋಡಾ],
ಮುಟ್ಟಲಾಗದು, ಮಹಾಲಿಂಗ ಕಲ್ಲೇಶ್ವರನನೊಲಿಸುವ ಶರಣಂಗೆ. ॥ ೨೭ ॥

೨೨೦೯

ಶರಣಸಂಬಂಧವನರಿದ ಬಳಿಕ,
ಕುಲಮದ ಛಲಮದವಿಲ್ಲ ಕಂಡಯ್ಯಾ.
ಲಿಂಗಸಂಬಂಧವನರಿದ ಬಳಿಕ,
ಶೀಲಸಂಬಂಧವಿಲ್ಲ ಕಂಡಯ್ಯಾ.
ಪ್ರಸಾದಸಂಬಂಧವನರಿದ ಬಳಿಕ,
ಇಹಪರಂಗಳೆಂಬವಿಲ್ಲ ಕಂಡಯ್ಯಾ.
ಮಹಾಲಿಂಗ ಕಲ್ಲೇಶ್ವರಾ, ಇಂತೀ ತ್ರಿವಿಧ ಸಂಬಂಧಕ್ಕೆ ಇದೇ ದೃಷ್ಟ. ॥ ೨೮ ॥

೨೨೧೦
ಹಗಲು ಹಸಿವಿಂಗೆ ಕುದಿದು, ಇರುಳು ನಿದ್ರೆಗೆ ಸಂದು,
ಎಚ್ಚತ್ತು ಉಳಿದಾದ ಹೊತ್ತಿನಲ್ಲೆಲ್ಲಾ
ಪಂಚೇಂದ್ರಿಯಂಗಳ ವಿಷಯಕ್ಕೆ ಹರಿದು,
ಅಯ್ಯಾ, ನಿಮ್ಮ ನೆನೆಯಲರಿಯದ ಪಾಪಿಯಯ್ಯಾ.
ಅಯ್ಯಾ, ನಿಮ್ಮ ದೆಸೆಯ ನೋಡದ ಕರ್ಮಿಯಯ್ಯಾ.
ಮಹಾಲಿಂಗ ಕಲ್ಲೇಶ್ವರಾ, ಅಸಗ ನೀರಡಿಸಿ ಸಾವಂತೆ ಎನ್ನ ಭಕ್ತಿ. || ೨೯ ||

೨೨೧೧
ಹಸಿಯ ಕಪಾಲದಲ್ಲಿ ಉಂಬನೆಂಬರು, ಅದು ಹುಸಿ,
ಭಕ್ತನ ಮುಖದಲ್ಲಿ ಉಂಬನಾಗಿ.
ಅಸ್ಥಿಗಳ ತೊಟ್ಟನೆಂಬರು, ಅದು ಹುಸಿ,
ಭಕ್ತದೇಹಿಕದೇವನಾಗಿ.
ಚರ್ಮವ ಹೊದ್ದ[ಹ]ನೆಂಬರು, ಅದು ಹುಸಿ,
ಭಕ್ತನಲ್ಲಿ ಸದಾ ಸನ್ನಹಿತನಾಗಿಪ್ಪನಾಗಿ.
ಅದೆಂತೆಂದಡೆ ಬ್ರಹ್ಮಾಂಡ ಪುರಾಣೇ:
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ಸ್ವೀಕೃತಂ ಮಯಾ।
ರಸಾನ್ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ॥
ಎಂದುದಾಗಿ, ವಾತುಲೇ :
ಯಾವನ್ನಿರ್ವಹತೇ ಯಸ್ತು ಯಾವಜ್ಜೀವಂ ಪ್ರತಿಜ್ಞಯಾ।
ಮನುಷ್ಯ ಚರ್ಮಣಾಬದ್ಧಃ ರುದ್ರೋ ನಾ[ಸ್ತ್ಯ]ತ್ರ ಸಂಶಯಃ॥
ಎಂದುದಾಗಿ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಸುಳುಹು ಪರಕಾಯಪ್ರವೇಶವಾಗಿಹುದು. || ೩೦ ||

*

ಹುಂಜಿನ ಕಾಳಗದ ದಾಸಯ್ಯ

೨೨೧೨
ಹುಂಜ ಸೋತಡೆ ಹಿಡಿವೆ,
ವ್ರತ ಹೋದವರ ನೋಡೆನು.
ಚಂದ್ರಚೂಡೇಶ್ವರಲಿಂಗವೆ. || ೧ ||

*

ಹೆಂಡದ ಮಾರಯ್ಯ

೨೨೧೩

ಮಣ್ಣೆಂಬ ಘಟದ ಮಧ್ಯದಲ್ಲಿ
ಹೊನ್ನೆಂಬ ಸುರೆ ಹುಟ್ಟಿತ್ತು.
ಹೆಣ್ಣೆಂಬ ಬಟ್ಟಲಲ್ಲಿ ಅಂತು ಈಂಟಲಾಗಿ
ಲಹರಿ ತಲೆಗೇರಿತ್ತು.
ಈ ಉನ್ಮತ್ತದಲ್ಲಿ ಮಗ್ನರಾದವರೆಲ್ಲರೂ
ಅರುಹಿರಿಯರೆಂತಪ್ಪರೊ?
ಭಕ್ತಿ ವಿರಕ್ತಿಯೆಂಬುದು ಇತ್ತಲೆ ಉಳಿಯಿತ್ತು.
ಧರ್ಮೇಶ್ವರಲಿಂಗದತ್ತ ಮುಟ್ಟಿದಡಂತಿಲ್ಲ. ॥೧॥

*

ಹೊಡೆಹುಲ್ಲ ಬಂಕಣ್ಣ

೨೨೧೪

ಕಾಷ್ಠವಗ್ನಿಯೊಳಗಿಡಲಿಕ್ಕಾಗಿ,
ಆ ಕಾಷ್ಠದೊಳಗಿದ್ದಗ್ನಿ ನಾನಿದ್ದೇನೆ, ನೀ ಬೇಡಾ ಎಂದಿತ್ತೆ?
ತಾನಡಗಿ ಇದಿರಿಟ್ಟ ಅಗ್ನಿಗೆ ಒಡಲಾಯಿತ್ತು.
ಇಂತು ಇದ್ದ ಇದಿರಿಂಗೆ ಒಡಲೆಡೆಗೊಡುವ ಅಗಮ್ಯಂಗೆ ಪಡಿಪುಚ್ಚವಿಲ್ಲ,
ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥನನರಿದವಂಗೆ. ॥೧॥

೨೨೧೫

ಕೂಲಿ ಕೃಷಿ ಕಾಯಕಂಗಳಿಂದ ಮಾಡುವ
ಗುರುಲಿಂಗಜಂಗಮದ ಸೇವೆ, ಅದಾವ ತೆರನೆಂದರಿದು,
ಭಾವ ಶುದ್ಧವಾಗಿ ಮಾಡುವ ಸುಕಾಯಕವಂತನಿರವು
ಎಂತುಟೆಂದಡೆ :
ಮಾಡಿಕೊಂಡ ಕೃತ್ಯದಲ್ಲಿ ಆರಿಗೂ ಒಡಲೆಡೆಗೊಡದೆ,
ಕೊಂಡುದು ಪ್ರಸಾದ, ನಿಂದುದು ಸಯಿದಾನವೆನ್ನದೆ,
ಉಭಯ ಪ್ರತಿಪಾಕದಲ್ಲಿ ಆದ ಸಯಿದಾನಕ್ಕೆ ಸಂಕಲ್ಪವಳಿದು,
ಉಭಯಭಾಂಡವೂ ಸರಿಯೆಂದ ಪ್ರಸಾದಿಗೆ ಪ್ರಸಾದವ ಎಡೆಮಾಡಬೇಕು.
ಅದು ನಿರ್ಮಾಲ್ಯವಲ್ಲ, ಅದು ಲಿಂಗಾಂಗಕುಂಭದಲ್ಲಿ ನಿಂದ ಪ್ರಸಾದ.
ಇದರ ಸಂದೇಹವ ಹರಿದು ಕೊಂಬ ನಿರಂಗ ಪ್ರಸಾದಿಗೆ

ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥ ಸಾಕ್ಷಿಯಾಗಿ
ನಮೋ ನಮೋ ಎನುತಿದ್ದೆನು. ॥ ೨ ॥

*

-? ಆನಂದ ಸಿದ್ಧೇಶ್ವರ

೨೨೧೬
ಮೃದು ಕಠಿಣ ಶೀತೋಷ್ಣಾದಿಗಳನರಿಯದನ್ನಕ್ಕ
ಅರ್ಪಿತವ ಮೀರಲಾಗದು.
ಅಂಗವುಂಟಾದಡೆ ಲಿಂಗವಲ್ಲದೆ ಅರಿಯಲರಿಯದೊ.
ಅಭಂಗ ಶರಣಂಗೆ ಅಂಬಲಿಯೂ ಸರಿ - ಅಮೃತವೂ ಸರಿ.
ಹಂಚೂ ಸರಿ - ಕಂಚೂ ಸರಿ, ತಟ್ಟೊ ಸರಿ - ತಗಡೂ ಸರಿ.
ರಂಭೆಯೂ ಸರಿ - ಸಿಂಬೆಯೂ ಸರಿ, ಅರಸೂ ಸರಿ - ಆಳೂ ಸರಿ.
ಊರೂ ಸರಿ - ಕಾಡೂ ಸರಿ, ಸ್ತುತಿಯೂ ಸರಿ - ನಿಂದೆಯೂ ಸರಿ.
ಇಂತಿವ ಮೀರಿದ ಮಹಾಪುರುಷನ ನಿಲವ
ಇಳೆಯೊಳಗಣವರೆತ್ತ ಬಲ್ಲರಯ್ಯಾ, ಆನಂದ ಸಿದ್ಧೇಶ್ವರಾ. ॥ ೧ ॥

*

-? ಈಶ್ವರೀ ವರದ ಚೆನ್ನರಾಮ

೨೨೧೭
ರಾಶಿಹೊನ್ನು ಸಾಸಿರಕನ್ಯೆ ಏಸಿಕೆ ರಾಜ್ಯವಾದಡೂ
ಈ ಶರೀರವಳಿವುದೆ ದಿಟ!
ಇದರಾಸೆಯ ನೀಗಾಡಿ,
ಈಶ್ವರೀಯ ವರದ ಚೆನ್ನರಾಮನೆಂಬ ಲಿಂಗವನಾಸೆಗೆಯ್ದಡೆ,
ಮುಂದೆ ಲೇಸಪ್ಪುದು ಕಾಣಿರಣ್ಣಾ. ॥ ೧ ॥

*

-? ಏಕಾಂತವೀರ ಸೊಡ್ಡಳ

೨೨೧೮
ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು.
ಹಿಂದು ಮುಂದರತು, ಸಂದೇಹವಿಲ್ಲದಾತ ಲಿಂಗೈಕ್ಯನು.
ಶ್ರೀಗುರು ಏಕಾಂತವೀರ ಸೊಡ್ಡಳನಲ್ಲಿ
ತನ್ನ ತಾ ಮರೆದಾತ ಲಿಂಗೈಕ್ಯನು. ॥ ೧ ॥

*

-? ಏಕೋರಾಮೇಶ್ವರಲಿಂಗ

೨೨೧೯
ತಾನು ಸುಖಿಯಾದಡೆ ತನ್ನ ಲಿಂಗ ಮೆಚ್ಚ ನಡೆವುದು.
ತಾನು ಸುಖಿಯಾದಡೆ ತನ್ನ ಲಿಂಗ ಮೆಚ್ಚ ನುಡಿವುದು.
ನಿಂದೆ ಬೇಡ, ಪರನಿಂದೆ ಬೇಡ.
ಅವರಾದಡೇನು? ಹೋದಡೇನು?
ತಾನು ಸುಖಿಯಾದಡೆ ಸಾಕು.
ಏಕೋರಾಮೇಶ್ವರಲಿಂಗದ ನಿಜವನರಿದಡೆ,
ಬೀಗಿ ಬೆಳೆದ ರಾಜಾನ್ನದ ತೆನೆಯಂತಿರಬೇಕು, ಶರಣ. ॥ ೧ ॥

*

-? ಗುರು ವರದ ವಿರೂಪಾಕ್ಷ

೨೨೨೦
ಸಿರಿಯೆಂದಡೆಲ್ಲರೂ ಬರ್ಪರೈಸೆ,
ಉರಿಯೆಂದಡಾರೂ ನಿಲಲಾರರಯ್ಯಾ.
ಉರಿವುತಿದೆ ಲೋಕ ಗರಳದುರಿಯಿಂದ.
ತೆರಳುತಿದೆ ದೆಸೆದೆಸೆಗೆ ಸುರಾಸುರಾಳಿ.
ಹರಿವಿರಂಚಿಗಳು ಸಿರಿ ಸರಸ್ವತಿಯ ಕೈವಿಡಿದು
ಮರುಳುಗೊಂಡರು, ನಿಮ್ಮ ನಿಜವನರಿಯದೆ.
ಸಿರಿಯ ಭಕ್ತರಿಗಿತ್ತು, ಉರಿಯ ನೀ ಧರಿಸಿದೆ.
ಸರಿಯಾರು ನಿನಗೆ ಗುರುವರದ ವಿರೂಪಾಕ್ಷಾ! ॥ ೧ ॥

*

-? ಜಂಗಮಲಿಂಗ ಪ್ರಭು

೨೨೨೧
ಇಳೆಯ ಮೇಲಿರ್ದ ಶಿಲೆಯೆಲ್ಲ ಲಿಂಗವಾದಡೆ ಗುರುವಿನ ಹಂಗೇಕಯ್ಯಾ?
ಜಲ ನದಿಯೆಲ್ಲ ತೀರ್ಥವಾದಡೆ ಲಿಂಗದ ಹಂಗೇಕಯ್ಯಾ?
ಬೆಳೆದ ಬೆಳೆಯೆಲ್ಲ ಪ್ರ[ಸಾದ]ವಾದಡೆ ಜಂಗಮದ ಹಂಗೇಕಯ್ಯಾ?
ಎಂದುದಾಗಿ ತ್ರಿವಿಧದ ಹಂಗು ಹಿಂಗಿತ್ತು,
ಕಾಣಾ ಜಂಗಮಲಿಂಗಪ್ರಭುವೆ. ॥ ೨ ॥

೨೨೨೨
ಹರಹರಯೆಂದು ನೆನೆದಡೆ ಜನನ ಮರಣ ಹಿಂಗುವುದೆ?
ಹಾಂಗೆ ಲೋಕದ ಮಾತು ಕೇಳಲಾಗದು.
ಅದು ಹೇಂಗೆಂದಡೆ :
ಜ್ಯೋತಿಯ ನೆನೆದಡೆ ತಿಮಿರ ಹೋಹುದೇನಯ್ಯಾ?
ಪಂಚಾಮೃತವ ನೆನೆದಡೆ ಹಸಿವು ತೃಷೆ ಅಡಗುವುದೇನಯ್ಯಾ?
ಆಗಮ ಶಾಸ್ತ್ರವ ನೋಡಿದಡೆ, ಕಿವಿಗೊಟ್ಟು ಕೇಳಿ ಹಾಡಿ ಪಾಡಿದಡೆ
ಅಯ್ಯಾ ನಿಮ್ಮ ಕಂಡಂತಾಯಿತಯ್ಯಾ ಎಂದುದಾಗಿ,
ಆದಡಾಗಲಿ, ಕಂಡು ಆಡುವುದಲ್ಲದೆ,
ಕಾಣದೆ ಆಡುವುದೆಲ್ಲ ಸಂತೆಯಾಗಿ ಹೋಯಿತಯ್ಯಾ,
ಕಾಣಾ ಜಂಗಮಲಿಂಗ ಪ್ರಭುವೆ. ॥ ೧ ॥

*

-? ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ

೨೨೨೩
ಅಗ್ನಿಪುತ್ಥಳಿಗೆ ಚೇಳೂರಿದಡೇನು
ಬಾಲ ಬೆಂದು, ಮುಳ್ಳು [ಮು]ರಿದು,
ಮಿಡಮಿಡನೆ ಮಿಡುಕುತ್ತಿಹುದು.
ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ,
ನಿಂದಕರ ಬಾಯಲಿ ಬಗದಳ ಮೂಡಲಿ. ॥ ೧ ॥

೨೨೨೪
ಗಾತ್ರಗಳು ಸಕೀಲವಾಗದ ಮುನ್ನ ಪುದಿಸಿ,
ದೃಷ್ಟಿ ನರನರಸದ ಮುನ್ನ ನೋಡಿ,
ಮತಿ ಮರೆಯದ ಮುನ್ನ ಲಿಂಗಾ ಲಿಂಗೆನ್ನಿ,
ಸಿರಿ ತೊಲಗದ ಮುನ್ನ ಜಂಗಮಕ್ಕೆ ನೀಡಿ,
ತ್ರೈಲೋಚನ ಮನೋಹರ ಮಾಣಿಕೇಶ್ವರ[ಲಿಂಗ]
ಸಹವಾಗ[ವ]ನಿಟ್ಟರೆ ಮರಳಿಬಾ[ಹೆಯೋ]. ॥ ೨ ॥

೨೨೨೫
ತನ್ನ ಹಿತ್ತಿಲೊಳು ಮರುಜೇವಣಿಯಿದ್ದು
ನಾರುಬೇರುಗಳಿಗೆ ಹರಿವ ಮನುಜರಿಗೆ ನಾನೇನೆಂಬೆನಯ್ಯ!
ತನ್ನೊಳಗೆ ಶಿವಲಿಂಗವಿದ್ದು,
ಅನ್ಯದೈವಕ್ಕೆರಗುವ ಕುನ್ನಿ ಮನುಜರಿಗೆ ನಾನೆಂತೆಂಬೆನಯ್ಯ!

ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ,
ಪಾಪಿಯ ಕಣ್ಣಿಗೆ ಪರುಷ ಕಲ್ಲಾದಂತೆ ಅಯ್ಯ ನೀನು. || ೩ ||

೨೨೨೬
ನಿಂದೆ ಸ್ತುತಿಗಳಿಗೆ ಕಿವುಡನಾಗಿರಬೇಕು.
ಪರನಾರಿ ದ್ರವ್ಯಕ್ಕೆ ಅಂಧಕನಾಗಿರಬೇಕು.
ಶಬ್ದ ಸಂಭ್ರಮದ ತಾರ್ಕಿಕರೊಡನೆ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು.
ಇವನ[ರಿ]ದ ಶರಣರ ಹೃತ್ಕಮಲದೊಳಗೆ
ತಾನುತಾನಾಗಿಹ ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗನು. || ೪ ||

*

-? ನಂಜುಂಡ ಶಿವ

೨೨೨೭
ಎನ್ನ ತನುವ ತನ್ನ ತನುವಿನಿಂದ ಅಪ್ಪಿದನವ್ವಾ,
ಎನ್ನ ಮನವ ತನ್ನ ಮನದಿಂದ ಆಲಂಗಿಸಿದನವ್ವಾ,
ಎನ್ನ ಅರಿವ ತನ್ನ ಅರಿವಿಂದ ಅವಗವಿಸಿದನವ್ವಾ,
ಇಂತಾದ ಬಳಿಕ ಎನ್ನ ವಿಷಯವೆಲ್ಲವೂ ತನ್ನ ನಿಮಿತ್ಯ,
ತನ್ನ ವಿಷಯವೆಲ್ಲ ನನ್ನ ನಿಮಿತ್ಯವಾಗಿ,
ಆನಳಿದು ತಾನುಳಿದು, ತಾನಳಿದು ಆನುಳಿದು,
ತಾನು ತಾನಾದ ನಿಜಸುಖದ ಸುಗ್ಗಿಯನೇನೆಂಬೆ,
ಪರಮ ಗುರುವೆ ನಂಜುಂಡ ಶಿವಾ! || ೧ ||

೨೨೨೮
ಕಂಡೆನವಿರಳನ ದೃಕ್ಕಿನಲ್ಲಿ,
ಕಂಡೆನಪಾರನ ತ್ವಕ್ಕಿನಲ್ಲಿ,
ಕಂಡೆನುಪಮಾತೀತನ ಶ್ರೋತ್ರದಲ್ಲಿ,
ಕಂಡೆ ವಾಙ್ಮನಕ್ಕಗೋಚರನ ಘ್ರಾಣದಲ್ಲಿ,
ಕಂಡೆನನಘನತರ್ಕ್ಯನ ಜಿಹ್ವೆಯಲ್ಲಿ,
ಕಂಡೆನೇಕಮೇವನದ್ವಿತೀಯನ ಹೃತ್ಕಮಲದಲ್ಲಿ
ನಮ್ಮ ಪರಮಗುರು ನಂಜುಂಡಶಿವನ. || ೨ ||

೨೨೨೯
ವೇದ ಶಾಸ್ತ್ರಾಗಮ ತರ್ಕ ತಂತ್ರ ಇತಿಹಾಸ
ನಾನಾ ಪುರಾಣ ಪುರಾತನರ ವಚನ ಕಲಿತರೇನೊ?

ಗುರುವಿನಲ್ಲಿ ವಿಶ್ವಾಸಿಗಳಲ್ಲ, ಲಿಂಗದಲ್ಲಿ ನಿಷ್ಠೆಯುಳ್ಳವರಲ್ಲ,
ಜಂಗಮದಲ್ಲಿ ಸಾವಧಾನಿಯಲ್ಲ, ಪ್ರಸಾದದಲ್ಲಿ ಪರಿಣಾಮಿಗಳಲ್ಲ,
ಪಾದೋದಕದಲ್ಲಿ ಪರಮಾನಂದಿಗಳಲ್ಲ.
ಇಂತೀ ಪಂಚಾಚಾರವನರಿದು ತಾನಳಿದುಳಿವ ಭೇದವನರಿಯದೆ
ನಾನು ಭಕ್ತ, ನಾನು ವಿರಕ್ತನೆಂದರೆ ನಗರೆ ನಿಮ್ಮ ಶರಣರು
ಪರಮ ಗುರುವೆ ನಂಜುಂಡಶಿವಾ. || ೩ ||

*

-? ನಿಃಕಳಂಕ ಚೆನ್ನಸೋಮೇಶ್ವರ

೨೨೩೦
ಬಟ್ಟಬಯಲೆಲ್ಲ ಗಟ್ಟಿಯಾದಡೆ ಸ್ವರ್ಗಮರ್ತ್ಯಪಾತಾಳಕ್ಕೆ ಠಾವಿನ್ನೆಲ್ಲಿಯದೊ?
ಕಷ್ಟವ ಮಾಡಲಾರದ ನರರುಗಳೆಲ್ಲ
ಸಂಸಾರವ ಬಿಟ್ಟೆವೆಂದು, ಮಂಡೆಗೆಲಸವ ಗೆಯಿಸಿದಡೆ
ಸುಜ್ಞಾನಿ ವಿರಕ್ತನಾಗಬಲ್ಲನೆ? ಇದು ಕಾರಣ,
ಅಜ್ಞಾನವ ಮರೆದು, ಸುಜ್ಞಾನವ ತೋರುವುದೆ
ನಿಃಕಳಂಕ ಚೆನ್ನಸೋಮೇಶ್ವರ ತಾನೆ. || ೧ ||

*

-? ನಿಜಮುಕ್ತಿ ರಾಮೇಶ್ವರ

೨೨೩೧
ತನು ವಿಕಾರದಿಂದ ಸವೆದು ಸವೆದು,
ಮನವಿಕಾರದಿಂದ ನೊಂದು ಬೆಂದವರೆಲ್ಲಾ ಬೋಳಾಗಿ.
ದಿನ ಜವ್ವನಂಗಳು ಸವೆದು ಸವೆದು,
ಜಂತ್ರ ಮುರಿದು ಗತಿಗೆಟ್ಟವರೆಲ್ಲ ಬೋಳಾಗಿ,
ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ
ಹೊನ್ನು ಹೆಣ್ಣು ಮಣ್ಣಿಗೆರಗದುದೆ ಬಾಳು.
ಸಕಲ ವಿಷಯದ ದಾಳಿಗೆ ಸಿಲುಕದುದೆ ಬಾಳು.
ಇದಲ್ಲದೆ ಗತಿಗೆಟ್ಟು, ಧಾತುಗೆಟ್ಟು, ವೃಥಾ ಬೋಳಾದ ಬಾಳು
ಲೋಕದ ಗೋಳಲ್ಲವೆ ಹೇಳು
ನಿಜಮುಕ್ತಿ ರಾಮೇಶ್ವರಾ. || ೧ ||

*

-? ನಿರ್ಧನಪ್ರಿಯ ರಾಮೇಶ್ವರ

೨೨೩೨
ನಡೆಸು ದೇವಾ ಭಿಕ್ಷಾಯೆಂಬ ಶಬ್ದಕ್ಕೆ,
ಅಲ್ಲಿ ಹೋಗಿ ಭಿಕ್ಷಾ ಭಿಕ್ಷಾ ಎಂದಡೆ,
ಆರೂ ನೀಡದಂತೆ ಮಾಡು.
ತಥಾಪಿ ನೀಡಿದಡೆ,
ಆ ನೀಡುವ ಹಂಚು ಎಡಹಿ ಒಡೆವಂತೆ ಮಾಡು,
ನಿರ್ಧನಪ್ರಿಯ ರಾಮೇಶ್ವರಾ. ॥ ೧ ॥

*

-? ಮರ್ಕಟೇಶ್ವರ

೨೨೩೩
ಹೇಮ ಕಾಮಿನಿ ಭೂಮಿ ಜೀವರಾಧಾರ, ಜೀವರ ಪ್ರಾಣ.
ಜೀವರ ಸಿಕ್ಕುತೊಡರು, ಇಹಪರದೊಳಗೆ.
ಜಂಘೆಯ ಬಿಟ್ಟು ಲಂಘಿಸಿ ನಿಂದಾತನೆ ವಿರತಿ ಸಮಗ್ರ
ಕಾಣಾ, ಮರ್ಕಟೇಶ್ವರಾ. ॥ ೧ ॥

*

-? ಮಹಾಲಿಂಗ ವೀರರಾಮೇಶ್ವರ

೨೨೩೪
ಬಯಲೊಳೆರಗಿದ ಸಿಡಿಲಿನಂತಾಯಿತ್ತೆನ್ನ
ಗುರುವಿನುಪದೇಶ.
ಮಿಂಚಿನ ಪ್ರಭೆಯ ಸಂಚದಂತಾಯಿತ್ತೆನ್ನ
ಗುರುವಿನುಪದೇಶ.
ಸ್ಫಟಿಕದ ಘಟದೊಳಗಣ ಜ್ಯೋತಿಯಂತಾಯಿತ್ತೆನ್ನ
ಗುರುವಿನುಪದೇಶ.
ಮಹಾಲಿಂಗ ವೀರರಾಮೇಶ್ವರನಂತಾಯಿತ್ತೆನ್ನ
ಗುರುವಿನುಪದೇಶವೆನಗಯ್ಯಾ. ॥ ೧ ॥

❖❖

*

ಬಸವೋತ್ತರಯುಗ

*

ಕರಸ್ಥಲ ಮಲ್ಲಿಕಾರ್ಜುನದೇವ

೨೨೩೫
ಅಂತರಂಗದಲ್ಲಿ ಅರಿವಿಲ್ಲದವಂಗೆ
ಬಹಿರಂಗದಲ್ಲಿ ಕ್ರೀಯಿದ್ದು ಫಲವೇನು?
ಅದು ಕಣ್ಣಿಲ್ಲದವನ ಬಾಳುವೆಯಂತೆ.
ಬಹಿರಂಗದಲ್ಲಿ ಕ್ರೀಯಿಲ್ಲದವಂಗೆ
ಅಂತರಂಗದಲ್ಲಿ ಅರಿವಿದ್ದು ಫಲವೇನು?
ಅದು ಶೂನ್ಯಾಲಯದ ದೀಪದಂತೆ.
ಅಂತರಂಗದ ಅರಿವು, ಬಹಿರಂಗದ ಕ್ರಿಯೆ
ಈ ಉಭಯಾಂಗವೊಂದಾಗಬೇಕು.
ಅದೆಂತೆಂದಡೆ:
'ಅಂತರ್ಜ್ಞಾನ ಬಹಿಃಕ್ರಿಯಾ ಏಕೀಭಾವೋ ವಿಶೇಷತಃ'
ಎಂದುದಾಗಿ,
ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಕ್ರೀಯುಳ್ಳ ಮಹಾತ್ಮನೆ
ಭಕ್ತನಪ್ಪ, ಮಾಹೇಶ್ವರನಪ್ಪ, ಪ್ರಸಾದಿಯಪ್ಪ,
ಪ್ರಾಣಲಿಂಗಿಯಪ್ಪ, ಶರಣನೈಕ್ಯನಪ್ಪ.
ನಮ್ಮ ಪರಮಗುರು ಶಾಂತಮಲ್ಲಿಕಾರ್ಜುನ ತಾನೆಯಪ್ಪ. ॥ ೧ ॥

೨೨೩೬
ವಾರಿಧಿಯೊಳಗಣ ವಾರಿಕಲ್ಲ ಕಡಿದು
ತೊಲೆ ಕಂಬವ ಮಾಡಿ ಮನೆಯ ಕಟ್ಟಿಕೊಂಡು
ಒಕ್ಕಲಿರಬಹುದೆ ಅಯ್ಯಾ?
ಅಗ್ನಿಯೊಳಗಿಪ್ಪ ಕರ್ಪೂರವ ಕರಡಿಗೆಯ ಮಾಡಿ
ಪರಿಮಳವ ತುಂಬಿ, ಅನುಲೇಪನಮಾಡಿ
ಸುಖಿಸಬಹುದೆ ಅಯ್ಯಾ?

ವಾಯುವಿನೊಳಗಣ ಪರಿಮಳವ ಹಿಡಿದು
ದಂಡೆಯ ಕಟ್ಟಿ ಮಂಡೆಯೊಳಗೆ
ಮುಡಿಯಬಹುದೆ ಅಯ್ಯಾ?
ಬಯಲ ಮರೀಚಿಕಾಜಲವ ಕೊಡನಲ್ಲಿ ತುಂಬಿ
ಹೊತ್ತು ತಂದು ಅಡಿಗೆಯ ಮಾಡಿಕೊಂಡು
ಉಣಬಹುದೆ ಅಯ್ಯಾ?
ನಿಮ್ಮ ನೆರೆಯರಿದು ನೆರೆದು ಪರವಶನಾಗಿ
ತನ್ನ ಮರೆದ ಪರಶಿವಯೋಗಿಗೆ
ಮರಳಿ ಪರಿಭವಂಗಳುಂಟೆ
ಪರಮಗುರು ಶಾಂತಮಲ್ಲಿಕಾರ್ಜುನಾ? ॥ ೨ ॥

೨೨೩೭
ಸತಿಯರ ನೋಡಿ ಸಂತೋಷವ ಮಾಡಿ,
ಸುತರ ನೋಡಿ ಸುಮ್ಮಾನವನೈದಿ,
ಮತಿಯ ಹೆಚ್ಚುಗೆಯಿಂದ ಮೈಮರೆದೊರಗಿ
ಸತಿಸುತರೆಂಬ ಸಂಸಾರದಲ್ಲಿ
ಮತಿಗೆಟ್ಟು ಮರುಳಾದುದನೇನೆಂಬೆ,
ಎನ್ನ ಪರಮಗುರು ಶಾಂತಮಲ್ಲಿಕಾರ್ಜುನಾ! ॥ ೩ ॥

*

ಕಾಡಸಿದ್ಧೇಶ್ವರ

೨೨೩೮
ಆಳಿಂಗೆ ವರುಷದ ಚಿಂತೆ,
ಬಂಟರಿಗೆ ಮಾಸದ ಚಿಂತೆ,
ಮಜೂರಿ ಮಾನವರಿಗೆ ದಿವಸದ ಚಿಂತೆ,
ನೆರೆದ ಹಿರಿಕಿರಿಯರಿಗೆ ಅಶನದ ಚಿಂತೆ,
ಲಿಂಗೈಕ್ಯನಾದ ಶರಣನಿಗೆ ತನ್ನ ದೇಹದ ಚಿಂತೆ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧ ॥

೨೨೩೯
ಇಂದಿನ ಚಿಂತೆಯುಳ್ಳವರೆಲ್ಲ ಹಂದಿಗಳು.
ನಾಳಿನ ಚಿಂತೆಯುಳ್ಳವರೆಲ್ಲ ನಾಯಿಗಳು.
ತನ್ನ ಚಿಂತೆಯುಳ್ಳವರೆಲ್ಲ ಜೋಗಿಗಳು.
ನಿನ್ನ ಚಿಂತೆಯುಳ್ಳವರೆಲ್ಲ ಯೋಗಿಗಳು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೨ ॥

೨೨೪೦
ಉದಯಕಾಲದ ಸೂರ್ಯನಂತೆ;
ಮುಗಿಲೊಳಗಣ ಕ್ಷಣಿಕದಂತೆ;
ಗರ್ಭದೊಳಗಣ ಶಿಶುವಿನಂತೆ;
ನೆಲದ ಮರೆಯ ನಿಧಾನದಂತೆ;
ಜ್ಞಾನಕಲಾತ್ಮನಂಗದಿಂದ ಪರವಸ್ತು ನಿದರ್ಶನವಾಗುತ್ತಿರ್ದ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯ ಪ್ರಭುವೆ. ॥ ೩ ॥

೨೨೪೧
ಓದಿದರೆ ಓದಬಹುದು ಅಧಮ ಮೂಢರ ಮುಂದೆ.
ಅರಸು ಪ್ರಧಾನಿಗಳಾದ ಪುರುಷರ ಮುಂದೆ ಓದಲಾಗದು.
ಕುರುಡನ ಕೈಯೊಳಗೆ ಕನ್ನಡಿಯ ಕೊಟ್ಟರೆ
ನೋಡಬಲ್ಲನೇ ಕಣ್ಣುಳ್ಳವನಲ್ಲದೆ?
ಹುಟ್ಟಿದವರು ಬಲ್ಲರು, ಹುಟ್ಟದವರು ಅರಿಯರು.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೪ ॥

೨೨೪೨
ಗಂಡಗೊಂದು ಲಿಂಗ, ಹೆಂಡತಿಗೊಂದು ಲಿಂಗ,
ಮಕ್ಕಳಿಗೊಂದು ಲಿಂಗ, ಸ್ನೇಹಿತರು ಗೆಳೆಯರಿಗೊಂದು ಲಿಂಗ,
ಇಂತೀ ನಾಲ್ವರಿಗೆ ನಾಲ್ಕು ಲಿಂಗವಾದರೆ
ಭವಮಾಲೆ ಹರಿಯದು.
ಇಂತೀ ನಾಲ್ವರಿಗೆ ಒಂದೇ ಲಿಂಗವಾದರೆ
ಭವಮಾಲೆ ಹಿಂಗುವುದು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೫ ॥

೨೨೪೩
ಗುರುವೆನಲು ಕೊರೆವುದು ಭವಗಜವು.
ಗುರುವೆನಲು ಹರಿವುದು ಬಹುಜನ್ಮದ ದೋಷವು.
ಗುರುವೆನಲು ಮುನ್ನೂರರುವತ್ತು ರೋಗಾದಿ ಬಾಧೆಗಳು
ಸಂಹಾರವಾಗುವವು.
ಗುರುವೆನಲು ಕಾಲಕಾಮಮಾಯಾದಿಗಳ ಕಂಟಕಗಳು
ಸಂಹಾರವಾಗುವವು.
ಗುರುವೆನಲು ಸಕಲೈಶ್ವರ್ಯ ದೊರೆಕೊಂಬುವದು.
ಇಂತಪ್ಪ ಗುರುವಿನ ಶ್ರೀಚರಣಕ್ಕೆರಗಿ
ನಮೋ ನಮೋ ಎಂದು ಬದುಕಿದೆನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೬ ॥

೨೨೪೪
ಜಂಗಮರ ಕಂಡರೆ ಜರಿವರು,
ಜೋಗಿ ಸನ್ಯಾಸಿಯ ಕಂಡರೆ ನಮಿಸುವರು.
ಲಿಂಗವ ಕಂಡರೆ ಹಿಂಗುವರು,
ಗಾಂಜಿಭಂಗಿಯುಳ್ಳವರ ಕಂಡರೆ ಬಗ್ಗುವರು.
ಹರಪೂಜೆಯೆಂದರೆ ಜರಿಯುವರು,
ನರಪೂಜೆಯೆಂದರೆ ಉಬ್ಬುವರು,
ಗುರು ಕೊಟ್ಟ ಲಿಂಗವ ನಂಬರು,
ವಿಪ್ರ ಮೊದಲು ಶ್ವಪಚ ಕಡೆಯಾಗಿ
ನೂರೊಂದು ಕುಲದವರು ಕೂಡಿ ನೆರೆದು
ಒಂದು ಕಾಡಗಲ್ಲ ತಂದು ಲಿಂಗವೆಂದು
ನಡೆಸಿದ ಲಿಂಗಕ್ಕೆ ಒಂದೊತ್ತು ಉಪವಾಸ ಮಾಡಿ
ನೇಮನಿತ್ಯದಿಂದ ನಡೆವವರು
ಶರಣರೆಂದೊಡೆ ನಿಮ್ಮ ಪ್ರಮಥರು ನಗುವರಯ್ಯಾ.
ಶಿವನು ಒಲಿ ಎಂದಡೆ
ಇಂತಪ್ಪ ವ್ರತಭ್ರಷ್ಟ ಸೂಳೆಯ ಮಕ್ಕಳಿಗೆ
ಎಂತೊಲಿವನಯ್ಯಾ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೭ ॥

೨೨೪೫
ಜಲದೊಳಗಣ ಸೂರ್ಯನಂತೆ ;
ಭೂಮಿಯೊಳಗಣ ದ್ರವ್ಯದಂತೆ;
ಕಾಷ್ಠದೊಳಗಣ ಪಾವಕನಂತೆ;
ಪುಷ್ಪದೊಳಗಣ ಪರಿಮಳದಂತೆ;
ಕ್ಷೀರದೊಳಗಣ ಘೃತದಂತೆ;
ಇರ್ದಿರಯ್ಯ, ಕಾಡನೊಳಗಾದ ಶಂಕರಪ್ರಿಯ
ಚೆನ್ನಕದಂಬಲಿಂಗ ನಿರ್ಮಾಯಪ್ರಭುವೆ. ॥ ೮ ॥

೨೨೪೬
ದೇವರು ದೇವರು ಎಂದು ಬಳಲುತ್ತಿರ್ಪರು
ಬ್ರಹ್ಮಾಂಡದ ಜನರೆಲ್ಲರು.
ಅದೇನು ಕಾರಣವೆಂದಡೆ -
ತಾವೇ ದೇವರೆಂಬ ನಿಲುಕಡೆಯನರಿಯದೆ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೯ ॥

೨೨೪೭
ನೀರಲ ಫಲ, ಉತ್ತತ್ತಿ, ಮಾವಿನ ಹಣ್ಣಿನಂತೆ ಇರುವರು
ಮರ್ತ್ಯರು.
ಹಲಸು, ತೆಂಗು, ದಾಳಿಂಬದಂತೆ ಇರುವರು
ಸ್ವರ್ಗದವರು.
ಹಾಲು ಸಕ್ಕರೆ ಬೆಲ್ಲ ತುಪ್ಪದಂತೆ ಇರುವರು
ನಿಮ್ಮವರು.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೦ ॥

೨೨೪೮
ಪಾಕವಾದನ್ನವನುಣ್ಣದೆ ಪಾಕವ ಮಾಡುಂಬೆವೆಂಬರು.
ಕೊಟ್ಟ ಫಲವ ಬಚ್ಚಿಟ್ಟು ತಿನ್ನಲರಿಯದೆ
ವೃಕ್ಷದ ಕೊನೆಯೊಳಗಣ ಫಲವ ತಿಂದೇವೆಂಬರು.
ಇದ್ದವರನರಿಯದೆ ಸತ್ತವರ ಬಲ್ಲೆವೆಂಬರು.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೧ ॥

೨೨೪೯
ಮಾನವರಿಗೆ ಮರ್ತ್ಯಲೋಕ,
ದೇವರಿಗೆ ದೇವಲೋಕ,
ಉಳಿದ ಪ್ರಾಣಿಗಳಿಗೆ ಯಮಲೋಕ.
ಎನಗೆ ಇನ್ನಾವಲೋಕವಿಲ್ಲ ಕಾಣಾ
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೨ ||

೨೨೫೦
ಶರಣನ ನಿಲವು ಜ್ಯೋತಿಯಂತೆ,
ಶರಣನ ನಿಲವು ಚಂದ್ರನಂತೆ,
ಶರಣನ ನಿಲವು ಸೂರ್ಯನಂತೆ,
ಶರಣನ ನಿಲವು ಮಾಣಿಕದ ದೀಪ್ತಿಯಂತೆ,
ಶರಣನ ನಿಲವು ಅಗ್ನಿಯ ಕಾಂತಿಯಂತೆ,
ಶರಣನ ನಿಲವು ನವರತ್ನಯುಕ್ತವಾದ ಮೌಕ್ತಿಕದ ಮಾಲೆಯಂತೆ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೩ ||

೨೨೫೧
ಶರಣನಾದೊಡೆ ಅಚ್ಚೊತ್ತಿದ ಅರಿವೆಯಂತಿರಬೇಕು ಲಿಂಗದಲ್ಲಿ.
ಶರಣನಾದೊಡೆ ಮುರಿದ ಬಂಗಾರ ಬೆಳ್ಳಾರದಲ್ಲಿ
ಬೆಚ್ಚಂತೆ ಇರಬೇಕು ಲಿಂಗದಲ್ಲಿ.
ಶರಣನಾದೊಡೆ ಪುಷ್ಪ - ಪರಿಮಳದಂತೆ
ಪ್ರಭೆ - ಪಾಷಾಣದಂತೆ, ಜ್ಯೋತಿ - ಪ್ರಕಾಶದಂತೆ
ಇರಬೇಕು ಲಿಂಗದಲ್ಲಿ.
ಶರಣನಾದೊಡೆ ಸೂರ್ಯನ ಕಿರಣದಂತೆ, ಚಂದ್ರನ ಕಾಂತಿಯಂತೆ,
ಗಾಳಿ - ಗಂಧದಂತೆ, ಜಾಗಟೆ - ನಾದದಂತೆ ಇರಬೇಕು ಲಿಂಗದಲ್ಲಿ.
ಇಷ್ಟುಳ್ಳಾತನೇ ಶರಣ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೪ ||

೨೨೫೨
ಶರಣಸತಿ ಲಿಂಗಪತಿ ಎಂಬಾಚಾರವ ಪಿಡಿದು
ಆಚರಿಸುವ ಭಕ್ತರು
ಇಷ್ಟಲಿಂಗಕ್ಕೆ ರೂಪು, ಮೊದಲಾದ ಪದಾರ್ಥವ

ಕೊಟ್ಟು ಸೇವಿಸಬೇಕು.
ಪ್ರಾಣಲಿಂಗಕ್ಕೆ ರುಚಿಪದಾರ್ಥವನರ್ಪಿಸಿ
ಸೇವಿಸಬೇಕು.
ಭಾವಲಿಂಗಕ್ಕೆ ತೃಪ್ತಿಪದಾರ್ಥವನರ್ಪಿಸಿ
ಸೇವಿಸಬೇಕು.
ಇಷ್ಟುಳ್ಳಾತಾನೇ ಶರಣಸತಿ ಲಿಂಗಪತಿ ಎಂಬಾಚಾರ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೫ ||

೨೨೫೩
ಶಶಿರವಿಕಿರಣಕೋಟಿ ಮಾಣಿಕದ ದೀಪ್ತಿಯಂತೆ,
ಚಂದ್ರಕಾಂತಿ ಪ್ರಕಾಶದಂತೆ,
ಮಿಂಚಿನ ಲತೆಯಂತೆ ಲಿಂಗೈಕ್ಯನ ನಿಲವು.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೬ ||

೨೨೫೪
ಸಾಣೆಯ ಮೇಲೆ ಶ್ರೀಗಂಧವನ್ನಿಟ್ಟು,
ಗಂಧ ಗಂಧವೆಂದಡೆ ಗಂಧವ ಕೊಡಬಲ್ಲುದೆ?
ಜಡಚಕ್ರದೊಳಗೆ ಧಾನ್ಯವ ನೀಡಿ
ಹಿಟ್ಟೆಂದಡೆ ಹಿಟ್ಟಾಗಬಲ್ಲುದೆ?
ಗಾಣಕ್ಕೆ ಎಳ್ಳು ನೀಡಿ,
ಎಣ್ಣೆ ಎಣ್ಣೆ ಎಂದಡೆ ಎಣ್ಣೆ ಬೀಳಬಲ್ಲುದೆ?
ಪಂಚಾಮೃತವ ಪಾಕವ ಮಾಡಿ ಎಡೆಯ ಬಡಿಸಿ
ಮುಂದಿಟ್ಟುಕೊಂಡು, ಹೊಟ್ಟೆ ತುಂಬು ತುಂಬು ಎಂದಡೆ
ಹೊಟ್ಟೆ ತುಂಬಿ ಹಸಿವಡಗಬಲ್ಲುದೆ?
ಹಾಗೆ ಜಡರೂಪವಾದ ಲಿಂಗವ
ಜಡಮತಿಗಳಾದ ಗುರುಮುಖದಿಂ ಪಡಕೊಂಡು
ಅಂಗದ ಮೇಲೆ
ಇಷ್ಟಲಿಂಗವೆಂದು ಧರಿಸಿ
ಆ ಲಿಂಗಕ್ಕೆ ಮುಕ್ತಿಯ ಕೊಡು ಕೊಡು ಎಂದಡೆ,
ಆ ಲಿಂಗವು ಮುಕ್ತಿಯ ಕೊಡಲರಿಯದು.
ಅದೆಂತೆಂದೊಡೆ:
ಚಂದನ, ಧಾನ್ಯ, ತಿಲಪಂಚಪಾಕವನು

'ಮರ್ದನಂ ಗುಣವರ್ಧನಂ' ಎಂದುದಾಗಿ,
ಇಂತೀ ಎಲ್ಲವು ಮರ್ದನವಿಲ್ಲದೆ
ಸ್ವಧರ್ಮಗುಣ ತೋರಲರಿಯವು.
ಹಾಗೆ ಅಂತಪ್ಪ ಜಡಸ್ವರೂಪನಾದ ಲಿಂಗವನು
ಜ್ಞಾನಗುರುಮುಖದಿಂ ಶಿಲಾ[ಲೇಖೆಯ] ಕಳೆದು,
ಕಳಾಭೇದವ ತಿಳಿದು,
ಆ ಲಿಂಗವೇ ಘನಮಹಾ ಇಷ್ಟಲಿಂಗವೆಂಬ
ವಿಶ್ವಾಸ ಬಲಿದು ತುಂಬಿ
ಅಂತಪ್ಪ ಇಷ್ಟಬ್ರಹ್ಮದಲ್ಲಿ ಅವಿರಳಸಂಬಂಧಿಯಾಗಿ
ಆ ಇಷ್ಟಲಿಂಗದ ಸತ್ಕ್ರಿಯಾಚಾರದಲ್ಲಿ
ಸರ್ವಾಂಗವನು ದಹಿಸಿದಲ್ಲದೆ
ಭವಹಿಂಗದು, ಮುಕ್ತಿದೋರದು,
ಮುಕ್ತಿಯ ಪಡೆಯಲರಿಯದೆ
ಪ್ರಾಣಲಿಂಗಿಯಾಗಲರಿಯನು ನೋಡಾ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೭ ॥

೨೨೫೫
ಹತ್ತಕ್ಕೆ ನೀಡಿ ಹನ್ನೊಂದಕ್ಕೆ ನೀಡದಾತ
ಭಕ್ತನೆ? ಅಲ್ಲಲ್ಲ.
ಭಿಕ್ಷವ ಕೊಡುವಲ್ಲಿ ಮುಖವ ನೋಡಿ ಕೊಡುವಾತ
ಭಕ್ತನೆ? ಅಲ್ಲಲ್ಲ.
ಗಣಾರಾಧನೆಯ ಮಾಡಿದಲ್ಲಿ
ಒಳಗೊಂದು ಹೊರಗೊಂದು ನೀಡುವಾತ
ಭಕ್ತನೇ? ಅಲ್ಲಲ್ಲ.
ಅದೇನು ಕಾರಣವೆಂದರೆ, ಇವರು ತಾಮಸಭಕ್ತರು.
ಇಂತಪ್ಪ ತಾಮಸಭಕ್ತರಿಗೆ
ಶಿವನು ಒಲಿ ಒಲಿ ಎಂದರೆ ಎಂತೊಲಿಯುವನಯ್ಯ.
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. ॥ ೧೮ ॥

೨೨೫೬
ಹರಹರಾ, ಈ ಮಾಯೆ ಇದ್ದೆಡೆಯ ನೋಡಾ!
ಶಿವಶಿವಾ, ಈ ಮಾಯೆ ಇದ್ದೆಡೆಯ ನೋಡಾ!

ಪುರುಷನ ಮುಂದೆ ಸ್ತ್ರೀಯಾಗಿರ್ಪಳು,
ಸ್ತ್ರೀಯ ಮುಂದೆ ಪುರುಷನಾಗಿರ್ಪುದ ಕಂಡೆ.
ಕೂಟಕ್ಕೆ ಸತಿಯಾಗಿರ್ಪಳು, ಮೋಹಕ್ಕೆ ಮಗಳಾಗಿರ್ಪಳು,
ಜನನಕ್ಕೆ ತಾಯಾಗಿರ್ಪಳು,
ಮೋಹವಿಳಾಸಕ್ಕೆ ಜಾರಸ್ತ್ರೀಯಾಗಿರ್ಪಳು ಕಂಡೆ.
ಧರ್ಮಕ್ಕೆ ಕರ್ಮರೂಪಿಣಿಯಾಗಿರ್ಪಳು,
ಕರ್ಮಕ್ಕೆ ಧರ್ಮರೂಪಿಣಿಯಾಗಿರ್ಪಳು ಕಂಡೆ.
ಯೋಗಿಗಳೆಂಬವರ ಭೋಗಕ್ಕೆ ಒಳಗು ಮಾಡಿತ್ತು,
ಭೋಗಿಗಳೆಂಬವರ ಯೋಗಿಗಳ ಮಾಡಿತ್ತು ಕಂಡೆ.
ಇಂತಪ್ಪ ಮಾಯೆಯ ಗೆಲುವಡೆ ತ್ರೈಲೋಕದೊಳಗೆ
ದೇವ ದಾನವ ಮಾನವರು ಮೊದಲಾದವರು
ನಾನಾರನು ಕಾಣೆನಯ್ಯ,
ಕಾಡನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ
ನಿರ್ಮಾಯಪ್ರಭುವೆ. || ೧೯ ||

*

ಕುಷ್ಟಗಿ ಕರಿಬಸವೇಶ್ವರ

೨೨೫೭
ಅಂದಿನ ಕಾಲದ ಹನುಮ ಲಂಕೆಯ ಹಾರಿದನೆಂದು
ಇಂದಿನ ಕಾಲದ ಕಪಿ ಕಟ್ಟೆಯ ಹಾರುವಂತೆ,
ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು
ತೊತ್ತು ತಿಪ್ಪೆಯನೇರುವಂತೆ,
ಕೊಮಾರ ಕುದುರೆಯನೇರಿದನೆಂದು
ಕೋಡಗ ಕುನ್ನಿಯನೇರುವಂತೆ,
ಆನೆ ಮದಸೊಕ್ಕಿ ಸೋಮಬೀದಿಯ ಸೂರೆಮಾಡಿತೆಂದು
ಆಡು ಮದಸೊಕ್ಕಿ ಬೇಡಗೇರಿಯ ಹೊಕ್ಕು ಕೊರಳ ಮುರಿಸಿಕೊಂಬಂತೆ,
ಉರದ ಮೇಲಣ ಗಂಡನ ಬಿಟ್ಟು
ಪರವೂರ ಮಿಂಡನ ಕೊಂಡಾಡುವ ಮಿಂಡಿನಾರಿಯಂತೆ,
ಕಂಡಕಂಡುದ ಪೂಜಿಸುವ ಭಂಡಮುಂಡೆ
ಮೂಕೊರೆಯರ ಮುಖವ ನೋಡಲಾಗದು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ.
ಶಿವಸಾಕ್ಷಿಯಾಗಿ. || ೧ ||

೨೨೫೮
ಉಡಿಯ ಲಿಂಗವ ಬಿಟ್ಟು, ಗುಡಿಯ ಲಿಂಗದ ಮುಂದೆ ನಿಂದು
ನುಡಿಗಳ ಗಡಣವ ಮಾಡುವ
ತುಡುಗುಣಿ ಕಳ್ಳಗುಡಿ ಹೊಲೆಯರ ಮುಖವ ನೋಡಲಾಗದು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೨ ॥

೨೨೫೯
ಉದಯದಲೆದ್ದು ಗಡಗಡನೆ ನಡುಗುತ ಹೋಗಿ
ಹೂ ಗಿಡು ಪತ್ರೆಯ ಕಡಿವ ದೃಢಗೇಡಿಗಳು ನೀವು ಕೇಳಿರೊ.
ಅದು ಕಡುಪಾಪವಲ್ಲವೆ ನಿಮಗೆ?
ನಡುಗಿರೊ ಪರಧನ ಪರಸ್ತ್ರೀಯರಿಗೆ.
ನಡುಗಿರೊ ಕೊಲೆ ಹುಸಿ ಕಳವು ಪಾರದ್ವಾರ ಅತಿಕಾಂಕ್ಷಕ್ಕೆ.
ನಡುಗಿರೊ ಹರನಿಂದೆ ಗುರುನಿಂದೆ ಅನಾಚಾರಕ್ಕೆ,
ಇದಕ್ಕೆ ನಡುಗದೆ ಮಳಿ ಛಳಿ ಗಾಳಿಗೆ ನಡುಗಿ
ಹೂ ಗಿಡ ಪತ್ರೆಯ ಕಡಿವ ಕಡುಪಾಪಿಗಳಿಗೆ
ನಿಮಗೆ ಮೃಡಪೂಜೆಯೆಲ್ಲಿಯದೊ? ಇಲ್ಲ.
ಅಖಂಡ ಪರಿಪೂರ್ಣಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೩ ॥

೨೨೬೦
ಕುಲವೆಣ್ಣ ಬಿಟ್ಟು ಬೆಲೆವೆಣ್ಣಿಗೆ ಮನವನಿಟ್ಟ
ಆ ಹೊಲೆಯನ ತಲೆಯೆತ್ತಿ ನೋಡದಿರಾ ಮನವೆ.
ಅವ ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ,
ಪ್ರಸಾದದ್ರೋಹಿ, ಶಿವದ್ರೋಹಿ.
ಅವ ಪಂಚಮಹಾಪಾತಕಿ ಪಾಷಂಡಿ.
ಅವನ ಮುಖವ ನೋಡಲಾಗದು ಕಾಣಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೪ ॥

೨೨೬೧
ಜೇನುತುಪ್ಪದೊಳು ಬಿದ್ದ ನೊಣವಿನಂತೆ,
ಕಾನನದೊಳು ಕಣ್ಣಕಟ್ಟಿ ಬಿಟ್ಟ ಮರುಳನಂತೆ,
ಎಲುವ ಕಡಿವ ಶ್ವಾನನಂತೆ,
ಮಲವ ಭುಂಜಿಸುವ ಸೂಕರನಂತೆ,
ಮಾನಿನಿಯರಿಗೆ ಮಚ್ಚಿ ಕೆಡದಿರು ಮನವೆ; ಅಭಿಮಾನ ಹಾನಿ.
ಲಿಂಗ ಅಭಿಮಾನಿಯಾಗಿರು ಕಂಡ್ಯಾ ಮನವೆ

ನಿತ್ಯ ಮುಕ್ತಿ ಬೇಕಾದಡೆ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೫ ॥

೨೨೬೨
ನಾಟ್ಯಶಾಲೆಯೊಳು ನಾಂಟ್ಯವನಾಡುವ ಹೆಣ್ಣು
ಝಣಝಣ ಕಿಣಿಕಿಣಿಯೆಂದರೆ
ಮುಸುರೆಯ ಮಡಕೆಯನು ತೊಳೆವುತ್ತ
ಮೂಕೊರೆಯ ತೊತ್ತು ಗುಣಗುಣುಯೆಂಬಂತೆ,
ನವಿಲಾಡಿತೆಂದು ನಾಯಿ ಬಾಲವ ಬಡಕೊಂಬಂತೆ,
ಕೋಗಿಲೆ ಕೂಗಿತ್ತೆಂದು ಕುಕ್ಕುಟ ಪುಚ್ಛವ ತೆರಕೊಂಡಂತೆ,
ನಿಶ್ಚಯವಿಲ್ಲದವನ ಭಕ್ತಿ ಬಚ್ಚಲ ಬಾಲ್ವುಳುವಿನಂತೆ ಕಾಣಾ
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೬ ॥

೨೨೬೩
ಪುರಾತರ ಗೀತವನೋದಿ ಪುರಾತರ ಮಕ್ಕಳಾದ ಬಳಿಕ -
ಕಿರಾತರ ಮಕ್ಕಳಂತೆ ಹೊತ್ತಿಗೊಂದು ಬಗೆ
ದಿನಕ್ಕೊಂದು ಗುಣವ ನಡೆವುದಲ್ಲ.
ಭಕ್ತನೇನು ಮುಗಿಲಬೊಂಬೆಯೆ?
[ಮೊಲೆ]ನಾಗರ ಕಾಟವೆ? ಸುರಚಾಪವೆ?
ಗೋಸುಂಬೆಯೆ?
ನೋಡಿರೈ ಕಡಿದು ಕಂಡಿಸಿದರೆ
ಕುಂದಣದ ಪುತ್ಥಳಿಯಂತೆ
ನಿಜಗುಂದದಿರುವುದೀಗಲೇ ಭಕ್ತಸ್ಥಲ ಕಾಣಾ.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೭ ॥

೨೨೬೪
ಭವತಿಮಿರಜ್ಞಾನದಿಂದ ಮುಸುಕಿಕೊಂಡು
ಕಣ್ಗಾಣದಿದ್ದವಂಗೆ ಜ್ಞಾನವೆಂಬಂಜನವನೆ ಹಚ್ಚಿ,
ಶಿವಪ್ರತಾಪವಿದೆಯೆಂದು ತೋರಿಸಿದ
ಸದ್ಗುರುದೇವಂಗೆ ನಮೋ ನಮೋ ಎಂಬೆನಯ್ಯ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೮ ॥

೨೨೬೫
ಭವಿತನಕ್ಕೆ ಹೇಸಿ ಭಕ್ತನಾಗಿ,
ಮತ್ತೆಯೂ ಭವಿಯ ಮನೆಯ ಹೊಕ್ಕು ಹೋಗಿ ಉಂಡನಾದರೆ
ತಿಂಗಳು ಸತ್ತ ಕತ್ತೆಯ ಮಾಂಸವ
ತುತ್ತು ತುತ್ತಿಂಗೆ ಗದ್ಯಾಣ ತೂಕವ ತೂಗಿ ತಿಂದ ಸಮಾನ.
ಅವನನು ಭಕ್ತನೆನಲಾಗದು ಕಾಣಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೯ ॥

೨೨೬೬
ಲಿಂಗದ ನೆಲೆಯನರಿ[ಯ]ದವಂಗೆ
ಜಂಗಮವ ಜಡನೆಂದವಂಗೆ
ಗುರುವ ನರನೆಂದವಂಗೆ
ಪರಮಪ್ರಸಾದ ಎಂಜಲೆಂದವಂಗೆ
ಕುಂಭೀನರಕ ತಪ್ಪದು ಕಾಣಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧೦ ॥

೨೨೬೭
ಶೀಲ ಶೀಲವೆಂದೇನೊ?
ಶೀಲವಂಥಾ ಸೂಲವೆ?
ಶುದ್ಧ ಹರಿವ ನೀರನು ನೂಲರಿವೆ ಸುತ್ತಿಯದ ಕಟ್ಟಿ
ತಂದದ್ದು ಶೀಲವೆ? ಅದಲ್ಲ ನಿಲ್ಲು ಮಾಣು.
ಜ್ವಾಲೆಯಂದದಿ ಹರಿವ ಮನವನು
ಖತಿ ಹೋಗದ ಹಾಗೆ ಕಟ್ಟಿ ನಿಲಿಸಿದುದೆ ಶೀಲ.
ಬಾಲೆಯರ ಬಣ್ಣದ ಬಗೆಗೆ ಭ್ರಮೆಗೊಳ್ಳದುದೆ ಶೀಲ.
ಕಾಲಕರ್ಮಂಗಳ ಗೆದ್ದುದೆ ಶೀಲ.
ಇಂತಲ್ಲದೆ ಉಳಿದುವೆಲ್ಲ ದುಶ್ಶೀಲ ಕಾಣಾ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧೧ ॥

೨೨೬೮
ಹಂದಿಗೆ ಅಂದಳವನಿಕ್ಕಿದರೆ ಅರಸಾಗಬಲ್ಲುದೆ ಅದು?
ಕುನ್ನಿಗೆ ರನ್ನದ ಹಲ್ಲಣವ ಹಾಕಿದರೆ
ಕುದುರೆಯಾಗಬಲ್ಲುದೆ ಅದು?
ಕನ್ನೆವೆಣ್ಣು ಕಲೆಯ ಸೂಳೆಯಾಗಬಲ್ಲಳೆ ಅವಳು?

ಹೊನ್ನು ಕಬ್ಬುನವಾಗ ಬಲ್ಲುದೆ?
ಬಿನ್ನಣದ ಭಕ್ತಿಯ ಮಾಡಿ ತಪ್ಪುವ
ಅನ್ಯಕಾರಿಗಳ ಮುಖವ ನೋಡಲಾಗದು.
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ
ಶಿವಸಾಕ್ಷಿಯಾಗಿ. ॥ ೧೨ ॥

*

ಗಣದಾಸಿ ವೀರಣ್ಣ

೨೨೬೯

ಕುಲ ಎಷ್ಟು ಎಂದಡೆ, ಎರಡು ಕುಲ.
ಅವಾವೆಂದಡೆ: ಭವಿ ಒಂದು ಕುಲ, ಭಕ್ತ ಒಂದು ಕುಲ.
ಅಷ್ಟಾವರಣವೇ ಅಂಗವಾಗಿ,
ಪಂಚಾಚಾರವೇ ಪ್ರಾಣವಾಗಿಪ್ಪ
ಭಕ್ತರ ಕುಲವನರಸಿದಡೆ
ಬಾರದ ಭವಂಗಳಲ್ಲಿ ಬಪ್ಪುದು ತಪ್ಪದು.
ನೀರಿಂದಾದ ಮುತ್ತು ಮರಳಿ ಉದಕವಪ್ಪುದೆ?
ಆಕಾಶಕ್ಕೆ ಹೋದ ಹೊಗೆ ಹಿಂದಕ್ಕೆ ಬಪ್ಪುದೆ?
ಮಣ್ಣಿಂದಾದ ಮಡಕೆ ಮತ್ತೆ ಮಣ್ಣಪ್ಪುದೆ?
ಮತ್ತೆ ವಾಮನಮುನಿ ಹಿರಿಯ ಭಕ್ತರ ಮನೆಯ
ಬಿನ್ನಹವ ಕೈಕೊಂಡು,
ಕುಲಕಂಜಿ ಉಣಲೊಲ್ಲದೆ ಹೋದ ನಿಮಿತ್ತದಿಂದ,
ಹಾವಿನಹಾಳ ಕಲ್ಲಯ್ಯಗಳ ಮನೆಯ
ಶ್ವಾನನಾಗಿ ಹುಟ್ಟಲಿಲ್ಲವೆ?
ಅದು ಕಾರಣ, ಶಿವಭಕ್ತರ ಒಕ್ಕುಮಿಕ್ಕ
ಪ್ರಸಾದವ ಕೊಳಬೇಕು,
ಎಂದಾತ ನಮ್ಮ ಶಾಂತಕೂಡಲಸಂಗಮದೇವ. ॥ ೧ ॥

೨೨೭೦

ಶಿವಭಕ್ತ ಆವ ಊರೊಳಗಿದ್ದರೇನು?
ಆವ ಕೇರಿಯಲಿದ್ದರೇನು?
ಹೊಲಗೇರಿಯೊಳಿದ್ದರೇನು?

ಶಿವಭಕ್ತನಿದ್ದುದೇ ಕೈಲಾಸ!
ಆತನ ಮನೆಯೇ ಶಿವನ ಅರಮನೆ!
ಆತನ ಮನೆಯ ಸುತ್ತಮುತ್ತಲಿದ್ದ ಲೋಕವೆಲ್ಲ ಶಿವಲೋಕ!
ಸಾಕ್ಷಿ :
ಚಾಂಡಾಲವಾಟಿಕಾಯಾಂ ಚ ಶಿವಭಕ್ತಃ ಸ್ಥಿತೋ ಯದಿ।
ಅತ್ರಾಽಪಿ ಶಿವಲೋಕಃ ಸ್ಯಾತ್ ತದ್ಗೃಹಂ ಶಿವಮಂದಿರಮ್॥
ಎಂದುದಾಗಿ,
ಇಂತಪ್ಪ ಶಿವಭಕ್ತನ ಅಂಗಳವ ಕಂಡಡೆ
ಕೋಟಿ ಬ್ರಹ್ಮಹತ್ಯೆ ಕೋಟಿ ಶಿಶುಹತ್ಯೆ
ಇವೆಲ್ಲ ಅಳಿದು ಹೋಗುವವು.
ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದವರಿಗೆ
ಅಷ್ಟೈಶ್ವರ್ಯ ಅಷ್ಟಮಹಾಸಿದ್ಧಿ ಫಲವು ತಪ್ಪದು.
ಅವರ ಒಕ್ಕುಮಿಕ್ಕ ಪ್ರಸಾದವ ಕೊಂಡಡೆ
ಸದ್ಯೋನ್ಮುಕ್ತರಪ್ಪುದು ತಪ್ಪದು.
ಇಂತಿಪ್ಪ ಶಿವಭಕ್ತರಿಗೆ ಏನೆಂದು ಉಪಮಿಸುವೆನಯ್ಯ
ಆತನು ಮಹಾದೇವನಲ್ಲದೆ ಬೇರುಂಟೆ?
ಆತ ಅಗಮ್ಯ ಅಗೋಚರ ಅಪ್ರಮಾಣ ಆನಂದಮಹಿಮನು.
ಅಂತಪ್ಪ ಸದ್ಭಕ್ತನ ಶ್ರೀಚರಣವ ಎನ್ನೊಳಗೆ ತೋರಿದಾತ
ನಮ್ಮ ಶಾಂತಕೂಡಲಸಂಗಮದೇವ. ॥ ೨ ॥

*

ಗುರುಸಿದ್ಧದೇವ

೨೨೭೧
ಅಂಗದ ಮೇಲೆ ಲಿಂಗವ ಧರಿಸಿ,
ಶಿವಭಕ್ತರೆಂದು ಹೇಳಿ, ಶಿವಾಚಾರಮಾರ್ಗವ ಬಿಟ್ಟು,
ಭವಿಶೈವದೈವಗಳಿಗೆ ಲಿಂಗವಡಿಯಾಗಿ ಅಡ್ಡಬಿದ್ದು
ಶರಣೆಂಬ ಹೊಲೆಯರಿಗೆ ಶಿವಭಕ್ತಜನ್ಮ ತೀರಿ,
ಚಂದ್ರಸೂರ್ಯರುಳ್ಳನ್ನಕ್ಕರ ಇಪ್ಪತ್ತೆಂಟುಕೋಟಿ ನರಕ ತಪ್ಪದು.
ಆ ನರಕ ತೀರಿದ ಬಳಿಕ ಶ್ವಾನ ಸೂಕರಜನ್ಮ ತಪ್ಪದು.
ಆ ಜನ್ಮ ತೀರಿದ ಬಳಿಕ ರುದ್ರಪ್ರಳಯ ತಪ್ಪದೆಂದ ಕಾಣಾ
ಸಂಗನಬಸವೇಶ್ವರ. ॥ ೧ ॥

*

ಗುಹೇಶ್ವರಯ್ಯ

೨೨೭೨

ಅರಿವಿನ ನಡೆ, ಅರಿವಿನ ನುಡಿ,
ಅರಿವಿನ ಮೂಲವನರಿತ ಶರಣರ ಚರಣದೊಳೆನ್ನನಿಟ್ಟು
ಸಲಹಯ್ಯ, ಗೊಹೇಶ್ವರಪ್ರಿಯ ನಿರಾಳಲಿಂಗಾ. ॥ ೧ ॥

೨೨೭೩

ಆಕಾಶದಲ್ಲಿ ಹಾರಿಹೋಹ ಪಕ್ಷಿಯ ಮಾರ್ಗವನು
ಹಿಂದೆ ಬಪ್ಪ ಪಕ್ಷಿ ಬಲ್ಲುದಲ್ಲದೆ, ಕೆಳಗಾಡುವ ಕುಕ್ಕುಟ ಬಲ್ಲುದೆ?
ಆ ಲಿಂಗದ ಸಂಗದ ಸುಖವನು ಪ್ರಾಣಲಿಂಗಿಗಳೆ ಬಲ್ಲರಲ್ಲದೆ,
ಮರವೆಯಲ್ಲಿ ಮಾತಾಡುವ ನರಗುರಿಗಳು
ನಿಮ್ಮ ಹೊಲಬನವರೆತ್ತ ಬಲ್ಲರಯ್ಯ
ಗೊಹೇಶ್ವರಪ್ರಿಯ ನಿರಾಳಲಿಂಗ? ॥ ೨ ॥

೨೨೭೪

ಬರಿದೆ ಶಿವಶಿವಯೆಂದಡೆ ಭವಹಿಂಗಿತೆಂಬುವ
ಅರಿವುಗೇಡಿಯ ಮಾತ ಕೇಳಲಾಗದು.
ಅದೇನು ಕಾರಣವೆಂದಡೆ:
ಕತ್ತಲಮನೆಯಲ್ಲಿ ಜ್ಯೋತಿಯ ನೆನೆದರೆ
ಪ್ರಕಾಶವಾಗಬಲ್ಲುದೆ?
ಕಾಮಜ್ವರದವರು ರಂಭೆಯ ನೆನೆದರೆ
ಕಾಮಜ್ವರ ತಂಬಿಸಬಲ್ಲುದೆ?
ಇಂತೀ ನರಗುರಿಗಳಾಡಿದುದ ಕಂಡು
ನಗುತಿರ್ದ ನಮ್ಮ ಗೊಹೇಶ್ವರಪ್ರಿಯ ನಿರಾಳಲಿಂಗ. ॥ ೩ ॥

೨೨೭೫

ಮನಹೀನ ಬಂಟನ ಕೈಯಲ್ಲಿ ಬತ್ತೀಸಾಯುಧವಿದ್ದರೇನಯ್ಯ?
ಜಾರಸ್ತ್ರೀ ಸರ್ವಾಭರಣವನಿಟ್ಟಿದ್ದರೇನಯ್ಯ?
ಕುರುಡನ ಕೈಯಲ್ಲಿ ದರ್ಪಣವಿದ್ದರೇನಯ್ಯ?
ಧರ್ಮವನರಿಯದವನ ಕೈಯಲ್ಲಿ ಹಣವಿದ್ದರೇನಯ್ಯ?
ಜ್ಞಾನಹೀನ ರೂಪಧರಿಸಿದ್ದರೇನಯ್ಯ?
ಪ್ರಾಣಲಿಂಗವನರಿಯದ ನರಗುರಿಗಳು ಅಂಗದ ಮೇಲೆ

ಲಿಂಗವ ಕಟ್ಟಿದ್ದರೇನಯ್ಯ?
ಇಂತೀ ಷಡ್ವಿಧ ಭೇದವರಿಯದ ಭವಿಗಳು
ನಿಮ್ಮ ಹೊಲಬನವರೆತ್ತ ಬಲ್ಲರಯ್ಯ?
ಇಟ್ಟು ಪೂಜೆಯ ಮಾಡುವ ಆ ದ್ರೋಹಿಗಳಿಗೆ
ನಾನೇನೆಂಬೆನಯ್ಯ ಗೊಹೇಶ್ವರಪ್ರಿಯ ನಿರಾಳಲಿಂಗಾ. || ೪ ||

*

ಗೋಣಿ ಮಾರಯ್ಯ

೨೨೭೬
ಸುರಗಿಯಲ್ಲಿ ತಟ್ಟುಚ್ಚಿರಿದ ಮತ್ತೆ
ಧಾರೆ ಮೊನೆ ತಾಗಿತಲ್ಲಾ ಎಂಬೀ ಹೆಡ್ಡರ ಮಾತ ಕೇಳಲಾಗದು.
ಅರಿವ ಗ್ರಹಿಸಿದ ಚಿತ್ತಕ್ಕೆ ಮರವೆಗೆ ತೆರನುಂಟೆ?
ನಿಷ್ಠೆಯಲ್ಲಿ ನಿಷ್ಠೆ ಹುಟ್ಟಿದ ಮತ್ತೆ
ನಿಷ್ಠೆಯಾಚರಣೆ ಘಟ್ಟಿಸದು.
ಎಲ್ಲಕ್ಕೆ ಶರಣೆಂದು ಎಲ್ಲರಾಲಯದಲ್ಲಿ
ಭಿಕ್ಷವ ತೆಗೆದುಕೊಂಡು,
ಸಲ್ಲಲಿತ ಭಾವದಲ್ಲಿಪ್ಪ ಶರಣಂಗೆ
ಗೋಣಿಯ ಮರೆಯ ಸಿಕ್ಕುದೊಡಕಿಲ್ಲ.
ಕೇಟೇಶ್ವರಲಿಂಗವು ತಾನು ತಾನಾದ ಶರಣ. || ೧ ||

*

ಚೆನ್ನಯ್ಯ

೨೨೭೭
ಇಷ್ಟಲಿಂಗಕ್ಕೆ ತೋರಿ ಮೃಷ್ಟಾನ್ನ ಹೊಡದೆನೆಂಬುದೇನು
ಆ ಇಷ್ಟಲಿಂಗಮುಖದಲ್ಲಿ ನಿಮಗೆ ತೃಪ್ತಿ ಆಗಲಿಲ್ಲವೆ?
ಆ ಶರಣನ ಮುಖದಲ್ಲಿ ಲಿಂಗತೃಪ್ತಿ ಅಹುದಲ್ಲದೆ
ಅಂಗಮುಖದಲ್ಲಿ ಶರಣತೃಪ್ತಿ ಆಗಲರಿಯದು.
'ವೃಕ್ಷಸ್ಯ ವದನಂ ಭೂಮಿ, ಲಿಂಗಸ್ಯ ವದನಂ ಜಂಗಮಂ'
ಎಂಬ ಶ್ರುತಿ ನೋಡಿ ಮರುಳಾದ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. || ೧ ||

೨೨೭೮
ವೃಕ್ಷಕ್ಕೆ ಭೂಮಿ ಮುಖವೋ? ಭೂಮಿಗೆ ವೃಕ್ಷ ಮುಖವೋ?
ಶರಣಂಗೆ ಲಿಂಗ ಮುಖವೋ? ಲಿಂಗಕ್ಕೆ ಶರಣ ಮುಖವೋ?
ಈ ಭೇದವ ಬಲ್ಲರೆ ಹೇಳಿರಿ.
ವೃಕ್ಷಕ್ಕೆ ನೀರು ಎರೆದರೆ ಭೂಮಿಯಲ್ಲಿ ಫಲವಹುದು.
ಭೂಮಿಯಲ್ಲಿ ನೀರೆರೆದರೆ ವೃಕ್ಷಕ್ಕೆ ಫಲವಹುದು.
ಶರಣನ ಮುಖದಲ್ಲಿ ಲಿಂಗ ತೃಪ್ತಿಯಹುದು.
ಲಿಂಗದ ಮುಖದಲ್ಲಿ ಶರಣನ ತೃಪ್ತಿಯಹುದು.
ಆ ಲಿಂಗಮುಖ ಶರಣನೆಂದು ಅರಿಯದ ಭಂಗಿತರಿಗೆ
ಶಿವಲಿಂಗ ಮುನ್ನವಿಲ್ಲವೆಂದಾತ ನಿಮ್ಮ ಶರಣ,
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ. ॥ ೨ ॥

*

ಜಕ್ಕಣಯ್ಯ

೨೨೭೯
ಆಕಾಶಕ್ಕೆ ಬೈಗು ಬೆಳಗುಂಟೇನಯ್ಯ?
ಸೂರ್ಯನಂಗದಲ್ಲಿ ಕಪ್ಪು ಉಂಟೇನಯ್ಯ?
ಹಾಲಸಾಗರದಲ್ಲಿ ವಿಷವುಂಟೇನಯ್ಯ?
ಜ್ಞಾನಿಯಂತರಂಗದಲ್ಲಿ ಅಜ್ಞಾನ ಉಂಟೇನಯ್ಯ
ಝೇಂಕಾರ ನಿಜಲಿಂಗಪ್ರಭುವೆ? ॥ ೧ ॥

೨೨೮೦
ಇಷ್ಟಲಿಂಗದಲ್ಲಿ ಗುರುವಿಡಿದು,
ಪ್ರಾಣಲಿಂಗದಲ್ಲಿ ಲಿಂಗವಿಡಿದು,
ಭಾವಲಿಂಗದಲ್ಲಿ ಜಂಗಮವಿಡಿದು
ಪರಮಪ್ರಸಾದವ ಸ್ವೀಕರಿಸಬಲ್ಲಾತನೆ ನಿಮ್ಮ ಶರಣ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. ॥ ೨ ॥

೨೨೮೧
ಇಷ್ಟಲಿಂಗವಿಡಿದು ಕಾಯ ಶುದ್ಧವಾಯಿತ್ತಯ್ಯ.
ಪ್ರಾಣಲಿಂಗವಿಡಿದು ಮನ ಶುದ್ಧವಾಯಿತ್ತಯ್ಯ.
ಭಾವಲಿಂಗವಿಡಿದು ಚಿತ್ತ ಶುದ್ಧವಾಯಿತ್ತಯ್ಯ.
ಹೀಂಗೆ ಮುಮ್ಮಯ್ಯ ಸಿರಿವಂತನಾಗಿ
ನಿಶ್ಚಿಂತ ನಿರಾಕುಳ ಲಿಂಗವನಾಚರಿಸುತ್ತಿಪ್ಪರು ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. ॥ ೩ ॥

೨೨೮೨
ಉಪ್ಪು ಅಪ್ಪು ಕೂಡಿದಂತೆ,
ಉರಿ ಕರ್ಪುರ ಕೂಡಿದಂತೆ,
ಮಾರುತ ಪರಿಮಳ ಕೂಡಿದಂತೆ,
ಆಕಾಶ ಬಯಲ ಕೂಡಿದಂತೆ,
ತಾನುತಾನಾದುದ ತಾನೇ ಕೂಡಿದಂತೆ
ಝೇಂಕಾರ ನಿಜಲಿಂಗಪ್ರಭುವೆ. || ೪ ||

೨೨೮೩
ಕತ್ತಲೆ ಮನೆಯೊಳಗೆ ಜ್ಯೋತಿಯ ಮುಟ್ಟಿಸಿದರೆ
ಕತ್ತಲೆ ಹರಿದು ಬೆಳಗಾಯಿತ್ತು ನೋಡಾ.
ಸುಜ್ಞಾನದಿಂದ ಅಜ್ಞಾನವಳಿದು
ಅತ್ತತ್ತಲೆ ನಿರಂಜನಲಿಂಗದೊಳು
ನಿರ್ವಿಕಾರನಾಗಿರ್ದನಯ್ಯಾ ನಿಮ್ಮ ಶರಣನು,
ಝೇಂಕಾರ ನಿಜಲಿಂಗಪ್ರಭುವೆ. || ೫ ||

೨೨೮೪
ಕತ್ತಲೆ ಮನೆಯೊಳಗೆ ಬೆಳಗುಂಟೇನಯ್ಯ?
ಆ ಕತ್ತಲೆ ಮನೆಯೊಳಗೆ ಜ್ಯೋತಿಯ ಮುಟ್ಟಿಸಲು
ಕತ್ತಲೆ ಹರಿದುಹೋಯಿತ್ತು ನೋಡಾ.
ಈ ಪರಿಯಾಯದಲ್ಲಿ ಮನವೆಂಬ ಕತ್ತಲೆಯಲ್ಲಿ
ಜ್ಞಾನವೆಂಬ ಜ್ಯೋತಿಯ ಮುಟ್ಟಿಸಲು
ಒಳಹೊರಗೆ ಪರಿಪೂರ್ಣವಾಗಿ ಬೆಳಗಾಯಿತ್ತು ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೬ ||

೨೨೮೫
ಕಾಯ ನನ್ನದೆಂದು ನಚ್ಚಬೇಡಿರೊ.
ಜೀವ ನನ್ನದೆಂದು ನಚ್ಚಬೇಡಿರೊ.
ಕಾಯ ಜೀವವೆಂಬ ಪ್ರಕೃತಿಯನಳಿದು,
ಶಿವಯೋಗದಲ್ಲಿ ನಿಂದು,
ನಿಶ್ಚಿಂತ ನಿರಾಕುಳ ನಿರ್ಭರಿತನಾಗಿರ್ದ ನೋಡಾ
ಝೇಂಕಾರ ನಿಜಲಿಂಗಪ್ರಭುವೆ. || ೭ ||

೨೨೮೬
ಕುರುಡಂಗೆ ಕನ್ನಡಿಯ ತೋರಿದಡೆ
ಆ ಕುರುಡಂಗೆ ಮುಖ ಕಾಣಲಾರದು ನೋಡಾ.

ತುಡುಗಂಗೆ ಜ್ಞಾನವ ಹೇಳಿದರೆ
ಆ ತುಡುಗ ಗಡಣದ ಬೆಳಗ ಬಲ್ಲನೇನಯ್ಯ?
ಪೊಡವಿಗೊಡೆಯ ಈಶ್ವರನು
ತನ್ನ ಮಾರ್ಗದಲ್ಲಿ ನಡೆವರ ಕಂಡು,
ಕೂಡಿಕೊಂಡಿರ್ಪನು ನೋಡಾ
ಝೇಂಕಾರ ನಿಜಲಿಂಗಪ್ರಭುವೆ. ‖ ೮ ‖

೨೨೮೭
ಗುರುವಿಡಿದು ಕಾಯದ ಕರ್ಮವ ಹರಿದೆನಯ್ಯ.
ಲಿಂಗವಿಡಿದು ಜೀವದ ಕರ್ಮವ ಹರಿದೆನಯ್ಯ.
ಜಂಗಮವಿಡಿದು ಪ್ರಾಣದ ಕರ್ಮವ ಹರಿದೆನಯ್ಯ.
ಪ್ರಸಾದವ ಹಿಡಿದು ಸರ್ವಕರ್ಮವ ಹರಿದೆನಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ‖ ೯ ‖

೨೨೮೮
ಗುರುವಿನಲ್ಲಿ ಗುಣವನರಸಲಿಲ್ಲ,
ಲಿಂಗದಲ್ಲಿ ರೂಪವನರಸಲಿಲ್ಲ,
ಜಂಗಮದಲ್ಲಿ ಕುಲವನರಸಲಿಲ್ಲ.
ಇದು ಕಾರಣ, ಬೇರುಪಡಿಸಿ
ಗುರುವಿನಲ್ಲಿ ಗುಣವನರಸಿದೆನಾದೊಡೆ
ಕರ್ಮಕೆ ಬೀಳುವೆನಯ್ಯ.
ಲಿಂಗದಲ್ಲಿ ರೂಪವನರಸಿದೆನಾದೊಡೆ
ಭವಕೆ ಬೀಳುವೆನಯ್ಯ.
ಜಂಗಮದಲ್ಲಿ ಕುಲವನರಸಿದೆನಾದೊಡೆ
ಅಘೋರ ನರಕದಲ್ಲಿ ಬೀಳುವೆನಯ್ಯ.
ಇದಕ್ಕೆ ಸಾಕ್ಷಿ: ಅಗ್ನಿಯಲ್ಲಿ ಸಕಲ ತರುವಾದಿಗಳ ತಂದು
ಸುಟ್ಟು, ಭಸ್ಮವ ಮಾಡಲೊಡನೆ
ಆ ಭಸ್ಮವ ಕುರುಹು ಇಟ್ಟು ನುಡಿಯಲಾಗದಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ‖ ೧೦ ‖

೨೨೮೯
ಚಿಪ್ಪಿನೊಳಗಣ ಮುತ್ತಿನಂತೆ,
ಕಲ್ಲೊಳಗಣ ವಜ್ರದಂತೆ,
ನೀರೊಳಗಣ ಪ್ರತಿಬಿಂಬದಂತೆ,
ಕ್ಷೀರದೊಳಗಣ ಘೃತದಂತೆ,

ಬೀಜದೊಳಗಣ ವೃಕ್ಷದಂತೆ,
ಅಗ್ನಿಯೊಳಗಣ ಪ್ರಕಾಶದಂತೆ,
ಭಾವದೊಳಗಣ ನಿರ್ಭಾವದಂತೆ
ನಿಮ್ಮ ಶರಣ ಸಂಬಂಧವು,
ಝೇಂಕಾರ ನಿಜಲಿಂಗಪ್ರಭುವೆ. ॥ ೧೧ ॥

೨೨೯೦
ನಿಂದಕರು ನಿಂದಿಸಿದರೆ
ಸ್ವಯಜ್ಞಾನಿ ಅಂಜುವನೇನಯ್ಯ?
ಆ ನಿಂದಕನ ಅಂತರಂಗದಲ್ಲಿ
ಅಹಂಕಾರನೆಂಬ ಕೋಣ ಹುಟ್ಟಿ,
ಜ್ಞಾನಿಗಳೆಂದರಿಯದೆ,
ಬಾಯಿಗೆ ಬಂದಂತೆ ನುಡಿವ ತರಕಿಮೂಳರ
ಎನಗೊಮ್ಮೆ ತೋರದಿರಯ್ಯ,
ಝೇಂಕಾರ ನಿಜಲಿಂಗಪ್ರಭುವೆ. ॥ ೧೨ ॥

೨೨೯೧
ಮಾತಿನಲ್ಲಿ ಬ್ರಹ್ಮ, ನೀತಿಯಲ್ಲಿ ಕ್ರೋಧಿ,
ಈ ಲೋಕದ ಭುಂಜಕರು,
ನಾ ಹೆಚ್ಚು, ತಾ ಹೆಚ್ಚುಯೆಂದು ನಡೆದಾಡುವರಯ್ಯ.
ನಾನು ನೀನೆಂಬ ಉಭಯವಳಿದು
ತಾನು ತಾನಾದುದ ನಾನಾರನೂ ಕಾಣೆನಯ್ಯ
ಝೇಂಕಾರ ನಿಜಲಿಂಗಪ್ರಭುವೆ. ॥ ೧೩ ॥

೨೨೯೨
ಲಕ್ಷವ ನೋಡಿದರೇನಯ್ಯ?
ಲಕ್ಷವ ಹೇಳಿದರೇನಯ್ಯ?
ಲಕ್ಷವ ಕೇಳಿದರೇನಯ್ಯ?
ಮೋಕ್ಷಾರ್ಥ ಉಂಟೇನಯ್ಯ?
ಸಾಕ್ಷಾತ್ ಶಿವಜ್ಞಾನವಾದ ಶರಣನು
ತಾನೇ ಮೋಕ್ಷಾರ್ಥ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. ॥ ೧೪ ॥

೨೨೯೩
ಲೋಕ ಲೌಕಿಕಗಳಿಲ್ಲದಂದು,
ಕುಲ ಛಲಂಗಳಿಲ್ಲದಂದು,

ಹಮ್ಮು ಬಿಮ್ಮುಗಳಿಲ್ಲದಂದು,
ದೇಹ ನಿರ್ದೇಹಗಳಿಲ್ಲದಂದು,
ಪ್ರಾಣ ನಿಃಪ್ರಾಣಂಗಳಿಲ್ಲದಂದು,
ಇವೇನೇನೂ ಇಲ್ಲದಂದು,
ನಿಷ್ಕಲಲಿಂಗ ತಾನೇ ನೋಡಾ.
ಝೇಂಕಾರ ನಿಜಲಿಂಗಪ್ರಭುವೆ. ॥ ೧೫ ॥

೨೨೯೪
ಲೋಕ ಲೌಕಿಕದ ರಂಜನೆಗಳಿಲ್ಲದ
ನಿರಂಜನಲಿಂಗದಲ್ಲಿ ಸನ್ಮತನಾಗಿ ಇರಬಲ್ಲ ಮಹಾತ್ಮಂಗೆ,
ಇಹಲೋಕವೆಂದಡೇನಯ್ಯ?
ಪರಲೋಕವೆಂದಡೇನಯ್ಯ?
ಅಲ್ಲಿದ್ದಂಥ ಅಪರಂಪರ ಮಹಾಮಹಿಮ
ನಿತ್ಯ ನಿರಾಕುಳ ತಾನೇ ನೋಡಾ
ಝೇಂಕಾರ ನಿಜಲಿಂಗಪ್ರಭುವೆ! ॥ ೧೬ ॥

೨೨೯೫
ವೇದ ದೊಡ್ಡದೆಂದು ನುಡಿವ ವಾದಿಯ ಮಾತ
ಹೇಳಲಾಗದು ಕೇಳಲಾಗದು.
ಶಾಸ್ತ್ರ ದೊಡ್ಡದೆಂದು ನುಡಿವ ಪಾತಕನ ಮಾತ
ಹೇಳಲಾಗದು ಕೇಳಲಾಗದು.
ಪುರಾಣ ದೊಡ್ಡದೆಂದು ನುಡಿವ ಪುಂಡರ ಮಾತ
ಹೇಳಲಾಗದು ಕೇಳಲಾಗದು.
ಆಗಮ ದೊಡ್ಡದೆಂದು ನುಡಿವ ಅಹಂಕಾರಿಯ ಮಾತ
ಹೇಳಲಾಗದು ಕೇಳಲಾಗದು.
ಜ್ಯೋತಿಷ್ಯ ದೊಡ್ಡದೆಂದು ನುಡಿವ ಘಾತುಕನ ಮಾತ
ಹೇಳಲಾಗದು, ಕೇಳಲಾಗದು.
ಅದೇನು ಕಾರಣವೆಂದಡೆ,
ತನ್ನ ಅಂತರಂಗದಲ್ಲಿ ಪರಬ್ರಹ್ಮದ ನಿಲವ ಅರಿತ ಮಹಾತ್ಮಂಗೆ
ಇನ್ನೆಲ್ಲಿಯ ವೇದವೋ?
ಇನ್ನೆಲ್ಲಿಯ ಶಾಸ್ತ್ರವೋ ?
ಇನ್ನೆಲ್ಲಿಯ ಪುರಾಣವೋ?
ಇನ್ನೆಲ್ಲಿಯ ಆಗಮವೋ?
ಇನ್ನೆಲ್ಲಿಯ ಜ್ಯೋತಿಷ್ಯವೊ?
ಇಂತೀ ಇವಕ್ಕೆ ಸಿಲ್ಕದೆ

ಅತ್ತತ್ತಲೆಯಾಗಿರ್ದನಯ್ಯ ನಿಮ್ಮ ಶರಣನು,
ಝೇಂಕಾರ ನಿಜಲಿಂಗಪ್ರಭುವೆ. || ೧೭ ||

೨೨೯೬
ವೇದದಲ್ಲಿ ನಾಲ್ಕು ನುಡಿಯ ಕಲಿತರೇನು?
ಶಾಸ್ತ್ರದಲ್ಲಿ ನಾಲ್ಕು ನುಡಿಯ ಕಲಿತರೇನು?
ಪುರಾಣದಲ್ಲಿ ನಾಲ್ಕು ನುಡಿಯ ಕಲಿತರೇನು?
ಆಗಮದಲ್ಲಿ ನಾಲ್ಕು ನುಡಿಯ ಕಲಿತರೇನು?
ಕಲಿತು ಜ್ಯೋತಿಷ್ಯವ ಹೇಳಿದರೇನು?
ಶ್ರುತಿಪಾಠಕನಾದರೇನು?
ಚೌಷಷ್ಟಿ ವಿದ್ಯವ ಕಲಿತರೇನು?
ತನ್ನ ಅಂತರಂಗದ ಪರಬ್ರಹ್ಮದ ನಿಲವ ತಾನರಿಯದೆ
ನಾ ಬಲ್ಲೆನೆಂದು ಅಹಂಕರಿಸಿಕೊಂಡಿಪ್ಪ ತರಕಿಮೂಳರ
ಎನಗೊಮ್ಮೆ ತೋರದಿರಯ್ಯ,
ಝೇಂಕಾರ ನಿಜಲಿಂಗಪ್ರಭುವೆ. || ೧೮ ||

೨೨೯೭
ಷಡುರುಚಿಪದಾರ್ಥಂಗಳ ಇಷ್ಟಲಿಂಗಕೆ ತೋರಿ,
ಪ್ರಾಣಲಿಂಗದಲ್ಲಿ ಕೂಡಿ,
ಭಾವಲಿಂಗದಲ್ಲಿ ತೃಪ್ತಿಯನೆಯ್ದಿ,
ಸವಿಯಬಲ್ಲಾತನೆ ನಿರ್ಮಲ ಶರಣ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೧೯ ||

೨೨೯೮
ಸರ್ವಾಂಗದೊಳಹೊರಗಿಪ್ಪ ಪರಬ್ರಹ್ಮಲಿಂಗವು
ಕರಕಮಲಕ್ಕೆ ಬಂದಿತು ನೋಡಾ.
ಆ ಲಿಂಗವ ಸಾಧಿಸಿ ಭೇದಿಸಲರಿಯದೆ
ಅನ್ಯದೈವಂಗಳಿಗೆ ಎರಗಿ ಭವಕ್ಕೆ ಗುರಿಯಾದರು ನೋಡಾ.
ಇದು ಕಾರಣ, ಆ ಲಿಂಗವನರಿತು ಪರತತ್ವದಲ್ಲಿ ಕೂಡಿ
ಪರಿಪೂರ್ಣವಾಗಬಲ್ಲಡೆ ಆತನೆ ನಿರ್ಮುಕ್ತ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೨೦ ||

೨೨೯೯
ಹಸಿವು ತೊರೆದರೇನಯ್ಯ? ಮನದ ಕೊನೆಯ ಮೆಟ್ಟಬೇಕಯ್ಯ.
ತೃಷೆ ತೊರೆದರೇನಯ್ಯ? ಮನದ ಕಳವಳವನಳಿಯಬೇಕಯ್ಯ.
ನಿದ್ರೆ ತೊರೆದರೇನಯ್ಯ? ಮನದ ಕ್ಷುದ್ರವನಳಿಯಬೇಕಯ್ಯ.

ಇಂತೀ ಹಸಿವು ತೃಷೆ ನಿದ್ರೆಯಂಗಳನರಿತು ಮಹಾಕಾರಣದೇಹಿಯಾಗಿ,
ಶೂನ್ಯ ನಿಃಶೂನ್ಯ ನಿರಾಳಪೀಠದಲ್ಲಿ ನಿಂದು ನಿರ್ಭರಿತನಾಗಿರ್ದೆ ನೋಡಾ,
ಝೇಂಕಾರ ನಿಜಲಿಂಗಪ್ರಭುವೆ. || ೨೧ ||

*

ತೋಂಟದ ಸಿದ್ಧಲಿಂಗಶಿವಯೋಗಿ

೨೩೦೦
ಅಂಗನೆಯ ಚಿತ್ತ, ರಮಣನ ಸುತ್ತಿ ಮುತ್ತಿ
ಅಪ್ಪಿ ಅಗಲದಿಪ್ಪಂತೆ,
ಜಾಗ್ರ, ಸ್ವಪ್ನ, ಸುಷುಪ್ತಿಯಲ್ಲಿ
ಶರಣ ಚಿತ್ತರತಿ ಶಿವಲಿಂಗವ ಸುತ್ತಿ ಮುತ್ತಿ
ಅಪ್ಪಿ ಅಗಲದಿಪ್ಪರೆ
ಆ ಮಹಾತ್ಮನ ಏನೆಂದುಪಮಿಸುವೆನಯ್ಯಾ!
ಲಿಂಗಪ್ರಾಣಿಯ, ಪ್ರಾಣಲಿಂಗ ಸಂಬಂಧಿಯ,
ಸ್ವತಂತ್ರ ವಸ್ತುವಿನಲ್ಲಿ ಅರಿವರತು ಬೆರಗು ನಿಬ್ಬೆರಗಾದ
ಘನಲಿಂಗಪ್ರಾಣಿಗೆ ನಮೋ ನಮೋಯೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೧ ||

೨೩೦೧
ಅಟ್ಟುದ ಅಡಲುಂಟೆ, ಸುಟ್ಟುದ ಸುಡಲುಂಟೇ ಅಯ್ಯಾ?
ಬೆಂದ ಮಡಕೆ ಮರಳಿ ಧರೆಯ ಕೂಡಬಲ್ಲುದೇ ಅಯ್ಯಾ?
ಕರ್ಪೂರವ ಅಗ್ನಿ ನುಂಗಿದ ಬಳಿಕ ಕರಿ ಉಂಟೇ ಅಯ್ಯಾ?
ಶರಣನ ಲಿಂಗ ನುಂಗಿ, ಲಿಂಗವ ಶರಣ ನುಂಗಿ
ನದಿಯೊಳಗೆ ನದಿ ಬೆರೆದಂತೆ ಬೆರೆದು
ಶುದ್ಧ ನಿರ್ಮಲನಾದ ಲಿಂಗೈಕ್ಯಂಗೆ
ಭಿನ್ನಾಭಿನ್ನವ ಕಲ್ಪಿಸುವ ಅಜ್ಞಾನಿಗಳ
ಎನಗೊಮ್ಮೆ ತೋರದಿರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨ ||

೨೩೦೨
ಅಮೇಧ್ಯವ ಭುಂಜಿಸುವ ಸೂಕರ ಅಮೃತದ
ಸವಿಯನೆತ್ತ ಬಲ್ಲುದಯ್ಯಾ?
ಗೆಜ್ಜಲ ತಿಂಬ ಕರಡಿ ಖರ್ಜೂರದ ಹಣ್ಣಿನ ಸವಿಯನೆತ್ತಬಲ್ಲುದಯ್ಯಾ?
ಬೇವ ತಿಂಬ ಕಾಗೆ ಬೆಲ್ಲದ ಸವಿಯನೆತ್ತಬಲ್ಲುದಯ್ಯಾ?

ಅಂಗನೆಯರ ಸಮ್ಮೇಳದ
ವಿಕಾರದ ಭಂಗಿಯ ಕೊಂಡು ಮೈಮರೆದ ಮನುಜರು
ಲಿಂಗಪ್ರೇಮದ ಸುಖವನಿವರೆತ್ತಬಲ್ಲರಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವಪ್ರಭುವೇ! ॥ ೩ ॥

೨೩೦೩
ಈಚಲ ತಿಂದ ನರಿ ತನ್ನ ವಿಕಾರಕ್ಕೆ ಒರಲುವಂತೆ
ಮಾತಿನ ಮಮಕಾರಕ್ಕೆ ಆಗಮವ ಬಲ್ಲೆವೆಂದು ಕೂಗಿಡುವರು ನೋಡಾ.
ಆಗಮವತಿರಹಸ್ಯ.
ಆಗಮ ಹೇಗಿಹುದೆಂಬುದ ಲೋಗರು ನೀವೆತ್ತ ಬಲ್ಲಿರಿ.
ಆಗಮಮೂರ್ತಿ ಅನುಭಾವಿ ಬಲ್ಲ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ
ನಿಮ್ಮ ಶರಣರು ಬಲ್ಲರು. ॥ ೪ ॥

೨೩೦೪
ಉಂಗುಷ್ಠದಲ್ಲಿ ಸರ್ಪದಷ್ಟವಾಗಲು
ಸರ್ವಾಂಗವೆಲ್ಲವು ವಿಷಮಯವಾಗಿಪ್ಪುದು ನೋಡಾ.
ಶರಣನೆಂಬಂಗದ ಮೇಲೆ ಲಿಂಗ ದಷ್ಟವಾಗಲು
ಆ ಶರಣನ ಸರ್ವಾಂಗವೆಲ್ಲವು ಲಿಂಗವಪ್ಪುದು ತಪ್ಪದು ನೋಡಾ.
ಲಿಂಗವನಪ್ಪಿ ಲಿಂಗಸಂಗಿಯಾದ ಅಭಂಗಶರಣಂಗೆ
ಅನಂಗಸಂಗವುಂಟೆ? ಬಿಡಾ ಮರುಳೆ!
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೫ ॥

೨೩೦೫
ಉದಯದ ಪೂಜೆ ಉತ್ಪತ್ತಿಗೆ ಬೀಜ,
ಮಧ್ಯಾಹ್ನದ ಪೂಜೆ ಸ್ಥಿತಿ-ಗತಿಯ ಸಂಸಾರಕ್ಕೆ ಬೀಜ,
ಅಸ್ತಮಾನದ ಪೂಜೆ ಪ್ರಳಯಕ್ಕೆ ಬೀಜ.
ಈ ಉದಯ ಮಧ್ಯಾಹ್ನ ಅಸ್ತಮಾನವ ಕಳೆದು
ಸದಾ ಸನ್ನಿಹಿತವಾಗಿ ಮಾಡುವ ಪೂಜೆ
ಉತ್ಪತ್ತಿಸ್ಥಿತಿಲಯಂಗಳ ಮೀರಿದ ನಿತ್ಯನಿರ್ಮಲ ಪೂಜೆ ಕಾಣಾ.
ಆ ಪೂಜೆ ನಿಮ್ಮಲ್ಲಿ ಅಡಗಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೬ ॥

೨೩೦೬
ಉರಿಗೆ ತೋರಿದ ಬೆಣ್ಣೆ ಕರಗುವಂತೆ,
ಅಸಿಯ ಜವ್ವನೆಯರ ಕಂಡು ವಿಷಯಾತುರರಾಗಿ

ಕುಸಿವುತ್ತಿಪ್ಪರು ನೋಡಾ ಹಿರಿಯರು.
ಇದು ಹುಸಿಯೆಂದರಿದು
ನಿಮ್ಮ ಶರಣರು ಮನದ ಕೊನೆಯ ಮೊನೆಯಲ್ಲಿ
ಶಶಿಧರನ ಸಾಹಿತ್ಯವ ಮಾಡಬಲ್ಲರಾಗಿ,
ಸಂಸಾರ ವಿಷಯದೋಷ ಪರಿಹರವಪ್ಪುದು ತಪ್ಪುದು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೭ ॥

೨೩೦೭
ಎಡನಿಲ್ಲ ಬಲನಿಲ್ಲ ಹಿಂದಿಲ್ಲ ಮುಂದಿಲ್ಲದ ಕಾರಣ,
ಅಡಿಯಿಲ್ಲದ ಮುಡಿಯಿಲ್ಲದ ಒಡಲಿಲ್ಲದ,
ಹಿಡಿಯಲಿಲ್ಲದ ಬಿಡಲಿಲ್ಲದ ನೋಡಲಿಲ್ಲದ ನುಡಿಸಲಿಲ್ಲದ
ಕೂಡಲಿಲ್ಲದ ಅಪ್ರತಿಮ ನೀನಾಗಿ,
ಅರಿವಿಲ್ಲದ ಮರಹಿಲ್ಲದ ಮಹಾಮಹಿಮ ನೀನಾದ ಕಾರಣ
ನಿನ್ನ, ನಿರವಯಲಿಂಗವೆಂದೆನಯ್ಯಾ!
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. ॥ ೮ ॥

೨೩೦೮
ಎನ್ನ ತನುವಿಕಾರದ ಭಯ, ಎನ್ನ ಮನವಿಕಾರದ ಭಯ,
ತನುಮನವನಂಡಲೆವ ಧನವಿಕಾರದ ಭಯ ನೋಡಾ.
ಹಗಲು ಹಸಿವಿನ ಚಿಂತೆ, ಇರುಳು ವಿಷಯದ ಚಿಂತೆ;
ಹಗಲಿರುಳು ಸಾವವೊಡಲನೆ ಸಂತವಿಡುತಿಹ ಚಿಂತೆಯದಲ್ಲದೆ
ಸದಾ ಶಿವನ ಧ್ಯಾನತತ್ಪರನಾಗಿ
ಶಿವತತ್ವ ವಿಚಾರದೊಳಗೆ ಇರಲೊಲ್ಲೆನು ನೋಡಾ.
ಸುಧೆಯನೊಲ್ಲದೆ ಹಡಿಕೆಗೆ ಮಚ್ಚಿದ
ಶ್ವಾನನ ವಿಧಿಯಂತಾಯಿತ್ತಯ್ಯಾ.
ಅಮೃತಮಯ ಲಿಂಗಸಂಗವನೊಲ್ಲದೆ
ಸಂಸಾರಸಂಗಕ್ಕೆ ಮುಯ್ಯಾನುವ ಮರುಳ ಮಾನವಾ
ನಿನ್ನ ನಾನೇನೆಂಬೆನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. ॥ ೯ ॥

೨೩೦೯
ಎನ್ನ ಮನಸ್ಸು ಹೊನ್ನು ಹೆಣ್ಣು ಮಣ್ಣ ನೆನೆನೆನೆದು
ನಿಮ್ಮ ನೆನೆಯಲೊಲ್ಲದು ನೋಡಾ.
ಎನ್ನ ಕಾಯ ನಿಮ್ಮ ಮುಟ್ಟದೆ
ಸಂಸಾರಕರ್ಮವನೆ ಮಾಡುತ್ತಿಪ್ಪುದು ನೋಡಾ.
ಎನ್ನ ಪ್ರಾಣ ನಿಮ್ಮ ಮುಟ್ಟದೆ

ಪ್ರಪಂಚಿನೊಳಗೇ ಮುಳುಗುತ್ತಿಪ್ಪುದು ನೋಡಾ.
ಎನ್ನ ಭಾವ ನಿಮ್ಮ ಭಾವಿಸಿ ಭ್ರಮೆಯಳಿಯದೆ,
ಸಂಸಾರ ಭಾವನೆ ಸಂಬಂಧವಾಗಿ ಮುಂದುಗಾಣದೆ,
ಮೋಕ್ಷಹೀನನಾಗಿರ್ದೆನಯ್ಯಾ.
ಸುರಚಾಪದಂತೆ ತೋರಿ ಅಡಗುವ ಅನಿತ್ಯ ತನುವನು
ನಿತ್ಯವೆಂದು, ನಿರುತವೆಂದು ವೃಥಾ ಹೋಯಿತ್ತು ಎನ್ನ ವಿವೇಕ.
ಸಂಸಾರದಲ್ಲಿ ಸವೆಸವೆದು ಅವಿವೇಕಿಯಾದೆನಯ್ಯಾ.
ಎನ್ನ ಅವಿವೇಕವ ಕಳೆದು, ಶಿವತತ್ವವಿವೇಕವನಿತ್ತು ಕರುಣಿಸಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! ॥ ೧೦ ॥

೨೩೧೦
ಎಲೆಗಳೆದ ವೃಕ್ಷದಂತೆ
ಉಲುಹಡಗಿರ್ದೆನಯ್ಯಾ.
ತೆರೆಯಳಿದ ಅಂಬುಧಿಯಂತೆ
ಪರಮ ಶಿವಸಾಗರದೊಳಗೆ ಮುಳುಗಿ
ಪರಮ ಚಿದ್ಗಂಭೀರನಾಗಿರ್ದೆನಯ್ಯಾ.
ಘನವನಳಿದಾಕಾಶದಂತೆ
ಬಚ್ಚಬರಿಯ ಬಯಲಾಗಿ
ನಿಶ್ಚಲನಾಗಿರ್ದೆನಯ್ಯಾ.
ಪಟವನಳಿದ ಚಿತ್ರದಂತೆ
ನಿರ್ಮಲ ನಿರಾವರಣನಾಗಿ
ಶುದ್ಧ ಅಮಲಬ್ರಹ್ಮವಾಗಿ
ಪ್ರತಿಯಿಲ್ಲದ ಅಪ್ರತಿಮ ಅನುಪಮ ಅಪ್ರಮಾಣ
ಅನಾಮಯನು ನೋಡಾ ಶಿವೈಕ್ಯನು.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೧೧ ॥

೨೩೧೧
ಎಲ್ಲರು ಅಹುದೆಂಬುದು ಪ್ರಮಾಣವಲ್ಲ ಕಾಣಿಭೋ!
ಎಲ್ಲರು ಅಲ್ಲಾ ಎಂಬುದು ಪ್ರಮಾಣವಲ್ಲ ಕಾಣಿಭೋ.
ಅದೇನು ಕಾರಣವೆಂದರೆ :
ಶಿವಶರಣರ ಹೃದಯದಂತಸ್ಥವನರಿಯರಾಗಿ,
ಎನ್ನ ಅಹುದೆಂಬುದನು, ಅಲ್ಲಾ ಎಂಬುದನು ಮನ್ಮನೋಮೂರ್ತಿ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ನೀನೇ ಬಲ್ಲೆ. ॥ ೧೨ ॥

೨೩೧೨
ಏನನೋದಿದರೇನಯ್ಯಾ?
ಏನ ಕೇಳಿದರೇನಯ್ಯಾ?
ಏನ ಹಾಡಿದರೇನಯ್ಯಾ?
ಓದಿ ಮರುಳಾದೆಯೋ ಕೂಚಿಭಟ್ಟರೇ! ಎಂದು
ಗಿಣಿಯೋದಿ ತನ್ನ ಹೇಲ ತಾ ತಿಂದಂತೆ
ಏಕಲಿಂಗನಿಷ್ಠಾಚಾರ ಸ್ವಾನುಭಾವವಿವೇಕ
ಸಿದ್ಧಾಂತ ನಿರ್ಣಯವಿಲ್ಲದೆ,
ಮಾತಿಗೆ ಮಾತು ಕಲಿತು
ನುಡಿಗೆ ನುಡಿಯ ಕಲಿತು
ತರ್ಕಮರ್ಕಟರಂತೆ ಹೋರುವ
ಬಯಲಸಂಭ್ರಮದ ತರ್ಕಿಗಳ ಕಂಡರೆ,
ಮಾಗಿಯ ಕೋಗಿಲೆಯಂತೆ
ಮುಖ ಮುನಿಸಾಗಿರಿಸಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೧೩ ||

೨೩೧೩
ಒಳಗೆಂಬವನೊಬ್ಬ; ಹೊರಗೆಂಬವನೊಬ್ಬ.
ರೂಪೆಂಬವನೊಬ್ಬ; ನಿರೂಪೆಂಬವನೊಬ್ಬ.
ಕಾಮಿಯೆಂಬವನೊಬ್ಬ; ನಿಃಕಾಮಿಯೆಂಬವನೊಬ್ಬ.
ಮಾಯೆಯೆಂಬವನೊಬ್ಬ; ನಿರ್ಮಾಯನೆಂಬವನೊಬ್ಬ.
ಶುದ್ಧನೆಂಬವನೊಬ್ಬ; ಅಶುದ್ಧನೆಂಬವನೊಬ್ಬ.
ಮಲಿನನೆಂಬವನೊಬ್ಬ; ನಿರ್ಮಲಿನನೆಂಬವನೊಬ್ಬ.
ಒಳಗೆಂಬಾತನು ಅಲ್ಲ; ಹೊರಗೆಂಬಾತನು ಅಲ್ಲ.
ರೂಪೆಂಬಾತನು ಅಲ್ಲ; ನಿರೂಪೆಂಬಾತನು ಅಲ್ಲ.
ಕಾಮಿಯೆಂಬಾತನು ಅಲ್ಲ; ನಿಃಕಾಮಿಯೆಂಬಾತನು ಅಲ್ಲ.
ಮಾಯೆಯೆಂಬಾತನು ಅಲ್ಲ; ನಿರ್ಮಾಯನೆಂಬಾತನು ಅಲ್ಲ.
ಶುದ್ಧನೆಂಬಾತನು ಅಲ್ಲ; ಅಶುದ್ಧನೆಂಬಾತನು ಅಲ್ಲ.
ಮಲಿನನೆಂಬಾತನು ಅಲ್ಲ; ನಿರ್ಮಲಿನನೆಂಬಾತನು ಅಲ್ಲ.
ನಾನು ನೀನೆಂಬುದೇನುಯೇನೂ ಇಲ್ಲದ ಪರಾಪರವೇ ಶರಣನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೧೪ ||

೨೩೧೪
ಕಟ್ಟರಸಿಲ್ಲದ ರಾಜ್ಯದಂತೆ
ಜೀವನಿಲ್ಲದ ಕಾಯದಂತೆ
ದೇವನಿಲ್ಲದ ದೇಗುಲದಂತೆ

ಪತಿಯಿಲ್ಲದ ಸತಿಯ ಶೃಂಗಾರದಂತೆ
ಗುರುವಾಜ್ಞೆಯಿಲ್ಲದೆ ತನ್ನ ಮನಕ್ಕೆ ತೋರಿದ ಹಾಂಗೆ ಮಾಡಿದ ಭಕ್ತಿ
ಶಿವನ ಮುಟ್ಟದು ನೋಡಾ.
ಶ್ರೀಗುರುವಿನ ವಾಕ್ಯದಿಂದಹುದೆಂದುದನು
ಅಲ್ಲ ಎಂದು ಉದಾಸೀನದಿಂದ ಮಾಡಿದ ಭಕ್ತಿ
ಅದು ಕರ್ಮಕ್ಕೆ ಗುರಿ ನೋಡಾ.
ಶ್ರೀಗುರುವಾಜ್ಞೆವಿಡಿದು ಆಚರಿಸುವ ಸತ್ಯಸಾತ್ವಿಕಭಕ್ತಿ
ಸದ್ಯೋನ್ಮುಕ್ತಿಗೆ ಕಾರಣ ನೋಡಾ.
ಏಕೋಭಾವದ ನಿಷ್ಠೆ
ಭವದ ವ್ಯಾಕುಲವನೆಬ್ಬಟ್ಟುವುದು ನೋಡಾ.
ಅಹುದೋ ಅಲ್ಲವೋ ಎಂಬ ಮನದ ಸಂದೇಹದ ಕೀಲ ಕಳೆದು,
ಶಿವಲಿಂಗದೊಳಗೊಂದು ಮಾಡಿ
ಬಂಧ ಮೋಕ್ಷ ಕರ್ಮಂಗಳ ಒತ್ತಿ ಒರಸುವುದು ನೋಡಾ.
ಇಂದುಧರನೊಳಗೆ ಬೆರಸಿದ ಅಚಲಿತ ಮಾಹೇಶ್ವರಂಗೆ
ನಮೋ ನಮೋ ಎಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೧೫ ॥

೨೩೧೫
ಕಟ್ಟರಸಿಲ್ಲದ ರಾಜ್ಯ ಕಳ್ಳರ ಭಯ,
ಒಕ್ಕಲಿಲ್ಲದ ಊರು ಹಾಳು,
ಮಕ್ಕಳಿಲ್ಲದ ಮನೆ ಮಸಣವಟ್ಟಿಗೆಯೆಂಬ
ಲೋಕದ ದೃಷ್ಟಾಂತದಂತೆ,
ಮುಕ್ಕಣ್ಣನರಿವಿಲ್ಲದವನ ಹೃದಯ
ಕರ್ಕಸದ [ವೀ]ಧಿ, ರಕ್ಕಸರ ಹೊಳಲು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೧೬ ॥

೨೩೧೬
ಕತ್ತಲೆಯನೊಳಕೊಂಡ ಬೆಳಗಿನಂತೆ
ಪಕ್ಷಿಯನೊಳಕೊಂಡ ತತ್ತಿಯಂತೆ
ಮುತ್ತನೊಳಕೊಂಡ ಚಿಪ್ಪಿನಂತೆ
ಸಾಗರವನೊಳಕೊಂಡ ಶಶಿಯಂತೆ
ಜಗವನೊಳಕೊಂಡ ಆಕಾಶದಂತೆ
ಎನ್ನ ನೀವು ಒಳಕೊಂಡಿರಿಯಾಗಿ
ನಾನೋ ನೀನೋ ಏನೆಂದರಿಯೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೧೭ ॥

೨೩೧೭
ಕಾಮದಿಂದ ಕರಗಿದೆನಯ್ಯಾ,
ಕ್ರೋಧದಿಂದ ಕೊರಗಿದೆನಯ್ಯಾ;
ಲೋಭ ಮೋಹಂಗಳಿಂದ ಅತಿ ನೊಂದೆನಯ್ಯಾ;
ಮದ ಮತ್ಸರಂಗಳಿಂದ ಬೆದಬೆದನೆ ಬೆಂದೆನಯ್ಯಾ;
ಅಹಂಕಾರ ಮಮಕಾರದಿಂದ ಮತಿಮಂದನಾಗಿರ್ದೆನಯ್ಯಾ;
ಇದು ಕಾರಣ,
ಎನ್ನ ಕಾಮಾದಿ ಷಡುವರ್ಗಂಗಳ ಕಳೆದು,
ಅಹಂಕಾರ ಮಮಕಾರಂಗಳ ಮಾಣಿಸಿ,
ನಿರಹಂಕಾರಿಯೆಂದೆನಿಸಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೧೮ ||

೨೩೧೮
ಕಾಯ ಬತ್ತಲೆಯಿದ್ದರೇನೊ ಮಾಯವಳಿಯದನ್ನಕ್ಕರ?
ಮಂಡೆ ಬೋಳಾದರೇನೊ ಸಂಸಾರವಿಷಯವ ಛೇದಿಸದನ್ನಕ್ಕರ?
ಇದೇತರ ನಿರ್ವಾಣ? ಸುಡು.
ನಿರಾಲಂಬಿಗಳಾದ ನಿಜಶರಣರು ಮಚ್ಚರು ಕಾಣಾ
ಹೊರವೇಷದ ಹೊಸಕರ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೧೯ ||

೨೩೧೯
ಕಾಯವೆಂಬ ಕೆರೆಗೆ,
ತನುವೆಂಬ ಏರಿಗೆ, ಮನವೆಂಬ ಕಟ್ಟೆಯ ಕಟ್ಟಿ,
ದೃಢವೆಂಬ ತೂಬನಿಕ್ಕಬೇಕಯ್ಯಾ.
ಆನಂದವೆಂಬ ಜಲವ ತುಂಬಿ
ಸ್ವಾನುಭಾವವೆಂಬ ಸೋಪಾನವ ಮಾಡಬೇಕಯ್ಯಾ.
ಆ ಕೆರೆಯ ಏರಿಯ ಮೇಲೆ ಆಚಾರವೆಂಬ ವೃಕ್ಷವ ಬೆಳೆಸಿ
ಅರುಹೆಂಬ ಹೂವ ಅದ್ವೈತವೆಂಬ ಹಸ್ತದಿಂದ ಕುಯಿದು
ಅನುಪಮಲಿಂಗಕ್ಕೆ ಪೂಜಿಸಬಲ್ಲರೆ ಲಿಂಗಾರ್ಚಕರೆಂಬೆ.
ಈ ಭೇದವನರಿಯದೆ ಹುಸಿಯನೆ ಪೂಜಿಸಿ ಗಸಣೆಗೊಳಗಾದ ಪಿಸುಣಿಗಳ
ಲಿಂಗಪೂಜಕರೆಂತೆಂಬೆನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೦ ||

೨೩.೨೦
ಕೆರೆಯೊಡೆದ ಬಳಿಕ ತೂಬು ತಡೆಯಬಲ್ಲುದೆ?
ಒಡೆದ ಮಡಕೆಗೆ ಒತ್ತುಮಣ್ಣುಕೊಟ್ಟರೆ ನಿಲಬಲ್ಲುದೇ ಅಯ್ಯಾ?
ಮುತ್ತೊಡೆದರೆ ಹತ್ತಬಲ್ಲುದೇ ಅಯ್ಯಾ?
ಚಿತ್ತವೊಡೆದರೆ ಭಕ್ತಿ ನೆಲೆಗೊಳ್ಳದು.
ಭಕ್ತಿ ಬೀಸರವಾದರೆ, ಮುಕ್ತಿಯೆಂಬುದು ಎಂದಿಗೂ ಇಲ್ಲ ಕಾಣಾ
ಇದು ಕಾರಣ,
ಚಿತ್ತ ಲಿಂಗವನಪ್ಪಿಯಗಲದೆ
ಭಕ್ತಿ ಬೀಸರವಾಗದೆ
ನಿಮ್ಮ ಕೂಡಿ, ನಿತ್ಯನಿರ್ಮುಕ್ತನಾದೆನು ಕಾಣಾ.
ಎಲ್ಲರ ಪರಿಯಲ್ಲ; ಎನ್ನ ಪರಿ ಬೇರೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೨೧ ॥

೨೩.೨೧
ಕೈಮರೆದು ಕಾದುವ ಕಾಳಗವದೇನೋ?
ಮೈಮರೆದು ಮಾಡುವ ಮಾಟವದೇನೋ?
ಬಾಯಿ ಮರೆದು ಉಂಬ ಊಟವದೇನೋ?
ಸನ್ಮಾನ ಸಾವಧಾನ ಸನ್ನಿಹಿತವಿಲ್ಲದ ಲಿಂಗಸಂಧಾನ
ಜನ್ಮದ ಮೃತ್ಯು ನೋಡಾ.
ಎಚ್ಚರಿಕೆಯಿಲ್ಲದ ಅರ್ಪಿತ ವಿಕಾರ ನೋಡಾ.
ಸಂಕಲ್ಪವಿಕಲ್ಪವಿಲ್ಲದೆ
ಮನ ಲಿಂಗಸಾಹಿತ್ಯವಾದರೆ ಅರ್ಪಿತ;
ಅದು ಪ್ರಸಾದ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೨೨ ॥

೨೩.೨೨
ಕೈಯಲ್ಲಿ ಹಣ್ಣಿದ್ದಂತೆ ಮರನನೇರಿ, ಕೊಂಬ ಬಾಗಿಸಿ
ಕಾಯ ಕೊಯಿವ ಅರೆಮರುಳನಂತೆ,
ಅನಾದಿಮೂಲದೊಡೆಯ
ತನ್ನ ಕರಸ್ಥಲ ಮನಸ್ಥಲದಲ್ಲಿಪ್ಪುದ ತಾನರಿಯದೆ,
ಬೇರೆ ಲಿಂಗವುಂಟು, ಬೇರೆ ಕ್ಷೇತ್ರವುಂಟು ಎಂದು
ಹಲವು ಲಿಂಗಕ್ಕೆ ಹರಿದು ಹಂಬಲಿಸುವ
ಈ ಸೂಳೆಗೆ ಹುಟ್ಟಿದವರಿಗೆ

ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪ್ರಸಾದವಿಲ್ಲ
ಮುಕ್ತಿಯೆಂಬುದು ಎಂದೆಂದಿಗೂ ಇಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೩ ||

೨೩೨೩
ಕೊತ್ತಿಗೆ ಕೊಂಬು ಹುಟ್ಟಬಲ್ಲುದೆ?
ನುಚ್ಚಕ್ಕಿ ಮೊಳೆಯಬಲ್ಲುದೆ?
ಸತ್ತ ಮರ ಎಳಕಬಲ್ಲುದೆ?
ಅರೆಯ ಮೇಲೆ ತಾವರೆ ಬೆಳೆಯಬಲ್ಲುದೆ ಅಯ್ಯಾ?
ದುರ್ಬುದ್ಧಿ ಮಾನವರ ಭಾವದಲ್ಲಿ ಶಿವಜ್ಞಾನ ಕರಿಗೊಳ್ಳಬಲ್ಲುದೆ ಅಯ್ಯಾ?
ಶಿವಜ್ಞಾನ ಇಲ್ಲದವರಿಗೆ ಶಿವಕೃಪೆಯೆಲ್ಲಿಯದೋ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೪ ||

೨೩೨೪
ಕೊರಡು ಕೊನರಾಗಬಲ್ಲುದೆ?
ಬರಡು ಹಯನಾಗಬಲ್ಲುದೇ ಅಯ್ಯಾ?
ಕುರುಡಗೆ ಕನ್ನಡಿಯ ತೋರಿದಡೆ ನೋಡಬಲ್ಲನೆ?
ಮೂಗಗೆ ರಾಗವ ಹೇಳಿದರೆ ಹಾಡಬಲ್ಲನೇ ಅಯ್ಯಾ?
ಹೇಗ ಬುದ್ಧಿಯ ಬಲ್ಲನೇ ಅಯ್ಯಾ?
ಲೋಗರಿಗೆ ಉಪದೇಶವ ಹೇಳಿದರೆ
ಶಿವಸತ್ಪಥದ ಹಾದಿಯ ಬಲ್ಲರೇ ಅಯ್ಯಾ?
ಇದು ಕಾರಣ,
ಶಿವ ಸತ್ಪಥದ ಆಗೆಂಬುದು ಶಿವಜ್ಞಾನಸಂಪನ್ನಂಗಲ್ಲದೆ
ಸಾಧ್ಯವಲ್ಲ ಕಾಣಾ.
ಅಸಾಧ್ಯವಸ್ತುವಿನೊಳಗಣ ಐಕ್ಯ
ಅವಿವೇಕಿಗಳಿಗೆ ಅಳವಡುವುದೇ ನಮ್ಮವರಿಗಲ್ಲದೆ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೫ ||

೨೩೨೫
ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹೇಂಗೆ ಹಡೆವಳಯ್ಯಾ?
ಲಿಂಗಕ್ಕೆ ನಾಚಿದಾತ ಶರಣನೆಂತಪ್ಪನಯ್ಯಾ?
ಈ ಲಜ್ಜೆ ನಾಚಿಕೆಯೆಂಬ ಪಾಶವಿದೇನಯ್ಯಾ?
ಸಂಕಲ್ಪ ವಿಕಲ್ಪದಿಂದ ಸಂದೇಹಿಸುವ ಭ್ರಾಂತಿಯೇ ಲಜ್ಜೆಯಯ್ಯಾ.
ಅಹುದೋ ಅಲ್ಲವೋ, ಏನೋ ಎಂತೋ ಎಂದು
ಹಿಡಿವುತ್ತ ಬಿಡುತ್ತಿಪ್ಪ ಲಜ್ಜಾಭ್ರಾಂತಿ ಉಡುಗಿರಬೇಕಯ್ಯಾ.

ಗಂಡನ ಕುರುಹನರಿಯದಾಕೆಗೆ ಲಜ್ಜೆ, ನಾಚಿಕೆ ಉಂಟಾದುದಯ್ಯಾ!
ಲಿಂಗವನರಿಯದಾತಂಗೆ
ಸಂಕಲ್ಪ ವಿಕಲ್ಪವೆಂಬ ಸಂದೇಹಭ್ರಾಂತಿ ಉಂಟಾದುದಯ್ಯಾ!
ಈ ಅರುಹು ಮರಹೆಂಬುಭಯದ ಮುಸುಕ ತೆಗೆದು
ನೆರೆ ಅರುಹಿನಲ್ಲಿ ಸನ್ನಿಹಿತವಿಲ್ಲದ ಜಡರುಗಳ ಕೈಯಲ್ಲಿ
ಲಿಂಗಾನುಭಾವವ ಬೆಸಗೊಳಲುಂಟೆ ಅಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! || ೨೬ ||

೨೩೨೬

ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ,
ಬೆಳಗು ಬೆಳಗನಪ್ಪಿ ಮಹಾ ಬೆಳಗಾದಂತೆ,
ಶರಣ ಲಿಂಗವನಪ್ಪಿ, ಮಹಾಲಿಂಗವೇ ತಾನು ತಾನಾಗಿ
ನಿರ್ವಯಲಾದನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೭ ||

೨೩೨೭

ಗುರುಪ್ರಸಾದಕ್ಕೆ ಹೇಸುವರು;
ಲಿಂಗಪ್ರಸಾದಕ್ಕೆ ಹೇಸುವರು;
ಜಂಗಮಪ್ರಸಾದಕ್ಕೆ ಹೇಸುವರು;
ಭಕ್ತಪ್ರಸಾದಕ್ಕೆ ಹೇಸುವರು;
ಹೊಲತಿ ಮಾದಿಗಿತ್ತಿ ಬಲ್ಲವಳಾದರೆ,
ಹಲವು ಪರಿಯಲ್ಲಿ ಅವಳೆಂಜಲ ತಿನುತಿಪ್ಪರು ನೋಡಾ ಜಗ!
ಹದಿನೆಂಟು ಜಾತಿಯ ಎಂಜಲ ಹೇಹವಿಲ್ಲದೆ ತಿಂಬ ಭವಜಾತಿಗಳಿಗೆ
ಪ್ರಸಾದ ದೊರೆಕೊಂಬುದೆ? ದೊರಕೊಳ್ಳದು.
ಅದೇನು ಕಾರಣವೆಂದಡೆ:
ಭವಭವದಲ್ಲಿ ಯೋನಿಚಕ್ರದಲ್ಲಿ ತಿರುಗುತ್ತಿಪ್ಪರಾಗಿ.
ಈ ಅಶುದ್ಧ ಜೀವಿಗಳಿಗೆ ಶುದ್ಧವಹ ಶಿವಪ್ರಸಾದದಲ್ಲಿ
ಸಂಬಂಧ ಸಮನಿಸದು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೨೮ ||

೨೩೨೮

ಗುರುವನು ಮಹಾದೇವನನು ಒಂದೇಯೆಂದು
ಭಾವಿಸಲು ಬೇಕು ನೋಡಾ.
ಎರಡೆಂಬ ಪ್ರತಿಭಾವ ತೋರಿದಡೆ, ಅದು ಅಜ್ಞಾನ ನೋಡಾ.
ಇದು ಕಾರಣ, ಆವನಾನೊರ್ವನು ಎರಡೆಂದು ಭಾವಿಸಿದನಾದಡೆ,

ಅನೇಕಕಾಲ ನರಕದ ಕುಣಿಯಲ್ಲಿಪ್ಪುದು ತಪ್ಪದು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೨೯ ॥

೨೩೨೯
ಘೃತ ಘೃತವ ಬೆರೆಸಿದಂತೆ,
ಕ್ಷೀರ ಕ್ಷೀರವ ಬೆರೆಸಿದಂತೆ,
ತೈಲ ತೈಲವ ಬೆರೆಸಿದಂತೆ,
ನೀರು ನೀರ ಬೆರೆಸಿದಂತೆ,
ಜ್ಯೋತಿ ಜ್ಯೋತಿಯ ಕೂಡಿದಂತೆ,
ಬಯಲು ಬಯಲ ಬೆರೆಸಿದಂತೆ,
ಪ್ರಾಣ ಪ್ರಾಣ ಸಂಯೋಗವಾದ
ಶರಣ ಲಿಂಗ ಸಮರಸವನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೩೦ ॥

೨೩೩೦
ಚಂದ್ರನಿಂದಾದ ಕಲೆ, ಚಂದ್ರನ ಬೆರೆಸಿ ಚಂದ್ರನಾದಂತೆ,
ಸೂರ್ಯನಿಂದಾದ ಕಿರಣ, ಸೂರ್ಯನ ಬೆರೆಸಿ ಸೂರ್ಯನಾದಂತೆ,
ಅಗ್ನಿಯಿಂದಾದ ಕಾಂತಿ, ಅಗ್ನಿಯನೆ ಬೆರೆಸಿ ಅಗ್ನಿಯಾದಂತೆ,
ದೀಪದಿಂದಾದ ಬೆಳಗು, ದೀಪವನೆ ಬೆರೆಸಿ ದೀಪವಾದಂತೆ,
ಸಮುದ್ರದಿಂದಾದ ನದಿ, ಸಮುದ್ರವನೆ ಬೆರೆಸಿ ಸಮುದ್ರವಾದಂತೆ,
ಪರಶಿವತತ್ತ್ವದಲ್ಲಿಯೆ ನಾನುದಯಿಸಿ
ಆ ಪರಶಿವತತ್ತ್ವದಲ್ಲಿಯೆ ಬೆರೆಸಿ
ಪರಶಿವಯೋಗಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೩೧ ॥

೨೩೩೧
ಚಿತ್ರದ ಬೊಂಬೆ ರೂಪಾಗಿರ್ದರೇನೋ?
ಅಚೇತನವಾದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಹಾವುಮೆಕ್ಕೆಯ ಹಣ್ಣು ನುಂಪಾಗಿರ್ದರೇನೋ?
ಕಹಿ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಅತ್ತಿಯ ಹಣ್ಣು ಕಳಿತಿರ್ದರೇನೋ?
ಕ್ರಿಮಿ ಬಿಡದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ತಿಪ್ಪೆಯ ಹಳ್ಳ ತಿಳಿದಿರ್ದರೇನೋ?
ಅಮೇಧ್ಯ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ವೇದ ಶಾಸ್ತ್ರ ಪುರಾಣಾಗಮಂಗಳನೋದಿ

ಎಲ್ಲರಲ್ಲಿಯೂ ಅನುಭಾವಿಗಳಾದರೇನೋ?
ಆಶೆಯೆಂಬ ಪಾಶದಲ್ಲಿ ಕಟ್ಟುವಡೆದು ಪಾಶಬದ್ಧರಾದ ಕಾರಣ
ಪ್ರಯೋಜನಕಾರಿಗಳಾದುದಿಲ್ಲ.
ನಡೆದಂತೆ ನುಡಿಯದವರ
ನುಡಿವಂತೆ ನಡೆಯದವರ
ಎಂತು ಶಿವಶರಣರೆಂಬೆ ವಾಚಾಳಕರ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! ॥ ೩೨ ॥

೨೩೩೨
ಚಿಲುಮೆಯ ಅಗ್ಘವಣಿಯ ಕುಡಿದರೇನೋ,
ಜನ್ಮದ ಮೈಲಿಗೆಯ ತೊಳೆಯದನ್ನಕ್ಕರ?
ಕಾಡುಗಟ್ಟೆಯ ನೀರ ಕುಡಿದರೇನೋ,
ತನ್ನ ಕಾಡುವ ಕರಣಾದಿ ಗುಣಂಗಳ ಕಳೆದುಳಿಯದನ್ನಕ್ಕರ?
ಉಳ್ಳಿ ನುಗ್ಗೆಯ ಬಿಟ್ಟರೇನೋ,
ಸಂಸಾರದ ಸೊಕ್ಕಿನುಕ್ಕಮುರಿದು
ಮಾಯಾದುರ್ವಾಸನೆಯ ವಿಸರ್ಜಿಸದನ್ನಕ್ಕರ?
ಸಪ್ಪೆಯನುಂಡರೇನೋ
ಸ್ತ್ರೀಯರ ಅಪ್ಪುಗೆ ಬಿಡದನ್ನಕ್ಕರ?
ಅದೇತರ ಶೀಲ, ಅದೇತರ ವ್ರತ ಮರುಳೇ?
ಅಂಗವಾಚಾರಲಿಂಗವಾಗಿ
ಮನವು ಅರಿವು ಸಂಬಂಧವಾಗಿ
ಸರ್ವ ದುರ್ಭಾವಚರಿತ್ರವೆಲ್ಲಾ ಕೆಟ್ಟು,
ಸತ್ಯಸದ್ಭಾವ ನೆಲೆಗೊಂಡ ಸದ್ಭಕ್ತನ ಸುಶೀಲಕ್ಕೆ
ನಮೋ ನಮೋಯೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೩೩ ॥

೨೩೩೩
ಜೇನುತುಪ್ಪದಲ್ಲಿ ಬಿದ್ದು ಸಾವ ನೊಣನಂತೆ,
ಕೀಳುಮಾಂಸದ ಸವಿಗೆ ಗಂಟಲಗಾಣದಲ್ಲಿ ಸಿಕ್ಕಿ ಸಾವ ಮೀನಿನಂತೆ,
ಹೀನವಿಷಯಕ್ಕೆ ನಚ್ಚಿ ಮಚ್ಚದಿರಾ ಎಲೆಲೆ ಹುಚ್ಚು ಮನವೇ.
ಅಲ್ಪಸುಖಕ್ಕೆ ಮಚ್ಚಿ, ಅನಂತಭವಭಾರಕ್ಕೊಳಗಾಗಿ
ದುರ್ಗತಿಗಿಳಿಯದಿರಯ್ಯಾ ಬೆಂದ ಮನವೇ.
ಹರಹರಾ ಶಿವಶಿವಾಯೆಂಬುವದ ಮರೆಯದಿರು; ಮರೆದೊರಗದಿರು.
ನಾಯ ಸಾವ ಸಾವೆ ಕಂಡಾ ಎಲೆಲೆ ಮನವೇ.

ಈ ಮರುಳತನವ ಬಿಟ್ಟು
ಎನ್ನೊಡೆಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವಿಗೆ
ಶರಣು ಶರಣೆನ್ನ ಕಲಿಯಾ, ಸುಖಿಯಾಗಬಲ್ಲರೆಲೆಲೆ ಮನವೇ! || ೩೪ ||

೨೩೩೪
ಜ್ಯೋತಿಯ ತಮ ಎಡೆಗೊಂಡಂತೆ,
ಚಂದ್ರಮನ ರಾಹು ಎಡೆಗೊಂಡಂತೆ,
ನಿಧಾನವ ಸರ್ಪನೆಡೆಗೊಂಡಂತೆ,
ಅಂಬುಧಿಯ ಅನಲನೆಡೆಗೊಂಡಂತೆ,
ಮನವ ಮಾಯೆಯೆಡೆಗೊಂಡು
ನಿಮ್ಮ ನೆನಹ ನೆಲೆಗೊಳಲೀಯದೆ
ಮರಣಕ್ಕೊಳಗುಮಾಡುತ್ತಿಪ್ಪುದಯ್ಯಾ.
ಈ ತಮವ ಪರಿಹರಿಸಿ ಎನ್ನನುಳುಹಿಕೊಳ್ಳಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೩೫ ||

೨೩೩೫
ಜ್ಯೋತಿಯಿದ್ದ ಮನೆಯಲ್ಲಿ ಕತ್ತಲೆಯುಂಟೆ?
ಲಿಂಗವಿದ್ದಂಗದಲ್ಲಿ ಅಜ್ಞಾನವುಂಟೆ?
ಅಜ್ಞಾನವಿಲ್ಲವಾಗಿ ಅಂಗವಿಕಾರವಿಲ್ಲ.
ಅಂಗವಿಕಾರವಿಲ್ಲವಾಗಿ
ಹೆಂಗಳಿಗೆ ಸೋಲರು, ಹೊಂಗಳಿಗೆಣಿಸರು,
ಮಹಾಲಿಂಗೈಕ್ಯರಯ್ಯಾ ನಿಮ್ಮ ಪ್ರಮಥರು,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೩೬ ||

೨೩೩೬
ತಂದೆಯಿಲ್ಲದ, ತಾಯಿಯಿಲ್ಲದ,
ಹೆಸರಿಲ್ಲದ, ಕುಲವಿಲ್ಲದ,
ಹುಟ್ಟಿಲ್ಲದ, ಹೊಂದಿಲ್ಲದ,
ಅಯೋನಿಸಂಭವ ನೀನಾದ ಕಾರಣ
ನಿನ್ನ ನಾನು ನಿಃಕಲಲಿಂಗವೆಂದೆನಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. || ೩೭ ||

೨೩೩೭
ತೈಲ ಬತ್ತಿ ಜ್ಯೋತಿಯ ಮುಟ್ಟೆ ಜ್ಯೋತಿಯಪ್ಪುದು ನೋಡಾ.
ಸದ್ಭಕ್ತಿ, ಸ್ನೇಹ ಮೋಹದಿಂದ ಲಿಂಗಸ್ಪರುಶನವ ಮಾಡೆ,

ಆ ಭಕ್ತನ ದೇಹ ಮನ ಕರಣಂಗಳೆಲ್ಲವು ಲಿಂಗವಾದವು ನೋಡಾ.
ಲಿಂಗವ ಮುಟ್ಟಿ ಮತ್ತೊಂದೇನುವ ಮುಟ್ಟದ ನಿರ್ಮೋಹಿಯ
ಮಾಹೇಶ್ವರನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೩೮ ॥

೨೩೩೮
ದೇಹವೇ ದೇಗುಲ, ಕಾಲೇ ಕಂಬ, ಶಿರಸ್ಸೇ ಶಿಖರ ನೋಡಾ.
ಹೃದಯಕಮಲಕರ್ಣಿಕಾವಾಸವೇ ಸಿಂಹಾಸನ,
ಮಹಾಘನಪರತತ್ತ್ವವೆಂಬ ಪ್ರಾಣಲಿಂಗವ ಮೂರ್ತಿಗೊಳಿಸಿ
ಪರಮಾನಂದಾಮೃತಜಲದಿಂದ ಮಜ್ಜನಕ್ಕೆರೆದು
ಮಹಾದಳಪದ್ಮದ ಪುಷ್ಪದಿಂದ ಪೂಜಿಸಿ
ಪರಮಪರಿಣಾಮವೆಂಬ ನೈವೇದ್ಯವ ಗಡಣಿಸಿ
ಪ್ರಾಣಲಿಂಗಕ್ಕೆ ಪ್ರಾಣಸಂಬಂಧವಾದ
ಪೂಜೆಯ ಮಾಡುತ್ತಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೩೯ ॥

೨೩೩೯
ದೇಹವ ಮರೆಗೊಂಡಿಪ್ಪ ಆತ್ಮನಂತೆ
ಶಕ್ತಿಯ ಮರೆಗೊಂಡಿಪ್ಪ ಶಿವನಂತೆ
ಕ್ಷೀರವ ಮರೆಗೊಂಡಿಪ್ಪ ತುಪ್ಪದಂತೆ
ವಾಚ್ಯವ ಮರೆಗೊಂಡಿಪ್ಪ ಅನಿರ್ವಾಚ್ಯದಂತೆ
ಲೋಕಾರ್ಥದೊಳಡಗಿಪ್ಪ ಪರಮಾರ್ಥದಂತೆ
ಎನ್ನ ಆತ್ಮನೊಳಡಗಿಪ್ಪ ಪರಮಾರ್ಥ ತತ್ವವು
ಬೀಜದೊಳಡಗಿದ ವೃಕ್ಷದಂತೆ ಇದ್ದಿತಯ್ಯಾ.
ನಾನರಿಯದ ಮುನ್ನ ಎನ್ನೊಳಡಗಿದ್ದಿತಯ್ಯಾ
ಶರಣ ಲಿಂಗ ಸಂಬಂಧ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೪೦ ॥

೨೩೪೦
ನವಿಲಾಡಿತೆಂದು ಕೆಂಬೋತ ಪಕ್ಕವ ತೆರಕೊಂಡಂತೆ
ಹುಲಿಯ ಬಣ್ಣಕ್ಕೆ ನರಿ ಮೈಯ ಸುಟ್ಟುಕೊಂಡಂತೆ
ಕೋಗಿಲೆ ಸ್ವರಗೆಯ್ದುದೆಂದು ಕಾಗೆ ಕರ್ರೆಂದಂತೆ
ಲಿಂಗನಿಷ್ಠಾಂಗಿ ವಚನ ಹಾಡಿದರೆ ಒಪ್ಪುವದಲ್ಲದೆ,
ನಿಷ್ಠೆಹೀನರು ಓದಿ ಹಾಡಿದರೆ

ನಳ್ಳಿಗುಳ್ಳೆಯ ತಿಂದ ನರಿ
ಹಳ್ಳದ ತಡಿಯಲ್ಲಿ ಬಳ್ಳಿಟ್ಟು ಬಗುಳಿದಂತೆ
ಎಂದು ಪಾಟಿ ಮಾಡೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೧ ||

೨೩೪೧
ಪರುಷ ಸೋಂಕಲು
ಅವಲೋಹದ ಗುಣ ಕೆಟ್ಟು ಚಿನ್ನವಾಗದಿಹುದೆ?
ಹಲವು ತೃಣಂಗಳೆಲ್ಲವು
ಅಗ್ನಿಯ ಮುಟ್ಟಲು ಭಸ್ಮವಾಗದಿಹುವೆ?
ಹಳ್ಳ ಕೊಳ್ಳದ ನೀರೆಲ್ಲಾ ಬಂದು
ಅಂಬುಧಿಯನೆಯ್ದಿ ಅಂಬುಧಿಯಪ್ಪುದು ತಪ್ಪದು ನೋಡಾ!
ಹಲವು ವರ್ಣದ ಪದಾರ್ಥವನೆಲ್ಲವ ತಂದು
ಶಿವಲಿಂಗಾರ್ಪಣವ ಮಾಡಲು
ಆ ಪದಾರ್ಥದ ಪೂರ್ವಾಶ್ರಯವಳಿದು
ಪ್ರಸಾದವಪ್ಪುದು ತಪ್ಪದು ನೋಡಾ!
ಆ ಪ್ರಸಾದವ ಕೊಂಬ ಪ್ರಸಾದಿ ಪವಿತ್ರಕಾಯನು ನೋಡಾ!
ಆತನು ಶುದ್ಧ ನಿರ್ಮಲನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೨ ||

೨೩೪೨
ಪರುಷ ಸೋಂಕಿಯೂ ಪಾಷಾಣ ಶುದ್ಧವಾಗದಿದ್ದರೆ
ಆ ಪರುಷದ ಗೊಡವೆ ಏತಕಯ್ಯಾ?
ಅಗ್ನಿ ಸೋಂಕಿಯೂ ಕಾಷ್ಠದ ಗುಣವಳಿಯದಿದ್ದರೆ
ಆ ಅಗ್ನಿಯ ಗೊಡವೆ ಏತಕಯ್ಯಾ?
ಗರುಡನಿದ್ದೂ ಸರ್ಪದ ಭಯ ಹಿಂಗದಿದ್ದರೆ
ಆ ಗರುಡನ ಗೊಡವೆ ಏತಕಯ್ಯಾ?
ವಜ್ರಾಂಗಿಯ ತೊಟ್ಟಿರ್ದೂ ಬಾಣದ ಭಯ ಹಿಂಗದಿದ್ದರೆ
ಆ ವಜ್ರಾಂಗಿಯ ಗೊಡವೆ ಏತಕಯ್ಯಾ?
ಆನೆಯನೇರಿಯೂ ಶ್ವಾನನ ಭಯಹಿಂಗದಿದ್ದರೆ
ಆ ಆನೆಯ ಗೊಡವೆ ಏತಕಯ್ಯಾ?
ಜ್ಯೋತಿಯಿದ್ದೂ ಕತ್ತಲೆ ಹರಿಯದಿದ್ದರೆ
ಆ ಜ್ಯೋತಿಯ ಗೊಡವೆ ಏತಕಯ್ಯಾ?

ಅಂಗದ ಮೇಲೆ ಚಿದ್ಘನಲಿಂಗವ ಧರಿಸಿದ್ದೂ
ತನುಮನದ ಅವಗುಣ ಹಿಂಗದಿದ್ದರೆ
ಆ ಲಿಂಗದ ಗೊಡವೆ ಏತಕಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ,
ನೀವು ಸೋಂಕಿಯೂ ಭವ ಹಿಂಗದಿದ್ದರೆ ನಿಮಗೆ ಕುಂದಯ್ಯಾ! || ೪೩ ||

೨೩೪೩

ಪುರಜನಂಗಳ ಮೆಚ್ಚಿಸುವಾಗ ಪುರುಷಾರ್ಥಿಯೆ ಶರಣ?
ಪರಿಜನಂಗಳ ಮೆಚ್ಚಿಸುವಾಗ ಪಾದರಗಿತ್ತಿಯೆ ಶರಣ?
ಸರ್ವರ ಮೆಚ್ಚಿಸುವಾಗ ಸಂತೆಯ ಸೂಳೆಯೆ ಶರಣ?
ತನ್ನ ಲಿಂಗದ ನಚ್ಚು ಮಚ್ಚು ಪರಬ್ರಹ್ಮದಚ್ಚು;
ನಿಂದಕರ ಸುಡುವ ಎದೆಗಿಚ್ಚು ನೋಡಾ.
ಕೆಂಡವ ಕೊಂಡು ಮಂಡೆಯ ತುರಿಸುವಂತೆ
ಕೆಂಡಗಣ್ಣನ ಶರಣರ ಇರವನರಿಯದೆ
ದೂಷಣೆಯ ಮಾಡುವ ನರಕಿಜೀವಿಗಳ
ನರಕದಲ್ಲಿಕ್ಕದೆ ಮಾಬನೆ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೪ ||

೨೩೪೪

ಬೂದಿಯಲ್ಲಿ ಹೊರಳುವ ಕತ್ತೆಯಂತೆ
ಎಲುವ ಕಡಿವ ಶ್ವಾನನಂತೆ
ಹಾತೆಯ ತಿಂಬ ಹಲ್ಲಿಯಂತೆ
ಕಿಚ್ಚ ಹಾಯುವ ಹುಳದಂತೆ
ಒಚ್ಚಿ ಹೊತ್ತಿನ ಭೋಗಕ್ಕೆ ಮೆಚ್ಚಿ ಹುಚ್ಚಾದಿರಿಯಲ್ಲಾ!
ಮೃತ್ಯುಂಜಯನನಪ್ಪದೆ ಮೃತ್ಯುವಿನ ಬಾಯತುತ್ತಾದವರ ಕಂಡು
ನಗುತ್ತಿದ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೫ ||

೨೩೪೫

ಭವತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು,
ಕಾಣಬಾರದೆಯಿದ್ದ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು
ಶಿವಪಥವಿದೆಂದು ತೋರಿಸಿದ ಸದ್ಗುರುದೇವಂಗೆ
ನಮೋ ನಮೋಯೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೬ ||

೨೩೪೬

ಭಾವ ಮನಕ್ಕೆ ಲಿಂಗ ಧರಿಸಿ, ಕಾಯಕ್ಕೆ ಲಿಂಗವಿಲ್ಲದಿರಬಹುದೇ?
ಎರಡಂಗ ಭಕ್ತರಾಗಿ, ಒಂದಂಗ ಭವಿಯಾಗಿಪ್ಪ
ಭ್ರಾಂತರ ಮುಖವ ನೋಡಲಾಗದು.
ತನು ಮನ ಭಾವದಲ್ಲಿ ಲಿಂಗವ ಧರಿಸಿ
ಲಿಂಗತ್ರಯಕ್ಕೆ ಅಂಗತ್ರಯಕ್ಕೆ
ಅಗಲಿಕೆಯಿಲ್ಲದೆ ಅಚಲಿತನಾಗಿರ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೪೭ ||

೨೩೪೭

ಭೂಲೋಕದಲ್ಲಿ ಕುಳ್ಳಿರ್ದು ಆಕಾಶದ ಸುದ್ದಿಯ ನುಡಿದರೆ
ಆಕಾಶದ ನೆಲೆಯ ಬಲ್ಲರೆ ಅಯ್ಯಾ?
ಪಾತಾಳಲೋಕದಲ್ಲಿದ್ದವರು ಕೈಲಾಸದ ಸುದ್ದಿಯ ನುಡಿದರೆ
ಕಂಡಂತೆ ಆಗಬಲ್ಲುದೆ ಅಯ್ಯಾ?
ತತ್ವಶಾಸ್ತ್ರವನೋದಿ
ತತ್ವಮಸ್ಯಾದಿ ವಾಕ್ಯಾರ್ಥವ ತಿಳಿದು
ತತ್ವಮಸಿಯಾದೆನೆಂಬವರೆಲ್ಲಾ ಎತ್ತ ಹೋದರೋ?
ವ್ಯರ್ಥವಾಗಿ ಸತ್ತು ಹೋದರಲ್ಲಾ.
ಇದು ಕಾರಣ, ನಿಮ್ಮ ಶರಣರು
ಉತ್ಪತ್ತಿ ಸ್ಥಿತಿ ಪ್ರಳಯರಹಿತವಾದ
ಮಹಾಲಿಂಗದಲ್ಲಿ ಸಂಯೋಗವಾದ
ಅಚ್ಚ ಲಿಂಗೈಕ್ಯರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೪೮ ||

೨೩೪೮

ಮಣ್ಣ ಮಚ್ಚಿ ಮನೆಯ ಮಚ್ಚಿದವಂಗೆ
ಗುರುವಿನ ಮಚ್ಚೆಲ್ಲಿಯದೊ?
ಹೆಣ್ಣ ನಚ್ಚಿ ಹೊನ್ನ ನಚ್ಚಿದವಂಗೆ
ಲಿಂಗದ ಮಚ್ಚೆಲ್ಲಿಯದೊ?
ಹೆಂಡತಿ ಮಕ್ಕಳು ಬಂಧುಗಳು ಹಿತರೆಂದು ಮಚ್ಚಿದವರಿಗೆ
ಜಂಗಮದ ಮಚ್ಚೆಲ್ಲಿಯದೋ?
ಗುರುಲಿಂಗಜಂಗಮವ ನಂಬದವರಿಗೆ
ಮುಕ್ತಿಯೆಂಬುದು ಕನಸಿನಲ್ಲಿಯೂ ಇಲ್ಲವಯ್ಯಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ
ನಿಮ್ಮ ನಂಬದ ಪಾಪಿಗಳಿಗೆ! || ೪೯ ||

೨೩೪೯
ಮಣ್ಣಿನಿಂದಾದ ಮಡಕೆ, ಚಿನ್ನದಿಂದಾದ ತೊಡಿಗೆ,
ಕಂಚಿನಿಂದಾದ ತಳಿಗೆ ಬಟ್ಟಲು, ಕಬ್ಬುನದಿಂದಾದ ಕೊಡಲಿ ಕುಡನು
ಮೊದಲಾದವರ ಕಾರ್ಯಕಾರಣಕ್ಕೆ ಭಿನ್ನವುಂಟೆ? ಇಲ್ಲ ಎಂಬಂತೆ,
ಮಹಾಲಿಂಗದಲ್ಲಿ
ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ ಉದಯಿಸಿದ ಶರಣಂಗೆ
ಭಿನ್ನವೆಲ್ಲಿಯದೋ ಶರಣಂಗೂ ಲಿಂಗಕ್ಕೂ?
ಅದ್ವೈತಾನಂದದಿಂದ ಸಂಪೂರ್ಣವನುಳ್ಳುದಲ್ಲದೆ
ಅಲ್ಲಿ ಮತ್ತೊಂದು ಸಂದೇಹವುಂಟೆ?
ಅಲ್ಲಿ ಸಂಶಯವ ಕಲ್ಪಿಸುವ ಮಾಯಾಭ್ರಾಂತರ ತೋರದಿರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೦ ||

೨೩೫೦
ಮರಕ್ಕೂ ಕೊಂಬೆಗೂ ಭೇದವುಂಟೇ ಅಯ್ಯಾ?
ಅಂಗಕ್ಕೂ ಅವಯವಗಳಿಗೂ ಭೇದವುಂಟೇ ಅಯ್ಯಾ?
ಅಂಗದ ಮೇಲೆ ಲಿಂಗವನಿರಿಸಬಹುದು,
ಅವಯವಂಗಳ ಮೇಲೆ ಲಿಂಗವನಿರಿಸಬಾರದೇಕೆಂಬಿರಯ್ಯಾ.
ಅಂಗವೇ ಶುದ್ಧ, ಅವಯವಂಗಳು ಅಶುದ್ಧವೇ ಮರುಳುಗಳಿರಾ?
ಮುಚ್ಚಿಕೊಂಡಿರಿ ಭೋ.
ಲಿಂಗ ಪ್ರಸಾದವ ಕೊಂಬ ಶರಣಂಗೆ
ಕೈ, ಬಾಯಿ, ಅವಯವಂಗಳೊಳಗೆಲ್ಲವು
ಲಿಂಗವೇ ತುಂಬಿಪ್ಪುದು ಕಾಣಿಭೋ.
ಈ ಶರಣ ಲಿಂಗದ ಸಮರಸವನಿವರೆತ್ತ ಬಲ್ಲರಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೧ ||

೨೩೫೧
ಮಸಿ ಕಪ್ಪಾಯಿತ್ತೆಂದು
ಹಾವುಮೆಕ್ಕೆಯ ಹಣ್ಣು ಕಹಿಯಾಯಿತ್ತೆಂದು
ತಿಪ್ಪೆಯ ಹಳ್ಳ ಕದಡಿತ್ತೆಂದು
ಹಂದಿ ಹುಡುಹುಡುಗುಟ್ಟಿತ್ತೆಂದು
ನಾಯಿ ಬಗುಳಿತ್ತೆಂದು ಸಂದೇಹಿಸಿದವರುಂಟೆ?
ಇದು ಕಾರಣ,
ಅರಿಯದ ಅಜ್ಞಾನಿಗಳು ನುಡಿದರೆ
ಅರುಹಿಂಗೆ ಭ್ರಮೆಯುಂಟೆ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೨ ||

೨೩೫೨
ಮಳೆ ಹುಯ್ದರಾಕಾಶ ನೆನೆವುದೆ?
ಬಿರುಗಾಳಿ ಬೀಸಿದರಾಕಾಶ ನೋವುದೆ?
ಕಿತ್ತಲಗಿನಿಂದಿರಿದರೆ ಆಕಾಶ ಹರಿವುದೆ?
ಬಚ್ಚಬರಿಯ ಬಯಲು ಕಟ್ಟು ಕುಟ್ಟಿಗೊಳಗಾಗಬಲ್ಲುದೆ?
ನಿಶ್ಚಿಂತ ನಿರಾಳನಾದ ನಿತ್ಯನ
ತಥ್ಯಮಿಥ್ಯದಿಂದ ನುಡಿವ ತುಚ್ಛರ ನುಡಿ ತಟ್ಟಬಲ್ಲುದೆ?
ವಸ್ತುವ ವಾಕುಶಸ್ತ್ರ ಖಂಡಿಸಬಲ್ಲುದೆ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೩ ||

೨೩೫೩
ಮಾತಿನಲ್ಲಿ ಮಹತ್ವವ ನುಡಿದು
ನೀತಿಯಲ್ಲಿ ಅಧಮರಾದ ಮಾನವರು
ಈಶ್ವರೋವಾಚವ ನುಡಿದುಕೊಂಡು ನಡೆದರೆ,
ಬೆಟ್ಟಕ್ಕೆ ನಾಯಿ ಬಗುಳಿದಂತೆ.
ಕಷ್ಟರ ನುಡಿ ಕಾಮಾರಿಯ ಮುಟ್ಟದು ಕಾಣಾ.
ನಿಮ್ಮ ಮುಟ್ಟದೆ ಮನಕ್ಕೆ ಬಂದಂತೆ ನಡೆವವರ,
ಮನಕ್ಕೆ ಬಂದಂತೆ ನುಡಿವವರ ಮಚ್ಚೆನು ಕಾಣಾ,
ಅಲ್ಲಿ ನೀನಿಲ್ಲದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೪ ||

೨೩೫೪
ಮುಗಿಲ ಮರೆಯ ಸೂರ್ಯನಂತೆ,
ನೆಲದ ಮರೆಯ ನಿಧಾನದಂತೆ,
ಒರೆಯ ಮರೆಯ ಅಲಗಿನಂತೆ,
ಹಣ್ಣಿನೊಳಗಣ ರಸದಂತೆ,
ಶರಣನ ಶರೀರವ ಮರೆಗೊಂಡು
ಪರಮ ಪಾವನಮೂರ್ತಿ ಪರಾಪರ
ತಾನು ತಾನಾಗಿರ್ದುದನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೫ ||

೨೩೫೫
ಮೆತ್ತಾನ ಅಶನವನುಂಡು,
ಕೆಚ್ಚಾನ ಚರ್ಮವ ಕಚ್ಚಿಕೊಂಡು,
ಬೆಚ್ಚಾನ ಮನೆಯಲ್ಲಿ ಬಿದ್ದಿಪ್ಪರಿಗೆ,

ಅಚ್ಚುಗವೆ ಅನಂತ ಬಹುದುಃಖ?
ಮೃತ್ಯುಂಜಯನನರಿಯದೆ
ಸಂಸಾರವೆಂಬ ಮೃತ್ಯುವಿನ ಬಾಯತುತ್ತಾಗಿ
ಉತ್ಪತ್ತಿ ಸ್ಥಿತಿ ಪ್ರಳಯಕ್ಕೊಳಗಾದಿರಿಯಲ್ಲಾ?
ನಿತ್ಯ ನಿರಂಜನ ಪರವಸ್ತುವ ಮಚ್ಚಲರಿಯದೆ,
ವೃಥಾ ಕೆಟ್ಟಿತ್ತು ನೋಡಾ ತ್ರೈಜಗ!
ಮಹಾಲಿಂಗಗುರು ಶಿವಸಿದ್ದೇಶ್ವರಪ್ರಭುವೆ! || ೫೬ ||

೨೩೫೬
ಮೊಲನ ಕಂಡ ನಾಯಂತೆ
ಇಂದ್ರಿಯವಿಷಯಕ್ಕೆ ಮುಂದುವರಿಯದಿರಾ.
ಅಂಗನೆಯರ ಸಮ್ಮೇಳದಿಂ ಭಂಗಿತನಾಗದಿರಾ.
ಲಿಂಗವನಪ್ಪಿ ಸುಖಿಯಾಗಾ ಎಲೆ ಮನವೆ.
ಅಂಗದಿಚ್ಛೆಗೆ ಆಯಸಂಬಡದಿರಾ.
ಲಿಂಗಸಂಗಿಗಳು ನೋಡಿ ನಗುವರೆಲೆ ಮನವೇ.
ಇಂದ್ರಿಯಭೋಗಂಗಳೆಂಬವು
ಕನಸಿನ ಸಿರಿಯಂತೆ ತೋರಿ ಅಡಗುವವು.
ನೀನವನೇಕೆ ಮಚ್ಚುವೆ ಹುಚ್ಚು ಮನವೇ ?
ಹರಹರಾ ಶಿವಶಿವಾ ಎನ್ನು ಮನವೆ,
ನಿನ್ನ ನಾ ಬೇಡಿಕೊಂಬೆನಯ್ಯಾ ಎಲೆಲೆ ಮನವೆ.
ಸಿಂಹನ ಕಂಡ ಕುರಿಯಂತೆ ಕೆಡೆಬಡೆದೋಡದಿರಯ್ಯಾ ಪಾಪಿ ಮನವೇ.
ಲಿಂಗಪದವ ಸಾರಿ, ಶಿವಭಕ್ತನಾಗಿ
ಮುಕ್ತಿಸಮ್ಮೇಳನಾಗಯ್ಯಾ.
ಕರ್ತೃ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವನೊಡಗೂಡಿ
ನಿತ್ಯನಾಗಬಲ್ಲರೆಲೆಲೆ ಮನವೇ! || ೫೭ ||

೨೩೫೭
ಮೋಹನ ಮೊಲೆಯ, ಮುದ್ದುಮೊಗದ ಭಾವಕಿಯರ,
ಲಲ್ಲೆನುಡಿಯೆಂಬ ನಯಗತ್ತಿ ಎಲ್ಲರ ಹೃದಯವ ಕೊರವುತ್ತಿದೆ ನೋಡಾ.
ಇನ್ನೆಲ್ಲಿಯ ಅರುಹೋ ಶಿವ ಶಿವಾ,
ಬಲ್ಲತನ ಬರುದೊರೆ ಹೋಯಿತ್ತು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೮ ||

೨೩೫೮
ಯುವತಿಯರ ವ್ಯವಹಾರವೆಂಬ ವಿಕಳತೆ ಹತ್ತಿ
ಯೋಗದ ಸಮತೆ ಸಡಿಲಿತ್ತು ನೋಡಾ.

ಸತ್ಯ ಸತ್ತಿತ್ತು, ಭಕ್ತಿಯರತಿತ್ತು;
ಮಾಯಾವಿಲಾಸವೆಂಬ ಮೃತ್ಯು ಮುಟ್ಟದ ಮುನ್ನ
ನಿಮ್ಮತ್ತ ಹಿಡಿದು ಎತ್ತಿಕೊಳ್ಳಯ್ಯಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೫೯ ||

೨೩೫೯
ಲಲನೆಯರ ನಟನೆಯೆಂಬ ಕುಟಿಲಕ್ಕೆ ಸಿಕ್ಕಿ,
ಕೋಟಲೆಗೊಳದಿರಾ ಮರುಳು ಮಾನವಾ.
ನಿಟಿಲತಟದಲ್ಲಿ ಮಠವ ಮಾಡಿಕೊಂಡು
ನಿಶ್ಚಿಂತ ನಿರಾಳನಾಗಿರಾ.
ಹುಸಿಯ ಮಾಯಾತಮಂಧಕೆ ದಿಟಪುಟ ದಿವಾಕರ
ಎನ್ನೊಡೆಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭು ಕಾಣಿರೋ! || ೬೦ ||

೨೩೬೦
ಲಿಂಗದಿಂದ ಶರಣರುದಯವಾಗದಿರ್ದಡೆ,
ಬಸವ ಚೆನ್ನಬಸವ ಪ್ರಭುದೇವರು ಮುಖ್ಯವಾದ
ಏಳುನೂರುಯೆಪ್ಪತ್ತು ಅಮರಗಣಂಗಳು
ಎಲ್ಲರೂ ಕ್ಷೀರ ಕ್ಷೀರವ ಬೆರಸಿದಂತೆ, ನೀರು ನೀರ ಬೆರಸಿದಂತೆ,
ಘೃತ ಘೃತವ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ.
ಲಿಂಗವ ಬೆರಸಿ ಮಹಾಲಿಂಗವೆಯಾದರು ನೋಡಾ.
ಲಿಂಗದಿಂದ ಶರಣರುದಯವಾಗದಿರ್ದಡೆ,
ನೀಲಲೋಚನೆಯಮ್ಮ ಲಿಂಗದೊಳಗೆ ತನ್ನಂಗವನೇಕೀಕರಿಸಿ,
ಕೇವಲ ಪರಂಜ್ಯೋತಿರ್ಲಿಂಗದಲ್ಲಿ ನಿರವಯವಾದಳು ನೋಡಾ.
ಇಂತಪ್ಪ ದೃಷ್ಟವ ಕಂಡು ನಂಬದಿರ್ಪುದು ಕರ್ಮದ ಫಲ.
ಅದು ಇವರ ಗುಣವೆ? ಶಿವನ ಮಾಯಾಪ್ರಪಂಚಿನ ಗುಣ ನೋಡಾ.
ಈ ಪ್ರಪಂಚುಜೀವಿಗಳು ಅಲ್ಲಾ ಎಂಬುದು, ಅಹುದೆಂಬುದು ಪ್ರಮಾಣೆ?
ಅಲ್ಲ ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. || ೬೧ ||

೨೩೬೧
ಲೋಕಮೆಚ್ಚೆ ನಡೆವರಯ್ಯಾ ಲೋಕಮೆಚ್ಚೆ ನುಡಿವರಯ್ಯಾ.
ಲೋಕಮೆಚ್ಚೆ ನಡೆಯೆ ಹೋಯಿತ್ತೆನ್ನ ಶಿವಾಚಾರ.
ಲೋಕಮೆಚ್ಚೆ ನುಡಿಯೆ ಹೋಯಿತ್ತೆನ್ನ ಶಿವಜ್ಞಾನ,

ಲೌಕಿಕವರ್ತನ ನಾಯಕನರಕವೆಂದಿತ್ತು ಗುರುವಚನ.
ಇದು ಕಾರಣ ಲಿಂಗಮೆಚ್ಚೆ ನಡೆವೆ, ಲಿಂಗಮೆಚ್ಚೆ ನುಡಿವೆ.
ಲಿಂಗ ಲಿಂಗವೆಂ[ದು] ಲಿಂಗಭ್ರಾಂತನಾಗಿ ವರ್ತಿಸುವೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೬೨ ||

೨೩೬೨
ವಾರಿ ಬಲಿದು, ವಾರಿಶಿಲೆಯಾದಂತೆ,
ವಾರಿಶಿಲೆ ಕರಗಿ ಉದಕವಾದಂತೆ,
ನಿನ್ನ ವಿನೋದಕ್ಕೆ ನೀನೆ ಶರಣನಾದೆ.
ನಿನ್ನ ವಿನೋದಕ್ಕೆ ನೀನೆ ಲಿಂಗವಾದೆ.
ನಿನ್ನ ವಿನೋದ ನಿಂದಲ್ಲಿ ನೀನೆ ಶರಣ ಲಿಂಗವೆಂಬುಭಯವಳಿದು
ನಿರಾಳ ನಿರ್ಮಾಯನಾಗಿ ಶಬ್ದಮಯನಾದೆ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೩ ||

೨೩೬೩
ವಿಶ್ವಾಸದಿಂದ ಅಂಗನೆಯ ಕುಚ, ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಬಳ್ಳ ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಆಡಿನ ಹಿಕ್ಕೆ ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಲಿಂಗವನಪ್ಪಿದ ಹೆಣ್ಣು ಗಂಡಾದುದಿಲ್ಲವೆ?
ವಿಶ್ವಾಸದಿಂದ ಓಗರ ಪ್ರಸಾದವಾಗಿ
ಎಂಜಲೆಂದ ವಿಪ್ರರ ಮಂಡೆಯ ಮೇಲೆ ತಳೆಯಲು
ಕೆಂಡವಾಗಿ ಸುಟ್ಟುದಿಲ್ಲವೆ ಗ್ರಾಮಸಹಿತವಾಗಿ?
ಇದು ಕಾರಣ,
ವಿಶ್ವಾಸದಿಂದ ಗುರು; ವಿಶ್ವಾಸದಿಂದ ಲಿಂಗ;
ವಿಶ್ವಾಸದಿಂದ ಜಂಗಮ; ವಿಶ್ವಾಸದಿಂದ ಪ್ರಸಾದ.
ವಿಶ್ವಾಸಹೀನಂಗೆ ಗುರುವಿಲ್ಲ; ಲಿಂಗವಿಲ್ಲ;
ಜಂಗಮವಿಲ್ಲ; ಪ್ರಸಾದವಿಲ್ಲ ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೬೪ ||

೨೩೬೪
ಶಿಶು ತಾಯ ಮರೆವುದೆ ಅಯ್ಯಾ?
ಪಶು ಕರುವ ಮರೆವುದೆ ಅಯ್ಯಾ?
ಅಂಗನೆ ರಮಣನ ಮರೆವಳೆ ಅಯ್ಯಾ?
ಗುಡುಗನಾಡುವನು ಗೊತ್ತ ಮರೆವನೆ ಅಯ್ಯಾ?

ಲಿಂಗಸಾವಧಾನಿಯಾದಾತ ಲಿಂಗದ ನೆನಹ ಮರೆವನೆ ಅಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೫ ||

೨೩೬೫
ಶಶಿಮುಖಿಯರ ಸಂಗಕ್ಕೆ ಎಣಿಸುವ ಪಶುಪ್ರಾಣಿಗಳು
ಪಶುಪತಿಯ ಸಂಗಸುಖಕ್ಕೆ ಯಾಕೆ ಎಣಿಸಲೊಲ್ಲರಯ್ಯಾ?
ಶಿವ ಶಿವಾ! ನೀ ಮಾಡಿದ ವಿಷಯದ ವಿಧಿ,
ಈರೇಳು ಲೋಕದವರನಂಡಲೆವುತ್ತಿದೆ ನೋಡಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೬ ||

೨೩೬೬
ಶ್ವಾನಂಗೆ ಪೃಷ್ಠದಲ್ಲಿ ಬಾಲ;
ಉಪಾಧಿಕಂಗೆ ಬಾಯಲ್ಲಿ ಬಾಲ ನೋಡಾ.
ಮಮಕಾರವೆಂಬ ನಾಯಿಯೆದ್ದು ಮುರುಗಲು
ನಾಲಗೆಯೆಂಬ ಬಾಲ ಬಡಿದಾಡುತ್ತಿದೆ ನೋಡಾ.
ಒಡಲುಪಾಧಿಗೆ ಉಪಚಾರವ ನುಡಿವ ವಿರಕ್ತನ ನಾಲಗೆ
ನಾಯಬಾಲಕಿಂದ ಕರಕಷ್ಟ ನೋಡಾ.
ಪರಮಾರ್ಥಪದದಲ್ಲಿ ಪರಿಣಾಮಿಯಾದವನ ಬಾಯಲ್ಲಿ
ಪ್ರಪಂಚುಂಟೆ ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೭ ||

೨೩೬೭
ಸಟ್ಟುಗ ಸವಿಯಬಲ್ಲುದೆ?
ಅಟ್ಟ ಮಡಕೆ ಉಣಬಲ್ಲುದೆ ಅಯ್ಯಾ?
ಬಟ್ಟ ಬಯಲು ಕಟ್ಟು ಕುಟ್ಟಗೊಳಗಾಗಬಲ್ಲುದೆ?
ನಿಷ್ಠೆಹೀನರಿಗೆ ಲಿಂಗ, ಕಟ್ಟಳೆಗೆ ಬರಬಲ್ಲುದೆ?
ಕರಕಷ್ಟರಿರಾ ಸುಮ್ಮನಿರಿ ಭೋ.
ಕಟ್ಟಳೆಗೆಯ್ದದ ಮಹಾಘನದಲ್ಲಿ
ಮನಮುಟ್ಟಿ ಹಿಮ್ಮೆಟ್ಟದೆ ಅಡಗಿದಾತನೇ
ಅಚಲಿತ ಮಹೇಶ್ವರನು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೮ ||

೨೩೬೮
ಸುಡುವಗ್ನಿ ಕಾಷ್ಠದಿರವ ಬಲ್ಲುದೆ?
ಕೊರೆದು ಹರಿವ ಉದಕ ಗಿರಿಯ ಗರ್ವವ ಬಲ್ಲುದೆ?

ಮುರಿದು ತಿಂಬ ತೋಳ ಕುರಿಯಮರಿಯ ಬೇನೆಯ ಬಲ್ಲುದೆ?
ಅಯ್ಯಾ ತನ್ನವಸರಕ್ಕೆ ಆರನಾದರೂ
ಸಾಧಿಸಿ ಭೇದಿಸಿ ಕೊಂಬೆ [ತಿಂಬೆ]ನೆಂಬವ
ಅಸತ್ಯ ಸುಸತ್ಯದ ಕುರುಹ ಬಲ್ಲನೆ?
ಸತ್ಯದ ಕುರುಹನರಿಯನಾಗಿ ಶಿವಭಕ್ತಿಯನೆಂತರಿವನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೬೯ ||

೨೩೬೯
ಸುಧೆಯೊಳಗೆ ವಿಷವುಂಟೆ? ಮಧುರದೊಳಗೆ ಕಹಿಯುಂಟೆ?
ದಿನಮಣಿಯೊಳಗೆ ಕಪ್ಪುಂಟೆ? ಬೆಳದಿಂಗಳೊಳಗೆ ಕಿಚ್ಚುಂಟೆ?
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೆ?
ಮಹಾಜ್ಞಾನಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮಂಗೆ
ಸಂಕಲ್ಪ ಭ್ರಮೆಯುಂಟೆ? ಅದೇತರ ವಿಶ್ವಾಸ! ಸುಡು ಸುಡು!!
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. || ೭೦ ||

೨೩೭೦
ಸುರತರುವ ಬಿಟ್ಟು ಯಲವದ ಮರಕೆ ನೀರೆರೆವಂತೆ,
ನೊರೆವಾಲ ಚೆಲ್ಲಿ ಕಾಟಿಗೆ ಬಯಸಿ ಬಾಯಾರುವಂತೆ,
ತಾಯ ಮಾರಿ ತೊತ್ತ ಕೊಂಬವನಂತೆ,
ರಂಭೆಯ ಬಿಟ್ಟು ಸಿಂಬೆಯ ಬಯಸುವ ಶಿಖಂಡಿಗಳಂತೆ,
ನಿತ್ಯವಲ್ಲದ ನಿರುತವಲ್ಲದ ಸತ್ತುಹೋಹ
ಮಾಯಾ ಪ್ರಪಂಚ ಮಚ್ಚಿದ ಮನುಜರು,
ಮುಕ್ತ್ಯಂಗನೆಯನಪ್ಪಿ ಭಕ್ತ್ಯಮೃತವ ಸೇವಿ[ಪ]
ನಿತ್ಯಪದದ ಸುಖವ ವ್ಯರ್ಥಕಾಯರಿವರೆತ್ತಬಲ್ಲರು ಹೇಳಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೭೧ ||

೨೩೭೧
ಸುರತರು ವೃಕ್ಷದೊಳಗಲ್ಲ; ಸುರಧೇನು ಪಶುವಿನೊಳಗಲ್ಲ;
ಪರುಷ ಪಾಷಾಣದೊಳಗಲ್ಲ; ಶಿಷ್ಯನ ಭಾವಕ್ಕೆ ಗುರು ನರನಲ್ಲ;
ಗುರುವೇ ಪರಮೇಶ್ವರನೆಂದು ಭಾವಿಸಬಲ್ಲಡೆ ಶಿಷ್ಯನೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೭೨ ||

೨೩೭೨
ಸೂರ್ಯನಿಂದ ತೋರಿದ ಕಿರಣಂಗಳಿಗೂ
ಆ ಸೂರ್ಯನಿಗೂ ಭಿನ್ನವುಂಟೇ?

ಚಂದ್ರನಿಂದ ತೋರಿದ ಕಲೆಗೂ
ಆ ಚಂದ್ರನಿಗೂ ಭಿನ್ನವುಂಟೇ?
ಅಗ್ನಿಯಿಂದ ತೋರಿದ ಕಾಂತಿಗೂ
ಆ ಅಗ್ನಿಗೂ ಭಿನ್ನವುಂಟೇ?
ಜ್ಯೋತಿಯಿಂದ ತೋರಿದ ಕಾಂತಿಗೂ
ಆ ಜ್ಯೋತಿಗೂ ಭಿನ್ನವುಂಟೇ?
ಅಗಮ್ಯ, ಅಗೋಚರ, ಅಪ್ರಮಾಣ,
ಅಪ್ರತಿಮ ಮಹಾಲಿಂಗದಂಗದಲ್ಲಿ
ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ ಉದಯಿಸಿದ
ಶರಣಂಗೂ ಆ ಮಹಾಲಿಂಗಕ್ಕೂ ಭಿನ್ನವುಂಟೇ?
ಇದ ಬೇರೆಂಬ ಅರೆಮರುಳುಗಳನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. || ೭೩ ||

೧೩೭೩
ಸ್ಫಟಿಕದ ಘಟದೊಳಗೆತ್ತಿದ ಜ್ಯೋತಿ,
ಒಳಹೊರಗೊಂದೆ ಸ್ವಯವಾಗಿ ಪ್ರಜ್ವಲಿಸುವಂತೆ,
ಎನ್ನೊಳಗಿಪ್ಪಾತನೂ ಹೊರಗಿಪ್ಪಾತನೂ ಒಂದೇ ವಸ್ತುವೆಂಬ
ಆದ್ಯಂತವು ಕಾಣಬಂದಿತ್ತು ನೋಡಾ.
ಆ ಪರತತ್ವವೇ ಶರಣ ತಾನೆ ನೋಡಾ.
ಬೇರೊಂದು ಸ್ವರೂಪಲ್ಲ ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ ! || ೭೪ ||

೧೩೭೪
ಹಾಲೋಗರವನುಂಡು ಬಾಲೆಯರ ತೋಳಮೇಲೊರಗಿದಡೆ
ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಿರಣ್ಣಾ.
ಅಲ್ಲಿಯ ಆಲಿಂಗನ ವಿಷ, ಚುಂಬನ ನಂಜು, ನೋಟ ಸರಳು,
ಸವಿನುಡಿ ಕಠಾರಿ ನೋಡಾ.
ಅಲ್ಲಿಯ ನೆನಹು ಅಜ್ಞಾನ ನೋಡಾ.
ಅದು ತನ್ನ ಹಿತಶತ್ರುತನದಿಂದ ಭ್ರಾಂತುಭಾವನೆಯ
ಹುಟ್ಟಿಸಿ ಕೊಲುವುದಾಗಿ,
ಆ ಸಂಸಾರ ನಿನಗೆ ಹಗೆಯೆಂದು ತಿಳಿಯಾ, ಮರುಳುಮಾನವಾ.
ಇದು ಕಾರಣ, ಸಂಸಾರಸುಖವನುಣ್ಣಲೊಲ್ಲದೆ,
ಬಾಲೇಂದುಮೌಳಿಯ ಜ್ಞಾನಪ್ರಸಾದವನುಂಡು ನಾನು ಬದುಕಿದೆನಯ್ಯಾ.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೭೫ ||

೨೩೭೫
ಹಾವಿನೊಳಗಣ ಸಂಗ ಆವಾಗಲೆಂದರಿಯಬಾರದಯ್ಯಾ,
ಕಿಚ್ಚಿನೊಳಗಣ ಸಂಗ ಸುಟ್ಟು ಭಸ್ಮವ ಮಾಡುವದಯ್ಯಾ,
ಲಿಂಗದೃಷ್ಟಿ ತಪ್ಪಿ, ಅಂಗನೆಯರ ನೋಟಬೇಟ
ಕಂಗಳ ಕೆಡಿಸಿ ಭಂಗಿತರ ಮಾಡುವುದಯ್ಯಾ.
ಪರಸ್ತ್ರೀಯರ ಕೂಟ ಪಂಚಮಹಾಪಾತಕದಲ್ಲಿಕ್ಕುವುದಯ್ಯಾ.
ಧರೆಯೊಳಕೊಳ್ಳದು; ಹಿರಿಯರು ಮಚ್ಚರು.
ಹಿರಿಯರು ಮಚ್ಚರಾಗಿ ಶಿವ ಮುನ್ನವೆ ಮಚ್ಚನು.
ನಾಯಕನರಕ ತಪ್ಪದಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೭೬ ||

೨೩೭೬
ಹೆಣನ ಕಂಡರೆ ನಾಯಿ ಕಚ್ಚದೆ ಮಾಣ್ಬುದೆ?
ನೊಣನ ಕಂಡರೆ ಕಪ್ಪೆ ಹಿಡಿದಲ್ಲದೆ ಮಾಣ್ಬುದೆ?
ಹಣವ ಕಂಡರೆ ಮನ ಕನಲಿದಲ್ಲದೆ ಮಾಣ್ಬುದೆ?
ಬಿಸಿಯ ಕಂಡರೆ ಬೆಣ್ಣೆ ಕರಗಿದಲ್ಲದೆ ಮಾಣ್ಬುದೆ?
ಹುಸಿಯ ಕಂಡರೆ ಲೋಕ ನಚ್ಚುವುದು, ಮಚ್ಚುವುದು.
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ,
ಇವರು ಮಚ್ಚಿಯೇನು? ನಮ್ಮ ನಾಯಿಗೆ
ತಮ್ಮ ಮಗುವ ಕೊಡಬೇಡ. || ೭೭ ||

೨೩೭೭
ಹೆಣ್ಣ ಬಿಟ್ಟೆ, ಮಣ್ಣ ಬಿಟ್ಟೆ, ಹೊನ್ನ ಬಿಟ್ಟೆನೆಂದು
ಜಗದ ಕಣ್ಣ ಕಟ್ಟಿ ಮೆರೆವ
ಕಣ್ಣಬೇನೆಯ ಬಣ್ಣದ ಅಣ್ಣಗಳು ನೀವು ಕೇಳಿಭೋ.
ಮಾತಿನಲ್ಲಿ ಬಿಟ್ಟರಿಯೋ, ಮನದಲ್ಲಿ ಬಿಟ್ಟರಿಯೋ?
ಈ ನೀತಿಯ ಹೇಳಿ ಎನಗೊಮ್ಮೆ.
ತನುಮನದ ಮಧ್ಯದಲ್ಲಿ ಇವರ ನೆನಹು ಕೆಟ್ಟು
ಲಿಂಗದ ನೆನಹಿನ ಆಯತವೇ ಸ್ವಾಯತವಾಗಿರಬಲ್ಲರೆ
ಬಿಟ್ಟರೆಂದೆಂಬೆನಯ್ಯಾ.
ಮಾತಿನಲ್ಲಿ ಬಿಟ್ಟು ಮನದಲ್ಲಿ ಉಳ್ಳರೆ
ಭವಭವದಲ್ಲಿ ತಂದು
ಕುನ್ನಿ ನಾಯ, ಕೆರವ ಕಚ್ಚಿಸುವ ಹಾಂಗೆ ಕಚ್ಚಿಸಿದಲ್ಲದೆ
ಮಾಣದು ಕಾಣಿರಯ್ಯಾ.

ಹಿಡಿದು ಸಂಸಾರಿಗಳಲ್ಲದ
ಬಿಟ್ಟು ನಿಃಸಂಸಾರಿಗಳಲ್ಲದ
ಎರಡೂ ಅಲ್ಲದ ಎಡವಟ್ಟರನೇನೆಂಬೆನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! || ೭೮ ||

೨೩೭೮
ಹೊನ್ನು ತನ್ನ ಬಣ್ಣದ ಲೇಸುವ ತಾನರಿಯದಂತೆ,
ಬೆಲ್ಲ ತನ್ನ ಮಧುರವ ತಾನರಿಯದಂತೆ,
ಪುಷ್ಪ ತನ್ನ ಪರಿಮಳವ ತಾನರಿಯದಂತೆ,
ವಾರಿಶಿಲೆ ಅಂಬುವಿನೊಳು ಲೀಯವಾದಂತೆ,
ಮನವು ಮಹಾಲಿಂಗದಲ್ಲಿ ಲೀಯವಾಗಿ
ಮನವಳಿದು ನೆನಹುಳಿದು
ನೆನಹು ನಿಃಪತಿಯಾಗಿ ನಾನು ನೀವಾಗಿರ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ! || ೭೯ ||

*

ಘನಲಿಂಗಿದೇವ

೨೩೭೯
ಅಗ್ನಿ ಅಗ್ನಿಯ ಕೂಡಿ ಬೆಳಗು ಮುಂಬರಿವುದಲ್ಲದೆ,
ಅಗ್ನಿ ತೃಣವು ಕೂಡಿದಲ್ಲಿ ಹೊಗೆದೋರ್ವುದಲ್ಲದೆ
ಬೆಳಗು ನಿಜವಹುದೆ ಅಯ್ಯ?
ಆ ಪರಮಾರ್ಥವ ತಿಳಿದ ಪರಮಜ್ಞಾನಿಯ ಕೂಡೆ
ಸಮ್ಯಜ್ಞಾನಿ ಅನುಭವ ಬಾಯಿದೆಗೆದೊಡೆ
ಉಭಯದ ತನು ಕರಣ ಮನಂಗಳು
ಸ್ಫಟಿಕದ ಪುತ್ಥಳಿಯಂತೆ
ನಿರ್ಮಲ ಸ್ವರೂಪವಪ್ಪವಲ್ಲದೆ
ಕಾಳಿಕೆವ[ರೆ]ವುದೆ ಅಯ್ಯ?
ಜ್ಞಾನಿಯು ಅಜ್ಞಾನಿಯ ಕೂಡೆ ಸಂಭಾಷಣೆಯ ಮಾಡಿದರೆ
ಚಿಲುಪಾಲಿನೊಳಗೆ ಹುಳಿಯು ಬೆರೆದಂತಾಯಿತಯ್ಯಾ,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ. || ೧ ||

೨೩೮೦
ಕುಂದಣಕ್ಕೆ ಒಪ್ಪುವ ಒರೆ ಬಣ್ಣದ ಮಿಶ್ರವಂ
ಚಿನ್ನವರದ ಬಲ್ಲನಲ್ಲದೆ

ಗೆಯ್ಬುಂಬ ಒಕ್ಕಲಮಗನೆಂತು ಬಲ್ಲನಯ್ಯ?
ವಸ್ತುವನೊಡಗೂಡುವ ಸಂಧಾನದ ನುಡಿಯ ಗಡಣದ ಲಿಂಗ ಬೆಳಗ
ಲಿಂಗಸಂಧಾನಿ ಬಲ್ಲನಲ್ಲದೆ
ಅರಿವು ಮರವೆಯನೊಳಕೊಂಡಿಪ್ಪ
ವೇಷಧಾರಿಗಳವರೆಂತು ಬಲ್ಲರಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ. || ೨ ||

೨೩೮೧
ಕೋಗಿಲೆ ಸ್ವರಗೈದಿತೆಂದು
ಕಾಗೆ ಅದಕ್ಕೆ ಇದಿರಾಗಿ ಕುಳಿತು
ಕರ್ರೆಂದು ಕಟಕಿಯನಾಡಿದರೆ
ಆ ಕೋಗಿಲೆಗಾದ ಕೊರತೆಯೇನಯ್ಯ?
ಸೂರ್ಯ ಪ್ರಕಾಶವನುಳ್ಳವನಲ್ಲಿ
ಕತ್ತಲೆ ಮೈಯವನೆಂದು
ಹಗಲು ಕಣ್ಣು ಕಾಣದ ಗೂಗೆ ಕೆಟ್ಟು ನುಡಿದರೆ
ಸೂರ್ಯನಿಗಾದ ಕೊರತೆಯೇನಯ್ಯ?
ಕನ್ನಡಿಗೆ ಮೂಗಿಲ್ಲವೆಂದು ಮೂಕೊರೆಯ ಹಳಿದರೆ
ಆ ಕನ್ನಡಿಗಾದ ಕೊರತೆಯೇನಯ್ಯ?
ದ್ವೈತ ಅದ್ವೈತವ ನೂಂಕಿ
ಅಂಗ - ಲಿಂಗದ ಹೊಲಬನರಿದು
ಸ್ವಯಂ ಲಿಂಗಿಯಾದ ಶರಣನ
ಅಂಗವಿಕಾರದ ಪಂಗುಳ ಮಾನವರು
ಜರಿದು ಝುಂಕಿಸಿ ನುಡಿದರೆ
ಆ ಲಿಂಗಾನುಭಾವಿಗಾದ ಕೊರತೆಯೇನಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ. || ೩ ||

೨೩೮೨
ದೇವಾ,
ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ
ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವ ಕಂಡೆ.
ಆ ಮಾನವ ಜನ್ಮಕ್ಕೆ
ಘುಣಾಕ್ಷರನ್ಯಾಯದಂತೆ ಲಿಂಗ ಬಂದುದ ಕಂಡೆ.
ಎನಗಿದು ಚೋದ್ಯವಯ್ಯ ಎನಗಿದು ವಿಪರೀತವಯ್ಯ.
ಇದಕ್ಕೆ ನುಡಿದಂತೆ ನಡೆಸು ನಡೆದಂತೆ ನುಡಿಸು.

ನುಡಿನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು.
ನಿಮ್ಮ ಶರಣರೊಪ್ಪದಲ್ಲಿಯೆ ನೀನೊಪ್ಪೆ.
ನೀನೊಪ್ಪದಲ್ಲಿಯೆ ಬಂದಿತೆನಗೆ ಭವದ ಹೆಮ್ಮಾರಿ.
ಅದಕ್ಕೆ ನಾನಂಜುವೆನಯ್ಯ ನಾನಳಕುವೆನಯ್ಯ.
ನುಡಿ - ನಡೆ ಎರಡಾಗದಂತೆ ನಡೆಸಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ. || ೪ ||

*

ಸ್ವತಂತ್ರಸಿದ್ಧಲಿಂಗೇಶ್ವರ

೨೩೮೩
ಅಂತರಂಗ ಶುದ್ಧವಿಲ್ಲದವರೊಳಗೆ
ಅತ್ತಿಯ ಹಣ್ಣಿನಂತೆ ಕ್ಷುದ್ರ ಬಿಡದು ನೋಡಯ್ಯಾ.
ಅಂತರಂಗ ಶುದ್ಧವುಳ್ಳವರೊಳಗೆ
ಬಾಳೆಯ ಹಣ್ಣಿನಂತೆ ಸುಗುಣ ತೋರುವುದು ನೋಡಯ್ಯಾ.
ಇದು ಕಾರಣ,
ಅಂತರಂಗ ಶುದ್ಧವಿಲ್ಲದವರ ಸಂಗದಲ್ಲಿ ಇರಬಾರದು ಶರಣರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೧ ||

೨೩೮೪
ಅಂಧಕನ ಮುಂದೆ ನೃತ್ಯ ಬಹುರೂಪವನಾಡಿದಡೇನು
ಕಂಡು ಪರಿಣಮಿಸಬಲ್ಲನೆ ಹೇಳಾ?
ಬಧಿರನ ಮುಂದೆ ಸಂಗೀತ ಸಾಹಿತ್ಯವನೋದಿದಡೇನು
ಕೇಳಿ ತಿಳಿದು ಪರಿಣಮಿಸಬಲ್ಲನೆ ಹೇಳಾ?
ಜ್ಞಾನಾನುಭಾವವಿಲ್ಲದವರು ಏನನೋದಿ, ಏನ ಕೇಳಿ, ಏನು?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿಯದವರ ಓದು ಕೇಳಿಕೆ
ಬಧಿರಾಂಧಕರ ಕೇಳಿಕೆ ನೋಟದಂತಾಗಿತ್ತು. || ೨ ||

೨೩೮೫
ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೆ?
ಸೂರ್ಯನ ಕತ್ತಲೆ ಬಾಧಿಸಲಾಪುದೆ ಅಯ್ಯಾ?
ಆಕಾಶವು ರಜ ಧೂಮಗಳಿಂದ ಮಲಿನವಹುದೆ ಅಯ್ಯಾ?
ನಿಮ್ಮನರಿದ ಶಿವಯೋಗಿಗೆ, ಸಂಸಾರ ಬಂಧಿಸಬಲ್ಲುದೆ? ಹೇಳಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೩ ||

೨೩೮೬
ಅನಂತಕಾಲ ಅಗಲಿದ ನಲ್ಲನ ಕೂಡಿಹೆನೆಂಬ ಸತಿಗೆ
ಕೂಡಿದ ಬಳಿಕ ಕೂಡಿಹೆನೆಂಬ ಅವಸ್ಥೆಯುಂಟೆ ಹೇಳಾ?
ಕ್ಷುಧೆಯಡಸಿದವ ಭೋಜನವ ಮಾಡಿದ ಬಳಿಕ
ಮತ್ತೆ ಭೋಜನವ ಮಾಡಿಹೆನೆಂಬ ಅವಸ್ಥೆಯುಂಟೇ ಹೇಳಾ?
ಜಳ ಹತ್ತಿದವ ಉದಕದಲ್ಲಿ ಮುಳುಗಿದ ಬಳಿಕ
ಮತ್ತೆ ಉದಕದಲ್ಲಿ ಮುಳುಗಿಹೆನೆಂಬ ಅವಸ್ಥೆಯುಂಟೆ ಹೇಳಾ?
ಶಿವನ ನೆನೆನೆನೆದು ಮನ ಶಿವನಲ್ಲಿ ಲೀಯವಾದ ಬಳಿಕ
ಮತ್ತೆ ನೆನೆದಿಹೆನೆಂಬ ಅವಸ್ಥೆಯುಂಟೇ ಹೇಳಾ?
ಅನುಪಮ ನಿಜಾನುಭಾವಸಂಧಾನ ನಿಂದ ನಿಜವು ತಾನೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು. ॥ ೪ ॥

೨೩೮೭
ಅನಲ ಸಂಗದಿಂದ ಕಾಷ್ಠ ಅನಲವಾದಂತೆ,
ಶಿವಸಂಸ್ಕಾರ ಸಂಪನ್ನನಾದ ಶಿವಭಕ್ತನು
ಶಿವನಹನಲ್ಲದೆ ಮಾನವನಾಗಲರಿಯನಯ್ಯಾ,
ಅದು ಕಾರಣ,
ಶಿವಭಕ್ತಂಗೆ ಜಾತಿಯಿಲ್ಲ ಸೂತಕವಿಲ್ಲ
ಶಿವನೆಂತಿಹನಂತೆ ಇಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜಭಕ್ತನು. ॥ ೫ ॥

೨೩೮೮
ಅನುಭಾವವ ನುಡಿವ ಅಣ್ಣಗಳಿರಾ,
ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ!
ಅನುಭಾವವೆಂಬುದು ಆತ್ಮವಿದ್ಯೆ,
ಅನುಭಾವವೆಂಬುದು ತಾನಾರೆಂಬುದ ತೋರುವುದು,
ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು.
ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರಜಾಲದ ಪಸರನಿಕ್ಕಿ
ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ
ನೀವೆತ್ತ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅನುಭಾವವೆತ್ತ? ॥ ೬ ॥

೨೩೮೯
ಆಚಾರವೆ ಭಕ್ತಂಗೆ ಅಲಂಕಾರವು
ಆಚಾರವೆ ಭಕ್ತಂಗೆ ಸರ್ವಪೂಜ್ಯವು
ಇಂತೀ ಆಚಾರವುಳ್ಳವನೆ ಭಕ್ತನು.

ಆಚಾರವುಳ್ಳವನೆ ಯುಕ್ತನು, ಆಚಾರವುಳ್ಳವನೆ ಮುಕ್ತನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೭ ||

೨೩೯೦
ಆಯುಧವೈನೂರಿದ್ದರೇನು?
ರಣರಂಗದಲ್ಲಿ ಹಗೆಯ ಗೆಲುವುದು ಒಂದೇ ಅಲಗು.
ಏನನೋದಿ ಏನ ಕೇಳಿದರೇನು, ತಾನಾರೆಂಬುದನರಿಯದನ್ನಕ್ಕ?
ತಾನಾರೆಂಬುದನರಿದ ಬಳಿಕ ನೀನಾನೆಂಬುದಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೆಯಾಗಿಹನು. || ೮ ||

೨೩೯೧
ಆಸೆಯೆಂಬ ವೇಶಿ ಆರನಾದರೂ ತನ್ನತ್ತ ಕರೆವಳು.
ಈ ಆಸೆಯೆಂಬವಳು ಆರನಾದರೆಯೂ ಘಾಸಿಮಾಡಿ
ತನುಮನವ ವ್ರಯವ ಮಾಡುವಳು.
ಈ ಆಸೆಯೆಂಬ ವೇಶ್ಯೆಗೆ ಒತ್ತೆಯ ಕೊಡದ
ನಿರಾಶಿಗಳೆಂಬುವರನಾರನೂ ಕಾಣೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೯ ||

೨೩೯೨
ಊರೊಂದೆಸೆ - ಕಾಡೊಂದೆಸೆ
ನರರೊಂದೆಸೆ - ಸುರರೊಂದೆಸೆ
ಹಗಲೊಂದೆಸೆ - ಇರುಳೊಂದೆಸೆ
ಪುಣ್ಯವೊಂದೆಸೆ - ಪಾಪವೊಂದೆಸೆ
ಜ್ಞಾನವೊಂದೆಸೆ - ಅಜ್ಞಾನವೊಂದೆಸೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ
ನಿಮ್ಮ ಶರಣರೊಂದೆಸೆ - ಲೋಕವೊಂದೆಸೆ. || ೧೦ ||

೨೩೯೩
ಏನನೋದಿ ಏನ ಕೇಳಿ ಏನ ಹೇಳಿದಡೆ ಏನು ಫಲ
ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕ?
ಚಿನ್ನದ ತೊಡಹದ ತಾಮ್ರದಂತೆ ಒಳಗೆ ಕಾಳಿಕೆ ಬಿಡದು.
ನುಣ್ಣಗೆ ಬಣ್ಣಗೆ ನುಡಿವ ಅಣ್ಣಗಳೆಲ್ಲರೂ
ಕಣ್ಣು ಕಾಣದೇ ಕಾಡಬಿದ್ದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮನರಿಯದ ಅಂಧಕರೆಲ್ಲರು. || ೧೧ ||

೨೩೯೪
ಒಡಲೆಂಬ ಗುಡಿಯೊಳಗೆ
ಒಡೆದು ಮೂಡಿದ ಲಿಂಗವಿರ್ದೆಡೆಯ
ನೋಡಲೆಂದು ಹೋದರೆ
ನೋಡುವ ನೋಟವೆಲ್ಲಾ ತಾನೆಯಾಗಿತ್ತು.
ಈ ಬೆಡಗು ಬಿನ್ನಾಣದ ಲಿಂಗವ
ತುಡುಕಿ ಹಿಡಿದುಕೊಳಬಲ್ಲಾತ
ಮೃಡನಲ್ಲದೆ ಮಾನವನಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ತಾನೇ ಬೇರಿಲ್ಲ. || ೧೨ ||

೨೩೯೫
ಕಣ್ಣು ಕಾಲು ಎರಡುಳ್ಳವ ದೂರ ಎಯ್ದುವನಲ್ಲದೆ
ಕಣ್ಣು ಕಾಲೆರಡರೊಳಗೊಂದಿಲ್ಲದವನು
ದೂರವೈಯ್ದಲರಿಯನೆಂಬಂತೆ
ಜ್ಞಾನರಹಿತವಾಗಿ ಕ್ರೀಯನೆಷ್ಟು ಮಾಡಿದಡೇನು?
ಅದು ಕಣ್ಣಿಲ್ಲದವನ ನಡೆಯಂತೆ.
ಕ್ರೀರಹಿತವಾಗಿ ಜ್ಞಾನಿಯಾದಡೇನು?
ಅದು ಕಾಲಿಲ್ಲದವನ ಇರುವಿನಂತೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ನಿಜವ ಬೆರಸುವಡೆ
ಜ್ಞಾನವೂ ಕ್ರೀಯೂ ಎರಡೂ ಬೇಕು. || ೧೩ ||

೨೩೯೬
ಕಾಡೊಳಗಣ ಹುಲುಗಿಣಿಯ ಹಿಡಿತಂದು
ಓಂ ನಮಃ ಶಿವಾಯ, ಹರಹರ ಶಿವಶಿವ
ಎಂದು ಓದಿಸಿದಡೆ ಓದದೆ?
ನಿಚ್ಚ ನಿಚ್ಚ ನರಾರಣ್ಯದೊಳಗಿದ್ದ ಮನುಷ್ಯರ ಹಿಡಿತಂದು
ಹಿರಿದು ಪರಿಯಲ್ಲಿ ಉಪದೇಶವ ಮಾಡಿ,
ಶಿವಮಂತ್ರೋಪದೇಶವ ಹೇಳಿದಡೆ
ಅದ ಮರೆದು ಕಾಳ್ನುಡಿಯ ನುಡಿವವರು
ಹುಲುಗಿಣಿಯಿಂದ ಕಷ್ಟ ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೧೪ ||

೨೩೯೭
ಕಾಷ್ಠದಲ್ಲಿ ಹುಟ್ಟಿದ ಅಗ್ನಿ, ಕಾಷ್ಠವ ದಹಿಸಿ,
ತಾನೊಡನೆ ಲೀಯವಾದಂತೆ,
ಭಾವದಲ್ಲಿ ಶಿವಾನಂದಭಾವ ಹುಟ್ಟಿ ಭಾವ ನಿಃಪತಿಯಾಯಿತ್ತು.
ಭಾವ ನಿಃಪತಿಯಾಗಲು, ಭಾವ್ಯ ಭಾವ ಭಾವಕವೆಂಬುದಿಲ್ಲದೆ
ತಮ್ಮಲ್ಲಿ ತಾವೆ ಲೀಯವಾದವು.
ಇಂತಾದ ಬಳಿಕ ಭಾವಿಸಲೇನುಂಟು ಹೇಳಾ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ,
ಭಾವಾತೀತನೆಂದು ಶ್ರುತಿ ಸಾರುತ್ತಿರಲು, ಇನ್ನು
ಭಾವಿಸಲೇನುಂಟು ಹೇಳಾ? || ೧೫ ||

೨೩೯೮
ಕುರುಡ ಕನ್ನಡಿಯ ಹಿಡಿದಡೇನು?
ತನ್ನ ಮುಖವ ತಾ ಕಾಣಲರಿಯದಂತೆ.
ಜ್ಞಾನವಿಲ್ಲದವನ ಕೈಯಲ್ಲಿ ಲಿಂಗವಿದ್ದಡೇನು?
ಆ ಲಿಂಗದಲ್ಲಿ ತನ್ನ ನಿಜವ ತಾ ಕಾಣಲರಿಯ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅರಿಯದವರು
ಲಿಂಗವ ಹಿಡಿದಡೇನು, ವ್ಯರ್ಥ ಕಾಣಿರಣ್ಣಾ. || ೧೬ ||

೨೩೯೯
ಜಗದಗಲದಲ್ಲಿ ಮುಸುಕಿದ ಕತ್ತಲೆ,
ದೀವಿಗೆಯ ಬೆಳಗಿಂಗೆ ಹರಿವುದೆ
ಸೂರ್ಯನ ಬೆಳಗಿಂಗಲ್ಲದೆ?
ಇದು ಕಾರಣ,
ಕಾಯವಂತರೆಲ್ಲ ಮಾಯಾಭ್ರಮೆಗೊಳಗಾದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮನರಿದಾತ ನಿಮ್ಮೊಳಗಾದನು. || ೧೭ ||

೨೪೦೦
ಜ್ಞಾನಿಯ ನಡೆ ನುಡಿ ಅಜ್ಞಾನಿಗೆ ಸೊಗಸದು.
ಅಜ್ಞಾನಿಯ ನಡೆ ನುಡಿ ಜ್ಞಾನಿಗೆ ಸೊಗಸದು.
ದಿವಾ ರಾತ್ರಿಗಳಂತೆ ಒಂದಕ್ಕೊಂದಾಗದು.
ಅರಿವಿನಿಂದ ಉದಯಿಸಿದ ಶರಣನು ಮರೆಯಬೇಕೆಂದು,
ಮರಹಿಂದ ಹುಟ್ಟಿದ ಮಾನವರ ಇದಿರ ಮಾಡಿದೆಯಲ್ಲಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೧೮ ||

೨೪೦೧
ತಿರುಳು ಕರಗಿದ ಬೀಜ ಮರಳಿ ಹುಟ್ಟಬಲ್ಲುದೆ ಅಯ್ಯಾ?
ತೊಟ್ಟ ಬಿಟ್ಟ ಹಣ್ಣು ಮರಳಿ ತೊಟ್ಟ ಹತ್ತುವುದೆ ಅಯ್ಯಾ?
ನೆಟ್ಟನೆ ಪ್ರಾಣಲಿಂಗದ ನಿಜವನರಿದವ ಮರಳಿ ಹುಟ್ಟಬಲ್ಲನೆ ಹೇಳಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೧೯ ॥

೨೪೦೨
ದೇಹವೆಂಬ ಹುತ್ತಿನೊಳಗೆ ನಿದ್ರೆಯೆಂಬ ಕಾಳೋರಗನೆದ್ದು
ಕಡಿಯಲು ಮೂರ್ಛಿತರಾದರಯ್ಯಾ,
ದೇವದಾನವ ಮಾನವರೊಳಗಾದೆಲ್ಲಾ ಜೀವರು.
ಆವಾಗ ಬಂದು ಕಡಿದೀತೆಂದು ಕಾಣಬಾರದು.
ದಿವಾ ರಾತ್ರಿಯೆನ್ನದೆ ಬಂದು ಕಡಿಯಲೊಡನೆ
ವಿಷಹತ್ತಿ ಸತ್ತವರಿಗೆಣೆಯೆಂಬಂತೆ
ಜೀವನ್ಮೃತರಾದರಯ್ಯಾ.
ಶಿವಜ್ಞಾನವೆಂಬ ನಿರ್ವಿಷವ ಕಾಣದೆ
ನಿದ್ರಾಸರ್ಪನ ಬಾಯಿಗೀಡಾದರು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೨೦ ॥

೨೪೦೩
ನಡೆವ ಗತಿಗಳಲ್ಲಿ ನಿಮ್ಮ ಕೂಡಿ ನಡೆವೆನಯ್ಯಾ.
ಹಿಡಿವಲ್ಲಿ ಬಿಡುವಲ್ಲಿ ನಿಮ್ಮ ಕೂಡಿ ಹಿಡಿವೆನು ಬಿಡುವೆನಯ್ಯಾ.
ನುಡಿವಲ್ಲಿ ನಿಮ್ಮ ಕೂಡಿ ನುಡಿವೆನು.
ಒಡಲಿಂದ್ರಿಯಂಗಳೆಲ್ಲಾ ನಿಮ್ಮವಾಗಿ ಎನಗೊಂದೊಡೆತನವಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಾನು ನಿಮ್ಮೊಳಗಾಗಿ. ॥ ೨೧ ॥

೨೪೦೪
ನನ್ನಿಂದರಿದೆನೆಂಬೆನೆ ನನ್ನಿಂದರಿದವನಲ್ಲ.
ನಿನ್ನಿಂದರಿದೆನೆಂಬೆನೆ ನಿನ್ನಿಂದರಿದವನಲ್ಲ.
ಅದೇನು ಕಾರಣವೆಂದಡೆ,
ಕಣ್ಣ ಬೆಳಗು ಸೂರ್ಯನ ಬೆಳಗು ಕೂಡಿ ಕಾಂಬಂತೆ
ನನ್ನ ನಿನ್ನರಿವಿನ ಸಂಬಂಧದ ಬೆಂಬಳಿಯಲ್ಲಿ ಅರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೨೨ ॥

೨೪೦೫
ನಿಚ್ಚ ಸಾವಿರ ನೋಂಪಿಯ ನೋಂತು,
ಒಂದು ದಿನ ಹಾದರವನಾಡಿದರೆ

ಆ ನೋಂಪಿಯು ತನಗೆ ಫಲಿಸುವುದೇ ಅಯ್ಯಾ?
ಹಲವು ಕಾಲ ಗುರು ಲಿಂಗ ಜಂಗಮವನರ್ಚಿಸಿ ಆರಾಧಿಸುತ್ತ
ಒಮ್ಮೆಯಾದರೂ ದೂಷಣೆಯ ಮಾಡಿದಡೆ
ಆ ಪೂಜಾಫಲ ತಮಗೆ ಸಿದ್ಧಿಸುವುದೆ? ಸಿದ್ಧಿಸದಾಗಿ.
ಅನೇಕ ಆಯಾಸದಲ್ಲಿ ಗಳಿಸಿದ ಧನವ
ನಿಮಿಷದಲ್ಲಿ ಅರಸು ದಂಡವ ಕೊಂಡಂತಾಯಿತ್ತು ಇವರ ಭಕ್ತಿ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಒಲವಿಲ್ಲದ ಕಾರಣ. || ೨೩ ||

೨೪೦೬
ಪಕ್ವಫಲದಲ್ಲಿಹ ಸ್ವಾದುವಿನಂತೆ
ತುಪ್ಪದಲ್ಲಿಹ ಕಂಪಿನಂತೆ
ಚಿನ್ನದಲ್ಲಿಹ ಬಣ್ಣದಂತೆ
ಅಲ್ಲಿಯೆ ಹುಟ್ಟಿ ಅಲ್ಲಿಯೆ ತೋರುವಂತೆ
ಎನ್ನಂತರಂಗದಲ್ಲಿರ್ದು ತೋರುತ್ತಿಹ ನಿಮ್ಮ ನಿಜವನು
ನಿಮ್ಮಿಂದರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೨೪ ||

೨೪೦೭
ಬಡಕಲ ಪಶುವಿಂಗೆ ಬಲುದಂಡಿಯ ಕಟ್ಟಿದರೆ
ಎಳೆದೆಳೆದು ಸಾವಂತೆ
ಸಾವುತ್ತಿದೆ ನೋಡಾ.
ಅಜ್ಞಾನ ಜಡಜೀವರು ದೇಹವೆಂಬ ದಂಡಿಯ ಕಟ್ಟಿಸಿಕೊಂಡು
ಬಿಡಲುಪಾಯವ ಕಾಣದೆ ಹೊತ್ತು ತೊಳಲುತ್ತಿದ್ದರಲ್ಲಾ,
ಜನ್ಮಜನ್ಮಾಂತರದಲ್ಲಿ.
ಶಿವಭಕ್ತಿಯೆಂಬ ಸಜ್ಜನಿಕೆ ಬಂದರೀ ದೇಹವೆಂಬ
ದಂಡಿಯ ಬಿಡಿಸುವನಯ್ಯಾ
ಕರುಣಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. || ೨೫ ||

೨೪೦೮
ಬಳ್ಳಿಯಲಡಗಿ ಕೋಟರದಲ್ಲಿ ತೋರುವ
ತಾವರೆಯ ಬೀಜದಂತೆ
ನೀನು ಎನ್ನಂತರಂಗದಲ್ಲಡಗಿರ್ದ ಕಾರಣ
ಅಲ್ಲೆ ತೋರುವೆ ಎಲೆ ಅಯ್ಯಾ.
ರನ್ನದ ಕಾಂತಿಯಂತೆ ಎನ್ನೊಳಗಡಗಿರ್ದು
ಮೈದೋರದ ಭೇದವ

ನಿಮ್ಮಲ್ಲಿ ಕಂಡೆನು ಕಾಣಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೨೬ ॥

೨೪೦೯
ಬಿಸಜತಂತುವಿನ ಶೃಂಖಲದಿಂದ
ಮದಗಜ ಬಂಧವಡೆಯಬಲ್ಲುದೆ?
ತರಗೆಲೆ ಮುಸುಕಿದಡೆ ದಾವಾನಲ ಕೆಡಬಲ್ಲುದೆ?
ಮಂಜಿನ ಪೌಜು ಸೂರ್ಯನ ಮುತ್ತಬಲ್ಲುದೆ?
ನಿಮ್ಮನರಿದಾತಂಗೆ, ಪುಣ್ಯಪಾಪ ಕರ್ಮ ಲೇಪಿಸಬಲ್ಲವೆ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೨೭ ॥

೨೪೧೦
ಮರ ಮೊದಲಿಗೆ ಬೀಳಲು
ಕೊನೆ ಎಲೆ ಹೂವು ಕಾಯಿಗಳನಿರಿಸಿ ತಾ ಬೀಳದು ನೋಡಾ.
ಯೋಗಿಯ ಮನವಳಿಯಲು
ಮನವಿಡಿದಿಹ ಇಂದ್ರಿಯ ವಿಷಯ ಪ್ರಾಣಂಗಳು
ಮನದೊಡನೆ ಅಳಿವವಲ್ಲದೆ ಉಳಿಯವು ನೋಡಾ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡುವರೆ
ಮನವಳಿದು ಕೂಡುವುದು ನೋಡಾ. ॥ ೨೮ ॥

೨೪೧೧
ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ
ನೂರು ತಾಕುಗೊಳುತ್ತಿರ್ಪವಂಗೆ ಮಹದ ಮಾತೇಕೆ?
ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲುದ್ದಕ್ಕೆ
ನೆಗೆದೆಹೆನೆಂಬವನ ಹಾಗೆ,
ಶಿವನ ಜೋಕೆಯನರಿಯದೆ ಮಾತನಾಡುವ ಮಾತೆಲ್ಲವು
ಮಾತಿನ ಮಾಲೆಯಲ್ಲದೆ, ಅಲ್ಲಿ ನಿಜವಿಲ್ಲ.
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ಅವರೆಲ್ಲ ಭೂಭಾರಕರಾದರು. ॥ ೨೯ ॥

೨೪೧೨
ಶಿರದೊಳಗೆ ಶಿರ, ಕರದೊಳಗೆ ಕರ,
ಕರಣದೊಳಗೆ ಕರಣ, ಕಂಗಳೊಳಗೆ ಕಂಗಳು,
ಕರ್ಣದೊಳಗೆ ಕರ್ಣ, ಘ್ರಾಣದೊಳಗೆ ಘ್ರಾಣ,
ಜಿಹ್ವೆಯೊಳಗೆ ಜಿಹ್ವೆ, ದೇಹದೊಳಗೆ ದೇಹ,
ಪಾದದೊಳಗೆ ಪಾದ ಕೂಡಿ ಶರಣರೊಡನಾಡುವ,

ನಿಮ್ಮ ಬೆಡಗಿನ ಲೀಲೆಯನಾರು ಬಲ್ಲರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣರಲ್ಲದೆ? || ೩೦ ||

೨೪೧೩
ಶ್ರೀಗುರು ಕರುಣಿಸಿ ಅಂಗದ ಮೇಲೆ
ಲಿಂಗವ ಧರಿಸಿದ ಕಾರಣ,
ಸರ್ವಾಂಗವೂ ಲಿಂಗವಾಯಿತ್ತು.
ಅದೆಂತೆಂದಡೆ:
ಅಗ್ನಿಯಿಂದ ತಪ್ತವಾದ ಲೋಹದ ಪುತ್ಥಳಿಯಂತೆ
ಒಳಗೂ ಹೊರಗೂ ಏಕವಾಗಿ ಲಿಂಗವೆ ಬೆಳಗುತಿರ್ದ ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣ ಸರ್ವಾಂಗಲಿಂಗಿಯಾದನು. || ೩೧ ||

೨೪೧೪
ಸಂಸಾರವೆಂಬ ಮಹಾಘೋರಾರಣ್ಯದಲ್ಲಿ
ಹೊಲಬುಗೆಟ್ಟು ನೆಲೆಯ ಕಾಣದೆ ಹೋದರು.
ನಿಜದ ಹೊಲಬುದಪ್ಪಿ ಬಳಲುತ್ತಿದ್ದಾರೆ ನೋಡಯ್ಯಾ.
ಇರುಳು ಹಗಲೆನ್ನದೆ ಸಂಸಾರದಲ್ಲಿ ಸಾವುತ್ತಿದ್ದಾರೆ ನೋಡಯ್ಯಾ.
ಇಂತಪ್ಪ ಸಂಸಾರಾರಣ್ಯದಲ್ಲಿ ಹೊಲಬುಗೆಟ್ಟು
ನೆಲೆಯ ಕಾಣದೆ ಹೋದರು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮನರಿಯದೆ. || ೩೨ ||

೨೪೧೫
ಸಂಸಾರವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಂಗಳ ಶಾಖೆಗಳು,
ಪಂಚಕ್ಲೇಶಂಗಳೆ ಫಲಂಗಳು, ಪಂಚವಿಷಯಂಗಳೆ ರಸವು,
ಈ ಫಲವ ಬಯಸಿ ಮೆದ್ದವರೆಲ್ಲಾ ಮರಣಕ್ಕೊಳಗಾದರು.
ಅದನರಿದು ಆ ಫಲವ ನಾನು ಮುಟ್ಟೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. || ೩೩ ||

೨೪೧೬
ಸ್ಫಟಿಕದ ಘಟದಂತೆ ಒಳಹೊರಗೆ ಒಂದೆ ಪರಿ ನೋಡಾ.
ಶರಣಂಗೆ ಅಂತರಂಗ ಬಹಿರಂಗವೆಂದೆನಲುಂಟೆ?
ಕಾದ ಕಬ್ಬುನದ ಘಟ್ಟಿಯಂತೆ ಶರಣನ ಸರ್ವಾಂಗವೆಲ್ಲಾ
ಲಿಂಗವಾವರಿಸಿ ಲಿಂಗವಾಯಿತ್ತಾಗಿ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,

ನಿಮ್ಮ ಶರಣ ಲಿಂಗಸಂಗಿಯೇ,
ಅಂಗಸಂಗಿಯೆಂದು ತಿಳಿಯಬಾರದು. || ೩೪ ||

೨೪೧೭
ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು
ಹಾವನಾಡಿಸುವಂತೆ,
ಆವ ಮಾತನಾಡಿದಡೂ ತನ್ನ ಕಾಯ್ದು ಆಡಬೇಕು.
ಅದೆಂತೆದಡೆ,
ತನ್ನ ವಚನವೆ ತನಗೆ ಹಗೆಯಹುದಾಗಿ,
ಅನ್ನಿಗರಿಂದ ಬಂದಿತ್ತೆನ್ನಬೇಡ.
ಅಳಿವುದು ಉಳಿವುದು ತನ್ನ ವಚನದಲ್ಲಿಯೆ ಅದೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ಹಗೆಯು ಕೆಳೆಯು
ತನ್ನ ವಚನವೆ ಬೇರಿಲ್ಲ. || ೩೫ ||

೨೪೧೮
ಹುರಿದ ಬೀಜದಂತೆ,
ಬೆಂದ ನುಲಿಯಂತೆ
ಹಿಂದಣಂಗ ಉಂಟೆ ಹೇಳಾ?
ಸಮ್ಯಗ್‌ಜ್ಞಾನಾಗ್ನಿಯಲ್ಲಿ ದಗ್ಧವಾದ ಜನ್ಮಬೀಜವನುಳ್ಳ ಶರಣನು
ಶಿವಕಾಯವನಾಶ್ರಯಿಸಿ ಶಿವ ತಾನಾಗಿಹನಲ್ಲದೆ
ತನಗೆ ಬೇರೆ ಕಾಯವಿಲ್ಲ, ತಾನೆಂಬುದು ಮುನ್ನವೇ ಇಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಲಿಂಗವೇ ಅಂಗವಾದಂಗೆ. || ೩೬ ||

*

ದೇಶಿಕೇಂದ್ರ ಸಂಗನಬಸವಯ್ಯ

೨೪೧೯
ಆಡಿ ದಣಿವರಿಯವಯ್ಯಾ ಎನ್ನ ಕಾಲುಗಳು,
ಮಾಡಿ ದಣಿವರಿಯವಯ್ಯಾ ಎನ್ನ ಕೈಗಳು,
ನೋಡಿ ದಣಿವರಿಯವಯ್ಯಾ ಎನ್ನ ಕಂಗಳು,
ಹಾಡಿ ದಣಿವರಿಯದಯ್ಯಾ ಎನ್ನ ಜಿಹ್ವೆಯು,
ಕೇಳಿ ದಣಿವರಿಯವಯ್ಯಾ ಎನ್ನ ಶ್ರೋತ್ರ,
ಬೇಡಿ ದಣಿವರಿಯದಯ್ಯಾ ಗುರು ನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರೊಲವ ಎನ್ನ ಭಾವ. || ೧ ||

೨೪೨೦
ಆನೆಯ ವೇಷವ ತೊಟ್ಟು, ಶ್ವಾನನ ಗತಿಯಲ್ಲಿ ಗಮನಿಸುವ
ಗಾವಿಲಮಾನವರಿಗೆ ಅವಿರಳ ಭಕ್ತಿ ಅಳವಡುವುದೆ?
ನಡೆಯೊಂದು ಪರಿ ನುಡಿಯೊಂದು ಪರಿ.
ಹಿರಿಯರಡಿಗೆ ಶರಣೆಂದು ನಡೆಯದ
ಪರಯೋನಿಮುಖ ಜನಿತರಾದ ಪ್ರಾಣಿಗಳೆತ್ತ ಬಲ್ಲರಯ್ಯಾ
ಅನಾದಿಯ ಸ್ಥಲಗತಿಯ ಗುರು ನಿರಂಜನ ಚನ್ನಬಸವಲಿಂಗಾ. || ೨ ||

೨೪೨೧
ಕಂಡೆನೆಂಬುದು ಸಟೆ, ಕಾಣದಿರುವದು ದಿಟ.
ಕಾಣಬಲ್ಲವರು ಮುಂದೆ ಕಾಂಬುದೆ ಸತ್ಯ.
ಕಾಣಬಾರದವರು ಮುಂದೆ ಕಾಣದಿರುವುದೇ ಸತ್ಯ.
ಗುರು ನಿರಂಜನ ಚನ್ನಬಸವಲಿಂಗದಲ್ಲಿ
ದ್ವೈತವೆನಲಿಲ್ಲ, ಅದ್ವೈತವೆನಲಿಲ್ಲ ಶರಣ. || ೩ ||

೨೪೨೨
ಕಲ್ಲೊಳಗಣ ಬೆಂಕಿ ಕಾರ್ಯವನುಳಿದು ಕಾಣದು,
ಕಾಷ್ಠದೊಳಗಿನ ಬೆಂಕಿ [ಕಾರ್ಯವನುಳಿದು] ಸೋಂಕ[ಲ]ರಿಯದು,
ಬೀಜದೊಳಗಣ ಕುರುಹು ಜಲ ಮೃತ್ತಿಕೆಯನುಳಿದು ತೋರದು.
ಅದು ಕಾರಣ, ಶರಣನೊಳಗಣ ನುಡಿ
ತನ್ನ ಅನುನುಡಿಗಳನುಳಿದು ತೋರದು,
ಗುರು ನಿರಂಜನ ಚನ್ನಬಸವಲಿಂಗದಲ್ಲಿ ಶಬ್ದ ಸೂತಕಿಯಲ್ಲದ ಕಾರಣ. || ೪ ||

೨೪೨೩
ಕಾಯ ಲಿಂಗವ ಮಾಡಿ ಕಂಡರೆ ದಿಟವೆಂಬೆ,
ಮನ ಲಿಂಗವ ಮಾಡಿ ಕಂಡರೆ ದಿಟವೆಂಬೆ.
ಭಾವ ಲಿಂಗವ ಮಾಡಿ ಕಂಡರೆ ದಿಟವೆಂಬೆ.
ಗುರು ನಿರಂಜನ ಚನ್ನಬಸವಲಿಂಗವಾಗಿ
ಅರಿದಿರ್ದಡೆ ದಿಟವೆಂಬೆ,
ಲಿಂಗೈಕ್ಯ ಶರಣಂಗೆ. || ೫ ||

೨೪೨೪
ಕಾಲಿಲ್ಲದ ನಡೆ,
ಕೈಯಿಲ್ಲದ ಮುಟ್ಟು,
ಕಣ್ಣಿಲ್ಲದ ನೋಟ,

ಕರ್ಣವಿಲ್ಲದ ಕೇಳುವಿಕೆ,
ನಾಸಿಕವಿಲ್ಲದ ವಾಸನೆ,
ನಾಲಗೆಯಿಲ್ಲದ ನುಡಿ,
ತಾನಿಲ್ಲದ ಸುಖ,
ಗುರು ನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣ ಲಿಂಗೈಕ್ಯವು. || ೬ ||

೨೪೨೫
ಕುಸುಮವ ವಾಸಿಸಿ ಕಂಡೂ ಕಾಣದಂತೆ,
ರುಚಿಯನರಿದು ಕಂಡೂ ಕಾಣದಂತೆ,
ರೂಪವನರಿದು ಕಂಡೂ ಕಾಣದಂತೆ,
ಸ್ಪರ್ಶವನರಿದು ಕಂಡೂ ಕಾಣದಂತೆ.
[ಶಬ್ದವ ಕೇಳಿ ಕಂಡೂ ಕಾಣದಂತೆ]
ಇದು ಕಾರಣ, ಗುರು ನಿರಂಜನ ಚನ್ನಬಸವಲಿಂಗಾ,
ನಿಮ್ಮ ಶರಣ ನಿಮ್ಮನರಿದು
ಕಂಡೂ ಕಾಣದಂತೆ ನಿಮ್ಮೊಳಗೆ ನೋಡಾ. || ೭ ||

೨೪೨೬
ಗಂಧವನಡಗಿಸಿಕೊಂಡ ಘ್ರಾಣದಂತಾಯಿತ್ತೆನ್ನ ಭಕ್ತಿ.
ರಸವನಡಗಿಸಿಕೊಂಡ ನಾಲಗೆಯಂತಾಯಿತ್ತೆನ್ನ ಭಕ್ತಿ.
ರೂಪವನಡಗಿಸಿಕೊಂಡ ನೇತ್ರದಂತಾಯಿತ್ತೆನ್ನ ಭಕ್ತಿ.
ಸ್ಪರ್ಶನವನಡಗಿಸಿಕೊಂಡ ತ್ವಕ್ಕಿನಂತಾಯಿತ್ತೆನ್ನ ಭಕ್ತಿ.
ಶಬ್ದವನಡಗಿಸಿಕೊಂಡ ಕರ್ಣದಂತಾಯಿತ್ತೆನ್ನ ಭಕ್ತಿ.
ಮತ್ತೆಲ್ಲವನಡಗಿಸಿಕೊಂಡ
ಚೆನ್ನವೃಷಭೇಂದ್ರಲಿಂಗವು ಭಕ್ತಿಭಾವವೆಲ್ಲವು ತಾನಾಯಿತ್ತು. || ೮ ||

೨೪೨೭
ಚಂದ್ರಮೌಳಿಯೆನಿಸಿಕೊಂಡು
ಕಾಮನನುರುಹಿದನೆಂದರೆ ನಗೆ ಬಂದಿತ್ತೆನಗೆ.
ಮಾಯಾಕೋಲಾಹಲನೆನಿಸಿಕೊಂಡು
ಮುಡಿಯಲ್ಲಿ ಹೆಣ್ಣ ತಳೆದನೆಂದರೆ ನಗೆ ಬಂದಿತ್ತೆನಗೆ.
ನಿಃಕಲಗುರು ನಿರಂಜನ ಚೆನ್ನಬಸವಲಿಂಗನೆನಿಸಿಕೊಂಡು
ಎನಗೆ ಪತಿಯಾಗಿ ಭೋಗಿಸುವುದ ಕಂಡು ನಗೆ ಬಂದಿತ್ತು ಎನ್ನೊಳಗೆ. || ೯ ||

೨೪೨೮
ಬಚ್ಚಲದ ತಂಪಿನಲ್ಲಿ ಬಿದ್ದು ಸುಖಿಸುವ ಸೂಕರ
ಸುಗಂಧಪಂಕದ ಸುಸೌಖ್ಯವ ಸುಖಿಸಲೇನು ಬಲ್ಲದು ಹೇಳಾ?
ಮಲತ್ರಯದ ಗೊಜ್ಜಿನ ತಂಪುಗೊಂಡ ಮಾನವ
ಲಿಂಗತ್ರಯವೆರೆದ ಸುಖಾನುಭಾವದ್ವಾಸನೆಯೆಂಬ ಪರಮಶಾಂತ
ಪರಿಣಾಮವನವನೆತ್ತ ಬಲ್ಲ ಹೇಳಾ?
ಅರಿದವರರಿಯಬಾರದು,
ಗುರು ನಿರಂಜನ ಚನ್ನಬಸವಲಿಂಗಾ ನಿಮ್ಮನು. || ೧೦ ||

೨೪೨೯
ಬಡಿದೆಬ್ಬಿಸಿ ಹಾಲನೆರೆದರೆ
ಸವಿದು ಪರಿಣಾಮಿಸುವುದೇ ಕರ ಲೇಸಯ್ಯಾ;
ಕ್ರೋಧ ಹೊಂದಿ ಜರಿದರೆ ದುಃಖದಾಗರವಯ್ಯಾ.
ಪರಮವೈರಾಗ್ಯ ಜಂಗಮವೆನ್ನ ಜರಿದು
ಅವಿರಳ ಬೋಧಾಮೃತವ ಎನ್ನ ಮಸ್ತಕದ ಮೇಲೆ ಸೂಸಿದರೆ
ಅತ್ಯಂತ ಸುಯಿದಾನಿಯಾಗಿರ್ದೆನಯ್ಯಾ,
ಗುರು ನಿರಂಜನ ಚನ್ನಬಸವಲಿಂಗಾ. || ೧೧ ||

೨೪೩೦
ಮಡಿಕೆ ಮಣ್ಣಾಗಲರಿಯದು,
ವಹ್ನಿ ಕಾಷ್ಠವಾಗಲರಿಯದು,
ಮುತ್ತು ನೀರಾಗಲರಿಯದು,
ಸತ್ಯಗುರುವಿನಿಂದುಪದೇಶವ ಪಡೆದ
ನಿತ್ಯಶರಣನ ಜಿಹ್ವೆಪ್ರಸಾದ
ಮಂತ್ರವಾಗಿರ್ದು ಉಚ್ಛಿಷ್ಟವಾಗಲರಿಯದು
ನಿರಂಜನ ಚನ್ನಬಸವಲಿಂಗಾ. || ೧೨ ||

೨೪೩೧
ಶ್ವಾನ ಮುಟ್ಟಿದ ಪಾಕ ನೈವೇದ್ಯಕ್ಕೆ ಬಾರದು,
ಬಚ್ಚಲಕೆ ಬಿದ್ದುದಕ ಬಳಕೆಗೆ ಬಾರದು,
ಮೃತದೇಹ ಕ್ರೀಯಕ್ಕೆ ಬಾರದು,
ಪರಮಜ್ಞಾನೋಪದೇಶವಾದವರೆಂದು
ಬಾಯಿಗೆ ಬಂದಂತೆ ತಿಂದು ದುರ್ವಾಕ್ಯ ಮುಂದುಗೊಂಡು ನಡೆದು
ದುರ್ಗತಿಯನುಂಬ ದುರಾಚಾರಿಗಳು
ಶ್ರೀ ಮಹಾಘನ ಪಂಚಾಕ್ಷರವೆಂಬ ಸತ್ಕ್ರಿಯೆಗೆ ಸಲ್ಲರು.
ಗುರು ನಿರಂಜನ ಚನ್ನಬಸವಲಿಂಗದಲ್ಲಿ ಅನಾದಿ ಅಂಶಿಕರಲ್ಲದವರಿಗೆ. || ೧೩ ||

೨೪೩೨
ಸಿಂಹನ ಹಾಲು ಆನೆಯ ಮರಿ ಉಣಬಲ್ಲುದೆ?
ಹುಲಿಯ ಹಾಲು ಹುಲ್ಲೆಯ ಮರಿ ಉಣಬಲ್ಲುದೆ?
ಗರುಡನಿಂದ ಗುಟುಕ ಹಂದಿಯ ಮರಿ ಕೊಳಬಲ್ಲುದೆ?
ತಮ್ಮ ಮರಿಯಲ್ಲದೆ.
ಗುರು ನಿರಂಜನ ಚನ್ನಬಸವಲಿಂಗಾ
ನಿಮ್ಮ ಘನಗಂಭೀರ ಗುರುಚರಲಿಂಗದ ದಯಾರಸವನುಣಬಲ್ಲರೆ
ಮಲಭುಂಜಕರು? ನಿಮ್ಮವರಲ್ಲದೆ. ॥ ೧೪ ॥

೨೪೩೩
ಹಾಲಿನೊಳಗಿರ್ದ ತುಪ್ಪದಂತೆ,
ಎಳೆತರುವಿನೊಳಗಿರ್ದ ಫಲದಂತೆ,
ಮದುವಣಿಗರೊಳಗಿರ್ದ ಮಗನಂತೆ,
ತೋರದಿರ್ದನು ನಿರಂಜನ ಚನ್ನಬಸವಲಿಂಗ. ॥ ೧೫ ॥

೨೪೩೪
ಹೆಜ್ಜೆ ತಪ್ಪಿ ನಡೆವಂಗೆ ಇಹಪರದ ಸುಖವಿಲ್ಲ,
ಮಾತು ತಪ್ಪಿ ನುಡಿವಂಗೆ ಮುಂದೆ ನಿಲವಿಲ್ಲ,
ತಾ ಕೆಟ್ಟು ತಾನಾದಲ್ಲಿ ಮತ್ತೆ
ಗುರು ನಿರಂಜನ ಚನ್ನಬಸವಲಿಂಗವಲ್ಲದೆ ಶರಣನದ್ವೈತ. ॥ ೧೬ ॥

೨೪೩೫
ಹೊನ್ನಿರ್ದು ಪರಧನಕಿಚ್ಛೆಯ ಮಾಡಿಸುವುದು.
ಹೆಣ್ಣಿರ್ದು ಪರಸ್ತ್ರೀಯರ ಇಚ್ಛೆಯ ಮಾಡಿಸುವುದು.
ಮಣ್ಣಿರ್ದು ಪರಭೂಮಿಗೆ ಇಚ್ಛೆಯ ಮಾಡಿಸುವುದು.
ಸುರನರಾದಿ ಸಕಲರಲಿ ಇವುಗಳಿಚ್ಛೆಯ ಕಳೆವ
ಧೀರರನಾರನು ಕಾಣೆನಯ್ಯಾ, ನಿರಂಜನ ಚನ್ನಬಸವಲಿಂಗಾ. ॥ ೧೭ ॥

*

ನಿರಾಲಂಬಪ್ರಭುದೇವ

೨೪೩೬
ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ ಇಷ್ಟಲಿಂಗವ
ಕರ ಮನ ಭಾವದೊಳಗಿಟ್ಟು ಪೂಜೆಮಾಡಲರಿಯದೆ,
ಭ್ರಷ್ಟ ವಿಪ್ರನ ಮಾತು ಕೇಳಿ ನಷ್ಟಕ್ಕೊಳಗಾಗುವ,
ಕಂಚು ತಾಮ್ರ ಮೊದಲಾದ ಅನಂತದೇವರ ಭಜನೆಯ ಮಾಡುವ,

ಮಡ್ಡ ಜಡಮಾದಿಗರ ಎನಗೊಮ್ಮೆ ತೋರದಿರಯ್ಯ,
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧ ॥

*

ಪರಂಜ್ಯೋತಿ

೨೪೩೭

ಕಾಯವಿಡಿದು ಮಾಯೆ ಬಿಡಬೇಕೆಂಬ ಹೆಡ್ಡರಿಗೆ
ಮಾಯ ಬಿಡುವುದು ಹೇಂಗಯ್ಯ?
ದೇಹವಿಡಿದು ನೋಡಿ ಕಂಡು
ಆ ಅಮೃತವುಂಡೆನೆಂದು ನುಡಿವರು.
ಆ ಅಮೃತವುಂಡ ಬಳಿಕ ಹಸಿವುಂಟೆ? ಹೇಳಾ.
ಪ್ರಳಯವಿದ್ಯೆ, ವಾತ ಪಿತ್ಥ ಶ್ಲೇಷ್ಮಂಗಳ ಕುಡಿದು
ಆ ಅಮೃತವ ಉಂಡೆನೆಂದು ನುಡಿವವರಿಗೆ
ಎಂದೆಂದಿಗೂ ದೊರಕದು ಕಾಣಾ.
ಇಂಥ ಭ್ರಾಂತ ಭ್ರಮಿತರು ಕೆಟ್ಟ ಕೇಡಿಂಗೆ
ಕಡೆಯಿಲ್ಲ ಮೊದಲಿಲ್ಲ.
ಚಿತ್ತೇ ತಾನಾದ ಮಹಾತ್ಮಂಗೆ
ಲಯವಿಲ್ಲ ಭಯವಿಲ್ಲ ಅನುವಿಲ್ಲ.
ದೇಹದಿ ನೋಡುವ ಕಪಿಚೇಷ್ಟೆಗಳು ಎಂದೆಂದಿಗೂ ಇಲ್ಲ.
ಮಹತೋತ್ತಮನಾದ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. ॥ ೧ ॥

*

ಬಸವಲಿಂಗದೇವ

೨೪೩೮

ಅಯ್ಯ, ಮಣ್ಣೆಂಬ ಆಸೆಯಲ್ಲಿ ಮೋಹಿಸಿತಯ್ಯಾ,
ಎನ್ನ ಜೀವಾತ್ಮನು.
ಹೆಣ್ಣೆಂಬ ಆಸೆಯಲ್ಲಿ ಕರಗಿ ಕೊರಗಿತಯ್ಯ,
ಎನ್ನ ಅಂತರಾತ್ಮನು.
ಹೊನ್ನೆಂಬ ಆಸೆಯ ಪಾಶಮಲದಲ್ಲಿ ಕಂದಿ ಕುಂದಿತಯ್ಯಾ,
ಎನ್ನ ಪರಮಾತ್ಮನು.
ಧನಧಾನ್ಯವೆಂಬ ಆಸೆಯಿಂದ ಪುಡಿಪುಡಿಯಾಯಿತಯ್ಯಾ,

ಎನ್ನ ನಿರ್ಮಲಾತ್ಮನು.
ತಂದೆ ತಾಯಿ ಬಂಧು ಬಳಗವೆಂಬ
ಆಸೆಯ ಕೊಳದಲ್ಲಿ ಹೊಡೆದಾಡಿ ಸತ್ತಿತಯ್ಯಾ,
ಎನ್ನ ಜ್ಞಾನಾತ್ಮನು.
ಅಣ್ಣ ತಮ್ಮ ಅಕ್ಕ ತಂಗಿ ಅತ್ತಿಗೆ ನಾದಿನಿಯೆಂಬ
ಆಸೆಯ ಸಂಕೋಲೆಯಲ್ಲಿ ಸಿಕ್ಕಿತಯ್ಯಾ,
ಎನ್ನ ಭೂತಾತ್ಮನು.
ಇಂತೀ ಜಡಾತ್ಮರ ಸಂಗದಿಂದ ನಿಜಗೆಟ್ಟೆನಯ್ಯಾ!
ಗುರುವೆ, ಇನ್ನೆನಗೆ ಗತಿಯಾವುದೊ?
ಶ್ರೀ ಗುರುಲಿಂಗಜಂಗಮವೆ,
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರಾ. ॥ ೧ ॥

೨೪೩೯
ಅಯ್ಯಾ, ಎನ್ನೊಳಗೆ ನೀವು ಹುಡುಕಿದಡೆ
ಎಳ್ಳಷ್ಟು ಸುಗುಣವಿಲ್ಲವಯ್ಯಾ.
ಎನ್ನೊಳಗೆ ನೀವು ವಿಚಾರಿಸಿದಡೆ
ಸಪ್ತಸಮುದ್ರ ಸಪ್ತದ್ವೀಪದಷ್ಟು ಅಪರಾಧವುಂಟಯ್ಯಾ.
ತಂದೆ, ಎನ್ನ ಅಪರಾಧವ ನೋಡದೆ
ನಿಮ್ಮ ಕರುಣದೃಕ್ಕಿನಿಂದ ಸಲಹಯ್ಯಾ.
ಪರಮಾರಾಧ್ಯ, ಪರಾತ್ಪರಮೂರ್ತಿ
ಶ್ರೀ ಗುರುಲಿಂಗ ಜಂಗಮವೇ,
ನೀವು ಈರೇಳು ಲೋಕಕ್ಕೆ
ಅಪರಾಧ ಕ್ಷಮಿತರೆಂಬ ಬಿರುದುಂಟು ನೋಡಾ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರಾ ॥ ೨ ॥

*

ಬಾಲಸಂಗಯ್ಯ

೨೪೪೦
ಆ ವ್ಯೋಮಾತೀತವೆಂಬ ಮಹಾಘನದಲ್ಲಿ
ಲೀಯವಾದ ಶರಣನ ನಿಲವದೆಂತೆಂದಡೆ :
ರವಿಯೊಳಗಣ ಬಿಂಬದಂತಿದ್ದುದು,

ದರ್ಪಣದೊಳಗಣ ಪ್ರತಿಬಿಂಬದಂತಿದ್ದುದು,
ಪುಷ್ಪದೊಳಗಣ ಪರಿಮಳದಂತಿದ್ದುದು,
ಜ್ಯೋತಿಯೊಳಗಣ ಕರ್ಪೂರದಂತಿದ್ದುದು ನೋಡಾ
ಮಹಾಘನದಲ್ಲಿ ಲೀಯವಾದ ಶರಣನ ನಿಲವು
ಅಪ್ರಮಾಣ ಕೂಡಲಸಂಗಮದೇವಾ. || ೧ ||

೨೪೪೧
ಈ ವಚನಾನುಭಾವದಲುಳ್ಳರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯುಂಟು ನೋಡಾ.
ಈ ವಚನಾನುಭಾವದಲ್ಲಿಲ್ಲದರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಲ್ಲಿಯೂ ಇಲ್ಲ ನೋಡಾ.
ಈ ವಚನಾನುಭಾವದ ಅರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಿಗೂ ನಿಲುಕದು ನೋಡಾ.
ಈ ವಚನಾನುಭಾವದ ಅರ್ಥವು
ಸಕಲ ವೇದಾಗಮ ಶಾಸ್ತ್ರ ಪುರಾಣಾತೀತವು ನೋಡಾ
ಅಪ್ರಮಾಣ ಕೂಡಲಸಂಗಮದೇವಾ. || ೨ ||

೨೪೪೨
ಉಪ್ಪು ಉದಕವ ಬೆರಸಿದಂತೆ,
ವಾರಿಕಲ್ಲು ವಾರಿಯ ಬೆರಸಿದಂತೆ,
ಕರ್ಪೂರ ಅಗ್ನಿಯ ಬೆರಸಿದಂತೆ,
ಮನ ಲಿಂಗದಲ್ಲಿ ಲೀಯವಾಗಿಹುದೆ ಭಾವಲಿಂಗದ ಪೂಜೆ.
ಇದಕ್ಕೆ ಈಶ್ವರೋವಾಚ:
ಮನೋಲಯಂ ನಿರಂಜನ್ಯಂ ಭಾವಲಿಂಗಸ್ಯ ಪೂಜನಮ್।
ಯತ್ತೇ ಲಿಂಗಾರ್ಚನಂ ಸ್ಯಾದ್ವಿಶೇಷಂ ಶ್ರುಣು ಪಾರ್ವತಿ॥
ಇಂತೆಂದುದಾಗಿ, ಅಪ್ರಮಾಣ ಕೂಡಲಸಂಗಮದೇವಾ. || ೩ ||

೨೪೪೩
ಎನ್ನ ದೇಹವೆಂಬ ಪ್ರಾಕಾರದೊಳು
ಮನವೆಂಬ ಶಿವಾಲಯು ನೋಡಾ.
ಮನವೆಂಬ ಶಿವಾಲಯದೊಳು
ಚಿದ್ರೂಪವೆಂಬ ಸಿಂಹಾಸನ ನೋಡಾ.
ಚಿದ್ರೂಪವೆಂಬ ಸಿಂಹಾಸನದ ಮೇಲೆ
ಚಿತ್ಪ್ರಕಾಶವೆಂಬ ಲಿಂಗವ ನೆಲೆಗೊಳಿಸಿ
ನಿಶ್ಚಿಂತವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸಲು

ಭವಮಾಲೆ ಹಿಂಗಿ ಭವರಹಿತನಾದೆನು ಕಾಣಾ,
ಅಪ್ರಮಾಣ ಕೂಡಲಸಂಗಮದೇವಾ. || ೪ ||

೨೪೪೪
ಕಲ್ಲದೇವರು ದೇವರಲ್ಲ,
ಮಣ್ಣದೇವರು ದೇವರಲ್ಲ,
ಮರದೇವರು ದೇವರಲ್ಲ,
ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ,
ಸೇತುರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ
ಮೊದಲಾಗಿ ಅಷ್ಟಾಷಷ್ಟಿಕೋಟಿ ಪುಣ್ಯಕ್ಷೇತ್ರಂಗಳಲ್ಲಿಹ
ದೇವರು ದೇವರಲ್ಲ.
ತನ್ನ ತಾನರಿದು ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. || ೫ ||

೨೪೪೫
ಗುರುಕರುಣವಿಲ್ಲದೆ
ವೇದಾಗಮಶಾಸ್ತ್ರಪುರಾಣಂಗಳನೋದಿ ಕಾಣದೆ ಹೋದರು.
ಅದು ಕಾರಣವೆ,
ವೇದ ವಿಪ್ರರ ಬೋಧೆ, ಶಾಸ್ತ್ರ ಸಂತೆಯ ಸುದ್ದಿ,
ಪುರಾಣ ಪುಂಡರಗೋಷ್ಠಿ ಎಂಬ ಶರಣರ ವಾಕ್ಯ ದಿಟ ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. || ೬ ||

೨೪೪೬
ಜೀವವೆಂಬ ಶಿವಾಲಯದೊಳು,
ಶಿವಲಿಂಗವೆಂಬ ಲಿಂಗವ ನೆಲೆಗೊಳಿಸಿ
ಅಜ್ಞಾನವೆಂಬ ನಿರ್ಮಾಲ್ಯವ ಕಳೆದು
ಸೋಹಂ ಭಾವದಲ್ಲಿ ಪೂಜಿಸುತ್ತಿರಲು
ಎನ್ನ ಭವರೋಗಂಗಳು ಬಯಲಾಗಿ
ಭವರಹಿತನಾದೆನು ಕಾಣಾ,
ಅಪ್ರಮಾಣ ಕೂಡಲ ಸಂಗಮದೇವಾ. || ೭ ||

೨೪೪೭
ತಿಲದೊಳಗಣ ತೈಲದಂತೆ,
ಕ್ಷೀರದೊಳಗಣ ಘೃತದಂತೆ,

ಪುಷ್ಪದೊಳಗಣ ಪರಿಮಳದಂತೆ,
ತುಪ್ಪದೊಳಗಣ ರುಚಿಯಂತೆ,
ಎಪ್ಪತ್ತೆರಡುಸಾವಿರ ನಾಡಿಗಳೆಲ್ಲವ
ಶಿವನು ಬೆರಸಿ ಭೇದವಿಲ್ಲದಿಹನು ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. || ೮ ||

೨೪೪೮
ತಿಲದೊಳಗಣ ತೈಲದಂತಿದ್ದುದು,
ಶಿಲೆಯೊಳಗಣ ಪಾವಕನಂತಿದ್ದುದು,
ಬೀಜದೊಳಗಣ ವೃಕ್ಷದಂತಿದ್ದುದು,
ಅರಿವಿನೊಳಗಡಗಿದ ಅರಿವಿನಂತಿದ್ದುದು ನೋಡಾ,
ಮಹಾಘನದಲ್ಲಿ ಲೀಯವಾದ ಶರಣನ ನಿಲವು
ಅಪ್ರಮಾಣ ಕೂಡಲಸಂಗಮದೇವಾ. || ೯ ||

೨೪೪೯
ಪರಧನ ಪರಸ್ತ್ರೀ ಪರಾನ್ನದಾಸೆಯ ಬಿಡದೆ,
ನಿಂದೆ ಸ್ತುತಿಗಳೆರಡು ಸಮವಾಗದೆ,
ಮಾಗಿಯ ಕೋಗಿಲೆಯಂತೆ ಮೂಗನಾಗಿರಲರಿಯದೆ,
ಬಯಲಬ್ರಹ್ಮವ ನುಡಿವ ತರ್ಕಿಗಳ ಕೂಡೆ ತರ್ಕವ ಮಾಡಿ,
ಶರಣನೆಂದು ಸುಳಿದಡೆ ಪಂಚಮಹಾಪಾತಕ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. || ೧೦ ||

೨೪೫೦
ಪರಸ್ತ್ರೀ ಪರಾರ್ಥ ಪರಾನ್ನಕ್ಕೆ ಸುಳಿವ ಅಣ್ಣಗಳು ನೀವು ಕೇಳಿರೆ.
ಪರಸ್ತ್ರೀಗೆ ಚಕ್ಷುದಗ್ಧವಾಗಿರಬೇಕು ಕೇಳಿರಣ್ಣಾ.
ಪರಾರ್ಥಕ್ಕೆ ಹಸ್ತದಗ್ಧವಾಗಿರಬೇಕು ಕೇಳಿರಣ್ಣಾ.
ಪರಾನ್ನಕ್ಕೆ ಜಿಹ್ವೆದಗ್ಧವಾಗಿರಬೇಕು ಕೇಳಿರಣ್ಣಾ.
ನಿಂದಾಸ್ತುತಿಗೆ ಕಿವುಡನಾಗಿರಬೇಕು ಕೇಳಿರಣ್ಣಾ.
ಬಯಲಬ್ರಹ್ಮವ ನುಡಿವ ತರ್ಕಿಗಳ ಕಂಡಡೆ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು ಶರಣನು ಕೇಳಿರಣ್ಣಾ,
ಇವರಿಂದ ಭವನಾಸ್ತಿ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. || ೧೧ ||

೨೪೫೧
ಪಸರ ಪಸರ ತಪ್ಪದಿಹ ಗಾಜುಗಳೆಲ್ಲ ರತ್ನವಾಗಬಹುದೆ ಅಯ್ಯಾ?
ಕೇರಿ ಕೇರಿ ತಪ್ಪದಿಹ ಶ್ವಾನವೆಲ್ಲ ಸಿಂಹವಾಗಬಹುದೆ ಅಯ್ಯಾ?

ಧರೆಯೊಳಗೆ ಬಿದ್ದು ಹೊರಳುವ ನಾಮಧಾರಕ ಗುರುಗಳೆಲ್ಲ
ಸದ್ಗುರುವಾಗಬಲ್ಲರೆ ಅಯ್ಯಾ?
ಇದು ಕಾರಣ, ಮನವು ಮಹದಲ್ಲಿ ನಿಂದು
ಪರಿಣಾಮ ನೆಲೆಗೊಂಡ ಮಹಾನುಭಾವ ಸದ್ಗುರು
ಕೋಟಿಗೊಬ್ಬರು ಇಲ್ಲವೆಂಬೆನು ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. ॥ ೧೨ ॥

೨೪೫೨
ಬ್ರಹ್ಮಲೋಕ ತಾನಿರ್ದಲ್ಲಿ,
ವಿಷ್ಣುಲೋಕ ತಾನಿರ್ದಲ್ಲಿ,
ಜ್ಯೋತಿರ್ಮಯಲೋಕ ತಾನಿರ್ದಲ್ಲಿ,
ರುದ್ರಲೋಕ ತಾನಿರ್ದಲ್ಲಿ,
ಕೈಲಾಸ ತಾನಿರ್ದಲ್ಲಿ,
ಸಚರಾಚರಂಗಳೆಲ್ಲಾ ತಾನಿರ್ದಲ್ಲಿ,
ತನ್ನಿಂದಧಿಕಮಪ್ಪ ದೈವವಿಲ್ಲವಾಗಿ,
ಇವೆಲ್ಲಾ ತನ್ನಾಧೀನವಲ್ಲದೆ ಅವರಾಧೀನ ತಾನಲ್ಲ ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. ॥ ೧೩ ॥

೨೪೫೩
ಬ್ರಹ್ಮ ದೇವರಲ್ಲ, ವಿಷ್ಣು ದೇವರಲ್ಲ, ರುದ್ರ ದೇವರಲ್ಲ,
ಈಶ್ವರ ದೇವರಲ್ಲ, ಸದಾಶಿವ ದೇವರಲ್ಲ,
ಸಹಸ್ರಶಿರ, ಸಹಸ್ರಾಕ್ಷ, ಸಹಸ್ರಪಾದವನುಳ್ಳ ವಿರಾಟ್ಪುರುಷ ದೇವರಲ್ಲ;
ವಿಶ್ವತೋಮುಖ, ವಿಶ್ವತೋಚಕ್ಷು, ವಿಶ್ವತೋಬಾಹು,
ವಿಶ್ವತೋಪಾದವನುಳ್ಳ ಪರಮಪುರುಷ ದೇವರಲ್ಲ,
ಸಹಜನಿರಾಲಂಬವೇ ತಾನೆಂದರಿದ ಮಹಾಶರಣ ತಾನೇ ದೇವ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. ॥ ೧೪ ॥

೨೪೫೪
ಮನು ಮುನಿ ಯತಿ ಸನ್ಯಾಸಿಗಳೆಲ್ಲರು
ಮಾಯೆಗೊಳಗಾಗಿ ಭವಸಾಗರದೊಳು ಬಿದ್ದರು ನೋಡಾ.
ದೇವದಾನಮಾನವರೆಲ್ಲರು
ಮಾಯೆಗೊಳಗಾಗಿ ನಾನಾ ಯೋನಿಯಲ್ಲಿ ಬಂದರು ನೋಡಾ,
ಬ್ರಹ್ಮ ವಿಷ್ಣ್ವಾದಿ ದೇವರ್ಕಳೆಲ್ಲರು
ಮಾಯೆಗೊಳಗಾಗಿ ಭವಾರಣ್ಯವ ಹೊಕ್ಕರು ನೋಡಾ.

ಮಾಯೆಯನತಿಗಳೆವ ನಿರ್ಮಾಯಂಗಲ್ಲದೆ ಭವಮಾಲೆ ಹಿಂಗದು ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. ॥ ೧೫ ॥

೨೪೫೫
ಶಬ್ದ ಸ್ಪರ್ಶ ರೂಪು ರಸ ಗಂಧವೆಂಬ
ಸಂಸಾರದ ಬಲೆಯಲ್ಲಿ ಸಿಕ್ಕಿದೆನಯ್ಯಾ.
ಇವರು ಐದು ಕಡೆಯಲ್ಲಿ ಕಾಡುತೈದಾರೆ.
ಈ ಐವರ ಕಾಟ ಇನ್ನೆಂದಿಂಗೆ ಸಮನಾಗಿ
ಮೋಕ್ಷವಹುದೋ ಅಯ್ಯಾ,
ಅಪ್ರಮಾಣ ಕೂಡಲಸಂಗಮದೇವಾ? ॥ ೧೬ ॥

೨೪೫೬
ಸಂಸಾರವೆಂಬ ಅರಣ್ಯದೊಳು ಬಿದ್ದೆನು.
ಆಸೆಯೆಂಬ ಹುಲಿ ಬಂದು ಹಿಡಿಯಿತ್ತಯ್ಯ ಎನ್ನ.
ನಿಮ್ಮ ಮಹಾಜ್ಞಾನ ಶಸ್ತ್ರದಲ್ಲಿ
ಆಸೆಯೆಂಬ ಹುಲಿಯ ಕೊಂದು ನಿಮ್ಮತ್ತ ತೆಗೆದುಕೊಳ್ಳಾ,
ಅಪ್ರಮಾಣ ಕೂಡಲಸಂಗಮದೇವಾ. ॥ ೧೭ ॥

೨೪೫೭
ಸಂಸಾರವೆಂಬ ಸಾಗರದೊಳು ಬಿದ್ದು ಮುಳುಗಿದೆನಯ್ಯ.
[ಕಟಿ]ಯುದ್ದವೆಂಬೆನೆ? [ಕಟಿ]ಯುದ್ದವಲ್ಲ.
ಉರದುದ್ದವೆಂಬೆನೆ? ಉರದುದ್ದವಲ್ಲ.
ಕೊರಳುದ್ದವೆಂಬೆನೆ? ಕೊರಳುದ್ದವಲ್ಲ.
ಶಿರದುದ್ದವೆಂಬೆನೆ? ಶಿರದುದ್ದವಲ್ಲ.
ಮುಗಿಲುದ್ದವಾದ ಬಳಿಕ ಇನ್ನೇವೆ ಇನ್ನೇವೆನಯ್ಯಾ?
ಸಂಸಾರಸಾಗರದೊಳು ಬಿದ್ದು ಮುಳುಗಿಹನ
ತೆಗೆದು ಕಾಯಯ್ಯ ಕಾಯಯ್ಯ,
ಅಪ್ರಮಾಣ ಕೂಡಲಸಂಗಮದೇವಾ. ॥ ೧೮ ॥

೨೪೫೮
ಸಮತೆ ಸಮಾಧಾನವೆಂಬ ಭೂಮಿಯ ಮೇಲೆ
ನಿರಂಜನವೆಂಬ ಅಶ್ವಂಗೆ ನಿರಾಶವೆಂಬ ಹಲ್ಲಣವ ಬಿಗಿದು,
ಜ್ಞಾನವೆಂಬ ವಾಘೆಯನಿಕ್ಕಿ, ನಿರಾಮಯವೆಂಬ ರಾವುತನೇರಿ,
ಮುನ್ನೂರರುವತ್ತು ಗಾವುದ ದಾಳಿಹೋಗಿ ತಿರುಗಿದ ನೋಡಾ.
ಈ ಅನುಭಾವವ ತಿಳಿದು ಅನುಭವಿಸಬಲ್ಲಾತನು

ಪರಮಯೋಗಿ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. || ೧೯ ||

೨೪೫೯
ಸೂರ್ಯನ ಗ್ರಹಣದಂತೆ ಸರ್ವಗ್ರಹಣವಾಯಿತ್ತಯ್ಯಾ ಎನಗೆ.
ಸಂಸಾರವೆಂಬ ರಾಹು ಸರ್ವಗ್ರಹಣವಾಗಿ ಹಿಡಿದು ನುಂಗಿತ್ತಯ್ಯಾ ಎನ್ನ.
ಈ ಬೆಂದ ಸಂಸಾರ ಎಂದು ಸಮನಾಗಿ ಮೋಕ್ಷವಹುದೋ?
ಇನ್ನೆಂದಿಂಗೆ ಪರಮಪದವಹುದೊ?
ಅಯ್ಯಾ ಅಪ್ರಮಾಣ ಕೂಡಲಸಂಗಮದೇವಾ. || ೨೦ ||

೨೪೬೦
ಹೆಣ್ಣೆಂಬ ಭೂತವ ಸೋಂಕಿ ಹೆಣನಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು,
ಹೊನ್ನೆಂಬ ಭೂತವ ಸೋಂಕಿ ಹೊಲೆಯನಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಕಾಮವೆಂಬ ಭೂತವ ಸೋಂಕಿ ಕರ್ಮಿಯಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಪಾಶವೆಂಬ ಭೂತವ ಸೋಂಕಿ ಪಾಪಿಯಾಗಿಹ ಗುರುಗಳು
ಗುರುವಲ್ಲವೆಂದುದು ನೋಡಾ ಶ್ರುತಿಗಳು.
ಈ ಪಂಚಭೂತಂಗಳನತಿಗಳೆದು
ಮನವು ಮಹಾಘನದಲ್ಲಿ ನಿಂದ ನಿಜಗುರುವಿಂಗೆ
ನಮೋ ನಮೋ ಎನುತಿದ್ದವು ನೋಡಾ ಶ್ರುತಿಗಳು,
ಅಪ್ರಮಾಣ ಕೂಡಲಸಂಗಮದೇವಾ. || ೨೧ ||

೨೪೬೧
ಹೊನ್ನ ಬಿಟ್ಟಡೆ ಹಿರಿಯರೆಂಬೆನೆ?
ಅಲ್ಲಲ್ಲ ನೋಡಾ.
ಹೆಣ್ಣ ಬಿಟ್ಟಡೆ ಹಿರಿಯರೆಂಬೆನೆ?
ಅಲ್ಲಲ್ಲ ನೋಡಾ.
ಮಣ್ಣ ಬಿಟ್ಟಡೆ ಹಿರಿಯರೆಂಬೆನೆ?
ಅಲ್ಲಲ್ಲ ನೋಡಾ.
ಈ ತ್ರಿವಿಧವು ಒಂದಬಿಟ್ಟೊಂದಿರದಾಗಿ,
ಈ ತ್ರಿವಿಧವನತಿಗಳೆದು ಮಹಾಘನದಲ್ಲಿ
ಮನ ಲೀಯವಾಗಿ ಸುಳಿವ ನಿಜಸುಳಿವಿಂಗೆ

ನಮೋ ನಮೋ ಎಂಬೆ ನೋಡಾ
ಅಪ್ರಮಾಣ ಕೂಡಲಸಂಗಮದೇವಾ. || ೨೨ ||

೨೪೬೨
ಹೊನ್ನ ಬಿಟ್ಟಡೇನು? ಹೆಣ್ಣಿನಾಸೆಯ ಬಿಡದನ್ನಕ್ಕ,
ಅಲ್ಲಿಗೆ ಹಿರಿಯತನ ಸಲ್ಲದು.
ಹೆಣ್ಣು ಬಿಟ್ಟಡೇನು? ಮಣ್ಣಿನಾಸೆಯ ಬಿಡದನ್ನಕ್ಕ,
ಅಲ್ಲಿಗೆ ಹಿರಿಯತನ ಸಲ್ಲದು.
ಅದೆಂತೆಂದಡೆ:
ಈ ತ್ರಿವಿಧವು ಒಂದಬಿಟ್ಟೊಂದಿರದಾಗಿ,
ಈ ತ್ರಿವಿಧವನತಿಗಳೆದು
ಮನ ಮಹಾಲಿಂಗದಲ್ಲಿ ಲೀಯವಾಗಿ
ದಗ್ಧಪಟನ್ಯಾಯದಲ್ಲಿ ಸುಳಿವ ನಿಜಸುಳುವಿಂಗೆ,
ನಮೋ ನಮೋ ಎನುತಿರ್ದೆನು ನೋಡಾ
ಅಪ್ರಮಾಣ ಕೂಡಲ ಸಂಗಮದೇವಾ. || ೨೩ ||

೨೪೬೩
ಹೊನ್ನು ಹೆಣ್ಣು ಮಣ್ಣು ಹಿಡಿವನ್ನಕ್ಕ ಗುರುವಲ್ಲ.
ಆ ಗುರುವಿನ ಬೆಂಬಳಿ ಲಿಂಗವಿಲ್ಲ.
ಆ ಲಿಂಗಪೂಜೆಯ ಮಾಡುವಾತ ಶಿಷ್ಯನಲ್ಲ.
ಆ ಗುರು ಶಿಷ್ಯರಿಬ್ಬರಿಗೆಯೂ ಕುಂಭೀಪಾತಕ
ತಪ್ಪದೆಂದು ಶ್ರುತಿ ಸಾರುತ್ತಿದೆ ನೋಡಾ,
ಅಪ್ರಮಾಣ ಕೂಡಲಸಂಗಮದೇವಾ. || ೨೪ ||

*

ಮಡಿವಾಳಪ್ಪ

೨೪೬೪
ನನ್ನ ಕಾಲು ನನ್ನ ಕೈ ನನ್ನ ಕಣ್ಣು ನನ್ನ ಮೂಗು
ನನ್ನ ಬಾಯಿ ನನ್ನ ಮೈ ನನ್ನ ಮನ ನನ್ನ ಪ್ರಾಣ
ಇವು ಮೊದಲಾದ ಸಮಸ್ತವು ನನ್ನದೆಂಬುದು ಅದಾವುದದು?
ಆವುದು ಅಕೋ ಅದೇ ತಾನಾದನಲ್ಲಾ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. || ೧ ||

೨೪೬೫
ಬಂದದ್ದು ಅತಿಗಳೆಯದೆ, ಬಾರದ್ದು ಬಯಸದೆ,
ಷಡ್ರಸವನೊಂದುಮಾಡಿಕೊಂಡು ಸವಿದುಂಡು,
ಚಿಂತೆಗೆಟ್ಟು, ಸಂತೋಷವು ಅಳವಟ್ಟು,
ನಗೆಗೆ ಹಗೆಗೆ ಒಂದಾಗಿ, ಝುಗಝುಗನೆ ಹೊಳೆದು
ವೈರಾಗ್ಯವೇ ಆರೋಗ್ಯವಾಗಿ[ರದೆ], ಭವರೋಗ ಬ್ಯಾನಿಗೆ ನೆಲೆಯಾಗಿ
ಸತ್ತು ಸತ್ತು ಹೋಯಿತು ಅನಂತಕಾಲ ಅನಂತಜನ್ಮ;
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ. ॥ ೨ ॥

*

ಮುಮ್ಮಡಿ ಕಾರ್ಯೇಂದ್ರ

೨೪೬೬
ಬೀಜದೊಳಗಿಹ ವೃಕ್ಷ ಫಲವ ಸವಿಯಬಹುದೆ?
ಬಿಂದುವಿನಲ್ಲಿರ್ಪ ಸತಿಯ ಸಂಗಭೋಗವು ಸಂಘಟಿಸುವುದೆ?
ಮಳೆವನಿಯೊಳಿರ್ಪ ಹುರುಮಂಜಿ ಮುತ್ತುಗಳಂ
ಸರಗೊಳಿಸಿ ಕೊರಳೊಳು ಧರಿಸಬಹುದೆ?
ಹಾಲೊಳಗಿರ್ಪ ತುಪ್ಪವು ಅರಸಿದರೆ ಸಿಕ್ಕುವುದೆ?
ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ?
ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೆ?
ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನಮಂ ಮಾಡಿಕೊಂಡು,
ತದನುಭವಸುಖದೊಳೋಲಾಡುವುದು
ಅತಿಚತುರನಾದ ಶಿವಶರಣಂಗಲ್ಲದುಳಿದರ್ಗುಂಟೆ,
ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ? ॥ ೧ ॥

೨೪೬೭
ಭಕ್ತಿಯೆಂಬ ಪಾಲನ್ನು ಮನದಲ್ಲಿ ಹೆಪ್ಪುಗೊಟ್ಟು,
ಅದರಿಂ ಘಟ್ಟಿಗೊಂಡ ದೃಢಿಮ ದಧಿಯನ್ನು
ಶರೀರಮೆಂಬ ಭಾಂಡದಲ್ಲಿ ತುಂಬಿ,
ತತ್ವವೆಂಬ ಮಂತುಗೋಲಿನಿಂ ಮಥಿಸಲು,
ಲಿಂಗವೆಂಬ ನವನೀತವು ಕಾಣಿಸಲಾಗಿ ಅದಂ ಪರಿಗ್ರಹಿಸಿ,
ಜ್ಞಾನಾಗ್ನಿಯಲ್ಲಿ ಪಕ್ವವಂ ಮಾಡಲು
ನಿಜವಾಸನೆಯಿಂ ಪ್ರಕಾಶಿಸುತ್ತಿಹ ಘೃತ ಸೇವನಾಬಲದಿಂದ
ಆತ್ಮನೇ ಲಿಂಗವಾಯಿತ್ತು ಕಾಣಾ,
ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ. ॥ ೨ ॥

೨೪೬೮
ಹಗಲಿದ್ದಲ್ಲಿ ಕತ್ತಲೆಯಿರ್ಪುದೆ?
ಕತ್ತಲೆಯಿದ್ದಲ್ಲಿ ಹಗಲಿರ್ಪುದೆ?
ಜಾಗ್ರವಿದ್ದಲ್ಲಿ ಸ್ವಪ್ನವಿರ್ಪುದೆ?
ದುಃಖವಿದ್ದಲ್ಲಿ ಆನಂದವಿರ್ಪುದೆ?
ನೀನು ಪ್ರಸನ್ನಮಾದಲ್ಲಿ ನಾನಿರ್ಪೆನೆ?
ನಾನು ಪ್ರಸನ್ನಮಾದಲ್ಲಿ ನೀನಿರ್ಪೆಯಾ?
ನೀನಿದ್ದಲ್ಲಿ ನಾನಿಲ್ಲ ನಾನಿದ್ದಲ್ಲಿ ನೀನಿಲ್ಲ,
ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ. ॥ ೩ ॥

*

ಷಣ್ಮುಖಸ್ವಾಮಿ

೨೪೬೯
ಅರಳಿಯ ಮರದೊಳಗಿರುವ ಅರಗಿಳಿಗಳಿರಾ,
ನಮ್ಮ ಅಖಂಡೇಶ್ವರನ ಕಂಡಡೆ ಹೇಳಿರೆ!
ಮಾವಿನ ಮರದೊಳಗೆ ಕೂಗುವ ಕೋಗಿಲೆ ಹಿಂಡುಗಳಿರಾ,
ನಮ್ಮ ನಾಗಭೂಷಣನ ಕಂಡಡೆ ಹೇಳಿರೆ!
ಕೊಳನ ತೀರದಲಾಡುವ ಕಳಹಂಸಗಳಿರಾ,
ನಮ್ಮ ಎಳೆಯ ಚಂದ್ರಧರನ ಕಂಡಡೆ ಹೇಳಿರೆ!
ಮೇಘಧ್ವನಿಗೆ ಕುಣಿವ ನವಿಲುಗಳಿರಾ,
ನಮ್ಮ ಅಖಂಡೇಶ್ವರನೆಂಬ
ಅವಿರಳಪರಶಿವನ ಕಂಡಡೆ ಹೇಳಿರೆ! ॥ ೧ ॥

೨೪೭೦
ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು.
ಹೊರಗೆ ಜಂಗಮದ ಮಾಟದಲ್ಲಿ ತನುವಿಡಿದಿರಬೇಕು.
ಈ ಉಭಯವ ಒಂದರೊಳಗೊಂದು ಭೇದಿಸಿಕೊಂಡು
ತಾನಳಿದು ಮಾಡುವ ಭಕ್ತನ ಕೂಡಿಕೊಂಡಿರ್ಪನು ನೋಡಾ
ಅಖಂಡೇಶ್ವರ. ॥ ೨ ॥

೨೪೭೧
ಕಲ್ಪತರು ಕಾಡಮರನಾಗಬಲ್ಲುದೇನಯ್ಯಾ?
ಕಾಮಧೇನು ಕಾಡಪಶುವಾಗಬಲ್ಲುದೇನಯ್ಯಾ?
ಸಿಂಹದ ಮರಿ ಸೀಳ್‌ನಾಯಾಗಬಲ್ಲುದೇನಯ್ಯಾ?

ಪರಮ ಶ್ರೀಗುರುವಿನ ಕರಕಮಲದಲ್ಲಿ ಉದಯವಾದ
ಮಹಾಶರಣರು ಮರಳಿ ನರರಾಗಬಲ್ಲರೆ ಹೇಳಾ ಅಖಂಡೇಶ್ವರಾ? || ೩ ||

೨೪೭೨
ಕ್ಷೀರದ ರುಚಿಯ ಹಂಸಬಲ್ಲುದಲ್ಲದೆ,
ನೀರೊಳಗಿರ್ಪ ನೀರಗೋಳಿ ಎತ್ತ ಬಲ್ಲುದಯ್ಯಾ?
ಕಬ್ಬಿನ ಸ್ವಾದವ ಮದಗಜಬಲ್ಲುದಲ್ಲದೆ,
ಸೋಗೆಯ ತಿಂಬ ಕುರಿ ಎತ್ತ ಬಲ್ಲುದಯ್ಯಾ ?
ಪುಷ್ಪದ ಪರಿಮಳವ ಭೃಂಗ ಬಲ್ಲುದಲ್ಲದೆ,
ಮರಕಡಿಯುವ ಗುಂಗೆಯಹುಳ ಎತ್ತ ಬಲ್ಲುದಯ್ಯಾ ?
ಆದಿಸ್ಥಳಕುಳದ ನಿರ್ಣಯವ ಅನಾದಿಶರಣ ಬಲ್ಲನಲ್ಲದೆ
ಈ ಲೋಕದ ಗಾದೆಯ ಮನುಜರು ಎತ್ತ ಬಲ್ಲರಯ್ಯಾ ಅಖಂಡೇಶ್ವರಾ? || ೪ ||

೨೪೭೩
ಘುಲ್ಲುಘುಲ್ಲೆಂದಡೆ ನಲ್ಲ ಬರುತಾನೆಂದು
ಎಲ್ಲ ಹಾದಿಯ ಮೆಟ್ಟಿ ನೋಡುತಿರ್ದೆನವ್ವಾ.
ನಲ್ಲನ ಸೊಲ್ಲನಾಲಿಸಿ ಕೇಳುತಿರ್ದೆನವ್ವಾ.
ಅಖಂಡೇಶ್ವರನೆಂಬ ನಲ್ಲನ ಕಂಡರೆ
ಮಹಾಸಂತೋಷವು,
ಕಾಣದಿರ್ದರೆ ಕಡು ದುಃಖ ಕೇಳಿರವ್ವಾ ಎನಗೆ. || ೫ ||

೨೪೭೪
ಜಗದ ಮಧ್ಯದಲ್ಲಿ ಶರಣ ಜನಿಸಿದಡೇನು
ಆ ಜಗದ ಸ್ವರೂಪನೆ? ಅಲ್ಲಲ್ಲ.
ಅದೇನು ಕಾರಣವೆಂದೊಡೆ:
ಕೋಗಿಲೆಯ ತತ್ತಿಯನೊಡೆದು
ಕಾಗೆ ಮರಿಯ ಮಾಡಿ ಸಲಹಿದಡೇನು
ಅದು ತನ್ನ ಕೋಗಿಲೆಯ ಹಿಂಡ ಕೂಡುವುದಲ್ಲದೆ
ಮರಳಿ ಕಾಗೆಯ ಹಿಂಡ ಬೆರೆವುದೆ ಹೇಳಾ?
ಲೋಕದ ಮಧ್ಯದಲ್ಲಿ ಅನಾದಿಶರಣನು
ಲೋಕೋಪಕಾರಕ್ಕಾಗಿ ಜನಿಸಿದಡೇನು?
ತನ್ನ ಮುನ್ನಿನ ಶಿವತತ್ವವನೆ ಬೆರೆವನಲ್ಲದೆ
ಮರಳಿ ಲೋಕವ ಬೆರೆಯನು ನೋಡಾ,
ನಿಮ್ಮನರಿದ ಶಿವಜ್ಞಾನಿ ಶರಣನು ಅಖಂಡೇಶ್ವರಾ. || ೬ ||

೨೪೭೫
ತನುವಿನ ಮಧ್ಯದಲ್ಲಿ ಹೂಳಿರ್ದ ಇಷ್ಟಲಿಂಗದಲ್ಲಿ
ತನುವ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಮನದ ಮಧ್ಯದಲ್ಲಿ ಹೂಳಿರ್ದ ಪ್ರಾಣಲಿಂಗದಲ್ಲಿ
ಮನವ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಜೀವನ ಮಧ್ಯದಲ್ಲಿ ಹೂಳಿರ್ದ ಭಾವಲಿಂಗದಲ್ಲಿ
ಜೀವನ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಇಂತೀ ಅನುಭಾವದ ಅನುವನರಿಯದೆ
ತನುವಿನ ಕೈಯಲ್ಲಿ ಘನಲಿಂಗವ ಹಿಡಿದಿರ್ದಡೇನು
ಅದು ಹುಟ್ಟುಗುರುಡನ ಕೈ[ಗೆ] ಕನ್ನಡಿಯ
ಕೊಟ್ಟಂತೆ ಕಾಣಾ ಅಖಂಡೇಶ್ವರಾ. || ೭ ||

೨೪೭೬
ತನ್ನ ಎಡೆಯಲ್ಲಿ ಕತ್ತೆ ಸತ್ತು ಬಿದ್ದುದನರಿಯದೆ
ಪರರೆಡೆಯಲ್ಲಿ ನೊಣವನರಸುವ ಮರುಳು ಮಾನವನಂತೆ,
ತನ್ನಂಗಮನದ ಅವಗುಣಂಗಳ ತೊಲಗಿ ನೂಕಲರಿಯದೆ
ಅನ್ಯರಲ್ಲಿ ಅವಗುಣವ ಸಂಪಾದನೆಯ ಮಾಡುವ
ಕುನ್ನಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ. || ೮ ||

೨೪೭೭
ನದಿ ನದಿಯ ಕೂಡಿದಂತೆ, ಬಯಲು ಬಯಲ ಬೆರೆದಂತೆ,
ಮಾತು ಮಾತ ಕಲೆತಂತೆ, ಜ್ಯೋತಿ ಜ್ಯೋತಿ ಒಂದಾದಂತೆ
ಅಖಂಡೇಶ್ವರಾ, ನಿಮ್ಮೊಳೊಡವೆರೆದ
ನಿಜೈಕ್ಯನ ಕುರುಹು ಇಂತುಟಯ್ಯಾ. || ೯ ||

೨೪೭೮
ನೀನೊಲಿದಡೆ ಕಲ್ಲೆಲ್ಲ ಕನಕವಯ್ಯ.
ನೀನೊಲಿದಡೆ ಹುಲ್ಲೆಲ್ಲ ರಾಜಾನ್ನವಯ್ಯ.
ನೀನೊಲಿದಡೆ ಕೊರಡೆಲ್ಲ ಕಲ್ಪವೃಕ್ಷವಯ್ಯ.
ನೀನೊಲಿದಡೆ ಬರಡೆಲ್ಲ ಕಾಮಧೇನುವಯ್ಯ.
ನೀನೊಲಿದಡೆ ಏನುಂಟು, ಏನಿಲ್ಲವಯ್ಯ ಅಖಂಡೇಶ್ವರಾ? || ೧೦ ||

೨೪೭೯
ಬಲ್ಲವರು ಬೆಸಗೊಂಡಡೆ ಸೊಲ್ಲನಾರೈದು
ಮೆಲ್ಲನೆ ನುಡಿಯಬೇಕು.

ಕಲ್ಲಿಗೆ ಕಲ್ಲು ತಾಗಿದಂತೆ ಸೊಲ್ಲು ಬಿಗಿಯಾದಡೆ
ಅಲ್ಲಿ ನಿಲ್ಲನಯ್ಯ ನಮ್ಮ ಅಖಂಡೇಶ್ವರ. ॥ ೧೧ ॥

೨೪೮೦
ಬಸವನ ನಾಮವು ಕಾಮಧೇನು ಕಾಣಿರೊ.
ಬಸವನ ನಾಮವು ಕಲ್ಪವೃಕ್ಷ ಕಾಣಿರೊ.
ಬಸವನ ನಾಮವು ಚಿಂತಾಮಣಿ ಕಾಣಿರೊ.
ಬಸವನ ನಾಮವು ಪರುಷದ ಖಣಿ ಕಾಣಿರೊ.
ಬಸವನ ನಾಮವು ಸಂಜೀವನಮೂಲಿಕೆ ಕಾಣಿರೊ.
ಇಂತಪ್ಪ ಬಸವನಾಮಾಮೃತವು
ಎನ್ನ ಜಿಹ್ವೆಯ ತುಂಬಿ ಹೊರಸೂಸಿ ಮನವ ತುಂಬಿತ್ತು.
ಆ ಮನವ ತುಂಬಿ ಹೊರಸೂಸಿ ಸಕಲಕರಣೇಂದ್ರಿಯಂಗಳ ತುಂಬಿತ್ತು.
ಆ ಸಕಲ ಕರಣೇಂದ್ರಿಯಂಗಳ ತುಂಬಿ ಹೊರಸೂಸಿ
ಸರ್ವಾಂಗದ ರೋಮಕುಳಿಗಳನೆಲ್ಲ ವೇಧಿಸಿತ್ತಾಗಿ
ನಾನು ಬಸವಾಕ್ಷರವೆಂಬ ಹಡಗವೇರಿ
ಬಸವ ಬಸವ ಬಸವಾ ಎಂದು
ಭವಸಾಗರವ ದಾಟಿದೆನಯ್ಯಾ ಅಖಂಡೇಶ್ವರಾ. ॥ ೧೨ ॥

೨೪೮೧
ಬಾಳೆಯ ಎಲೆಯ ಮೇಲೆ ತುಪ್ಪವ ತೊಡೆದಂತೆ
ಒಪ್ಪವಿಟ್ಟು ವಚನವ ನುಡಿದೆನಲ್ಲದೆ,
ನಡೆಯಲ್ಲಿ ಒಪ್ಪವಿಟ್ಟು ನಡೆಯಲಿಲ್ಲವಯ್ಯ ನಾನು.
ನುಡಿಹೀನ, ನಡೆತಪ್ಪುಗ, ಜಡದೇಹಿ ಕಡುಪಾತಕಂಗೆ,
ಒಡೆಯ ಅಖಂಡೇಶ್ವರಲಿಂಗವು
ಸ್ವಪ್ನದಲ್ಲಿ ಸುಳಿಯಲಿಲ್ಲವಯ್ಯ ಎನಗೆ. ॥ ೧೩ ॥

೨೪೮೨
ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು
ಬಹಿರ್ಗತವಾದಂತೆ,
ಮುಗಿಲ ಮರೆಯಲ್ಲಿ ಅಡಗಿರ್ದ
ಕ್ಷಣಿಕವು ಸ್ಫುರಿಸಿದಂತೆ,
ಎನ್ನ ಮನದ ಮಧ್ಯದಲ್ಲಿ ಅಡಗಿರ್ದ ಮಹಾಘನವು
ತನ್ನ ಲೀಲೆಯಿಂದೆ ತಾನೇ ಉದಯವಾಗಲು
ನಿಮ್ಮ ಆದಿಯನಾದಿಯ ನಿಲವ ಕಂಡೆನಯ್ಯಾ ಅಂಖಡೇಶ್ವರಾ. ॥ ೧೪ ॥

೨೪೮೩
ಮಡುವಿನಗ್ಗಣಿ, ಗಿಡದ ಹೂವು, ಒಡಲಿಗೆ ಅನ್ನ,
ನುಡಿನುಡಿಗೆ ಮೃಡನ ಸ್ಮರಣೆ ಇರಲು,
ಜಡರ ಹಂಗೇಕೆ ಹೇಳಾ.
ಶಿವಧ್ಯಾನ ಶಿವಚಿಂತೆ ಭಿಕ್ಷಾಹಾರ
ಏಕಾಂತವಾಸಿಯ ಮಾಡಯ್ಯ ಎನ್ನ ಅಖಂಡೇಶ್ವರಾ. ॥ ೧೫ ॥

೨೪೮೪
ಮಾಡಬಾರದು ಮಾಡಬಾರದು
ಮಾನಹೀನ ಮತಿಭ್ರಷ್ಟರ ಸಂಗವ.
ಮಾಡಬಾರದು ಮಾಡಬಾರದು
ಪಾಶಬದ್ಧ ಕ್ಲೇಶಜೀವರ ಸಂಗವ.
ಮಾಡಬಾರದು ಮಾಡಬಾರದು
ಹುಸಿಡಂಭಕ ಹುಸಿಹುಂಡರ ಸಂಗವ.
ಮಾಡಿದಡೆ ಭವದಲ್ಲಿ ಘಾಸಿಯಲ್ಲದೆ
ಮುಕ್ತಿಯ ಲೇಸಿಲ್ಲವಯ್ಯ ಅಖಂಡೇಶ್ವರಾ, ॥ ೧೬ ॥

೨೪೮೫
ಶರಣನಾದಡೆ ಮುರಿದ ಬಂಗಾರವ
ಬೆಳಗಾರದಲ್ಲಿ ಬೆಚ್ಚಂತಿರಬೇಕು ಲಿಂಗದಲ್ಲಿ,
ಶರಣನಾದಡೆ ಶುಭ್ರವಸ್ತ್ರಕ್ಕೆ ಅಚ್ಚೊತ್ತಿದಂತಿರಬೇಕು ಲಿಂಗದಲ್ಲಿ.
ಶರಣನಾದಡೆ ಕರಕು ಕಟ್ಟಿರದ
ಲೋಹದ ಪುತ್ಥಳಿಯಂತಿರಬೇಕು ಲಿಂಗದಲ್ಲಿ.
ಇಂತೀ ಸಮರಸಭಾವವನರಿಯದೆ
ಹುಸಿಹುಂಡನಂತೆ ವೇಷವ ಧರಿಸಿ
ಗ್ರಾಸಕ್ಕೆ ತಿರುಗುವ ವೇಷಗಳ್ಳರ
ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ. ॥ ೧೭ ॥

೨೪೮೬
ಸಿಂಹದ ಮೊಲೆವಾಲು ಸಿಂಹದ ಮರಿಗಲ್ಲದೆ,
ಸೀಳುನಾಯಿಗೆ ಯೋಗ್ಯವೆ ಅಯ್ಯ?
ಶಿವಪ್ರಸಾದದ ಒಲುಮೆ ಶಿವಶರಣರಿಗಲ್ಲದೆ
ಉಳಿದ ಭವಭಾರಿಗಳಿಗೆ ಅಳವಡುವುದೆ ಅಯ್ಯ
ಅಖಂಡೇಶ್ವರಾ? ॥ ೧೮ ॥

೨೪೮೭
ಸೊಕ್ಕಿದ ಜವ್ವನದ, ಕಕ್ಕಸ ಕುಚದ,
ಸಡಿಲಿದ ಸೋರ್ಮುಡಿಯ,
ಬಡನಡುವಿನ, ಬಳಕುವ ಹೆಣ್ಣಿನ ಕಡುಸ್ನೇಹವನಗಲಿ
ಕಡೆಗೆ ಹೋಗುವುದು ಇದು ಎಂಥ ವಿಗಡ ಚಾರಿತ್ರವೆ ಅವ್ವಾ!
ಅಖಂಡೇಶ್ವರನೆಂಬ ನಲ್ಲನ ಚಿಂತೆಯಿಂದೆ
ಮನವು ಸಣ್ಣಿಸಿ, ತನುವು ಕರಗಿ ಹೋಯಿತ್ತು ನೋಡಿರವ್ವಾ. ॥ ೧೯ ॥

೨೪೮೮
ಹಾಲ ಹರವಿಯ ಮೇಲೆ ಮಜ್ಜಿಗೆಯ ತುಂಬಿರಿಸಿದಡೇನು
ಹೆಪ್ಪಾಗಬಲ್ಲುದೆ ಅಯ್ಯಾ? ಸಮ್ಮಿಶ್ರದಿಂದಲ್ಲದೆ.
ಅಂಗದ ಮೇಲೆ ಲಿಂಗಧಾರಣವಾದಡೇನು
ಸಮರಸವಾಗಬಲ್ಲುದೆ ಅಯ್ಯಾ? ಶಿವಜ್ಞಾನವಿಲ್ಲದೆ ಅಖಂಡೇಶ್ವರಾ. ॥ ೨೦ ॥

*

ಹೇಮಗಲ್ಲ ಹಂಪ

೨೪೮೯
ಅನ್ನದ ಗೊಡವಿಲ್ಲದಾಂತಗೆ
ಆರಂಬದ ಗೊಡವಿಯುಂಟೆ?
ಖೇಚರ ಪವನ ಸಾಧಕಂಗೆ
ಭೂಚರದಲಡಿಯಿಡುವ ಬಯಕೆಯುಂಟೆ?
ವಜ್ರಾಂಗಿಯ ತೊಟ್ಟಿಪ್ಪಾತಂಗೆ
ಬಾಣದ ಭಯವುಂಟೇನಯ್ಯಾ?
ನಿರ್ಮಾಯಕಂಗೆ ಮಾಯದ ಹಂಗುಂಟೇ?
ನಿರ್ವ್ಯಸನಿಗೆ ವ್ಯಸನದ ಹಂಗುಂಟೇ?
ಪರಮ ಗುರು ಪಡುವಿಡಿ ಮಲ್ಲಿನಾಥನೊಳು ಬೆರೆದಾತಂಗೆ
ಅನ್ಯದೈವದ ಹಂಗುಂಟೇ? ॥ ೧ ॥

೨೪೯೦
ಉಳಿ ಬಾಚಿಂಗೆ ಹರಿಯದ ಕೊರಡು
ಕೊಡಲಿ ಕುಡುಗೋಲಿಂಗೆ ಹರಿವುದೆ?
ಪುರಾತನರ ವಚನಾಮೃತವೆಂಬ ಉಳಿಯಲ್ಲಿ ಕಡಿದು,
ಬಾಚಿಯಲ್ಲಿ ಕೆತ್ತಿದರೆ ನಾಚದ ಮನ
ವೇದಾಗಮವೆಂಬ ಕೊಡಲಿ ಕುಡುಗೋಲಿಂಗೆ ಹರಿವುದೆ? ಹರಿಯದು.

ಕೊರಡುಮನ ಜರಡುಮನ ಜಾಳುಮನ ಹಾಳುಮನ
ಕೋಳುಮನ ಕುಪಿತಮನ ಸರ್ವಚಾಂಡಾಲಮನದ
ಮೇಳದ ಬಲೆಯೊಳಗೆ ಬಿದ್ದು, ಭಂಗಬಡುತ್ತಿದ್ದೆನ್ನೈ.
ನಿರ್ಭಂಗ ನಿರ್ಲೇಪ ನಿಜಗುರು ನಿಶ್ಚಿಂತ ಸ್ವಯಂಭೂ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ. ॥ ೨ ॥

೨೪೯೧
ಕರಿಯ ಕಾಲೊಳಗೆ ಸಿಕ್ಕಿದ ಮರಿಯ ನಾಯಿಯಂತೆ,
ಅಷ್ಟಮದವೆಂಬ ಕರಿಯ ಕಾಲೊಳೆನ್ನ ಸಿಗಿಸಿ,
ಮೆಟ್ಟಿ ಮೆಟ್ಟಿ ತುಳಿಸುತ್ತಿದ್ದೆಯಲ್ಲ!
ಅರ[ಸ]ನ ಉಪ್ಪನುಂಡ ಆನೆ ಸೇನೆ ದಳ
ಅರಸ[ನ] ಕೈಸೆರೆ ಹಿಡಿವಂತೆ,
ಎನ್ನಾತ್ಮದಲ್ಲಿ ಹುಟ್ಟಿದ ಮದ
ಎನ್ನನೇ ತಿಂದು ತೇಗುತ್ತಿದ್ದವಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩ ॥

೨೪೯೨
ಕೆಚ್ಚಲ ಕಚ್ಚಿದ ಉಣ್ಣೆ
ನಿಚ್ಚಾಮೃತದ ಸವಿಯನೆತ್ತಬಲ್ಲುದಯ್ಯಾ?
ಪಾಯಸದೊಳಿಹ ಸಟ್ಟುಗ ರುಚಿಯಬಲ್ಲುದೆ?
ಸರ್ವವ ಮುಟ್ಟಿ ಮೂಸುವ ಮಕ್ಷಿಕ ಶುಚಿಯ ಬಲ್ಲುದೇನಯ್ಯಾ?
ಸಂಸಾರದೋಷ ದುಸ್ಸಂಗ ದುಶ್ಚರಿತ್ರದೊಳಿಪ್ಪ ಮಾನವರು
ಶಿವಜ್ಞಾನಾಮೃತದ ಸವಿಯನೆತ್ತ ಬಲ್ಲರಯ್ಯಾ?
ಹುಗ್ಗಿಯೊಳಿಹ ಹುಟ್ಟು ತೊಳಸ ಬಲ್ಲುದಲ್ಲದೆ
ಸವಿಯ ಬಲ್ಲುದೇನಯ್ಯಾ?
ವೇದಾಗಮವನೋದಿದ ಮಾನವರೆಲ್ಲ
ಸಂಸಾರಬಂಧನವ ಕಳೆಯಬಲ್ಲರೇನಯ್ಯಾ?
ಮನಮಕ್ಷಿಕ ಸರ್ವದುಚ್ಛಿಷ್ಟವ ಮುಟ್ಟಿ ಮುಟ್ಟಿ
ಹಲವು ಕಡೆಗೆ ಹಾರುತಿರಲು, ಮಹದರಿವನೆತ್ತ ಬಲ್ಲುದಯ್ಯಾ!
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪ ॥

೨೪೯೩
ಕ್ಷೀರವನೊಲ್ಲದೆ ಹಂಸ ನೀರಿಂಗೆ ಹರಿವಂತೆ,
ಕಮಲದ ಪರಿಮಳವನೊಲ್ಲದೆ ತುಂಬಿ ದತ್ತೂರ ಕುಸುಮಕ್ಕೆ ಹರಿವಂತೆ,

ನಿನ್ನಂಗಸಂಗದಿಂದಾದ ತನುಮನ ನಿನ್ನನರಿಯದೆ
ಸಂಸಾರಸಂಗಕ್ಕೆಳಸುವವು.
ಇದಕ್ಕಿನ್ನೆಂತೊ ಶಿವನೆ!
ನೀನೊಡ್ಡಿದ ಸಂಸಾರಬಂಧನವ ನೀನೆ ಪರಿಹರಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫ ॥

೨೪೯೪
ನಡೆಯಲಾರದ ಹೆಳವಂಗೆ ಅಂಧ ಹೆಂಡತಿ ದೊರೆತರೆ
ನಡೆವುದೇನಯ್ಯ, ಅವರ ಜೀವಿತ ರೂಪ?
ನುಡಿಯಿಲ್ಲದ ಮೂಕ ಮಾನವಂಗೆ ಅರಸುಪಟ್ಟ ಬಂದರೆ
ಪ್ರಜೆ ಪರಿವಾರ ರಾಜ್ಯವ ನಡೆಸಿಕೊಳಬಲ್ಲನೇನಯ್ಯಾ?
ಅಜ್ಞಾನಗುಣ ಮಾಯಕ ಹರಿವನಕ ಸುಜ್ಞಾನ ಸಂಸಾರವುಂಟೇನಯ್ಯಾ?
ಜೀವನ ಬುದ್ಧಿಗುಣವುಳ್ಳನ್ನಕ್ಕ ಪರಮಾತ್ಮನ ಬೋಧೆಗೆ ಹರಿಯೆ
ಸ್ವಸ್ಥಿರ ಚಿತ್ತ[ನೇ]ನಯ್ಯಾ!
ಸಂಸಾರಮಾಯೆ ಪ್ರಾಣವಾಗಿಪ್ಪವರಿಗೆ ನಿಃಸಂಸಾರವುಂಟೇನಯ್ಯಾ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೬ ॥

೨೪೯೫
ಪಂಕದಲ್ಲಿ ಬಿದ್ದ ಪಶುವಿನಂತೆ, ಕಿರಾತನ ಕೈಯ ಮೃಗದಂತೆ,
ಗರುಡನ ಮುಂದಿನ ಸರ್ಪನಂತೆ, ಸಿಂಹದ ಮುಂದಣ ಕರಿಯಂತೆ,
ದೀಪದ ಮುಂದಣ ಪತಂಗನಂತೆ, ಪಾಪಿಯ ಕೂಸಿನಂತೆ.
ಇಂತಿವೆಲ್ಲಕ್ಕೆಯೂ ಸ್ಥಿರವಿಲ್ಲದಂತೆ,
ಮಾಯವೆಂಬ ರಾಕ್ಷಿಯ ಬಲೆಯಲ್ಲಿ ಸಿಲ್ಕಿ ಬಳಲುತಿರ್ದೆ.
ನಿನಗನ್ಯನಾದ ಕಾರಣ ಎನಗೀ ದುರಿತ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭ ॥

೨೪೯೬
ಪಂಕದೊಳು ಬಿದ್ದ ಪಶುವಿನಂತೆ
ಸಂಸಾರವೆಂಬ ಕೊಗ್ಗೆಸರ ನಟ್ಟನಡು ಹುದಿಲೊಳಿಪ್ಪವನ
ಪಶುವಿನೊಡೆಯ ಪಶುವನರಸಿಕೊಂಡು ಬಂದು ಎಳೆ ತೆಗೆವಂತೆ
ನರಪಶು ನನ್ನವನೆಂದು ಹುದಿಲೊಳಿಪ್ಪವನ ತೆಗೆದು
ಕರುಣಾಜಲವೆಂಬ ನೀರೆರೆದು ಮೈದೊಳೆದು ತಲೆದಡಹಿ
ಕಾಯಿದು ರಕ್ಷಣೆಯ ಮಾಡಿಕೊಳ್ಳಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮ ॥

೨೪೯೭
ಲಿಂಗಾಸಕ್ತರಿಗೆ ಅಂಗಾಸಕ್ತಿಯುಂಟೇನಯ್ಯಾ?
ಜಂಗಮಾಸಕ್ತರಿಗೆ ಅನ್ಯಸಂಗ ಪರಧನ ಪರಸ್ತ್ರೀಯರಾಸೆಯುಂಟೇನಯ್ಯಾ?
ಪರಮಗುರು ಪಡುವಿಡಿ ಮಲ್ಲಿನಾಥ ಪ್ರಭುವೆ,
ನಿಮ್ಮಾಸೆಯೊಳು ಇಂಬುಗೊಂಡಾತಂಗೆ
ಜನ್ಮಮೃತ್ಯುಗಳುಂಟೇನಯ್ಯಾ. ॥ ೯ ॥

೨೪೯೮
ವಾರಿಯಿಲ್ಲದ ಕೆರೆಗೆ ಹಾರೈಸಿ ಬಂದ ತುರುವಿನಂತೆ,
ಬೂರದ ಮರಕ್ಕೆ ಹಾರೈಸಿ ಬಂದ ಗಿಣಿಹಿಂಡಿನಂತೆ,
ನಳಿನವಿಲ್ಲದ ಕೊಳಕೆರಗಿದಳಿವಿಂಡಿನಂತೆ,
ಮಲಹರನ ಭಕ್ತಿಜ್ಞಾನ ವೈರಾಗ್ಯವಿಲ್ಲದ ಅಧಮರಿಗೆ ಆಸೆಮಾಡದಿರು,
ಆಸೆ ಮಾಡಿದರೆ ವ್ಯರ್ಥ.
ಆಸೆಮಾಡು ಆಸೆಮಾಡು ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥನೆಂಬ ಧನಿಕನ. ॥ ೧೦ ॥

೨೪೯೯
ಹಡಗ ಹರಿಗೋಲ ನಂಬಿದವರು
ಕಡಲ ತೊರೆ ದಾಂಟರೇನಯ್ಯಾ?
ಧನು ಖಡ್ಗವ ಪಿಡಿದು ಕಾಳಗವ ಮಾಡಿದವರು
ರಣವ ಗೆಲ್ಲರೇನಯ್ಯಾ?
ಗುರುವ ನಂಬಿದವರು ಭವವ ಗೆಲ್ಲರೇನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ? ॥ ೧೧ ॥

೨೫೦೦
ಹಳ್ಳ ಮೇರೆದಪ್ಪಿದರೆ ಇಳಿವುದು,
ಹೊಳೆ ಮೇರೆದಪ್ಪಿದರೆ ಇಳಿವುದು,
ಸಮುದ್ರ ಮೇರೆದಪ್ಪಿದರೆ ಇಳಿವುದು,
ಮನ ಮೇರೆದಪ್ಪಿದರೆ ಏರಿ ಇಳಿದು ಕಾಡುತ್ತಿದೆ.
ಅದು ಎಂತೆಂದರೆ:
ಹಳ್ಳ ಮೇರೆದಪ್ಪಿದರೆ ಸಂಗಡಿಕಾಯಿಯಿಂದ ನಡೆವುದು,
ಹೊಳೆ ಮೇರೆದಪ್ಪಿದರೆ ಹರುಗೋಲ ನಡೆವುದು.
ಸಮುದ್ರ ಮೇರೆದಪ್ಪಿದರೆ ಭೈತ್ರ ನಡೆವುದು.
ಮನ ಮೇರೆದಪ್ಪಿದರೆ ಎನ್ನ ಕೊಂಡು ಮುಳುಗಿತ್ತು.
ಈ ಮನ, ವೇದಶಾಸ್ತ್ರ ಆಗಮದ ಕಟ್ಟಳೆಗೆ ನಿಲ್ಲುವುದೆ? ನಿಲ್ಲದು.

ಓದುವುದು ಮನ, ಹೇಳುವುದು ಮನ, ಕೇಳುವುದು ಮನ,
ಕೇಳಿ ನರಕಕ್ಕಿಳಿವುದು, ಕೆಡುವುದು ಮನ.
ಈ ಮನ ದಂದುಗದ ದಾಳಿಯಲ್ಲಿ ನೊಂದು ಬೆಂದೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ. ॥೧೨॥

❖❖

*

ಅನುಬಂಧ

*

ಪರಿಚಯ ಕೋಶ

ಅಕ್ಕಮಹಾದೇವಿ

'ಮಹಾದೇವಿಯಕ್ಕ', 'ಅಕ್ಕಮಹಾದೇವಿ' ಎಂದು ಕರೆಯಿಸಿಕೊಳ್ಳುವ ಈಕೆ, ಅಗ್ರಗಣ್ಯ ವಚನಕಾರ್ತಿ. ಕನ್ನಡದ ಶ್ರೇಷ್ಠ ಕವಯಿತ್ರಿ. ಚೆನ್ನಮಲ್ಲಿಕಾರ್ಜುನನನ್ನು ಪತಿಯೆಂದು ಭಾವಿಸಿ, ಲೌಕಿಕ ಸಂಸಾರವನ್ನು ತಿರಸ್ಕರಿಸಿದ ವಿರಾಗಿಣಿ.

ಕನ್ನಡದ ಅನೇಕ ಕಾವ್ಯ-ಪುರಾಣಗಳು ಈಕೆಯ ಜೀವನಚರಿತ್ರೆಯನ್ನು ವಿವರಿಸುತ್ತವೆ. ಈಕೆಯ ತಂದೆ-ನಿರ್ಮಲಶೆಟ್ಟಿ, ತಾಯಿ-ಸುಮತಿ. ಜನ್ಮಸ್ಥಳ-ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿಗೆ ಸೇರಿದ ಉಡುತಡಿ (ಉಡುಗಣಿ). ಕೌಶಿಕನೆಂಬ ಅರಸ ಈಕೆಯ ಲಾವಣ್ಯಕ್ಕೆ ಮನಸೋತು ಮದುವೆಗೆ ಒತ್ತಾಯಿಸುತ್ತಾನೆ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ಅಕ್ಕ ಕೆಲವು ಶರತ್ತಿನ ಮೇಲೆ ಮದುವೆಯಾಗುತ್ತಾಳೆ. ಆತ ಅದಕ್ಕೆ ವ್ಯತಿರಿಕ್ತನಾಗಿ ನಡೆದುಕೊಳ್ಳಲು, ಅರಮನೆ ತೊರೆದು ಮಲ್ಲಿಕಾರ್ಜುನನ ಮೋಹಿತೆಯಾಗಿ, ಕೇಶಾಂಬರಿಯಾಗಿ ಹೊರಡುತ್ತಾಳೆ. ಕಾಡುಮೇಡುಗಳಲ್ಲಿ ಅನೇಕ ಕಷ್ಟ-ಕೋಟಲೆಗಳಿಗೆ ಗುರಿಯಾಗುತ್ತ ಕಲ್ಯಾಣಕ್ಕೆ ಬಂದು, ಅನುಭವ ಮಂಟಪದಲ್ಲಿ ನೇರಮಾತು-ಧೀರ ವೈಚಾರಿಕ ನಿಲವಿನಿಂದ ಎಲ್ಲರ ಮೆಚ್ಚುಗೆಗೆ ಪಾತ್ರಳಾಗುತ್ತಾಳೆ. ಕೆಲವು ದಿವಸ ಅಲ್ಲಿದ್ದು, ಅನಂತರ ಪ್ರಭುದೇವರ ಆಣತಿಯಂತೆ ಚೆನ್ನಮಲ್ಲಿಕಾರ್ಜುನನ ಸ್ಥಾನವೆನಿಸಿದ ಶ್ರೀಶೈಲದ ಕದಳಿಯಲ್ಲಿ ಐಕ್ಯಳಾಗುತ್ತಾಳೆ.

ಮಹಾದೇವಿಯಕ್ಕ ವಿಚಾರ ಸ್ವಾತಂತ್ರ್ಯದ ಮಹಿಳೆ. ಗಂಡ ಮತ್ತು ವ್ಯಕ್ತಿ ಸ್ವಾತಂತ್ರ್ಯ- ಈ ಎರಡು ಆಯ್ಕೆಗಳಲ್ಲಿ ಇವಳು ಗಂಡನನ್ನು ಧಿಕ್ಕರಿಸಿ ಸ್ವಾತಂತ್ರ್ಯವನ್ನು ಆಯ್ದುಕೊಂಡುದು ಲೋಕದ ಇತಿಹಾಸದಲ್ಲಿಯೇ ಅಪರೂಪದ ಘಟನೆಯೆನಿಸಿದೆ.

ಅಕ್ಕ ಒಬ್ಬ ಶ್ರೇಷ್ಠ ವಚನಕಾರ್ತಿ. 'ಚೆನ್ನಮಲ್ಲಿಕಾರ್ಜುನ' ಅಂಕಿತದಲ್ಲಿ ೪೩೪ ವಚನಗಳು ದೊರೆತಿವೆ. ಅವುಗಳಲ್ಲಿ ಆಕೆಯ ಜೀವನ-ಸಾಧನೆಯ ಎಲ್ಲ ಹಂತದ ಭಾವ ಲಹರಿಗಳು ಜೀವಂತ ಅಭಿವ್ಯಕ್ತಿಯನ್ನು ಪಡೆದಿದೆ. ಜೀವನದ ನೋವು-ನಲಿವು ಮತ್ತು ಆಧ್ಯಾತ್ಮಿಕ ನಿಲುವು ಈ ಅಭಿವ್ಯಕ್ತಿಯ ವೈಶಿಷ್ಟ್ಯಗಳಾಗಿವೆ. ಶರಣ-ಸತಿ, ಲಿಂಗಪತಿ ಭಾವ ಇವುಗಳ ಸ್ಥಾಯಿಯಾಗಿದೆ. ಭಾವತೀವ್ರತೆಯಿಂದಾಗಿ ಭಾವಗೀತೆ ಗುಣವನ್ನು ಹೊಂದಿದ ಇವುಗಳಿಗೆ ವಚನಸಾಹಿತ್ಯದಲ್ಲಿ ಎಲ್ಲ ದೃಷ್ಟಿಯಿಂದಲೂ ಒಂದು ಪ್ರತ್ಯೇಕ ಸ್ಥಾನ ಮೀಸಲಾಗಿದೆ. ಅದನ್ನು ಸಮಕಾಲೀನ ಶರಣರೇ ಗುರುತಿಸಿ ಎತ್ತಿ ಹೇಳಿದ್ದಾರೆ. ವಚನಗಳನ್ನಲ್ಲದೆ ಯೋಗಾಂಗತ್ರಿವಿಧಿ, ಸ್ವರವಚನ, ಸೃಷ್ಟಿಯ ವಚನ, ಮಂತ್ರಗೋಪ್ಯಗಳೆಂಬ

ಲಘುಕೃತಿಗಳನ್ನು ರಚಿಸಿದ್ದರೂ ಅಕ್ಕನ ಸಮಗ್ರ ಅಂತರಂಗ ದರ್ಶನವಾಗುವುದು ಅವಳ ವಚನಗಳಲ್ಲಿಯೇ ಎಂದು ಹೇಳಬಹುದು.

ಅಕ್ಕಮ್ಮ

ಕಾಲ-೧೧೬೦. ಜನ್ಮಸ್ಥಳ - ಏಲೇಶ್ವರ (ಏಲೇರಿ). ಐಕ್ಯಸ್ಥಳ-ಕಲ್ಯಾಣ. ಅಧಿದೈವ- ರಾಮೇಶ್ವರ. 'ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ' ಅಂಕಿತದಲ್ಲಿ ೧೫೪ ವಚನಗಳು ದೊರೆತಿವೆ. ವಚನಸಂಖ್ಯೆಯ ದೃಷ್ಟಿಯಿಂದ ಅಕ್ಕಮಹಾದೇವಿ ಮತ್ತು ನೀಲಮ್ಮನ ನಂತರದ ಸ್ಥಾನ ಈಕೆಗೆ ಸಲ್ಲುತ್ತದೆ. ವ್ರತ, ನೇಮ, ಆಚಾರ, ಶೀಲ - ಇವು ಈಕೆಯ ವಚನಗಳ ಮೂಲ ದ್ರವ್ಯ. ಅವುಗಳಿಗೆ ಪೂರಕವಾಗಿ ಧಾನ್ಯ, ಪಶು-ಪಕ್ಷಿ; ಜನಪದ ನಂಬಿಕೆ, ರೂಢಿ, ವೃತ್ತಿಪರಿಭಾಷೆಗಳಲ್ಲಿ ಆಕಾರ ಪಡೆದ ಈ ವಚನಗಳು ಆ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನೂ ತಿಳಿದುಕೊಳ್ಳಲು ಸಹಾಯಕವಾಗಿವೆ.

ಅಂಗಸೋಂಕಿನ ಲಿಂಗತಂದೆ

ಈತನ ಕಾಲ - ೧೧೬೦. ಹನ್ನೊಂದು ವಚನಗಳು ದೊರೆತಿವೆ. ಅಂಕಿತ - 'ಭೋಗ ಬಂಕೇಶ್ವರಲಿಂಗ'. ವಚನಗಳು ಹೆಚ್ಚು ತಾತ್ವಿಕವಾಗಿದ್ದು, ಆತ್ಮ - ಅರಿವುಗಳಿಗೆ ಸೋಂಕುವ ಸುಗುಣ-ದುರ್ಗುಣದ ಸ್ವರೂಪ, ಸಾಕಾರ-ನಿರಾಕಾರ ಏಕವಾಗಬೇಕೆಂಬ ನಿಲುವು, ಭರಿತಾರ್ಪಣದ ರೀತಿ-ನೀತಿಗಳನ್ನು ತಿಳಿಸಿಕೊಡುತ್ತವೆ.

ಅಗ್ಘವಣಿ ಹಂಪಯ್ಯ

ಈತ ಕುಂತಳದೇಶದ ಮುಕುಂದಪುರ ನಿವಾಸಿ. ಕಾಲ - ೧೩೦೦. ಕಾಯಕ - ಅಗ್ಘವಣಿ (ಶುದ್ಧನೀರು)ಯನ್ನು ತಂದು ಭಕ್ತರಿಗೆ ಪೂರೈಸುವುದು. 'ಹಂಪೆಯ ವಿರುಪ' ಅಂಕಿತದಲ್ಲಿ ಬರೆದ ನಾಲ್ಕು ವಚನಗಳು ದೊರೆತಿವೆ. ಅವುಗಳಲ್ಲಿ ಪಂಚಾಕ್ಷರಿಮಂತ್ರದ ಮಹಿಮೆ, ಸದ್ಭಕ್ತನ ಸ್ಥಿತಿ ನಿರೂಪಿತವಾಗಿವೆ.

ಅಗ್ಘವಣಿ ಹೊನ್ನಯ್ಯ

ಪುಲಿಗೆರೆ (ಇಂದಿನ ಲಕ್ಷ್ಮೇಶ್ವರ) ಈತನ ಸ್ಥಳ. ಸೋಮೇಶ್ವರ ಅಧಿದೈವ. ದಿನಾಲು ತುಂಗಭದ್ರೆಯ ನೀರುತಂದು ದೇವರನ್ನು ಪೂಜಿಸುವುದು ಈತನ ವ್ರತ. ಅಬ್ಬಲೂರಿನಲ್ಲಿ ಜರುಗಿದ ಶಿರಸ್ಸುಪವಾಡ ಪ್ರಸಂಗದಲ್ಲಿ ಏಕಾಂತರಾಮಯ್ಯನ ರುಂಡವನ್ನು ಹರಿವಾಣದಲ್ಲಿಟ್ಟು ಮೆರೆಸಿದವನೀತ. ಉತ್ತರಾರ್ಧ ಜೀವನವನ್ನು ಕಲ್ಯಾಣದಲ್ಲಿ ಕಳೆದನು. ಕಲ್ಲೇದೇವರ ಪುರ (೧೯೭೪), ಮರಡಿಪುರ (೧೧೮೦) ಶಾಸನಗಳಲ್ಲಿ ಈತನ ಉಲ್ಲೇಖಬರುತ್ತದೆ. ಕಾಲ - ೧೧೬೦. 'ಹುಲಿಗೆರೆಯ ವರದ ಸೋಮನಾಥ' ಅಂಕಿತದಲ್ಲಿ ಬರೆದ ನಾಲ್ಕು ವಚನಗಳು ದೊರೆತಿವೆ. ಶಿವಮಹಿಮೆ, ಏಕದೇವನಿಷ್ಠೆ, ಲಿಂಗಾಂಗ ಸಾಮರಸ್ಯದ ರೀತಿಯನರಿಯದ ನರರ ಟೀಕೆ ಇವುಗಳಲ್ಲಿ ಅಭಿವ್ಯಕ್ತವಾಗಿವೆ.

ಅಜಗಣ್ಣ

ಶರಣೆ ಮುಕ್ತಾಯಕ್ಕನ ಸೋದರನೀತ. ಊರು-ಲಕ್ಕುಂಡಿ. ಅಲ್ಲಿನ ಸೋಮೇಶ್ವರ ಈತನ ಆರಾಧ್ಯದೈವ. ಇಷ್ಟಲಿಂಗವನ್ನು ಬಾಯಿಯಲ್ಲಿ ಧರಿಸುತ್ತಿದ್ದ ವಿಶಿಷ್ಟ ಗುಪ್ತಭಕ್ತ. ಭಾವಲಿಂಗಪೂಜೆ ಇವನ ಮನಸ್ಥಿತಿ. ಐಕ್ಯಸ್ಥಲದ ಪ್ರತಿನಿಧಿ ಎಂದು ಅನೇಕ ವಚನಕಾರರು ಈತನನ್ನು ಪ್ರಶಂಸಿಸಿದ್ದಾರೆ. ಮುಕ್ತಾಯಕ್ಕನ ವಚನಗಳಲ್ಲಿ ಈತನ ಘನವ್ಯಕ್ತಿತ್ವ ಮೈವೆತ್ತು ನಿಂತಿದೆ. ಕಾಲ-೧೧೬೦. 'ಮಹಾಘನ ಸೋಮೇಶ್ವರ' ಎಂಬ ಅಂಕಿತದಲ್ಲಿ ಬರೆದ ಈತನ ೧೦ ವಚನಗಳು ದೊರೆತಿವೆ. ಗುರುವಿನ ಲಕ್ಷಣ,

ಗುರು-ಶಿಷ್ಯರ ಸಂಬಂಧದ ಸ್ವರೂಪ, ಶರಣನ ಅನನ್ಯವ್ಯಕ್ತಿತ್ವ ಇವುಗಳಲ್ಲಿ ವ್ಯಕ್ತವಾಗಿದೆ. "ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ ಸಮ" ಎಂದು ಚೆನ್ನಬಸವಣ್ಣ ಹೇಳುವಲ್ಲಿ ಈತನ ವಚನಗಳ ಶ್ರೇಷ್ಠತೆ ಸೂಚಿತವಾಗಿದೆ.

ಅನಾಮಿಕ ನಾಚಯ್ಯ

ಈತನ ಸ್ಥಳ ಮಾರುಡಿಗೆ, 'ಅನಾಮಿಕ' ಎಂಬ ವಿಶೇಷಣ ಈತ ಶೂದ್ರನಿರಬೇಕೆಂದು ಸೂಚಿಸುತ್ತದೆ. ಕಾಯಕ-ಗಾಣಿಗ ವೃತ್ತಿ, ಕಾಲ-೧೧೬೦. 'ನಾಚಯ್ಯ ಪ್ರಿಯ ಚೆನ್ನರಾಮ' ಅಂಕಿತದಲ್ಲಿ ಐದು ವಚನಗಳು ದೊರೆತಿವೆ. ಬೆಡಗಿನ ಪರಿಭಾಷೆಯ ಅವುಗಳಲ್ಲಿ ತಾತ್ವಿಕ ವಿಷಯದ ಪ್ರತಿಪಾದನೆಯಿದೆ.

ಅಪ್ಪಿದೇವಯ್ಯ

ಕಾಲ-೧೬೫೦. 'ಈಶ್ವರೀಯ ವರದ ಮಹಾಲಿಂಗ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ನಾನೆಂಬುದನ್ನು ಅಳಿಯುವ, ಗುರು-ಲಿಂಗ-ಜಂಗಮ ಪಾದೋದಕ-ಪ್ರಸಾದವನೊಲ್ಲೆನೆಂದು ನಿರಾಕರಿಸುವ ದಿಟ್ಟನಿಲವು ಇದರಲ್ಲಿ ಸುಂದರವಾಗಿ ವ್ಯಕ್ತವಾಗಿದೆ.

ಅಂಬಿಗರ ಚೌಡಯ್ಯ

ಬಸವಯುಗದ ನಿಷ್ಠುರ, ನಿರ್ಭೀತ ಶರಣನಾದ ಈತನ ಕಾಲ-೧೧೬೦. ದೋಣಿ ನಡೆಸುವ ಅಂಬಿಗವೃತ್ತಿಯನ್ನು ಕೈಕೊಂಡಿದ್ದನೆಂದು ಹೆಸರಿನ ಜೊತೆಯ ವಿಶೇಷಣದಿಂದ ಮತ್ತು ವಚನಗಳಲ್ಲಿ ಬಳಸಿದ ವೃತ್ತಿಪರಿಭಾಷೆಯಿಂದ ತಿಳಿದುಬರುತ್ತದೆ. ತನ್ನ ಹೆಸರನ್ನೇ ಅಂಕಿತವನ್ನಾಗಿ ಮಾಡಿಕೊಂಡು ರಚಿಸಿದ ಈತನ ೨೭೮ ವಚನಗಳು ದೊರೆತಿವೆ. ಸಮಾಜ ವಿಡಂಬನೆ ಇವುಗಳ ಬಹುಮುಖ್ಯ ಅಂಶ. ಜಾತೀಯತೆ, ಡಾಂಭಿಕ ಆಚರಣೆಗಳನ್ನು ಈತ ಕಟುವಾಗಿ ಟೀಕಿಸುತ್ತಾನೆ. ಕೆಲವು ವಚನಗಳಲ್ಲಿ ಧಾರ್ಮಿಕ ತತ್ವಜಿಜ್ಞಾಸೆಗೂ ಇಂಬು ದೊರೆತಿದೆ.

ಅಮರಗುಂಡದ ಮಲ್ಲಿಕಾರ್ಜುನ

ಹೆಸರಿನ ಹಿಂದಿರುವ ವಿಶೇಷಣ 'ಅಮರಗುಂಡ' ಅಂದರೆ ಇಂದಿನ ತುಮಕೂರು ಜಿಲ್ಲೆಯ ಗುಬ್ಬಿ ಈತನ ಸ್ಥಳವಾಗಿರಬೇಕು. ಕಾಲ-೧೧೬೦. 'ಮಾಗುಡದ ಮಲ್ಲಿಕಾರ್ಜುನ' ಅಂಕಿತದಲ್ಲಿ ಎರಡು ವಚನಗಳು ದೊರೆತಿವೆ. ಒಂದರಲ್ಲಿ ಕಾಯವೆಂಬ ಪಟ್ಟಣವನ್ನು ರಕ್ಷಿಸಿಕೊಳ್ಳುವ ರೀತಿಯನ್ನು, ಮತ್ತೊಂದರಲ್ಲಿ ಲಿಂಗದ ಮಹಿಮೆಯನ್ನು ಹೇಳಲಾಗಿದೆ. ಎರಡರಲ್ಲಿಯೂ ಅನುಭಾವ, ಆಧ್ಯಾತ್ಮ ಕೆನೆಗಟ್ಟಿದೆ.

ಅಮುಗಿದೇವಯ್ಯ

ಈತನ ಸ್ಥಳ ಸೊಲ್ಲಾಪುರ. ಕಾಯಕ-ಬಟ್ಟೆ ನೇಯುವುದು. ಹೆಂಡತಿ-ವರದಾನಿ. ಕಾಲ-೧೧೬೦. ಮಹಾರಾಷ್ಟ್ರದ ಪುಳಜೆಯಲ್ಲಿ ಈತನನ್ನು ಕುರಿತ ಶಾಸನಗಳು ದೊರೆತಿವೆ. ಒಂದು ಶಾಸನ ಯಾದವ ಚಕ್ರವರ್ತಿ ಸಿಂಘಣನಿಂದ ಅಮುಗಿದೇವ ಪೂಜಿತನಾದುದನ್ನು ತಿಳಿಸಿದರೆ, ಮತ್ತೊಂದು 'ಮಹೇಶ್ವರಗಣ ಕುಲಾನ್ವಯ ದಿವಾಕರ, ಶರಣ ಸಂತಾನ, ಸಿದ್ಧಕುಲಾರ್ಣವ ಪ್ರವರ್ಧನ ಸುಧಾಕರ' ಎಂದು ಇವನನ್ನು ಹೊಗಳಿದೆ. ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನನಿಂದ ತನ್ನ ಗೃಹೋಪಕರಣದ ಗಂಟನ್ನು ಹೊರಿಸಿಕೊಂಡು ಹೋಗಿ, ಸಿದ್ಧರಾಮನಿಗೆ ಬುದ್ಧಿಕಲಿಸಿದ ಕಥೆ, ಕಾವ್ಯ-ಪುರಾಣಗಳಲ್ಲಿ ಪ್ರಸಿದ್ಧವಾಗಿದೆ.

'ಸಿದ್ಧಸೋಮನಾಥ' ಅಂಕಿತದಲ್ಲಿ ಈತ ರಚಿಸಿದ ೩೦ ವಚನಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಈತನ ಇಷ್ಟಲಿಂಗನಿಷ್ಠೆ, ಶರಣತತ್ವ ನಿರೂಪಣೆ ಕಂಡುಬರುತ್ತವೆ.

ಅಮುಗೆ ರಾಯಮ್ಮ

ಈಕೆ ಅಮುಗಿದೇವಯ್ಯಗಳ ಪತ್ನಿ. ಇವಳಿಗೆ 'ವರದಾನಿಯಮ್ಮ' ಎಂಬ ಬೇರೊಂದು ಹೆಸರಿರುವಂತೆ ತಿಳಿದುಬರುತ್ತದೆ. ಮೂಲತಃ ಸೊಲ್ಲಾಪುರದವಳಾದ ಈಕೆ ಪತಿಯೊಂದಿಗೆ ಕಲ್ಯಾಣಕ್ಕೆ, ಬಳಿಕ ಪುಳುಜೆಗೆ ಬಂದು ಅಲ್ಲಿಯೇ ಐಕ್ಯವಾಗುತ್ತಾಳೆ. ಇವಳ ಹೆಸರಿನಲ್ಲಿ ೧೧೫ ವಚನಗಳು ಸಿಗುತ್ತವೆ. ಮುದ್ರಿಕೆ 'ಅಮುಗೇಶ್ವರಲಿಂಗ'. ಈ ವಚನಗಳು ಆಚಾರಪ್ರಧಾನವಾಗಿವೆ. ತೀಕ್ಷ್ಣ ಸಮಾಜ ವಿಮರ್ಶೆ ಎದ್ದು ಕಾಣುತ್ತದೆ. ಇವಳ ಕಾಲ ಸು. ೧೧೬೦.

ಅರಿವಿನ ಮಾರಿತಂದೆ

ಕಾಲ-೧೩೦೦. 'ಸದಾಶಿವ ಮೂರ್ತಿಲಿಂಗ' ಅಂಕಿತದಲ್ಲಿ ೩೪೮ ವಚನಗಳು ದೊರೆತಿವೆ. ಹೆಸರಿಗೆ ಸೇರಿದ ವಿಶೇಷಣದಂತೆ ಇಲ್ಲಿ 'ಅರಿವಿಗೆ' ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ತತ್ತ್ವಪ್ರಧಾನವಾದ ಈತನ ವಚನಗಳಲ್ಲಿ ಗುರು-ಲಿಂಗ-ಜಂಗಮ-ಪ್ರಸಾದ, ಶೈವ-ವೀರಶೈವ ಕುರಿತ ಸಂಗತಿಗಳು ಚರ್ಚಿತವಾಗಿವೆ. ಹೆಚ್ಚಿನ ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ.

ಅಲ್ಲಮಪ್ರಭು

ಶರಣ ಚಳವಳಿಯ ನೇತಾರರಲ್ಲಿ ಅಲ್ಲಮಪ್ರಭುವಿನದು ಬಹು ದೊಡ್ಡ ಹೆಸರು. ಆಧ್ಯಾತ್ಮ, ಅನುಭಾವ ಕ್ಷೇತ್ರದ ಉನ್ನತ ವ್ಯಕ್ತಿಯಾದ ಈತನ ಜೀವನ-ಸಾಧನೆ ಕುರಿತು ಅನೇಕ ಕಾವ್ಯಗಳು ಹುಟ್ಟಿಕೊಂಡಿದ್ದು, ಅವು ಹರಿಹರನ ಸಂಪ್ರದಾಯ, ಚಾಮರಸನ ಸಂಪ್ರದಾಯವೆಂಬ ಎರಡು ಶಾಖೆಗಳಾಗಿ ಬೆಳೆದಿವೆ.

ಅಲ್ಲಮನ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವಿ. ತಂದೆ-ನಿರಹಂಕಾರ, ತಾಯಿ-ಸುಜ್ಞಾನಿ. ದೇವಸ್ಥಾನದಲ್ಲಿ ಮದ್ದಳೆ ನುಡಿಸುವುದು ಈತನ ಕಾಯಕ. ಈ ಕಲಾಪ್ರಾವಿಣ್ಯಕ್ಕೆ ಮೆಚ್ಚಿ ಕಾಮಲತೆ ಎಂಬ ಹೆಣ್ಣು ಇವನನ್ನು ವರಿಸುತ್ತಾಳೆ. ಹರಿಹರನ ಪ್ರಕಾರ ಸತಿಯ ಅಕಾಲಿಕ ಮರಣದಿಂದಾಗಿ ಮುಂದೆ ಈತನ ವೈರಾಗ್ಯಪರ ಜೀವನ ಆರಂಭವಾಗುತ್ತದೆ. ಚಾಮರಸನ ಪ್ರಕಾರ ಈತನ ಕಲಾ ಪ್ರಾವಿಣ್ಯಕ್ಕೆ ಮೆಚ್ಚಿ ಬಂದ ಮಾಯಾದೇವಿಯನ್ನು ನಿರಾಕರಿಸಿ, ಮಾಯಾಕೋಲಾಹಲನೆನಿಸುತ್ತಾನೆ.

ಅನಿಮಿಷದೇವ ಅಲ್ಲಮನ ಗುರು. ಈತನ ದರ್ಶನದಿಂದ ಪ್ರಭು ಅನುಭಾವಿಯಾಗಿ ಬೆಳೆಯುತ್ತಾನೆ. ಅನಂತರ ಚರಜಂಗಮನಾಗಿ ಲೋಕಸಂಚಾರ ಕೈಕೊಳ್ಳುತ್ತಾನೆ. ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ, ಗೋರಕ್ಷ ಮೊದಲಾದ ಸಾಧಕರ ಮನದ ಕಾಳಿಕೆಯನ್ನು ಕಳೆದು, ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಾನೆ. ಬಸವಣ್ಣನವರ ಮಹಾ ಆಂದೋಲನವನ್ನು ನೋಡಲು ಸಿದ್ಧರಾಮನನ್ನು ಕರೆದುಕೊಂಡು ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಅನುಭವ ಮಂಟಪದ ಅಧ್ಯಕ್ಷನಾಗಿ, ಆಧ್ಯಾತ್ಮ ಚಿಂತನೆಗೆ ಮಾರ್ಗದರ್ಶನ ನೀಡುತ್ತಾನೆ. ಕಲ್ಯಾಣಕ್ರಾಂತಿಯು ಘಟಿಸುವ ಮೊದಲೇ ಶ್ರೀಶೈಲದತ್ತ ನಡೆದು, ಅಲ್ಲಿ ಐಕ್ಯನಾಗುತ್ತಾನೆ.

'ಗುಹೇಶ್ವರ' ಅಂಕಿತದಲ್ಲಿ ವಚನ, ಸ್ವರವಚನ, ಸೃಷ್ಟಿಯ ವಚನ, ಮಂತ್ರಗೋಪ್ಯಗಳನ್ನು ಬರೆದಿದ್ದಾನೆ. ಸದ್ಯ ೧೬೪೫ ವಚನಗಳು ದೊರೆತಿವೆ. ಆಧ್ಯಾತ್ಮ, ಅನುಭಾವ ಅವುಗಳ ಕೇಂದ್ರ ವಸ್ತು. ಅವುಗಳನ್ನು ಹೆಚ್ಚಾಗಿ ಬೆಡಗಿನ ಪರಿಭಾಷೆಯಲ್ಲಿ ಅಭಿವ್ಯಕ್ತಿಪಡಿಸಿರುವುದು ವಿಶೇಷ.

ಅವಸರದ ರೇಕಣ್ಣ

ಕಾಲ-೧೧೬೦. 'ಸದ್ಯೋಜಾತಲಿಂಗ' ಎಂಬ ಅಂಕಿತದಲ್ಲಿ ೧೦೫ ವಚನಗಳು ದೊರೆತಿವೆ. ತತ್ವ-ಅನುಭಾವ-ಬೆಡಗು ಅವುಗಳಲ್ಲಿ ಮುಪ್ಪುರಿಗೊಂಡಿವೆ.

ಆದಯ್ಯ

ಈತ ಮೂಲತಃ ಸೌರಾಷ್ಟ್ರಕ್ಕೆ ಸೇರಿದವನು. ವ್ಯಾಪಾರ ನಿಮಿತ್ತ ಪುಲಿಗೆರೆಗೆ ಬಂದು, ಜೈನಕನ್ಯೆ ಪದ್ಮಾವತಿಯನ್ನು ಪ್ರೇಮಿಸಿ, ಮದುವೆಯಾಗಿ, ಮಾವನೊಂದಿಗೆ ವಾದಕ್ಕೆ ನಿಂತು, ಸೌರಾಷ್ಟ್ರದಿಂದ ಸೋಮೇಶ್ವರನನ್ನು ಕರೆತಂದು, ಪುಲಿಗೆರೆ (ಲಕ್ಷ್ಮೇಶ್ವರ)ಯ ಸುರಹೊನ್ನೆ ಬಸದಿಯಲ್ಲಿ ಸ್ಥಾಪಿಸಿದನೆಂದು ಆದಯ್ಯನ ರಗಳೆ, ಸೋಮನಾಥ ಚಾರಿತ್ರ ಮೊದಲಾದ ಕಾವ್ಯಗಳಿಂದ ತಿಳಿದುಬರುತ್ತದೆ. ಕಾಲ-ಕ್ರಿ.ಶ. ೧೧೬೫.

'ಸೌರಾಷ್ಟ್ರ ಸೋಮೇಶ್ವರ' ಅಂಕಿತದಲ್ಲಿ ವಚನ ಮತ್ತು ಸ್ವರವಚನಗಳನ್ನು ರಚಿಸಿದ್ದಾನೆ. ४೦೩ ವಚನಗಳು ದೊರೆತಿವೆ. ಶರಣಧರ್ಮತತ್ವಗಳ ವಿವೇಚನೆ ಅವುಗಳಲ್ಲಿ ವ್ಯಾಪಕವಾಗಿ ನಡೆದಿದೆ. ಸಾಹಿತ್ಯಿಕ ಸತ್ವ, ತಾತ್ವಿಕ ಪ್ರೌಢಿಮೆ ಎರಡೂ ಈತನ ವಚನಗಳಲ್ಲಿ ಮೇಳೈಸಿರುವುದು ವಿಶೇಷವೆನಿಸಿದೆ.

ಆನಂದಯ್ಯ

ಕಾಲ-೧೬೫೦. 'ಆನಂದ ಸಿಂಧು ರಾಮೇಶ್ವರ' ಅಂಕಿತದಲ್ಲಿ ಎರಡು ವಚನಗಳು ದೊರೆತಿವೆ. ಇವುಗಳಲ್ಲಿ ವೈರಾಗ್ಯಪರ ಧೋರಣೆ ವ್ಯಕ್ತವಾಗಿದೆ.

ಆಯ್ದಕ್ಕಿ ಮಾರಯ್ಯ

ಈತನ ಸ್ಥಳ ರಾಯಚೂರ ಜಿಲ್ಲೆಯ ಲಿಂಗಸೂರ ತಾಲೂಕಿನ ಅಮರೇಶ್ವರ. ಸತಿ-ಲಕ್ಕಮ್ಮ. ಅಧಿದೈವ ಅಮರೇಶ್ವರ. ಕಾಲ-೧೧೬೦. ಕಲ್ಯಾಣಕ್ಕೆ ಬಂದ ಈತನ ಕಾಯಕ ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯುವುದು. ಕಾಯಕ-ದಾಸೋಹನಿಷ್ಠ ಶರಣರಲ್ಲಿ ಅಗ್ರಗಣ್ಯ. 'ಕಾಯಕವೇ ಕೈಲಾಸ' ಎಂಬುದು ಇವನ ಬದುಕಿನ ಮುಖ್ಯ ಸಿದ್ಧಾಂತ. 'ಅಮರೇಶ್ವರಲಿಂಗ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಸದ್ಯ ದೊರೆತ ೩೨ ವಚನಗಳಲ್ಲಿ ಕಾಯಕತತ್ವದ ವಿಚಾರವೇ ಪ್ರಧಾನವಾಗಿದೆ.

ಆಯ್ದಕ್ಕಿ ಲಕ್ಕಮ್ಮ

ಆಯ್ದಕ್ಕಿ ಮಾರಯ್ಯನ ಪತ್ನಿ. ಮೂಲತಃ ರಾಯಚೂರ ಜಿಲ್ಲೆ ಲಿಂಗಸೂರ ತಾಲೂಕಿನ ಅಮರೇಶ್ವರ ಗ್ರಾಮಕ್ಕೆ ಸೇರಿದ ಈ ದಂಪತಿಗಳು ಬಸವಣ್ಣನವರ ಕೀರ್ತಿವಾರ್ತೆ ಕೇಳಿ ಕಲ್ಯಾಣಕ್ಕೆ ಬಂದು, ಅಕ್ಕಿಯನ್ನು ಆಯುವ ಕಾಯಕ ಕೈಕೊಳ್ಳುತ್ತಾರೆ. ಕಾಲ - ೧೧೬೦. ಇಷ್ಟದೈವ-ಅಮರೇಶ್ವರ. 'ಮಾರೇಶ್ವರಪ್ರಿಯ ಅಮರೇಶ್ವರಲಿಂಗ' ಅಂಕಿತದಲ್ಲಿ ಬರೆದ ೨೫ ವಚನಗಳು ಈಗ ದೊರೆತಿವೆ. ಎಲ್ಲವೂ ಕಾಯಕ ಮತ್ತು ದಾಸೋಹದ ಮಹಿತಿಯನ್ನು ಎತ್ತಿ ಹೇಳುತ್ತವೆ. 'ಶೂನ್ಯಸಂಪಾದನೆ'ಯಲ್ಲಿ ಈ ದಂಪತಿಗಳ ಕಾಯಕನಿಷ್ಠೆಯ ಕಥೆ ತುಂಬ ಸೊಗಸಾಗಿ ನಿರೂಪಿತವಾಗಿದೆ.

ಉಗ್ಘಡಿಸುವ ಗಬ್ಬಿದೇವಯ್ಯ

ಬಸವಣ್ಣನ ಮಹಾಮನೆಯ ಬಾಗಿಲು ಕಾಯುವ ಕಾಯಕ ಕೈಕೊಂಡಿದ್ದ ಈತನ ಕಾಲ - ೧೧೬೦. 'ಕೂಡಲಸಂಗಮದೇವರಲ್ಲಿ ಬಸವಣ್ಣ ಸಾಕ್ಷಿಯಾಗಿ' ಎಂಬ ಅಂಕಿತದಲ್ಲಿ ರಚಿಸಿದ ಹತ್ತು ವಚನಗಳು ದೊರೆತಿವೆ. ತನ್ನ ಕಾಯಕದ ಪರಿಭಾಷೆಯನ್ನು ಬಳಸಿ ತುಂಬ ಸರಸವಾಗಿ-ಸರಳವಾಗಿ ರಚಿಸಿದ

ಇವುಗಳಲ್ಲಿ ಹಾಸ್ಯಪ್ರಜ್ಞೆ, ಕಾಯಕನಿಷ್ಠೆ, ಬಸವಭಕ್ತಿ ಪ್ರಕಟವಾಗಿವೆ.

ಉಪ್ಪರ ಗುಡಿಯ ಸೋಮಿದೇವಯ್ಯ

ಕಾಲ-೧೧೬೦. 'ಗಾರುಡೇಶ್ವರ ಲಿಂಗ' ಅಂಕಿತದಲ್ಲಿ ೧೧ ವಚನಗಳು ದೊರೆತಿವೆ. ಕಾಯ-ಆತ್ಮಗಳ ಸಂಬಂಧ, ಪ್ರಸಾದ ಮಹತ್ವ, ಕ್ರಿಯಾ-ಜ್ಞಾನ ಸಾಮರಸ್ಯ ಮೊದಲಾದ ವಿಷಯಗಳು ಅವುಗಳಲ್ಲಿ ಅಭಿವ್ಯಕ್ತವಾಗಿವೆ.

ಉರಿಲಿಂಗದೇವ

ಈತ 'ಶರಣಸತಿ ಲಿಂಗಪತಿ' ಭಾವದ ವಚನಕಾರ. 'ಅವಸೆ ಕಂಧಾರ' ಎಂಬುದು ಈತನ ಸ್ಥಳ. ಕಾಲ-೧೧೬೦. ಪುಲಿಗೆರೆಯ ಮಹಾಲಿಂಗದೇವನ ಗುರುಪರಂಪರೆಗೆ ಸೇರಿದ ಶಿವಲೆಂಕ ಮಂಚಣ್ಣನ ಶಿಷ್ಯ. ಈತನ ಲಿಂಗನಿಷ್ಠೆಯನ್ನು ಪರೀಕ್ಷಿಸಲೆಂದು ಪರವಾದಿಗಳು ಗುಡಿಸಲಿಗೆ ಬೆಂಕಿ ಹಚ್ಚಿದರೂ ವಿಚಲಿತನಾಗದೆ ಇಷ್ಟಲಿಂಗ ಪೂಜೆಯಲ್ಲಿ ಮೈಮರೆತು ಮಹಿಮೆ ಮೆರೆಯುತ್ತಾನೆ. ವಿದ್ವಾಂಸನಾದ ದಲಿತ ವಚನಕಾರ ಉರಿಲಿಂಗಪೆದ್ದಿ ಈತನ ಶಿಷ್ಯ.

ತನ್ನ ಹೆಸರನ್ನೇ ಅಂಕಿತವನ್ನಾಗಿ ಮಾಡಿಕೊಂಡು ಉರಿಲಿಂಗದೇವ ರಚಿಸಿದ ೪೮ ವಚನಗಳು ದೊರೆತಿವೆ. ಎಲ್ಲವೂ ಲಿಂಗವಿಕಳಾವಸ್ಥೆಯನ್ನು ಪ್ರಕಟಿಸುತ್ತವೆ. ಸರಳ ಭಾಷೆ, ಮಧುರ ಭಾವ, ಆತ್ಮೀಯ ಶೈಲಿ ಅವುಗಳ ವೈಶಿಷ್ಟ್ಯವೆನಿಸಿದೆ.

ಉರಿಲಿಂಗಪೆದ್ದಿ

ಮೂಲತಃ ಚೋರವೃತ್ತಿಯವನಾಗಿದ್ದ ಈತ ಉರಿಲಿಂಗದೇವನ ಶಿಷ್ಯತ್ವ ವಹಿಸಿ, ಘನ ವಿದ್ವಾಂಸನೂ, ಅನುಭಾವಿಯೂ ಆಗಿ ಉತ್ತಮ ವಚನಗಳನ್ನು ರಚಿಸಿದ್ದಾನೆ. ಕಾಳವ್ವೆ ಈತನ ಸತಿ. ಕಾಲ-೧೧೬೦. ಉರಿಲಿಂಗದೇವರ ನಂತರ ಪೀಠವನ್ನು ಏರಿದ ಪೆದ್ದಣ್ಣ ಜಾತಿಯಿಂದ ಅಸ್ಪೃಶ್ಯನೆಂದು ತಿಳಿದುಬರುವುದರಿಂದ, ಈ ಪೀಠಾರೋಹಣ ಒಂದು ಕ್ರಾಂತಿಕಾರಿ ಘಟನೆಯೆಂದೇ ಹೇಳಬೇಕು. ಅಸ್ಪೃಶ್ಯ ಲಿಂಗಾಯತರ ಅನೇಕ ಮಠಗಳು ಕರ್ನಾಟಕದಲ್ಲಿ ಇದ್ದು, ಅವುಗಳನ್ನು ಉರಿಲಿಂಗಪೆದ್ದಿ ಮಠಗಳೆಂದು ಕರೆಯುತ್ತಾರೆ.

'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ' ಅಂಕಿತದಲ್ಲಿ ಈತ ರಚಿಸಿದ ೩೬೬ ವಚನಗಳು ದೊರೆತಿವೆ. ಅವುಗಳಲ್ಲಿ ಗುರುಮಹಿಮೆಗೆ ಅಗ್ರಸ್ಥಾನ ಸಂದಿದೆ. ಜೊತೆಗೆ ಲಿಂಗ-ಜಂಗಮ ತತ್ವದ ವಿಚಾರ, ಕುಲ-ಜಾತಿ ಸಮಸ್ಯೆ ನಿರೂಪಿತವಾಗಿವೆ. ವಚನಗಳ ಮಧ್ಯದಲ್ಲಿ ಬಳಸಿದ ಹೇರಳ ಸಂಸ್ಕೃತ ಉದ್ಧರಣೆಗಳು ಈತನ ಪಾಂಡಿತ್ಯಕ್ಕೆ ನಿದರ್ಶನವೆನಿಸಿವೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಶೂದ್ರಮೂಲದ ವಚನಕಾರ ಉರಿಲಿಂಗಪೆದ್ದಿಯ ಸತಿ ಎಂಬುದನ್ನು ಬಿಟ್ಟರೆ ಇವಳ ಜೀವನಕ್ಕೆ ಸಂಬಂಧಿಸಿದ ಮತ್ತಾವ ವಿವರಗಳೂ ದೊರಕುವುದಿಲ್ಲ. ಕಾಲ-೧೧೬೦. ಸದ್ಯ ಈಕೆ ರಚಿಸಿದ ೧೨ ವಚನಗಳು ದೊರೆತಿವೆ. 'ಉರಿಲಿಂಗಪೆದ್ದಿಗಳರಸ' ಎಂಬುದು ಅವುಗಳ ಅಂಕಿತ. ಭಕ್ತನ ಲಕ್ಷಣ, ವ್ರತಾಚರಣೆಯ ಮಹತ್ವ, ಪ್ರಸಾದದ ಮಹಿಮೆ, ಕಾಯಕನಿಷ್ಠೆ, ಕುಲ-ಜಾತಿಗಳ ಬಗೆಗೆ ನಿಷ್ಠುರ ವಿಡಂಬನೆ,

ಈಕೆಯ ವಚನಗಳಲ್ಲಿ ತೋರುವ ಮುಖ್ಯ ಅಂಶಗಳು.

ಉಳಿಯುಮೇಶ್ವರ ಚಿಕ್ಕಣ್ಣ

ಈತ ರಾಯಚೂರ ಜಿಲ್ಲೆಯ ಸಿಂಧನೂರ ತಾಲೂಕಿನ ದೇವರಗುಡಿ ಗ್ರಾಮಕ್ಕೆ ಸೇರಿದವನು. ಇಲ್ಲಿನ ದೇವರು ಹುಳಿಯಮೇಶ್ವರ ಅಂದರೆ ಇಂದಿನ 'ಮಲ್ಲಿಕಾರ್ಜುನ' ಈತನ ಅಧಿದೈವ. ಕಲ್ಲೇದೇವರಪುರ ಶಾಸನ(೧೨೬೪)ದಲ್ಲಿ ಬರುವ 'ಚಿಕ್ಕ ' ಎಂಬುದು ಈ ಚಿಕ್ಕಯ್ಯನ ಹೆಸರೇ ಆಗಿರಬೇಕು. ದೇವರಗುಡಿ ಗ್ರಾಮದ ಶಾಸನಗಳಿಂದ ಈತನು ಮೂಲತಃ ಕಾಳಾಮುಖ ಶೈವ ಆಚಾರ್ಯನೆಂದು ತಿಳಿದುಬರುತ್ತದೆ. 'ಉಳಿಯುಮೇಶ್ವರ' ಅಂಕಿತದಲ್ಲಿ ಈಗ ಈತನ ೧೨ ವಚನಗಳು ದೊರೆತಿವೆ. ಸಂಸಾರಹೇಯ, ಶರಣರ ಸ್ತುತಿ, ನಿರ್ವಾಣದ ಬಯಕೆ, ಭೃತ್ಯಭಾವ, ಉದಾರ ದೃಷ್ಟಿ - ಇವುಗಳಲ್ಲಿ ಕಂಡುಬರುವ ಮುಖ್ಯವಿಷಯಗಳಾಗಿವೆ.

ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ

ಈತನಿಗೆ ಮುತ್ತಣ್ಣ ಎಂದೂ ಕರೆಯಲಾಗುತ್ತದೆ. ಕಾಲ - ೧೧೬೦. ಕಾಯಕ - ರಾತ್ರಿ ಪ್ರಹರಿ ಮಾಡುವುದು. 'ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ' ಎಂಬುದು ಅಂಕಿತ. ಹನ್ನೊಂದು ವಚನಗಳು ದೊರೆತಿವೆ. ಎಲ್ಲವೂ ಎಚ್ಚರಿಕೆ ಕಾಯಕದ ಪರಿಭಾಷೆಯನ್ನು ಒಳಗೊಂಡು ಆಧ್ಯಾತ್ಮವನ್ನು ಬೋಧಿಸುತ್ತವೆ.

ಎಡೆಮಠನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

ಚೋಳಮಂಡಲದ ಕಾಂಚಿನಗರದ ಎಡೆಮಠದ ನಾಗಿದೇವ ಈಕೆಯ ಪತಿ. ಆತನೊಡನೆ ಕಲ್ಯಾಣದಲ್ಲಿ ಬಂದು ನೆಲೆಸುತ್ತಾಳೆ. ಕಾಲ - ೧೧೬೦. 'ನಿಜಗುಣೇಶ್ವರಲಿಂಗ' ಅಂಕಿತದಲ್ಲಿ ಈಕೆಯ ಕೇವಲ ಒಂದು ವಚನ ದೊರೆತಿದೆ. ಅದರಲ್ಲಿ ವ್ರತದ ಮಹತ್ವ, ವ್ರತಭ್ರಷ್ಟನ ನಿಂದೆ ವ್ಯಕ್ತವಾಗಿದೆ.

ಎಲೆಗಾರ ಕಾಮಣ್ಣ

ಎಲೆ ಮಾರುವ ಕಾಯಕ ಕೈಕೊಂಡ ಈತನ ಕಾಲ - ೧೪೦೦. 'ಆತುರೇಶ್ವರಲಿಂಗ' ಎಂಬ ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ವೃತ್ತಿಪರಿಭಾಷೆಯನ್ನು ಬಳಸಿಕೊಂಡ ಇದರಲ್ಲಿ ವ್ರತನಿಷ್ಠೆಯನ್ನು ಎತ್ತಿ ಹೇಳಲಾಗಿದೆ.

ಏಕಾಂತ ರಾಮಿತಂದೆ

ಹರಿಹರನ ರಗಳೆ ಮತ್ತು ಅಬ್ಬಲೂರ ಶಾಸನಗಳಲ್ಲಿ ಉಲ್ಲೇಖಿತನಾದ ಈತನ ಸ್ಥಳ-ಕಲಬುರ್ಗಿ ಜಿಲ್ಲೆಯ ಆಳಂದ ಎಂಬ ಗ್ರಾಮ. ತಂದೆ-ಪುರುಷೋತ್ತಮಭಟ್ಟ; ತಾಯಿ-ಸೀತಮ್ಮ. ಅಬ್ಬಲೂರು-ಕಾರ್ಯಕ್ಷೇತ್ರ. ಕಾಲ-೧೧೬೦. ಪುಲಿಗೆರೆಯ ಸೋಮೇಶ್ವರನು ಕನಸಿನಲ್ಲಿ ಬಂದು ಹೇಳಿದ ಮೇರೆಗೆ ಪರಸಮಯಿಗಳನ್ನು ಜಯಿಸಲು ಅಬ್ಬಲೂರಿಗೆ ಬರುತ್ತಾನೆ. ಜೈನರೊಂದಿಗೆ ವಾದಕ್ಕೆ ನಿಂತು, ಅಲ್ಲಿಯ ಬ್ರಹ್ಮೇಶ್ವರದೇವಾಲಯದಲ್ಲಿ ಶಿರಸ್ಸು ಪವಾಡ ಮೆರೆದು, ಬಸದಿಯಲ್ಲಿ ಸೋಮೇಶ್ವರನನ್ನು ಸ್ಥಾಪಿಸುತ್ತಾನೆ. ಈ ಸನ್ನಿವೇಶ ಅಬ್ಬಲೂರಿನ ಶಾಸನದಲ್ಲಿ ವರ್ಣಿತವಾಗಿದೆ. ಇದರ ವಿವಿಧ ಶಿಲ್ಪಗಳನ್ನು ಸೋಮೇಶ್ವರದೇವಾಲಯದ ಗೋಡೆಯ ಮೇಲೆ ಕೆತ್ತಲಾಗಿದೆ.

ಈತನ ಏಳು ವಚನಗಳು ದೊರೆತಿದ್ದು, 'ಎನ್ನಯ್ಯ ಚೆನ್ನರಾಮ' ಅಂಕಿತವನ್ನು ಹೊಂದಿವೆ. ಗುರುಸ್ಥಲ ಸಂಬಂಧ, ಕಾಯ-ಜೀವ ಭೇದ, ನಿತ್ಯಮುಕ್ತನ ಸ್ಥಿತಿ, ಮನಹೀನ ವಿರಕ್ತನ ವಿಡಂಬನೆ ಇವುಗಳಲ್ಲಿ ಮೂಡಿನಿಂತಿದೆ.

ಏಲೇಶ್ವರ ಕೇತಯ್ಯ

ಈತ ಕಲಬುರ್ಗಿ ಜಿಲ್ಲೆಯ ಏಲೇರಿ (ಏಲೇಶ್ವರ) ಗ್ರಾಮಕ್ಕೆ ಸೇರಿದವನು. ಹೆಂಡತಿ- ಸಾಯಿದೇವಿಯಮ್ಮ. ಕಾಲ-೧೧೬೬. ಕಾಯಕ-ಬೇಸಾಯ. 'ಆಚಾರ ತನುವಿಗಾಶ್ರಯ, ಅರಿವು ಮನಕಾಶ್ರಯ' ಎಂಬ ನೀತಿಯಿಂದ ಬಾಳಿದವ. 'ಏಲೇಶ್ವರಲಿಂಗ' ಅಂಕಿತದಲ್ಲಿ ೭೪ ವಚನಗಳು ದೊರೆತಿವೆ. ಎಲ್ಲವೂ ಹೆಚ್ಚಾಗಿ ವ್ರತ - ನೇಮ - ಶೀಲ -ಆಚಾರಗಳ ಮಹತಿಯನ್ನೇ ಹೇಳುತ್ತವೆ.

ಒಕ್ಕಲಿಗ ಮುದ್ದಣ್ಣ

ಜೋಳದಹಾಳೆಂಬ ಗ್ರಾಮಕ್ಕೆ ಸೇರಿದವನಾದ ಈತ ಬೇಸಾಯ ವೃತ್ತಿಯನ್ನು ಕೈಕೊಂಡು ಬದುಕು ಸಾಗಿಸಿದವನು. ಕಾಲ - ೧೧೬೦. ಜಂಗಮದಾಸೋಹ ನಡೆಸುವುದು ಈತನ ನಿತ್ಯವ್ರತ. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡದೆ ಆ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುತ್ತಾನೆ. 'ಕಾಮಭೀಮ ಜೀವಧನದೊಡೆಯ' ಅಂಕಿತದಲ್ಲಿ ರಚಿಸಿದ ೧೨ ವಚನಗಳು ದೊರೆತಿವೆ. ಒಕ್ಕಲುತನ ವೃತ್ತಿಯ ಪರಿಭಾಷೆ, ಮುಗ್ಧಭಕ್ತಿ, ಸರಳ-ಪ್ರಾಸಾದಿಕ ಶೈಲಿಯಿಂದ ಅವು ಕಳಕಳಿಸುತ್ತವೆ.

ಕದಿರ ರೆಮ್ಮವ್ವೆ

ಈಕೆಗೆ ರೆಬ್ಬವ್ವೆ ಎಂದೂ ಕರೆಯಲಾಗುತ್ತದೆ. ಕಾಲ - ೧೧೬೦. ಕವಿ ಚರಿತೆಕಾರರು ಈಕೆ ಕದಿರ ರೇಮಯ್ಯನ ಸತಿಯಾಗಿರಬೇಕೆಂದು ಊಹಿಸಿದ್ದಾರೆ. ಕಾಯಕ-ರಾಟೆಯಿಂದ ನೂಲು ತೆಗೆಯುವುದು. ಸದ್ಯ ಈಕೆಯ ನಾಲ್ಕು ವಚನಗಳು ಮಾತ್ರ ದೊರೆತಿವೆ. ಅಂಕಿತ- 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ.' ಎರಡು ವಚನಗಳಲ್ಲಿ ಸತಿಪತಿಭಾವ ವ್ಯಕ್ತವಾಗಿದ್ದರೆ, ಉಳಿದ ಒಂದರಲ್ಲಿ ಶರಣರ ಸ್ತುತಿ, ಇನ್ನೊಂದರಲ್ಲಿ ಕಾಯಕದ ಮಹತಿ ಅಡಕವಾಗಿದೆ. ನಾಲ್ಕರಲ್ಲಿ ಮೂರು ಬೆಡಗಿನ ವಚನಗಳಾಗಿದ್ದರೆ, ಒಂದು ಸರಳ ವಚನವೆನಿಸಿದೆ. ಬೆಡಗಿನ ವಚನಗಳಿಗೆ ಸಿಂಗಳದ ಸಿದ್ಧಬಸವರಾಜ ಟೀಕೆ ಬರೆದಿದ್ದಾನೆ. ವೃತ್ತಿಪರಿಭಾಷೆ ಈಕೆಯ ವಚನಗಳಲ್ಲಿ ಸಾರ್ಥಕವಾಗಿ ಬಳಕೆಯಾಗಿದೆ.

ಕನ್ನಡಿ ಕಾಯಕದ ಅಮ್ಮಿದೇವಯ್ಯ

೧೧೬೦ ರಲ್ಲಿ ಇದ್ದ ಈತನ ಕಾಯಕ ಕ್ಷೌರಿಕತನ. 'ಕಮಳೇಶ್ವರ ಲಿಂಗ' ಅಂಕಿತದಲ್ಲಿ ೧೦ ವಚನಗಳು ಉಪಲಬ್ಧವಾಗಿವೆ. ಹಡಪ, ಕನ್ನಡಿ, ಕತ್ತಿ, ಕತ್ತರಿ, ಚಿಮ್ಮುಟ, ಹಣಿಗೆ ಮುಂತಾದ ವೃತ್ತಿ ಸಂಬಂಧಿ ಪದಗಳ ಬಳಕೆಯೊಂದಿಗೆ ಅನುಭಾವವನ್ನು ಪ್ರಕಟಿಸುವ ರೀತಿ ಆಪ್ತವೆನಿಸಿದೆ. 'ವ್ಯಾಧಿಗೆ ನಾನರಸು' ಎನ್ನುವ ಮಾತು ಈತ ವೈದ್ಯ ವಿಷಯದಲ್ಲಿಯೂ ಬಲ್ಲವನಾಗಿದ್ದನೆಂಬುದನ್ನು ಸೂಚಿಸುತ್ತದೆ. ೧೮ ಕಾಯಕಗಳ ಉಲ್ಲೇಖ ಮಾಡುವುದು, 'ಆವ ಜಾತಿ ಗೋತ್ರದಲ್ಲಿ ಬಂದಡೂ ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕವಿಲ್ಲದಿರಬೇಕು' ಎಂದು ಹೇಳುವುದು. ಈತನ ಸಮತಾಭಾವದ ನಿಲವಿಗೆ ನಿದರ್ಶನವಾಗಿದೆ.

ಕನ್ನಡಿ ಕಾಯಕದ ರೇವಮ್ಮ

ಈಕೆಗೆ ರೇಮಮ್ಮ, ರೆಮ್ಮವ್ವೆ ಎಂಬ ಪರ್ಯಾಯ ನಾಮಗಳೂ ಕಂಡುಬರುತ್ತವೆ. ಹೆಸರಿನ ಹಿಂದೆ ಸೇರಿದ ವಿಶೇಷಣದಿಂದ ಈಕೆ ಕ್ಷೌರಿಕ ಕುಟುಂಬಕ್ಕೆ ಸೇರಿದವಳೆಂದು ತಿಳಿಯುತ್ತದೆ. 'ಕನ್ನಡಿ ಕಾಯಕದ ಅಮ್ಮಿದೇವಯ್ಯ' ಎಂಬ ಒಬ್ಬ ವಚನಕಾರನೂ ಇದ್ದು, ಈಕೆಗೂ ಅವನಿಗೂ ಸಂಬಂಧವಿರಬಹುದು. ಕಾಲ - ೧೧೬೦. 'ಸದ್ಗುರು ಸಂಗ ನಿರಂಗಲಿಂಗ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ಅದರಲ್ಲಿ ವ್ರತಾಚಾರನಿಷ್ಠೆ, ಪ್ರಸಾದಪ್ರೀತಿ, ಗಣಾಚಾರದ ಗಡುಸು ಕಂಡುಬರುತ್ತದೆ.

ಕನ್ನದ ಮಾರಿತಂದೆ

ಮೂಲತಃ ಚೋರವೃತ್ತಿಯವನಾದ ಈತ ಅನಂತರ ಶರಣನಾಗಿ ಪರಿವರ್ತನೆ ಹೊಂದಿ, ಸಾತ್ವಿಕ ಬದುಕು ನಡೆಸುತ್ತಾನೆ. ಕಾಲ-೧೧೬೦. ನಾಲ್ಕು ವಚನ ದೊರೆತಿದ್ದು, 'ಮಾರನ ವೈರಿ ಮಾರೇಶ್ವರಾ' ಎಂಬ ಅಂಕಿತವನ್ನು ಹೊಂದಿವೆ. ಎಲ್ಲವೂ ಈತನ ಕನ್ನ ಹಾಕುವ ವೃತ್ತಿಪರಿಭಾಷೆಯನ್ನು ಬಳಸಿಕೊಂಡು, ಆಧ್ಯಾತ್ಮವನ್ನು ಹೇಳುತ್ತವೆ.

ಕಂಬದ ಮಾರಿತಂದೆ

ಮೀನುಗಾರಿಕೆ ವೃತ್ತಿಯನ್ನು ಕೈಕೊಂಡ ಈತನ ಕಾಲ-೧೧೬೦. 'ಕದಂಬಲಿಂಗ' ಅಂಕಿತದಲ್ಲಿ ೧೧ ವಚನಗಳು ದೊರೆತಿವೆ. ತನ್ನ ವೃತ್ತಿಪರಿಭಾಷೆಯನ್ನು ತುಂಬ ಸಮರ್ಥವಾಗಿ ಬಳಸಿಕೊಂಡು ಆಧ್ಯಾತ್ಮಿಕ ವಿಷಯವನ್ನು ಪ್ರತಿಪಾದಿಸುವುದು ಇವುಗಳ ವಿಶೇಷತೆ ಎನಿಸಿದೆ. ಮತ್ಸ್ಯವನ್ನು ಅರಿವಿನ ಸಂಕೇತವಾಗಿ ಬಳಸಿದುದು ಅಪೂರ್ವವಾಗಿದೆ.

ಕರಸ್ಥಲದ ಮಲ್ಲಿಕಾರ್ಜುನದೇವ

'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ' ಎಂಬ ಕೃತಿಯನ್ನು ಸಂಕಲಿಸಿದ ಈತನ ಜೀವನ ಸಂಗತಿಗಳು ಹೆಚ್ಚಿಗೆ ದೊರೆತಿಲ್ಲ. ಕರಸ್ಥಲ ಪರಂಪರೆಯ ಶಾಂತೇಶ ಗುರು. ಕಾಲ-೧೪೮೦-೧೪೪೭. 'ಪರಮಗುರು ಶಾಂತೇಶ' ಅಂಕಿತದಲ್ಲಿ ನಾಲ್ಕು ವಚನಗಳು ದೊರೆತಿವೆ. ಅವುಗಳಲ್ಲಿ ಇಷ್ಟಲಿಂಗದಲ್ಲಿ ನಿಷ್ಠೆಯಿಲ್ಲದವರ ಟೀಕೆ, ಸಂಸಾರದಲ್ಲಿ ಮೈಮರೆತವರ ರೀತಿ, ಅಂತರಂಗದಲ್ಲಿ ಅರಿವಿಲ್ಲದ ಬಹಿರಂಗದ ಕ್ರೀವಂತರ ವಿಮರ್ಶೆ, ಪರಶಿವಯೋಗಿಯ ಸ್ವರೂಪ ವರ್ಣನೆ ಮಾಡಲಾಗಿದೆ.

ಕರುಳ ಕೇತಯ್ಯ

ವ್ರತಾಚಾರನಿಷ್ಠ ಶರಣನಾದ ಈತನ ಜೀವನೇತಿಹಾಸದ ವಿವರಗಳು ದೊರಕುವುದಿಲ್ಲ. ಕಾಲ - ೧೧೬೦. ಅಂಕಿತ - ಶಂಖೇಶ್ವರ. ಎಂಟು ವಚನಗಳು ದೊರೆತಿವೆ. ಅವುಗಳಲ್ಲಿ 'ಭವಿಯ ಸೋಂಕಲಾಗದು, ಅನರ್ಪಿತವ ಸ್ವೀಕರಿಸಲಾಗದು' ಎಂಬ ವ್ರತನಿಷ್ಠೆ, 'ವ್ರತ ತಪ್ಪಿತ್ತೆಂದು ಘಟವ ಬಿಟ್ಟಲ್ಲಿ ಮೆಚ್ಚುವ ದೈವ ಬೇಡ' ಎಂಬ ಡಾಂಭಿಕ ವ್ರತಾಚಾರಿಗಳ ನಿಂದೆ ವಿಶೇಷವಾಗಿ ತೋರುತ್ತದೆ.

ಕಲಕೇತಯ್ಯ

'ಕಲಕೇತನಂತಪ್ಪ ತಂದೆ ನೋಡೆನಗೆ' ಎಂದು ಬಸವಣ್ಣನಿಂದ ಸ್ತುತಿಸಿಕೊಂಡ ಈತ ಒಬ್ಬ ಜಾನಪದ ಕಲಾವಿದ. ಕಿಳ್ಳಿಕೇತರಾಟ (ಕಲಕೇತ) ಎಂಬ ಕಲೆಯನ್ನು ಪ್ರದರ್ಶಿಸುವುದು ಈತನ ಕಾಯಕ. ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಲಕ್ಕಣ್ಣ ದಂಡೇಶರ ಕಾವ್ಯಗಳಲ್ಲಿ ಈತನ ಕಥೆ ಬರುತ್ತದೆ. ಕಾಲ - ೧೧೬೦. 'ಮೇಖಲೇಶ್ವರಲಿಂಗ' ಎಂಬ ಅಂಕಿತದಲ್ಲಿ ಹನ್ನೊಂದು ವಚನಗಳು ದೊರೆತಿವೆ. ತತ್ವ, ಬೆಡಗು, ಅನುಭಾವ ಇವುಗಳಲ್ಲಿ ಮುಪ್ಪುರಿಗೊಂಡಿವೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

ಕಾಟಕೂಟಯ್ಯ ಈಕೆಯ ಪತಿ. ಶರಣನಾಗುವುದಕ್ಕಿಂತ ಪೂರ್ವದಲ್ಲಿ ವೀರಗೊಲ್ಲಾಳನಿಗೆ 'ಕಾಟಕೂಟಯ್ಯ' ಎಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. ಹೀಗಿದ್ದ ಪಕ್ಷದಲ್ಲಿ ಈಕೆ ವೀರಗೊಲ್ಲಾಳನ ಸತಿಯೆಂದು ಹೇಳಬೇಕಾಗುತ್ತದೆ. ಗೊಲ್ಲಾಳನ ಸ್ಥಳ ವಿಜಾಪುರ ಜಿಲ್ಲೆಯ ಸಿಂದಗಿ

ತಾಲೂಕಿನ ಗೋಲಗೇರಿ. ವೃತ್ತಿಯಿಂದ ಕುರಿಕಾಯುವ ಕುರುಬ. ಇದರಿಂದ ರೇಚವ್ವೆಯೂ ಮೂಲತಃ ಗೋಲಗೇರಿಯವಳಾಗಿದ್ದು ನಂತರ ಕಲ್ಯಾಣಕ್ಕೆ ಬಂದಿರಬೇಕು. ಕಾಲ - ೧೧೬೦. 'ನಿಜಶಾಂತೇಶ್ವರ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ವ್ರತಾಚಾರನಿಷ್ಠೆ ಈ ವಚನದ ಆಶಯವಾಗಿದೆ.

ಕಾಡಸಿದ್ಧೇಶ್ವರ

ಈತ ಮಹಾರಾಷ್ಟ್ರದ ಸಿದ್ಧಗಿರಿಮಠದ ಸಂಪ್ರದಾಯಕ್ಕೆ ಸೇರಿದ ಪೀಠಾಧಿಪತಿ. ಕಾಲ - ಸು. ೧೭೨೫. 'ಸಂಗಮೇಶ್ವರದೇವರ ಕರಕಮಲದಲ್ಲಿ ಉತ್ಪತ್ಯವಾದ ಶಿಶುವು ಕಾಡಸಿದ್ಧ ನಾನಯ್ಯ' ಎಂದು ಹೇಳಿಕೊಂಡಿರುವುದರಿಂದ ಈ 'ಸಂಗಮೇಶ್ವರದೇವ' ಈತನ ಗುರುವಾಗಿರಬೇಕು. ಜಾಯಪ್ಪ ದೇಸಾಯಿಯ ಕುವಲಯಾನಂದ ಕೃತಿಯಲ್ಲಿ ಈತನ (ಕಾಡಸಿದ್ಧೇಶ್ವರನ) ಉಲ್ಲೇಖವಿದೆ. 'ವೀರಶೈವ ಷಟ್‌ಸ್ಥಲ' ಕಾಡಸಿದ್ಧೇಶ್ವರನ ಕೃತಿಯ ಹೆಸರು. ಇದರಲ್ಲಿ ೫೦೦ ವಚನಗಳನ್ನು ಷಟ್‌ಸ್ಥಲಾನುಗುಣವಾಗಿ ಜೋಡಿಸಲಾಗಿದೆ. ವಚನಾಂಕಿತ 'ಕಾಡನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೆ.' ಹೆಚ್ಚಾಗಿ ಎಲ್ಲ ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ. ಷಟ್‌ಸ್ಥಲ ತತ್ವ ಪ್ರತಿಪಾದನೆಯೇ ಇವುಗಳ ಪರಮಗುರಿಯಾಗಿದೆ. ಈ ಕೃತಿಯಲ್ಲಿ ಎದ್ದು ಕಾಣುವ ವಿಶೇಷತೆಯೆಂದರೆ ಮಧ್ಯ ಮಧ್ಯ ಬೇರೆ ಬೇರೆ ಶರಣರ ಹೆಸರುಗಳಡಿಯಲ್ಲಿ ಅವರವರ ಕಾಯಕದ ಪರಿಭಾಷೆ ಬಳಸಿ ವಚನಗಳನ್ನು ಹೆಣೆದಿರುವುದು. ಇಲ್ಲಿ ಕಂಡುಬರುವ ಶರಣರಲ್ಲಿ ಕೆಲವರು ೧೨ನೆಯ ಶತಮಾನದವರಾದರೆ, ಮತ್ತೆ ಕೆಲವರು ಇದುವರೆಗೆ ಎಲ್ಲಿಯೂ ಉಲ್ಲೇಖವಾಗದವರು. ಅವರಲ್ಲಿ ಪಿಂಜಾರ ಮಹಮದ ಖಾನಯ್ಯ, ವಲ್ಲಿ ಪೀರಣ್ಣ ಎಂಬಂಥ ಮುಸ್ಲಿಂ ಶರಣರ ಹೆಸರುಗಳೂ ಸೇರಿರುವುದು ಗಮನಾರ್ಹ. ಕೆಲವು ವಚನಗಳು ಉರ್ದುಭಾಷೆಯಲ್ಲಿರುವುದು ಇನ್ನೂ ವಿಶೇಷ.

ಕಾಲಕಣ್ಣಿಯ ಕಾಮಮ್ಮ

ಈಕೆಯ ಜೀವನ ವಿವರ ತಿಳಿದು ಬಂದಿಲ್ಲ. ಹೆಸರ ಹಿಂದಿನ ವಿಶೇಷಣದಿಂದ ಈಕೆ ಹಗ್ಗಹೊಸೆಯುವ ಕುಟುಂಬದವಳೆಂದು ತಿಳಿಯುತ್ತದೆ. ಕಾಲ - ೧೧೬೦. ಅಂಕಿತ 'ನಿರ್ಭೀತ ನಿಜಲಿಂಗ'. ಒಂದು ವಚನ ಮಾತ್ರ ದೊರೆತಿದೆ. ವ್ರತನಿಷ್ಠೆ, ವ್ರತಹೀನರ ನಿಷ್ಠುರ ಟೀಕೆ ಇದರ ಉದ್ದೇಶವಾಗಿದೆ.

ಕಿನ್ನರಿ ಬ್ರಹ್ಮಯ್ಯ

ಆಂಧ್ರಪ್ರದೇಶದ ಪೂದೂರ (ಊಡೂರು) ಗ್ರಾಮಕ್ಕೆ ಸೇರಿದ ಈತ ಅಲ್ಲಿ ಅಕ್ಕಸಾಲಿಗನಾಗಿದ್ದು, ಅನಂತರ ಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರನ ಮುಂದೆ ಕಿನ್ನರಿ ನುಡಿಸುವ ಕಾಯಕವನ್ನು ಕೈಕೊಳ್ಳುತ್ತಾನೆ. ಕಲ್ಯಾಣಕ್ಕೆ ಬಂದ ಅಕ್ಕಮಹಾದೇವಿಯ ವೈರಾಗ್ಯವನ್ನು ಒರೆಗೆ ಹಚ್ಚಿ ನೋಡುತ್ತಾನೆ. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಚೆನ್ನಬಸವಣ್ಣನ ಜೊತೆಗಿದ್ದು, ದಂಡಿನ ಮುಂದಾಳತ್ವ ವಹಿಸಿದ ಈತ, ಉಳವಿಯಲ್ಲಿ ಲಿಂಗೈಕ್ಯನಾಗುತ್ತಾನೆ.

'ಮಹಾಲಿಂಗ ತ್ರಿಪುರಾಂತಕ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದು, ಸದ್ಯ ೧೮ ದೊರೆತಿವೆ. ಅವುಗಳಲ್ಲಿ ಮಹಾದೇವಿಯಕ್ಕನ ಜೊತೆಗೆ ನಡೆಸಿದ ಸಂವಾದ, ಶಿವನ ಮಹಿಮೆ, ಬಸವಾದಿ ಶರಣರ ವರ್ಣನೆ ಕಂಡುಬರುತ್ತದೆ.

ಕೀಲಾರದ ಭೀಮಣ್ಣ

ಪಶುಪಾಲನವೃತ್ತಿಯನ್ನು ತನ್ನ ಬದುಕಿನ ಮುಖ್ಯ ಮಣಿಹವನ್ನಾಗಿ ಮಾಡಿಕೊಂಡ ಈತನ ಕಾಲ - ೧೧೬೦. 'ಕರ್ಮಹರ ತ್ರಿಪುರಾಂತಕಲಿಂಗ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ದೊರೆತ ಹತ್ತು ವಚನಗಳಲ್ಲಿ ಅವನ ವೃತ್ತಿಗೆ ಸಂಬಂಧಿಸಿದ ವಿವರ ತುಂಬಿಕೊಂಡಿವೆ.

ಕುಷ್ಟಗಿ ಕರಿಬಸವೇಶ್ವರ

ಕೊಪ್ಪಳ ಜಿಲ್ಲೆಯ ಕುಷ್ಟಗಿ ನಗರದ ಕಲ್ಮಠದ ಸ್ವಾಮಿಯಾಗಿದ್ದ ಈತ ನಿಡುಮಾಮಿಡಿ ಪೀಠಪರಂಪರೆಗೆ ಸೇರಿದವನು. ಪಟ್ಟುಕಂಥೆಯ ಚೆನ್ನಬಸವೇಶ್ವರ ಈತನ ಗುರು. ಕಾಲ - ೧೬೦೦. ಅಂಕಿತ-ಅಖಂಡ ಪರಿಪೂರ್ಣ ಘನಲಿಂಗ ಗುರು ಚೆನ್ನಬಸವೇಶ್ವರ. ೯೯ ವಚನಗಳು ದೊರೆತಿವೆ. ಅವುಗಳಿಗೆ 'ಚಿತ್ತ ಸದ್ಗತಿಯ ವಚನ' ಎಂದು ಕರೆದಿದ್ದಾನೆ. ಗುರುಸ್ತುತಿ, ಅಷ್ಟಾವರಣದ ಮಹತಿಯನ್ನು, ಜೊತೆಗೆ ಸ್ಥಾವರಲಿಂಗ ಪೂಜಕರು, ತಿಥಿವಾರ ನೋಡುವವರು, ಡಾಂಭಿಕ ಭಕ್ತರು ಮತ್ತು ದುರಾಚಾರಿಗಳ ಟೀಕೆಯನ್ನು ಮಾಡಲಾಗಿದೆ. ಪ್ರಾದೇಶಿಕ ಭಾಷೆಯ ಬಳಕೆ, ಸಹಜವಾದ ದೃಷ್ಟಾಂತಗಳು, ಬಿಚ್ಚು ಮಾತಿನ ಬೈಗುಳಗಳು, ಸರಳವಾದ ನೀತಿಬೋಧೆ ಈ ವಚನಗಳ ವೈಶಿಷ್ಟ್ಯವೆನಿಸಿವೆ.

ಕೂಗಿನ ಮಾರಯ್ಯ

ಎಚ್ಚರಿಸುವ ಕಾಯಕವನ್ನು ಕೈಕೊಂಡಿದ್ದ ಈತನ ಕಾಲ - ೧೧೬೦. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಈತ ಶರಣರ ರಕ್ಷಣೆಯ ಹೊಣೆಯನ್ನು ಹೊತ್ತು ಬಿಜ್ಜಳನ ಸೈನ್ಯದ ಬರವಿನ ಸೂಚನೆಯನ್ನು ಎತ್ತರದ ಧ್ವನಿಯಲ್ಲಿ ಕೂಗಿ ಹೇಳಿ ಎಚ್ಚರಿಸುತ್ತಿದ್ದನಂತೆ. ಶರಣರು ಮತ್ತು ಬಿಜ್ಜಳನ ಸೈನ್ಯದ ಮಧ್ಯ ಮುರಗೋಡಿನ ಬಳಿ ನಡೆದ ಹೋರಾಟದಲ್ಲಿ ಮಡಿಯುತ್ತಾನೆ. 'ಮಹಾಮಹಿಮ ಮಾರೇಶ್ವರ' ಅಂಕಿತದಲ್ಲಿ ಈತ ರಚಿಸಿದ ೧೧ ವಚನಗಳು ದೊರೆತಿವೆ. ಷಡುಸ್ಥಲಗಳ ಸ್ವರೂಪ, ನಿಜಭಕ್ತನ ನಿಲುವು ಮುಂತಾದ ವಿಷಯಗಳ ಪ್ರತಿಪಾದನೆ ಅವುಗಳಲ್ಲಿದೆ.

ಕೊಟ್ಟಣದ ಸೋಮಮ್ಮ

ಕಾಲ - ೧೧೬೦. ಕಾಯಕ - ಕೊಟ್ಟಣ, ಅಂದರೆ ಭಕ್ತರ ಮನೆಯ ಬತ್ತವನ್ನು ಕುಟ್ಟುವದು, ಅದರಿಂದ ಬಂದ ಧನದಿಂದ ಗುರುಲಿಂಗಜಂಗಮ ಸೇವೆ ಮಾಡುವುದು. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಅಂಕಿತ 'ನಿರ್ಲಜ್ಜೇಶ್ವರ'. ನಿರ್ಲಜ್ಜ ಶಾಂತೇಶ್ವರ ಈಕೆಯ ಗುರುವಾಗಿರಬೇಕು. ವ್ರತಾಚಾರ ಶುದ್ಧಿ ಈಕೆಯ ವಚನದ ಆಶಯ. ಅದನ್ನು ತನ್ನ ವೃತ್ತಿಪರಿಭಾಷೆಯನ್ನು ಬಳಸಿ ತುಂಬ ಸಮರ್ಥವಾಗಿ ಪ್ರತಿಪಾದಿಸಿದ್ದಾಳೆ.

ಕೊಂಡೆ ಮಂಚಣ್ಣನಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

ಕಲ್ಯಾಣದ ಬಿಜ್ಜಳನ ಮಂತ್ರಿಯಾಗಿದ್ದ ಕೊಂಡೆ ಮಂಚಣ್ಣನ ಸತಿ. ಕಾಲ- ೧೧೬೦. 'ಅಗಜೇಶ್ವರಲಿಂಗ' ಅಂಕಿತದಲ್ಲಿ ಒಂದು ವಚನವನ್ನು ಮಾತ್ರ ಬರೆದಿದ್ದಾಳೆ. ವ್ರತಹೀನ ಡಾಂಭಿಕರ ತೀಕ್ಷ್ಣವಾದ ನಿಂದೆ ಇಲ್ಲಿದೆ.

ಕೋಲ ಶಾಂತಯ್ಯ

ಪಶುಪಾಲನ ವೃತ್ತಿಯನ್ನು ಕೈಕೊಂಡಿದ್ದ ಈತನ ಹೆಸರು ವಚನಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧವಾಗಿದೆ. ಸಕಲಪುರಾತನರ ಮೂರು ವಿಧದ ಕಟ್ಟುಗಳಲ್ಲಿ ಮೊದಲನೆಯದು ಈತನ ವಚನಗಳಿಂದ ಆರಂಭವಾಗುತ್ತಿರುವುದು ವಿಶೇಷವೆನಿಸಿದೆ. ಚೆನ್ನಬಸವ ಪುರಾಣ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ ಮೊದಲಾದ ಕೃತಿಗಳಲ್ಲಿ ಈತನಿಗೆ ಸಂಬಂಧಿಸಿದ ಕಥೆ ನಿರೂಪಿತವಾಗಿದೆ. ಕಾಲ-೧೧೬೦. 'ಪುಣ್ಯಾರಣ್ಯ ದಹನ ಭೀಮೇಶ್ವರಲಿಂಗ' ಅಂಕಿತದಲ್ಲಿ ೧೦೩ ವಚನಗಳು ದೊರೆತಿವೆ. ಹೆಚ್ಚಾಗಿ ಎಲ್ಲವೂ ಬೆಡಗಿನ ರೂಪದಲ್ಲಿವೆ. ಭಕ್ತಿಯ ಸ್ವರೂಪ, ಸದ್ಗುರುವಿನ ರೀತಿ, ಆಷಾಢಭೂತಿಗಳ ಟೀಕೆ ಇತ್ಯಾದಿ

ವಿಷಯಗಳು ಪ್ರತಿಪಾದಿತವಾಗಿದೆ. ಕೆಲವು ವಚನಗಳಲ್ಲಿ ತನ್ನ ಗೋಪಾಲ ವೃತ್ತಿಯ ಪರಿಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾನೆ.

ಗಜೇಶ ಮಸಣಯ್ಯ

ಅಕ್ಕಲಕೋಟೆ ಸಂಸ್ಥಾನದ ಕರ್ಜಗಿ ಗ್ರಾಮಕ್ಕೆ ಸೇರಿದ ಈತ, ಶರಣಸತಿ ಲಿಂಗಪತಿ ಭಾವದ ಶ್ರೇಷ್ಠ ವಚನಕಾರ. ಕಲ್ಯಾಣದ ಶರಣರ ಜೊತೆ ಅನುಭಾವ ಗೋಷ್ಠಿಗಳಲ್ಲಿ ಪಾಲ್ಗೊಂಡ ಈತ, ಕೊನೆಗಾಲದಲ್ಲಿ ಗುಲಬರ್ಗಾ ಜಿಲ್ಲೆ ಆಳಂದ ತಾಲೂಕಿನ ಮನಹಳ್ಳಿ ಎಂಬ ಗ್ರಾಮದಲ್ಲಿ ಇದ್ದು, ಅಲ್ಲಿಯೇ ಐಕ್ಯನಾದನೆಂದು ತಿಳಿಯುತ್ತದೆ. ಅಲ್ಲಿ ಈತನ ಹೆಸರಿನ ದೇವಾಲಯವಿರುವುದು ಇದಕ್ಕೆ ನಿದರ್ಶನವಾಗಿದೆ. ಕರಜಿಗೆಯ ಗಜೇಶ್ವರ ಈತನ ಇಷ್ಟದೈವ. ಅದನ್ನು ತನ್ನ ಅಂಕಿತವಾಗಿಸಿಕೊಂಡಿದ್ದಾನೆ. ಮಸಣಮ್ಮ ಈತನ ಮಡದಿ. ಕಾಲ-೧೧೬೦. 'ಮಹಾಲಿಂಗ ಗಜೇಶ್ವರ' ಎಂಬ ಅಂಕಿತದಲ್ಲಿ ೭೦ ವಚನಗಳು ಲಭ್ಯವಾಗಿವೆ. ಎಲ್ಲವೂ ಸತಿಪತಿ ಭಾವದ ಉತ್ಕಟತೆಯನ್ನು ಪ್ರಕಟಿಸುತ್ತವೆ. ಸರಳ ಭಾಷೆ, ಮಧುರ ಭಾವ, ಕಾವ್ಯಾತ್ಮಕ ಶೈಲಿಯಿಂದಾಗಿ ತುಂಬ ಆಕರ್ಷಕವೆನಿಸಿವೆ.

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

ಈಕೆ ಗಜೇಶ ಮಸಣಯ್ಯನ ಸತಿ. ಹೆಸರು ಮಸಣಮ್ಮ. ಗಂಡನ ಊರು ಅಕ್ಕಲಕೋಟೆ ತಾಲೂಕ ಕರ್ಜಗಿ. ಬಸವಣ್ಣನವರ ಕೀರ್ತಿವಾರ್ತೆ ಕೇಳಿ ಇಬ್ಬರೂ ಕಲ್ಯಾಣಕ್ಕೆ ಬಂದು ಸೇರುತ್ತಾರೆ. ಕಾಲ - ೧೧೬೦. ಅಂಕಿತ 'ಮಸಣಯ್ಯ ಪ್ರಿಯ ಗಜೇಶ್ವರ.' ಸದ್ಯ ಈಕೆಯ ಹತ್ತು ವಚನಗಳು ದೊರೆತಿವೆ. ಸೃಷ್ಟಿಯ ಉತ್ಪತ್ತಿ, ಲಿಂಗದ ಸ್ವರೂಪ, ಅರಿವಿನ ಮಹತ್ವ, ಗುರುಲಿಂಗಜಂಗಮ ಸಂಬಂಧ, ಶರಣರ ಸ್ತುತಿ ಇಲ್ಲಿ ವಿಶೇಷಸ್ಥಾನ ಪಡೆದಿರುವುದರಿಂದ-ವ್ರತಾಚಾರ ನಿಷ್ಠೆಗೇ ಆದ್ಯಸ್ಥಾನ ಕೊಟ್ಟ ಉಳಿದ ವಚನಕಾರ್ತಿಯರಿಂದ ಈಕೆ ಭಿನ್ನಳಾಗಿ ತೋರುತ್ತಾಳೆ.

ಗಣದಾಸಿ ವೀರಣ್ಣ

ಈತನ ಜೀವನ ವಿವರಗಳು ದೊರೆಯುವುದಿಲ್ಲ. ಕಾಲ - ೧೭ನೆಯ ಶತಮಾನ. ಶಿವಗಣರ ಭೃತ್ಯನೆಂದು ತನ್ನನ್ನು ಕರೆದುಕೊಂಡಿರುವುದರಿಂದ 'ಗಣದಾಸಿ' ಎಂಬ ವಿಶೇಷಣ ಅನ್ವರ್ಥಕವೆನಿಸಿದೆ. ಈತನ ೪೦ ವಚನಗಳು ದೊರೆತಿವೆ. 'ಶಾಂತಕೂಡಲಸಂಗಮದೇವ' ಎಂಬುದು ವಚನಾಂಕಿತ. 'ಜ್ಞಾನಸಾರಾಯದ ವಚನ "ಮಹಾಜ್ಞಾನದನುಭಾವದ ವಚನ' ಎಂಬ ಶೀರ್ಷಿಕೆಯ ಈ ವಚನಗಳಲ್ಲಿ ಜ್ಞಾನ- ಅನುಭಾವ ಪ್ರಧಾನವಾಗಿವೆ. 'ಅಷ್ಟಾವರಣವೆ ಅಂಗ, ಪಂಚಾಚಾರವೆ ಪ್ರಾಣ' ಎಂದು ನಂಬಿದ್ದ ಈತನ ವಚನಗಳಲ್ಲಿ ಈ ಎರಡೂ ತತ್ವಗಳ ವ್ಯವಸ್ಥಿತ ವಿವೇಚನೆಗೆ ಹೆಚ್ಚಿನ ಸ್ಥಾನ ಸಂದಿದೆ. ಬಸವಾದಿ ಶರಣರ ವಚನಗಳ ಪ್ರಭಾವ ಈತನ ರಚನೆಗಳ ಮೇಲೆ ವಿಶೇಷವಾಗಿ ಆಗಿದೆ.

ಗಾವುದಿ ಮಾಚಯ್ಯ

ಕಾಲ - ೧೧೬೦. ಕಲ್ಯಾಣದ ಶರಣರ ಮಧ್ಯ ತನ್ನ ಶಿವಪೂಜಾನಿಷ್ಠೆ ಮತ್ತು ಪ್ರಾಣಲಿಂಗಾನುಸಂಧಾನದಲ್ಲಿ ಕಾಲ ಕಳೆಯುತ್ತಿದ್ದನೆಂದು ತಿಳಿದುಬರುತ್ತದೆ. 'ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ' ಎಂಬ ಅಂಕಿತದಲ್ಲಿ ೧೧ ವಚನಗಳು ದೊರೆತಿವೆ. ಸತ್ಯ ಶುದ್ಧ ಕಾಯಕದಿಂದ ಧನ ಸಂಗ್ರಹಿಸು; ಅಗತ್ಯವಿದ್ದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ಗುರುಲಿಂಗಜಂಗಮಕ್ಕೆ ಅರ್ಪಿಸು; ಆಶಾಪಾಶ ಬಂಧಿತನಾಗಬೇಡ ಎಂಬುದು ಅವುಗಳ ಮುಖ್ಯ ಆಶಯ.

ಗುಪ್ತ ಮಂಚಣ್ಣ

ಕಲ್ಯಾಣದ ಅರಸು ಬಿಜ್ಜಳನ ಮಂತ್ರಿಯಾಗಿದ್ದ ಈತನ ತಂದೆ ದಾಮೋದರ; ತಾಯಿ ಮಾಯಾವಾದಿ. ಮೂಲತಃ ವೈಷ್ಣವ ಮತಕ್ಕೆ ಸೇರಿದ ಈತ ಬಸವಣ್ಣನವರ ಪ್ರಭಾವದಿಂದ ಶರಣಧರ್ಮಕ್ಕೆ ಮಾರುಹೋಗಿ ಗುಪ್ತವಾಗಿ ಶಿವಭಕ್ತಿಯನ್ನು ಆಚರಿಸುತ್ತಾನೆ. ಒಮ್ಮೆ ಅದು ಪ್ರಕಟವಾಗಲು ಮುಂದೆ ಬಹಿರಂಗವಾಗಿಯೇ ಅನುಭವ ಮಂಟಪದ ಶಿವಾನುಭವಗೋಷ್ಠಿಗಳಲ್ಲಿ ಭಾಗವಹಿಸುತ್ತಾನೆ. ಇಡೀ ಬದುಕನ್ನು ಶಿವಭಕ್ತಿಗಾಗಿ ಮೀಸಲಿಟ್ಟು ಕಲ್ಯಾಣದಲ್ಲಿಯೇ ಐಕ್ಯನಾಗುತ್ತಾನೆ. ಈತನ ಕಾಲ - ೧೧೬೦. 'ನಾರಾಯಣಪ್ರಿಯ ರಾಮನಾಥ' ಎಂಬುದು ಈತನ ಅಂಕಿತ. ೧೦೨ ವಚನಗಳು ದೊರೆತಿವೆ. ವೈಷ್ಣವಧರ್ಮದಿಂದ ಶರಣಧರ್ಮಕ್ಕೆ ಪರಿವರ್ತನೆಗೊಳ್ಳುವಾಗ ಉಂಟಾದ ಮಾನಸಿಕ ತೊಳಲಾಟದ ಚಿತ್ರ ಅವುಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಅನೇಕ ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ. ಈತ ಬಳಸುವ ಸಂದರ್ಭೋಚಿತ ಉಕ್ತಿಗಳಲ್ಲಿ ಲೋಕಾನುಭವ ಒಡೆದು ತೋರುತ್ತದೆ.

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

ಈಕೆ ಕುಂಬರ ಗುಂಡಯ್ಯನ ಸತಿ. ಕಾಲ - ೧೧೬೦. ಬೀದರ ಜಿಲ್ಲೆಯ ಭಾಲ್ಕಿ (ಭಲ್ಲುಂಕೆ) ಈಕೆಯ ಸ್ಥಳ. ಗಡಿಗೆ ಸಿದ್ಧಪಡಿಸುವುದು ಕಾಯಕ. ಎರಡು ವಚನಗಳು ದೊರೆತಿವೆ. 'ಕುಂಭೇಶ್ವರ' ಅಂಕಿತ. ವ್ರತಾಚಾರವನ್ನು ಕುರಿತು ವೃತ್ತಿ ಪರಿಭಾಷೆಯಲ್ಲಿ ತುಂಬ ಸೊಗಸಾಗಿ ನಿರೂಪಿಸಿದ್ದಾಳೆ.

ಗುರುಪುರದ ಮಲ್ಲಯ್ಯ

ತನ್ನ ಹೆಸರನ್ನೇ ಅಂಕಿತವಾಗಿ ಬಳಸಿಕೊಂಡ ಈತನ ಜೀವನ ಕುರಿತು ಯಾವುದೇ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ. ಕಾಲ ೧೪೦೦. ನಾಲ್ಕು ವಚನಗಳು ದೊರೆತಿವೆ. ಮನದ ಚಂಚಲತೆ, ಶಿವಭಕ್ತಿಯ ನಿಲುವು ಅವುಗಳಲ್ಲಿ ವ್ಯಕ್ತವಾಗಿವೆ.

ಗುರುಸಿದ್ಧದೇವ

'ಚಿದೈಶ್ವರ್ಯ ಚಿದಾಭರಣ' ಎಂಬ ವಚನ ಸಂಕಲನ ಕೃತಿಯ ಕರ್ತೃವಾದ ಈತ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಶಾಂತಮಲ್ಲಸ್ವಾಮಿಯ ಶಿಷ್ಯ; ಬಸವಲಿಂಗದೇವನ ಗುರು. ಶ್ರೀಶೈಲದ ಹತ್ತಿರದ ನಾಗರಗವಿ ಈತನ ಸ್ಥಳ. ಅಲ್ಲಿನ ಸಿಂಹಾಸನದ ಅಧಿಪತಿಯಾಗಿದ್ದ. ಕಾಲ -ಸು. ೧೭ನೆಯ ಶತಮಾನ. 'ಚಿದೈಶ್ವರ್ಯ ಚಿದಾಭರಣ' ಸಂಕಲನದಲ್ಲಿ ಇತರ ಶರಣರ ವಚನಗಳ ಜೊತೆಗೆ ಸ್ವತಃ ಗುರುಸಿದ್ಧದೇವ ತಾನೂ ಬರೆದ ೧೦೧ ವಚನಗಳನ್ನೂ ಅಳವಡಿಸಿದ್ದಾನೆ. 'ಸಂಗನಬಸವೇಶ್ವರ' ಎಂಬುದು ಇವುಗಳ ಅಂಕಿತ. ತತ್ವ ನಿರೂಪಣೆಯೇ ಮುಖ್ಯವಾಗಿರುವ ಇವುಗಳನ್ನು ಶಿಷ್ಯನಿಗೆ ಬೋಧಿಸಲಾಗಿದೆ.

ಗುಹೇಶ್ವರಯ್ಯ

ಈತನ ಬಗೆಗೆ ಏನೊಂದು ವಿಷಯವೂ ತಿಳಿದಿಲ್ಲ. ಹಸ್ತಪ್ರತಿಗಳಲ್ಲಿ ಉಲ್ಲೇಖವಾದ 'ಗುಹೇಶ್ವರಯ್ಯನ ವಚನಗಳು' ಎಂಬ ಶೀರ್ಷಿಕೆ ಕಾರಣವಾಗಿ 'ಗುಹೇಶ್ವರಯ್ಯ' ಎಂಬುದು ಈ ವಚನಕಾರನ ಹೆಸರಾಗಿರಬೇಕೆಂದು ಊಹಿಸಲಾಗಿದೆ. ಕಾಲ - ಸು. ೧೬೦೦. 'ಗುಹೇಶ್ವರ ಪ್ರಿಯ ನಿರಾಳಲಿಂಗ' ಅಂಕಿತದಲ್ಲಿ ೪೩ ವಚನಗಳು ದೊರೆತಿವೆ. ಷಟ್‌ಸ್ಥಲ ತತ್ವ ನಿರೂಪಣೆ, ವ್ರತಾಚಾರ ಹೀನರ ಟೀಕೆ ಇವುಗಳ ಮುಖ್ಯ ಗುರಿಯಾಗಿದೆ. ಮಕರ ತರ್ಕ ಪ್ರಸ್ತಾವದ ವಚನ, ಜೋಗಿಯ ತರ್ಕದ ಪ್ರಸ್ತಾವದ ವಚನ, ಕವಿಗಳ ತರ್ಕದ ಪ್ರಸ್ತಾವದ ವಚನ - ಎಂದು ಮೊದಲಾದ ಸ್ಥಲಗಳ ಅಡಿಯಲ್ಲಿ ಅವುಗಳನ್ನು ಜೋಡಿಸಲಾಗಿದೆ.

ಗೊಗ್ಗವ್ವೆ

ಕೇರಳದ ಅವಲೂರು ಈಕೆಯ ಸ್ಥಳ. ಕಾಲ - ೧೧೬೦. ಧೂಪದ ಕಾಯಕ ದವಳಾದುದರಿಂದ 'ಧೂಪದ ಗೊಗ್ಗವ್ವೆ' ಎಂದೂ ಪ್ರಸಿದ್ಧಳಾಗಿದ್ದಾಳೆ. ಶಿವ ಮೋಹಿತಳಾದ ಈಕೆ ಲೌಕಿಕ ಮದುವೆಯನ್ನು ನಿರಾಕರಿಸಿ ವಿರಾಗಿಣಿಯಾಗಿ ಕಲ್ಯಾಣಕ್ಕೆ ಬರುತ್ತಾಳೆ. 'ನಾಸ್ತಿನಾಥಾ' ಅಂಕಿತದಲ್ಲಿ ೬ ವಚನಗಳನ್ನು ರಚಿಸಿದ್ದಾಳೆ. ಅವುಗಳಲ್ಲಿ ಲಿಂಗಾಂಗ ಸಾಮರಸ್ಯ, ಸ್ತ್ರೀಪುರುಷ ಸಮಾನತೆಯ ಚಿಂತನೆಗೆ ಆದ್ಯತೆ ನೀಡಲಾಗಿದೆ. ಸರಳ ಭಾಷೆ, ವೃತ್ತಿಪರಿಭಾಷೆಯ ಬಳಕೆಯಿಂದ ವಚನಗಳು ವಿಶೇಷವಾಗಿ ಗಮನ ಸೆಳೆಯುತ್ತವೆ.

ಗೋಣಿ ಮಾರಯ್ಯ

ಸು. ೧೬೦೦ ರಲ್ಲಿ ಇದ್ದಿರಬಹುದಾದ ಈತನ ಜೀವನದ ಬಗೆಗೆ ಯಾವುದೇ ಸಂಗತಿಗಳು ದೊರೆತಿಲ್ಲ. 'ಕೇಟೇಶ್ವರಲಿಂಗ' ಅಂಕಿತದಲ್ಲಿ ಒಂಬತ್ತು ವಚನಗಳು ಲಭ್ಯವಾಗಿವೆ. ಅವುಗಳಲ್ಲಿ ದೃಷ್ಟಾಂತವಾಗಿ ಬಳಸಿರುವ 'ಗೋಣಿ' 'ಗೋವು' 'ಭಿಕ್ಷೆ' ಮೊದಲಾದ ಪದಗಳಿಂದ ಈತ ಗೋಣಿ (ಕಂಬಳಿ ಅಥವಾ ತಟ್ಟಿನ ಕುಂಚಿಗೆ)ಯನ್ನು ಹೊದ್ದುಕೊಂಡು ದನಕಾಯುವ ಕಾಯಕವನ್ನು ಮಾಡುತ್ತಿದ್ದ; ಮನೆ ಮನೆಗೆ ಹೋಗಿ ಭಿಕ್ಷೆ ಬೇಡುತ್ತಿದ್ದ ಎಂದು ತಿಳಿದುಬರುತ್ತದೆ. ಹೆಚ್ಚಾಗಿ ಎಲ್ಲ ವಚನಗಳು ಅವನ ಕಾಯಕದ ಪರಿಭಾಷೆಯಲ್ಲಿ ಆಧ್ಯಾತ್ಮವನ್ನು ಹೇಳುತ್ತವೆ.

ಗೋರಕ್ಷ

ಮೂಲತಃ ನಾಥಪರಂಪರೆಗೆ ಸೇರಿದ ಈತನ ಮೂಲ ಹೆಸರು ಗೋರಖನಾಥ. ಮತ್ಸೇಂದ್ರನಾಥ ಈತನ ಗುರು. ಅವನಿಂದ ಅನೇಕ ಸಿದ್ಧಿಗಳನ್ನು ಪಡೆದು ವಜ್ರಕಾಯನಾಗಿರುತ್ತಾನೆ. ಅಲ್ಲಮಪ್ರಭು ವಾದದಲ್ಲಿ ಇವನನ್ನು ಸೋಲಿಸಿ, ಇಷ್ಟಲಿಂಗ ದೀಕ್ಷೆಯನ್ನು ನೀಡಿ, ಶೂನ್ಯಸಂಪಾದನೆಯ ಮಾರ್ಗವನ್ನು ತೋರಿಸುತ್ತಾನೆ. ಈತನ ಕಥೆ ಶೂನ್ಯಸಂಪಾದನೆ, ಪ್ರಭುಲಿಂಗಲೀಲೆ ಮೊದಲಾದ ಕೃತಿಗಳಲ್ಲಿ ಪ್ರಸಿದ್ಧವಾಗಿದೆ. ಕಾಲ - ೧೧೬೦. ಗೋರಕ್ಷನ ಜನ್ಮಸ್ಥಳ-ಪಟ್ಟದಕಲ್ಲು. ಅಲ್ಲಿನ ಅರಸು ನರವರ್ಮನ ಗೋವುಗಳನ್ನು ಕಾಯುವ ವೃತ್ತಿಯನ್ನು ಕೈಕೊಂಡಿದ್ದ. ಐಕ್ಯಸ್ಥಳ-ಶ್ರೀಶೈಲ. 'ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗ' ಅಂಕಿತದಲ್ಲಿ ೧೧ ವಚನಗಳು ದೊರೆತಿವೆ. ನಾನಾ ರೀತಿಯ ಸಿದ್ಧಿ, ಜ್ಞಾನ, ಯೋಗ, ಆತ್ಮವಿದ್ಯೆಗಳ ವಿವರ ಅವುಗಳಲ್ಲಿದೆ.

ಘಟ್ಟಿವಾಳಯ್ಯ

ಈತನ ಮೊದಲ ಹೆಸರು ಮುದ್ದಣ್ಣ. ಗಂಧ ತೇಯುವುದು ಈತನ ಕಾಯಕ. ವಿಷಮ ಸಂಸಾರದಿಂದ ಬೇಸತ್ತು ವಿರಕ್ತನಾದನು. ಈತನ ಘನವ್ಯಕ್ತಿತ್ವವನ್ನು ಕುರಿತು ಅನೇಕ ಶರಣರು ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. ಶೂನ್ಯಸಂಪಾದನೆಯಲ್ಲಿ ಈತನಿಗಾಗಿ ಒಂದು ಅಧ್ಯಾಯವನ್ನು ಮೀಸಲಾಗಿಡಲಾಗಿದೆ.

'ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು' ಅಂಕಿತದಲ್ಲಿ ಈತನ ೧೫೦ ವಚನಗಳು ದೊರೆತಿವೆ. ಅವುಗಳಲ್ಲಿ ತತ್ವನಿಷ್ಠೆ, ಸತ್ಯ ನಿಷ್ಠುರತೆ, ಸಮಕಾಲೀನ ಶರಣರ ಬಗೆಗಿನ ಗೌರವ, ಕೆಲವು ಚಾರಿತ್ರಿಕ ಸಂಗತಿಗಳು ಅಳವಟ್ಟಿವೆ.

ಘುನಲಿಂಗಿದೇವ

ಈತ ತೋಂಟದ ಸಿದ್ಧಲಿಂಗರ ಶಿಷ್ಯ. ಸುತ್ತೂರು ಮಠಾಧೀಶ. ಕಾಲ ೧೬ನೆಯ ಶತಮಾನ. ಕಗ್ಗೆರೆಯಲ್ಲಿ ಐಕ್ಯ. "ಘುನಲಿಂಗಿಯ ಮೋಹದ ಮಲ್ಲಿಕಾರ್ಜುನ" ಅಂಕಿತದಲ್ಲಿ ೬೬ ವಚನಗಳು ದೊರೆತಿವೆ. ಇವುಗಳಲ್ಲಿ ಸತಿಪತಿಭಾವದ ನಿರೂಪಣೆಯಿದೆ.

ಚಂದಿಮರಸ

ಈತ ಬಸವಣ್ಣನವರ ಹಿರಿಯ ಸಮಕಾಲೀನ. ಕಾಲ ೧೧೬೦. ಕೃಷ್ಣಾನದಿ ತೀರಿದ ಚಿಮ್ಮಲಿಗೆ ಈತನ ಹುಟ್ಟೂರು. ಗುರು ನಿಜಗುಣಯೋಗಿ. ಮೂಲತಃ ಬ್ರಾಹ್ಮಣನಾಗಿದ್ದ ಈತ ಈ ಗುರುವಿನಿಂದ ದೀಕ್ಷೆ ಪಡೆದು ಶರಣನಾದ. ಅಂಕಿತ - ಸಿಮ್ಮಲಿಗೆಯ ಚೆನ್ನರಾಮ. ೧೫೭ ವಚನಗಳು ದೊರೆತಿವೆ. ಅವುಗಳಲ್ಲಿ ಅರಿವು, ಆತ್ಮಜ್ಞಾನ, ಶರಣಸ್ತುತಿ, ಅನುಭಾವ ಕೆನೆಗಟ್ಟಿನಿಂತಿವೆ.

ಚೆನ್ನಬಸವಣ್ಣ

ಪ್ರಭುದೇವರಿಂದ 'ಅವಿರಳಜ್ಞಾನಿ', 'ಸ್ವಯಂಭುಜ್ಞಾನಿ' ಎಂದು ಕರೆಯಿಸಿಕೊಂಡ ಚೆನ್ನಬಸವಣ್ಣ, ಶರಣ ಸಮೂಹದಲ್ಲಿ ವಯಸ್ಸಿನಿಂದ ಅತ್ಯಂತ ಕಿರಿಯನಾಗಿದ್ದರೂ ಜ್ಞಾನದಲ್ಲಿ ತುಂಬ ಹಿರಿಯನೆನಿಸಿದ್ದ ವ್ಯಕ್ತಿ.

ಅಕ್ಕನಾಗಮ್ಮ ಚೆನ್ನಬಸವಣ್ಣನ ತಾಯಿ. ಶಿವದೇವ (ಶಿವಸ್ವಾಮಿ) ತಂದೆ. ಜನ್ಮಸ್ಥಳ - ಕೂಡಲಸಂಗಮ (ಕೆಲವು ಕಾವ್ಯಗಳು ಕಲ್ಯಾಣವೆಂದು ಹೇಳುತ್ತವೆ). ಬಸವಣ್ಣ ಸೋದರಮಾವ. ಆತ ಕೈಕೊಂಡ ಮಹಾಮಣಿಹದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾನೆ. ಸಿದ್ಧರಾಮನಿಗೆ ಇಷ್ಟಲಿಂಗ ದೀಕ್ಷೆ ನೀಡುತ್ತಾನೆ. ಪ್ರಭುದೇವರ ನಂತರ ಶೂನ್ಯಸಿಂಹಾಸನ ಏರುತ್ತಾನೆ. ಬಸವಣ್ಣನು ಬಿಜ್ಜಳನೊಂದಿಗೆ ಭಿನ್ನಾಭಿಪ್ರಾಯ ತಾಳಿ ಕೂಡಲಸಂಗಮಕ್ಕೆ ಹೋಗಲು, ಇವನು ಕೆಲವು ದಿವಸ ಬಿಜ್ಜಳನ ದಂಡನಾಯಕನಾಗಿದ್ದನು. ಕಲ್ಯಾಣ ಕ್ರಾಂತಿಯ ಬಳಿಕ ಶರಣರ ದಂಡನ್ನು ಕಟ್ಟಿಕೊಂಡು ಉಳುವಿಗೆ ಬಂದು ಐಕ್ಯನಾಗುತ್ತಾನೆ.

ಬಸವಣ್ಣ, ಪ್ರಭುದೇವರಂತೆ ಚೆನ್ನಬಸವಣ್ಣನೂ ಒಬ್ಬ ಮಹತ್ವದ ವಚನಕಾರ. 'ಕೂಡಲ ಚೆನ್ನಸಂಗಮದೇವ' ಅಂಕಿತದಲ್ಲಿ ವಚನಗಳನ್ನು ರಚಿಸಿದುದಲ್ಲದೆ, ಸ್ವರವಚನ, ಮಂತ್ರಗೋಪ್ಯ, ಮಿಶ್ರಾರ್ಪಣ, ಕರಣಹಸಿಗೆ ಮೊದಲಾದ ಲಘುಕೃತಿಗಳ ಕರ್ತೃವೂ ಆಗಿ, ಶರಣತತ್ವ ಪ್ರತಿಪಾದಕರಲ್ಲಿ ಅಗ್ರಗಣ್ಯನೆನಿಸಿದ್ದಾನೆ. ಸದ್ಯ ಈತನ ೧೭೬೩ ವಚನಗಳು ದೊರೆತಿವೆ. ಷಟ್‌ಸ್ಥಲ ತತ್ವ ನಿರೂಪಣೆಯೇ ಅವುಗಳ ಪರಮಗುರಿ. ಆಗ ತಾನೆ ನೂತನವಾಗಿ ರೂಪುಗೊಳ್ಳುತ್ತಿದ್ದ ಶರಣಧರ್ಮಕ್ಕೆ ಒಂದು ನಿಶ್ಚಿತ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುವಲ್ಲಿ ತುಂಬ ಮುತುವರ್ಜಿ ವಹಿಸಿ, ಅದು ಸರ್ವವೇದ್ಯವೂ ಸಾರ್ವಕಾಲಿಕವೂ ಆಗುವಂತೆ ನೋಡಿಕೊಂಡ ಕೀರ್ತಿ ಈತನದು. ಹೀಗಾಗಿ ಈತ 'ಷಟ್‌ಸ್ಥಲಬ್ರಹ್ಮ', 'ಷಟ್‌ಸ್ಥಲಚಕ್ರವರ್ತಿ' ಎಂಬ ಪ್ರಶಂಸೆಗೆ ಪಾತ್ರನಾಗಿದ್ದಾನೆ.

ಚೆನ್ನಯ್ಯ

ಮಾದಾರ ಚೆನ್ನಯ್ಯನಿಂದ ಭಿನ್ನನಾದ ಈತನ ಬಗ್ಗೆ ಏನೊಂದು ತಿಳಿದಿಲ್ಲ. ಕಾಲ ಸು. ೧೭ ಶತಮಾನ. 'ಚೆನ್ನಯ್ಯ ಪ್ರಿಯ ನಿರ್ಮಾಯ ಪ್ರಭುವೆ' ಎಂಬ ಅಂಕಿತದಲ್ಲಿ ೪೨ ವಚನಗಳು ದೊರೆತಿವೆ.

ಇವುಗಳಿಗೆ 'ಕಂಡಿತದ ವಚನಗಳು' ಎಂದು ಕರೆಯಲಾಗಿದೆ. ಪ್ರಸಾದ, ಪಾದೋದಕ ಇತ್ಯಾದಿಯನ್ನು ಕುರಿತ ನಿರೂಪಣೆ ಇಲ್ಲಿದೆ.

ಜಕ್ಕಣಯ್ಯ

ಅಧಿಕ ಸಂಖ್ಯೆಯಲ್ಲಿ ವಚನಗಳನ್ನು ರಚಿಸಿದ್ದರೂ ಈತನ ಜೀವನದ ಬಗ್ಗೆ ಯಾವ ಸಂಗತಿಗಳೂ ದೊರೆತಿಲ್ಲ. ಕಾಲ ಸು. ೧೮೦೦. 'ಝೇಂಕಾರ ನಿಜಲಿಂಗ ಪ್ರಭುವೆ' ಅಂಕಿತದಲ್ಲಿ ೭೭೮ ವಚನಗಳು ದೊರೆತಿವೆ. ಇವುಗಳನ್ನು ೧೮ ಸ್ಥಲಗಳ ಅಡಿಯಲ್ಲಿ ಸಂಕಲಿಸಲಾಗಿದ್ದು, ಈ ಕೃತಿಗೆ 'ನಿರಾಳ ಮಂತ್ರಗೋಪ್ಯ' ಎಂದು ಕರೆಯಲಾಗಿದೆ. ಯೋಗ ರಹಸ್ಯವನ್ನು ಬೆಡಗಿನ ನುಡಿಗಳಲ್ಲಿ ಹೇಳುವುದು ಈ ವಚನಗಳ ಉದ್ದೇಶವಾಗಿದೆ.

ಜಗಳಗಂಟ ಕಾಮಣ್ಣ

ಕಾಲ - ೧೧೬೦. ನಾಲ್ಕು ವಚನಗಳು ಮಾತ್ರ ದೊರೆತಿವೆ. ಅಂಕಿತ - ಕಾಮೇಶ್ವರ. ಗುರು-ಲಿಂಗ ಜಂಗಮದ ಸ್ವರೂಪ, ನಿಜದ ನಿಲುವು, ಏಕದೈವ ನಿಷ್ಠೆ ಇವುಗಳ ವಸ್ತು.

ಜೇಡರ ದಾಸಿಮಯ್ಯ

ಆದ್ಯ ವಚನಕಾರ. ಗುಲಬರ್ಗಾ ಜಿಲ್ಲೆಯ ಮುದನೂರು ಜನ್ಮಸ್ಥಳ. ತಂದೆ -ಕಾಮಯ್ಯ, ತಾಯಿ -ಶಂಕರಿ, ಹೆಂಡತಿ-ದುಗ್ಗಳೆ. ಕಾಯಕ-ಬಟ್ಟೆ ನೇಯುವುದು. ರಾಮನಾಥ ಅಧಿದೈವ. ಶಿವನಿಗೆ ವಸ್ತ್ರವನ್ನಿತ್ತು ತವನಿಧಿ ಪಡೆದೆನೆಂಬ ಈತನ ಅಹಂಕಾರವನ್ನು ಶಂಕರದಾಸಿಮಯ್ಯ ಮುರಿದ. ಶ್ರೇಷ್ಠ ವಚನಕಾರ. ಕಾಲ ೧೧೦೦. 'ರಾಮನಾಥ' ಅಂಕಿತದಲ್ಲಿ ೧೭೬ ವಚನಗಳು ದೊರೆತಿವೆ. ವಚನ ಸಾಹಿತ್ಯದ ಸ್ವರೂಪ, ಲಕ್ಷಣ, ಆಶಯಗಳನ್ನೆಲ್ಲ ಒಳಗೊಂಡ ಇವು ಶರಣಧರ್ಮದ ಪರಿಭಾಷೆಗಳನ್ನು ರೂಪಿಸಿಕೊಟ್ಟಿವೆ.

ದಾಸಿಮಯ್ಯನ ವಚನಗಳು ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥವಂತಿಕೆಯನ್ನು ಮುಖ್ಯ ಲಕ್ಷಣವನ್ನಾಗಿಸಿಕೊಂಡು, ಶರಣರ ನುಡಿಗಡಣದ ಮಹತ್ವ, ದಾಂಪತ್ಯಧರ್ಮ, ಸ್ತ್ರೀ-ಪುರುಷ ಸಮಾನತೆ, ಗುರುವಿನ ಶ್ರೇಷ್ಠತೆ, ಒಡಲ ಹಸಿವಿನ ತೀವ್ರತೆ, ದೇವನ ದಾನಗುಣ, ಮಾನವನ ಸ್ವಾರ್ಥ, ಸಮಾಜದ ವೈಪರೀತ್ಯಗಳ ವಿಡಂಬನೆ, ಸರ್ವ ಸಮಾನತೆಯ ಬಯಕೆಗಳನ್ನು ತುಂಬ ಆತ್ಮೀಯವಾಗಿ ಪ್ರಕಟಿಸುತ್ತವೆ.

ಹೊಸದೊಂದು ಧರ್ಮ, ಹೊಸ ಸಾಹಿತ್ಯ ರೂಪ, ಹೊಸ ಬದುಕಿನ ಕನಸುಗಳನ್ನು ಕಟ್ಟಿಕೊಟ್ಟ ಜೇಡರದಾಸಿಮಯ್ಯನಿಗೆ ಕರ್ನಾಟಕದ ಧಾರ್ಮಿಕ ಮತ್ತು ಸಾಹಿತ್ಯಿಕ ಕ್ಷೇತ್ರದಲ್ಲಿ ತುಂಬ ಗೌರವಾನ್ವಿತವಾದ ಸ್ಥಾನ ಮೀಸಲಾಗಿದೆ.

ಜೋದರ ಮಾಯಣ್ಣ

ಈತ ಬಿಜ್ಜಳನ ಆಸ್ಥಾನದಲ್ಲಿ ಆನೆಯ ಪಡೆಯ ಮೇಲಾಧಿಕಾರಿಯಾಗಿದ್ದನೆಂದು ತಿಳಿದುಬರುತ್ತದೆ. ಕಾಲ-೧೧೬೦. ಐದು ವಚನಗಳು ದೊರೆತಿವೆ. ಅಂಕಿತ-ಸೋಮನಾಥಲಿಂಗ. ಭೃತ್ಯಭಾವ, ಪುರಾತನರ ಸ್ಮರಣೆ, ನಡೆ-ನುಡಿ ನಿಷ್ಠೆ, ಗುರುವಚನದ ಮಹತ್ವ ಅವುಗಳಲ್ಲಿ ವ್ಯಕ್ತವಾಗಿದೆ.

ಡಕ್ಕೆಯ ಬೊಮ್ಮಣ್ಣ

ಈತನಿಗೆ ಡಕ್ಕೆಯ ಮಾರಯ್ಯ ಎಂದೂ ಕರೆಯಲಾಗುತ್ತದೆ. ಈತ ಒಬ್ಬ ಜಾನಪದ ಕಲಾವಿದ. ಶರಣನಾಗುವ ಮೊದಲು ಮಾರಿಯನ್ನು ತಲೆಯ ಮೇಲೆ ಹೊತ್ತು ಡಕ್ಕೆಯನ್ನು ಬಾರಿಸುತ್ತ ಭಿಕ್ಷೆ ಬೇಡುವುದು ಈತನ ಕಾಯಕವಾಗಿತ್ತು. ಶಂಕರ ದಾಸಿಮಯ್ಯನ ಗರ್ವವನ್ನು ಈತ ಮುರಿದನೆಂದು ವೀರಶೈವಾಮೃತ ಮಹಾಪುರಾಣ ಹೇಳುತ್ತದೆ. ಕಾಲ - ೧೧೩೦. 'ಕಾಲಾಂತಕ ಭೀಮೇಶ್ವರಲಿಂಗ' ಅಂಕಿತದಲ್ಲಿ ೯೦ ವಚನಗಳು ದೊರೆತಿವೆ. ಅವುಗಳಲ್ಲಿ ತನ್ನ ಕಲೆಯ ವೇಷ ಭೂಷಣ ಮತ್ತು ಪರಿಭಾಷೆಯನ್ನು ಆಧ್ಯಾತ್ಮಕ್ಕೆ ಸಂಕೇತವಾಗಿ ಬಳಸಿದ್ದಾನೆ. ತನ್ನ ವ್ಯಕ್ತಿತ್ವವನ್ನು ರೂಪಿಸಿದ ಬಸವಾದಿ ಶರಣರನ್ನು ನೆನೆಯುತ್ತಾನೆ.

ಡೋಹರ ಕಕ್ಕಯ್ಯ

ಬಸವಾದಿ ಶರಣರ ವಿಶೇಷ ಗೌರವಕ್ಕೆ ಪಾತ್ರನಾದ ದಲಿತ ಶರಣ. 'ಡೋಹಾರ' ಜಾತಿಗೆ ಸೇರಿದವನು. ಮಾಳವ ದೇಶದಿಂದ ಕಲ್ಯಾಣಕ್ಕೆ ಬಂದು ಶರಣನಾಗುತ್ತಾನೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಚೆನ್ನಬಸವಣ್ಣನ ಜೊತೆ ಉಳವಿಯತ್ತ ಸಾಗುತ್ತಾನೆ. ಕಕ್ಕೇರಿಯಲ್ಲಿ ಐಕ್ಯನಾಗುತ್ತಾನೆ. ಅಲ್ಲಿ ಈತನ ಹೆಸರಿನ ಕೆರೆ, ಬಾವಿ ಮತ್ತು ಸಮಾಧಿ ಇವೆ. ಕಾಲ - ೧೧೩೦. 'ಅಭಿನವ ಮಲ್ಲಿಕಾರ್ಜುನ' ಅಂಕಿತದಲ್ಲಿ ೬ ವಚನಗಳು ದೊರೆತಿವೆ. ಅವುಗಳಲ್ಲಿ ಬಸವಾದಿ ಶರಣರ ಕೃಪೆಯಿಂದ ತನ್ನ ಕಷ್ಟಕುಲ (ಕೀಳುಜಾತಿ)ದ ಕರ್ಮವನ್ನು ಕಳೆದುಕೊಂಡು ಶರಣನಾದ ಪರಿಯನ್ನು ತಿಳಿಸುತ್ತಾನೆ. 'ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ' ಎಂಬ ಮಾತು ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯ ಸ್ವರೂಪವನ್ನು ತೆರೆದುತೋರಿಸುತ್ತದೆ.

ತಳವಾರ ಕಾಮಿದೇವಯ್ಯ

ಕಲ್ಯಾಣದಲ್ಲಿ ತಳವಾರ ಕಾಯಕವನ್ನು ಕೈಕೊಂಡಿದ್ದ ಈತನ ಕಾಲ ೧೧೬೦. 'ಕಾಮಹರಪ್ರಿಯ ರಾಮನಾಥ' ಅಂಕಿತದಲ್ಲಿ ಹತ್ತು ವಚನಗಳು ದೊರೆತಿವೆ. ತನ್ನ ಸಹಜ ಆಧ್ಯಾತ್ಮಾನುಭವವನ್ನು ಸರಳ ನುಡಿಗಳಲ್ಲಿ ನಿರೂಪಿಸುತ್ತಾನೆ.

ತುರುಗಾಹಿ ರಾಮಣ್ಣ

ಶಿವಭಕ್ತರ ಮನೆಯ ಗೋವುಗಳನ್ನು ಕಾಯುವ ಕಾಯಕವನ್ನು ಕೈಕೊಂಡ ಈತನ ಕಾಲ ೧೧೬೦. 'ಗೋಪತಿನಾಥ ವಿಶ್ವೇಶ್ವರಲಿಂಗ' ಅಂಕಿತದಲ್ಲಿ ರಚಿಸಿದ ೪೬ ವಚನಗಳು ದೊರೆತಿವೆ. ತನ್ನ ವೃತ್ತಿ ವಲಯದ ಅನುಭವವನ್ನು ಆಧ್ಯಾತ್ಮಾನುಭವದ ಜೊತೆ ಸಮೀಕರಿಸಿ ಹೇಳಿದ ರೀತಿ ತುಂಬ ಅರ್ಥಪೂರ್ಣವೆನಿಸಿದೆ. ಕೆಲವು ಬೆಡಗಿನ ವಚನಗಳಲ್ಲಿ ತಾತ್ವಿಕ ವಿವೇಚನೆಯಿದೆ. ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ ಮತ್ತು ಇತರ ಶರಣರು ಎಲ್ಲಿ ಹೋಗಿ ಐಕ್ಯರಾದರು ಎಂಬುದನ್ನು ತಿಳಿಸುವ ವಚನ ಐತಿಹಾಸಿಕ ಮಹತ್ವವನ್ನು ಪಡೆದಿದೆ.

ತೆಲುಗೇಶ ಮಸಣಯ್ಯ

ಗೋವುಗಳನ್ನು ಕಾಯುವ ಕಾಯಕ ಕೈಕೊಂಡಿದ್ದ ಈತನ ಕಾಲ-೧೧೬೦. ಈ ಹೆಸರಿನ ಜೊತೆಯ 'ತೆಲುಗೇಶ'ವೆಂಬುದು ತೆಲುಗು ನಾಡನ್ನು ಸೂಚಿಸದೆ. ತೆಲ್ಲಿಗರು (ಗಾಣಿಗರು) ಸ್ಥಾಪಿಸಿದ 'ತೆಲ್ಲಿಗೇಶಲಿಂಗ'ವನ್ನು ಕುರಿತುದಾಗಿರಬೇಕು. 'ತೆಲುಗೇಶ್ವರ' ಅಂಕಿತದಲ್ಲಿ ೭ ವಚನ ದೊರೆತಿವೆ. ಗೋವಳನ

ವೇಷ ಭೂಷಣ, ಆತ ಊದುವ ಕೊಳಲಿನ ವರ್ಣನೆ ಕಣ್ಣಿಗೆ ಕಟ್ಟುವಂತಿವೆ. ಶರಣರ ಮಹಿಮಾತಿಶಗಳನ್ನು ಹೇಳುವ ಮಾತುಗಳು ಸುಂದರವಾಗಿವೆ; ನೂತನ ಕಲ್ಪನೆಯಿಂದ ಕೂಡಿವೆ.

ತೋಂಟದ ಸಿದ್ಧಲಿಂಗ ಶಿವಯೋಗಿ

ಲಿಂಗಾಯತ ಧಾರ್ಮಿಕ ಚರಿತ್ರೆಯಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳದು ಅಗ್ರಮಾನ್ಯ ಹೆಸರು. ಅಲ್ಲಮಪ್ರಭು ಸಂಪ್ರದಾಯದ ಶೂನ್ಯಪೀಠನನ್ನು ಆರೋಹಣ ಮಾಡಿ, ಬಸವಾದಿಗಳು ರೂಪಿಸಿದ ಷಟ್‌ಸ್ಥಲ ಸಿದ್ಧಾಂತಗಳನ್ನು ವ್ಯಾಪಕವಾಗಿ ಪ್ರಸಾರಮಾಡಿ, ಹನ್ನೆರಡನೆಯ ಶತಮಾನದ ಅನುಭವ ಮಂಟಪ ಸಂಸ್ಕೃತಿಯನ್ನು ಪುನರ್ ಸ್ಥಾಪಿಸಿದ ಮಹಾಪುರುಷ.

ಸಿದ್ಧಲಿಂಗರ ಜೀವನ ಸಾಧನೆ ಸಿದ್ಧಿಗಳು ವಚನ, ಕಾವ್ಯ, ಶಾಸನಗಳಲ್ಲಿ ಎರಕಗೊಂಡಿದೆ. ನಾಡಿನ ಉದ್ದಗಲಕ್ಕೂ ಎದ್ದು ನಿಂತ ಇವರ ಹೆಸರಿನ ಗದ್ದುಗೆ, ಮಠ ಮಂದಿರಗಳು, ಇವರ ಪ್ರಭಾವವನ್ನು ಸಾರಿ ಹೇಳುತ್ತವೆ.

ಸಿದ್ಧಲಿಂಗಯತಿಗಳು ಬಾಳಿದುದು ೧೬ನೆಯ ಶತಮಾನದಲ್ಲಿ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿ ಇವರ ಜನ್ಮಸ್ಥಳ. ತಂದೆ ಮಲ್ಲಿಕಾರ್ಜುನ, ತಾಯಿ ಜ್ಞಾನಾಂಬೆ. ಮನೆತನದ ವೃತ್ತಿ ವ್ಯಾಪಾರ. ಗೋಸಲ ಚೆನ್ನಬಸವೇಶ್ವರ ದೀಕ್ಷಾಗುರು. ಕಗ್ಗೆರೆಯ ತೋಟದಲ್ಲಿ ಆರು ತಿಂಗಳ ಕಾಲ ಅನುಷ್ಠಾನಗೈದ ಕಾರಣ 'ತೋಂಟದ ಸಿದ್ಧಲಿಂಗ' ಎಂದು ಹೆಸರು ಬಂದಿತು. ಸಿದ್ಧಗಂಗೆ ಮೊದಲಾದ ಕ್ಷೇತ್ರದರ್ಶನ ಪಡೆದು, ಕೊನೆಗೆ ನಾಗಿಣೀನದಿ ತೀರದ ಎಡೆಯೂರಿಗೆ ಬಂದು, ಬೋಳಬಸವರಿಗೆ ನಿರಂಜನ ಪಟ್ಟಾಧಿಕಾರವನ್ನು ವಹಿಸಿಕೊಟ್ಟು, ದಾನಿವಾಸ ಗ್ರಾಮದ ಚೆನ್ನವೀರಪ್ಪ ಒಡೆಯರು ಕಟ್ಟಿಸಿಕೊಟ್ಟ ಕಲ್ಲುಮಠದಲ್ಲಿ ತಾವು ನಿರ್ವಿಕಲ್ಪ ಸಮಾಧಿಯನ್ನು ಹೊಂದಿದರು.

ಬಸವಾದಿ ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸುವ-ಸಂಕಲಿಸುವ-ಸಂಪಾದಿಸುವ ಕಾರ್ಯವನ್ನು ತಮ್ಮ ಶಿಷ್ಯರು ಕೈಕೊಳ್ಳುವಂತೆ ಮಾಡಿದ್ದು, ತಾವು ಸ್ವತಃ ವಚನಗಳನ್ನು ರಚಿಸಿ ವಚನಸಾಹಿತ್ಯ ಪರಂಪರೆಯನ್ನು ಮುಂದುವರಿಸಿದ್ದು ಇವರ ಮುಖ್ಯ ಕೊಡುಗೆಗಳೆನಿಸಿವೆ.

ಸಿದ್ಧಲಿಂಗರು ೭೦೧ ವಚನಗಳನ್ನು ರಚಿಸಿದ್ದಾರೆ. 'ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ' ಎಂಬ ಅಂಕಿತದ ಅವು 'ಷಟ್‌ಸ್ಥಲ ಜ್ಞಾನಸಾರಾಮೃತ' ಹೆಸರಿನ ಸ್ಥಲಕಟ್ಟಿನ ಕೃತಿಯಲ್ಲಿ ಸಂಕಲನಗೊಂಡಿವೆ. ಹೆಸರೇ ಹೇಳುವಂತೆ ಷಟ್‌ಸ್ಥಲ ತತ್ವ ನಿರೂಪಣೆ ಇವುಗಳ ವಸ್ತು.

ದಶಗಣ ಸಿಂಗಿದೇವ

೧೧೬೦ರಲ್ಲಿ ಇದ್ದ ಈತನು 'ದಶಗಣ'ರಲ್ಲಿ ಒಬ್ಬನು. ನಾಲ್ಕು ವಚನಗಳು ದೊರೆತಿವೆ. ಅಂಕಿತ -ನಾಚಯ್ಯಪ್ರಿಯ ಮಲ್ಲಿನಾಥಯ್ಯ, ಬಸವಣ್ಣನವರ ವಚನಗಳ ದಟ್ಟ ಪ್ರಭಾವಕ್ಕೊಳಗಾದ ಈತನ ವಚನಗಳಲ್ಲಿ ಗುರುಭಕ್ತಿ, ಇಷ್ಟಲಿಂಗನಿಷ್ಠೆ ಎದ್ದು ತೋರುತ್ತದೆ.

ದಸರಯ್ಯ

ಬಸವಣ್ಣನವರ ಸಮಕಾಲೀನನಾದ ಈತನ ಜನ್ಮಸ್ಥಳ ರಾಮಗೊಂಡೆ ಎಂಬ ಗ್ರಾಮ. ವೀರಮ್ಮ ಇವನ ಪತ್ನಿ. ನಿತ್ಯವೂ ತೋಟಕ್ಕೆ ಹೋಗಿ ಹೂಗಳನ್ನು ತಿರಿದು ತಂದು ಪೂಜೆ ಮಾಡುವುದು ಈತನ ಕಾಯಕ. ಒಮ್ಮೆ ಹೂ ಹರಿಯುತ್ತಿದ್ದಾಗ 'ಅಯ್ಯೋ ನೊಂದೆನು' ಎಂಬ ಧ್ವನಿ ಕೇಳಿಸಿತು. ಅಂದಿನಿಂದ ಆತ ಗಿಡದಿಂದ ಹೂಗಳನ್ನು ಹರಿಯದೆ, ಕೆಳಗೆ ಉದುರಿ ಬಿದ್ದುವನ್ನು ಮಾತ್ರ ಆಯ್ದುತಂದು

ಪೂಜಿಸತೊಡಗಿದ. ಇದರಿಂದ ಈತ ಉತ್ಕಟ ಅಹಿಂಸಾವಾದಿಯಾಗಿದ್ದನೆಂತು ವ್ಯಕ್ತವಾಗುತ್ತದೆ. 'ದಸರೇಶ್ವರಲಿಂಗ' ಅಂಕಿತದಲ್ಲಿ ಬರೆದ ಈತನ ೧೦ ವಚನಗಳು ದೊರೆಯುತ್ತಿದ್ದು, ಅವುಗಳಲ್ಲಿ ಅಹಿಂಸಾ ಭಾವ ಪ್ರಮುಖವಾಗಿ ವ್ಯಕ್ತವಾಗಿದೆ. ಭಾಷೆ ಸರಳ, ಭಾವ ಹಗುರ. ಇವು ಆತನ ವ್ಯಕ್ತಿತ್ವದ ಪ್ರತಿಬಿಂಬಗಳೆನಿಸಿವೆ.

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

ಈಕೆ ಶರಣ ದಸರಯ್ಯನ ಪತ್ನಿ. ಕಾಲ - ೧೧೬೦. 'ಗುರು ಶಾಂತೇಶ್ವರ' ಅಂಕಿತದಲ್ಲಿ ಐದು ವಚನಗಳು ದೊರೆತಿವೆ. ಮನದ ಚಂಚಲತೆ, ಶರಣನ ನಿಲುವು, ವ್ರತನಿಷ್ಠೆ, ಪಾದೋದಕ - ಪ್ರಸಾದ ಮಹತ್ವ ಈ ವಚನಗಳಲ್ಲಿ ಪ್ರತಿಪಾದಿತವಾಗಿದೆ.

ದಾಸೋಹದ ಸಂಗಣ್ಣ

ಈತ ಬನವಾಸಿಯ ಮಧುಕೇಶ್ವರನ ಭಕ್ತ. ಅನ್ನಸಂತರ್ಪಣೆ ಇವನ ಕಾಯಕ. ಹೀಗಾಗಿ 'ದಾಸೋಹದ ಸಂಗಣ್ಣ' ಎಂಬ ಹೆಸರು ಬಂದಿತು. ಕಾಲ ೧೧೬೦. 'ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರ' ಅಂಕಿತದಲ್ಲಿ ಈತ ರಚಿಸಿದ ೧೦೨ ವಚನಗಳು ದೊರೆತಿವೆ. ಹೆಚ್ಚಾಗಿ ದಾಸೋಹದ ಮಹತ್ವವನ್ನು ಎತ್ತಿ ಹೇಳುತ್ತವೆ. ಅರ್ಪಿತ - ಅನರ್ಪಿತ, ಅರಿವು, ಆಚಾರ, ಭಕ್ತಿ, ಸ್ವಾನುಭಾವ, ಪ್ರಸಾದ ಮೊದಲಾದ ತಾತ್ವಿಕ ವಿಷಯಗಳು ವಿವರಿಸಲ್ಪಟ್ಟಿವೆ.

ದುಗ್ಗಳೆ

ಈಕೆ ಜೇಡರ ದಾಸಿಮಯ್ಯನ ಧರ್ಮಪತ್ನಿ. ಸ್ಥಳ ಮುದನೂರು. ಕಾಲ -೧೧೦೦. ಕಾಯಕ- ಬಟ್ಟೆ ನೇಯುವುದು. ಪುರಾಣಗಳಲ್ಲಿ ದಾಸಿಮಯ್ಯನ ಜೊತೆ ಈಕೆಯ ಕಥೆ ಪ್ರಸಿದ್ಧವಾಗಿದೆ. ಈಕೆಯ ಎರಡು ವಚನಗಳು ದೊರೆತಿವೆ. ಅಂಕಿತ 'ದಾಸಯ್ಯ ಪ್ರಿಯ ರಾಮನಾಥ.' ಅವುಗಳಲ್ಲಿ ಬಸವ, ಅಲ್ಲಮ, ಚೆನ್ನಬಸವ, ಮರುಳ ಶಂಕರದೇವ, ಸಿದ್ಧರಾಮ, ಅಜಗಣ್ಣರನ್ನು ನೆನೆದಿದ್ದಾಳೆ. ಇದರಿಂದ ಬಸವಣ್ಣನವರ ಕಾಲದಲ್ಲಿಯೂ ಈಕೆ ಬದುಕಿದ್ದಳೆಂದು ತಿಳಿದುಬರುತ್ತದೆ.

ದೇಶಿಕೇಂದ್ರ ಸಂಗನಬಸವಯ್ಯ

ಈತನ ಇತಿವೃತ್ತವೇನೂ ದೊರಕುವುದಿಲ್ಲ. 'ದೇಶಿಕೇಂದ್ರ' ಎಂದು ಕರೆದುಕೊಂಡಿರುವುದರಿಂದ ವಿರಕ್ತ ಪರಂಪರೆಗೆ ಸೇರಿದ ಚರಜಂಗಮನಾಗಿರಬೇಕು. ಸೊಲ್ಲಾಪುರದ ಸಮೀಪದ ಕರಜಿಗೆ ಈತನ ಸ್ಥಳವಾಗಿರಬೇಕು. ಕಾಲ -ಸು. ೧೭ ಶತಮಾನ. ಅಂಕಿತ-ನಿರಂಜನ ಚೆನ್ನ ಬಸವಲಿಂಗ. ಸದ್ಯ ೧೨೪೨ ವಚನಗಳು ದೊರೆತಿವೆ. 'ಷಟ್‌ಸ್ಥಲ ವಚನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವುಗಳನ್ನು ಸಂಕಲಿಸಲಾಗಿದೆ. ಒಟ್ಟು ೫೩ ಸ್ಥಲಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಕೆಲವು ಇದುವರೆಗೆ ಹೆಸರಿಸದೇ ಇರುವ ನೂತನ ಸ್ಥಲಗಳಾಗಿರುವುದು ವಿಶೇಷವೆನಿಸಿದೆ.

ನಗೆಯ ಮಾರಿತಂದೆ

ನಗಿಸುವುದನ್ನೇ ಕಾಯಕವನ್ನಾಗಿ ಮಾಡಿಕೊಂಡ ಹಾಸ್ಯ ಕಲಾವಿದನೀತ. ಕಾಲ- ೧೧೬೦. 'ಆತುರವೈರಿ ಮಾರೇಶ್ವರ' ಅಂಕಿತದಲ್ಲಿ ೧೦೧ ವಚನಗಳನ್ನು ರಚಿಸಿದ್ದಾನೆ. ಚತುರ ಮಾತುಗಾರಿಕೆ, ದೃಷ್ಟಾಂತ ಕಥೆಗಳು ಮತ್ತು ಹೋಲಿಕೆಗಳ ಮೂಲಕ ಕೇಳುಗರ ಮನಸ್ಸನ್ನು ರಂಜಿಸುವ ಕಲೆಗಾರಿಕೆ ಈ ವಚನಗಳಲ್ಲಿ ಎದ್ದು ತೋರುತ್ತದೆ. ಹಾಸ್ಯದ ಒಳಗೆ ಆಧ್ಯಾತ್ಮವನ್ನು ಅಡಗಿಸಿಕೊಂಡಿರುವುದು, ಸರಳತೆ, ಸಂಕ್ಷಿಪ್ತತೆಗಳನ್ನು ಮೈಗೂಡಿಸಿಕೊಂಡಿರುವುದು ಈತನ ವಚನಗಳ ವಿಶೇಷತೆ ಎನಿಸಿದೆ.

ನಾಗಲಾಂಬಿಕೆ

'ನಾಗಮ್ಮ', 'ಅಕ್ಕನಾಗಮ್ಮ' ಎಂದು ಕರೆಯಿಸಿಕೊಳ್ಳುವ ಈಕೆ ಬಸವಣ್ಣನವರ ಸೋದರಿ. ಕಾಲ - ೧೧೬೦, ತಂದೆ - ಮಾದರಸ, ತಾಯಿ - ಮಾದಲಾಂಬಿಕೆ. ಜನ್ಮಸ್ಥಳ - ಇಂಗಳೇಶ್ವರ ಬಾಗೆವಾಡಿ. ಗಂಡ - ಶಿವದೇವ. ಮಗ - ಚೆನ್ನಬಸವಣ್ಣ. ಈಕೆ ಬಸವಣ್ಣನವರ ಉಜ್ವಲ ಬದುಕನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾಳೆ. ಕಲ್ಯಾಣದ ಮಹಾಮನೆ, ಅನುಭವ ಮಂಟಪಗಳಲ್ಲಿ ಅನನ್ಯ ಕಾರ್ಯಕ್ಷಮತೆಯನ್ನು ತೋರುತ್ತಾಳೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣ ಬಳಗದ ನೇತೃತ್ವವಹಿಸಿ ಉಳುವಿಗೆ ಬರುತ್ತಾಳೆ. ಚೆನ್ನಬಸವಣ್ಣನ ಐಕ್ಯದ ನಂತರ ಚಿಕ್ಕಮಗಳೂರು ಜಿಲ್ಲೆ ಎಣ್ಣೆಹೊಳೆ ತೀರದ ತರೀಕೆರೆಯಲ್ಲಿ ಬಯಲಾಗುತ್ತಾಳೆ.

'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬುದು ಇವಳ ಅಂಕಿತ. ಸದ್ಯ ೧೫ ವಚನಗಳು ದೊರೆತಿವೆ. ಅವುಗಳಲ್ಲಿ ಬಸವಣ್ಣನವರ ಸ್ತುತಿಪರವಾದವುಗಳೇ ಅಧಿಕ. ಜೊತೆಗೆ ಇತರ ಶರಣರ ಪ್ರಸ್ತಾಪವೂ ಇದೆ. ಆಕೆಯ ಬದುಕಿನಲ್ಲಿ ಬಂದೆರಗಿದ ಎಡರುಗಳು, ಅವುಗಳನ್ನು ಧೈರ್ಯದಿಂದ ಎದುರಿಸಿದ ರೀತಿ ಕೆಲವು ವಚನಗಳಲ್ಲಿ ಪ್ರತಿಧ್ವನಿಸಿವೆ.

ನಿಜಗುಣಯೋಗಿ

ಈತ ಬಸವಪೂರ್ವಯುಗದ ಶರಣ. ಸ್ಥಳ-ಚಿಮ್ಮಲಗಿ. ಚಂದಿಮರಸ ಈತನ ಶಿಷ್ಯ. ಕಾಲ-೧೧೬೦. 'ನಿಜಗುಣಯೋಗಿ' ಅಂಕಿತದಲ್ಲಿ ವಚನ ಮತ್ತು ಸ್ವರವಚನಗಳನ್ನು ಬರೆದಿದ್ದಾನೆ. ಈಗ ದೊರೆತ ೧೬ ವಚನಗಳಲ್ಲಿ ಶಿವಯೋಗದ ಪ್ರತಿಪಾದನೆ ಮುಖ್ಯವಾಗಿದೆ. ಕೆಲವು ಸೂತ್ರಪ್ರಾಯವಾದ ಮಾತುಗಳಲ್ಲಿ ಅನುಭಾವ ಹರಳುಗಟ್ಟಿದೆ. ಈತನ ಘನವ್ಯಕ್ತಿತ್ವವನ್ನು ಅನೇಕ ಶರಣರು ಕೊಂಡಾಡಿದ್ದಾರೆ.

ನಿರಾಲಂಬ ಪ್ರಭುದೇವ

'ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ' ಎಂಬ ಅಂಕಿತದಲ್ಲಿ ೧೪ ವಚನಗಳನ್ನು ಬಿಟ್ಟರೆ ಈತನ ಬಗೆಗೆ ಮತ್ತಾವ ಸಂಗತಿಗಳೂ ದೊರೆಯುವುದಿಲ್ಲ. 'ಶಿವಭಕ್ತಿ ಪಂಚಾಂಗ ವಚನ' ಎಂದು ಕರೆಯಲಾದ ಈ ವಚನಗಳಲ್ಲಿ ಶಿವಾಚಾರಪಥವನರಿಯದೆ ಪಂಚಾಂಗ ಕೇಳುವವರನ್ನು, ಇತರ ಕಂದಾಚಾರಗಳನ್ನು ಕಟುವಾಗಿ ಟೀಕಿಸಲಾಗಿದೆ.

ನಿವೃತ್ತಿ ಸಂಗಯ್ಯ

ಈತನ ವೈಯಕ್ತಿಕ ವಿವರ ಸಿಕ್ಕುವುದಿಲ್ಲ. ಕಾಲ - ೧೧೬೦. ಮೂರು ವಚನಗಳು ದೊರೆತಿವೆ. ಅಂಕಿತ - ನಿವೃತ್ತಿ ಸಂಗಯ್ಯ. ಶರಣನಾದವನು ಪರಧನ, ಪರಾನ್ನ, ಪರಸ್ತ್ರೀಯರಾಸೆ ಬಿಡಬೇಕು, ಚಾತುರ್ವರ್ಣದವರು ಶಿವಭಕ್ತರಾದ ಬಳಿಕ ತಮ್ಮ ಮುನ್ನಿನ ಜಾತಿಯನ್ನು ಬಿಡಬೇಕು, ಆಸೆಯನ್ನು ಧಿಕ್ಕರಿಸಿ ನಿರಾಶೆಯಲ್ಲಿ ನಡೆವವನೆ ನಿಜವಾದ ಲಿಂಗಾಂಗಿ ಎಂದು ಹೇಳುತ್ತಾಳೆ. ಸಂಸ್ಕೃತ ಉದ್ಧರಣೆಗಳನ್ನು ಅಧಿಕವಾಗಿ ಬಳಸುವುದರಿಂದ ಈತ ವಿದ್ವಾಂಸನಾಗಿದ್ದನೆಂದು ತೋರುತ್ತದೆ.

ನೀಲಮ್ಮ

ಈಕೆ ಬಸವಣ್ಣನವರ ಎರಡನೆಯ ಹೆಂಡತಿ. ಸಿದ್ಧರಸನ ಮಗಳು. ಬಿಜ್ಜಳನ ಸಾಕುತಂಗಿ. ಈಕೆಗೆ ಬಾಲಸಂಗಯ್ಯ ಹೆಸರಿನ ಮಗನಿದ್ದನೆಂದು, ಸಣ್ಣ ವಯಸ್ಸಿನಲ್ಲಿ ತೀರಿಕೊಂಡನೆಂದು ತಿಳಿದುಬರುತ್ತದೆ. 'ವಿಚಾರಪತ್ನಿ' ಎಂದು ತನ್ನನ್ನು ಕರೆದುಕೊಂಡ ಈಕೆ, ಬಸವಣ್ಣನವರ ಬದುಕಿನಲ್ಲಿ

ಬಹುಮುಖ್ಯ ಪಾತ್ರವಹಿಸಿದ್ದಾಳೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಕೂಡಲಸಂಗಮ ಸಮೀಪದ ತಂಗಡಿಗಿಯಲ್ಲಿ ಐಕ್ಯಳಾದಳೆಂದು ತಿಳಿಯುತ್ತದೆ. ಕಾಲ-೧೧೬೦.

ನೀಲಮ್ಮ ಅಧಿಕ ಸಂಖ್ಯೆಯ ವಚನಗಳನ್ನು ರಚಿಸಿದ್ದಾಳೆ. ಅಂಕಿತ 'ಸಂಗಯ್ಯ'. ಸದ್ಯ ೨೮೮ ವಚನಗಳು ಉಪಲಬ್ಧವಾಗಿವೆ. ಅವುಗಳಲ್ಲಿ ಹೆಚ್ಚಾಗಿ ಬಸವ ಸ್ತುತಿ, ಅವರ ಅಗಲಿಕೆಯ ನೋವಿನ ಧ್ವನಿ ಕೇಳಿಬರುತ್ತವೆ.

ನುಲಿಯ ಚಂದಯ್ಯ

ಹುಲ್ಲು ತಂದು ಹಗ್ಗ ಹೊಸೆದು, ಮಾರಿ ಬಂದ ಹಣದಿಂದ ಜಂಗಮ ದಾಸೋಹ ನಡೆಸುತ್ತಿದ್ದ ಚಂದಯ್ಯ ಒಬ್ಬ ಕಾಯಕಯೋಗಿ. ಬಿಜಾಪುರ ಜಿಲ್ಲೆಯ ಶಿವಣಗಿ ಈತನ ಹುಟ್ಟೂರು. ಕಾಲ-೧೧೬೦. ಶೂನ್ಯಸಂಪಾದನೆ ಮತ್ತು ಪುರಾಣಗಳಲ್ಲಿ ಈತನ ಕಾಯಕನಿಷ್ಠೆಯ ಕಥೆ ವರ್ಣಿತವಾಗಿದೆ. ಇಷ್ಟಲಿಂಗದ ಕೈಯಿಂದಲೇ ಹಗ್ಗ ಮಾರುವ ಕಾಯಕ ಮಾಡಿಸಿದವನೀತ. ಹೆಂಡದ ಮಾರಯ್ಯ ತನ್ನೊಂದು ವಚನದಲ್ಲಿ ಈತನ ಘನವ್ಯಕ್ತಿತ್ವವನ್ನು ನಾಟಕೀಯವಾಗಿ ನಿರೂಪಿಸಿದ್ದಾನೆ. ಕಲ್ಯಾಣದ ಕ್ರಾಂತಿಯ ನಂತರ ಚೆನ್ನಬಸವಣ್ಣನೊಡನೆ ಉಳುವಿಗೆ ಬರುತ್ತಾನೆ. ಚೆನ್ನಬಸವಣ್ಣ ಐಕ್ಯವಾದ ನಂತರ ಅಕ್ಕನಾಗಮ್ಮನನ್ನು ಎಣ್ಣೆಹೊಳೆಯ ತೀರಕ್ಕೆ ಕರೆದೊಯ್ಯುತ್ತಾನೆ. ಆಕೆ ಅಲ್ಲಿ ಐಕ್ಯವಾಗಲು ತಾನು ನುಲೆನೂರು ಎಂಬಲ್ಲಿ ಬಯಲಾಗುತ್ತಾನೆ. ಅಲ್ಲಿ ಈತನ ಸಮಾಧಿ ಇರುವುದಾಗಿ ತಿಳಿದುಬರುತ್ತದೆ.

'ಚಂದೇಶ್ವರ' ಅಂಕಿತದಲ್ಲಿ ೪೮ ವಚನಗಳು ದೊರೆತಿವೆ. ಎಲ್ಲವೂ ಕಾಯಕ ಮೌಲ್ಯವನ್ನು ಎತ್ತಿ ಹಿಡಿಯುತ್ತವೆ. ಗುರು, ಲಿಂಗ, ಜಂಗಮ ಎಲ್ಲರಿಗೂ ಕಾಯಕ ಕಡ್ಡಾಯ. ಭಾವ ಶುದ್ಧವಾಗಿ ಮಾಡುವುದೇ ನಿಜವಾದ ಕಾಯಕ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಮಾತ್ರ ಲಿಂಗಾರ್ಪಿತವಾಗುತ್ತದೆ ಎಂಬಂಥ ಮಾತುಗಳಲ್ಲಿ ಈತನ ಕಾಯಕದ ಪರಿಕಲ್ಪನೆ ಸ್ಪಷ್ಟವಾಗಿದೆ.

ಪರಂಜ್ಯೋತಿ

೧೭ನೆಯ ಶತಮಾನದ ಸುಮಾರಿನಲ್ಲಿ ಇದ್ದಿರಬಹುದಾದ ಈತನ ಬಗೆಗೆ ವಿವರಗಳಿಲ್ಲ. 'ಪರಂಜ್ಯೋತಿಯರ ವಚನಗಳು' ಎಂಬ ತಲೆ ಬರಹದಡಿಯಲ್ಲಿ ವಚನಗಳು ದೊರಕುವುದರಿಂದ 'ಪರಂಜ್ಯೋತಿ' ಎಂಬುದು ಈತನ ಹೆಸರಾಗಿರಬೇಕೆಂದು ಊಹಿಸಲಾಗಿದೆ. 'ವರ ನಾಗನ ಗುರು ವೀರನೆ ಪರಂಜ್ಯೋತಿ ಮಹಾವಿರಕ್ತಿ' ಎಂಬ ಅಂಕಿತದಲ್ಲಿ ೧೩ ವಚನಗಳು ದೊರೆತಿವೆ. ತನ್ನ ತಾನರಿಯದೆ, ತನ್ನೊಳಗಿನ ಪರಮಾತ್ಮನ ಸ್ವರೂಪವನ್ನು ಗುರುತಿಸದೆ ಇತರರನ್ನು ಹಾದಿ ತಪ್ಪಿಸುವ ವೇಷಡಂಭಕರನ್ನು ವಿಡಂಬಿಸುವುದು ಇವುಗಳ ಮುಖ್ಯ ಉದ್ದೇಶವಾಗಿದೆ.

ಪುರದ ನಾಗಣ್ಣ

ಈತ ಅಮರಗುಂಡದ ಮಲ್ಲಿಕಾರ್ಜುನನ ಮಗ. ಸ್ಥಳ - ಅಮರಗುಂಡ, ಅಂದರೆ ತುಮಕೂರು ಜಿಲ್ಲೆಯ ಗುಬ್ಬಿ. ಕಾಲ - ೧೧೬೦. 'ಅಮರಗುಂಡದ ಮಲ್ಲಿಕಾರ್ಜುನ' ಅಂಕಿತದಲ್ಲಿ ೯ ವಚನಗಳು ದೊರೆತಿವೆ. ಬಸವಾದಿ ಶರಣರ ಸ್ತುತಿ, ನಿಜಾನಂದ ಭಕ್ತಿಯ ಬಯಕೆ, ಗುರುಪಾದೋದಕದ ಮಹಿಮೆ, ಶರಣನ ಸ್ವರೂಪ, ಲಿಂಗನಿಷ್ಠೆ ಮೊದಲಾದ ವಿಷಯಗಳ ವಿವರ ಅವುಗಳಲ್ಲಿದೆ. ಕೆಲವು ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ.

ಪ್ರಸಾದಿ ಭೋಗಣ್ಣ

ಈತನ ಜೀವನ ವಿವರ ತಿಳಿದಿಲ್ಲ. ಕಾಲ - ೧೧೬೦. ಅಂಕಿತ -ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ. ೧೦೩ ವಚನಗಳು ದೊರೆತಿವೆ. ತತ್ವಬೋಧೆ ಪ್ರಧಾನವಾಗಿದೆ. ಶರಣಸ್ತುತಿ, ಭಕ್ತನ ಲಕ್ಷಣ, ಲಿಂಗಾಂಗ ಸಾಮರಸ್ಯದ ಸ್ವರೂಪ, ವೇದ ಆಗಮಶಾಸ್ತ್ರ ಪುರಾಣಗಳ ನಿರಾಕರಣೆ ಇತ್ಯಾದಿಗಳ ವಿವರ ಬಂದಿದೆ. ಕೆಲವು ವಚನಗಳು ದೀರ್ಘವಾಗಿದ್ದು, ಗದ್ಯದ ಗುಣವನ್ನು ಹೊಂದಿವೆ.

ಪ್ರಸಾದಿ ಲೆಂಕಬಂಕಣ್ಣ

ಬಂಕಣ್ಣ ಹೆಸರಿನ ಹಲವು ಜನ ಶರಣರಿದ್ದು, ಅವರಲ್ಲಿ ಈತ ಯಾರು ಎಂಬುದು ಸ್ಪಷ್ಟವಿಲ್ಲ. ಜೀವನ ವಿವರ ದೊರೆತಿಲ್ಲ. ಕಾಲ-೧೧೬೦. ಪ್ರಸಾದಿಗಳ ಸೇವೆ ಮಾಡುವುದೇ ತನ್ನ ಕಾಯಕವೆಂದು ನಂಬಿ ನಡೆದಿದ್ದಾನೆ. ಹೀಗಾಗಿ ಈತನ ವಚನಗಳಲ್ಲಿ ಅರ್ಪಿತ- ಅನರ್ಪಿತ ಪ್ರಸಾದ, ಕಾಯಕ ಇವುಗಳನ್ನು ಕುರಿತ ತಾತ್ವಿಕ ವಿವೇಚನೆಯೇ ಹೆಚ್ಚಾಗಿದೆ. ೧೧ ವಚನಗಳು ದೊರೆತಿವೆ. ಅಂಕಿತ - 'ದಹನ ಚಂಡಿಕೇಶ್ವರಲಿಂಗ'.

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ

ಈಕೆ ನೂರೊಂದು ವಿರಕ್ತರಲ್ಲಿ ಒಬ್ಬನಾದ ಬತ್ತಲೇಶ್ವರನ ಸತಿ. ಕಾಲ -೧೪೩೦. 'ನಿಂಬೇಶ್ವರ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ವ್ರತಾಚಾರ ನಿಷ್ಠೆಯೇ ಇತರ ವಸ್ತು.

ಬಸವಣ್ಣ

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶಿವಶರಣರ ಸಮಾಜೋಧಾರ್ಮಿಕ ಆಂದೋಲನದ ರೂವಾರಿ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರವನ್ನುಂಟುಮಾಡಿದ ಈ ಯುಗಪುರುಷನನ್ನು ಕುರಿತು ಸೃಷ್ಟಿಯಾದ ಸಾಹಿತ್ಯ ವಿಪುಲ.

ವಿಜಾಪುರ ಜಿಲ್ಲೆಯ ಬಾಗೇವಾಡಿ ಬಸವಣ್ಣನ ಜನ್ಮಗ್ರಾಮ. ಆಗಮಿಕಶೈವ ಬ್ರಾಹ್ಮಣ ಕುಟುಂಬ. ತಂದೆ-ಮಾದರಸ, ತಾಯಿ-ಮಾದಲಾಂಬಿಕೆ. ಸೋದರಮಾವ ಬಲದೇವನ ಮಗಳು ಗಂಗಾಂಬಿಕೆ, ಸಿದ್ಧರಸನ ಮಗಳು ನೀಲಾಂಬಿಕೆ ಬಸವಣ್ಣನ ಸತಿಯರು. ಅಕ್ಕನಾಗಮ್ಮ ಸಹೋದರಿ, ಚೆನ್ನಬಸವಣ್ಣ ಸೋದರ ಅಳಿಯ. ಕರ್ಮ ನಿಷ್ಠ ಶೈವಬ್ರಾಹ್ಮಣ ಸಂಸ್ಕೃತಿಯನ್ನು ವಿರೋಧಿಸಿ ಬಸವಣ್ಣ ಭಕ್ತಿನಿಷ್ಠ ಸಂಸ್ಕೃತಿಯ ಕೂಡಲಸಂಗಮಕ್ಕೆ ಬರುತ್ತಾನೆ. ಅಲ್ಲಿ ಅಧ್ಯಯನ, ಚಿಂತನೆಗಳ ಮೂಲಕ ತನ್ನ ವ್ಯಕ್ತಿತ್ವವನ್ನು ವಿಕಸನಗೊಳಿಸಿಕೊಳ್ಳುತ್ತಾನೆ.

ಅನಂತರ ಮಾಂಡಲಿಕ ಬಿಜ್ಜಳನ ಮಂಗಳವಾಡಕ್ಕೆ ಬಂದು ಅಲ್ಲಿ ಕರಣಿಕ-ಗಣಕಾಧಿಕಾರಿಯಾಗಿ ಕಾರ್ಯ ಮಾಡುತ್ತಾನೆ. ಆಮೇಲೆ ಬಿಜ್ಜಳ ಚಕ್ರವರ್ತಿಯಾಗಲು, ಅವನೊಂದಿಗೆ ಕಲ್ಯಾಣಕ್ಕೆ ಬಂದು ಭಂಡಾರದ ಮಂತ್ರಿಯಾಗುತ್ತಾನೆ. ಕಲ್ಯಾಣ ಬಸವಣ್ಣನ ಬದುಕಿನ ಬಹುಮುಖ್ಯ ಕಾರ್ಯರಂಗ. ಈ ಸಂದರ್ಭದಲ್ಲಿ ಶರಣ ಸಮುದಾಯದ ಸಂಘಟನೆ, ಅನುಭವಮಂಟಪ ಸ್ಥಾಪನೆ, ಸಿದ್ಧಾಂತಗಳ ರಚನೆ-ಪ್ರಸಾರ, ವಚನಸಾಹಿತ್ಯದ ಸೃಷ್ಟಿ ಇತ್ಯಾದಿ ಸಮಾಜಕಲ್ಯಾಣದ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ವರ್ಗಭೇದ, ವರ್ಣಭೇದ, ಲಿಂಗಭೇದ ಸಂಸ್ಕೃತಿಗಳನ್ನು ನಿರಾಕರಿಸಿ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವದ ತಳಹದಿಯ ಮೇಲೆ ಹೊಸ ಸಮಾಜ ಕಟ್ಟಲು ಮುಂದಾಗುತ್ತಾನೆ. ಸಂಪ್ರದಾಯವಾದಿಗಳು ಇದನ್ನು ಸಹಿಸುವುದಿಲ್ಲ. ರಾಜಸತ್ತೆಯ ಬಲದಿಂದ ಈತನ ಆಂದೋಲನವನ್ನು ಹತ್ತಿಕ್ಕುತ್ತವೆ. ಸತ್ಯವನ್ನು ಎತ್ತಿ

ಹಿಡಿದ ಶರಣರು ದಮನಕ್ಕೆ ಒಳಗಾಗುತ್ತಾರೆ. ಬಸವಣ್ಣ ಮನನೊಂದು ಕಲ್ಯಾಣ ತೊರೆದು, ಕೂಡಲಸಂಗಮಕ್ಕೆ ಬರುತ್ತಾನೆ. ಅಲ್ಲಿಯೇ ಐಕ್ಯನಾಗುತ್ತಾನೆ.

ಬಸವಣ್ಣ ವಚನ, ಸ್ವರವಚನಗಳನ್ನು ಬರೆದಿದ್ದು, ಈವರೆಗೆ ೧೪೧೪ ವಚನಗಳು ಲಭ್ಯವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ ಇವನ ವಚನಗಳ ಮುಖ್ಯ ಆಶಯ. ಈ ಆಶಯವನ್ನು ಬಸವಣ್ಣ ತನ್ನ ವಚನಗಳಲ್ಲಿ ಸಮರ್ಥವಾಗಿ ನಿರ್ವಹಿಸಿದ್ದಾನೆ.

ಸರಳತೆ, ಸಂಕೀರ್ಣತೆ, ಧ್ವನಿಪೂರ್ಣತೆ ಎಲ್ಲವೂ ಈತನ ವಚನಗಳಲ್ಲಿ ಮೇಳವಿಸಿವೆ. ಭಾಷೆ ಸಾತ್ವಿಕವಾಗಿದ್ದು ಆತ್ಮಸಾಹಿತ್ಯದ ಸಮರ್ಥ ವಾಹಕವಾಗಿ ಅದು ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಂಡಿದೆ.

ಬಸವಲಿಂಗದೇವ

ಈತ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಗುರುಸಿದ್ಧದೇವರ ಶಿಷ್ಯ. ಸ್ಥಳ-ಹರದನಹಳ್ಳಿ, ಕಾಲ-೧೭೦೦. 'ಮತ್ಪ್ರಾಣನಾಥ ಮಹಾಶ್ರೀಗುರು ಸಿದ್ಧಲಿಂಗೇಶ್ವರ' ಎಂಬ ಅಂಕಿತದಲ್ಲಿ ೩೬ ವಚನಗಳು ದೊರೆತಿವೆ. ಇವು ಗುರುಸಿದ್ಧದೇವರು ಸಂಕಲಿಸಿದ 'ಚಿದೈಶ್ವರ್ಯ ಚಿದಾಭರಣ' ಕೃತಿಯ 'ಮಹಾಜ್ಞಾನಿಯ ಸರ್ವಪರಿತ್ಯಾಗ ಸ್ಥಲ' ಎಂಬ ಸ್ಥಲದ ಅಡಿಯಲ್ಲಿ ಒಂದೇ ಕಡೆಗೆ ಜೋಡಿಸಲ್ಪಟ್ಟಿವೆ. ಎಲ್ಲವೂ ಗುರುವಿನಲ್ಲಿ ಬಿನ್ನಹ ಮಾಡಿಕೊಂಡ ರೀತಿಯಲ್ಲಿವೆ.

ಬಹುರೂಪಿ ಚೌಡಯ್ಯ

ಜನಪದ ಕಲಾವಿದನಾದ ಈತನ ಹುಟ್ಟೂರು ರೇಕಳಿಕೆ. ಕಲ್ಯಾಣಕ್ಕೆ ಬಂದು ಬಹುರೂಪಿ ಕಾಯಕದ ಮೂಲಕ ಶರಣಬದುಕನ್ನು ನಡೆಸುತ್ತಾನೆ. ಕಾವ್ಯ-ಪುರಾಣಗಳಲ್ಲಿ, ಜನಪದ ಹಾಡುಗಳಲ್ಲಿ ಈತನ ಕಥೆ ಪ್ರಸಿದ್ಧವಾಗಿದೆ. ನಿಪುಣ ನಟ-ನಗೆಗಾರನಾಗಿದ್ದಂತೆ, ಚೌಡಯ್ಯ ಉತ್ತಮ ವಚನಕಾರನೂ ಆಗಿದ್ದಾನೆ. 'ರೇಕಣ್ಣಪ್ರಿಯ ನಾಗಿನಾಥ' ಅಂಕಿತದಲ್ಲಿ ೬೬ ವಚನಗಳು ದೊರೆತಿವೆ. ಅವು ಹೆಚ್ಚಾಗಿ ಬಹುರೂಪ ವೃತ್ತಿಪರಿಭಾಷೆಯಲ್ಲಿ ತತ್ವಬೋಧೆ ಮಾಡುತ್ತವೆ. ಕೆಲವು ಬೆಡಗಿನ ವಚನಗಳೂ ಇವೆ.

ಬಳ್ಳೇಶ ಮಲ್ಲಯ್ಯ

ಮೂಲತಃ ಜೈನ ವ್ಯಾಪಾರಿಯಾಗಿದ್ದ ಮಲ್ಲಶೆಟ್ಟಿ ಶರಣಧರ್ಮ ಸ್ವೀಕರಿಸಿ ಮಲ್ಲಯ್ಯನಾದ. ಧಾನ್ಯವನ್ನು ಅಳೆಯುವ ಬಳ್ಳ(ಸೇರು)ವನ್ನೇ ಲಿಂಗಸ್ವರೂಪದಲ್ಲಿ ಪೂಜಿಸಿ 'ಬಳ್ಳೇಶ ಮಲ್ಲಯ್ಯ'ನೆನಿಸಿದ. ಹರದ ವೃತ್ತಿಯನ್ನು ಕೈಕೊಂಡ ಈತ ಶರಣರ ಅನುಭಾವಗೋಷ್ಠಿಗಳಲ್ಲಿ ಭಾಗವಹಿಸುವ ಮೂಲಕ ತಾನೂ ಅನುಭಾವಿಯಾಗಿ ವಚನಗಳನ್ನು ರಚಿಸಿದ್ದಾನೆ. ದೊರೆತ ಒಂಬತ್ತು ವಚನಗಳು ಬೆಡಗಿನ ರೂಪದಲ್ಲಿವೆ. ಕಾಲ-೧೧೬೦. ಅಂಕಿತ-'ಬಳ್ಳೇಶ್ವರ'

ಬಾಚಿಕಾಯಕದ ಬಸವಣ್ಣ

ಬಡಿಗ ಕಾಯಕದವನಾದ ಈತನ ಕಾಲ ೧೧೬೦. 'ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ' ಅಂಕಿತದಲ್ಲಿ ೩೦ ವಚನಗಳು ದೊರೆತಿವೆ. ವೃತ್ತಿ ಪರಿಭಾಷೆಯನ್ನು ಬಳಸಿಕೊಂಡ ಅವು ತತ್ವಪ್ರಧಾನವಾಗಿವೆ. ಕೆಲವು ಬೆಡಗಿನ ರೂಪದಲ್ಲಿವೆ.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಈಕೆ ಬಡಗಿ ಕಾಯಕದ ಬಸವಯ್ಯಗಳ ಹೆಂಡತಿ. ಕಾಲ - ೧೧೬೦. 'ಕರ್ಮಹರ ಕಾಳೇಶ್ವರ' ಅಂಕಿತದಲ್ಲಿ ಎರಡು ವಚನಗಳು ದೊರೆತಿವೆ. ಕಾಯಕ, ವ್ರತ ಮತ್ತು ನುಡಿಯ ಮಹತ್ವವನ್ನು ಅವುಗಳಲ್ಲಿ

ಎತ್ತಿ ಹೇಳಲಾಗಿದೆ. ತನ್ನ ವೃತ್ತಿಪರಿಭಾಷೆಯನ್ನು ಬಳಸಿಕೊಂಡು, ಉಚಿತ ದೃಷ್ಟಾಂತದೊಂದಿಗೆ ಹೇಳಿದ ಮಾತುಗಳು ಮನಮುಟ್ಟುವಂತಿವೆ.

ಬಾಲಬೊಮ್ಮಣ್ಣ

'ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ'ದಲ್ಲಿ ಈತನ ಕುರಿತು ಹೀಗೆ ಹೇಳಲಾಗಿದೆ: ಸಿದ್ಧರಾಮಯ್ಯ ಸೊಲ್ಲಾಪುರದಲ್ಲಿ ದೇವಾಲಯ ಕಟ್ಟಿಸಿ ಲಿಂಗಪೂಜೆಯನ್ನು ನೆರವೇರಿಸುತ್ತಿದ್ದ. ಆಗ ಬಾಲಬೊಮ್ಮಣ್ಣ ತನಗೆ ಲಿಂಗಪ್ರತಿಷ್ಠೆ ಮಾಡಿ ಪೂಜಿಸುವುದಕ್ಕೆ ಹಣವಿಲ್ಲವೆಂದು ಚಿಂತೆಗೀಡಾದ. ಸಿದ್ಧರಾಮಯ್ಯ ಆತನ ಮನಸ್ಥಿತಿ ಕಂಡು ಹತ್ತಿರ ಕರೆದು ಹಾರೆ, ಗುದ್ದಲಿ ಕೊಟ್ಟು ಅಂಗಳದಲ್ಲಿ ಅಗೆಯಲು ಹೇಳಿದ. ನೆಲವನ್ನು ಅಗೆಯಲು ಹೊನ್ನಿನ ಕೊಪ್ಪರಿಗೆ ದೊರೆಯಿತು. ಅದರಿಂದ ಗುಡಿಯನ್ನು ಕಟ್ಟಿಸಿ, ಲಿಂಗಪ್ರತಿಷ್ಠೆಮಾಡಿ ಪೂಜಿಸುತ್ತ ಬೊಮ್ಮಣ್ಣ ಸುಖವಾಗಿದ್ದನು. ಈ ಕಥೆಯನ್ನು ಸಮರ್ಥಿಸುವಂತೆ ಈತನ ವಚನಗಳಲ್ಲಿ ಉಲ್ಲೇಖಗಳು ಬಂದಿವೆ. ಕಾಲ - ೧೧೬೦. 'ವೀರಶೂರ ರಾಮೇಶ್ವರ' ಅಂಕಿತದಲ್ಲಿ ೧೧ ವಚನಗಳು ದೊರೆತಿವೆ. ಶರಣಸ್ತುತಿ, ಲಿಂಗನಿಷ್ಠೆ, ತತ್ವಬೋಧೆ ಇವುಗಳಲ್ಲಿ ವ್ಯಕ್ತವಾಗಿವೆ.

ಬಾಲಸಂಗಣ್ಣ

ಈತನ ಜೀವನ ವಿವರ ಲಭ್ಯವಿಲ್ಲ. ಕಾಲ - ೧೧೬೦. ಅಂಕಿತ - ಕಮಠೇಶ್ವರಲಿಂಗ. ೮ ವಚನಗಳು ದೊರೆತಿವೆ. ಜೀವ, ಆತ್ಮ, ಅರ್ಪಿತ, ಶರಣ - ಇವುಗಳ ಲಕ್ಷಣವನ್ನು ತನ್ನದೇ ಆದ ರೀತಿಯಲ್ಲಿ ವಿವರಿಸುತ್ತಾನೆ. ಉಪಮೆ, ದೃಷ್ಟಾಂತಗಳ ಮೂಲಕ ಲಿಂಗಾಂಗ ಸಾಮರಸ್ಯದಂಥ ಜಟಿಲ ವಿಷಯವನ್ನು ಸರಳ ಸುಂದರವಾಗಿ ನಿರೂಪಿಸಲಾಗಿದೆ.

ಬಾಲಸಂಗಯ್ಯ

ಈತ ಬಸವೋತ್ತರಯುಗದ ಮಹತ್ವದ ವಚನಕಾರ. ತೋಂಟದ ಸಿದ್ಧಲಿಂಗರಿಗಿಂತ ಪೂರ್ವದವನಾಗಿರಬಹುದಾದ ಈತನ ಬದುಕಿಗೆ ಸಂಬಂಧಿಸಿದ ವಿವರಗಳು ದೊರೆತಿಲ್ಲ. ಈತನ ನಿಜನಾಮ 'ಅಪ್ರಮಾಣದೇವ.'

'ಸಕಲಾಗಮ ಶಿಖಾಮಣಿ' ಅಪ್ರಮಾಣದೇವನ ಕೃತಿಯ ಹೆಸರು. ಇದರಲ್ಲಿ 'ಅಪ್ರಮಾಣ ಕೂಡಲ ಸಂಗಮದೇವ' ಅಂಕಿತದ ಒಟ್ಟು ೯೨೦ ವಚನಗಳು ಸಂಕಲನಗೊಂಡಿವೆ. ಇದು ಒಂದು ಶುದ್ಧ ತಾತ್ವಿಕ ಶಾಸ್ತ್ರಕೃತಿ. ಚೆನ್ನಬಸವಾದಿಗಳು ಹೇಳಿದ ಲಿಂಗಾಯತ ಧರ್ಮತತ್ವಗಳನ್ನು ವ್ಯವಸ್ಥಿತವಾಗಿ ಪ್ರತಿಪಾದಿಸುವುದೇ ಇದರ ಪರಮ ಉದ್ದೇಶ. ಸೃಷ್ಟಿಯ ಉತ್ಪತ್ತಿಯಿಂದ ಹಿಡಿದು ಲಿಂಗಾಂಗ ಸಾಮರಸ್ಯ ವರೆಗಿನ ವಿಷಯಗಳು ಇಲ್ಲಿ ಅನೇಕ ಉಪಶೀರ್ಷಿಕೆಗಳ ಅಡಿಯಲ್ಲಿ ವಿವರಗೊಂಡಿವೆ. ಅಪ್ರಮಾಣದೇವ ಒಬ್ಬ ಉದ್ದಾಮ ಪಂಡಿತ, ಶ್ರೇಷ್ಠ ಅನುಭಾವಿ ಎಂಬುದನ್ನು ಈ ವಚನಗಳು ಸಾಕ್ಷೀಕರಿಸುತ್ತವೆ.

ಬಾಹೂರ ಬೊಮ್ಮಣ್ಣ

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿಗೆ ಸೇರಿದ ಬಾಹೂರು ಈತನ ಸ್ಥಳ. ಕಾಲ- ೧೧೬೦. ಕಾಯಕ-ತೋಟಗಾರಿಕೆ. 'ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ದೊರೆತ ೪೧ ವಚನಗಳಲ್ಲಿ ಷಟ್‌ಸ್ಥಲ ತತ್ವಗಳ ನಿರೂಪಣೆಯಿದೆ. ಎಲ್ಲ ವಚನಗಳಲ್ಲಿ ಬಸವಣ್ಣನ ಹೆಸರು ಒಂದಿಲ್ಲೊಂದು ರೀತಿಯಲ್ಲಿ ಕಾಣಿಸಿಕೊಂಡುದು ವಿಶೇಷ.

ಬಿಬ್ಬಿಬಾಚಯ್ಯ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರು ಈತನ ಸ್ಥಳ. ಇಲ್ಲಿ 'ಅರ್ಪಣದ ಕಟ್ಟೆ' ಎಂಬುದಿದ್ದು, ಇದು ಬಾಚಯ್ಯನ ಗದ್ದುಗೆಯಾಗಿರಬೇಕೆಂದು ಊಹಿಸಲಾಗಿದೆ. ಈತನ ಕಾಲ ೧೧೬೦. ಅಂಕಿತ 'ಏಣಾಂಕಧರ ಸೋಮೇಶ್ವರ'. ೧೦೨ ವಚನಗಳು ದೊರೆತಿವೆ. ಬಾಚಯ್ಯ ಪ್ರಸಾದಿಸ್ಥಲದಲ್ಲಿ ನಿಂತ ಶರಣ. ಹೀಗಾಗಿ ಆತ ತನ್ನೆಲ್ಲ ವಚನಗಳಲ್ಲಿ ತಾನು ನಿಂತ ಸ್ಥಲದ ವಿಷಯವನ್ನು ವಿಶೇಷವಾಗಿ ಪ್ರತಿಪಾದಿಸುವುದು ಸಹಜವೆನಿಸಿದೆ. ಕೆಲವು ಬೆಡಗಿನ ವಚನಗಳೂ ಇವೆ. ಬೇರೆ ಬೇರೆ ಶೀರ್ಷಿಕೆಯ ಆರು ಸ್ಥಲಗಳ ಅಡಿಯಲ್ಲಿ ವಚನಗಳನ್ನು ವಿಭಜಿಸಲಾಗಿದೆ.

ಬೊಕ್ಕಸದ ಚಿಕ್ಕಣ್ಣ

ಈತ ಕಲ್ಯಾಣದಲ್ಲಿ ಬಿಜ್ಜಳನ ಬೊಕ್ಕಸದ ಅಧಿಕಾರಿಯಾಗಿದ್ದ. ಕಾಲ-೧೧೬೦. 'ಬಸವಣ್ಣಪ್ರಿಯ ನಾಗರೇಶ್ವರಲಿಂಗ' ಅಂಕಿತದಲ್ಲಿ ಬರೆದ ೧೦ ವಚನಗಳು ದೊರೆತಿವೆ. ತನ್ನ ವೃತ್ತಿ ಮೂಲವಾದ ಬೊಕ್ಕಸವನ್ನೇ ಪ್ರತಿಮೆ, ರೂಪಕಗಳನ್ನಾಗಿ ಬಳಸಿಕೊಂಡು ತತ್ವ ವಿವೇಚನೆ ಮಾಡುತ್ತಾನೆ. ಇಷ್ಟಲಿಂಗ, ಪ್ರಾಣಲಿಂಗಗಳ ಅಭೇದತ್ವ, ಕಾಯಕದ ಮಹತ್ವವನ್ನು ಕೆಲವು ವಚನಗಳಲ್ಲಿ ತಿಳಿಸುತ್ತ ಕಾಯಕದಲ್ಲಿಯೇ ಶಿವನನ್ನು, ಶಿವಜ್ಞಾನವನ್ನು ಕಾಣಬೇಕು ಎಂದು ಹೇಳುತ್ತಾನೆ.

ಬೊಂತಾದೇವಿ

ಈಕೆ ಕಾಶ್ಮೀರ ದೇಶದ ಮಾಂಡವ್ಯಪುರದ ಅರಸನ ಮಗಳು. ಪೂರ್ವ ಹೆಸರು 'ನಿಜದೇವಿ'. ಚಿಕ್ಕಂದಿನಲ್ಲಿಯೇ ಶಿವಭಕ್ತಿಯಲ್ಲಿ ನಿಷ್ಠೆ ನೆಲೆಗೊಂಡು ವೈರಾಗ್ಯ ತಾಳಿ, ಕಲ್ಯಾಣಕ್ಕೆ ಬಂದು ನೆಲೆಸುತ್ತಾಳೆ. ಈಕೆಯ ವೀರವೈರಾಗ್ಯ, ಗುಪ್ತಭಕ್ತಿಯನ್ನು ಕಾವ್ಯ, ಪುರಾಣಗಳು ಬಣ್ಣಿಸುತ್ತವೆ. ಕಾಲ-೧೧೬೦.

'ಬಿಡಾಡಿ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಈಗ ದೊರೆತ ಆರು ವಚನಗಳಲ್ಲಿ ಶಿವನ ಸ್ವರೂಪ, ಅನಂತತೆ ಮತ್ತು ಸರ್ವಾಂತರ್ಯಾಮಿತ್ವವನ್ನು ವರ್ಣಿಸಲಾಗಿದೆ. ಜೊತೆಗೆ ಈಕೆಯ ಆಧ್ಯಾತ್ಮಿಕ ಸಾಧನೆ, ಸಮತಾಭಾವ ಮತ್ತು ಸಾಮಾಜಿಕ ಕಳಕಳಿ ಅವುಗಳಲ್ಲಿ ವ್ಯಕ್ತವಾಗಿವೆ.

ಭೋಗಣ್ಣ

ಕೆಂಭಾವಿ ಭೋಗಣ್ಣನಿಂದ ಭಿನ್ನವಾದ ಈತನ ಕಾಲ ೧೧೬೦. 'ನಿಜಗುರು ಭೋಗೇಶ್ವರ' ಅಂಕಿತದಲ್ಲಿ ೨೨ ವಚನಗಳು ದೊರೆತಿವೆ. ಶರಣರ ಸ್ತುತಿ, ಭವಿ-ಭಕ್ತ ಭೇದ, ಸಾಕಾರ-ನಿರಾಕಾರ, ಅಂಗ-ಲಿಂಗಗಳ ಸಂಬಂಧ, ಶರಣಸತಿ-ಲಿಂಗಪತಿ ಭಾವ, ಬೆಡಗಿನ ಪರಿಭಾಷೆ - ಇವುಗಳಲ್ಲಿ ತೋರುತ್ತವೆ. ವಚನಗಳು ಹೆಚ್ಚು ದೀರ್ಘವಾಗಿದ್ದು ಗದ್ಯದ ಲಕ್ಷಣಗಳನ್ನು ಹೊಂದಿವೆ. ಕೆಲವು ವಚನಗಳಲ್ಲಿ ವೇಷಡಂಭಕರ, ಶಬ್ದಾಡಂಬರದ ಭವಭಾರಿಗಳ ಟೀಕೆ ತೀಕ್ಷ್ಣವಾಗಿ ಕಾಣಿಸುತ್ತದೆ.

ಮಡಿವಾಳಪ್ಪ

'ಕಡಕೋಳದ ಮಡಿವಾಳಪ್ಪ' ಎಂದು ಪ್ರಸಿದ್ಧವಾಗಿರುವ ಈತ ೧೮ನೆಯ ಶತಮಾನದ ಸುಪ್ರಸಿದ್ಧ ಅನುಭಾವಿ. ಸ್ಥಳ-ಗುಲಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲೂಕಿನ ಬಿದನೂರು. ತಂದೆ - ವಿರೂಪಾಕ್ಷಸ್ವಾಮಿ, ತಾಯಿ-ಗಂಗಮ್ಮ. ದೀಕ್ಷಾಗುರು- ಕಲಕೇರಿ ಮರುಳಾರಾಧ್ಯ. ಕಡಕೋಳ ಗ್ರಾಮ ಮಡಿವಾಳಪ್ಪನ ಕರ್ಮಭೂಮಿ. ಅಲ್ಲಿಯೇ ಆತ ಜೀವಂತ ಸಮಾಧಿ ಹೊಂದಿದ.

ಮಡಿವಾಳಪ್ಪ ರಚಿಸಿದ ಸಾಹಿತ್ಯ ಸ್ವರವಚನ (ತತ್ವಪದ) ಮತ್ತು ವಚನ ಎಂಬ ಎರಡು ರೂಪದಲ್ಲಿ ದೊರೆಯುತ್ತದೆ. ಸು. ೫೦೦ಕ್ಕೂ ಹೆಚ್ಚು ಸ್ವರವಚನ ಮತ್ತು ೨೩ ವಚನಗಳು ದೊರೆತಿವೆ. ಸ್ವರವಚನಗಳಲ್ಲಿ 'ಗುರುಮಹಾಂತ' ಎಂಬ ಅಂಕಿತವಿದ್ದರೆ ವಚನಗಳಲ್ಲಿ ಅದು 'ನಿರುಪಮನಿರಾಳ ಮತ್ಪ್ರಭು ಮಹಾಂತಯೋಗಿ' ಎಂದಿದೆ.

ಸ್ವರವಚನಗಳು (ಹಾಡುಗಳು=ತತ್ವಪದಗಳು) ಬಿಡಿಬಿಡಿಯಾಗಿ ದೊರೆತರೆ, ವಚನಗಳು 'ನಿಜಲೀಲಾಮೃತ ವಚನ' ಎಂಬ ಶೀರ್ಷಿಕೆಯ ಕೃತಿರೂಪದಲ್ಲಿ ದೊರೆಯುತ್ತವೆ. ಇದು ಒಂದು ಸ್ಥಲಕಟ್ಟಿನ ಕೃತಿ. ೨೦ ಸ್ಥಲಗಳಿವೆ. ೨೩ ವಚನಗಳ ಜೊತೆ ೫ ಸ್ವರವಚನಗಳನ್ನೂ ಸೇರಿಸಲಾಗಿದೆ. ಲಿಂಗಾಯತ ಷಟ್‌ಸ್ಥಲ ತತ್ವನಿರೂಪಣೆಯೇ ಈ ಕೃತಿಯ ಮುಖ್ಯ ಗುರಿ. ಜೊತೆಗೆ ಸಮಾಜ ವಿಮರ್ಶೆಯೂ ಅಲ್ಲಲ್ಲಿ ಕಂಡುಬರುತ್ತದೆ.

ಮಡಿವಾಳ ಮಾಚಿದೇವ

ವೀರನಿಷ್ಠೆಯ ಶರಣನೀತ. ವಿಜಾಪುರ ಜಿಲ್ಲೆಯ ದೇವರ ಹಿಪ್ಪರಿಗೆ ಈತನ ಜನ್ಮಸ್ಥಳ. ಕಾರ್ಯಕ್ಷೇತ್ರ ಕಲ್ಯಾಣ. ಆರಾಧ್ಯದೈವ ಕಲ್ಲಿನಾಥ. ಕಾವ್ಯ ಪುರಾಣಗಳಲ್ಲಿ ಈತನನ್ನು ವೀರಭದ್ರನ ಅವತಾರವೆಂದು ಬಣ್ಣಿಸಲಾಗಿದೆ. ಶಾಸನ ಶಿಲ್ಪಗಳಲ್ಲಿಯೂ ಇವನಿಗೆ ಎಡೆ ಲಭಿಸಿದೆ. ಶಿವಶರಣರ ಬಟ್ಟೆಗಳನ್ನು ಮಡಿ ಮಾಡುವುದು ಈತನ ಕಾಯಕ.

ಮಾಚಿದೇವನ ಜೀವನದಲ್ಲಿ ನಡೆದ ಘಟನೆಗಳು ಅನೇಕ. ಅವುಗಳಲ್ಲಿ ಮೇಲೇರಿ ಬಂದ ಬಿಜ್ಜಳನ ಆನೆಯನ್ನು ಮರ್ದಿಸಿದುದು, ಬಸವಣ್ಣನವರ 'ಅಹಂ' ನಿರಸನ ಮಾಡಿದುದು, ನುಲಿಯ ಚಂದಯ್ಯನಿಗೆ ಇಷ್ಟಲಿಂಗದ ಅವಶ್ಯಕತೆಯನ್ನು ತಿಳಿಸಿ ಹೇಳಿದುದು, ಕಲ್ಯಾಣಕ್ರಾಂತಿಯ ತರುವಾಯ ಉಳುವೆಯ ಕಡೆಗೆ ಹೊರಟ ಶರಣಪಡೆಯ ನಾಯಕನಾಗಿ ಬಿಜ್ಜಳನ ಸೈನ್ಯದೊಡನೆ ಹೋರಾಡಿ ಶರಣರನ್ನು, ಶರಣ ಸಾಹಿತ್ಯವನ್ನು ರಕ್ಷಿಸಿದುದು ಇವೇ ಮೊದಲಾದುವು ಪ್ರಮುಖವೆನಿಸಿವೆ.

'ಕಲಿದೇವರದೇವ' ಅಂಕಿತದಲ್ಲಿ ಬರೆದ ೩೫೪ ವಚನಗಳು ಈಗ ದೊರೆತಿವೆ. ಅವುಗಳಲ್ಲಿ ಗಣಾಚಾರ ನಿಷ್ಠೆ, ಡಾಂಭಿಕತೆ, ಕರ್ಮಠತನ, ಕ್ಷುದ್ರದೈವಾರಾಧನೆ, ಸ್ಥಾವರಲಿಂಗ ಪೂಜೆಗಳನ್ನು ಕುರಿತ ನಿಷ್ಠುರ ಟೀಕೆ ಪ್ರಮುಖವಾಗಿ ಕಂಡುಬರುತ್ತದೆ.

ಮಡಿವಾಳ ಮಾಚಿದೇವರ ಸಮಯಾಚಾರದ ಮಲ್ಲಿಕಾರ್ಜುನ

ಈತ ಮಡಿವಾಳ ಮಾಚಿದೇವರ ಅನುಯಾಯಿಯೆಂದು ತೋರುತ್ತದೆ. ಕಾಲ - ೧೧೬೦. 'ಪರಮ ಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಬರೆದ ೫ ವಚನಗಳು ದೊರೆತಿವೆ. ಎಲ್ಲವೂ ಸಮಯಾಚಾರ ನಿಷ್ಠೆಯನ್ನು ಪ್ರತಿಪಾದಿಸುತ್ತವೆ. ಇಷ್ಟಲಿಂಗವಿರಲು ಸ್ಥಾವರಲಿಂಗ ಪೂಜಿಸುವವರನ್ನು ಕಟುವಾಗಿ ಟೀಕಿಸುತ್ತಾನೆ.

ಮಧುವಯ್ಯ

ಮೂಲತಃ ಬ್ರಾಹ್ಮಣನಾದ ಈ ಶರಣ ತನ್ನ ಮಗಳನ್ನು ಅಂತ್ಯಜನಾದ ಹರಳಯ್ಯನ ಮಗನಿಗೆ ಕೊಟ್ಟು ಮದುವೆ ಮಾಡಿದ. ಆ ಕಾರಣದಿಂದ ಮರಣ ದಂಡನೆಗೆ ಗುರಿಯಾದ. ಕಾಲ-೧೧೬೦. ಅಂಕಿತ-ಅರ್ಕೇಶ್ವರಲಿಂಗ. ೧೦೨ ವಚನಗಳು ದೊರೆತಿದ್ದು, ಹೆಚ್ಚಾಗಿ ಬೆಡಗಿನ ಪರಿಭಾಷೆಯಲ್ಲಿವೆ.

ಲಿಂಗಾನುಸಂಧಾನ, ಶಿವಾನುಭವ ಸಾಧನೆ, ಧರ್ಮ ಬಾಹಿರರ ನಿಂದೆ, ಕುಲಜಾತಿಗಳ ಚರ್ಚೆ, ವೈಯಕ್ತಿಕ ಬದುಕಿನ ಹೊಳಹುಗಳು ಅವುಗಳಲ್ಲಿ ಎಡೆಪಡೆದಿವೆ.

ಮನಸಂದ ಮಾರಿತಂದೆ

ಈತನ ಜೀವನ ವಿವರಗಳು ದೊರೆತಿಲ್ಲ. ಕಾಲ-೧೧೬೦. 'ಮನಸಂದಿತ್ತು ಮಾರೇಶ್ವರ' ಅಂಕಿತದಲ್ಲಿ ೧೧೧ ವಚನಗಳು ದೊರೆತಿವೆ. ಗುರುಲಿಂಗಜಂಗಮ ವಿಚಾರ, ಲಿಂಗಾಂಗ ಸಾಮರಸ್ಯದ ರೀತಿ, ವ್ರತ ನೇಮಗಳ ವಿವರ, ಧರ್ಮಭ್ರಷ್ಟರ ಟೀಕೆ - ಇವುಗಳಲ್ಲಿ ಪ್ರತಿಪಾದನೆಗೊಂಡಿವೆ.

ಮನುಮುನಿ ಗುಮ್ಮಟದೇವ

ಈತ ಮೂಲತಃ ಜೈನಧರ್ಮೀಯನಾಗಿದ್ದು, ಅನಂತರ ಶರಣಧರ್ಮ ಸ್ವೀಕರಿಸಿದಂತೆ ತಿಳಿದುಬರುತ್ತದೆ. ಕಾಲ - ೧೧೬೦. 'ಗೂಡಿನ ಗುಮ್ಮಟನೊಡೆಯ ಅಗಮ್ಮೇಶ್ವರಲಿಂಗ' ಅಂಕಿತದಲ್ಲಿ ೯೯ ವಚನಗಳು ದೊರೆತಿವೆ. ಇವುಗಳನ್ನು ಎಲ್ಲ ಪುರಾತನರ ವಚನಕಟ್ಟುಗಳಲ್ಲಿ ಆತ್ಮನರಿವು ಭಾವಸ್ಥಲ, ಆತ್ಮಐಕ್ಯನಸ್ಥಲ, ಪಿಂಡಜ್ಞಾನಸಂಬಂಧ ಎಂಬ ಸ್ಥಲಗಳ ಅಡಿಯಲ್ಲಿ ಜೋಡಿಸಲಾಗಿದೆ. ಷಟ್‌ಸ್ಥಲ ತತ್ವ, ಏಕದೇವೋಪಾಸನೆ, ಪರಮತ ದೂಷಣೆ, ಜೀವದಯಾಭಾವ - ಇವುಗಳಲ್ಲಿ ವಿಶೇಷವಾಗಿ ನಿರೂಪಿತವಾಗಿದೆ. ಬೆಡಗಿನ ಪರಿಭಾಷೆಯಿದ್ದರೂ ಕೆಲವು ವಚನಗಳು ಸುಂದರವಾಗಿವೆ.

ಮರುಳಶಂಕರದೇವ

ಶರಣರ ಕೀರ್ತಿವಾರ್ತೆ ಕೇಳಿ ಅಫಘಾನಿಸ್ಥಾನ (ಬರ್ಬರದೇಶದ ಕಣ್ಬುತ್ತೂರು ಗ್ರಾಮ)ದಿಂದ ಕಲ್ಯಾಣಕ್ಕೆ ಬಂದವನು. ಬಸವಣ್ಣನವರ ಮಹಾಮನೆಯಲ್ಲಿ ಗುಪ್ತಭಕ್ತನಾಗಿ ಹನ್ನೆರಡು ವರ್ಷವಿದ್ದ ಈತನನ್ನು ಪ್ರಭುದೇವರು ಗುರುತಿಸಿ, ಶರಣರಿಗೆ ಪರಿಚಯಿಸಿದರೆಂದು ಐತಿಹ್ಯವಿದೆ. ಶೂನ್ಯಸಂಪಾದನೆಯಲ್ಲಿ ಇದು ಉಕ್ತವಾಗಿದೆ.

ಪ್ರಸಾದಿಸ್ಥಲದಲ್ಲಿದ್ದ ಮರುಳಶಂಕರದೇವ 'ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಮಲ್ಲಿಕಾರ್ಜುನ' ಅಂಕಿತದಲ್ಲಿ ೩೫ ವಚನಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಆತನ ವ್ಯಕ್ತಿ ವೈಶಿಷ್ಟ್ಯವೆನಿಸಿದ ಪ್ರಸಾದತತ್ವದ ಪ್ರತಿಪಾದನೆಗೆ ಆದ್ಯತೆ ದೊರೆತಿದೆ. ಜೊತೆಗೆ ಬಸವಾದಿ ಶರಣರ ಸ್ತುತಿ, ಲಿಂಗವಂತರ ನಿಲುವು, ಮಹಾಲಿಂಗೈಕ್ಯದ ಸ್ವರೂಪ, ಶೀಲ, ಚಾರಿತ್ರ್ಯಗಳ ಬೋಧೆ ಎಡೆಪಡೆದಿವೆ. ಶರಣರಲ್ಲಿ ವಿಶೇಷವಾಗಿ ತೋರುವ 'ಶರಣಸತಿ ಲಿಂಗಪತಿ' ಭಾವವು ಇವನಲ್ಲಿ 'ಶರಣಪತಿ ಲಿಂಗಸತಿ'ಯಾಗಿದ್ದುದು ಸೂಫಿಪಂಥದ ಪ್ರಭಾವವನ್ನು ಸೂಚಿಸುತ್ತದೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯ

ಆಂಧ್ರ ಮೂಲದ ಆರಾಧ್ಯ ಪರಂಪರೆಗೆ ಸೇರಿದ ಈತನ ಕಾಲ ೧೧೬೦. ಬಸವಣ್ಣನವರು ಕಳಿಸಿದ ಭಸಿತ ಧಾರಣೆಯಿಂದ ಕನ್ನಡ ಕಲಿತನೆಂದೂ, ಬಸವಣ್ಣನವರನ್ನು ಕಾಣಲು ಹೊರಟ ಈತನಿಗೆ ಮಾರ್ಗಮಧ್ಯದಲ್ಲಿಯೇ ಅವರು ಐಕ್ಯರಾದರೆಂಬ ವಿಷಯ ತಿಳಿದು, ತನ್ನ ಇಷ್ಟಲಿಂಗದಲ್ಲಿಯೇ ಆ ದೃಶ್ಯವನ್ನು ಕಂಡು ತೃಪ್ತಿಪಟ್ಟನೆಂದೂ ಕಥೆ ಇದೆ. 'ಶ್ರೀ ಮಲ್ಲಿಕಾರ್ಜುನ' ಅಂಕಿತದಲ್ಲಿ ಈತನ ೧೩ ವಚನಗಳು ದೊರೆಯುತ್ತವೆ. ದೇಹ ಅಸ್ಥಿರ; ಇರುವಾಗಲೇ ಅದನ್ನು ಶಿವಧ್ಯಾನ - ಶಿವಪೂಜೆಯಲ್ಲಿ ತೊಡಗಿಸಬೇಕು, ಪಾಪ-ಪುಣ್ಯಗಳ ಪ್ರಜ್ಞೆ ಜೀವಿಯಲ್ಲಿ ಸದಾ ಜಾಗೃತವಾಗಿರಬೇಕು-ಎಂಬಂಥ ನೀತಿಪರ ನುಡಿಗಳು ಈತನಲ್ಲಿ ಅಧಿಕ. ಸರಳ ಭಾಷೆ, ನೇರ ನಿರೂಪಣೆಯಿಂದ ವಚನಗಳು ಗಮನ ಸೆಳೆಯುತ್ತವೆ.

ಮಳುಬಾವಿಯ ಸೋಮಣ್ಣ

ಈತನ ಜೀವನದ ವಿವರಗಳು ತಿಳಿದಿಲ್ಲ. ಕಾಲ - ೧೬೫೦. ಅಂಕಿತ - ಮಳುಭಾವಿಯ ಸೋಮ. ಒಂದೇ ವಚನ ದೊರೆತಿದೆ. ವೈರಾಗ್ಯಪರ ವಿಚಾರವನ್ನು ಸುಂದರವಾಗಿ ತಿಳಿಸಲಾಗಿದೆ.

ಮಾದಾರ ಚೆನ್ನಯ್ಯ

ಜಾತಿಯಿಂದ ಅಸ್ಪೃಶ್ಯ. ಮೂಲತಃ ಚೋಳದೇಶದವ. ಕರಿಕಾಲಚೋಳನ ರಾಜಧಾನಿ ಕಾಂಚೀಪುರವಾಸಿ. ರಾಜನ ಕುದುರೆಗೆ ಹುಲ್ಲು ಹಾಕುವ ಕಾಯಕ ಮಾಡುತ್ತಿದ್ದ. ಗುಪ್ತಶಿವಭಕ್ತನಾಗಿದ್ದ. ಈತ ಶಿವನಿಗೆ ಅಂಬಲಿ ಉಣಿಸಿ ತಣಿಸಿದ ಸಂಗತಿ ಕಾವ್ಯ, ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಶಿವನೊಲುಮೆಗೆ ವೃತ್ತಿ,ಜಾತಿ,ಅಂತಸ್ತು ಮುಖ್ಯವಲ್ಲ, ಭಕ್ತಿ ಮುಖ್ಯ ಎಂಬುದು ಈ ಕಥೆಯಿಂದ ವ್ಯಕ್ತವಾಗುತ್ತದೆ. ಕಲ್ಯಾಣಕ್ಕೆ ಬಂದನಂತರ ಶರಣರ ವಿಶೇಷ ಗೌರವಕ್ಕೆ ಪಾತ್ರನಾಗುತ್ತಾನೆ. ಇಲ್ಲಿ ಪಾದರಕ್ಷೆ ಸಿದ್ಧಪಡಿಸುವ ಕಾಯಕ ಕೈಗೊಳ್ಳುತ್ತಾನೆ. ಕಾಲ-೧೧೦೦. 'ಕೈಯ್ಯುಳಿಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮಾರಾಮ ರಾಮನ' ಅಂಕಿತದಲ್ಲಿ ೧೦ ವಚನಗಳು ದೊರೆತಿವೆ. ಅಂಕಿತ ಮತ್ತು ವಚನಗಳಲ್ಲಿ ತನ್ನ ಕುಲವೃತ್ತಿಯ ಪರಿಭಾಷೆಯನ್ನು ಬಳಸಿದ ಚೆನ್ನಯ್ಯ, ಕುಲ ಜಾತಿ ಚರ್ಚೆಯನ್ನು ಕೇಂದ್ರಬಿಂದುವಾಗಿಸಿದ್ದಾನೆ. 'ಆವ ಕುಲವಾದಡೂ ಅರಿದಲ್ಲಿಯೇ ತತ್ವಾನುಭಾವಿ, ಮರೆದಲ್ಲಿಯೇ ಮಲಮಾಯಾ ಸಂಬಂಧಿ' ಎಂಬಂಥ ಮಾತುಗಳು ಚೆನ್ನಯ್ಯನ ಎತ್ತರದ ವ್ಯಕ್ತಿತ್ವಕ್ಕೆ ಬರೆದ ವ್ಯಾಖ್ಯೆಗಳಂತಿವೆ.

ಮಾದಾರ ಧೂಳಯ್ಯ

ಪಾದರಕ್ಷೆ ಸಿದ್ಧಪಡಿಸುವ ಕಾಯಕವನ್ನು ಕೈಕೊಂಡಿದ್ದ ಈತನ ತಂದೆ - ಕಕ್ಕಯ್ಯ, ತಾಯಿ - ನುಲಿದೇವಿ, ಹೆಂಡತಿ - ದಾರುಕಿ. ಕಾಲ - ೧೧೬೦. ಬ್ರಾಹ್ಮಣನೊಬ್ಬನ ಕುಷ್ಠರೋಗವನ್ನು ನಿವಾರಿಸಿದನೆಂಬ ಸಂಗತಿ ಈತನ ಚರಿತ್ರೆಯಿಂದ ತಿಳಿದುಬರುತ್ತದೆ. ಕಾಯಕದಲ್ಲಿಯೇ ಶಿವನನ್ನು ಸಾಕ್ಷಾತ್ಕರಿಸಿಕೊಂಡ ನಿಷ್ಠಾವಂತ ಶಿವಭಕ್ತನೀತ. 'ಕಾಮಧೂಮ ಧೂಳೇಶ್ವರ' ಅಂಕಿತದಲ್ಲಿ ೧೦೬ ವಚನಗಳನ್ನು ರಚಿಸಿದ್ದಾನೆ. ಕಾಯಕದ ಮಹತ್ವ, ಜ್ಞಾನ-ಮೋಕ್ಷಗಳ ಸ್ವರೂಪ, ಭಕ್ತಿಯ ಶ್ರೇಷ್ಠತೆಯನ್ನು ಅವು ತಿಳಿಸುತ್ತವೆ. ವೃತ್ತಿ ಪರಿಭಾಷೆ, ಬೆಡಗಿನ ಭಾಷೆ, ಆಲಂಕಾರಿಕ ಶೈಲಿ ಇವುಗಳ ವಿಶೇಷತೆ ಎನಿಸಿದೆ.

ಮಾರೇಶ್ವರೊಡೆಯ

ಈತನ ಬದುಕಿನ ವಿವರಗಳು ದೊರೆತಿಲ್ಲ. ಕಾಲ-೧೧೬೦. ಅಂಕಿತ-ಮಾರೇಶ್ವರ. ವಚನ ಸಂಖ್ಯೆ - ೧೩. ಇಷ್ಟಲಿಂಗದ ಸ್ವರೂಪ, ಅರಿವು, ಆಚಾರ, ಲಿಂಗಾಂಗಿಯ ನಿಲುವು ಮೊದಲಾದ ವಿಷಯಗಳನ್ನು ನಿರೂಪಿಸುವ ಈತನ ವಚನಗಳು ಸಂಕ್ಷಿಪ್ತತೆ, ಭಾವಪೂರ್ಣತೆ, ಸರಳತೆಯನ್ನು ಒಳಗೊಂಡು ಆತ್ಮೀಯವೆನಿಸಿವೆ. ಕೆಲವು ಬೆಡಗಿನ ವಚನಗಳು ತತ್ವಬೋಧಕವಾಗಿವೆ.

ಮುಕ್ತಾಯಕ್ಕ

ಈಕೆ ಆನುಭಾವಿಕ ನೆಲೆಯ ತುಂಬ ಎತ್ತರದ ಶರಣೆ. ಈಕೆಯ ತವರೂರು ಲಕ್ಕುಂಡಿ, ಗಂಡನೂರು ಮಸಳಿಕಲ್ಲು. ಶರಣ ಅಜಗಣ್ಣ ಈಕೆಯ ಸಹೋದರ ಮತ್ತು ಗುರು. ಈತನ ಲಿಂಗೈಕ್ಯ ಸಂದರ್ಭದಲ್ಲಿ ದುಃಖಿತೆಯಾದ ಈಕೆಯನ್ನು ಅಲ್ಲಮಪ್ರಭು ಅರಿವಿನ ಕಣ್ಣು ತೆರೆಸುವ ಮೂಲಕ ಸಾಂತ್ವನಪಡಿಸುತ್ತಾನೆ. ಕಾಲ-೧೧೬೦.

'ಅಜಗಣ್ಣತಂದೆ' ಅಂಕಿತದಲ್ಲಿ ರಚಿಸಿದ ೩೨ ವಚನಗಳು ದೊರೆತಿವೆ. ಇವೆಲ್ಲ ಅಣ್ಣನ ಅಗಲಿಕೆಯ ಸಂದರ್ಭಲ್ಲಿ ವ್ಯಕ್ತಪಡಿಸಿದ ಶೋಕಗೀತೆಗಳಂತಿವೆ. ಅಲ್ಲಮ ಪ್ರಭುವಿನ ಜೊತೆ ನಡೆಸಿದ

ಆಧ್ಯಾತ್ಮ ಸಂವಾದದಲ್ಲಿ ಮೂಡಿ ಬಂದ ಅನುಭಾವ ಗೀತೆಗಳೆನಿಸಿವೆ. ಶೂನ್ಯಸಂಪಾದನೆಯಲ್ಲಿ ಮೂಡಿದ ಈ ಸಂವಾದ ತುಂಬ ಪ್ರಸಿದ್ಧವಾಗಿದೆ.

ಮುಮ್ಮಡಿ ಕಾರ್ಯೇಂದ್ರ

ಮಾಸ್ತಿ ವಂಶಕ್ಕೆ ಸೇರಿದ ಇಮ್ಮಡಿ ಕಾರ್ಯೇಂದ್ರ ಈತನ ತಂದೆ. ತಾಯಿ ಕುಪ್ಪಮಾಂಬೆ. ಗುರು-ದೊಡ್ಡದೇಶಿಕಾರ್ಯ. ಕಾಲ-೧೭೦೦. 'ಮುಮ್ಮಡಿ ಕಾರ್ಯಕ್ಷಿತೀಂದ್ರ' ಎಂದು ತನ್ನನ್ನು ಕರೆದುಕೊಂಡಿರುವುದರಿಂದ ಈತ ಅರಸನಾಗಿರಬೇಕು. ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ 'ಕಾರ್ಯ' ಗ್ರಾಮದಲ್ಲಿ ದೊರೆಯಾಗಿದ್ದಿರಬೇಕೆಂದು ಊಹಿಸಲಾಗಿದೆ.

'ವೇದ ಸಂಜೀವಿನಿ' ಎಂಬುದು ಕಾರ್ಯೇಂದ್ರ ರಚಿಸಿದ ಕೃತಿ. ಇದರಲ್ಲಿ ೧೧ ಅಧ್ಯಾಯ, ೧೨೫ ವಚನಗಳಿವೆ. 'ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ' ಎಂಬುದು ಅಂಕಿತ. ಗುರು ಕನಸಿನಲ್ಲಿ ಬಂದು 'ಜೀವರ ಪಾಪಮಂ ನೀಗುವಂತು ಪರತತ್ವ ವಚನಮಂ ರಚಿಸೆಂದು ನಿರೂಪಿಸಲು' ತಾನು ಹೇಳಿದುದಾಗಿ ತಿಳಿಸುತ್ತಾನೆ.

ಇದು ಶುದ್ಧ ತಾತ್ವಿಕ ಕೃತಿ. ಲಿಂಗಾಯತ ತತ್ವ ವೇದಕ್ಕಿಂತಲೂ ಮಿಗಿಲಾದುದು, ವೇದಕ್ಕೆ ಸಂಜೀವಿನ ರೀತಿಯಲ್ಲಿರುವುದು ಎಂದು ಸಾರಿ ಹೇಳುವುದೇ ಇದರ ಮೂಲ ಉದ್ದೇಶ.

ಮೆರೆಮಿಂಡಯ್ಯ

ತಮಿಳುನಾಡಿನ ೬೩ ಪುರಾತನರಲ್ಲಿ ಒಬ್ಬನಾದ 'ಮೆರೆಮಿಂಡದೇವ'ನಿಂದ ಭಿನ್ನನಾದ ಈತ, ಬಸವ ಸಮಕಾಲೀನ ಶಿವಶರಣ. ಕಾಲ-೧೧೬೦. 'ಐಘಟದೂರ ರಾಮೇಶ್ವರಲಿಂಗ' ಅಂಕಿತದಲ್ಲಿ ಬರೆದ ೧೧೦ ವಚನಗಳು ದೊರೆತಿವೆ. ಅಷ್ಟಾವರಣ, ಲಿಂಗಾಂಗ ಸಾಮರಸ್ಯ ಮೊದಲಾದ ತಾತ್ವಿಕ ವಿಷಯ, ಸಾಮಾಜಿಕ ವಿಡಂಬನೆಗಳು ಸರಳ ಶೈಲಿಯಲ್ಲಿ ನಿರೂಪಿತವಾಗಿವೆ. ಅನೇಕ ಶರಣರನ್ನು ಗೌರವದಿಂದ ಸ್ಮರಿಸಿದ್ದಾನೆ.

ಮೇದರ ಕೇತಯ್ಯ

ಬುಟ್ಟಿ ಹೆಣೆಯುವ ಕಾಯಕವನ್ನು ಕೈಕೊಂಡಿದ್ದ ಈತನ ಸ್ಥಳ ಬೇಲೂರ ಸಮೀಪದ ಉಳವಿಬೆಟ್ಟ. ಹೆಂಡತಿ-ಸಾತವ್ವ. ಕಾಲ-೧೧೬೦. 'ಗವರೇಶ್ವರ' ಅಂಕಿತದಲ್ಲಿ ರಚಿಸಿದ ೧೧ ವಚನಗಳು ದೊರೆತಿವೆ. ಅವುಗಳಲ್ಲಿ ಸಮಕಾಲೀನ ಶರಣರ ಸ್ತುತಿ, ತನ್ನ ಕಾಯಕದ ರೀತಿ-ನೀತಿ-ಮಹತ್ವ, ಅದರ ಮೂಲಕ ಪಡೆದುಕೊಂಡ ಲಿಂಗಾಂಗ ಸಾಮರಸ್ಯದ ಸುಖವನ್ನು ಬಣ್ಣಿಸಲಾಗಿದೆ.

ಮೈದುನ ರಾಮಯ್ಯ

ಈತ ಆಂಧ್ರ ಪ್ರದೇಶದ ಭೀಮಾವತಿ ಎಂಬ ಊರಿನ ಸೋಮನಾಥ ಮತ್ತು ಮಹಾದೇವಿ ಅವರ ಮಗ. ಸ್ವಭಾವತಃ ಮುಗ್ಧ. ಕಲ್ಯಾಣಕ್ಕೆ ಬಂದು ಶರಣರೊಂದಿಗೆ ಬೆರೆತು ತನ್ನ ಮುಗ್ಧಭಕ್ತಿಯಿಂದ ಎಲ್ಲರ ಗಮನ ಸೆಳೆಯುತ್ತಾನೆ. ಇವನು ಶಿವ ಪಾರ್ವತಿಯರನ್ನೇ ಅಕ್ಕ ಭಾವಂದಿರನ್ನಾಗಿ ಭಾವಿಸಿಕೊಂಡು 'ಮೈದುನ ರಾಮಯ್ಯ'ನೆನಿಸಿದನೆಂದು ಕಾವ್ಯ-ಪುರಾಣಗಳಿಂದ ತಿಳಿದುಬರುತ್ತದೆ. ಕಾಲ-೧೧೬೦. 'ಮಹಾಲಿಂಗ ಚೆನ್ನರಾಮ' ಅಂಕಿತದಲ್ಲಿ ಆರು ವಚನಗಳು ದೊರೆತಿವೆ. ಸದ್ಗುರುವಿನ ಕರುಣೆ, ನಿಜಲಿಂಗೈಕ್ಯನ ಸ್ಥಿತಿ, ಮನದ ಸ್ವಭಾವ, ಶರಣರ ಸ್ತುತಿ-ಇವು ಆತ್ಮೀಯ ಶೈಲಿಯಲ್ಲಿ ನಿರೂಪಿತವಾಗಿವೆ.

ಮೋಳಿಗೆ ಮಹಾದೇವಿ

ಈಕೆ ಕಾಶ್ಮೀರದೇಶದ ಮಹಾದೇವ ಭೂಪಾಲನ ರಾಣಿ. ಮೂಲ ಹೆಸರು ಗಂಗಾದೇವಿ. ಪತಿಯೊಡನೆ ರಾಜ್ಯತ್ಯಾಗಮಾಡಿ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕವನ್ನು ಕೈಕೊಳ್ಳುತ್ತಾಳೆ. ಮಹಾದೇವ ಭೂಪಾಲ 'ಮೋಳಿಗೆಯ ಮಾರಯ್ಯ'ನೆಂದು, ಗಂಗಾದೇವಿ 'ಮೋಳಿಗೆಯ ಮಹಾದೇವಿ' ಎಂದು ಹೆಸರು ಬದಲಿಸಿಕೊಂಡು ಕಲ್ಯಾಣದಲ್ಲಿ ಕಾಯಕ ಜೀವಿಗಳಾಗಿ ಬದುಕು ಸಾಗಿಸುತ್ತಾರೆ. ಅನುಭವ ಮಂಟಪದಲ್ಲಿ ಭಾಗವಹಿಸಿ, ವಚನ ರಚನೆಯಲ್ಲಿ ತೊಡಗುತ್ತಾರೆ. ಕಾಲ-೧೧೬೦. ಪುರಾಣಗಳಲ್ಲಿ ಇವರ ಚರಿತ್ರೆ ಪ್ರಸಿದ್ಧವಾಗಿದೆ.

'ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ' ಅಂಕಿತದಲ್ಲಿ ರಚಿಸಿದ ಈಕೆಯ ೭೦ ವಚನಗಳು ದೊರೆತಿವೆ. ಎಲ್ಲ ವಚನಗಳು ತತ್ವ ಪ್ರಧಾನವಾಗಿವೆ. ಪತಿಗೆ ಸತ್ಯದ ನಿಲುವನ್ನು ತೋರಿಸುವಲ್ಲಿ ನುಡಿದ ನುಡಿಗಳೆ ಅವುಗಳಲ್ಲಿ ಅಧಿಕ. ಜೊತೆಗೆ ಷಟ್‌ಸ್ಥಲ ಸ್ವರೂಪ, ಕ್ರಿಯಾ ಜ್ಞಾನ ಸಂಬಂಧ, ಇಷ್ಟಲಿಂಗ ಪ್ರಾಣಲಿಂಗಗಳ ಮಹತಿಯನ್ನು ತಿಳಿಸುವ ಈಕೆ ಉಳಿದ ವಚನಕಾರ್ತಿಯರಿಗಿಂತ ಭಿನ್ನವೆನಿಸಿದ್ದಾಳೆ.

ಮೋಳಿಗೆ ಮಾರಯ್ಯ

ಈತ ಕಾಶ್ಮೀರ ದೇಶದ ಅರಸ. ಮೂಲ ಹೆಸರು ಮಹಾದೇವ ಭೂಪಾಲ. ಹೆಂಡತಿ ಗಂಗಾದೇವಿ. ಬಸವಣ್ಣನವರ ಹಿರಿಮೆಯನ್ನು ಕೇಳಿ ರಾಜ್ಯ ತ್ಯಾಗಮಾಡಿ ಇಬ್ಬರೂ ಕಲ್ಯಾಣಕ್ಕೆ ಬರುತ್ತಾರೆ. ಮಾರಯ್ಯ-ಮಹಾದೇವಿ ಹೆಸರಿನಿಂದ ಕಟ್ಟಿಗೆ ಮಾರುವ ಕಾಯಕವನ್ನು ಕೈಕೊಂಡು ಶರಣ ಜೀವನ ನಡೆಸುತ್ತಾರೆ. ಇವರ ಕಾಯಕನಿಷ್ಠೆಯ ಕಥೆ ಶೂನ್ಯಸಂಪಾದನೆಯ ಒಂದು ಅಧ್ಯಾಯದಲ್ಲಿ ನಿರೂಪಿತವಾಗಿದೆ. ಕಾಲ-೧೧೬೦. 'ನಿಃಕಳಂಕ ಮಲ್ಲಿಕಾರ್ಜುನ' ಅಂಕಿತದಲ್ಲಿ ಈತ ರಚಿಸಿದ ೮೦೮ ವಚನಗಳು ದೊರೆತಿವೆ. ವೈವಿಧ್ಯಮಯ ತಾತ್ವಿಕ, ಧಾರ್ಮಿಕ, ಸಾಮಾಜಿಕ, ಆನುಭಾವಿಕ ವಸ್ತು ವಿಷಯಗಳನ್ನೊಳಗೊಂಡ ಅವು ಮಾರಯ್ಯನ ವಿದ್ವತ್ತು, ಆಧ್ಯಾತ್ಮಿಕ ನಿಲುವು, ಅನುಭಾವದ ಎತ್ತರ, ಸಾಮಾಜಿಕ ಕಳಕಳಿ, ಸಾಹಿತ್ಯಿಕ ಶ್ರೀಮಂತಿಕೆಯನ್ನು ಎತ್ತಿ ತೋರುತ್ತವೆ.

ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

ಈಕೆ ಬಸವಣ್ಣನವರ ಆಪ್ತಕಾರ್ಯದರ್ಶಿಯೂ ವಚನಕಾರನೂ ಆಗಿದ್ದ 'ರಾಯಸದ ಮಂಚಣ್ಣ'ನ ಪತ್ನಿ. ಕಾಲ-೧೧೬೦. ವ್ರತನಿಷ್ಠೆಯನ್ನು ಬೋಧಿಸುವ ಒಂದು ವಚನ ಈಕೆಯ ಹೆಸರಿನಲ್ಲಿ ದೊರೆತಿದೆ. ಅಂಕಿತ 'ಅಮುಗೇಶ್ವರಲಿಂಗ'. ಇದು ಅಮುಗೆ ರಾಯಮ್ಮನ ಅಂಕಿತವೂ ಆಗಿರುವುದು ವಿಶೇಷ.

ರಾಯಸದ ಮಂಚಣ್ಣ

ಈತ ಕಲ್ಯಾಣದಲ್ಲಿ ಬಸವಣ್ಣನವರ ಪತ್ರ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಒಬ್ಬ ನಿಯೋಗಿ. ರಾಯಮ್ಮ ಈತನ ಸತಿ. ಕಾಲ-೧೧೬೦. 'ಜಾಂಬೇಶ್ವರ' ಅಂಕಿತದಲ್ಲಿ ೧೦ ವಚನಗಳನ್ನು ರಚಿಸಿದ್ದಾನೆ. ಅವು ತುಂಬ ಸರಳವಾಗಿದ್ದು, ಇಷ್ಟಲಿಂಗದ ಮಹತ್ವ, ಮನದ ವಿಕಾರ, ಇಂದ್ರಿಯ ನಿಗ್ರಹ, ಅರಿವು, ಆಚಾರವನ್ನು ಕುರಿತು ಹೇಳುತ್ತವೆ. ಬಳಸಿದ ಉಪಮೆ ದೃಷ್ಟಾಂತಗಳು ಅರ್ಥಪೂರ್ಣ.

ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ

ಈಕೆ ಬಸವಣ್ಣನವರ ಸಮಕಾಲೀನರಾದ ರೇವಣಸಿದ್ಧಯ್ಯನೆಂಬುವನ ಹೆಂಡತಿ. ಶಿವಲಿಂಗಕ್ಕೆ ಹೂವಿನದಂಡೆ ಕಟ್ಟಿ ಅರ್ಪಿಸುವ ಕಾಯಕದಲ್ಲಿ ತೊಡಗಿದ್ದಳೆಂದು ವೀರಶೈವ ಪುರಾಣಗಳು ತಿಳಿಸುತ್ತವೆ.

ಕಾಲ-೧೧೬೦. 'ಶ್ರೀ ಗುರು ಸಿದ್ಧೇಶ್ವರ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದ್ದು, ಗಣಾಚಾರ ನಿಷ್ಠೆಯನ್ನು ವ್ಯಕ್ತಪಡಿಸುತ್ತದೆ.

ಲದ್ದೆಯ ಸೋಮಯ್ಯ

ಈತ ಲದ್ದೆ ಗ್ರಾಮಕ್ಕೆ ಸೇರಿದವನು. ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಇಂದಿನ ಲಾಧಾ ಗ್ರಾಮವಿದಾಗಿರಬೇಕೆಂದು ಊಹಿಸಲಾಗಿದೆ. ಬನವಾಸಿಯ ಮಧುಕೇಶ್ವರ ದೇವಸ್ಥಾನದ ಶಿವೋತ್ಸವ ಮಂಟಪದ ಗಗ್ಗರಿ ಕಲ್ಲಿನ ಮೇಲಿರುವ ಶರಣರ ಶಿಲ್ಪಗಳಲ್ಲಿ ಈತನ ವಿಗ್ರಹವೂ ಇದೆ. ಕಾಲ-೧೨೦೦. ತನ್ನ ಹೆಸರನ್ನೇ (ಲದ್ದೆಯ ಸೋಮ) ಅಂಕಿತವನ್ನಾಗಿ ಮಾಡಿಕೊಂಡ ಈತನ ಒಂದು ವಚನ ಮಾತ್ರ ದೊರೆತಿದೆ. ಅದರಲ್ಲಿ ಸ್ವಕಾಯಕವ ಮಾಡಿ, ದೇವರ ಹಂಗಿಲ್ಲದೆ ಧೈರ್ಯದಿಂದ ಬದುಕಬೇಕೆಂಬ ಬದುಕಿನ ವಾಸ್ತವವನ್ನು ತುಂಬ ನಿಷ್ಠುರ ಮಾತುಗಳಿಂದ ತಿಳಿಸುತ್ತಾನೆ.

ವಚನಭಾಂಡಾರಿ ಶಾಂತರಸ

ಈತ ಕಲ್ಯಾಣದ ಶರಣರು ರಚಿಸಿದ ವಚನಗಳನ್ನು ಸಂಗ್ರಹಿಸಿಟ್ಟ ವಚನ ಭಂಡಾರದ ಮೇಲ್ವಿಚಾರಕನಾಗಿದ್ದ. ವಚನಗಳನ್ನು ಬರೆದುಕೊಳ್ಳುವ, ಸಂಗ್ರಹಿಸುವ, ಸಂರಕ್ಷಣೆ ಮಾಡುವ ಕಾರ್ಯ ಈತನದಾಗಿತ್ತೆಂದು ತೋರುತ್ತದೆ. ಮೊದಲು ಬ್ರಾಹ್ಮಣನಾಗಿದ್ದು, ಬಸವಣ್ಣನವರ ಸಂಪರ್ಕದಿಂದ ಶರಣನಾದಂತೆ ತಿಳಿಯುತ್ತದೆ. ಇದನ್ನು ಸಮರ್ಥಿಸಲು ಈತನ ವಚನಗಳಲ್ಲಿ ಕೆಲವು ಉಲ್ಲೇಖಗಳು ದೊರೆಯುತ್ತವೆ. ಕಾಲ-೧೧೬೦. 'ಅಲೇಖನಾದ ಶೂನ್ಯ ಕಲ್ಲಿನೊಳಗಾದ' ಅಂಕಿತದಲ್ಲಿ ಬರೆದ ೬೪ ವಚನಗಳು ದೊರೆತಿವೆ. ಇವುಗಳಲ್ಲಿ ತಾನು ಬ್ರಾಹ್ಮಣ್ಯವನ್ನು ಬಿಟ್ಟು ಬಂದುದನ್ನು ಕಲ್ಯಾಣ ಕ್ರಾಂತಿಯ ನಂತರ ಉಂಟಾದ ಪರಿಸ್ಥಿತಿಯನ್ನು, ಭಂಡಾರ ಹಾಳಾದುದರ ತಳಮಳವನ್ನು ವಿಶೇಷವಾಗಿ ವ್ಯಕ್ತಪಡಿಸಿದ್ದಾನೆ. ಜೊತೆಗೆ ಷಟ್‌ಸ್ಥಲ ತತ್ವನಿರೂಪಣೆಯನ್ನೂ ಅಷ್ಟೇ ನಿಷ್ಠೆಯಿಂದ ಮಾಡುತ್ತಾನೆ. ಹೆಚ್ಚಿನ ವಚನಗಳು ಬೆಡಗಿನ ಭಾಷೆಯಲ್ಲಿವೆ.

ವೀರಗೊಲ್ಲಾಳ

ಈತ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಮಕ್ಕೆ ಸೇರಿದವನು. ಮೂಲ ಹೆಸರು ಕಾಟಕೂಟ. ಕುರುಬ ಜಾತಿಯವನಾದ ಈತನ ಕಾಯಕ ಕುರಿ ಕಾಯುವುದು. ಕಾಲ-೧೧೬೦. ಶಿವಭಕ್ತನಾಗಿ ತುಂಬ ಪ್ರಸಿದ್ಧಿಯನ್ನು ಪಡೆದಿದ್ದಾನೆ. ಕಾವ್ಯ-ಪುರಾಣಗಳಲ್ಲಿ ಈತನ ಕಥೆ ನಿರೂಪಿತವಾಗಿದೆ. 'ವೀರಬೀರೇಶ್ವರ' ಅಂಕಿತದಲ್ಲಿ ಬರೆದ ೧೦ ವಚನಗಳು ದೊರೆತಿವೆ. ಅವುಗಳಲ್ಲಿ ಈತನ ಕುರುಬ ಕಾಯಕದ ವಿವರಗಳು ದಟ್ಟವಾಗಿ ಮೂಡಿನಿಂತಿವೆ. ಮುಗ್ಧಭಕ್ತನಾದ ಈತ ತನ್ನ ಸರಳ ನಡೆ, ನುಡಿಗಳಿಂದ ಸಾಮಾನ್ಯರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾನೆ. ಗೋಲಗೇರಿಯಲ್ಲಿ ಈತನ ದೇವಾಲಯವಿದ್ದು, ಪ್ರತಿವರ್ಷ ಜಾತ್ರೆ ನೆರವೇರುತ್ತದೆ.

ವೇದಮೂರ್ತಿ ಸಂಗಣ್ಣ

ವೇದಾಗಮ ಪಂಡಿತನಾಗಿದ್ದ ಈತನ ಕಾಲ-೧೧೬೦. ಅಂಕಿತ-ಲಲಾಮಭೀಮ ಸಂಗಮೇಶ್ವರಲಿಂಗ. ವಚನ ಸಂಖ್ಯೆ-೧೦. ಯಜ್ಞ ಯಾಗಾದಿಗಳನ್ನು ಟೀಕಿಸುತ್ತ, ಜ್ಞಾನ ಸಾಧನೆಯ ರೀತಿಯನ್ನು ವಿವರಿಸುತ್ತಾನೆ. ಗದ್ಯದ ಲಕ್ಷಣವನ್ನು ಅಳವಡಿಸಿಕೊಂಡ ವಚನಗಳಲ್ಲಿ ಅನೇಕ ಸಂಸ್ಕೃತೋಕ್ತಿಗಳನ್ನು ಬಳಸುತ್ತಾನೆ. 'ಜ್ಞಾನ' ಕೇವಲ ಕೆಲವರ ಗುತ್ತಿಗೆ ಮಾತ್ರವಲ್ಲ, ಅದು ಸರ್ವರ ಸೊತ್ತೂ ಹೌದು ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ವೈದ್ಯ ಸಂಗಣ್ಣ

ವೈದ್ಯವೃತ್ತಿಯನ್ನು ಕಾಯಕವಾಗಿ ಸ್ವೀಕರಿಸಿದ್ದ ಸಂಗಣ್ಣ ಶರಣನಾಗಿಯೂ ಉತ್ತಮ ವಚನಗಳನ್ನು ರಚಿಸಿದ್ದಾನೆ. ಕಾಲ-೧೧೬೦. 'ಮರುಳಶಂಕರ ಪ್ರಿಯ ಸಿದ್ಧರಾಮೇಶ್ವರ' ಅಂಕಿತದಲ್ಲಿ ೨೧ ವಚನಗಳು ದೊರೆತಿವೆ. ಹೆಚ್ಚಾಗಿ ಎಲ್ಲವೂ ವೈದ್ಯ ವೃತ್ತಿಯ ಪರಿಭಾಷೆಯಲ್ಲಿ ತತ್ವವನ್ನು ಬೋಧಿಸುತ್ತವೆ. ಇಲ್ಲಿ ಉಲ್ಲೇಖಿಸುವ ನಾಡಿಗಳ ವಿವರ, ವ್ಯಾಧಿಗಳ ಬಗೆ, ಔಷಧಗಳ ಪ್ರಕಾರಗಳು ಈತನ ವೈದ್ಯಶಾಸ್ತ್ರ ಪರಿಣತಿಯನ್ನೂ, ಅವುಗಳಿಗೆ ಆತ ಜೋಡಿಸುವ ತಾತ್ವಿಕ ಪರಿವೇಶವನ್ನೂ ಏಕಕಾಲಕ್ಕೆ ಪ್ರಕಟಿಸುತ್ತವೆ.

ಶಂಕರ ದಾಸಿಮಯ್ಯ

ಈತನ ಜೀವನ ಕಥೆ ಶಂಕರದಾಸಿಮಯ್ಯನ ರಗಳೆ, ಶಂಕರದಾಸಿಮಯ್ಯನ ಪುರಾಣ, ಬಸವ ಪುರಾಣ, ಚೆನ್ನಬಸವ ಪುರಾಣ ಮೊದಲಾದ ಕಾವ್ಯ-ಪುರಾಣಗಳಲ್ಲಿ ನಿರೂಪಿತವಾಗಿದೆ. ಈ ಶರಣ ಮೂಲತಃ ಬ್ರಾಹ್ಮಣ ಜಾತಿಯವ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸ್ಕಂದಶಿಲೆ (ಕಂದಗಲ್ಲು) ಈತನ ಸ್ಥಳ. ನವಿಲೆಯ ಜಡೆಯ ಶಂಕರಲಿಂಗ ಆರಾಧ್ಯ ದೈವ. ಶಿವದಾಸಿ-ಹೆಂಡತಿ. ಶಿವನಿಂದ ಕಣ್ಣು ಪಡೆದ ಸಂಗತಿ. ಕಲ್ಯಾಣದಲ್ಲಿ ವಿಷ್ಣುವಿನ ವಿಗ್ರಹ ದಹಿಸಿದ ಘಟನೆ, ಮುದನೂರಿನಲ್ಲಿ ಜೇಡರ ದಾಸಿಮಯ್ಯನ ಅಹಂಕಾರವನ್ನು ನಿರಸನ ಮಾಡಿದ ಪ್ರಸಂಗಗಳು ಈತನ ಚರಿತ್ರೆಯಲ್ಲಿ ಬರುತ್ತದೆ. ಕಾಲ-೧೧೩೦. 'ನಿಜಗುರು ಶಂಕರದೇವ' ಅಂಕಿತದಲ್ಲಿ ೫ ವಚನಗಳು ದೊರೆತಿವೆ. ಬಸವಾದಿ ಶರಣರ ಸ್ತುತಿ, ಬಸವಾವತಾರದ ಕಾರಣ, ಕಾಯ-ಮಾಯೆಯ ಸಂಬಂಧ, ಕಪಟವೇಷದವರ ಟೀಕೆ ಇಲ್ಲಿ ನೇರವಾದ ಮಾತುಗಳಲ್ಲಿ ಮೂಡಿ ಬಂದಿವೆ.

ಶಿವನಾಗಮಯ್ಯ

ಅಸ್ಪೃಶ್ಯ ಜಾತಿಯಿಂದ ಬಂದ ಶರಣ. ಕಾಲ-೧೧೬೦. ಅಂಕಿತ-ನಾಗಪ್ರಿಯ ಚೆನ್ನರಾಮೇಶ್ವರ. ಮೂರು ವಚನಗಳು ದೊರೆತಿವೆ. ಲಿಂಗದ ಮಹತ್ವ, ಸದಾಚಾರ ನಿಷ್ಠೆ ಇವುಗಳಲ್ಲಿ ತುಂಬ ಆಪ್ತವಾಗಿ ಹೇಳಲ್ಪಟ್ಟಿವೆ.

ಶಿವಲೆಂಕ ಮಂಚಣ್ಣ

ಪಂಡಿತ ಪರಂಪರೆಗೆ ಸೇರಿದ ಈತನ ಮೂಲಸ್ಥಳ ಕಾಶಿ. ಕಲ್ಯಾಣಕ್ಕೆ ಬಂದು ಶರಣನಾಗುತ್ತಾನೆ. ಉರಿಲಿಂಗದೇವ ಈತನ ಶಿಷ್ಯ. ಕಾಲ-೧೧೬೦. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ಅಂಕಿತದಲ್ಲಿ ೧೩೨ ವಚನಗಳು ದೊರೆತಿವೆ. ಪುರಾಣಗಳಲ್ಲಿ ಈತ ಪರವಾದಿಗಳನ್ನು ವಾದದಲ್ಲಿ ಸೋರಿಸಿ ಶಿವಾಧಿಕ್ಯವನ್ನು ಮೆರೆಯುತ್ತ, ಹಲವು ಕಡೆ ಸಂಚರಿಸಿದ ಸಂಗತಿ ಉಕ್ತವಾಗಿದೆ. ಅಷ್ಟಾವರಣ, ಷಟ್‌ಸ್ಥಲ, ವ್ರತಾಚಾರಗಳ ನಿರೂಪಣೆ ಈತನ ವಚನಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಜೊತೆಗೆ ಡಾಂಭಿಕ ಗುರುಗಳ ಟೀಕೆ, ಕಾಯಕ ದಾಸೋಹಗಳ ವಿವರಣೆಯೂ ಬಂದಿದೆ.

ಷಣ್ಮುಖಸ್ವಾಮಿ

ಈತ ಬಸವೋತ್ತರ ಯುಗದ ಮತ್ತೊಬ್ಬ ಮಹತ್ವದ ವಚನಕಾರ. ತಂದೆ ಮಲ್ಲಶೆಟ್ಟೆಪ್ಪ, ತಾಯಿ-ದೊಡ್ಡಮಾಂಬೆ. ಸ್ಥಳ-ಗುಲಬರ್ಗಾ ಜಿಲ್ಲೆಯ ಜೇವರಗಿ. ಗುರು ಅಖಂಡೇಶ್ವರ. ಜೀವಿತ ಕಾಲಾವಧಿ-೧೬೩೯ರಿಂದ ೧೭೧೧. ಮೂಲತಃ ಭಕ್ತನಾಗಿದ್ದ ಈತ ಗುರುಗಳ ತರುವಾಯ ಜೇವರಗಿ ವಿರಕ್ತಮಠದ ಅಧಿಪತಿಯಾದ. ಲೋಕ ಸಂಚಾರ ಕೈಕೊಂಡು ಧರ್ಮತತ್ವ ಬೋಧೆಮಾಡಿ, ಕೊನೆಗೆ ಜೇವರಗಿಯಲ್ಲಿಯೇ ಐಕ್ಯನಾದ.

ಷಣ್ಮುಖಸ್ವಾಮಿಗಳು ೭೧೭ ವಚನ, 'ಅಖಂಡೇಶ್ವರ ಜೋಗುಳ ಪದ' (೪೧ ಚೌಪದಿ), 'ಪಂಚ ಸಂಜ್ಞೆಗಳ ಪದ' (೭ ಪರಿವರ್ಧಿನಿ ಷಟ್ಪದಿ), 'ನಿರಾಳ ಸದ್ಗುರುಸ್ತೋತ್ರ' (ಭಾಮಿನಿ ಷಟ್ಪದಿ) - ಎಂಬ ಕೃತಿಗಳನ್ನು ರಚಿಸಿದ್ದಾರೆ.

ವಚನಗಳು ಸ್ಥಲಾನುಗುಣವಾಗಿ ಸಂಕಲನಗೊಂಡಿವೆ. 'ತೂರ್ಯ ನಿರಾಲಂಬ ಶರಣನ ಅರುಹಿನ ಷಟ್‌ಸ್ಥಲ ವಚನ' ಎಂಬುದು ಈ ಕೃತಿಯ ಹೆಸರು.

ಇದು ಮುಖ್ಯವಾಗಿ ಷಟ್‌ಸ್ಥಲತತ್ವವನ್ನು ನಿರೂಪಿಸುವ ಗ್ರಂಥ. ಈಗಾಗಲೇ ರೂಢಿಗತವಾಗಿ ನಡೆದುಬಂದ ಈ ತತ್ವವನ್ನು ಪರಂಪರೆಯ ಜಾಡಿನಲ್ಲಿಯೇ ಹೆಚ್ಚು ವ್ಯವಸ್ಥಿತವಾಗಿ, ಅಷ್ಟೇ ಖಚಿತವಾಗಿ ಹೇಳುತ್ತ ಸಾಗಿದ್ದಾರೆ. ಅನುಭಾವ-ತತ್ವ-ಸಾಹಿತ್ಯ ಈ ಮೂರು ಈ ವಚನಗಳಲ್ಲಿ ಮುಪ್ಪುರಿಗೊಂಡಿವೆ.

ಸಕಳೇಶ ಮಾದರಸ

ಬಸವಣ್ಣನವರ ಹಿರಿಯ ಸಮಕಾಲೀನನಾದ ಈತ ಕಲ್ಲುಕುರಿಕೆಯ ಅರಸ. ತಂದೆ-ಮಲ್ಲಿಕಾರ್ಜುನ. ತರುವಾಯದ ಕೆರೆಯ ಪದ್ಮರಸ, ಕುಮಾರ ಪದ್ಮರಸ, ಪದ್ಮಣಾಂಕರು ಈತನ ವಂಶಕ್ಕೆ ಸೇರಿದ ಭಕ್ತಕವಿಗಳು. ಈತ ವೈರಾಗ್ಯಪರನಾಗಿ ಕಲ್ಯಾಣಕ್ಕೆ ಬಂದು ಶರಣನಾದ. ಕಾಲ-೧೧೩೦. ಕಲ್ಯಾಣಕ್ರಾಂತಿಯ ನಂತರ ಶ್ರೀಶೈಲಕ್ಕೆ ನಡೆದು, ಅಲ್ಲಿಯೇ ಐಕ್ಯನಾದ.

ಮಾದರಸ ಶ್ರೇಷ್ಠ ಸಂಗೀತಜ್ಞಾನಿ ಆಗಿದ್ದ. ವೀಣಾದಿ ಅನೇಕ ವಾದ್ಯಗಳನ್ನು ನುಡಿಸುವುದರಲ್ಲಿ ಪರಿಣಿತನೆನಿಸಿದ್ದ. 'ಸಕಳೇಶ್ವರದೇವ' ಎಂಬ ಅಂಕಿತದಲ್ಲಿ ೧೩೩ ವಚನಗಳು ದೊರೆತಿವೆ. ಆತ್ಮನಿರೀಕ್ಷಣೆ, ಶಿವಭಕ್ತಿಯ ತೀವ್ರತೆ, ಪ್ರಸಾದ ಮಹತ್ವ, ನೀತಿಬೋಧೆ, ಆಚಾರ ನಿಷ್ಠೆ, ಸಮಾಜವಿಮರ್ಶೆ ಇವುಗಳಲ್ಲಿ ಒಡೆದು ತೋರುತ್ತವೆ. ಅನೇಕ ವಚನಗಳಲ್ಲಿ ವೈಯಕ್ತಿಕ ಬದುಕಿನ ಅಂಶಗಳು, ಸಂಗೀತ ಸಂಬಂಧಿ ಉಲ್ಲೇಖಗಳು ಅಳವಟ್ಟಿರುವುದರಿಂದ ಚಾರಿತ್ರಿಕ ಮಹತ್ವ ಪ್ರಾಪ್ತವಾಗಿದೆ.

ಸಂಗಮೇಶ್ವರ ಅಪ್ಪಣ್ಣ

ಹೆಸರಿನ ಹಿಂದೆ ಸೇರಿದ 'ಸಂಗಮೇಶ್ವರ' (ಕೂಡಲ ಸಂಗಮ) ಈತನ ಸ್ಥಳವಾಗಿರಬೇಕು. ಕಾಲ ೧೧೬೦. ವಚನಗಳಲ್ಲಿ ಉಕ್ತವಾದ ಹೇರಳ ಸಂಸ್ಕೃತ ಉದ್ಧರಣೆಗಳು ಈತನ ಪಾಂಡಿತ್ಯವನ್ನು ಸಾಬೀತುಪಡಿಸುತ್ತವೆ.

'ಬಸವಪ್ರಿಯ ಕೂಡಲಚೆನ್ನಸಂಗಮದೇವ' ಅಂಕಿತದಲ್ಲಿ ೧೦೨ ವಚನಗಳು ದೊರೆತಿವೆ. ಎಲ್ಲವೂ ತಾತ್ವಿಕವಾಗಿವೆ. ಅನ್ಯಮತ ಖಂಡನೆ, ಶಿವಪಾರಮ್ಯ ಸ್ಥಾಪನೆಗೆ ವಿಶೇಷ ಸ್ಥಾನ ಸಂದಿದೆ. ಶರಣಸ್ತುತಿ, ಶೂನ್ಯಸಿಂಹಾಸನ, ಅನುಭವ ಮಂಟಪಗಳ ಉಲ್ಲೇಖ, ಪ್ರಭುದೇವರು ಕಲ್ಯಾಣಕ್ಕೆ ಬಂದ ಪ್ರಸಂಗ ಮತ್ತು ಆರೋಗಣೆ ನಡೆಸಿದ ಸಂದರ್ಭಗಳನ್ನು ಪ್ರಸ್ತಾಪಿಸುವುದು ಮಹತ್ವದ ಅಂಶಗಳೆನಿಸಿವೆ. ತುಂಬ ದೀರ್ಘವಾಗಿದ್ದು ಗದ್ಯಲಕ್ಷಣವನ್ನು ಹೊಂದಿದ ರಚನೆಗಳ ಜೊತೆಗೆ ಕೆಲವು ಮುಕ್ತಕ ರೂಪದ ವಚನಗಳೂ ಸಮಾವೇಶಗೊಂಡಿವೆ.

ಸಗರದ ಬೊಮ್ಮಣ್ಣ

ಗುಲಬರ್ಗಾ ಜಿಲ್ಲೆಯ ಸಗರ ಗ್ರಾಮಕ್ಕೆ ಸೇರಿದ ಈತ ಗಣಾಚಾರ ಪ್ರವೃತ್ತಿಯ ಶರಣ. ಹೆಂಡತಿ-ಶಿವದೇವಿ. ಕಾಲ - ೧೧೬೦. ಈತ ಜೈನರೊಡನೆ ಹೋರಾಡಿ ಶಿವಪಾರಮ್ಯವನ್ನು ಮೆರೆಯುತ್ತಾನೆ. 'ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ' ಅಂಕಿತದಲ್ಲಿ ೯೧ ವಚನಗಳು ದೊರಕಿವೆ. ಬೆಡಗು ಪ್ರಧಾನವಾದ ಅವುಗಳಲ್ಲಿ ತಾತ್ವಿಕತೆಗೆ ಆದ್ಯತೆ ದೊರೆತಿದೆ.

ಸತ್ತಿಗೆ ಕಾಯಕದ ಮಾರಯ್ಯ

ಕೊಡೆ (ಸತ್ತಿಗೆ) ಹಿಡಿಯುವ ಕಾಯಕದ ಈತ, ಅದರ ಜೊತೆಗೆ ಮರ ಕಡಿಯುವ, ಪಂಜು ಹಿಡಿಯುವ ಕೆಲಸವನ್ನೂ ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಇದಕ್ಕೆ ಅವನ ವಚನಗಳಲ್ಲಿ ಆಧಾರ ಸಿಕ್ಕುತ್ತವೆ. ಈತನ ಕಾಲ - ೧೧೬೦. 'ಐಘಟೇಶ್ವರ' ಅಂಕಿತದಲ್ಲಿ ಹತ್ತು ವಚನಗಳು ದೊರೆತಿವೆ. ಅವುಗಳಲ್ಲಿ ಈತನ ಕಾಯಕ ನಿಷ್ಠೆ, ಕಾಯಕ ತಪ್ಪುವವರ ಟೀಕೆ ಪ್ರಮುಖವಾಗಿವೆ.

ಸತ್ಯಕ್ಕ

ಈಕೆಯ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರು. ಶಿವಭಕ್ತರ ಮನೆಯ ಅಂಗಳ ಕಸಗುಡಿಸುವುದು ಈಕೆಯ ಕಾಯಕ. 'ಶಂಭು ಜಕ್ಕೇಶ್ವರ' ಅಂಕಿತದಲ್ಲಿ ಸದ್ಯ ೨೭ ವಚನಗಳು ಲಭಿಸಿವೆ. ಶಿವಪಾರಮ್ಯ, ಜೊತೆಗೆ ಸದ್ಭಕ್ತರ ಮಹಿಮೆ, ಸತಿ-ಪತಿ ಭಾವ, ಸದಾಚಾರದಲ್ಲಿ ನಡೆಯುವ ಗುರು-ಶಿಷ್ಯ-ಜಂಗಮರ ಗುಣಲಕ್ಷಣ, ಡಾಂಭಿಕ ಭಕ್ತರ ಟೀಕೆ, ಸ್ತ್ರೀಪುರುಷ ಸಮಾನತೆಯ ಸಂದೇಶ ಇಲ್ಲಿ ವ್ಯಕ್ತವಾಗಿದೆ.

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಗಂಡ-ಸಿದ್ಧಬುದ್ಧಯ್ಯ. ಕಾಲ-೧೧೬೦. 'ಭೀಮೇಶ್ವರ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ಅದರಲ್ಲಿ ವ್ರತಭ್ರಷ್ಟರನ್ನು ಮತ್ತು ಲಿಂಗಬಾಹ್ಯರನ್ನು ಟೀಕಿಸುತ್ತಾಳೆ. ಗಣಾಚಾರದ ನಿಷ್ಠುರತೆ ಇಲ್ಲಿ ಎದ್ದುಕಾಣುತ್ತದೆ.

ಸಿದ್ಧರಾಮ

ಹನ್ನೆರಡನೆಯ ಶತಮಾನದ ಪ್ರಥಮ ಶ್ರೇಣಿಯ ವಚನಕಾರರಲ್ಲಿ ಒಬ್ಬ. ಈತನ ಜೀವನ ಚರಿತ್ರೆಗೆ ಸಂಬಂಧಿಸಿದ ಅನೇಕ ಆಧಾರಗಳು ವಚನ, ಕಾವ್ಯ, ಶಾಸನ, ಐತಿಹ್ಯಗಳಲ್ಲಿ ದೊರೆಯುತ್ತವೆ. ಸೊನ್ನಲಿಗೆ (ಮಹಾರಾಷ್ಟ್ರದ ಇಂದಿನ ಸೊಲ್ಲಾಪುರ) ಈತನ ಜನ್ಮಸ್ಥಳ. ತಂದೆ-ಮುದ್ದಗೌಡ. ತಾಯಿ-ಸುಗ್ಗಲೆ. ಮನೆದೈವ-ಧೂಳಿಮಾಕಾಳ. ರೇವಣಸಿದ್ಧನ ವರದಿಂದ ಹುಟ್ಟಿದ. ತಂದೆ ತಾಯಿ ಇಟ್ಟ ಹೆಸರು ಧೂಳಿಮಾಕಾಳ. ಅನಂತರ ನಾಥಸಿದ್ಧ ಸಂಪ್ರದಾಯದವನಾಗುವಲ್ಲಿ ಸಿದ್ಧರಾಮನೆಂದು ಪ್ರಸಿದ್ಧನಾದ. ಬಾಲ್ಯದಲ್ಲಿ ಮುಗ್ಧಭಕ್ತ. ದನಕಾಯುವ ಕಾಯಕ. ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆದ. ಸೊನ್ನಲಿಗೆಗೆ ಬಂದು ದೇವಾಲಯ ಸ್ಥಾಪಿಸಿ, ಆ ಆವರಣಕ್ಕೆ 'ಯೋಗ ರಮಣೀಯ ಕ್ಷೇತ್ರ'ವೆಂದು ಹೆಸರಿಸಿದ. ಲಿಂಗಸ್ಥಾಪನೆ, ಸಕಲ ಜೀವಾವಳಿಯ ನೆಮ್ಮದಿಯ ಬದುಕಿಗಾಗಿ ಕೆರೆ-ಕಟ್ಟೆಗಳನ್ನು ಕಟ್ಟಿಸುವ ಕಾಯಕದಲ್ಲಿ ತೊಡಗಿ ಕರ್ಮಯೋಗಿ ಎನಿಸಿದ. ಪ್ರಭುದೇವ ಅವನನ್ನು ಕಲ್ಯಾಣಕ್ಕೆ ಕರೆದೊಯ್ದು ಚೆನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆ ಕೊಡಿಸಿದ. ಅನುಭವ ಮಂಟಪದ ಗೋಷ್ಠಿಯಲ್ಲಿ ಪಾಲ್ಗೊಂಡು, ಮಹಾಶಿವಯೋಗಿಯಾದ. ಕಲ್ಯಾಣಕ್ರಾಂತಿಯ ನಂತರ ಸೊನ್ನಲಿಗೆಗೆ ಬಂದು ಅಲ್ಲಿಯೇ ಐಕ್ಯನಾದ.

ಸಿದ್ಧರಾಮ ವಚನ, ಸ್ವರವಚನ, ಬಸವಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿ, ಸಂಕೀರ್ಣ ತ್ರಿವಿಧಿ ಎಂದು ಮುಂತಾಗಿ ವೈವಿಧ್ಯಮಯ ಸಾಹಿತ್ಯ ಸೃಷ್ಟಿಮಾಡಿದ್ದಾನೆ. ವಚನ ಮತ್ತು ಸ್ವರವಚನಗಳಲ್ಲಿ 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ಅಂಕಿತವಿದ್ದರೆ, ತ್ರಿವಿಧಿಗಳಲ್ಲಿ 'ಯೋಗಿನಾಥ' ಅಂಕಿತವಿದೆ. ಸದ್ಯ ಈತನ ೧೧೬೨ ವಚನಗಳು ದೊರೆತಿದ್ದು, ಅವುಗಳಲ್ಲಿ ವೈಯಕ್ತಿಕ ಬದುಕಿನ ಸಂಗತಿಗಳು, ಧರ್ಮತತ್ವ ಜಿಜ್ಞಾಸೆ, ಸಾಮಾಜಿಕ ಕಳಕಳಿ ಪ್ರಧಾನವೆನಿಸಿವೆ.

ಸಿದ್ಧಾಂತಿ ವೀರಸಂಗಯ್ಯ

ಈತ ವೀರನಿಷ್ಠೆಯ ಶಿವಭಕ್ತ. ಅನೇಕ ಪುರಾಣ ಕಾವ್ಯಗಳಲ್ಲಿ ಈ ನಿಷ್ಠೆಯ ವಿವರ ಬಂದಿದೆ. ಕಾಲ - ೧೧೬೦. ಐದು ವಚನಗಳು ದೊರೆತಿವೆ. ಅಂಕಿತ -'ಗೋಳಕಾಕಾರ ವಿಶ್ವವಿರಹಿತಲಿಂಗ'. ಹೆಸರಿಗೆ ತಕ್ಕಂತೆ ಸಿದ್ಧಾಂತ ವಿಷಯಗಳ ನಿರೂಪಣೆಯೇ ಈ ವಚನಗಳ ಮುಖ್ಯ ಉದ್ದೇಶವಾಗಿದೆ.

ಸುಂಕದ ಬಂಕಣ್ಣ

ಪುರಾಣಗಳಲ್ಲಿ ಉಲ್ಲೇಖಿತನಾದ ಈತನ ಕಾಲ-೧೧೬೦. ಸುಂಕ(ತೆರಿಗೆ) ಸಂಗ್ರಹಿಸುವುದು ಕಾಯಕ. 'ಬಂಕೇಶ್ವರಲಿಂಗ' ಅಂಕಿತದಲ್ಲಿ ೧೦೮ ವಚನಗಳು ದೊರೆತಿವೆ. ಕಾಯಕದ ಪರಿಭಾಷೆಯನ್ನು ಬಳಸಿಕೊಂಡು ತತ್ವವಿವೇಚನೆ ಮಾಡುವುದು ಇವುಗಳ ಮುಖ್ಯ ಆಶಯವಾಗಿದೆ. ಹಲವು ಸ್ಥಲಗಳ ಅಡಿಯಲ್ಲಿ ವಚನಗಳನ್ನು ವಿಭಜಿಸಲಾಗಿದೆ. ಗಾತ್ರದಲ್ಲಿ ಚಿಕ್ಕವಾಗಿರುವ ವಚನಗಳು ಸರಳವಾಗಿವೆ. ಕೆಲವು ಬೆಡಗಿನ ಭಾಷೆಯಲ್ಲಿವೆ. ವ್ಯಾಪಾರಪದ್ಧತಿ,ಸುಂಕಪದ್ಧತಿ, ಸರಕು ಸಾಗಾಣಿಕೆಯ ಸಾಧನಗಳನ್ನು ಕುರಿತ ವಿವರಣೆಗಳನ್ನೊಳಗೊಂಡ ವಚನಗಳು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದವೆನಿಸಿವೆ.

ಸೂಳೆ ಸಂಕವ್ವೆ

ಹೆಸರ ಹಿಂದಿನ ವಿಶೇಷಣದಿಂದ ಈಕೆ ಮೊದಲು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದು, ನಂತರ ಶರಣ ಜೀವನದತ್ತ ಸಾಗಿಬಂದಂತೆ ತೋರುತ್ತದೆ. ಕಾಲ-೧೧೬೦. 'ನಿರ್ಲಜ್ಜೇಶ್ವ'ರ ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ. ತನ್ನ ವೃತ್ತಿ ಪರಿಭಾಷೆಯನ್ನು ಬಳಸಿಕೊಂಡು ವ್ರತನಿಷ್ಠೆಯನ್ನು ಕುರಿತು ಹೇಳುವ ಈಕೆಯ ಅಭಿವ್ಯಕ್ತಿಯಲ್ಲಿ ದಿಟ್ಟನಿಲುವು ಒಡೆದು ತೋರುತ್ತದೆ.

ಸೊಡ್ಡಳ ಬಾಚರಸ

ಬಸವಣ್ಣನವರಿಗೆ ತುಂಬ ಆಪ್ತನೆನಿಸಿದ್ದ ಈತ ಬಿಜ್ಜಳನ ಅರಮನೆಯ ಕರಣಿಕನಾಗಿದ್ದ. ಈತ ಸೌರಾಷ್ಟ್ರ ಸೋಮೇಶ್ವರನ ಭಕ್ತ. ಬಸವಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಮೊದಲಾದ ಕೃತಿಗಳಲ್ಲಿ ಈತನ ಜೀವನಕ್ಕೆ ಸಂಬಂಧಿಸಿದ ಕೆಲವು ವಿವರಗಳು ಬಂದಿವೆ. ಕಾಲ-೧೧೬೦. 'ಸೊಡ್ಡಳ' ಅಂಕಿತದಲ್ಲಿ ೧೦೨ ವಚನಗಳು ಉಪಲಬ್ಧವಾಗಿವೆ. ತತ್ವ ವಿವೇಚನೆ, ನೀತಿಬೋಧೆ, ಅನ್ಯಮತ, ಅನ್ಯದೈವದೂಷಣೆ, ಶಿವಭಕ್ತಿನಿಷ್ಠೆ ಇವುಗಳಲ್ಲಿ ವ್ಯಕ್ತವಾಗಿವೆ. ಭಾಷಾಪ್ರಯೋಗ, ನಿರೂಪಣಾ ಶೈಲಿ ಇತರರಿಗಿಂತ ಭಿನ್ನವಾಗಿದೆ.

ಸ್ವತಂತ್ರ ಸಿದ್ಧಲಿಂಗೇಶ್ವರ

ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಮತ್ತೊಬ್ಬ ವಚನಕಾರ. ಕಾಲ-೧೬ನೆಯ ಶತಮಾನದ ಉತ್ತರಾರ್ಧ. ಸ್ಥಳ -ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲೂಕಿನ ಕಾಪನಹಳ್ಳಿ. ಅದರ ಸಮೀಪದ 'ಗಜರಾಜಗಿರಿ' ಈತನ ಶಿವಯೋಗ ಸಾಧನೆಯ ಸ್ಥಾನ. ಅಲ್ಲಿಯೇ ಐಕ್ಯ. ಸದ್ಯ ಈತನ ೪೩೦ ವಚನಗಳು ದೊರೆತಿವೆ. 'ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರ' ಎಂಬುದು ಅಂಕಿತ. ಜಂಗಮರಗಳೆ, ಮುಕ್ತ್ಯಾಂಗನಾ ಕಂಠಮಾಲೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಆರು ಸ್ಥಲಗಳಲ್ಲಿ ಹಂಚಿಕೊಂಡಿರುವ ಈತನ ವಚನಗಳಲ್ಲಿ ಷಟ್‌ಸ್ಥಲ ತತ್ವನಿರೂಪಣೆ ಮುಖ್ಯವಸ್ತುವಾಗಿದೆ. ಸಾಂಪ್ರದಾಯಿಕ ರೀತಿಯಲ್ಲಿ ಸಕ್ರಮವಾಗಿ ತತ್ವಪ್ರತಿಪಾದನೆ ಮಾಡಿದ್ದಾನೆ.

ಹಡಪದ ಅಪ್ಪಣ್ಣ

ಬಸವಣ್ಣನವರ ಆಪ್ತವಲಯದ ಈತ ತಾಂಬೂಲಕರಂಡ ಕಾಯಕದವನಾಗಿದ್ದ. ಶಿವಶರಣೆ ಮತ್ತು ವಚನಕಾರ್ತಿ ಲಿಂಗಮ್ಮ ಈತನ ಹೆಂಡತಿ. ಚೆನ್ನಬಸವೇಶ್ವರ ಈತನ ಗುರು. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಬಸವಣ್ಣನವರ ಜೊತೆ ಕೂಡಲಸಂಗಮದ ವರೆಗೂ ಹೋಗುತ್ತಾನೆ. ಅವರ ಅಪ್ಪಣೆಯ ಮೇರೆಗೆ ಕಲ್ಯಾಣಕ್ಕೆ ಹೋಗಿ ನೀಲಮ್ಮನನ್ನು ಕರೆತರುವಷ್ಟರಲ್ಲಿಯೇ ಬಸವಣ್ಣನವರು ಐಕ್ಯರಾದ ಸಂಗತಿ ತಿಳಿಯುತ್ತದೆ. ಆಮೇಲೆ ನೀಲಮ್ಮ ಮತ್ತು ಅಪ್ಪಣ್ಣ ಅವರೂ ಅಲ್ಲಿಯೆ ಲಿಂಗೈಕ್ಯರಾಗುತ್ತಾರೆ. ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿ ಕಲ್ಲಿನ ಮೇಲಿರುವ ಶರಣರ ಶಿಲ್ಪಗಳಲ್ಲಿ ಅಪ್ಪಣ್ಣನ ವಿಗ್ರಹವೂ ಇದೆ. ಅಪ್ಪಣ್ಣ 'ಬಸವಪ್ರಿಯ ಕೂಡಲ ಚೆನ್ನಬಸವಣ್ಣ' ಅಂಕಿತದಲ್ಲಿ ಇನ್ನೂರಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಬೆಡಗಿನವು ಅಧಿಕ. ಷಟ್‌ಸ್ಥಲ ತತ್ವನಿರೂಪಣೆಗೆ ಆದ್ಯತೆ. ಕೆಲವು ಕಥನಶೈಲಿಯನ್ನು ಅಳವಡಿಸಿಕೊಂಡಿವೆ.

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

ಈಕೆ ಬಸವಣ್ಣನವರ ಆಪ್ತರಲ್ಲಿ ಮುಖ್ಯನೆನಿಸಿದ ಹಡಪದ ಅಪ್ಪಣ್ಣನ ಹೆಂಡತಿ. ಗುರು-ಚೆನ್ನಮಲ್ಲೇಶ. ಕಾಲ - ೧೧೬೦. ಉನ್ನತ ಅನುಭಾವಿಯಾದ ಲಿಂಗಮ್ಮನ ೧೧೪ ವಚನ, ೧ ಸ್ವರವಚನ, ೧ ಮಂತ್ರಗೋಪ್ಯ ದೊರೆತಿವೆ. 'ಅಪ್ಪಣ್ಣಪ್ರಿಯ ಚೆನ್ನಬಸವಣ್ಣ' ಇವುಗಳ ಅಂಕಿತ. ತತ್ವಬೋಧೆಯೇ ಮುಖ್ಯವಾಗಿರುವುದರಿಂದ ಈಕೆಯ ವಚನಗಳು 'ಬೋಧೆಯ ವಚನಗಳು' ಎಂದು ಹಸ್ತಪ್ರತಿಯಲ್ಲಿ ದಾಖಲಾಗಿವೆ.

ಮನದ ಚಂಚಲತೆ, ಅದನ್ನು ನಿಗ್ರಹಿಸುವ ವಿಧಾನ, ಗುರು-ಲಿಂಗ-ಜಂಗಮ ಭಕ್ತಿ, ಶರಣರ ನಡೆನುಡಿ, ಆಚಾರ ವಿಚಾರ ನಿಷ್ಠೆ, ಡಾಂಭಿಕಭಕ್ತರ ಟೀಕೆ, ಯೋಗವಿಚಾರ ಈಕೆಯ ವಚನಗಳಲ್ಲಿ ತೋರುವ ಪ್ರಮುಖ ವಿಷಯಗಳಾಗಿವೆ. ಭಾಷೆಯು ತಾತ್ವಿಕ ವಿಷಯ ನಿರೂಪಣೆಯಲ್ಲಿ ಬೆಡಗಿನಿಂದ ಕೂಡಿದ್ದರೆ, ಟೀಕೆ - ವಿಡಂಬನೆಗಳಲ್ಲಿ ನೇರ, ದೇಶೀಸೊಗಡಿನಿಂದ ಸಂಭ್ರಮಿಸುತ್ತದೆ.

ಹಡಪದ ರೇಚಣ್ಣ

ತಾಂಬೂಲ ಹಡಪದ ಕಾಯಕವನ್ನು ಕೈಗೊಂಡಿದ್ದ ಈತ ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಶರಣರ ದಂಡಿನೊಂದಿಗೆ ಉಳುಮೆಯ ವರೆಗೆ ಹೋಗಿದ್ದನೆಂದು ತಿಳಿಯುತ್ತದೆ. ಕಾಲ-೧೧೬೦. 'ನಿಃಕಳಂಕ ಕೂಡಲಸಂಗಮದೇವ' ಅಂಕಿತದಲ್ಲಿ ೯ ವಚನಗಳು ದೊರೆತಿವೆ. ಶಿವಭಕ್ತರ ಗುಣಲಕ್ಷಣ, ಶರಣರ ಸ್ತುತಿ, ಅಪ್ರಾಮಾಣಿಕರ ದೂಷಣೆ ಅವುಗಳ ವಸ್ತು.

ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

ಈಕೆ ಹಾದರ ಕಾಯಕದ ಮಾರಯ್ಯನ ಸತಿ. ಕಾಲ-೧೧೬೦. 'ಗಂಗೇಶ್ವರ' ಅಂಕಿತದಲ್ಲಿ ಒಂದು ವಚನ ದೊರೆತಿದೆ. ಕಾಯಕ ಸಮಾನತೆ, ವ್ರತನಿಷ್ಠೆ ಇದರ ಮುಖ್ಯ ಆಶಯ.

ಹಾವಿನಾಳ ಕಲ್ಲಯ್ಯ

ಅಕ್ಕಸಾಲಿಗ ಮನೆತನಕ್ಕೆ ಸೇರಿದ ಈತನ ಜನ್ಮಸ್ಥಳ ವಿಜಾಪುರ ಜಿಲ್ಲೆಯ ಹಾವಿನಾಳು. ಅಲ್ಲಿನ ಕಲ್ಲಿನಾಥ ಆರಾಧ್ಯದೈವ. ತಂದೆ-ಶಿವನಯ್ಯ, ತಾಯಿ -ಸೋಮವ್ವೆ. ಕಾಲ - ೧೧೬೦. ಹರಿಹರನ ರಗಳೆಯಲ್ಲಿ ಈತ ಸತ್ತ ಸರ್ಪವನ್ನು ಬದುಕಿಸಿದ, ನಾಯಿಯಿಂದ ವೇದವನ್ನು ಓದಿಸಿದ, ಪರಕಾಯ ಪ್ರವೇಶಮಾಡಿದ - ಎಂಬ ಪವಾಡಾತ್ಮಕ ಘಟನೆಗಳು ಉಕ್ತವಾಗಿವೆ. ರೇವಣಸಿದ್ಧ, ರುದ್ರಮುನಿ, ಸಿದ್ಧರಾಮರ ಸಂಪರ್ಕದಿಂದ

ಶರಣನಾದ ಈತ, ಕಲ್ಯಾಣಕ್ಕೆ ಬಂದು ಅನುಭಾವ ಗೋಷ್ಠಿಗಳಲ್ಲಿ ಭಾಗವಹಿಸಿದ. ಕಲ್ಯಾಣಕ್ರಾಂತಿಯ ನಂತರ ಸೊಲ್ಲಾಪುರಕ್ಕೆ ತೆರಳಿ, ಅಲ್ಲಿಯೇ ಐಕ್ಯನಾದ. ಈತನ ಸಮಾಧಿ ಸಿದ್ಧರಾಮೇಶ್ವರ ದೇವಾಲಯದ ಪ್ರಾಕಾರದಲ್ಲಿದೆ.

'ಮಹಾಲಿಂಗ ಕಲ್ಲೇಶ್ವರ' ಅಂಕಿತದಲ್ಲಿ ಈತ ರಚಿಸಿದ ೧೦೩ ವಚನಗಳು ದೊರೆತಿದ್ದು, ಅವುಗಳಲ್ಲಿ ಭಕ್ತಿನಿಷ್ಠೆ, ಶರಣತತ್ವ ವಿವೇಚನೆ, ಪರಮತ ಖಂಡನೆ, ನೀತಿಬೋಧೆ, ಆತ್ಮನಿರೀಕ್ಷಣೆ, ಶರಣಸ್ತುತಿ ಮೊದಲಾದವು ಪ್ರತಿಪಾದನೆಗೊಂಡಿವೆ.

ಹುಂಜಿನ ಕಾಳಗದ ದಾಸಯ್ಯ

ಹುಂಜಿನ ಕಾಳಗ ಏರ್ಪಡಿಸುವುದು ಈತನ ಕಾಯಕ. ಕಾಲ-೧೧೬೦. 'ಚಂದ್ರಚೂಡೇಶ್ವರ ಲಿಂಗ' ಅಂಕಿತದಲ್ಲಿ ಒಂದು ವಚನ ಮಾತ್ರ ದೊರೆತಿದೆ.ಇದರಲ್ಲಿ ಇವನ ವೃತ್ತಿಸೂಚನೆ, ವ್ರತನಿಷ್ಠುರತೆ, ವ್ರತಹೀನರ ನಿಂದೆ ವ್ಯಕ್ತವಾಗಿದೆ.

ಹೆಂಡದ ಮಾರಯ್ಯ

ಮೂಲತಃ ಹೆಂಡಮಾರುವ ಕಾಯಕದವನಾಗಿದ್ದ ಈತ ಶರಣನಾಗಿ ಮಾರ್ಪಟ್ಟನು. ಕಾಲ-೧೧೬೦. 'ಧರ್ಮೇಶ್ವರಲಿಂಗ' ಅಂಕಿತದಲ್ಲಿ ೧೨ ವಚನಗಳು ದೊರೆತಿವೆ. ಎಲ್ಲವೂ ಈತನ ವೃತ್ತಿಪರಿಭಾಷೆಯನ್ನು ಅಳವಡಿಸಿಕೊಂಡು ಅನುಭಾವವನ್ನು ಅರುಹುತ್ತವೆ. ನುಲಿಯ ಚಂದಯ್ಯನ ಪ್ರಸಂಗವನ್ನು ನಿರೂಪಿಸುವ ತುಂಬ ಪ್ರಸಿದ್ಧವಾದ ಒಂದು ವಚನ ನಾಟಕೀಯ ಗುಣದಿಂದ ವಿಶೇಷ ಗಮನ ಸೆಳೆಯುತ್ತದೆ.

ಹೊಡೆಹುಲ್ಲ ಬಂಕಣ್ಣ

ಹುಲ್ಲು ಮಾರುವ ಕಾಯಕ ಕೈಕೊಂಡಿದ್ದ ಬಂಕಣ್ಣನ ಕಾಲ - ೧೧೬೦. 'ಕುಂಭೇಶ್ವರಲಿಂಗದಲ್ಲಿ ಜಗನ್ನಾಥ ಸಾಕ್ಷಿಯಾಗಿ' ಎಂಬುದು ಈತನ ಅಂಕಿತ. ೧೦ ವಚನಗಳು ದೊರೆತಿವೆ. ಪ್ರಸಾದದ ಮಹತಿ, ಶುದ್ಧಕಾಯಕ, ಶರಣರ ಸ್ತುತಿ ಅವುಗಳಲ್ಲಿದೆ. ಕೆಲವು ಬೆಡಗಿನ ರೂಪದಲ್ಲಿವೆ.

ಹೇಮಗಲ್ಲ ಹಂಪ

ಬಹುಶಃ ಹಂಪೆಯ ಪರಿಸರಕ್ಕೆ ಸೇರಿದವನಾದ ಈತನ ಸ್ಥಳ ಹೇಮಗಲ್ಲು. ಕಾಲ ಸು. ೧೬ನೆಯ ಶತಮಾನ. ಲಿಂಗಾಯತ ಸಂಪ್ರದಾಯದಲ್ಲಿ ಮುಖ್ಯವಾದ 'ಪಡುವಿಡಿ' ಬಗೆಗೆ ಸೇರಿದವನು. ರಾಜೇಶ್ವರ ಈತನ ಗುರು. ಅಂಕಿತ-ಸಿದ್ಧಮಲ್ಲಿನಾಥ.

'ಹೇಮಗಲ್ಲ ಷಟ್‌ಸ್ಥಲ' ಈತನ ಕೃತಿಯ ಹೆಸರು. ಹೆಸರೇ ಸೂಚಿಸುವಂತೆ ಆರು ಸ್ಥಲಗಳಲ್ಲಿ ವಚನಗಳನ್ನು ಸಂಕಲಿಸಿರಬಹುದು. ಆದರೆ ಈಗ ದೊರೆತ ಕೃತಿ ಭಕ್ತಸ್ಥಲಕ್ಕೆ ನಿಂತಿದ್ದು. ಇದರಲ್ಲಿ ೨೩ ಸ್ಥಲಗಳಿವೆ. ಒಟ್ಟು ೨೮೨ ವಚನ, ೨೧ ಸ್ವರವಚನ, ೧ ರಗಳೆ, ೭ ಕಂದ ಪದ್ಯಗಳು ಸಮಾವೇಶಗೊಂಡಿವೆ. ಷಟ್‌ಸ್ಥಲ ತತ್ವಪ್ರತಿಪಾದನೆಯೇ ಇದರ ಪರಮಗುರಿ.

-? ಆನಂದ ಸಿದ್ಧೇಶ್ವರ *

ಈ ಅಂಕಿತದ ವಚನಗಳ ಕರ್ತೃ ಅಜ್ಞಾತ. ಕಾಲ ಸು. ೧೬೦೦. ಸದ್ಯ ಎರಡು ವಚನಗಳು ದೊರೆತಿವೆ. ಸಂಸಾರ ಸಾಗರದಲ್ಲಿ ಮುಳುಗಿದ ಅಜ್ಞಾನಿಗಳ ನಿಂದೆ ಮತ್ತು ಶರಣರ ನಿಲುವು ಇವುಗಳಲ್ಲಿ ನಿರೂಪಿತವಾಗಿವೆ.

-? ಈಶ್ವರೀಯ ವರದ ಚೆನ್ನರಾಮ

ಈ ಅಂಕಿತನ ಕರ್ತೃವಿನ ಹೆಸರು ತಿಳಿದಿಲ್ಲ. ಕಾಲ ಸು. ೧೬೫೦. ಒಂದು ವಚನ ಮಾತ್ರ ದೊರೆತಿದೆ. ವೈರಾಗ್ಯಬೋಧೆ ಅದರ ಗುರಿಯಾಗಿದೆ.

-? ಏಕಾಂತವೀರ ಸೊಡ್ಡಳ

ಈ ಅಂಕಿತದ ವಚನಕಾರನ ಹೆಸರು ಲಭ್ಯವಾಗಿಲ್ಲ. ಕಾಲ ಸು. ೧೪೦೦. ಈಗ ಎರಡು ವಚನ ದೊರೆತಿವೆ. ಒಂದು ವಚನದಲ್ಲಿ ಪ್ರಭುದೇವರ ನಿಲುವನ್ನು, ಇನ್ನೊಂದರಲ್ಲಿ ಲಿಂಗೈಕ್ಯನ ಸ್ವರೂಪವನ್ನು ತಿಳಿಸಲಾಗಿದೆ.

-? ಏಕೋರಾಮೇಶ್ವರಲಿಂಗ

ಸು. ೧೫೦೦ರಲ್ಲಿ ಇದ್ದಿರಬಹುದು. ಈ ಅಂಕಿತದ ವಚನಕಾರನ ಹೆಸರು ತಿಳಿದು ಬಂದಿಲ್ಲ. ಒಂದೇ ವಚನ ದೊರೆತಿದ್ದು, ಅದರಲ್ಲಿ ಶರಣನ ಸ್ಥಿತಿಯನ್ನು ವರ್ಣಿಸಲಾಗಿದೆ.

-? ಗುರುವರದ ವಿರೂಪಾಕ್ಷ

ಕರ್ತೃವಿನ ಹೆಸರು ಗೊತ್ತಿರದ ಈ ಅಂಕಿತದಲ್ಲಿ ಒಂದು ವಚನ ದೊರೆತಿದೆ. ಕಾಲ ಸು.೧೬೦೦ ಇರಬಹುದು. ಸಿರಿಯ ಮಹತಿಯನ್ನು ಕಾವ್ಯಮಯ ಶೈಲಿಯಲ್ಲಿ ನಿರೂಪಿಸುವ ಈ ವಚನ ತುಂಬ ಸುಂದರವಾಗಿದೆ.

-? ಜಂಗಮಲಿಂಗ ಪ್ರಭುವೆ

ಈ ಅಂಕಿತದಲ್ಲಿ ಈಗ ೧೦ ವಚನ ದೊರೆತಿವೆ. ಕರ್ತೃ ಅಜ್ಞಾತ. ಸು. ೧೭೦೦ ರಲ್ಲಿ ಇದ್ದಿರಬೇಕು. ವಚನಗಳು ಹೆಚ್ಚು ತಾತ್ವಿಕವಾಗಿದೆ. ಎರಡು ವಚನಗಳು ಬೆಡಗಿನ ಪರಿಭಾಷೆಯಲ್ಲಿವೆ. ಶಿವಪಾರಮ್ಯವನ್ನು ತಿಳಿಸುತ್ತವೆ.

-? ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ

ಸು. ೧೬೦೦ರಲ್ಲಿ ಇದ್ದಿರಬಹುದಾದ ಈ ಅಂಕಿತದ ವಚನಕಾರನ ಹೆಸರು ಅಲಭ್ಯ. ಏಳು ವಚನಗಳು ದೊರೆತಿವೆ. ಇಷ್ಟಲಿಂಗವ ಬಿಟ್ಟು ಅನ್ಯದೈವಕ್ಕೆರಗುವವರ ಟೀಕೆ, ನಿಂದಕರ ತೆಗಳಿಕೆ ಮುಂತಾದ ವಿಷಯಗಳು ಆಕರ್ಷಕ ದೃಷ್ಟಾಂತಗಳ ಮೂಲಕ ಈ ವಚನಗಳಲ್ಲಿ ನಿರೂಪಿಸಲ್ಪಟ್ಟಿವೆ.

-? ನಂಜುಂಡ ಶಿವ

ಈ ಅಂಕಿತದ ಕರ್ತೃ ಸು. ೧೬೦೦ರಲ್ಲಿ ಇದ್ದಿರಬೇಕು. ವಚನ, ಸ್ವರವಚನ ಎರಡೂ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾನೆ. ಸದ್ಯ ೨೪ ವಚನ, ೫ ಸ್ವರ ವಚನಗಳು ದೊರೆತಿವೆ. ಹೆಚ್ಚಿನ ವಚನಗಳು ದೀರ್ಘವಾಗಿವೆ. ಸಂಸ್ಕೃತ ಉದ್ಧರಣೆಗಳಿಂದ ತುಂಬಿಕೊಂಡಿವೆ, ತತ್ವಪ್ರಧಾನವೆನಿಸಿವೆ.

-? ನಿಜಮುಕ್ತಿ ರಾಮೇಶ್ವರ

ಈ ಅಂಕಿತದಲ್ಲಿ ಈಗ ಒಂದು ವಚನ ಮಾತ್ರ ದೊರೆತಿದೆ. ಕರ್ತೃವಿನ ಹೆಸರು ದೊರೆತಿಲ್ಲ. ಸು.೧೬೫೦ರಲ್ಲಿ ಇದ್ದಿರಬೇಕು. ವೈರಾಗ್ಯಬೋಧೆ ಈ ವಚನದ ಆಶಯವಾಗಿದೆ.

-? ನಿರ್ಧನಪ್ರಿಯ ರಾಮೇಶ್ವರ

ಸು. ೧೬೫೦ರಲ್ಲಿ ಇದ್ದಿರಬಹುದಾದ ಈ ಅಂಕಿತದ ವಚನದ ಕರ್ತೃವಿನ ಹೆಸರು ದೊರೆತಿಲ್ಲ. ಉಪಲಬ್ಧವಾದ ಒಂದೇ ವಚನ ತೀವ್ರವೈರಾಗ್ಯವನ್ನು ನಿರೂಪಿಸುತ್ತಿದ್ದು, ಮಹಾದೇವಿಯಕ್ಕನ ವಚನವನ್ನು ನೆನಪಿಸುತ್ತದೆ.

-? ನಿಃಕಳಂಕ ಚೆನ್ನಸೋಮೇಶ್ವರ

ಈ ಅಂಕಿತದ ಅಜ್ಞಾತ ಕರ್ತೃ ಸು. ೧೬೫೦ರಲ್ಲಿ ಇದ್ದಿರಬೇಕು. ಒಂದು ವಚನ ಮಾತ್ರ ದೊರೆತಿದ್ದು, ಸುಜ್ಞಾನಿ ಶರಣನ ಇರವನ್ನು ತಿಳಿಸುತ್ತದೆ.

-? ಮರ್ಕಟೇಶ್ವರ

ಅಜ್ಞಾತವಾಗಿರುವ ಈ ಅಂಕಿತದ ವಚನದ ಕರ್ತೃವಿನ ಕಾಲ ಸು.೧೬೦೦. ದೊರೆತ ಒಂದು ವಚನ ನಿಜವಿರಕ್ತನ ಲಕ್ಷಣವನ್ನು ತಿಳಿಸುತ್ತದೆ.

-? ಮಹಾಲಿಂಗ ವೀರ ರಾಮೇಶ್ವರ

ಈ ಅಂಕಿತದ ವಚನದ ಕರ್ತೃ ಅಜ್ಞಾತ. ಕಾಲ ಸು. ೧೫೦೦. ಒಂದೇ ವಚನ ದೊರೆತಿದೆ. ಅದರಲ್ಲಿ ಗುರುವಿನ ಉಪದೇಶದ ಮಹಿಮೆಯನ್ನು ಸುಂದರ ಉಪಮೆಗಳ ಮೂಲಕ ಬಣ್ಣಿಸಲಾಗಿದೆ.

❖❖

*

ವಚನಕಾರರು-ವಚನಾಂಕಿತ

ವಚನಕಾರರು	ವಚನಾಂಕಿತ
ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ
ಅಕ್ಕಮ್ಮ	ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ
ಅಂಗಸೋಂಕಿನ ಲಿಂಗತಂದೆ	ಭೋಗಬಂಕೇಶ್ವರಲಿಂಗ
ಅಗ್ಘವಣಿ ಹಂಪಯ್ಯ	ಹಂಪೆಯ ವಿರುಪಯ್ಯ
ಅಗ್ಘವಣಿ ಹೊನ್ನಯ್ಯ	ಹುಲಿಗೆರೆಯ ವರದ ಸೋಮನಾಥ
ಅಜಗಣ್ಣತಂದೆ	ಮಹಾಘನ ಸೌರಾಷ್ಟ್ರ ಸೋಮೇಶ್ವರ
ಅನಾಮಿಕ ನಾಚಯ್ಯ	ನಾಚಯ್ಯಪ್ರಿಯ ಚೆನ್ನರಾಮಯ್ಯ
ಅಪ್ಪಿದೇವಯ್ಯ	ವರದ ಮಹಾಲಿಂಗ
ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ
ಅಮರಗುಂಡದ ಮಲ್ಲಿಕಾರ್ಜುನತಂದೆ	ಮಾಗುಡದ ಮಲ್ಲಿಕಾರ್ಜುನದೇವ
ಅಮುಗಿದೇವಯ್ಯ	ಸಿದ್ಧಸೋಮನಾಥ
ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ
ಅಲ್ಲಮಪ್ರಭುದೇವ	ಗುಹೇಶ್ವರ
ಅವಸರದ ರೇಕಣ್ಣ	ಸದ್ಯೋಜಾತಲಿಂಗ
ಆದಯ್ಯ	ಸೌರಾಷ್ಟ್ರ ಸೋಮೇಶ್ವರ
ಆನಂದಯ್ಯ	ಆನಂದಸಿಂಧು ರಾಮೇಶ್ವರ
ಆಯ್ದಕ್ಕಿ ಮಾರಯ್ಯ	ಅಮರೇಶ್ವರಲಿಂಗ
ಆಯ್ದಕ್ಕಿ ಲಕ್ಕಮ್ಮ	ಮಾರಯ್ಯಪ್ರಿಯ ಅಮರೇಶ್ವರಲಿಂಗ
ಉಗ್ಘಡಿಸುವ ಗಬ್ಬಿದೇವಯ್ಯ	ಕೂಡಲಸಂಗಮದೇವರಲ್ಲಿ ಬಸವಣ್ಣ
ಉಪ್ಪರಗುಡಿಯ ಸೋಮಿದೇವಯ್ಯ	ಗಾರುಡೇಶ್ವರಲಿಂಗ
ಉರಿಲಿಂಗದೇವ	ಉರಿಲಿಂಗದೇವ
ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ	ಉರಿಲಿಂಗಪೆದ್ದಿಗಳರಸ
ಉಳಿಯುಮೇಶ್ವರ ಚಿಕ್ಕಣ್ಣ	ಉಳಿಯುಮೇಶ್ವರ
ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ	ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ
ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ	ನಿಜಗುಣೇಶ್ವರಲಿಂಗ
ಎಲೆಗಾರ ಕಾಮಣ್ಣ	ಆತುರೇಶ್ವರಲಿಂಗ

ಏಕಾಂತ ರಾಮಿತಂದೆ	ಎನ್ನಯ್ಯ ಚೆನ್ನರಾಮೇಶ್ವರಲಿಂಗ
ಏಲೇಶ್ವರ ಕೇತಯ್ಯ	ಏಲೇಶ್ವರಲಿಂಗ
ಒಕ್ಕಲಿಗ ಮುದ್ದಣ್ಣ	ಕಾಮಭೀಮ ಜೀವಧನದೊಡೆಯ
ಕನ್ನಡಿ ಕಾಯಕದ ಅಮ್ಮಿದೇವಯ್ಯ	ಚನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗ
ಕನ್ನಡಿಕಾಯಕದ ರೇಮಮ್ಮ	ಸದ್ಗುರುಸಂಗ ನಿರಂಗಲಿಂಗ
ಕನ್ನದ ಮಾರಿತಂದೆ	ಮಾರೇಶ್ವರ
ಕದಿರ ರೆಮ್ಮವ್ವೆ	ಕದಿರ ರೆಮ್ಮಿಯೊಡೆಯ ಗುಮ್ಮೆಶ್ವರ
ಕಂಬದ ಮಾರಿತಂದೆ	ಕದಂಬಲಿಂಗ
ಕರಸ್ಥಲ ಮಲ್ಲಿಕಾರ್ಜುನದೇವ	ಪರಮಗುರು ಶಾಂತಮಲ್ಲಿಕಾರ್ಜುನ
ಕರುಳ ಕೇತಯ್ಯ	ಶಂಕೇಶ್ವರಲಿಂಗ
ಕಲಕೇತಯ್ಯ	ಮೇಖಲೇಶ್ವರಲಿಂಗ
ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ	ನಿಜಶಾಂತೇಶ್ವರ
ಕಾಡಸಿದ್ಧೇಶ್ವರ	ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ
ಕಾಲಕಣ್ಣಿಯ ಕಾಮಮ್ಮ	ನಿರ್ಭೀತಿ ನಿಜಲಿಂಗ
ಕಿನ್ನರಿ ಬ್ರಹ್ಮಯ್ಯ	ಮಹಾಲಿಂಗ ತ್ರಿಪುರಾಂತಕ
ಕೀಲಾರದ ಭೀಮಣ್ಣ	ತ್ರಿಪುರಾಂತಕಲಿಂಗ
ಕುಷ್ಟಗಿ ಕರಿಬಸವೇಶ್ವರ	ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ ಶಿವಸಾಕ್ಷಿಯಾಗಿ
ಕೂಗಿನ ಮಾರಯ್ಯ	ಮಹಾಮಹಿಮ ಮಾರೇಶ್ವರ
ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ	ಅಗಜೇಶ್ವರಲಿಂಗ
ಕೊಟ್ಟಣದ ಸೋಮಮ್ಮ	ನಿರ್ಲಜ್ಜೇಶ್ವರ
ಕೋಲ ಶಾಂತಯ್ಯ	ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ
ಗಜೇಶ ಮಸಣಯ್ಯ	ಮಹಾಲಿಂಗ ಗಜೇಶ್ವರ
ಗಜೇಶಮಸಣಯ್ಯಗಳ ಪುಣ್ಯಸ್ತ್ರಿ	ಮಸಣಯ್ಯಪ್ರಿಯ ಗಜೇಶ್ವರ
ಗಣದಾಸಿ ವೀರಣ್ಣನ	ಶಾಂತ ಕೂಡಲಸಂಗಮದೇವ
ಗಾವುದಿ ಮಾಚಯ್ಯ	ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ
ಗುಪ್ತ ಮಂಚಣ್ಣ	ನಾರಾಯಣಪ್ರಿಯ ರಾಮನಾಥ
ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ	ಕುಂಭೇಶ್ವರ
ಗುರುಪುರದ ಮಲ್ಲಯ್ಯ	ಗುರುಪುರದ ಮಲ್ಲಯ್ಯ
ಗುರುಸಿದ್ಧದೇವ	ಸಂಗನಬಸವೇಶ್ವರ
ಗುಹೇಶ್ವರಯ್ಯ	ಗೊಹೇಶ್ವರಪ್ರಿಯ ನಿರಾಳಲಿಂಗ
ಗೊಗ್ಗವ್ವೆ	ನಾಸ್ತಿನಾಥ
ಗೋಣಿ ಮಾರಯ್ಯ	ಕೇಟೇಶ್ವರಲಿಂಗ
ಗೋರಕ್ಷ	ಗೋರಕ್ಷಕಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗ
ಘಟ್ಟಿವಾಳಯ್ಯ	ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲುಮಾಣು

ಘನಲಿಂಗಿದೇವ	ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ
ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ
ಚೆನ್ನಬಸವಣ್ಣ	ಕೂಡಲ ಚೆನ್ನಸಂಗಮದೇವ
ಚೆನ್ನಯ್ಯ	ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ
ಜಕ್ಕಣಯ್ಯ	ಝೇಂಕಾರ ನಿಜಲಿಂಗಪ್ರಭುವೆ
ಜಗಳಗಂಟ ಕಾಮಣ್ಣ	ಕಾಮೇಶ್ವರ
ಜೇಡರ ದಾಸಿಮಯ್ಯ	ರಾಮನಾಥ
ಜೋದರ ಮಾಯಣ್ಣ	ಶಂಭು ಸೋಮನಾಥಲಿಂಗ
ಡಕ್ಕೆಯ ಬೊಮ್ಮಣ್ಣ	ಕಾಲಾಂತಕ ಭೀಮೇಶ್ವರಲಿಂಗ
ಡೋಹರ ಕಕ್ಕಯ್ಯ	ಅಭಿನವ ಮಲ್ಲಿಕಾರ್ಜುನ
ತಳವಾರ ಕಾಮಿದೇವಯ್ಯ	ಕಾಮಹರಪ್ರಿಯ ರಾಮನಾಥ
ತುರುಗಾಹಿ ರಾಮಣ್ಣ	ಗೋಪತಿನಾಥ ವಿಶ್ವೇಶ್ವರಲಿಂಗ
ತೆಲುಗೇಶ ಮಸಣಯ್ಯ	ತೆಲುಗೇಶ್ವರ
ತೋಂಟದ ಸಿದ್ಧಲಿಂಗಶಿವಯೋಗಿ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ
ದಶಗಣ ಸಿಂಗಿದೇವಯ್ಯ	ನಾಚಯ್ಯಪ್ರಿಯ ಮಲ್ಲಿನಾಥ
ದಸರಯ್ಯ	ದಸರೇಶ್ವರಲಿಂಗ
ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ	ಗುರುಶಾಂತೇಶ್ವರ
ದಾಸೋಹದ ಸಂಗಣ್ಣ	ಮಾತುಳಂಗ ಮಧುಕೇಶ್ವರ
ದುಗ್ಗಳೆ	ದಾಸಯ್ಯಪ್ರಿಯ ರಾಮನಾಥ
ದೇಶಿಕೇಂದ್ರ ಸಂಗನಬಸವಯ್ಯ	ಗುರು ನಿರಂಜನ ಚನ್ನಬಸವಲಿಂಗ.
ನಗೆಯ ಮಾರಿತಂದೆ	ಆತುರವೈರಿ ಮಾರೇಶ್ವರ
ನಾಗಲಾಂಬಿಕೆ	ಬಸವಣ್ಣಪ್ರಿಯ ಚೆನ್ನಸಂಗಯ್ಯ
ನಿಜಗುಣಯೋಗಿ	ನಿಜಗುಣಯೋಗಿಯ ಯೋಗ
ನಿರಾಲಂಬಪ್ರಭುದೇವ	ನಿಸ್ಸಂಗ ನಿರಾಳ ನಿಜಲಿಂಗಪ್ರಭು.
ನಿವೃತ್ತಿ ಸಂಗಯ್ಯ	ನಿವೃತ್ತಿ ಸಂಗಯ್ಯ
ನೀಲಮ್ಮ	ಸಂಗಯ್ಯ
ನುಲಿಯ ಚಂದಯ್ಯ	ಚಂದೇಶ್ವರಲಿಂಗ
ಪರಂಜ್ಯೋತಿ	ವರ ನಾಗನ ಗುರು ವೀರನೆ ಪರಂಜ್ಯೋತಿ ಮಹಾವಿರಕ್ತಿ
ಪುರದ ನಾಗಣ್ಣ	ಅಮರಗುಂಡದ ಮಲ್ಲಿಕಾರ್ಜುನ
ಪ್ರಸಾದಿ ಭೋಗಣ್ಣ	ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ
ಪ್ರಸಾದಿ ಲೆಂಕ ಬಂಕಣ್ಣ	ದಹನ ಚಂಡಿಕೇಶ್ವರಲಿಂಗ
ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ	ನಿಂಬೇಶ್ವರ
ಬಸವಣ್ಣ	ಕೂಡಲಸಂಗಮದೇವ
ಬಸವಲಿಂಗದೇವ	ಮತ್ಪ್ರಾಣನಾಥ ಮಹಾ ಶ್ರೀಗುರು ಸಿದ್ಧಲಿಂಗೇಶ್ವರಬ ಹ ು ರ ೂ ಪಿ
ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ
ಬಳ್ಳೇಶ ಮಲ್ಲಯ್ಯ	ಬಳ್ಳೇಶ್ವರ

ಬಾಚಿಕಾಯಕದ ಬಸವಣ್ಣ	ಬಸವಣ್ಣಪ್ರಿಯ ವಿಶ್ವಕರ್ಮಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ
ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ	ಕರ್ಮಹರ ಕಾಳೇಶ್ವರ
ಬಾಲಬೊಮ್ಮಣ್ಣ	ವೀರಶೂರ ರಾಮೇಶ್ವರಲಿಂಗ
ಬಾಲಸಂಗಣ್ಣ	ಕಮಠೇಶ್ವರಲಿಂಗ
ಬಾಲಸಂಗಯ್ಯ	ಅಪ್ರಮಾಣಕೂಡಲಸಂಗಮದೇವ
ಬಾಹೂರ ಬೊಮ್ಮಣ್ಣ	ಬ್ರಹ್ಮೇಶ್ವರಲಿಂಗ
ಬಿಬ್ಬಿ ಬಾಚಯ್ಯ	ಏಣಾಂಕಧರ ಸೋಮೇಶ್ವರಲಿಂಗ
ಬೊಕ್ಕಸದ ಚಿಕ್ಕಣ್ಣ	ಬಸವಣ್ಣಪ್ರಿಯ ನಾಗರೇಶ್ವರಲಿಂಗ
ಬೊಂತಾದೇವಿ	ಬಿಡಾಡಿ
ಭೋಗಣ್ಣ	ನಿಜಗುರು ಭೋಗೇಶ್ವರ
ಮಡಿವಾಳ ಮಾಚಿದೇವ	ಕಲಿದೇವರ ದೇವ
ಮಡಿವಾಳ ಮಾಚಿದೇವರ ಸಮಯಾಚಾರದ ಮಲ್ಲಿಕಾರ್ಜುನ	ಶಾಂತಮಲ್ಲಿಕಾರ್ಜುನ
ಮಧುವಯ್ಯ	ಅರ್ಕೇಶ್ವರಲಿಂಗ
ಮನಸಂದ ಮಾರಿತಂದೆ	ಮಾರೇಶ್ವರ
ಮನುಮುನಿ ಗುಮ್ಮಟದೇವ	ಅಗಮ್ಯೇಶ್ವರಲಿಂಗ
ಮರುಳಶಂಕರದೇವ	ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುನೆ ಶಾಂತ ಚೆನ್ನಮಲ್ಲಿಕಾರ್ಜುನದೇವ
ಮಡಿವಾಳಪ್ಪ	ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ
ಮಲ್ಲಿಕಾರ್ಜುನ ಪಂಡಿತಾರಾಧ್ಯ	ಶ್ರೀ ಮಲ್ಲಿಕಾರ್ಜುನ
ಮಳುಬಾವಿಯ ಸೋಮಣ್ಣ	ಮಳುಬಾವಿಯ ಸೋಮ
ಮಾದಾರ ಚೆನ್ನಯ್ಯ	ನಿಜಾತ್ಮಾರಾಮ ರಾಮ
ಮಾದಾರ ಧೂಳಯ್ಯ	ಕಾಮಧೂಮ ಧೂಳೇಶ್ವರ
ಮಾರೇಶ್ವರೊಡೆಯ	ಮಾರೇಶ್ವರ
ಮುಕ್ತಾಯಕ್ಕ	ಅಜಗಣ್ಣ
ಮುಮ್ಮಡಿ ಕಾರ್ಯೇಂದ್ರ	ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ
ಮೆರೆಮಿಂಡಯ್ಯ	ಐಘಟದೂರ ರಾಮೇಶ್ವರಲಿಂಗ
ಮೇದರ ಕೇತಯ್ಯ	ಗವರೇಶ್ವರ
ಮೈದುನ ರಾಮಯ್ಯ	ಮಹಾಲಿಂಗ ಚೆನ್ನರಾಮೇಶ್ವರ
ಮೋಳಿಗೆ ಮಹಾದೇವಿ	ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ
ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ
ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ	ಅಮುಗೇಶ್ವರಲಿಂಗ
ರಾಯಸದ ಮಂಚಣ್ಣ	ಜಾಂಬೇಶ್ವರ
ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ	ಶ್ರೀಗುರುಸಿದ್ಧೇಶ್ವರ
ಲದ್ದೆಯ ಸೋಮಯ್ಯ	ಭಾಪು ಲದ್ದೆಯ ಸೋಮ
ವಚನಭಂಡಾರಿ ಶಾಂತರಸ	ಅಲೇಖನಾದ ಶೂನ್ಯ ಕಲ್ಲಿನೊಳಗಾದ
ವೀರ ಗೊಲ್ಲಾಳ	ವೀರಬೀರೇಶ್ವರಲಿಂಗ
ವೇದಮೂರ್ತಿ ಸಂಗಣ್ಣ	ಲಲಾಮಭೀಮಸಂಗಮೇಶ್ವರಲಿಂಗ

ವೈದ್ಯ ಸಂಗಣ್ಣ	ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ
ಶಂಕರದಾಸಿಮಯ್ಯ	ನಿಜಗುರು ಶಂಕರದೇವ
ಶಿವನಾಗಮಯ್ಯ	ನಾಗಪ್ರಿಯ ಚೆನ್ನರಾಮೇಶ್ವರ
ಶಿವಲೆಂಕ ಮಂಚಣ್ಣ	ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ
ಷಣ್ಮುಖಸ್ವಾಮಿ	ಅಖಂಡೇಶ್ವರ
ಸಕಳೇಶ ಮಾದರಸ	ಸಕಳೇಶ್ವರದೇವ
ಸಂಗಮೇಶ್ವರದ ಅಪ್ಪಣ್ಣ	ಬಸವಪ್ರಿಯ ಕೂಡಲಚೆನ್ನಸಂಗಮದೇವ
ಸಗರದ ಬೊಮ್ಮಣ್ಣ	ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ
ಸತ್ತಿಗೆ ಕಾಯಕದ ಮಾರಯ್ಯ	ಐಘುಂಟೇಶ್ವರಲಿಂಗ.
ಸತ್ಯಕ್ಕ	ಶಂಭುಜಕ್ಕೇಶ್ವರ
ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ	ಭೀಮೇಶ್ವರ
ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ
ಸಿದ್ಧಾಂತಿ ವೀರಸಂಗಯ್ಯ	ಗೋಳಕಾಕಾರ ವಿಶ್ವವಿರಹಿತ ಲಿಂಗ
ಸುಂಕದ ಬಂಕಣ್ಣ	ಸುಂಕದೊಡೆಯ ಬಂಕೇಶ್ವರಲಿಂಗ
ಸೂಳೆಸಂಕವ್ವೆ	ನಿರ್ಲಜ್ಜೇಶ್ವರ
ಸೊಡ್ಡಳ ಬಾಚರಸ	ಸೊಡ್ಡಳ
ಸ್ವತಂತ್ರಸಿದ್ಧಲಿಂಗೇಶ್ವರ	ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ
ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ	ಅಪ್ಪಣ್ಣಪ್ರಿಯ ಚೆನ್ನಬಸವಣ್ಣ
ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ
ಹಡಪದ ರೇಚಣ್ಣ	ನಿಃಕಳಂಕ ಕೂಡಲಚೆನ್ನಸಂಗಮದೇವ
ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ	ಗಂಗೇಶ್ವರಲಿಂಗ
ಹಾವಿನಹಾಳ ಕಲ್ಲಯ್ಯ	ಮಹಾಲಿಂಗ ಕಲ್ಲೇಶ್ವರ
ಹುಂಜಿನ ಕಾಳಗದ ದಾಸಯ್ಯ	ಚಂದ್ರಚೂಡೇಶ್ವರಲಿಂಗ
ಹೆಂಡದ ಮಾರಯ್ಯ	ಧರ್ಮೇಶ್ವರಲಿಂಗ
ಹೊಡೆಹುಲ್ಲ ಬಂಕಣ್ಣ	ಕುಂಭೇಶ್ವರಲಿಂಗ
ಹೇಮಗಲ್ಲ ಹಂಪ	ಪರಮ ಗುರು ಪಡುವಿಡಿ ಸಿದ್ಧ ಮಲ್ಲಿನಾಥ ಪ್ರಭುವೆ
-?	ಆನಂದ ಸಿದ್ಧೇಶ್ವರ
-?	ಈಶ್ವರೀಯ ವರದ ಚೆನ್ನರಾಮ
-?	ಏಕಾಂತವೀರ ಸೊಡ್ಡಳ
-?	ಏಕೋರಾಮೇಶ್ವರಲಿಂಗ
-?	ಗುರುವರದ ವಿರೂಪಾಕ್ಷ
-?	ಜಂಗಮಲಿಂಗ ಪ್ರಭುವೆ
-?	ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ
-?	ನಂಜುಂಡ ಶಿವ
-?	ನಿಜಮುಕ್ತಿ ರಾಮೇಶ್ವರ
-?	ನಿರ್ಧನಪ್ರಿಯ ರಾಮೇಶ್ವರ

-?	ನಿಃಕಳಂಕ ಚೆನ್ನಸೋಮೇಶ್ವರ
-?	ಮರ್ಕಟೇಶ್ವರ
-?	ಮಹಾಲಿಂಗ ವೀರ ರಾಮೇಶ್ವರ

❖❖

*

ವಚನಾಂಕಿತ - ವಚನಕಾರರು

ವಚನಾಂಕಿತ	ವಚನಕಾರರು
ಅರ್ಕೇಶ್ವರಲಿಂಗ	ಮಧುವಯ್ಯ
ಅಖಂಡ ಪರಿಪೂರ್ಣ ಘನಲಿಂಗಗುರು	ಕುಷ್ಟಗಿ ಕರಿಬಸವೇಶ್ವರ
ಅಖಂಡೇಶ್ವರ	ಷಣ್ಮುಖಸ್ವಾಮಿ
ಅಗಜೇಶ್ವರಲಿಂಗ	ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
ಅಗಮ್ಯೇಶ್ವರಲಿಂಗ	ಮನುಮುನಿ ಗುಮ್ಮಟದೇವ
ಅಜಗಣ್ಣ	ಮುಕ್ತಾಯಕ್ಕ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ	ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ
ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ
ಅಭಿನವ ಮಲ್ಲಿಕಾರ್ಜುನ	ಡೋಹರ ಕಕ್ಕಯ್ಯ
ಅಮರೇಶ್ವರಲಿಂಗ	ಆಯ್ದಕ್ಕಿ ಮಾರಯ್ಯ
ಅಮರಗುಂಡದ ಮಲ್ಲಿಕಾರ್ಜುನ	ಪುರದ ನಾಗಣ್ಣ
ಅಮುಗೇಶ್ವರಲಿಂಗ	ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ
ಅಲೇಖನಾದ ಶೂನ್ಯ ಕಲ್ಲಿನೊಳಗಾದ	ವಚನಭಂಡಾರಿ ಶಾಂತರಸ
ಅಪ್ರಮಾಣಕೂಡಲಸಂಗಮದೇವ	ಬಾಲಸಂಗಯ್ಯ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ	ಅಕ್ಕಮ್ಮ
ಆತುರೇಶ್ವರಲಿಂಗ	ಎಲೆಗಾರ ಕಾಮಣ್ಣ
ಆತುರವೈರಿ ಮಾರೇಶ್ವರ	ನಗೆಯ ಮಾರಿತಂದೆ
ಆನಂದಸಿಂಧು ರಾಮೇಶ್ವರ	ಆನಂದಯ್ಯ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ	ಶಿವಲೆಂಕ ಮಂಚಣ್ಣ
ಉರಿಲಿಂಗದೇವ	ಉರಿಲಿಂಗದೇವ
ಉರಿಲಿಂಗಪೆದ್ದಿಗಳರಸ	ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	ಉರಿಲಿಂಗಪೆದ್ದಿ
ಉಳಿಯುಮೇಶ್ವರ	ಉಳಿಯುಮೇಶ್ವರ ಚಿಕ್ಕಣ್ಣ
ಎನ್ನಯ್ಯ ಚೆನ್ನರಾಮೇಶ್ವರಲಿಂಗ	ಏಕಾಂತ ರಾಮಿತಂದೆ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ	ಮೋಳಿಗೆ ಮಹಾದೇವಿ
ಏಣಾಂಕಧರ ಸೋಮೇಶ್ವರಲಿಂಗ	ಬಿಬ್ಬಿ ಬಾಚಯ್ಯ
ಏಲೇಶ್ವರಲಿಂಗ	ಏಲೇಶ್ವರ ಕೇತಯ್ಯ

ಐಘುಟದೂರ ರಾಮೇಶ್ವರಲಿಂಗ	ಮೆರೆಮಿಂಡಯ್ಯ
ಐಘುಂಟೇಶ್ವರಲಿಂಗ	ಸತ್ತಿಗೆ ಕಾಯಕದ ಮಾರಯ್ಯ
ಕದಂಬಲಿಂಗ	ಕಂಬದ ಮಾರಿತಂದೆ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ	ಕದಿರ ರೆಮ್ಮವ್ವೆ
ಕಮತೇಶ್ವರಲಿಂಗ	ಬಾಲಸಂಗಣ್ಣ
ಕಲಿದೇವರ ದೇವ	ಮಡಿವಾಳ ಮಾಚಿದೇವ
ಕಪಿಲಸಿದ್ಧ ಮಲ್ಲಿಕಾರ್ಜುನ	ಸಿದ್ಧರಾಮೇಶ್ವರ
ಕರ್ಮಹರ ಕಾಳೇಶ್ವರ	ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೆ	ಕಾಡಸಿದ್ಧೇಶ್ವರ
ಕಾಮಧೂಮ ಧೂಳೇಶ್ವರ	ಮಾದಾರ ಧೂಳಯ್ಯ
ಕಾಮಭೀಮ ಜೀವಧನದೊಡೆಯ	ಒಕ್ಕಲಿಗ ಮುದ್ದಣ್ಣ
ಕಾಮಹರಪ್ರಿಯ ರಾಮನಾಥ	ತಳವಾರ ಕಾಮಿದೇವಯ್ಯ
ಕಾಮೇಶ್ವರ	ಜಗಳಗಂಟ ಕಾಮಣ್ಣ
ಕಾಲಾಂತಕ ಭೀಮೇಶ್ವರಲಿಂಗ	ಡಕ್ಕೆಯ ಬೊಮ್ಮಣ್ಣ
ಕುಂಭೇಶ್ವರ	ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ
ಕುಂಭೇಶ್ವರಲಿಂಗ	ಹೊಡೆಹುಲ್ಲ ಬಂಕಣ್ಣ
ಕೂಡಲ ಚೆನ್ನಸಂಗಮದೇವ	ಚೆನ್ನಬಸವಣ್ಣ
ಕೂಡಲಸಂಗಮದೇವ	ಬಸವಣ್ಣ
ಕೂಡಲಸಂಗಮದೇವರಲ್ಲಿ ಬಸವಣ್ಣ	ಉಗ್ಘಡಿಸುವ ಗಬ್ಬಿದೇವಯ್ಯ
ಕೇಟೇಶ್ವರಲಿಂಗ	ಗೋಣಿ ಮಾರಯ್ಯ
ಗಂಗೇಶ್ವರಲಿಂಗ	ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ
ಗವರೇಶ್ವರ	ಮೇದರ ಕೇತಯ್ಯ
ಗಾರುಡೇಶ್ವರಲಿಂಗ	ಉಪ್ಪರಗುಡಿಯ ಸೋಮಿದೇವಯ್ಯ
ಗುರು ನಿರಂಜನ ಚನ್ನಬಸವಲಿಂಗ	ದೇಶಿಕೇಂದ್ರ ಸಂಗನಬಸವಯ್ಯ
ಗುರುಪುರದ ಮಲ್ಲಯ್ಯ	ಗುರುಪುರದ ಮಲ್ಲಯ್ಯ
ಗುರುಶಾಂತೇಶ್ವರ	ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ
ಗುಹೇಶ್ವರ	ಅಲ್ಲಮಪ್ರಭುದೇವ
ಗೊಹೇಶ್ವರಪ್ರಿಯ ನಿರಾಳಲಿಂಗ	ಗುಹೇಶ್ವರಯ್ಯ
ಗೋಪತಿನಾಥ ವಿಶ್ವೇಶ್ವರಲಿಂಗ	ತುರುಗಾಹಿ ರಾಮಣ್ಣ
ಗೋರಕ್ಷಕಪಾಲಕ ಮಹಾಪ್ರಭು	ಗೋರಕ್ಷ
ಗೋಳಕಾಕಾರ ವಿಶ್ವವಿರಹಿತ ಲಿಂಗ	ಸಿದ್ಧಾಂತಿ ವೀರಸಂಗಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ	ಘನಲಿಂಗಿದೇವ
ಚಂದೇಶ್ವರಲಿಂಗ	ನುಲಿಯ ಚಂದಯ್ಯ
ಚಂದ್ರಚೂಡೇಶ್ವರಲಿಂಗ	ಹುಂಜಿನ ಕಾಳಗದ ದಾಸಯ್ಯ
ಚನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗ	ಕನ್ನಡಿ ಕಾಯಕದ ಅಮ್ಮಿದೇವಯ್ಯ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ	ಪ್ರಸಾದಿ ಭೋಗಣ್ಣ

ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲುಮಾಣು	ಘಟ್ಟಿವಾಳಯ್ಯ
ಚೆನ್ನಮಲ್ಲಿಕಾರ್ಜುನ	ಅಕ್ಕಮಹಾದೇವಿ
ಚೆನ್ನಯ್ಯಪ್ರಿಯ ನಿರ್ಮಾಯಪ್ರಭುವೆ	ಚೆನ್ನಯ್ಯ
ಜಾಂಬೇಶ್ವರ	ರಾಯಸದ ಮಂಚಣ್ಣ
ಝೇಂಕಾರ ನಿಜಲಿಂಗಪ್ರಭುವೆ	ಜಕ್ಕಣಯ್ಯ
ತೆಲುಗೇಶ್ವರ	ತೆಲುಗೇಶ ಮಸಣಯ್ಯ
ತ್ರಿಪುರಾಂತಕಲಿಂಗ	ಕೀಲಾರದ ಭೀಮಣ್ಣ
ಚೆನ್ನಬಸವೇಶ್ವರ ಶಿವಸಾಕ್ಷಿಯಾಗಿ	
ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ	ಗಾವುದಿ ಮಾಚಯ್ಯ
ದಸರೇಶ್ವರಲಿಂಗ	ದಸರಯ್ಯ
ದಹನ ಚಂಡಿಕೇಶ್ವರಲಿಂಗ	ಪ್ರಸಾದಿ ಲೆಂಕ ಬಂಕಣ್ಣ
ದಾಸಯ್ಯಪ್ರಿಯ ರಾಮನಾಥ	ದುಗ್ಗಳೆ
ಧರ್ಮೇಶ್ವರಲಿಂಗ	ಹೆಂಡದ ಮಾರಯ್ಯ
ನಾಗಪ್ರಿಯ ಚೆನ್ನರಾಮೇಶ್ವರ	ಶಿವನಾಗಮಯ್ಯ
ನಾಚಯ್ಯಪ್ರಿಯ ಚೆನ್ನರಾಮಯ್ಯ	ಅನಾಮಿಕ ನಾಚಯ್ಯ
ನಾಚಯ್ಯಪ್ರಿಯ ಮಲ್ಲಿನಾಥ	ದಶಗಣ ಸಿಂಗಿದೇವಯ್ಯ
ನಾರಾಯಣಪ್ರಿಯ ರಾಮನಾಥ	ಗುಪ್ತ ಮಂಚಣ್ಣ
ನಾಸ್ತಿನಾಥ	ಗೊಗ್ಗವ್ವೆ
ನಿಜಗುಣೇಶ್ವರಲಿಂಗ	ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ
ನಿಜಶಾಂತೇಶ್ವರ	ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
ನಿಜಗುಣಯೋಗಿಯ ಯೋಗ	ನಿಜಗುಣಯೋಗಿ
ನಿಜಗುರು ಭೋಗೇಶ್ವರ	ಭೋಗಣ್ಣ
ನಿಜಗುರು ಶಂಕರದೇವ	ಶಂಕರದಾಸಿಮಯ್ಯ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ
ನಿಜಾತ್ಮಾರಾಮ ರಾಮ	ಮಾದಾರ ಚೆನ್ನಯ್ಯ
ನಿಂಬೇಶ್ವರ	ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ
ನಿರ್ಭೀತಿ ನಿಜಲಿಂಗ	ಕಾಲಕಣ್ಣಿಯ ಕಾಮಮ್ಮ
ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ	ಮಡಿವಾಳಪ್ಪ
ನಿರ್ಲಜ್ಜೇಶ್ವರ	ಕೊಟ್ಟಣದ ಸೋಮಮ್ಮ
ನಿರ್ಲಜ್ಜೇಶ್ವರ	ಸೂಳೆಸಂಕವ್ವೆ
ನಿವೃತ್ತಿ ಸಂಗಯ್ಯ	ನಿವೃತ್ತಿ ಸಂಗಯ್ಯ
ನಿಸ್ಸಂಗ ನಿರಾಳ ನಿಜಲಿಂಗಪ್ರಭು	ನಿರಾಲಂಬಪ್ರಭುದೇವ
ನಿಃಕಳಂಕ ಕೂಡಲಚೆನ್ನಸಂಗಮದೇವ	ಹಡಪದ ರೇಚಣ್ಣ
ನಿಃಕಳಂಕ ಮಲ್ಲಿಕಾರ್ಜುನ	ಮೋಳಿಗೆ ಮಾರಯ್ಯ
ಪರಮಗುರು ಪಡುವಿಡಿ ಸಿದ್ಧ ಮಲ್ಲಿನಾಥ ಪ್ರಭುವೆ	ಹೇಮಗಲ್ಲ ಹಂಪ

ಪರಮಗುರು ಶಾಂತಮಲ್ಲಿಕಾರ್ಜುನ	ಕರಸ್ಥಲ ಮಲ್ಲಿಕಾರ್ಜುನದೇವ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ	ಕೋಲ ಶಾಂತಯ್ಯ
ಬಸವಣ್ಣಪ್ರಿಯ ಚೆನ್ನಸಂಗಯ್ಯ	ನಾಗಲಾಂಬಿಕೆ
ಬಸವಣ್ಣಪ್ರಿಯ ನಾಗರೇಶ್ವರಲಿಂಗ	ಬೊಕ್ಕಸದ ಚಿಕ್ಕಣ್ಣ
ಬಸವಣ್ಣಪ್ರಿಯ ವಿಶ್ವಕರ್ಮಕ್ಕೆ	ಬಾಚಿಕಾಯಕದ ಬಸವಣ್ಣ
ಕಾಳಿಕಾವಿಮಲ ರಾಜೇಶ್ವರಲಿಂಗ	
ಬಸವಪ್ರಿಯ ಕೂಡಲಚೆನ್ನಸಂಗಮದೇವ	ಸಂಗಮೇಶ್ವರದ ಅಪ್ಪಣ್ಣ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ	ಹಡಪದ ಅಪ್ಪಣ್ಣ
ಬಳ್ಳೇಶ್ವರ	ಬಳ್ಳೇಶ ಮಲ್ಲಯ್ಯ
ಬಿಡಾಡಿ	ಬೊಂತಾದೇವಿ
ಭಾಪು ಲದ್ದೆಯ ಸೋಮ	ಲದ್ದೆಯ ಸೋಮಯ್ಯ
ಭೀಮೇಶ್ವರ	ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
ಭೋಗಬಂಕೇಶ್ವರಲಿಂಗ	ಅಂಗಸೋಂಕಿನ ಲಿಂಗತಂದೆ
ಬ್ರಹ್ಮೇಶ್ವರಲಿಂಗ	ಬಾಹೂರ ಬೊಮ್ಮಣ್ಣ
ಮತ್ಪ್ರಾಣನಾಥ ಮಹಾ ಶ್ರೀಗುರು ಸಿದ್ಧಲಿಂಗೇಶ್ವರ	ಬಸವಲಿಂಗದೇವ
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ	ವೈದ್ಯ ಸಂಗಣ್ಣ
ಮಸಣಯ್ಯಪ್ರಿಯ ಗಜೇಶ್ವರ	ಗಜೇಶಮಸಣಯ್ಯಗಳ ಪುಣ್ಯಸ್ತ್ರೀ
ಮಹಾಘನ ಸೌರಾಷ್ಟ್ರ ಸೋಮೇಶ್ವರ	ಅಜಗಣ್ಣತಂದೆ
ಮಹಾಘನ ದೊಡ್ಡ ದೇಶಿಕಾರ್ಯಗುರುಪ್ರಭುವೆ	ಮುಮ್ಮಡಿ ಕಾರ್ಯೇಂದ್ರ
ಮಹಾಮಹಿಮ ಮಾರೇಶ್ವರ	ಕೂಗಿನ ಮಾರಯ್ಯ
ಮಹಾಲಿಂಗ ಕಲ್ಲೇಶ್ವರ	ಹಾವಿನಹಾಳ ಕಲ್ಲಯ್ಯ
ಮಹಾಲಿಂಗ ಗಜೇಶ್ವರ	ಗಜೇಶ ಮಸಣಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	ತೋಂಟದ ಸಿದ್ಧಲಿಂಗಶಿವಯೋಗಿ
ಮಹಾಲಿಂಗ ಚೆನ್ನರಾಮೇಶ್ವರ	ಮೈದುನ ರಾಮಯ್ಯ
ಮಹಾಲಿಂಗ ತ್ರಿಪುರಾಂತಕ	ಕಿನ್ನರಿ ಬ್ರಹ್ಮಯ್ಯ
ಮಳುಬಾವಿಯ ಸೋಮ	ಮಳುಬಾವಿಯ ಸೋಮಣ್ಣ
ಮಾಗುಡದ ಮಲ್ಲಿಕಾರ್ಜುನದೇವ	ಅಮರಗುಂಡದ ಮಲ್ಲಿಕಾರ್ಜುನತಂದೆ
ಮಾತುಳಂಗ ಮಧುಕೇಶ್ವರ	ದಾಸೋಹದ ಸಂಗಣ್ಣ
ಮಾರಯ್ಯಪ್ರಿಯ ಅಮರೇಶ್ವರಲಿಂಗ	ಆಯ್ದಕ್ಕಿ ಲಕ್ಕಮ್ಮ
ಮಾರೇಶ್ವರ	ಕನ್ನದ ಮಾರಿತಂದೆ
ಮಾರೇಶ್ವರ	ಮನಸಂದ ಮಾರಿತಂದೆ
ಮಾರೇಶ್ವರ	ಮಾರೇಶ್ವರೊಡೆಯ
ಮೇಖಲೇಶ್ವರಲಿಂಗ	ಕಲಕೇತಯ್ಯ
ರಾಮನಾಥ	ಜೇಡರ ದಾಸಿಮಯ್ಯ
ರೇಕಣ್ಣಪ್ರಿಯ ನಾಗಿನಾಥ	ಬಹುರೂಪಿ ಚೌಡಯ್ಯ
ಲಲಾಮಭೀಮಸಂಗಮೇಶ್ವರಲಿಂಗ	ವೇದಮೂರ್ತಿ ಸಂಗಣ್ಣ
ವರದ ಮಹಾಲಿಂಗ	ಅಪ್ಪಿದೇವಯ್ಯ

ವರ ನಾಗನ ಗುರು ವೀರನೆ ಪರಂಜ್ಯೋತಿ	ಪರಂಜ್ಯೋತಿ
ಮಹಾವಿರಕ್ತಿ	
ವೀರಬೀರೇಶ್ವರಲಿಂಗ	ವೀರ ಗೊಲ್ಲಾಳ
ವೀರಶೂರ ರಾಮೇಶ್ವರಲಿಂಗ	ಬಾಲಬೊಮ್ಮಣ್ಣ
ಶಂಕೇಶ್ವರಲಿಂಗ	ಕರುಳ ಕೇತಯ್ಯ
ಶಂಭು ಜಕ್ಕೇಶ್ವರ	ಸತ್ಯಕ್ಕ
ಶಂಭು ಸೋಮನಾಥಲಿಂಗ	ಜೋದರ ಮಾಯಣ್ಣ
ಶಾಂತ ಕೂಡಲಸಂಗಮದೇವ	ಗಣದಾಸಿ ವೀರಣ್ಣ
ಶಾಂತಮಲ್ಲಿಕಾರ್ಜುನ	ಮಡಿವಾಳ ಮಾಚಿದೇವರ ಸಮಯಾಚಾರದ ಮಲ್ಲಿಕಾರ್ಜುನ
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ	ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುನೆ	ಮರುಳಶಂಕರದೇವ
ಶಾಂತ ಚೆನ್ನಮಲ್ಲಿಕಾರ್ಜುನದೇವ	
ಶ್ರೀಗುರುಸಿದ್ಧೇಶ್ವರ	ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ
ಶ್ರೀ ಮಲ್ಲಿಕಾರ್ಜುನ	ಮಲ್ಲಿಕಾರ್ಜುನ ಪಂಡಿತಾರಾಧ್ಯ
ಸಕಳೇಶ್ವರದೇವ	ಸಕಳೇಶ ಮಾದರಸ
ಸಂಗಯ್ಯ	ನೀಲಮ್ಮ
ಸಂಗನಬಸವೇಶ್ವರ	ಗುರುಸಿದ್ಧದೇವ
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ	ಸಗರದ ಬೊಮ್ಮಣ್ಣ
ಸದಾಶಿವಮೂರ್ತಿಲಿಂಗ	ಅರಿವಿನ ಮಾರಿತಂದೆ
ಸದ್ಗುರುಸಂಗ ನಿರಂಗಲಿಂಗ	ಕನ್ನಡಿಕಾಯಕದ ರೇಮಮ್ಮ
ಸದ್ಯೋಜಾತಲಿಂಗ	ಅವಸರದ ರೇಕಣ್ಣ
ಸಿದ್ಧಸೋಮನಾಥ	ಅಮುಗಿದೇವಯ್ಯ
ಸಿಮ್ಮಲಿಗೆಯ ಚೆನ್ನರಾಮ	ಚಂದಿಮರಸ
ಸುಂಕದೊಡೆಯ ಬಂಕೇಶ್ವರಲಿಂಗ	ಸುಂಕದ ಬಂಕಣ್ಣ
ಸೊಡ್ಡಳ	ಸೊಡ್ಡಳ ಬಾಚರಸ
ಸೌರಾಷ್ಟ್ರ ಸೋಮೇಶ್ವರ	ಆದಯ್ಯ
ಹಂಪೆಯ ವಿರುಪಯ್ಯ	ಅಗ್ಘವಣಿ ಹಂಪಯ್ಯ
ಹುಲಿಗೆರೆಯ ವರದ ಸೋಮನಾಥ	ಅಗ್ಘವಣಿ ಹೊನ್ನಯ್ಯ
ಆನಂದ ಸಿದ್ಧೇಶ್ವರ	-?
ಈಶ್ವರೀಯ ವರದ ಚೆನ್ನರಾಮ	-?
ಏಕಾಂತವೀರ ಸೊಡ್ಡಳ	-?
ಏಕೋರಾಮೇಶ್ವರಲಿಂಗ	-?
ಗುರುವರದ ವಿರೂಪಾಕ್ಷ	-?
ಜಂಗಮಲಿಂಗ ಪ್ರಭುವೆ	-?

ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ	-?
ನಂಜುಂಡ ಶಿವ	-?
ನಿಜಮುಕ್ತಿ ರಾಮೇಶ್ವರ	-?
ನಿರ್ಧನಪ್ರಿಯ ರಾಮೇಶ್ವರ	-?
ನಿಃಕಳಂಕ ಚೆನ್ನಸೋಮೇಶ್ವರ	-?
ಮರ್ಕಟೇಶ್ವರ	-?
ಮಹಾಲಿಂಗ ವೀರ ರಾಮೇಶ್ವರ	-?

❖❖

*

ವಚನಗಳ ಅಕಾರಾದಿ

ಆ

ಆ ಕರಿಯಾಕೃತಿಯ ಸೂಕರನ	ಬಸವಣ್ಣ	ಕೂಡಲಸಂಗಮದೇವ	೩೧
ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂ	ಬಸವಣ್ಣ	ಕೂಡಲಸಂಗಮದೇವ	೩೨
ಆಕಾಶಕ್ಕೆ ಬೈಗು ಬೆಳಗುಂಟೇನಯ್ಯ?	ಜಕ್ಕಣಯ್ಯ	ಝೇಂಕಾರ ನಿಜಲಿಂಗಪ್ರಭುವೆ	೨೨೭೯
ಆಕಾಶಕ್ಕೆ ಹಾರುವಂಗೆ ದೋಟಿಯ	ಅಮುಗೆ ರಾಯಮ್ಮ	ಅಮುಗೇಶ್ವರ	೧೨೬೫
ಆಕಾಶದಲ್ಲಾಡುವ ಪಟಕ್ಕಾದಡೆಯೂ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೬೮೮
ಆಕಾಶದಲ್ಲಿ ತೋರುವ ಮೋಡದ	ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೧೪೩೫
ಆಕಾಶದಲ್ಲಿಯ ಮೇಘದಂತೆ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೯೫೭
ಆಕಾಶದಲ್ಲಿ ಹಾರಿಹೋಹ ಪಕ್ಷಿಯ	ಗುಹೇಶ್ವರಯ್ಯ	ಗೊಹೇಶ್ವರಪ್ರಿಯ ನಿರಾಳಲಿಂಗ	೨೨೭೩
ಆಕಾಶವ ನೂಕುತ್ತಿಹಂಗೆ ಅಟ್ಟಗೋಲ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೩೭
ಆಕಾಶವ ಮೀರುವ ತರು ಗಿರಿಗಳುಂಟೆ?	ಅಲ್ಲಮಪ್ರಭುದೇವ	ಗುಹೇಶ್ವರ	೪೬೦
ಆಗಮವನರಿದಲ್ಲಿ ಆಗುಚೇಗೆಯ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೭೪
ಆಗಳು ಎನ್ನ ಮನ ಉದರಕ್ಕೆ ಹರಿವುದು	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೯೫೮
ಆಗಳೂ ಲೋಗರ ಮನೆಯ ಬಾಗಿಲ	ಬಸವಣ್ಣ	ಕೂಡಲಸಂಗಮದೇವ	೩೩
ಆಗಿಂಗೆ ಮುಯ್ಯಾನದಿರು ಚೇಗಿಂಗೆ	ನೀಲಮ್ಮ	ಸಂಗಯ್ಯ	೧೩೧೬
ಆಗಿಲ್ಲದ ಸಿರಿ, ಆಯುಷ್ಯವಿಲ್ಲದ	ಮಳುಬಾವಿಯ ಸೋಮಣ್ಣ	ಮಳುಬಾವಿಯ ಸೋಮ	೧೯೨೯
ಆಗುತಿವೆ, ಉದಯ ಮಧ್ಯಾಹ್ನ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೩೮
ಆಚಾರದ ಅರಿವು ಹೊರಗಾದ ಮೇಲೆ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೩೯
ಆಚಾರಲಿಂಗವಿಡಿದು ಅನುಭಾವ ಲಿಂಗ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೬೮೯
ಆಚಾರವುಳ್ಳಡೆ ಗುರು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೬೯೦
ಆಚಾರವೆ ಭಕ್ತಂಗೆ ಅಲಂಕಾರವು	ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ	೨೩೮೯
ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೬೯೧
ಆಚಾರಸಹಿತವಿದ್ದಡೆ ಗುರುವೆಂಬೆ	ಜೇಡರ ದಾಸಿಮಯ್ಯ	ರಾಮನಾಥ	೧೭೧೯
ಆಟದಲಿ ಕೆಲಹೊತ್ತುಗಳೆದು	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೪೦
ಆಡಿ ಅಳುಪದಿರಾ, ಲೇಸಮಾಡಿ	ಬಸವಣ್ಣ	ಕೂಡಲಸಂಗಮದೇವ	೩೪
ಆಡಿಂಗೆ ದಾಯಾದ್ಯರಾದಿರಲ್ಲಾ	ಅಲ್ಲಮಪ್ರಭುದೇವ	ಗುಹೇಶ್ವರ	೪೬೧
ಆಡಿ ದಣಿವರಿಯವಯ್ಯಾ ಎನ್ನ ಕಾಲು	ದೇಶಿಕೇಂದ್ರ ಸಂಗನಬಸವಯ್ಯ	ನಿರಂಜನ ಚನ್ನಬಸವಲಿಂಗ	೨೪೧೯
ಆಡಿದಡೇನು, ಹಾಡಿದಡೇನು	ಬಸವಣ್ಣ	ಕೂಡಲಸಂಗಮದೇವ	೩೫
ಆಡಿದೆನೈವರನೊಡಗೂಡಿ	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೮೩೨
ಆಡಿನ ಕೊರಳಲ್ಲಿ ಮೊಲೆಯಿದ್ದರೇನು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೬೯೨
ಆಡುತ್ತ ಹಾಡುತ್ತ ಭಕ್ತಿಯ	ಬಸವಣ್ಣ	ಕೂಡಲಸಂಗಮದೇವ	೩೬
ಆಡುವಡೆ ಸದಾಚಾರಿಗಳ ಕೂಡೆ	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೮೩೩
ಆಡುವುದಳವಟ್ಟಿತ್ತು, ಹಾಡು	ಬಸವಣ್ಣ	ಕೂಡಲಸಂಗಮದೇವ	೩೭

ಈ

ಉ

ಊ

ಎ

ಕಾಗೆಯ ನಾಯ ತಿಂದವರಿಲ್ಲ	ಪುಣ್ಯಸ್ತ್ರೀ ಮಸಣಮ್ಮ	ನಿಜಗುಣೇಶ್ವರಲಿಂಗ	೧೩೦೨
ಕಾಗೆಯ ಮರಿ ಕೋಗಿಲೆಯಾಗ	ಅಮುಗೆ ರಾಯಮ್ಮ	ಅಮುಗೇಶ್ವರ	೧೨೭೧
ಕಾಡಪತ್ರೆಯ ನಾಡಕೀಡೆ ತಿಂದಿರವೆ?	ಸಕಳೇಶ ಮಾದರಸ	ಸಕಳೇಶ್ವರದೇವ	೨೦೬೫
ಕಾಡಬೇಡ ಕಂಡವರ, ಬೇಡಬೇಡ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೪೪
ಕಾಡಸೊಪ್ಪ ನಾಡಮೇಕೆ ತಿಂದಿರದೆ?	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೪೨
ಕಾಡುಗಿಚ್ಚೆದ್ದಡೆ ಅಡವಿಯೆ ಗುರಿ	ಅಲ್ಲಮಪ್ರಭುದೇವ	ಗುಹೇಶ್ವರ	೪೯೯
ಕಾಡೊಳಗಣ ಹುಲುಗಿಣಿಯ	ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ	೨೩೯೬
ಕಾಣದ ಠಾವಿನಲಿ ಜರಿದರೆಂದಡೆ	ಬಸವಣ್ಣ	ಕೂಡಲಸಂಗಮದೇವ	೧೫೪
ಕಾಣಬಹುದು ಕೈಗೆ ಸಿಲುಕದು	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೯೮೮
ಕಾಣಬಹುದೆ ಪರುಷದ ಗಿರಿ	ಬಸವಣ್ಣ	ಕೂಡಲಸಂಗಮದೇವ	೧೫೫
ಕಾಣಿಗೆ ಹೋರಿ ಕಡವರವ	ಮೋಳಿಗೆ ಮಹಾದೇವಿ	ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ	೧೩೩೫
ಕಾಣೆಯ ಲೋಭ ಕೋಟಿಯ ಲಾಭವ	ಬಸವಣ್ಣ	ಕೂಡಲಸಂಗಮದೇವ	೧೫೬
ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೫೯
ಕಾದನಂತೆ, ಕಣನೇರಲೇಕೊ?	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೪೩
ಕಾದ ಲೋಹದ ಮೇಲೆ ನೀರನೆರೆದಡೆ	ಬಾಹೂರ ಬೊಮ್ಮಣ್ಣ	ಬ್ರಹ್ಮೇಶ್ವರಲಿಂಗ	೧೮೫೨
ಕಾದ ಹಾಲ ನೊಣ ಮುಟ್ಟಬಲ್ಲುದೆ?	ಅಮುಗೆ ರಾಯಮ್ಮ	ಅಮುಗೇಶ್ವರ	೧೨೭೨
ಕಾಮ ಕ್ರೋಧ ಲೋಭ ಮೋಹ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೨೫೩
ಕಾಮ ಸನ್ನಿಭನಾಗಿ ತಾ ಚೆಲುವನಾದಡೆ	ತೆಲುಗೇಶ ಮಸಣಯ್ಯ	ತೆಲುಗೇಶ್ವರ	೧೭೯೧
ಕಾಮಂಗೆ ಕೈತಲೆಗೊಟ್ಟ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೪೮೪
ಕಾಮದ ಸೀಮೆಯ ಕಳೆಯದನ್ನಕ್ಕ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೪೮೫
ಕಾಮದಲ್ಲಿ ಅಳಿದು, ಕ್ರೋಧದ	ಮೆರೆಮಿಂಡಯ್ಯ	ಐಘಟದೂರ ರಾಮೇಶ್ವರಲಿಂಗ	೧೯೪೫
ಕಾಮದಿಂದ ಕರಗಿದೆನಯ್ಯಾ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೧೭
ಕಾಮಧೇನು ಕಾಮಿಸಿದಲ್ಲದೆ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೪೮೬
ಕಾಮಧೇನು ಕಾಮಿಸಿದುದ ಕುಡದಿರ್ದಡೆ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೫೪
ಕಾಮನನು ನೋಡಿದ ಕಂಗಳಲ್ಲಿ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೯೮೯
ಕಾಮನೆಂಬ ಬಿಲ್ಲಾಳ	ಸಕಳೇಶ ಮಾದರಸ	ಸಕಳೇಶ್ವರದೇವ	೨೦೬೬
ಕಾಮವುಳ್ಳವರಿಗೆ ಕಾಯಸಂಗ ಮಚ್ಚು	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೬೦
ಕಾಮವೆಂಬುದೆ ಕಂಗಳ ಮುಂದೆ	ಶಿವಲೆಂಕ ಮಂಚಣ್ಣ	ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ	೨೦೩೫
ಕಾಮಾರಿಯ ಗೆಲಿದೆನು ಬಸವಾ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೬೧
ಕಾಮಿಗೆ ವ್ರತವುಂಟೆ, ನಿಃಕಾಮಿಗಲ್ಲದೆ?	ಅಕ್ಕಮ್ಮ	ರಾಮೇಶ್ವರಲಿಂಗ	೧೨೪೬
ಕಾಮಿಸಿದಲ್ಲದೆ ಕೊಡದು ಕಾಮಧೇನು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೪೪
ಕಾಯ ಕರ್ರನೆ ಕಂದಿದಡೇನಯ್ಯಾ?	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೬೨
ಕಾಯಗುಣದಲ್ಲಿದ್ದು	ಸಗರದ ಬೊಮ್ಮಣ್ಣ	ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ	೨೦೯೫
ಕಾಯ ತೊಟ್ಟಿನಲ್ಲಿ ನೀರ ಬಿಟ್ಟಡೆ	ಬಾಹೂರ ಬೊಮ್ಮಣ್ಣ	ಬ್ರಹ್ಮೇಶ್ವರಲಿಂಗ	೧೮೫೩

ಗಾಂಧರ್ವಕ್ಕೆ ರಾಗವ ಹೆಸರಿಟ್ಟಂತೆ	ಬೊಕ್ಕಸದ ಚಿಕ್ಕಣ್ಣ	ಬಸವಣ್ಣಪ್ರಿಯ ನಾಗರೇಶ್ವರಲಿಂಗ	೧೮೭೮
ಗಾಜಿನ ಗೋಡೆಯ ಸುಣ್ಣ ವೇಧಿಸ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೮೬
ಗಾಣದಲ್ಲಿ ಸಿಲುಕಿದ ಎಳ್ಳು	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೮೭
ಗಾತ್ರಗಳು ಸಕೀಲವಾಗದ ಮುನ್ನ ಪುದಿಸಿ	-?-	ತ್ರೈಲೋಚನ ಮನೋಹರ	
		ಮಾಣಿಕೇಶ್ವರಲಿಂಗ	೨೨೨೪
ಗಾರುಡವ ತಿಳಿದಡೆ ಹಾವಿನ ಸರಸವೆ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೮೮
ಗಾರುಡಿಗನ ವಿಷವಡರಬಲ್ಲುದೆ?	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೮೩೭
ಗಾಳಿ ಗಂಧವನಪ್ಪಿದಂತೆ, ಬಯಲು	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು	
		ಶಿವಸಿದ್ಧೇಶ್ವರಪ್ರಭುವೆ	೨೩೨೬
ಗಾಳಿ ಬೀಸುವಲ್ಲಿ ಕೇಳೆಲವೊ	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೬೯೦
ಗಾಳಿಯಲೆದ್ದ ಧೂಳು, ತೃಣ ಎಲೆ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೮೯
ಗಾಳಿ ಹಡೆದಲ್ಲಿ ತೂರಿಕೊಳ್ಳಯ್ಯಾ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೩೯೮
ಗಿಡು ಮರದ ಕುರುಬಿತಿಯ ಜವ್ವನ	ಗಜೇಶ ಮಸಣಯ್ಯ	ಮಹಾಲಿಂಗ ಗಜೇಶ್ವರ	೧೬೫೩
ಗಿಣಿಯಿಲ್ಲದ ಪಂಜರ ಹಲವು	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೩೯೯
ಗೀತವ ಬಲ್ಲಾತ ಜಾಣನಲ್ಲ	ಬಸವಣ್ಣ	ಕೂಡಲಸಂಗಮದೇವ	೧೮೬
ಗೀತವ ಹಾಡಿದಡೇನು	ಬಸವಣ್ಣ	ಕೂಡಲಸಂಗಮದೇವ	೧೮೭
ಗಿರಿಗಳೆಲ್ಲ ಕೂಡಿ ಮೇರುಗಿರಿಗೆ	ಜೇಡರ ದಾಸಿಮಯ್ಯ	ರಾಮನಾಥ	೧೭೪೨
ಗಿರಿಗಹ್ವರದೊಳಗರಸಿ ತೊಳಲಿ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೦೧
ಗಿರಿಯಲಲ್ಲದೆ ಹುಲ್ಲುಮೊರಡಿ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೭೭
ಗಿಳಿಯ ಹಂಜರವಿಕ್ಕಿ	ಬಸವಣ್ಣ	ಕೂಡಲಸಂಗಮದೇವ	೧೮೪
ಗಿಳಿಯೋದಿ ಫಲವೇನು?	ಬಸವಣ್ಣ	ಕೂಡಲಸಂಗಮದೇವ	೧೮೫
ಗುಬ್ಬಿ ಹೆರರ ಮನೆಯ ತನ್ನ ಮನೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೫೯
ಗುರು ಎನ್ನ ಮುಟ್ಟಿ	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೮೩೮
ಗುರು ಕರುಣವ ಹಡೆದುದಕ್ಕೆ	ತೆಲುಗೇಶ ಮಸಣಯ್ಯ	ತೆಲುಗೇಶ್ವರ	೧೭೯೨
ಗುರುಕರುಣವಿಲ್ಲದೆ	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಮದೇವ	೨೪೪೫
ಗುರು ಕರುಣಿಸೆ ಬಿಟ್ಟಿತ್ತು ಮಾಯೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೬೦
ಗುರುನಿಷ್ಠೆ ಲಿಂಗನಿಷ್ಠೆ ಜಂಗಮನಿಷ್ಠೆ	ಬಾಹೂರ ಬೊಮ್ಮಣ್ಣ	ಬ್ರಹ್ಮೇಶ್ವರಲಿಂಗ	೧೮೫೬
ಗುರುಪ್ರಸಾದಕ್ಕೆ ಹೇಸುವರು	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು	
		ಶಿವಸಿದ್ಧೇಶ್ವರಪ್ರಭುವೆ	೨೩೨೭
ಗುರುಪ್ರಸಾದವ ಕೊಂಬರೆ, ನಾಚುವುದು	ಸಕಳೇಶ ಮಾದರಸ	ಸಕಳೇಶ್ವರದೇವ	೨೦೭೦
ಗುರುಪಾದತೀರ್ಥವೆ ಮಂಗಳ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೧೭೮
ಗುರು ಲಿಂಗ ಒಂದೆಂಬರು	ಜೇಡರ ದಾಸಿಮಯ್ಯ	ರಾಮನಾಥ	೧೭೪೩
ಗುರುವ ಕಂಡಲ್ಲಿ ನಿನ್ನನೇ ಕಾಬೆ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೫೫
ಗುರುವನರಿದಲ್ಲಿ ಉತ್ಪತ್ಯಕ್ಕೆ	ನುಲಿಯ ಚಂದಯ್ಯ	ಚಂದೇಶ್ವರಲಿಂಗ	೧೮೧೯
ಗುರುವನರಿವನ್ನಕ್ಕರ ಅಷ್ಟಾದಶ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೫೬
ಗುರುವನು ಮಹಾದೇವನನು	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು	
		ಶಿವಸಿದ್ಧೇಶ್ವರಪ್ರಭುವೆ	೨೩೨೮
ಗುರುವಾದಡೂ ಆಚಾರಭ್ರಷ್ಟನಾದಡೆ	ಅಕ್ಕಮ್ಮ	ರಾಮೇಶ್ವರಲಿಂಗ	೧೨೪೮
ಗುರುವಾದಡೂ ಕಾಯಕದಿಂದವೆ	ನುಲಿಯ ಚಂದಯ್ಯ	ಚಂದೇಶ್ವರಲಿಂಗ	೧೮೨೦

ಚ –ಛ

ಜ - ಟ

ಜಲದೊಳಗೆ ಮತ್ಸ್ಯ ಜಲವ ತನ್ನ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೦೯
ಜಲದೊಳಗೆ ಹುಟ್ಟಿದ ಬುದ್ಬುದ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೧೦
ಜಲನಿಧಿ ತಟಾಕದಲ್ಲಿ ಕನ್ನವನಿಕ್ಕಿ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೭೫
ಜಲ ಮಲಿನ[ವಪ್ಪು]ವ ತೊಳೆವಂತೆ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೦
ಜಲವಿಲ್ಲದ ಕೆರೆ, ಫಲವಿಲ್ಲದ ಬನ	ಅಲ್ಲಮಪ್ರಭುದೇವ	ಗುಹೇಶ್ವರ	೫೨೬
ಜ್ವರ ಬಡಿದ ಬಾಯಿಗೆ ನೊರೆವಾಲು	ಜೇಡರ ದಾಸಿಮಯ್ಯ	ರಾಮನಾಥ	೧೭೪೭
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ	ಬಸವಣ್ಣ	ಕೂಡಲಸಂಗಮದೇವ	೨೦೪
ಜಾಣನಯ್ಯಾ ಸದ್ಗುರುವ ನಂಬುವಲ್ಲಿ	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೬೯೨
ಜಾತವೇದಸ್ಸಿನಲ್ಲಿ ಶೋಧಿಸಿ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೧
ಜಾತಿ ವಿಜಾತಿಯು ನೀರ್ಗುಡಿಯ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೧೧
ಜಾತಿವಿಡಿದು ಜಂಗಮವ ಮಾಡಬೇಕೆಂಬ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೭೬
ಜಾತಿವಿಡಿದು ಸೂತಕವನರಸುವೆ	ಬಸವಣ್ಣ	ಕೂಡಲಸಂಗಮದೇವ	೨೦೫
ಜಾತಿ ಸೂತಕ ಬಿಡದು, ಜನನ ಸೂತಕ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೭೭
ಜೀವನ ಕಡಿದವಂಗಿಲ್ಲದ ಪಾಪ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೯೩
ಜೀವವುಳ್ಳನ್ನಕ್ಕರ ಕ್ರೋಧದ ಮೂಲ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೧೨
ಜೀವವೆಂಬ ಶಿವಾಲಯ	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಯ್ಯ	೨೪೪೬
ಜೇನುತುಪ್ಪದೊಳು ಬಿದ್ದ ನೊಣ	ಕುಷ್ಟಗಿ ಕರಿಬಸವೇಶ್ವರ	ಘನಲಿಂಗಗುರು ಚನ್ನಬಸವೇಶ್ವರ ಸಾಕ್ಷಿಯಾಗಿ	೨೨೬೧
ಜೇನುತುಪ್ಪದಲ್ಲಿ ಬಿದ್ದು ಸಾವ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೩೩
ಜೋಳವಾಳಿಯಾನಲ್ಲ	ಬಸವಣ್ಣ	ಕೂಡಲಸಂಗಮದೇವ	೨೦೬
ಜ್ಞಾನದ ಬಲದಿಂದ ಅಜ್ಞಾನದ	ಬಸವಣ್ಣ	ಕೂಡಲಸಂಗಮದೇವ	೨೦೭
ಜ್ಞಾನದಲರಿದಡೇನಯ್ಯ, ಕ್ರೀಯ	ಅಮುಗಿದೇವಯ್ಯ	ಸಿದ್ಧಸೋಮನಾಥ	೧೪೧೮
ಜ್ಞಾನ ಬಾ, ಮಾಯೆ ಹೋಗೆಂದು	ಉಗ್ಘಡಿಸುವ ಗಬ್ಬಿದೇವಯ್ಯ	ಕೂಡಲಸಂಗಮದೇವರಲ್ಲಿ ಬಸವಣ್ಣ	೧೫೨೮
ಜ್ಞಾನವೆಂಬುದು ಬೀದಿಯ ಪಸರವೆ?	ಅಮುಗೆ ರಾಯಮ್ಮ	ಅಮುಗೇಶ್ವರ	೧೨೭೬
ಜ್ಞಾನಾಮೃತಜಲನಿಧಿಯ ಮೇಲೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೭೭೮
ಜ್ಞಾನಿಗಳು ತಾವಾದ ಬಳಿಕ ಮುಕುರದ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೧೩
ಜ್ಞಾನಿಯ ನಡೆ ನುಡಿ ಅಜ್ಞಾನಿಗೆ	ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ	೨೪೦೦
ಜ್ಯೋತಿ ಕಂಡಾ, ಇರಲು ಕತ್ತಲೆ ಕಂಡಾ!	ಅಲ್ಲಮಪ್ರಭುದೇವ	ಗುಹೇಶ್ವರ	೫೨೭
ಜ್ಯೋತಿ ಕರ್ಪುರದ ಸಂಗ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೨
ಜ್ಯೋತಿಯ ತಮ ಎಡೆಗೊಂಡಂತೆ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೩೪
ಜ್ಯೋತಿಯಿದ್ದ ಮನೆಯಲ್ಲಿ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೩೫
ಜ್ಯೋತಿ ಸೋಂಕಿದ ಬತ್ತಿಯೆಲ್ಲ	ಸಕಳೇಶ ಮಾದರಸ	ಸಕಳೇಶ್ವರದೇವ	೨೦೭೩
ಟಿಕ್ಕೆಯೊಳಗೆ ಮಾಣಿಕ್ಯವುಂಟೆ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೪೯೪

ತ

ದ

ನ

ಪರರ ಕಾಡಿ ಬೇಡಿ ಮಾಡೆಹೆನೆಂಬ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೯೮
ಪರರಾಣಿಯರ ನೋಡುವಲ್ಲಿ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೧
ಪರಲೋಕದಲ್ಲಿ ಲಾಭವನರಸುವರು	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೬
ಪರವಧುವ ನೆರೆಯದೆ, ಪರಧನವ	ಚೇಡರ ದಾಸಿಮಯ್ಯ	ರಾಮನಾಥ	೧೭೫೭
ಪರಸ್ತ್ರೀ ಪರಾರ್ಥ ಪರಾನ್ನಕ್ಕೆ ಸುಳಿವ	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಮದೇವ	೨೪೫೦
ಪರಸ್ತ್ರೀಯರ ನೋಡುವ ಕಣ್ಣಲ್ಲಿ	ಮಡಿವಾಳ ಮಾಚಿದೇವ	ಕಲಿದೇವಯ್ಯ	೧೮೯೨
ಪರಸ್ತ್ರೀಯರ ರೂಪ ಕಾಯದ ಕಣ್ಣೆನಲ್ಲಿ	ಹಾವಿನಹಾಳ ಕಲ್ಲಯ್ಯ	ಮಹಾಲಿಂಗ ಕಲ್ಲೇಶ್ವರ	೨೨೦೨
ಪರಿಣಾಮದೊಳಗೆ ಮನದ ಪರಿಣಾಮ	ಅಲ್ಲಮಪ್ರಭುದೇವ	ಗುಹೇಶ್ವರ	೫೫೭
ಪರುಷದ ಅರಸಿಂಗೆ ಕಬ್ಬುನದ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೩೦
ಪರುಷದ ಗೃಹದೊಳಗಿದ್ದು	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೭
ಪರುಷದ ಪರ್ವತದಲ್ಲಿ ಕಬ್ಬುನ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೩೧
ಪರುಷದ ಪುತ್ಥಳಿಗೆ ಕಬ್ಬುನದ	ಅಲ್ಲಮಪ್ರಭುದೇವ	ಗುಹೇಶ್ವರ	೫೫೮
ಪರುಷದ ಪುತ್ಥಳಿಯ ಇರವಿನಂತೆ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೧೯೯೯
ಪರುಷ ಮುಟ್ಟಿದ ಕಬ್ಬುನ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೨
ಪರುಷ ಮುಟ್ಟಲು ಕಬ್ಬುನ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೩೨
ಪರುಷಲಿಂಗವ ಕೈಯಲ್ಲಿ ಹಿಡಿದು	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೩
ಪರುಷವು ಪಾಷಾಣದಂತೆ ಇಪ್ಪುದು	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೮
ಪರುಷ ಸೋಂಕಲು	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೪೧
ಪರುಷ ಸೋಂಕಿದ ಬಳಿಕ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೪
ಪರುಷ ಸೋಂಕಿಯೂ ಪಾಷಾಣ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೪೨
ಪಶುಗಳಿಗೆಲ್ಲ ಪೃಷ್ಠದಲ್ಲಿ ಬಾಲವಿದ್ದಡೆ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೫
ಪಸರ ಪಸರ ತಪ್ಪದಿಹ ಗಾಜುಗಳೆಲ್ಲ	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಮದೇವ	೨೪೫೧
ಪಾಕವಾದನ್ನವನುಣ್ಣದೆ ಪಾಕವ	ಕಾಡಸಿದ್ಧೇಶ್ವರ	ಶಂಕರಪ್ರಿಯ ಚನ್ನ ಕದಂಬಲಿಂಗ ನಿರ್ಮಾಯಪ್ರಭುವೆ	೨೨೪೮
ಪಾತಾಳದಗ್ಘವಣೆಯ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೩೩
ಪಾತಾಳದ ನೀರ ಹುರಿ ಸಂಚದಿಂದ	ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೧೪೫೩
ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ	ಬಸವಣ್ಣ	ಕೂಡಲಸಂಗಮದೇವ	೨೬೯
ಪಾರ್ವತಿಯ ರೂಪ ಕಂಡು ಪರಶಿವನ	ನೀಲಮ್ಮ	ಸಂಗಯ್ಯ	೧೩೧೮
ಪಾಷಾಣವ ಹಿಡಿದು ಮಾರಿಯ	ಆನಂದಯ್ಯ	ಆನಂದಸಿಂಧು ರಾಮೇಶ್ವರ	೧೫೧೮
ಪುಣ್ಯ ಪಾಪಂಗಳೆಂಬವು ತಮ್ಮ ಇಷ್ಟ	ಬಸವಣ್ಣ	ಕೂಡಲಸಂಗಮದೇವ	೨೭೦
ಪುಣ್ಯವ ಮಾಡಬೇಕೆಂದು ಮರುಗ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೪೬
ಪುಣ್ಯಾಂಗನೆಯ ಸುತಂಗೆ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೬೯
ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೭೦
ಪುರಜನಂಗಳ ಮಚ್ಚಿಸುವಾಗ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೪೪೩
ಪುರಾಕೃತಪುಣ್ಯಫಲದ ಪರಿಯ ನೋಡಿರೆ!	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೭೧
ಪುರಾತರ ಗೀತವನೋದಿ ಪುರಾತರ	ಕುಷ್ಟಗಿ ಕರಿಬಸವೇಶ್ವರ	ಘನಲಿಂಗಗುರು ಚನ್ನಬಸವೇಶ್ವರ ಸಾಕ್ಷಿಯಾಗಿ	೨೨೬೩

ಬ

ಬೆಟ್ಟಕ್ಕೆ ಸಾರವಿಲ್ಲೆಂಬರು	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೦೮
ಬೆಟ್ಟದ ಕಲ್ಲು ಸೋರೆಯ ಕೂಡೆ	ಬಸವಣ್ಣ	ಕೂಡಲಸಂಗಮದೇವ	೨೮೫
ಬೆಟ್ಟದ ನೆಲ್ಲಿಯಕಾಯ ಪಟ್ಟಣಕ್ಕೆ	ಅಮುಗೆ ರಾಯಮ್ಮ	ಅಮುಗೇಶ್ವರ	೧೨೮೧
ಬೆಟ್ಟದ ಮೇಲೊಂದು ಮನೆಯ ಮಾಡಿ	ಅಕ್ಕ ಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೦೯
ಬೆಟ್ಟದ ಲಿಂಗವ ಹಿರಿದುಮಾಡಿ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೪೦೭
ಬೆಣ್ಣೆಯ ಕಂದಲ ಕರಗಲಿಟ್ಟಡೆ	ಅಲ್ಲಮಪ್ರಭುದೇವ	ಗುಹೇಶ್ವರ	೫೭೧
ಬೆದರಿಸುವ ಸಂಗ	ಬಸವಣ್ಣ	ಕೂಡಲಸಂಗಮದೇವ	೨೮೬
ಬೆಬ್ಬನೆ ಮಡಕೆಯಂತೆ	ಸಕಳೇಶ ಮಾದರಸ	ಸಕಳೇಶ್ವರದೇವ	೨೦೮೧
ಬೆಲ್ಲಕ್ಕೆ ಚದುರಸವಲ್ಲದೆ ಸಿಹಿಗೆ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೪೦೮
ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು	ಅಲ್ಲಮಪ್ರಭುದೇವ	ಗುಹೇಶ್ವರ	೫೭೨
ಬೆಲ್ಲವ ತಿಂದ ಕೋಡಗದಂತೆ ಸಿಹಿಯ	ಬಸವಣ್ಣ	ಕೂಡಲಸಂಗಮದೇವ	೨೮೭
ಬೆವಸಾಯವ ಮಾಡಿ	ಅಲ್ಲಮಪ್ರಭುದೇವ	ಗುಹೇಶ್ವರ	೫೭೩
ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೫೨
ಬೆಳೆಯ ಭೂಮಿಯಲೊಂದು ಪ್ರಳಯದ	ಬಸವಣ್ಣ	ಕೂಡಲಸಂಗಮದೇವ	೨೮೮
ಬೇಕೆಂಬುದು ಕಾಯಗುಣ, ಬೇಡ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೪
ಬೇಕೆನಲಾಗದು ಶರಣಂಗೆ, ಬೇಡೆನ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೩
ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು?	ಕಲಕೇತಯ್ಯ	ಮೇಖಲೇಶ್ವರಲಿಂಗ	೧೬೨೦
ಬೇಡಿ ತಂದು ದಾಸೋಹವ	ಆಯ್ದಕ್ಕಿ ಮಾರಯ್ಯ	ಅಮರೇಶ್ವರಲಿಂಗ	೧೫೨೫
ಬೇಡುವಾತ ಕರ್ತನಲ್ಲ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೫
ಬೇಡುವಾತ ಜಂಗಮನಲ್ಲ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೬
ಬೇರೂರಲಿದ್ದು ಬಂದ ಜಂಗಮವೆ	ಬಸವಣ್ಣ	ಕೂಡಲಸಂಗಮದೇವ	೨೮೯
ಬೇವಿನ ಬೀಜವ ಬಿತ್ತಿ, ಬೆಲ್ಲದ	ಬಸವಣ್ಣ	ಕೂಡಲಸಂಗಮದೇವ	೨೯೦
ಬೇವಿನ ಮರದಲ್ಲಿ ಕುಳಿತು	ಅವಸರದ ರೇಕಣ್ಣ	ಸದ್ಯೋಜಾತಲಿಂಗ	೧೪೬೭
ಬೋಧೆಯ ಹೇಳಿ ಉಂಬವಂಗೆ	ಮೆರೆಮಿಂಡಯ್ಯ	ಐಘುಟದೂರ ರಾಮೇಶ್ವರಲಿಂಗ	೧೯೫೭
ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಲ್ಲಿ	ಡಕ್ಕೆಯ ಬೊಮ್ಮಣ್ಣ	ಕಾಲಾಂತಕ ಭೀಮೇಶ್ವರಲಿಂಗ	೧೭೮೨
ಬ್ರಹ್ಮಕ್ಕೆ ಬಾಯಿ ತೆರೆದು ಮಾತನಾಡಿ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೪೦೯
ಬ್ರಹ್ಮ ಘನವೆಂದಡೆ ಬ್ರಹ್ಮನ	ಅಲ್ಲಮಪ್ರಭುದೇವ	ಗುಹೇಶ್ವರ	೫೭೪
ಬ್ರಹ್ಮದ ಮಾತನಾಡಿ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೪೧೦
ಬ್ರಹ್ಮ ದೇವರಲ್ಲ, ವಿಷ್ಣು ದೇವರಲ್ಲ	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಮದೇವ	೨೪೫೩
ಬ್ರಹ್ಮಪದವಿಯನೊಲ್ಲೆ	ಬಸವಣ್ಣ	ಕೂಡಲಸಂಗಮದೇವ	೨೯೧
ಬ್ರಹ್ಮಲೋಕ ತಾನಿರ್ದಲ್ಲಿ,	ಬಾಲಸಂಗಯ್ಯ	ಅಪ್ರಮಾಣ ಕೂಡಲಸಂಗಮದೇವ	೨೪೫೨
ಬ್ರಹ್ಮವನರಿತ ಮತ್ತೆ ಸುಮ್ಮನೆ ಇರಬೇಕು	ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೧೪೫೫
ಬ್ರಹ್ಮ ವಿಷ್ಣು ಮೊದಲಾದ ದೇವದಾನವ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೭೩
ಬ್ರಾಹ್ಮಣದೇಹಿಕನಲ್ಲ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೭
ಬ್ರಾಹ್ಮಣ ಭಕ್ತನಾದರೇನಯ್ಯಾ?	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೪೮
ಬ್ರಾಹ್ಮಣ ಮೊದಲಾಗಿ ಶ್ವಪಚ	ಹಾವಿನಹಾಳ ಕಲ್ಲಯ್ಯ	ಮಹಾಲಿಂಗ ಕಲ್ಲೇಶ್ವರ	೨೨೦೭

ಭ

ಭಕ್ತಂಗೆ ಬಡತನವುಂಟೆ? ನಿತ್ಯಂಗೆ	ಆಯ್ದಕ್ಕಿ ಲಕ್ಕಮ್ಮ	ಮಾರಯ್ಯ ಪ್ರಿಯ ಅಮರೇಶ್ವರಲಿಂಗ	೧೨೯೫
ಭಕ್ತಂಗೆ ಬಯಕೆ ಉಂಟೆ? ನಿತ್ಯಂಗೆ	ಅಕ್ಕಮ್ಮ	ರಾಮೇಶ್ವರಲಿಂಗ	೧೨೫೬

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ?	ಬಸವಣ್ಣ	ಕೂಡಲಸಂಗಮದೇವ	೩೦೫
ಭೂಮಿ ಘನವೆಂಬೆನೆ	ಘಟ್ಟಿವಾಳಯ್ಯ	ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು	೧೬೭೯
ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ	ಅಲ್ಲಮಪ್ರಭುದೇವ	ಗುಹೇಶ್ವರ	೫೭೭
ಭೂಮಿಯೊಳಗೆ ನಿಧಾನವಿದ್ದುದ	ಬಸವಣ್ಣ	ಕೂಡಲಸಂಗಮದೇವ	೩೦೬
ಭೂಮಿಯೊಳಗೆ ಬೀಜ ಬಿದ್ದಲ್ಲಿ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೬೦
ಭೂಮಿಯಲ್ಲಿ ಪೂಜಿಸಿಕೊಂಬ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೨೦೦೮
ಭೂಮಿಯಲ್ಲಿ ಹುಟ್ಟಿ ಅಂತರದಲ್ಲಿ	ಅಲ್ಲಮಪ್ರಭುದೇವ	ಗುಹೇಶ್ವರ	೫೭೮
ಭೂಲೋಕದಲ್ಲಿ ಕುಳ್ಳಿರ್ದು ಆಕಾಶದ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೪೭
ಭೂಷಣವುಳ್ಳ ಜಂಗಮವ ಭೂಪಾಲ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೫೯
ಭೇರುಂಡನ ಪಕ್ಷಿಗೆ ದೇಹ ಒಂದೆ	ಬಸವಣ್ಣ	ಕೂಡಲಸಂಗಮದೇವ	೩೦೭
ಭೈರವನನಾರಾಧಿಸಿ ಬಾಹಿರವೋದರಯ್ಯಾ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೬೧
ಭ್ರಮರ ಸೋಂಕಿದ ಕೀಟ ಭ್ರಮರನಾಗದೆ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೦೫

ಮ

ಮಂಜರಿ[ಯು] ನುಂಗಿದ ಚೂಡ	ದಾಸೋಹದ ಸಂಗಣ್ಣ	ಮಾತುಳಂಗ ಮಧುಕೇಶ್ವರ	೧೭೯೮
ಮಂಡೆ ಬೋಳಾಗಿ ತುಂಡುಗಂಬಳಿ	ಅಮುಗೆ ರಾಯಮ್ಮ	ಅಮುಗೇಶ್ವರ	೧೨೮೨
ಮಂಡೆ ಮಾಸಿದಡೆ ಮಹಾಮಜ್ಜನವ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೬೨
ಮಂಡೆಯ ಬೋಳಿಸಿಕೊಂಡು	ಬಸವಣ್ಣ	ಕೂಡಲಸಂಗಮದೇವ	೩೦೮
ಮರ್ಕಟ ದರ್ಪಣವ ಹಿಡಿದು ನೋಡಿ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೦೬
ಮಜ್ಜನಕ್ಕೆರೆದು ಫಲವ ಬೇಡುವ	ಅಲ್ಲಮಪ್ರಭುದೇವ	ಗುಹೇಶ್ವರ	೫೮೦
ಮಜ್ಜನಕ್ಕೆರೆಯ ಹೇಳಿದಡೆ ನಾನೇನ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೬೧
ಮಜ್ಜನಕ್ಕೆರೆವಡೆ	ಅಲ್ಲಮಪ್ರಭುದೇವ	ಗುಹೇಶ್ವರ	೫೮೧
ಮಠದಲ್ಲಿ ತೋರುವ ಜ್ಯೋತಿ ಅಂಗ	ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೧೪೫೬
ಮಠವೇಕೋ ಪರ್ವತವೇಕೋ	ಅಲ್ಲಮಪ್ರಭುದೇವ	ಗುಹೇಶ್ವರ	೫೮೨
ಮಂತ್ರವ ಕಲಿತಡೇನು?	ಅಲ್ಲಮಪ್ರಭುದೇವ	ಗುಹೇಶ್ವರ	೫೭೯
ಮಂತ್ರವ ಜಪಿಸಿ ಫಲವೇನಯ್ಯಾ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೦೬೦
ಮಡಕೆ ದೈವ, ಮೊರ ದೈವ	ಬಸವಣ್ಣ	ಕೂಡಲಸಂಗಮದೇವ	೩೦೯
ಮಡಕೆಯ ಮಾಡುವಡೆ ಮಣ್ಣೆ	ಬಸವಣ್ಣ	ಕೂಡಲಸಂಗಮದೇವ	೩೧೦
ಮಡದಿಯ ಪ್ರಾಣಕ್ಕೆ ಮೊಲೆ ಮುಡಿ	ಜೇಡರ ದಾಸಿಮಯ್ಯ	ರಾಮನಾಥ	೧೭೬೦
ಮಡಿಕೆ ಮಣ್ಣಾಗಲರಿಯದು	ದೇಶಿಕೇಂದ್ರ ಸಂಗನಬಸವಯ್ಯ	ನಿರಂಜನ ಚನ್ನಬಸವಲಿಂಗ	೨೪೩೦
ಮಡಿಲಲ್ಲಿ ಸುತ್ತಿದ ಹಾವಿನಂತೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೮೬೩
ಮಡುವಿನಗ್ಗಣಿ, ಗಿಡದ ಹೂವು	ಷಣ್ಮುಖಸ್ವಾಮಿ	ಅಖಂಡೇಶ್ವರ	೨೪೮೩
ಮಡುವಿನಲ್ಲಿ ಮೊಗೆತಹೆನೆ? ಅಗ್ಗವಣಿ	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	೧೪೧೨
ಮಣಿಗಣ ಸೂತ್ರದಂತೆ ತ್ರಿಣೆಯ	ಜೇಡರ ದಾಸಿಮಯ್ಯ	ರಾಮನಾಥ	೧೭೬೧
ಮಣಿಯನೆಣಿಸಿ ಕಾಲವ ಕಳೆಯಬೇಡ	ಅಲ್ಲಮಪ್ರಭುದೇವ	ಗುಹೇಶ್ವರ	೫೮೩
ಮಣ್ಣ ಬೆಲ್ಲವಮಾಡಿ, ಮಗುವಿನ	ಉರಿಲಿಂಗಪೆದ್ದಿ	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	೧೫೭೪

ಯ

ರ

ಲ

ಶ – ಷ

ಸ

ಸಂಸಾರವೆಂಬ ಸಾಗರವ ದಾಂಟುವಡೆ	ಮರುಳಶಂಕರದೇವ	ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಮಲ್ಲಿಕಾರ್ಜುನ	೧೯೨೬
ಸಂಸಾರವೆಂಬ ಹಗೆಯಯ್ಯಾ ಎನ್ನ ತಂದೆ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೨೮
ಸಂಸಾರವೆಂಬ ಹೆಣ ಬಿದ್ದಿದ್ದಡೆ	ಅಲ್ಲಮಪ್ರಭುದೇವ	ಗುಹೇಶ್ವರ	೬೧೬
ಸಂಸಾರವೆಂಬ ಹೇರಡವಿಯ	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೭೦೮
ಸಂಸಾರವೆಂಬುದೊಂದು ಗಾಳಿಯ	ಬಸವಣ್ಣ	ಕೂಡಲಸಂಗಮದೇವ	೩೭೪
ಸಂಸಾರಸಾಗರದ ತೆರೆ ಕೊಬ್ಬಿ	ಬಸವಣ್ಣ	ಕೂಡಲಸಂಗಮದೇವ	೩೭೫
ಸಂಸಾರ ಸಂಸಾರ, ಕಾಳಗತ್ತಲೆ	ಸೊಡ್ಡಳ ಬಾಚರಸ	ಸೊಡ್ಡಳ	೨೧೨೮
ಸಕ್ಕರೆಯ ಕೊಡನ ತುಂಬಿ ಹೊರಗೆ	ಬಸವಣ್ಣ	ಕೂಡಲಸಂಗಮದೇವ	೩೭೬
ಸಕ್ಕರೆಯ ಬಿಟ್ಟು ರುಚಿಯ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೩
ಸಕಲ ಸಂಸಾರದ ಆಸುರತೆಯನರಿದು	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೭೦೭
ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ	ಬಸವಣ್ಣ	ಕೂಡಲಸಂಗಮದೇವ	೩೭೭
ಸಚರಾಚರವೆಲ್ಲಕ್ಕೆ ಆಸೆಯೆ ಪ್ರಾಣ	ನಿವೃತ್ತಿ ಸಂಗಯ್ಯ	ನಿವೃತ್ತಿ ಸಂಗಯ್ಯ	೧೮೧೫
ಸಜ್ಜನ ಸದ್ಭಾವಿ ಅನ್ಯರಲ್ಲಿ ಕೈಯ್ಯಾಂತು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೧೭
ಸಟ್ಟುಗ ಸವಿಯಬಲ್ಲುದೆ?	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೬೭
ಸತಿಪತಿಗಳೊಂದಾದ ಭಕ್ತಿ ಹಿತ	ಜೇಡರ ದಾಸಿಮಯ್ಯ	ರಾಮನಾಥ	೧೭೭೧
ಸತಿ ಭಕ್ತೆಯಾದಡೆ ಹೊಲೆಗಂಜಲಾಗದು	ಅಲ್ಲಮಪ್ರಭುದೇವ	ಗುಹೇಶ್ವರ	೬೧೭
ಸತಿಪುರುಷರಿಬ್ಬರೂ ಪ್ರತಿದೃಷ್ಟಿಯಾಗಿ	ಬಸವಣ್ಣ	ಕೂಡಲಸಂಗಮದೇವ	೩೭೮
ಸತಿಯ ಕಂಡು ಬ್ರತಿಯಾದ ಬಸವಣ್ಣ	ಅಲ್ಲಮಪ್ರಭುದೇವ	ಗುಹೇಶ್ವರ	೬೧೮
ಸತಿಯ ಕೈಯಲ್ಲಿ ಕೊಟ್ಟುದು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೧೮
ಸತಿಯ ಗುಣವ ಪತಿ ನೋಡಬೇಕಲ್ಲದೆ	ಡಕ್ಕೆಯ ಬೊಮ್ಮಣ್ಣ	ಕಾಲಾಂತಕ ಭೀಮೇಶ್ವರಲಿಂಗ	೧೭೮೫
ಸತಿಯ ನೋಡಿ ಸಂತೋಷವ ಮಾಡಿ	ಮಡಿವಾಳ ಮಾಚಿದೇವನ ಸಮಯಾಚಾರದ ಮಲ್ಲಿಕಾರ್ಜುನ	ಪರಮಗುರು ಪಂಚಾಕ್ಷರ ಮೂರ್ತಿ ಶಾಂತಮಲ್ಲಿಕಾರ್ಜುನ	೧೯೦೨
ಸತಿಯರ ನೋಡಿ ಸಂತೋಷವ ಮಾಡಿ	ಕರಸ್ಥಲ ಮಲ್ಲಿಕಾರ್ಜುನ	ಪರಮಗುರು ಶಾಂತಮಲ್ಲಿಕಾರ್ಜುನ	೨೨೩೭
ಸತಿಯ ಸಂಗವತಿಸುಖವೆಂದರಿದಡೇನು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೧೯
ಸತಿಯರ ಸಂಗವನು ಅತಿಶಯ ಗ್ರಾಸ	ಜೇಡರ ದಾಸಿಮಯ್ಯ	ರಾಮನಾಥ	೧೭೭೨
ಸತಿ ಸುತ ಮಾತಾಪಿತರಿಗೆಂದು ಪಡೆದಡೆ	ದಶಗಣ ಸಿಂಗಿದೇವಯ್ಯ	ನಾಚಯ್ಯಪ್ರಿಯ ಮಲ್ಲಿನಾಥ	೧೭೯೩
ಸತಿಸುತ ಮಾತಾಪಿತರಂದದಿ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೬೫
ಸತ್ತ ಶವ ಕಿಚ್ಚ ಬಲ್ಲುದೆ?	ಘಟ್ಟಿವಾಳಯ್ಯ	ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು	೧೬೮೧
ಸತ್ತು ಹುಟ್ಟಿ ಕೆಟ್ಟವರೆಲ್ಲರು	ಅಲ್ಲಮಪ್ರಭುದೇವ	ಗುಹೇಶ್ವರ	೬೧೯
ಸತ್ಯಸದಾಚಾರ ಭಕ್ತಿಯನರಿಯದೆ	ಮಡಿವಾಳ ಮಾಚಿದೇವ	ಕಲಿದೇವಯ್ಯ	೧೮೯೭
ಸತ್ಯವ ನುಡಿದೆವೆಂದೆಂಬಿರಿ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೭
ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೨೦
ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ	ಅಲ್ಲಮಪ್ರಭುದೇವ	ಗುಹೇಶ್ವರ	೬೨೦
ಸತ್ಯವುಳ್ಳವರಿಗೆ ನಿತ್ಯನೇಮದ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೨೧
ಸತ್ಯಶುದ್ಧ ಕಾಯಕದಿಂದ ಬಂದ	ನುಲಿಯ ಚಂದಯ್ಯ	ಚಂದೇಶ್ವರಲಿಂಗ	೧೮೨೪

ಸಾವಿರ ಹೊನ್ನಿಂಗೆ ಸಾದಕೊಂಡು	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೨೯
ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೩೦
ಸಾವು ತಡವಲ್ಲ, ನರಕ	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೭೧೦
ಸಾಸಿರ ನೋಂಪಿಯ ನೋ[ಂ]ತು	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೨೦೧೮
ಸಿಂಬಿಗೆ ರಂಭೆತನವುಂಟೆ?	ಮರುಳಶಂಕರದೇವ ಶಾಂತಮಲ್ಲಿಕಾರ್ಜುನ	ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ	೧೯೨೭
ಸಿಂಹ ಮದಕರಿಯ ಮೇಲೆ ಹಾರು	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೬
ಸಿಂಹದ ಮುಂದೆ ಜಿಂಕೆಯ ಜಿಗಿದಾಟವೆ?	ಮಡಿವಾಳ ಮಾಚಿದೇವ	ಕಲಿದೇವಯ್ಯ	೧೮೯೮
ಸಿಂಹದ ಮೊಲೆವಾಲು ಸಿಂಹದ	ಷಣ್ಮುಖಸ್ವಾಮಿ	ಅಖಂಡೇಶ್ವರ	೨೪೮೬
ಸಿಂಹನ ಹಾಲು ಆನೆಯ ಮರಿ	ದೇಶಿಕೇಂದ್ರ ಸಂಗನಬಸವಯ್ಯ	ನಿರಂಜನ ಚನ್ನಬಸವಲಿಂಗ	೨೪೩೨
ಸಿಡಿಲುಹೊಯ್ದ ಬಾವಿಗೆ ಸೋಪಾನವುಂಟೆ?	ಮುಕ್ತಾಯಕ್ಕ	ಅಜಗಣ್ಣ	೧೩೩೦
ಸಿಡಿಲುಹೊಯ್ದ ಬಾವಿಗೆ ಸೋಪಾನವೇಕೊ?	ಮುಕ್ತಾಯಕ್ಕ	ಅಜಗಣ್ಣ	೧೩೩೧
ಸಿದ್ಧರಸ ಲೇಸೆಂದಡೆ ತಾನಿದ್ದ ಕುಡಿಕೆ	ಅರಿವಿನ ಮಾರಿತಂದೆ	ಸದಾಶಿವಮೂರ್ತಿಲಿಂಗ	೧೪೬೩
ಸಿರಿಯೆಂದಡೆಲ್ಲರೂ ಬರ್ಪರೈಸೆ	-?-	ಗುರು ವರದ ವಿರೂಪಾಕ್ಷ	೨೨೨೦
ಸೀಮೆ ಭೂಮಿಯೆಂದೇನೋ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೬೭
ಸುಖಕ್ಕೆ ದೈವವೆಂದು, ಸುಖಕ್ಕೆ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೭
ಸುಖದುಃಖ ಸತಿ ಪುರುಷಂಗೂ ಸರಿ	ಕೋಲ ಶಾಂತಯ್ಯ	ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ	೧೬೪೩
ಸುಖವನರಿಯದ ಹೆಣ್ಣು ಸೂಳೆ	ಅಲ್ಲಮಪ್ರಭುದೇವ	ಗುಹೇಶ್ವರ	೬೨೪
ಸುಗಂಧದ ಅಂಗವಿದ್ದು ಕರಂಡದಲ್ಲಿ	ದಾಸೋಹದ ಸಂಗಣ್ಣ	ಮಾತುಳಂಗ ಮಧುಕೇಶ್ವರ	೧೮೦೪
ಸುಗಂಧ ಎಣ್ಣೆ ನೀರಡಿಕೆಗೆ ಕುಡಿಯ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೮
ಸುಗಂಧ ಕೊಡುವ ಮೃಗವೆಂದಡೆ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೨೦೧೯
ಸುಡುವಗ್ನಿ ಕಾಷ್ಠದಿರವ ಬಲ್ಲುದೆ?	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೬೮
ಸುತ್ತಿಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ	ಅಲ್ಲಮಪ್ರಭುದೇವ	ಗುಹೇಶ್ವರ	೬೨೫
ಸುಧೆಯೊಳಗೆ ವಿಷವುಂಟೆ? ಮಧುರ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೬೯
ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ	ಬಸವಣ್ಣ	ಕೂಡಲಸಂಗಮದೇವ	೩೮೫
ಸುರಗಿಯಲ್ಲಿ ತಟ್ಟುಚ್ಚಿರಿದ ಮತ್ತೆ	ಗೋಣಿ ಮಾರಯ್ಯ	ಕೇತೇಶ್ವರಲಿಂಗ	೨೨೭೬
ಸುರತರುವ ಬಿಟ್ಟು ಯಲವದ ಮರಕೆ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೭೦
ಸುರತರು ವೃಕ್ಷದೊಳಗಲ್ಲ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೭೧
ಸುವರ್ಣಕ್ಕೆ ಅಲಂಕಾರಕ್ಕೆ ಭೇದವುಂಟೆ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೦೯
ಸುವರ್ಣದ ಕೆಲಸಕ್ಕೆ ಹೊಂಬಿತ್ತಾಳೆಯ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೨೬
ಸುಳಿದಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ	ಘಟ್ಟಿವಾಳಯ್ಯ	ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲುಮಾಣು	೧೬೮೨
ಸುಳಿವ ಅನಿಲಂಗೆ ಮೈಯೆಲ್ಲ ಕೈ	ಮಾದಾರ ಧೂಳಯ್ಯ	ಕಾಮಧೂಮ ಧೂಳೇಶ್ವರ	೧೯೩೯
ಸೂಕರಂಗೆ ಸುಗಂಧ ಸೊಗಸುವುದೆ?	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೧೩

ಹ

ಹಗಲೆನ್ನೆ ಇರುಳೆನ್ನೆ, ಉದಯವೆನ್ನೆ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೩೪
ಹಗಹದಲ್ಲಿ ಬಿದ್ದವರ ಮೇಲೆ ಒರಳ	ಬಸವಣ್ಣ	ಕೂಡಲಸಂಗಮದೇವ	೩೯೧
ಹಡಗ ಹರಿಗೋಲ ನಂಬಿದವರು	ಹೇಮಗಲ್ಲ ಹಂಪ	ಪರಮಗುರು ಪಡುವಿಡಿ	
		ಸಿದ್ಧಮಲ್ಲಿನಾಥಪ್ರಭುವೆ	೨೩೯೯
ಹಡೆದೊಡವೆ ವಸ್ತುವನು	ಬಸವಣ್ಣ	ಕೂಡಲಸಂಗಮದೇವ	೩೯೨
ಹಣ ಬಂಗಾರ ವಸ್ತ್ರ ಕಪ್ಪಡ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೧೪
ಹಣ್ಣ ಮೆದ್ದ ಬಳಿಕ ಆ ಮರನನಾರು	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೩೫
ಹಣ್ಣ ಹಿಡಿದ ಬಾಲಕಂಗೆ ಬೆಲ್ಲವ	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೧೦
ಹತ್ತಕ್ಕೆ ನೀಡಿ ಹನ್ನೊಂದಕ್ಕೆ ನೀಡದಾತ	ಕಾಡಸಿದ್ಧೇಶ್ವರ	ಶಂಕರಪ್ರಿಯ ಚೆನ್ನ	
		ಕದಂಬಲಿಂಗ ನಿರ್ಮಾಯಪ್ರಭುವೆ	೨೨೫೫
ಹತ್ತಿ ಕದಿರು ರಾಟಿ ಮೊದಲಿಲ್ಲ	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ	೧೮೪೩
ಹತ್ತು ಮತ್ತರ ಭೂಮಿ	ಬಸವಣ್ಣ	ಕೂಡಲಸಂಗಮದೇವ	೩೯೩
ಹತ್ತು ಸಾವಿರ ಗೀತವ ಹಾಡಿ	ಬಸವಣ್ಣ	ಕೂಡಲಸಂಗಮದೇವ	೩೯೪
ಹದ ಮಣ್ಣಲ್ಲದೆ ಮಡಕೆಯಾಗ	ಗುಂಡಯ್ಯಗಳ	ಕುಂಭೇಶ್ವರ	೧೩೧೦
	ಪುಣ್ಯಸ್ತ್ರೀ ಕೇತಲದೇವಿ		
ಹದತಪ್ಪಿ ಕುಟ್ಟಲು ನುಚ್ಚಲ್ಲದೆ	ಕೊಟ್ಟಣದ ಸೋಮಮ್ಮ	ನಿರ್ಲಜ್ಜೇಶ್ವರ	೧೩೦೮
ಹದನರಿದು ಹರಗುವ, ಬೆದೆಯರಿದು	ಸೊಡ್ಡಳ ಬಾಚರಸ	ಸೊಡ್ಡಳ	೨೧೩೦
ಹಬ್ಬಕ್ಕೆ ತಂದ ಹರಕೆಯ ಕುರಿ	ಬಸವಣ್ಣ	ಕೂಡಲಸಂಗಮದೇವ	೩೯೫
ಹರಗಣಂಗಳ ನೆರಹಿ ಮಾಡುವ ಮಾಟ	ಸಕಳೇಶ ಮಾದರಸ	ಸಕಳೇಶ್ವರದೇವ	೨೦೯೨
ಹರಗಣಪಙ್ತಿಯ ನಡುವೆ ಕುಳ್ಳಿರ್ದು	ಬಸವಣ್ಣ	ಕೂಡಲಸಂಗಮದೇವ	೩೯೬
ಹರ ತನ್ನ ಭಕ್ತರ ತಿರಿವಂತೆ ಮಾಡುವ	ಜೇಡರ ದಾಸಿಮಯ್ಯ	ರಾಮನಾಥ	೧೭೭೪
ಹರ ತನ್ನ ರೂಪ ತೋರಬೇಕೆಂದು	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೧
ಹರನೀವ ಕಾಲಕ್ಕೆ ಸಿರಿಯು	ಬಸವಣ್ಣ	ಕೂಡಲಸಂಗಮದೇವ	೩೯೭
ಹರಹರಯೆಂದು ನೆನೆದಡೆ ಜನನ	-?-	ಜಂಗಮಲಿಂಗ ಪ್ರಭುವೆ	೨೨೨೨
ಹರಹರಾ, ಈ ಮಾಯೆ ಇದ್ದೆಡೆಯ	ಕಾಡಸಿದ್ಧೇಶ್ವರ	ಶಂಕರಪ್ರಿಯ ಚೆನ್ನ	
		ಕದಂಬಲಿಂಗ ನಿರ್ಮಾಯಪ್ರಭುವೆ	೨೨೫೬
ಹರ[ಹಿ] ಮಾಡುವುದು ಹರಕೆಯ	ಬಸವಣ್ಣ	ಕೂಡಲಸಂಗಮದೇವ	೩೯೮
ಹರಿದ ಗೋಣೆಯಲೊಬ್ಬ ಕಳವೆಯ	ಜೇಡರ ದಾಸಿಮಯ್ಯ	ರಾಮನಾಥ	೧೭೭೫
ಹರಿವ ಜಲಧಿಯಂತೆ ಚರಿಸಿ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ	
		ಚೆನ್ನಬಸವಣ್ಣ	೨೧೬೯
ಹರಿವ ನದಿಗೆ ಮೈಯೆಲ್ಲ ಕಾಲು	ಅಲ್ಲಮಪ್ರಭುದೇವ	ಗುಹೇಶ್ವರ	೬೩೧
ಹರಿವ ಹಾವಿಂಗಂಜೆ	ಬಸವಣ್ಣ	ಕೂಡಲಸಂಗಮದೇವ	೩೯೯
ಹರಿವ ಹಾವು, ಉರಿವ ಕಿಚ್ಚೆಂದಡೆ	ಮನಸಂದ ಮಾರಿತಂದೆ	ಮನಸಂದಿತ್ತು ಮಾರೇಶ್ವರ	೧೯೧೮
ಹಲವಂದ ಚಂದದಲ್ಲಿ ಹಾಡಿದರೇನಯ್ಯ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ	
		ಚೆನ್ನಬಸವಣ್ಣ	೨೧೭೦
ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೨
ಹಲವು [ಪರಿಯ] ಪುಷ್ಪದಲ್ಲಿ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೩
ಹಸನ ಮಾಡಿ ಹರಗಿ ಹೊಲದಲ್ಲಿ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ	
		ಚೆನ್ನಬಸವಣ್ಣ	೨೧೭೦

ಹಾವಡಿಗನು ಮೂಕೊರತಿಯು	ಬಸವಣ್ಣ	ಕೂಡಲಸಂಗಮದೇವ	೪೦೭
ಹಾವ ಹಿಡಿವುದ ಹಾವಾಡಿಗ ಬಲ್ಲ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೭೪
ಹಾವಾಡಿಗ ಹಾವನಾಡಿಸುವಲ್ಲಿ ತನ್ನ	ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ	೨೪೧೭
ಹಾವಿನ ಡೊಂಕು ಹುತ್ತಕ್ಕೆ ಸಸಿನ	ಬಸವಣ್ಣ	ಕೂಡಲಸಂಗಮದೇವ	೪೦೮
ಹಾವಿನ ಬಾಯ ಕಪ್ಪೆ ಹಸಿದು	ಬಸವಣ್ಣ	ಕೂಡಲಸಂಗಮದೇವ	೪೦೯
ಹಾವಿನ ಬಿಲದಲ್ಲಿ ಕೋಲನಿಕ್ಕಲಾಗಿ	ಬಾಲಬೊಮ್ಮಣ್ಣ	ವೀರಶೂರ ರಾಮೇಶ್ವರಲಿಂಗ	೧೮೪೯
ಹಾವಿನ ಹಲ್ಲ ಕಳೆದು ಹಾವನಾಡಿಸ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೩೯
ಹಾವಿನ ಹೆಡೆಗಳ ಕೊಂಡು	ಬಸವಣ್ಣ	ಕೂಡಲಸಂಗಮದೇವ	೪೧೦
ಹಾವಿನೊಳಗಣ ಸಂಗ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ	೨೩೭೫
ಹಾವು ತಿಂದವರ ನುಡಿಸಬಹುದು	ಬಸವಣ್ಣ	ಕೂಡಲಸಂಗಮದೇವ	೪೧೧
ಹಿಂಡನಗಲಿ ಹಿಡಿವಡೆದ ಕುಂಜರ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೪೦
ಹಿಂಡಿನೊಳಗಣ ಕುರುಬನ ತೋಳ	ಬಿಬ್ಬಿ ಬಾಚಯ್ಯ	ಏಣಾಂಕಧರ ಸೋಮೇಶ್ವರಲಿಂಗ	೧೮೭೭
ಹಿಂದಣ ಅನಂತವನೂ, ಮುಂದಣ	ಅಲ್ಲಮಪ್ರಭುದೇವ	ಗುಹೇಶ್ವರ	೬೩೬
ಹಿಂದಣ ಭವವನೊರಸಿ, ಮುಂದಣ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೧೫
ಹಿಂದಣ ಹಳ್ಳ, ಮುಂದಣ ತೊರೆ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೪೧
ಹಿಟ್ಟಿನ ಲೆಪ್ಪದಲ್ಲಿ ಚಿತ್ರದ ಕರ	ಗೋರಕ್ಷ	ಗೋರಕ್ಷಪಾಲಕ ಸಿದ್ಧಸೋಮನಾಥಲಿಂಗ	೧೬೭೩
ಹಿಡಿವ ಕೈಯ [ಮೇ]ಲೆ ಕತ್ತಲೆಯಯ್ಯಾ	ಅಲ್ಲಮಪ್ರಭುದೇವ	ಗುಹೇಶ್ವರ	೬೩೭
ಹಿಡಿದ ಹೊಲಕ್ಕೆ ಒಡವೆಯ ಕೊಡೆ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೨೦೨೦
ಹುಂಜ ಸೋತಡೆ ಹಿಡಿವೆ	ಹುಂಜಿನ ಕಾಳಗದ ದಾಸಯ್ಯ	ಚಂದ್ರಚೂಡೇಶ್ವರಲಿಂಗ	೨೨೧೨
ಹುಟ್ಟಲೇಕೊ ನರರ ಜನ್ಮದಲ್ಲಿ?	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೭೫
ಹುಟ್ಟಿದ ಕಲ್ಲಿಗೆ, ನೆಟ್ಟ ಪ್ರತಿಷ್ಠೆಗೆ	ಮಡಿವಾಳ ಮಾಚಿದೇವ	ಕಲಿದೇವಯ್ಯ	೧೮೯೯
ಹುಟ್ಟಿದ ಕಲ್ಲು ಲಿಂಗವಾಯಿತ್ತು	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೧೧
ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ	ಅಲ್ಲಮಪ್ರಭುದೇವ	ಗುಹೇಶ್ವರ	೬೩೮
ಹುಟ್ಟಿದ ಮನುಜರೆಲ್ಲ ಹೊಟ್ಟೆಯ	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ ಚೆನ್ನಬಸವಣ್ಣ	೨೧೭೬
ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೪೨
ಹುಟ್ಟುತ್ತ ದ್ರವ್ಯವನರಿಯದವಂಗೆ	ಬಸವಣ್ಣ	ಕೂಡಲಸಂಗಮದೇವ	೪೧೨
ಹುಟ್ಟುವರೆಲ್ಲರ ಹುಟ್ಟಬೇಡೆಂದೆನೆ?	ಅಲ್ಲಮಪ್ರಭುದೇವ	ಗುಹೇಶ್ವರ	೬೩೯
ಹುಟ್ಟುವಾತ ನಾನಲ್ಲಯ್ಯಾ	ಅಲ್ಲಮಪ್ರಭುದೇವ	ಗುಹೇಶ್ವರ	೬೪೦
ಹುಟ್ಟುವುದೇ ಬಂಧ	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೧೬
ಹುಡಿ ಹತ್ತದ ಗಾಳಿಯಂತೆ	ಅಮುಗಿದೇವಯ್ಯ	ಸಿದ್ಧಸೋಮನಾಥ	೧೪೩೧
ಹುತ್ತಕ್ಕೆ ಸರ್ಪನಾಗಿ, ಉದಕಕ್ಕೆ	ದಾಸೋಹದ ಸಂಗಣ್ಣ	ಮಾತುಳಂಗ ಮಧುಕೇಶ್ವರ	೧೮೦೫
ಹುತ್ತದ ಮೇಲಣ ರಜ್ಜು ಮುಟ್ಟಿದಡೆ	ಬಸವಣ್ಣ	ಕೂಡಲಸಂಗಮದೇವ	೪೧೩
ಹುತ್ತದ ಮೇಲಣ ಸರ್ಪ ಸತ್ತಿತ್ತೆಂದು	ಹಡಪದ ಅಪ್ಪಣ್ಣ	ಬಸವಪ್ರಿಯ ಕೂಡಲ	

		ಚೆನ್ನಬಸವಣ್ಣ	೨೧೭೭
ಹುತ್ತವ ಕಂಡಲ್ಲಿ ಹಾವಾಗಿ	ಬಸವಣ್ಣ	ಕೂಡಲಸಂಗಮದೇವ	೪೧೪
ಹುತ್ತವ ಬಡಿದಡೆ ಹಾವು	ಬಸವಣ್ಣ	ಕೂಡಲಸಂಗಮದೇವ	೪೧೫
ಹುತ್ತ ಹೋರಿನೊಳಗೆ ಕೈಯನಿಕ್ಕುವ	ಸೊಡ್ಡಳ ಬಾಚರಸ	ಸೊಡ್ಡಳ	೨೧೩೧
ಹುರಿದ ಬೀಜದಂತೆ, ಬೆಂದ ನುಲಿ	ಸ್ವತಂತ್ರಸಿದ್ಧಲಿಂಗೇಶ್ವರ	ಸ್ವತಂತ್ರಸಿದ್ಧಲಿಂಗೇಶ್ವರ	೨೪೧೮
ಹುಲಿಯ ಹಾಲು ಹುಲಿಗಲ್ಲದೆ	ಬಸವಣ್ಣ	ಕೂಡಲಸಂಗಮದೇವ	೪೧೬
ಹುಲ್ಲ ಮನುಷ್ಯನ ಕಂಡು ಹುಲ್ಲೆ	ಚಂದಿಮರಸ	ಸಿಮ್ಮಲಿಗೆಯ ಚೆನ್ನರಾಮ	೧೭೧೧
ಹುಸಿಯ ನುಡಿಯನು ಭಕ್ತ	ಅಗ್ಘವಣಿ ಹಂಪಯ್ಯ	ಹಂಪೆಯ ವಿರುಪ	೧೪೧೭
ಹುಸಿಯಂಕುರಿಸಿತ್ತು ಹೊಲೆಯನಲ್ಲಿ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೫
ಹುಸಿಯ ಹಸರವನಿಕ್ಕಿ ವಚನವ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೬
ಹುಸಿಯುಳ್ಳಾತ ಭಕ್ತನಲ್ಲ ಬಾಥೆ	ಅಲ್ಲಮಪ್ರಭುದೇವ	ಗುಹೇಶ್ವರ	೬೪೧
ಹುಸಿಯೆಂಬ ಅಲಗಿಂಗೆ ಒಡಲೆ	ಕಿನ್ನರಿ ಬ್ರಹ್ಮಯ್ಯ	ಮಹಾಲಿಂಗ ತ್ರಿಪುರಾಂತಕಲಿಂಗ	೧೬೨೩
ಹುಳ್ಳಿಯ ಹಗುರದಿಂದ	ಮೋಳಿಗೆ ಮಾರಯ್ಯ	ನಿಃಕಳಂಕ ಮಲ್ಲಿಕಾರ್ಜುನ	೨೦೨೧
ಹೂವ ಕೊಯಿವುದಕ್ಕೆ ಮುನ್ನವೆ	ಮನಸಂದ ಮಾರಿತಂದೆ	ಮನಸಂದಿತ್ತು ಮಾರೇಶ್ವರ	೧೯೧೯
ಹೂವ ಕೊಯ್ಯ ಹೋಗಿ ಕರಡಿಗೆಯ	ಅಲ್ಲಮಪ್ರಭುದೇವ	ಗುಹೇಶ್ವರ	೬೪೩
ಹೂವ ಕೊಯ್ಯುವರಲ್ಲದೆ, ಹೂವಿನ	ಸಗರದ ಬೊಮ್ಮಣ್ಣ	ಸಗರದ ಬೊಮ್ಮನೊಡೆಯ	
		ತನುಮನ ಸಂಗಮೇಶ್ವರ	೨೧೯೮
ಹೂವು ಕಂದಿದಲ್ಲಿ ಪರಿಮಳವ	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೧೨೪೩
ಹೂಮಿಡಿಯ ಹರಿದು ಒತ್ತಿ ಹಣ್ಣ	ಅಲ್ಲಮಪ್ರಭುದೇವ	ಗುಹೇಶ್ವರ	೬೪೨
ಹೃದಯ ಕತ್ತರಿ, ತುದಿನಾಲಗೆ	ಬಸವಣ್ಣ	ಕೂಡಲಸಂಗಮದೇವ	೪೧೭
ಹೆಂಗೂಸಿಂಗೆ ಶೃಂಗಾರ, ಪುರುಷನ	ಸೊಡ್ಡಳ ಬಾಚರಸ	ಸೊಡ್ಡಳ	೨೧೩೨
ಹೆಂಡಿ[ರೆನ್ನುವ] ಮಕ್ಕಳೆ[ನ್ನುವ]	ದಶಗಣ ಸಿಂಗಿದೇವಯ್ಯ	ನಾಚಯ್ಯಪ್ರಿಯ ಮಲ್ಲಿನಾಥ	೧೭೮೪
ಹೆಗ್ಗಣವನಿಕ್ಕಿ ನೆಲಗಟ್ಟ ಕಟ್ಟಿದಂತೆ	ಚೆನ್ನಬಸವಣ್ಣ	ಕೂಡಲಚೆನ್ನಸಂಗಮದೇವ	೯೩೭
ಹೆಚ್ಚದು-ಕುಂದದು, ಮಚ್ಚದು-ಬೆಚ್ಚದು	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	೧೫೧೭
ಹೆಜ್ಜೆ ತಪ್ಪಿ ನಡೆವಂಗೆ ಇಹಪರದ	ದೇಶಿಕೇಂದ್ರ	ನಿರಂಜನ ಚನ್ನಬಸವಲಿಂಗ	೨೪೩೪
	ಸಂಗನಬಸವಯ್ಯ		
ಹೆಣನ ಕಂಡರೆ ನಾಯಿ ಕಚ್ಚದೆ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು	
		ಶಿವಸಿದ್ಧೇಶ್ವರಪ್ರಭುವೆ	೨೩೭೬
ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ	ಜೇಡರ ದಾಸಿಮಯ್ಯ	ರಾಮನಾಥ	೧೭೭೭
ಹೆಣ್ಣ ಬಿಟ್ಟೆ, ಮಣ್ಣ ಬಿಟ್ಟೆ, ಹೊನ್ನ	ತೋಂಟದ ಸಿದ್ಧಲಿಂಗ	ಮಹಾಲಿಂಗಗುರು	
		ಶಿವಸಿದ್ಧೇಶ್ವರಪ್ರಭುವೆ	೨೩೭೭
ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯಾ?	ಸಿದ್ಧರಾಮೇಶ್ವರ	ಕಪಿಲಸಿದ್ಧ ಮಲ್ಲಿಕಾರ್ಜುನ	೧೧೧೨
ಹೆಣ್ಣಿಗಾಗಿ ಸತ್ತಡೆ ಜನನ ಮರಣ	ಮಡಿವಾಳ ಮಾಚಿದೇವ	ಕಲಿದೇವಯ್ಯ	೧೯೦೦
ಹೆಣ್ಣೆಂಬ ಭೂತವ ಸೋಂಕಿ	ಬಾಲಸಂಗಯ್ಯ	ಅಪ್ರಮಾಣ	
		ಕೂಡಲಸಂಗಮದೇವ	೨೪೬೦
ಹೆದರದಿರು ಮನವೆ, ಹಿಮ್ಮೆಟ್ಟದಿರು	ಅಮುಗೆ ರಾಯಮ್ಮ	ಅಮುಗೇಶ್ವರ	೧೨೮೯
ಹೇಡಿ ಬಿರಿದ ಕಟ್ಟಿದಂತೆ	ಬಸವಣ್ಣ	ಕೂಡಲಸಂಗಮದೇವ	೪೧೮
ಹೇಮ ಕಾಮಿನಿ ಭೂಮಿ ಜೀವರಾಧಾರ	-?-	ಮರ್ಕಟೇಶ್ವರ	೨೨೩೩
ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದ	ಬಸವಣ್ಣ	ಕೂಡಲಸಂಗಮದೇವ	೪೧೯

*

ಅರ್ಥಕೋಶ

ಅ-ಆ

ಅಂಕ - ಯೋಧ, ಯುದ್ಧ, ಯುದ್ಧಭೂಮಿ
ಅಂಕೆ - ನಿಯಂತ್ರಣ
ಅಂಗಜೀವಿ - ಭೌತವಾದಿ
ಅಂಗನೆ - ಹೆಣ್ಣು
ಅಂಗೈಸು - ಅಂಗವಿಸು, ಕೈಕೊಳ್ಳು, ಆಸೆಮಾಡು,ನಿರ್ವಹಿಸು
ಅಂಜನ - ಭೂಗತ ದ್ರವ್ಯಶೋಧಕ್ಕೆ ಬಳಸುವ ಕಾಡಿಗೆ
ಅಂಡಜ - ತತ್ತಿಯಿಂದ ಹುಟ್ಟುವ ಜೀವಿ
ಅಂಡಲೆ - ಕಾಡು, ಪೀಡಿಸು
ಅಂತಕ - ಯಮ
ಅಂತರಂಗಶುದ್ಧಿ - ಜ್ಞಾನಶುದ್ಧಿ
ಅಂತರಾಗಮ - ಶಾಸ್ತ್ರರಹಸ್ಯ
ಅಂತು - ಅಂತ್ಯ, ಕೊನೆ
ಅಂತುಟು - ಅಷ್ಟು, ಹಾಗೆ
ಅಂತ್ಯಜ - ಅಸ್ಪೃಶ್ಯ
ಅಂದ - ರೀತಿ, ಸೊಬಗು
ಅಂದಣ - ಪಲ್ಲಕ್ಕಿ
ಅಂದಳ - ಅಂದಣ, ಪಲ್ಲಕ್ಕಿ
ಅಂಧಕ - ಕುರುಡ
ಅಂಬರ - ಆಕಾಶ
ಅಂಬಿಲ - ಅಂಬಲಿ ಆಹಾರ
ಅಂಬು - ಬಾಣ
ಅಂಬುಜ - ಕಮಲ
ಅಂಬುಧಿ - ಸಮುದ್ರ
ಅಕಾಯ - ದೇಹಭಾವ ನಿರಾಕರಣಸ್ಥಿತಿ
ಅಕ್ಕೊತ್ತಿ - ಅತಿಯಾಗಿ ಒತ್ತಿ
ಅಕ್ಷಾಂಗ - ಇಂದ್ರಿಯ
ಅಗಮ್ಯ - ಗಮಿಸಲಿಕ್ಕಾಗದ
ಅಗಲ - ಊಟದ ತಟ್ಟೆ, ಅಗಲುವಿಕೆ
ಅಗೆ - ಸಸಿ
ಅಗ್ಗವಣಿ - ನೀರು, ಪೂಜೆಯ ನೀರು
ಅಗ್ರಾಹಿ - ಹಿಡಿತಕ್ಕೆ ಸಿಗದವ
ಅಗ್ನಿಸ್ತಂಭ - ಬೆಂಕಿ ನಂದಿಸುವ ಮಂತ್ರಶಕ್ತಿ
ಅಘಟಿತ ಘಟಿತ - ಉಂಟಾಗದುದನ್ನು ಉಂಟುಮಾಡುವ
ಅಘೋರ - ಅತಿಕಠಿಣ
ಅಘೋರಿ - ಅವಧೂತ ಸಂಪ್ರದಾಯದ ಯತಿ
ಅಚ್ಚಿಗ - ವ್ಯಥೆ, ಕಳವಳ
ಅಚ್ಚು - ಗಾಲಿಗಳನ್ನು ಜೋಡಿಸುವ ಕಟ್ಟಿಗೆ
ಅಚ್ಚುಗ - ಪ್ರೇಮ, ಸಲುಗೆ, ಆಶ್ಚರ್ಯ
ಅಜ - ಆಡು
ಅಜಕೋಟಿಕಲ್ಪ - ಬ್ರಹ್ಮನ ದೀರ್ಘ ಆಯುಷ್ಯಪ್ರಮಾಣ
ಅಜಾತ ಚರಿತ್ರ - ಅಪೂರ್ವ ಚರಿತ್ರೆಯುಳ್ಳವ
ಅಟಮಟ - ಮೋಸ
ಅಟ್ಟಗೋಲ - ನಿಚ್ಚಣಿಕೆ
ಅಟ್ಟೆ - ಮುಂಡ
ಅಡಗ - ಮಾಂಸ
ಅಡರು - ಆವರಿಸು, ಏರು
ಅಡ್ಡ - ಒಂದು ಬಗೆಯ ನಾಣ್ಯ
ಅಡ್ಡಾಯುಧ - ಖಡ್ಗವಿಶೇಷ

ಅಣಲ - ದವಡೆ
ಅಣೆ - ಮಗ್ಗದ ಹಾಸುಹೊಕ್ಕು
ಅಣು - ಕಣ
ಅಣ್ಣಿಸು - ಕಡಿಮೆಮಾಡು
ಅರ್ಣವ - ಸಮುದ್ರ
ಅತಿಗಳೆ - ನಿರಾಕರಿಸು
ಅತ್ಯತಿಷ್ಠದ್ದಶಾಂಗುಲ-ಎಲ್ಲದಕ್ಕೂ ಹತ್ತು ಅಂಗುಲ ಹೆಚ್ಚು ಎತ್ತರವಾಗಿರುವ
ಅತ್ಯಾಹಾರ - ಅತಿ ಆಹಾರ
ಅರ್ತಿ - ಪ್ರೀತಿ
ಅರ್ತಿಕಾರ - ವಿನೋದಿ, ವಿಟ
ಅದ್ದಲಿಸು - ಹೆದರಿಸು
ಅದ್ದವ - ಅಳ್ದವ, ಮುಳುಗಿದವ
ಅಧರ - ತುಟಿ
ಅನಂಗ - ಕಾಮ,ಅಂಗರಹಿತತ್ವ
ಅನಲ - ಬೆಂಕಿ
ಅನಾಮಯ - ಆರೋಗ್ಯವುಳ್ಳ, ಶುದ್ಧ
ಅನಾಮಿಕ - ನಾಲ್ಕು ವರ್ಣಗಳಿಗೂ ಹೊರಗಾದ
ಅನು - ಹದ
ಅನುನುಡಿ - ತಕ್ಕಮಾತು, ನಿಜನುಡಿ
ಅನುಲೇಪನ - ಲೇಪಿಸಿಕೊಳ್ಳುವಿಕೆ
ಅನುವಿಡಿ - ಸರಿಯಾಗಿ ಹಿಡಿ
ಅನುವು - ರೀತಿ
ಅನುಸರಣ - ಹಿಂಬಾಲಿಸುವಿಕೆ
ಅಪರಂಜಿ - ಶುದ್ಧಬಂಗಾರ
ಅಪವರ್ಗ - ಮೋಕ್ಷ
ಅಪಾನ - ಪಂಚಪ್ರಾಣಗಳಲ್ಲಿ ಒಂದು ವಾಯು
ಅಪ್ಪು - ನೀರು
ಅಪ್ಪೈಸು - ಅಪ್ಪಿಕೊಳ್ಳು
ಅಬಲ - ಎತ್ತರ ಬೆಳೆವ ಕಸ ವಿಶೇಷ
ಅಭಿಮುಖ - ಪ್ರತಿಮುಖ, ಎದುರು
ಅಭೇದ್ಯ - ಒಡೆಯಲಾರದ
ಅಭ್ರಚ್ಛಾಯೆ - ಮೋಡದ ನೆರಳು
ಅಮಳೋಕ್ಯ - ಬಾಯಿ
ಅಮೃತಕರ - ಬೆಳುದಿಂಗಳ ನೀಡುವವ, ಚಂದ್ರ
ಅಮೃತಗಣ - ಜಗಣ ಹೊರತಾದ ನಾಲ್ಕು ಮಾತ್ರೆಯ ಗಣ
ಅಮೇಧ್ಯ - ಮಲ
ಅಯಸ್ಕಾಂತ - ಸೂಜಿಗಲ್ಲು
ಅರಕೆ - ಅರಸುವಿಕೆ
ಅರಕೆಗೆಡು - ಅಪೂರ್ಣತೆ ನಿವಾರಿಸಿಕೊಳ್ಳು
ಅರತ - ಇಂಗಿಹೋದ
ಅರತು - ಬತ್ತಿಹೋಗಿ
ಅರಲು - ಕೆಸರು
ಅರವಿಂದ - ಕಮಲ
ಅರಸಾಡು - ಅರಚು, ಕೂಗು
ಅರಸು - ಹುಡುಕು
ಅರಳಂಬು - (ಕಾಮನ) ಹೂಬಾಣ
ಅರಳು - ಹೂವು
ಅರಿ - ಕತ್ತರಿಸು
ಅರಿಕೆ - ಪ್ರಕಟ
ಅರಿಲು - ಕೆಸರು
ಅರಿಗುರಿ - ಅಜ್ಞಾನಿ
ಅರುಹಿರಿಯ - ಬಹಳ ಹಿರಿಯ
ಅರೆ - ಸಮತಲವಾದ ಕಲ್ಲುಹಾಸುಗೆ
ಅರೆಭಕ್ತ - ಸ್ಥಾವರಲಿಂಗವನ್ನು ಪೂಜಿಸುವ ಇಷ್ಟಲಿಂಗದ ಭಕ್ತ
ಅಲಗು - ಖಡ್ಗ
ಅವಗಡಿಸು - ಅವಗ್ರಹಿಸು, ಹಿಡಿ
ಅವಗವಿಸು - ಅವಗ್ರಹಿಸು, ಸ್ವೀಕರಿಸು
ಅವಗ್ರಹಿಸು - ಸ್ವೀಕರಿಸು
ಅವಲೋಹ - ಕಬ್ಬಿಣ
ಅವಸರ - ಸಕಾಲಿಕ, ಸಂದರ್ಭ,ವೇಗ

ಅವಿತಥ - ವ್ಯರ್ಥವಲ್ಲದ
ಅವಿಮುಕ್ತಕ್ಷೇತ್ರ- ಪವಿತ್ರಕ್ಷೇತ್ರ, ಕಾಶಿ
ಅವುಟು - ಮೂರುವರೆ
ಅವುಡಿ - ದವಡೆ
ಅನೃತ - ಸುಳ್ಳು
ಅಶನ - ಊಟ, ಆಹಾರ
ಅಶ್ವತ್ಥವೃಕ್ಷ - ಅರಳಿಮರ
ಅಷ್ಟತನು - ಎಂಟು ಅಂಗವುಳ್ಳ ದೇಹ
ಅಷ್ಟತನು ಮೂರ್ತಿ- ಎಂಟು ಘಟಕಗಳಿಂದ ಕೂಡಿದ ಶಿವ
ಅಷ್ಟಾದಶವಿದ್ಯೆ - ಹದಿನೆಂಟು ಬಗೆಯ ವಿದ್ಯೆ
ಅಷ್ಟಾಷಷ್ಟಿತೀರ್ಥ- ಅರವತ್ತೆಂಟು ತೀರ್ಥಕ್ಷೇತ್ರಗಳು
ಅಸಗ - ಅಗಸ
ಅಸಮಾಕ್ಷ - ಶಿವ
ಅಸಿ - ಖಡ್ಗ(ದ ವೃತ್ತಿ)
ಅಸಿಯ - ತೆಳ್ಳನೆಯ, ಕೋಮಲ
ಅಸು - ಪ್ರಾಣ
ಅಸುರ - ರಾವಣ, ರಾಕ್ಷಸ
ಅಸ್ಥಿ - ಎಲುಬು
ಅಹೋರಾತ್ರಿ - ಹಗಲು ರಾತ್ರಿ ಕೂಡಿಯೇ
ಅಳಿಯಾಸೆ - ಅಲ್ಪಆಸೆ
ಅಳುಪು - ಆಸೆಮಾಡು
ಆಗಮ - ಶಾಸ್ತ್ರ
ಆಗಾಮಿ - ಭವಿಷ್ಯತ್ತಿನ ಕರ್ಮ
ಆಗು - ಲಾಭ
ಆಚಮನ - ಅಂಗೈಯಲ್ಲಿಯ ನೀರನ್ನು ಮಂತ್ರಪೂರ್ವಕ ಸೇವಿಸುವುದು
ಆದ್ಯರು - ಹಿರಿಯ ಶರಣರು
ಆಧಿ - ಮನೋರೋಗ
ಆಪೋಶನ - (ಬೊಗಸೆಯಿಂದ) ಕುಡಿಯುವುದು
ಆಪ್ಯಾಯನ - ತೃಪ್ತಿ
ಆಮಿಷ - ಅತಿಯಾಸೆ
ಆಮ್ನೆ - ಧ್ಯಾನ
ಆಯ - ಸಂಪಾದನೆ
ಆಯತ - ಸಜ್ಜಾದ
ಆರತ - ತೃಷ್ಣೆ
ಆರಂಬ - ಒಕ್ಕಲುತನ
ಆರಯ್ಯು - ಹುಡುಕು
ಆರಿಕೆ - ಯಾರೋ
ಆರೂಢ - ಉನ್ನತ ಜ್ಞಾನಸ್ಥಿತಿ
ಆರೈ - ಕೇಳು
ಆರೈದು - ಕಾಪಾಡಿ
ಆಲಿ - ಕಣ್ಣಿನ ಗುಡ್ಡೆ
ಆವಂಗ - ಆವ ರೀತಿ
ಆವಗೆ - ಗಡಿಗೆ ಸುಡುವ ಕುಲುಮೆ
ಆಸನ - ಪೀಠ
ಆಸರು - ಆಯಾಸ, ದಣಿವು
ಆಸುರತೆ - ಕಷ್ಟ
ಆಸ್ಮಿಕ - ಆಶ್ಚರ್ಯ
ಆಹಾರ - ವಸ್ತು
ಆಳಿಗೊಳ್ - ಕೀಳಾಗು, ಹಿಡಿತಕ್ಕೆ ತೆಗೆದುಕೊಳ್ಳು
ಆಳಿಗೊಳಿಸು - ತೊಂದರೆಪಡಿಸು
ಆಳ್ದ - ಒಡೆಯ

ಇ-ಈ

ಇಂದುಕಾಂತ - ಬೆಳುದಿಂಗಳಿಗೆ ಒಸರುವ ಕಲ್ಲು
ಇಂದ್ರಚಾಪ - ಕಾಮನ ಬಿಲ್ಲು
ಇಂಬು - ಇಂಪು, ಮಧುರ
ಇಕ್ಷುದಂಡ - ಕಬ್ಬು
ಇದಿರ - ಪ್ರತಿಯಾಗಿ
ಇನಿಗಬ್ಬು - ಸಿಹಿಯಾದ ಕಬ್ಬು
ಇನಿದು - ರುಚಿ
ಇಮ್ಮೈಗೊಳ್ಳು - ದೇಹದಲ್ಲಿ ಪಾರಾಗು
ಇಷ್ಟ - ದೇವರು
ಇಹಪರ - ಲೌಕಿಕ ಮತ್ತು ಅಲೌಕಿಕ

ಈಚುವೋದ - ಒಣಗಿದ
ಈಡು - ಗುರಿ
ಈಶ್ವರೋವಾಚ - ದೇವರು ಹೇಳಿದುದು

ಉ-ಊ

ಉಂಗುಷ್ಮ - ಉಂಗುಟ
ಉಂಡಲಿಗೆ - ಉಂಡಿ
ಉಂಡಿಗೆ - ಮುದ್ರೆ, ಮೋಹರು
ಉಕ್ಕ - ಶಕ್ತಿ
ಉಕ್ಕಡ - ಕಾವಲುಮನೆ
ಉಘೆ ಚಾಂಗು ಭಲಾ - ಸ್ತುತಿಸುವಾಗ ಬಳಸುವ ಉದ್ಗಾರ
ಉಚ್ಛಿಷ್ಮ - ಎಂಜಲು
ಉಡುಗು - ಮುದುಡು
ಉಡೆವುಚ್ಚು - ಬತ್ತಲೆಗೊಳಿಸು
ಉತ್ತರ ಸಾಧಕ - ಸಿದ್ಧಿಪಡೆದವ
ಉತ್ತರಿಸು - ದಾಟು
ಉತ್ತು - ಹೊಲ ಊಳುವಿಕೆ
ಉದರ - ಹೊಟ್ಟೆ
ಉದಾನ - ಗಂಟಲಿನಿಂದ ಹೊರಡುವ ವಾಯು (ತೇಗು)
ಉದ್ದಂಡತನ - ಉದ್ಧಟತನ
ಉದ್ದೇಶ - ಧ್ಯೇಯ
ಉದ್ಭಿಜ - ಭೂಮಿಯ ತಂಪಿನಲ್ಲಿ ಹುಟ್ಟುವ ಜೀವಿ
ಉಪಚಾರ - ತೋರಿಕೆಯ ವಿನಯ
ಉಪದ್ರಷ್ಮ - ಉದಾಹರಣೆ
ಉಪಧಾವಿಸು - ಸಮೀಪಿಸು
ಉಪಮಿಸು - ವರ್ಣಿಸು, ಹೋಲಿಸು
ಉಪಾಧಿಕ - ಠಕ್ಕ, ಮೋಸಗಾರ, ವಿಷಯಲಂಪಟ
ಉಪ್ಪರಿಗೆ - ಅಂತಸ್ತು ಕಟ್ಟಡ
ಉಪ್ಪರಿಸು - ಜಿಗಿ, ಹೊರಬರು
ಉಬ್ಬಸ - ಕಷ್ಟ
ಉಭಯದಳ - ಎದುರು ಬದುರಾದ ಸೈನ್ಯ
ಉರ - ಎದೆ
ಉರಗ - ಹಾವು
ಉರವಣಿ - ಆರ್ಭಟ, ಆತುರ
ಉರಸು - ರುಚಿಸು
ಉರಿಯ ನಾಲಗೆ - ಉರಿಯ ಜ್ವಾಲೆ
ಉಲಿ - ಸದ್ದುಮಾಡು
ಉಲಿಗರು - ಮಾತುಗಾರರು
ಊಡು - ಉಣಿಸು
ಊಣೆಯ - ಕೊರತೆ
ಊರಿಗರು - ಊರಜನರು
ಊಷ್ಮ - ಉಷ್ಣ
ಋಣಸಂಬಂಧ - (ಪೂರ್ವಜನ್ಮದ) ಋಣಾನುಬಂಧ

ಎ-ಏ-ಐ

ಎಕ್ಕಲಕೊಂಡ - ಒಂದು ಪ್ರಕಾರದ ನರಕ
ಎಗ್ಗ - ಮೂರ್ಖ
ಎಚ್ಚ - ಎಸೆದ
ಎಚ್ಚು - ಲೇಪಿಸು
ಎಡವಟ್ಟ - ಮೂರ್ಖ
ಎಡೆ - ಮಗ್ಗಲು
ಎಡೆಗೋಲು - ಹೋರಾಟ ನಿಲ್ಲಿಸಲು ಮಧ್ಯೆ ಬಳಸುವ ಕೋಲು
ಎಡೆದೆರಹು - ಸ್ಥಳಾವಕಾಶ
ಎಡೆಯಾಡು - ತಿರುಗಾಡು
ಎಡೆಹಂಚರು - ಬೋಕಿಗೆ ಸಮಾನರಾದವರು
ಎಣೆಗೊಳ್ಳು - ಜೊತೆಯಾಗು
ಎರಗು - ನಮಸ್ಕರಿಸು, ಹೊರಳು
ಎರದ ಮುಳ್ಳು - ಮುಳ್ಳು ಹಂದಿಯ ಮುಳ್ಳು
ಎರಳೆ - ಜಿಂಕೆ
ಎರೆ - ಕಪ್ಪುನೆಲ
ಎಲವ - ಬೂರುಗ ವೃಕ್ಷ, ಶಾಲ್ಮಲೀವೃಕ್ಷ
ಎಸಕ - ಕಾಂತಿ, ಬೆಡಗು
ಎಳಕ - ಬೆಳೆವಣಿಗೆ
ಎಳತಟ - ಎಳೆದಾಡುವಿಕೆ, ಬಲಗುಂದುವಿಕೆ

ಎಳಸು - ಆಸೆಮಾಡು
ಏಕಗ್ರಾಹಕ - ಒಂದಾಗಿ ಸ್ವೀಕರಿಸುವುದು
ಏಕಭಾಜನ - ಅಂಗ ಮುಖೇನ ಲಿಂಗವು ಭೋಗಿಸುವುದು
ಏಕಾಂತದ್ರೋಹಿ - ಮರೆಯಲ್ಲಿ ದ್ರೋಹ ಮಾಡುವವ
ಏಗುವುದು - ಏನು ಮಾಡುವುದು
ಏಡಿಸು - ಅಣಕಿಸು, ನಿಂದಿಸು
ಏರಿ - ಕೆರೆ
ಏರಿಸಿ ನುಡಿ - ಹೊಗಳು
ಏರು - ಗಾಯ
ಏವನಾದಡೇನು - ಏನು ಮಾಡಬೇಕಾದರೂ
ಏವುದು - ಏನು ಮಾಡುವುದು
ಏಸಿಕೆ - ಎಷ್ಟೋ
ಏಳೆಲೆ - ಅಭಿವೃದ್ಧಿ
ಐದುಗೆ - ಸೇರಲಿ
ಐದುತ್ತಿದೆ - ಹೋಗುತ್ತಿದೆ

ಒ-ಓ

ಒಂಬತ್ತೆಲೆ - ಪರಿಪೂರ್ಣ
ಒಕ್ಕಾಲು - ಒಂದು ಕಾಲುಭಾಗ
ಒಕ್ಕು - ನೀಡು, ರಾಶಿಮಾಡು
ಒಕ್ಕುಡಿತೆ - ಒಂದು ಅಂಗೈ ಸೆರೆ
ಒಕ್ಕುದ - ನೀಡಿದುದ
ಒಕ್ಕುಮಿಕ್ಕುದು - ಎಂಜಲು, ಹೆಚ್ಚಿನದು
ಒಗತನ - ಹೊಂದಿಕೊಂಡು ಬಾಳುವುದು
ಒಗೆ - ಹುಟ್ಟು
ಒಚ್ಚತ - ಸಮರಸತೆ
ಒಚ್ಚಿ - ಒಂದು
ಒಚ್ಚೊತ್ತು - ಒಂದು ಹೊತ್ತು, ಒಪ್ಪೊತ್ತು
ಒಜ್ಜರ - ಊಟೆ, ಚಿಲುಮೆ
ಒಟ್ಟಿಲ ಬೆನಕ - ತೂಕಕ್ಕೆ ಬಳಸುವ ನುಣುಪಾದ ಕಲ್ಲು
ಒಡಗಲಸು - ಮಿಶ್ರಮಾಡು
ಒಡತಣ - ಸ್ನೇಹ
ಒಡಲವಸರ - ಜೀವನದ ಅಗತ್ಯ
ಒಡವೆರೆ - ಚೆನ್ನಾಗಿ ಬೆರೆ
ಒಡೆಕಾರ - ಭೇದಭಾವ ಹುಟ್ಟಿಸುವವ
ಒಡೆಯರು - ಶರಣರು
ಒತ್ತೆ - ವಿಟನೊಂದಿಗೆ ಮಾಡಿಕೊಂಡ ಒಪ್ಪಂದ
ಒದಗ - ಒದಗುವಿಕೆ
ಒಪ್ಪ - ಹೊಳಪು, ಮೆರುಗು
ಒಪ್ಪಚ್ಚಿ - ಒಂದು ಸ್ವಲ್ಪ
ಒಮ್ಮನ - ಒಂದು ಮನಸ್ಸು, ಒಂದು ಮಾನ ಪ್ರಮಾಣ
ಒಯ್ಯನೆ - ಸರಿಯಾಗಿ
ಒರೆ - ಒರೆಗಲ್ಲಿಗೆ ಹತ್ತಿದಷ್ಟು ಬಂಗಾರ
ಒರೆ - ಖಡ್ಗವನ್ನು ಮುಚ್ಚಿಡುವ ಹೊದಿಕೆ
ಒರೆಯಾವು - ಬಂಜೆ ಆಕಳು, ತುಂಟ ಆಕಳು, ಕರುವಿದ್ದ ಆಕಳು
ಒರಲೆ - ಒಂದು ವಿಧದ ಕ್ರಿಮಿ
ಒರಳ - ಉರುಳು(?), ಕುಟ್ಟುವಕಲ್ಲು
ಒಲವರ - ಪ್ರೀತಿ
ಒಳಗುಂದದ - ಸ್ವಲ್ಪವೂ ಕುಂದದ
ಒಳಬೊಳ್ಳೆ - ಒಳಗೆ ತಿರುಳಿಲ್ಲದುದು, ಟೊಳ್ಳು
ಒಳರು - ಇರುವರು
ಒಳ್ಳೆ - ನೀರಹಾವು
ಓಗರ - ಅನ್ನ, ಬೋನ
ಓಜುಗಟ್ಟಿಗೆ - ವಿದ್ಯಾರ್ಥಿಯನ್ನು ದಂಡಿಸಲು ಬಳಸುವ ಕೋಲು
ಓಜೆ - (ತಾಳದ) ಕ್ರಮ
ಓಟೆ - ಬೀಜ
ಓಡು - (ಹುರಿಯುವ) ಹಂಚು
ಓರಂತೆ - ಒಂದೇರೀತಿ
ಓರೆಗಲ್ಲ - ಒರಟು ಕಲ್ಲು
ಓಲಗ - ಸಭೆ

ಓಲಾಡು - ಪ್ರೀತಿಸು
ಓಲೆ - ವಿವಾಹ ಸಂಕೇತವಾದ ಕಿವಿಯ ಆಭರಣ
ಓಲೆಕಾರ - ಸಶಸ್ತ್ರ ಸೈನಿಕ
ಓಲೆಯಕಾರ - ಪತ್ರ ಹಂಚುವ ವ್ಯಕ್ತಿ
ಓವರಿ - ಒಳಮನೆ
ಓಸರ - ವಾಲುವಿಕೆ
ಓಸರಿಸು - ಸರಿದು ಹೋಗು

ಕ-ಖ

ಕಂಗಳ ಪಟಲ - ಕಣ್ಣಿನ ಪರಿ
ಕಂಚು - ಪಾತ್ರೆ
ಕಂತೆ - ಜೋಳಿಗೆ
ಕಂದಲು - ಹಾಲಿಗಾಗಿ ಬಳಸುವ ಪಾತ್ರೆ
ಕಂದೆರವು - ಕಣ್ಣು ತೆರೆಯುವಿಕೆ, ಪ್ರಕಟ
ಕಂಪಿತ - ಅಲುಗಾಡುವವ
ಕಂಬಳ - ದಿನಗೂಲಿ
ಕಂಬಿ - ಕಬ್ಬಿಣದ ಸಣ್ಣಕೋಲು
ಕಕ್ಕಸ - ಕರ್ಕಶ
ಕಕ್ಷ - ಬಗಲು
ಕಚ್ಚು - ಅಪ್ಪು
ಕಜ್ಜ - ಕಾರ್ಯ
ಕಟಿಹಾದ - ಒಣಗಿದ
ಕಟ್ಬಣೆ - ಕಟ್ಟಳೆ, ವಿಗ್ರಹ
ಕಟ್ಬರಸು - ಸಮರ್ಥ ಅರಸು
ಕಟ್ಟಳೆ - ನಿಯಮ
ಕಟ್ಬಾಚಾರಿ - ಆಚಾರದಲ್ಲಿ ನಿಷ್ಠುರನಾಗಿರುವವನು
ಕಟ್ಬೊಡೆಯ - ನಿಷ್ಠುರ ಒಡೆಯ
ಕಟ್ಬೋಗರ - ರುಚಿಯಾದ ಅನ್ನ
ಕಡವರ - ಬಂಗಾರ
ಕಡಹ - ಕಂಡರಣೆ
ಕಡಿಹ - ತುಂಡು
ಕಡೆಗಾಣಿಸು - ಹೊಂದಿಸು
ಕಡೆಗೋಡಿವರಿ - ದಡ ತುಂಬಿಸೂಸು
ಕಡೆಯಾಣಿ - ಶುದ್ಧಬಂಗಾರ
ಕಣಜ - ಧಾನ್ಯದ ಸಂಗ್ರಹಣೆ
ಕಣಿ - ಕಲ್ಲುತುಂಡು
ಕತ್ತೆಗಾಹಿ - ಕತ್ತೆಕಾಯುವವ
ಕದಡ - ರಾಡಿ, ಹೊಲಸು
ಕದುಬು - ಮುತ್ತು, ಬಲತ್ಕಾರ
ಕನ್ನ - ಕಳವು
[ಕನ್ನಗಳ್ಳ] - ಕಿಂಡಿಕೊರೆದು ಕಳವು ಮಾಡುವವ
ಕನ್ನಡ - ಪರದೆ, ತೆರೆ
ಕನ್ನೆಯ ಸ್ನೇಹ - ಋತುಮತಿಯಾಗದ ಹೆಣ್ಣಿನಲ್ಲಿರುವ ಕಾಮ
ಕಪಾಲ - ತಲೆಬುರುಡೆ
ಕಪಿತ್ಥ - ಬೆಳುವಲಕಾಯಿ
ಕಪ್ಪಡ - ಬಟ್ಟೆ
ಕಪ್ಪರ - ಊಟದ ಪಾತ್ರೆ
ಕಬ್ಬಿಸಿಲು - ಅತಿಯಾದ ಬಿಸಿಲು
ಕಮಠ - ಆಮೆ
ಕಮಲಕರ್ಣಿಕೆ - ಕಮಲದ ಬೀಜಕೋಶ
ಕಮ್ಮಟ - ಕರ್ಮಸ್ಥಾನ, ಟಂಕಸಾಲೆ
ಕಮ್ಮನೆ - ಸುವಾಸನೆಯುಕ್ತ
ಕಮ್ಮರಿ - ಜಲಪಾತ
ಕರಕಷ್ಟ - ಕೀಳು
ಕರಕು - ಕಿಲುಬು
ಕರಟ - ಕಾಗೆ
ಕರಂಡ - ಪೆಟ್ಟಿಗೆ
ಕರಡ - ಒಂದು ವಿಧದ ಹುಲ್ಲು
ಕರಣ - ಪಂಚಕರಣ: ಕಣ್ಣು, ಕಿವಿ, ಮೂಗು, ಬಾಯಿ, ತ್ವಚೆ
ಕರಣ ಮಥನ - ಇಂದ್ರಿಯಗಳ ಘರ್ಷಣೆ
ಕರಣವೃತ್ತಿ - ಪಂಚೇಂದ್ರಿಯಗಳ ಗುಣಧರ್ಮ
ಕರತಳಾಮಳಕ - ಅಂಗೈ ಮೇಲಿನ ನೆಲ್ಲಿಕಾಯಿ
ಕರಣೇಂದ್ರಿಯ - ಕಣ್ಣು, ಕಿವಿ, ಮೂರು, ಬಾಯಿ, ತ್ವಚೆಗಳೆಂಬ ಐದು ಇಂದ್ರಿಯಗಳು

ಕರಿಗೊಳ್ಳು - ಹೆಪ್ಪುಗಟ್ಟು, ಮೂರ್ತಿಗೊಳ್ಳು
ಕರು - ಎರಕ
ಕರುಳ ಕಲೆ - ಕರುಳಿನ ಗುರುತು
ಕರ್ಕಸದ ವೀಧಿ - ಒರಟಾದ ದಾರಿ
ಕರ್ತ - ಒಡೆಯ
ಕರ್ತಾರ - ದೇವ, ಬ್ರಹ್ಮ
ಕರ್ದಮ - ಕೆಸರು
ಕರ್ಮಕಪಟ - ಪೂರ್ವಜನ್ಮದ ಪಾಪಕೃತ್ಯ
ಕರ್ಮಕಾಂಡಿ - ವೇದದಲ್ಲಿ ಹೇಳಲಾದ ಕರ್ಮಗಳನ್ನು ಪಾಲಿಸುವವನು
ಕರ್ಮಸ್ಥಿತಿ - ಪೂರ್ವಜನ್ಮದ ಪುಣ್ಯಪಾಪ
ಕಲಶ - ಕೊಡ
ಕಲ್ಲಿ - ಬಲೆ
ಕಲ್ಪವೃಕ್ಷ - ಬೇಡಿದುದನ್ನು ನೀಡುವ ದೇವಲೋಕದ ಮರ
ಕಲ್ಕುಡಿಗ - ಶಿಲ್ಪಿ
ಕವಚ - ಚರ್ಮ
ಕವಾಟ - ಬಾಗಿಲು
ಕಳ - ನೀಚ, ಕಣ, ಯುದ್ಧಭೂಮಿ
ಕಳಂಕ - ಚಂದ್ರನಲ್ಲಿರುವ ಕಪ್ಪುಕಲೆ
ಕಳಲೆ - ಬಿದಿರಿನ ಚಿಗುರು
ಕಳೆ - ತೇಜ,ಲಿಂಗ
ಕಳೆದುಕೊಳ್ಳು - ಸೆಳೆದುಕೊಳ್ಳು
ಕಾಂಸ್ಯ - ಕಂಚು
ಕಾಕ - ಕಾಗೆ
ಕಾಕಪಿಕ ಸಂಧಾನ - ಗೂಡಿನಲ್ಲಿ ಕೋಗಿಲೆಯಿಟ್ಟ ತತ್ತಿಯನ್ನು ಕಾಗೆ ಮರಿಮಾಡುವಿಕೆ
ಕಾಕೂಳು - ಕೆಟ್ಟ ಅನ್ನ
ಕಾಕೋಳಿ - ಕಾಡುಕೋಳಿ
ಕಾಟಿ - ದ್ರವರೂಪದ ಸಾಮಾನ್ಯ ಅಡಿಗೆ
ಕಾಡಬೆರಣೆ - ಕಾಡುಕುಳ್ಳು
ಕಾಣಿ - ಸಣ್ಣ ನಾಣ್ಯ
ಕಾಣಿಯಾಚಿ - ಪಿತ್ರಾರ್ಜಿತ ಆಸ್ತಿ
ಕಾಣ್ಕೆ - ದರ್ಶನ
ಕಾಬವ - ದಾರ್ಶನಿಕ
ಕಾಮ - ಸ್ಪರ್ಶಸುಖದ ದೇವತೆ
ಕಾಮರ - ಕೆಟ್ಟಮರ
ಕಾಮಾರಿ - ಶಿವ
ಕಾಮ್ಯಾರ್ಥ - ಬಯಸಿದ ವಸ್ತು
ಕಾಯಜೀವಿ - ಭೌತವಾದಿ
ಕಾರುಕ - ಕಂಬಾರ, ಶಿಲ್ಪಿ
ಕಾರ್ಗಾಲ - ಮಳೆಗಾಲ
ಕಾರ್ಪಾಸ - ಹತ್ತಿ
ಕಾರ್ಬೊನ್ನ - ಕಬ್ಬಿಣ
ಕಾಲ - ಯಮದೇವತೆ
ಕಾಲಾಗ್ನಿ - ಲೋಕ ನಾಶಪಡಿಸುವ ಬೆಂಕಿ
ಕಾಲಾಂತಕ - ಶಿವ
ಕಾವಳಿ - ಕತ್ತಲೆ
ಕಾಷಾಂಬರ - ಕಾವಿಬಟ್ಟೆ
ಕಾಷ್ಠ - ಕಟ್ಟಿಗೆ
ಕಾಳ - ಕತ್ತಲೆ
ಕಾಳಕೂಟ - ಸಮುದ್ರಮಥನದಲ್ಲಿ ಉದ್ಭವವಾದ ಮಹಾವಿಷ
ಕಾಳಿಕೆ - ಕಪ್ಪು, ದೋಷ
ಕಾಳುಗಿಚ್ಚು - ಕಾಡುಗಿಚ್ಚು
ಕಾಳ್ಗಡಲು - ಪ್ರಳಯ ಸಮುದ್ರ
ಕಾಳ್ನುಡಿ - ಕೆಟ್ಟಮಾತು
ಕಿಂಕಲ - ಕಿಂಕರತ್ವ, ಸೇವೆ
ಕಿಂಚಿತು - ಸ್ವಲ್ಪ
ಕಿರುಕುಣಿಕೆ - ಕಿರುಬೆರಳು
ಕಿರುಕುಳ - ಸಾಮಾನ್ಯ
ಕಿಗ್ಗಡಲ - ಸಣ್ಣಸಮುದ್ರ
ಕಿಗ್ಗೊಂಬು - ಕಿರಿಯ ರೆಂಬೆ
ಕಿರುವಳ್ಳ - ಸಣ್ಣಹಳ್ಳ
ಕಿಲ್ಬಿಷ - ಕಿಲುಬು
ಕಿಸುಕುಳ - ಕ್ಷುದ್ರ
ಕೀಟಕ - (ಜೇಡ)ಹುಳ
ಕೀರ್ತಿಮುಖ - ದೇವಾಲಯದ ಸಿಂಹಾಕೃತಿಯ ಶಿಲ್ಪ

ಕೀಲ - ಕಟ್ಟುವಿಕೆ, ಗುಟ್ಟು
ಕೀಸಿ - ಗೀಚಿ, ರೇಖೆಯಾಗಿ
ಕೀಳ್ - ಕರು, ಕೀಲು
ಕುಂಜರ - ಆನೆ
ಕುಂಡಲಿಗ - ಉಂಗುರು ಆಕಾರದ ಕ್ರಿಮಿ
ಕುಂಬಿನಿ - ಪೃಥ್ವಿ
ಕುಂಭಿಪಾತಕ - ಕುಂಭಿ ಹೆಸರಿನ ನರಕ
ಕುಂಭೀನರಕ - ನರಕದ ಒಂದು ಪ್ರಕಾರ
ಕುಕ್ಕುಟ - ಕೋಳಿ
ಕುಕ್ಕುರ - ನಾಯಿ
ಕುಕ್ಕುಳ - ಕುದಿಯುವುದನ್ನು ಸೂಚಿಸುವ ಅನುಕರಣ ಶಬ್ದ, ತೀವ್ರವಾಗಿ ಕುದಿ
ಕುಕ್ಕೊಂಬು - ಕೂವಕೊಂಬ, ಹಡಗಿನ ನಡುಗಂಬ
ಕುಚಿತ - ಕುತ್ಸಿತ, ಕ್ಷುದ್ರ
ಕುಟುಕ - ಗುಟುಕು
ಕುಡಿತೆ - ಸೆರೆ, ಪ್ರಮಾಣ
ಕುತ್ತರಿ - ಮೆದೆ
ಕುತ್ತು - ಬಾಗು
ಕುದುರ - ಗೋಡೆ
ಕುನ್ನಿ - ಗಂಡುಮಗು
ಕುಯಿದು - ಕೊಯ್ದು
ಕುರುಹು - ಗುರುತು, ಸ್ವರೂಪ
ಕುರುಹಿನ ನರಕ - ನಿರ್ದಿಷ್ಟ ನರಕ
ಕುರುಳು - ಕೂದಲು
ಕುಲಜೆ - ಒಳ್ಳೆಯ ಕುಲದವಳು
ಕುಲಾಲ - ಕುಂಬಾರ
ಕುಲಿಶ - ಸಿಡಿಲು
ಕುಸುಕು - ಮೆಲ್ಲಗೆ ಕುಟ್ಟು
ಕುಳ - ಕುಲ, ಸಮೂಹ
ಕುಳಿ - ತಗ್ಗು
ಕೂಟ - ಸಾಮರಸ್ಯ,ಕೂಡುವಿಕೆ
ಕೂಪ - ಬಾವಿ
ಕೂಪರು - ಪ್ರೀತಿಯವರು
ಕೂರಂಬು - ಹರಿತ ಬಾಣ
ಕೂರಲಗು - ಹರಿತವಾದ ಖಡ್ಗ
ಕೂರ್ತು - ಪ್ರೀತಿಯಿಂದ
ಕೂರ್ಮ - ಆಮೆ
ಕೂರ್ಮನ ಶಿಶುವಿನ ಸ್ನೇಹ - ಮರಿ ಆಮೆ ತಾಯಿ ಆಮೆಯನ್ನು ನೆನೆದರೆ ಸಾಕು ಹೊಟ್ಟೆ ತುಂಬುವ ರೀತಿ
ಕೂಸು - ಹೆಣ್ಣು ಮಗು
ಕೆಂಡಗಣ್ಣ - ಶಿವ
ಕೆಂಬೋತ - ಕೆಂಬೂತ, ನವಿಲನ್ನು ಅನುಕರಣ ಮಾಡುವ ಹಕ್ಕಿ, ಸಾಂಬಾರ ಕಾಗೆ
ಕೆಚ್ಚ - ಕೆಂಪು
ಕೆಚ್ಚು - ಕಾಂಡದ ಒಳಗಿನ ಗಟ್ಟಿಭಾಗ
ಕೆಟ್ಟವ - ಹಾನಿಗೆ ಒಳಗಾದವ
ಕೆಡೆ ಒಡೆದು - ಎಡವಿ ಬಿದ್ದು
ಕೆನ್ನೆ - ಕಪೋಲದ ಮೇಲ್ಬಾಗ
ಕೆಮ್ಮನೆ - ವ್ಯರ್ಥ
ಕೆಯ್ - ಹೊಲ, ಬತ್ತದ ಸಸಿ
ಕೆಲ - ಪರಿಸರ, ಹತ್ತಿರ
ಕೆಲೆ - ಕೂಗು
ಕೇಣ - ಮಗ್ಗದ ದಾಸು ಹೊಕ್ಕು ರೂಪದ ನೂಲು
ಕೇಣಸರ - ಮಾತ್ಸರ್ಯ
ಕೈಗಧಿಕ - ಕೈಗೆ ಭೂಷಣ
ಕೈತಲೆ - ಅನುಕೂಲ
ಕೈದು - ಖಡ್ಗ
ಕೈದೆಗೆ - ಕೈಯನ್ನು ಹಿಂದಕ್ಕೆ ತೆಗೆ
ಕೈಧಾರೆ - ಜಲಧಾರಾ ಪೂರ್ವಕ ಕನ್ಯಾದಾನ ಮಾಡುವ ವಿಧಾನ
ಕೈಮಾಡು - ದಾಳಿಮಾಡು
ಕೈವಾರ - ಸ್ತುತಿ, ಸೇವೆ
ಕೈವಾರಿ - ಹೊಗಳುವವ

ಕೈಸಾರು	- ವಶವಾಗು	**ಗ-ಘ**	
ಕೊಂಡಮಾರಿ	- ಬೆಟ್ಟದ ಮಾರಿದೇವತೆ	ಗಂಜಳ	- ಹೊಲಸು ವಾಸನೆ
ಕೊಂಬ	- ಗಿಡದ ರೆಂಬೆ, ಅಹಂಕಾರ	ಗಂಜಿಗುಡಿಹಿ	- ಗಂಜಿ ಕುಡಿಯುವವ
ಕೊಂಬಲ್ಲಿ	- (ಹೆಣ್ಣು)ತೆಗೆದುಕೊಳ್ಳುವಲ್ಲಿ	ಗಂಡುಗೆದರು	- ಆರ್ಭಟಿಸು
ಕೊಕರ	- ಕೊಕ್ಕರೆ, ಬಕಪಕ್ಷಿ	ಗಂಧರಾಜ	- ಮದ್ದಾನೆ
ಕೊಗ್ಗೆಸರ	- ಕೊಳೆತ ಕೆಸರು	ಗಡಿ	- ಸೀಮೆ
ಕೊಟ್ಟಣ	- ಪುಕ್ಕಟೆಯಾಗಿ ಧಾನ್ಯವನ್ನು ಕುಟ್ಟಿಕೊಡುವಿಕೆ	ಗಡಿಗೆ	- ಕಂಬದ ಕೆಳಭಾಗ
		ಗಣಮೇಳಾಪ	- ಶರಣ ಸಮುದಾಯದ ಗೋಷ್ಠಿ
ಕೊಟ್ಟಿ	- ಕೆಟ್ಟ	ಗದಕ	- ಮೋಸ
ಕೊಡುವಲ್ಲಿ	- (ಹೆಣ್ಣು) ಕೊಡುವಲ್ಲಿ	ಗನ್ನ	- ಮೋಸ
ಕೊತ್ತಿ	- ಬೆಕ್ಕು	ಗಮಿಸು	- ವರ್ತಿಸು
ಕೊನರು	- ಚಿಗಿ	ಗರ	- ಗ್ರಹ, ಭೂತ
ಕೊನೆವಾಳೆ	- ಗೊನೆಬಿಟ್ಟ ಬಾಳೆ	ಗರಳ	- ವಿಷ
ಕೊಲ್ಲಿ	- ತುಂಟ	ಗರಿ	- ಬಾಣದ ತುದಿಗೆ ಕಟ್ಟಿದ ಹಕ್ಕಿಯ ಗರಿ
ಕೊಲ್ಲೆ	- ಚೂಪಾದ ದಂಟು		
ಕೊಳಗ	- ಧಾನ್ಯ ಅಳೆಯುವ ಪಾತ್ರೆ	ಗರಿಗಟ್ಟು	- ಬಲಹೊಂದು
ಕೊಳುಗುಳ	- ರಣಭೂಮಿ	ಗುರುಗ	- ಗರಿಕೆ
ಕೋಟರ	- ಪೊಳ್ಳು	ಗರುವ	- ಗರ್ವ, ದೊಡ್ಡಸ್ತಿಕೆ
ಕೋಟಲೆ	- ತೊಂದರೆ	ಗಸಣೆ	- ಕಷ್ಟ, ಆಯಾಸ, ತೊಂದರೆ
ಕೋಡುಗಲ್ಲು	- ಶಿಖರ	ಗಹ್ವರ	- ಗವಿ
ಕೋದಂಡ	- ಬಿಲ್ಲು	ಗಳಹು	- (ವ್ಯರ್ಥವಾಗಿ) ಹೇಳು, ಬೊಗಳು
ಕೋಲು	- ಬಾಣ		
ಕೋಲಾಟಿಕ	- ಡೊಂಬ	ಗಳಿಗೆ	- ದೊಡ್ಡ ಬುಟ್ಟಿ
ಕೋವೆ	- ಕೊಳವೆ	ಗಳೆ	- ಕೋಲು
ಕೋಳು	- ಸೆರೆ	ಗಾಂಧರ್ವ	- ಸಂಗೀತವಿದ್ಯೆ
ಕ್ರಯ ವಿಕ್ರಯ	- ಖರೀದಿ ಮಾರಾಟ	ಗಾಡಿಗ	- ಮನೆಯ ಜಗುಲಿಯ ಮೇಲೆ ಪೂಜಿಸಲ್ಪಡುವ ಭೂತ, ಸಾಮಾನ್ಯ
ಕ್ಷಣಿಕ	- ಮಿಂಚು		
ಕ್ಷಾರ	- ಉಪ್ಪು		
ಕ್ಷೀರಸಾಗರ	- ಹಾಲ ಸಮುದ್ರ	ಗಾತ್ರ	- ದೇಹ, ಘನ
ಕ್ಷುತ್	- ಹಸಿವು	ಗಾರುಡ	- ಹಾವನ್ನು ವಶಪಡಿಸಿಕೊಳ್ಳುವ ವಿದ್ಯೆ
ಕ್ಷುಧೆ	- ಹಸಿವು	ಗಾರುಡಿಗ	- ಮಂತ್ರವಾದಿ
ಖಗ	- ಪಕ್ಷಿ	ಗಾವಲಿಗ	- ಕಾವಲುಗಾರ
ಖಟ್ವಾಂಗ	- ಶಿವನು ಹಿಡಿದಿರುವ ಎಲುವಿನ ಆಯುಧ	ಗಾವಿಲ	- ಸಾಮಾನ್ಯವ್ಯಕ್ತಿ
		ಗಾವುದ	- ನಾಲ್ಕುಹರದಾರಿ
ಖತಿ	- ಹಾಳಾಗುವಿಕೆ	ಗಾಹು	- ವಂಚನೆ
ಖೇಚರ	- ದೇವತೆ		

ಗಾಹುಗಳ್ಳ - ಮೋಸ ಮಾಡುವ ಕಳ್ಳ
ಗಿಣ್ಣಲು - ಗಿಂಡಿ
ಗಿಳಿಯೋದು - ಗಿಳಿ ಭವಿಷ್ಯ ಹೇಳುವುದು
ಗುಂಗಿ - ಸಾಮಾನ್ಯ
ಗುಂಡಿಗೆ - ಪಾತ್ರೆ
ಗುಂಪ - ಆಳ
ಗುಜ್ಜನಾಯಿ - ಸಣ್ಣನಾಯಿ
ಗುಟಿಕೆ - ಗುಳಿಗೆ
ಗುಡಿಗಟ್ಟು - ಸಂತೋಷ ಪಡು
ಗುಡುಗ - ಹುಡದಿ, ಕಬಡ್ಡಿ ಆಟ
ಗುಳ್ಪು - ಆಳ
ಗುತ್ತಗೆ - ನೋಡುವ ಉಪಕರಣ
ಗುದಿಗೆ - ಬಡಿಗೆ
ಗುಪ್ತಪಾತಕಿ - ರಹಸ್ಯವಾಗಿ ಪಾಪಕಾರ್ಯ ಮಾಡುವವ
ಗುರುತಲ್ಪಕ - ಗುರುವಿನ ಹೆಂಡತಿಯ ಸಂಬಂಧವಿಟ್ಟುಕೊಂಡವ
ಗುಳ್ಳೆ - ಗುಡ್ಡೆ, ಸಣ್ಣ
ಗೂಡು - ಅಶ್ರಯ, ಮನೆ, ಕೊಯ್ದು ಪೈರಿನ ಬಣವೆ
[ಗೂಡು]ಗೂರು - ಬಾಗು
ಗೂಡುವೋಗು - ಬಾಗು
ಗೂಳ - ಬೆಲ್ಲ
ಗೂಡಾರ - ಡೇರೆ
ಗೆಜ್ಜಲ - ಗೆದ್ದಲು
ಗೆಯ್ - ಒಕ್ಕಲುತನ ಮಾಡು
ಗೆಯಿಸು - ಮಾಡು
ಗೆಲ್ಲಗೂಳಿ - ಕಪಟ ಜಯಶಾಲಿ
ಗೊಂದಣ - ಗೊಂದಲ
ಗೊಂದಿ - ಸಂದಿ
ಗೊಜಡು - ಗೊಂದಲ
ಗೊಡ್ಡಾಟ - ವ್ಯರ್ಥ
ಗೊತ್ತು - ನೆಲೆ, ಗುರಿ
ಗೊರಜೆ - ಗಿಡಗಂಟಿ, ಶಂಖದ ಹುಳು
ಗೊರವ - ಗುರು
ಗೋಟು - ಮೂಲೆ
ಗೋಣಿ - ಚೀಲ
ಗೋತ್ರ - ವಂಶ ಪರಂಪರೆ
ಗೋಪ - ದನಕಾಯುವವ
ಗೋರಂಜನ - ಆಕಳ ಹೊಟ್ಟೆಯಲ್ಲಿಯ ಹಳದಿ ದ್ರವ್ಯ
ಗೋರಿಕಲ್ಲು - ಬೆಣಚಗಲ್ಲು
ಗೋಲಾಂಗುಲ - ಮಂಗ
ಗೋಸುಂಬೆ - ಬಣ್ಣ ಬದಲಿಸುವ ಪ್ರಾಣಿ
ಗೌರಿ - ಮದುವೆ ಘಟಿಸಬೇಕೆಂದು ಕನ್ನೆ ಪೂಜಿಸುವ ದೇವತೆ
ಗೌಳೆಯ - ಗೋವಳ
ಗ್ರಂಥಿ - ಗಡ್ಡೆ, ಗಂಟು
ಗ್ರಾಸ - ಆಹಾರ
ಘಟ - ದೇಹ, ಕೊಡ
ಘಟಸರ್ಪ - ಸತ್ಯ ಪರೀಕ್ಷೆಗಾಗಿ ಕೊಡದಲ್ಲಿಟ್ಟ ಹಾವು
ಘಟ್ಟ - ಬೆಟ್ಟಗಳ ಶ್ರೇಣಿ
ಘನ - ಪರವಸ್ತು
ಘಾತ - ಆಳ
ಘುಣಾಕ್ಷರ ನ್ಯಾಯ - ಮೂಢನಿಂದ ಕೆಲವೊಮ್ಮೆ ಜರುಗುವ ಜಾಣಕಾರ್ಯ
ಘೃತ - ತುಪ್ಪ
ಘೋರರಸ - ಉಗ್ರರಸ (?)
ಘ್ರಾಣ - ಮೂಗು
ಘ್ರಾಣಿಸು - ವಾಸನೆ ಸ್ವೀಕರಿಸು

ಚ-ಛ

ಚಂಡಿಕ - ಉಗ್ರ
ಚಂದ್ರಾಯುಧ - ಆಯುಧ ವಿಶೇಷ
ಚ [ಕ್ರಿ] - ಕುಂಬಾರ
ಚಕೋರ - ಬೆಳದಿಂಗಳು ಸೇವಿಸುವ ಹಕ್ಕಿ

ಚಕ್ರೇಶ - ಚಕ್ರವರ್ತಿ
ಚಚ್ಚಗೋಷ್ಠಿ - ಚರ್ಚಾಗೋಷ್ಠಿ
ಚತುರ್ದರ್ಶ ಭುವನ - ಹದಿನಾಲ್ಕು ಲೋಕ
ಚತುರ್ವಿಧ ಪದ - ಧರ್ಮ, ಅರ್ಥ, ಕಾಮ, ಮೋಕ್ಷ
ಚದುರಸ - ಚೌಕಾಕಾರ
ಚಬುಕಿ - ಕುದುರೆಗೆ ಬಳಸುವ ಚಾಟಿ
ಚಮ್ಮಾವುಗೆ - ಚರ್ಮದ ಪಾದರಕ್ಷೆ
ಚರ - ಜಂಗಮ
ಚರಣಾಯುಧ - ಕೋಳಿ
ಚಳೆ - ನೀರು ಸಿಂಪಡಿಸು
ಚಾಂಡಾಲ - ಅಸ್ಪೃಶ್ಯ, ಕಟುಕ
ಚಾದಗೆ - ಮಳೆ ಹನಿ ಕುಡಿದು ಜೀವಿಸುವ ಪಕ್ಷಿ,ಚಾತಕ
ಚಿಪ್ಪು - ಸಿಂಪು
ಚಿಲಿಪಾಲು - ಕೆನೆಹಾಲು
ಚಿಲುಮೆ - ಕಾರಂಜಿ
ಚಿಕ್ಕಿತ್ತು - ಸಣ್ಣದು
ಚಿಕ್ಕೆರ - ಕೇರೆಯ ಹಾವು
ಚುಳುಕು - ಚುಲಕ, ಅಂಗೈ ಮಧ್ಯದ ತಗ್ಗುಭಾಗ
ಚೂಡ - ಹುಂಜ
ಚೆಲ್ಲವಾಡು - ಸರಸವಾಡು
ಚೇಗು - ಹಾನಿ
ಚೇಟಿ - ಸೇವಿಕೆ
ಚೇಷ್ಟೆ - ವ್ಯವಹಾರ
ಚೋಹ - ವೇಷ
ಚೌಷಷ್ಟಿ - ಅರುವತ್ನಾಲ್ಕು
ಛಲದಾಳಿ - ಛಲವಂತ
ಛಲ್ಲಿ - ಜಲ್ಲಿ, ಕನ್ನಡಿ
ಛತ್ರ - ಉಚಿತ ಪ್ರಸಾದನಿಲಯ

ಜ-ಝ

ಜಂಗುಳಿ - ಸಾಮಾನ್ಯರ ಸಮೂಹ
ಜಂಘೆ - ಹೆಜ್ಜೆ
ಜಂತ್ರ - ಅಸ್ಥಿಪಂಜರ, ಯಂತ್ರ
ಜಕ್ಕವಕ್ಕಿ - ಚಕ್ರವಾಕ ಪಕ್ಷಿ
ಜಗಗನ್ನ - ದೊಡ್ಡಕಳ್ಳತನ
ಜಜ್ಜರಿಸು - ಜರ್ಜರಿತವಾಗು
ಜಡಚಕ್ರ - ಬೀಸುವ ಕಲ್ಲು
ಜರೆ - ಹೀಯಾಳಿಸು, ಮುಪ್ಪು
ಜರಗ - ಬಂಗಾರ ಕಣಮಿಶ್ರಿತ ಬೂದಿ
ಜರಾಯುಜ - ಗರ್ಭಕೋಶದಿಂದ ಹುಟ್ಟುವ ಜೀವಿ
ಜಲಚರ - ನೀರಿನಲ್ಲಿಯ ಪ್ರಾಣಿ
ಜಲಬಿಂದು - ಸ್ತ್ರೀ ಶ್ರೋಣಿತ ಮತ್ತು ಪುರುಷ ಶುಕ್ಲ
ಜಲ್ಲೆ - ಬಿದಿರಿನ ಗಳ
ಜವ - ಯಮ
ಜವುಗು - ತಂಪು
ಜವೆ - (ಬಾಲದ) ಕೂದಲು
ಜಳ - ಸೆಕೆ
ಜಾತವೇದ - ಬೆಂಕಿ
ಜಾತಿ ಸಂಕರ - ಜಾತಿ ಮಿಶ್ರಣ
ಜಾತ್ಯಂಧ - ಹುಟ್ಟುಗುರುಡ
ಜಾಲಗಾರ - ಮೀನಗಾರ
ಜಾವ - ಏಳೂವರೆ ಗಳಿಗೆ ಕಾಲಪ್ರಮಾಣ
ಜಾವಳಿಗ - ಹೀನವ್ಯಕ್ತಿ
ಜಾಳು - ವ್ಯರ್ಥ
ಜಿನ - ತೀರ್ಥಂಕರ
ಜೀಯ - ಒಡೆಯ
ಜೀವಧನ - ಆಕಳು
ಜುಗ - ಯುಗ
ಜೂಬು - ಯೂಪ, ವಧಸ್ತಂಭ
ಜೋಗಿ - ನಾಥಸಂಪ್ರದಾಯದ ಯತಿ
ಜೋಗೈಸು - ಮೆಟ್ಟು
ಜೋಡು - ಕವಚ

ಜೋಳವಾಳಿ - ಯೋಧ, ಸೈನಿಕ
ಝುಂಕೆ - ಬೆದರಿಸುವಿಕೆ

ಟ

ಟಿಕ್ಕೆ - ಗಾಜಿನ ಮಣಿ
ಟೊಣೆ - ಹೊಡೆ

ಡ-ಢ

ಡಂಗುರ - ಸುದ್ದಿ ಸಾರುವಿಕೆ
ಡಂಬಕ - ಪೊಳ್ಳು ಪ್ರತಿಷ್ಠೆಯ ವ್ಯಕ್ತಿ
ಡಕ್ಕೆ - ಚರ್ಮವಾದ್ಯ
ಡುಂಡುಫಳ - ಫಲವಿಶೇಷ
ಡಿಂಗರಿಗ - ಸೇವಕ
ಢವುಡೆ - ಒಂದು ಬಗೆಯ ಚರ್ಮವಾದ
ಢಾಳಕ - ಕೃತಕ ವ್ಯಕ್ತಿತ್ವದವ

ತ

ತಂಡುಲ - ಅಕ್ಕಿ
ತಂತು - ಎಳೆ, ದಾರ
ತಂಬಟ - ತಮಟೆಯೆಂಬ ವಾದ್ಯ
ತಕ್ರ - ಮಜ್ಜಿಗೆ
ತಕ್ಕೈಸು - ಅಪ್ಪಿಕೊಳ್ಳು
ತಗರ - (<ತರಗ), ಎಣ್ಣೆಯಲ್ಲಿ ಮಾಡಿದ ಖಾದ್ಯ,ಗಂಡುಕುರಿ
ತಗಹು - ಆತಂಕ, ಅಡ್ಡಿ
ತಟಾಕ - ಕೆರೆ
ತಟ್ಟಾರಿದ - ಪೂರ್ಣ ಆರಿದ
ತಟ್ಟುಬಚ್ಚು - ಪಾರಾಗು, ದಾಟು
ತಡಿ - ತಟ, ದಡ
ತಡಗೆಡಹು - ತಡೆದು ಕೆಡಹು
ತಡಹಿ - ಮುಗ್ಗರಿಸಿ
ತತ್ತಲ - ಸಣ್ಣ, ಎಳೆಯ
ತತ್ವಮಸಿ - ಅವನೇ (ಶಿವನೇ) ನಾನು
ತಥಾಪಿ - ಒಂದುವೇಳೆ
ತದ್ದಿನ - ಶ್ರಾದ್ಧ
ತದ್ಗತ - ತತ್ಪರ,ತಲ್ಲೀನ, ಸಮರಸ
ತನುಗುಣ - ದೇಹಗುಣ, ಭೌತಿಕ ಆಕಾಂಕ್ಷೆ
ತಮೋಗುಣ - ಹೆರವರಿಗೆ ಅಹಿತ ಮಾಡಿಯಾದರೂ ಸ್ವಾರ್ಥ ಬಯಸುವ ಸ್ವಭಾವ
ತರಕಟ - ಭಯಂಕರ, ಅತಿ
ತರಕಿ - ಒರಟು
ತರಗೆಲೆ - ಒಣಗಿದ ಎಲೆ
ತರಹರ - ಹೊಂದಿಕೆ, ಲೀನ, ಸಮಾಧಾನ
ತರಳತನ - ಹುಡುಗಬುದ್ಧಿ
ತರಳೆ - ಕನ್ಯೆ
ತರಿ - ಕತ್ತರಿಸು
ತರುವಿಂಧ್ಯ - ಅಡವಿ
ತರೆ - ಒಂದು ಜಾತಿಯ ಮರ
ತಲೆದಂಡೆ - ತಲೆಯನ್ನು ದಂಡವಾಗಿ ಕೊಡುವುದು
ತಲ್ಲೀಯ - ತಲ್ಲೀನ
ತವನಿಧಿ - ನಿರಂತರ ಕೈಗೆ ಬರುವ ಸಂಪತ್ತು
ತವರಾಜ - ಒಂದು ಬಗೆಯ ಸಕ್ಕರಿ
ತಳಿ - ಚೆಲ್ಲು
ತಳಿಗೆ - ಊಟದ ತಟ್ಟೆ
ತಳಿತ - ಚಿಗುರೊಡೆದ
ತಳೆ - ಹೊಂದು, ಧರಿಸು
ತಳ್ಳಿ - ಸ್ನೇಹ,ತಳಕು
ತಾಕು - ತಾಕಲಾಡು
ತಾಗು ನಿರೋಧ - ತಾಪ, ಸಂಕಟ
ತಾಪತ್ರಯ - ಆಧಿದೈವಿಕ, ಆಧ್ಯಾತ್ಮಿಕ, ಆಧಿಭೌತಿಕವೆಂಬ ಮೂರು ತಾಪಗಳು
ತಾಮ್ರಚೂಡ - ಹುಂಜ
ತಾರಾಪಥ - ಆಕಾಶ

ತಾವರೆ - ಕಮಲ
ತಾಳಮಾನ - ಸಂಗೀತದಲ್ಲಿ ತಾಲಪ್ರಮಾಣ
ತಾಳಸಂಪುಟ - ತಾಳುಗೆಯ ಪೆಟ್ಟಿಗೆ
ತಾಳೋಷ್ಠಸಂಪುಟ- ತಾಳುಗೆ ತುಟಿಗಳ ಪೆಟ್ಟಿಗೆ
ತಿಂದಹುದು - ಕಚ್ಚುವುದು
ತಿಂದು - ಕಚ್ಚಿ
ತಿಗುರ - ಸುಗಂಧದ್ರವ್ಯ
ತಿಬ್ಬಳಿ - ಕೊಳ್ಳ
ತಿಮಿರ - ಕತ್ತಲೆ
ತಿರುವು - ಬಿಲ್ಲಿನ ಹೆದೆ
ತಿಲರಸ - ಎಣ್ಣೆ
ತೀರ್ಚು - ತೀರಿಸು, ಕೊನೆಗಾಣಿಸು
ತುಡುಕು - ಬಲಾತ್ಕಾರ ಮಾಡು
ತುಯ್ಯಲ - ಬಿಳಿಯ ಬಣ್ಣದ ಅಡಿಗೆ
ತುರುಚಿ - ನಾಯಿ ತುಳುಸಿ
ತುಷ - ಹೊಟ್ಟು
ತೂಬರ - ತುಂಬರ ಗಿಡ
ತೂರ್ಯ - ಜಾಗ್ರ, ಸ್ವಪ್ನ, ಸುಷುಪ್ತಿಗಳನ್ನು ಮೀರಿದ ನಾಲ್ಕನೆಯ ಅವಸ್ಥೆ
ತೃಣಪುರುಷ - ಹುಲ್ಲು ತುಂಬಿದ ಮಾನವಾಕಾರ
ತೆಂಕ - ದಕ್ಷಿಣದಿಕ್ಕು
ತೆತ್ತಿಗ - ಒಡೆಯ
ತೆರ - ರೀತಿ
ತೆರಕಾರ - ತೆರವುಕಾರ, ನಿರ್ಗಮಿಸುವವ
ತೆರಪ - ತೆರವು
ತೆರಹು - ಅವಕಾಶ
ತೆವರು - ದಿನ್ನೆ
ತೊಂಡಿಲು - ಹೂದಂಡೆ
ತೊಟ್ಟೆಸು - ಬಿಲ್ಲಿಗೆ ಹೂಡಿ ಎಸೆ
ತೊತ್ತು - ಸೇವಕ, ಸೇವಿಕೆ
ತೊಡಚು - ಹೂಡು
ತೊಡರು - ಬಿರುದು ಬಾವುಲಿ, ತೊಡಕು
ತೊಡೆ - ಒರೆಸಿಹಾಕು
ತೊರೆ - ಪ್ರವಾಹ, ಹಳ್ಳ
ತೊಳಸು - ಸುತ್ತುವರಿ
ತೋಟಿ - ಜಗಳ
ತೋಯ - ನೀರು
ತ್ರಾಸು - ತಕ್ಕಡಿ
ತ್ರಾಹಿ - ರಕ್ಷಿಸು
ತ್ರಿವಿಧ ನಿರ್ಣಯ- ಲಿಂಗ, ಜಂಗಮ, ಪ್ರಸಾದ ಸಿದ್ಧಿ
ತ್ವಕ್ಕು - ಚರ್ಮ

ದ-ಧ

ದಂಡಿಗೆ - ಪಲ್ಲಕ್ಕಿ
ದಂದುಗ - ಕಷ್ಟ, ತೊಂದರೆ
ದಕ್ಕ - ಬೆಣೆ, ಕಬ್ಬಿಣದ ಕದಿರು
ದಕ್ಕಾಲಿ - ಕಣ್ಣೊಳಗಿನ ಹೂವು
ದಗ್ಧ - ಸುಟ್ಟ
ದಗ್ಧಪಟ ನ್ಯಾಯ- ಮೂಲರೂಪವಿದ್ದರೂ ಮೂಲಗುಣವಿಲ್ಲದಿರುವಿಕೆ
ದತ್ತೂರ - ಮದಗುಣಿಕೆ
ದರ್ಪಣ - ಕನ್ನಡಿ
ದರ್ಪಹರ - ಶಿವ
ದಮೆ - ಇಂದ್ರಿಯ ನಿಗ್ರಹ
ದವಸ - ಧಾನ್ಯ
ದಶಮುಖ - ರಾಕ್ಷಸ ವರ್ತನೆ
ದಶಾಂಗ - ಧೂಪದ ಪುಡಿ
ದರ್ಶನ - ತೋರಿಕೆ
ದಸರಿ - ರೇಶಿಮೆ
ದಸಿ - ಗೂಟ
ದಳ - ಸೈನ್ಯ
ದಾಯಗಾರಿಕೆ - ಪಾಲುಗಾರಿಕೆ
ದಾಯಾದ್ಯ - ವೈರ
ದಾವಾನಲ - ಕಾಡುಗಿಚ್ಚು
ದಿಂಡ - ದೇಹ
ದಿಂಡುಗೆಡೆ - ಬೀಳು
ದಿಕ್ಪಾಲಕ - ಎಂಟು ದಿಕ್ಕಿನ ದೇವತೆಗಳು: ಇಂದ್ರ, ಅಗ್ನಿ,ಯಮ, ನಿಋತಿ, ವರುಣ, ವಾಯು, ಕುಬೇರ, ಈಶಾನ.

ದಿಗ್ಬಲಿ - ಕೊಂದು ಎಲ್ಲ ದಿಕ್ಕುಗಳಿಗೆ ತೂರುವುದು
ದಿನಮಣಿ - ಸೂರ್ಯ
ದಿಬ್ಯ - ದಿವ್ಯ, ಉಗ್ರ, ಆಣೆ ಪ್ರಮಾಣ
ದಿಮ್ಮಿತ್ತು - ಭಾರ
ದೀಪ್ತಿ - ತೇಜ
ದುರಿತ - ಪಾಪ
ದೃಕ್ - ಕಣ್ಣು
ದೃಷ್ಟ - ವ್ಯಕ್ತ
ಧೃಢಿಮ - ಗಟ್ಟಿಯಾದ
ದೃಷ್ಟನಷ್ಟ - ನಿರಾಕಾರ
ದೃಷ್ಟಿವಾರಿ - ಲಿಂಗವನ್ನು ಎವೆ ಪಿಳುಕಿಸದೆ ನೋಡುವ ವ್ರತಧಾರಿ
ದೇವಗಣ - ಛಂದಸ್ಸಿನ ನಗಣ, ಮಗಣ
ದೇವಾಂಗ - ರೇಶಿಮೆ
ದೇಹಾರ - ದೇಹಕ್ಕೆ ಬೇಕಾದ ಆಹಾರ, ದೇವರ ಪೂಜೆ
ದೋಂಟಿ - ತಪ್ಪಲು ಹರಿಯಲು ಕುರುಬರು ಬಳಸುವ ಕೋಲು
ದೋಹಳ - ಕೇಡು
ದ್ವಿಜ - ಬ್ರಾಹ್ಮಣ
ಧಾತುಗೆಡು - ಶಕ್ತಿಗುಂದು, ಸತ್ವಗೆಡು
ಧಾರಾವಟ್ಟಲು - ಶಿವಲಿಂಗದ ಮೇಲೆ ನೀರು ಧಾರೆಯಾಗಿ ಸುರಿಯಲು ಕಟ್ಟಿದ ಪಾತ್ರೆ
ಧಾವತಿ - ಕಷ್ಟ, ಶ್ರಮ
ಧೂಮ - ಹೊಗೆ
ಧೂಮಕೇತು - ಹೊಗೆಯಂತೆ ಕಾಣುವ ಅನಿಷ್ಟಕಾರಕ ನಕ್ಷತ್ರ
ಧೃತಿ - ಧೈರ್ಯ
ಧೇನು - ಕಾಮಧೇನು, ಆಕಳು

ನ

ನಖ - ಉಗುರು
ನಟ್ಟಾಲಿ - ಕಣ್ಣಿನ ದೋಷ
ನಟ್ಟುವ - ನರ್ತಕ
ನಡೆವೆಣ - (ಹೆಣದಂತೆ) ಅಶಕ್ತನಾಗಿ ನಡೆಯುವವ
ನನೆ - ಮೊಗ್ಗೆ
ನನ್ನಿ - ನಿಜ
ನರವಿಂಧ್ಯ - ಮನುಷ್ಯರೆಂಬವರ ಅಡವಿ, ಊರು
ನರೆ - ಬಿಳಿಕೂದಲು
ನವನೀತ - ಬೆಣ್ಣೆ
ನವನಿಧಿ - ಕುಬೇರನ ಒಂಬತ್ತು ಸಂಪತ್ತುಗಳು: ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ನಂದ, ನೀಲ, ಖರ್ವ
ನಸಿ - ಕಳೆಗುಂದು
ನಸುಗುನ್ನಿ - ಮೈಗೆ ತುರಿ ಹುಟ್ಟಿಸುವ ಸಸ್ಯಪ್ರಕಾರ
ನಳಿನ - ಕಮಲ
ನಳಿನಾಕ್ಷ - ವಿಷ್ಣು
ನಳ್ಳಿಗುಳ್ಳೆ - ಮೀನು, ಏಡಿ
ನಾಗವತ್ತಿಗೆ - ದಾರದಿಂದ ಮಾಡಿದ ಲಿಂಗಕರಡಗೆ
ನಾಗವೇದಿಕೆ - ಕಂಬದ ಮೇಲ್ಭಾಗ
ನಾಡಕೀಡೆ - ಕ್ಷುದ್ರ ಜಂತು
ನಾಡಮಾತು - ವ್ಯರ್ಥ ಮಾತು
ನಾಡ ಮೇಕೆ - ಸಾಮಾನ್ಯ ಕುರಿ
ನಾಣ್ - ನಾಚಿಕೆ
ನಾಣು - ನಾಚಿಕೆ
ನಾಣ್ಯ - ಬೆಲೆಯುಳ್ಳ ಬಟ್ಟೆ
ನಾಭಿಗಳೆಯದ ಪಶು - ಋತುಚಕ್ರವುಳ್ಳ ಗೋವು

ನಾಯಿ ತೇಜ - ಕೀಳು ವ್ಯಕ್ತಿತ್ವ
ನಾರಂಗ - ಕಿತ್ತಳೆ
ನಾರಿ - ಬಿಲ್ಲಿನ ಹೆದೆ (ದಾರ)
ನಾರಿವಾಳ - ತೆಂಗು
ನಾಸಿಕ - ಮೂಗು
ನಿಃಕಲ - ನಿರಾಕಾರ
ನಿಃಕಂಪನ - ಸ್ಥಿರ
ನಿಃಪತಿ - ಪರಿಪೂರ್ಣತೆ, ಸಿದ್ಧಿ
ನಿಗಳ - ಬೇಡಿ, ಕೈಕೋಳ
ನಿಗಳ - ಅಪರಾಧಿಗಳಿಗೆ ತೊಡಿಸುವ ಬೇಡಿ
ನಿಗಮ - ವೇದ
ನಿಚ್ಚ - ನಿತ್ಯ, ನಿರಂತರ
ನಿಟಿಲ - ಹಣೆ
ನಿಧಾನ - ಹೂತಿಟ್ಟ ದ್ರವ್ಯ
ನಿಡುಮುಳ್ಳು - ದೊಡ್ಡಮುಳ್ಳು
ನಿಮ್ಮಡಿ - ನೀವು
ನಿಮಿರ್ - ಎದ್ದುನಿಲ್ಲು
ನಿಬದ್ಧ - ಕಟ್ಟಲ್ಪಟ್ಟ
ನಿಬ್ಬಣ - ಮದುವೆಯ ಮೆರವಣಿಗೆ
ನಿಬ್ಬೆರಗು - ಅತ್ಯಾಶ್ಚರ್ಯ
ನಿರಂಗ - ನಿರಾಕಾರ
ನಿರವಯ - ನಿರಾಕಾರ
ನಿರಾಭಾರಿ - ಸಂಸಾರದ ಅಭಿಮಾನವಿಲ್ಲದವ
ನಿರಾಳ - ಅವ್ಯಕ್ತ
ನಿರಿ - ನಿರಿಗೆ
ನಿರಿಗೆ - ಕ್ರಮ, ಗುರಿ
ನಿರಿಯನಿಕ್ಕಿ ದಾಟು- ಪ್ರಾಮಾಣಿಕತೆಯನ್ನು ಸಾರುವುದಕ್ಕಾಗಿ ನಿರಿಗೆಯನ್ನು ಬಿಚ್ಚಿಹಾಕಿದಾಟುವುದು(?)
ನಿರುತ - ನಿಜ, ಸತ್ಯ
ನಿರ್ಮಾಲ್ಯ - ಮೈಲಿಗೆ, ಪೂಜೆಗೆ ಬಳಸಿದ ಬಾಡಿದ ಹೂವು
ನಿಲವು - ಸ್ವರೂಪ, ಸ್ಥಿತಿ
ನಿರ್ಲೇಪ - ನಿರ್ಮಲ
ನಿವಾಳಿ - ದೃಷ್ಟಿದೋಷ ನಿವಾರಣೆಗಾಗಿ ಆರತಿ ಮಾಡುವುದು
ನಿಶ್ಚಟ - ನಿಷ್ಕಪಟ
ನಿಷ್ಪತ್ತಿ - ಪರಿಪಾಕ, ಮುಕ್ತಿ, ಮಾಗುವಿಕೆ
ನಿಸ್ತರಂಗ - ತರಂಗ ರಹಿತ (ಸಮುದ್ರ)
ನಿಸ್ತರಿಸು - ಸಹಿಸು
ನಿಸ್ಸಾಳ - ಒಂದು ಬಗೆಯ ಚರ್ಮವಾದ್ಯ
ನಿಹಿತ - ವ್ಯವಸ್ಥಿತ
ನಿಳಯ - ಮನೆ
ನಿಕ್ಷೇಪ - ಹೂತಿಟ್ಟ ದ್ರವ್ಯ
ನೀರಬೊಂಬೆ - ಪೃಥ್ವಿ
ನೀರು ಕ್ಷೀರಭೇದ - ಜಲಮಿಶ್ರಿತ ಹಾಲಿನಿಂದ ಹಂಸೆ ಹಾಲನ್ನು ಮಾತ್ರ ಕುಡಿದು ನೀರು ಬಿಡುವುದು
ನೀರುಗಾಗೆ - ನೀರುಕಾಗೆ
ನೀರುಗಿಚ್ಚು - ವಡಬಾಗ್ನಿ
ನುಂಪಟೆ - ನುಣುಪು
ನುಂಪಿತ - ನುಣ್ಪಿತ, ವಿಧೇಯ
ನುಂಪು - ನುಣುಪು
ನುಡಿವೆಣ - (ಹೆಣದಂತೆ) ಅಶಕ್ತನಾಗಿ ನುಡಿಯುವವ
ನುಸುಳು - ಹೆಜ್ಜೆ ತಪ್ಪು
ನೆಗಳ್ - ಉದ್ಭವಿಸು
ನೆನಹು - ಮನಸ್ಸು, ಧ್ಯಾನ
ನೆಪ್ಪ - ನೇರ್ಪು, ಗುರುತು
ನೆಮ್ಮುಗೆ - ಆಧಾರ
ನೆಯ್ - ಎಣ್ಣೆ
ನೆರ - ಮರ್ಮ
ನೆರವಿ - ಸಮೂಹ
ನೆರಹು - ಸೇರಿಸು
ನೆಲನಾಳ್ವ - ಅರಸು
ನೆಲೆವನೆ - ಆಶ್ರಯ
ನೆಲ್ಲ ಗಿಡ - ಬತ್ತದ ಸಸಿ
ನೇಣು - ಹಗ್ಗ, ಜನಿವಾರ

ನೇತಿಗಳೆ - ಅಲ್ಲಗಳೆ, ತಿರಸ್ಕರಿಸು
ನೈದಿಲೆ - ಕಮಲ
ನೊರೆವಾಲು - ಬುರುಗಿನಿಂದ ಕೂಡಿದ ಹಾಲು
ನೋನ್ - ವ್ರತಮಾಡು
ನೋಟದ ಬರುಬ- ಕುರುಡ
ನೋಂಪಿ - ವ್ರತ

ಪ-ಫ

ಪಂಗುಳ - ಹೆಳವ
ಪಂಚೇಂದ್ರಿಯಕ - ಐದು ಇಂದ್ರಿಯಗಳಿಗೆ ಒಳಗಾದವ
ಪಗುಡೆ - ಲೆತ್ತ
ಪಚ್ಚಡಿಸು - ಹೊದಿಸು, ಹಾಸು
ಪಟ - ಬಟ್ಟೆ
ಪಟಹ - ವಾದ್ಯ ವಿಶೇಷ
ಪಡಿ - ಒಂದು ಬಗೆಯ ಪ್ರಮಾಣ
ಪಡಿ ಪದಾರ್ಥ - ಪ್ರತಿಯೊಂದು ಪದಾರ್ಥ,ಊಟದ ವಸ್ತು
ಪಡಿಪುಚ್ಛ - ಪ್ರತಿಯಾಗಿ ಪ್ರಶ್ನಿಸುವುದು
ಪಡಿಹಾರ - ಬಾಗಿಲು ಕಾಯುವವ
ಪಡುಗ - ಉಗುಳುವ ಪಾತ್ರೆ
ಪಡುವ - ಪಶ್ಚಿಮ
ಪಣ್ಯಾಂಗನೆ - ವೇಶ್ಯೆ
ಪತಂಗ - ದೀಪದ ಹುಳ, ಸೂರ್ಯ
ಪದಶಿಲೆ - ಅಡಿಗಲ್ಲು
ಪದಾತಿ - ಸೈನ್ಯ
ಪಯ - ಹಾಲು
ಪರ - ಶ್ರೇಷ್ಠ, ಅನ್ಯ,ಶಿವ
ಪರತರ - ಮೋಕ್ಷ, ಅಧಿಕ ಶ್ರೇಷ್ಠ
ಪರಪಾಕದ್ರವ್ಯ - ಅನ್ಯರು ಸಿದ್ಧಪಡಿಸಿದ ಆಹಾರ ಪದಾರ್ಥ
ಪರಪುರುಷಾರ್ಥ - ಇನ್ನೊಬ್ಬರ ಪುರುಷಾರ್ಥ
ಪರಯೋನಿ ಮುಖ- ಪರಸ್ತ್ರೀಗೆ ಹುಟ್ಟಿದ
ಪರಾಕಿ - ಯತಿಯೊಂದಿಗಿರುವ ಧಾರ್ಮಿಕ ಸ್ತ್ರೀ
ಪರಾಪರ - ಲೌಕಿಕ ಮತ್ತು ಅಲೌಕಿಕ
ಪರಿಣಮಿಸು - ಸಂತೋಷಪಡು
ಪರಿಭವ - ಅಪಹಾಸ್ಯ,ಮರುಹುಟ್ಟು
ಪರಿಯಾಯ - ರೀತಿ
ಪರಿಸ್ಪಂದ - ಸಲಕರಣೆ,ಸಾಧನ, ಪರಿವಾರ
ಪರುಷ - ಲೋಹವನ್ನು ಬಂಗಾರವನ್ನಾಗಿಸುವ ಕಲ್ಲು
ಪರುಷವೇದಿ - ಪರುಷದಿಂದ ಬಂಗಾರವಾಗುವ ಲೋಹ
ಪರುಷವೇಧಿ - ಪರುಷವನ್ನು ಸ್ಪರ್ಶಿಸಿದುದು
ಪಲ್ಲವ - ಎಲೆ
ಪಲ್ಲೈಸು - ಪ್ರಕಟವಾಗು
ಪಶುಪತಿ - ಶಿವ
ಪಸರ - ಹರವಿದ ಅಂಗಡಿ, ಸಂಗ್ರಹ
ಪಹರಿ - ಪಹರೆ
ಪಳುಕ - ಸ್ಫಟಿಕ
ಪಾಕುಳ - ಹೊಲಸು, ಮಲಿನ
ಪಾಣಿ - ಐದು ಕರ್ಮೇಂದ್ರಿಯಗಳಲ್ಲಿ ಒಂದು
ಪಾತಾಳ - ಕೆಳಗಿನ ಲೋಕ
ಪಾತೆ - ಸಸಿ ನೆಡುವ ಮಡಿ
ಪಾದ - ಐದು ಕರ್ಮೇಂದ್ರಿಯಗಳಲ್ಲಿ ಒಂದು

ಪಾದತ್ರಾಣ - ಚಪ್ಪಲಿ
ಪಾದರಗಿತ್ತಿ - ವೇಶ್ಯೆ
ಪಾಯದಳ - ಸೈನ್ಯ
ಪಾರದ್ವಾರ - ವ್ಯಭಿಚಾರ
ಪಾರಾಯಣ - ಅಭ್ಯಾಸ
ಪಾಶ - ಹಗ್ಗ
ಪಾಶಮೋಚನ - ಭವಪಾಶವನ್ನು ನಿವಾರಿಸುವವ
ಪಾಷಂಡಿ - ನಾಸ್ತಿಕ
ಪಾಷಾಣ - ಕಲ್ಲು
ಪಾಳಿ - ಸಮಾನ
ಪಿಕ - ಕೋಗಿಲೆ
ಪಿನಾಕಿ - ಶಿವ
ಪಿಸುಣತ್ವ - ಚಾಡಿಕೋರತನ
ಪಿಪಾಸೆ - ನೀರಡಿಕೆ
ಪಿಪೀಲಿಕ - ಇರುವೆ
ಪುಟ - ಸ್ಫುಟ, ವ್ಯಕ್ತವಾದ,ಹೊತ್ತಿಸಿದ ಬೆಂಕಿ, ಲೋಹ ಕರಗಿಸಲು ಬಳಸುವ ಪಾತ್ರೆ, ಮೂಸೆ
ಪುತ್ಥಳಿ - ಗೊಂಬೆ
ಪುದಿಸಿ - ಹೊದಿಸಿ, ಹೊಂದಿಕೊಂಡು
ಪುನರ್ದೀಕ್ಷೆ - ಒಂದು ಧರ್ಮದ ದೀಕ್ಷೆ ಪಡೆದವರು ಇನ್ನೊಂದು ಧರ್ಮದ ದೀಕ್ಷೆ ಪಡೆಯುವುದು
ಪುನಶ್ಚರಣೆ - ಪುನರುಕ್ತತೆ
ಪುರಾಕೃತ - ಹಿಂದಣ ಜನ್ಮದ ಕರ್ಮ
ಪುರಾತ - ತಮಿಳುನಾಡಿನ ೬೩ ಜನ ಪುರಾತನರು
ಪೂರಾಯ - ಪೂರ್ಣ
ಪೂಷ - ಸೂರ್ಯ, ಭೂಮಿ
ಪೂಸರು - ಪೂಸುವವರು, ಲೇಪಿಸುವವರು
ಪೃಷ್ಠ - ಬೆನ್ನು
ಪೆರತು - ಮತ್ತೊಂದು
ಪೇಯ - ಕರು
ಪೊಡವಿಯೊಡೆಯ - ರಾಜ
ಪೋಟ - ಹೇಡಿ
ಪೋಲಿಕಾರ - ಪೋಲುಕಾರ, ಹಾಳು ಮಾಡುವವ
ಪೌಜು - ಸೈನ್ಯ
ಪ್ರಕೃತಿ - ಮೂಲಸ್ವರೂಪ
ಪ್ರಚ್ಛನ್ನ - ಪರ್ಯಾಯ
ಪ್ರಣವ - ಓಂಕಾರ ಮಂತ್ರ
ಪ್ರತಿದೃಷ್ಟಿ - ಪರಸ್ಪರ ತಿಳಿವಳಿಕೆ
ಪ್ರತಿಪಾದ್ಯರು - ಪ್ರತಿಪಾದನ ಮಾಡುವವರು
ಪ್ರತಿಪಾದಿಸು - ದೂಷಣೆಮಾಡು
ಪ್ರತಿಪಾಲಿಸು - ಸಂರಕ್ಷಿಸು
ಪ್ರತಿಷ್ಠೆ - ಸ್ಥಾಪಿಸಲ್ಪಟ್ಟ ದೈವತ
ಪ್ರಭೈಸು - ಪ್ರಕಾಶಿಸು
ಪ್ರಬೋಧೆ - ಶ್ರೇಷ್ಠಜ್ಞಾನ
ಪ್ರಮಥ - ಬಸವಣ್ಣನ ಸಮಕಾಲೀನ ಶರಣ
ಪ್ರಮಥಾಳಿ - ಶಿವಗಣ
ಪ್ರಮಾದವಶ - ಅಜಾಗರೂಕತನ
ಪ್ರಯೋಗಾಂತರ - ಪರೀಕ್ಷೆ
ಪ್ರಸಂಗ - ಚರ್ಚೆ
ಪ್ರಸನ್ನ - ದಯಾಪೂರ್ಣ
ಪ್ರಾಜ್ಞ - ತಿಳಿದವ
ಪ್ರಾರಬ್ಧ - ವರ್ತಮಾನದ ಕರ್ಮ
ಪ್ರೇತ - ಹೆಣ
ಪ್ರೇತಸೂತಕ - ಹೆಣ ಕಾರಣವಾದ ಮಾಲಿನ್ಯ
ಫಣಾಮಣಿ - ಹೆಡೆಯಲ್ಲಿಯ ರತ್ನ
ಫಣಿ - ಹೆಡೆ, ಹಾವು
ಫಣಿಮಣಿ - ಹಾವಿನ ಹೆಡೆಯ ರತ್ನ
ಫಲದಾಯಕ - ಪ್ರಯೋಜಕ
ಫೇನ - ನೊರೆ

ಬ-ಭ

ಬಂಗಿ - ಮತ್ತೇರಿಸುವ ಹೊಗೆಸೊಪ್ಪು
ಬಂಟ - ತಿಂಗಳು ಪಗಾರದ ವ್ಯಕ್ತಿ, ಯೋಧ
ಬಂಡು - ಮಕರಂದ
ಬಂಡುಗೆಲೆ - ದೊಡ್ಡದಾಗಿ ಮಾತನಾಡು
ಬಂದಿ - ಸೆರೆ
ಬಗದಳ - ಹುಣ್ಣು
ಬಗಿ - ತೋಡು
ಬಚ್ಚಣೆ - ಬಚ್ಚರಣೆ, ಬಣ್ಣಗಾರಿಕೆ
ಬಜಾವಣೆ - ಬಾರಿಸುವಿಕೆ
ಬಟ್ಟೆ - ದಾರಿ
ಬಟ್ಟೆಯ ಸಂಬಳ - ದಾರಿಯ ಸುಂಕ
ಬಡತನ - ಸೂಕ್ಷ್ಮತೆ
ಬಡಿಹಡೆ - ಏಟು ತಿನ್ನು
ಬಡಿಹಾರಿ - ಬಡಿವಾರ ಮಾಡುವವ
ಬಣಗು - ಬಡವ, ಕ್ಷುದ್ರ
ಬಣ್ಣ - ಕಾಂತಿ, ಹೊಳಪು
ಬತ್ತೀಸ - ಮೂವತ್ತೆರಡು
ಬತ್ತೀಸಾಯುಧ - ೩೨ ಆಯುಧಗಳು
ಬಧಿರ - ಕಿವುಡ
ಬಯ್ಚಿಟ್ಟ - ಬಚ್ಚಿಟ್ಟ, ಅಡಗಿಸಿದ
ಬಯ್ಕೆಯ ಕಿಚ್ಚು - ನೀರೊಳಗಿನ ಬೆಂಕಿ
ಬರಬರ - ಬರುಬರುತ್ತ
ಬರಲು - ಒಣ
ಬರಿ ಹುಂಡ - ವ್ಯರ್ಥ ಪುಂಡ
ಬರುಕಟೆ - ನಿರರ್ಥಕ
ಬರುದೊರೆ - ವ್ಯರ್ಥ
ಬರುಬ - ಹೆಳವ, ವ್ಯರ್ಥ
ಬರುಸೂರೆ - ನಾಶ
ಬಲದಾಯಿ - ಮಲತಾಯಿ
ಬಲುದಂಡಿ - ಕೊರಳಗುದ್ದಿ
ಬಲುಹಾಗು - ದೊಡ್ಡದಾಗು
ಬಲ್ಲಿದ - ಬಲಶಾಲಿ
ಬಲ್ಲವಳು - ಸಿರಿವಂತೆ
ಬಲ್ಲಹ - ಅರಸು
ಬವರ - ಯುದ್ಧ
ಬಸಕುತ್ತಬಡು - ಅಣಕಿಸುತ್ತಿರು
ಬಹಿರಂಗ ಶುದ್ಧಿ - ಕ್ರಿಯಾಶುದ್ಧಿ
ಬಳ್ಳ - ಮತ್ತೇರಿಸುವ ವಸ್ತು,ಧಾನ್ಯ ಅಳೆಯುವ ಪಾತ್ರೆ
ಬಳಿದಪ್ಪು - ಸಂಪರ್ಕ ತಪ್ಪು
ಬಳಿನೀರು - ಮಂತ್ರಜಲ
ಬಳ್ಳಿಟ್ಟು - ಬೊಬ್ಬಿಟ್ಟು
ಬಳ್ಳಿವರಿ - ವರ್ಧಿಸು
ಬಳ್ಳು - ನರಿ
ಬಾಣಸ - ಅಡಿಗೆ
ಬಾತೆ - ಪ್ರಯೋಜನ
ಬಾತೆಗೆಟ್ಟ - ಅಪ್ರಯೋಜಕ
ಬಾದಳ - ಬಾದಣ, ಬೆಳಕಿಂಡಿ
ಬಾಯಿ ಬೀಗ - ತುಟಿಗಳಿಗೆ ಕಬ್ಬಿಣ ಬಳೆ ಸೇರಿಸುವ ಕ್ರೂರ ಆಚರಣೆ
ಬಾರನೆತ್ತು - ಚರ್ಮ ಸುಲಿ
ಬಾರ್ತೆ - ವಾರ್ತೆ, ಪ್ರಯೋಜನ
ಬಾವನ್ನ - ಶ್ರೀಗಂಧ
ಬಾವನ್ನಕ್ಷರ - ೫೨ ಅಕ್ಷರ
ಬಾವಲಿ - ಪ್ರತಿಜ್ಞಾಪೂರ್ವಕ ಯೋಧನು ಕಾಲಿಗೆ ಧರಿಸುವ ಆಭರಣ
ಬಾಳಿಲ್ಲದವಳು - ಗಂಡನ ಸುಖವಿಲ್ಲದವಳು
ಬಾಳು - ಖಡ್ಗ
ಬಾಳುವೆಣ - ಹೆಣದಂತೆ ಬದುಕಿರುವವ
ಬಿಂಗ - ಹೊಳೆಯುವ ಒಡವೆ, ಅಭ್ರಕ
ಬಿಂದು - ಮನಸ್ಸು, ನೀರಹನಿ
ಬಿಂಬ - ರೂಪ
ಬಿಟ್ಟಿ - ಉಚಿತವಾಗಿ ಕೆಲಸ ಮಾಡುವುದು
ಬಿಡುಮನರು - ಕ್ಷುದ್ರ ಮನಸ್ಸಿನವರು

ಬಿಡೆ - (ಹತ್ತಿರ) ಬಿಡುವಿಕೆ
ಬಿಡುಮುಡಿ - ಸತ್ಯಾಸತ್ಯತೆ
ಬಿತ್ತು - ಬೀಜ
ಬಿನ್ನಾಣಿ - ಅನುಭವಿ
ಬಿನುಗು - ಕ್ಷುದ್ರ
ಬಿಮ್ಮು - ಬಿಗುವು, ಗರ್ವ
ಬಿಯಗ - ಬೀಗ, ಕೀಲಿ
ಬಿಲ - ತೂತು
ಬಿಲಿ - ಬೆಲೆಗೊಟ್ಟು ಪಡೆ, ಖರೀದಿಸು
ಬಿಲ್ಲನಾರಿ - ಬಿಲ್ಲಿನ ಹೆದೆ
ಬಿಸಜತಂತು - ಕಮಲದ ಎಳೆ
ಬೀಗಿ - ಸಮೃದ್ಧವಾಗಿ
ಬೀಜವೃಕ್ಷ ನ್ಯಾಯ - ಬೀಜ ಮೊದಲೋ ವೃಕ್ಷ ಮೊದಲೋ ಎಂಬ ವಿಚಾರ
ಬೀಯ - ವ್ಯಯ, ವ್ಯರ್ಥ
ಬೀಸರ - ವ್ಯರ್ಥ, ನಾಶ
ಬೀಳುಡೆ - ಮೈಲಿಗೆ ಬಟ್ಟೆ
ಬೀಳುವೆಣ - ಹೆಣದಂತೆ ಬೀಳುವವ
ಬುದ್ಬುದ - ತೆರೆ
ಬೂಟಾಟಿಕೆ - ಜಂಬ
ಬೂತಾಟ - ಸೋಗು
ಬೆಂಗುಂಡು - ಬೈಗುಂಡು, ಹಡಗಿನ ಲಂಗರು
ಬೆಂಗೋಲು - ಬೆನ್ನ ಹಿಂದಿನ ಕೋಲು
ಬೆಂತರ - ವ್ಯಂತರ, ಪಿಶಾಚಿ
ಬೆಂಬಳಿ - ಬೆನ್ನಬಳಿ, ಕ್ರಮ
ಬೆಚ್ಚು - ಬೆಸೆ
ಬೆನಕ - ತೂಕದ ಕಲ್ಲು, ಗಣಪತಿ
ಬೆನವ - ಗಣಪತಿ
ಬೆನ್ನಸಿಡಿ - ಬೆನ್ನಿಗೆ ಕಬ್ಬಿಣ ಬಳೆಸೇರಿಸುವ ಕ್ರೂರ ಆಚರಣೆ
ಬೆಬ್ಬಿಸಿಕೋ - ಉಬ್ಬು
ಬೆರಣಿ - ಕುಳ್ಳು
ಬೆರತುಕೊಳ್ಳು - ಮ[ರ]ಗಟ್ಟು
ಬೆಲೆವೆಣ್ಣು - ಸೂಳೆ
ಬೆಸಗೊಳ್ಳು - ಬೇಡಿಕೊಳ್ಳು
ಬೆಳಗು - ಕನ್ನಡಿ
ಬೆಳವಸಿ - ಬೆಳಸಿ
ಬೆಳಸು - ಪೈರು
ಬೆಳ್ವಾರ - ಬಂಗಾರ ಬೆಸೆಯಲು ಬಳಸುವ ಟಂಕಣ
ಬೆಳ್ಳಿ ಎತ್ತು - ಬಿಳಿಯ ಜಾತಿಯ ಎತ್ತು
ಬೆಳುಹಾಗು - ಭಾರವಾಗು
ಬೇಗೆ - ಬೆಂಕಿ
ಬೇಟ - ಬೇಡುವಿಕೆ, ಸಮಾಗಮ, ಅನುರಾಗ
ಬೇತಾಳ - ದೆವ್ವ
ಬೇಲಿವರಿ - ಬೇಲಿಯಲ್ಲಿ ಹರಿದಾಡು
ಬೇಹ - ಬೇಡುವ, ಅಪೇಕ್ಷಿತ
ಬೇಹು - ಹೊಂಚು, ಗುಪ್ತಸಂದರ್ಭ
ಬೈಕೆಯ - ಬಚ್ಚಿಟ್ಟ
ಬೈಗು - ಸಂಜೆ
ಬೈತಿಡು - ಮುಚ್ಚಿಡು
ಬೈರೂಪ - ಬಹುರೂಪಿ ಕಲಾವಿದ
ಬೊಂತೆ - ಹರಿದ ಬಟ್ಟೆ
ಬೊಕ್ಕಣ - ಕಿಸೆ
ಬೊಕ್ಕಸ - ದ್ರವ್ಯ ಭಾಂಡಾರ
ಬೊಪ್ಪ - ಹಿರಿಯ ತಂದೆ, ದೊಡ್ಡಪ್ಪ
ಬೊಬ್ಬುಲಿ - ಜಾಲಿ
ಬೊಬ್ಬುಳಿಕೆ - ನೀರಗುಳ್ಳೆ
ಬೊಮ್ಮ - ಬ್ರಹ್ಮ
ಬೋಡು - ನೆಗ್ಗು
ಬೋದಿಗೆ - ಕಂಬದ ಮೇಲ್ಭಾಗ
ಬೋಳ - ತಲೆ ಬೋಳಿಸಿಕೊಳ್ಳುವ ಸಂಪ್ರದಾಯದ ಶೈವಯತಿ
ಬೋಳು - ಹಾಳುಹಾಳಾಗು
ಬೋಳೈಸು - ಸಮಾಧಾನ ಪಡಿಸು
ಬೃತಿ - ವೃತಿ

ಬ್ರಹ್ಮಕಪಾಲ - ಬ್ರಹ್ಮನ ತಲೆಬುರುಡೆ
ಬ್ರಹ್ಮೇತಿ - ಬ್ರಾಹ್ಮಣನ ಹತ್ಯೆಕಾರ್ಯ
ಬ್ರಹ್ಮೇತಿಕಾರ - ಬ್ರಾಹ್ಮಣನನ್ನು ಕೊಲ್ಲುವವ
ಭಕ್ತಿಲಂಪಟ - ಭಕ್ತಿಪ್ರಿಯ
ಭಂಗಿ - ನಸೆ ಏರಿಸುವ ವಸ್ತು
ಭಂಡ - ವಸ್ತು
ಭರತ - ಗಾನವಿದ್ಯೆ
ಭರಿತ - ತುಂಬಿಕೊಂಡ
ಭರ್ಗ - ಶಿವ
ಭವಮಾಲೆ - ಮತ್ತೆ ಮತ್ತೆ ಹುಟ್ಟುವುದು
ಭವಿತವ್ಯ - ಬದುಕುವ ವ್ಯವಸ್ಥೆ
ಭಾಂಡ - ಲೋಹ
ಭಾಜನ - ಗುರಿ, ಆಶ್ರಯ, ಊಟದ ತಟ್ಟೆ
ಭಾನು - ಸೂರ್ಯ
ಭಾನುಮಂಡಲ - ಸೂರ್ಯಮಂಡಲ
ಭಾರಣೆ - ಗೌರವ, ಗುರುತ್ವ
ಭಾಷೆ - ಪ್ರತಿಜ್ಞೆ
ಭಾಳಾಂಬಕ - ಶಿವ
ಭಿತ್ತಿ - ಗೋಡೆ
ಭಿನ್ನ - ಕೊರತೆ
ಭುಂಜನೆ - ಸೇವನೆ
ಭೂನಾಗ - ಭೂಮಿಯ ಮೇಲಿನ ಹಾವು
ಭೃತ್ಯ - ಸೇವಕ
ಭೇಕ - ಕಪ್ಪೆ
ಭೇರುಂಡ - ಎರಡು ತಲೆ ಒಂದು ದೇಹವುಳ್ಳ ಪಕ್ಷಿ
ಭೈತ್ರ - ಹಡಗು
ಭೈರೂಪ - ಬಹುರೂಪಿ ಕಲಾವಿದ

ಮ

ಮಂಗಲೋತ್ತರ ಮುಕ್ತಾಯ - ಮಂಗಲಕಾರ್ಯದ
ಮಂಜರ - ಬೆಕ್ಕು
ಮಂಡೂಕ - ಕಪ್ಪೆ
ಮಂಡೆಗೆಲಸ - ತಲೆಬೋಳಿಸುವುದು
ಮಂತುಗೋಲು - ಕಡೆಗೋಲು
ಮಂದಾಗ್ನಿ - ಅಪ್ರಕಟಿತ ಬೆಂಕಿ
ಮಕರ - ಮೊಸಳೆ
ಮಕುಟವರ್ಧನ - ಚಕ್ರವರ್ತಿ
ಮಚ್ಚರ - ಮತ್ಸರ
ಮಚ್ಚು - ಮೆಚ್ಚಿಗೆ
ಮಜೂರಿ - ದಿನಗೂಲಿ
ಮಜ್ಜೆ - ಕೊಬ್ಬು
ಮಡಕೆ - ಗಡಿಗೆ
ಮಡಗು - ಮುಚ್ಚಿಡು
ಮಡಿಲು - ಉಡೆ
ಮಡ್ಡ - ಅಜ್ಞಾನಿ
ಮಣಿಹ - ಕಾರ್ಯ
ಮತ್ತರು - ಭೂಮಿಯ ಒಂದು ಅಳತೆ
ಮತ್ಸ್ಯ - ಮೀನು
ಮಥನ - ಸಂವಾದ
ಮದಕರಿ - ಸೊಕ್ಕಿನ ಆನೆ
ಮದನ - ಕಾಮ
ಮದನಾರಿ - ಶಿವ
ಮದ್ದು - ಔಷಧ
ಮನಕತ - ಮನಃಕ್ಷತ, ವ್ಯಸನ
ಮನೆಯ ಮಗ - ವೇಳೆವಾಳಿ, ಒಡೆಯನಿಗಾಗಿ ಪ್ರಾಣ ನೀಡುವ ಪ್ರತಿಜ್ಞಾಬದ್ಧ ವ್ಯಕ್ತಿ
ಮನ್ನೆಯ - ಮಾಂಡಲಿಕ
ಮಮಕಾಯ - ನನ್ನ ಕಾಯ
ಮಯೂರ - ನವಿಲು
ಮರಾಳ - ಹಂಸ
ಮರಿದಪ್ಪಿದ - ಮರಿಯಿಂದ ಅಗಲಿದ
ಮರೀಚಿ - ಮೃಗಜಲ
ಮರುಜವಣೆ - ಸತ್ತವನನ್ನು ಬದುಕಿಸುವ ಮಣಿ

ಮರುತ - ಗಾಳಿ
ಮರ್ಕಟ - ಮಂಗ
ಮರ್ದನ - ಅರೆಯುವಿಕೆ
ಮಲೆ - ಬೆಟ್ಟ
ಮಸಣವಟ್ಟಿಗೆ - ಸ್ಮಶಾನ
ಮಸಣಿ - ಸ್ಮಶಾನದೇವತೆ
ಮಸಿ - ಬರೆಯುವ ವೃತ್ತಿ
ಮಸುಳು - ಮಸಕಾಗು
ಮಹತೋತ್ತಮ - ಅತ್ಯುತ್ತಮ
ಮಹಿಷಿ - ಎಮ್ಮೆ
ಮಹೀತಳ - ಭೂಮಿ
ಮಳಲಗೌರಿ - ಮದುವೆ ಘಟಿಸಬೇಕೆಂದು ಕನ್ನಿಕೆಯರು ಪೂಜಿಸುವ ಉಸುಬಿನ ಗೌರಿ
ಮಳಲು - ಉಸುಬು
ಮಕ್ಷಿಕ - ನೊಣ
ಮಾಗಿ - ತಂಪು, ಚಳಿ
ಮಾಜದೆ - ಬಿಡದೆ
ಮಾಟ - ಮಾಡುವಿಕೆ, ಕೆಲಸ
ಮಾಣ್ - ಬಿಡು
ಮಾತಿನ ಮಾತು - ಸಾಂಪ್ರದಾಯಿಕ ಹೇಳಿಕೆ, ವೇದ
ಮಾದಂತೆ - ಮಾಣ್ದಂತೆ, ಬಿಟ್ಟಂತೆ
ಮಾನ - (ಸಣ್ಣ) ಅಳತೆ
ಮಾನಿಸ - ಮನುಷ್ಯ
ಮಾನಿಸಗಳ್ಳೆ - ಒಳಗೊಂದು ಹೊರಗೊಂದು ಮನಸ್ಸುಳ್ಳವಳು
ಮಾರಂಕ - ಎದುರಾಳಿ
ಮಾರನ ವೈರಿ - ಶಿವ
ಮಾರಿ - ಮೃತ್ಯುದೇವತೆ
ಮಾಸಾಳು - ತಿಂಗಳು ಪಗಾರದ ಆಳು
ಮಾಳವ ಪಾಳ್ಯ - ಮಾಳವದೇಶದ ಸೈನ್ಯದ ನೆಲೆ
ಮಿಗು - ಪಕ್ವವಾಗು
ಮಿಟ್ಟೆ - ಮಣ್ಣಿನ ಹೆಂಟೆ
ಮಿಟ್ಟೆಯ ಭಂಡ - ಬ್ರಾಹ್ಮಣ
ಮಿಸುನಿಯ ಚಿನ್ನ - ಶುದ್ಧ ಬಂಗಾರ
ಮೀಹ - ಸ್ನಾನ
ಮುಂತಾಗಿ - ಮುಂದಾಗಿ
ಮುಂದುಗೆಡು - ದಿಕ್ಕು ತೋಚದಿರು
ಮುಂಬಲ್ಲು - ಮುಂದಿನ ಹಲ್ಲು
ಮುಕುರ - ಕನ್ನಡಿ
ಮುಖಸಜ್ಜೆ - ಬಾಯಿ
ಮುಕ್ಕಾಲು - ಮೂರು ಕಾಲು ಭಾಗ
ಮುಕ್ತಾಫಳ - ಮುತ್ತು
ಮುಕ್ಕು - ತ್ರುಟಿತ, ಮುರಿದ
ಮುಡುಹಿಕ್ಕು - ಭುಜ ಚಪ್ಪರಿಸಿಕೊಳ್ಳು
ಮುಡುಹು - ಭುಜ, ಹೆಗಲು
ಮುದ್ರಿಕೆ - ಉಂಗುರ
ಮುಮ್ಮಡಿ - ಮೂರು ಪಟ್ಟು
ಮುಯ್ - ಸೇಡು
ಮುಯ್ಯಾನ್ - ಇದಿರಾಗು
ಮುಯ್ಯಾನು - ಸರಿಗಟ್ಟು, ಸಲುಗೆ ತೋರಿಸು,ಹೆಮ್ಮೆಪಡು, ಮನಸ್ಸುಮಾಡು
ಮುರುವು - ದನಗಳ ಆಹಾರ
ಮುರುಗು - ಕೂಗು
ಮುರುಹು - ಕಿವಿಯ ಆಭರಣ
ಮುಸುಕರ್ಮಿ - ಗುಮ್ಮನ ಗುಸುಕ
ಮುಸುಡು - ಮುಖ
ಮೂಕೊರತಿ - ಮೂಗು ಕೊರೆಯಿಸಿಕೊಂಡ ಹೆಣ್ಣು
ಮೂಗವಡು - ಮೂಕನಾಗು
ಮೂಲಸ್ಥಾನ - ಕೇಂದ್ರ ದೇವಸ್ಥಾನ
ಮೂವಿಧಿ - ಮೂರು ಬಗೆಯ ತೊಂದರೆ
ಮೂಷಕ - ಇಲಿ
ಮೃಗತೃಷ್ಣೆ - ಮರೀಚಿಕೆ
ಮೃಗನಾಭಿ - ಕಸ್ತೂರಿ
ಮೃಡ - ಶಿವ
ಮೆಟ್ಟು - ಮೂರು ಕಾಲಿನ ಕಟ್ಟಿಗೆಯ ಎತ್ತರ ಉಪಕರಣ

ಮೆದೆ - ಹುಲ್ಲಿನ ಗುಂಪು
ಮೆಳೆ - ಗಿಡಗಳ ಗುಂಪು
ಮೇರಳ - ಮೇಗಳ
ಮೇರು - ಬಂಗಾರದ ಬೆಟ್ಟ
ಮೇರುಗಿರಿ - ಉತ್ತರ ದಿಕ್ಕಿನ ಒಂದು ಪರ್ವತ
ಮೇಲು ವ್ರತ - ವಿಶೇಷ ವ್ರತ
ಮೇಳನಾಡು - ಸ್ನೇಹಹೊಂದು
ಮೇಳಾಪ - ಸಹವಾಸ
ಮೈಗೊಡು - ಆಶ್ರಯ ನೀಡು
ಮೈತ್ರಿಕೆ - ಮೃತ್ತಿಕೆ, ಮಣ್ಣು
ಮೈಥುನ - ಕಾಮಭೋಗ
ಮೈದೆಗೆ - ಮೈತೋರಿಸು
ಮೈದೊಡಕು - ಅಡೆತಡೆ
ಮೈದೋರು - ಪ್ರಕಟವಾಗು
ಮೈಯನೂರು - ಮೈಗೆ ಚುಚ್ಚು
ಮೈಲಾಗು - ವ್ಯಾಯಾಮ
ಮೊಗೆ - ಪ್ರಕಟವಾಗು, ತೆರೆ, ಕುಡಿ
ಮೊನೆ - ಹರಿತವಾದ ತುದಿ
ಮೊನೆದಗಹು - ಚೂಪಾದ ಆಯುಧದ ತಾಗುವಿಕೆ
ಮೊರಹು - ಮೊರೆಯುವಿಕೆ, ಗರ್ಜನೆ
ಮೊಲೆನಾಗರ - ಮಲರೋಗ, ಮೂರ್ಛೆರೋಗ
ಮೋಟ - ಕೈಯಿಲ್ಲದವ

ಯ-ರ

ಯಮಗತಿಗರು - ಯಮಲೋಕಕ್ಕೆ ಹೋಗುವವರು
ಯಾಚಕತ್ವ - ಬೇಡಿಕೊಳ್ಳುವುದು
ಯಾನ - ಸಂಚಾರ
ಯೋಗದಾಗು - ಯೋಗಸಿದ್ಧಿ
ರಂಜಕ - ಸೊಗಸುಗಾರ
ರಂಜನೆ - ಸೌಂದರ್ಯ
ರಗಟೆ - ಹರಿದ ಹೊದಿಕೆ
ರಚ್ಚೆ - ರಸ್ತೆ, ದಾರಿ
ರಜ - ಧೂಳು, ಸ್ವಾರ್ಥ ಪರಾರ್ಥಗಳನ್ನು ಬಯಸುವ ಗುಣ
ರಜಸ್ಸೂತಕ - ಸ್ತ್ರೀಯ ಋತು ಕಾರಣವಾದ ಮಾಲಿನ್ಯ
ರಜ್ಜು - ಹಗ್ಗ
ರತಿ - ತೃಪ್ತಿ
ರಥಿಕ - ಬಡಿಗ
ರಸದಾಳಿ ಕಬ್ಬು - ಶ್ರೇಷ್ಠ ಕಬ್ಬು
ರಸಬದ್ಧ - ಮನೋಹರವಾದ
ರಸರಂಜನೆ - ದ್ರವಶೋಭೆ
ರಸವಿದ್ಯೆ - ಬಂಗಾರಮಾಡುವ ವಿದ್ಯೆ
ರಾಜಾನ್ನ - ಬತ್ತ ವಿಶೇಷ
ರಾಟಾಳ - ಏತ
ರಾಣಿವಾಸ - ಹೆಂಡತಿ
ರಾಮಠ - ಇಂಗು
ರಾಯರಾಡಿದ - ಅರಸರು ದಾಳಿಮಾಡಿದ
ರಾವಣ ಶಾಖಿ - ಔಡಲ ಎಲೆ
ರಾಶಿಕೂಟ - ನಕ್ಷತ್ರಗಳ ಕೂಡುವಿಕೆ
ರೀತಿಕೆ - ಹಿತ್ತಾಳೆ
ರುಜೆ - ರೋಗ
ರೂಹು - ರೂಪು
ರೇಣು - ಸೂಕ್ಷ್ಮ ಕಣ
ರೌರವ - ನರಕದ ಒಂದು ಪ್ರಕಾರ

ಲ-ವ

ಲಂಘನ - ಜಿಗಿಯುವಿಕೆ
ಲಂದಣಗಿತ್ತಿ - ಅಡಿಗೆಯವಳು
ಲಂದಣತನ - ಅಸ್ತವ್ಯಸ್ತತನ
ಲಘು - ಹಗುರು ವಸ್ತು, ತೆರೆ
ಲಜ್ಜೆ - ನಾಚಿಕೆ
ಲಲನೆ - ಮಹಿಳೆ
ಲಲ್ಲೆಮಾತು - ಪ್ರೇಮ ಸಲ್ಲಾಪ
ಲಹರಿ - ಮನಸ್ಸಿನ ಓಘ
ಲಲಾಟ ಲಿಖಿತ - ಹಣೆಯ ಬರೆಹ
ಲಾಂಛನ - ವೇಷ, ಜಂಗಮ

ಲಾಯ - ಕುದುರೆ ಕಟ್ಟುವ ಸ್ಥಳ
ಲಿಂಗವಾರ್ತೆ - ಲಿಂಗ ವಿಚಾರ
ಲೀಯ - ತನ್ಮಯ, ಸಾಮರಸ್ಯ
ಲೆಂಕ - ಒಡೆಯನಿಗಾಗಿ ಆತ್ಮಬಲಿಯಾಗುವ ವ್ಯಕ್ತಿ
ಲೆಂಕತನ - ಸೇವಕತನ
ಲೆಂಗಿ - ಲೆಂಕಿ, ಸೇವಿಕೆ
ಲೆಪ್ಪ - ಎರಕ
ಲೇಖೆ - ಗುರುತು, ಆಕಾರ
ಲೇಸು - ಸತ್ವ
ಲೊಟ್ಟಿ - ಪೊಳ್ಳು
ಲೋಗರು - ಸಾಮಾನ್ಯರು
ಲೋಚು - ತಲೆಗೂದಲು ಕಿತ್ತಿಕೊಳ್ಳುವಿಕೆ
ವಂಕ - ಬಂಕ, ಪಡಸಾಲೆ
ವಕ್ತ್ರ - ಮುಖ
ವಜ್ರ - ಸಿಡಿಲು
ವಜ್ರಲೇಪ - ಗಟ್ಟಿಯಾದ ಲೇಪನ
ವಜ್ರಾಂಗಿ - ಚಿಲಕತ್ತು
ವತ್ಸ - ಕರು
ವರುಣ - ಅರುಣ, ಬಾಲಸೂರ್ಯ
ವರುಣ ಶಿಲೆ - ಸೂರ್ಯಕಾಂತಶಿಲೆ
ವರ್ಮಸ್ಥಳ - ಮರ್ಮಸ್ಥಳ
ವಸುಧೆಪತಿ - ಶಿವ
ವಸ್ತು - ಮಹಾಲಿಂಗ, ಶಿವ, ದೇವರು
ವಹ್ನಿ - ಬೆಂಕಿ
ವಾಕು - ಮಾತು
ವಾಕುಶಸ್ತ್ರ - ಮಾತೆಂಬ ಆಯುಧ
ವಾಘೆ - ಕುದುರೆಯ ಲಗಾಮು
ವಾಚಾಳ - ಅತಿಮಾತಿನ ವ್ಯಕ್ತಿ
ವಾಮಕ್ಷೇಮ - ಹಾನಿ ವೃದ್ಧಿ
ವಾಯ - ಮೋಸ,ವ್ಯರ್ಥ
ವಾರಿ - ನೀರು
ವಾರಿಕಲ್ಲು - ಆಣೆಕಲ್ಲು
ವಾರುಧಿ - ಸಮುದ್ರ
ವಾರುಣಿ - ಮದ್ಯ, ಶೆರೆ
ವಾಸಿ - ಸ್ಥಿತಿ
ವಿಂಧ್ಯ - ಅರಣ್ಯ
ವಿಕಲ - ಕೊರತೆ
ವಿಕಸಿತ - ಅರಳಿದ
ವಿಕ್ರಮ ಪಕ್ಷಿ - ಗರುಡ
ವಿಗಡ - ವಿಕಟ, ಭೀಕರ
ವಿಗುರ್ಬಣೆ - ಭೀತಿ
ವಿಚಾರಪತ್ನಿ - ಬೌದ್ಧಿಕ ಸಂಗಾತಿ
ವಿಚ್ಛಂದ - ಚಂಚಲ, ಭಿನ್ನ
ವಿಡಂಗ - ವಂಚನೆ
ವಿತರಣ - ಪ್ರಸಾರ, ಪ್ರಕಟನೆ
ವಿದಾರಣ - ಕೊಲ್ಲುವಿಕೆ
ವಿದ್ಯಾಗೂಡು - ವಿದ್ಯೆಯ ಸಂಚಯ
ವಿಧಾಂತ - ಡೊಂಬ, ಸಂಬಳದ ಸೈನಿಕ
ವಿಧಿ - ಕರ್ಮ
ವಿರಂಚಿ - ಬ್ರಹ್ಮ
ವಿಲಗ್ನ - ವಿಶೇಷ ಮುಹೂರ್ತ
ವಿವರಗೇಡಿ - ತಿಳಿಗೇಡಿ
ವಿಷಜ - ಬಿಸಜ, ಕಮಲ
ವಿಷಧರ - ಸೂರ್ಯ
ವಿಷ್ಟಿಸು - ಮಲವಿಸರ್ಜಿಸು
ವಿಹಂಗ - ಪಕ್ಷಿ
ವೀರಗಂಕಣ - ಪ್ರತಿಜ್ಞಾಪೂರ್ವಕ ಯೋಧನು ಕೈಗೆ ಕಟ್ಟಿಕೊಂಡ ಆಭರಣ
ವೃಶ್ಚಿಕ - ಚೇಳು
ವೆಗ್ಗಳ - ಅಧಿಕ, ವಿಶೇಷ
ವೇಣು - ಬಿದಿರು
ವೇದ್ಯ - ತಿಳಿದ, ಅನುಭವಕ್ಕೆ ಬಂದ
ವೇಧಿಸು - ಸ್ಪರ್ಶಿಸು, ತಾಕು

ವೇಳೆವಾಳಿ - ಒಡೆಯನಿಗಾಗಿ ಪ್ರಾಣತ್ಯಾಗ ಪ್ರತಿಜ್ಞಾಬದ್ಧ ವ್ಯಕ್ತಿ
ವ್ಯಾಧ - ಬೇಡ
ವ್ಯಾಧಿ - ಶರೀರ ರೋಗ
ವ್ಯಾನ - ಪಂಚಪ್ರಾಣಗಳಲ್ಲಿ ಒಂದು ವಾಯು
ವ್ಯಾಪ್ತಿ - ಪೂರ್ಣ
ವ್ಯಾಳೇಶ - ಆದಿಶೇಷ
ವ್ರತಿ - ಸ್ತ್ರೀಮೋಹ ವಿಮುಖಿ
ವ್ರಯ - ವ್ಯಯ

ಶ-ಷ

ಶಂಬರವೈರಿ - ಶಿವ
ಶಠಗ - ನೀಚ
ಶಬ್ದಜಾಲ - ಶುಷ್ಕಮಾತು
ಶಮೆದಮೆ - ಒಳಹೊರಗಿನ ಇಂದ್ರಿಯಗಳ ನಿಗ್ರಹ
ಶಯನ - ಹಾಸಿಗೆ, ನಿದ್ರೆಮಾಡುವಿಕೆ
ಶರಧಿ - ಸಮುದ್ರ
ಶರ್ವ - ಶಿವ
ಶಶಾಂಕ - ಚಂದ್ರ
ಶಶಿಶಿಲೆ - ಚಂದ್ರಕಿರಣಕ್ಕೆ ಒಸರುವ ಕಲ್ಲು
ಶಾಖೆ - ರೆಂಬೆ
ಶಾಲ್ಯನ್ನ - ಉತ್ತಮ ಬತ್ತ
ಶಿಖಾಮಣಿ - ತಲೆಮಣಿ, ಶ್ರೇಷ್ಠ
ಶಿರಃಪ್ರಧಾನ - ಮುಖ್ಯ ಸಚಿವ
ಶಿವದಾನ - ಮಜ್ಜಿಗೆ
ಶಿವರಸ - ಮಜ್ಜಿಗೆ
ಶೀತಾಳ - ಶೀತಲ, ತಂಪಾದ
ಶುಕ್ಲ - ಪುರುಷನ ವೀರ್ಯ
ಶೂನ್ಯಾಲಯ - ಹಾಳುಮನೆ
ಶೃಂಗ - ಕೋಡು
ಶೃಂಗಿ - ಸಾರಂಗವಾದ್ಯ
ಶೋಣಿತ - ಸ್ತ್ರೀಯ ರಜಸ್ಸು
ಶೌಚ - ಶುಚಿಯುಳ್ಳ
ಶ್ರವ - ಶವ, ಹೆಣ, ಶ್ರಮ, ವ್ಯಾಯಾಮ
ಶ್ರವಕಾಯ - ಹೆಣದ ದೇಹ
ಶ್ರುತದೃಷ್ಟ ಅನುಮಾನ - ಶಬ್ದ, ಪ್ರತ್ಯಕ್ಷ, ಅನುಮಾನವೆಂಬ ಮೂರು ಪ್ರಮಾಣಗಳು
ಶ್ರುತಿ - ವೇದ
ಶ್ರೋತ್ರ - ಕಿವಿ
ಶ್ವಪಚ - ನಾಯಿಯ ಮಾಂಸದ ಅಡಿಗೆ ಉಣ್ಣುವ ಅಸ್ಪೃಶ್ಯ
ಷಡುರಸ - ಮಧುರ, ಆಮ್ಲ, ಕಟು, ತಿಕ್ತ, ಕಷಾಯ, ಲವಣ - ಈ ಆರು ಬಗೆಯ ರುಚಿಗಳು
ಷಡುವರ್ಣ - ಪೀತ, ಶ್ವೇತ, ಹರಿತ, ಮಾಂಜಿಷ್ಠ, ಕಪೋತ, ಗೌರ - ಈ ಆರು ಬಣ್ಣಗಳು
ಷಡ್ಭಾಗ - ಆರರಲ್ಲಿ ಒಂದು ಭಾಗ
ಷೋಡಶಕಳೆ - ಚಂದ್ರನ ಹದಿನಾರು ಕಳೆಗಳು
ಷೋಡಶೋಪಚಾರ - ದೇವರಿಗೆ ಸಲ್ಲಿಸುವ ೧೬ ಬಗೆಯ ಉಪಚಾರ

ಸ -ಹ

ಸಂಕಲ್ಪ - ಬಯಕೆ
ಸಂಕೋಲೆ - ಕೈಕೋಳ, ಬೇಡಿ
ಸಂಗ್ರಾಮ - ಯುದ್ಧ
ಸಂಘಟ್ಟ - ಹೊಂದಿಕೆ
ಸಂಚಾರ - ರಾಗದ ಚಲನೆ
ಸಂಚಿತ - ಪೂರ್ವಜನ್ಮದ ಕರ್ಮ
ಸಂಚು - ಸಂಬಂಧ, ರಹಸ್ಯ, ಹಂಚಿಕೆ, ಉಪಾಯ
ಸಂಜೀವನ - ಬದುಕಿಸುವ ವನಸ್ಪತಿ

ಸಂತ - ಸಮಾಧಾನ
ಸಂದ - ಕೀಲು, ಪ್ರಸಿದ್ಧ, ಶ್ರೇಷ್ಠ
ಸಂದಣಿಗಾರ - ಪ್ರಸಿದ್ಧವ್ಯಕ್ತಿ (?)
ಸಂದ ಮತ್ತೆ - ಸತ್ತಮೇಲೆ
ಸಂಧಾನ - ಕವಲು
ಸಂಪರ್ಕ - ಸ್ಪರ್ಶಸುಖ, ಸಂಭೋಗ
ಸಂಪಾದನೆ - ವಿಚಾರಣೆ
ಸಕಲ - ಸಾಕಾರ
ಸಕಳಲಿಂಗ - ನಿರ್ಮಾಣಲಿಂಗ
ಸಕೀಲ - ರೀತಿ, ರಹಸ್ಯ
ಸಚರಾಚರ - ಚಲಿಸುವ ಮತ್ತು ಚಲಿಸದ ವಸ್ತು
ಸಜ್ಜನ - ಸ್ತ್ರೀ
ಸಟೆ - ಸುಳ್ಳು
ಸತ್ತಿಗೆ - ಛತ್ರಿ
ಸತ್ವ - ಹೆರವರಿಗೆ ಹಿತವಾಗಲಿ ಎನ್ನುವ ಸ್ವಭಾವ
ಸದಮದ - ಸದಾ ಮದಸೂಸುವ
ಸದರ - ಸಸಾರ
ಸದರ್ಥ - ಫಲಾಪೇಕ್ಷೆ
ಸದೆ - ಕಸ
ಸದ್ಯೋನ್ಮುಕ್ತ - ತಕ್ಷಣ ಮುಕ್ತವಾಗುವವ
ಸನ್ಮತ - ತಕ್ಕ, ಉಚಿತ
ಸನ್ನಹಿತ - ಯೋಗ್ಯ, ಸಮೀಪ
ಸನ್ನಿ - ಸರಿಯಿರಿ
ಸನ್ನಿಭ - ಹೋಲುವ, ಸದೃಶ
ಸಪ್ತಧಾತು - ದೇಹದಲ್ಲಿರುವ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜಾ, ಅಸ್ಥಿ, ಶುಕ್ಲ ಎಂಬ ಏಳು ಧಾತುಗಳು
ಸಪ್ತವ್ಯಸನ - ಏಳು ಕೆಟ್ಟ ಚಟಗಳು
ಸಪ್ತ ಸಮುದ್ರ - ಏಳು ಸಮುದ್ರಗಳು : ಲವಣ (ಉಪ್ಪು),ಇಕ್ಷು (ಕಬ್ಬಿನ ರಸ),ಸುರಾ (ಮದ್ಯ), ಸರ್ಪಿಸ್ (ತುಪ್ಪ), ದಧಿ (ಮೊಸರು), ಕ್ಷೀರ (ಹಾಲು), ಜಲ (ಸಿಹಿನೀರು)
ಸಪ್ತಸ್ವರ - ಸಂಗೀತಗಳಲ್ಲಿ ಸ್ವರದ ಏಳು ಮೆಟ್ಟಿಲುಗಳು
ಸಪ್ತದ್ವೀಪ - ಏಳು ದ್ವೀಪಗಳು: ಜಂಬೂ, ಪ್ಲಕ್ಷ, ಶಾಲ್ಮಲೀ, ಕುಶ, ಕ್ರೌಂಚ್, ಶಾಕ, ಪುಷ್ಕರ
ಸರ್ಪದಷ್ಟ - ಹಾವು ಕಚ್ಚುವಿಕೆ
ಸಬ - ಶಿವ, ಹೆಣ
ಸಮಕಳೆ - ಪೂರ್ಣಕಾಂತಿ
ಸಮಯ - ಜಂಗಮ
ಸಮಯಾಚಾರ - ಜಂಗಮನ ಆಚಾರ
ಸಮರತಿ - ಸಂತೃಪ್ತಸಂಭೋಗ
ಸಮಸುಖ - ಸಂಪೂರ್ಣ ಆನಂದ
ಸಮಾನ - ಪಂಚಪ್ರಾಣಗಳಲ್ಲಿ ಒಂದು ವಾಯು
ಸಯ - ಸ್ವಯಂ, ಸಮ
ಸಯದಾನ - ಪಾಕ ಪದಾರ್ಥ
ಸಯಬಂದಿ - ಸ್ವಯಂ ಬಂಧ
ಸಯವಪ್ಪ - ಅನುರೂಪವಾದ
ಸರವರ - ಸರೋವರ
ಸರವಿ - ಹಗ್ಗ
ಸರಳು - ಬಾಣ
ಸರಿ - ಕಲ್ಲು ಹಾಸಿಗೆ
ಸರಿಸವ - ಸರಿಸಮ
ಸರಿ ಹುದುಗು - ಸರಿಯಾದ ನಾಚಿಕೆ
ಸಲಗೆ - ಧಾನ್ಯ ಅಳೆಯುವ ಪಾತ್ರೆ, ಸೊಲಗೆ
ಸಲಾಕೆ - ಕಿರಣ
ಸಲಿಲ - ನೀರು
ಸಲುವ - ಯೋಗ್ಯವಾದ
ಸಲೆ - ಚೆನ್ನಾಗಿ
ಸಲ್ಲದ ಹೊನ್ನು - ಖೊಟ್ಟಿ ನಾಣ್ಯ

ಸಲ್ಲು - ಗುರಿಮುಟ್ಟು
ಸವಣ - ಜೈನ ಸನ್ಯಾಸಿ
ಸವಣಿ - ಜೈನ ಸನ್ಯಾಸಿನಿ
ಸವೆ - ಸಮೆ, ಪೂರ್ಣವಾಗು
ಸಸಿನ - ನೇರ
ಸಹವಾಗು - ಜೊತೆಯಾಗು, ಸಮರಸವಾಗು
ಸಾಣ - ಖಡ್ಗ
ಸಾದ - ಒಂದು ಬಗೆಯ ಸುಗಂಧವಸ್ತು
ಸಾಮ್ಯ - ಸಮಾನತೆ
ಸಾಮಿಪ್ಯ - ಶಿವನ ಹತ್ತಿರವಿರುವ ಮುಕ್ತಸ್ಥಿತಿ
ಸಾಯಸ - ಗಾಸಿ
ಸಾಯುಜ್ಯ - ಶಿವನಲ್ಲಿ ಲೀನವಾಗುವ ಮುಕ್ತಿ
ಸಾರ - ಸಾರಾಯ, ತಿರುಳು, ರಸ, ಸಾರವತ್ತಾದುದು
ಸಾರವರತ - ಒಣಗಿದ
ಸಾರಾಯ - ಶ್ರೇಷ್ಠ
ಸಾರೂಪ್ಯ - ಶಿವನ ರೂಪತಾಳುವ ಮುಕ್ತಸ್ಥಿತಿ
ಸಾಲಿಗ - ನೇಕಾರ
ಸಾಲೋಕ್ಯ - ಶಿವನನ್ನು ನೋಡುತ್ತಲ್ಲಿರುವ ಮುಕ್ತಸ್ಥಿತಿ
ಸಾಯವ - ಸಾಕಾರ
ಸಾಳಿಸಸಿ - ಬತ್ತದ ಸಸಿ
ಸಿಂಗಳೀಕ - ಕಪ್ಪುಮುಖದ ಮಂಗ
ಸಿಂಗಿ - ಭಯಂಕರ ವಿಷ
ಸಿಂಬಿ - ಸಾಮಾನ್ಯ ಸ್ತ್ರೀ
ಸಿಕ್ಕು - ತೊಡಕು
ಸಿಕ್ಕಿಚ್ಛೆ - ಆಪ್ತಸೇವೆ
ಸಿಡಿಗಂಟಿ - ಮುರಿದಕಂಟಿ
ಸಿತಗ - ಕೆಡುಕ, ನಿಷ್ಠುರ
ಸಿದ್ಧರಸ - ಲೋಹವನ್ನು ಬಂಗಾರವಾಗಿಸುವ ರಸ
ಸಿದ್ಧಿಗೆ - ಪ್ರತಿಷ್ಠೆ
ಸಿದ್ಧಾಂತಿ - ಜ್ಯೋತಿಷಿ
ಸಿನೆ - ಶೂನ್ಯ, ಸಂಪೂರ್ಣ
ಸಿರಪಟ್ಟೆ - ತಲೆಬುರುಡೆ
ಸಿರಿ - ಲಕ್ಷ್ಮಿ
ಸೀತಾಳ - ನೀರು
ಸೀರೆ - ಬಟ್ಟೆ
ಸೀಳುನಾಯಿ - ನಾಯಿಯ ಒಂದು ಜಾತಿ, ಕ್ಷುದ್ರನಾಯಿ
ಸುನಿ - ನಾಯಿ
ಸುಪ್ಪತ್ತಿಗೆ - ಮೃದು ಹಾಸಿಗೆ
ಸುಪ್ಪಾಣಿ - ಶುಭ್ರವಾದ, ಶ್ರೇಷ್ಠ
ಸುಪ್ಪು - ಉಪ್ಪು
ಸುಮ್ಮಾನ - ಸುಮ್ಮನಿರಿಸುವಿಕೆ
ಸುಮ್ಮಾನಿ - ಆನಂದಿತ
ಸುಯಿದಾನ - ಶುಚಿದಾನ
ಸುರಂಗ - ಒಳ್ಳೆಯ ಬಣ್ಣ
ಸುರಗಿ - ಖಡ್ಗ
ಸುರಚಾಪ - ಕಾಮನಬಿಲ್ಲು
ಸುರತ - ಸಂಭೋಗ
ಸುರತರು - ಕಲ್ಪವೃಕ್ಷ
ಸುರಪತಿ - ಇಂದ್ರ
ಸುರಭಿ - ಕಾಮಧೇನು, ಆಕಳು
ಸುರಾಸುರಾಳಿ - ದೇವ ದೈತ್ಯ ಸಮೂಹ
ಸುಲಿಪಲ್ಲು - ತಿಕ್ಕಿದ ಹಲ್ಲು
ಸುವಿಧಾನ - ಸುಯ್ದಾನ, ಎಚ್ಚರ
ಸುಷುಪ್ತಿ - ಗಾಢನಿದ್ರೆ
ಸುಳುಹು - ನೀರಿನ ಸುಳಿ
ಸೂಕರ - ಹಂದಿ
ಸೂತಕ - ದೋಷ,ಮೈಲಿಗೆ, ಮಾಲಿನ್ಯ
ಸೂನೆಗಾರ - ಕಟುಕ
ಸುರ್ಯಕಾಂತ - ಸೂರ್ಯ ಕಿರಣಕ್ಕೆ ಕರಗುವ ಕಲ್ಲು

ಸೂರೆ - ಲೂಟಿ, ದೋಚಿಕೆ
ಸೂಲ - ಶೂಲ, ಮೊನೆಯುಳ್ಳ ಆಯುಧ
ಸೂಳ್ನುಡಿ - ವಚನ,ಚರ್ಚಾವಾಣಿ
ಸೆಜ್ಜೆ - ಹಾಸಿಗೆ
ಸೆಲದಿ - ಜೇಡಹುಳ
ಸೈವೆರಗು - ಅತ್ಯಾಶ್ಚರ್ಯ
ಸೈವೆರಗಾಗು - ಬೆರಗಾಗು
ಸೊಡರು - ದೀಪ
ಸೊಣಗ - ಶುನಕ, ನಾಯಿ
ಸೊಬಗು - ಡೌಲು, ಪ್ರತಿಷ್ಠೆ
ಸೊಮ್ಮು - ಆಸ್ತಿ, ಸಂಪತ್ತು
ಸೊಲ್ಲು - ಮಾತು
ಸೋಂಕು - ಸ್ತ್ರೀಸ್ಪರ್ಶ
ಸೋಪಾನ - ಮೆಟ್ಟಿಲು
ಸೋಮನಯನ - ಶಿವ
ಸೋಮಧರ - ಶಿವ
ಸೋರೆ - ವೀಣೆಗೆ ಬಳಸುವ ಕುಂಬಳ ಬುರುಡೆ, ಕಹಿ ಸೌತೆಕಾಯಿ
ಸೋವು - ಅಟ್ಟು, ಎಬ್ಬಿಸು
ಸೋಹಂ - ಅವನೇ (ಶಿವನೇ) ನಾನು
ಸೋಹೆ - ಗುರುತು, ಸುಳುಹು
ಸೌರಭ - ಸುಗಂಧ
ಸ್ವಯ - ಸ್ವಯಂ, ಶಿವೋಹಂ ಭಾವ, ತಾನು
ಸ್ಥಾನಿಕ - ಅರ್ಚಕ
ಸ್ಥಾವರ - (ಮಹಾ)ಲಿಂಗ
ಸ್ಥಾವರದೈವ - ಸ್ಥಾಪಿಸಲ್ಪಟ್ಟ ಸಾಕಾರ ದೈವ
ಸ್ವಾದ - ರುಚಿ
ಸ್ಥಿರಸೇಸೆ - ಶಾಶ್ವತ ದಾಂಪತ್ಯ ಹಾರೈಸುವ ಮಂಗಲಾಕ್ಷತೆ
ಸ್ವೇದಜ - ಬೆವರಿನಿಂದ ಹುಟ್ಟುವ ಜೀವಿ

ಹ

ಹಂಗು - ಭಿಡೆ
ಹಂಚುಹರಿಯಾಗು - ಚೆಲ್ಲಾಪಿಲ್ಲಿಯಾಗು
ಹಂಜರ - ಪಂಜರ
ಹಂದೆ - ಹೇಡಿ
ಹಗರಣ - ನಟನೆ, ವೇಷಗಾರಿಕೆ
ಹಗಹ - ಧಾನ್ಯ ತುಂಬುವ ಹಗೆ
ಹಗ್ಗ ಹುರಿ - ಹುರಿಯಾದ ಹಗ್ಗ
ಹಡಲಿಗೆ - ಎಲ್ಲಮ್ಮ ದೇವತೆಯನ್ನಿಡುವ ಬುಟ್ಟಿ
ಹಡಿಕೆ - ಮಲ, ಹೊಸಲು
ಹಡುಹು - ದುರ್ಗಂಧ
ಹಡೆದ - ಪಡೆದ, ದೊರಕಿಸಿಕೊಂಡ
ಹಣ - ಒಂದು ಬಗೆಯ ನಾಣ್ಯ
ಹಣಿದ - ಹೊಡೆದಾಟ, ಸ್ಪರ್ಧೆ
ಹತ್ತೆ - ಸಮೀಪ
ಹದನ - ರೀತಿ, ಸಂಗತಿ
ಹದಿನಾಲ್ಕು ಭುವನ - ವೈದಿಕ ಕಲ್ಪನೆಯ ಹದಿನಾಲ್ಕು ಲೋಕಗಳು
ಹದಿರು - ವ್ಯಂಗ್ಯ
ಹದುಳ - ಕ್ಷೇಮ
ಹದುಳಿಗ - ಒಳಿತಾಗಿರುವವ
ಹಮ್ಮ - ಸೊಕ್ಕು
ಹಮ್ಮದಂಬೋಗು - ಮೂರ್ಛೆ ಹೋಗು
ಹಯನು - ಹೈನು, ಹಾಲುಕೊಡುವ ಪ್ರಾಣಿ
ಹರದ - ವ್ಯಾಪಾರಿ
ಹರವರಿ - ಪ್ರಕಟನೆ
ಹರಹ - ವಿಸ್ತಾರ
ಹರ[ಹಿ] - ಪಸರಿಸಿ
ಹರಿ - ಸಿಂಹ, ಸಾಗು
ಹರಿಗೆ - ಗುರಾಣಿ
ಹರಿವ - ಚಲಿಸುವ, ಕಚ್ಚುವ
ಹರಿವಾಣ - ಊಟದ ತಟ್ಟೆ
ಹರಿಹಂಚು - ತುಂಡು ತುಂಡು
ಹರೆ - ಹಲಗೆ, ವ್ಯಾಪಿಸು
ಹಲುದೋರು - ಹಲ್ಲುಕಾಣು
ಹಲ್ಲಣ - ಕುದುರೆಯ ಬೆನ್ನಮೇಲೆ ಹಾಕುವ ಜೀನು

ಹವಣ - ಮಿತಿ, ಪ್ರಮಾಣ
ಹವಿ - ಯಜ್ಞದಲ್ಲಿ ಸುರಿಯುವ ವಸ್ತು
ಹಸಗೆಡಿಸು - ನಾಶಮಾಡು
ಹಸರ - ಹರವಿದ ಅಂಗಡಿ, ಪಸರ, ಪ್ರಸರ, ವಿಸ್ತೃತಗೊಂಡ
ಹಸ್ತಬಾಯನೆ ಮುಚ್ಚಿ - ಕೈಮುಗಿದು
ಹಸೆ - ಮಂಚ
ಹಳಚು - ತಾಗು
ಹಾಗ - ಒಂದು ಬಗೆಯ ನಾಣ್ಯ
ಹಾತೆ - ಜೊಂಡಿಗ
ಹಾನಿ ವೃದ್ಧಿ - ಹಿನ್ನಡೆ ಮುನ್ನಡೆ
ಹಾರು - ನಿರೀಕ್ಷಿಸು
ಹಾರುವ - ಬ್ರಾಹ್ಮಣ
ಹಾವಚೆ - ಹಾವಸೆ
ಹಾವು ಮೆಕ್ಕೆಯ ಕಾಯಿ - ಕಹಿಯಾಗಿರುವ ಒಂದು ಬಗೆಯ ಕಾಯಿ
ಹಾಸ - ಮಗ್ಗ
ಹಾಳಾಹಳ - ವಿಷ
ಹಾಳು ಹರಿ - ಅತಿ ನಾಶವಾದುದು
ಹಿಂಗು - ಕೊರತೆಯಾಗು, ಬತ್ತು
ಹಿಡಿಗೋಲು - ಕೆಳಜಾತಿ ಸೂಚಕವಾಗಿ ಕೈಯಲ್ಲಿ ಹಿಡಿದ ಕೋಲು
ಹಿಡಿವಡೆ - ಕೈಸೆರೆ ಸಿಗು
ಹಿರಣ್ಯ - ಬಂಗಾರ
ಹುಂಡ - ಸೊಕ್ಕಿನವ
ಹುಡುಕುನೀರು - ಬಿಸಿನೀರು
ಹುತಾಶನ - ಅಗ್ನಿ
ಹುದುವಾಳಿಗೆ - ಸ್ನೇಹ ಸಂಬಂಧ
ಹುಯ್ಯಲ - ದುಃಖಧ್ವನಿ, ದಾಳಿ
ಹುರಿ - ಹಗ್ಗ
ಹುರಿಸಂಚ - ಹಗ್ಗದ ಸಹಾಯ
ಹುರುಡಿಗ - ಹೊಟ್ಟೆ ಕಿಚ್ಚಿನವ, ಸ್ಪರ್ಧೆಗಾರ
ಹುರುಮಂಜಿ - ಕೆಂಪು ಬಣ್ಣದ ಹುಡಿ
ಹುಲು ಮೊರಡಿ - ಸಣ್ಣ ಬೆಟ್ಟ, ಕ್ಷುದ್ರ ದಿನ್ನೆ
ಹುಲುಸರವಿ - ಹುಲ್ಲಿನ ಹಗ್ಗ
ಹುಲ್ಲೆ - ಜಿಂಕೆ
ಹುಳ್ಳಿ - ಕಟ್ಟಿಗೆ
ಹುಳುಗೊಂಡ - ನರಕ
ಹುಳುವಟ್ಟೆ - ಕಿರುದಾರಿ, ಎಲೆ ಉದುರಿದ ಗಿಡ
ಹೂಣೆ - ಪ್ರತಿಜ್ಞೆ
ಹೂತು - ಹೂವು ಬಿಟ್ಟು
ಹೂದಂಬುಲ - ಮದುವೆ ಸಂದರ್ಭದಲ್ಲಿ ಹಂಚುವ ವೀಳ್ಯೆ
ಹೂಸು - ಲೇಪಿಸು
ಹೂಳು - ಮಾಯು, ವಾಸಿಯಾಗು
ಹೆಕ್ಕಳ - ಹೆಚ್ಚಳ, ಸಂತೋಷ
ಹೆಗ್ಗುರಿ - ದೊಡ್ಡಕುರಿ, ಮೂರ್ಖ
ಹೆಡಗುಡಿಯ ಕಟ್ಟು - ಎರಡೂ ಕೈ ಹಿಂದೆಮಾಡಿ ಕಟ್ಟುವುದು
ಹೆದ್ದೊರೆ - ದೊಡ್ಡ ಪ್ರವಾಹ
ಹೆರ ತೊಲಗು - ದೂರ ಸರಿ
ಹೆರಸಾರು - ದೂರ ಸರಿ
ಹೆರೆ ಹಿಂಗು - ಚೆನ್ನಾಗಿ ಕಳೆದುಕೊಳ್ಳು, ಹಿಂದೆ ಸರಿ, ಪೂರ್ಣ ಕಡಿಮೆಯಾಗು
ಹೊಂದು - ಸಾಯು
ಹೊಂದೊಡಿಗೆ - ಬಂಗಾರದ ತೊಡಿಗೆ
ಹೊಂಬಣ್ಣ - ಬಂಗಾರದ ಬಣ್ಣ
ಹೊಂಬಿತ್ತಾಳೆ - ಬಂಗಾರ ಲೇಪನದ ಹಿತ್ತಾಳೆ
ಹೊಗು - ಪ್ರವೇಶಿಸು
ಹೊಡೆವಂಟ - ನಮಸ್ಕರಿಸಿದ
ಹೊಡೆವಡು - ನಮಸ್ಕರಿಸು
ಹೊಡೆಗೆಡು - ಬೀಳು
ಹೊಡೆಗಿಚ್ಚು - ಅಪ್ಪಳಿಸುವ ಕಿಚ್ಚು
ಹೊತ್ತಾರೆ - ನಸುಕು ವೇಳೆ
ಹೊದಕುಳಿ - ತಳಮಳ
ಹೊದ್ದು - ಹೊಂದು, ಸೇರು

ಹೊದ್ದಿಗೆ - ಆಶ್ರಯ
ಹೊನಲ - ಪ್ರವಾಹ
ಹೊನ್ನಾವರಿಕೆ - ಹಳದಿ ಅವರೆಗಿಡ
ಹೊಮ್ಮಿಗ - ಬಂಗಾರದ ಜಿಂಕೆ
ಹೊಯ್ - ಬಾರಿಸು, ಹೊಡೆ
ಹೊಯಿಕುಟ್ಟು - ತಾಗು
ಹೊರಸು - ಬೆಳವ ಪಕ್ಷಿ, ಕಾಡ ಪಾರಿವಾಳ
ಹೊರಹಂಚೆ - ಹರಿಹಂಚು, ನಾಶ
ಹೊರೆ - ಹತ್ತಿರ, ಹೊದಿಕೆ, ಪೊರೆ, ರಕ್ಷಿಸು
ಹೊರೆಹೊಗು - ವಂಚಿತನಾಗು
ಹೊಲತಿ - ಮುಟ್ಟಾದವಳು
ಹೊಲಬಿಗ - ಸನ್ಮಾರ್ಗಿ
ಹೊಲಬು - ದಾರಿ
ಹೊಲಬುಗೆಡು - ದಾರಿತಪ್ಪು
ಹೊಲ್ಲ - ಕೆಟ್ಟ, ಅಯೋಗ್ಯ
ಹೊಲ್ಲಹ - ಅಯೋಗ್ಯ
ಹೊಲೆ - ಅಶುದ್ಧಿ
ಹೊಲೆಗಾಣು - ಋತುಮತಿಯಾಗು
ಹೊಸಕರು - ಹೊಸ ವ್ಯಕ್ತಿಗಳು, ಅಪ್ರಬುದ್ಧರು
ಹೊಸೆ - ತಿಕ್ಕು, ಹಗ್ಗ ಇತ್ಯಾದಿ ಹೊಸೆಯುವಿಕೆ
ಹೊಳಲು - ಪೊಳಲು, ಪಟ್ಟಣ
ಹೊಳ್ಳು - ಪೊಳ್ಳು
ಹೀಲಿ - ನವಿಲುಗರಿ
ಹೇಗ - ಹ್ಯಾಗಿ, ಮೂರ್ಖ
ಹೇಮ - ಬಂಗಾರ, ದ್ರವ್ಯ
ಹೇವರಿಕೆ - ಬೇಸರಿಕೆ
ಹೇಸರ - ಕುದುರೆ ಕತ್ತೆಗೆ ಹುಟ್ಟಿದ ವೇಸರಗತ್ತೆ
ಹೇಳಿಗೆ - ಹಾವಿನ ಬುಟ್ಟಿ
ಹೋಕು - ವ್ಯರ್ಥ
ಹೋರಟೆ - ಹೋರಾಟ
ಹೋರು - ತೂತು, ಪ್ರಯತ್ನಿಸು, ಹೋರಾಡು

❖❖

*

ಪರಿಭಾಷಾ ಕೋಶ

ಅಂಗಸೋಂಕು	- ಎದೆಯ ಮೇಲೆ ಲಿಂಗ ಧರಿಸುವುದು.
ಅಂತರೀಯ ಜ್ಞಾನ	- ಅಂತರಂಗದ ಅರಿವು.
ಅವಧಿಜ್ಞಾನ	- ಸೀಮಿತಜ್ಞಾನ.
ಅಷ್ಟಭೋಗ	- ಅನ್ನ, ಉದಕ, ತಾಂಬೂಲ, ಪುಷ್ಪ, ಚಂದನ, ವಸನ, ಶಯ್ಯಾ, ಅಲಂಕಾರಗಳೆಂಬ ಎಂಟು ಬಗೆಯ ಭೋಗಗಳು.
ಅಷ್ಟವಿಧಾರ್ಚನೆ	- ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ- ಈ ಎಂಟು ಬಗೆಗಳಲ್ಲಿ ಪೂರೈಸುವ ಲಿಂಗಪೂಜೆ.
ಆಕಾರ ಚತುಷ್ಟಯ	- ಚತುರ್ವಿಧ ಕರಣಗಳು: ಚಿತ್ತ ಬುದ್ಧಿ ಅಹಂಕಾರ ಮನ.
ಇಪ್ಪತ್ತೈದು	- ಪಂಚವಿಶಂತಿ ತತ್ವಗಳು: ಸ್ಥೂಲ ತನುವಿನ ೫, ಸೂಕ್ಷ್ಮ ತನುವಿನ ೧೭, ಕಾರಣತನುವಿನ - ೩- ಹೀಗೆ ೨೫ ತತ್ವಗಳು.
ಈಷಣತ್ರಯ	- ಅರ್ಥೇಷಣ (ಹಣದ ಬಯಕೆ), ಪುತ್ರೇಷಣ (ಪುತ್ರಸಂತಾನ) ಬಯಕೆ), ದಾರೇಷಣ (ಸ್ತ್ರೀ ಬಯಕೆ)ಗಳೆಂಬ ಮೂರು ಬಯಕೆಗಳು. ಭಕ್ತನು ಈ ಈಷಣ ತ್ರಯದಿಂದ ಮುಕ್ತನಾಗಬೇಕು.
ಉಭಯ ತನು	- ಅಂತರಂಗ ಬಹಿರಂಗಗಳು.
ಏಕಭಾಜನ	- ಲಿಂಗಭೋಗೋಪಭೋಗ
ಐಕ್ಯ	- ಲಿಂಗವ್ಯಕ್ತಿತ್ವದ ೬ನೆಯ-ಅಂತಿಮ-ಹಂತ.ಇದರ ಲಕ್ಷಣ ಸಾಮರಸ್ಯ.
ಕಂಠಪಾವಡ	- ಪೂಜೆಗೆ ತರುವ ನೀರಿನ ಕೊಡದ ಮೇಲೆ ಅರಿವೆ ಮುಚ್ಚುವುದು.
ಕಾಯತ್ರಯ	- ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರು ಕಾಯಗಳು.
ಕುಳಸ್ಥಳ	- ಅಂಗ ಲಿಂಗ.
ಕ್ರಿಯಾ ನಿಷ್ಪತ್ತಿಲಿಂಗ	- ನಿಷ್ಪತ್ತಿಲಿಂಗತ್ರಯದಲ್ಲಿ ಒಂದು. ಲಿಂಗಾನುಭವವು ಕ್ರಿಯೆಯಲ್ಲಿ ಉಂಟಾಗಲು ಕ್ರಿಯಾನಿಷ್ಪತ್ತಿಯೆನಿಸುವುದು.
ಖೇಚರ ಪವನ ಸಾಧಕ	- ಯೋಗಸಾಧನೆಯಿಂದ ಆಕಾಶಗಾಮಿಯಾಗುವ ವ್ಯಕ್ತಿ.
ಚಿತ್ತು	- ಸ್ವಪ್ರಜ್ಞೆ.
ಜಂಗಮ ಮುಖಲಿಂಗ	- ಲಿಂಗವು ಜಂಗಮನ ಮುಖದ ಮೂಲಕ ಪ್ರಸಾದ ಸ್ವೀಕರಿಸುವುದೆಂಬ ತತ್ವ.
ತಾಪತ್ರಯ	- ಆಧ್ಯಾತ್ಮಿಕ (ದೇಹದಲ್ಲಿರುವ ದುಃಖ-ಜ್ವರಾದಿ), ಆಧಿಭೌತಿಕ (ಹೊರಗಿನ ಪ್ರಾಣಿಗಳಿಂದಾಗುವ ದುಃಖ - ದುರ್ಜನಾದಿ), ಆಧಿ ದೈವಿಕ (ಆಕಸ್ಮಿಕವಾಗಿ ಸಿಡಿಲು ಇತ್ಯಾದಿಗಳಿಂದಾಗುವ ದುಃಖ)ವೆಂಬ ಮೂರು ಬಗೆಯ ಕಷ್ಟಗಳು.

ತ್ರಿಕರಣ - ಕಾಯಾ, ವಾಚಾ, ಮನಸಾ.

ತ್ರಿಗುಣ - ಸತ್ತ್ವ, ರಜಸ್, ತಮೋ ಗುಣಗಳು.

ತ್ರಿವಿಧ - ತನು, ಮನ, ಧನ.

ತ್ರಿವಿಧಕರ್ತೃ - ಸೃಷ್ಟಿ, ಸ್ಥಿತಿ, ಲಯಕಾರ್ಯ ಮಾಡುವವ.

ತ್ರಿವಿಧ ದಾಸೋಹ - ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ.

ದಶಮುಖ - ಹತ್ತು ವ್ಯಸನಗಳು, ದಶವಾಯು

ದಾಸೋಹ - ಗುರುವಿಗೆ ತನುದಾಸೋಹ, ಲಿಂಗಕ್ಕೆ ಮನದಾಸೋಹ, ಜಂಗಮಕ್ಕೆ ಧನದಾಸೋಹ - ಹೀಗೆ ತ್ರಿವಿಧ ದಾಸೋಹಗಳಿವೆ. ಹೀಗಿದ್ದೂ ಜಂಗಮ ದಾಸೋಹಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಧೂಳಪವಾಡ - ಪೂಜೆಗೆ ತಂದ ನೀರನ್ನು ಅರಿವೆಯಿಂದ ಸೋಸುವ ಕ್ರಿಯೆ.

ನಾದ ಬಿಂದು ಕಳೆ - ಏಕವಾಗಿರುವ ಮಹಾಲಿಂಗವು ಅನೇಕವಾಗಲು ಬಯಸಿದಲ್ಲಿ ಉಂಟಾಗುವ ಅದರ ಶಕ್ತಿಯ ಸ್ಫುರಣವೇ ನಾದ. ಆ ನಾದಶಕ್ತಿ ಗಟ್ಟಿಗೊಳ್ಳುವುದೇ ಬಿಂದು. ಆ ನಾದಶಕ್ತಿಯನ್ನು ಬಳಸಿಕೊಂಡು ಪ್ರಪಂಚವನ್ನು ಸೃಷ್ಟಿಸುವ ಕ್ರಿಯೆಯೇ ಕಳೆ.

ನಾಗವತ್ತಿಗೆ - ಲಿಂಗ ಕರಡಿಗೆ

ನಾಮರೂಪಕ್ರೀ - ಪ್ರಪಂಚದ ಯಾವುದೇ ವಸ್ತುವಿಗೆ ಇರುವ ಮೂರು ಲಕ್ಷಣ.

ನಾಹಂ - ನ + ಅಹಂ. ನಾನು ಎಂಬ ಪ್ರಜ್ಞೆಯಿಂದ ಮುಕ್ತನಾದ ಸ್ಥಿತಿ.

ಪಂಚಾಕ್ಷರಿ - ನಮಃ ಶಿವಾಯವೆಂಬ ಐದು ಅಕ್ಷರಗಳ ಮಂತ್ರ.

ಪಶ್ಚಿಮದ ಕದ - ಶರೀರದಲ್ಲಿಯ ಸೂಕ್ಷ್ಮಶಕ್ತಿಸ್ಥಾನಗಳಿಗೆ ಚಕ್ರ ಇಲ್ಲವೆ ಪದ್ಮವೆಂದು ಹೆಸರು. ಒಂಬತ್ತನೆಯ ಚಕ್ರ ಅಥವಾ ಪದ್ಮವು ನೆತ್ತಿಯಲ್ಲಿದೆ. ಇದಕ್ಕೆ ಪಶ್ಚಿಮದ ಕದವೆಂದೂ ಹೆಸರು.

ಪಾದೋದಕ - ಪರಸ್ಪರ ಪಾದ ತೊಳೆದು ಸೇವಿಸುವ ಪವಿತ್ರ ಜಲ. ಇದು ಪರಸ್ಪರ ಸಮಾನತೆಯನ್ನು ಸಾರುವ ತತ್ವವಾಗಿದೆ.

ಪ್ರತ್ಯಗಾತ್ಮ - ಎಲ್ಲ ಜೀವಿಗಳಲ್ಲಿರುವ ಆತ್ಮ, ಜೀವಾತ್ಮ

ಪ್ರಸಾದ - ಅಲೌಕಿಕ ಪ್ರಜ್ಞೆಯಿಂದ ಪರಿಭಾವಿಸುವ ಲೌಕಿಕ ವಸ್ತು. ಅಷ್ಟಾವರಣಗಳಲ್ಲಿ ಆರನೆಯದು.

ಪ್ರಸಾದಿ - ಲಿಂಗವ್ಯಕ್ತಿತ್ವ ವಿಕಾಸದ ಮೂರನೆಯ ಹಂತ. ಇದರ ಲಕ್ಷಣ ಅವಧಾನ (ಜಾಗರೂಕತೆ).

ಪ್ರಾಣಲಿಂಗಿ - ಲಿಂಗವ್ಯಕ್ತಿತ್ವದ ೬ನೆಯ ಹಂತ. ಇದರ ಲಕ್ಷಣ ಅನುಭಾವ.

ಪ್ರಾರಬ್ಧತ್ರಯ - ಸಂಚಿತ ಪ್ರಾರಬ್ಧ ಆಗಾಮಿಕಗಳೆಂಬ ಕರ್ಮಗಳು. ಇಂದಿನ ಜನ್ಮದಲ್ಲಿ ಫಲ ನೀಡುತ್ತಲಿರುವ ಹಿಂದಿನ ಜನ್ಮದ ಕರ್ಮಗಳು ಪ್ರಾರಬ್ಧವೆನಿಸಿಕೊಳ್ಳುತ್ತವೆ.

ಬಾಲವ ಕೊಯ್ದು ಹೋದಾತ - ಪುನರ್ಜನ್ಮ ನೀಗಿಸಿಕೊಂಡವ.

ಬಿಂದು - ಯೋಗದಲ್ಲಿ ಲೀನನಾದವನಿಗೆ ಹೃದಯದಲ್ಲಿ ಕಾಣಿಸುವ ಬಿಂದುವಿನಂತಿರುವ ಜ್ಯೋತಿಸ್ಸ್ವರೂಪ.

ಬ್ರಹ್ಮಪದವಿ - ಬ್ರಹ್ಮ ದೈವತದ ಸ್ಥಾನಮಾನ.

ಬ್ರಹ್ಮಪಾಶ - ಜನನ ಮರಣಗಳೆಂಬ ಬ್ರಹ್ಮನ ಹಂಗು (ಪಾಶ). ಈ ಪಾಶಕ್ಕೆ ಒಳಗಾಗಿದ್ದವರು ಜ್ಞಾನಿಗಳಾಗಲಾರರು.

ಭಕ್ತ - ಲಿಂಗವ್ಯಕ್ತಿತ್ವ ವಿಕಾಸದ ಮೊದಲ ಹಂತ. ಇದರ ಲಕ್ಷಣ ಶ್ರದ್ಧೆ.

ಭವಿ - ಲೌಕಿಕ ವ್ಯಾಪಾರವನ್ನು ಜೀವಿಸುತ್ತಿರುವ ವ್ಯಕ್ತಿ. ಭಕ್ತಸ್ಥಿತಿಗೆ ವಿರುದ್ಧ ಸ್ಥಿತಿಯುಳ್ಳವ. ಸಾಮಾನ್ಯವಾಗಿ ಅಲಿಂಗಾಯತ ವ್ಯಕ್ತಿ.

ಭಾವತ್ರಯ	-	ಸಂವಿತ್‌ಕಳಾ, ಸಂಧಾನಕಳಾ, ಸಮರಸಕಳಾ.
ಮಾರ್ಗಕ್ರಿಯಾಲಿಂಗ	-	ಸ್ಥೂಲಶರೀರದಲ್ಲಿ ಜರುಗುವ ಕ್ರಿಯೆಗಳು ಮಾರ್ಗಕ್ರಿಯೆಗಳು. ಇವು ಭಕ್ತ, ಮಹೇಶ, ಪ್ರಸಾದಿ ಸ್ಥಲಗಳಲ್ಲಿಯ ಆಚರಣೆಗಳು. ಈ ಆಚರಣೆಗಳ ಮೂಲಕ ಆರಾಧಿಸುವ ಲಿಂಗವೇ ಮಾರ್ಗಕ್ರಿಯಾಲಿಂಗ.
ಮಾಹೇಶ್ವರ	-	ಲಿಂಗವ್ಯಕ್ತಿತ್ವ ವಿಕಾಸದ ಎರಡನೆಯ ಹಂತ. ಇದರ ಲಕ್ಷಣ ನಿಷ್ಠೆ.
ಮೀರಿದ ಕ್ರಿಯಾಲಿಂಗ	-	ಸೂಕ್ಷ್ಮಶರೀರದಲ್ಲಿ ಜರುಗುವ ಕ್ರಿಯೆಗಳು ಮೀರಿದ ಕ್ರಿಯೆಗಳು. ಇವು ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳಲ್ಲಿಯ ಆಚರಣೆಗಳು. ಈ ಆಚರಣೆಗಳ ಮೂಲಕ ಆರಾಧಿಸುವ ಲಿಂಗವೇ ಮೀರಿದ ಕ್ರಿಯಾಲಿಂಗ.
ಮುಖಲಿಂಗಿ	-	ಮುಖರೂಪವುಳ್ಳ ಲಿಂಗ.
ಮೂರಕ್ಷರ	-	ಅ + ಉ + ಮ = ಓಂ.
ರುದ್ರಪದವಿ	-	ಪಂಚಮೂರ್ತಿಗಳಲ್ಲಿ ಒಬ್ಬನಾದ ರುದ್ರನ ಸ್ಥಾನಮಾನ.
ಲಿಂಗಪ್ರಾಣ	-	ಲಿಂಗವೇ ಪ್ರಾಣವಾಗಿರುವ ಸ್ಥಿತಿ.
ಲಿಂಗ ಸಕೀಲ	-	ಯಾವ ಸ್ಥಲದ ಅಂಗನು ಯಾವ ಸ್ಥಲದ ಲಿಂಗವನ್ನು ಪೂಜಿಸಬೇಕು; ಆ ಲಿಂಗ ಯಾವ ಚಕ್ರದಲ್ಲಿದೆ ಇತ್ಯಾದಿ ಸಂಬಂಧಗಳನ್ನು ತಿಳಿಸಿಕೊಡುವುದೇ ಲಿಂಗ ಸಕೀಲ.
ಲಿಂಗಸಾರಾಯ	-	ಲಿಂಗದ ತಾತ್ಪರ್ಯ, ಲಿಂಗದ ಮುಖ್ಯಾಂಶ.
ಲಿಂಗಸಾಹಿತ್ಯ	-	ಲಿಂಗಧಾರಣ, ಲಿಂಗಸಾಮರಸ್ಯ
ವಿಷ್ಣುಪದವಿ	-	ವಿಷ್ಣು ದೈವತದ ಸ್ಥಾನಮಾನ.
ವಿಷ್ಣುಮಾಯೆ	-	ವಿಷ್ಣುವು 'ಸ್ಥಿತಿ'ಕಾರ್ಯದಲ್ಲಿ ನಿರತನಾಗಿರುವಂತೆ ವ್ಯಕ್ತಿಯು ದೇಹ ರಕ್ಷಣೆಯಲ್ಲಿ ತೊಡಗುವ ಸ್ಥಿತಿ.
ಶಕ್ತಿ	-	ಶಿವನಲ್ಲಿ ಅಂತರ್ಗತವಾಗಿರುವ ಚೈತನ್ಯ.
ಶರಣ	-	ಲಿಂಗವ್ಯಕ್ತಿತ್ವದ ೫ನೆಯ ಹಂತ. ಇದರ ಲಕ್ಷಣ ಆನಂದ.
ಶ್ವಾನನ ನಿದ್ರೆ	-	ಅರೆ ಎಚ್ಚರದ ನಿದ್ರೆ.
ಷಡ್ವಿಧ ಭಕ್ತಿ	-	ಷಟ್ಸ್ಥಲಗಳಿಗೆ ನೆಲೆಯಾಗಿರುವ ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸಗಳೆಂಬ ಭಕ್ತಿಗಳು.
ಸಮಯಾಚಾರಿ	-	ವರ್ಣಾತೀತನಾಗಿ ವರ್ತಿಸುವ ಅನುಭಾವಿ.
ಸಮ್ಯಕ್‌ಜ್ಞಾನ	-	ಅನುಭಾವದಿಂದ ಗಳಿಸುವ ಜ್ಞಾನ.
ಸರ್ವಾಂಗ ಪಾವಡ	-	ಪೂಜೆಗೆ ತರುವ ನೀರಿನ ಕೊಡದ ಮೇಲೆ ಅರಿವೆ ಮುಚ್ಚುವುದು.
ಸುಷುಮ್ನ	-	ಮನುಷ್ಯನ ಹತ್ತು ಬಗೆಯ ನಾಡಿಗಳಲ್ಲಿ ಒಂದು. ಇದು ಇಡಾ ಮತ್ತು ಪಿಂಗಳ ಹೆಸರಿನ ನಾಡಿಗಳ ಮಧ್ಯದಲ್ಲಿರುವುದು.
ಸೋಹಂ	-	ಅವನೇ (ಶಿವನೇ) ನಾನು ಎಂಬ ಭಾವ.
ಸ್ಥಲ	-	ವಿಶ್ವಚೈತನ್ಯರೂಪದ ಮಹಾಲಿಂಗ, ಭಕ್ತಿವಿಕಾಸದ ಮೆಟ್ಟಿಲು
ಸ್ಥಲಲೇಪ	-	ಐಕ್ಯಸ್ಥಲವನ್ನು ತನ್ನ ಪ್ರತಿ ಅಂಗಕ್ಕೂ ಲೇಪಿಸಿ (ಅನ್ವಯಿಸಿ) ಕೊಳ್ಳುವುದು.
ಸ್ವಯಾದ್ವೈತ	-	ಎರಡಲ್ಲದ ಸ್ಥಿತಿ.
ಸ್ವರ	-	ಯೋಗ ಸಂದರ್ಭದಲ್ಲಿ ಕೇಳಿಸುವ ಧ್ವನಿ.
ಹದಿನಾರು	-	ಷೋಡಶೋಪಚಾರಗಳು.

❖❖

*

ನಾಮ ಕೋಶ

ಅಮರನೀತಿ	-	ಚೋಳದೇಶದ ೬೩ ಪುರಾತನರಲ್ಲಿ ಒಬ್ಬ. ವಸ್ತ್ರ ವ್ಯಾಪಾರಿ. ಭಕ್ತಿ ಪರೀಕ್ಷೆಗಾಗಿ ವೃದ್ಧವೇಷದ ಶಿವನು ಇಟ್ಟು ಹೋಗಿದ್ದ ಕೌಪೀನ ಮಾಯವಾಗಲು, ಅದಕ್ಕೆ ಪ್ರತಿಯಾಗಿ ಎಷ್ಟೇ ಬಟ್ಟೆ ನೀಡಿದರೂ ಸಮತೂಗದಿರಲು, ತನ್ನನ್ನೇ ಅರ್ಪಿಸಿಕೊಳ್ಳಬಯಸಿ, ತಕ್ಕಡಿ ಏರಿ, ಸಮತೂಕ ತೂಗಿ ಭಕ್ತಿ ಮೆರೆಯುತ್ತಾನೆ.
ಕಂಚಿ	-	ತಮಿಳುನಾಡಿನ ಪ್ರಸಿದ್ಧ ಶೈವಕ್ಷೇತ್ರ. ಇಲ್ಲಿಯ ಸಿರಿಯಾಳ ಚೆಂಗಳೆಯರೆಂಬ ಶರಣದಂಪತಿಗಳು ಮಗನನ್ನು ಕೊಂದು ಶಿವನಿಗೆ ಅಡಿಗೆ ಸಿದ್ಧಪಡಿಸಿದರು. ಇವರ ಭಕ್ತಿಗೆ ಮೆಚ್ಚಿ ಶಿವನು ಈ ದಂಪತಿಗಳನ್ನು ಕಂಚಿಪಟ್ಟಣ ಸಹಿತ ಕೈಲಾಸಕ್ಕೊಯ್ದನು.
ಕಣ್ಣಪ್ಪ	-	ತಮಿಳುನಾಡಿನ ೬೩ ಪುರಾತನದಲ್ಲಿ ಒಬ್ಬ. ಶಿವಲಿಂಗದ ಕಣ್ಣುಬೇನೆಗೆ ಪ್ರತಿಯಾಗಿ ತನ್ನ ಕಣ್ಣು ನೀಡಿ, ಕೈಲಾಸಕ್ಕೆ ಹೋದವನು.
ಕರ್ಣ	-	ಮಹಾಭಾರತದ ವ್ಯಕ್ತಿ. ವಿಪ್ರನಾಗಿ ಬಂದು ಕೇಳಿದ ಇಂದ್ರನಿಗೆ ತನ್ನ ಕವಚಕುಂಡಲಗಳನ್ನು ನೀಡಿದ
ಕಾಳಿಕಾದೇವಿ	-	ಪಾಂಚಾಳರು ಪೂಜಿಸುವ ಸ್ತ್ರೀದೇವತೆ.
ಕೂಚಿಭಟ್ಟ	-	ಓದಿ ವ್ಯವಹಾರಜ್ಞಾನವಿಲ್ಲದೆ ಹಾಳಾದ ಪ್ರಾಚೀನವ್ಯಕ್ತಿ
ಕೇತಾರ	-	ಉತ್ತರ ಪ್ರದೇಶದ ಗಢವಾಲ ಜಿಲ್ಲೆಯ ಕೇದಾರ. ಕೇದಾರೇಶ್ವರ ದೈವತವಿರುವ ಇದು ಶೈವರ ಪವಿತ್ರಕ್ಷೇತ್ರ.
ಕೌಂಡಿನ್ಯ	-	ಕೆಳವರ್ಣದ ಒಬ್ಬ ಋಷಿ.
ಖಚರ	-	ಒಬ್ಬ ಅರಸು. ಇವನು ಮಗಳಾದ ಅಮೃತಮತಿಯನ್ನು ಮೋಹಿಸಿದ. ಅವಳು ಓಡಿಹೋಗಿ ಲಿಂಗಗರ್ಭವನ್ನು ಹೊಕ್ಕಳು.
ಗೋಕರ್ಣ	-	ದಕ್ಷಿಣ ಭಾರತದ ಪಶ್ಚಿಮಸಮುದ್ರ ತೀರದ ಪ್ರಸಿದ್ಧ ಶೈವಕ್ಷೇತ್ರ.
ಚೋಳ	-	ತಮಿಳುನಾಡಿನ ಪ್ರಸಿದ್ಧ ಚಕ್ರವರ್ತಿ, ಶಿವಭಕ್ತ. ದಿನಾಲೂ ಶಿವನು ಇವನ ಮನೆಯಲ್ಲಿ ಊಟಮಾಡುತ್ತಲಿದ್ದ. ಇದರಿಂದಾಗಿ ಈತನಿಗೆ ಮೂಡಿದ್ದ ಅಹಂಕಾರ ಮುರಿಯಲು ಒಂದು ದಿನ ಶಿವ,ರಾಜನ ಕುದುರೆಗೆ ಹುಲ್ಲು ಹಾಕುವ ಅಸ್ಪೃಶ್ಯ ಶಿವಭಕ್ತ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಉಂಡುದಾಗಿ ಹೇಳಿದ. ಇದನ್ನು ಕೇಳಿ ಆಶ್ಚರ್ಯಪಟ್ಟು ಚೋಳ ಚೆನ್ನಯ್ಯನ ಗುಡಿಸಲಿಗೆ ಹೋಗಿ, ಅವನಿಗೆ ನಮಸ್ಕರಿಸಿ ಧನ್ಯನಾದ.

ಚೋಳಿಯಕ್ಕ - ಆಂಧ್ರದೇಶದ ಭೀಮೇಶ್ವರವೆಂಬ ಊರಿನಲ್ಲಿದ್ದ ಒಬ್ಬ ಶಿವಭಕ್ತೆ. ಮೂಲತಃ ವೇಶ್ಯೆಯಾದ ಈಕೆ ಶಿವನಿಗೆ ಭಕ್ತಿಯಿಂದ ಹುಗ್ಗಿಯನ್ನು ಅರ್ಪಿಸಿ ಶಿವಕೃಪೆಗೆ ಪಾತ್ರಳಾದಳು. ರಾಜನ ಬಂಗಾರದ ತಟ್ಟೆಯನ್ನು ಕದ್ದಳೆಂದು ಈಕೆಯನ್ನು ಶೂಲಕ್ಕೆ ಏರಿಸಲು ಹೊರಟಾಗ, ಶಿವ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ದ.

ಚೌಡೇಶ್ವರಿ - ಉಗ್ರ ಸ್ತ್ರೀದೇವತೆ.

ಜಂಬೂದ್ವೀಪ - ಭೂಮಿಯ ಸಪ್ತದ್ವೀಪಗಳಲ್ಲಿ ಮೊದಲನೆಯದು. ಇದು ಮೇರುಪರ್ವತದ ಸುತ್ತಲೂ ವ್ಯಾಪಿಸಿದೆ. ಇದನ್ನು ಲವಣ ಸಮುದ್ರ ಸುತ್ತಿಕೊಂಡಿದೆ. ಈ ದ್ವೀಪದಲ್ಲಿರುವ ದೊಡ್ಡದಾದ ಜಂಬೂವೃಕ್ಷ (ನೇರಿಲಮರ) ಕಾರಣವಾಗಿ ಇದನ್ನು ಜಂಬೂದ್ವೀಪವೆಂದು ಕರೆಯುತ್ತಾರೆ. ಈ ದ್ವೀಪದ ದಕ್ಷಿಣ ಭಾಗದಲ್ಲಿ ಭಾರತದೇಶವಿದೆ.

ದೂರ್ವಾಸ - ಕೆಳವರ್ಣದ ಒಬ್ಬ ಋಷಿ.

ನಂಬಿ - ೬೩ ಪುರಾತನರಲ್ಲಿ ಒಬ್ಬನಾದ ಶರಣ. ಶಿವನು ಇವನ ಮತ್ತು ಪರವೆನಾಚಿ, ಸಂಕಲನಾಚಿಯರೆಂಬ ಪ್ರೇಯಸಿಯರ ಮಧ್ಯೆ ಕುಂಟಣಿಯಂತೆ ಕೆಲಸ ಮಾಡಿದ.

ನಾರಾಯಣ - ವಿಷ್ಣು. ಹೆಂಡತಿಯಾದ ಲಕ್ಷ್ಮಿ ಇವನ ಎದೆಯಲ್ಲಿ ವಾಸವಾಗಿರುವಳೆಂಬುದು ಪುರಾಣ ಕಲ್ಪನೆ.

ಪರ್ವತ - ಆಂಧ್ರಪ್ರದೇಶದ ಕರ್ನೂಲ ಜಿಲ್ಲೆಯ ಶ್ರೀಶೈಲ. ಮಲ್ಲಿಕಾರ್ಜುನ ದೈವತವಿರುವ ಇದು, ಶೈವರ ಪವಿತ್ರ ಕ್ಷೇತ್ರ.

ಬದರಿಕಾ ಕ್ಷೇತ್ರ - ಹಿಮಾಲಯದ ಉತ್ತರ ಭಾಗದಲ್ಲಿಯ ಒಂದು ಪುಣ್ಯಕ್ಷೇತ್ರ.

ಬಲಿ - ಒಬ್ಬ ಕ್ಷತ್ರಿಯ ರಾಜ. ವಾಮನರೂಪ ತಾಳಿ ಬಂದು ಕೇಳಿದ ವಿಷ್ಣುವಿಗೆ ಮೂರಡಿ ಭೂಮಿ ನೀಡಿದ. ವಿಷ್ಣುವಿನ ಒಂದು ಅಡಿಯು ಭೂಮಿಯನ್ನು, ಇನ್ನೊಂದು ಅಡಿಯು ಆಕಾಶವನ್ನು ವ್ಯಾಪಿಸಿತು. ಮೂರನೆಯ ಅಡಿಯನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ರಸತಾಳಕ್ಕೆ ಒತ್ತಿ ನಾಶಮಾಡಿದ.

ಬಿಜ್ಜಳ - ಕಲಚೂರಿವಂಶದ ಅರಸು. ಬಸವಣ್ಣ ಇವನ ಭಂಡಾರ ಸಚಿವ.

ಮೈಲಾರ - ಹಾವೇರಿ ಜಿಲ್ಲೆಯ ಮೈಲಾರಕ್ಷೇತ್ರದ ಪುರುಷದೇವತೆ. ಈತನ ಲಾಂಛನ ನಾಯಿ. ಈ ದೇವತೆಯ ಭಕ್ತರಾದ ಗೊರವರು ತಾವು ಅವನ ನಾಯಿಗಳೆಂಬ ಭಕ್ತಿ ಪ್ರಕಟಿಸುವುದಕ್ಕಾಗಿ ದೇವರ ಎದುರು ಬೊಗಳುವುದನ್ನು ಆಚರಿಸುತ್ತಾರೆ.

ರೋಮಜ - ಒಬ್ಬ ವಯೋವೃದ್ಧ ಋಷಿ.

ವಶಿಷ್ಠ - ಸಪ್ತರ್ಷಿಗಳಲ್ಲಿ ಒಬ್ಬ.

ವಾಮದೇವ - ಶ್ರೀರಾಮನ ಆಸ್ಥಾನದ ಒಬ್ಬ ಮಹರ್ಷಿ.

ವಾಮನ ಮುನಿ - ಪೂರ್ವಜನ್ಮದಲ್ಲಿ ಅಸ್ಪೃಶ್ಯಭಕ್ತರ ಮನೆಯ ಊಟವನ್ನು ನಿರಾಕರಿಸಿದ ಕಾರಣ, ಮುಂದಿನ ಜನ್ಮದಲ್ಲಿ ಶರಣ ಹಾವಿನಹಾಳ ಕಲ್ಲಯ್ಯನ ಮನೆಯಲ್ಲಿ ನಾಯಿಯಾಗಿ ಜನಿಸಿದ ಒಬ್ಬ ಋಷಿ.


ವಾರಣಾಸಿ - ಉತ್ತರ ಪ್ರದೇಶದ ಪುರಾಣ ಪ್ರಸಿದ್ಧ ಕಾಶಿ. ವಿಶ್ವೇಶ್ವರ ದೈವತವಿರುವ ಇದು ಶೈವರ ಪವಿತ್ರಕ್ಷೇತ್ರ. ವರುಣ ಮತ್ತು ಅಸಿಯೆಂಬ ಎರಡು ನದಿಗಳನ್ನೊಳಗೊಂಡ ಸ್ಥಳ.

ವಾಲ್ಮೀಕಿ - ಒಬ್ಬ ಋಷಿ. ಜಾತಿಯಿಂದ ಬೇಡ. ರಾಮಾಯಣದ ಕರ್ತೃ.

ವಿರೂಪಾಕ್ಷ - ಕರ್ನಾಟಕದ ಬಳ್ಳಾರಿ ಜಿಲ್ಲೆಯ ಹಂಪಿ. ವಿರೂಪಾಕ್ಷ ದೈವತವಿರುವ ಇದು ಶೈವರ ಪವಿತ್ರಕ್ಷೇತ್ರ.

ವ್ಯಾಸ	-	ಪರಾಶರಮುನಿ ಮತ್ತು ಅಂಬಿಗ ಜಾತಿಯ ಸತ್ಯವತಿ (ಮತ್ಸ್ಯಗಂಧೆ)ಯರ ಅಕ್ರಮ ಸಂಬಂಧದಿಂದ ಜನಿಸಿದವ. ಮಹಾಭಾರತದ ಕರ್ತೃ.
ಶಿಬಿ	-	ಒಬ್ಬ ಚಕ್ರವರ್ತಿ. ಬೇಡನ ರೂಪದಲ್ಲಿ ವಿಷ್ಣು ಬೆನ್ನಟ್ಟಿಬಂದ ಪಾರಿವಾಳ ಇವನ ಮೊರೆ ಹೊಕ್ಕಿತು. ಈ ಪಾರಿವಾಳದ ತೂಕದಷ್ಟು ತನ್ನ ತೊಡೆಯ ಮಾಂಸ ನೀಡಲು ಸಿದ್ಧನಾದ. ಎಷ್ಟು ನೀಡಿದರೂ ಪಾರಿವಾಳ ತೂಕಕ್ಕೆ ಸಮಬಾರದಿರಲು, ಅವನು ತನ್ನ ದೇಹವನ್ನೇ ನೀಡಿ ಗತಪ್ರಾಣನಾದನು.
ಶ್ರೀಶೈಲ ಮಲ್ಲಿನಾಥ	-	ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಸುಪ್ರಸಿದ್ಧ ಶೈವಕ್ಷೇತ್ರ ಶ್ರೀಶೈಲ. ಅಲ್ಲಿಯ ದೈವತ ಮಲ್ಲಿಕಾರ್ಜುನ.
ಸನಕ	-	ಬ್ರಹ್ಮನ ಮಾನಸ ಪುತ್ರ. ಇವನು ಯಾವಾಗಲೂ ಕೌಮಾರಾವಸ್ಥೆಯಲ್ಲಿಯೇ ಇರತಕ್ಕವನು.
ಸನಂದ	-	ಬ್ರಹ್ಮನ ಮಾನಸಪುತ್ರ. ಇವನು ಯಾವಾಗಲೂ ಕೌಮಾರಾವಸ್ಥೆಯಲ್ಲಿ ಇರತಕ್ಕವನು.
ಸಿಂಧು ಬಲ್ಲಾಳ	-	ಶಿವಭಕ್ತನಾದ ಅರಸು. ವಿಟಜಂಗಮ ರೂಪದಿಂದ ಬಂದ ಶಿವನು ಹೆಣ್ಣನ್ನು ಕೇಳಲು ತನ್ನ ಹೆಂಡತಿ (ಸಿಂಧು?)ಯನ್ನೇ ನೀಡಿದ. ಕೋಣೆಯೊಳಗೆ ಬರುತ್ತಲೇ ಆ ರಾಣಿಗೆ ನಿದ್ರೆ ಆವರಿಸಿತು. ಬೆಳಗಾಗುತ್ತಲೇ ವಿಟಜಂಗಮನು ಶಿಶುವಾಗಿ ಅವಳ ಮೊಲೆಯುಣ್ಣುತ್ತಿದ್ದನು. ಮತ್ತು ಶಿವರೂಪದಲ್ಲಿ ಪ್ರತ್ಯಕ್ಷನಾಗಿ ಈ ದಂಪತಿಗಳನ್ನು ಕೈಲಾಸಕ್ಕೆ ಒಯ್ದನು.
ಸಿರಿಯಾಳ ಚಂಗಳೆ	-	ತಮಿಳುನಾಡಿನ ಭಕ್ತದಂಪತಿಗಳು. ಜಂಗಮರೂಪದಲ್ಲಿ ಬಂದ ಶಿವನಿಗೆ ಮಗನನ್ನು ಕೊಂದು ಮಾಂಸದ ಅಡಿಗೆ ನೀಡಿ ಭಕ್ತಿ ಮೆರೆದವರು.
ಸೇತು ರಾಮೇಶ್ವರ	-	ಭಾರತದ ದಕ್ಷಿಣ ತುದಿಯಲ್ಲಿರುವ ಒಂದು ಪುಣ್ಯಕ್ಷೇತ್ರ.

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359